Regd. No. M. 3618

Licence No 31
Licensed to Post without Prepayment.

ನವಯುಗ

Vol.33, No 5 1-10-1953 ವರ್ಷ ೩೩ ವಾರ ೫

★ ಶುಭಾಶಯಗಳು ★

"ಹೊಸ ರಾಜ್ಯದ ಜನನ ಕಂಡು ಹಾಗೂ ಚರ್ಚೆಯ ಕಾಲದಲ್ಲಿ ಎಲ್ಲರೂ ಭಾರತದ ಐಕ್ಯಕ್ಕೆ ಮಹತ್ವ ಕೊಟ್ಟುದನ್ನು ನೋಡಿ ನನಗೆ ಹರ್ಷವೆನಿಸಿದೆ. ಈ ಚರ್ಚೆಯಲ್ಲಿ ಅತ್ಯಂತ ಗೌರವಯುತವಾದ ವೈಶಿಷ್ಟ್ಯವೆಂದರೆ ಇದೇ ಎಂದು ನನ್ನ ಅಭಿಪ್ರಾಯ. ಆಂಧ್ರರು ಭಾವಾವೇಶವುಳ್ಳ, ಉದ್ರೇಕ ಕಾರಕ ಹಾಗೂ ಮುಂಗೋಪಿ ಜನರಾಗಿರಬಹುದು. ಆದರೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಅವರು ಧೀರ ಯೋಧರಾಗಿದ್ದರು. ತಮ್ಮ ಉದ್ದೇಶ ಸಾಧನೆಗೋಸ್ಕರ ಅವರು ಇದುವರೆಗೆ ಉಪಯೋಗಿಸಿದ ಶಕ್ತಿ ಸಾಮರ್ಥ್ಯಗಳನ್ನೆಲ್ಲ ಈಗ ತಮ್ಮ ರಾಜ್ಯವನ್ನಷ್ಟೇ ಅಲ್ಲ ಭಾರತವನ್ನು ಸುವ್ಯವಸ್ಥಿತವಾಗಿ ಕಟ್ಟಲು ಉಪಯೋಗಿಸುವರೆಂದುಕೊಂಡಿದ್ದೇನೆ.

"ಈ ಧ್ಯೇಯ ಕೈಗೂಡಿದುದಕ್ಕೆ ಯಾವನೇ ಒಬ್ಬ ವ್ಯಕ್ತಿಯು ಪ್ರಶಂಸಾರ್ಹನಿರದೆ, ಆಂಧ್ರರ ಸಾಮೂಹಿಕ ಪ್ರಯತ್ನವೇ ಇದಕ್ಕೆ ಹೊಣೆ. ಅವರಲ್ಲಿಂದು ಉತ್ಸಾಹ ಮತ್ತು ಸ್ಫೂರ್ತಿ ಉಕ್ಕೇರುತ್ತಿರುವುದನ್ನು ಕಾಣುತ್ತೇವೆ. ಅವರೆಲ್ಲರೂ ಉನ್ನತಿಹೊಂದಲಿ! ಅವರ ಜೀವನಮಟ್ಟವು ಎತ್ತರಿಸಲ್ಪಡಲಿ! ಅವರೆಲ್ಲರ ಆವಶ್ಯಕತೆಗಳು ಪೂರೈಸಲಿ! ಅವರೆಲ್ಲರೂ ತಮ್ಮ ರಾಜ್ಯಕ್ಕಷ್ಟೇ ಅಲ್ಲ-ರಾಷ್ಟ್ರಕ್ಕೆಯೇ ಶಕ್ತಿ ಸ್ರೋತವಾಗಿ ಪರಿಣಮಿಸಲಿ!"

—ಗೃಹಸಚಿವ ಡಾ. ಕೈಲಾಸನಾಥ ಕಟಜೂರಿಂದ ಕೇಂದ್ರ ರಾಜ್ಯ ಪರಿಷತ್ತಿನಲ್ಲಿ ಹಾರೈಕೆ.

❖

"ದೀರ್ಘ ಪ್ರತೀಕ್ಷೆ ಮತ್ತು ಹೆಚ್ಚಿನ ಚರ್ಚೆಯ ಬಳಿಕ ಇದೀಗ ಕೊನೆಗೊಮ್ಮೆ ಆಂಧ್ರರಾಜ್ಯವು ಅಸ್ತಿತ್ವಕ್ಕೆ ಬರುತ್ತಲಿದೆ. ಈಗ ನಾವು ಆ ವಾದ ವಿವಾದಗಳನ್ನೆಲ್ಲ ಬದಿಗೊತ್ತಿ ಭಾರತದ ರಾಜ್ಯ ಕುಟುಂಬಗಳ ಸಾಲಿನಲ್ಲಿ ಹೊಸ ಸದಸ್ಯ ರಾಜ್ಯವಾಗಿ ಸೇರುವ ಆಂಧ್ರಕ್ಕೆ ನಮ್ಮೆಲ್ಲರ ಶುಭೇಚ್ಛೆಗಳನ್ನು ಕಳುಹಿಸೋಣ! ಅಷ್ಟೇ ಅಲ್ಲ—ಈ ಹೊಸ ರಾಜ್ಯವು ಒಳ್ಳೆಯದಾಗುವಂತೆ ನಮ್ಮ ಸರ್ವ ಶಕ್ತಿಯಿಂದ ನೆರವಾಗೋಣ!

"ಪ್ರತಿಯೊಂದೂ ವಿರಹವು ಶಾರೀರಿಕವಾಗಿಯೂ ಮಾನಸಿಕವಾಗಿಯೂ ಕ್ಲೇಶದಾಯಕವಿರುತ್ತದೆ. ಆದರೆ ನಾವೊಮ್ಮೆ ಒಂದು ಕೆಲಸವಾಗಬೇಕೆಂದು ನಿರ್ಣಯಿಸಿದ ಬಳಿಕ ಅದನ್ನು ಚಲೋದಾಗಿ ಕೊನೆಗಾಣಿಸಲು ಸುಂದರವಾಗಿ ಪ್ರಯತ್ನಿಸಬೇಕಾದುದು ಕರ್ತವ್ಯ. ಕಳೆದ ಹಲವು ವರ್ಷಗಳಿಂದ ಆಂಧ್ರರು ತಮಗೋಸ್ಕರ ಬೇರೆಯೇ ರಾಜ್ಯವೊಂದನ್ನು ಇಚ್ಛಿಸುತ್ತಿದ್ದರು. ಈ ಬಯಕೆ ಈಗ ಕೈಗೂಡಿರುತ್ತದೆ. ಆದರೆ ಈ ಇಚ್ಛಾಪೂರ್ತಿಯ ಮಾರ್ಗದಲ್ಲಿ ಎಲ್ಲ ಬಗೆಯ ಆತಂಕಗಳು ಕಾಣಿಸಿಕೊಂಡವು. ಮತ್ತು ಸಿದ್ಧಿಯನ್ನು ತಡ ಮಾಡಿದವು.

"ಭಾರತದ ಐಕ್ಯ ಮತ್ತು ಒಗ್ಗಟ್ಟಿನ ಭಾವನೆಗೆ ಅಡ್ಡ ಬರುವ ಪ್ರಾಂತೀಯ ಮನೋವೃತ್ತಿ ಅಥವಾ ಅಂತಹದೇನೇ ಇರಲಿ— ಅದನ್ನು ನಾನು ಪ್ರೀತಿಸುವುದಿಲ್ಲ. ಹಾಗೆಂದ ಮಾತ್ರಕ್ಕೆ ಸಂಪೂರ್ಣ ಸಮರೀತಿಯಿರಬೇಕೆಂದಾಗಲೀ ಎಲ್ಲವೂ ಕೇಂದ್ರೀಕರಿಸಲ್ಪಡಬೇಕೆಂದಾಗಲೀ ಅರ್ಥವಲ್ಲ. ಸ್ಥಳೀಯ ಶಾಸನದಲ್ಲಿ ಹಾಗೂ ಸಾಧ್ಯವಿದ್ದಷ್ಟೂ ಹೆಚ್ಚು ವಿಕೇಂದ್ರೀಕರಣ ಸಾಧಿಸಬೇಕೆನ್ನುವುದರಲ್ಲಿ ನನಗೂ ವಿಶ್ವಾಸವಿದೆ. ಆದರೆ ಪ್ರಾಮುಖ್ಯವಾದ ಐಕ್ಯವಿಲ್ಲದಿದ್ದರೆ ಮತ್ತು ಸಾಕಷ್ಟು ಕೇಂದ್ರೀಕರಣವಿಲ್ಲದಿದ್ದರೆ ಇಂದು ಪ್ರಗತಿಯು ಸಾಧ್ಯವಿಲ್ಲೆಂಬುದನ್ನು ನಾವು ನೆನಪಿಟ್ಟುಕೊಳ್ಳುವುದಗತ್ಯ. ಇಡೀಯನ್ನು ಕಡಿಮೆ ಗಮನಿಸಿ ತುಂಡುಗಳ ಕುರಿತೇ ಅತ್ಯಧಿಕ ಗಮನ ಕೊಟ್ಟರೆ ನಾವು ರಾಜಕೀಯವಾಗಿಯಷ್ಟೇ ಅಲ್ಲ ಆರ್ಥಿಕ ಪ್ರಗತಿಯಲ್ಲಿಯೂ ಬಹಳ ಹಿಂದುಳಿಯುತ್ತೇವೆ. ಭಾರತವೊಂದೇ ಎಂಬ ಮನೋಭಾವನೆಯನ್ನು ಸಂಘಟಿಸುವುದೇ ಇಂದಿನ ಪ್ರಾಥಮಿಕ ಆವಶ್ಯಕತೆಯಾಗಿರುತ್ತದೆ.

"ಹೊಸ ರಾಜ್ಯ ನಿರ್ಮಾಣ ಹಾಗೂ ಭಾರತದ ಈಗಿನ ಘಟಕಗಳ ಪುನರ್ಘಟನೆಯು ಭಾರತೀಯರ ಹೃದಯ, ಮನಸ್ಸುಗಳ ಸಂಘಟನಾಕಾರ್ಯವನ್ನು ಯಾವ ರೀತಿಯಿಂದಲೂ ಒಡೆಗುಂದಿಸುವುದಿಲ್ಲವೆಂದು ನಾನು ಆಶಿಸುತ್ತೇನೆ"

ಪ್ರಧಾನಿ ಜವಾಹರಲಾಲ ನೆಹರೂ ಆಂಧ್ರ ರಾಜ್ಯ ನಿರ್ಮಾಣದ ಕುರಿತು ನೀಡಿದ ಸಂದೇಶದ ಸಾರ.

❖

"ಆಂಧ್ರರು ಬೇರೆಯಾಗಿ ಹೋಗುವರೆಂಬುದು ಕೇವಲ ಭ್ರಾಂತಿ-ಹೊಸ ದೆಹಲಿಯಲ್ಲಿ ಬಲಾಢ್ಯವಾದ ಕೇಂದ್ರ ಸರಕಾರವಿರುತ್ತಾ ಒಂದು ರಾಜ್ಯದಿಂದ ಇನ್ನೊಂದು ರಾಜ್ಯವು ಬೇರಾಗುತ್ತದೆನ್ನುವುದು ಶೇಕಡಾ ನೂರರಷ್ಟು ಪ್ರಮಾದ. ನಿಜ ನಮ್ಮಲ್ಲಿ ಯಾರೂ ಮುಕ್ತರಲ್ಲ-ಯಾರೂ ಸ್ವತಂತ್ರರಲ್ಲ-ಯಾರೊಬ್ಬನೂ ಹೊಸ ದೆಹಲಿಯನ್ನು ಬಿಟ್ಟು ಉಳಿಯುವಂತಿಲ್ಲ. ಆಹಾರ ಸಾಮಾಗ್ರಿಗಳು, ನಿತ್ಯೋಪಯೋಗದ ವಸ್ತುಗಳು ಎಲ್ಲವೂ ಭಾರತದ ಒಂದು ಸ್ಥಳದಿಂದ ಇನ್ನೊಂದಕ್ಕೆ ಒಯ್ಯಲ್ಪಡುತ್ತವೆ. ಅಂದ ಬಳಿಕ ಬೇರೆಯಾಗುವ ಮಾತೇ ಇರುವುದಿಲ್ಲ.

"ಆದುದರಿಂದ ಆಂಧ್ರಕ್ಕೆ ಹೋಗುವವರು ಯಾರೇ ಇರಲಿ ಪೂರ್ಣ ವಿಶ್ವಾಸದಿಂದ ಅಲ್ಲಿ ಹೋಗಬಹುದು. ಸರಕಾರೀ ನೌಕರರಿಗೆ ಇದು ಹೆಚ್ಚು ಅನ್ವಯಿಸುತ್ತದೆ. ಸರಕಾರದ ಕಾಯಂ ನೌಕರ ವರ್ಗದ ಮೇಲೆ ಹೊರಗಿನ ಯಾರದೇ ವರ್ಚಸ್ಸು ಅಥವಾ ಒತ್ತಾಯ ಬೀಳಲಾಗದು. ಆಂಧ್ರದ ವೃದ್ಧ ಹಾಗೂ ತರುಣ ಶಾಸನಕರ್ತರಿಗೂ ಶಾಸನ ಸಭೆಯ ಹೊರಗಿರುವ ಕೆಲವು ಮಹನೀಯರಿಗೂ ನನ್ನ ಸಲಹೆ ಇದೇ. ಪ್ರಜಾಪ್ರಭುತ್ವವು ಯಾವ ರೀತಿ ಕಾರ್ಯತಃ ಕೆಲಸ ಮಾಡುತ್ತದೆಂಬುದೇ ಮಹತ್ವದ್ದು. ಹೊರತು ಘಟನೆಯಲ್ಲಿ ಅಡಕವಾದ ತತ್ವಗಳು ಗೌಣ. ಬ್ರಿಟನು ಈ ಮಟ್ಟಿಗೆ ನಮಗೆ ಮಾದರಿಯಾಗಬಲ್ಲುದು. ಅಲ್ಲಿ ಸರಕಾರೀ ನೌಕರರು ಮಾತನಾಡುವುದೇ ಇಲ್ಲ-ಮೌನವಾಗಿ ಕೆಲಸ ನಿರ್ವಹಿಸುತ್ತಾರೆ. ಅವರ ಮೇಲೆ ಹೊರಗಿನ ವರ್ಚಸ್ಸು ನಡೆಯುವುದೇ ಇಲ್ಲ.

"ಆಂಧ್ರ ರಾಜ್ಯವು ಸ್ಥಾಪಿತವಾಗಿ [illegible] ಭವಿಷ್ಯ ಅಪಾರವೆಂದು ಕಂಡುಬರುತ್ತದೆ. ಈ ರಾಜ್ಯಕ್ಕೆ ಬಾಳ್ವೆಯನ್ನು ಸಾರ್ಥಕಗೊಳಿಸುವ ಕರ್ತವ್ಯವುಂಟು. ಇದನ್ನು ಆಂಧ್ರದ ಪ್ರತಿಯೊಬ್ಬ ಪುರುಷನೂ ಸ್ತ್ರೀಯೂ ತಿಳಿದಿರುವುದೊಳಿತು. ಆಂಧ್ರವು ಬೇರೆಯಾಗಿ ಹೋಗುವುದೆಂಬ [illegible]—ಹೊಸ ಜನನದೊಂದಿಗೆ ಹೊಸ [illegible] ಆಂಧ್ರ [illegible] ಸನ್ನ [illegible] ಗಳನ್ನು [illegible] ತ್ತೇನೆ. [illegible] ದಿಂದ ಭಾರತದಲ್ಲಿ [illegible] ಆಂಧ್ರ [illegible] ದಲ್ಲಿ ಕಂಡುಬರುವುದರಲ್ಲಿ ಸಂದೇಹವಿಲ್ಲ.

"ಭಾರತದ ಮಹಾಸರಿತ್ತುಗಳಲ್ಲಿ ಎರಡು—ಕೃಷ್ಣಾ ಮತ್ತು ಗೋದಾವರಿಗಳು—ಆಂಧ್ರದಲ್ಲಿ ಹರಿಯುತಿದ್ದು ಅವು ಅಕ್ಕಿಯನ್ನು ಉತ್ಪಾದಿಸುತ್ತವೆ. ಇಲ್ಲಿ ನೀರಾವರಿ [illegible] ಬೆಳೆಯುತ್ತವೆ. ಇವೊಂದು ಆಸ್ತಿಯಾದರೆ ಆಂಧ್ರದ ಎರಡು ಕೋಟಿ ಸ್ತ್ರೀ ಪುರುಷ ಬಾಂಧವರು ಇನ್ನೊಂದು ಬಗೆಯ ಆಸ್ತಿ. ಅವರು ಗಟ್ಟಿಮುಟ್ಟಾಗಿದ್ದು ಕುಶಲವಾಗಿ ಕೆಲಸ ಮಾಡಬಲ್ಲರು. ಈ ಸೊತ್ತುಗಳೇ ಆಂಧ್ರದ ಮೂಲ ಭಂಡವಾಳ."

ಅಗಲುವ ಆಂಧ್ರರಿಗೆ ರಾಜಗೋಪಾಲಾಚಾರಿಯವರ ಹಿತನುಡಿ.

❖

"ಭಾರತದ ರಾಜ್ಯಗಳಲ್ಲಿ ಧೋರಣೆಯು ಪ್ರತಿ ಶತ ಹತ್ತರಷ್ಟೇ ಇದ್ದು— ಉಳಿದ ೯೦% ಆಡಳಿತ ಭಾರವಾಗಿರುತ್ತದೆ. ಜನಸಾಮಾನ್ಯನನ್ನು ಸರಕಾರದ ಆಡಳಿತ ವಿಭಾಗವೇ ಪ್ರತಿ ದಿನ ಸ್ಪರ್ಶಿಸುತ್ತದೆ; ಮತ್ತು ಈ ಆಡಳಿತ ಹೇಗಿರುವುದೆಂಬುದರಿಂದಲೇ ಜನರು ಸರಕಾರದ ಬಗ್ಗೆ ನಿರ್ಣಯಕ್ಕೆ ಬರುತ್ತಾರೆ. ಧೋರಣೆಯ ಮಹತ್ವವನ್ನು ಕಡೆಗಣಿಸುವುದು ಸಲ್ಲದಾದರೂ ಸರಕಾರದ ಆಡಳಿತ ಯಂತ್ರ ನಿರ್ವಹಿಸುವ ಪಾತ್ರದ ಹೊಣೆಯನ್ನು ನಾವು ಎಷ್ಟು ಮಾತ್ರಕ್ಕೂ ಅಲಕ್ಷಿಸುವಂತಿಲ್ಲ. ಆಂಧ್ರರಾಜ್ಯದ ನೀವು ಅನುಭವಿಕ ಆಡಳಿತಗಾರರೆಂದು ಗುಂಪಾಗಿರುವಿರಿ. ಜನರಿಗೆ ನಿಮ್ಮ ಮೂಲಕ ದೊರಕುವ ಸೇವೆಯೇ ಆಂಧ್ರರ ಅಭ್ಯುದಯದ ಮೈಲುಗಲ್ಲು.

'ಪ್ರಜಾ ಪ್ರಭುತ್ವದ ಈ ದಿನದಲ್ಲಿ ನಾವು ಜನತೆಯ ಕೇಳಿಕೆಗೆ ಓಗೊಡಬೇಕಾಗುತ್ತದೆ. ನಮ್ಮೊಡನೆ ಸಾರ್ವಜನಿಕರೊಂದರೆ ತಾಪತ್ರಯಗಳನ್ನು ದೂರೀಕರಿಸಲು ಸಾಕಷ್ಟು ಅನುಕೂಲತೆ ಇಲ್ಲದಿರಬಹುದು—ಆದರೆ ಸಾಧ್ಯವಿದ್ದಷ್ಟು ರೀತಿಯಲ್ಲಿ ಜನರ ಮನವೊಲಿಸ [illegible] ಗಳ ನಮ್ಮ ಕರ್ತವ್ಯ.

"ಹೊರಗಿನ ಒತ್ತಾಯ ಹಾಗೂ ಸ್ವಪ್ರೇರಣೆಯಿಂದ ಸಾರ್ವಜನಿಕ ಸಂಪರ್ಕಾಧಿಕಾರಿಗಳಾಗಿರುವ ಸರಕಾರೀ ನೌಕರರ ಸ್ಥಿತಿ ಕೆಡಬಾರದು. ಧೋರಣೆಯನ್ನು ರೂಪಿಸುವುದರಲ್ಲಿ ಸರಕಾರೀ ನೌಕರರ ಅಂತರಂಗ [illegible]. ಸಂಬಂಧಿಸಿದ ಮಂತ್ರಿಗೆ ವಿವರವಾದ ಮಾಹಿತಿಯನ್ನು ಆಯಾ ಖಾತೆಯ ಕಾರ್ಯದರ್ಶಿ ಒದಗಿಸಿಕೊಡದಿದ್ದರೆ ಮತ್ತು ತನ್ನ ಅನುಭವವನ್ನು ತಿಳಿಸದಿದ್ದರೆ ಸಮಂಜಸವಾದ ರೀತಿಯಲ್ಲಿ ಧೋರಣೆಯನ್ನು ರೂಪಿಸಿಕೊಳ್ಳಲು ಬರಲಿಕ್ಕಿಲ್ಲ. ಹೀಗೆ ಹೊಸ ಧೋರಣೆಯ ಪೂರ್ವದಲ್ಲಿ ತೋರಿಸುವ ಬುದ್ಧಿಮಂತಿಕೆಯು, ಧೋರಣೆಗಳು ಸ್ವೀಕಾರವಾದ ಬಳಿಕ ಕಾರ್ಯತಃ ರೂಪುಗೊಳ್ಳಬೇಕಾದಾಗ, ಇನ್ನೂ ಹೆಚ್ಚು ಕಾರ್ಯಕ್ಷಮ ರೀತಿಯಲ್ಲಿ ವ್ಯಕ್ತಗೊಳ್ಳಬೇಕು.

([illegible])

ಲೋಕದ ಜನತೆಗೆ

ಬರೆದವರು: **ಕಾರ್ತಿಕೇಯ.**

ಗಾಂಧೀ ವಿಚಾರ

ಯುಗಪುರುಷ ಗಾಂಧೀಯನ್ನು ಅರಿಯದವರಾರು? ಮೂರು ತುಂಬದ ಮಗು ಸಹ"ಮಹಾತ್ಮಾ ಗಾಂಧೀಕೀ ಜೈ" ಎನ್ನುತ್ತದೆ. ನಮ್ಮ ಕಾಲಕ್ಕೆ ಗಾಂಧೀಜಿ ಚಿರಪರಿಚಿತರಾದ, ಆತ್ಮೀಯರಾದ ವ್ಯಕ್ತಿ. ಅವರು ಕೈಯಾಡಿಸದ ಕ್ಷೇತ್ರವಿಲ್ಲ; ಮಾಡಿ ತೋರಿಸದ ಕೆಲಸವಿಲ್ಲ; ಅನುಷ್ಠಾನಕ್ಕೆ ತಾರದ ಮಾತಿಲ್ಲ; ರಾಜಕೀಯ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಎಂದು ಮುಂತಾದ ಪ್ರತಿಯೊಂದೂ ಕ್ಷೇತ್ರದಲ್ಲಿ ಪ್ರಯೋಗ ಮಾಡಿ, ಪ್ರಯೋಜನದ ಬೆಲೆ ಅಳೆಯುವುದರಲ್ಲಿ ಅವರ ಬಾಳ್ವೆ ಸಂದಿತು. ಇಂಥ ಪ್ರಯೋಗಗಳಿಗೆ ಪ್ರೇರಕವಾದ ಚೈತನ್ಯ ಗಾಂಧೀಯ ಪಾಲಿಗೆ ಸತ್ಯ. ಸತ್ಯಶೋಧನೆಯ ಅಂಗವಾಗಿ ಈ ಎಲ್ಲ ಕರ್ಮಗಳನ್ನು ಗಾಂಧೀಜಿ ನೆರವೇರಿಸಿದರು.

ಈ ಪ್ರಯೋಗಗಳ ಫಲವಾಗಿ ಗಾಂಧೀ ಎಷ್ಟೋ ವೇಳೆ ತಮ್ಮ ವಿಚಾರವನ್ನು ಬದಲಿಸಬೇಕಾಗಿ ಬಂದಿದೆ. ಒಮ್ಮೆ ಒಂದು ರೀತಿಯಾಗಿ ನುಡಿದಿದ್ದರೆ, ಮತ್ತೊಮ್ಮೆ ಬೇರೆಯೇ ಮಾತು ಅವರ ಬಾಯಿಂದ ಬಂದುದುಂಟು. ಅದಕ್ಕೆ ಗಾಂಧೀಜಿ ಹೇಳುವುದಿಷ್ಟೆ—"ನಾನು ಸತ್ಯ ಶೋಧಕ. ನನಗೆ ಎಂದೆಂದು ಯಾವುದು 'ಸರಿ' ಎನಿಸುವುದೋ ಹಾಗೆಯೇ ಹೇಳುವವ ನಾನು. ಇದು ಸತ್ಯದ ಪಾಲನೆ." ಪ್ರಯೋಗದ ತೀಕ್ಷ್ಣತೆ ಮತ್ತು ಅಚ್ಚುಕಟ್ಟು ಹೆಚ್ಚಿದಷ್ಟು ಸತ್ಯ ಹತ್ತಿರಹತ್ತಿರ ಗೋಚರವಾಗುವುದಲ್ಲವೆ? ಹಾಗೆಂದು ಗಾಂಧಿಯವಿಚಾರಗಳು ಬದಲಾಗುವುದು ತೋರಿಕೆಗೆಮಾತ್ರ.ಅವರ ವಿಚಾರಗಳ ಮೂಲದಲ್ಲಿ ಅಡಕವಾಗಿರುವ ಸತ್ಯವು ಒಂದೇ. ಗಾಂಧಿಯ ಮಾತ್ರ ಏನೇ ಇರಲಿ-ಅದುಹಳೆಯದಾದ ಮಾತೇನೈ. "ಪ್ರಪಂಚಕ್ಕೆ ತಿಳಿಸಲು ಹೊಸದಾವುದೂ ನನ್ನಲ್ಲಿಲ್ಲ. ಹೊಸ ತತ್ವವಾಗಲಿ, ಹೊಸ ಧರ್ಮವಾಗಲಿ, ನಾನು ಪ್ರತಿಪಾದಿಸಿಲ್ಲ. ಸನಾತನವೂ ನಿತ್ಯವೂ ಆದ ಸತ್ಯ ಮಾನವನ ಅನುದಿನದ ಜೀವನದಲ್ಲಿ ಅನುಷ್ಠಾನಕ್ಕೆ ಬರಲೆಂಬ ಪ್ರಯತ್ನವನ್ನು ನಾನು ಮಾಡಿದ್ದೇನೆ. ನಾಳೆ ಅವು ಮಾರ್ಪಡಬಹುದು— ನನ್ನ ಅಭಿಪ್ರಾಯಗಳೂ ತೀರ್ಮಾನಗಳೂ ಕಡೆಯ ಮಾತಲ್ಲ. ನನ್ನ ಅಭಿಪ್ರಾಯವನ್ನು ನಾನೇ ಬದಲಿಸಬಹುದು" ಎಂದು ಗಾಂಧೀಜಿ ತಮ್ಮ ವಿಚಾರಗಳ ಸ್ವರೂಪವನ್ನು ಕುರಿತು ಆಡಿದ್ದಾರೆ.

ಚಿರಂಜೀವಿ

"ಗಾಂಧೀವಾದ" ಎಂಬ ಮಾತು ಎಷ್ಟು ಒಪ್ಪಿಗೆಯೋ ಆದೂ ಸಂಶಯವೇ. ಸ್ವತಃ ಗಾಂಧೀಜಿಯ ಹೇಳಿಕೆಯಂತೆ, ಅವರ ವಿಚಾರಗಳೆಲ್ಲವೂ ಹಳತು. ಅವುಗಳಲ್ಲಿ ಅವರಾಗಿ ಪ್ರತಿಪಾದಿಸಿರುವ ಮೌಲಿಕ ಮತವೇನೂ ಇಲ್ಲ. ಅಲ್ಲದೆ ತಮ್ಮ ಅಭಿಪ್ರಾಯವನ್ನು ತಾವೇ ಬದಲಾಯಿಸುವರೆಂದ ಮೇಲೆ-ಗಾಂಧೀವಾದವೆಂದು ಕಟ್ಟು ನಿಟ್ಟನಿಂದ ಬಣ್ಣಿಸುವುದಾದರೂ ಏನನ್ನು? ಗಾಂಧೀಯ ದೃಷ್ಟಿಯಿಂದ ಅವರ ವಿಚಾರಗಳೆಲ್ಲವೂ ಸತ್ಯ ಮತ್ತು ಅಹಿಂಸೆಯ ವಿಧಿಯಿಂದ ನಡೆಯಲು ಸಹಾಯಕವಾದ ಜೀವನ ಧರ್ಮ. "ಈ ಜೀವನ ಧರ್ಮ ಮತವೆನಿಸಿಕೊಳ್ಳುವುದಾದರೆ—ಇದೇ ನನ್ನ ಮತ. ಆದರೆ ಇದು 'ಗಾಂಧೀವಾದ ಎಂದೆನಿಸಿಕೊಳ್ಳಬಾರದು. ಗಾಂಧೀ ಪಂಥ, ಗಾಂಧೀ ಅನುಯಾಯಿಗಳು ಎಂಬುದಾಗಿ ನನ್ನಬಳಿಕ ಪ್ರತ್ಯೇಕ ಪಂಗಡವನ್ನು ಸ್ಥಾಪಿಸುವ ಉದ್ದೇಶ ನನಗಿಲ್ಲ" ಎಂದು ಗಾಂಧೀಜಿ ಹೇಳಿರುವರು.

ಒಬ್ಬಾನೊಬ್ಬ ಕವಿ "ಗಾಂಧಿಯೇ ಗಾಂಧಿ-ಸರ್ವತ್ರ ಗಾಂಧಿ" ಎಂದು ಹಾಡಿದರು. ನಿಜವಾಗಿ ನೋಡಿದರೆ, ಗಾಂಧೀಜಿಯ ಜೀವನದಲ್ಲಿ ಅವರ ವಿಚಾರ ಸರಣಿಯಿಂದ ಆಕರ್ಷಿತರಾದವರಿಗಿಂತ ಅವರ ವ್ಯಕ್ತಿತ್ವಕ್ಕೆ ಮೋಹಗೊಂಡ ಜನರೇ ಅತ್ಯಧಿಕ. "ಬಾಪೂ" ಎಂದು ಆದರದ ಸಲುಗೆಯಿಂದ ಕರೆಯುವಷ್ಟು ಹೆಚ್ಚು ನಿಕಟ ಹಾಗೂ ವ್ಯಕ್ತಿಗತ ಬಾಂಧವ್ಯ ಕಟ್ಟಿಕೊಂಡ ನಮ್ಮ ಜನಕ್ಕೆ ಗಾಂಧಿಯೇ ಎಲ್ಲವೂ ಆದರು. ಗಾಂಧೀಯ ವಿಚಾರಗಳನ್ನು ಮನನಮಾಡಿಕೊಳ್ಳುವುದಕ್ಕೆ ಬದಲಾಗಿ, ಗಾಂಧೀಯನ್ನೆ ನಚ್ಚಿದರು, ನಮ್ಮ ಜನ. ಬಹುಶಃ ಇದು ಸ್ವತಃ ಗಾಂಧೀಜಿಗೂ ಪ್ರಿಯವೆನಿಸಿರಬೇಕು.

ಗಾಂಧೀಯ ವಿಚಾರಗಳಲ್ಲಿ ಹುರುಳಿಲ್ಲವಾದರೆ ಮತ್ತು ಅವರ ವ್ಯಕ್ತಿತ್ವವನ್ನೆ ಅವರ ವಿಚಾರಗಳೂ ಆಶ್ರಯಿಸಿದ್ದರೆ, ಗಾಂಧೀಜಿಯ ಬಳಿಕವೂ ಈ ತತ್ವಗಳು ಉಳಿಯುವುದು ಸಾಧ್ಯವಿರಲಿಲ್ಲ.ಆದರೆಇಂದಿಗೂ ಯುದ್ಧ ಭಯದಿಂದ ಕಂಗೆಟ್ಟಿರುವ ಲೋಕದಲ್ಲಿ ವಿಚಾರವಂತರೆಲ್ಲ ಗಾಂಧೀಜಿಯ ಸತ್ಯ—ಅಹಿಂಸೆಗಳ ಮಾರ್ಗ ಲೋಕಶಾಂತಿಗೆ ಪೋಷಕವಾದ ಏಕಮೇವ ರೀತಿಯೆಂದು ಒಕ್ಕೊರಲಿನಿಂದ ಸಾರುತಿದ್ದಾರೆ. ಗಾಂಧೀಜಿಯ ವಿಚಾರಗಳನ್ನು ಮುಕ್ತಕಂಠದಿಂದ ಹೊಗಳಿ ಅವರ ಮಹಿಮಾ ವರ್ಣನೆಯನ್ನು ಮಾಡುವವರೂ ಅಸಂಖ್ಯಾತ. "ಗಾಂಧೀವಾದ ಒಂದು ಪಂಥವಾದರೆ, ಅದು ನಾಶವಾಗಲಿ" ಎಂದು ಗಾಂಧೀಜಿ ಹೇಳಿದ್ದರು ಆದರೆ ಅದು ಪಂಥವಲ್ಲ, ಮತವಲ್ಲ ಎಂಬುದೀಗ ಮನವರಿಕೆಯಾಗಿದೆ. ಸತ್ಯ ಅಹಿಂಸೆಗಳೇ ಅದರ ಅಸ್ತಿವಾರ; ಎಂದಬಳಿಕ, ಅದೂ ಚಿರಂಜೀವಿಯಾದುದು; ನಿತ್ಯ ಸತ್ಯವಾದುದು.

ಸತ್ಯಾಗ್ರಹ

ರಾಜಕೀಯ ಹೋರಾಟಕ್ಕಾಗಿ ಸತ್ಯಾಗ್ರಹವೆಂಬ ಅಜೇಯ ಆಯುಧವನ್ನು ಗಾಂಧೀಜಿ ಕೈಗೆತ್ತಿಕೊಂಡರು. "ದೈವಭಕ್ತಿ, ಪ್ರಾರ್ಥನೆ, ಸತ್ಯ, ಅಹಿಂಸೆ, ಕ್ಷಮೆ, ಪ್ರೇಮ, ದಯೆ, ಅಪಕಾರಕ್ಕೆ ಪ್ರತಿಯಾಗಿ ಉಪಕಾರ, ಕಷ್ಟಸಹಿಷ್ಣುತೆ, ನಿರಶನ ವ್ರತ—ಇವು ಸತ್ಯಾಗ್ರಹ ಬತ್ತಳಿಕೆಯ ಅಸ್ತ್ರಗಳು."

ಸತ್ಯಾಗ್ರಹದ ಮೂಲ ಉದ್ದೇಶ ಹೃದಯ ಪರಿವರ್ತನೆ: ಕಷ್ಟ ಅನುಭವಿಸಲು ಸತ್ಯಾಗ್ರಹಿ ಸಿದ್ಧನಾದುದನ್ನು ಕಂಡು, ಅವನ ಉದ್ದೇಶ ಪವಿತ್ರವಿರಬೇಕು ಎಂಬ ಭಾವನೆಯನ್ನು ಪ್ರತಿಪಕ್ಷದವನಲ್ಲಿ ಉಂಟುಮಾಡುವುದು. ಸತ್ಯಾಗ್ರಹಿಗೆ ಅತುಲ ಚೈತನ್ಯವನ್ನೀಯುವುದು ಅವನಿಗೆ ಸತ್ಯದ ಮೇಲಿರುವ ನಿಸ್ಸೀಮವಾದ ಪ್ರೀತಿ. ಯಾರೊಡನೆಯೂ ಅವನಿಗೆ ವ್ಯಕ್ತಿಶಃ ದ್ವೇಷಾಸೂಯೆಗಳಿಲ್ಲ; ಯಾರಿಗೂ ಕೇಡಾಗಬೇಕೆಂದು ಅವನು ಬಯಸಲಾರ.

ನೈತಿಕ ಬಲಕ್ಕೆ ಗೊಬ್ಬರ ನೀರೆರೆದು ಪೋಷಿಸುವುದು ಅಹಿಂಸೆ. ಹಿಂಸೆಯಿಂದ ವ್ಯಕ್ತಿಯ ಮನನೋಯುತ್ತದೆ; ಅಹಿಂಸೆ ವ್ಯಕ್ತಿಯಮನದಲ್ಲಿ ಪ್ರೀತಿಯನ್ನು ಬೆಳೆಸುವುದು. 'ನಿಮ್ಮ ಶತ್ರುಗಳಿಗೂ ನೀವು ಕೇಡುಬಗೆಯಲಾರಿರಿ. ಸ್ವಯಂ ಕಷ್ಟ ಅನುಭವಿಸುತ್ತ ಕಷ್ಟಸಹಿಷ್ಣುತೆಯ ಬಲದಿಂದ ಜಯಪಡೆಯುವ ಉದ್ದೇಶ ನಿಮ್ಮದು. ಸ್ವಯಂ ನಿರ್ಣೀತವಾದ ಘನತೆ, ಗಾಂಭೀರ್ಯದ ಎಲ್ಲೆಯನ್ನು ನೀವು ಮೀರಲೊಲ್ಲಿರಿ. ಇದೇ ನಮ್ಮನ್ನು— ಹಿಂಸಾಯೋಧರನ್ನು—ನಿಸ್ಸಹಾಯಮಾಡುವ ನಿಮ್ಮ ಹಾಳು ಸೌಜನ್ಯಗಳು' ಎಂಬುದಾಗಿ ಜನರಲ್ ಸ್ಮಟ್ಸ್ ಹೇಳಿದ್ದರು. ತನ್ನನ್ನು ಜೈಲಿನಲ್ಲಿರಿಸಿದ ಸ್ಮಟ್ಸರಿಗೆ ಒಂದು ಜೊತೆ ಪಾದರಕ್ಷೆಗಳನ್ನು ತಾನೇ ಹೊಲಿದು ಸ್ನೇಹ ಕಾಣಿಕೆಯಾಗಿ ಅರ್ಪಿಸುವಂತೆ .ಗಾಂಧೀಜಿಗೆ ಪ್ರೇರಕವಾದುದು ಅಹಿಂಸಾಬಲವೇ ಅಲ್ಲವೆ? ಹಿಂಸೆ ನಮ್ಮಲ್ಲಿ ವೈರತ್ವ, ರೋಷ ಮತ್ತು ಪ್ರತೀಕಾರ ಭಾವನೆಯನ್ನು ಬೆಳೆಸುವುದು; ಅಹಿಂಸೆಯೋ "ಪ್ರೇಮ ಬಾಷ್ಪ ಮುಕ್ತಾಫಲ!"

ಜೀವನ ವಿಕಾಸ

ಸತ್ಯಾಗ್ರಹದಲ್ಲಿ ಅಸಹಕಾರವೂ ಇದೆ. ಎಲ್ಲಿ ತಪ್ಪಿದೆಯೋ ಅದರಿಂದ ದೂರ ಉಳಿಯುವುದು ಅಸಹಕಾರದ ಉದ್ದೇಶ. ಗಾಂಧೀಜಿ ಅನೇಕವೇಳೆ ಅಸಹಕಾರವನ್ನು ಪ್ರದರ್ಶಿಸಿ, ಸತ್ಯದ ಮಾನ ಕಾಯ್ದಿದ್ದಾರೆ. ಸತ್ಯಾಗ್ರಹಿಗೆ ಅಸಹಕಾರ ಮತ್ತು ಅಹಿಂಸೆ ಎಡಬಲ ಕೈಗಳಂತೆ.

"ಫ್ರಾನ್ಸಿನ ಮಹಾ ಕ್ರಾಂತಿಯ ಗುರಿ ರಾಜಕೀಯ ಸ್ವಾತಂತ್ರ್ಯ; ರಷ್ಯಾದ ವಿಪ್ಲವದ ಉದ್ದೇಶ ಆರ್ಥಿಕ ಸ್ವಾತಂತ್ರ್ಯ; ಆದರೆ ಭಾರತದ ಆಂದೋಲನ ನಡೆದುದು ಮಾನಸಿಕ ಸ್ವಾತಂತ್ರ್ಯಕ್ಕಾಗಿ—ಪ್ರಪಂಚದ ಆರ್ಥಿಕ ಮತ್ತು ರಾಜಕೀಯ ಭಿನ್ನತೆಗಳನ್ನು ಶಾಂತಿಮಾರ್ಗದಿಂದ ನಿವಾರಿಸಿ ಜೀವನ ಸಾಮರಸ್ಯ ನೆಲಸುವಂತೆ ಮಾಡುವುದಕ್ಕಾಗಿ" ಭಾರತೀಯ ಆಂದೋಲನ ನಡೆಯಿತು. ಮಾನಸಿಕ ಸ್ವಾತಂತ್ರ್ಯಕ್ಕಾಗಿ ಆಂದೋಲನ ಹೂಡಲು ಗಾಂಧೀಜಿಗೆ ನೆರವಾದುದು ಸತ್ಯ ಪ್ರಿಯತೆ. ಗಾಂಧೀಗೆ ದೇವರು ಸತ್ಯ; ಮತ್ತು ಸತ್ಯವೇ ದೇವರು. ಭಗವಂತನ ಕುರಿತಾದ ಅನನ್ಯ ಭಕ್ತಿಯೇ ಸತ್ಯವನ್ನು ಉಪಾಸಿಸುವ ಕ್ರಮ. ಪ್ರಾರ್ಥನೆ, ಉಪವಾಸ, ಬ್ರಹ್ಮಚರ್ಯ ಇವೆಲ್ಲವೂ ಸತ್ಯ ಅಹಿಂಸೆಗಳ ಚೈತನ್ಯವನ್ನು ಇನ್ನಷ್ಟು ಸಂವರ್ಧಿಸಿಕೊಳ್ಳಲು.

ಬ್ರಹ್ಮಚರ್ಯದಿಂದ ಇಂದ್ರಿಯ ನಿಗ್ರಹಮಾಡಿಕೊಳ್ಳಬೇಕು; ಇಂದ್ರಿಯಗಳನ್ನು ಹತೋಟಿಗೆ ತರುವುದರಿಂದ ಕಷ್ಟ ಸಹಿಷ್ಣುತೆಯು ಹೆಚ್ಚುತ್ತದೆ;ಚಂಚಲ ಚಾಪಲ್ಯಗಳು ದೂರಾಗುತ್ತವೆ; ಆತ್ಮ ತೇಜಸ್ಸು ಲಭಿಸುತ್ತದೆ. ಇಂದ್ರಿಯ ನಿಗ್ರಹಿಯಾದ ಸ್ಥಿತಪ್ರಜ್ಞ ಸತ್ಯಾಗ್ರಹಿಯು ಕಾಯಾ ವಾಚಾ ಮನಸಾ ನಿಷ್ಕಾಮಬುದ್ಧಿಯಿಂದ ಸತ್ಯ ಅಹಿಂಸೆಗಳ ಮಾರ್ಗದಲ್ಲಿ ನಡೆಯಬಲ್ಲನು. ಸರಳ ಮತ್ತು ಭೋಗರಹಿತ ಜೀವನಕ್ಕೆ ಇಂದ್ರಿಯ ನಿಗ್ರಹ ಬಹಳ ಸಹಕಾ

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇನೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಹೊಸ ಬೆಳಕು ನೀಡಿದ ಯುಗಪುರುಷ

ಬಾಪೂಜಿಯವರ ವಿಚಾರಗಳ ಅನುಸರಣೆಯೊಂದೇ ಸುಖ ಸಮಾಧಾನದ ಸಾಧನ

ರಿ. ಈ ಕಾರಣದಿಂದಲೇ ಗಾಂಧೀಜಿಗೆ "ಗೀತೆ" ತುಂಬ ಹಿಡಿಸಿತು.

ಗಾಂಧೀಜಿಯ ರಾಜಕೀಯ ವಿಶೇಷತಃ ಪಾರಮಾರ್ಥಿಕ—ಪ್ರಚಲಿತ ರಾಜಕೀಯ ದೃಷ್ಟಿಯಿಂದ ಅವ್ಯವಹಾರಿಕ, ಅಶಾಸ್ತ್ರೀಯವೆಂದೂ ತೋರೀತು. ಅವರ ತತ್ವಗಳು ಮೂಲಭೂತವಾದ ನೈತಿಕ, ಧಾರ್ಮಿಕ ಪಾರಮಾರ್ಥಿಕ ವಿಚಾರಗಳಿಂದ ಪರಿಪುತವಾಗಿವೆ. ಮಾನವನ ನಡೆ ನುಡಿಗಳನ್ನು ತಿದ್ದಿ ಅವನಲ್ಲಡಗಿರುವ ದೈವೀಸಂಪದಗಳಿಗೆ ಪುಟವಿಟ್ಟು, ಪಾಪಭೀರುವನ್ನಾಗಿಮಾಡಿ, ವ್ಯಕ್ತಿಯನ್ನು ಋಷಿಪುಂಗವರ ಉನ್ನತ ಶ್ರೇಣಿಗೆ ಒಯ್ಯುವುದು ಸಾಧ್ಯವೆಂದು ಗಾಂಧೀಜಿಯ ಆಂತರಿಕ ಅಭಿಪ್ರಾಯ.

ಯಂತ್ರವ್ಯಾಮೋಹ

ಗಾಂಧೀಜಿ ಯಂತ್ರ ವಿರೋಧಿ ಎನ್ನುವವರು ಇದ್ದಾರೆ. ಆದರೆ ಸ್ವತಃ ಗಾಂಧೀಜಿಗೆ ಈ ಪ್ರಶ್ನೆ ಮಾಡಿದಾಗ ಅವರು ಹೇಳಿದ ಮಾತು—"ಛೆ, ಛೆ, ಉಂಟೆ! ಈ ದೇಹವೇ ಅತಿ ಸೂಕ್ಷ್ಮವಾದ ಯಂತ್ರ. ಚರಖವೂ ಒಂದು ಯಂತ್ರ. ನಾನು ಬೇಡೆಂಬುದು ಯಂತ್ರವನ್ನಲ್ಲ— "ಯಂತ್ರ ಯಂತ್ರ" ಎನ್ನುವ ಹುಚ್ಚು ಭ್ರಾಂತಿಯನ್ನು. ದೇಹಶ್ರಮ ಹಾಗೂ ದುಡಿತವನ್ನು ತಗ್ಗಿಸುವ ಸಂವಿಧಾನ ದಿನದಿನಕ್ಕೆ ಬೆಳೆಯುತ್ತಾ ಸಾವಿರಾರು ಜನ ಉದ್ಯೋಗವಿಲ್ಲದೆ ನಿರ್ಗತಿಕರಾಗಿ ಬೀದಿಬೀದಿ ಅಲೆಯುತ್ತಾರೆ. ಕೆಲವರಿಗೆ ಮಾತ್ರ ದುಡಿತವುಳಿಸಬೇಕೆಂಬುದು ನನ್ನ ಉದ್ದೇಶವಲ್ಲ. ಇದೇ ಮಾನವಕೋಟಿಗೆ ಈ ಉಳಿತಾಯ ಅನ್ವಯಿಸಬೇಕು. ಕೆಲವರಲ್ಲಿ ಮಾತ್ರ ಧನಸಂಗ್ರಹವಾಗಬೇಕೆಂಬುದು ನನ್ನ ಇಚ್ಛೆಯಲ್ಲ—ಅಲ್ಪ ಸಂಖ್ಯೆ ಸಾವಿರ ಜನರ ಮೇಲೆ ಸವಾರಿಮಾಡುವ ಅವಕಾಶವನ್ನು ಯಂತ್ರದ ವ್ಯಾಮೋಹ ಒದಗಿಸಿಕೊಟ್ಟಿದೆ. ಶ್ರಮ ಕಡಿಮೆ ಮಾಡಬೇಕೆಂಬ ಔದಾರ್ಯ ಇದರ ಹಿನ್ನೆಲೆಯಲ್ಲ-ಬದಲು ದುರಾಸೆಯ ಅಡಿಪಾಯವಿದೆ. ನಾನು ವಿರೋಧಿಸುವುದು ಇದನ್ನು."

ಭಾರತದಲ್ಲಿ ಅದೆಷ್ಟು ಜನ ನಿರುದ್ಯೋಗಿಗಳಿಲ್ಲ! ಇವರಿಗೆಲ್ಲ ಕೆಲಸ ಒದಗಿಸುವುದು ಹೇಗೆ? ಯಂತ್ರದ ಒಳಕೆಯಿಂದಾಗಿ ಸಾವಿರಾರು ಜನರ ಕೆಲಸವನ್ನು ಒಬ್ಬನು ಮಾಡಿ ಮುಗಿಸಲು ಸಾಧ್ಯವಾಯಿತು. ಒಂದೊಂದೂ ಭತ್ತ ಕುಟ್ಟುವ ಯಂತ್ರ ಏಳು ಸಾವಿರ ಜನರ ಅನ್ನ ಅಪಹರಿಸುತ್ತದೆಯೆಂದು ಲೆಕ್ಕಿಸಿರುವರು-ಇಷ್ಟು ಮಂದಿಯ ಅನ್ನ ಕಸಿದುಕೊಂಡು ಒಬ್ಬ ಮುದ್ದುಳ್ಳವನ ಬೊಕ್ಕಸ ಬೆಳೆಯಗೊಡುವ ಯಂತ್ರದ ಮೋಹ ಬೇಡವೆಂದು ಗಾಂಧೀಜಿಯ ಅಭಿಪ್ರಾಯ. ನಮಗೆ ಶ್ರಮವುಳಿಸುವುದು ಬೇಕಿಲ್ಲ—ವಿರಾಮವನ್ನು ಹೆಚ್ಚಿಸುವ ಅಗತ್ಯವೂ ನಮಗಿಲ್ಲ. ದುಡಿತದಲ್ಲಿಯೇ ಆನಂದಪಡಗಿದೆಯಾಗಿ, ಶ್ರಮವುಳಿಸಲು ಯಂತ್ರ ಸಾಧನವನ್ನು ಆಶ್ರಯಿಸುವುದು ತೀರ ಅನಗತ್ಯವೆಂದು ಗಾಂಧೀಯ ಅಭಿಮತ.

ವ್ಯಕ್ತಿತ್ವ ಬೆಳೆಸಬೇ ನೆಂಬುದು ಗಾಂಧೀಜಿಯ ಬಯಕೆ—ಯಂತ್ರದ ದಾಸ ಮನುಷ್ಯನಾದರೆ, ಅವನ ವಿವೇಚನಾ ಶಕ್ತಿಯೇ ಮಾಯವಾಗುವುದು. ಯಂತ್ರದೊಡನೆ ಯಂತ್ರವಾಗಿರುವ ಮನುಷ್ಯನಿಗೆ ಸ್ವಾನಂದವೆಲ್ಲಿಯದು. ಮಾನವ ಶರೀರವೂ ಒಂದು ಯಂತ್ರ, ನಿಜ. ಆದರೆ ಅದು ಬೆಳೆಯುತ್ತದಷ್ಟೇ. ಇದರಂತೆ ವ್ಯಕ್ತಿಯ ಪ್ರತಿಭೆಯೂ ಬೆಳೆದು ಬೆಳಗಬೇಕು—ಅವನಲ್ಲಿ ಸುಪ್ತವಾಗಿರುವ ದೈವೀಗುಣಗಳು ಪ್ರಚೋದಿಸಲ್ಪಡಬೇಕು. ಇದು ಗಾಂಧೀಜಿಯ ಗುರಿ. ಆತ್ಮವನ್ನು ಬದಿಗೊತ್ತಿ ಮಾನವನನ್ನು ಯಾಂತ್ರಿಕ ಮಾಡುವ ಪ್ರಯತ್ನವನ್ನವರು ಪ್ರತಿಭಟಿಸಿದರು.

ಖಾದಿಯ ಪ್ರಚಾರ

ಖಾದಿಗೆ ಪ್ರಾಮುಖ್ಯತೆ ಒಂದುದು ಈ ದೃಷ್ಟಿಯಿಂದ. ನೂಲುವ ನೇಯುವ ಯಂತ್ರ ನಿರ್ಮಾಣಕ್ಕೆ ಮೊದಲು ಚರಖ-ಕೈಮಗ್ಗಗಳೇ ನಮ್ಮ ಅವಶ್ಯಕತೆಯನ್ನು ಪೂರೈಸುತ್ತಿದ್ದವು. ಆದರೆ ಕಾಲ ಸಂದಂತೆ ಯಂತ್ರಗಳ ಪ್ರಭಾವದಿಂದ ಈ ಗೃಹೋದ್ಯಮ ಮಣ್ಣುಮುಕ್ಕಿತು. ಉದ್ಯೋಗವಿಲ್ಲದ ಜನಕ್ಕೆ ಖಾದಿಯ ಪ್ರಚಾರದಿಂದ ಕೆಲಸ ದೊರೆಯಬಹುದೆಂದು ಗಾಂಧೀಜಿ ಕಂಡುಕೊಂಡರು. ಇದು ಕಾರ್ಯಾನ್ವಿತಗೊಂಡಂತೆ ಗ್ರಾಮ ಜೀವನವನ್ನು ಸರಿತೂಗಿಸಿಕೊಂಡು, ಸಮನ್ವಯ ಸಾಧಿಸಲು ಬರುವುದೆಂದೂ ಅವರಿಗೆ ತೋರಿತು. ಸಮವಾಗಿ, ಸಾರ್ವತ್ರಿಕವಾಗಿ ಐಶ್ವರ್ಯವನ್ನು ಹಂಚಲು ಇದೊಂದು ಉಪಾಯವೆಂದವರು ತಿಳಿದರು.

ಸ್ವಾವಲಂಬನೆಗೆ ಸ್ವದೇಶೀ ವಸ್ತುಗಳ ಉಪಯೋಗ ನೇರಾದ ದಾರಿ—ಎಂದು ಗಾಂಧೀಜಿಗೆ ಮನವರಿಕೆಯಾಯಿತು. "ಸ್ವದೇಶೀ" ಎಂಬುದು ಅವರಿಗೆ ಧಾರ್ಮಿಕ ವ್ರತ. ಧರ್ಮದೃಷ್ಟಿಯಿಂದ ಸ್ವದೇಶೀ ವ್ರತ ಕೈಗೊಳ್ಳುವಾತ ಕೊನೆಯವರೆಗೂ ಅದಕ್ಕೆ ಅಂಟಿಕೊಳ್ಳುವನು. ಇದರಿಂದ ಅಂತಾರಾಷ್ಟ್ರೀಯ ಭಾವನೆಗೆ ಪೆಟ್ಟು ತಗಲುವುದೆಂದು ಕೆಲವರ ಆಕ್ಷೇಪ. ಅದಕ್ಕೆ ಗಾಂಧೀ ಹೇಳುವ ಸಮಾಧಾನ ಇದೇ 'ಜನ್ಮಭೂಮಿಯ ಸೇವೆಯಲ್ಲಿ ನನ್ನ ದೇಶವಾತ್ಸಲ್ಯ ಅಂತರ್ಗತ,ಸಂಕುಚಿತವೆಂದು ತೋರಿದರೂ ಚಿಂತೆ ಇಲ್ಲ ನನ್ನ ದೇಶ ಪ್ರೇಮದಲ್ಲಿ ಇತರ ದೇಶಗಳೊಡನೆ ವಿನಾಶದ ಸ್ಪರ್ಧೆ ಇಲ್ಲದಿರುವುದರಿಂದ ಅದು ವಿಶಾಲವಾದುದು' ಗಾಂಧೀ ಮುಂದೆ ಪರದೇಶೀ ವಸ್ತ್ರದ ಬಹಿಷ್ಕಾರಕ್ಕೆ ಧುಮುಕಿದಾಗ ದೀನಬಂಧು ಆಂಡ್ರ್ಯೂಸ್, ಕವಿ ಟಾಗೋರರಂಥವರು ಪ್ರತಿಭಟಿಸಿ ಪತ್ರಬರೆದರು."ಬತ್ತಲೆಯಾಗಿತಿರುಗುವ ಅಸಂಖ್ಯ ಭಾರತೀಯರಿಗೆ ಸುಟ್ಟು ಬೂದಿಯಾಗಿಸುವ ವಸ್ತ್ರವನ್ನು ಉಡಿಸಿ ಸಹಾಯ ಮಾಡಬಾರದೇ?" ಎಂಬುದವರ ಸವಾಲು. ದೇಶಕ್ಕೆ ಬಡತನ ತಂದ ಪರದೇಶೀ ವಸ್ತ್ರ ವಿಷಕ್ಕೆ ಸಮಾನ-ಹೊಟ್ಟೆಗಿಲ್ಲವೆಂದು ವಿಷವನ್ನುಣ್ಣುವುದುಂಟೇ ಬದಲಿಗೆ "ಅಂಥ ನಿರುದ್ಯೋಗಿಗಳ ಕೈಗೆ ಚರಖ ಕೊಟ್ಟು, ಅವರ ವಸ್ತ್ರ ಅವರೇ ಮಾಡಿಕೊಂಡು ಉಟ್ಟು ನಲಿಯುವ ಸಾಮರ್ಥ್ಯ ನೀಡುವೆ" ಎಂಬುದಾಗಿ ನೇರಾದ ಉತ್ತರ ಗಾಂಧೀಜಿಯಿಂದ ಬಂತು.

ಸ್ವಾವಲಂಬನ ಸೂತ್ರ

ಲೂಯಿಫಿಶರ "ಭಾರತದ ರಾಜಕೀಯ ಅನ್ನ ಬ್ರಹ್ಮ" ಎಂದು ಬರೆದ. ಎಲ್ಲರಿಗೂ ಅನ್ನ ಬಟ್ಟೆ ವಸತಿಗಳನ್ನೊದಗಿಸುವುದೇ ಗಾಂಧೀಜಿಯ ಗುರಿಯಾಗಿದ್ದಿತು ಎಲ್ಲರ ಉದರ ಪೋಷಣೆಗೆ ಅನುಕೂಲವಾಗುವಂತೆ ಆಡಂಬರರಹಿತವಾದ ಜೀವನಾದರ್ಶವನ್ನು ಎತ್ತಿ ಹಿಡಿದವರು ಗಾಂಧೀಜಿ. ಪಾಶ್ಚಿಮಾತ್ಯರ ವಿಚಾರವೋ ಇದಕ್ಕೆ ತದ್ವಿರುದ್ಧ-ಮನುಷ್ಯ ಹುಟ್ಟಿದ್ದು ಸುಖ ಪಡೆಯಲು; ಭೋಗಗಳೆಲ್ಲವನ್ನೂ ಪೂರಾ ಅನುಭವಿಸಬೇಕು ಎಂದು ಪಾಶ್ಚಿಮಾತ್ಯರ ಅಭಿಪ್ರಾಯ."ಸಂಬಳವಿರಿಸಬೇಕು-ಖರ್ಚು ಮಾಡಿಸಬೇಕು" ಎಂಬುದವರ ಮಾತು ಗಾಂಧೀ ಇದರ ನೇರ ವಿರೋಧಿ, ಸರಳ ಜೀವನ ಸುಗಮವಾಗುವಂತೆ, ಸ್ವಾವಲಂಬನೆಯ ಪರಿಪೂರ್ಣತೆಗಾಗಿ, ಗೃಹೋದ್ಯಮಗಳ ಅವಲಂಬನವೇ ಸರ್ವೋತ್ತಮವೆಂದೂ ಶ್ರೇಯಸ್ಕರವೆಂದೂ ಗಾಂಧೀಗೆ ತೋರಿತು. ಯಂತ್ರವಿರುವುದು ಯಾವುದಾದರೊಂದು ಕೇಂದ್ರಸ್ಥಳದಲ್ಲಿ ಯಂತ್ರಾಲಯಗಳು ನಾಶವಾದರೆ ಇಲ್ಲವ ದಿವಾಳಿ ತೆಗೆದರೆ. ಇಡೀ ದೇಶವೇ ನಷ್ಟಪಡಬೇಕಾಗಬೇಕು ಆದುದರಿಂದ ಯಂತ್ರವಿರೋಧಿ ಗಾಂಧೀಜಿ ವಿಕೇಂದ್ರೀಕರಣಕ್ಕೆ ಅತ್ಯಂತ ಮಹತ್ವ ಕೊಟ್ಟರು. ದೇಶದ ಕೈಗಾರಿಕೆಗಳು ಪ್ರತಿಯೊಂದೂ ಹಂಚಿ ಹಾಕಿದಂತೆ ಹಳ್ಳಿಗಳಲ್ಲಿ ವ್ಯಾಪಿಸಿರುವುದರಿಂದ ನಾಶವಾಗುವ ಹಾಗೂ ಹಾನಿ ಹೊಂದುವ ಭಯವಿರುವುದಿಲ್ಲ.

ಸ್ವಾವಲಂಬನೆಯ ಕಾರ್ಯಕ್ರಮ ಸಾಕಷ್ಟು ಯಶಸ್ವಿಯಾಗಲು ಜನರಲ್ಲಿ ಅಭಿರುಚಿ ಬೆಳೆಯುವುದು ಮುಖ್ಯ. ಜನರಲ್ಲಿ ಆಸಕ್ತಿ ಮತ್ತು ಜ್ಞಾನವನ್ನುಂಟುಮಾಡಿ ಅಭಿರುಚಿಯನ್ನು ಬೆಳೆಸಲು ಶಿಕ್ಷಣಕ್ಕಿಂತ ಯೋಗ್ಯ ಬೇರಾವುದು. ಶಿಕ್ಷಣದ ಸದುಪಯೋಗ ಪಡೆಯಲೆಂದೇ ಗಾಂಧೀಯ "ಮೂಲ ಶಿಕ್ಷಣ ಯೋಜನೆ" ಬೆಳಕು ಕಂಡಿತು.

ಸಮಾಜದ ನಡುವೆ

"ಎಲ್ಲರೂ ಸಮಾನರು" ಎಂಬ ಸೂತ್ರ ವಾಕ್ಯವನ್ನು ಪತಿತ ಜನರಿಗೆ ಅದನ್ನು ನೆನಪು ಮಾಡಿಕೊಟ್ಟವರಲ್ಲಿ ಗಾಂಧೀಜೀ ಅಗ್ರಗಣ್ಯ. ಹಿಂದೂ—ಮುಸ್ಲಿಂ ಭೇದಭಾವವನ್ನು ದೂರಗೊಳಿಸುವುದು ಸಮಾಜದ ಪ್ರಗತಿಗೆ ಮುಖ್ಯವೆಂದು ಗಾಂಧೀಜಿಗೆ ತೋರಿತು. ಅದಕ್ಕಾಗಿ ಅವರು ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನೇ ಆಶ್ರಯಿಸಿದರು. ನೌಖಾಲಿಯ ಪಾದಯಾತ್ರೆಯ ನೆನಪೂ ರೋಮಾಂಚಕವಿದೆ -ಈ ಸಮಯ ಗಾಂಧೀ ಪ್ರೇಮಸಂದೇಶ ಬೀರುತ್ತಿದ್ದರು. ಮಹರ್ಷಿ ಟಾಲಸ್ಟಾಯರು "ಪ್ರೇಮಸಿದ್ಧಿಯಲ್ಲೇ ದೇವರೂ ಇದ್ದಾನೆ" ಎಂದಿದ್ದರು. ಗಾಂಧೀಜಿಗೆ ಟಾಲಸ್ಟಾಯರಲ್ಲಿ ತುಂಬ ಪೂಜ್ಯ ಭಾವನೆ. ಈ ಶ್ರದ್ಧಾಭಕ್ತಿಯೇ ಪ್ರೇರಕವಾಗಿ ಪ್ರೇಮಭಾವನೆಯಿಂದ ಮನುಷ್ಯನಲ್ಲಿ ಬಾಂಧವ್ಯ ಸ್ಥಾಪಿಸಲು ಗಾಂಧೀ ಅನವರತ ದುಡಿದರು.

ಅಸ್ಪೃಶ್ಯತೆಯ ಕಲಂಕದ ನಿವಾರಣೆಗೂ ಗಾಂಧೀಜಿ ಮನಗೊಟ್ಟರು. "ಹರಿಜನ"ರೆಂದು ಅಸ್ಪೃಶ್ಯರನ್ನು ಪ್ರೀತಿಯಿಂದ ಸಂಬೋಧಿಸಿದ ಗಾಂಧೀಜಿಯ ಹೃದಯ ಎಷ್ಟು ವಿಶಾಲವಾದದ್ದು! ಹಿಂದಿನ ಕಾಲದಲ್ಲಿ ಜನರನ್ನು ದಾಸಿಗಳೆಂದು ಸಮಾಜದ ಬುದ್ಧಿವಂತರು ಹೀನೈಸುತ್ತಿದ್ದಾಗ ಉಪನಿಷತ್ತಿನ ಋಷಿಯೊಬ್ಬ "ಅಮೃತ ಪುತ್ರರೇ" ಎಂದು ಆದರದಿಂದ ಕರೆದುದನ್ನು ಇದು ನೆನಪು ಮಾಡುತ್ತಿದೆ.

ಸ್ತ್ರೀಯರೆಂದರೂ ಗಾಂಧೀ. ಪೂಜ್ಯಭಾವನೆ. ಸ್ತ್ರೀಯ ವಿಶಾಲ ಗುಣಗಳಿಗೆ ಶ್ರೀ ಸುರೂಪವಾದ ಕಾರ್ಯ ಕ್ರಮಗಳನ್ನು ತೋರಿಸಿ,ಸಮಾಜ ಸುಧಾರಣೆಯಲ್ಲಿ ಅವರ ನೆರವಿಗೆ ಮಾರ್ಗಕಲ್ಪಿಸಿ ಕೊಟ್ಟದ್ದು ಗಾಂಧೀಜಿಯ ವೈಶಿಷ್ಟ್ಯ.

ವ್ಯಕ್ತಿತ್ವ ನಾಶ ಮಾಡುವ ಯಂತ್ರಕ್ಕೆ ಮನ್ನಣೆ ನೀಡದ ಗಾಂಧೀಜಿ ದೈತನ ನೆರವಿಗೆ ಗೋಧನವೇ ಶ್ರೇಷ್ಠವೆಂದು ಪ್ರತಿಪಾದಿಸಿದರು. ಅದರಂತೆ ಸಮಾಜದ ಕೇಡುಗಗಳಲ್ಲಿ ಪ್ರಬಲವಾದ ಮದ್ಯರಾಕ್ಷಸನನ್ನು ಗಡೀಪಾರು ಮಾಡಬೇಕೆಂದು ಅವರು ಪಣತೊಟ್ಟರು. ಮನುಷ್ಯನ ಒಳ್ಳೆಯ ತನವನ್ನು ಸುಟ್ಟು, ದುರಾಚಾರಕ್ಕೆ ಸುಲಭಾವಾದ ಅವಕಾಶ ಮಾಡಿಕೊಡುವುದನ್ನು ಗಾಂಧೀಜಿ ಒಂದು ಕ್ಷಣವೂ ಸಹಿಸದೆ ಹೋದರು.

ಸರ್ವೋತ್ಕೃಷ್ಟ ಬೇಂಕಿಂಗ್ ವ್ಯವಹಾರ

ಆಧುನಿಕ ಜನಜೀವನದಲ್ಲಿ ಮಿತವ್ಯಯದ ಬೆಲೆಯು ಅತೀ ಮಹತ್ವದ್ದಾಗಿದೆ. ಜೀವನ ಸಂಗ್ರಾಮದಲ್ಲಿ ಬಾಳಿ ಬದುಕಬೇಕಾದರೆ ನಾವು, ನಮ್ಮ ಮಕ್ಕಳು ಮಿತವ್ಯಯದ ಅಭ್ಯಾಸ ಮಾಡಬೇಕು. ಕುಟುಂಬದ ಪ್ರತಿಯೊಬ್ಬನ ಹೆಸರಿನಲ್ಲಿಯೂ ಒಂದೊಂದು ಕ್ಯುಮುಲೇಟಿವ್ ಡಿಪಾಸಿಟ್ ಲೆಕ್ಕವನ್ನು ಪ್ರಾರಂಭಿಸುವುದು ಮಿತವ್ಯಯದ ಒಂದು ಉತ್ತಮ ಸಾಧನವಾಗಿದೆ. ಮಾತ್ರವಲ್ಲದೆ ತತ್ಕಾಲಿಕ ಸಾಧ್ಯವಿದ್ದಷ್ಟು ಉಳಿತಾಯ ಮಾಡಲು ಶಕ್ಯವಿದೆ.

ರೂಪಾಯಿ 5,00,00,000ಕ್ಕೂ ಮಿಕ್ಕಿದ ವಹಿವಾಟು.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925 [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ದಯಮಾಡಿ ನಿಮ್ಮ ಚಂದಾಹಣ ಕಳುಹಿಸಿರಿ.

ನಮ್ಮ ರೈತರನ್ನು ಮುಟ್ಟದ ಪ್ರಗತಿ ವ್ಯರ್ಥ!

ಜನಸಾಧಾರಣರೊಡನೆ ಬೆರೆತು ನಡೆಯುವುದೇ ಇಂದಿನ ಯುಗ ಧರ್ಮ

ನಮ್ಮ ಸಂಸ್ಕೃತಿಯ ವೈಶಿಷ್ಟ್ಯ

ಮಹಾ ಮೇಧಾವಿಯಾದ ರಾಜಗೋಪಾಲಾಚಾರಿಯವರು ತಮ್ಮ ಕೃತಿಗಳಿಂದ ಚಮತ್ಕಾರ ಮಾಡಿ ತೋರಿಸುವಂತೆ ಭಾಷಣಗಳಿಂದಲೂ ಜನರನ್ನು ಆಕರ್ಷಿಸಿ, ಜೀವನ ಸಂದೇಶದ ಅಮೃತ ಉಣಿಸುವುದುಂಟು. ಈಚೆಗೆ ಮದ್ರಾಸಿನಲ್ಲಿ ಅಖಿಲ ಭಾರತ ಸಾಂಸ್ಕೃತಿಕ ಮಂಡಳದ ಅಧಿವೇಶನ ಕೂಡಿದಾಗ ರಾಜಾಜಿಯವರು ತುಂಬ ಬೋಧಪ್ರದವಾದ ಭಾಷಣ ಮಾಡಿದರು. ಸಂಸ್ಕೃತಿ ಮತ್ತು ಸ್ವಾತಂತ್ರ್ಯದ ವ್ಯಾಖ್ಯೆಯನ್ನು ಕೂಲಂಕಷವಾಗಿಮಾಡಿ, ರಾಜಾಜಿಯವರು ಆತ್ಮ ಸಂಯಮನವೇ ಭಾರತೀಯ ಸಂಸ್ಕೃತಿಯ ಸಾರಸರ್ವಸ್ವವೆಂದು ಪ್ರತಿಪಾದಿಸಿದರು. ಸಂಸ್ಕೃತಿಯೆಂದರೆ ರೂಢವಾಗಿರುವ ಒಂದು ವಿಶಿಷ್ಟ ಕಲೆ, ನರ್ತನ, ಸಂಗೀತ ಅಥವಾ ಸಾಹಿತ್ಯವಲ್ಲ. ಜನರ ವರ್ತನೆಯೇ ಸಂಸ್ಕೃತಿ. ಸಂಸ್ಕೃತಿಯೆಂದರೆ ಸ್ವಾತಂತ್ರ್ಯವೂ ಅಲ್ಲ. ಸುಸಂಸ್ಕೃತ ಮನುಷ್ಯನು ಸ್ವೇಚ್ಛೆಯಿಂದ ತನಗೆ ತಾನೇ ಬಂಧನಗಳನ್ನು ಬಿಗಿದುಕೊಳ್ಳುವನು. ಆದುದರಿಂದ ಒಂದು ರಾಷ್ಟ್ರದ ಸಂಸ್ಕೃತಿ ಅನೇಕ ಪೀಳಿಗೆಯಲ್ಲಿ ಕಷ್ಟ, ಪರಿಶ್ರಮ ತಪ್ಪುತಡಿ, ಅಗ್ನಿ ಪರೀಕ್ಷೆ ಮುಂತಾದವುಗಳ ಬಳಿಕ ಸಾಮಾಜಿಕ ಸುವ್ಯವಸ್ಥೆ ಹಾಗೂ ಸುಖದ ದೃಷ್ಟಿಯಿಂದ ಅಂಗೀಕರಿಸಿದ ಸಂಯಮವೇ ಅಲ್ಲಿಯ ಸಂಸ್ಕೃತಿ. ವ್ಯಕ್ತಿಯ ವ್ಯಕ್ತಿತ್ವನ್ನು ಪ್ರತಿಬಂಧಿಸುವ ರಾಷ್ಟ್ರ ನಿಯಂತ್ರಣ ತತ್ವವಾಗಲೀ ಅದನ್ನು ಖಂಡಿಸುವ ಸ್ವಾತಂತ್ರ್ಯದ ಘೋಷಣೆಯಾಗಲೀ ಮಾನವೀಯ ದುಃಖ ದುಮ್ಮಾನಗಳನ್ನು ಪರಿಹರಿಸಲಾರವು. ಆತ್ಮಸಂಯಮವೇ ಸರಿಯಾದ ಮಾರ್ಗ. ಮತ್ತು ಇದನ್ನೇ ನಾವು ಭಾರತದ ಸಂಸ್ಕೃತಿಯೆಂದು ಕರೆಯುತ್ತೇವೆ. ಗ್ರೀಸಿನ ಸಂಸ್ಕೃತಿಗೆ ಸೌಂದರ್ಯದೃಷ್ಟಿ ಮೂಲವಾದರೆ, ಕಾಯಿದೆ ಕಾನೂನು ಮತ್ತು ಸುವ್ಯವಸ್ಥೆಯೇ ರೋಮದ ಸಂಸ್ಕೃತಿಯ ನೆಲೆಗಟ್ಟು. ಆದರೆ ಭಾರತದ ಸಂಸ್ಕೃತಿಯ ಜೀವಾಳವಿರುವುದು ಆತ್ಮ ಸಂಯಮನದಲ್ಲಿ. ಅದೇ ಜೀವನ ಮಾರ್ಗವೆಂದೂ ಸದ್ವರ್ತನೆಯೆಂದೂ ಭಾರತದ ಪಂಡಿತ ಪಾಮರರೆಲ್ಲರೂ ಮನವರಿಕೆಮಾಡಿಕೊಂಡಿರುವರು. ಈಚೆಗೆ ಗಾಂಧೀಜಿಯವರು ಆತ್ಮಸಂಯಮನದ ಶಕ್ತಿಯಿಂದ ಕ್ರಾಂತಿಮಾಡಿ ಅದರ ಪ್ರಚಂಡ ಪ್ರಭಾವವನ್ನು ಮತ್ತೊಮ್ಮೆ ತಿಳಿಸಿ ಹೇಳಿರುವರು. ನೈತಿಕ ತತ್ವಗಳಿಂದ ರಚಿಸಲ್ಪಟ್ಟ ಸಂಯಮನದಿಂದ ಹಾಗೂ ಸತ್ಯದ ಸಂಕೋಲೆಯ ಬಂಧನದಿಂದ ಯಾವುದೂ ವಿಮೋಚಿಸಲ್ಪಡುವಂತಿಲ್ಲ. ಆದರೆ ಕಮ್ಯೂನಿಸಂಗೆ ನೈತಿಕ ತತ್ವದಲ್ಲಾಗಲೀ ಸತ್ಯದ ಕುರಿತಾಗಲೀ ಗೌರವವಿಲ್ಲ. ಇದು ಸ್ವಾತಂತ್ರ್ಯಕ್ಕೆ ಕೇಡುಂಟುಮಾಡುತ್ತದೆ. ಕಮ್ಯೂನಿಸಂ ವಿರುದ್ಧ ಹೋರಾಡುತ್ತಾ ನಾವು ಸ್ವಾತಂತ್ರ್ಯದ ಘೋಷಣೆ ಮಾಡುವುದರ ಬದಲು ನೈತಿಕ ತಳಹದಿಯನ್ವಯ ಸದಾಚಾರವನ್ನು ಪರಿಪಾಲಿಸಿಕೊಂಡು ಬರುವುದರಲ್ಲಿ ಶ್ರೇಯಸ್ಸುಂಟು. ಉಪನಿಷತ್ತು ಮತ್ತು ಭಗವದ್ಗೀತೆಗಳ ಈ ಸಂದೇಶವೇ ಗಾಂಧೀಜಿಯ ಉಪದೇಶ ಸಾರ.

ಗಾಂಧೀಜಯಂತಿಯಂದು ಖಾದಿ

ಗಾಂಧೀ ಜಯಂತಿಯ ಸಂದರ್ಭದಲ್ಲಿ ರಾಜಗೋಪಾಲಾಚಾರಿಯವರು ಹೇಳಿದ ಮೇಲಿನ ಮಾತುಗಳು ಉಲ್ಲಂಘಿಸಲಾಗದ ಆದೇಶದಂತಿವೆ. ಗಾಂಧೀಜಿ ಆತ್ಮಸಂಯಮನದಷ್ಟೇ ಮಹತ್ವವನ್ನು ಸ್ವದೇಶೀ ವ್ರತಕ್ಕೂ ಕೊಟ್ಟಿದ್ದರು. ಕಾಂಗ್ರೆಸಾಧ್ಯಕ್ಷ ನೆಹರೂರವರು ಅಖಿಲ ಭಾರತ ಕಾಂಗ್ರೆಸಿನ "ಆರ್ಥಿಕ ಸಮೀಕ್ಷೆ" ಎಂಬ ಮುಖಪತ್ರದಲ್ಲಿ ಗಾಂಧೀಜಯಂತಿಯ ದಿನಾಚರಣೆಯ ಕುರಿತು ಬರೆಯುತ್ತಾ "ಅಧಿಕಾರಿಗಳೂ ಅಧಿಕಾರೇತರರೂ ಖಾದಿಯನ್ನು ಧರಿಸಿ, ಅದನ್ನು ಪ್ರೋತ್ಸಾಹಿಸುವ ಸಂಕಲ್ಪ ಮಾಡಬೇಕು"ಎಂದು ಬಿನ್ನವಿಸಿರುವರು. ಇದರಿಂದ ನಿರುದ್ಯೋಗದ ಮಹಾ ಸಮಸ್ಯೆಯನ್ನು ಪರಿಹರಿಸುವುದರಲ್ಲಿ ಸ್ವಲ್ಪ ಮಟ್ಟಿನ ಸಹಾಯವಾದರೂ ದೊರೆಯುವುದೆಂದು ಅವರು ಆಶಿಸಿರುವರು. ಖಾದಿಯ ಧಾರಣ ಮಾತ್ರದಿಂದಲೇ ನಿರುದ್ಯೋಗದ ಸಮಸ್ಯೆ ದೂರಾಗುವುದಿಲ್ಲ—ಆದರೆ ನಿರುದ್ಯೋಗ ಇನ್ನೂ ಹೆಚ್ಚಿಕೊಳ್ಳುವುದನ್ನು ಇದು ತಡೆಯಬಲ್ಲುದೆಂಬ ಮಾತಿನಲ್ಲಿ ಸತ್ಯ ಅಡಕವಾಗಿರುತ್ತದೆ. ಖಾದಿಯನ್ನು ನಾವು ಅನೇಕ ವರ್ಷಗಳಿಂದ ಧರಿಸುತ್ತಾ ಬಂದಿದ್ದೇವೆ. ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ಖಾದಿಯು ಜನರೊಡನೆ ಬೆರೆತು ಹೋಗಿ, ನಿಕಟ ಬಾಂಧವ್ಯ ಸ್ಥಾಪಿಸಿಕೊಳ್ಳಲು ಅತ್ಯಂತ ಅನುಕೂಲವಾದ ಸಾಧನವಾಗಿದ್ದಿತು. ಸಾಮಾನ್ಯ ಮನುಷ್ಯನ ಶ್ರೇಯಸ್ಸೇ ಭಾರತದ ಅಭಿವೃದ್ಧಿ ಬಯಸುವುದು ಗಮನಿಸಬೇಕಾದ ಅಂಶ. ಈ ಸಾಮಾನ್ಯ ಭಾರತೀಯನನ್ನು ಮುಟ್ಟಲು ಖಾದಿಯು ಒಂದು ಮಾರ್ಗವಾಗಿದ್ದಿತು. ಕೇವಲ ಸಂಪರ್ಕ ಸಾಧನವಾಗಿಯಷ್ಟೇ ಖಾದಿಯ ಉಪಯೋಗಕ್ಕೆ ಮಹತ್ವ ಬಂದುದಲ್ಲ ಆರ್ಥಿಕ ವೈಷಮ್ಯದ ನಿವಾರಣೆಯ ದೃಷ್ಟಿಯಿಂದಲೂ ಖಾದಿಗೆ ಪ್ರಾಮುಖ್ಯತೆ ಇದೆ. ಖಾದಿಯ ವಸ್ತ್ರಗಳನ್ನು ಧರಿಸಲು ಭಾರತದ ಎಲ್ಲ ಜನರೂ ಕೃತಸಂಕಲ್ಪರಾದರೆ ಬಡವ ಹಾಗೂ ಶ್ರೀಮಂತರ ನಡುವೆ ಮೊದಲಿಂದಲೂ ಇದ್ದ ವೈಷಮ್ಯಗಳಲ್ಲಿ ಬಾಹ್ಯ ಅಂತರವು ನಶಿಸಿ ಹೋಗುವುದು. ನೋಡಲಿಕ್ಕಿದ್ದರೂ ಎಲ್ಲರೂ ಒಂದೇಯವರಾಗಿ ತೋರುವರು. ಹೀಗೆ ಉಡುಪಿನಲ್ಲಿ ಒಂದೇಯೆಂಬ ಭಾವನೆ ಮೂಡಿತೆಂದರೆ ಕ್ರಮೇಣ ಇದು ವ್ಯಾಪಕಗೊಂಡು ಜೀವನದ ಬೇರೆ ಚಟುವಟಿಕೆಗಳಲ್ಲೂ ಒಡಮೂಡುವುದು ನಿಶ್ಚಯ. ಜನತೆಯೊಡನೆ ನಿಕಟ ಸಂಪರ್ಕ ಸಾಧಿಸಿ, ಎಲ್ಲರ ಶ್ರೇಯಸ್ಸಿಗೋಸ್ಕರ ಪರಿಶ್ರಮಿಸುವುದಕ್ಕೆ ಖಾದಿಯು ಈ ರೀತಿ ನೆರವು ಕೊಡುವುದರಿಂದ ಗಾಂಧೀ ಜಯಂತಿಯ ದಿನ ಖಾದಿ ಧರಿಸೋಣ! ಬಾಪೂವಿನ ನೆನಪೇ ನಮಗೆ ಈ ಸಂದರ್ಭದ ಸ್ಫೂರ್ತಿಯಾಗಲಿ!

ಸೂಟು ಕೋಟುಗಳ ಮೋಹ ಬೇಡ

ಜನಸಾಮಾನ್ಯರೊಡನೆ ಸಂಪರ್ಕವನ್ನೂ ಅವರ ಅಭ್ಯುದಯವನ್ನೂ ಉದ್ದೇಶವಾಗಿಟ್ಟುಕೊಂಡು ನಮ್ಮೆಲ್ಲ ರಾಷ್ಟ್ರೀಯ ಕಾರ್ಯಗಳು ನೆರವೇರಬೇಕೆಂದು ನೆಹರೂ ಇನ್ನೊಂದು ಸಂದರ್ಭದಲ್ಲಿಯೂ ಹೇಳಿದರು. ಹೊಸ ದೆಹಲಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೃಷಿಮಂತ್ರಿಗಳೂ ತತ್ಸಂಬಂಧಿ ಅಧಿಕಾರಿಗಳೂ ಒಂದು ಪರಿಷತ್ತಿನಲ್ಲಿ ಕೂಡಿದಾಗ, ಪ್ರಧಾನಿ ನೆಹರೂ ಸಾಮಾನ್ಯ ಮನುಷ್ಯನಲ್ಲಿ ಕಾಣುವ ಮನೋಭಾವನೆಗಳ ಸುಂದರ ಚಿತ್ರವನ್ನು ನುಡಿಸಿದರು. ಹಳ್ಳಿಯ ರೈತನ ಬಳಿಗೆ ಅಧಿಕಾರೀ ಜನರು ಸೂಟು ಕೋಟು ಕಾಲರು ಮತ್ತು ಟೈಯ ಪ್ರವೃತ್ತಿಯನ್ನು ಹಿಡಿದುಕೊಂಡು ಹೋಗುವುದು ಎಷ್ಟು ಹಾಸ್ಯಾಸ್ಪದವೆಂಬುದನ್ನು ನೆಹರೂ ಮರ್ಮಸ್ಪರ್ಶಿಯಾದ ಮಾತುಗಳಿಂದ ವಿವರಿಸಿದರು. ಈ ಅಧಿಕಾರಿಗಳು ನಿಷ್ಪ್ರಯೋಜಕರೆಂದಲ್ಲ ಅವರೆಲ್ಲರೂ ಅತ್ಯಮೂಲ್ಯವಾದ ಸಂಶೋಧನೆಗಳನ್ನು ನಡೆಸಿ, ನೈಸರ್ಗಿಕ ಭಂಡಾರದ ಬೀಗದ ಕೈಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುವರು. ಆದರೆ ಅವರ ಈ ಜ್ಞಾನ ಸಂಪತ್ತಿಯ ಸದುಪಯೋಗವಾಗಬೇಕಾದುದು ರೈತನ ನಿತ್ಯ ಜೀವನದಲ್ಲಿ ಪ್ರತಿಫಲವನ್ನು ಹೊಂದ್ಯ

ಕಿಲ್ಲೆ ಸ್ಮಾರಕ ಗ್ರಂಥ

ಅಪ್ರತಿಮ ಭಾಷಣಗಾರರಾಗಿ, ಭಾಷಾಂತರಕಾರರಾಗಿ, ಅಸಾಧಾರಣ ಯಕ್ಷಗಾನ ಕಥೋಪಾಸಕರಾಗಿ, ಅಗ್ರಗಣ್ಯ ದೇಶಸೇವಕರಾಗಿ, ದೀನ ದಲಿತ ಪರಿಜನ ಸೇವಕರಾಗಿ, ಉತ್ತಮ ಸಾಮಾಜಿಕ ಕೆಲಸಗಾರರಾಗಿ ವಿವಿಧ ಕ್ಷೇತ್ರಗಳಲ್ಲಿ ನಲವು ವಿಧದಲ್ಲಿ ಜನತೆಯ ಮೇಲೆ ತನ್ನ ವ್ಯಕ್ತಿತ್ವದ ಅಚ್ಚೊತ್ತಿ ನಡುಹರೆಯದಲ್ಲೇ ಮೃತ್ಯುವಿಗೆ ತುತ್ತಾದ ಶ್ರೀ. ಎನ್. ಎಸ್. ಕಿಲ್ಲೆಯವರ ಸ್ಮಾರಕವಾಗಿ ದ. ಕ. ಜಿಲ್ಲಾ ಕಿಲ್ಲೆ ಸ್ಮಾರಕ ಸಮಿತಿ, ಮಂಗಳೂರು ಇವರಿಂದ ಸಚಿತ್ರವಾಗಿ ಪ್ರಕಟಿಸಲ್ಪಟ್ಟ

ಕಿಲ್ಲೆ ಸ್ಮಾರಕ ಗ್ರಂಥವನ್ನು

ಕೊಂಡುಕೊಂಡು ಸ್ಮಾರಕ ಕಾರ್ಯಗಳಿಗೆ ನೆರವಾಗಿರಿ.

ಸಂಗ್ರಹಕಾರರು: ಶ್ರೀಗಳಾದ ಎಚ್. ಆರ್. ಮಲ್ಯ ಮತ್ತು ಕೆ. ಕೆ. ಶೆಟ್ಟಿ, ಮಂಗಳೂರು.

ದೊಡ್ಡ ಆಕಾರದ 160ಪುಟಗಳು. ಬೆಲೆ ರೂ. 1-0-0 ಮಾತ್ರ.

ಮುಖಂಡರನೇಕರ ಸಂದೇಶಗಳಿವೆ.

ಪ್ರಸಿದ್ಧರನೇಕರ ವಿವಿಧ ಲೇಖನಗಳಿವೆ.

ಕಿಲ್ಲೆಯವರ ನಾನಾ ಕಾರ್ಯಕ್ಷೇತ್ರದ ವಿವರಣೆಗಳಿವೆ.

ಪ್ರತಿಗಳು ಸಿಗುವ ಸ್ಥಳಗಳು:

1. ಕೆನರಾ ಛಾಪಖಾನೆ, ಮಂಗಳೂರು. 2. ನವಯುಗ ಪ್ರೆಸ್, ಉಡುಪಿ.

ರೂ. 1-1-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪಡತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹಣ್ಣೆರಡಾಣೆ ಪ್ರತ್ಯೇಕ]

Mrs. P. DEVEE, P.DS.(N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

70 ವರುಷಗಳಿಂದ ಜಗಜ್ಜನಿತವಾದುದು

ಮಲೇರಿಯಾ, ಇನ್‌ಫ್ಲುಯೆಂಜಾ ಮತ್ತು ಇತರ ಜ್ವರಗಳಿಗೆ

ಬಾಟ್ಲಿವಾಲಾ ಆಗ್ ಮಿಕ್ಸ್ಚರ್

ಮತ್ತು ಮಾತ್ರೆಗಳು

ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.

ಉತ್ಪಾದನಾಧಿಕಾರಿಗಳು:–

ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತ್‌ಗೀಸ್ ಚರ್ಚ್ ಸ್ಟ್ರೀಟ್,

Tele. Add: "CAWASHABAD" ದಾದರ್, ಬೊಂಬಾಯಿ 28.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಆಂಧ್ರಕ್ಕೆ ಪ್ರಕಾಶಮರ ದುರೀಣತ್ವ

ತಿರುಕೊಚ್ಚಿಯಲ್ಲಿ ಕಾಂಗ್ರೆಸ್ ಮಂತ್ರಿಮಂಡಳದ ಮೇಲೆ ಅವಿಶ್ವಾಸ

ವುದರ ಮೂಲಕವೇ ಅಲ್ಲವೇ ರೈತನ ಜೀವನದಲ್ಲಿ ಆಧುನಿಕ ಸಂಶೋಧನೆಗಳ ಪರಿಣಾಮ ಏನೊಂದೂ ಆಗದಿದ್ದರೆ, ಪ್ರಯೋಗಾಲಯದ ನಾಲ್ಕು ಗೋಡೆಯೊಳಗೆಯೇ ಅದು ಬಂಧನದಲ್ಲಿದ್ದರೆ-ಅದರಿಂದೇನು ಸಾರ್ಥಕ? ನಮ್ಮೆಲ್ಲ ಪ್ರಯತ್ನಗಳು ಸಾಮಾನ್ಯ ರೈತನನ್ನು ಬೀದಿಯ ಮನುಷ್ಯನನ್ನು ಮುಟ್ಟಿ, ನಮ್ಮೆಡೆಗೆ ಆಕರ್ಷಿಸುವಂತಿರಬೇಕು. ಇದು ಸಾಧ್ಯವಾಗಬೇಕಾದರೆ ಅಧಿಕಾರಿಗಳ ಮನದೊಲವಿನಲ್ಲಿ ಮೂಲ ಭೂತವಾದ ಪರಿವರ್ತನೆಯು ಅಗತ್ಯ. ರೈತ ಬಾಂಧವರನ್ನು ಆತ್ಮೀಯ ದೃಷ್ಟಿಯಿಂದ ಕಾಣುವುದಕ್ಕೋಸ್ಕರವಾಗಿಯಾದರೂ ಅವರು ತಮ್ಮನ್ನು ಪ್ರತ್ಯೇಕ ಭಾವನೆಗೆ ಗುರಿಯಾಗಿಸಿದ ಸೂಟು ಕೋಟುಗಳ ಮೋಹವನ್ನು ತೊರೆದು ಬಿಡಬೇಕು. ನೆಹರೂರವರು ಈ ಸಂದೇಶ ಕಾರ್ಯರೂಪದಲ್ಲಿ ಪರಿಣತವಾಗದಿದ್ದರೆ-ಭಾರತದ ಪಂಚವಾರ್ಷಿಕ ಯೋಜನೆಯ ಕುರಿತಾದರೂ ನಾವು ಹೆಚ್ಚು ಭರವಸೆಯನ್ನು ತಾಳುವಂತಿಲ್ಲ. ಜನಸಾಮಾನ್ಯಕ್ಕೆ ಅವರ ಭಾಷೆಯಲ್ಲಿ--ಅವರೊಡನೆ ಒಂದಾಗಿ ತಿಳಿಸಿ ಹೇಳುವ ಕರ್ತವ್ಯದ ಸರಕಾರದ ಅಧಿಕಾರಿಗಳು ಚ್ಯುತಿ ತಂದರೆ, ಕೇವಲ ಚಾರ್ಟು ಮತ್ತು ರಿಪೋರ್ಟುಗಳಲ್ಲಿಯೇ ತೃಪ್ತಿಪಟ್ಟುಕೊಂಡರೆ ನಾವು ಪ್ರಗತಿ ಹೊಂದಲಾರೆವು. ಸಾಮಾಜಿಕ ವಿಷಮತೆ ಅಥವಾ ಅಸಮತೆಯೂ ದೂರವಾಗದು.

ರಾಜ ಮಹಾರಾಜರಿಗೆ ಯುಗ ಸಂದೇಶ

ರಾಜ ಮಹಾರಾಜರ ಕಾಲ ಸಂದಿತೆಂದೂ ಜನ ಸಾಮಾನ್ಯರ ಸ್ವರಕ್ಕೆ ಮಹತ್ವ ಬಂದಿರುವ ಯುಗ ಇದೆಂದೂ ನಮ್ಮ ಧುರೀಣರು ಪದೇ ಪದೇ ಎಚ್ಚರಿಸುತ್ತಾರೆ-ಈಚೆಗೆ ಕಾಂಗ್ರೆಸು ಕಾರ್ಯಕಾರಿಣಿಯು ಹೊಸ ದೆಹಲಿಯಲ್ಲಿ ಸಭೆ ಸೇರಿದಾಗ ಸಾಮಾನ್ಯ ಭಾರತೀಯನ ಕಲ್ಯಾಣ ಕಾಂಕ್ಷೆಯಿಂದ ಕೈಗೊಳ್ಳಬೇಕಾದ ಭೂ ಸುಧಾರಣೆಯೇ ಮುಂತಾದವುಗಳ ಕುರಿತು ಪರಾಮರ್ಶೆ ನಡೆಯಿತು. ಇದರೊಂದಿಗೆ ರಾಜ ಪ್ರಮುಖರ ಹುದ್ದೆಯ ರದ್ದತಿಯ ವಿಷಯವೂ ಬಂತು. ಪ್ರಜಾ ಪ್ರಭುತ್ವದ ಈ ದಿನಮಾನದಲ್ಲಿ ರಾಜ ಪ್ರಮುಖರ ಹುದ್ದೆಯನ್ನು ಪರಂಪರಾಗತವಾಗಿ ಕೊಡುವುದಿರಲಿ ಈಗ ಜೀವದಿಂದಿರುವ ರಾಜ ಪ್ರಮುಖರ ಆಯುರ್ಮಾನದ ವರೆಗಾದರೂ ಕೊಡುವ ಕುರಿತು ಜನರಲ್ಲಿ ತೀವ್ರ ಜುಗುಪ್ಸೆ ಹಾಗೂ ವಿರೋಧಾಭಿಪ್ರಾಯವಿದೆ. ಇದಲ್ಲದೆ ಹಿಂದಿನ ರಾಜ-ಮಹಾರಾಜರುಗಳಿಗೆ ಭಾರತ ಸರಕಾರವು ನೀಡುತ್ತಿರುವ ವರ್ಷಾಸನಗಳನ್ನು ನಿಲ್ಲಿಸಿಬಿಡಬೇಕೆಂದು ಕಮ್ಯುನಿಷ್ಟ ಪಕ್ಷ ಈಗಿನ ಮಿತಿಯನ್ನು ತಗ್ಗಿಸುವುದಗತ್ಯವೆಂದು ಚಳುವಳಿ ನಡೆಯುತ್ತಿವೆ. ಪಾರ್ಲಿಮೆಂಟಿನಲ್ಲಿ ರಾಜ ಪ್ರಮುಖರ ಪ್ರಶ್ನೆ ಬಂದಾಗಲೆಲ್ಲ ಪರಿಸ್ಥಿತಿಯನ್ನು ತೂಗಿಸಿಕೊಂಡು ಹೋಗುವ ಹೊಣೆ ನೆಹರೂರ ಪಾಲಿಗೆ ಬಂದಿರುತ್ತದೆ. ರಾಜ ಮಹಾರಾಜರಿಗೆ ವರ್ಷಾಸನ ರೂಪದಲ್ಲಿ ಭಾರತ ಸರಕಾರವು ಪ್ರತಿ ವರ್ಷ ಐದೂವರೆ ಕೋಟಿ ರೂಪಾಯಿಗಳನ್ನು ಕೊಡುತ್ತದೆ. ದಿವಂಗತ ಸರ್ದಾರ ಪಟೇಲರು ಭಾರತದ ಒಕ್ಕೂಟವನ್ನು ರಚಿಸುವ ಪ್ರಯತ್ನದಲ್ಲಿ, ಈ ವರ್ಷಾಸನವನ್ನು ನೀಡಲು ಮುಂದಾದರು, ಮತ್ತು ಹಿಂದಿನಿಂದ ಭಾರತದ ರಾಜ್ಯಾಂಗ ಘಟನೆಯ ೨೯೧ (೧)ನೇ ಕಲಮಿನಿಂದ ಇದನ್ನು ದೃಢೀಕರಿಸಲಾಯಿತು. ಆದರೆ ಈಗಿನ ಭಾರತದ ಸ್ಥಿತಿ ರಾಜ ಪ್ರಮುಖರ ಹುದ್ದೆ ಹಾಗೂ ಅವರಿಗೆ ನೀಡಲಾಗುವ ವರ್ಷಾಸನವನ್ನು ರದ್ದುಮಾಡಬೇಕೆನ್ನುವಷ್ಟು ಮುಂದರಿದಿದೆ. ಇದನ್ನು ಹಿಡಿತದಲ್ಲಿಟ್ಟುಕೊಳ್ಳಬೇಕಾದರೆ ರಾಜಪ್ರಮುಖರು ಸ್ವೇಚ್ಛೆಯಿಂದ ತಮ್ಮ ವರ್ಷಾಸನವನ್ನು ಕಡಿಮೆ ಮಾಡಿಕೊಳ್ಳುವುದೊಂದೇ ಸರಳವಾದ ಉಪಾಯ. ಸರ್ದಾರ ಪಟೇಲರು ಸುಮಾರು ೧೦ ಲಕ್ಷ ರೂಪಾಯಿಗಳ ಪರಮಾವಧಿ ಮಿತಿಯನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿದ್ದರೂ, ನೆಹರೂರವರು ಒಂದು ಲಕ್ಷ ರೂಪಾಯಿಯಷ್ಟು ಮಾತ್ರ ವರ್ಷಾಸನವಿರಬಹುದೆಂದು ಅಭಿಪ್ರಾಯಕ್ಕೆ ಬಂದಿರುವಂತಿದೆ. ಈ ಮಿತಿಯನ್ನು ಮಿಕ್ಕಿದ ೧೧೩ ರಾಜ ಮಹಾರಾಜರಿಗೆ ನೆಹರೂ ವೈಯಕ್ತಿಕ ರೂಪದಲ್ಲಿ ಪತ್ರ ಬರೆದು, ತಮ್ಮ ವರ್ಷಾಸನದಲ್ಲಿ ಕಡಿತ ಮಾಡಿಕೊಂಡು ರಾಷ್ಟ್ರದ ಪುರೋಗತಿಯಲ್ಲಿ ಸಹಯೋಗ ನೀಡಬೇಕೆಂದು ವಿನಂತಿಸಿರುವರು. ಈ ವಿನಂತಿಯೇ ಯುಗ ಸಂದೇಶವೆಂದು ಸಂಬಂಧಿಸಿದವರು ತಿಳಿದುಕೊಂಡರೆ ಕ್ಷೇಮ.

ಪ್ರಕಾಶಮರು ಕಾಂಗ್ರೆಸಿಗೆ

ಆಂಧ್ರ ರಾಜ್ಯದಲ್ಲಿ ಸುವ್ಯವಸ್ಥಿತವಾದ ಮತ್ತು ಭದ್ರವಾದ ಮಂತ್ರಿಮಂಡಳವೊಂದು ಏರ್ಪಡಬೇಕೆಂದು ಪ್ರಜಾಸತ್ತಾತ್ಮಕ ಪಕ್ಷಗಳು ಮಾಡಿದ ಪ್ರಯತ್ನ ಕೊನೆಯಲ್ಲಿ ಶ್ರೀ ಪ್ರಕಾಶಮರ ಧುರೀಣತ್ವದಲ್ಲಿ ಪರಿಣಮಿಸಿರುತ್ತದೆ. ಇದು ಆಂಧ್ರ ರಾಜ್ಯದ ಶುಭ ಹಾರೈಸುವ ಎಲ್ಲರಿಗೂ ಸಂತೋಷವನ್ನುಂಟು ಮಾಡುವಂತಿದ್ದರೂ ಪ್ರಕಾಶಮರು ನಾಯಕರಾಗಿದ್ದ ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಸಮಿತಿ ಹಾಗೂ ಆಂಧ್ರದ ಕೆಲವು ಪಕ್ಷನಿಷ್ಠರ ಮನ ನೋಯಿಸಿರುತ್ತದೆ. ಪ್ರಕಾಶಮರು ಪಕ್ಷದ ಚೌಕಟ್ಟಿನಿಂದ ಹೊರಗುಳಿದು ಸ್ವತಂತ್ರರಾದರೆ ಅಥವಾ ಕಾಂಗ್ರೆಸ್ಸಿನ ಸಹಾಯಕ ಸದಸ್ಯರಾಗಿ ಸೇರಿದರೆ ಕಾಂಗ್ರೆಸ್ಸು ಅವರ ಧುರೀಣತ್ವವನ್ನು ಮನ್ನಿಸುವುದೆಂದು ಹೇಳಿದ ಗಳಿಗೆಯಿಂದ ಪ್ರಕಾಶಮರ ವರ್ತನೆಯ ಕುರಿತು ಎಲ್ಲರಲ್ಲೂ ಆಸ್ಥೆ ಮೂಡಿತ್ತು. ಈ ಆಂಧ್ರದ ಕೇಸರಿಯನ್ನು ಪ್ರಜಾ ಸಮಾಜವಾದೀ ಪಕ್ಷದ ಗೂಡಿನಿಂದ ಹೊರಗೆ ಬಿಡುವುದು ವ್ಯವಹಾರ್ಯವೇ ಎಂಬ ಕುರಿತು, ಪ್ರಜಾ ಸಮಾಜವಾದಿಗಳಲ್ಲಿ ಮತಭೇದ ಕಂಡುಬಂತು. ಆಂಧ್ರ ಪ್ರದೇಶದ ಪ್ರಜಾ ಸಮಾಜವಾದಿಗಳು ಪ್ರಕಾಶಮರನ್ನು ಬಂಧ ಮುಕ್ತ ಮಾಡಲು ಸಮ್ಮತಿಸಿದರೂ, ಆಚಾರ್ಯ ಕೃಪಲಾನಿಯವರು ಅಧ್ಯಕ್ಷರಾಗಿರುವ ಪ್ರಜಾ ಸಮಾಜವಾದೀ ಪಕ್ಷದ ಕೇಂದ್ರ ಸಮಿತಿ ಪ್ರಕಾಶಮರನ್ನು ಹಾಗೆ ಬಿಡಲು ಬರುವುದಿಲ್ಲೆಂದು ಹೇಳಿತು. ಪ್ರಕಾಶಮರು ಅಂದಿನಿಂದಲೇ ಪ್ರಜಾಸಮಾಜವಾದೀ ಪಕ್ಷದ ಕೇಂದ್ರ ಮಂದಳದೊಡನೆ ವಿರಸ ಕಟ್ಟಿಕೊಂಡರು—ಮತ್ತು ಅದರ ಪರಿಣಾಮವೇ ಈಗ ಅವರು ಸಲ್ಲಿಸಿರುವ ರಾಜೀನಾಮೆ ಎಂದೆನ್ನಬಹುದು.

ರಾಷ್ಟ್ರ ನಿಷ್ಠೆಗೆ ಪ್ರಾಶಸ್ತ್ಯ

ಪ್ರಕಾಶಮರ ರಾಜೀನಾಮೆ ಒಂದು ಮಹಾ ಸಂಚಲನ ಅಥವಾ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ಈ ಪ್ರಕರಣದಲ್ಲಿ ರಾಜಾಜಿ ಹಾಗೂ ಲೋಕ ಸಭೆಯ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು ಪ್ರಕಾಶಮರ ಮನದೊಲವಿಗೆ ತಿರುಗುವ ರೀತಿಯಲ್ಲಿ ಒಗ್ಗರಣೆ ಕೊಟ್ಟುದು ಸರಿಯೇ ಎಂಬ ಪ್ರಶ್ನೆ ಸಂಶಯವನ್ನು ಇನ್ನಷ್ಟು ಕೆಣಕುತ್ತದೆ. ರಾಜಾಜಿಯವರೂ ಅಯ್ಯಂಗಾರರೂ ಪಕ್ಷದ ಹಿತದೃಷ್ಟಿಗಿಂತಲೂ ರಾಷ್ಟ್ರ ಕಲ್ಯಾಣಕ್ಕೆ ಹೆಚ್ಚು ಮಹತ್ವವೆಂದು ಹೇಳಿ— ಪಕ್ಷದ ಬಂಧನವು ರಾಷ್ಟ್ರಕ್ಕೆ ಪೋಷಕವಾಗದಿದ್ದ ಪಕ್ಷದಲ್ಲಿ, ಅದನ್ನು ಕಿತ್ತೆಸೆದು, ದೇಶ ಸೇವೆಗೆ ಕಟಿಬದ್ಧರಾಗಲು ಪ್ರಕಾಶಮರಂಥ ಧುರೀಣರು ಸಿದ್ಧರಾಗಬೇಕೆಂದು ಸಲಹೆ ಮಾಡಿದ್ದರು. ಆಂಧ್ರದಲ್ಲಿ ಪ್ರಕಾಶಮರ ಧುರೀಣತ್ವವಿಲ್ಲದೆ, ಪ್ರಜಾಪ್ರಭುತ್ವಕ್ಕೆ ಸಮ್ಮತವಾದ ರೀತಿಯ ಸ್ಥಿರವಾದ ಸರಕಾರ ನೆಲೆಗೊಳ್ಳಲಾರದಾದಲ್ಲಿ- ಈ ಮಹಾ ಉದ್ದೇಶ ಸಾಧನೆಗೋಸ್ಕರ ಪಕ್ಷದಿಂದ ಹೊರಬಿದ್ದು ಮಂತ್ರಿಮಂಡಳ ರಚಿಸಲು ಪ್ರಯತ್ನಿಸುವುದು ಪ್ರಕಾಶಮರಂಥ ವರ್ಚಸ್ವೀ ಧುರೀಣರ ಮೇಲಿರುವ ಕರ್ತವ್ಯ ಭಾರವಾಗಿರುತ್ತದೆ. ಕಾಂಗ್ರೆಸು ಸಂಸ್ಥೆಯು ಪ್ರಕಾಶಮರನ್ನು ಪಕ್ಷದ ಚೌಕಟ್ಟಿನಿಂದ ಹೊರ ಬರಲು ಒತ್ತಾಯಿಸಿತೆಂದೂ ಮುಖ್ಯಮಂತ್ರಿ ಪದದ ಅತಿರೇಕ ಆಸೆಗೆ ಕಟ್ಟುಬಿದ್ದು ಪ್ರಕಾಶಮರ ತಮ್ಮ ಪಕ್ಷವನ್ನು ತಿರಸ್ಕರಿಸಿ ಅನ್ಯಾಯ ಮಾಡಿದರೆಂದೂ ಆಕ್ಷೇಪಿಸುವ ಜನರುಂಟು.- ಪ್ರಕಾಶಮರಿಗೆ ಪ್ರಜಾ ಸಮಾಜವಾದೀ ಪಕ್ಷದ ಪ್ರಭೃತಿಗಳಂದು ಮಂತ್ರಿಮಂಡಳ ರಚಿಸಲು ಆಸ್ಪದಕೊಟ್ಟು, ಅವರೊಡನೆ ಸಹಕರಿಸಲು ಆಂಧ್ರದ ಕಾಂಗ್ರೆಸ್ಸು ಸಿದ್ಧವಾಗಲಿಲ್ಲವೇಕೆ? ಎಂದು ಪ್ರಶ್ನಿಸುವ ಕೆಲವರೂ ಇದ್ದಾರೆ. ಆಂಧ್ರದಲ್ಲಿ ಕಾಂಗ್ರೆಸ್ಸು ಬಹುಮತವುಳ್ಳ ಪಕ್ಷವಾದುದರಿಂದ ಅದಕ್ಕೆಯೇ ನ್ಯಾಯವಾಗಿ ಮಂತ್ರಿಮಂಡಳ ರಚಿಸುವ ಅಧಿಕಾರವಿದೆಯೆಂಬುದನ್ನು ನಾವು ಗಮನಿಸಬೇಕು. ಅದಕ್ಕೇ ಸರಕಾರ ರಚಿಸಲು ಅಸಾಧ್ಯವೆಂದಾದರೆ—ರಾಷ್ಟ್ರಾಧ್ಯಕ್ಷರ ಆಡಳಿತವೇ ಅಲ್ಲಿ ನಡೆಯಬೇಕಾಗುವುದು. ಇದನ್ನು ತಪ್ಪಿಸಲು ಕಾಂಗ್ರೆಸು ಕೆಲವು ಶರ್ತಗಳನ್ನು ... ಮಾಡಿ ಪ್ರಕಾಶಮರ ಧುರೀಣತ್ವವನ್ನು ಒಪ್ಪಿಕೊಂಡುದು ನ್ಯಾಯಬದ್ಧವಾಗಿರುತ್ತದೆ. ಮೇಲಾಗಿ ಆಂಧ್ರದ ಪ್ರಜಾ ಸಮಾಜವಾದಿಗಳು ಈ ವ್ಯವಸ್ಥೆಯನ್ನು ಮನ್ನಿಸಿರುವುದರಿಂದ — ಅನುಚಿತವಾದುದೇನೂ ನಡೆಯಲಿಲ್ಲ. ಪ್ರಕಾಶಮರು ಆಯ ಕಟ್ಟಿನ ಕಾಲದಲ್ಲಿ ಆಂಧ್ರರ ಮರ್ಯಾದೆಯಳಿಸಿದುದಕ್ಕೆ ಎಲ್ಲ ಭಾಷಾವಾದಿಗಳೂ ಹೆಮ್ಮೆ ಪಡಬೇಕು.

(೭ನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟಾಯಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO.
Watch & Clock
Specialists,
MADRAS 3.
ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್
ಸ್ಪೆಶಲಿಸ್ಟ್ಸ್
ಮದ್ರಾಸು 3.

NAVAYUGA

Popular Kannada Weekly.

Founder:—

Sri A. B. SHETTY,

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.

ಸ್ಥಾಪಕರು:- ಶ್ರೀ. ಎ. ಬಿ. ಶೆಟ್ಟಿ, ಮದ್ರಾಸಿನ ಆರೋಗ್ಯಮಂತ್ರಿ.

ವಾರ್ಷಿಕ ಚಂದಾ: ರೂ. 5-12-0 ಬಿಡಿಪ್ರತಿ 0-2-0

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲತತ್ವ. ಇದು ಮುಖ್ಯವಾಗಿ ಮಧ್ಯಮತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದುಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆಯಾ ಇನ್ನಿತರ ಸದುದ್ದೇಶಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ಇಂದೇ ಇಂಥ ಒಂದು ಖಾತೆಯನ್ನು ನಮ್ಮ 38 ಶಾಖೆಗಳಲ್ಲಿ ನಿಮಗೆ ಹತ್ತಿರವಿರುವ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India)

ನವಯುಗ

ಉಡುಪಿ, ಗುರುವಾರ ೧-೧೦-'೫೩

ಆಂಧ್ರರಾಜ್ಯಕ್ಕೆ ಸ್ವಾಗತ

ಈ ಗುರುವಾರ ದಿನ ಆಂಧ್ರರಾಜ್ಯವು ಅಸ್ತಿತ್ವಕ್ಕೆ ಬರುತ್ತಿದೆ—ಈ ಸಂದರ್ಭದಲ್ಲಿ ಆಂಧ್ರರಿಗಂತೂ ಸರಿಯೆ, ಭಾರತೀಯರೆಲ್ಲರಿಗೂ ಸಂತೋಷವೆನಿಸುವುದು ಸ್ವಾಭಾವಿಕ. ಆಂಧ್ರರು ಬಹುಕಾಲದಿಂದ ಮುನ್ನಿಡುತ್ತಾ ಬಂದ ಅಗತ್ಯದ ಬೇಡಿಕೆಯೊಂದು ಕೈಗೂಡಿ ಒಂದುದೊಂದು ಸಂಗತಿಯಾದರೆ, ಕಾಂಗ್ರೆಸು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಜನತೆಗೆ ನೀಡಿದ್ದ ವಚನಗಳಲ್ಲಿ ಒಂದಾದ ಭಾಷಾನುಗುಣ ರಾಜ್ಯ ನಿರ್ಮಾಣದ ಪ್ರಶ್ನೆಯಲ್ಲಿ ದೃಢವಾದ ಹೆಜ್ಜೆಯನ್ನಿಟ್ಟು ವಚನ ಪೂರೈಸಿರುವುದು ಇನ್ನೂ ಹೆಚ್ಚು ಮಹತ್ವದ ವಿಚಾರ. ಭಾರತದ ಪುನರ್ಘಟನೆಯನ್ನು ಭಾಷಾನುಗುಣವಾಗಿ ಕೈಗೂಡಿಸಬೇಕೆಂದು ಈಗ ಕೇಂದ್ರ ಸರಕಾರದವರಿಗೂ ತೋರಿರುತ್ತದೆ—ಮತ್ತು ಅವರ ಈ ವಿಚಾರದಲ್ಲಿ ಭಾರತೀಯರೆಲ್ಲರ ಸಹಯೋಗವೂ ದೊರಕುವಂತಿದೆ. ಆಂಧ್ರರಾಜ್ಯವು ಭಾಷಾನುಗುಣ ರಾಜ್ಯಗಳಲ್ಲಿ ಸರ್ವಪ್ರಥಮ ಘಟಕವೆಂಬುದರಿಂದ ಅದರ ಆಗುಹೋಗುಗಳ ಮೇಲೆ ಹೆಚ್ಚಿನವರ ದೃಷ್ಟಿಯು ಬೀಳುತ್ತದೆ. ಕಾರಣ, ತಾವುಗಳಿಸಿದ ಪ್ರತ್ಯೇಕ ರಾಜ್ಯವನ್ನು ಆಂಧ್ರರು ಸುವ್ಯವಸ್ಥಿತ ರೀತಿಯಲ್ಲಿ ಸುಸಂಪನ್ನ ಮಾಡುವರೆಂದೂ ಭಾಷಾನುಗುಣ ರಾಜ್ಯಗಳ ನಿರ್ಮಾಣವು ದೇಶಕ್ಕೆ ಪೋಷಕವಾಗಿರುವುದೆಂದು ಹಾಗೂ ಜನತೆಯ ಪ್ರಗತಿಗೆ ಆವಶ್ಯಕವಾದುದೆಂದು ಮನಗಾಣಿಸಿಕೊಡುವರೆಂದೂ ನಾವು ಈ ಸಂದರ್ಭದಲ್ಲಿ ಹಾರೈಸುತ್ತೇವೆ. ಆಂಧ್ರದ ಸಾರ್ವಜನಿಕ ಅಭಿವೃದ್ಧಿಗೆ ಹೊಸ ಸರಕಾರವು ಪ್ರಯತ್ನಶೀಲವಾಗಿ, ಸರ್ವಜನಾದರಣೀಯವಾದ ರೀತಿ ಆಡಳಿತ ನಡೆಸುವುದೆಂದೂ ಹಾರೈಸುತ್ತೇವೆ. ಆಂಧ್ರರ ಸುಖ ಸಮೃದ್ಧಿಗಳಿಗೋಸ್ಕರ ಇದುವರೆಗೆ ಮದ್ರಾಸು ಸರಕಾರವು ಯಾವುದೇ ಚ್ಯುತಿಯನ್ನು ಮಾಡಿರುವುದಿಲ್ಲ— ಈಗ ಆಂಧ್ರರು ಎಲ್ಲರ ಸ್ನೇಹ ಕಾಂಕ್ಷೆಗಳನ್ನು ಪಡೆದುಕೊಂಡು ತಮ್ಮದೇ ರಾಜ್ಯ ಕಟ್ಟಿಕೊಂಡಿರುವಾಗ, ಪರಿಸ್ಥಿತಿ ಇನ್ನೂ ಹೆಚ್ಚು ಸುಖಪ್ರದವಾಗಬೇಕು. ಆಂಧ್ರ ರಾಜ್ಯದ ಎರಡು ಕೋಟಿ ಪ್ರಜೆಗಳಿಗೆ ನೋವು ಪೀಡೆಗಳ ಅನುಭವವಾಗದೆ ಸುಖ ಸಂತೋಷದ ಸುಗ್ಗಿ ದೊರಕುವುದೆಂದು ಪ್ರಾಮಾಣಿಕ ಆಶೆಯನ್ನು ನಾವು ಪ್ರಕಟಿಸುತ್ತೇವೆ. ಈ ಶುಭೇಚ್ಛೆಗಳನ್ನು ಪಡೆದುಕೊಂಡರೂ ವಾಸ್ತವದಲ್ಲಿ ಆಂಧ್ರರಾಜ್ಯವು ಕೆಲವು ಎಡರು ತೊಡರುಗಳನ್ನು ಪ್ರಾರಂಭದಲ್ಲಿ ಇದಿರಿಸಬೇಕಾದೀತು. ಮುಖ್ಯತಃ ರಾಯಲಸೀಮೆಯ ಅಭಿವೃದ್ಧಿ ಪ್ರಯತ್ನ ಹಾಗೂ ಗೋದಾವರಿಗೆ ಬಂದ ಮಹಾಪೂರದ ಪರಿಣಾಮಗಳು ಆಂಧ್ರದ ಹೊಸ ಸರಕಾರದ ಲಕ್ಷ್ಯವನ್ನು ಪ್ರಥಮದಲ್ಲಿಯೇ ಸೆಳೆಯುತ್ತವೆ. ಆಂಧ್ರದ ಜನನಾಯಕರು ಈ ಸಂದರ್ಭದಲ್ಲಿ ಒಗ್ಗಟ್ಟಿನ ಮನೋಭಾವವನ್ನು ತೋರಿಸಿ, ಪಕ್ಷಪಂಗಡಗಳ ಹದ್ದು ಮೀರಿ, ರಾಷ್ಟ್ರಹಿತಕ್ಕೋಸ್ಕರ ದುಡಿಯುವುದು ಕರ್ತವ್ಯವಾಗಿರುತ್ತದೆ. ಆಂಧ್ರದ ಸುವ್ಯವಸ್ಥೆ ಮತ್ತು ಭದ್ರತೆಯ ಮೇಲೆಯೇ ಕರ್ನಾಟಕದಂಥ ರಾಜ್ಯ ನಿರ್ಮಾಣ ಪ್ರಶ್ನೆ ಆಧರಿಸಿರುವುದೆಂದು ಪದೇ ಪದೇ ಹೇಳಲಾಗಿದೆ. ಆದ ಕಾರಣ ಆಂಧ್ರದಲ್ಲಿ ಎಲ್ಲವೂ ಒಳ್ಳೆಯದಾಗಲೆಂದು ಕನ್ನಡಿಗರು ಮನಃಪೂರ್ವಕ ಹಾರೈಸುತ್ತಾರೆ; ಮತ್ತು ಹೀಗೆ ಹಾರೈಸುತ್ತಿದ್ದಂತೆಯೇ ವರಿಷ್ಠಾಧಿಕಾರ ಸಂಪನ್ನ ಆಯೋಗವು ಕರ್ನಾಟಕ ನಿರ್ಮಾಣ ಪ್ರಶ್ನೆಯನ್ನು ತ್ವರಿತದಲ್ಲಿಯೇ ಕೈಗೆತ್ತಿಕೊಂಡು, ಕನ್ನಡಿಗರ ಆಶೆ ಆಕಾಂಕ್ಷೆಗಳಿಗೊಂದು ರೂಪುಗೊಳಲೆಂದೂ ಇಚ್ಛಿಸುತ್ತಾರೆ. ಆಂಧ್ರರು ಇನ್ನು ಮುಂದೆ ಕನ್ನಡಿಗರಂಥ ಬಂಧುಗಳ ನ್ಯಾಯುವಾದ ಬೇಡಿಕೆಯನ್ನು ಘಟನಾತ್ಮಕವಾದ ರೀತಿಯಲ್ಲಿ ಬೆಂಬಲಿಸಬೇಕು; ಮತ್ತು ಸದಾ ಸ್ನೇಹ ಸೌಹಾರ್ದದ ವರ್ತನೆಯನ್ನು ಎಲ್ಲರಿಗೂ ನೀಡುತ್ತಾ ಬಂದು ನಿಜವಾದ ಭಾರತೀಯ ಆದರ್ಶವನ್ನೂ ರಾಷ್ಟ್ರದ ಐಕ್ಯವನ್ನೂ ಎತ್ತಿಹಿಡಿಯಬೇಕು.

ಕೊರಿಯಾದಲ್ಲಿ ಎಲ್ಲವೂ ನಿಷ್ಪ್ರಯೋಜಕ?

ರಾಜಕೀಯ ಪರಿಷತ್ತು ಸೇರುವುದೇ ಅನಿಶ್ಚಿತ

ಕೊರಿಯಾದ ಕದನ ವಿರಾಮ ಒಪ್ಪಂದವಾದ ೯೦ ದಿನಗಳೊಳಗೆ ರಾಜಕೀಯ ಪರಿಷತ್ತು ಸೇರಿ, ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಭವಿತವ್ಯ ಮತ್ತಿತರ ಸಂಗತಿಗಳನ್ನು ವಿಚಾರಿಸಬೇಕೆಂದು ಹಿಂದೆ ನಿರ್ಣಯಿಸಲಾಗಿತ್ತು. ಈ ಅವಧಿ ಅಕ್ಟೋಬರ ಮಾಸದ ೨೭ನೇ ತಾರೀಕಿಗೆ ಮುಗಿಯುವುದಾದರೂ—ಅಷ್ಟರೊಳಗೆ ರಾಜಕೀಯ ಪರಿಷತ್ತು ಸೇರಿ, ಸಮಂಜಸವಾದ ಇತ್ಯರ್ಥಕ್ಕೆ ಬರುವ ಸಂಭವ ಮಾತ್ರ ಕಂಡುಬರುವುದಿಲ್ಲ ಈ ರಾಜಕೀಯ ಪರಿಷತ್ತು ಯಾವ ರೂಪದಲ್ಲಿರಬೇಕು, ಅದರಲ್ಲಿ ಯಾವ್ಯಾವ ರಾಷ್ಟ್ರಗಳು ಭಾಗವಹಿಸಬೇಕು, ಅದು ಎಲ್ಲಿ ಸೇರಬೇಕು ಮತ್ತು ಚರ್ಚಿಸಲ್ಪಡಬೇಕಾದ ವಿಷಯಗಳೇನು.. ಇತ್ಯಾದಿಯಾದ ವಿವರಗಳು ಇನ್ನೂ ಸಂದಿಗ್ಧಾವಸ್ಥೆಯಲ್ಲಿವೆ. ಅಮೇರಿಕಾದ ಡಲ್ಲೇಸರು ಯುದ್ಧಾಸಕ್ತ ರಾಷ್ಟ್ರಗಳು ಮಾತ್ರ ಸಂಯುಕ್ತ ರಾಷ್ಟ್ರಸಂಘದ ಕಡೆಯಿಂದ ಈ ಪರಿಷತ್ತಿನಲ್ಲಿ ಭಾಗವಹಿಸಬೇಕೆಂದು ಆಗ್ರಹಪಡುತ್ತಿದ್ದರೂ ಕಮ್ಯೂನಿಸ್ಟರ ಪಕ್ಷಕ್ಕೆ ಇದು ಸರಿಯೆಂದು ತೋರಿಲ್ಲ ರಶಿಯಾದ ಪ್ರಧಾನಿ ಮೆಲೆಂಕೋವರು ಈಚೆಗೆ ಈ ವಿಷಯವನ್ನು ಪ್ರಸ್ತಾಪಿಸುತ್ತಾ ಪರಿಷತ್ತಿನಲ್ಲಿ ಭಾರತ ಹಾಗೂ ಇತರ ತಟಸ್ಥ ರಾಷ್ಟ್ರಗಳು ಭಾಗ ವಹಿಸುವುದನ್ನು ವಿರೋಧಿಸಿರುವುದೇ ಅಮೇರಿಕಾದ ಅಸಮಾಜಸ ಧೋರಣೆ ಎಂದಿರುವರು. ನೆಹರೂರವರು ಭಾರತ ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಡುತ್ತಾ ಕೊರಿಯಾದ ಪರಿಷತ್ತು ದುಂಡುಮೇಜಿನ ರೂಪದಲ್ಲಿದ್ದು ಸ್ನೇಹಪರವಾಗಿ ನಡೆಯಬೇಕೊ ಅಥವಾ ಎರಡು ವಿರುದ್ಧ ಪಕ್ಷಗಳಂಬಂತೆ ಉದ್ದ ಮೇಜಿನದಾಗಬೇಕೊ ಎಂಬುದೊಂದು ಪ್ರಮುಖ ಪ್ರಶ್ನೆ ಬಗೆಹರಿಸಲ್ಪಡಬೇಕಾಗಿದೆಯೆಂದು ಹೇಳಿರುವರು. ನೆಹರೂರ ಅಭಿಪ್ರಾಯದಂತೆ, ಪರಿಷತ್ತು ಚಕ್ರಗೋಷ್ಠಿಯ ಸ್ವರೂಪವನ್ನು ತಾಳುವುದಗತ್ಯವಲ್ಲದೆ, ಏಶಿಯಾದ ರಾಜಕಾರಣಕ್ಕೆ ಸಂಬಂಧಿಸಿದ ಈ ಪ್ರಶ್ನೆಯ ಇತ್ಯರ್ಥದಲ್ಲಿ ಯುದ್ಧಾಸಕ್ತ ರಾಷ್ಟ್ರಗಳಲ್ಲದೆ ಕೆಲವು ತಟಸ್ಥ ರಾಷ್ಟ್ರಗಳಿಗೂ ಭಾಗವಹಿಸುವ ಅವಕಾಶವಿರಬೇಕು.

ಪ್ರಯತ್ನ ನಿಷ್ಪ್ರಯೋಜಕ

ಪರಿಷತ್ತು ಫಲಪ್ರದವಾಗಬೇಕಾದರೆ-ಇತ್ತಂಡಗಳಿಗೂ ನೆರವು ನೀಡಬಲ್ಲ ಏಶಿಯದ ರಾಷ್ಟ್ರಗಳಿಗೆ ಆಸ್ಪದಕೊಡಬೇಕೆನ್ನುವುದು ಅತ್ಯಂತ ಯೋಗ್ಯವಾದ ಸೂಚನೆ—ಆದರೆ, ಹಿಂದೊಮ್ಮೆ ಭಾರತದ ಸೇರ್ಪಡೆಗೆ ರಾಷ್ಟ್ರಸಂಘದಲ್ಲಿ ಅನುಕೂಲಾ

ವಿನೋಬಾಜೀ

ಬಿಹಾರ ರಾಜ್ಯದ ದೇವಘಡದಲ್ಲಿ ಆಚಾರ್ಯ ವಿನೋಬಾ ಭಾವೆಯವರಂತಹ ಸಾಧು ಪುರುಷರ ಮೇಲೆ ಅತ್ಯಾಚಾರ ನಡೆದ ವರದಿಯೊಂದು ಬಂದಿರುತ್ತದೆ. ಸುಪ್ರಸಿದ್ಧವಾದ ವೈದ್ಯನಾಥ ದೇವಾಲಯವನ್ನು ವಿನೋಬಾಭಾವೆಯವರು ಕೆಲವು ಹರಿಜನ ಬಂಧುಗಳನ್ನು ಕೂಡಿಕೊಂಡು ಪ್ರವೇಶಿಸುತ್ತಿದ್ದ ಕಾಲಕ್ಕೆ ಅಲ್ಲಿಯ ಪಂಡಾ ಜನರು ಧರ್ಮಾಂಧರಂತೆ ಆಚಾರ್ಯರನ್ನು ಹೊಡೆದರೆಂದೂ ಒಬ್ಬಿಬ್ಬರು ಹೆಣ್ಣುಮಕ್ಕಳ ಮೇಲೆ ಕೈಮಾಡಿದರೆಂದೂ ವರದಿ ಹೇಳುತ್ತದೆ. ಹರಿಜನರನ್ನು ದೇವ ಮಂದಿರದಲ್ಲಿ ಪ್ರವೇಶಿಸಗೊಡಲಾರೆವೆನ್ನುವ ಅನುಚಿತ ನಿಲುವೊಂದನ್ನು ಈ ಪಂಡಾ ಜನರು ವಹಿಸಿದುದು ಘೋರ ಅನ್ಯಾಯ; ಮತ್ತು ಅದು ಸಾಲದೆಂಬಂತೆ ವಿನೋಬಾ ಭಾವೆಯವರಂಥ ಮಹಾಪುರುಷರನ್ನು ಹೊಡೆದು ಗಾಸಿಗೊಳಿಸಿರುವುದು ಪಂಡಾಜನರ ಪುಂಡುತನವೇ ನಿಜ. ಇದನ್ನು ಪ್ರತಿಭಟಿಸಿ, ದೇಶದ ಮೂಲೆ ಮೂಲೆಯಿಂದಲೂ ಹೇಳಿಕೆಗಳು ಹೊರಬಿದ್ದಿವೆ. ಪಂಡಾಜನರ ಅಕೃತ್ಯವನ್ನು ಯಾರೊಬ್ಬರೂ ಮನ್ನಿಸುವಂತಿಲ್ಲ. ಗಾಂಧೀಜಿಯ ಪ್ರಿಯ ಶಿಷ್ಯರಾದ ವಿನೋಬಾ ಈ ಯುಗದ ಸಂದೇಶವನ್ನು ಸಾರುತ್ತಾ ಯುಗ ಧರ್ಮದಂತೆ ಹರಿಜನ ಬಂಧುಗಳೊಡನೆ ಕೂಡಿ ನಡೆಯುತ್ತಿರುವುದು ಎಲ್ಲ ಧರ್ಮಾಂಧರ ಕಣ್ಣಿನ ಪರೆಯನ್ನು ಉಜ್ಜಿ ತೆಗೆಯುವಂತಿದೆ. ಅವರಿಗೆ ಬಿದ್ದ ಪೆಟ್ಟು ದೇವರ ಪ್ರಸಾದ. ಏಕೆಂದರೆ ಇದು ಎಲ್ಲರ ಕಣ್ಣು ತೆರೆಯಿಸಿತು. ಸ್ವತ್ಹ ಪಂಡಾಗಳೇ ತಪ್ಪು ತಿದ್ದಿಕೊಂಡು ಕಳೆದ ೧೫ ನೇ ದಿನಾಂಕ ಹರಿಜನ ಬಂಧುಗಳ ವಿಶಾಲ ಸಮೂಹವನ್ನು ಸ್ವಾಗತಿಸಿ ದೇವರ ದರ್ಶನ ಹಾಗೂ ಪೂಜೆ ಮಾಡಿಸಿದರು. ೨೭ ನೇ ತಾರೀಕು ಬಿಹಾರದ ಮುಖ್ಯ ಮಂತ್ರಿಗಳು ಅಸಂಖ್ಯ ಹರಿಜನರನ್ನು ಸೇರಿಕೊಂಡು ಸಂಭ್ರಮದಿಂದ ಮಂದಿರವನ್ನು ಪ್ರವೇಶಿಸಿದರು. ನಾವು ಈ ಆದರ್ಶವನ್ನು ಮೆಚ್ಚಿ ಪುರಸ್ಕರಿಸದಿದ್ದರೆ ಸರ್ವನಾಶದ ಭಯವುಂಟು.

ನೇಶನಲ್ ರೇಡಿಯೋ ಎಂಡ್ ಇಲೆಕ್ಟ್ರಿಕ್

(ಮರ್ಫಿ ರೇಡಿಯೋದ ಅಧಿಕೃತ ಮಾರಾಟಗಾರರು)

ಮು. ಬಸ್‌ಸ್ಟ್ಯಾಂಡಿನ ಎದುರು, ಉಡುಪಿ.

ಎಲ್ಲಾ ತರದ ಹೊಸ ಮತ್ತು ಉಪಯೋಗಿಸಿದ ರೇಡಿಯೊಗಳನ್ನು ಒದಗಿಸಿಕೊಡಲಾಗುವುದು. ಸರ್ವವಿಧದ ಇಲೆಕ್ಟ್ರಿಕ್ ಸಾಮಾನುಗಳು ಮಾರಾಟಕ್ಕೆ ಸದಾ ಸಿದ್ಧ ಇರುವುವು. ರೇಡಿಯೋ ರಿಪೇರಿ, ಮನೆ ಮತ್ತು ಕೈಗಾರಿಕೆಗಳಿಗೆ ಇಲೆಕ್ಟ್ರಿಕ್ ವಯರಿಂಗ್ ಮಾಡುವುದು ನಮ್ಮ ವೈಶಿಷ್ಟ್ಯ. ಮದುವೆ, ಸಭೆ ಮೊದಲಾದ ಸಮಾರಂಭಗಳಿಗೆ ಅತಿ ಕಡಿಮೆ ಬಾಡಿಗೆಯಲ್ಲಿ ತಾತ್ಕಾಲಿಕ ವಿದ್ಯುದ್ದೀಪದ ಮತ್ತು ಲೌಡ್‌ಸ್ಪೀಕರಿನ ವ್ಯವಸ್ಥೆ ಮಾಡಿಕೊಡಲಾಗುವುದು. ● ಒಮ್ಮೆ ನಮ್ಮ ಶೋರೂಮನ್ನು ಸಂದರ್ಶಿಸಿ

ಕೆ. ಸಿ. ಹೆಗ್ಡೆ, ಮ್ಯಾನೇಜರ್.

ಭಿಪ್ರಾಯವನ್ನು ಪ್ರಕಟಪಡಿಸಿದ್ದ ಬಹ್ವಂಶ ರಾಷ್ಟ್ರಗಳು ಈಗ ಅಮೇರಿಕೆಯ ಪ್ರಭಾವದಿಂದೆಂಬಂತೆ ಮಡಿವಂತಿಕೆಯ ಬುದ್ಧಿಯನ್ನು ತೋರಿಸುತ್ತವೆ. ರಾಷ್ಟ್ರಸಂಘ ಒಮ್ಮೆ ನಿರ್ಣಯಿಸಿ ಬಿಟ್ಟ ಸಂಗತಿಯನ್ನು ಪುನಃ ಪರಿಶೀಲನೆಗೆ ತೆಗೆದುಕೊಳ್ಳುವುದರಲ್ಲಿ ಔಚಿತ್ಯವಿಲ್ಲೆಂದು ಬ್ರಿಟನಿನಂಥ ರಾಷ್ಟ್ರಗಳು ಈಗ ಹೇಳತೊಡಗಿವೆ. ಅಮೇರಿಕಾದ ವರ್ಚಸ್ಸು ಸಂಯುಕ್ತರಾಷ್ಟ್ರ ಸಂಘದಲ್ಲಿ ಭದ್ರವಾಗಿ ಬೇರೂರಿರುವುದೇ ಈ ಆಗ್ರಹದ ಮೂಲ. ಈ ಆಗ್ರಹವನ್ನು ದುರಾಗ್ರಹವೆಂದು ಕರೆದರೂ ತಪ್ಪಾಗಲಿಕ್ಕಿಲ್ಲ. ಏಕೆಂದರೆ, ಇದು ಒಳ್ಳೆಯದನ್ನುಂಟುಮಾಡುವುದಿಲ್ಲ. ೯೦ ದಿನಗಳ ಅವಧಿಯೊಳಗೆ ರಾಜಕೀಯ ಪರಿಷತ್ತು ಕೂಡಿ ಕಾರ್ಯಾರಂಭಿಸುವ ಭರವಸೆ ಇಲ್ಲದಿದ್ದರೆ, ಕೊರಿಯಾದ ರಾಜಕಾರಣ ಹೇಗೆ ತಿರುಗಿಕೊಂಡೀತೆಂದು ಹೇಳಲು ಬಾರದು. ಸಿಂಗ್ಮನ್ರ್ಹೀಯವರುಏಕಾಕಿಯಾಗಿ ಯುದ್ಧ ಮುಂದುವರಿಸಲೂ ಸಾಕು—ಸುಮ್ಮನೆ ಅವರು ಕುಳಿತರೂ, ತಟಸ್ಥ ರಾಷ್ಟ್ರಗಳಿಗೆ ಒಪ್ಪಿಸಲ್ಪಟ್ಟ ಜವಾಬ್ದಾರಿಯು. ಹೊಸ ಸಮಸ್ಯೆಗಳಿಗೆ ಅವಕಾಶ ನೀಡಬಹುದು. ಉದಾಹರಣೆಗೆ, ಭಾರತದ ಸೈನಿಕರು ಈಗ ಏಶಿಯಾಕ್ಕೊಪ್ಪದ ಯುದ್ಧ ಕೈದಿಗಳ ಯೋಗ ಕ್ಷೇಮ ನೋಡಿಕೊಳ್ಳುತಿದ್ದಾರೆ. ನಿರ್ದಿಷ್ಟ ಅವಧಿಯಲ್ಲಿ ರಾಜಕೀಯ ಪರಿಷತ್ತು ಫಲಪ್ರದವಾಗದಿದ್ದರೆ ಈ ಕೈದಿಗಳನ್ನು ಏನು ಮಾಡಬೇಕು? ಅವರ ಯೋಗಕ್ಷೇಮವನ್ನು ಭಾರತವು ಅವಧಿ ಮುಗಿದ ಬಳಿಕವೂ ಹೊರಬಲ್ಲುದೆ? ಮೂಲ ಒಪ್ಪಂದಂತೆ ಎಲ್ಲವೂ ನಿರ್ವಿಘ್ನವಾಗಿ ನಡೆದೀತೆಂಬ ಭರವಸೆಯಿಂದ ಹೊಣೆಗೆ ಹೆಗಲುಕೊಟ್ಟ ಭಾರತದಂಥ ರಾಷ್ಟ್ರಗಳ ಪರಿಶ್ರಮ ನಿಷ್ಪ್ರಯೋಜಕವಾಗುವುದಿಲ್ಲವೇ?

ಔದಾರ್ಯಬೇಕು

ಇವನ್ನೆಲ್ಲ ವ್ಯಾವಹಾರಿಕ ದೃಷ್ಟಿಯಿಂದ ವಿಮರ್ಶಿಸಿದರೆ, ಅಮೇರಿಕಾ ದುರಾಗ್ರಹ ಪಟ್ಟರೂ ಕಮ್ಯೂನಿಸ್ಟ ಪಕ್ಷದ ಉತ್ತರ ಕೊರಿಯನ್ನರೂ ಚೀನೀಯರೂ ಸ್ವಲ್ಪ ಔದಾರ್ಯ ತೋರಿಸಿ, ಮುಂದಿನ ಗಂಡಾಂತರವನ್ನು ನಿವಾರಿಸಬಲ್ಲರೆಂದು ಹೇಳಬೇಕಾಗುವುದು. ಹೇಗಾದರೂ ರಾಜಕೀಯ ಪರಿಷತ್ತು ಒಮ್ಮೆ ಸೇರಲಿ ಅನಂತರದಲ್ಲಿಯೇ ಪರಸ್ಪರ ವಿಚಾರ ವಿನಿಮಯ ಮಾಡಿ ಮತಭೇದಗಳನ್ನುಬಗೆಹರಿಸೋಣ ಎಂದುಲಿ ಸ್ಟೀನ್ ಲಾಯಿಡರಂಥವರು ಸಲಹೆ ಮಾಡಿದ್ದಾರೆ. ಸೋಮವಾರ ದಿನ ಭಾರತದ ಪ್ರತಿನಿಧಿ ಕೃಷ್ಣ ಮೆನೋನ್ನರು ಸಹ, ಚೀನೀಯರೂ ಉತ್ತರ ಕೊರಿಯನ್ನರೂ ಪರಿಷತ್ತು ಬೇಗನೇ ಸೇರುವುದಕ್ಕೆ ಸಹಕಾರದ ವರ್ತನೆ ತೋರಬೇಕೆಂದು ವಿನಂತಿಸಿರುವರು. ಇಕ್ಕಡೆಯವರೂ ಕುಳಿತಲ್ಲಿಂದ ಏಳಲಾರೆವೆಂದು ಹೇಳುತಿದ್ದರೆ, ಇಬ್ಬರೂ ಒಟ್ಟು ಸೇರುವುದೆಂತು? ಚೀನೀಯರೂ ಅವರ ಮಿತ್ರರೂ ಉದಾರ ವರ್ತನೆಯನ್ನು ತೋರಿಸಲು ಮುಂಬಂದರೆ ಕೊರಿಯಾದ ಪ್ರಶ್ನೆಯ ಕುರಿತು ಹೊಸ ಭರವಸೆ ಒಡಮೂಡುವುದು. ಅದಲ್ಲದೆ, ರಾಜಕೀಯ ಪರಿಷತ್ತನ್ನು ಕಮ್ಯೂನಿಸ್ಟರು ಬಹಿಷ್ಕರಿಸುವುದಕ್ಕೆ ಮುಂದಾದರೆ ಪರಿಣಾಮಭೀಕರವಾಗುವುದು. ಅಮೇರಿಕಾ ಇದನ್ನು ಸ್ಪಷ್ಟವಾಗಿ ತಿಳಿದಿದ್ದರೂ ಅದು ಪ್ರತಿಷ್ಠೆ ಮತ್ತು ಸಿಂಗ್ಮನ್ರ್ಹೀಗೆ ಕೊಟ್ಟ ವಚನಗಳಿಂದ ಅದು ಬಂಧಿಸಲ್ಪಟ್ಟಿರುವುದು ದುರ್ದೈವ.

ಉಡುಪಿ

ಮು. ಕೌನ್ಸಿಲು ಸಭೆಯು—ಕಳೆದ ತಾ 26ರಲ್ಲು ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ಪೈ ಮತ್ತು ದಾಸ ಸೇರಿಗಾರರ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು. ಆಚ್ಛಾದಿತ ಮಾರ್ಕೆಟ ಬೆಳವಣಿಗೆಗೆ ಒಂದು ಸಾವಿರ ಐವತ್ತು ರೂಪಾಯಿ ಖರ್ಚು ಮಂಜೂರು ಮಾಡಲಾಯಿತು. ಕೆನರಾ ಲೇಂಡ್ ಇನ್ವೆಸ್ಟ್ಮೆಂಟಿನವರು ತಮ್ಮ ಕೆಲವು ಮನೆಗಳಿಗೆ ಪ್ರೈವೇಟ್ ಟೇಂಕ್ ಲೆಟ್ರಿನುಗಳನ್ನು ಹಾಕಿಸಿದುದರಿಂದಲೂ ಅವುಗಳನ್ನು ಸ್ವಚ್ಛ ಮಾಡುವ ಕಾರ್ಯವನ್ನು ಅವರೇ ವಹಿಸುವುದರಿಂದಲೂ ಸ್ಕೇವೆಂಜಿಂಗ್ ಟೇಕ್ಸನ್ನು ಆ ಮನೆಗಳ ಮಟ್ಟಿಗೆ ವಸೂಲು ಮಾಡಬಾರದಾಗಿ ಮಾಡಿದ ಅರ್ಜಿ ಪರಿಶೀಲಿಸಲಾಯಿತು. ಕೆಲವೊಂದು ಚರ್ಚೆನಡೆದು ಆ ಕುರಿತು ತೀರ್ಮಾನಕ್ಕೆ ಬೇಕಾಗುವ ಮಾಹಿತಿಯನ್ನು ಸರಕಾರದಿಂದ ಪಡೆಯಬೇಕೆಂದು ನಿರ್ಣಯವಾಯಿತು. ಬಜೆಟದಲ್ಲಿದ್ದ ಕೆಲವು ನಿರ್ಣಯಗಳ ತೀರ್ಮಾನವು ಮುಂದಿನ ಸಭೆಗೆ ಬಿಲ್ಕೊಟ್ಟು ಸಭೆಯು ಕೊನೆಗೊಂಡಿತು.

ಗಾಂಧಿಜೀ ವರ್ಧಂತಿ ಹಾಗೂ ಚರಖಾ ಜಯಂತಿಯು ಇದೇ ತಾ. 2ರಲ್ಲು ಸ್ಥಳೀಯ ಶಾಖೆಯ ಮಾಂಡಲಿಕ ಆಶ್ರಯದಲ್ಲಿ ಸ್ಥಳೀಯ ಬೋರ್ಡ್ ಹೈಸ್ಕೂಲ್ ಸೀಮ ಲ್ಸ್ ಹಾಲಿನಲ್ಲಿ ಆಚರಿಸಲ್ಪಡುವುದು. ತತ್ಸಂಬಂಧ ಆ ದಿನ ಬೆಳಗ್ಗೆ 9 ಗಂಟೆಯಿಂದ ನೂಲುವ ಸ್ಪರ್ಧೆ ಜರಗುವುದು. ಸ್ಪರ್ಧೆಯಲ್ಲಿ ಯಶಸ್ವಿಯಾದವರಿಗೆ ಪಾರಿತೋಷಕ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಶಾಖೆಯ ಮಂಡಲ ಕಾರ್ಯದರ್ಶಿ ಶ್ರೀ. ಕೆ. ಶ್ರೀನಿವಾಸ ಪೈಗಳನ್ನು ವಿಚಾರಿಸಬಹುದಾಗಿದೆ.

ಧರ್ಮಾರ್ಥ ಅಕ್ಕಿ ವಿತರಣೆ—ಉಡುಪಿ ಮುನಿಸಿಪಲ್ ಕೌನ್ಸಿಲು ಚೇರ್ಮೇನ್ ಶ್ರೀ ಯು. ಎಸ್. ನಾಯ್ಕರು ಕಳೆದ ತಾ 27ರಲ್ಲಿ ಬಾಂಗಾಳ ನಾಯಕ್ ಬೇಂಕ್ ಪಕ್ಕಾರದಲ್ಲಿ ಸಾವಿರಾರು ಬಡಬಗ್ಗರಿಗೆ, ದೊಡ್ಡವರಿಗೆ ಎರಡು ಪಾವು ಮತ್ತು ಒಂದಾಣೆ, ಚಿಕ್ಕವರಿಗೆ ಒಂದು ಪಾವು ಮತ್ತು ಒಂದಾಣೆಯಂತೆ ಧರ್ಮಾರ್ಥ ಅಕ್ಕಿ ಮತ್ತು ದುಡ್ಡನ್ನು ಹಂಚಿದರು.

ಆರೂರು ವೆಂಕಟ ರಾವ್ ಕೊಲೆಯ ಖಟ್ಲೆಯು—ಜುಲಾಯಿ ೭5ರಿಂದ ಇಲ್ಲಿನ ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ಮಾಗುತ್ತಿದ್ದ ಆರೋಪಿಗಳಾದ ಲಾರೆನ್ಸ್ ಮಸ್ಕರೇಂಜ, ಆನಂದ ಮಸ್ಕರೇಂಜ, ಗೋವಿಂದ ಶೆಟ್ಟಿ, ವಿಷ್ಣುಮೂರ್ತಿ ಭಟ್ಟ, ಮಹಾಬಲ ಹೆಗ್ಡೆ, ನಾರಾಯಣ ಶೆಟ್ಟಿ ಎಂಬೀ ಆರ್ವರನ್ನು ಕಳೆದ ತಾ 24ರಲ್ಲಿ ಸೆಶ್ಶನ್ಸಿಗೆ ಕಮಿಟ್ ಮಾಡಲಾಗಿದೆ

ಬಡಾನಿಡಿಯೂರು— ಕರ್ನಾಟಕ ಸಂಘದ ವಾರ್ಷಿಕೋತ್ಸವವು ಕಳೆದ ತಾ 23ನೇ ಸಂಜೆ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಶ್ರೀಗಳಾದ ಜಿ. ಶ್ರೀನಿವಾಸ ರಾವ್, ಕೆ. ಆನಂದ ರಾವ್, ವಾಸುದೇವ ರಾವ್, ಎ ಜಿ ಆಳ್ವ ಕೆ. ಚಂದ್ರಶೇಖರ ಹೆಗ್ಡೆ ಮೊದಲಾದವರು [illegible] ಭಾಷಣಾದಿ ಕಾರ್ಯ ಕ್ರಮದಲ್ಲಿ ಭಾಗವಹಿಸಿದ್ದರು.

ಪ್ರತ್ಯಪ್ರತ್ಯೇಕ ಕಾರ್ಡ ಬರೆದೂ ಸಕಾಲದಲ್ಲಿ ಚಂದಾಹಣ ಕಳುಹಿಸಿ ಕೊಡದವರು ನಾವು ನಿರುಪಾಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ವಿನಂತಿ.

ಮೇನೇಜರ್, ನವಯುಗ.

(೫ನೇ ಪುಟದಿಂದ)

ಆಂಧ್ರಕ್ಕೆ ನೆಮ್ಮದಿ

ಮೊದಲೇ ಹೇಳಿದಂತೆ ಆಂಧ್ರ ಪ್ರಜಾ ಸಮಾಜವಾದಿಗಳಲ್ಲಿ ಎಲ್ಲರೂ ಪ್ರಕಾಶಮರ ರಾಜಕೀಯ ಅಂತರಂಗಗಳನ್ನು ಮೆಚ್ಚುವುದಿಲ್ಲ. ಆಂಧ್ರ ಪ್ರದೇಶ ಪ್ರಜಾ ಸಮಾಜವಾದೀ ಪಕ್ಷದ ಕಾರ್ಯದರ್ಶಿ ಶ್ರೀ ಪಿ. ವಿ. ಜಿ ರಾಜೂರವರೊಂದು ಪ್ರಕಟಣೆಯಲ್ಲಿ "ಪ್ರಕಾಶಮರು ಪ್ರಜಾ ಸಮಾಜವಾದೀ ಪಕ್ಷದ ವತಿಯಿಂದ ಶಾಸನ ಸಭಾ ಸದಸ್ಯರಾಗಿ ಚುನಾಯಿತರಾಗಿದ್ದರು. ಈಗ ಅವರು ಕಾಂಗ್ರೆಸಿನೊಡನೆ ಸೇರಿಕೊಳ್ಳುವುದೆಂದರೆ, ತಮ್ಮ ಮತದಾರ ಕ್ಷೇತ್ರಕ್ಕೆ ಅನ್ಯಾಯ ಮಾಡಿದಂತೆಯೇ ಆಗಿದೆ, ಆದುದರಿಂದ, ಶಾಸನ ಸಭಾ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟು ಅವರು ಮರಳಿ ಚುನಾವಣೆಯಲ್ಲಿ ಗೆದ್ದುಬರಲಿ!"ಎಂದು ರಹಾಸ್ಯಾನ ನೀಡಿದ್ದಾರೆ ಮಾತ್ರವಲ್ಲ ಪ್ರಕಾಶಮರ ಮುಂದಾಳುತ್ವದಲ್ಲಿ ರಚಿಸಲ್ಪಡುವ ಸರಕಾರವನ್ನು ಪ್ರಜಾ ಸಮಾಜವಾದೀ ಪಕ್ಷವು ಬೆಂಬಲಿಸದೆ ತನ್ನ ಧ್ಯೇಯಾದರ್ಶಗಳಿಗೆ ಅನುಗುಣವಾದ ರೀತಿಯಲ್ಲಿ ರಚನಾತ್ಮಕ ವಿರೋಧವನ್ನೊಡ್ಡುವ ಪ್ರತಿಪಕ್ಷವಾಗಿಯೇ ಉಳಿಯುವುದು ಎಂದಿರುವರು ಇದಕ್ಕೆ ಪ್ರತಿಯಾಗಿ ರಾಜೂರವರ ಈ ಪ್ರಕಟಣೆಯು ಸಿಂಧುವಲ್ಲವೆಂದೂ, ಪ್ರಜಾ ಸಮಾಜವಾದೀ ಪಕ್ಷವು ತಾನು ಈ ಮುಂಚೆ ಸ್ವೀಕರಿಸಿದ ಗೊತ್ತುವಳಿಗನುಗುಣವಾಗಿ ಪ್ರಕಾಶಮರ ಸಮ್ಮಿಶ್ರ ಮಂತ್ರಿಮಂಡಳವನ್ನು ಬೆಂಬಲಿಸಲು ಬದ್ಧವೆಂದೂ ನಾಲ್ಕುಮಂದಿ ಪ್ರಜಾ ಸಮಾಜವಾದೀ ಪಕ್ಷದ ಸದಸ್ಯರು ಸಂಯುಕ್ತ ಪ್ರಕಟಣೆ ಹೊರಡಿಸಿರುವರು. ಅಂತೂ ಪ್ರಕಾಶಮರ ಪ್ರಯತ್ನದಿಂದ ಏಳುಮಂದಿ ಸದಸ್ಯರ ಆಂಧ್ರ ಮಂತ್ರಿಮಂಡಳ ಪ್ರತಿಷ್ಠಾ ಬದ್ಧವಾಗುತ್ತಿರುವುದು ಶುಭಚಿಹ್ನೆ. ಕೃಷಿಕರ ಲೋಕ ಪಕ್ಷದ ಪ್ರೊ. ರಂಗಾ ಹಾಗೂ ಕಾಂಗ್ರೆಸಿನ ಶ್ರೀ ಸಂಜೀವ ರೆಡ್ಡಿಯವರೊಡನೆ ಸಿದ್ಧಗೊಳಿಸಿದ ಪ್ರಕಾಶಮರು ಮಂತ್ರಿಮಂಡಳದ ಸದಸ್ಯರ ಪಟ್ಟಿಯು ಆಂಧ್ರರಿಗೆ ತೃಪ್ತಿಕರವಾಗಿ ಕಂಡುಬಂದರೆ, ಮುಂದೆ ಯಾವ ತೊಂದರೆಯೂ ಇಲ್ಲದೆ ಆಡಳಿತ ಸುಸೂತ್ರವಾಗಿ ಮುನ್ನಡೆಯುವ ಭರವಸೆ ಇದೆ.

ತಿರುಕೊಚ್ಚಿಯಲ್ಲಿ

ತಿರುಕೊಚ್ಚಿಯಲ್ಲಿ ತಿರುವಾಂಕೂರು ತಮಿಳುನಾಡು ಕಾಂಗ್ರೆಸು ಪಕ್ಷದ ಸದಸ್ಯರು ಮಂತ್ರಿ ಮಂಡಳದೊಡನೆ ಸಹಕರಿಸದಿರಲು ನಿರ್ಣಯಿಸಿದುದರಿಂದ ಕಾಂಗ್ರೆಸು ಪಕ್ಷದ ಸಮರ್ಥಕರು ಕಡಿಮೆಯಾದರಷ್ಟೆ! ಶ್ರೀ ಜಾನರ ಮುಖ್ಯ ಮಂತ್ರಿತ್ವದಲ್ಲಿ ಆಡಳಿತ ನಡೆಸುವ ಸರಕಾರದ ಮೇಲೆ ಶಾಸನ ಸಭೆಗೆ ವಿಶ್ವಾಸವಿದೆಯೇ ಹೇಗೆಂಬುದನ್ನು ನಿರ್ಣಯಿಸುವುದು ಈ ಕಾರಣದಿಂದ ಅನಿವಾರ್ಯವೆನಿಸಿತು. ವಿರೋಧಿ ಪಕ್ಷದವರು ತಾವಾಗಿ ಅವಿಶ್ವಾಸದ ಗೊತ್ತುವಳಿಯನ್ನು ತರುವುದಕ್ಕೆ ಮುಂಚೆಯೇ ಮುಖ್ಯ ಮಂತ್ರಿಗಳು ವಿಶ್ವಾಸ ಪ್ರದರ್ಶನಮಾಡಬೇಕೆಂದು ಬಿನ್ನವಿಸುವ ಠರಾವು ಮಂಡಿಸಿದರು. ತಮ್ಮ ಭಾಷಣದಲ್ಲಿ ಅವರು ಕಾಂಗ್ರೆಸು ಸರಕಾರ ಸಾಧಿಸಿದ ಕಾರ್ಯಗಳನ್ನು ಮನಮುಟ್ಟುವಂತೆ ವಿವರಿಸಿದರಲ್ಲದೆ ದೇಶದ ಇಂದಿನ ಸ್ಥಿತಿಗತಿಯಲ್ಲಿ ತಮ್ಮ ಸರಕಾರವನ್ನು ಬೆಂಬಲಿಸುವುದು ಅಗತ್ಯವೆಂದೂ ಸೂಚಿಸಿದರು. ಆದರೆ ವಿರೋಧಿ ಪಕ್ಷದ ಧುರೀಣರು ಮಂತ್ರಿ ಮಂಡಳದ ಮೇಲೆ ಆರೋಪಗಳ ಸುರಿಮಳೆಗರೆದರು. ಮಾತ್ರವಲ್ಲ ಬಹುಮತ ಕಳೆದುಕೊಂಡಿರುವ ಕಾಂಗ್ರೆಸು ಪಕ್ಷದ ಸ್ಥಾನದಲ್ಲಿ ತಮಗೆ ಮಂತ್ರಿಮಂಡಳ ರಚಿಸಲು ಅವಕಾಶ ನೀಡಬೇಕೆಂದು ಬೇಡಿಕೆ ಮುಂದಿಟ್ಟರು. ಮತಗಣನೆಯಲ್ಲಿ ಸರಕಾರಕ್ಕೆ ಸೋಲುಂಟಾಯಿತು. ಮರುದಿನವೇ ರಾಜಪ್ರಮುಖರು ಶಾಸನಸಭೆಯನ್ನು ವಿಸರ್ಜಿಸಿರುವುದಾಗಿ ಆದೇಶ ಹೊರಡಿಸಿದರು; ಮತ್ತು ಮುಂದಿನ ಚುನಾವಣೆಗಳು ನಡೆದು, ಜನತೆಯ ವಿಶ್ವಾಸ ಪಾತ್ರವಾದ ಸರಕಾರ ಸ್ಥಾಪಿಸಲ್ಪಡುವವರೆಗೆ, ಜಾನರ ಮಂತ್ರಿಮಂಡಳವೇ ಅಧಿಕಾರದಲ್ಲಿ ಉಳಿಯಬೇಕೆಂದು ನಿರ್ಣಯಿಸಿದರು. ರಾಜಪ್ರಮುಖರ ಆದೇಶ ಘಟನಾತ್ಮಕವಾದುದಲ್ಲವೆಂದೂ, ಹೊಸತಾಗಿ ಮತಗಣನೆ ನಡೆಸುವುದು ಅಪ್ರಾಸಂಗಿಕವಾದುದೆಂದೂ ವಿರೋಧೀ ಗುಂಪು ಹೇಳುತ್ತದೆ. ಹೊಸ ಸರಕಾರ ರಚಿಸಲು ತಮಗೆ ಅವಕಾಶ ಕೊಡಲು ರಾಜಪ್ರಮುಖರು ಆತಂಕಿಸುವರಾದರೆ, ಈಗಿನ ಮಂತ್ರಿಮಂಡಳ ಕೂಡಲೇ ರಾಜೀನಾಮೆ ಕೊಟ್ಟು ರಾಷ್ಟ್ರಪತಿಯ ಆಡಳಿತೆಯನ್ನು ಸಾರುವುದೇ ನ್ಯಾಯವಾದುದೆಂದು ವಿರೋಧೀ ಗುಂಪಿನವರ ಅಭಿಪ್ರಾಯ. ಪಂಚಾಯತು ಹಾಗೂ ನಗರ ಸಭೆಗಳ ಚುನಾವಣಾ ಫಲಿತಾಂಶವು ಕಾಂಗ್ರೆಸಿಗೆ ಅನುಕೂಲವಾಗಿಯೂ ವಿರೋಧೀ ಗುಂಪುಗಳಿಗೆ ಅಹಿತಕರವಾಗಿಯೂ ಕಂಡುಬಂದುದರಿಂದ—ಹೊಸ ಚುನಾವಣೆಗಳೆಂದರೆ ಕಾಂಗ್ರೆಸ್ಸಿಗೆ ಸಮ್ಮತಿ; ಹಾಗೂ ವಿರೋಧೀ ಗುಂಪುಗಳಿಗೆ ಭಯವೆಂದು ತೋರುತ್ತದೆ.

ಪ್ರತೀ ಸಂಸಾರಿಗನುತಪ್ಪದೇ ನೋಡುವ ಉನ್ನತ
ಸಾಮಾಜಿಕ ಚಿತ್ರ
ತಾ. 30 9—53 ರಿಂದ
"ಬಡೀ ಬಹೂ"
ತಾರಾಗಣ: ನಿಮ್ಮಿ, ಶೇಖರ್, ಸುಲೋಚನಾ ಚಟರ್ಜಿ, ಮೊದಲಾದವರು
ಸಂಗೀತ: ಅನಿಲ್ ಬಿಸ್ವಾಸ್:
ಶ್ರೀಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಶೀಘ್ರದಲ್ಲಿಯೇ: "ಹಮಾರಿ ದುನಿಯಾ"—"ಜನಿರ್ ಓಫ್ ಡಾಕ್ಟರ್ ಕೋಟ್ನೀಸ್"

ಸಾಲಿಗ್ರಾಮ—ಹಳೆವಿದ್ಯಾರ್ಥಿ ಸಂಘ, ಕಾರ್ಕಳ ಇದರ ನೇತೃತ್ವದಲ್ಲಿ ಕಳೆದ ತಾ 20ರಲ್ಲು ಮದ್ರಾಸು ಸರಕಾರದ ನೂತನ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆ ಕುರಿತು 'ವಿಚಾರಗೋಷ್ಠಿ'ಯೊಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಹಂದೆಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಪಿ. ಯಸ್ ಭೋಜ ರಾಯರು ಗೋಷ್ಠಿಯ ಉದ್ಘಾಟನೆ ಮಾಡಿದರು. ಶ್ರೀಗಳಾದ ಸುಬ್ರಾಯ ಉರಾಳ, ನೆಂಕಟ್ರಮಣ ಚಡಗ, ಸುಬ್ಬಣ್ಣ ಹೆಗ್ಡೆ, ರಾಮಕೃಷ್ಣ ಅಡಿಗ, ಎಮ್. ಪರಮೇಶ್ವರಯ್ಯ, ರಾಮಕೃಷ್ಣ ಉಡುಪ ಮೊದಲಾದವರು ಮಾತನಾಡಿದರು. ಸಭಾಧ್ಯಕ್ಷರು ಹೊಸ ವಿದ್ಯಾಯೋಜನೆಯನ್ನೂ ಸಕಾರಣವಾಗಿ ಸಮರ್ಥಿಸಿ ಸರ್ವರ ಸಹಕಾರವನ್ನು ಕೋರಿದರು.

ಮಂಗಲಪಾಡಿ—ದೇವಾಂಗ ನಗರ ಸಂಯುಕ್ತ ಸಭೆಯು ಕಳೆದ ತಾ 20ರಲ್ಲು

The most powerful medicine for
ASTHAMA
(Registered and Genuine)
CHITRAKOT
ASTHAMA-SPECIFIC.

Hundred years fame to cure the dreaded disease permanently only by one dose to be taken on Sharadpurnima (full moon) dated 22-10-53

Apply atonce in English
Kr. BADRI NATH SINGH,
Shubh Chintak Karyalaya,
CHITRAKOT, Dist. Banda, U. P.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 226/51 ಕ್ರಮ ಅಮ್ಲಜಾರಿ 411/53

ಸಂತಾನ ಉಪ್ಪಾರ ಅರ್ಜಿದಾರ
ವ ತ್ತು
ಬಿ. ಬಿ. ಲುಪ್ಪಿ ಕೂಡಾ 18 ಜನರು
ಎದುರು.

1ನೇ ಯೆದ್ರಿ ಬಿ. ಬಿ. ಲುಪ್ಪಿ-ಮಾರ್ಸೆಲ ಪಾಲೋದರ ಲುಪ್ಪಿರ ಮಗ. ಉಡುಪಿ ತಾಲೂಕು ಮೂಡು ತೋನ್ಸೆ

2ನೇ ಯೆದ್ರಿ ಬಚ್ಚ ಮಾರಕಾಲ-ಗುರ್ವ ಮಾರಕಾಲನ ಅಳಿಯ ಉಡುಪಿ ತಾಲೂಕು ಬಾಳಕುದ್ರು ಗ್ರಾಮ

11ನೇ ಯೆದ್ರಿ ಅಕ್ಕಮ್ಮ ಶೆಡ್ತಿ-ಭಾಗಿ ಶೆಟ್ಟಿರ ಮಗಳು. ಉಡುಪಿ ತಾಲ್ಲೂಕು ಪಡು ತೋನ್ಸೆ ಗ್ರಾಮ

ಇವರುಗಳಿಗೆ

ಮೇಲ್ಕಂಡ ದಾವೆಯಲ್ಲಿ ಅರ್ಜಿದಾರರ ಗುಣಕ್ಕೆ ಕೊಟ್ಟ ಡಿಕ್ರೀಗೆ ಕಾರಣವಾದ ಸ್ಥಿರಾಸ್ತಿ ಮಾರಾಟದ ಕುರಿತು ಶರ್ತಗಳನ್ನು ನಿರ್ಣಯಿಸುವರೆ ಸದ್ರಿ ಅಮ್ಲಜ್ಯಾರಿಯು ತಾ 23—10—53ಕ್ಕೆ ಇಟ್ಟಿರುವುದರಿಂದ, ಸದ್ರಿ ದಿವ್ಸ ಹಗಲು ಘಂಟೆ 10-30ಕ್ಕೆ ಈ ಕೋರ್ಟ ಮುಂದೆ ಹಾಜರಾಗ ಬೇಕಾಗಿಯೂ, ಆ ಕುರಿತು ನಿಮ್ಮಗಳ ಅಕ್ಷೇಪಗಳಿದ್ದರೆ, ಸದ್ರಿಯವುಗಳನ್ನು ಸದ್ರಿ ದಿವ್ಸ ಜ್ಯಾಹೀರು ಮಾಡಬೇಕಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ.

(By order of court)

K. Vittal Nayak
Vakil for Petitioner

Udipi 28—9—53

ಶ್ರೀ ಬೇರುಂಟ ಭಗವತಿ ಕ್ಷೇತ್ರದಲ್ಲಿ ಶ್ರೀ ಮಂಜೇಶ್ವರ ಹರಿದಾಸ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಕಾಸರಗೋಡು, ಕುಂಬಳೆ ಕಾರಡ್ಕ, ಮಂಜೇಶ್ವರ, ಪಣಂಬೂರು ಕ್ಷೇತ್ರಗಳ ಪ್ರತಿನಿಧಿಗಳು ಬಂದಿದ್ದರು. ವರದಿ ವಾಚನ, ಲೆಕ್ಕ ಪತ್ರಗಳ ಪರಿಶೀಲನೆಯಾದ ಬಳಿಕ ಕಾರ್ಯ ಕಾರೀ ಮಂಡಳಿಯ ರಚನೆಯಾಗಿ ಶ್ರೀ ಎಮ್. ತಿಮ್ಮಪ್ಪನವರು ಅಧ್ಯಕ್ಷರಾಗಿಯೂ ಶ್ರೀ ರಾಮ ತಾನ್‌ರವರು ಉಪಾಧ್ಯಕ್ಷರಾಗಿಯೂ ಶ್ರೀ ಅಂಬು ಮಾಸ್ತರರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಸಾಲಿಕೇರಿ— ಉಡುಪಿ ತಾಲೂಕು ವಾರಂಬಳ್ಳಿ ಪಂಚಾಯತ ಬೋರ್ಡಿನಲ್ಲಿ ಸಾಕಷ್ಟು ಹಣವಿದ್ದಾಗ್ಯೂ ಗ್ರಾಮದ ಜನ ಹಿತ್ಯೈಷಿ ಕೆಲಸಗಳಾಗಲೀ ಸಾರ್ವಜನಿಕ ಕೆಲಸಗಳಾಗಲೀ ಬೋರ್ಡಿನ ಕಡೆಯಿಂದ ನಡೆಯುವುದಿಲ್ಲವೆಂದು ಸುಮಾರು 500 ಜನರು ಸಹಿ ಮಾಡಿದ ಒಂದು ಮನವಿಯನ್ನು ಇದೇ ತಾ. 14ರಲ್ಲು ಜಿಲ್ಲಾ ಪಂಚಾಯತ ಆಫೀಸರಿಗೂ ಸಂಬಂಧಪಟ್ಟ ಇತರ ಮೇಲಾಫೀಸರರಿಗೂ ಶ್ರೀ. ಯು. ಜಗನ್ನಾಥ ಶೆಟ್ಟರ ಮುಂದಾಳುತ್ವದಲ್ಲಿ ಕಳುಹಿಸಿ ಕೊಡಲಾಗಿದೆ

ಕಟಪಾಡಿ—ಸ್ಥಳೀಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸ್ಥಾಪಕರ ದಿನಾಚರಣೆಯು ತಾ 23-9-53 ರಂದು ಶ್ರೀ. ಎಮ್. ವಿ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ದೇವತಾ ಪ್ರಾರ್ಥನೆ, ಶಾಲೆಯ ಪ್ರಗತಿಯ ಸಂಕ್ಷಿಪ್ತ ವರದಿವಾಚನವಾದ ಬಳಿಕ, ಶ್ರೀ. ವಾಸುದೇವ ಕಾಮತ್, ಕೆ. ಸುಬ್ಬರಾವ್, ಕೆ. ಗಣಪತಿ ಶೆಣೈಯವರು ಶಾಲೆಯ ಏಳಿಗೆಗಾಗಿ ಶಾಲಾ ಸ್ಥಾಪಕರಲ್ಲಿ ಅಗ್ರಗಣ್ಯರಾದ ದಿವಂಗತ ಶ್ರೀ ಶಿವಾನಂದ ನಾಯಕರ ಗುಣಕಥನವನ್ನು ಮಾಡಿ ಅವರ ಸಾರ್ವಜನಿಕ ಸೇವೆಯನ್ನು ಕೊಂಡಾಡಿದರು. ಈ ಸಂದರ್ಭಕ್ಕಾಗಿಯೇ ಏರ್ಪಡಿಸೋಣದ ಭಾಷಣ ಸ್ಪರ್ಧೆಯಲ್ಲಿ ಗೆದ್ದ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಶಾಲಾ ಆಡಳಿತ ಸಂಘದ ವಿವಿಧ ಚಟುವಟಿಕೆಗಳನ್ನು, ಶಾಲೆಯ ಹಿಂದಿನ ವ ಇಂದಿನ ಪರಿಸ್ಥಿತಿಯನ್ನೂ ಪರಿಶೋಲಿಸಿ, ಶಾಲಾ ಸ್ಥಾಪಕರ ಅಂದಿನ ಪ್ರಯತ್ನಗಳಿಂದಾಗಿ ಶಾಲೆಯು ಇಷ್ಟು ಉನ್ನತ ಸ್ಥಿತಿಗೆ ಬರಲು ಕಾರಣವಾಯಿತೆಂದರು. ಶಾಲಾ ಬಾಲಕ ಬಾಲಿಕೆಯರಿಂದ ವಿವಿಧ ವಿನೋದಾವಳಿಗಳ ಪ್ರದರ್ಶನವಾಗಿ ಶಾಲಾ ಮುಖ್ಯ ಅಧ್ಯಾಪಕ ಶ್ರೀ. ಯು ಆರ್. ಮಯ್ಯರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಸೂಡ—ಈ ಗ್ರಾಮದಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆಯಲು ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ವಿದ್ಯಾವರ್ಧಕ ಸಂಘದವರಿಗೆ ವಿದ್ಯಾ ಇಲಾಖೆಯಿಂದ ಅನುಮತಿ ದೊರಕಿರುವುದೆಂದೂ, ಶಾಲೆಯು ಮುಂಬರುವ ದಸರಾ ದಿನಗಳಲ್ಲಿ ತೆರೆಯಲ್ಪಡುವುದೆಂದೂ ಸಂಘದ ಕಾರ್ಯದರ್ಶಿ ಶ್ರೀ. ಪಿ. ರಾಮದಾಸ ನಾಯಕರು ತಿಳಿಸುತ್ತಾರೆ.

ಹೆಬ್ರಿ—ಸಮಾಜ ವಿಕಾಸ ಯೋಜನೆಯನ್ವಯ ಇತ್ತೀಚೆಗೆ ತೆರೆಯಲ್ಪಟ್ಟ ಸ್ಥಳೀಯ ಆಸ್ಪತ್ರೆಯಲ್ಲಿ ಕಳೆದ ತಾ. 24ರಲ್ಲು ಮಿಸ್ ಲಲಿತಾ, ಎಮ್. ಬಿ ಬಿ. ಎಸ್. ಅವರು ಚಾರ್ಜು ವಹಿಸಿಕೊಂಡಂದಿನಿಂದ ರೋಗಿಗಳ ಸಂಖ್ಯೆ ದಿನೇ ದಿನೇ ಏರುತ್ತ ಈಗ 120ರ ವರೆಗೂ ಬಂದಿರುವುದಾಗಿ ತಿಳಿದುಬರುತ್ತದೆ. ಉತ್ಸಾಹಿ ಮತ್ತು ದಕ್ಷರಾದ ಲೇಡಿ ಡಾಕ್ಟರರು ಇಷ್ಟರಲ್ಲೇ ಜನಪ್ರಿಯತೆ ಗಳಿಸಿರುವರಲ್ಲದೆ ಸುತ್ತುಮುತ್ತಣ ಹಳ್ಳಿಗರಿಗೆ ಈ ಆಸ್ಪತ್ರೆಯಿಂದ ತುಂಬಾ ಪ್ರಯೋಜನ ಸಿಗುವಂತಾಗಿದೆ. ತಾ. 27ರಲ್ಲು ಜಿಲ್ಲಾ ಮೆಡಿಕಲ್ ಆಫೀಸರ್, ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್, ಕಮ್ಯೂನಿಟಿ ಪ್ರೊಜೆಕ್ಟ್ ಇಂಜಿನಿಯರ್ ಮೊದಲಾದವರು ಹೆಬ್ರಿಗೆ ಬಂದು ಹೊಸತಾಗಿ ಕಟ್ಟಿಸಲಿರುವ ಆಸ್ಪತ್ರೆ ಕಟ್ಟಡ ಸ್ಥಳ ತನಿಖೆ ಮಾಡಿದರು. ಕಟ್ಟಡವು ಬೇಗನೆ ಆಗುವಂತೆ ಆಲೋಚಿಸುವರೊಡನೆ ಊರವರೂ ಸಹಕರಿಸುವರೆಂದು ಆಶಿಸಲಾಗಿದೆ.

ಸುರತ್ಕಲ್, ಕುಳೈ—ಸ್ಥಳೀಯ ಕಲಾರಂಗದ ಆಶ್ರಯದಲ್ಲಿ ಪ್ರಗತಿಶೀಲ ಸಾಹಿತ್ಯ ಮತ್ತು ಚಳವಳಿದ ಕುರಿತು ಚರ್ಚಾ ಸಭೆಯೊಂದು ಶ್ರೀ. ಬಿ. ಪದ್ಮನಾಭ ಸೋಮಯಾಜಿಗಳ ಹಿರಿತನದಲ್ಲಿ ನೆರವೇರಿ ಹಲವರ ಭಾಷಣಗಳಾದುವು.

ಗುರುಪುರ—ಸ್ಥಳೀಯ ಅಧ್ಯಾಪಕ ವೃಂದದವರಿಂದ ರೂಪಾಯಿ 25-15-0 ಮತ್ತು ಅಮೃತೇಶ್ವರ ಯಕ್ಷಗಾನ ಸೇವಾ ಸಂಘದವರಿಂದ ರೂ 25/-ಸಂಗ್ರಹವಾಗಿ ಗೋದಾವರಿ ನೆರೆ ಪರಿಹಾರ ನಿಧಿಗೆ ಕಳುಹಲಾಗಿದೆ ಎಂದು ತಿಳಿದು ಬರುತ್ತದೆ.

ಸೆಡ್ಡೂರು—ಸ್ಥಳೀಯ ಕಲಾ ಮಂಡಳಿಯ ಹುಟ್ಟು ಹಬ್ಬವು ಇದೇ ತಾ 2ರಲ್ಲು ಶ್ರೀ. ಕೆ ಬಿ. ರಾಮಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕುಂದಾಪುರ—(ಗುಡ್ಡೆಯಂಗಡಿ) ಕಳೆದ ತಾ 16ರಲ್ಲು ಪಡುಕೋಣೆ ಸೈಂಟ್ ಆಂತೋನಿ ಹಾಯರ್ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಶ್ರೀ ನೈಲಾಡಿ ಸೂರಪ್ಪ ಸೆಟ್ಟರ ನಾಯಕತ್ವದಲ್ಲಿ, ನಾಲ್ಕು ಮೇಳಗಳ ಪ್ರಮುಖ ವೇಶಧಾರಿಗಳ ಕೂಡುವಿಕೆಯಿಂದ 'ನಳ ದಮಯಂತಿ' ಪ್ರಸಂಗವನ್ನೊಳಗೊಂಡ ಬಯಲಾಟವು ವಿಜೃಂಭಣೆಯಿಂದ ಜರಗಿತು.

ನಿಡಂಬೂರು—ನಮ್ಮ ಊರಿನ ಜೀವಜ್ಯೋತಿಗಳಾದ ಶ್ರೀ ಕಡೆಕಾರು ರಾಜಗೋಪಾಲಕೃಷ್ಣ ರಾಯರು ದಿವಂಗತರಾದುದಕ್ಕೆ ಈ ಪಂಚಾಯತ್ ಬೋರ್ಡು ಅತ್ಯಂತ ದುಃಖ ಪಡುತ್ತದೆ. ಈ ಬೋರ್ಡು ೧೯೪೧ರಲ್ಲಿ ಸ್ಥಾಪನೆಯಾಗಲು ಶ್ರೀಯುತರ ನಿರಂತರ ಪರಿಶ್ರಮವೇ ಕಾರಣವಾಗಿದ್ದು ಆದಿಸಿಂದ ೧೯೫೩ರ ವರೆಗೂ ಅದರ ಅಧ್ಯಕ್ಷರಾಗಿದ್ದುಕೊಂಡು ಈ ಭಾಗದ ಸರ್ವಾಂಗೀಣ ಪ್ರಗತಿಗೆ ದುಡಿದಿರುವುದನ್ನು ಈ ಬೋರ್ಡು ಕೃತಜ್ಞತೆಯಿಂದ ಸ್ಮರಿಸುತ್ತದೆ. ತನ್ನ ಶುಚಿಯಾದ ಜೀವನದಿಂದಲೂ, ಕನ್ನಡ ನಾಡ ನುಡಿಗಳ ಸೇವೆಯ ತಪಸ್ಸಿನಿಂದಲೂ ಕರ್ನಾಟಕದಲ್ಲೆಲ್ಲಾ ಪ್ರಖ್ಯಾತರಾಗಿದ್ದ ಶ್ರೀಯುತರು ನಮ್ಮ ಗ್ರಾಮಕ್ಕೆ ಒಂದು ತಿಲಕ ಪ್ರಾಯವಾಗಿದ್ದರು. ಶ್ರೀಯುತರ ಚಿರಂಜೀವಿಗಳು ತಮ್ಮ ತೀರ್ಥರೂಪರ ಆದರ್ಶಗಳನ್ನೆ ಅನುಸರಿಸಿ ಗ್ರಾಮದ ಮತ್ತು ಗ್ರಾಮಸ್ಥರ ಅಭ್ಯುದಯ ಕಾರ್ಯದಲ್ಲಿ ನೆರವನ್ನು ನೀಡಿಯಾರೆಂದು ಈ ಬೋರ್ಡು ನಂಬುತ್ತದೆ. ಮೃತರಿಗೆ ಈ ಬೋರ್ಡು ತನ್ನ ಅಂತಿಮ ಗೌರವಗಳನ್ನು ಸಮರ್ಪಿಸುವುದಲ್ಲದೆ ಶ್ರೀಯುತರ ಕುಟುಂಬದ ಅಪಾರ ದುಃಖದಲ್ಲಿ ಈ ಬೋರ್ಡು ಪಾಲುಗೊಂಡಿದೆ, ಎಂದು ಪಂಚಾಯತ ಬೋರ್ಡಿನಲ್ಲಿ ಠರಾವು ಮಾಡಿರುವುದಾಗಿ ಈಗಿನ ಅಧ್ಯಕ್ಷ ಶ್ರೀ. ಕೆ. ಸದಾಶಿವ ಹೆಗ್ಡೆಯರು ತಿಳಿಸುತ್ತಾರೆ.

ಬೆಂಗಳೂರು

ಸಂತಾಪ ಸೂಚಕ ಸಭೆ— ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕಳೆದ ತಾ 24ರಲ್ಲು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಎಮ್. ಆರ್. ಶ್ರೀನಿವಾಸಮೂರ್ತಿಗಳ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಯಿತು. ಎರಡು ನಿಮಿಷ ಕಾಲ ಮೌನಪ್ರಾರ್ಥನೆ ನಡೆಯಿತು.

In the Court of the Subordinate Judge of South Kanara

O. S. No 211 of 1953

Between:

H. P. P. Rodrigues ..... Plaintiff
and
B Dayananda Baliga B. Raghunatha Baliga
Baibi Satyendra Saivaram Shilakanthi Minors by guardian ad litem their father the 1st Defendant—Defendants

To

B. Raghunatha Baliga, son of B. Srinivasa Baliga, Merchant residing at Falneer, Mangalore Town.

Please take notice that the above Partition suit stands posted to 23-10-1953 at 11 A. M. in the above court for your appearance on your failure to appear the suit will be decided Exparte.

L. C. Pais, B. A. B. L.,
&
C. I. J. Pais, B. A. B. L.,
Vakils for the Plaintiff

Mangalore
26-9-1953

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಆಫೀಸುಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay



Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

ಮಂಗಳೂರು

ಗ್ರಾಮಸೇವೆ—ಇದೇ ತಾ 26ರಲ್ಲು ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ 30 ವಿದ್ಯಾರ್ಥಿಗಳು ಕಾವೂರಿನಿಂದ ಕೂಳೂರಿಗೆ ಹೋಗುವ ಮಾರ್ಗದಲ್ಲಿ ಮೂರುವರೆ ಗಂಟೆಯ ಕೆಲಸ ಮಾಡಿದರು. ಮಂಗಳೂರು ಅಸಿಸ್ಟಂಟ್ ಪ್ರೊಜೆಕ್ಟ್ ಅಧಿಕಾರಿಯವರು ವಿದ್ಯಾರ್ಥಿಗಳ ಕಾರ್ಯವನ್ನು ಪ್ರಶಂಸಿಸಿದರು.

ಚರ್ಚಾ ಕೂಟ—ಜನಪದ ಕಲಾ ಮಂಡಳಿಯ ಆಶ್ರಯದಲ್ಲ ಹಂಪನ ಕಟ್ಟೆ ಸಿಟಿಜನ್ಸ್ ಲ್ಯಾಟ್ರಿಂ ಯಲ್ಲಿ "ಸಾಹಿತ್ಯ ಮತ್ತು ಅಶ್ಲೀಲ" ಎಂಬ ವಿಷಯದಲ್ಲಿ ಚರ್ಚಾಕೂಟವೊಂದು ಶ್ರೀ ಎಸ್. ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರು ಈ ಕೂಟದಲ್ಲಿ ಭಾಗವಹಿಸಿದ್ದರು. ಶ್ರೀ ಶಿವಪ್ಪ ಭಂಡಾರಿಗಳು ಧನ್ಯವಾದವನ್ನರ್ಪಿಸಿದರು.

ನಗರ ಸಭೆಯು—ತಾ 26ರಲ್ಲು ಸಂಜೆ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಪ್ರಶ್ನೋತ್ತರಗಳಾದುವು. ಮಣ್ಣಗುಡ್ಡೆ ಎಲಿಮೆಂಟರಿ ಶಾಲೆಯನ್ನು ಮತ್ತು ಬೋಳಾರ ಮುನಿಸಿಪಲ್ ಎಲಿಮೆಂಟರಿ ಶಾಲೆಯನ್ನು ಮುಂದಿನ ಶಾಲಾ ವರ್ಷದಿಂದ ಹಾಯರ್ ಎಲಿಮೆಂಟರಿ ಶಾಲೆಗಳನ್ನಾಗಿ ಮಾರ್ಪಡಿಸುವುದೆಂದಾಯಿತು. ಶ್ರೀಗಳಾದ ಎಸ್. ರಮಾನಾಥ ಮತ್ತು ವಾಮನ ಕೊಡಿಯಾಲಬೈಲರನ್ನು ಆರ್ಥಿಕ ಸಮಿತಿ ಮತ್ತು ಬ್ಯಾಟಿಂಗ್ ಕಮಿಟಿಗೂ, ಶ್ರೀ ಡಿ. ಕೊರಗಪ್ಪ ರೈಗಳನ್ನು ಕಾಯಿದೆ ಸಮಿತಿಗೂ ಚುನಾಯಿಸಲಾಯಿತು.

ಸಣ್ಣ ಬಂದರಗಳ ಅಭಿವೃದ್ಧಿಗಾಗಿ ಭಾರತ ಸರಕಾರದವರು ತೆಗೆದಿಟ್ಟ ಹನ್ನೊಂದು ಲಕ್ಷ ರೂಪಾಯಿಗಳಿಂದ ಮಂಗಳೂರು ಬಂದರದಲ್ಲಿ ಅಭಿವೃದ್ಧಿಗಾಗಿ ಆದಷ್ಟು ಹೆಚ್ಚು ಹಣ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಜಿಲ್ಲಾ ಹರಿಗೆ ಕೇಂದ್ರಕ್ಕೆ ಡಾ| ಕೆ. ಆರ್. ಕಿಣಿಯವರಿಂದ ಮತ್ತು ಡಾ| ಎಮ್. ಸಿ. ಶಾಸ್ತ್ರಿಗಳಿಂದ ದಾನವಾಗಿ ಕೊಡಲಾದ ಕೆಲವು ಶಸ್ತ್ರ ಸಲಕರಣೆ ಮತ್ತು ಔಷಧಗಳನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸಲಾಯಿತು. ಸಂಯುಕ್ತ ಕರ್ನಾಟಕ ಪ್ರಾಂತ ನಿರ್ಮಾಣದ ವಿಚಾರದಲ್ಲಿ ಶ್ರೀ ವಾಮನ ಕೊಡಿಯಾಲಬೈಲು ಮತ್ತು ಶ್ರೀ ಎಸ್. ರಮಾನಾಥರು ಮಂಡಿಸಿದ ನಿರ್ಣಯಗಳು ಮುಂದಿನ ಸಭೆಯ ತೀರ್ಮಾನಕ್ಕೆ ಬಾಕಿ ಯಿಡಲಾಯಿತು.

ಪುಣ್ಯ ದಿನಾಚರಣೆ—ಕೊಡಿಯಾಲಬೈಲಿನ ಬ್ರಹ್ಮಮಂದಿರ ಶ್ರೀ ರಾಜಾರಾಮ ಮೋಹನ ರೋಯ್ ಅವರ 120ನೇ ಪುಣ್ಯದಿನವು ತಾ 27ರಲ್ಲು ಸಂಜೆ ಶ್ರೀ ಎಸ್. ಯು. ಪರಮೇಶ್ವರ ನಾಯಕ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಸರ್ವೋತ್ತಮಯ್ಯನವರು ಸ್ವಾಗತ ಭಾಷಣ ಮಾಡಿದರು. ಕುಮಾರಿ ಉಮಾ ದೇವಿ ಕಜೆಕಾರ್, ಶ್ರೀಗಳಾದ ಯು. ಮಾರುತಿ ರಾವ್, ಬಿ. ಕಡಿಲಾಯ ಮೊದಲಾದವರು ರಾಜಾರಾಮ ಮೋಹನ ರೋಯ್‌ರು ದೇಶಕ್ಕೆ ಸಲ್ಲಿಸಿದ ಸೇವೆಯನ್ನೆತ್ತಿ ಭಾಷಣವಿತ್ತರು.

ದ. ಕ. ಜಿಲ್ಲಾ ರೂರಲ್ ವೆಲ್ ಫೇರ್ ಕಮಿಟಿಯ ಸಭೆಯು—ತಾ 23ರಲ್ಲು ಪೈವಳಿಕೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಅಗೋಸ್ತು ತಿಂಗಳಲ್ಲಿ ಆದ ಕಾರ್ಯ ಕಲಾಪಗಳ ವರದಿಯನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಓದಿದರು. ಪೈವಳಿಕೆ ಗ್ರಾಮ ಸೇವಾ ಸಂಘವು ಜಿಲ್ಲಾ ಕಲೆಕ್ಟರಿಗೊಂದು ಬಿನ್ನವತ್ತಲೆಯನ್ನರ್ಪಿಸಿ ಹ್ಯಾಂಡ್ಬಿಲ್ಲು ದೇಣಿಕೆಯನ್ನು ಸೂಚಿಸಿತು. ಕೃಷಿ ಮತ್ತು ಗುಡಿ ಕೈಗಾರಿಕೆ ವಸ್ತು ಪ್ರದರ್ಶನವನ್ನು ಜಿಲ್ಲಾ ಕಲೆಕ್ಟರರು ತೆರೆದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರು ಹೊಸ ವಿದ್ಯಾಯೋಜನೆಯನ್ನು ವಿವರಿಸಿದರು. ಶ್ರೀ ಎಚ್. ರಾಮಚಂದ್ರ ರಾಯರು ಖಾದಿ ಕುರಿತು ಮಾತನಾಡಿದರು.

ಮಹಾ ಸಭೆ—ಕರ್ನಾಟಕ ಪ್ರಾಂತೀಯ ಡಿಪ್ರೆಸ್ಡ್ ಕ್ಲಾಸಸ್ ಸೋಶಿಯಲ್ ಸರ್ವಿಸಸ್ ಲೀಗಿನ ಮಹಾ ಸಭೆಯು ಇದೇ ತಾ 22ರಲ್ಲು ಶ್ರೀ ಎಸ್. ಜಿ. ಸಾಲಿನ್ಸರ ಅಧ್ಯಕ್ಷತೆಯಲ್ಲಿ ಜರಗಿ ಗತವರುಷದ ಲೆಕ್ಕ ಪತ್ರ ಮತ್ತು ಕೆಲವು ಠರಾವುಗಳು ಮಂಜೂರಾತಿಯಾದ ನಂತರ ಹೊಸ ವರ್ಷದ ಕಾರ್ಯಕಾರಿ ಮಂಡಳಿಗೆ ಸದಸ್ಯರನ್ನು ಆರಿಸಲಾಯಿತು.

ವಿಷಾದಕರ ನಿಧನ—'ರಾಷ್ಟ್ರಬಂಧು' ಪತ್ರಿಕೆಯ ಸಂಪಾದಕ—ವ್ಯವಸ್ಥಾಪಕರೂ ಪ್ರಸಿದ್ಧ ವಿಡ್ಕ್ರಿಕೇಟರೂ ಆದ ಶ್ರೀ ಕೆ. ರಾಮಚಂದ್ರ ಆಚಾರ್ಯರ ಪತ್ನಿ ಶ್ರೀಮತಿ ರಾಜಲಕ್ಷ್ಮಿ ಅಮ್ಮನವರು ಇದೇ ತಾ 25ರಲ್ಲು ರಾತ್ರಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಮತಿಯವರು ಮಹಿಳಾ ಸಭಾ-ಭಗಿನೀ ಸಮಾಜಗಳ ಅಧ್ಯಕ್ಷೆಯರಾಗಿದ್ದರು. ದಿವಂಗಿತೆಯು ದಿ| ಡಾ| ಯು. ರಾಮರಾಯರ ಪುತ್ರಿ, ಮದ್ರಾಸಿನ ಮಾಜಿ ಮಂತ್ರಿ ಡಾ| ಯು. ಕೃಷ್ಣ ರಾಯರ ಮತ್ತು ಮದ್ರಾಸಿನ ಸರ್ಜನ್ ಡಾ| ಯು. ಮೋಹನ ರಾಯರ ಸಹೋದರಿ. ಇವರಿಗೆ ನಾಲ್ವರು ಪುತ್ರಿಯರೂ ಮೂವರು ಪುತ್ರರೂ ಇರುವರು. ಶ್ರೀಮತಿಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಬಂಧುಗಳ ದುಃಖದಲ್ಲಿ ಸಹ ಸಂತಾಪವನ್ನು ಸೂಚಿಸುವೆವು.

ಕುದ್ರೋಳಿ ಮೊಕದ್ದಮೆಯ ತೀರ್ಪು—ಕಳೆದ ಎಪ್ರಿಲ್ ತಿಂಗಳಲ್ಲಿ ಮಂಗಳೂರಲ್ಲಿ ಹಾರಿದೀಪಿಯ ಅನುಯಾಯಿಗಳಿಗೂ ಇತರ ಕೆಲವರಿಗೂ ಉಂಟಾದ ಭಿನ್ನಾಭಿಪ್ರಾಯವು ಬಹಿರಂಗ ದ್ವೇಷಕ್ಕೆ ಕಾರಣವಾಗಿ, ತತ್ಪರಿಣಾಮವಾಗಿ ಉಂಟಾದ ಜಗಳದಲ್ಲಿ ಅಬ್ದುಲ್ ರಹಿಮಾನನೆಂಬವನ ಕೊಲೆಯಾಯಿತೆಂದು ಈ ಕೊಲೆಗೆ ಸಂಬಂಧಪಟ್ಟವರು ಬಂಧನವಾಗಿ ವಿಚಾರಣೆಯಾಗಿ ಕಳೆದ ತಾ 19ರಲ್ಲಿ ತೀರ್ಪು ಕೊಡಲಾಯಿತು. ಒಂದನೆ ಆರೋಪಿ ಹಸನಬ್ಬ ಯಾನೆ ಮೋನು ಎಂಬವನಿಗೆ ಮರಣದಂಡನೆಯನ್ನೂ ಮೊಯಿದಿನಬ್ಬ ಯಾನೆ ಗುರು ಎಂಬವನಿಗೆ ಮೂರು ವರ್ಷ ಕಠಿನ ಸಜೆಯನ್ನೂ ಸುಕೂರ್ ಯಾನೆ ಅಬ್ದುಲ್ ಸುಕೂರ್ ಎಂಬವನಿಗೆ ಮೂರು ತಿಂಗಳ ಕಠಿಣ ಸಜೆಯನ್ನೂ ವಿಧಿಸಲಾಗಿದೆ.

ಜಿಲ್ಲಾ ಮೆಡಿಕಲ್ ಎಸೋಸಿಯೇಶನ್—ವಿಶೇಷ ಸಭೆಯೊಂದು ಕಸ್ತೂರ್ಬಾ ಮೆಡಿಕಲ್ ಕಾಲೇಜು ಸ್ಥಾಪಕರಾದ ಡಾ| ಟಿ. ಮಾಧವ ಪೈಗಳನ್ನು ಅಭಿನಂದಿಸಲು ಈಚೆಗೆ ಡಾ| ಎ. ಎಫ್. ಕೊಯಿಲೊರವರ ಅಧ್ಯಕ್ಷತೆಯಲ್ಲಿ ಜರಗಿತು. ಡಾಕ್ಟರುಗಳಾದ ನಾಗಪ್ಪ ಆಳ್ವ, ನಾರಾಯಣ ರಾವ್, ಮೋರಿ ಕುಲಾಸೊ ಮತ್ತು ಶ್ರೀ. ಎಚ್. ಸರ್ವೋತ್ತಮಯ್ಯ ಎಂ. ಎಲ್. ಸಿ. ಮೊದಲಾದವರು ಡಾ| ಪೈಗಳು ಕಾಲೇಜು ಸ್ಥಾಪನೆಗೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು.

ಈ ಸಭೆಗೆ ದಯಮಾಡಿಸಿದ ಮದ್ರಾಸಿನ ಮಾಜಿ ಮಂತ್ರಿ ಡಾ| ಯು. ಕೃಷ್ಣರಾಯರು ಮಾತನಾಡುತ್ತಾ ಈ ಕಾಲೇಜು ಮುಖ್ಯಸ್ಥರುಗಳು ಇನ್ನೂ ತುಂಬ ಕೆಲಸ ಮಾಗಬೇಕು ಎಂದು ಸೂಚಿಸಿ ಮದ್ರಾಸು ಸರಕಾರವು ಈ ಕಾಲೇಜಿನ ಪ್ರಗತಿಯನ್ನು ಪೂರ್ಣ ಸಹಾನುಭೂತಿಯಿಂದ ಪರಿಶೀಲಿಸಬೇಕೆಂದರು. ಡಾ| ಪೈಗಳು ಉತ್ತರ ನೀಡುತ್ತಾ, ಪ್ರಿನ್ಸಿಪಲ್ ಆಧ್ಯಾಪಕ ವರ್ಗಕ್ಕೆ ಯುಕ್ತ ವೇತನವೂ, ಉಪಕರಣಗಳು ಮತ್ತು ಕಟ್ಟಡಗಳನ್ನು ಕಾಲೇಜು ಈಗಾಗಲೇ ಪಡೆದಿದೆ ಎಂದು ತಿಳಿಸಿ ಈ ಸಂಸ್ಥೆಗೆ ನ್ಯಾಯವಾಗಿ ಕೊಡಬೇಕಾದ ಹಿಸ್ಸಾ ಗ್ರಾಂಟನ್ನು ಕೊಡುವರೆಂದು ತಾನು ನಿರೀಕ್ಷಿಸುವುದಾಗಿ ಹೇಳಿದರು. ಡಾ| ಬಿ ಆರ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

"ನಿರ್ದಿಷ್ಟ ಆಸಾಮಿಗಳ ಮೇಲೆ (ಗೆಲಸಿಗೆ ರೂ. 3/ ರಂತೆ) ಸಂಕ ಹೇರುವುದು ನ್ಯಾಯಬಾಹಿರವೆಂದು ಹೈಕೋರ್ಟು ತೀರ್ಪಿತ್ತಿರುವದರಿಂದ, ಇನ್ನು ಆ ಸುಂಕದ ಬಿಲ್ಲುಗಳನ್ನು ಬಾಬ್ತುಗಳಿಗೆ ಹಚ್ಚಲು ನಿರ್ಬಂಧಿಸಬಾರದೆಂದೂ, ಹಚ್ಚದೆ ಉಳಿದಿರುವ ಬಿಲ್ಲುಗಳ ಮೊಬಲಗನ್ನು ಹಿಂದೆ ಪಡೆಯಬಹುದೆಂದೂ ಸರಕಾರವು ಪಂಚಾಯತು ಅಧಿಕಾರಿಗಳಿಗೆ ತಿಳಿಸಿಯದೆ. ಎಲ್ಲಿಯಾದರೂ ವ್ಯಕ್ತಿಗೆ ಅಧಿಕಾರಿಗಳು ಉಪದ್ರವ ಕೊಟ್ಟರೆ, ಆ ವ್ಯಕ್ತಿಯು ಕೂಡಲೆ ಕಾರ್ಯದರ್ಶಿ ಸಮಿತಿ, ನಾಗರಿಕ ಪ್ರಾದೇಶಿಕ, ಮಂಗಳೂರು.] ಅವರಿಗೆ ತಿಳಿಸಬೇಕಾಗಿಯೂ, III A ಬೈಸನ್ನು ದಾರಿಲ್ಲ ಅವರ ತಮ್ಮ ಹೆಸರನ್ನು (ಧರ್ಮಾರ್ಥ) ಸದ್ರಿ ಕಾರ್ಯಕಾರಿ ಸಮಿತಿಯಲ್ಲಿ ರಜಿಷ್ಟ್ರ ಮಾಡಿಸಿಕೊಳ್ಳಬೇಕಾಗಿಯೂ ಕಾರ್ಯದರ್ಶಿಯವರು ತಿಳಿಸುತ್ತಾರೆ". .

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ.

S. E. A. 175/53 in S. E. P. 423/52.

Mrs. ಪ್ಲೋರಿನಾ ರೇಗೋ ಯಾನೆ ಕಮಲಾಸೋ — ಅರ್ಜಿದಾರಳು

ಮತ್ತು

M. ಬಾಸ್ಕರ — ರೆಸ್ಪಾಂಡೆಂಟ

ಈ ಮೂಲಕ್ಕೆ ಪ್ರತಿ ರೆಸ್ಪಾಂಡೆಂಟ M. ಬಾಸ್ಕರನವರಿಗೆ ತಿಳಿಸುವದೇನಂದ್ರೆ

ಮೇಲ್ಕಂಡ ಅರ್ಜಿದಾರಳು ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ ದಾಖಲ್ಲ ಮಾಡಿದ S. E. P. No 423/52ರಲ್ಲಿ ಮತ್ತು S. E. P. 135/52ರಲ್ಲಿ ಕೂಡಾ ಆದ ಜಪ್ತಿ ಹುಕುಂ ಪ್ರಕಾರ ರೆಸ್ಪಾಂಡೆಂಟ್ ಬಾಸ್ಕರನವರ ಬಾಬ್ತು ಚರಸೊತ್ತುಗಳು ಜಪ್ತಾಗಿದ್ದನ್ನು ಅರ್ಜಿದಾರಳ ಡಿಕ್ರಿ ಹಣಕ್ಕೆ ಬೇಕಾಗುವಷ್ಟು ಮಾತ್ರ ಲೇಲಂ ಹಡ್ಸಿ ಅರ್ಜಿದಾರಳ ಡಿಕ್ರಿ ಹಣವು ಪೂರ್ಣ ಸಂದಾಯವಾಗಿ ಯಿನ್ನು ಅನೇಕ ಸೊತ್ತುಗಳು ಬಾಕಿ ಉಳಿದಿರುತ್ತವೆ. ಸದ್ರಿ ಸೊತ್ತುಗಳನ್ನು ಅರ್ಜಿದಾರಳ ಜ್ಯಾಮಿನಾದಾರರಿಗೆ ಕೊಡಬೇಕೆಂದು ಸದ್ರಿ ಯಾರೂ ಕೊಂಡು ಹೋಗದೆ ಯಿರುವದ್ರಿಂದ ಅದ್ಕೆ ನಿವೃತ್ತಿ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲ್ಲ ಮಾಡಿದ S. E. A. 175/53ನೇ ಅರ್ಜಿಯನ್ನು ತಾರೀಕು 20-10-1953ಕ್ಕೆ ತನ್ಕಿಗೆ ಯಿಟ್ಟಿರುತ್ತದೆ. ಸದ್ರಿ ದಿವ್ಸ ಸದ್ರಿ ರೆಸ್ಪಾಂಡೆಂಟನು ಖುದ್ದಾಗಲೀ ವ ವಕೀಲ್ ದ್ವಾರವಾಗಲೀ ಹಾಜ್ರಾಗಿ ತಕ್ಕ ಜವಾಬು ಕೊಡುವರೇ ವ ಸೊತ್ತನ್ನು ವಾಪಾಸು ಪಡಿಯುವರೇ ತಪ್ಪಿದ್ದಲ್ಲಿ ಕೋರ್ಟಿನವರು ಯೇಕ ಪಕ್ಷವಾಗಿ ಕೋರ್ಟಿಗೆ ಯುಕ್ತ ಕಂಡ ರೀತಿಯಲ್ಲಿ ಸದ್ರಿ ಸೊತ್ತುಗಳನ್ನು ಕುರಿತಾಗ್ ಸದ್ರಿವರೇ ಹುಕುಂ ಕೊಡಲಾಗುವದು ತಿಳಿದಿರುವದು.

M. A. Shastri

Advocate for Petr.

ಮಂಗ್ಳೂರು 21-9-53

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ ಬಹಿಷ್ಟೆ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿವಡೆದ ಸಂ ಅಂಬಲೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomach pain) ನಿರ್ಮೂಲಿಸಿ, ಬಹಿಷ್ಟೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭ ಪತನವನ್ನೂ ನಿವಾರಿಸಿ, ಬಂಜೆತನ ವನ್ನು ಕೊನೆಗಾಣಿಸಿ ಸಂತಾನ ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅಶಕ್ತತೆಯನ್ನು ಸಮೂಲವಾಗಿ ನಾಶಪಡಿಸಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:—2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ, ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ ಸಂಬಂಧಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ನಾರ್ತ್ ಕ್ರಾಸ್, ಮೈಸೂರು.(South India)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 330/53

ನೇಯಪ್ಪ — ವಾದಿ.

1 ಸಾಂತಪ್ಪ ಗೌಡ. 2 ಕ್ಯಾರಿಸಮ್ಮ ರೈ. — ಪ್ರತಿವಾದಿರು.

1ನೇ ಪ್ರತಿವಾದಿ:—ಸಾಂತಪ್ಪ ಗೌಡ, ವಾಢ್ಯಪ್ಪ ಗೌಡರ ಮಗ ಭಾಗದ ಯಜಮಾನ. ಮುಂಡೂರು ಗ್ರಾಮ ತಳ್ಪುಜೆ ಪುತ್ತೂರು ತಾಲ್ಕು, P. O. ಬೆಳ್ಳಾರೆ. — ರೀಗೆ.

ವಾದಿಯು ತನಗೆ ಬರ ಆದಾರ್ಥ ಬಗ್ಗೆ ರೂಪಾಯಿ 253-13 0ಕ್ಕೆ ಮಾಡಿದ ಮೇಲಿನ ದಾವೆಯು ತಾರೀಕು 6-10 53ಕ್ಕೆ ಇಟ್ಟಿರುವದ್ರಿಂದ ನಿಮ್ಮ ಆಕ್ಷೇಪ ಇದ್ದರೆ ಆ ದಿನ ಬೆಳಿಗ್ಗೆ ಘಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ ಉಪಸ್ಥಿತರಾಗಿದ್ದು ತಿಳಿಸ್ಬೇಕು. ತೀರ್ಮಾನ ವಾದೀತು ಎಂಬ ಈ ಮೂಲಕ ತಿಳಿಸುವದೆ.

(sd) **H. Pundarika Bhat.**

Vakil for Plff.

ಪುತ್ತೂರು. 22-9-53.

ಸಾಲಿಗ್ರಾಮ—ಹಳೆವಿದ್ಯಾರ್ಥಿ ಸಂಘ, ಕಾರ್ಕಡ ಇದರ ನೇತೃತ್ವದಲ್ಲಿ ಕಳೆದ ತಾ 20ರಲ್ಲು ಮದ್ರಾಸು ಸರಕಾರದ ನೂತನ ಪ್ರಾಥಮಿಕ ವಿದ್ಯಾಭ್ಯಾಸ ಯೋಜನೆ ಕುರಿತು 'ಅಭ್ಯಾಸಗೋಷ್ಠಿ'ಯೊಂದು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಹಂದೆಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಪಿ. ಯಾನ್ ಭೋಜರಾಯರು ಗೋಷ್ಠಿಯ ಉದ್ಘಾಟನೆ ಮಾಡಿದರು. ಶ್ರೀಗಳಾದ ಸುಬ್ರಾಯ ಉರಾಳ, ನೆಂಕಟ್ರಮಣ ಚಡಗ, ಸುಬ್ಬಣ್ಣ ಹೆಗ್ಡೆ, ರಾಮಕೃಷ್ಣ ಅಡಿಗ, ಎಮ್. ಪರಮೇಶ್ವರಯ್ಯ, ರಾಮಕೃಷ್ಣ ಉಡುಪ ಮೊದಲಾದವರು ಮಾತನಾಡಿದರು. ಸಭಾಧ್ಯಕ್ಷರು ಹೊಸ ವಿದ್ಯಾಯೋಜನೆಯನ್ನು ಸಕಾರಣವಾಗಿ ಸಮರ್ಥಿಸಿ ಸರ್ವರ ಸಹಕಾರವನ್ನು ಕೋರಿದರು.

ಮಂಗಲಪಾಡಿ—ದೇವಾಂಗ ನಗರ ಸಂಯುಕ್ತ ಸಭೆಯು ಕಳೆದ ತಾ 20ರಲ್ಲು ಶ್ರೀ ಚೀರುಂಬ ಭಗವತಿ ಕ್ಷೇತ್ರದಲ್ಲಿ ಶ್ರೀ ಮಂಜೇಶ್ವರ ಹರಿದಾಸ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಕಾಸರಗೋಡು, ಕುಂಬಳೆ ಕಾರಡ್ಕ, ಮಂಜೇಶ್ವರ, ಪಣಂಬೂರು ಕ್ಷೇತ್ರಗಳ ಪ್ರತಿನಿಧಿಗಳು ಬಂದಿದ್ದರು. ವರದಿ ವಾಚನ, ಲೆಕ್ಕ ಪತ್ರಗಳ ಪರಿಶೀಲನೆಯಾದ ಬಳಿಕ ಕಾರ್ಯಕಾರೀ ಮಂಡಳಿಯ ರಚನೆಯಾಗಿ ಶ್ರೀ ಎಮ್. ತಿಮ್ಮಪ್ಪನವರು ಅಧ್ಯಕ್ಷರಾಗಿಯೂ ಶ್ರೀ ರಾಮ ತಂತ್ರಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಅಂಬು ಮಾಸ್ತರರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಸಾಲಿಕೇರಿ— ಉಡುಪಿ ತಾಲೂಕು ವಾರಂಬಳ್ಳಿ ಪಂಚಾಯತ ಬೋರ್ಡಿನಲ್ಲಿ ಸಾಕಷ್ಟು ಹಣವಿದ್ದಾಗ್ಯೂ ಗ್ರಾಮದ ಜನ ಹಿತೈಷಿ ಕೆಲಸಗಳಾಗಲೀ ಸಾರ್ವಜನಿಕ ಕೆಲಸಗಳಾಗಲೀ ಬೋರ್ಡಿನ ಕಡೆಯಿಂದ ನಡೆಯುವುದಿಲ್ಲವೆಂದು ಸುಮಾರು 500 ಜನರು ಸಹಿ ಮಾಡಿದ ಒಂದು ಮನವಿಯನ್ನು ಇದೇ ತಾ. 14ರಲ್ಲು ಜಿಲ್ಲಾ ಪಂಚಾಯತ ಆಫೀಸರಿಗೂ ಸಂಬಂಧಪಟ್ಟ ಇತರ ಮೇಲಾಫೀಸರರಿಗೂ ಶ್ರೀ. ಯು. ಜಗನ್ನಾಥ ಸೆಟ್ಟರ ಮುಂದಾಳುತ್ವದಲ್ಲಿ ಕಳುಹಿಸಿ ಕೊಡಲಾಗಿದೆ.

ಕಟಪಾಡಿ—ಸ್ಥಳೀಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸ್ಥಾಪಕರ ದಿನಾಚರಣೆಯು ತಾ 23-9-53 ರಂದು ಶ್ರೀ. ಎಮ್. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ದೇವತಾ ಪ್ರಾರ್ಥನೆ, ಶಾಲೆಯ ಪ್ರಗತಿಪರ ಸಂಕ್ಷಿಪ್ತ ವರದಿವಾಚನವಾದ ಬಳಿಕ, ಶ್ರೀ. ವಾಸುದೇವ ಕಾಮತ್, ಕೆ. ಸುಬ್ಬರಾವ್, ಕೆ. ಗಣಪತಿ ಶೆಣೈಯವರು ಶಾಲೆಯ ಏಳಿಗೆಗಾಗಿ ಶಾಲಾ ಸ್ಥಾಪಕರಲ್ಲಿ ಅಗ್ರಗಣ್ಯರಾದ ಪಾಂಗಾಳ ಶ್ರೀನಿವಾಸ ನಾಯಕರ ಗುಣಕಥನವನ್ನು ಮಾಡಿ ಅವರ ಸಾರ್ವಜನಿಕ ಸೇವೆಯನ್ನು ಕೊಂಡಾಡಿದರು. ಈ ಸಂದರ್ಭಕ್ಕಾಗಿಯೇ ಏರ್ಪಡಿಸಲಾದ ಭಾಷಣ ಸ್ಪರ್ಧೆಯಲ್ಲಿ ಗೆದ್ದ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಶಾಲಾ ಆಡಳಿತ ಸಂಘದ ವಿವಿಧ ಚಟುವಟಿಕೆಗಳನ್ನು, ಶಾಲೆಯ ಹಿಂದಿನ ವ ಇಂದಿನ ಪರಿಸ್ಥಿತಿಯನ್ನೂ ಸಂಪೋಲಿಸಿ, ಶಾಲಾ ಸ್ಥಾಪಕರ ಅಂದಿನ ಪ್ರಯತ್ನಗಳಿಂದಾಗಿ ಶಾಲೆಯು ಇಷ್ಟು ಉನ್ನತ ಸ್ಥಿತಿಗೆ ಬರಲು ಕಾರಣವಾಯಿತೆಂದರು. ಶಾಲಾ ಬಾಲಕ ಬಾಲಿಕೆಯರಿಂದ ವಿವಿಧ ವಿನೋದಾವಳಿಗಳ ಪ್ರದರ್ಶನವಾಗಿ ಶಾಲಾ ಮುಖ್ಯ ಅಧ್ಯಾಪಕ ಶ್ರೀ. ಯು ಆರ್. ಮಯ್ಯರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಸೂಡ—ಈ ಗ್ರಾಮದಲ್ಲೊಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆಯಲು ಕಟಪಾಡಿ ಶ್ರೀ ವೆಂಕಟರಮಣ ಸ್ವಾಮಿ ವಿದ್ಯಾವರ್ಧಕ ಸಂಘದವರಿಗೆ ವಿದ್ಯಾ ಇಲಾಖೆಯಿಂದ ಅನುಮತಿ ದೊರಕಿರುವುದೆಂದೂ, ಶಾಲೆಯು ಮುಂಬರುವ ದಸರಾ ದಿನಗಳಲ್ಲಿ ತೆರೆಯಲ್ಪಡುವುದೆಂದೂ ಸಂಘದ ಕಾರ್ಯದರ್ಶಿ ಶ್ರೀ. ಪಿ. ರಾಮದಾಸ ನಾಯಕರು ತಿಳಿಸುತ್ತಾರೆ.

ಹೆಬ್ರಿ—ಸಮಾಜ ವಿಕಾಸ ಯೋಜನೆಯನ್ವಯ ಇತ್ತೀಚೆಗೆ ತೆರೆಯಲ್ಪಟ್ಟ ಸ್ಥಳೀಯ ಆಸ್ಪತ್ರೆಯಲ್ಲಿ ಕಳೆದ ತಾ. 24ರಲ್ಲು ಮಿಸ್ ಲಲಿತಾ, ಎಮ್. ಬಿ ಬಿ. ಎಸ್. ಅವರು ಚಾರ್ಜು ವಹಿಸಿಕೊಂಡಂದಿನಿಂದ ರೋಗಿಗಳ ಸಂಖ್ಯೆ ದಿನೇ ದಿನೇ ಏರುತ್ತ ಈಗ 120ರ ವರೆಗೂ ಬಂದಿರುವುದಾಗಿ ತಿಳಿದುಬರುತ್ತದೆ. ಉತ್ಸಾಹಿ ಮತ್ತು ದಕ್ಷರಾದ ಲೇಡಿ ಡಾಕ್ಟರರು ಇಷ್ಟರಲ್ಲೇ ಜನಪ್ರಿಯತೆ ಗಳಿಸಿರುವರಲ್ಲದೆ ಸುತ್ತುಮುತ್ತಣ ಹಳ್ಳಿಗರಿಗೆ ಈ ಆಸ್ಪತ್ರೆಯಿಂದ ತುಂಬಾ ಪ್ರಯೋಜನ ಸಿಗುವಂತಾಗಿದೆ. ತಾ. 27ರಲ್ಲು ಜಿಲ್ಲಾ ಮೆಡಿಕಲ್ ಆಫೀಸರ್, ಜಿಲ್ಲಾ ಹೆಲ್ತ್ ಆಫೀಸರ್, ಕಮ್ಯೂನಿಟಿ ಪ್ರೊಜೆಕ್ಟ್ ಇಂಜಿನಿಯರ್ ಮೊದಲಾದವರು ಹೆಬ್ರಿಗೆ ಬಂದು ಹೊಸತಾಗಿ ಕಟ್ಟಿಸಲಿರುವ ಆಸ್ಪತ್ರೆ ಕಟ್ಟಡ ಸ್ಥಳ ತನಿಖೆ ಮಾಡಿರುವರು ಕಟ್ಟಡವು ಬೇಗನೆ ಆಗುವಂತಹ ತೆ ಆರಂಭಿಸುವರೊಡನೆ ಊರವರೂ ಸಹಕರಿಸುವರೆಂದು ಆಶಿಸಲಾಗಿದೆ.

ಸುರತ್ಕಲ್, ಕುಳ್ಳೈ—ಸ್ಥಳೀಯ ಕಲಾರಂಗದ ಆಶ್ರಯದಲ್ಲಿ ಪ್ರಗತಿಶೀಲ ಸಾಹಿತ್ಯ ಮತ್ತು ಚಳವಳಿದ ಕುರಿತು ಚರ್ಚಾ ಸಭೆಯೊಂದು ಶ್ರೀ. ಬಿ. ಪದ್ಮನಾಭ ಸೋಮಯಾಜಿಗಳ ಹಿಂತನದಲ್ಲಿ ನೆರವೇರಿ ಹಲವರ ಭಾಷಣಗಳಾದುವು.

ಗುರುಪುರ—ಸ್ಥಳೀಯ ಅಧ್ಯಾಪಕ ವೃಂದದವರಿಂದ ರೂಪಾಯಿ 25-15-0 ಮತ್ತು ಅಮೃತೇಶ್ವರ ಯಕ್ಷಗಾನ ಸೇವಾ ಸಂಘದವರಿಂದ ರೂ 25/-ಸಂಗ್ರಹವಾಗಿ ಗೋದಾವರಿ ನೆರೆ ಪರಿಹಾರ ನಿಧಿಗೆ ಕಳುಹಲಾಗಿದೆ ಎಂದು ತಿಳಿದು ಬರುತ್ತದೆ.

ಪೆಡ್ಲೂರು—ಸ್ಥಳೀಯ ಕಲಾ ಮಂಡಳಿಯ ಹುಟ್ಟು ಹಬ್ಬವು ಇದೇ ತಾ 2ರಲ್ಲು ಶ್ರೀ. ಕೆ. ಬಿ. ರಾಮಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕುಂದಾಪುರ—(ಗುಡ್ಡೆಯಂಗಡಿ) ಕಳೆದ ತಾ 16ರಲ್ಲು ಪಡುಕೋಣೆ ಸೈಂಟ್ ಅಂತೋನಿ ಹಾ| ಎ| ಶಾಲಾ ಸಹಾಯಾರ್ಥವಾಗಿ ಶ್ರೀ ನೈಲಾಡಿ ಸೂರಪ್ಪ ಸೆಟ್ಟರ ನಾಯಕತ್ವದಲ್ಲಿ, ನಾಲ್ಕು ಮೇಳಗಳ ಪ್ರಮುಖ ವೇಷಧಾರಿಗಳ ಕೂಡುವಿಕೆಯಿಂದ 'ನಳದಮಯಂತಿ' ಪ್ರಸಂಗವನ್ನೊಳಗೊಂಡ ಬಯಲಾಟವು ವಿಜೃಂಭಣೆಯಿಂದ ಜರಗಿತು.

ನಿಡಂಬೂರು—ನಮ್ಮ ಊರಿನ ಜೀವಜ್ಯೋತಿಗಳಾದ ಶ್ರೀ ಕಡೆಕಾರು ರಾಜಗೋಪಾಲಕೃಷ್ಣ ರಾಯರು ದಿವಂಗತರಾದುದಕ್ಕೆ ಈ ಪಂಚಾಯತ್ ಬೋರ್ಡು ಅತ್ಯಂತ ದುಃಖ ಪಡುತ್ತದೆ. ಈ ಬೋರ್ಡು ೧೯೪೦ರಲ್ಲಿ ಸ್ಥಾಪನೆಯಾಗಲು ಶ್ರೀಯುತರ ನಿರಂತರ ಪರಿಶ್ರಮವೇ ಕಾರಣವಾಗಿದ್ದು ಅಂದಿನಿಂದ ೧೯೫೨ರ ವರೆಗೂ ಅದರ ಅಧ್ಯಕ್ಷರಾಗಿದ್ದುಕೊಂಡು ಈ ಭಾಗದ ಸರ್ವಾಂಗೀಣ ಪ್ರಗತಿಗೆ ದುಡಿದಿರುವುದನ್ನು ಈ ಬೋರ್ಡು ಕೃತಜ್ಞತೆಯಿಂದ ಸ್ಮರಿಸುತ್ತದೆ. ತನ್ನ ಶುಚಿಯಾದ ಜೀವನದಿಂದಲೂ, ಕನ್ನಡ ನಾಡು ನುಡಿಗಳ ಸೇವೆಯ ತಪಸ್ಸಿನಿಂದಲೂ ಕರ್ನಾಟಕದಲ್ಲೆಲ್ಲಾ ಪ್ರಖ್ಯಾತರಾಗಿದ್ದ ಶ್ರೀಯುತರು ನಮ್ಮ ಗ್ರಾಮಕ್ಕೆ ಒಂದು ತಿಲಕಪ್ರಾಯರಾಗಿದ್ದರು. ಶ್ರೀಯುತರ ಚಿರಂಜೀವಿಗಳು ತಮ್ಮ ತೀರ್ಥರೂಪರ ಆದರ್ಶಗಳನ್ನೇ ಅನುಸರಿಸಿ ಗ್ರಾಮದ ಮತ್ತು ಗ್ರಾಮಸ್ಥರ ಅಭ್ಯುದಯ ಕಾರ್ಯದಲ್ಲಿ ನೆರವನ್ನು ನೀಡಿಯಾರೆಂದು ಈ ಬೋರ್ಡು ನಂಬುತ್ತದೆ. ಮೃತರಿಗೆ ಈ ಬೋರ್ಡು ತನ್ನ ಅಂತಿಮ ಗೌರವಗಳನ್ನು ಸಮರ್ಪಿಸುವುದಲ್ಲದೆ ಶ್ರೀಯುತರ ಕುಟುಂಬದ ಅಪಾರ ದುಃಖದಲ್ಲಿ ಈ ಬೋರ್ಡು ಪಾಲುಗೊಂಡಿದೆ. ಎಂದು ಪಂಚಾಯತ ಬೋರ್ಡಿನಲ್ಲಿ ಠರಾವು ಮಾಡಿರುವುದಾಗಿ ಈಗಿನ ಅಧ್ಯಕ್ಷ ಶ್ರೀ. ಕೆ. ಸದಾಶಿವ ಹೆಗ್ಡೆಯರು ತಿಳಿಸುತ್ತಾರೆ.

ಬೆಂಗಳೂರು

ಸಂತಾಪ ಸೂಚಕ ಸಭೆ— ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಕಳೆದ ತಾ 24ರಲ್ಲು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಎಮ್. ಆರ್. ಶ್ರೀನಿವಾಸಮೂರ್ತಿಗಳ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಯಿತು ಎರಡು ನಿಮಿಷ ಕಾಲ ಮೌನಪ್ರಾರ್ಥನೆ ನಡೆಯಿತು.

The most powerful medicine for
ASTHAMA.
(Registered and Genuine)
CHITRAKOT
ASTHAMA-SPECIFIC.
Hundred years fame to cure the dreaded disease permanently only by one dose to be taken on Sharadpurnima (full moon) dated 22-10-53
Apply atonce in English
Kr. BADRI NATH SINGH,
Shubh Chintak Karyalaya,
CHITRAKOT, Dist. Banda, U. P.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 226/51 ಕ್ರಮ ಅಪ್ಲಿಕೇಶನ್ 411/53

ಸಂತಾನ ಲಸ್ರಾದ ಅರ್ಜಿದಾರ
ಮತ್ತು
ಬಿ. ಡಿ. ಲುವಿಸ್ ಕೂಡಾ 18 ಜನರು ಎದುರು-

1ನೇ ಎದುರು ಜಿ. ಬಿ. ಲುವಿಸ್-ಮಾಸೇಲ ಸಾಲೋದರ ಲುವಿಸರ ಮಗ. ಉಡ್ಪಿ ತಾಲೂಕು ಮೂಡು ತೋನ್ಸೆ

2ನೇ ಎದುರಿ ಬಚ್ಚ ಮುರಕಾಲ-ಗುರ್ವ ಮುರಕಾಲನ ಆಳಿಯ ಉಡ್ಪಿ ತಾಲೂಕು ಬಾರಕೂರು ಗ್ರಾಮ

11ನೇ ಎದುರಿ ಅಕ್ಕಮ್ಮ ಶೆಡ್ತಿ-ಭಾಗಿ ಶೆಟ್ಟಿರ ಮಗಳು. ಉಡ್ಪಿ ತಾಲ್ಲೂಕು ಪಡು ತೋನ್ಸೆ ಗ್ರಾಮ

ಇವರುಗಳಿಗೆ

ಮೇಲ್ಕಂಡ ದಾವೆಯಲ್ಲಿ ಅರ್ಜಿದಾರರ ಗುಣಕ್ಕೆ ಕೆಟ್ಟ ಡಿಕ್ರೀಗೆ ಕಾರಣವಾದ ಸ್ಥಿರಾಸ್ತಿ ಮಾರಾಟದ ಕುರಿತು ಶರ್ತಗಳನ್ನು ನಿರ್ಣಯಿಸುವರೆ ಸದ್ರಿ ಅಪ್ಲಿಕೇಶನ್ನು ತಾ 23—10—53ಕ್ಕೆ ಇಟ್ಟಿರುವುದರಿಂದ, ಸದ್ರಿ ದಿನ್ನ ಹಗಲು ಘಂಟೆ 10-30ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಬೇಕಾಗಿಯೂ, ಆ ಕುರಿತು ನಿಮ್ಮಗಳ ಆಕ್ಷೇಪಗಳಿದ್ದರೆ, ಸದ್ರಿಯವುಗಳನ್ನು ಸದ್ರಿ ದಿನ್ನ ಹಾಜೀರು ಮಾಡಬೇಕಾಗಿಯೂ ಈ ಮೂಲಕ ತಿಳಿಸೋಣಾಗುತ್ತದೆ

(By order of court)
K. Vittal Nayak
Vakil for Petitioner
Udipi 28—9—53

In the Court of the Subordinate Judge of South Kanara

O. S. No 211 of 1953

Between

H. P. P. Rodrigues .. .. Plaintiff
and
B. Dayananda Baliga B Raghunatha Baliga
Baibi Satyendra Saivaram Shilakanthi Minors by guardian ad litem their father the Ist Defendant—Defendants

To

B. Raghunatha Baliga, son of B. Srinivasa Baliga, Merchant residing at Falneer, Mangalore Town.

Please take notice that the above Partition suit stands posted to 23-10-1953 at 11 A. M. in the above court for your appearance on your failure to appear the suit will be decided Exparte.

L. C. Pais, B. A. B. L.,
&
C. I. J. Pais, B. A. B. L.,
Vakils for the Plaintiff
Mangalore
26-9-1953

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ
1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್
ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8
} ವರ್ಷ ಒಂದರ ರೂ. 1000ಕ್ಕೆ
(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)
ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.
ಅಥವಾ ಶಾಖಾ ಕಚೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು
The Bombay Life Assurance Co., Ltd., Bombay

ನಂಬಿಕೆಗೆ ಅರ್ಹತೆ
ಅತ್ಯುತ್ತಮ ಬೀಡಿಗಳು
ನೀವು ಬಯಸುವ ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್. ಆರ್.
ಬೀಡಿಗಳಲ್ಲಿ ಇರುವವು, ಎಂದು ಖಚಿತವಾಗಿ ಹೇಳುತ್ತೇವೆ
ಎಲ್ಲಾ ಅಂಗಡಿಗಳಲ್ಲಿಯೂ ದೊರಕಲ್ಪಡುತ್ತವೆ.
S. R. Beedi Works UDIPI S. K.

Our Bombay Stockists:-
1) V. N. Shenoy, Bombay 12.
2) N. R Kamath, General Merchant, Dahanu Road, W. Rly.

ಮಂಗಳೂರು

ಗ್ರಾಮಸೇವೆ—ಇದೇ ತಾ 26ರಲ್ಲಿ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ 30 ವಿದ್ಯಾರ್ಥಿಗಳು ಕಾವೂರಿನಿಂದ ಕೂಳೂರಿಗೆ ಹೋಗುವ ಮಾರ್ಗದಲ್ಲಿ ಮೂರುವರೆ ಗಂಟೆಯ ಕೆಲಸ ಮಾಡಿದರು, ಮಂಗಳೂರು ಅಸಿಸ್ಟೆಂಟ್ ಪ್ರೊಜೆಕ್ಟ್ ಅಧಿಕಾರರು ವಿದ್ಯಾರ್ಥಿಗಳ ಕಾರ್ಯವನ್ನು ಪ್ರಶಂಸಿಸಿದರು.

ಚರ್ಚಾ ಕೂಟ—ಜನಪದ ಕಲಾ ಮಂಡಳಿಯ ಆಶ್ರಯದಲ್ಲಿ ಹಂಪನ ಕಟ್ಟೆ ಸಿಟಿಜನ್ಸ್ ಲೈಬ್ರೆರಿಯಲ್ಲಿ "ಸಾಹಿತ್ಯ ಮತ್ತು ಅಶ್ಲೀಲ" ಎಂಬ ವಿಷಯದಲ್ಲಿ ಚರ್ಚಾಕೂಟವೊಂದು ಶ್ರೀ ಎಮ್. ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರು ಈ ಕೂಟದಲ್ಲಿ ಭಾಗವಹಿಸಿದ್ದರು. ಶ್ರೀ ತಿಮ್ಮಪ್ಪ ಭಂಡಾರಿಗಳು ಧನ್ಯವಾದಗಳನ್ನರ್ಪಿಸಿದರು.

ನಗರ ಸಭೆಯು—ತಾ 26ರಲ್ಲಿ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು, ಸಭಾರಂಭದಲ್ಲಿ ಪ್ರಶ್ನೋತ್ತರಗಳಾದುವು. ಮಣ್ಣಗುಡ್ಡೆ ಎಲಿಮೆಂಟರಿ ಶಾಲೆಯನ್ನು ಮತ್ತು ಬೋಳಾರ ಮುನಿಸಿಪಲ್ ಎಲಿಮೆಂಟರಿ ಶಾಲೆಯನ್ನು ಮುಂದಿನ ಶಾಲಾ ವರ್ಷದಿಂದ ಹಾಯರ್ ಎಲಿಮೆಂಟರಿ ಶಾಲೆಗಳನ್ನಾಗಿ ಮಾರ್ಪಡಿಸುವುದೆಂದಾಯಿತು. ಶ್ರೀಗಳಾದ ಎಮ್. ರಮಾನಾಥ ಮತ್ತು ವಾಮನ ಕೊಡಿಯಾಲ ಬೈಲರನ್ನು ಅಧಿಕ ಸಮಿತಿ ಮತ್ತು ಲ್ಯಾಟಿಂಗ್ ಕಮಿಟಿಗೂ, ಶ್ರೀ ದಿ. ಕೊರಗಪ್ಪ ರೈಗಳನ್ನು ಕಾಯಿದೆ ಸಮಿತಿಗೂ ಚುನಾಯಿಸಲಾಯಿತು.

ಸಣ್ಣ ಬಂದರಗಳ ಅಭಿವೃದ್ಧಿಗಾಗಿ ಭಾರತ ಸರಕಾರದವರು ತೆಗೆದಿಟ್ಟ ಹನ್ನೊಂದು ಲಕ್ಷ ರೂಪಾಯಿಗಳಿಂದ ಮಂಗಳೂರು ಬಂದರದ ಅಭಿವೃದ್ಧಿಗಾಗಿ ಅದಷ್ಟು ಹೆಚ್ಚು ಹಣ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಜಿಲ್ಲಾ ಹೆಂಗಸರ ಕೇಂದ್ರಕ್ಕೆ ಡಾ। ಕೆ. ಆರ್. ಕಿಣಿಯವರಿಂದ ಮತ್ತು ಡಾ। ಎಮ್. ಸಿ. ಶಾಸ್ತ್ರಿಗಳಿಂದ ದಾನವಾಗಿ ಕೊಡಲಾದ ಕೆಲವು ಶಸ್ತ್ರ ಸಲಕರಣೆ ಮತ್ತು ಔಷಧಗಳನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸಲಾಯಿತು. ಸಂಯುಕ್ತ ಕರ್ನಾಟಕ ಪ್ರಾಂತ ನಿರ್ಮಾಣದ ವಿಚಾರದಲ್ಲಿ ಶ್ರೀ ವಾಮನ ಕೊಡಿಯಾಲಬೈಲು ಮತ್ತು ಶ್ರೀ ಎಮ್. ರಮಾನಾಥರು ಮಂಡಿಸಿದ ನಿರ್ಣಯಗಳು ಮುಂದಿನ ಸಭೆಯ ತೀರ್ಮಾನಕ್ಕೆ ಬಾಕಿ ಇಡಲಾಯಿತು.

ಪುಣ್ಯ ದಿನಾಚರಣೆ—ಕೊಡಿಯಾಲಬೈಲಿನ ಬ್ರಹ್ಮಮಂದಿರ ಶ್ರೀ ರಾಜಾರಾಮ ಮೋಹನ ರೋಯ್‌ರ ಇವರ 120ನೇ ಪುಣ್ಯದಿನವು ತಾ 27ರಲ್ಲಿ ಸಂಜೆ ಶ್ರೀ ಎಸ್. ಯು. ಪರಶುರಾಮ ನಾಯರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ನರಸಪ್ಪಯ್ಯನವರು ಸಪ್ರಿಗತ ಭಾಷಣ ಮಾಡಿದರು. ಕುಮಾರಿ ಉಮಾ ದೇವಿ ಕಜೆಕಾರ್, ಶ್ರೀಗಳಾದ ಯು. ಮಾರುತಿ ರಾವ್, ಬಿ. ಕೆರಿಯಾರು ಮೊದಲಾದವರು ರಾಜಾರಾಮ ಮೋಹನ ರೋಯ್‌ರಗಳು ದೇಶಕ್ಕೆ ಸಲ್ಲಿಸಿದ ಸೇವೆಯನ್ನೆತ್ತಿ ಭಾಷಣವಿತ್ತರು.

ದ. ಕ. ಜಿಲ್ಲಾ ರೂರಲ್ ವೆಲ್‌ಫೇರ್ ಕಮಿಟಿಯ ಸಭೆಯು—ತಾ 23ರಲ್ಲಿ ಪೈವಳಿಕೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಮ್ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಆಗೋಸ್ತು ತಿಂಗಳಲ್ಲಿ ಆದ ಕಾರ್ಯ ಕಲಾಪಗಳ ವರದಿಯನ್ನು ಸಂಬಂಧ ಪಟ್ಟ ಇಲಾಖೆ ಅಧಿಕಾರಿಗಳು ಓದಿದರು. ಪೈವಳಿಕೆ ಗ್ರಾಮ ಸೇವಾ ಸಂಘವು ಜಿಲ್ಲಾ ಕಲೆಕ್ಟರರಿಗೊಂದು ಬಿನ್ನವತ್ತಳೆಯನ್ನರ್ಪಿಸಿ ಹ್ಯಾಸ್ಕೂಲು ಬೇಡಿಕೆಯನ್ನು ಸೂಚಿಸಿತು. ಕೃಷಿ ಮತ್ತು ಗುಡಿ ಕೈಗಾರಿಕೆ ವಸ್ತು ಪ್ರದರ್ಶನವನ್ನು ಜಿಲ್ಲಾ ಕಲೆಕ್ಟರರು ತೆರೆದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರು ಹೊಸ ವಿದ್ಯಾಯೋಜನೆಯನ್ನು ವಿವರಿಸಿದರು. ಶ್ರೀ ಎಚ್. ರಾಮಚಂದ್ರ ರಾಯರು ಖಾದಿ ಕುರಿತು ಮಾತನಾಡಿದರು.

ಮಹಾ ಸಭೆ—ಕರ್ನಾಟಕ ಪ್ರಾಂತೀಯ ಡಿಸ್ಟ್ರಿಕ್ಟ್ ಕ್ಲಾಸಸ್ ಸೋಷಿಯಲ್ ಸರ್ವೀಸ್ ಲೀಗಿನ ಮಹಾ ಸಭೆಯು ಇದೇ ತಾ 22ರಲ್ಲಿ ಶ್ರೀ ಎಸ್. ಜಿ. ಸಾಲಿನ್ಸ ಅಧ್ಯಕ್ಷತೆಯಲ್ಲಿ ಜರಗಿ ಗತವರುಷದ ಲೆಖ್ಖ ಪತ್ರ ಮತ್ತು ಕೆಲವು ಠರಾವುಗಳು ಮಂಜೂರಾತಿಯಾದ ನಂತರ ಹೊಸ ವರ್ಷದ ಕಾರ್ಯಕಾರಿ ಮಂಡಳಿಗೆ ಸದಸ್ಯರನ್ನು ಆರಿಸಲಾಯಿತು.

ವಿಷಾದಕರ ನಿಧನ—'ರಾಷ್ಟ್ರಬಂಧು' ಪತ್ರಿಕೆಯ ಸಂಪಾದಕ—ವ್ಯವಸ್ಥಾಪಕರೂ ಪ್ರಸಿದ್ಧ ವಿಚ್ಛೋತಕಿಯೂ ಆದ ಶ್ರೀ ಕೆ. ರಾಮಚಂದ್ರ ಆಚಾರ್ಯರ ಪತ್ನಿ ಶ್ರೀಮತಿ ರಾಜಲಕ್ಷ್ಮಿ ಅಮ್ಮನವರು ಇದೇ ತಾ 25ರಲ್ಲಿ ರಾತ್ರಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಮತಿಯವರು ಮಹಿಳಾ ಸಭಾ-ಭಗಿನೀ ಸಮಾಜಗಳ ಅಧ್ಯಕ್ಷಿಯಾಗಿದ್ದರು. ದಿವಂಗತೆಯು ಡಾ। ಡಾ। ಯು. ರಾಮರಾಯರ ಪುತ್ರಿ, ಮದ್ರಾಸಿನ ಮಾಜಿ ಮಂತ್ರಿ ಡಾ। ಯು. ಕೃಷ್ಣರಾಯರ ಮತ್ತು ಮದ್ರಾಸಿನ ಸರ್ಜನ್ ಡಾ। ಯು. ಮೋಹನ ರಾಯರ ಸಹೋದರಿ. ಇವರಿಗೆ ನಾಲ್ಕು ಮಂದಿ ಪುತ್ರಿಯರೂ ಮೂವರು ಪುತ್ರರೂ ಇರುವರು. ಶ್ರೀಮತಿಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಆವರ ಬಂಧುಗಳ ದುಃಖದಲ್ಲಿ ನಮ್ಮ ಸಂತಾಪವನ್ನು ಸೂಚಿಸುವೆವು.

ಕುದ್ರೋಳಿ ಮೊಕದ್ದಮೆಯ ತೀರ್ಪು—ಕಳೆದ ಎಪ್ರಿಲ್ ತಿಂಗಳಲ್ಲಿ ಮಂಗಳೂರಲ್ಲಿ ಪ್ರಾರ್ಥನೀಯ ಅನುಯಾಯಿಗಳಿಗೂ ಇತರ ಕೆಲವರಿಗೂ ಉಂಟಾದ ಭಿನ್ನಾಭಿಪ್ರಾಯವು ಬಹಿರಂಗ ದ್ವೇಷಕ್ಕೆ ಕಾರಣವಾಗಿ, ಪರಿಣಾಮವಾಗಿ ಉಂಟಾದ ಜಗಳದಲ್ಲಿ ಅಬ್ದುಲ್ ರಹಿಮಾನೆಂಬವನ ಕೊಲೆಯಾಯಿತೆಂದು ಈ ಕೊಲೆಗೆ ಸಂಬಂಧ ಪಟ್ಟವರು ಬಂಧನವಾಗಿ ವಿಚಾರಣೆಯಾಗಿ ಕಳೆದ ತಾ 19ರಲ್ಲಿ ತೀರ್ಪು ಕೊಡಲಾಯಿತು. ಒಂದನೆ ಆರೋಪಿ ಹಸನಬ್ಬ ಯಾನೆ ಮೋನು ಎಂಬವನಿಗೆ ಮರಣದಂಡನೆಯನ್ನೂ ಮೊಯಿದಿನಬ್ಬ ಯಾನೆ ಗುಂಡು ಎಂಬವನಿಗೆ ಮೂರು ವರ್ಷ ಕಠಿನ ಸಜೆಯನ್ನೂ ಸುಕೂರ್ ಯಾನೆ ಅಬ್ದುಲ್ ಸುಕೂರ್ ಎಂಬವನಿಗೆ ಮೂರು ತಿಂಗಳ ಕಠಿಣ ಸಜೆಯನ್ನೂ ವಿಧಿಸಲಾಗಿದೆ.

ಜಿಲ್ಲಾ ಮೆಡಿಕಲ್ ಎಸೋಸಿಯೇಶನ್—ವಿಶೇಷ ಸಭೆಯೊಂದು ಕಸ್ತೂರ್ಬಾ ಮೆಡಿಕಲ್ ಕಾಲೇಜು ಸ್ಥಾಪಕರಾದ ಡಾ। ಟಿ. ಮಾಧವ ಪೈಗಳನ್ನು ಅಭಿನಂದಿಸಲು ಈಚೆಗೆ ಡಾ। ಎ. ಎಫ್. ಕೊಯೆಲೊರವರ ಅಧ್ಯಕ್ಷತೆಯಲ್ಲಿ ಜರಗಿತು. ಡಾಕ್ಟರುಗಳಾದ ನಾಗಪ್ಪ ಆಳ್ವ, ನಾರಾಯಣ ರಾವ್, ಮೋರಿ ಕುಲಾಸೊ ಮತ್ತು ಶ್ರೀ ಎಸ್. ನರಸಪ್ಪಯ್ಯ ಎಂ. ಎಲ್. ಸಿ. ಮೊದಲಾದವರು ಡಾ। ಪೈಗಳು ಕಾಲೇಜು ಸ್ಥಾಪನೆಗೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು.

ಈ ಸಭೆಗೆ ಭೇಟಿಕೊಟ್ಟಿದ್ದ ಮದ್ರಾಸಿನ ಮಾಜಿ ಮಂತ್ರಿ ಡಾ। ಯು. ಕೃಷ್ಣರಾಯರು ಮಾತನಾಡುತ್ತಾ ಈ ಕಾಲೇಜು ಯಶಸ್ವಿಯಾಗಲು ಇನ್ನೂ ತುಂಬ ಕೆಲಸ ಆಗಲಿದೆ ಎಂದು ಸೂಚಿಸಿ ಮದ್ರಾಸು ಸರಕಾರವು ಈ ಕಾಲೇಜಿನ ಪ್ರಗತಿಯನ್ನು ಪೂರ್ಣ ಸಹಾನುಭೂತಿಯಿಂದ ಪರಿಶೀಲಿಸಿದೆ ಎಂದರು. ಡಾ। ಪೈಗಳು ಉತ್ತರ ಕೊಡುತ್ತಾ, ಕ್ಲಿನಿಕಲ್ ಅಭ್ಯಾಸಕ್ಕೆ ಬೇಕಾದ ಸಾಧನಗಳನ್ನು ಒದಗಿಸುವುದು, ಉಪಕರಣಗಳು ಮತ್ತು ಕಟ್ಟಡಗಳನ್ನು ಕಾಲೇಜು ಪಡೆಯಲೇ ಬೇಕು ಎಂದು ತಿಳಿಸಿ ಈ ಸಂಸ್ಥೆಗೆ ನ್ಯಾಯವಾಗಿ ಕೊಡಬೇಕಾದ ಶಿಕ್ಷಣ ಗ್ರಾಂಟನ್ನು ಕೊಡುವರೆಂದು ತಾನು ನಿರೀಕ್ಷಿಸುವುದಾಗಿ ಹೇಳಿದರು. ಡಾ। ಬಿ ಆರ್. ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

"ನಿರ್ದಿಷ್ಟ ಆಸನಾರಿಷ್ಟಗಳ ಮೇಲೆ (ಗೆಲ್ಲಿಗೆ ರೂ. 3/ ರಂತೆ) ಸುಂಕ ಹೇರಿದುದು ನ್ಯಾಯಬಾಹಿರವೆಂದು ಹೈಕೋರ್ಟು ತೀರ್ಪಿತ್ತುದರಿಂದ, ಇನ್ನು ಆ ಸುಂಕದ ಬಿಲ್ಲುಗಳನ್ನು ಬಾಟ್ಲಿಗಳಿಗೆ ಹಚ್ಚಲು ನಿರ್ಬಂಧವಿಲ್ಲವೆಂದೂ, ಹಚ್ಚದೆ ಉಳಿದಿರುವ ಬಿಲ್ಲೆಗಳ ಮೌಲ್ಯವನ್ನು ಹಿಂದೆ ಪಡೆಯಬಹುದೆಂದೂ ಸರಕಾರವು ಪ್ರೊಹಿಬಿಷನ್ ಅಧಿಕಾರಿಗಳಿಗೆ ತಿಳಿಸಿರುವದು. ಎಲ್ಲಿಯಾದರೂ ವೈದ್ಯರಿಗೆ ಅಧಿಕಾರಿಗಳು ಉಪದ್ರವ ಕೊಟ್ಟರೆ, ಆ ವೈದ್ಯರು ಕೂಡಲೆ ಆಯುರ್ವೇದ ಸಮಿತಿ, ಸಾಗರ, ಬಸವನಗುಡಿ, ಮಂಗಳೂರು.) ಇವರಿಗೆ ತಿಳಿಸಬೇಕಾಗಿಯೂ, III A ಲೈಸನ್ಸುದಾರರೆಲ್ಲರೂ ತಮ್ಮ ಹೆಸರನ್ನು (ಧರ್ಮಾರ್ಥ) ಸದ್ರಿ ಆಯುರ್ವೇದ ಸಮಿತಿಯಲ್ಲಿ ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿಯೂ ಕಾರ್ಯದರ್ಶಿಯವರು ತಿಳಿಸುತ್ತಾರೆ".

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ.

S. E A. 175/53 in S. E. P. 423/52.

Mrs. ಫ್ಲೋರಿನಾ ರೇಗೋ ಯಾನೆ ಕುಲಾಸೋ — ಅರ್ಜಿದಾರಳು

ಮತ್ತು

M. ಬಾಸ್ಕರ — ರೆಸ್ಪಾಂಡೆಂಟ

ಈ ಮೇಲ್ಕಂಡ ಪ್ರತಿ ರೆಸ್ಪಾಂಡೆಂಟ M. ಬಾಸ್ಕರನವರಿಗೆ ತಿಳಿಸುವದೇನಂದ್ರೆ,

ಮೇಲ್ಕಂಡ ಅರ್ಜಿದಾರಳು ಮಂಗ್ಳೂರು ಡಿ ಮು. ಕೋರ್ಟಿನಲ್ಲಿ ದಾಖಲು ಮಾಡಿದ S. E. P. No 423/52 ರಲ್ಲಿ ಮತ್ತು S. E. P. 135/52ರಲ್ಲಿ ಕೂಡಾ ಆದ ಜಪ್ತಿ ಹುಕುಂ ಪ್ರಕಾರ ರೆಸ್ಪಾಂಡೆಂಟ್ ಬಾಸ್ಕರನವರ ಬಾಬ್ತು ಚರಸೊತ್ತುಗಳು ಜಪ್ತಾಗಿದ್ದನ್ನು ಅರ್ಜಿದಾರಳ ಡಿಕ್ರಿ ಹಣಕ್ಕೆ ಬೇಕಾಗುವಷ್ಟು ಮಾತ್ರ ಏಲಂ ಪಡ್ಸಿ ಅರ್ಜಿದಾರಳ ಡಿಕ್ರಿ ಹಣವು ಪೂರ್ಣ ಸಂದಾಯವಾಗಿ ಇನ್ನು ಅನೇಕ ಸೊತ್ತುಗಳು ಬಾಕಿ ಉಳಿದಿರುತ್ತವೆ. ಸದ್ರಿ ಸೊತ್ತುಗಳನ್ನು ಅರ್ಜಿದಾರಳ ಜ್ವಾಮೀನು ಬಿಡಿಂದು ಕಾಲಾಕ್ ಪಡ್ಸಿ ಯಾರೂ ಕೊಂಡು ಹೋಗದೆ ಇರುವದ್ರಿಂದ ತನ್ನ ನಿವೃತ್ತಿ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲು ಮಾಡಿದ S. E. A. 175/53ನೇ ಅರ್ಜಿಯು ತಾರೀಕು. 20-10-1953ಕ್ಕೆ ತನ್ನಿಗೆ ಇಟ್ಟಿರುತ್ತದೆ. ಸದ್ರಿ ದಿವಸ ಸದ್ರಿ ರೆಸ್ಪಾಂಡೆಂಟನು ಖುದ್ದಾಗಲೀ ವ ವಕೀಲ ದ್ವಾರವಾಗಲೀ ಹಾಜರಾಗಿ, ತಕ್ಕ ಜವಾಬು ಕೊಡುವರೇ ವ ಸೊತ್ತನ್ನು ವಾಪಾಸು ಪಡಿಯುವರೇ ತಪ್ಪಿದ್ದಲ್ಲಿ ಕೋರ್ಟಿನವರು ಏಕ ಪಕ್ಷವಾಗಿ ಕೋರ್ಟಿಗೆ ಯುಕ್ತ ಕಂಡ ರೀತಿಯಲ್ಲಿ ಸದ್ರಿ ಸೊತ್ತುಗಳನ್ನು ಕಾಲಾಕ್ ಪಡ್ಸುವರೇ ಹುಕುಂ ಕೊಡಲಾಗುವದು ತಿಳಿದಿರುವದು.

M. A. Shastri
Advocate for Petr.

ಮಂಗ್ಳೂರು 21-9-53

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಶಾಸ್ತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯಂ. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 65

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ ಬಹಿಷ್ಟೆ ಸಂಬಂಧದ **ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ ತಾರುಣ್ಯವು **ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಸಂ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಋತುವಿನ ಈ ಹೊಟ್ಟೆನೋವನ್ನು (Menstrual Stomach pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯದ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಉತ್ಪನ್ನವನ್ನು, ಸಪ್ತಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ.— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇ . ಕ್ಯಾಟಲಾಗ್ ಉಚಿತ

ಅಂಚೆಗಾಗಿ 2 ಅಣೆ ಸ್ಟಾಂಪು ಕಳಿಸಿರಿ. ತಯಾರಕರು.-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 330/53

ನೇಯಳ್ಳ — ವಾದಿ,

1 ಸಾಂತಪ್ಪ ಗೌಡ. 2 ಬ್ಯಾಂಕಪ್ಪ ರೈ. — ಪ್ರತಿವಾದಿರು.

1ನೇ ಪ್ರತಿವಾದಿ:—ಸಾಂತಪ್ಪ ಗೌಡ. ವಾಡ್ಯಪ್ಪ ಗೌಡನ ಮಗ ಭಾಗದ ಯಜಮಾನ ಮುಂಡ್ಕ, ಗ್ರಾಮ ಕಲ್ಲಟೆ ಪುತ್ತೂರು ತಾಲ್ಲೂಕು. P. O. ಬೆಳ್ಳಾರೆ. ರೀಗೆ.

ವಾದಿಯು ತನಗೆ ಬರಬೇಕಾದ ಬಾಕಿ ರೂಪಾಯಿ 253-13 0ಕ್ಕೆ ಮಾಡಿದ ಮೇಲಿನ ದಾವೆಯು ತಾರೀಕು 6-10 53ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪ ಇದ್ದರೆ ಆ ದಿನ ಬೆಳಿಗ್ಗೆ ಘಂಟೆ 10ಕ್ಕೆ ಕೋರ್ಟು ಮುಂದೆ ಹಾಜರಾಗಿ ಉಪಹರಿಸದಿದ್ರೆ ನಿಮ್ಮ ತೀರ್ಮಾನ ವಾದೀಕು ಎಂದು ಈ ಮೂಲಕ ತಿಳಿಸಿಯದೆ.

(sd) **H. Pundarika Bhat.**
Vakil for Plff.

ಪುತ್ತೂರು. 22-9-53.

ಹಿಟ್ಲರನ ವರ್ಣಭೇದವು ಚೇಂಬರಲೇನರ ಪಾಕವನ್ನೆ ಸಾಮಾನ್ಯ ಜನರಿಗೆ ಬಡಿಸಿದ್ದೆಂದು ಕೆಲವರು ಹೇಳುವರು. Chamberlainism served up for the mob). ನೋರ್ಡಿಕರ ಉತ್ಕೃಷ್ಟತೆಯನ್ನು ಉಳಿಸಿಕೊಳ್ಳುವರೆ ವಿದ ಗಾರ್ಡ್ ಮದುವೆ ಅಂದರೆ ತತ್ಕಾಲದ ಮದುವೆ (Temporary marriage) ಯನ್ನು ಜರ್ಮನರು ಜ್ಯಾರಿಗೆ ತಂದರು. ಒಳ್ಳೇ ಬೀಜದಿಂದ ಶುದ್ಧ ಜನರೇ ಹುಟ್ಟಬೇಕೆಂತ ಪಟ್ಟಿಯನ್ನುಂಟುಮಾಡಿ ಅವರ ಜೀವನ ಚರಿತ್ರೆಯ ರಿಜಿಸ್ಟ್ರ ಇಟ್ಟರು. ಸೈನಿಕರು ಮದುವೆಯಾಗಬೇಕಾದರೆ ಲೈಸನ್ಸು ಪಡೆಯಬೇಕೆಂದು ನಿಬಂಧನೆ ಇಟ್ಟರು. ಹಾಲುಬೆಣ್ಣೆ ಮಾಂಸಗಳ ಆಶೆಯಿಂದ ಕುರಿ, ಕೋಳಿ, ಕುದುರೆ ದನಗಳನ್ನು ಹೀಗೆ ಸಾಕುವ ಪದ್ಧತಿಯಿದೆ ಆದರೆ ಉನ್ನತ ನೈತಿಕ ಮತ್ತು ಮಾನಸಿಕ ಗುಣಗಳುಳ್ಳ ಜನರನ್ನು ಹುಟ್ಟಿಸುವ ಬಗ್ಗೆ ಈ ರೀತಿ ಪದ್ಧತಿಯನ್ನು ಸ್ಥಾಪಿಸುವದು ಪ್ರಕೃತಿ ರೀತಿನೀತಿಗಳಿಗೆ ವಿರುದ್ಧವಾದದ್ದು ಮತ್ತು ಫಲಕಾರಿಯಾದೀತೆಂದು ನಂಬತಕ್ಕದಲ್ಲ.

ಮೆಂಡಲ್ ಎಂಬ ವಿಜ್ಞಾನಿಯ ಕಾಲದಿಂದ ಹುಟ್ಟುಗುಣಗಳಂತೆಯೇ ಗಳಿಸಿದ ಗುಣಗಳು ಪಾರಂಪರ್ಯವಾಗಿ ಬರುತ್ತದೆಂಬ ಭಾವನೆಯು ಕೆಲವರಲ್ಲಿ ಬೇರೂರಿದೆ. ಗಿಡಗಳ ಮೇಲೆ ಪರೀಕ್ಷೆ ಮಾಡಿ ಪೂರ್ಣ ಗುಣಗಳು ಈ ರೀತಿಯಾಗಿ ಬರುವದಿಲ್ಲವೆಂತ ಮೆಂಡಲರೇ ಹೇಳಿರುವರು. ಲೋಕದ ಜನರೆಲ್ಲರೂ ಸಾವಿರಾರು ವರುಷಗಳಿಂದ ಯುದ್ಧ, ಸ್ಥಾನಾಂತರ, ಮತಾಂತರ, ಮಿಶ್ರ ಮದುವೆ ಇನ್ನಿತರ ಕಾರಣಗಳಿಂದ ಮಿಶ್ರ ಜನಾಂಗವಾಗಿದೆ ಎಂಬುದನ್ನು ವರ್ಣಭೇದದ ತತ್ವಗಳು ತಮ್ಮ ನೆನಪಿಗೆ ತಂದುಕೊಳ್ಳಲೆ ಇಲ್ಲವೆಂದು ಹೇಳಬೇಕು. ಅಫ್ರಿಕದ ನೇಶನಲಿಸ್ಟ ಪಕ್ಷದ ಹಲವು ಜನರ ಸಂತತಿ ಪಟ್ಟಿಯನ್ನು ತಯಾರಿಸಿದರೆ ಅವರಲ್ಲಿ ಅನೇಕರು ಮಿಶ್ರವರ್ಣದವರಿರಬಹುದು. ಪ್ರಥಮತ ಆಫ್ರಿಕಕ್ಕೆ ಬಂದಿಳಿದವರು ಬರೇ ಮುನ್ನೂರು ಜನ ಡಚ್ಚರು.

ನೈತಿಕ ಮತ್ತು ಮಾನಸಿಕ ಭೇದಗಳು ವರ್ಣ ವರ್ಣಗಳಲ್ಲಿ ಇವೆಯೋ ಇಲ್ಲವೋ ಎಂದು ನೋಡಬೇಕಾದರೆ ಶುದ್ಧ ವರ್ಣದ ಜನರನ್ನೆ ಹೋಲಿಸಿ ನೋಡಬೇಕು. ಅಂಥಾ ಜನರು ಆಫ್ರಿಕದ ಜಂಗಲ್ ಪೆಡ್ಡರು, ಬುಶ್‌ಮೆನ್ನರು ಮತ್ತು ಅಂಡಮಾನ ದ್ವೀಪದಲ್ಲಿರಬಹುದೆಂದು ಹಿಟನ್ ಎಂಬ ವಿಜ್ಞಾನಿಯು ಹೇಳಿರುವನು. ಸಾವಿರಾರು ವರುಷಗಳಿಂದ ಲೋಕದ ಜನರು ವರ್ಣ ಸಂಕೀರ್ಣರಾಗುತ್ತಾ ಹೋದುದರಿಂದ ಶುದ್ಧ ಜನಾಂಗವೆಂಬುದು ಒಂದು ಊಹೆ ಅಥವಾ ಧ್ಯೇಯವೆಂದೇ ತಿಳಿಯಬೇಕು. ಅದೊಂದು ಆದರ್ಶದ ಮಾತಾಗಿದೆ.

ಇದೇ ಕಾರಣದಿಂದ ಜರ್ಮನ್ನರ ತರ್ಕದ ಶ್ರೇಣಿಯನ್ನೆ ಹಿಡಿದು ಇನ್ನೊಂದು ಕಡೆಯವರು ಸಹಾ ಹೀಗೆ ವಾದಿಸಲಾರಂಭಿಸಿದರು. ಕಳೆದ ಒಂದನೇ ಮಹಾ ಯುದ್ಧದಲ್ಲಿ ಹೆಸರುವಾಸಿಗಳಾದ ಜರ್ಮನಿಯ ಜನರಲುಗಳೆಲ್ಲರಲ್ಲಿಯೂ ಕೆಲ್ಟಿಕರ ರಕ್ತವಿದೆ ಮತ್ತು ಕಾಂಟ ಲುಥರ್, ಗಯಟೆ ಮತ್ತು ಬಿತೋವನ್ ಇವರುಗಳಲ್ಲಿದ್ದ ಪ್ರತಿಭೆಯ ಕಿಡಿಯು ಅವರಲ್ಲಿದ್ದ ಆಲ್ಪೈನ್ ಮತ್ತು ಓರಿಯಂಟಲ್ ರಕ್ತದ ಮಿಶ್ರಣದ ದೆಸೆಯಿಂದ ಎಂದರು. ಮೇಕ್ಸ್‌ವಾನ್ ಗ್ರೂಬರ್ ಎಂಬವರು ಜರ್ಮನಿ ಯಾವ ದೊಡ್ಡ ವ್ಯಕ್ತಿಯಲ್ಲಿಯೂ ಶುದ್ಧ ನೋರ್ಡಿಕ ರಕ್ತವಿಲ್ಲವೆಂದರು. ಈ ದೃಷ್ಟಿಯಿಂದ ನೋಡುವದಾದರೆ ಹಿಟ್ಲರ್ ಮತ್ತು ಗೋಬೆಲ್ಸರು ಸಹಾ ಶುದ್ಧ ನೋರ್ಡಿಕರೆಂದು ಹೇಳಲು ಬರುವುದಿಲ್ಲ. ಪರೀಕ್ಷೆ ಮಾಡುವಾಗ ನಮ್ಮ ಪ್ರ[illegible] ಮುಖ್ಯಸ್ಥನ ಮೂಗು ಆ[illegible] ಮೂಗಾಗಿ ಕಾಣುವದು.

ರಕ್ತ ಪರೀಕ್ಷೆಯ ಕ್ರಮವು ರೂಢಿಗೆ ಬಂದೊಡನೆಯೆ ವರ್ಣಭೇದದ ಉತ್ಸಾಹಿಗಳು ರಕ್ತ ಪರೀಕ್ಷೆಯಿಂದ ಶುದ್ಧ ವರ್ಣದವರನ್ನು ಕಂಡುಹಿಡಿಯಬಹುದೆಂದು ಬೇಟೆ ಹೊಡೆದರು. ಆದರೆ ಸ್ವಲ್ಪ ಸಮಯದಲ್ಲೆ ಇದು ಅಧಿಕೃತವಲ್ಲವೆಂದು ತಿಳಿದು ಬಂತು. ಒಂದು ವ್ಯಕ್ತಿಯ ರಕ್ತದಲ್ಲಿ ಕಂಡುಬಂದ ಲಕ್ಷಣಗಳು (blood groups) ಇನ್ನೊಂದು ವರ್ಣದ ವ್ಯಕ್ತಿಯ ರಕ್ತದಲ್ಲಿರಬಾರದೆಂತಿಲ್ಲವೆಂದು ವಿಜ್ಞಾನಿಗಳು ಹೇಳಿದರು ಮತ್ತು ಹಾಗೆ ಇದ್ದುದನ್ನು ರುಜುಪಡಿಸಿದರು.

"ವರ್ಣಭೇದದಲ್ಲಿ ನಿಜಾಂಶವಿದೆಯೆ"?

ಸಿ. ಎಚ್. ಸೆಟ್ಟಿ.

ಮಾನವ ವಿಜ್ಞಾನಿಗಳು ಉತ್ತಮ ಮತ್ತು ನೀಚವೆಂಬ ಭೇದಗಳು ವರ್ಣಗಳೊಳಗೆ ಇಲ್ಲವೆಂದರು. ಶಾರೀರಿಕ ಭೇದಗಳೇ ಹೊರತು ನೈತಿಕ ಮತ್ತು ಮಾನಸಿಕ ಭೇದಗಳಿಂದ ಯಾರು ಯಾವ ವರ್ಣಕ್ಕೆ ಸೇರಿದವರೆಂದು ಗುರುತಿಸಲು ಸಾಧ್ಯವಿಲ್ಲವೆಂದರು. ಶಾರೀರಿಕ ಭೇದಗಳೆಂದರೆ ಮೈಬಣ್ಣ ಕೂದಲಿನ ಬಣ್ಣ, ಕಣ್ಣಿನ ಬಣ್ಣ, ಹಣೆ, ತಲೆಬರುಡೆ, ಕಿವಿ, ಮೂಗು, ತುಟಿ ಇವುಗಳ ಆಕಾರ ಮತ್ತು ಮೈಕಟ್ಟು ಇವೇ ಮೊದಲಾಗಿವೆ. ವ್ಯಕ್ತಿ ವ್ಯಕ್ತಿಗಳಲ್ಲಿ ತುಂಬಾ ಭೇದಗಳಿವೆ. ಇದರಂತೆಯೇ ವರ್ಣವರ್ಣಗಳಲ್ಲಿ ಇವೆ ಎಂದು ಹೇಳಲು ಬರುವದಿಲ್ಲ. ವ್ಯಕ್ತಿಗಳಲ್ಲಿರುವ ಭೇದಗಳು ಎಷ್ಟರ ಮಟ್ಟಿಗೆ ಹುಟ್ಟುಗುಣಗಳಾಗಿ ಬಂದವುಗಳು ಎಷ್ಟರ ಮಟ್ಟಿಗೆ ಗಳಿಸಿದ ಗುಣವೆಂದು ಲೆಕ್ಕ ತೆಗೆಯಲು ಸಾಧ್ಯವಿಲ್ಲವೆಂದರು.

ಗುಣನಡತೆಗಳು ವಾತಾವರಣದಿಂದ ತಿದ್ದುಪಡಿಯಾಗುವವು. ವಾತಾವರಣವು ಹೊಸ ಗುಣವನ್ನುಂಟುಮಾಡಲಾರದಾದರೂ ಇದ್ದುದನ್ನು ತಿದ್ದುವದು. ಹುಟ್ಟುಗುಣಗಳು ಕಚ್ಚಾಮಾಲಿನಂತಿವೆ ವಾತಾವರಣವು ಅವುಗಳನ್ನು ಸರಕಾಗಿ ಮಾಡುವದು. ಶಾರೀರಿಕ ಲಕ್ಷಣಗಳು ಹುಟ್ಟುಗುಣಗಳೆಂದೇ ತಿಳಿಯಬೇಕು. ನೈತಿಕ ಮತ್ತು ಮಾನಸಿಕ ಗುಣಗಳು ವಾತಾವರಣದಿಂದ ಸರಿಯಾಗಬೇಕು. ಪ್ರತಿಯೊಂದು ವ್ಯಕ್ತಿಯಲ್ಲಿ ಹಲವು ಗುಣ ನಡತೆಗಳಿವೆಯಾದ ಕಾರಣ ಯಾವುದು ಹುಟ್ಟುಗುಣ ಯಾವುದು ವಾತಾವರಣದ್ದೆಂದು ಕಂಡುಹಿಡಿಯುವದು ಕಷ್ಟ. ವಾತಾವರಣ ಮತ್ತು ವಿದ್ಯೆಗಳಿಂದ ಹಲವು ಬದಲಾವಣೆಗಳಾಗುವವು.

ವರ್ಣಗಳೊಳಗೆ ನೈತಿಕ ಮತ್ತು ಮಾನಸಿಕ ಗುಣಗಳ ಭೇದವಿದೆಯೆ ಎಂಬುದು ಚರ್ಚಾಸ್ಪದ ವಿಷಯ. ವಿಜ್ಞಾನಿಗಳಾದ ಕ್ಲೀನ್‌ಬರ್ಗ್, ಗಾರ್ಥ್, ಮೈಯರ್ ಮೊದಲಾದವರು ಈ ಕುರಿತು ನಾನಾರೀತಿಯಲ್ಲಿ ಶೋಧ ನಡೆಸಿರುವರು. ಸುಮಾರು ಕಾಲು ಶತಮಾನದ ಹಿಂದೆ ನಿಗ್ರೊ ಮತ್ತು ಬಿಳಿ ಜನರ ಬುದ್ಧಿಸೂಕ್ಷ್ಮತೆ (I. Q.) ಪರೀಕ್ಷಿಸಿ ಬಿಳಿಜನರೇ ಉತ್ತಮರೆಂದು ತೀರ್ಮಾನಿಸಿದ್ದರು. ಮೇಲೆ ಹೇಳಿದ ವಿಜ್ಞಾನಿಗಳು ಇದು ಸರಿಯಲ್ಲವೆಂದರು. ಶೋಧಿಸಲ್ಪಟ್ಟ ಎರಡು ವರ್ಣದವರು ಒಂದೇ ರೀತಿಯಲ್ಲಿ ಸರಿಸಮಾನರಾಗಿರಲಿಲ್ಲ. ಒಂದು ಉತ್ತಮ ವಾತಾವರಣದಲ್ಲಿ ಬೆಳೆದವರು ಇನ್ನೊಂದು ಹೀನಾವಸ್ಥೆಯಲ್ಲಿದ್ದ ಕಾರಣ ಬಿಳಿ ಜನರ ಗುಣಕ್ಕೆ ತೀರ್ಮಾನವಾಗಲು ಕಾರಣವಾಯಿತೆಂದರು. ನ್ಯೂಯೋರ್ಕ್ ಪಟ್ಟಣಕ್ಕೆ ಬಂದು ವಾಸಿಸಿರುವ ನಿಗ್ರೊ ಜನರನ್ನು ಪರೀಕ್ಷೆಮಾಡುವಾಗ ಅಲ್ಲಿಯ ವಾತಾವರಣದ ದೆಸೆಯಿಂದ ಅವರ ಬುದ್ಧಿಶಕ್ತಿಯು ಇತರ ನಿಗ್ರೊ ಜನರಿಗಿಂತ ಮೇಲ್ಮಟ್ಟಕ್ಕೆ ಬಂದದೆ ಎಂದು ಪರೀಕ್ಷಿಸಿದರು. ಅಲ್ಲದೆ ಹೆಚ್ಚು ಸಮಯ ನ್ಯೂಯೋರ್ಕ್ ಪಟ್ಟಣದಲ್ಲಿದ್ದ ನಿಗ್ರೊ ಜನರ ಬುದ್ಧಿಶಕ್ತಿಯು ಅಲ್ಲಿ ಕಡಮೆ ಸಮಯ ವಾಸಿಸಿದ ಜನರ ಬುದ್ಧಿಶಕ್ತಿಗಿಂತ ಮೇಲಾಗಿದೆ ಎಂದು ಕಂಡರು.

ಬುದ್ಧಿ ತೀಕ್ಷ್ಣತೆ, ಜ್ಞಾನ ಮತ್ತು ನೆನಪಿನ ಶಕ್ತಿ ಇವುಗಳ್ಯಾವದರಲ್ಲಿಯೂ ಅನಾಗರಿಕರು ಕಡಮೆಯಲ್ಲ. ಕೆಲವು ವಿಷಯಗಳಲ್ಲಿ ಬಿಳಿ ಜನರನ್ನು ವಿಸ್ಮಯಗೊಳಿಸುವರು. ತಮಗೆ ಬೇಡವಾದ ವಿಷಯಗಳಲ್ಲಿ ಅವರು ತಲೆಹಾಕುವದಿಲ್ಲ. ಆಸಕ್ತಿಯಿರುವ ವಿಷಯಗಳಲ್ಲಿ ಇತರರಿಗೆ ಮೇಲೆನಿಸುವರು. ಶಬ್ದ, ವಾಸನೆ, ಪಾದದ ಹೆಜ್ಜೆ, ಕಾಲುದಾರಿ, ಗಿಡಗಳು ಬಾಗಿದ ರೀತಿ ಇವುಗಳಿಂದ ನಾನಾ ಅರ್ಥ ಮಾಡುವರು. ಶಾಲೆಯಲ್ಲಿ ಕಲಿಯುವಾಗ ಬಾಯಿಪಾಠ ಮಾಡುವರೆಂಬ ಆರೋಪವಿದೆ. ಐರೋಪ್ಯದ ರೈತಾಪಿ ಜನರಲ್ಲಿ ಸಹಾ ಈ ಲಕ್ಷಣವಿದೆ. ಸ್ವಭಾವಗುಣಗಳಲ್ಲಿ ಸಹಾ ಭೇದಗಳು ಇಲ್ಲ. ಸಿಟ್ಟು, ಪ್ರೀತಿ, ವೈರ, ಶಮ ದಮ ಇವೆಲ್ಲವುಗಳಲ್ಲಿಯೂ ಬಿಳಿಜನರನ್ನು ಹೋಲುವರು. ಗಮನ ಶಕ್ತಿಯಲ್ಲಿ ಕಡಮೆಯೆಂದು ಇನ್ನೊಂದು ಆರೋಪವಿದೆ. ಆದರೆ ಅದು ಉತ್ತಮ ವಾತಾವರಣದಿಂದ ಬರುವದಾದ್ದರಿಂದ ಅದು ಇವರ ತಪ್ಪಲ್ಲ. ಭೇದಗಳೇನಾದರೂ ಇವೆಯೋ ಎಂದು ತಿಳಿಯಬೇಕಾದರೆ ಬಿಳಿಜನರನ್ನು ಅವರಿಗಿರುವ ಅನುಕೂಲತೆಯಿಂದ ದೂರಮಾಡಿ ಎರಡು ವರ್ಣದವರನ್ನು ಬಹುಕಾಲ ಪ್ರತ್ಯೇಕವಿರಿಸಿ ಒಂದು ತರಗತಿಯವರೆಂಬಂತೆ ಮಾಡಿ ಪರೀಕ್ಷಿಸಿದರೆ ನಿಜಾಂಶ ತಿಳಿದೀತು.

ಇದನ್ನೆಲ್ಲಾ ನೋಡುವಾಗ ವರ್ಣಭೇದವೆಂಬುದು ಸ್ವಾರ್ಥ, ದ್ವೇಷ ಮತ್ತು ಪಕ್ಷಪಾತ ಇವುಗಳನ್ನೆ ಹೆಚ್ಚು ಹೊಂದಿದೆಯೆಂದು ಹೇಳಬೇಕು. ಯಾರು ಹೆಚ್ಚು ಅಧಿಕಾರದಲ್ಲಿರುವರು ಅವರು ಇತರ ವರ್ಣದವರನ್ನು ಕೀಳುಮಟ್ಟದಲ್ಲಿರಿಸುವರು. ಒಂದೊಂದು ಕಾಲದಲ್ಲಿ ಒಂದೊಂದು ವರ್ಣದವರು ಬಲವಂತರಾಗಿ ಈರೀತಿ ವರ್ತಿಸಿದ್ದು ಚರಿತ್ರೆಯಲ್ಲಿ ತುಂಬಾ ಇದೆ. ಮಾಂಗೋಲಿಯದವರು, ಆರ್ಯರು, ದ್ರಾವಿಡರ ಇನ್ಕ, ಮಾಯೊ, ಈಜಿಪ್ಟ, ಎಸ್ಸೀರಿಯಾ ಬೆಬಿಲೋನುಗಳು ಇದೇರೀತಿ ನಡೆದುಕೊಂಡಿರುವವು. ನಾಗರಿಕತೆಯು ಚಕ್ರಗತಿಯಿಂದ ಪುನರಾವರ್ತನೆಯಾಗುತ್ತಾ ಇದೆ. ಆಸ್ಟ್ರೇಲಿಯವು ಬಿಳಿಜನರ ಮಾತ್ರವೆಂತ ಸಾರಲ್ಪಟ್ಟಿತು. ಆಫ್ರಿಕದಲ್ಲಿ ಬಂದ ಎತ್ತು ಇದ್ದ ಎತ್ತನ್ನು ಓಡಿಸಲು ಪ್ರಾರಂಭಿಸಿರುವದು. ಹೀಗೆಲ್ಲ ಮಾಡಲು ಇದು ಯಾರ ಅಪ್ಪನ ಬದುಕೆಂತ ಕಿಂಚಿತ ಆಲೋಚಿಸುವುದಿಲ್ಲ.

ಭೂಮಿಯಲ್ಲಿ ಫಲವತ್ತಾದ ಸ್ಥಳಗಳನ್ನೆಲ್ಲಾ ಬಿಳಿಜನರು ವಶಪಡಿಸಿಕೊಂಡು ಅಲ್ಲಿನ ಜನರನ್ನು ಕೆಳತರಗತಿಯಲ್ಲಿಟ್ಟುಕೊಂಡು ಮತ್ತು ಆ ಜನರಿಂದ ಯಾವ ಸಾಹಸದ ಕೆಲಸವೂ ಆಗದೆಂದು ಆರೋಪಹೊರಿಸುವರು ಮತ್ತು ಇತರ ವರ್ಣದವರ್‍ಯಾರೂ ಅಲ್ಲಿ ಪ್ರವೇಶಿಸಕೂಡದೆನ್ನುವರು. ಅಸ್ಕಡ ಜನರು ಯಾವಕಡೆಯಲ್ಲಿ ಹೋದರೂ ದ್ವಾರಬಾಗಿಲ ಛಾವೆ ಮತ್ತು ಗೇಟಿನ ಬೋರ್ಡುಗಳಲ್ಲಿ ನಾಯಿಯ ಕುರಿತು ಜಾಗರೂಕತೆಯಿಂದು ಬರೆದಿಟ್ಟಿರುವರು. ತಮ್ಮ ಅಂಗರಕ್ಷಣೆಗೆ ಆಯುಧಗಳನ್ನು ಹಿಡಿಯಲು ಪ್ರತಿಬಂಧಕವಿರುವ ಜನರಲ್ಲಿ ನೆಪೋಲಿಯನರಂಥವರು ಹೇಗೆ ತಯಾರಾದಾರು. ಚುನಾವಣೆ ಸಮಯ ಮತಕೊಡುವ ಮೂಲಭೂತ ಹಕ್ಕೇ ಇಲ್ಲದ ಜನರಲ್ಲಿ ಗ್ಲ್ಯಾಡಸ್ಟನ್, ಡಿಸ್ರೇಲಿಯರಂಥ ರಾಜ ಎಲ್ಲಿಂದ ಬರುವರು. ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿಕೂಲವಿರುವ ಜನರಲ್ಲಿ ಬರ್ಟ್ರ್ಯಾಂಡ್ ರಸ್ಸೆಲ್, ಬರ್ನಾರ್ಡ್ ಶಾ, ಇವರಂಥವರು ಹೇಗೆ ಹುಟ್ಟುವರು. ಇದನ್ನೆಲ್ಲಾ ನೋಡುವಾಗ ಮನೆಯ ಒಡತಿಯು ತನ್ನ ಮನೆಯ ಕೆಲಸದ ಹುಡುಗಿಯ ನಾಲಿಗೆಯನ್ನು ಕತ್ತರಿಸಿಕೊಂಡು ರಕ್ತವಾದ ತನ್ನ ಮೃದು ಕೈಯನ್ನು ತೊಳೆಯಲಿಕ್ಕೆ ಒಂದಿಷ್ಟು ಸ್ವಚ್ಛ ನೀರನ್ನು ತರಲಿಕ್ಕೆ ಯಾರನ್ನೂ ಕರೆದು ಹೇಳಲಿಲ್ಲವೆಂತ ಮತ್ತೆ ಹುಡುಗಿಯನ್ನು ಗದರಿಸಿದಂತೆಯೇ ಸರಿ.

ಒಬ್ಬ ಪಟಾ ವಿಜ್ಞಾನಿಯು ತನ್ನ ಜೀವಮಾನವನ್ನೆ ವರ್ಣಭೇದದ ಶೋಧನೆಯ ಬಗ್ಗೆ ವ್ಯಯಿಸಿ ಮಾನವರ ದೂರದ ಸಹೋದರರಾದ ಮಂಗಗಳಿಗೆ ಬಿಳಿ ಜನರೇ ಸಮೀಪದವರೆಂಬ ತೀರ್ಮಾನಕ್ಕೆ ಬಂದನು. ಮಂಗಗಳಿಗೆ ಮೈತುಂಬಾ ಕೂದಲು ಹಾಗೆಯೇ ಬಿಳಿ ಜನರಿಗೂ ಇದೆ. ಮಂಗಗಳ ತುಟಿ ಮತ್ತು ಮೂಗು ತೆಳ್ಳಗೆ, ಬಿಳಿ ಜನರಿಗೂ ಅಂತೆಯೇ ಇವೆ. ಮಂಗಗಳ ಕಿವಿ ಸಣ್ಣದು ಬಿಳಿ ಜನರಿಗೂ ಅದೇ ರೀತಿ ಇದೆ ಎಂದಿರುವನು.

ಪ್ರತಿ ವರ್ಣದವರಲ್ಲಿ ತಾವೇ ಉತ್ತಮರು ಎಂಬ ಸ್ವಾಭಿಮಾನ ಉಂಟೇಉಂಟು. ಇತರ ವರ್ಣದವರೂ ಈ ಕುರಿತು ಹೆಚ್ಚು ತಲೆ ಬಿಸಿ ಮಾಡಿಕೊಳ್ಳದೆ ತಾವೆ ಉತ್ತಮರೆಂದು ಆತ್ಮಸಂತುಷ್ಟರಾಗಿ ಶಾಂತಚಿತ್ತದಿಂದಿರುವರು. ಬಿಳಿಜನರು ಮಾತ್ರ ತಲೆ ತುರಿಸಿಕೊಂಡು ಕಾಗದದ ಮೇಲೆ ತಾವೇ ಉತ್ಕೃಷ್ಟರೆಂದು ಸ್ಥಾಪಿಸಲು ಗ್ರಂಥಗಳ ರಾಶಿಯನ್ನೆ ಬರೆಯುವರು. ಅಹಮದ್ ಬಾಬ ಎಂಬ ನಿಗ್ರೋ ವಿದ್ವಾಂಸನನ್ನು ಗಲ್ಲಿಗೇರಿಸುವರೆ ಕೊಂಡು ಹೋಗುವಾಗ, ನನ್ನ ಸ್ನೇಹಿತರ ಹತ್ತಿರವಿದ್ದಷ್ಟೆ ಪುಸ್ತಕಗಳನ್ನು ಸಂಗ್ರಹಿಸುವ ವರೆಗೆ ನನ್ನ ಜೀವ ಉಳಿಯಲಿಲ್ಲವೆಂಬ ಒಂದೇ ವ್ಯಸನ ಹೊರತು ಬೇರೇನಿಲ್ಲವೆಂದನಂತೆ. ವರ್ಣಭೇದವೆಂಬುದು ಬಿಳಿಜನರು ಹೇಳುವಂತೆ ಇರುವುದು ನಿಜವಾದರೆ ಅವರು ಇಷ್ಟೆಲ್ಲಾ ಬರೆಯುವದು ಅನಾವಶ್ಯಕ. ಅದು ಹಾಗಿಲ್ಲವೆಂತಾದರೆ ಅವರು ಎಷ್ಟು ಬರೆದಾಗ್ಯೂ ಹೊಸತಾಗಿ ಉಂಟಾಗದು. ಅಧಮರ ಮಕ್ಕಳಲ್ಲಿ ಶುದ್ಧ ಜನರನ್ನು ಆರಿಸುವದೆಂಬುದು ಬಿಸಿಲುಕುದುರೆಯನ್ನು ಬೆನ್ನಟ್ಟಿದಂತೆಯೇ ಸರಿ.

ಮಾನವವಿಜ್ಞಾನಿಗಳು ವರ್ಣಭೇದವೆಂಬುದು ಕಟ್ಟುಕಥೆಯೆಂದು ಮೊದಲೇ ತೀರ್ಮಾನಿಸಿರುವರು. ಕಳೆದ ಎರಡು ಮಹಾಯುದ್ಧದಲ್ಲಿ ಸಹಾ ಎಲ್ಲಾ ವರ್ಣದವರೂ ಸರಿಸಮಾನರೆಂದು ದೃಢೀಕರಿಸಲ್ಪಟ್ಟಿದೆ. ಪ್ರಜಾಸತ್ತೆಯ ರಾಷ್ಟ್ರಗಳು, ಪ್ರತಿನಿಧಿ ಸಭೆಗಳು, ಜವಾಬ್ದಾರಿಕೆಯುಳ್ಳ ಪತ್ರಿಕೆಗಳು ಮತ್ತು ರಾಜಕಾರಣಗಳು ಈ ಭೇದವನ್ನು ವಿರೋಧಿಸುವದು ಆಗತ್ಯವಿದ್ದಾಗ ಖಂಡಿಸಿರುವದು. ಅಂತರ್ ರಾಷ್ಟ್ರಸಂಘ ಸಂಸ್ಥೆಗಳು ಪರಸ್ಪರ ಸಂಹಾರಗಳನ್ನು ತೋರಿಸುವವು ಮತ್ತು ವರ್ಣಭೇದವನ್ನು ಕಟುವಾಗಿ ಟೀಕಿಸುವವು. ಆದಾಗ್ಯೂ ದಕ್ಷಿಣ ಆಫ್ರಿಕದಂತ ಸ್ವಾರ್ಥಪರ ಸರಕಾರಗಳು ತಮ್ಮ ಬೇಳೆ ಬೇಯಿಸಲಿಕ್ಕೆ ಪ್ರಯತ್ನಮಾಡುವದನ್ನು ನೋಡುವಾಗ ಆಶ್ಚರ್ಯವಾಗುತ್ತದೆ.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿವಸದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋನಿನಲ್ಲಿ ಕೇಳಿರಿ.

In the Court of the District Munsiff of Kundapur

R. E. P. 277/1953 and R. E. A 489/1953 in S C, 591/1952

Between

Ramanna Upadya- S/o Sheshagiri Upadya Vandse village, Coondapur Taluq--D--II Executive Petitioner

and

Kuppaya Adiga- S/O Hotlabail Chennakeshav Adiga--known to have resided last in Noojady village of coondapoor Taluq...

J. D. Respondent.

Notice to the Respondent

Whereas the decreeholder has applied for the sale of the immovable properties belonging to you, you are informed that the 6th Day of October 1953 hasbeen fixed for settling the terms of the proclamation of Sale. You are further informed that E. A. abovequoted which is the decreeholders' application for permission to bid for and purchased the properties at the sale to be held by the Court has also been posted for hearing to the self--same date. Your objections, if you have any to urge will be heard on the said date.

By order of the Court

S. N Acharya
Advocate

23-9-1953

ಸ್ವೀಕಾರ—ವಿಮರ್ಶೆ

ಉಡುಪಿ ಕ್ಷೇತ್ರ

ಲೇಖಕರು—ಬಿ. ರಾಮಕೃಷ್ಣಾಚಾರ್. ಪ್ರಕಾಶಕರು—ಹಿಂದೀ ಪುಸ್ತಕ ಭಂಡಾರ, ಶ್ರೀ ರಾಮಾಂಜನೇಯ ಬಿಲ್ಡಿಂಗ್ಸ್, ಉಡುಪಿ. ಬೆಲೆ—ಹತ್ತಾಣೆ.

ದಕ್ಷಿಣ ಭಾರತದಲ್ಲಿ ಸುಪ್ರಸಿದ್ಧ ಯಾತ್ರಾಸ್ಥಳವಾದ ನಮ್ಮ ಉಡುಪಿಯ ಕ್ಷೇತ್ರ ಮಹಿಮೆಯನ್ನು ವಿವರಿಸುವ ಸಚಿತ್ರ ಕೈಪಿಡಿ ಇದಾಗಿರುತ್ತದೆ, ಯಾತ್ರಾರ್ಥಿಗಳಾಗಿ ಬರುವ ಕನ್ನಡಿಗರಿಗೆ ಉಡುಪಿ ಕ್ಷೇತ್ರದ ವಿವರವಾದ ಪರಿಚಯವನ್ನು ಈ ಪುಸ್ತಕ ಮಾಡಿಸಿ ಕೊಡುತ್ತದೆ. ಅಲ್ಲದೆ ಆಧುನಿಕ ಉಡುಪಿಯ ಕುರಿತು ಮಾಹಿತಿಯೂ ಇದರಲ್ಲಿದೆ. ಉಡುಪಿಯ ಕುರಿತು ಬರೆಯಲಾದ ಪುಸ್ತಕಗಳು ಬೇರೆಯೂ ಇವೆ. ಅವುಗಳಲ್ಲಿಲ್ಲದ ವೈಶಿಷ್ಟ್ಯ ಇದರಲ್ಲಿ ಎದ್ದು ಕಾಣುವುದಿಲ್ಲ. ಇದನ್ನು ದೋಷವಾಗಿ ಗಣಿಸುವುದು ಅನಗತ್ಯವಾದರೂ, ಹೊಸ ರೀತಿಗೆ ಅವಕಾಶ ಮಾಡಿ ಕೊಡಬಹುದಿತ್ತೆಂಬುದೇ ಈ ಮಾತಿನ ಉದ್ದೇಶ.

ದುಂಬಿ—

ಲೇಖಕರು ಮತ್ತು ಪ್ರಕಾಶಕರು—ಬಿ. ಶಿವಮೂರ್ತಿ ಶಾಸ್ತ್ರೀ ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು ೨ ಬೆಲೆ ರೂ ೧—೦—೦.

ಈ ಕವಿತಾ ಸಂಗ್ರಹದಲ್ಲಿ ವ್ಯಕ್ತಿ ಗುಣಗಾನ ಮಾಡುವ ಹಲವು ಕವನಗಳು ಇವೆ. ಆಧುನಿಕ ಶೈಲಿಗಿಂತಲೂ ಪ್ರಾಚೀನವಾದ ಸಾಹಿತ್ಯಕ ನುಡಿಗಟ್ಟನ್ನು ಆಶ್ರಯಿಸಿ ಅವು ವ್ಯಕ್ತಗೊಳ್ಳುತ್ತವೆ. ವ್ಯಕ್ತಿತ್ವವನ್ನು ಮೆಚ್ಚಿ ಹಾಡಿದ ಕವನಕ್ಕೆ ಕೆಳಗಿನ ಸಾಲುಗಳು ನಿದರ್ಶನ—

ಮರ ಕಾಶ್ಮೀರದ ನೆಲದಿಂ
ಪೊರೆದಿಂ ಮೋಣ್ ಹೃದ್ರೋಗದ ಜನ ಸಂಧಿಯಿಂ
ದುರುಳರ ಕೈಯ್ಯಿಂ ಬಿಡಿಸುತೆ
ಧರೆಯೊಳ್ ಜನವಶಾಂತನನುದು ಸಾಹಸ ಭೀಮಂ

ಇದು ವಲ್ಲಭ ಭಾಯಿ ಪಟೇಲರ ಸಾಹಸ ವರ್ಣನೆ. ಕೆಲವು ವಾಸ್ತು ಶಿಲ್ಪಗಳನ್ನು ಕಂಡು ಕವಿ ವೈಭವದಿಂದ ಹಾಡಿದ ಸಾಲುಗಳೂ ಇಷ್ಟೇ ಸತ್ವಯುತವಾಗಿವೆ.

ಶಿಲೆಯಲ್ಲಿ ಕಲೆಯ ಬಳೆಯೆಂಬ ಕವಿಯೊಬ್ಬ
ಕಲೆಯಲ್ಲಿ ಸೊಗದ ನೆಲೆಯೆಂಬ ನಿನ್ನೊಬ್ಬ

ಅಜಂತದ ಗವಿಯ ಚಿತ್ರ ವೈಭವ ಕಂಡು ಮುಗ್ಧನಾದ ಕವಿಯ ಭಾವುಕ ಹೃದಯದ ಈ ಉದ್ಗಾರ ರಸಸ್ಪಂದನವುಂಟುಮಾಡುತ್ತದೆ. ಕವಿಯ ರಾಷ್ಟ್ರೀಯ ಮನೋವೃತ್ತಿಯನ್ನು ಗಾಂಧಿಯ ಮಹಿಮೆಯ ಕೆಳಗಿನ ಸಾಲುಗಳು ಚೆನ್ನಾಗಿ ವ್ಯಕ್ತೀಕರಿಸುತ್ತವೆ—

ಚರಕವೇ ಚಕ್ರಾಯುಧವು ನರ
ಹರಿಯೆ ಗಾಂಧಿ ಮಹಾತ್ಮನಾರಯೆ
ಮೆರೆವ ಪಂಡಿತ ನೆಹರು ಮುಖರೇ ದೆಸೆಯೊಡೆಯರಹರು
ಪರರ ಬಟ್ಟೆಯೆ ಮೋಹ ಜಾಲವು
ಪರರ ಸೇವೆಯೆ ಸರ್ವ ನಾಶವು
ಪರರ ಬಾಧಿಪ ನರರೆ ರಕ್ಕಸರೆನಿಪರೀ ಯೊಳಗೆ

ದಾಸರ ಪದಗಳನ್ನು ಅನುಕರಣ ಮಾಡಿ ಬರೆದ ಕೆಲವು ನೀತಿಪರ ಕವನಗಳೂ ಇಲ್ಲಿ ಇವೆ.

ಉಪಕಾರಿ ನಮ್ಮವರು—ಅಪಕಾರಿ ಅನ್ಯರು
ವಿಪರೀತನಾಗಿರನು ತಿಳಿಯ ಬೇಡ
ಉಪಯೋಗದಿಂ ವಸ್ತುವಿನ ಯೋಗ್ಯತೆಯ ತಿಳಿವು
ತಪಯುಕ್ತ ಜೀವನ - ನಡೆಸು ನ ನೇ

ಶರಣರ ವಚನದ ಮಾದರಿಯ ಕೆಲವು ಉಪದೇಶಗಳೂ ಇಷ್ಟೇ ಭಾವಪೋಷಕವಾಗಿ ಕಾಣುತ್ತವೆ. ಕೊನೆಯದಾದ "ದುಂಬಿ" ಕವನದಲ್ಲಿ

ಐಕ್ಯಮತ್ಯವ ಜನಕೆ ಬೋಧಿಸುವ ನಿನ್ನಿರವು
ಲೋಕದೊಳು ಮಾದರಿಯು ನಮ್ಮ ಜನಕೆ
ಬೇಕು ನಿನ್ನಯ ನಿಷ್ಠೆಯೆಲ್ಲಾ ಕಾಲದೊಳಂ
ಶೋಭಿಸ ಸಾಹಸವು ಪ್ರಗತಿಗಾಗಿ

ಎಂದು ಹೇಳಿ ಕವಿಗಳು ರಾಷ್ಟ್ರದ ಈಗಿನ ಪರಿಸ್ಥಿತಿಯಲ್ಲಿ ಜನ ದುಂಬಿಯ ಆದರ್ಶವನ್ನು ಹೇಗೆ ಸ್ವೀಕರಿಸಬಹುದೆಂದು ಮಾರ್ಮಿಕವಾಗಿ ಸೂಚಿಸಿರುವರು.

ಪುಸ್ತಕದ ಕೊನೆಯಲ್ಲಿ ದುಂಬಿಯನ್ನು ಕುರಿತು ಪ್ರಾಚೀನ ಗ್ರಂಥಗಳಲ್ಲಿ ಬಂದ ವರ್ಣನಾ ಭಾಗಗಳನ್ನು ಮತ್ತು ಕಠಿಣ ಶಬ್ದಾರ್ಥಗಳನ್ನು ಒಳಗೊಂಡ ಅನುಬಂಧವನ್ನು ಒದಗಿಸಿರುವರು.

THE JUDGE RESIGNS

—By Shri J. H. Deshpande, Bagalkot. Price Five annas

ಇದು ಭಾರತದ ರಾಜ್ಯಾಂಗಘಟನೆಯು ಹೈಕೋರ್ಟ್ ನ್ಯಾಯಾಧೀಶರ ನೇಮಕದ ಕುರಿತು ಎರಡು ಮುಖ್ಯ ಆಕ್ಷೇಪಗಳನ್ನು ಸೂಚಿಸಿ ಕೆಲಸಕ್ಕೆ ರಾಜೀನಾಮೆ ಕೊಡಲು ನಿರ್ಣಯಿಸಿದ ಹೈಕೋರ್ಟ್ ನ್ಯಾಯಾಧೀಶ ಹಾಗು ಆತನನ್ನು ಸಮಜಾಯಿಸಲು ಹೋದ ಸರಕಾರೀ ವಕೀಲರ ಸಂಭಾಷಣೆಯಿಂದ ಕೂಡಿದೆ. ಕಲ್ಪಿತ ಪಾತ್ರಗಳ ಬಾಯಿಂದ ನಮ್ಮ ರಾಜ್ಯಾಂಗಘಟನೆಯಲ್ಲಿ ಪಾರ್ಲಿಮೆಂಟಿಗೆ ನ್ಯಾಯಾಧೀಶನನ್ನು ತೆಗೆದು ಹಾಕುವ ಅಧಿಕಾರ ನೀಡಲಾದುದನ್ನು ಮತ್ತು ನಿವೃತ್ತ ನ್ಯಾಯಾಧೀಶನು ಖಾಸಗಿಯಾಗಿ ವ್ಯವಹಾರ ನಡೆಸಬಾರದೆನ್ನುವುದು ಸರಿಯಲ್ಲವೆಂಬುದನ್ನು ಹೇಳಿಸಿ ಎವರು. ನ್ಯಾಯಾಧೀಶರ ನಿವೃತ್ತಿ ವಯಸ್ಸಿನ ಕುರಿತೂ ಲೇಖಕರಿಗೆ ಅಸಮಾಧಾನವುಂಟು.

ಪ್ರಕಾಶ ಆರನೇ ವಾರ್ಷಿಕಸಂಚಿಕೆ.

ಸಂಪಾದಕರು ಶ್ರೀ ಬಿ. ವ್ಯಾಸರಾವ್, ಮುಟಗಳ್ಳೀಳ ಬೆಲೆ೧-೨-೦.

ಆಕರ್ಷಣೀಯವಾದ ಈ ವಾರ್ಷಿಕ ಸಂಚಿಕೆಯಲ್ಲಿ ಕು. ಶಿ. ಹರಿದಾಸ ಭಟ್ಟ, ಕುಂದಾಪುರಿ ಡಿ. ಪದ್ಮಾ ಬಾಳಿಗ ಕಯ್ಯಾರ ಕಿಞ್ಞಣ್ಣ ರೈ, ಎ. ಎಸ್. ರಾಮಕೃಷ್ಣ, ಕೆ. ಪ್ರಭಾಕರ ರಾವ್ ಮೊದಲಾದವರ ವಾಚನೀಯ ಲೇಖನ, ಕವನ, ಕತೆಗಳಿದ್ದು ಸಂಚಿಕೆ ಸಂಗ್ರಾಹ್ಯವಾಗಿದೆ. 'ಸ್ಪಂಟ್'ಗಳಿಗೆ ಮೂಢಮಂಕ ಜನಕೆ ಬಲಿದೀಳದಿರಲಿ' ಎಂದು 'ಸದೀಕ್ಷಕ'ರು ಪತ್ರಿಕೆಯೊಂದರ ಕುರಿತು ಕೊಟ್ಟ ಎಚ್ಚರಿಕೆಯನ್ನು ಓದಿದರೆ—ಅವರೇ ಎತ್ತಿಹೇಳಿರುವ ಪತ್ರಿಕೆಗಳು 'ಹಿಂದೆಕಟ್ಟ್ಸ್' ಗೋಜಿಗೆ ಹೋಗದಿರುವಂತೆ ಇವರೂ ಅಲಕ್ಷಿಸಿ ಬಿಡಬಹುದಿತ್ತೆಂದು ತೋರುತ್ತದೆ. ಆದರೆ ಲೋಕೋಭಿನ್ನ ರುಚಿಃ ಯಲ್ಲವೆ! ಅಂತೂ ಕರುಣೋತ್ಸಾಹಿ ಸಂಪಾದಕರು ಆರು ವರ್ಷಕಾಲ ಈ ಪತ್ರಿಕೆಯನ್ನು ಕ್ರಮವಾಗಿ ನಡೆಸಿಕೊಂಡು ಬಂದಿರುವುದೂ ಈ ವಾರ್ಷಿಕ ಸಂಚಿಕೆ ಹೊರಡಿಸಿರುವುದೂ ನಿಜಕ್ಕೂ ಅಭಿನಂದನೀಯ.

❁ ಎರ್ನಾಕುಳಂನಿಂದ ಕೇಂದ್ರ ತೆಂಗಿನ ಸಮಿತಿಯವರು ಪ್ರಕಟಿಸುವ ಬುಲೆಟಿನ ಸ್ವಾತಂತ್ರ್ಯ ದಿನದ ಸಂಚಿಕೆ ತೆಂಗಿನ ವ್ಯವಸಾಯಕ್ಕೆ ಸಂಬಂಧಿಸಿದ ಅತ್ಯಂತ ಉಪಯೋಗಕರವಾದ ಲೇಖನಗಳಿಂದ ಕೂಡಿದೆ. ಅಕ್ಕಲ್ಪ ಬೆಲೆಗೆ ದೊರಕುವ ಈ ಬುಲೆಟಿನಿನಿಂದ ತೆಂಗಿನ ವ್ಯವಸಾಯದಲ್ಲಿ ಅಭಿರುಚಿಯುಳ್ಳವರು ತುಂಬ ಪ್ರಯೋಜನವನ್ನು ಹೊಂದಬಹುದು. ಶಾಸ್ತ್ರೀಯ ರೀತಿಯಿಂದ ವ್ಯವಸಾಯ ಮಾಡಿ, ಹೆಚ್ಚಿನ ಫಲ ಪಡೆಯಲು ಅನುಕೂಲವಾಗುವಂತೆಯೂ ತೆಂಗಿಗೆ ಬರುವ ರೋಗರುಜಿನಗಳ ಪರಿಹಾರಾರ್ಥವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತೂ ವಿಶೇಷ ಲೇಖನಗಳು ಈ ಬುಲೆಟಿನನಲ್ಲಿ ಸದಾ ಪ್ರಕಟಗೊಳ್ಳುತ್ತಿವೆ.

❁ ಮಂಗಳೂರಿನಿಂದ ಪ್ರಕಟವಾಗುವ [illegible] ಪತ್ರಿಕೆ [illegible] ತಿಂಗಳಿಂದ ಮಾಸ ಪತ್ರಿಕೆಗೆ ಏರಿದೆ. ಸಾಮಾನ್ಯ ಸಾಹಿತ್ಯದ ರಸ ಪೋಷಣೆ ಮಾಡುವಂಥ ಪತ್ರಿಕೆ ಇದಾಗಿರುತ್ತದೆ.

❁ ಹಾಗೆಯೇ ವ್ಯಾಕರಣಕೊಡನೆ ಸದ್ಯದಲ್ಲಿಯೇ ಸೇವಾಶೀಲಯಾಗಲಿರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ "ಸ್ವತಂತ್ರ"ವೆಂಬ ಕನ್ನಡ ವಾರಪತ್ರಿಕೆ ಹೊಸತಾಗಿ ಹೊರಟಿದೆ. ವಿಷಯ ವೈವಿಧ್ಯವಿರುವ ಈ ಪತ್ರಿಕೆಯಿಂದ ಕನ್ನಡ ನಾಡಿನ ಸೇವೆ ನೆರವೇರುವ ಭರವಸೆ ಇದೆ.

ಮೇಲಿನೆರಡೂ ಪತ್ರಿಕೆಗಳಿಗೆ ಹಾರ್ದಿಕ ಸ್ವಾಗತ.

ನೋಟೀಸು

ಉಡುಪಿ ಕಸಬಾ ಮುನ್ಸಿಪಾಲಿಟಿ ಅಂಬ್ಲಪಾಡಿ ವಾರ್ಡ್, Asst. No. 4257.—Door No 4—3—7ನೇ ಸರ್ವೆ ನಂಬ್ರ. 143/ 1 A ನೇ ಸಂಬ್ಸ್ 19ರ ಸ್ಥಳದಲ್ಲಿರುವ ಮನೆಯು ಎಲ್ಲು ನಾಯರಿಯ—ಸ್ವಂತ ಸಂಪೂರ್ಣ ಹಕ್ಕಿನದ್ದಾಗಿರುತ್ತದೆ—ಸದ್ರಿ ಎಲ್ಲು ನಾಯರಿಗೆ—ಕಾಳು ನಾಯರಿ 1 ಶೀನ ನಾಯರಿ 1 ಕೂಡ 2 ಜನ ಅಳಿಯಂದಿರು ಮತ್ತು ದಾರಮ ನಾಯರ್ತಿ. ೩ ಪದ್ದು ನಾಯರ್ತಿ ಕೂಡ 2ಜನ ಸೊಸೆಂದಿರು ಇರುತ್ತಾರೆ—ಕೂಡಾ 4ಜನರು ಹಕ್ಕು ದಾರರಾಗಿದ್ದು— ಸದ್ರಿ ಎಲ್ಲು ನಾಯರಿ ಮೃತ ಪಟ್ಟನಂತರ—ಪಟ್ಟೆ ಕಾಳು ನಾಯರಿ ಪಟ್ಟನ ಹೆಸರಲ್ಲಿ—ಮಾಡಿಕೊಂಡು——ಈಗ ಕ್ರಯಚೀಟು ಮಾಡಿಕೊಡುವುದಾಗಿ ಕೇಳತಿಳಿಯುವದ್ರಿಂದ—ಸದ್ರಿ ಸ್ಥಳ ಕಟ್ಟೋಣ—ದಂಗು ಮರುಷಕ್ಕೆ ಮಿಕ್ಕಿದ. ಸ. ಭಾರೆ—ಕ್ರಯ—ವಗೈರೆ ಯಾವದಾದರೂ—ಮಾಡಿಕೊಡಲಿಕ್ಕೆ—ಸದ್ರಿ ಕಾಳು ನಾಯರಿ ಪಟ್ಟನ ಹಕ್ಕಿನದ್ದಲ್ಲ—4 ಜನರ ಹಕ್ಕಿನದ್ದಾಗಿದ್ದು—ನಾಲ್ಕು ಜನರು ಸೇರದೆ—ಯಾವತರದ ಕ್ರಯ—ಆಧವು ಮೂಲಗೇಣಿ ವ್ಯಾದಗೇಣಿ ಯಾವದೂ ಮಾಡಲಿಕ್ಕೂ ಹಕ್ಕು—ಕಾಳು ನಾಯರಿಗೆ ಇರುವದಿಲ್ಲ. ಇದಕ್ಕೆ ವಿರೋಧ ಮಾಡಿ—ಮಾಡಿಕೊಂಡಲ್ಲಿ—ಬಾಕಿ 3 ಜನರ ಹಕ್ಕು ಪಡಿಯುವರೇ ಅಗತ್ಯವಿರುವ ದಾವಾ ದಾಖಲ್ಲು ಮಾಡಿ—ಹಕ್ಕು ಪಡಿಯಬೇಕಾಗುತ್ತದೆ.

ಶೀನ ನಾಯರಿ.
ಡ್ರೈವರ್.
S. V. M. Co. Ltd.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 39/1953

1. ವಿಟ್ಠಲ ಭಟ್ಟ- 2. ಕೃಷ್ಣ ಭಟ್ಟ- 3. ವೆಂಕಟ್ರಮಣ ಭಟ್ಟ- 4. ಪದ್ಮನಾಭ(ಮೈ). 5. ಹರಿ(ಮೈ)- ಉಡುಪಿ ಅಚ್ಯುತ ಭಟ್ರ ಮಗಂದಿರು ಮೈನರ 4, 5ನೇ ಅರ್ಜಿದಾರರ ಕ್ಷೇಮ ಚಿಂತಕ 1ನೇ ಅರ್ಜಿದಾರ 6. ಕಲ್ಯಾಣಿ ಅಮ್ಮ—ಉಡುಪಿ ಅಚ್ಯುತ [illegible] ವಿಧವೆ ಉಡುಪಿ ತಾಲೂಕು ಮೂಡ[illegible] ಗ್ರಾಮದ ಬನ್ನಂಜೆಯಲ್ಲಿರುವವರು.

—ಅರ್ಜಿದಾರರು,

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ—

1ರಿಂದ 5ನೇ ವರೆಗಿನ ಅರ್ಜಿದಾರರ ತಂದೆ ವ 6ನೇ ಅರ್ಜಿದಾರಳ ಗಂಡನೂ 13-8-53ರಲ್ಲಿ ಮೃತಪಟ್ಟ ಉಡುಪಿ ಅಚ್ಯುತ ಭಟ್ರು "The Canara Mutual Assurance Co, Ltd, Udipi" ಎಂಬ ಕಂಪನಿಯಲ್ಲಿ ಪಡೆದ ನಂ 3036ನೇ ಪೋಲಿಸಿ ಬಾಬ್ತು ಬರತಕ್ಕ ರೂಪಾಯಿ 1500-1 9ನ್ನು ವ್ಸೂಲು ಮಾಡುವರೆ ಸಂಬಂಧಪಟ್ಟ ಜವಾಬ್ದಾರನಾದ 1ನೇ ಅರ್ಜಿದಾರನಿಗೆ ಸಕ್ಸೆಷನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 21-10-53ಕ್ಕೆ ತನಿಖೆಗೆ ಇಟ್ಟಿರುವದರಿಂದ ಅದಕ್ಕೆ ಆಕ್ಷೇಪ ಹೇಳತಕ್ಕವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನಿಖೆ ನಡೆಯುವ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ವ್ಯಾಪ್ತಿಯ ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

H. Ramanatha Pai.
Advocate for Petitioner
Udipi, S. Kanara
Dated 19-9-1953

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000
ಜುಮ್ಲಾ ವಹಿವಾಟು .... „ 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ.ಎ.ಬಿ.ಯಲ್., ವಕೀಲ್,
ಬೇಂಕಿನ ಡೈರಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದ ನು ಧುರಂಧರರಸಾಯನ.

ಹೆಚ್ಚಿನ ಮಾಹಿತಿಗೆ— ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಮೇಷ—ದಿನಗಳೆದಂತೆ ನಿಮ್ಮ ಪರಿಸ್ಥಿತಿಯಲ್ಲಿ ಕೊಂಚ ಬಿಕ್ಕಟ್ಟು ಹೆಚ್ಚುತ್ತಾ ಬರುತ್ತಿದೆ. ಗೃಹಕಾಪತ್ರ್ಯಗಳು ಎಂದಿಗಿಂತ ಹೆಚ್ಚುವವು. ಮಕ್ಕಳ ಆರೋಗ್ಯ ಕೆಡಲಿದೆ. ಹಿಡಿದ ಕಾರ್ಯವು ಕೊನೆ ಹೊಂದುವುದೇ ಕಷ್ಟವೆನಿಸುವದು. ಅಪ್ತೇಷ್ಟರ ವಿರಹ ಆಕಸ್ಮಿಕ ಪ್ರವಾಸ ಆರ್ಥಿಕ ಬಿಕ್ಕಟ್ಟು ಇತ್ಯಾದಿಗಳಿಂದ ಪೀಡಿತರಾದ ನಿಮಗೆ ವಾರಾಂತ್ಯದ 2 ದಿನಗಳಲ್ಲಿ ಕೊಂಚ ಆರೋಗ್ಯ ಬಂಧು ಜನ ಸಮಾಗಮ ಗೃಹ ಸುಖ ಮೊದಲಾದವುಗಳು ಲಭಿಸಲಿವೆ.

ವೃಷಭ—ಇಂದಿನ ನಿಮ್ಮ ಭವಿತವ್ಯವು ಉತ್ತಮವಿದೆ. ಗೃಹಕೃತ್ಯದಲ್ಲಿನ ಅವ್ಯವಸ್ಥೆಗಳು ತೊಲಗುವವು. ನೌಕರಿ ವ್ಯಾಪಾರ ವ್ಯವಹಾರಾದಿ ಉದ್ಯಮಗಳಲ್ಲಿ ದಿನೇ ದಿನೇ ಪ್ರಗತಿಯುಂಟಾಗಲಿದೆ. ಆರ್ಥಿಕ ಭಾಗವು ಕೂಡ ಬಹುಮಟ್ಟಿಗೆ ಸುಧಾರಣೆ ಹೊಂದಲಿದೆ. ಆದರೆ ರಾಜಕೀಯ ರಂಗದಲ್ಲಿ ಕಾರ್ಯಗಳು ನೆನೆದಂತೆ ಸಿದ್ಧಿಸವು. ವಾರಾದಿಯ 3 ದಿನಗಳು ಅನುಕೂಲವಾಗಿವೆ.

ಮಿಥುನ—ಈ ವಾರವು ಮುಂಚೆಗಿಂತ ಸ್ವಲ್ಪ ಬಿಕ್ಕಟ್ಟಿನದಾಗಿ ಪರಿಣಮಿಸೀತು. ಆಯವ್ಯಯಗಳು ಸರಿ ತೂಕದಲ್ಲಿರುವುದರಿಂದ ಹಣದ ಕೊರತೆ ಕಾಣಿಸದು. ಆದರೆ ದೇಹಾರೋಗ್ಯವು ಉತ್ತಮವಿರದು ಮನೆಯಲ್ಲಿ ತಂದೆ ಮಕ್ಕಳು ಗಂಡ ಹೆಂಡಿರು ಇವರೊಳಗೆ ಪರಸ್ಪರ ಕಲಹಗಳುಂಟಾಗಲಿವೆ. ನಿದ್ಯೋಗ ಜೀವಿಗಳಿಗೆ ಹೆಚ್ಚಿನ ವಿಘ್ನ ವಿಡಂಬನಗಳು ಬರಲಿವೆ. ತಾ. 1. 4. 5. ಈ ದಿನಗಳು ಮಿಕ್ಕ ದಿನಗಳಿಗಿಂತ ಉತ್ತಮವಿವೆ.

ಕರ್ಕಾಟಿ—ನಿಮ್ಮ ಪರಿಸ್ಥಿತಿಯು ಇಂದು ಸ್ವಲ್ಪ ಮಟ್ಟಿಗೆ ಸುಧಾರಿಸಲಿದೆ. ದುಡಿಮೆಗೆ ತಕ್ಕ ಫಲ ಪ್ರಾಪ್ತಿಯಾಗುವುದರಿಂದ ದಿನ ಯಾಪನೆಯು ಸುಗಮವಾಗುವದು ಅನಿರೀಕ್ಷಿತ ಪ್ರವಾಸಗಳೊದಗಿ ಕಷ್ಟ ನಷ್ಟಗಳಿಗೀಡು ಮಾಡುವದು. ತನು ಮನಗಳಿಗೆ ಸುಖ ನೆಮ್ಮದಿಯು ದುರ್ಲಭವಾಗುವದು ಆಪ್ತೇಷ್ಟರ ಮತ್ತು ಬಂಧು ಜನರ ನೆರವುಳ್ಳ ನಿಮಗೆ ತಾ. 2. 3 5. 7. ಸ್ವಲ್ಪ ಅನಾದಾಯಿಯಾಗಿ ಪರಿಣಮಿಸಲಿವೆ.

ಸಿಂಹ—ಕಳೆದ ವಾರದಂತೆಯೇ ಈ ವಾರವು ನಿಮ್ಮ ಭಾಗಕ್ಕೆ ಉತ್ತಮವಾಗಿದೆ ಯಾದರೂ ಆರ್ಥಿಕ ಭಾಗವು ಅಷ್ಟೊಂದು ತೃಪ್ತಿಕರವಿರದು. ವಾಹನಾದಿಗಳಲ್ಲಿನ ಪ್ರಯಾಣವು ಅನಿಷ್ಟಕರವಿದೆ. ಕೆಲವೊಮ್ಮೆ ಮಿತ್ರ ಜನರೊಳು ಮನಸ್ತಾಪವುಂಟಾಗುವ ಸಂಭವವಿರುತ್ತದೆ. ತಾ. 4. 5. ಸೊರತಾಗಿ ಉಳಿದ ದಿನಗಳು ಅಷ್ಟೊಂದು ಚೆನ್ನಾಗಿರಲಾರವು.

ಕನ್ಯಾ—ನೀವು ಕೈಗೊಂಡ ಕಾರ್ಯಗಳಿಗೆ ಶತ್ರು ಜನರಿಂದಾಗಿ ನಾನಾ ತೆರೆದ ವಿಘ್ನ ವಿಡಂಬನಗಳು ಬರಲಿವೆ. ಪರಿಶ್ರಮಕ್ಕೆ ತಕ್ಕದಾದ ಫಲ ಲಭಿಸಲಾರದು. ಖರ್ಚು ಆದಾಯವನ್ನತಿಕ್ರಮಿಸುವುದರಿಂದ ಸಾಲ ಮಾಡುವ ಪ್ರಸಂಗ ಬರಲಿದೆ. ಶ್ರಮಜೀವಿಗಳಿಗೀವಾರವು ಅನಿಷ್ಟದಾಯಕವಿದೆ. ಅಜೀರ್ಣ ಮತ್ತು ಪಿತ್ತ ದೋಷದಿಂದ ಆರೋಗ್ಯಕ್ಕೆ ಹಾನಿಯಿದೆ. ತಾ. 2. 3 6. 7. ಅನುಕೂಲವಿವೆ.

ತುಲಾ—ದೈವಾನುಗ್ರಹವು ಸಾಕಷ್ಟು ಉತ್ತಮವಿರುವುದರಿಂದ ನೀವೀಕಾಲದಲ್ಲಿ ಯಾವ ಉದ್ಯಮವನ್ನು ಕೈಗೊಂಡರೂ ಅದು ಸಫಲವಾಗುವದು. ಜನರಿಂದ ಗೌರವಾದಾರಗಳನ್ನು ಪಡೆವಿರಿ. ಹಲವಾರು ತೆಂದಿಂದ ಧನಾಗಮವಾಗಲಿದೆ. ಪುತ್ರ ಮುಖ ದರ್ಶನ ಲಾಭದ ಯೋಗವಿದೆ. ಗೃಹೋಪಕರಣಗಳು ಪರಿಪೂರ್ಣವಾಗಿರುವವು. ವಾರಾಂತ್ಯದ 2 ದಿನಗಳಲ್ಲಿ ಕಿಂಚಿದ್ದೇಹಾಲಸ್ಯವಾಕ್ಕಲಹಗಳು ಕಾಣಿಸಿಯಾವು.

ವೃಶ್ಚಿಕ—ಏಕಾದಶದಲ್ಲಿದ್ದ ರವಿಯು ಹೊರತು ಇತರ ಗ್ರಹರೆಲ್ಲರೂ ಸದ್ಯ ನಿಮಗೆ ಪ್ರತಿಕೂಲರಿರುವುದರಿಂದ ನೀವೆಷ್ಟೇ ಸಾಹಸಗಳೆದ್ದರೂ ಕಾರ್ಯ ಸಾಧನೆಯಲ್ಲಿ ಕೃತಕೃತ್ಯರಾಗಲಾರಿರಿ. ಆತ್ಮೀಯರ ನೆರವು ನಿಮಗೆ ಲಭಿಸದು. ಗೃಹಕಾಪತ್ರ್ಯದ ಜನತೆಯಲ್ಲಿ ನಿಷ್ಠುರ ಅನಾರೋಗ್ಯಗಳಿಗೀಡಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಇಷ್ಟಪ್ರಾಪ್ತಿ ಸುಖ ಲಾಭಗಳು ಕಾಣಿಸಬಹುದು.

ಧನು—ಕೇವಲ ಬಯಕೆಯಿಂದ ಕಾರ್ಯವು ಸಿದ್ಧಿಸದು. ಉದ್ಯೋಗ ಪ್ರವೃತ್ತರಾಗಿಯೇ ಫಲವನ್ನುಣಬೇಕು. ಕಾರಣ ಬರೇ ಎಳ್ಳನ್ನು ಕಂದಿಟ್ಟೊಡನೆ ಎಣ್ಣೆ ಸಿಗದು. ಅದನ್ನು ಮರ್ದಿಸಿದಾಗಲೇ ತೈಲ ಲಭಿಸುವದು. ಅಂತೆಯೇ ನಿಮ್ಮ ಅದೃಷ್ಟವಿಂದು ಚೆನ್ನಾಗಿದ್ದರೂ ನೀವು ಔದಾಸೀನ್ಯ ತಾಳಿದರೆ ಮನೆ ಬಾಗಿಲಿಗೆ ಬಂದ ಭಾಗೀರಥಿಯನ್ನು ದೂರೀಕರಿಸಿದಂತೆ ಪಶ್ಚಾತ್ತಾಪಕ್ಕೆ ಗುರಿಯಾಗುವಿರಿ. ಸದುದ್ಯಮ ಪ್ರವೃತ್ತರಾಗಿ ಇಷ್ಟಾರ್ಥವನ್ನು ಪಡೆವಿರಿ.

ಮಕರ—ನಿಮ್ಮ ಅದೃಷ್ಟವು ಸ್ವಲ್ಪ ಮಟ್ಟಿಗೆ ಉತ್ತಮ ಸ್ಥಿತಿಗೆ ಬಂದಿದೆ. ಆತಿವವ ನಿಮ್ಮ ಶ್ರಮವು ಸಾರ್ಥಕವಾಗುವದು. ಖರ್ಚಿಗೆ ತಕ್ಕಷ್ಟು ದುಡಿಮೆಯನ್ನು ಹೊಂದುವಿರಿ. ಆದರೆ ಯಾವೊಂದು ಉದ್ಯಮವನ್ನು ಕೊನೆತನಕ ಹಿಡಿದು ಮಾಡುವ ಸ್ಥಿರ ಬುದ್ಧಿಯು ನಿಮ್ಮಲ್ಲಿಲ್ಲದ ಕಾರಣ ಅರ್ಧದಲ್ಲೇ ಕೈಬಿಡುವ ಪ್ರಸಂಗಗಳೇ ಹೆಚ್ಚು. ಚರ್ಮ ರೋಗಗಳಿಗೆ ಬಲಿಯಾದೀರಿ. ವಾರಾದಿಯ 3 ದಿನಗಳು ಇದ್ದುದರಲ್ಲಿ ಉತ್ತಮ.

ಕುಂಭ—ಸದ್ಯ ಗುರುವನ್ನು ಹೊರತಾಗಿ ಎಲ್ಲಾ ಗ್ರಹರೂ ಪ್ರತಿಕೂಲರೇ ಆಗಿರುವುದರಿಂದ ನಿಮ್ಮ ಇಚ್ಛೆಯಂತೆ ಕಾರ್ಯವು ನೆರವೇರದು. ಸ್ತ್ರೀ ನಿಮಿತ್ತ ಕಷ್ಟ ನಷ್ಟ ಅಪವಾದಗಳು ಬರಲಿವೆ. ಕೈಹಿಡಿದಾಕೆಯೊಡನೆ ನಿತ್ಯ ಕಲಹವಾದೀತು. ಧರ್ಮ ಕರ್ಮಗಳಲ್ಲಿ ಅನಾದರ ಗುರು ಹಿರಿಯರಲ್ಲಿ ತಾತ್ಸಾರಗಳು ಹುಟ್ಟಿಯಾವು. ಅದರೂ ವಾರಾದಿಯ 5 ದಿನಗಳಲ್ಲಿ ಹೆಚ್ಚಿನ ಅನಿಷ್ಟಕ್ಕೆ ಗುರಿಯಾಗಲಾರಿರಿ.

ಮೀನ—ವಿಕ್ರಮದಿಂದಲೇ ನಿಮ್ಮ ಕಾರ್ಯಸಾಧನೆಯಾಗಲಿದೆ. ಹಿಡಿದ ಛಲವನ್ನು ಕೊನೆ ತನಕ ಬಿಡದೆ ಹೋರಾಡುವಿರಿ. ನಿಮ್ಮ ಪರಿಶ್ರಮವು ಸಾರ್ಥಕವಾಗುವದು. ವ್ಯಾಪಾರಿಗಳಿಗೂ ಸೇವಕ ಜನತೆಗೂ ದಿನ ಯಾಪನೆಯು ಸ್ವಲ್ಪ ಕಷ್ಟವೆನಿಸೀತು. ಆತ್ಮೀಯರ ವಿಯೋಗ ದುಃಖಕ್ಕೆ ಗುರಿಯಾಗುವಿರಿ. ಕೆಲವೊಮ್ಮೆ ವಾತ ಪ್ರಕೋಪದಿಂದಾಗಿ ಆರೋಗ್ಯವೂ ಕೆಟ್ಟೀತು ವಾರಾಂತ್ಯದ 4 ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ವಾರದ ಒಳಿತು ಕೆಡುಕುಗಳು

ತಾ. ೧—೧೦—೫೩ರಿಂದ ತಾ. ೭—೧೦—೫೩ರ ವರೆಗೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಸ್ಮಾಲ ನಂಬ್ರ 470/1953

ವಾದಿ ಮಂಜಯ್ಯ ಶೆಟ್ಟಿ, ಸುಬ್ಬಿ ಶೆಟ್ಟಿ ಮಗ, ಕುಂದಾಪುರ ತಾಲ್ಲೂ ನಂಬ್ರ 1ನೆ ಶೀರೂರು ಗ್ರಾಮದ ಮೈದಿನಪುರದಲ್ಲಿರುವವರು Post Sherur.

ಪ್ರತಿವಾದಿರು- 1 ಮಾಚ, 3 ದಾರ ಹೆಂಗಸು, 4 ಗೋವಿಂದು ಹೆಂಗಸು, ಬಳೆಯಮ್ಮನ ಮನೆ ಮರ್ಲಿಹೆಂಗಸಿನ ಮಕ್ಕಳು ಕುಂದಾಪುರ ತಾಲ್ಲೂ ನಂಬ್ರ 4ನೆ ಪಡುವರಿ ಗ್ರಾಮ ದಲ್ಲಿರುವವರು. Post Byndoor.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ಸದ್ರಿ ವಾದಿಯು ಸದ್ರಿ ಪಟ್ಟದಾರರ ಮೇಲೆ ತಾ. 19-6-51ರಲ್ಲು ರೂ. 200-0-0ಕ್ಕೆ ಬರೆಸಿಕೊಟ್ಟ ದಿಮಾಂಡ ನೋಟಿನ ಹಣ ಬಡ್ಡಿ ಕೂಡಾ ರೂ. 229-9 0ನ್ನು ಬನಮಾಡಿಕೊಳ್ಳುವರೆ ಮೇಲಿನ ವಾದಿಯು ದಾಖಲು ಮಾಡಿದ ಸ್ಮಾಲಿನ ದಾವೆ ತಾ. 1-10-53ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ದಾವೆ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

M. M. Hebbar,
Advocate for Plaintiff.

ಮೊಕ್ಕಾಂ: ಕುಂದಾಪುರ, ತಾ. 22-9 53

(೧ನೇ ಪುಟದಿಂದ)

"ಆಂಧ್ರದ ಹೊಸ ಸರಕಾರವು ನಿಮ್ಮಿಂದ ಹೆಚ್ಚು ಸಂಗತಿಗಳನ್ನು ಅಪೇಕ್ಷಿಸುತ್ತದೆ. ಅದು ಹೊಸ ರಾಜ್ಯ ಮಾತ್ರವಲ್ಲ ಅದೊಂದು ನೂತನ ಸಾಹಸ. ಆಂಧ್ರದರೊಂದಿಗೆ ಸಂಪರ್ಕ ಸ್ಥಾಪಿಸಿಕೊಳ್ಳಲಾದುದೂ ನಿಮಗೆ ಹೆಮ್ಮೆಯಾಗಿದೆಯೆಂದು ತಿಳಿಯುತ್ತೇನೆ. ನಿಮ್ಮಿಂದ ಅಪೇಕ್ಷಿತವಾದ ಕರ್ತವ್ಯವನ್ನು ಭಯವಿಲ್ಲದೆ, ಪಕ್ಷಪಾತವಿಲ್ಲದೆ, ಸಮುಚಿತವಾದ ರೀತಿಯಲ್ಲಿ ನಿರ್ವಹಿಸಿದರೆ, ಆಂಧ್ರಕ್ಕೆ ಅದು ದೊಡ್ಡ ಸೇವೆ. ನಿಮ್ಮೆಲ್ಲರ ಈ ಶ್ರಮದ ಫಲವಾಗಿ ಆಂಧ್ರವು ದೃಢವಾಗಿ ಬೇರೂರಿ ಸರಕಾರೀ ಆಡಳಿತ ಹಾಗೂ ಅಭಿವೃದ್ಧಿ ಯೋಜನೆಗಳಿಂದ ತನಗೊಂದು ಹೆಸರುಗಳಿಸಿದರೆ, ಅದಕ್ಕಿಂತ ಹೆಚ್ಚಿನ ಬಹುಮಾನವೇನು ಬೇಕು?"

—ಚಂದೂಲಾಲ ತ್ರಿವೇದಿಯವರು ಆಂಧ್ರದ ಸರಕಾರೀ ನೌಕರರಿಗೆ ಮಾಡಿದ ಭಾಷಣ.

❦

"ಪ್ರಜಾಸತ್ತಾತ್ಮಕ ರಾಜ್ಯ ಪದ್ಧತಿಯಲ್ಲಿ ಬಹುಮತದ ನಿರ್ಣಯದಂತೆ ನಡೆಯಬೇಕಾದುದು ನಮ್ಮ ಕರ್ತವ್ಯ. ಹಳೆಯ ಸಂಬಂಧಗಳನ್ನು ಕಡಿದುಕೊಂಡು ಹೊಸ ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಪ್ರಸಂಗ ಬಂದಿರುವುದಕ್ಕಾಗಿ ಬಳ್ಳಾರಿಯ ಜನರು ಅತೀವ ದುಃಖಿಗಳಾಗಿರುವುದೆಂಬುದನ್ನು ನಾನು ಬಲ್ಲೆನು. ಈ ಜಿಲ್ಲೆಯ ಏಳು ತಾಲೂಕುಗಳು ಅಕ್ಟೋಬರ ೧ನೇ ದಿನಾಂಕ ಮೈಸೂರು ರಾಜ್ಯದ ಅಧೀನಕ್ಕೆ ಬರುವುವು. ನಮ್ಮ ದೇಶವು ಒಂದೇ ಆಗಿದ್ದು ಆಡಳಿತೆಯ ಅನುಕೂಲತೆ ಮತ್ತು ಬೇರೆ ಕಾರಣಗಳಿಗಾಗಿ ಗಡಿಗಳಲ್ಲಿ ಬದಲಾವಣೆ ಮಾಡಬೇಕಾಗಿ ಬಂದಾಗ-ನಮ್ಮಲ್ಲಿಯ ಐಕ್ಯಕ್ಕೆ ಭಂಗವುಂಟಾಗದಂತಿದ್ದರೆ, ಅದಕ್ಕೆ ಹೆದರುವ ಭಯ ಬೇಡ.

"ಬಳ್ಳಾರಿಯ ಜನರಾದ ನೀವು ಹೊಸ ವಾತಾವರಣಕ್ಕೆ ಚೆನ್ನಾಗಿ ಹೊಂದಿಕೊಳ್ಳುವಿರೆಂದೂ ನಿಮ್ಮನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ರಾಜ್ಯವು ನಿಮ್ಮ ಹಿತರಕ್ಷಣೆಯನ್ನು ದಕ್ಷವಾದ ರೀತಿಯಲ್ಲಿ ಮಾಡುವುದೆಂದೂ ವಿಶ್ವಾಸವಿದೆ. ನೀವಾದರೂ ಆ ಸರಕಾರದೊಡನೆ ಸಂಪೂರ್ಣ ಸಹಕರಿಸಿ ರಾಜ್ಯ ಹಾಗೂ ಭಾರತದ ಸತ್ವಜೆಗಳಾಗಿ ಬಾಳುವಿರೆಂದೂ ಆಶಿಸುತ್ತೇನೆ."

—ಮದ್ರಾಸಿನ ರಾಜ್ಯಪಾಲ ಶ್ರೀ ಪ್ರಕಾಶರು ಬಳ್ಳಾರಿಯ ಕನ್ನಡಿಗರನ್ನು ಕುರಿತು ಹೇಳಿದ ಮಾತು

ಪ್ರಕಟಣೆ

ಮಲ್ಪೆ ಪೋರ್ಟುಲೈಟ್ ಕೀಪರ್ ಆರ್. ಸುಬ್ಬರಾಯುಲು ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಪತ್ನಿ ತಾಯಾರಮ್ಮ ಎಂಬಾಕೆಯು ತಾ 25-8-53 ರಲ್ಲಿ ಸುಮಾರು ಮಧ್ಯಾಹ್ನ 1 ಗಂಟೆಗೆ ಬಂದರಗಡದಲ್ಲಿಯ ಮನೆಯಿಂದ ಹೊರಗೆ ಹೋದವಳು ಹಿಂದಕ್ಕೆ ಬಂದಿರುವುದಿಲ್ಲ. ಅವಳ ಪ್ರಾಯ 32 ವರ್ಷವಿದ್ದು ಸುಮಾರು 4½ ಅಡಿ ಎತ್ತರ ವಿರುತ್ತಾಳೆ. ಮೈಬಣ್ಣ ಕಪ್ಪು. ಅವಳಿಗೆ ತಮಿಳು ಮತ್ತು ತೆಲುಗು ವಿನಹ ಬೇರೆ ಯಾವ ಭಾಷೆಯೂ ಬರುವುದಿಲ್ಲ. ಅವಳಿಗೆ ಕೆಲವು ದಿವಸಗಳಿಂದ ಬುದ್ಧಿ ಸ್ವಾಸ್ಥ್ಯವಿದ್ದಿಲ್ಲ ಯಾರಿಗಾದರೂ ಅವಳ ಪತ್ತೆ ಸಿಕ್ಕಿದ್ದಲ್ಲಿ ಅಂತಹವರು ದಯಮಾಡಿ ನನ್ನ ಈ ಕೆಳಗಿನ ವಿಳಾಸಕ್ಕೆ ತಿಳಿಸಿದಲ್ಲಿ ಉಚಿತ ಬಹುಮಾನ ಕೊಡಲಾಗುವುದು.

ಆರ್. ಸುಬ್ಬರಾಯುಲು
C/o ಪೋರ್ಟ್ ಕನ್ಸರ್ವೇಟರ್
ಮಲ್ಪೆ (ದ ಕನ್ನಡ)

ಭರ್ತ ಕಂಟ್ರೋಲ

[ಮಕ್ಕಳನ್ನ ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—: ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33 No 6 8-10-1953 ವರ್ಷ ೩೩ ವಾರ ೬

ಬಳ್ಳಾರಿಯ ಕನ್ನಡಿಗರಿಗೆ ಮೈಸೂರಿನ ಸ್ವಾಗತ

ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳು ಆಂಧ್ರ ರಾಜ್ಯ ನಿರ್ಮಾಣದ ಪರಿಣಾಮವಾಗಿ ಮೈಸೂರಿನೊಂದಿಗೆ ಈ ಅಕ್ಟೋಬರ ೧ನೇ ದಿನಾಂಕದಂದು ವಿದ್ಯುಕ್ತವಾಗಿ ಸೇರ್ಪಡೆ ಹೊಂದಿದವು; ಮತ್ತು ಇದನ್ನು ಸಂಯುಕ್ತ ಕರ್ನಾಟಕ ರಾಜ್ಯ ನಿರ್ಮಾಣದ ಪ್ರಥಮ ಘಟ್ಟವೆಂದೂ ಹೇಳಬಹುದು. ಹಡಗಲಿ, ಹರಪನಹಳ್ಳಿ, ಹೊಸಪೇಟೆ, ಕೂಡ್ಲಿಗಿ, ಸೊಂಡೂರು, ಸಿರುಗುಪ್ಪ ಮತ್ತು ಬಳ್ಳಾರಿ ಎಂಬೀ ತಾಲೂಕುಗಳು ಮೈಸೂರಿಗೆ ಸೇರುವುದರಿಂದ ಮೈಸೂರು ರಾಜ್ಯದ ವಿಸ್ತೀರ್ಣವು ೩೮೨೧ ಚದರ ಮೈಲುಗಳಷ್ಟು ಹೆಚ್ಚಿಕೊಂಡಿತು. ಬಳ್ಳಾರಿ ಜಿಲ್ಲೆಯ ಈ ಕನ್ನಡ ವಿಭಾಗವು ಪ್ರಾಚೀನ ಇತಿಹಾಸ ಕಾಲದಿಂದಲೂ ಮೈಸೂರಿನೊಂದಿಗೆ ಸಾಂಸ್ಕೃತಿಕ ಬಾಂಧವ್ಯವನ್ನು ಇಟ್ಟುಕೊಂಡಿದ್ದಿತು. ಆರ್ಥಿಕ ದೃಷ್ಟಿಯಿಂದಲೂ ಮೈಸೂರು ಮತ್ತು ಬಳ್ಳಾರಿ ಜಿಲ್ಲೆಯ ಈ ಪ್ರದೇಶಗಳಲ್ಲಿ ವಿಶೇಷ ಸಾಮ್ಯತೆ ಕಂಡುಬರುತ್ತದೆ. ತಲಕಾಡಿನ ಗಂಗರಸರ ಕಾಲದಲ್ಲೂ ದ್ವಾರ ಸಮುದ್ರದ ಹೊಯ್ಸಳ ಬಲ್ಲಾಳರ ಕಾಲದಲ್ಲೂ ಬಳ್ಳಾರಿಯು ಕನ್ನಡಿಗರ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರದ ಅರಸರ ಕಾಲದಲ್ಲಿ ಈ ಪ್ರದೇಶವು ಅತ್ಯಂತ ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿ, ಕನ್ನಡದ ಕೀರ್ತಿಯನ್ನು ದಿಗ್ದೇಶಗಳಿಗೆ ಪ್ರಸರಿಸಿತು. ಹರಿಶ್ಚಂದ್ರ ಕಾವ್ಯವನ್ನು ರಚಿಸಿದ ಕವಿ ರಾಘವಾಂಕನು ಹಂಪೆಯ ವಿರೂಪಾಕ್ಷನು ನಮ್ಮೆಲ್ಲರ ಭಕ್ತಿಯನ್ನು ವೃದ್ಧಿಗೊಳಿಸಿ, ಜ್ಞಾನಿಗಳನ್ನಾಗಿ ಮಾಡಲೆಂದು ಪ್ರಾರ್ಥಿಸಿ, ಕನ್ನಡಿಗರ ಯಶೋಕಾಮನೆಯನ್ನು ಮಾಡಿದನು. ಕನ್ನಡಿಗರ ಸಾಂಸ್ಕೃತಿಕ ಚಟುವಟಿಕೆಯ ರಂಗಭೂಮಿಯಾಗಿ ಇಂದು ಹಂಪೆಯ ಹಾಳು ಗುಡಿಗಳು ಇವೆ; ಮತ್ತು ಶೌರ್ಯ ಸಾಹಸದ ದ್ಯೋತಕವಾಗಿ ವಿಜಯನಗರದ ಇತಿಹಾಸವಿದೆ.

❖

ಮೈಸೂರಿನೊಡನೆ ಬಳ್ಳಾರಿಯ ಬಾಂಧವ್ಯ ವಿಜಯನಗರ ಅರಸರ ಬಳಿಕ ಹೈದರ ಆಲಿಯ ಕಾಲದಲ್ಲಿ ಗಾಢ ಸ್ವರೂಪವನ್ನು ಧರಿಸಿತು. ಟಿಪ್ಪುವಿನ ರಾಜ್ಯವನ್ನು ೧೭೯೨ರಲ್ಲಿ ವಿಭಜಿಸಿದಾಗ ಬಳ್ಳಾರಿಯ ಸ್ವಲ್ಪಾಂಶ ನಿಜಾಮರ ಪಾಲಿಗೆ ಸೇರಿತು. ಪುನಃ ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ರಾಜ್ಯದ ಪಾಲುಪಟ್ಟಿ ನಡೆದಾಗ ನಿಜಾಮರ ಕೈಗೆ ಬಳ್ಳಾರಿಯ ಉಳಿದ ಭಾಗವೂ ಹೋಯಿತು. ಆದರೆ ೧೮೦೦ರಲ್ಲಿ ನಿಜಾಮನು ಬಳ್ಳಾರಿ ಜಿಲ್ಲೆಯನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟನು; ಮತ್ತು ೧೮೮೨ರಿಂದ ಬಳ್ಳಾರಿಯು ಪ್ರತ್ಯೇಕವಾದ ಒಂದು ಜಿಲ್ಲೆಯಾಗಿ ಬ್ರಿಟಿಷ್ ಕಲೆಕ್ಟರರ ಆಡಳಿತ ಅನುಸಾರವಾಗಿ ಅಂದಿನಿಂದ ನಡೆದುಕೊಂಡು ಬಂದಿದೆ.

❖

ಆಂಧ್ರರಾಜ್ಯ ನಿರ್ಮಾಣದ ಪರಿಣಾಮವಾಗಿ ಮೈಸೂರಿಗೆ ಬಂದಿರುವ ಬಳ್ಳಾರಿ ಜಿಲ್ಲಾ ಪ್ರದೇಶದಲ್ಲಿ ಸ್ವಲ್ಪಾಂಶ ಫಲವತ್ತಾದ ಎರೆಮಣ್ಣು ತುಂಬಿ ಹತ್ತಿಯ ಬೆಳೆಗೆ ಸೊಗಸಾಗಿದೆ. ಆದರೆ ಹೆಚ್ಚಿನ ಪ್ರದೇಶದಲ್ಲಿ ಗುಡ್ಡ ಬೆಟ್ಟಗಳೇ ತುಂಬಿವೆ ಸುಮಾರು ೨೩ ಇಂಚು ವಾರ್ಷಿಕ ಮಳೆಯುಳ್ಳ ಈ ಪ್ರದೇಶ ಸಮುದ್ರಮಟ್ಟದಿಂದ ೧೦೦೦—೨೦೦೦ ಅಡಿಯಷ್ಟು ಎತ್ತರವಿರುವುದು. ಇಲ್ಲಿಯ ಹವೆ ತೀರಾ ಒಣಕಲು ಆದರೆ ಆರೋಗ್ಯಕ್ಕೆ ಇದು ತೊಂದರೆಯುಂಟು ಮಾಡುವುದಿಲ್ಲ ಸೊಂಡೂರಿನ ರಾಮನ ದುರ್ಗದ ಮೇಲಿರುವ ಆರೋಗ್ಯ ಧಾಮದಲ್ಲಿ ಉಷ್ಣತಾಮಾನವು ಬಳ್ಳಾರಿಯ ಹವೆಗಿಂತ ೧೨ ಡಿಗ್ರಿಗಳಷ್ಟು ತಂಪಾಗಿರುತ್ತದೆ ದಕ್ಷಿಣದ ನೀರಭೂಮಿಯು ಇಲ್ಲಿ ಈಶಾನ್ಯಕ್ಕೆ ಇಳಿ ಮುಖವಾಗುತ್ತಾ ನಡೆದಿದೆ. ಈ ಪ್ರದೇಶದಲ್ಲಿ ಆರಾದಾಯಕವಾಗಿ ಕಂಡು ಬರುವ ಸಂಗತಿಯೆಂದರೆ ಉದ್ದಕ್ಕೂ ಪ್ರವಹಿಸುವ ನೀರು ತುಂಬಿದ ತುಂಗಭದ್ರಾ ನದಿ ಮತ್ತು ಅದಕ್ಕೆ ಬಂದು ಸೇರುವ ಬೇರೆ ಉಪನದಿಗಳು. ಈ ನದಿ ಮುಂದೆ ಆಂಧ್ರದ ತಾತ್ಪೂರ್ತಿಕ ರಾಜಧಾನಿಯಾದ ಕರ್ನೂಲದ ಸಮೀಪ ಕೃಷ್ಣೆಯನ್ನು ಸೇರುತ್ತದೆ.

❖

ತುಂಗಭದ್ರಾ ನದಿಗೆ ಅಣೆಕಟ್ಟನ್ನು ಕಟ್ಟುತ್ತಿರುವುದರಿಂದ, ಮೈಸೂರು ಸರಕಾರ ಭಾರತದ ಪುನಃ ನಿರ್ಮಾಣಕಾರ್ಯದಲ್ಲಿ ಒಂದು ಮಹತ್ವದ ಯೋಜನೆಯಲ್ಲಿ ಆಸಕ್ತಿಯುಂಟಾಗುವಂತಾಯಿತು. ಮದ್ರಾಸು ಹಾಗೂ ಹೈದರಾಬಾದು ಸರಕಾರಗಳು ಸಂಯುಕ್ತ ಜವಾಬ್ದಾರಿಯಿಂದ ೧೯೪೫ರಲ್ಲಿ ತೊಡಗಿದ ಈ ಯೋಜನೆಯು ಕೊನೆಯ ಹಂತವನ್ನು ಮುಟ್ಟಿದ್ದು, ಈ ಅಂತ್ಯ ಕಾಲದಲ್ಲಿ ಅವರ ಒಡೆತನವು ಮೈಸೂರು ಮತ್ತು ಆಂಧ್ರ ಹಾಗೂ ಹೈದರಾಬಾದುಗಳ ಕೈಗೆ ಬಂದಿದೆ. ರಾಷ್ಟ್ರಪತಿಗಳು ಒಂದು ವಿಶೇಷ ಮಂಡಳವನ್ನು ಈ ಯೋಜನೆಯ ಬಗ್ಗೆ ನೇಮಕ ಮಾಡಿರುವರು. ಈ ಯೋಜನೆಯಲ್ಲಿ ಕಾಲುವೆ ಭಾಗವನ್ನು ಇನ್ನೂ ಹೆಚ್ಚು ವಿಸ್ತರಿಸುವುದು ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಇನ್ನೂ ಬಾಕಿ ಇದೆ ಇಂಜನೀಯರಿಂಗ್ ಸಾಹಸದಲ್ಲಿ ಭಾರತಕ್ಕೆ ಮಾದರಿಯಾಗಬಲ್ಲ ಮೈಸೂರು ಈ ಕೆಲಸವನ್ನು ಆಂಧ್ರ, ಹೈದರಾಬಾದುಗಳ ಸಹಕಾರದಿಂದ ದಕ್ಷವಾದ ರೀತಿಯಲ್ಲಿ ಪೂರೈಸುವ ಭರವಸೆ ಇದೆ.

❖

ವಿಜಯನಗರದ ಅವಶೇಷಗಳು ಮೈಸೂರಿನ ಪ್ರಾಕೃತಿಕ ಹಾಗೂ ಐತಿಹಾಸಿಕ ಪ್ರೇಕ್ಷಣೀಯತೆಯನ್ನು ಇನ್ನಷ್ಟು ಶೋಭಾಯಮಾನ ಮಾಡುತ್ತವೆ. ಇದಲ್ಲದೆ ಮೈಸೂರು ಸರಕಾರವು ಯೋಗ್ಯ ಪ್ರಯತ್ನವನ್ನು ಕೈಗೊಂಡರೆ ಬಳ್ಳಾರಿ ಜಿಲ್ಲಾ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಸೂರೆಗೊಳ್ಳಲೂ ಬರುತ್ತದೆ. ಹೊಸಪೇಟೆಯಲ್ಲಿ ಈಗಾಗಲೇ ಒಂದು ದೊಡ್ಡ ಸಕ್ಕರೆಯ ಕಾರ್ಖಾನೆಯುಂಟು. ಜೋಗಿನ ವಿದ್ಯುಚ್ಛಕ್ತಿಯಿಂದ ಇಡೀ ಮೈಸೂರು ರಾಜ್ಯದ ಔದ್ಯೋಗೀಕರಣ ಸಾಧಿಸಿದಂತೆ ತುಂಗಭದ್ರಾ ಯೋಜನೆಯಂತೆ ಜಲ ವಿದ್ಯುಚ್ಛಕ್ತಿಯನ್ನು ಪಡೆದು, ಬಳ್ಳಾರಿಯ ಭೂಗರ್ಭ ನಿಧಿಯ ಸಮುಚಿತ ಉಪಯೋಗ ಪಡೆಯಲು ಅವಕಾಶವುಂಟು. ಸ್ವಾತಂತ್ರ್ಯ ಪೂರ್ವದಲ್ಲಿ ದೇಶೀಯ ಸಂಸ್ಥಾನಗಳಲ್ಲಿ ಒಂದೆನಿಸಿದ್ದ ಸೊಂಡೂರಿನ ಗುಡ್ಡಪ್ರದೇಶಗಳು ಭಾರತದಲ್ಲಿಯೇ ಕಬ್ಬಿಣದ ಅದುರಿಗೆ ಹೆಸರುಗೊಂಡಿದೆ. ಭದ್ರಾವತಿಯಲ್ಲಿ ಅತ್ಯಾಧುನಿಕ ರೀತಿಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯನ್ನು ತೆರೆದು ನಡೆಸುತ್ತಿರುವ ಮೈಸೂರು ಸರಕಾರದ ಸೊಂಡೂರಿನ ಖನಿಜ ದ್ರವ್ಯವನ್ನು ಬಳಸಿಕೊಳ್ಳಲು ಪ್ರಯತ್ನಿಸಬಹುದು.

❖

ಇಷ್ಟು ದೊಡ್ಡ ಪ್ರಕೃತಿ ಸಂಪತ್ತು ಇದ್ದರೂ ಪ್ರಾರಂಭದಲ್ಲಿ ಬಳ್ಳಾರಿಯ ಈ ಪ್ರದೇಶಗಳು ಮೈಸೂರಿಗೆ ಸೇರುವ ಸುದ್ದಿ ಕೇಳಿ, ಮೈಸೂರಿನ ಬಂಧುಗಳು ಕೊರತೆಯ ಪ್ರದೇಶದ ಹೊಣೆ ಹೊರಬೇಕಾಗುವುದಲ್ಲಾ ಎಂದು ಸಂತಾಪ ಪಟ್ಟರು. ಆದರೆ ಬಳ್ಳಾರಿ ನಗರ ಸಮೇತ ಬಳ್ಳಾರಿ ತಾಲೂಕು ಮೈಸೂರಿನೊಂದಿಗೆ ಸೇರ್ಪಡೆ ಹೊಂದುವುದರಿಂದ ಮತ್ತು ಮೇಲೆ ಹೇಳಿದ ಅವ್ಯಕ್ತ ಸಂಪತ್ತಿನ ದೆಸೆಯಿಂದ ಈಗ ಮೈಸೂರಿಗೆ ಈ ಚಿಂತೆ ತೋರುವುದಿಲ್ಲ; ಬದಲು ಬಳ್ಳಾರಿಯ ಕನ್ನಡಿಗರಿಗೆ ಮೈಸೂರಿನ ಜನತೆಯೂ ಸರಕಾರವೂ ರಾಜಪ್ರಮುಖರೂ ಅಕ್ಕರೆಯ ಸ್ವಾಗತವನ್ನು ನೀಡುತ್ತಿರುವರು. ಮತ್ತು ಮೈಸೂರನ್ನು ಬಳ್ಳಾರಿಯ ಕನ್ನಡಿಗರು ತಮ್ಮದೇ ಮನೆಯನ್ನಾಗಿ ಮಾಡಿಕೊಳ್ಳಲೆಂದು ಬಯಸುವರು. ಇದು ಎಷ್ಟು ಸಂತೋಷಪ್ರದವಾದ ವಿಚಾರ! ಮೈಸೂರಿನ ನೆರಳಲ್ಲಿ ಬಳ್ಳಾರಿಯು ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಲೆಂದು ಹೃತ್ಪೂರ್ವಕ ಹಾರೈಸಲು ನಮಗೆ ತುಂಬ ಅಭಿಮಾನ.

ಮಧುವಿಗಿಂತಲೂ ಮಧುರವಾದ ಕಥಾ ಸಂಗ್ರಹ.

ಮಧುವನ

ಕರ್ನಾಟಕದ ಸುಪ್ರಸಿದ್ಧ ಕತೆಗಾರರ ಕತೆಗಳು. ಕತೆಗಳೊಂದಿಗೆ ಕತೆಗಾರರ ಪರಿಚಯಗಳಿವೆ, ಭಾವಚಿತ್ರಗಳಿವೆ.

“ಮಧುವನ”ವೆಂಬ ಕಥಾಸಂಗ್ರಹವನ್ನು ನಾನು ಓದಿ ನೋಡಿದ್ದೇನೆ. “ಸವಿಲುಗರಿ” “ಕಾಮನ ಬಿಲ್ಲು” ಎಂಬ ಸಂಗ್ರಹಗಳ ಹೊರಬಿದ್ದು ಅಲ್ಲಿ ಕಾಣಬಾರದ ಹೆಸರುಗಳು ಕೆಲವು “ಮಧುವನ”ದಲ್ಲಿ ನಮಗೆ ಪರಿಚಿತವಾಗಿ ಸಿಕ್ಕುತ್ತವೆ. “ಮಧುವನ”ದ ಸಂಪಾದಕರ ಕೆಲಸವು ಸಣ್ಣದಲ್ಲ. ಹತ್ತು ಎಷ್ಟೋ ಹಾಲು ಕರೆದರೂ ಅದನ್ನು ಹೆಪ್ಪು ಹಾಕುವ ಜಾಣ್ಮೆಯೂ ಅವಶ್ಯವಾಗಿದೆ. ಅದನ್ನು ಎಲ್ಲರೂ ಒಪ್ಪುವಂತೆ ಕೈಗೊಂಡಿದ್ದಾರೆ. ಲೇಖಕ, ಲೇಖಕಿಯರ ಭಾವಚಿತ್ರಗಳು, ಅವರ ಕತೆಗಳ ವಿಷಯದಲ್ಲಿ ಬರೆದ ವಿಮರ್ಶಾತ್ಮಕ ಟಿಪ್ಪಣಿಗಳು ಇದರಲ್ಲಿ ಕೂಡಿ ಈ ಪುಸ್ತಕಕ್ಕೆ ಸಹಜವಾಗಿಯೇ ಬೆಲೆಯನ್ನು ಹೆಚ್ಚಿಸಿವೆ. ಕಲೆಯ ದೃಷ್ಟಿಯಿಂದ ಇದೊಂದು ಉತ್ತಮ ತರಗತಿಯ ಕಥಾಸಂಗ್ರಹವಾಗಿದೆ.

— ವಿ. ಕೃ. ಗೋಕಾಕ.

ಬಿಳಿ ಕಾಗದ ಆಕರ್ಷಕ ಹೊರಮೈ. ಬೆಲೆ ರೂ ೨—೮—೦.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಂಧ್ರ ರಾಜ್ಯ

ಮೊನ್ನೆ ಅಕ್ಟೋಬರ ೧ನೇ ದಿನಾಂಕ ಪ್ರಧಾನಿ ನೆಹರೂರವರ ಹಸ್ತದಿಂದ ಉದ್ಘಾಟಿಸಲ್ಪಟ್ಟ ಆಂಧ್ರ ರಾಜ್ಯವು ೧೯೫೦ನೇ ಇಸವಿಯಲ್ಲಿ ಭಾರತದ ರಾಜ್ಯಾಂಗ ಘಟನೆಯು ಸ್ವೀಕಾರವಾದ ಬಳಿಕ, ನಿರ್ಮಿಸಲ್ಪಟ್ಟ ಸರ್ವ ಪ್ರಥಮ "ಅ" ವರ್ಗದ ರಾಜ್ಯವಾಗಿರುತ್ತದೆ. ಈ ಹೊಸ ರಾಜ್ಯವು ೧೨·೪೦° ಉತ್ತರ ಹಾಗೂ ೧೯·೮೦° ಉತ್ತರ ಅಕ್ಷಾಂಶಗಳ ನಡುವೆ ಮತ್ತು ೭೬·೭೦° ಪೂರ್ವ ಹಾಗೂ ೮೪·೪೫° ಪೂರ್ವ ರೇಖಾಂಶಗಳ ಮಧ್ಯದಲ್ಲಿ ಚಾಚಿರುತ್ತದೆ. ಉತ್ತರ ಮತ್ತು ವಾಯವ್ಯದಲ್ಲಿ ಆಂಧ್ರ ರಾಜ್ಯಕ್ಕೆ ಒಡಿಸಾ, ಮಧ್ಯ ಪ್ರದೇಶಗಳು ಸೀಮೆಯಾಗಿವೆ. ಪಶ್ಚಿಮದಲ್ಲಿ ಹೈದರಾಬಾದು ಮತ್ತು ಮೈಸೂರುಗಳಿವೆ. ಉಳಿಕೆಯ ಮದ್ರಾಸು ರಾಜ್ಯವು ದಕ್ಷಿಣದ ಗಡಿಯಾಗಿದೆ. ಆಂಧ್ರದ ಪೂರ್ವ ಮೇರೆಯು ವಿಶಾಲವಾದ ಬಂಗಾಳ ಅಖಾತ. ಈ ಕರಾವಳಿಯ ಉದ್ದ ಸುಮಾರು ೬೦೦ ಮೈಲುಗಳು. ಆಂಧ್ರ ರಾಜ್ಯದಲ್ಲಿ ಶ್ರೀಕಾಕುಲಂ, ವಿಶಾಖ ಪಟ್ಟಣ, ಪೂರ್ವ ಮತ್ತು ಪಶ್ಚಿಮ ಗೋದಾವರಿ, ಕೃಷ್ಣಾ, ಗುಂಟೂರು ಮತ್ತು ನೆಲ್ಲೂರುಗಳೆಂಬ ಉತ್ತರ ಸರಕಾರದ ಜಿಲ್ಲೆಗಳೂ ಚಿತ್ತೂರು, ಕಡಪಾ, ಕರ್ನೂಲು ಅನಂತಪುರ ಹಾಗೂ ಬಳ್ಳಾರಿಯ ರಾಯದುರ್ಗ, ಆದವಾನಿ ಮತ್ತು ಆಲೂರು ತಾಲೂಕುಗಳನ್ನೊಳಗೊಂಡ ರಾಯಲ ಸೀಮಾ ವಿಭಾಗವೂ ಸಮಾವೇಶಗೊಂಡಿದೆ. ಆಂಧ್ರದ ಒಟ್ಟು ವಿಸ್ತೀರ್ಣವು ೪೪೯ ಲಕ್ಷ ಎಕ್ರೆ. ಇದರಲ್ಲಿ ೧೫೩ ಲಕ್ಷ ಎಕ್ರೆಯಷ್ಟು ಜಮೀನು ಸಾಗುವಳಿಯಾಗುತ್ತದೆ. ಸಾಗುವಳಿಯಾಗುವ ಭೂಮಿಯಲ್ಲಿ ೨೭ ಲಕ್ಷ ಎಕ್ರೆಯಷ್ಟು ಸರಕಾರದ ಕಾಲುವೆಗಳಿಂದ ನೀರು ಉಣ್ಣುತ್ತವೆ; ೧೧ ಲಕ್ಷ ಎಕ್ರೆ ಜಮೀನು ಕೆರೆ ಕುಂಟೆಗಳ ಉಪಯೋಗದಿಂದ ನೀರಾವರಿಗೆ ಒಳಪಟ್ಟಿದೆ. ನೀರಾವರೀ ಅನುಕೂಲತೆಯನ್ನು ಕೃಷ್ಣಾ ಮತ್ತು ಗೋದಾವರೀ ನದಿಗಳ ದಂಡೆಯು ಮುಖ್ಯವಾಗಿ ಪಡೆದಿರುತ್ತದೆ. ಇವೆರಡನ್ನು ಬಿಟ್ಟರೆ ಪೆನ್ನಾರ ನದಿ ಹಾಗೂ ನಾಗವಳ್ಳಿ ನದಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುವುದು. ಗೋದಾವರೀ ನದಿಯ ಮುಖಭೂಮಿಯಲ್ಲಿ ೧೧ ಲಕ್ಷ ಎಕ್ರೆ ಮತ್ತು ಕೃಷ್ಣಾ ನದೀ ಮುಖದಲ್ಲಿ ೧೦ ಲಕ್ಷ ಎಕ್ರೆ ಭೂಮಿ ನೀರಾವರಿಗೆ ಒಳಗಾಗಿರುತ್ತದೆ. ಕೃಷ್ಣಾನದಿಯ ದಂಡೆಯಲ್ಲಿ ಒಂದೇ ಫಸಲು ಬೆಳೆಯುತ್ತದೆ; ಆದರೆ ಗೋದಾವರಿಯ ಮುಖ ಭೂಮಿಯಲ್ಲಿ ನೂರರಲ್ಲಿ ೯೦ಂಶ ಜಮೀನು ಎರಡು ಫಸಲುಗಳನ್ನು ಕೊಡುತ್ತದೆ.

ನೀರಾವರಿಯ ಅನುಕೂಲ

ಕರ್ನೂಲು, ಬಳ್ಳಾರಿ, ಅನಂತಪುರ, ನೆಲ್ಲೂರು ಮತ್ತು ಚಿತ್ತೂರುಗಳಲ್ಲಿಯೂ ವಿಶಾಖಪಟ್ಟಣ ಮತ್ತು ಪೂರ್ವ ಗೋದಾವರೀ ಜಿಲ್ಲೆಗಳಲ್ಲಿಯೂ ಸುಮಾರು ೩೮ ಲಕ್ಷ ಎಕ್ರೆಯಷ್ಟು ಸಾಗುವಳಿಗೆ ಯೋಗ್ಯವಾದ ಭೂಮಿಯು ಉಪಯೋಗಿಸಲ್ಪಡದೆ ಹಾಳುಬಿದ್ದಿದೆ ಆಂಧ್ರ ರಾಜ್ಯದ ಹೊಸ ಸರಕಾರವು ಈ ಪ್ರದೇಶವನ್ನು ಯಾವ ರೀತಿ ಸಾಗುವಳಿಗೆ ಒಳಪಡಿಸಬಹುದೆಂಬುದನ್ನು ಗಂಭೀರವಾಗಿ ಆಲೋಚಿಸುವುದು ಅಗತ್ಯ. ಮಳೆಯು ಕಡಿಮೆ ಬೀಳುವ ಈ ಪ್ರದೇಶದಲ್ಲಿ ನದಿಗಳಿಂದ ದೊರೆಯಬಹುದಾದ ನೀರಾವರಿಯ ಅನುಕೂಲತೆಗಳನ್ನು ಸಾಧ್ಯವಿದ್ದಷ್ಟು ಹೆಚ್ಚು ಪಡೆಯಲು ಯೋಜನೆಗಳನ್ನು ಕೈಗೊಳ್ಳಬೇಕು. ಕೃಷ್ಣಾ, ಗೋದಾವರೀ ಮತ್ತು ಪೆನ್ನಾರ ನದಿಗಳನ್ನು ಸಾಗುವಳಿಗೆ ಸೌಕರ್ಯ ನೀಡುವಂತೆ ಹೇಗೆ ಬಳಸಲು ಬರುವುದೆಂದು ಹಲವು ಶೋಧನೆಗಳು ನಡೆಯುತ್ತಿವೆ. ಮುಂದಿನ ವರ್ಷ ಯೋಜನಾ ಆಯೋಗವು ಕೆಲವು ಯೋಜನೆಗಳಿಗೆ ಸಮ್ಮತಿ ಮುದ್ರೆಯೊತ್ತಬಹುದೆಂದು ನಿರೀಕ್ಷೆ ಇದೆ. ಆದರೆ ಹೊಸ ಯೋಜನೆಗಳನ್ನು ಕೈಗೊಳ್ಳುವುದಕ್ಕಾಗಲೀ ಈಗಾಗಲೇ ಕೈಗೊಂಡಿರುವ ಯೋಜನೆಗಳನ್ನು ಮುಗಿಸುವುದಕ್ಕಾಗಲೀ ಭಂಡವಾಳದ ಅಗತ್ಯವಿದೆ. ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಯೋಜನೆಗಳನ್ನು ಪೂರೈಸಲು ೧೪ ಕೋಟಿ ರೂಪಾಯಿ ಹಾಗೂ ನೀರಾವರಿ ಯೋಜನೆಗಳನ್ನು ಮುಗಿಸಲು ೨೫ ಕೋಟಿ ರೂಪಾಯಿಗಳು ಅತ್ಯಗತ್ಯವಾಗಿರುತ್ತವೆ. ಈ ಹಣವನ್ನು ಒಂದೋ ಸಾರ್ವಜನಿಕ ಸಾಲದ ರೂಪದಲ್ಲಿ ಅಥವಾ ಕೇಂದ್ರ ಸರಕಾರದಿಂದ ಪಡೆಯದೆ ಆಂಧ್ರಕ್ಕೆ ನಿರ್ವಾಹವಿಲ್ಲ. ಇಲ್ಲಿ ನೀರಾವರಿ ಯೋಜನೆಗಳಿಗೆ ಹಾಕಿದ ಹಣ ವ್ಯರ್ಥವಾಗುವ ಸಂಶಯವೇ ಇಲ್ಲವಾದುದರಿಂದ-ಸಾರ್ವಜನಿಕರಿಂದಲೇ ಸಾಲವೆತ್ತಬಹುದೆಂದು ತಜ್ಞರ ಅಭಿಪ್ರಾಯ. ಸಾಲವೆತ್ತುವ ವಿಚಾರವನ್ನು ಬಿಟ್ಟುಗೊಟ್ಟು, ಈಗಿನ ಆಯವ್ಯಯವನ್ನು ಪರಿಶೀಲಿಸಿದರೆ, ಆಂಧ್ರವು ಎರಡು ಕೋಟಿ ರೂಪಾಯಿಗಳ ಕೊರತೆಯನ್ನು ಅನುಭವಿಸುತ್ತದೆ. ಅದರ ವಾರ್ಷಿಕ ಆದಾಯ ೨೦ ಕೋಟಿ ರೂಪಾಯಿಯೆಂದೂ ವೆಚ್ಚ ೨೨ ಕೋಟಿ ರೂಪಾಯಿಯೆಂದೂ ಲೆಕ್ಕ ಹಾಕಿರುವರು. ಈ ಕೊರತೆ ದೂರೀಕರಿಸಲು ಆಂಧ್ರ ರಾಜ್ಯದಲ್ಲಿ ಪಾನಪ್ರತಿಬಂಧವನ್ನು ತೆಗೆದು ಹಾಕಬೇಕೆಂದು ಹೇಳುವ ಪಕ್ಷಗಳು ಇವೆ. ಕಾಂಗ್ರೆಸು ಈ ವಾದವನ್ನು ಮನ್ನಿಸುವುದಿಲ್ಲ. ಪಾನ ಪ್ರತಿಬಂಧವನ್ನು ರದ್ದು ಮಾಡಿ ಮೂರು ನಾಲ್ಕು ಕೋಟಿ ರೂಪಾಯಿಗಳನ್ನು ಸಂಪಾದಿಸುವುದಕ್ಕಿಂತ ಹೆಚ್ಚು ಮಿತವ್ಯಯಕ್ಕೆ ಮನಸ್ಸುಗೊಟ್ಟು, ಕೊರತೆಯನ್ನು ತುಂಬಬೇಕೆಂದು ಅದು ಅಪೇಕ್ಷಿಸುತ್ತದೆ.

ಉಜ್ವಲ ಭವಿಷ್ಯವುಳ್ಳ

ಭೂಗರ್ಭದ ನಿಧಿ

ತುಂಗಭದ್ರಾ ಯೋಜನೆ ಪೂರ್ತಿಯಾದಾಗ ಆಂಧ್ರದ ರಾಯಲ ಸೀಮಾ ಪ್ರದೇಶದಲ್ಲಿ ೩ ಲಕ್ಷ ಎಕ್ರೆ ಜಮೀನು ಹೊಸತಾಗಿ ಕೃಷಿಗೆ ಒಳಪಡುತ್ತದೆ. ಮುಚುಕುಂದ ಯೋಜನೆಯು ಆಂಧ್ರಕ್ಕೆ ೫೪ ಸಾವಿರ ಯುನಿಟುಗಳಷ್ಟು ವಿದ್ಯುಚ್ಛಕ್ತಿಯನ್ನು ನೀಡುತ್ತದೆ. ಭತ್ತದ ಕಣಜಗಳೆಂದು ಹೆಸರಾದ ಭೂಭಾಗ ಆಂಧ್ರದಲ್ಲಿದ್ದಂತೆ—ಅತ್ಯಂತ ಅಮೂಲ್ಯವಾದ ಖನಿಜ ಸಂಪತ್ತು ಇಲ್ಲಿ ಹೇರಳವಾಗಿರುತ್ತದೆ. ಅಭ್ರಕವನ್ನು ಆಂಧ್ರದ ಪ್ರದೇಶವು ಈಗಾಗಲೇ ಬಹುವಾಗಿ ನಿರ್ಯಾತ ಮಾಡುತ್ತದೆ. ನೆರೆಯ ಮೈಸೂರಿನಲ್ಲಿರುವ ಕೋಲಾರದ ಚಿನ್ನದ ಗಣಿಯು ಅಂಥದೇ ಚಿನ್ನದ ಸಂಗ್ರಹವಿರುವ ಅನಂತಪುರ ಜಿಲ್ಲೆಯ ಒಂದು ಸೆರಗು ಮಾತ್ರವೆಂದು ತರ್ಕಿಸಿರುವರು. ಸಂಶೋಧನೆಗಳ ಮೂಲಕ ಇದರ ನಿಜತ್ವವನ್ನು ಪರಿಶೀಲಿಸಿದರೆ, ಅನಂತಪುರ ಜಿಲ್ಲೆಯಲ್ಲಿ ಚಿನ್ನದ ಅದುರುಗಳು ದೊರೆಯುವ ಭರವಸೆಯುಂಟು. ಕೃಷ್ಣ ಜಿಲ್ಲೆಯ ವಾಯವ್ಯ ಭಾಗ, ಕರ್ನೂಲು ಮತ್ತು ಅನಂತಪುರಗಳಲ್ಲಿ ವಜ್ರದ ನಿಕ್ಷೇಪವೂ ಹೇರಳವಾಗಿರುತ್ತದೆಂದು ತಿಳಿದಿದೆ. ಕಡಪಾ ಮತ್ತು ಕರ್ನೂಲುಗಳ ಗಡಿಯಲ್ಲಿ ಅಸ್ಬೆಸ್ಟೋಸ್ ಖನಿಜವಿದೆ. ಪೂರ್ವ ಹಾಗೂ ಪಶ್ಚಿಮ ಗೋದಾವರಿಯ ವಾಯವ್ಯ ಭಾಗಗಳು ಕಲ್ಲಿದ್ದಲಿನ ನಿಕ್ಷೇಪದಿಂದ ಕೂಡಿವೆ. ಗುಂಟೂರು, ಕಡಪಾ, ಕರ್ನೂಲು ಮತ್ತು ಪೂರ್ವ ಗೋದಾವರಿಗಳಲ್ಲಿ ಸುಣ್ಣದ ಕಲ್ಲು ಹೇರಳವಿದೆ. ಕರ್ನೂಲು ಮತ್ತು ಗೋದಾವರೀ ಹಾಗೂ ವಿಶಾಖ ಪಟ್ಟಣ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಕಬ್ಬಿಣದ ಅದುರು ಭಾರತದ ಇತರ ಪ್ರದೇಶಗಳ ಸಂಗ್ರಹವನ್ನು ಮೀರಿರುತ್ತದೆ ಗುಂಟೂರು ನೆಲ್ಲೂರು ಮತ್ತು ಕರ್ನೂಲುಗಳಲ್ಲಿ ತಾಮ್ರದ ಅದುರು ದೊರೆಯುತ್ತದೆ. ಬಾರೈಟ್, ಕ್ರೊಮೈಟ್, ಸ್ಟಿಟೈಟ್ ಮುಂತಾದ ಇತರ ವಿರಳ ಖನಿಜಗಳ ನಿಕ್ಷೇಪವೂ ಆಂಧ್ರ ರಾಜ್ಯದಲ್ಲಿ ಇನ್ನೂ ಸೂರೆಗೊಳ್ಳದ ಸಂಪತ್ತಾಗಿರುವುದು. ಈ ನಿಕ್ಷೇಪವನ್ನು ಯೋಗ್ಯ ಸಾಧನ ಸಲಕರಣೆಗಳ ಮೂಲಕ ಬಳಸಿಕೊಳ್ಳಲು ಪ್ರಯತ್ನಿಸುವುದರಿಂದ ಆಂಧ್ರ ರಾಜ್ಯಕ್ಕೆ ಮಾತ್ರವಲ್ಲ - ಭಾರತದ ಆರ್ಥಿಕ ಭದ್ರತೆ ಹಾಗೂ ಸರ್ವಾಂಗಿಕ ಪ್ರಗತಿಗೂ ಅಗತ್ಯ. ಆಂಧ್ರವು ಕೇಂದ್ರ ಸರಕಾರದ ನೆರವು ಹಾಗೂ ಸಲಹೆಗಳನ್ನು ಪಡೆದು ಈ ಭೂಗರ್ಭದ ಅಮೂಲ್ಯ ನಿಧಿಯ ಸದುಪಯೋಗ ಮಾಡಿಕೊಳ್ಳುವುದರಲ್ಲಿ ಶ್ರೇಯಸ್ಸುಂಟು.

ಸುದೀರ್ಘ ಆಂದೋಲನ

ಆಂಧ್ರದ ೨೦೫ ಲಕ್ಷ ಜನರು ಕಳೆದ ೪೦ ವರ್ಷಗಳಿಂದ ತಮಗೊಂದು ಪ್ರತ್ಯೇಕ ರಾಜ್ಯ ಬೇಕೆಂದು ಆಂದೋಲನ ನಡೆಸಿದರು. ಮತ್ತು ಈ ಆಂದೋಲನ ಫಲಿಸುವ ಸೂಚನೆಯು ಸರ್ವ ಪ್ರಥಮವಾಗಿ ಕಳೆದ ವರ್ಷ ದಶಂಬರ ೧೯ನೇ ದಿನಾಂಕ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಕೊಟ್ಟ ಹೇಳಿಕೆಯಲ್ಲಿ ಪ್ರಕಟಗೊಂಡಿತು. ಕೇಂದ್ರ ಸರಕಾರವು ಮನಸ್ಸು ಮಾಡಿದರೆ ಪ್ರತ್ಯೇಕ ರಾಜ್ಯದ ನಿರ್ಮಾಣದಂಥ ಮಹತ್ವದ ವಿಷಯವನ್ನೂ ಎಷ್ಟು ತ್ವರೆಯಲ್ಲಿ ನೆರವೇರಿಸಬಹುದೆಂಬುದಕ್ಕೆ ಒಂಭತ್ತು ತಿಂಗಳುಗಳ ಅತ್ಯಲ್ಪ ಅವಧಿಯಲ್ಲಿಯೇ ಆಂಧ್ರ ರಾಜ್ಯ ಅಸ್ತಿತ್ವಕ್ಕೆ ಬಂದುದು ಉತ್ತಮ ನಿದರ್ಶನ. ಆದರೆ ಕೇಂದ್ರ ಸರಕಾರದ ಘಟನಾತ್ಮಕವಾದ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಮುಂಚೆ ಘನತರವಾದ ಚಳುವಳಿಯು ನಡೆದಿದೆ. ಈ ಆಂದೋಲನ ೧೯೧೬ನೇ ಇಸ

The Canara Mutual Assurance Co., LTD.

Estd: 1935,] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುದ್ಧಿ ಚುರುಕಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಆಂಧ್ರ ರಾಜ್ಯದ ಸೃಷ್ಟಿ

ವಿಯಷ್ಟು ಹಿಂದೆಯೇ—ಎಂದರೆ ಗಾಂಧೀಜೀ ಭಾರತದ ರಾಜಕೀಯ ರಂಗದಲ್ಲಿ ಆವಿರ್ಭವಿಸುವುದಕ್ಕೆ ಪೂರ್ವದಲ್ಲಿಯೇ ಪ್ರಾರಂಭವಾಗಿತ್ತೆಂದು ಆಂಧ್ರರು ಹೇಳುತ್ತಾರೆ. ಆಂಧ್ರದಲ್ಲಿ ಎಲ್ಲ ಸಾರ್ವಜನಿಕ ಸಭೆಗಳಲ್ಲಿ ತೆಲುಗು ಭಾಷೆಯಲ್ಲಿಯೇ ಭಾಷಣ ಮಾಡಬೇಕೆನ್ನುವ, ತೆಲುಗು ಪತ್ರಿಕೆಗಳನ್ನೇ ಪ್ರೋತ್ಸಾಹಿಸಬೇಕೆನ್ನುವ ಚಳುವಳಿಯು ಆಗ ತೊಡಗಿತು. ೧೯೦೬ರಲ್ಲಿ ವಿಜ್ಞಾನ ಚಂದ್ರಿಕಾ ಮಂಡಲಿಯೆಂಬುದೊಂದು ಸ್ಥಾಪನೆಗೊಂಡು ಎಲ್ಲ ವೈಜ್ಞಾನಿಕ, ಸಾಂಸ್ಕೃತಿಕ ಗ್ರಂಥಗಳು ತೆಲುಗು ಭಾಷೆಯಲ್ಲಿ ಬರೆಯಲ್ಪಡುವಂತೆ ಪ್ರಯತ್ನ ನಡೆಯಿತು. ೧೯೧೩ರಲ್ಲಿ ದೇಶಭಕ್ತ ಕೊಂಡಾ ವೆಂಕಟಪ್ಪಯ್ಯ ಪಂತುಲು ಆಂಧ್ರ ಮಹಾ ಸಭೆಯೊಂದನ್ನು ಕರೆದರು ಮತ್ತು ಆಂಧ್ರದ ಸಾರ್ವಾಂಗಿಕ ಅಭಿವೃದ್ಧಿಗಾಗಿ ಒಕ್ಕಟ್ಟಿನಿಂದ ಎಲ್ಲರೂ ಪರಿಶ್ರಮ ಮಾಡಬೇಕೆನ್ನುವ ಗೊತ್ತುವಳಿಯನ್ನು ತಂದರು. ಆಂಧ್ರಕ್ಕೆ ಪ್ರತ್ಯೇಕ ರಾಜ್ಯ ಬೇಕೆನ್ನುವ ತತ್ವಕ್ಕೆ ಸ್ವೀಕಾರ ದೊರೆತುದು ೧೯೧೭ರಲ್ಲಿ—ಮತ್ತು ಇದಕ್ಕೆ ಉತ್ತೇಜನ ದೊರೆತುದು ೧೯೨೦ರಲ್ಲಿ ಮಹಾತ್ಮಾ ಗಾಂಧೀಜಿಯವರ ಹಿರಿತನದಲ್ಲಿ ಕಾಂಗ್ರೆಸ್ಸಿನ ನಾಗಪುರ ಅಧಿವೇಶನವು ಭಾಷಾನುಗುಣವಾಗಿ ದೇಶಗಳನ್ನು ಪುನರ್ಘಟಿಸಬೇಕೆಂದು ಅಂಗೀಕರಿಸಿದ ನಿರ್ಣಯದಿಂದ ಎನ್ನಬಹುದು. ಈ ಗೊತ್ತುವಳಿಯಿಂದ ಆಂಧ್ರಕ್ಕೂ ಒಂದು ಪ್ರತ್ಯೇಕ ಪ್ರದೇಶ ಕಾಂಗ್ರೆಸ ಸಮಿತಿಯ ವ್ಯವಸ್ಥೆಯಾಯಿತು.

ರಾಜಾಜಿಯ ಬೆಂಬಲ

ಮುಂದೆ ೧೯೩೭ ರಲ್ಲಿ ಮದ್ರಾಸಿನಲ್ಲಿ ರಾಜಾಜಿಯವರ ಧುರೀಣತ್ವದಲ್ಲಿ ಹಿಂದೀಯರ ಸರಕಾರವು ಸ್ಥಾಪಿಸಲ್ಪಟ್ಟಾಗ, ಶಾಸನ ಸಭೆಯ ಮುಂದೆ ಮದ್ರಾಸು ರಾಜ್ಯವನ್ನು ಕರ್ನಾಟಕ, ಕೇರಳ, ಆಂಧ್ರ ಮತ್ತು ತಮಿಳುನಾಡುಗಳಾಗಿ ವಿಭಜಿಸಬೇಕೆನ್ನುವ ಮಸೂದೆಯು ಮಂಡಿಸಲ್ಪಟ್ಟಿತು. ಸ್ವತಃ ರಾಜಾಜಿಯವರೇ ಈ ಗೊತ್ತುವಳಿಯನ್ನು ತಮ್ಮದೊಂದು ಉಜ್ವಲ ಭಾಷಣದ ಮೂಲಕ ಸಮರ್ಥಿಸಿದ್ದರು. ಆದರೆ ಅದೇ ರಾಜಾಜಿ ಕಳೆದ ವರ್ಷ ಹೈದರಾಬಾದ ಕಾಂಗ್ರೆಸಿನಲ್ಲಿ ಭಾಷಾನುಗುಣವಾಗಿ ದೇಶವನ್ನು ಪುನರ್ಘಟಿಸಬೇಕೆನ್ನುವುದು ಕಾಡು ಮನುಷ್ಯರ ವಿಚಾರವೆಂದುದು ಆಂಧ್ರರಿಗಷ್ಟೇ ಅಲ್ಲ ಎಲ್ಲ ಭಾಷಾವಾದಿಗಳಿಗೂ ಅಪ್ರಿಯ ಹಾಗೂ ಅರುಚಿಕರವೆಂದು ತೋರಿದೆ. ಇದೇನೇ ಇದ್ದರೂ ಮದ್ರಾಸು ಶಾಸನ ಸಭೆಯು ಈ ಗೊತ್ತುವಳಿಯನ್ನು ಅಂಗೀಕರಿಸಿ, ಇಂಡಿಯಾ ಸೆಕ್ರೆಟರಿಗಳಿಗೆ ಕಳಿಸಿದ್ದುದು ನಿಜ. ಆದರೆ ಯುದ್ಧದ ಕಾರ್ಮೋಡಗಳು ಆ ಕೂಡಲೇ ಕವಿದುದರಿಂದ ಈ ವಿಷಯದಲ್ಲಿ ಯಾವುದೇ ಪ್ರಗತಿ ಕೈಗೂಡಲಿಲ್ಲ. ಮಹಾ ಯುದ್ಧವು ಸಮಾಪ್ತಗೊಂಡು ೧೯೪೬ರಲ್ಲಿ ಮನಃ ಹಿಂದೀಯರ ಸರಕಾರವು ಅಸ್ತಿತ್ವಕ್ಕೆ ಬಂದಾಗ ಡಾ. ಸುಬ್ಬರಾಯನ್ನರು ಒಂದು ಗೊತ್ತುವಳಿಯನ್ನು ಮದ್ರಾಸು ಶಾಸನ ಸಭೆಯ ಮುಂದೆ ಮರಳಿ ಮಂಡಿಸಿ, ಭಾಷಾನುಗುಣವಾಗಿ ಮದ್ರಾಸು ರಾಜ್ಯವನ್ನು ಪುನರ್ಘಟಿಸುವ ವಿಷಯವನ್ನೆತ್ತಿದರು. ೧೯೪೭ನೇ ಏಪ್ರಿಲ್ ೧೫ನೇ ದಿನಾಂಕ ಇದು ಸ್ವೀಕಾರಗೊಂಡಿತು. ಮೇಲಿನ ಎರಡೂ ಗೊತ್ತುವಳಿಗಳಲ್ಲಿ ಹೈದರಾಬಾದು ರಾಜ್ಯವನ್ನು ಒಡೆದು ಹಂಚುವ ಅಂಶವೇ ಆಡಕವಾಗಿರಲಿಲ್ಲ ಏಕೆಂದರೆ ಭಾರತಕ್ಕೆ ಸ್ವಾತಂತ್ರ್ಯ ಬಂದುದೂ ದೇಶೀಯ ಸಂಸ್ಥಾನಗಳು ಭಾರತಒಕ್ಕೂಟದೊಂದಿಗೆ ಸೇರ್ಪಡೆ ಹೊಂದಿದುದೂ ಆ ಬಳಿಕದ ಸಂಗತಿ. ಸ್ವಾತಂತ್ರ್ಯೋತ್ತರದಲ್ಲಿ ಭಾರತ ಸರಕಾರವು ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನು ವಿಚಾರಿಸಲು ಧರ್ ಸಮಿತಿಯನ್ನು ನೇಮಿಸಿದರೂ ಅದರ ವರದಿ ಏನೇನೂ ಉತ್ತೇಜಕವಾಗಿರಲಿಲ್ಲ. ಆಂಧ್ರದ ಆಕಾಂಕ್ಷೆಯನ್ನು ಪೂರೈಸುವ ಇಚ್ಛೆಯಿಂದ ಮುಂದೆ ತ್ರಿಮೂರ್ತಿ (ಜೆ. ವಿ. ಪಿ.)ಗಳ ವರದಿ ಒಪ್ಪಿಸಲ್ಪಟ್ಟಿತು. ಇದು ಸಹ ಕೆಲವು ವಿವಾದಾಂಶಗಳು ಕ್ಲಿಷ್ಟ ಸಮಯದಲ್ಲಿ ಬಗೆಹರಿಯದ್ದರಿಂದ ಮೂಲೆಗುಂಪಾಯಿತು. ಗಣರಾಜ್ಯವಾಗಿ ಭಾರತ ಘೋಷಿಸಲ್ಪಡುವ ಮುನ್ನವೇ ಪ್ರತ್ಯೇಕ ಆಂಧ್ರ ರಾಜ್ಯವಾಗಬೇಕೆನ್ನುವ ಮಾತು ಕೃತಿಯಲ್ಲಿಳಿಯಲಿಲ್ಲ.

ಕೇಂದ್ರದ ಕ್ರಮ

ಬಹುಶಃ ಇನ್ನು ಹತ್ತು ವರ್ಷಗಳವರೆಗೂ ಭಾಷಾನುಗುಣ ಪ್ರಾಂತರಚನೆಯ ವಿಷಯದಲ್ಲಿ ಕೇಂದ್ರ ಸರಕಾರ ಕೈಹಾಕುವ ಲಕ್ಷಣವಿರಲಿಲ್ಲ ಆದರೆ ೧೯೫೨ನೇ ಇಸವಿ ಡಿಸೆಂಬರ ೧೫ನೇ ತಾರೀಕು ಆಂಧ್ರದಲ್ಲಿ ೫೮ ದಿನಗಳ ಆಮರಣ ಉಪವಾಸ ನಂತರ ಪೊಟ್ಟಿ ಶ್ರೀ ರಾಮುಲು ಹುತಾತ್ಮರಾದ ಬಳಿಕ, ಕೇಂದ್ರ ಸರಕಾರದ ದೃಷ್ಟಿಕೋಣದಲ್ಲಿ ತೀವ್ರ ಮಾರ್ಪಾಟು ಗೋಚರಿಸಿತು; ಮತ್ತು ೧೯ನೇ ದಿನಾಂಕ ಪ್ರಧಾನಿ ನೆಹರೂ ಪಾರ್ಲಿಮೆಂಟಿನ ಮುಂದೆ ಹೇಳಿಕೆ ಕೊಡುತ್ತಾ ಆಂಧ್ರ ರಾಜ್ಯ ರಚನೆಗೋಸ್ಕರ ತಕ್ಕ ಕ್ರಮ ಕೈಗೊಳ್ಳಲಾಗುವುದೆಂದು ಸಾರಿದರು. ಅನಂತರ ಎಲ್ಲ ಕಾರ್ಯಕ್ರಮಗಳೂ ಕ್ಷಿಪ್ರ ಗತಿಯಿಂದ ನಡೆದವು—ಬಳ್ಳಾರಿ ಜಿಲ್ಲೆಯ ಕುರಿತು ಕನ್ನಡಿಗರಲ್ಲೂ ಆಂಧ್ರರಲ್ಲೂ ಘರ್ಷಣೆ ಸಂಭವಿಸಿದರೂ ನ್ಯಾಯಮೂರ್ತಿ ಮಿಶ್ರರ ವರದಿಯು ಪರಿಸ್ಥಿತಿಯ ಮೇಲೆ ನಿಯಂತ್ರಣವನ್ನು ಹೇರಿತು. ಆಂಧ್ರ ರಾಜ್ಯದ ಅಸ್ತಿತ್ವಕ್ಕೋಸ್ಕರ ಕೇಂದ್ರಸರಕಾರ ತೆಗೆದುಕೊಂಡ ದಕ್ಷತೆ ಹಾಗೂ ತೀವ್ರೋಪಾಯಗಳು ಎಲ್ಲರ ಮೆಚ್ಚುಗೆಪಡೆದುವು. ಆದರೆ ಇಷ್ಟರಿಂದಲೇ ಎಲ್ಲವೂ ಚೆನ್ನಾಗಿದೆಯೆಂದು ಹೇಳುವಂತಿರಲಿಲ್ಲವೆಂಬುದು ವಿಷಾದಕರ. ಆಂಧ್ರರಾಜ್ಯ ವಿಧೇಯಕದ ಸ್ವೀಕಾರವಾಗಿ, ಇನ್ನು ಒಂದು ವಾರದಲ್ಲಿ ಸರಕಾರ ಅಸ್ತಿತ್ವಕ್ಕೆ ಬರುವುದೆಂದಿರುವಾಗಲೂ ಸಹ ಆಂಧ್ರದಲ್ಲಿ ದಕ್ಷವಾದ, ಪ್ರಜಾಪ್ರಭುತ್ವ ಪದ್ಧತಿಗೆ ಸಮ್ಮತವಾದ, ಭದ್ರ ಸರಕಾರ ಏರ್ಪಡುವುದೇ ಎನ್ನುವ ಬಗ್ಗೆ ನಿಶ್ಚಿತ ಸೂಚನೆಯೇ ಇರಲಿಲ್ಲ. ಕರ್ನೂಲನ್ನು ರಾಜಧಾನಿಯಾಗಿ ಸ್ವೀಕರಿಸಿದ ಗಳಿಗೆಯಲ್ಲೇ ಆಂಧ್ರರಲ್ಲಿ ರಾಜಕೀಯ ಗತ್ತುಗಾರಿಕೆ ಹಾಗೂ ಮತಭೇದಗಳು ಪ್ರಗಲ್ಭಾವಸ್ಥೆಯನ್ನು ಮುಟ್ಟಿರುವುದಕ್ಕೆ ಪ್ರತ್ಯಕ್ಷ ರುಜುವಾತು ದೊರೆಯಿತು. ಆಂಧ್ರರು ರಾಷ್ಟ್ರಹಿತವನ್ನು ಲೆಕ್ಕಿಸದೆ ಪಕ್ಷದ ಇತಿಮಿತಿಯೊಳಗೆಯೇ ರಾಜಕೀಯ ಚದುರಂಗದಾಟವನ್ನು ಪ್ರಾರಂಭಿಸಿದರು—ಹಾಗೆ ನೋಡಿದರೆ ಆಂಧ್ರದಲ್ಲಿ ಯಾವ ಪಕ್ಷಕ್ಕೂ ಸಂಪೂರ್ಣ ಸ್ವತಂತ್ರ ಅಸ್ತಿತ್ವವೆಂಬುದಿಲ್ಲ. ಪ್ರಜಾಸಮಾಜವಾದಿಗಳಿರಲಿ—ಬೇಕಾದರೆ ಕಮ್ಯೂನಿಸ್ಟರೇ ಇರಲಿ, ಕಾಂಗ್ರೆಸ್ಸಿನ್ನವ ಮಾತೃಸಂಸ್ಥೆಯಿಂದಲೇ ಕವಲೊಡೆದು ನಿಂತು ಪಕ್ಷ ಕಟ್ಟಿಕೊಂಡವರೇ ಇರುವರು. ಕೇವಲ ಆಂಶಿಕ ಭಿನ್ನಾಭಿಪ್ರಾಯಗಳೇ ಅವರನ್ನು ಕಾಂಗ್ರೆಸಿನಿಂದ ಪ್ರತ್ಯೇಕಿಸಿವೆ. ಹೊರತು ಯಥಾರ್ಥವಾಗಿ, ಇವರೆಲ್ಲರೂ ಪ್ರಥಮದಲ್ಲಿ ನಿಷ್ಠಾವಂತ ಕಾಂಗ್ರೆಸಿಗರಾಗಿದ್ದುಕೊಂಡು ದೇಶಸೇವೆ ಸಲ್ಲಿಸಿದವರೇ ನಿಜ.

ಹೆಸರಿಗಷ್ಟೇ ಮತಭೇದ

ಆದರೆ ಕಮ್ಯೂನಿಸ್ಟ ಧುರೀಣರು ಪರದೇಶದ ರಾಜಕೀಯ ಸಂಸ್ಥೆಯೊಂದರ ನೆರವನ್ನು ಆಶ್ರಯಿಸಿ ಬದುಕಲು ಹವಣಿಸಿದುದರಿಂದ, ಮತ್ತು ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾದ ಸರ್ವಾಧಿಕಾರಿ ಸಿದ್ಧಾಂತವನ್ನು ಜನತಾ ರಾಜ್ಯದ ಹೆಸರಿನಲ್ಲಿ ಪ್ರತಿಷ್ಠಾಪಿಸಲು ಸಂಕಲ್ಪಿಸಿದುದರಿಂದ, ಪ್ರಜಾ ಸಮಾಜವಾದೀ ಹಾಗೂ ಕಾಂಗ್ರೆಸುಗಳಿಂದ ತೀರಾ ಬೇರೆಯಾದಂತೆ ತೋರುತ್ತಾರೆ. ಆದರೆ ಆಂಧ್ರರು ಕಾಂಗ್ರೆಸ್ಸನ್ನು ಎಷ್ಟು ಮಾತ್ರಕ್ಕೂ ತಿರಸ್ಕರಿಸಿಲ್ಲ—ಆಂಧ್ರ ಶಾಸನಸಭೆಯಲ್ಲಿ ಬಹುಮತ ಗಳಿಸಿರುವ ಪಕ್ಷ ಕಾಂಗ್ರೆಸ್ಸೊಂದೇ. ಅದರಂತೆ ಆಂಧ್ರರು ವ್ಯಕ್ತಿಪೂಜೆ ಮಾಡುವ ಸವಸ್ನೂ ಬಿಟ್ಟುಕೊಟ್ಟಿಲ್ಲ—ಶ್ರೀ ಪ್ರಕಾಶಮರು ಆಂಧ್ರರ ಮೇಲೆ ಪಡೆದಿರುವ ವರ್ಚಸ್ಸು ಇದಕ್ಕೆ ಉದಾಹರಣೆ. ಪ್ರಕಾಶಮರು ಆಂಧ್ರ ಕೇಸರಿಯೆಂದು ಹೆಸರಾಂತ ದೇಶಭಕ್ತ. ಮಹಾತ್ಮ ಗಾಂಧಿಯವರು ಭಾರತದ ರಾಜಕೀಯದಲ್ಲಿ ಪ್ರವೇಶಿಸುವುದಕ್ಕೆ ಮುಂಚೆಯೇ ಪ್ರಕಾಶಮರು ಆಂಧ್ರದ ಆಗುಹೋಗುಗಳಲ್ಲಿ ಭಾಗವಹಿಸುತಿದ್ದರು. ಗಾಂಧೀಯವರು ೧೯೨೦ನೇ ಇಸವಿಯಲ್ಲಿ ಅಸಹಕಾರ ಚಳುವಳಿಯನ್ನು ಹೂಡಿ ದೇಶದ ಸ್ವಾತಂತ್ರ್ಯಕ್ಕೋಸ್ಕರ ಆಂದೋಲನ ನಡೆಸಲು ಕರೆ ಕೊಟ್ಟಾಗ ಪಕ್ಷಣದಲ್ಲಿ ಅದಕ್ಕೆ ಓ ಕೊಟ್ಟ ಕೆಲವು ಪ್ರಮುಖ ವ್ಯಕ್ತಿಗಳಲ್ಲಿ ಪ್ರಕಾಶಮರೂ ಒಬ್ಬ. ತನ್ನ ವಕೀಲವೃತ್ತಿಗೆ ತಿಲಾಂಜಲಿ ಕೊಟ್ಟು, ಅಂದಿನಿಂದ ಇಂದಿನ ವರೆಗೆ ದೇಶ ಸೇವೆಯಲ್ಲಿ ಸಂತೋಷ ಕಂಡ ಮಹಾಜೀವ ಪ್ರಕಾಶಮರದ್ದು. ಆದರೆ ೧೯೪೭ರಲ್ಲಿ ಮದ್ರಾಸು ಮಂತ್ರಿ ಮಂಡಳ ಪತನಗೊಂಡ ಬಳಿಕ ಕಾಂಗ್ರೆಸಿನೊಡನೆ ಇವರು ವಿರಸ ಕಟ್ಟಿಕೊಂಡರು. ಆಂಧ್ರದ ಧುರೀಣರಲ್ಲಿ ಹೆಚ್ಚು ಜನರು ಸ್ವಂತ ಹೊಣೆಗಾರಿಕೆಯ ಮೇಲೆಯೇ ವರ್ತಿಸುವವರು ಹೊರತು—ಇನ್ನೊಬ್ಬರ ಅಂಕೆಯಲ್ಲಿರುವ ಮನಸ್ಸಿನವರಲ್ಲ. ಯಾವ ಪಕ್ಷದಲ್ಲೇ ಆಗಲಿ, ಕೂಟದಲ್ಲಿಯೇ ಆಗಲಿ, ಅಗ್ರಪೂಜೆ ದೊರೆಯುವಂತಿದ್ದರೆ ಮಾತ್ರ, ಅದರಲ್ಲಿ ಉಳಿದಾರಲ್ಲದೆ. ತಮ್ಮ ಅಧಿಕಾರ ನಡೆಯುದಲ್ಲಿ ಮಾತಿಗೆ ಕೂಡ ಒಬ್ಬಲ್ಲಿ ಮತ್ತು ಗೌರವಾದರಗಳು ದೊರೆಯುದಲ್ಲಿ, ಅವರು ಕ್ಷಣಕಾಲವೂ ಉಳಿಯಲಾರರು. ಈ ಮನೋವೃತ್ತಿಯ ಪರಿಣಾಮದಿಂದಲೇ ಸ್ವತಂತ್ರವಾದ ಪಕ್ಷಗಳು ಪ್ರತ್ಯೇಕವಾಗಿ ಹುಟ್ಟಿಕೊಳ್ಳಲು ಅವಕಾಶವುಂಟಾಯಿತು. ಕೃಷಿಕರ ಲೋಕಪಕ್ಷ, ಪ್ರಜಾಸಮಾಜವಾದೀ ಪಕ್ಷ ಇಂಥವುಗಳ ಜನನಕ್ಕೆ ಸಂಬಂಧಿಸಿದ ಧುರೀಣರು ಕಾಂಗ್ರೆಸಿನಲ್ಲಿ ಅಗ್ರಪೀಠಕ್ಕೆ ಏರಬೇಕಾಗಿ ಬಂದುದೇ ಹೇತು.

ಮುಂದೇನು?

ಈ ಹಿನ್ನೆಲೆಯಲ್ಲಿ ಆಂಧ್ರರಾಜ್ಯದ ಭವಿಷ್ಯವನ್ನು ... ಬ ಗ್ಗೆ ನಮಗನಿಸುವುದೇನು? ಪ್ರಕಾಶಮರು ಮುಖ್ಯ ಮಂತ್ರಿತ್ವದ ಅಭಿಲಾಷೆಯಿಂದಲೇ ಅದೂ ಈಗ ಆಂಧ್ರ ನಾಯಕಸ್ಥಾನಕ್ಕೇರಿರುವರು. ಪ್ರಾಯಶಃ ಇವರ ಮಾತುಗಳು ಕಮ್ಯೂನಿಸ್ಟರಿಗೆ ಪಥ್ಯವಾಗುವುದು ಸಾಧ್ಯವಿಲ್ಲ. ಆದರೆ, ಆಂಧ್ರದ ಜನತೆಯ ಬೆಂಬಲ ಅವರಿಗೆ ಉಂಟೆಂಬಲ್ಲಿ ಪ್ರತಿವಾದವಿಲ್ಲ ಏಕೆಂದರೆ ಶಾಸನ ಸಭಾ ಚುನಾವಣೆಯಲ್ಲಿ ಗೆದ್ದ ಉಮೇದ್ವಾರರ

(೯ನೇ ಪುಟ ನೋಡಿರಿ)

ಸರ್ವೋತ್ಕೃಷ್ಟ ಬೇಂಕಿಂಗ್ ವ್ಯವಹಾರ

ಆಧುನಿಕ ಜನಜೀವನದಲ್ಲಿ ಮಿತವ್ಯಯದ ಬೆಲೆಯು ಅತೀ ಮಹತ್ವದ್ದಾಗಿದೆ. ಜೀವನ ಸಂಗ್ರಾಮದಲ್ಲಿ ಪಾರು ಬೀಳಬೇಕಾದರೆ ನಾವು, ನಮ್ಮ ಮಕ್ಕಳು ಮಿತವ್ಯಯದ ಅಭ್ಯಾಸ ಮಾಡಲೇಬೇಕು. ಕುಟುಂಬದ ಪ್ರತಿಯೋರ್ವನ ಹೆಸರಿನಲ್ಲಿಯೂ ಒಂದೊಂದು ಕ್ಯುಮುಲೇಟಿವ್ ಡೀಪಾಜಿಟ ಲೆಕ್ಕವನ್ನು ಪ್ರಾರಂಭಿಸುವುದು ಮಿತವ್ಯಯದ ಒಂದು ಉತ್ತಮ ಸಾಧನವಾಗಿದೆ. ಮಾತ್ರವಲ್ಲದೆ ತನ್ಮೂಲಕ ಸಾಧ್ಯವಿದ್ದಷ್ಟು ಉಳಿತಾಯ ಮಾಡಲು ಶಕ್ಯವಿದೆ.

ರೂಪಾಯಿ 5,00,00,000ಕ್ಕೂ ಮಿಕ್ಕಿದ ವಹಿವಾಟು.

THE CANARA INDUSTRIAL &
BANKING SYNDICATE LTD.,
H. O: UDIPI, S. India.
Estd: 1925

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
[ಪ್ರಧಾನ ಕಛೇರಿ: ಉಡುಪಿ. ದ. ಭಾರತ.
ಸ್ಥಾಪನೆ: 1925]

Registered

CHITRAKOT ASTHMA CURE

Widely renowned and a most Powerful highly effective remedy for curing Asthma by one dose to be taken on 22-10-53 full moon night

Apply at once in English
Mahatma Yogi Baba
AYURVEDIE BUTI BHANDAR
P. O. CHITRAKOT, U. P.

ಭಾರತದ ನೂತನ

ರಾಷ್ಟ್ರೀಯ ಐಕ್ಯಕ್ಕೆಯೇ ಪ್ರಥಮ ಪ್ರಾಶಸ್ತ್ಯ

ಸುವರ್ಣ ದಿನ

ಕಳೆದ ಗುರುವಾರ ದಿನ (ಅಕ್ಟೋಬರ ೧) ಆಂಧ್ರರ ಪಾಲಿಗೆ ಸುವರ್ಣಾಕ್ಷರಗಳಿಂದ ಬರೆಯಲ್ಪಡುವಂಥದು—ಮತ್ತು ಭಾರತದ ಅರ್ವಾಚೀನ ಇತಿಹಾಸದಲ್ಲಿ ಅದೊಂದು ಮೈಲುಕಲ್ಲು. ಆಂಧ್ರರ ಪ್ರಾಚೀನ ಸಂಸ್ಕೃತಿ ಮತ್ತು ಪರಂಪರೆಗಳಿಗೆ ಆರ್ಥಿಕ ಹಾಗೂ ರಾಜಕೀಯ ಹಿತಸಂಬಂಧವನ್ನು ಜೋಡಿಸಿಯೇ ಭಾರತದ ೨೮ ರಾಜ್ಯಘಟಕಗಳ ಸಾಲಿನಲ್ಲಿ ೨೯ನೆಯದಾಗಿ ಆಂಧ್ರ ರಾಜ್ಯ ಅಂದು ಅಸ್ತಿತ್ವಕ್ಕೆ ಬಂತು. ಆಂಧ್ರವು ಭಾರತ ರಾಜ್ಯಾಂಗಘಟನೆಯಂತೆ "ಅ" ವರ್ಗಕ್ಕೆ ಸೇರಿದ ರಾಜ್ಯ. ಈ ವಿಭಾಗದಲ್ಲಿ ಇದು ಹತ್ತನೆಯದು ತನ್ನ ನೆಲದ ವಿಸ್ತಾರ ಮತ್ತು ಪ್ರಜಾಕೋಟಿಯ ಸಂಖ್ಯಾಬಲದಿಂದ ಆಂಧ್ರ ರಾಜ್ಯವು ಭಾರತದಲ್ಲಿ ಏಳನೆಯ ಸ್ಥಾನವನ್ನು ಪಡೆಯುತ್ತದೆ ಉಳಿಕೆಯ ಮದ್ರಾಸು ರಾಜ್ಯವು ವಿಸ್ತಾರದಲ್ಲಿ ಎಂಟನೆಯ ಸ್ಥಾನವನ್ನೂ ಜನಸಂಖ್ಯಾಬಲದಲ್ಲಿ ನಾಲ್ಕನೆಯ ಸ್ಥಾನವನ್ನೂ ಪಡೆಯುತ್ತದೆ ಆಂಧ್ರ ರಾಜ್ಯದ ಪ್ರದೇಶವು ೬೩೦೦೦ ಚದರ ಮೈಲುಗಳಾಗಿದ್ದು ಈಚಿನ ಖಾನೇಸುಮಾರಿ ಲೆಕ್ಕದಂತೆ ಆಂಧ್ರದ ಪ್ರಜೆಗಳು ೨೦೫೦೮೦೦೦ ಇರುವರು. ಇಷ್ಟು ಜನರ ಭವಿಷ್ಯವನ್ನು ಶ್ರೀ ಪ್ರಕಾಶಮರು ಮುಖ್ಯ ಮಂತ್ರಿಯಾಗಿರುವ ಮಂತ್ರಿ ಮಂಡಳವು ತನ್ನ ಕೈಯಲ್ಲಿ ತೆಗೆದುಕೊಂಡಿದೆ ಈ ಸಚಿವ ಸಂಪುಟದಲ್ಲಿ ಪ್ರಕೃತ ಐದು ಮಂದಿ ಸದಸ್ಯರಿದ್ದು, ಇನ್ನಿಬ್ಬರು ಸದ್ಯನೇ ನೇಮಕ ಹೊಂದಲಿರುವರು. ಶ್ರೀ ಸಂಜೀವ ರೆಡ್ಡಿ, ಶ್ರೀ ಟಿ ವಿಶ್ವನಾಥಂ, ಶ್ರೀ ಕೋಟಿ ರೆಡ್ಡಿ, ಮತ್ತು ಶ್ರೀ ಡಿ ಸಂಜೀವಯ್ಯ ಇವರು ಅಕ್ಟೋಬರ ೧ನೇ ದಿನಾಂಕವೇ ಪ್ರಕಾಶಮರ ಜೊತೆಯಲ್ಲಿ ಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದರು. ಈ ಮಂತ್ರಿಮಂಡಳವನ್ನು ಆಂಧ್ರರು ಪಂಚ ಪಾಂಡವರಿಗೆ ಹೋಲಿಸುತ್ತಿರುವರೆಂದು ಪ್ರಧಾನಿ ನೆಹರೂರವರಿಗೆ ಓರ್ವ ಪತ್ರಿಕಾಪ್ರತಿನಿಧಿ ಹೇಳಿದಾಗ ಅವರು ನಕ್ಕು 'ದ್ರೌಪದಿ ಮತ್ತು ಕುಂತೀದೇವಿ ಇಲ್ಲದ ಪಂಚ ಪಾಂಡವರು!' ಎಂದರು. ಈಗ ಹಾಗೆನಿಸುವುದು ಸ್ವಾಭಾವಿಕವೇ ಆದರೆ ಇನ್ನಿಬ್ಬರು ಮಹಿಳಾಮಣಿಗಳಲ್ಲದಿದ್ದರೂ ಪುರುಷಪುಂಗವರಿಗೆ ಮಂತ್ರಿಸ್ಥಾನವು ಕಾದಿಡಲ್ಪಟ್ಟಿದೆ; ಮತ್ತದು ಇಷ್ಟರಲ್ಲಿಯೇ ತುಂಬಿಕೊಂಡೀತು.

ಮುಖ್ಯಮಂತ್ರಿ ಪ್ರಕಾಶಂ

ಆಂಧ್ರದಲ್ಲಿ ರಾಜಧಾನಿಗೆ ಯೋಗ್ಯವಾದ ಬೇರೆ ಸ್ಥಳಗಳಿದ್ದರೂ ರಾಯಲಸೀಮೆಯ ಜನರ ಮೈತ್ರಿಯನ್ನುಳಿಸಿಕೊಳ್ಳುವ ಆಕಾಂಕ್ಷೆಯಿಂದ ನಾಲ್ಕು ಚದರ ಮೈಲು ವಿಸ್ತೀರ್ಣವುಳ್ಳ (ನಮ್ಮ ಉಡುಪಿ ನಗರ ಸಭೆಯ ವ್ಯಾಪ್ತಿ ಇಷ್ಟೇ ಇದೆ) ಕರ್ನೂಲಿಗೆ ಆ ಗೌರವವನ್ನು ಕೊಟ್ಟರು. ರಾಜ್ಯದ ಪ್ರಾರಂಭೋತ್ಸವದಲ್ಲಿ ಭಾಗವಹಿಸಲು ಬಯಸಿ ಸಹಸ್ರ ಸಂಖ್ಯೆಯಲ್ಲಿ ಆಂಧ್ರರೂ ಇತರ ಭಾಷಾಭಿಮಾನಿಗಳೂ ಧುರೀಣರೂ ಕರ್ನೂಲಿಗೆ ಬಂದರೆ—ಅಲ್ಲಿ ಸ್ವಾಭಾವಿಕವಾಗಿಯೇ ಸ್ಥಳ ಸಂಕೋಚವೆನಿಸುವುದು. ಆದರೂ ಎಲ್ಲಾ ವ್ಯವಸ್ಥೆಯನ್ನು ತುಂಬ ದಕ್ಷತೆಯಿಂದ ಮಾಡಲಾಗಿದ್ದ ಕಾರಣ—ಎರಡು ದಿನದ ಅತಿಥಿಗಳಾಗಿ ಬಂದವರಿಗೆ ಹೆಚ್ಚಿನ ತ್ರಾಸವಾಗಲಿಲ್ಲ, ಕರ್ನೂಲನ್ನು ರಾಜಧಾನಿಗೋಸ್ಕರ ಸಿದ್ಧಗೊಳಿಸುವ ಕೆಲಸ ಕಷ್ಟ ಮಯವಾಗಿದ್ದರೂ—ಅದನ್ನು ಕ್ಲಪ್ತ ಸಮಯದಲ್ಲಿ ಪೂರೈಸಿದ್ದರು. ಆಂಧ್ರದ ವಿಶೇಷಾಧಿಕಾರಿಗಳೆಂದು ನೇಮಕ ಹೊಂದಿದ್ದ ತ್ರಿವೇದಿಯವರು ಈ ವಿಷಯದಲ್ಲಿ ನ್ಯೂನಾತಿರೇಕಗಳಿಗೆ ಎಡೆ ಕೊಡದೆ ಜಾಗ್ರತೆಯಿಂದ ಕೆಲಸ ಸಾಗಿಸಿದ್ದರು ಆದರೂ ಸರಕಾರದ ಎಲ್ಲ ಕಾರ್ಯಾಲಯಗಳನ್ನು ಕರ್ನೂಲಿಗೆ ವರ್ಗಾಯಿಸುವುದಾಗಿಲ್ಲ—ಮತ್ತು ಸರಕಾರೀ ನೌಕರರಿಗೆ ಉತ್ತಮ ವಸತಿ ಸೌಕರ್ಯಗಳನ್ನು ಒದಗಿಸಿಕೊಡುವುದಾಗಿಲ್ಲ. ಆಂಧ್ರದ ರಾಜ ಭವನವೂ ಶಾಸನ ಸಭೆಯೂ ಹಳೆಯ ಕಟ್ಟಡಗಳಲ್ಲಿವೆ. ಹಿಂದಿನ ಗುರುವಾರ ದಿನ ಮುಂಜಾನೆ ಆಂಧ್ರ ರಾಜ್ಯ ಪ್ರಾರಂಭೋತ್ಸವದ ಪ್ರಥಮ ಕಾರ್ಯಕ್ರಮವಾಗಿ ಶಾಸನಸಭಾ ಭವನಕ್ಕೆ ನಿಯೋಜಿತ ಗವರ್ನರ ಶ್ರೀ ತ್ರಿವೇದಿಯವರು ಪತ್ನಿ ಶ್ರೀಮತಿ ಕುಸುಮಾ ತ್ರಿವೇದಿಯವರೊಂದಿಗೆ ರಾಜ ಭವನದಿಂದ ಆಗಮಿಸಿದರು ಮದ್ರಾಸು ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಪಿ ವಿ ರಾಜಮನ್ನಾರರು ತ್ರಿವೇದಿಯವರಿಂದ ಆಂಧ್ರ ರಾಜ್ಯದ ಗವರ್ನರನೆಂದು ಪ್ರಮಾಣ ವಚನಮಾಡಿಸಿದರು ಅಲ್ಲಿಂದ ಮರಳಿ ರಾಜಭವನಕ್ಕೆ ಬಂದಮೇಲೆ ಗವರ್ನರ ತ್ರಿವೇದಿಯವರು ಶ್ರೀ ಪ್ರಕಾಶಮರನ್ನು ಕರೆಸಿ, ಮಂತ್ರಿಮಂಡಳವನ್ನು ರಚಿಸಲು ಕೇಳಿಕೊಂಡರು ಸರಕಾರದ ಹೊಣೆ ಹೊರಲು ಪ್ರಕಾಶಮರು ಒಪ್ಪಿ ಐವರು ಸದಸ್ಯರ ಹೆಸರು ಸೂಚಿಸಲು, ಗವರ್ನರರು ಅದನ್ನು ಮನ್ನಿಸಿದರು, ಮತ್ತು ಪ್ರಮಾಣ ವಚನ ಮಾಡಿಸಿದರು.

ಉದ್ಘಾಟನೋತ್ಸವ

ಇವಿಷ್ಟು—ಪೂರ್ವಸಿದ್ಧತೆ. ಆ ಬಳಿಕವೇ ಚರಿತ್ರಾರ್ಹವಾದ ಘಟನೆ ಜರಗಿತು ಪ್ರಧಾನಿ ನೆಹರೂರವರು ಉಪ ರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್, ಮದ್ರಾಸಿನ ಮುಖ್ಯಮಂತ್ರಿ ರಾಜಾಜಿ. ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯ, ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬಿ ರಾಮಕೃಷ್ಣ ರಾವ್ ಮುಂತಾದವರಲ್ಲದೆ ಶಾಸನ ಸಭೆ ಹಾಗೂ ಪಾರ್ಲಿಮೆಂಟಿನ ಅನೇಕ ಸದಸ್ಯರೂ ಅಧಿಕಾರೀ ವರ್ಗದವರೂ ಒಂದು ಲಕ್ಷದಷ್ಟು ಪ್ರಜಾಜನರೂ ನೆರೆದಿದ್ದ ಪ್ರಚಂಡ ಸಭೆಯಲ್ಲಿ ಆಂಧ್ರ ರಾಜ್ಯವನ್ನು ಉದ್ಘಾಟಿಸಿರುವುದಾಗಿ ಸಾರಿದರು. ಗವರ್ನರ ತ್ರಿವೇದಿಯವರೊಂದಿಗೆ ನೆಹರೂರವರು ರಾಜವೈಭವದಲ್ಲಿ ಮುಂಜಾನೆ ಸಭಾಂಗಣಕ್ಕೆ ಆಗಮಿಸಿದಾಗ, ಕಿಕ್ಕಿರಿದು ತುಂಬಿದ ಜನಸ್ತೋಮದಿಂದ ಹರ್ಷೋದ್ಗಾರಗಳೂ ಜಯಜಯಕಾರವೂ ನಭೋಮಂಡಳವನ್ನು ತುಂಬಿತು. ತುಸು ಹೊತ್ತಿನಲ್ಲಿಯೇ ಶ್ರೀ ಪ್ರಕಾಶಮರೂ ವ್ಯಾಸಪೀಠವನ್ನು ಹತ್ತಿದಾಗ, ಪ್ರಚಂಡ ಹರ್ಷವನ್ನು ಜನತೆ ಪ್ರಕಟಿಸಿದರು ಸಮಾರಂಭದ ಪ್ರಾರಂಭದಲ್ಲಿ ಕುಮಾರಿ ಟಿ ಸೂರ್ಯಕುಮಾರಿಯವರು ತೆಲುಗು ಭಾಷೆಯಲ್ಲಿ ಸ್ವಾಗತ ಗೀತೆಯನ್ನು ಹಾಡಿದರು ಮುಖ್ಯ ನ್ಯಾಯಾಧೀಶ ಶ್ರೀ ರಾಜಮನ್ನಾರರು ಗವರ್ನರ ತ್ರಿವೇದಿಯವರ ಪರಿಚಯ ಮಾಡಿಸಿದರು. ಗವರ್ನರರು ರಾಷ್ಟ್ರಾಧ್ಯಕ್ಷರಿಂದ ಆಂಧ್ರರಾಜ್ಯದ ಉದ್ಘಾಟನೋತ್ಸವದ ನಿಮಿತ್ತ ಬಂದ ಸಂದೇಶವನ್ನು ಓದಿ ಹೇಳಿ, ತಮ್ಮ ಸರಕಾರದ ಮಂತ್ರಿ ಮಂಡಳದ ಸದಸ್ಯರ ಹೆಸರನ್ನೂ ಪ್ರಕಟಪಡಿಸಿದರು. ರಾಷ್ಟ್ರಪತಿಗಳ ಸಂದೇಶವನ್ನು ಮುಖ್ಯ ಮಂತ್ರಿ ಪ್ರಕಾಶಮರು ತೆಲುಗು ಭಾಷೆಗೆ ತರ್ಜುಮೆಮಾಡಿದರು ಮತ್ತು ಪ್ರಧಾನ ಮಂತ್ರಿಗಳನ್ನು ರಾಜ್ಯದ ಉದ್ಘಾಟನೆಮಾಡುವಂತೆ ಬಿನ್ನವಿಸಿದರು ನೆಹರೂರವರು ಅಸ್ಖಲಿತವಾದ ಸ್ವಭಾವಸಹಜವಾದ ಗಂಭೀರವಾಣಿಯಲ್ಲಿ ಸುಮಾರು ೪೦ ನಿಮಿಷ ಕಾಲ ಹಿಂದುಸ್ತಾನಿಯಲ್ಲಿ ಭಾಷಣಮಾಡಿದರು. ಇದನ್ನು ಹೆಚ್ಚಿನ ಜನರು ಅರ್ಥಮಾಡಿಕೊಳ್ಳುವಂತಿದ್ದರೂ ತೆಲುಗರಿಗೆ ಪ್ರಧಾನಿಗಳ ಆಶಯ ಚೆನ್ನಾಗಿ ತಿಳಿಯಬೇಕೆಂಬುದರಿಂದ, ದಕ್ಷಿಣಭಾರತ ಹಿಂದೀಪ್ರಚಾರ ಸಭೆಯ ಶ್ರೀ ಎಂ. ಸತ್ಯನಾರಾಯಣರು ಪ್ರಧಾನಿಗಳ ಭಾಷಣದ ಸಾರಾಂಶವನ್ನು ತೆಲುಗಿನಲ್ಲಿ ಹೇಳಿದರು.

ನೆಹರೂ ಉಪದೇಶ

ನೆಹರೂ ಹಿಂದೊಮ್ಮೆ ಭಾಷಾನುಗುಣವಾಗಿ ಭಾರತವನ್ನು ವಿಭಜಿಸುವ ಚಳುವಳಿಯನ್ನು ಕಟು ಮಾತುಗಳಲ್ಲಿ ಆಕ್ಷೇಪಿಸಿದ್ದುಂಟು ಸ್ವಾತಂತ್ರ್ಯೋತ್ತರದ ಪ್ರಥಮ ಕರ್ತವ್ಯ ಭಾರವಾಗಿ ದೇಶವನ್ನು ದೃಢವಾದ ನೆಲಗಟ್ಟಿನ ಮೇಲೆ, ಭದ್ರವಾದ ಆರ್ಥಿಕ ಬುನಾದಿಯ ಮೇಲೆ, ನಿಲ್ಲಿಸುವುದು ಅಗತ್ಯವಿದೆ ಎಂದವರ ಅಭಿಪ್ರಾಯ ಆದರೆ ಪಂಚವಾರ್ಷಿಕ ಯೋಜನೆ ಕಾರ್ಯಾಚರಣೆಗೆ ಇಳಿಯುತ್ತಿದ್ದಂತೆಯೇ ಕಾಲ ಧರ್ಮದ ಪರಿಣಾಮದಿಂದೆಂಬಂತೆ—ಆಂಧ್ರ ರಾಜ್ಯದ ಅಸ್ತಿತ್ವ ಅನಿವಾರ್ಯವೆನಿಸಿ, ಅದು ರೂಪುಗೊಂಡಿದೆ ಈ ಸಂದರ್ಭದಲ್ಲಿ ಎಲ್ಲ ಭಾರತೀಯರೂ ಸಂತೋಷ ಚಿತ್ತರಾಗುವುದರಲ್ಲಿಯೇ ಹಿತವುಂಟು—ನೆಹರೂ ಇದಕ್ಕೆ ಅಪವಾದವಾಗಲಾರರು. ಆದುದರಿಂದ ಅವರು ತೆಲುಗರಿಗೆ ಹಾರ್ದಿಕ ಶುಭಾಶಯಗಳನ್ನು ನೀಡಿ ಎಲ್ಲ ಆಂಧ್ರರೂ ಪರಸ್ಪರ ಸ್ನೇಹ ಸೌಹಾರ್ದದಿಂದ ಬಾಳಿ ರಾಜ್ಯವನ್ನು ಭದ್ರಪಡಿಸಲು ಕೇಳಿಕೊಂಡರು. ಆಂಧ್ರರ ಬಹುದಿನಗಳ ಕನಸು ಇಂದು ಘಟನಾತ್ಮಕವಾದ ರೀತಿಯಲ್ಲಿ ನನಸಾಗುತ್ತಿರುವುದು ಸಂತೋಷ-ಆಂಧ್ರರಿಗೆ ಉಜ್ವಲವಾದ ಪರಂಪರೆ ಇದೆ ಮತ್ತು ಈ ಪರಂಪರೆಯ ಬಲದಿಂದಲೇ ಉಜ್ವಲ ಭವಿಷ್ಯವನ್ನೂ ರೂಪಿಸಬೇಕು ಹಿಂದೆ ಆಂಧ್ರದಲ್ಲಿ ಅನೇಕ ಸಾಮ್ರಾಜ್ಯಗಳು ಕಟ್ಟಲ್ಪಟ್ಟವು, ಮತ್ತು ಕಾಲಾನುಕ್ರಮದಲ್ಲಿ ನಿರ್ನಾಮವಾದವು ಆದರೆ ಇಂದು ಆಂಧ್ರ ರಾಜ್ಯವು ತದ್ವಿರುದ್ಧ ಪರಿಸ್ಥಿತಿಯಲ್ಲಿ ಆವಿರ್ಭವಿಸಿದೆ. ಆಂಧ್ರವು ಭಾರತದ ಅವಿಭಾಜ್ಯ ಅಂಗವಾಗಿ ಇಂದು ಅಸ್ತಿತ್ವಕ್ಕೆ ಬಂದಿದೆ. ಆಂಧ್ರ ರಾಜ್ಯವು ಭಾರತದಿಂದ ಪ್ರತ್ಯೇಕವಾಗಿರುವುದಿಲ್ಲ—ಬೇರೆ ರಾಜ್ಯಗಳಲ್ಲಿ ಭಾರತೀಯರಿಗೆ ಇರುವಷ್ಟೇ ನಾಗರಿಕ ಅನುಕೂಲತೆ ಮತ್ತು ಸೌಕರ್ಯಗಳು ಆಂಧ್ರದಲ್ಲಿಯೂ ದೊರೆಯುತ್ತವೆ; ಮತ್ತು ದೊರೆಯಬೇಕು. ಆಂಧ್ರರೂ ಬೇರೆ ರಾಜ್ಯದ ನಾಗರಿಕರೂ ಎಲ್ಲರೂ ಒಟ್ಟಾಗಿ ರಾಷ್ಟ್ರದ ಐಕ್ಯವನ್ನು ಗಮನದಲ್ಲಿ ಇಡಬೇಕು. ಐಕ್ಯ ಮತ್ತು ಸಹಕಾರಗಳೇ ಭಾರತದ ಬಲ ಸಂವರ್ಧಿಸುತ್ತವೆಂಬುದನ್ನು ಮರೆಯಲಾಗದು.

ಸಮೃದ್ಧಿಯ ಹಾರೈಕೆ

ಪ್ರಧಾನಿ ನೆಹರೂ ಆಂಧ್ರರನ್ನು ಅಭ್ಯುದಯ ಕಾರ್ಯಗಳಲ್ಲಿ ಹೆಚ್ಚು ಪ್ರಯತ್ನ ಶೀಲರಾಗುವ ಬಗ್ಗೆಯೂ ಎಚ್ಚರಿಸಿದರು. ಆಂಧ್ರ ರಾಜ್ಯವು ಈಗತಾನೆ ಜನಿಸಿದ

ನವಯುಗ ಪ್ರೆಸ್

(ಅತ್ಯಾಧುನಿಕ ಸಲಕರಣೆಗಳಿಂದ ಕೂಡಿದ ಪವರ್ ಪ್ರಿಂಟಿಂಗ್ ಪ್ರೆಸ್)

ಸಂತೆಕಟ್ಟೆ - - - ಉಡುಪಿ.

ಇಂಗ್ಲಿಷ್ ಮತ್ತು ಕನ್ನಡದಲ್ಲಿ ಯಾವದೇತರದ ಮುದ್ರಣ ಕಾರ್ಯಗಳನ್ನು ಅಚ್ಚುಕಟ್ಟಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.

ಹೊಸ ಮುದ್ರಣ ಯಂತ್ರ! ಹೊಸ ಟೈಪುಗಳು!

ವಿಚಾರಿಸಿರಿ

NAVAYUGA PRESS,

Santhekatte, · UDIPI.

ಬೇಕಾಗಿದ್ದಾರೆ

ಶ್ರೀವಾಣೀ ವಿಲಾಸಿನೀ ಸಂಸ್ಕೃತ ಪಾಠಶಾಲಾ ಸಾಲಿಗ್ರಾಮ, ಇದಕ್ಕೆ ಒಬ್ಬ ಎಸ್. ಎಸ್. ಎಲ್. ಸಿ ಟ್ರೈನ್ಡ್ ಉಪಾಧ್ಯಾಯರು ಬೇಕಾಗಿದ್ದಾರೆ ಹೆಚ್ಚಿನ ವಿವರಗಳಿಗೆ ಬರೆಯಿರಿ.

The Correspondent

S V V Sansk-it Ele School,

Salgrama,

SALIGRAMA Post (S. Kanara)

ಹಸುಗೂಸಿನಂತಿದೆ-ಮತ್ತು ಅದರ ಪಾಲನ ಪೋಷಣೆಯ ಭಾರವು ಆಂಧ್ರದ ನಾಗರಿಕರನ್ನೂ ಸರಕಾರವನ್ನೂ ಜೊತೆಯಾಗಿ ಕೂಡಿರುತ್ತದೆ. ಆಂಧ್ರ ರಾಜ್ಯವು ಸಂಪತ್ಸಮೃದ್ಧವಾಗುವಂತೆ ಅಭ್ಯುದಯ ಯೋಜನೆಗಳನ್ನು ಕಾರ್ಯಗತ ಗೊಳಿಸುವುದಕ್ಕೆ ಎಲ್ಲರ ಲಕ್ಷ್ಯವೂ ಕೇಂದ್ರೀ ಕೃತವಾಗುವುದವಶ್ಯ ಎಂದು ಮುಂತಾಗಿ ನೆಹರೂಗಳ, ಆಂಧ್ರ ಕರ್ತವ್ಯವನ್ನು ಕುರಿತು ಮಾತನಾಡಿದರು. ಗಾಂಧೀ ಜಯಂತಿಯ ನೆನಪು ಮಾಡಿಕೊಟ್ಟು ಬಾಪೂವಿನ ಉಪದೇಶ ಸಾರವನ್ನು ಮನನ ಮಾಡಿಕೊಳ್ಳುವ ಆವಶ್ಯಕತೆಯನ್ನೂ ವ್ಯಕ್ತಪಡಿಸಿದರು. ನೆಹರೂಗಳ ಭಾಷಣದ ಬಳಿಕ ಡಾ. ರಾಧಾಕೃಷ್ಣರು ತೆಲುಗಿನಲ್ಲಿ ಚಿಕ್ಕ ಭಾಷಣ ಮಾಡಿ ಆಂಧ್ರ ರಾಜ್ಯವು ಉಳಿದುವಕ್ಕೆ ಮಾದರಿಯಾಗುವಂತೆ ಎಲ್ಲರೂ ಪ್ರಯತ್ನಿಸಲಿ ಎಂದು ಹಾರೈಸಿದರು. ಸಾರ್ವಜನಿಕ ಸಭೆಯ ಕಾರ್ಯಕ್ರಮದ ಬಳಿಕ ನೆಹರೂರವರು ಶಾಸನ ಸಭಾ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದರು. ಭಾಷಾನುಗುಣವಾಗಿ ಭಾರತದೊಳಗಿನ ರಾಜ್ಯಗಳನ್ನು ಪುನರ್ಘಟಿಸುವ ಬಗ್ಗೆ ಉಚ್ಚಾಧಿಕಾರ ಸಂಪನ್ನ ಆಯೋಗವನ್ನು ನೇಮಿಸಲು ಸರಕಾರ ನಿರ್ಣಯಿಸಿರುವುದೆಂದು ಹೇಳಿದರು. ಆಂಧ್ರವನ್ನು ಭದ್ರವಾದ ರಾಜ್ಯವನ್ನಾಗಿ ಮಾಡುವುದಕ್ಕೆ ಎಲ್ಲ ಶಾಸನ ಸಭಾ ಸದಸ್ಯರೂ ಒಮ್ಮನದಿಂದ ಪ್ರಯತ್ನಿಸಬೇಕೆಂದೂ ಮುಖ್ಯತಃ ಆರ್ಥಿಕ ಅಡಚಣೆಗಳ ಕಡೆಗೆ ಅಧಿಕ ಗಮನ ಪೂರೈಸುವುದು ಅವಶ್ಯವೆಂದೂ ನೆಹರೂ ಉಪದೇಶಿಸಿದರು. ಯಾವುದೇ ತರದ ಒಳಜಗಳಗಳಿಗೆ ಶಾಸನ ಸಭಾ ಸದಸ್ಯರಾಗಲೀ ಇತರರಾಗಲೀ ಅವಕಾಶ ಕೊಡದೆ ಪ್ರಜಾಪ್ರಭುತ್ವ ಪದ್ಧತಿಯ ಮೂಲಭೂತ ತತ್ವವಾದ ಪರಸ್ಪರ ಸಹಕಾರದ ಮನೋವೃತ್ತಿಯನ್ನು ತೋರ್ಪಡಿಸುವುದರಲ್ಲಿ ಆಂಧ್ರವು ಹಿಂದುಳಿಯಲಿಕ್ಕಿಲ್ಲವೆಂದು ನೆಹರೂ ಹಾರೈಸಿದರು. ಮೊನ್ನೆ ಮೊನ್ನೆಯ ವರೆಗೆ ಮದ್ರಾಸು ಶಾಸನ ಸಭಾ ಸದಸ್ಯರಾಗಿದ್ದ ಈ ಬಂಧುಗಳ ವಿಯೋಗ ಕಾಲದಲ್ಲಿ ರಾಜಾಜಿಯವರು ಎರಡು ಹಿತನುಡಿಗಳನ್ನಾಡಿ 'ಈ ಸಭಾ ಭವನಕ್ಕೆ ಬರುವವರೆಗೂ ಮದ್ರಾಸು ವಿಭಜನೆ ಹೊಂದಿತೆಂಬುದರ ಪೂರ್ಣ ಕಲ್ಪನೆ ನನಗೆ ಆಗಲಿಲ್ಲ' ಎಂದು ಉದ್ಗರಿಸಿದರು.

ಘಟಕದ ಉದಯ

ಮೈಸೂರಿನೊಂದಿಗೆ ಬಳ್ಳಾರಿಯ ಸೇರ್ಪಡೆ

ಸುಖಾಗಮನ

ಇದನ್ನು ದೈವೇಚ್ಛೆ ಎಂದು ಕರೆಯುವುದೇ ಹಿತವೆಂಬ ಮಾತನ್ನು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳು ಮೈಸೂರಿನೊಂದಿಗೆ ಸೇರ್ಪಡೆ ಹೊಂದುವ ಸಂದರ್ಭದಲ್ಲಿ ಹೇಳಿದರು. ಆಂಧ್ರ ರಾಜ್ಯಕ್ಕೆ ಪ್ರತ್ಯೇಕ ಅಸ್ತಿತ್ವವುಂಟಾದ ಗಳಿಗೆಯಲ್ಲೇ ಸಂಯುಕ್ತ ಕರ್ನಾಟಕ ರಾಜ್ಯ ನಿರ್ಮಾಣದ ಪ್ರಥಮ ಸೋಪಾನವಾಗಿ ಬಳ್ಳಾರಿಯ ಕನ್ನಡ ಪ್ರದೇಶಗಳು ಮೈಸೂರಿನೊಂದಿಗೆ ವಿಲಯನ ಹೊಂದಿದುವು. ದಿನಾಂಕ ೧ರಂದು ಬಳ್ಳಾರಿಯಲ್ಲಿ ಏರ್ಪಡಿಸಿದ ಸಭಾಭವನದಲ್ಲಿ ಮೈಸೂರಿನ ಮುಖ್ಯ ಮಂತ್ರಿಗಳು ಅತ್ಯಂತ ಸೌಹಾರ್ದಯುತವಾದ ಭಾಷಣ ಮಾಡಿ ಬಳ್ಳಾರಿಯ ಕನ್ನಡಿಗರಿಗಷ್ಟೇ ಅಲ್ಲ—ಮೈಸೂರನ್ನು ಸೇರಬಯಸುವ ಎಲ್ಲ ಕನ್ನಡ ಬಂಧುಗಳಿಗೂ ಸುಖಾಗಮನವನ್ನು ಬಯಸಿದರು. ಬಳ್ಳಾರಿಯು ಐತಿಹಾಸಿಕ ಘಟನೆಗಳ ಪರಿಣಾಮವಾಗಿ ಸುಮಾರು ೧೫೦ ವರ್ಷಗಳ ಹಿಂದೆ ಮೈಸೂರಿನಿಂದ ಪ್ರತ್ಯೇಕಗೊಂಡಿತು; ಆದರೆ ಈಗ ಬದಲಾದ ಪರಿಸ್ಥಿತಿಯಲ್ಲಿ ಅದೇ ಐತಿಹಾಸಿಕ ಕಾರಣಗಳಿಂದ ಮೈಸೂರಿನೊಂದಿಗೆ ಬಳ್ಳಾರಿ ಜಿಲ್ಲೆಯು ಕೂಡುವ ಯೋಗ ಬಂದಿದೆ. ರಶಿಯಾದ ಸುಪ್ರಸಿದ್ಧ ಬರೆಹಗಾರ ಟಾಲ್‌ಸ್ಟೆಯರು ತಮ್ಮ 'ಯುದ್ಧ ಮತ್ತು ಶಾಂತಿ' ಎಂಬ ಪುಸ್ತಕದಲ್ಲಿ ಇಂಥ ಮಹತ್ವದ ಘಟನೆಗಳು ದೈವೇಚ್ಛೆಯಿಂದಲೇ ನಡೆಯುತ್ತವೆಂದಿರುವರು. ಬಳ್ಳಾರಿಯ ವಿಲಯನವು ಯಾವನೊಬ್ಬ ವ್ಯಕ್ತಿಯ ಪ್ರಯತ್ನದ ಪರಿಣಾಮವಾಗಿಲ್ಲದೆ—ಮನುಷ್ಯನ ಕೈ ಮೀರಿದ ಅಗೋಚರ ಶಕ್ತಿಯೇ ಇದನ್ನು ಮಾಡಿಸಿದೆ ಎಂದೆನಿಸುವುದು—ಹೀಗೆ ಮೈಸೂರ ಮುಖ್ಯಮಂತ್ರಿಗಳು ನುಡಿದರು. ಅವರು ಕನ್ನಡಿಗರ ಸಾಂಸ್ಕೃತಿಕ ಐಕ್ಯವನ್ನು ಪ್ರಸ್ತಾಪಿಸಿ, ಗದುಗಿನ ವೀರನಾರಾಯಣ ನಾಗಲಿ, ಹಂಪೆಯ ವಿರೂಪಾಕ್ಷನಾಗಲಿ ಬಸವಣ್ಣ ಮತ್ತು ಮಧ್ವಾಚಾರ್ಯರಂಥ ಮಹಾತ್ಮರಾಗಲಿ ಮೈಸೂರಿನಿಂದ ಮತ್ತು ಅಲ್ಲಿಯ ಕನ್ನಡಿಗ ಬಂಧುಗಳಿಂದ ಬೇರೆ ಎನ್ನುವ ಕಲ್ಪನೆ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲವೆಂದರು. ಆದರೆ ಸಂಸ್ಕೃತಿ ಮತ್ತು ಭಾಷೆಯ ಮೇಲಿನ ನಮ್ಮ ಸ್ವಾಭಾವಿಕವಾದ ವ್ಯಾಮೋಹ ಭಾರತದ ಐಕ್ಯದ ಅಂಕುಶಕ್ಕೆ ಒಳಗಾಗುವ ಮಿತಿಯಲ್ಲಿರುವುದವಶ್ಯವೆಂದೂ ಹನುಮಂತಯ್ಯನವರು ಹೇಳಿದರು. ಭಾರತೀಯರಾದ ನಾವು ಕನ್ನಡಿಗರು ಬೇರೆ, ಆಂಧ್ರರು ಬೇರೆ ಎಂಬ ವಿಚಾರ ಸರಣಿ ಹಿಡಿದುಹೋದರೆ ದೇಶದ್ರೋಹವಾಗುವುದೆಂದವರು ಸ್ಪಷ್ಟವಾಗಿ ಹೇಳಿದರು

ಗಾಂಧೀ ಜಯಂತಿ

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯ ೮೫ನೇ ವರ್ಧಂತಿಯನ್ನು ಅಕ್ಟೋಬರ ೨ನೇ ದಿನಾಂಕ ದೇಶದಾದ್ಯಂತ ಗೌರವ ಶ್ರದ್ಧೆಗಳಿಂದ ಆಚರಿಸಿದರು. ಹೊಸ ದಿಲ್ಲಿಯ ರಾಜಘಾಟಿನಲ್ಲಿ ಗಾಂಧೀ ಸಮಾಧಿಯ ಮುಂದೆ ಸುಮಾರು ೧೦೦ ಮಂದಿ ೨೪ ತಾಸುಗಳ ನೂಲುವ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಸಾವಿರಾರು ಸ್ತ್ರೀಪುರುಷರು ಗಾಂಧೀ ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಿಸಿ ಶ್ರದ್ಧೆ ತೋರಿದರು. ವಿದೇಶೀ ರಾಯಭಾರಿ ವರ್ಗ, ಕೊಲೊಂಬೋ ಯೋಜನೆಯ ಸಭೆಗೆ ಬಂದ ಸದಸ್ಯರು, ಕೇಂದ್ರ ಹಾಗೂ ದಿಲ್ಲಿ ರಾಜ್ಯದ ಮಂತ್ರಿಗಳು ರಾಜಘಾಟನ್ನು ಸಂದರ್ಶಿಸಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರೂ ಇಲ್ಲಿ ಉಪಸ್ಥಿತರಿದ್ದು, ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿಯ ಆದರ್ಶಾನುಸರಣೆಯನ್ನು ಮಾಡುವುದು ಲೋಕಕ್ಕೆ ಕಲ್ಯಾಣಪ್ರದವೆಂದು ಹೇಳಿದರು. ವಿನೋಬಾ ಭಾವೆಯವರ ಉದಾಹರಣೆಯನ್ನು ನೀಡುತ್ತಾ ಕೆಲವೇ ಮಂದಿಯಾದರೂ ಸರಿಯೇ ಶ್ರದ್ಧೆಯಿಂದ ಗಾಂಧೀಜಿಯ ತತ್ವಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದರೆ, ಅದರ ಪರಿಣಾಮ ಎಷ್ಟು ಒಳ್ಳೆಯದಾಗುವುದೆಂದು ವರ್ಣಿಸಿದರು. ರಚನಾತ್ಮಕ ಕಾರ್ಯಕರ್ತರು ತಾವಿರುವುದು ಕೆಲವೆ ಮಂದಿಯೆಂದೂ ತಮ್ಮ ಕೆಲಸವು ಕ್ಷುಲ್ಲಕವೆಂದೂ ತಿಳಿಯದೆ, ದೇಶದ ಪ್ರಗತಿಗೆ ಅತ್ಯಂತ ಆವಶ್ಯಕವಾದ ಮತ್ತು ಸಹಾಯಕವಾದ ಸೇವೆ ತಮ್ಮದೆಂದು ಭಾವಿಸಬೇಕಾಗಿ ರಾಷ್ಟ್ರಾಧ್ಯಕ್ಷರು ಕೇಳಿಕೊಂಡರು. ಭಾರತದ ಇಂದಿನ ಸ್ಥಿತಿಗತಿಯಲ್ಲಿ ಯೋಜನೆ ಮತ್ತು ತತ್ಸಂಬಂಧಿತ ಕಾರ್ಯತಃ ಜನರನ್ನು ಪ್ರಗತಿ ಪಥಕ್ಕೆ ಒಯ್ಯುವುದಕ್ಕೆ ಮಹತ್ವವಿದೆ-ಸರಕಾರ ಇದನ್ನು ಮನಗಂಡು, ಗಾಂಧೀಜಯಂತಿಯ ಶುಭಸಂದರ್ಭದಲ್ಲಿ ಕಳೆದವರ್ಷ ತೊಡಗಿದ ಜನಪದ ಅಭಿವೃದ್ಧಿಯನ್ನು ಇನ್ನೂ ವ್ಯಾಪಕ ಮಾಡಿರುತ್ತದೆ. ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಟಿ. ಟಿ. ಕೃಷ್ಣಮಾಚಾರ್ಯರು ದಿಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ವಿಸ್ತರಣಾ ಕಾರ್ಯದ ಉದ್ಘಾಟನೆ ಮಾಡಿದರು. ಹಳ್ಳಿಗಳಲ್ಲಿ ಪರಸ್ಪರ ಸಹಕಾರ ಬುದ್ಧಿಯನ್ನುಂಟು ಮಾಡಿ ಸ್ವಯಂ ಪ್ರೇರಣೆಯಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೂಡಿಸುವುದೇ ಈ ಯೋಜನೆಯ ಉದ್ದೇಶ. ಗಾಂಧೀಜಿಗೆ ಅತ್ಯಂತ ಪ್ರಿಯವಾದ ಗ್ರಾಮೋದ್ಧಾರದ ಸಂಗತಿಯನ್ನು ಸ್ಮರಿಸಿ, ಕಾರ್ಯೋತ್ಸಾಹ ತುಂಬಲು ಗಾಂಧೀಜಯಂತಿಯ ದಿನವೇ ಯೋಗ್ಯ- ಈ ಸ್ಫೂರ್ತಿಯು ನೆಲೆ ನಿಂತು ಉಕ್ಕಿ ಹರಿಯುತ್ತಿರಬೇಕು, ಹೊರತು ನೆರೆಯ ನೀರಿನಂತೆ ಇಳಿದು ಹೋಗಬಾರದು.

ಕಿಲ್ಲೆ ಸ್ಮಾರಕ ಗ್ರಂಥ

ಅಪ್ರತಿಮ ಭಾಷಣಕಾರರಾಗಿ, ಭಾಷಾಂತರಕಾರರಾಗಿ, ಅಸಾಧಾರಣ ಯಕ್ಷಗಾನ ಕಲೋಪಾಸಕರಾಗಿ, ಅಗ್ರಗಣ್ಯ ದೇಶಸೇವಕರಾಗಿ, ದೀನ ದಲಿತ ಹರಿಜನ ಸೇವಕರಾಗಿ, ಉತ್ತಮ ಸಾಮಾಜಿಕ ಕೆಲಸಗಾರರಾಗಿ ವಿವಿಧ ಕ್ಷೇತ್ರಗಳಲ್ಲಿ ಹಲವು ವಿಧದಲ್ಲಿ ಜನತೆಯ ಮೇಲೆ ತಮ್ಮ ವ್ಯಕ್ತಿತ್ವದ ಅಚ್ಚೊತ್ತಿ ನಡುವಯಸ್ಸಿನಲ್ಲೇ ಸ್ವರ್ಗಸ್ಥರಾದ ಶ್ರೀ. ಎಸ್. ಎಸ್. ಕಿಲ್ಲೆಯವರ ಸ್ಮಾರಕವಾಗಿ ದ. ಕ. ಜಿಲ್ಲಾ ಕಿಲ್ಲೆ ಸ್ಮಾರಕ ಸಮಿತಿ, ಮಂಗಳೂರು ಇವರಿಂದ ಸಚಿತ್ರವಾಗಿ ಪ್ರಕಟಿಸಲ್ಪಟ್ಟ

ಕಿಲ್ಲೆ ಸ್ಮಾರಕ ಗ್ರಂಥವನ್ನು

ಕೊಂಡುಕೊಂಡು ಸ್ಮಾರಕ ಕಾರ್ಯಗಳಿಗೆ ನೆರವಾಗಿರಿ.

ಸಂಗ್ರಾಹಕಾರರು: ಶ್ರೀಗಳಾದ ಎಚ್. ಆರ್. ಮಲ್ಯ ಮತ್ತು ಕೆ. ಕೆ. ಶೆಟ್ಟಿ, ಮಂಗಳೂರು.

ದೊಡ್ಡ ಆಕಾರದ 160 ಪುಟಗಳು. ಬೆಲೆ ರೂ. 1-0-0 ಮಾತ್ರ.

ಮುಖಂಡರನೇಕರ ಸಂದೇಶಗಳಿವೆ.

ಪ್ರಸಿದ್ಧರನೇಕರ ವಿವಿಧ ಲೇಖನಗಳಿವೆ.

ಕಿಲ್ಲೆಯವರ ನಾನಾ ಕಾರ್ಯಕ್ಷೇತ್ರದ ವಿವರಣೆಗಳಿವೆ.

ಪ್ರತಿಗಳು ಸಿಗುವ ಸ್ಥಳಗಳು:

1. ಕೆನರಾ ಛಾಪಖಾನೆ, ಮಂಗಳೂರು 2. ನವಯುಗ ಪ್ರೆಸ್, ಉಡುಪಿ.

ರೂ. 1-1-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟ್ ಮೂಲಕ ಕಳಿಸಬಹುದು.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We we'come yours association with the POPULAR

THE
POPULAR INSURANCE CO. LTD.
"POPULAR BUILDINGS" MANGALORE-1

Our Bombay Stockists:-

1) V. N. Shenoy, Bombay 12.

2) N. R. Kamath, General Merchant, Dahanu Road, W. Ryl

NAVAYUGA
Popular Kannada Weekly.
Founder:—
Sri A. B. SHETTY,
Minister for Public Health, Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು.- ಶ್ರೀ. ಎ. ಬಿ. ಶೆಟ್ಟಿ, ಮದ್ರಾಸಿನ ಆರೋಗ್ಯಮಂತ್ರಿ.
ವಾರ್ಷಿಕ ಚಂದಾ: ರೂ. 5-12-0 ಬಿಡಿಪ್ರತಿ: 0-2-0

ದಿ ಕೆನರಾ ಬ್ಯಾಂಕಿಂಗ್ ಕೋಪೊರ್ರೇಶನ್ ಲಿಮಿಟೆಡ್.
ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲತತ್ವ. ಇದು ಮುಖ್ಯವಾಗಿ ಮಧ್ಯಮತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆಯಾ ಇನ್ನಿತರ ಸದುದ್ದೇಶಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ಇಂದೇ ಇಂಥ ಒಂದು ಖಾತೆಯನ್ನು ನಮ್ಮ 38 ಶಾಖೆಗಳಲ್ಲಿ ನಿಮಗೆ ಹತ್ತಿರವಿರುವ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

THE CANARA BANKING CORPORATION LTD.,
Estd: 1906] [H. O. UDIPI (S. India)

ನವಯುಗ

ಉಡುಪಿ, ಗುರುವಾರ ೮-೧೦-'೫೩

ಭೂಸುಧಾರಣೆ

ಕೇಂದ್ರ ಕೃಷಿ ಮಂತ್ರಿ ಡಾ. ಪಂಜಾಬರಾವ ದೇಶಮುಖರ ಅಧ್ಯಕ್ಷತೆಯಲ್ಲಿ ರಾಜ್ಯಗಳ ಕೃಷಿ ಹಾಗೂ ಸಹಕಾರೀ ಮಂತ್ರಿಗಳ ಸಭೆಯು ಸುಮಾರು ಒಂದು ವಾರದ ವರೆಗೆ ಈಚಿಗೆ ಹೊಸ ದಿಲ್ಲಿಯಲ್ಲಿ ನಡೆಯಿತು. ಈ ಸಭೆಯು ಕೆಲವು ಮಹತ್ವದ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡು ಸಮಂಜಸವಾದ ನಿರ್ಣಯಗಳನ್ನು ಮಾಡಿರುತ್ತದೆ. ಭಾರತದಲ್ಲಿ ಕೃಷಿಯನ್ನು ಅಭಿವೃದ್ಧಿಗೊಳಿಸಲು ಕೈಗೊಳ್ಳತಕ್ಕ ಕ್ರಮಗಳನ್ನು ಈ ಸಭೆಯು ವಿವೇಕಶೀಲತೆಯಿಂದ ಪರಿಶೀಲಿಸಿದೆ. ನಮ್ಮಲ್ಲಿ ಕೃಷಿ ಸಂಬಂಧವಾದ ವೈಜ್ಞಾನಿಕ ಪ್ರಗತಿಯ ಗಂಧಗಾಳಿಯೂ ಸಾಮಾನ್ಯ ರೈತನನ್ನು ಮುಟ್ಟುತ್ತಿಲ್ಲ; ಇದು ತಪ್ಪಿ ವೈಜ್ಞಾನಿಕ ಪ್ರಗತಿಯ ಲಾಭವನ್ನು ರೈತರು ಪಡೆಯುವಂತಾಗಲು ಅಧಿಕಾರಿಗಳಿಗೂ ರೈತರಿಗೂ ಯೋಗ್ಯ ಸಂಪರ್ಕ ಏರ್ಪಡಬೇಕು. ಕೃಷಿ ಮಂತ್ರಿಗಳ ಸಭೆಯು ಈ ವಿಷಯವನ್ನು ಪರ್ಯಾಲೋಚಿಸಿ ಒಳ್ಳೆಯ ತರಬೇತಿಯನ್ನು ಆರಿಸಿದ ಕೆಲವು ಜನಗಳಿಗೆ ಒದಗಿಸಿಕೊಟ್ಟು, ಅವರನ್ನು ಪ್ರತಿಯೊಂದು ಹಳ್ಳಿಯಲ್ಲೂ ಸಂಪರ್ಕ ಸಾಧನೋದ್ದೇಶದಿಂದ ನೆಲೆಗೊಳಿಸುವ ಅಭಿಪ್ರಾಯವನ್ನು ವ್ಯಕ್ತಗೊಳಿಸಿದೆ. ಇದು ಭಾರತದ ಕೃಷಿ ವಲಯದಲ್ಲಿ ಕ್ರಾಂತಿಕರ ಪರಿಣಾಮವನ್ನು ಉಂಟುಮಾಡಬಲ್ಲುದು. ಆದರೆ ಈ ಕರ್ತವ್ಯ ನಿರ್ವಹಣೆಗೋಸ್ಕರ ಜನಗಳ ಆಯ್ಕೆ ನಡೆಯುವಾಗ ತುಂಬ ದಕ್ಷತೆಯಿಂದ ಕೃಷಿ ಇಲಾಖೆಯು ನಡೆದುಕೊಳ್ಳಬೇಕು.

ಹೊಸದಿಲ್ಲಿಯ ಈ ಸಭೆ ಕೃಷಿಯನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಸಹಕಾರೀ ತತ್ವಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಿದೆ. ಬೇಸಾಯವು ಲಾಭದಾಯಕವಾದ ಉದ್ಯಮವಾಗಿಲ್ಲವೆಂಬುದು ಭಾರತದಲ್ಲಿ ಎಲ್ಲರಿಗೂ ಗೊತ್ತಿದೆ. ಏನೋ ಈಚೆಗೆ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಅಸಾಮಾನ್ಯ ಪರಿಸ್ಥಿತಿಯುಂಟಾದಾಗ, ವ್ಯವಸಾಯೋತ್ಪನ್ನದಿಂದ ರೈತರು ಲಾಭಗಳಿಸಿದರೂ ನಿಯಂತ್ರಣಗಳೂ ಕೊರತೆಗಳೂ ದೂರಾದಬಳಿಕ, ಈಗ ಕೃಷೀವಲರು ಹಿಂದಿನ ದುರ್ದೆಶೆಯನ್ನೇ ಅನುಭವಿಸುತ್ತಿರುವರು. ಅವರ ಉತ್ಪಾದನೆಯನ್ನು ಹೆಚ್ಚಿಸಿ ಜೀವನಮಟ್ಟವನ್ನು ಎತ್ತರಿಸುವ ಉದ್ದೇಶದಿಂದ ಕೃಷಿಯ ಪ್ರತಿಯೊಂದೂ ಘಟ್ಟದಲ್ಲಿ ಸಹಕಾರೀ ತತ್ವಕ್ಕೆ ಪ್ರಚೋದನೆಕೊಡುವುದು ಸೂಕ್ತವೆಂದು ಕೃಷಿ ಮಂತ್ರಿಗಳು ಒಪ್ಪಿದಂತಿದೆ. ಸಹಕಾರೀ ತತ್ವವನ್ನು ಅನುಸರಿಸಿ ರೈತರಿಗೆ ಆಪತ್ಕಾಲದಲ್ಲಿ ಧನಸಹಾಯ, ಅವರ ಉತ್ಪಾದನೆಗೆ ಯೋಗ್ಯ ಬೆಲೆ ಮತ್ತು ವ್ಯವಸಾಯದಲ್ಲಿ ಸುಧಾರಿತ ಕ್ರಮ ಮುಂತಾದುವುಗಳಿಗೆ ಆಸ್ಪದಮಾಡಿಕೊಡುವುದು ಪಾಶ್ಚಾತ್ಯ ದೇಶಗಳಲ್ಲಿ ಕ್ರಮಾಗತವಾಗಿ ಬಂದಿರುತ್ತದೆ. ಹಾಗೆಂದು ನಮ್ಮ ದೇಶದಲ್ಲಿ ಈ ಪದ್ಧತಿ ಇನ್ನೂ ಬೇರೂರಿಲ್ಲ. ಕೃಷಿ ಮಂತ್ರಿಗಳು ಈ ದಿಸೆಯಲ್ಲಿ ಕ್ಷಿಪ್ರ ಪ್ರಯತ್ನ ನಡೆದು, ಶೀಘ್ರ ಪ್ರಗತಿ ಕೈಗೂಡುವಂತಾಗಬೇಕೆಂದು ಮನಸ್ಸು ಮಾಡಿರುವುದು ಸ್ತುತ್ಯ. ಆದರೆ ಮೊದಲೇ ಸೂಚಿಸಿದಂತೆ, ಸಹಕಾರೀ ಪದ್ಧತಿಯು ರೈತರಿಗೆ ಹಿತವನ್ನೇ ಉಂಟುಮಾಡಿದರೂ ಭಾರತದಲ್ಲಿ ರೂಢವಾಗಿರುವ ವಿಶಿಷ್ಟ ಪರಿಸ್ಥಿತಿಯಲ್ಲಿ ಅದು ಹೊಂದುವ ಯಶಸ್ಸಿನ ಬಗ್ಗೆ ಸಂದೇಹ ನಮಗುಂಟು—ಪರಂಪರಾಗತವಾದ ಮನೋಭಾವನೆಯು ನಮ್ಮಲ್ಲಿ ಸಹಕಾರೀ ತತ್ವಕ್ಕೆ ಪ್ರೋತ್ಸಾಹಕವಾಗಿರುವುದಿಲ್ಲ. ನಾಲ್ಕು ಮಂದಿ ಒಟ್ಟು ಕೂಡಿ ಸಾಮಾಜಿಕ ಕಲ್ಯಾಣ ಸಾಧಿಸುವುದೆಂದರೆ, ನಮ್ಮಲ್ಲಿ ಅದನ್ನು ಬೆಂಬಲಿಸಿ ಪ್ರೋತ್ಸಾಹಿಸುವವರು ಕಡಿಮೆ. ವಾತಾವರಣವನ್ನು ಹೀಗೆಯೇ ಉಳಿಯಗೊಡದೆ, ಅದನ್ನು ಸುಧಾರಿಸಲು ಸರಕಾರ ಉದ್ದೇಶಿಸಿರುವ ಕ್ರಮಗಳಿಗೆ ನಮ್ಮ ರೈತರಿಂದ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕೆನ್ನುವುದು ಮಾತ್ರ ನಿಜ. ಸಹಕಾರೀ ಪದ್ಧತಿಯು ರೈತರ ಸರ್ವಾಂಗಿಕ ಏಳಿಗೆಯ ಸಾಧನವಾಗಿ ಇತರ ದೇಶಗಳಲ್ಲಿ ಪರಿಣಮಿಸಿರುವುದನ್ನು ನಾವು ಸರ್ವಥಾ ಮರೆಯಲಾಗದು. ಕೃಷಿ ಮಂತ್ರಿಗಳ ಪರಿಷತ್ತು ಭೂಮಿಯ ಪರಮಾವಧಿ ಮಿತಿಯನ್ನು ಗೊತ್ತುಪಡಿಸುವ ಸಂಗತಿಯನ್ನೂ ವಿಚಾರಣೆಗೆ ತೆಗೆದುಕೊಂಡು ಈ ವಿಷಯದಲ್ಲಿ ಆತುರದ ಕ್ರಮಗಳನ್ನು ಕೈಗೊಳ್ಳುವುದು ತರವಲ್ಲವೆಂದೂ ಇಂಥ ಮಿತಿ ನಿರ್ಣಯಿಸುವಾಗ, ಉತ್ಪಾದನೆ ತಗ್ಗದಂತೆ ಹಾಗೂ ಹಿಡುವಳಿಯ ಸ್ವರೂಪ ಕೆಡದಂತೆ ಜಾಗ್ರತೆ ವಹಿಸಬೇಕೆಂದೂ ತೀರ್ಮಾನಿಸಿರುವುದು. ಭೂಮಿಯ ಸಮಾನ ವಿತರಣೆಯಾಗಬೇಕೆನ್ನುವ ಚಳುವಳಿಯು ಇಂದು ಭಾರತದ ರಾಜಕೀಯ ಪಕ್ಷಗಳ ಬೆಂಗೋಲಾಗಿ ಪರಿಣಮಿಸಿದೆ; ಮತ್ತು ಭೂಸುಧಾರಣೆಯ ಹೆಸರಿನಲ್ಲಿ ಅವಸರದ ಕಾಯಿದೆ ಕಾನೂನುಗಳನ್ನು ಸರಕಾರದವರು ಕೈಗೊಂಡ ನಿದರ್ಶನವೂ ನಮ್ಮ ಕಣ್ಣ ಮುಂದಿದೆ. ಆದರೆ ಈ ಕಾಯಿದೆಗಳಿಂದ ವಾತಾವರಣ ಸುಧಾರಿಸಿದೆಯೆಂಬ ಕುರಿತು ಯಾವ ಭರವಸೆಯೂ ಇಲ್ಲ. ಅಸಮಾನತೆಯನ್ನು ದೂರೀಕರಿಸುವುದು ಕಲ್ಯಾಣ ರಾಷ್ಟ್ರದ ಪ್ರಥಮ ಕರ್ತವ್ಯವಾಗಿದ್ದರೂ ರಾಷ್ಟ್ರದ ಒಟ್ಟು ಹಿತದೃಷ್ಟಿಗೆ ಇಲ್ಲಿಯೂ ಪ್ರಾಶಸ್ತ್ಯ ಸಲ್ಲಬೇಕಾದುದು ನ್ಯಾಯ. ಭೂಸುಧಾರಣೆಯ ಕಾಯಿದೆಗಳು ಸಾಮಾನ್ಯ ವ್ಯಕ್ತಿಯ ಅಂತಸ್ತು ಮೇಲೇರುವುದಕ್ಕೆ ಸಹಾಯಕವಾಗಬೇಕೇ ಹೊರತು, ಈಗಿನದಕ್ಕಿಂತಲೂ ದೈನ್ಯಾವಸ್ಥೆಗೆ ಅವನನ್ನು ದೂಡಬಾರದು. ರಾಜ್ಯಸರಕಾರಗಳು ಪರಮಾವಧಿ ಹಿಡುವಳಿಯ ಮಿತಿ ನಿರ್ಣಯಿಸುವಾಗ ಈ ವಿಷಯವನ್ನು ದುರ್ಲಕ್ಷಿಸುತ್ತವೆಂದು ಕೇಂದ್ರ ಸರಕಾರ ಅಭಿಪ್ರಾಯ ಪಟ್ಟಿರುತ್ತದೆ. ಡಾ. ದೇಶಮುಖರು ಭೂಸುಧಾರಣೆಯ ವಿಷಯದಲ್ಲಿ ರಾಜ್ಯ ಸರಕಾರಗಳು ಕಾನೂನು ಕಾಯಿದೆ ಮಾಡುವುದಕ್ಕೆ ಮುಂಚೆ ಕೇಂದ್ರ ಸರಕಾರ ಹಾಗೂ ಭೂಸುಧಾರಣಾ ಸಮಿತಿಯ ಸಲಹೆ ಪಡೆಯುವುದೊಳಿತೆಂದು ಹೇಳಿರುವರು. ಇದರ ಮೇಲಿಂದ, ಭೂಮಿಯ ಹಸಿವೆ ಎಂದಿಗಿಂತಲೂ ಇಂದು ಹೆಚ್ಚಾಗಿರುವುದನ್ನು ಕೇಂದ್ರ ಸರಕಾರ ಗಮನಿಸಿಲ್ಲವೆಂದು ಅರ್ಥಮಾಡುವುದು ಸರಿಯಲ್ಲ. ಭೂಮಿಯ ಹಸಿವೆ ನೀಗಿಸಲು ಬೇರೆ ವ್ಯವಹಾರಿಕ ಉಪಾಯಗಳನ್ನು ಕೈಗೊಳ್ಳಲು ಅವಕಾಶವುಂಟು— ಒಮ್ಮಟ್ಟಿನಲ್ಲಿರುವ ವಿಶಾಲವಾದ ಬಂಜರು ಭೂಮಿಯ ಮಾಹಿತಿಗಳನ್ನು ಕಲೆಹಾಕಿ ಅಲ್ಲಿ ಸ್ವಂತ ಸಾಗುವಳಿ ಇಲ್ಲದ ರೈತರನ್ನು ನೆಲೆಗೊಳಿಸಲು ಪ್ರಯತ್ನಿಸಬೇಕೆಂದು ಕೃಷಿ ಮಂತ್ರಿಗಳ ಪರಿಷತ್ತು ನಿರ್ಣಯಿಸಿದೆ. ರಾಜ್ಯ ಸರಕಾರಗಳು ಈ ಮಾರ್ಗದರ್ಶನವನ್ನು ಸ್ವೀಕರಿಸುವುದು ಒಳ್ಳೇದು.

ಪ್ರಕಾಶಮರ ಮಂತ್ರಿಮಂಡಳ

ಬಳ್ಳಾರಿಯ ಡಾ. ನಾಗಣ್ಣ ಗೌಡರಿಗೆ ಮೈಸೂರಿನಲ್ಲಿ ಸ್ಥಾನ

ಆಂಧ್ರದ ಮುಖ್ಯಮಂತ್ರಿಗಳಾದ ಶ್ರೀ ಪ್ರಕಾಶಮರು ಪ್ರಥಮದಲ್ಲಿ ನಾಲ್ವರು ಸಹೋದ್ಯೋಗಿಗಳನ್ನು ಪಡೆದುಕೊಂಡು ಪಂಚಪಾಂಡವರ ಮಂತ್ರಿ ಮಂಡಳ ರಚಿಸಿದ್ದರೂ ಈಗ ಇನ್ನಿಬ್ಬರು ಮಂತ್ರಿಗಳನ್ನು ನೇಮಿಸಿಕೊಂಡಿರುವರಾಗಿ ತಿಳಿಯುತ್ತದೆ. ರಾಜಾಜಿಯ ಮದ್ರಾಸು ಮಂತ್ರಿ ಮಂಡಳದ ಸದಸ್ಯರಾಗಿದ್ದ ಶ್ರೀ ಎಸ್. ಬಿ. ಪಿ. ಪಟ್ಟಾಭಿ ರಾಮರಾಯರನ್ನೂ ಕೃಷಿಕರ ಲೋಕ ಪಕ್ಷದ ಸದಸ್ಯರಾದ ಶ್ರೀ ಪಿ. ತಿಮ್ಮರೆಡ್ಡಿಯವರನ್ನೂ ಪ್ರಕಾಶಮರು ತಮ್ಮ ಮಂತ್ರಿ ಮಂಡಳಕ್ಕೆ ಸೇರಿಸಿಕೊಂಡಿರುವರು. ತಿಮ್ಮರೆಡ್ಡಿಯವರ ನೇಮಕದ ಬಗ್ಗೆ ಕೃಷಿಕರ ಲೋಕ ಪಕ್ಷಕ್ಕೆ ಸಮಾಧಾನವಿಲ್ಲ—ಶ್ರೀ ಲಚ್ಚಣ್ಣನವರಿಗೆ ಮಂತ್ರಿಪದವನ್ನು ಕೊಡಬೇಕೆಂದು ಆ ಪಕ್ಷದ ಕಾರ್ಯಕಾರಿಣಿಯ ಬಯಕೆಯಾಗಿತ್ತು. ಆದರೆ ಕಾಂಗ್ರೆಸಿಗೆ ಇದು ಸಂತೋರಲಿಲ್ಲ. ಈಗ ಕೃಷಿಕರ ಲೋಕಪಕ್ಷವು ತಿಮ್ಮರೆಡ್ಡಿಯವರ ಮೇಲೆ ಶಿಸ್ತು ಜ್ಯಾರಿ ಮಾಡಬೇಕೆಂದೂ ಕಾಂಗ್ರೆಸಿನೊಡನೆ ಸಹಕರಿಸದಿರಬೇಕೆಂದೂ ಹೇಳುತ್ತದೆ. ಹಾಗೆಂದು ಶಾಸನ ಸಭೆಯಲ್ಲಿರುವ ಕೃಷಿಕರ ಲೋಕ ಪಕ್ಷದ ಸದಸ್ಯರು ಮಂತ್ರಿಮಂಡಳದ ಮೇಲೆ ಭರವಸೆ ಇಟ್ಟಿರುವರು.

ಖಾತೆಗಳ ಹಂಚುವಿಕೆ

ಮಂತ್ರಿಮಂಡಳದಲ್ಲಿ ಖಾತೆಗಳನ್ನು ಈ ರೀತಿ ಹಂಚಿರುವರು —

ಮುಖ್ಯಮಂತ್ರಿ ಶ್ರೀ ಪ್ರಕಾಶಂ—ಸಾರ್ವಜನಿಕ ಸೇವಾ ಭಾಗವುಳ್ಳ ಗೃಹಖಾತೆ, ರಾಜಕೀಯ ವಾರ್ತೆ ಮತ್ತು ಪ್ರಚಾರ.

ಉಪ ಮುಖ್ಯಮಂತ್ರಿ ಶ್ರೀ ಸಂಜೀವರೆಡ್ಡಿ--ಪೋಲೀಸು, ಕಾನೂನು ಮತ್ತು ಶಿಸ್ತು ವಿಭಾಗವುಳ್ಳ ಗೃಹಖಾತೆ, ಪಾಸ್‌ಪೋರ್ಟ್, ನ್ಯಾಯವಿಧಾಯಕ ಚುನಾವಣೆಗಳು, ಲೋಕೋಪಯೋಗಿ ಕಾರ್ಯಗಳು ಮತ್ತು ಸಾರಿಗೆ ಸೌಕರ್ಯ.

ಶ್ರೀ ವಿಶ್ವನಾಥಂ—ನ್ಯಾಯಾಂಗ, ಹಣಕಾಸು, ವ್ಯಾಪಾರ ತೆರಿಗೆ, ಧಾರ್ಮಿಕ ಉಂಬಳಿ, ಪರಿಶಿಷ್ಟ ವರ್ಗ ಹಾಗೂ ಗುಡ್ಡಗಾಡು ಜನರ ಯೋಗಕ್ಷೇಮ.

ಶ್ರೀ ಸಂಜೀವಯ್ಯ— ಯೋಜನೆ, ಆರೋಗ್ಯ, ಪರಸ್ಪರ ಸಹಾಯ, ಮಜೂರ ಖಾತೆ, ಗ್ರಾಮ ಹಿತ ಮತ್ತು ಹರಿಜನೋದ್ಧಾರ.

ಶ್ರೀ ಎಸ್. ಬಿ. ಪಿ. ಪಟ್ಟಾಭಿ ರಾಮರಾಯರು—ಶಿಕ್ಷಣ, ಕೈಗಾರಿಕೆ, ಅಬಕಾರಿ, ಪಾನನಿರೋಧ ಮತ್ತು ಮಹಿಳಾಭಿವೃದ್ಧಿ.

ಶ್ರೀ ಪಿ. ತಿಮ್ಮರೆಡ್ಡಿ—ಸ್ಥಳೀಯ ಸಂಸ್ಥೆಗಳು, ವ್ಯವಸಾಯ, ಅರಣ್ಯ, ಪಶು ವೃತ್ತಿ ಮತ್ತು ಮೀನುಗಾರಿಕೆ.

ಬಳ್ಳಾರಿಯ ಪ್ರತಿನಿಧಿ

ಬಳ್ಳಾರಿಯ ವಿಲಯನದಿಂದ ಮೈಸೂರಿನ ಮಂತ್ರಿಮಂಡಳವನ್ನು ವಿಸ್ತರಿಸುವ ಆವಶ್ಯಕತೆಯುಂಟಾಯಿತೆಂದೂ, ರಾಜಾ

ಜಿಯು ಮದ್ರಾಸು ಮಂತ್ರಿಮಂಡಳದಲ್ಲಿ ವ್ಯವಸಾಯ ಖಾತೆಯನ್ನು ನೋಡಿಕೊಳ್ಳುತಿದ್ದ ಡಾ. ನಾಗಣ್ಣ ಗೌಡರನ್ನು ಶ್ರೀ ಹನುಮಂತಯ್ಯನವರು ತಮ್ಮ ಮಂತ್ರಿಮಂಡಳದಲ್ಲಿ ಸೇರಿಸಿಕೊಂಡಿರುವರೆಂದೂ ಕೇಳುತ್ತೇವೆ. ಮೈಸೂರು ಮಂತ್ರಿಮಂಡಳದಲ್ಲಿ ಖಾತೆಗಳ ಪುನರ್ವ್ಯವಸ್ಥೆಯು ನಡೆದು ಡಾ. ನಾಗಣ್ಣ ಗೌಡರ ಪಾಲಿಗೆ ವ್ಯವಸಾಯ, ಸಹಕಾರ, ವಿದ್ಯುಚ್ಛಕ್ತಿ, ಅರಣ್ಯ, ಪಶು ವೈದ್ಯಕೀಯ, ನಿರಾಶ್ರಿತರ ಸೊತ್ತು ಹಾಗೂ ಪುನರ್ನಿವೇಶನ ಶಾಖೆಗಳು ಬಂದಿರುತ್ತವೆ.

ಉಳಿಕೆಯ ಮದ್ರಾಸು ರಾಜ್ಯದ ಹಿತ ಸಂಬಂಧಗಳನ್ನು ಯೋಗ್ಯರೀತಿಯಲ್ಲಿ ರಕ್ಷಿಕೊಳ್ಳಲು ಮದ್ರಾಸು ಮಂತ್ರಿಮಂಡಳ ವಿಸ್ತರಿಸಲ್ಪಡುವ ಸಂಭವವಿದ್ದರೂ, ಸದ್ಯಕ್ಕೆಯೇ ಅದು ನೆರವೇರುವುದಿಲ್ಲ. ರಾಜಾಜಿಯವರೊಡನೆ ಈ ವಿಷಯ ಪ್ರಸ್ತಾಪಿಸಿದಲ್ಲಿ "ಈಗಿರುವ ಮಂತ್ರಿಗಳೇ ದಕ್ಷತೆಯಿಂದ ಕೆಲಸ ನಿರ್ವಹಿಸಿದರೆ ಸದ್ಯ ಸಮಾಧಾನವಾಗಲಿಕ್ಕಿಲ್ಲವೆ." ಎಂಬ ಉತ್ತರ ದೊರೆಯಿತು. ಇನ್ನು ಸ್ವಲ್ಪ ಸಮಯ ಕಾದು ನಿಂತು ಮಂತ್ರಿಮಂಡಳದ ವಿಸ್ತರಣೆ ಅನಿವಾರ್ಯವೇ ಎಂಬುದನ್ನು ಪರಿಶೀಲಿಸುವುದು ರಾಜಾಜಿಯ ಇಚ್ಛೆ.

ಅಗಲಿದ ಜೀವಗಳು

ಈ ವಾರ ಇಬ್ಬರು ಪುಣ್ಯಾತ್ಮರು ನಮ್ಮನ್ನು ಅಗಲಿ ಹೋದರೆಂದು ತಿಳಿಸಲು ವಿಷಾದವಾಗುತ್ತದೆ. ಸುಪ್ರಸಿದ್ಧ ಘಟನಾತಜ್ಞರಾದ ಡಾ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರರು ಶನಿವಾರ ದಿನ ರಾತ್ರಿ ಎಂಟರ ಸಮಯ ಮದ್ರಾಸಿನ ತಮ್ಮ ನಿವಾಸಸ್ಥಾನದಲ್ಲಿ ೭೦ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಆದಿತ್ಯವಾರ ದಿನ ಮಧ್ಯಾಹ್ನ ಭಾರತ ಸರಕಾರದ ಲೋಕೋಪಯೋಗಿ, ಪೂರೈಕೆ ಮತ್ತು ವಸತಿ ಶಾಖೆಗಳ ಉಪಮಂತ್ರಿಗಳಾಗಿದ್ದ ಶ್ರೀ. ಎಸ್. ಎನ್. ಬರ್ಗೋಹೇನರು ಕಲ್ಕತ್ತೆಯ ಆಸ್ಪತ್ರೆಯೊಂದರಲ್ಲಿ ಮೃತ್ಯುವಶರಾದರು. ಡಾ. ಅಲ್ಲಾಡಿಯವರು ತುಂಬ ಯಶಸ್ಸು ಸಂಪಾದಿಸಿದ ಭಾರತಮಾತೆಯ ಪ್ರತಿಭಾಸಂಪನ್ನ ಪುತ್ರರಲ್ಲಿ ಒಬ್ಬರು ಕಾಯಿದೆ ಕಾನೂನುಗಳ ವಿಷಯದಲ್ಲಿ ಅವರಿಗಿದ್ದ ಪಾಂಡಿತ್ಯವನ್ನು ಕೊಂಡಾಡಿಯೂ ಭಾರತದ ಮೇಲ್ಮೆಗಾಗಿ ಅವರು ದುಡಿದ ರೀತಿಯನ್ನು ಪ್ರಶಂಸಿಸಿಯೂ ಅವರ ನಿಧನಕ್ಕಾಗಿ ಸಂತಾಪ ಸೂಚಿಸಿಯೂ ಪ್ರಕಟಣೆಗಳು ಅಸಂಖ್ಯಾತ ಹೊರ ಬಿದ್ದಿವೆ. ವಕೀಲರೂ ನ್ಯಾಯಾಧೀಶರೂ ಸರಕಾರೀ ಧುರೀಣರೂ ಅಲ್ಲಾಡಿಯವರ ಬಗ್ಗೆ ಶ್ರದ್ಧಾಂಜಲಿಯನ್ನು ಅರ್ಪಿಸಿರುವರು. ಕೆಲ ಸಮಯದಿಂದ ಈಚೆಗೆ ಅಲ್ಲಾಡಿಯವರು ಕಾಯಿಲೆಪೀಡಿತರಾಗಿದ್ದರೂ ಮೃತ್ಯು ಆಕಸ್ಮಿಕವಾಗಿಯೇ ಸಂಭವಿಸಿತು. ಉಪಮಂತ್ರಿ ಬರ್ಗೋಹೇನರ ನಿಧನವಂತೂ ಆಕಾಲಿಕವಾದುದು. ಅವರು ಸ್ಕೋರ್ಸ್ ವರ್ಜನೀಜಕ ಮಿಟಿಯ ಅಧ್ಯಕ್ಷರಾಗಿ ಕಲ್ಕತ್ತೆಗೆ ಹೋದಾಗ ಒಮ್ಮೆಲೆ ಕರುಳು ಬೇನೆ ಕಾಣಿಸಿಕೊಂಡುದರಿಂದ ಶಸ್ತ್ರಕ್ರಿಯೆಗೆ ಗುರಿಯಾದರು. ಆದರೆ ಅದು ಮರಣವನ್ನೆ ತಂದಿತು. ಭಾರತ ಸರಕಾರವು ಒಂದ ವಿಶೇಷ ಗಜೆಟನ್ನು ಹೊರಡಿಸಿ ಬರ್ಗೋಹೇನರು ಪ್ರತಿಭಾಶಾಲಿಯಾದ ಸಾರ್ವಜನಿಕ ಕೆಲಸಗಾರರೆಂದೂ ಅವರಲ್ಲಿ ಉತ್ಸಾಹ ಮತ್ತು ಕಾರ್ಯಕ್ಷಮತೆ ತುಂಬಿ ತುಳುಕುತಿತ್ತೆಂದೂ ಗೌರವದಿಂದ ಹೇಳಿದೆ. ನೆಹರೂರವರು ಮಂತ್ರಿ ಮಂಡಳದ ಸದಸ್ಯರೊಬ್ಬರು ನಿಧನ ಹೊಂದಿದ ವಾರ್ತೆ ಕೇಳಿ ತಮಗಾದ ಅಪಾರ ವ್ಯಸನವನ್ನು ಸೂಚಿಸಿರುವರು.

"ಕೊರಿಯಾದಿಂದ ಭಾರತೀಯ ಸೇನೆ ಮರಳಬೇಕು"

ದಕ್ಷಿಣ ಕೊರಿಯದ ಸಿಯೋಲ ನಗರದಲ್ಲಿ ಪ್ರಚಂಡ ಪ್ರದರ್ಶನ

ಕೊರಿಯದಲ್ಲಿ ತಟಸ್ಥ ರಾಷ್ಟ್ರ ಮಂಡಳದ ಕಾರ್ಯಕಲಾಪಗಳು ಸುವ್ಯವಸ್ಥಿತ ರೀತಿಯಲ್ಲಿ ನಡೆಯುತಿದ್ದರೂ ಕೆಲವು ಹಿತ ಸಂಬಂಧವುಳ್ಳ ವರ್ಗಗಳು ಈ ಮಂಡಳದ ಕಾರ್ಯಾಚರಣೆಯ ಮಾರ್ಗದಲ್ಲಿ ವಿಘ್ನಗಳನ್ನು ಒಡ್ಡುತ್ತಿರುವುದು ಕಂಡು ಬಂದಿದೆ. ಕೊರಿಯಾದಲ್ಲಿ ಶಾಶ್ವತವಾಗಿ ಶಾಂತಿ ಪ್ರಸ್ಥಾಪಿಸುವುದಕ್ಕೋಸ್ಕರ ಕದನ ವಿರಾಮ ಒಪ್ಪಂದದಲ್ಲಿ ಸೂಚಿತವಾದ ರಾಜಕೀಯ ಪರಿಷತ್ತು ಸೇರುವುದು ಇನ್ನೂ ಅಸಂದಿಗ್ಧಾವಸ್ಥೆಯಲ್ಲಿರುವುದೂ, ತಟಸ್ಥ ರಾಷ್ಟ್ರಮಂಡಳದ ಕೆಲಸಕ್ಕೆ ಅಡಚಣೆ ಒಂದೊದಗುತ್ತಿರುವುದೂ ಶುಭ ಲಕ್ಷಣವಲ್ಲ. ಹೊಸ ದೆಹಲಿಯಿಂದ ಈಚೆಗೆ ಬಂದ ವಾರ್ತೆಯಂತೆ ಕಳೆದವಾರ ಕೊರಿಯದಲ್ಲಿ ನಡೆದ ವಿಶೇಷ ಘಟನೆಗಳ ಪರಿಣಾಮವೆಂಬಂತೆ, ತಟಸ್ಥ ರಾಷ್ಟ್ರಮಂಡಳಿಯ ಸದಸ್ಯ ರಾಷ್ಟ್ರಗಳು ತಮ್ಮ ಕೆಲಸವನ್ನು ಬಿಟ್ಟುಗೊಟ್ಟು ಹಿಂತಿರುಗುವುದು ಅಸಂಭವವಲ್ಲ.

ಈ ಮಂಡಳಿಯಲ್ಲಿರುವ ಸ್ವೀಡನ್, ಸ್ವಿಜರ್‌ಲೆಂಡ್, ಜೆಕೊಸ್ಲೊವಾಕಿಯಾ, ಪೋಲೆಂಡು ಮತ್ತು ಅಧ್ಯಕ್ಷಸ್ಥಾನದಲ್ಲಿರುವ ಭಾರತಗಳು ಕೊರಿಯಾದ ಘಟನೆಯಿಂದ ತೀವ್ರ ಜುಗುಪ್ಸೆ ಹೊಂದಿ, ಹಿಂದೆ ಹೋಗಲು ತೀರ್ಮಾನಿಸಿದರೆ, ಯುದ್ಧ ವಿರಾಮ ಒಪ್ಪಂದ ವ್ಯರ್ಥವಾಗುತ್ತದೆ.

ನೆಲೆ ಇಲ್ಲದ ಆಕ್ಷೇಪ

ಈ ಗಂಭೀರ ಪರಿಣಾಮವನ್ನು ಮುಂದಾಗಿ ಊಹಿಸಿಕೊಂಡು, ಕೊರಿಯಾದಲ್ಲಿ ಎಲ್ಲವೂ ಚೆನ್ನಾಗಿ ನಡೆಯುವಂತೆ ಪ್ರಯತ್ನಿಸುವುದು ಸಂಬಂಧಿಸಿದ ರಾಷ್ಟ್ರಗಳ ಕರ್ತವ್ಯ. ಕೊರಿಯಾದಲ್ಲಿ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳಿಗೆ ಕೊರಿಯಾ ಸಂಧಾನದ ಶರ್ತಗಳ ಕುರಿತು ತಪ್ಪು ಮಾಹಿತಿಯನ್ನು ಕೊಟ್ಟಿರುವುದು ತಟಸ್ಥ ರಾಷ್ಟ್ರ ಮಂಡಳದ ಗಮನಕ್ಕೆ ಬಂದಿದೆ. ಒಪ್ಪಂದದಂತೆ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಭವಿಷ್ಯ ನಿರ್ಣಯದ ವಿಷಯದಲ್ಲಿ ಅನುಸರಿಸಲಾಗುವ ಕ್ರಮದ ಸ್ಪಷ್ಟ ಕಲ್ಪನೆಯನ್ನು ಈ ಸೈನಿಕರಿಗೆ ಮಾಡಿಕೊಡುವುದು ಆಯಾ ಸೈನ್ಯಾಧಿಪತ್ಯಗಳ ಕರ್ತವ್ಯ. ಇದರಲ್ಲಿ ಸಂಯುಕ್ತ ರಾಷ್ಟ್ರಸಂಘದ ಸೇನಾಧಿಪತ್ಯ ತಪ್ಪಿ ನಡೆದುಕೊಂಡಿರುವುದಾಗಿ ತಿಳಿಯುತ್ತದೆ. ತಟಸ್ಥ ರಾಷ್ಟ್ರ ಮಂಡಳಿಯ ಅಧ್ಯಕ್ಷರಾದ ಭಾರತದ ಮೇಜರ್ ಜನರಲ್ ತಿಮ್ಮಯ್ಯನವರು ಈ ಕುರಿತು ಕೊಟ್ಟ ಹೇಳಿಕೆಯನ್ನು ರಾಷ್ಟ್ರ ಸಂಘದ ಸೇನಾಧಿಪತ್ಯ ಖಂಡಿಸಿದ್ದರೂ, ಅದು ನಿಷ್ಪ್ರಯೋಜಕ. ರಾಷ್ಟ್ರಸಂಘದ ಸೇನಾಧಿಪತ್ಯ ತಟಸ್ಥ ರಾಷ್ಟ್ರ ಮಂಡಳಿಯ ಕೆಲಸ ಕಾರ್ಯಗಳ ಬಗ್ಗೆ ಹಲವಾರು ಆಕ್ಷೇಪಗಳನ್ನು ಎತ್ತಿ ಅಸಮಾಧಾನ ಸೂಚಿಸಿದೆ. ಕಮ್ಯೂನಿಸ್ಟರ ಸಲಹೆ ಸೂಚನೆಗಳನ್ನೆ ಮಾನ್ಯ ಮಾಡುವಷ್ಟು ಪಕ್ಷಪಾತವನ್ನು ತಟಸ್ಥ ರಾಷ್ಟ್ರ ಮಂಡಳಿ ತೋರಿಸುತ್ತದೆ ಎನ್ನುವ ವರೆಗೂ ಈ ಆಕ್ಷೇಪ ಮುಟ್ಟಿದೆ.

ದಕ್ಷಿಣ ಕೊರಿಯನ್ನರ ಜಬಾಬ್ದಾರಿ

ವಿಶ್ವಶಾಂತಿಯು ಉದ್ದೇಶವಿಟ್ಟುಕೊಂಡು ಸ್ವೇಚ್ಛೆಯಿಂದಲೇ ಮಹತ್ವದ ಜವಾಬ್ದಾರಿ ಹೊರಲು ಮುಂಬಂದ ತಟಸ್ಥ ರಾಷ್ಟ್ರಗಳು ಇಂಥ ಕುತ್ಸಿತ ಟೀಕೆಗಳಿಂದ ನೊಂದುಕೊಳ್ಳುವುದು ಸ್ವಾಭಾವಿಕ. ಆದರೂ ಆಕ್ಷೇಪಗಳಿಗೆ ತಕ್ಕ ಸಮಾಧಾನ ಕೊಡುವುದು ತನ್ನ ಕರ್ತವ್ಯವೆಂಬುದನ್ನು ಮಂಡಳ ಮರೆತಿಲ್ಲ. ಮಂಡಳದಲ್ಲಿರುವ ಕಮ್ಯೂನಿಸ್ಟ ಪ್ರತಿನಿಧಿಗಳು ಹಾಗೂ ಭಾರತದ ಸೇನೆಯ ಕುರಿತು ಕೊರಿಯಾದಲ್ಲಿ ವಿಶೇಷ ಅಪಪ್ರಚಾರ ನಡೆಯುತ್ತಿದೆ. ಸಂರಕ್ಷಕ ಸೈನ್ಯವನ್ನು ಕಳುಹಿಸಿದ ಭಾರತ ಕೊರಿಯಾದಲ್ಲಿ ತನ್ನ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸುತಿದ್ದರೂ—ದಕ್ಷಿಣ ಕೊರಿಯನ್ನರು ಭಾರತದ ಸೇನೆ ಹಿಂತಿರುಗಬೇಕೆಂದೂ ಇಲ್ಲವಾದರೆ ತಟಸ್ಥ ಪ್ರದೇಶಕ್ಕೆ ದಕ್ಷಿಣ ಕೊರಿಯಾದ ಸೈನ್ಯಗಳನ್ನು ದೌಡಾಯಿಸಿ ಭಾರತೀಯ ಸೈನಿಕರನ್ನು ಓಡಿಸುವುದು ಅನಿವಾರ್ಯವಾದೀತೆಂದೂ ಹೇಳುತಿದ್ದಾರೆ. ಯುದ್ಧ ಕೈದಿಗಳ ಶಿಬಿರದಲ್ಲಿ ಸಾಮೂಹಿಕವಾಗಿ ದಂಗೆಎದ್ದ ಸಂದರ್ಭದಲ್ಲಿ ಭಾರತೀಯ ಸೈನಿಕರು ಕೆಲವು ಗುಂಡುಗಳನ್ನು ಹಾರಿಸಿದ ನೆವ ಮುಂದೆ ಮಾಡಿಕೊಂಡು ಸಿಂಗ್ಮನ್ ರ್ಹೀ ಹಿಂದೊಮ್ಮೆ ಹಾಕಿದ ಬೊಬ್ಬೆಗೆ ದಕ್ಷಿಣ ಕೊರಿಯನ್ನರು ತಮ್ಮ ಧ್ವನಿಯನ್ನು ಈಗ ಮರಳಿ ಕೂಡಿಸುತ್ತಾರೆ. ಸಿಯೋಲದಲ್ಲಿ ಈಚೆಗೆ ಪ್ರಚಂಡ ಪ್ರದರ್ಶನವೊಂದು ಏರ್ಪಟ್ಟು ಭಾರತವನ್ನು ಹೊರಗಟ್ಟುವ ಗೊತ್ತುವಳಿಯನ್ನು ಅಲ್ಲಿ ಸ್ವೀಕರಿಸಲಾಗಿದೆ. ಆದರೆ ಇದರಿಂದ ತಟಸ್ಥ ರಾಷ್ಟ್ರಗಳು ಭಯಪಟ್ಟಿವೆ ಎನ್ನುವುದು ಸರಿಯಲ್ಲ. ಈ ಆತಂಕಗಳಿಗೆ ಭಾರತವಾಗಲೀ ತಟಸ್ಥ ರಾಷ್ಟ್ರ ಮಂಡಳದ ಇತರ ಸದಸ್ಯರಾಗಲೀ ಹೆದರುವುದಿಲ್ಲ. ಆದರೆ ಸಾಮೂಹಿಕ ಗಲಬಲಿ ಹಾಗೂ ವ್ಯಾಪಕ ಅಸಂತುಷ್ಟಿಯ ನಡುವೆ ತಟಸ್ಥ ರಾಷ್ಟ್ರ ಮಂಡಳವು ತನ್ನ ಮುಂದಿನ ಕರ್ತವ್ಯಗಳನ್ನು ಚ್ಯುತಿ ಇಲ್ಲದಂತೆ ನೆರವೇರಿಸುವುದು ಕಷ್ಟಸಾಧ್ಯ—ಈ ವಿಷಯವೇ ಚಿಂತೆಗೆ ಕಾರಣವೆನಿಸಿದೆ.

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

S. C ನಂಬ್ರ 619/1953

K. ಉಗ್ಗಪ್ಪ ಶೆಟ್ಟಿ (ರಿಸೀವರ) ವಾದಿ.

ಮತ್ತು

ಬಾಲಪ್ಪ ಪೂಜಾರಿ—ಗರಡಿ ಕೃಷ್ಣ ಪೂಜಾರಿ ಅಳಿಯ ಮಂಗ್ಳೂರು ತಾಲ್ಲೂಕು. ಕೋಟೆಕಾರು ಗ್ರಾಮಸ್ತ. ಪ್ರತಿವಾದಿ.

ಈ ಮೂಲಕ ಬಹಿರಂಗವಾಗಿ ತಿಳಿಯಪಡಿಸುವುದೇನಂದ್ರೆ.

ಮೇಲ್ಕಂಡ ವಾದಿಯು. ರಿಸೀವರ ನೆಲೆಯಲ್ಲಿ, ಪ್ರತಿವಾದಿಯಿಂದ ಬರತಕ್ಕ ಸದ್ರಿ ದಾವೆಯಲ್ಲಿ ಕಾಣಿಸುವ ಗೇಣಿ ಪ ಬಡ್ಡಿ ಕೂಡಾ ರೂಪಾಯಿ. 80-10-0ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾಖ್ಲು ಮಾಡಿದ ಸದ್ರಿ ದಾವೆಯನ್ನು ಇದೇ ತಿಂಗಳ ತಾರೀಕು 27—10—53ಕ್ಕೆ ತನಿಕೆಗೆ ಇಟ್ಟಿರುವದರಿಂದ ಅದರಲ್ಲಿ ಆಕ್ಷೇಪಣೆ ಉಳ್ಳವರು ಅವರ ಉಪಾದರ್ಣೆಯನ್ನು ಸದ್ರಿ ತಾರೀಕಿಗೆ ಈ ಕೋರ್ಟಿನಲ್ಲಿ ಹಗಲು ಗಂಟೆ 11ಕ್ಕೆ ಹಾಜರು ಪಡಿಸಲಿಕ್ಕೆ ತಪ್ಪಿದ್ದಾದರೆ ಅವರನ್ನು ಗೈರ್ ಹಾಜರು ಸಂಬ್ರವನ್ನು ವಾದಿಗುಣಕ್ಕೆ ತೀರ್ಮಾನಿಸಲಾದೀತು. ತಿಳಿದಿರಲಿ.

Ananda Shetty Irmady
Advocate for Pltf.
Mangalore. 2-10-1953

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 122/1950 R E P 106/1953

ವಾದಿ ದಿ ವಿಜಯ ಬೇಂಕ್ ಲಿಮಿಟೆಡ್, ಪುತ್ತೂರು ಯಿದ್ರ ಏಜಂಟ್ ಕೆ. ಕೋಚಣ್ಣರೈ ಅರ್ಜಿದಾರ

ಪ್ರತಿವಾದಿ 1 ಉಜಿರಾಡಿ ರಾಮಣ್ಣ ರೈ 2 ಬನ್ನೂರು ಮುಂಡಪ್ಪಾಳ್ವ 3 ಪೆರಂಬಾರ ದಿ ಕೃಷ್ಣ ಭಟ್ಟ. —ಎದ್ರಿರು

ಸದ್ರಿ ಒಂದನೇ ಪ್ರತಿವಾದಿ ಉಜಿರಾಡಿ ರಾಮಣ ರೈಗೆ—

ಮೇಲಿನ ವ್ಯಾಜ್ಯದಲ್ಲಿ ಸದ್ರಿ ಒಂದನೇ ಪ್ರತಿವಾದಿಯು ಮೇಲೆ ಕೂಡಾ ತಾ. 27-1-50ರಲ್ಲು ಕೊಡೋಣಾದ ಡಿಕ್ರಿಯ ಐವಜು ಸಂದಾಯ ಮಾಡಲಿಕ್ಕೆ ಪ್ರತಿವಾದಿರು ತಪ್ಪಿರುವದ್ರಿಂದ ಒಂದನೇ ಪ್ರತಿವಾದಿಯ ಹಕ್ಕಿಗೆ ಒಳಪಟ್ಟ ಕುಮ್ಟಾರು ಗ್ರಾಮದ ಸರ್ವೆ ನಂ.

23 / 2-3-1-5, 22 / 2, 17 / 1-2-3-5 ನೇ

ಆಸ್ತಿಗಳನ್ನು ಒಂದನೇ ಪ್ರತಿವಾದಿಯು ಅಡವು ಆದುವಾದಕ್ರಯ ದಾನ ಮುಂತಾದ ಯಾವ ತರದ ಪರಾಧೀನಗಳು ಯಾ ಬವಾಬ್ದಾರಿಗಳು ಮಾಡದಂತೆ ಕೋರ್ಟು ಸ್ಕೀಂ ಪ್ರಕಾರ ಆರ್ ಆತಂಕಿಸಲ್ಪಟ್ಟಿರುತ್ತಾನೆಂತ ಈ ಮೂಲಕ ಸರ್ವಜನರ ತಿಳುವಳಿಕೆ ಬಗ್ಗೆ ನೋಟಿಸು ಕೊಡೋಣಾಗಿದೆ. ಕೋರ್ಟು ಸ್ಕೀಂ ಪ್ರಕಾರ ನೋಟೀಸು ಪ್ರಕಟಣೆಗೆ ರವಾನಿಸಿದ ತಾರೀಕು.

6-10-1953.

H. Sanjiva Shetty.
Advocate for Petitioner.

ತಾರೀಕು 7—10—1953 ರಿಂದ

ಢೋಲಕ್

ವಿೂನಾಕುಮಾರಿ ಮುಖ್ಯ ಭೂಮಿಕೆಯಲ್ಲಿ.

ಅನಂತರ. ಭಕ್ತಿಪರ ಸಂಗೀತ ಸುಧಾ—

ಬ್ಯಾಜು ಬಾವರಾ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಉಡುಪಿ

ಶಿಕ್ಷೆ ಮತ್ತು ದಂಡನೆ— ದ. ಕ. ಜಿಲ್ಲಾ ಹೋಲ್‌ಸೇಲ್ ಸ್ಟೋರ್ಸಿನ ಉಡುಪಿ ಡಿಪೋವಿನ ಮಾಜಿ ಮೆನೇಜರ್ ಟಿ. ಪದ್ಮನಾಭಯ್ಯನವರು ಡಿಪ್ರೋವಿನ ರೂ 3395-10-4 ದುರುಪಯೋಗ ಹಾಗೂ ವಂಚನೆ ಮಾಡಿದುದಕ್ಕಾಗಿ ಕಳೆದ ತಾ 29ರಲ್ಲು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಕೃಷ್ಣನವರು ಅವರಿಗೆ ಒಂದು ವರ್ಷ ಸಾದಾ ಶಿಕ್ಷೆ ಮತ್ತು ರೂ 500/- ದಂಡನೆ ವಿಧಿಸಿದರು. ದಂಡ ತೆರಲು ತಪ್ಪಿದ್ದಲ್ಲಿ ಮೂರು ತಿಂಗಳ ಹೆಚ್ಚಿನ ಶಿಕ್ಷೆ ಕೊಡಾ ವಿಧಿಸಿದರು.

ಗಾಂಧಿ ಜಯಂತಿ— ಉಡುಪಿಯಲ್ಲಿ ತಾ 2ರಲ್ಲು ಆಚರಿಸಲ್ಪಟ್ಟಿತು. ಅಂದು ಬೆಳಿಗ್ಗೆ ಗಾಂಧಿ ಮೈದಾನದಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಕೆಪ್ಟನ್ ಎನ್. ಮಂಗೇಶ ರಾಯರು ಧ್ವಜಾರೋಹಣ ಮಾಡಿದರು. ಬಳಿಕ ಗೀತೆ, ಖುರಾನ್, ಬೈಬ್ಲ್‌ಗಳ ಪ್ರವಚನ ನಡೆಯಿತು. ಅನಂತರ ಬೋರ್ಡು ಹೈಸ್ಕೂಲು ವಠಾರದಲ್ಲಿ ನೂಲುವ ಸ್ಪರ್ಧೆ ನಡೆಯಿತು. ಸಂಜೆ ರಥಬೀದಿಯಲ್ಲಿ ಸಾರ್ವಜನಿಕ ಸಭೆಯು ಪರ್ಯಾಯ ಶ್ರೀ ಪೇಜಾವರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿ, ನೂಲುವ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ಕೊಡಲಾಯಿತು. ಶ್ರೀ ಟಿ. ಎ. ಪೈ, ಎಮ್. ಎಲ್ ಎ. ಯವರೂ ಅಧ್ಯಕ್ಷರೂ ಸಂದರ್ಭೋಚಿತವಾಗಿ ಸ್ಫೂರ್ತಿಪರ ಭಾಷಣವನ್ನಿತ್ತರು. ಮುನ್ಸಿಪಲ್ ಬಡಗು ಶಾಲೆಯಲ್ಲಿ ಮುನಿಸಿಪಲ್ ಕೌನ್ಸಿಲರ್ ಶ್ರೀ ಕೆ. ದೇವೇಂದ್ರ ಶೆಣೈಯವರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿ ಜರಗಿ ಶ್ರೀ ಭವಾನಿ ಶಂಕರ ಶೆಣೈಯವರು ಕೊಟ್ಟ ತಿಂಡಿಯನ್ನು ಮಕ್ಕಳಿಗೆ ಹಂಚಲಾಯಿತು. ರಾತ್ರಿ ಯುವಕ ಕಾಂಗ್ರೆಸ್‌ನಲ್ಲಿಯೂ ಯುನಿಯನ್ ರಾತ್ರಿ ಶಾಲೆಯಲ್ಲಿಯೂ ಶ್ರೀ ಟಿ. ಎ. ಪೈಗಳು ಮ. ಗಾಂಧಿಯವರ ಭಾವಚಿತ್ರ ಅನಾವರಣ ಮಾಡಿದರು.

ಕಮರ್ಶಿಯಲ್ ಟೇಕ್ಸ್ ಆಫೀಸು ಬದಲಾವಣೆ—ಉಡುಪಿಯ ಕಮರ್ಶಿಯಲ್ ಟೇಕ್ಸಸ್ ಆಫೀಸು ಇದೇ ತಾ. 10ರ ಕೋರ್ಟು ರಸ್ತೆಯ "ಅನಿರಾನ್ ಮೇನ್ಶನ್" ಕಟ್ಟಡಕ್ಕೆ ಒಯ್ಯಲ್ಪಟ್ಟಿದೆ.

ಉಪಹಾರ ಸತ್ಕಾರ— ಕಾರವಾರದ ಶ್ರೀ ವಿ. ಆರ್. ಹಳದಿಪುರ, ಬಿ. ಎ. ಅವರಿಗೆ ತಾ. 5ರಲ್ಲಿ ಡಾ। ಟಿ. ಎಂ. ಎ. ಪೈಗಳು ಸಿಂಡಿಕೇಟಿನ ಸಭಾ ಸದನದಲ್ಲಿ ಉಪಾಹಾರ ಕೂಟವೊಂದನ್ನೇರ್ಪಡಿಸಿದ್ದರು. ಉಪಾಹಾರವಾದ ಮೇಲೆ ಡಾ। ಪೈಗಳು ಅತಿಥಿಗಳ ಕುಟುಂಬದವರ ಗುಣಕಥನಮಾಡಿ ಅವರು ಸಿಂಡಿಕೇಟಿಗಿತ್ತ ಸಹಕಾರವನ್ನು ಎತ್ತಿ ಹೇಳಿದರು. ಅತಿಥಿಗಳು ಡಾ। ಪೈಗಳ ಸಂಪರ್ಕದಿಂದ ತಮ್ಮ ಕುಟುಂಬದವರಿಗಾದ ಪ್ರಯೋಜನವನ್ನು ಹೇಳಿ ಸತ್ಕಾರಕ್ಕಾಗಿ ಆಭಾರ ಸೂಚಿಸಿದರು.

ಕಾಸರಗೋಡು ಈ ತಾಲೂಕಿನ ಪಂಚಾಯತ ಬೋರ್ಡು ಪ್ರೆಸಿಡೆಂಟರುಗಳ ಪ್ರತಿನಿಧಿಯಾಗಿ ಶ್ರೀ ಬಿ. ಶಾಂತಪ್ಪ ರೈಗಳು ಜಿಲ್ಲಾ ಲೈಬ್ರರಿ ಕಮಿಟಿಗೆ ಬಹುಮತದಿಂದ ಆರಿಸಲ್ಪಟ್ಟಿರುವರು.

ಗುಂಡುಮಿ— ಸಾಲಿಗ್ರಾಮದ ನೆರೆಯೂರಾದ ಗುಂಡುಮಿಯಲ್ಲಿ ಶ್ರೀ ನರಸಿಂಹ ಶಾಸ್ತ್ರಿಗಳು ಕಳೆದ ವರ್ಷ ಮತ್ತು ಈ ವರ್ಷ ನಡೆಸಿದ ಶ್ರೀ ಮದ್ವಾಲ್ಮೀಕಿ ರಾಮಾಯಣ ಕಾಲಕ್ಷೇಪದ ಮಂಗಲೋತ್ಸವವು ಕಳೆದ ತಾ 28ರಲ್ಲಿ ಯಶಸ್ವಿಯಾಗಿ ಜರಗಿತು.

ಮೂಲ್ಕಿ— ಕೃಷಿಕ ಸಂಘದ ಮಹಾ ಸಭೆಯು ಮೂಲ್ಕಿಯಲ್ಲಿ ಕುಂದಾಪುರದ ವಕೀಲ್ ಶ್ರೀ ವಿ. ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಕಳೆದ ತಾ 25ರಲ್ಲು ಜರಗಿತು. ಒಕ್ಕಲು ಹಿತ ಮಸೂದೆ ಜಾರಿಗೆ ತರಲು ಓಂದ್ ಕಿಸಾನ್ ಪಂಚಾಯತದವರು ನಡೆಸಿದ ಕಾರ್ಯ ಕ್ರಮಗಳನ್ನು ವಿವರಿಸಿ, ಜಿಲ್ಲೆಯಲ್ಲಿ ರೈತರ ಒಂದೇ ಸಂಘಟನೆಯನ್ನು ಮಾಡಬೇಕೆಂದು ಅಧ್ಯಕ್ಷರು ಕೇಳಿಕೊಂಡರು.

ಪಣಂಬೂರು— ಪ್ರಜಾ ಸೋಶಲಿಸ್ಟ್ ಪಕ್ಷದ ಸಾರ್ವಜನಿಕ ಸಭೆಯು ತಾ 26ರಲ್ಲು ಶ್ರೀ ಕೇಳಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಶೀನ ಸೆಟ್ಟಿ, ಡಾ। ಸಂಜೀವನಾಥ, ಪಿ. ಶ್ರೀನಿವಾಸ ರಾವ್ ಇವರು ಒಕ್ಕಲು ಹಿತ ಮಸೂದೆಯನ್ನು ಕೂಡಲೇ ಜ್ಯಾರಿಗೆ ತರಿಸಲು ಕೈಕೊಳ್ಳಬೇಕಾದ ಪ್ರಯತ್ನದ ಕುರಿತು ಮಾತನಾಡಿದರು.

ಕುಂದಾಪುರ— ಈ ತಾಲೂಕಿನ ಪಂಚಾಯತ ಬೋರ್ಡು ಪ್ರೆಸಿಡೆಂಟರುಗಳ ಸಭೆಯು ಕಳೆದ ತಾ 25ರಲ್ಲು ಜರಗಿ ಜಿಲ್ಲಾ ಲೋಕಲ್ ಲೈಬ್ರರಿ ಕಮಿಟಿಗೆ ಖಂಬದ ಕೋಣೆ ಪಂ। ಪ್ರೆಸಿಡೆಂಟ್ ಶ್ರೀ ಆರ್. ಕೆ. ಸಂಜೀವ ರಾಯರು ಅವಿರೋಧವಾಗಿ ಆರಿಸಲ್ಪಟ್ಟರು.

ಕಾಳಾವರ— ಕಳೆದ ತಾ 26ರಲ್ಲು ಸ್ಥಳೀಯ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಸನ್ನಿಧಿಯಲ್ಲಿ ಶ್ರೀ ಆರ್. ಕೆ. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ, ಶ್ರೀಗಳಾದ ಎಮ್. ವಿಶ್ವೇಶ್ವರಯ್ಯ, ಅಣ್ಣಪ್ಪ ಕಾರಂತ, ಪ್ಯಾನುಭಾಗ ವಿನಾಯಕ ರಾವ್ ಮೊದಲಾದವರ ಕೊಡುವಿಕೆಯಿಂದ ಯಕ್ಷಗಾನ ಕಾಲಕ್ಷೇಪ ಕೂಟವು ಯಶಸ್ವಿಯಾಗಿ ಜರಗಿತು.

ಕಟಿಪಾಡಿ— ಈ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕ ವೃಂದದ ಸಭೆಯು ಇದೇ ದಿನಾಂಕ 2ರಂದು ಜರಗಿತು. ಜಿಲ್ಲಾ ವಿದ್ಯಾಧಿಕಾರಿಗಳು ಉಡುಪಿ ದಕ್ಷಿಣ ಶ್ರೇಣಿ ಶಾಲೆಗಳ ಪರೀಕ್ಷಾಧಿಕಾರಿಗಳೊಡನೆ ಈ ಸಭೆಗೆ ಆಗಮಿಸಿ, "ಮಾರ್ಪಟ್ಟ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮ"ದ ಅವಶ್ಯಕತೆ, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಬರಬಹುದಾದ ತೊಡಕುಗಳ ನಿವಾರಣೆ-ಇತ್ಯಾದಿಗಳ ಕುರಿತು ವಿವರಿಸುತ್ತ ಸುರಸ ಭಾಷಣವಿತ್ತರಲ್ಲದೆ ನೆರೆದ ಅಧ್ಯಾಪಕರು ಮತ್ತು ಆಮಂತ್ರಣ ಮೇರೆಗೆ ಸಭೆಗೆ ಬಿಜಯಿಸಿದ್ದ ಮಕ್ಕಳ ಹೆತ್ತವರಿಂದ ಈ ಕುರಿತು ಕೇಳಲಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವಿತ್ತರು. ಲಘು ಉಪಹಾರವಾದ ಬಳಿಕ ಸಂಘದ ಕಾರ್ಯದರ್ಶಿ ಶ್ರೀ ಯು. ಆರ್. ಮಯ್ಯರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕಾರ್ಕಳ— ಸ್ಥಳೀಯ ಶ್ರೀ ವೆಂಕಟ್ರಮಣ ಗರ್ಲ್ಸ್ ಹೈಸ್ಕೂಲಿನಲ್ಲಿ ಇದೇ ತಾ. 2 ರಲ್ಲು ಗಾಂಧೀಜಿ ಮತ್ತು ಕಸ್ತೂರ್ಬಾರವರ ಭಾವಚಿತ್ರ ಅನಾವರಣ ಸಮಾರಂಭಗಳು ಶ್ರೀ ಕೆ. ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಶ್ರೀಗಳಾದ ಕೆ. ವೆಂಕಟೇಶ ಪ್ರಭು, ಕೇಶವ ರಾಮಚಂದ್ರ ಶೆಣೈ, ಬಿ. ಶ್ಯಾಮರಾಯ ಸೆಟ್ಟಿ ಮೊದಲಾದವರು ಮಹಾತ್ಮರ ಮತ್ತು ಕಸ್ತೂರ್ಬಾರವರ ಆದರ್ಶ ಜೀವನದ ಕುರಿತು ಮಾತನಾಡಿದರು. ಶ್ರೀಗಳಾದ ಕೇಶವ ರಾಮಚಂದ್ರ ಶೆಣೈ ಮತ್ತು ವಿ. ಪಿ. ಶೆಣೈಯವರು ಶಾಲಾ ಪ್ರಾರ್ಥನ ಮಂದಿರಕ್ಕೆ ಅನುಕ್ರಮವಾಗಿ ರೂ. 250 ಮತ್ತು ರೂ. 100 ದಾನವಾಗಿ ಕೊಟ್ಟರು. ಶಾಲಾ ಆಡಳಿತೆಯವರ ಪರವಾಗಿ ಶ್ರೀ ಕೆ. ವಾಸುದೇವ ಕಾಮತರು ಶಾಲೆಗೆ ಮಹಾಜನರ ಸಹಾಯ ಸಹಕಾರಗಳನ್ನು ಕೋರಿದರು. ವಂದನಾರ್ಪಣೆ, ರಾಷ್ಟ್ರಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ಕುಂದಾಪುರ ಗಾಂಧಿಜಯಂತಿ ಜನ್ಮದಿನವಾದ ತಾ. 2ರಲ್ಲು ಕುಂದಾಪುರ ತಾಲೂಕಿನ ತೆಕ್ಕಟ್ಟೆಯಲ್ಲಿ ಭೂದಾನ ಯಜ್ಞದ ಆರಂಭೋತ್ಸವವು ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಾರಂಭದಲ್ಲಿ ಸರ್ವ ಪಕ್ಷಗಳವರೂ ಭಾಗವಹಿಸಿದ್ದರು. ಶ್ರೀಗಳಾದ ಕೆ. ಎಸ್. ಉರಾಳ್, ಕೆ. ಸಂಜೀವ ಪ್ರಭು, ಡಿಪ್ಯುಟಿ ತಹಶಿಲ್ದಾರ್, ಎನ್. ಎಸ್. ಪರಮೇಶ್ವರಯ್ಯ, ಎಮ್. ಎಮ್. ಹೆಗ್ಡೆ, ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ. ಜಿ. ಗೋವಿಂದ ಸೆಟ್ಟಿ, ಬಿ. ನರಸಿಂಹ ಸೆಟ್ಟಿ ಮೊದಲಾದವರು ಭೂದಾನ ಯಜ್ಞದ ಮಹತ್ವ, ವಿನೋಬಾರವರ ವೈಶಿಷ್ಟ್ಯ ಮೊದಲಾದ ವಿಷಯಗಳನ್ನೆತ್ತಿ ಭಾಷಣವಿತ್ತರು. ಶ್ರೀಗಳಾದ ಪಿ. ವಿಠಲ ಸೆಟ್ಟರು 10 ಎಕ್ರೆ ಭೂಮಿಯನ್ನು, ವಿ. ಶಿವರಾಮ ಸೆಟ್ಟರು 5 ಎಕ್ರೆ ಭೂಮಿಯನ್ನು, ಎಮ್. ಎಸ್. ವೆಂಕಟ್ರಮಣಯ್ಯನವರು 1 ಎಕ್ರೆ ಭೂಮಿಯನ್ನೂ ಕೊಟ್ಟಿರುತ್ತಾರೆ. ಸಭಾಧ್ಯಕ್ಷ ಶ್ರೀ ವೈ. ಮಂಜಯ್ಯ ಸೆಟ್ಟರು ತಮ್ಮ ಇಂದಿನ ಪ್ರಥಮ ಅಂಶವಾಗಿ 2 ಎಕ್ರೆ ಭೂಮಿ ಕೊಡುತ್ತೇನೆಂದು ಜಾಹೀರು ಮಾಡಿರುತ್ತಾರೆ. ಶ್ರೀ ವಿ. ನಾಗಯ್ಯ ಸೆಟ್ಟರು ತಮ್ಮ ಮನೆತನದ ಭೂಮಿಯ ಅಂಶದ ಉತ್ಪತ್ತಿಯ ಆರನೇ ಒಂದಂಶ ಉತ್ಪತ್ತಿಯಾದ ಸಾಮಾನ್ಯ ರೂಪಾಯಿ 40-0-0ನ್ನು ಸಂಪತ್ತಿ ದಾನ ಯಜ್ಞಕ್ಕಾಗಿ ಕೊಡುವೆನೆಂದು ಜಾಹೀರು ಮಾಡಿದರು. ಕುಂದಾಪುರ ಭೂದಾನ ಯಜ್ಞ ಸಮಿತಿ ಸಂಚಾಲಕ ಶ್ರೀ ವಿ. ನಾಗಯ್ಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಅಲೆವೂರು ಸೇತುವೆ ಸಮಿತಿ ಸಭೆಯು— ಕಳೆದ ತಾ 30ರಲ್ಲು ಉಡುಪಿಯ ಪ್ರೊವ್ಹಿಡೆಂಟ್ ಇನ್ಸೂರೆನ್ಸ್ ಕಂಪೆನಿ ಇನ್ಸ್‌ಪೆಕ್ಟರರ ಕಚೇರಿಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಬಿ. ಕೃಷ್ಣರಾಜರು ಈ ತನಕ ಆದ ಕಾರ್ಯಗಳ ವರದಿಯನ್ನು ಸಭೆಯ ಮುಂದಿರಿಸಿ ಅಲೆವೂರು ಸೇತುವೆ ಪೂರ್ವ ಕಲ್ಮಂಜೆ ವಠಾರದಲ್ಲಿಯೇ ನಿರ್ಮಾಣವಾಗಬೇಕೆಂದು ಜಿಲ್ಲಾ ಬೋರ್ಡಿನವರು, ಸರಕಾರದವರು ಮಂಜೂರು ಮಾಡಿರುವುದಾಗಿಯೂ ಆದುದರಿಂದ ಜಿಲ್ಲಾ ಬೋರ್ಡಿಗೆ ವಾಗ್ದಾನಿಸಿತ್ತಂತೆ ಹತ್ತು ಸಾವಿರ ರೂಪಾಯಿಗಳ ಪೈಕಿ ಈಗಾಗಲೇ ಜಮೆಯಾಗಿರುವ ಐದು ಸಾವಿರ ಕಳೆದು ಮಿಕ್ಕುಳಿದ ಐದು ಸಾವಿರವನ್ನು ಸಂಗ್ರಹಿಸಲು ಮುಂದಿನ ಸಪ್ಟಂಬರ ತಿಂಗಳ ತನಕವ್ಯಾದೆ ಮುಂದರಿಸಬೇಕಾಗಿ ಸೂಚಿಸಿದರು. ಅಂತೆಯೇ ವ್ಯಾದೆ ಮುಂದರಿಸುವ ನಿರ್ಣಯವಾಯಿತು. ಶ್ರೀ ಕಲ್ಮಂಜೆ ಶ್ರೀನಿವಾಸಾಚಾರ್ಯರು ಸ್ವಂತ ಖರ್ಚಿನಿಂದ ಸಂಕದ ಬುಡ ತನಕ ನಿರ್ಮಿಸಿದ ರಸ್ತೆಯ ದುರುಸ್ತಿಗಾಗಿ ಸಂಕೇತ ಸಹಾಯವೆಂದು ರೂ 250 - ಕೊಡುವ ನಿರ್ಣಯವಾಯಿತು.

ಬ್ರಹ್ಮಾವರ— ಡಾ. ಮಾಧವ ಪೈಗಳಿಗೆ ಸತ್ಕಾರ ಕೂಟವೊಂದು ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. 27ರಲ್ಲಿ ಜರಗಿತು. ಶ್ರೀ ಬಿ. ಪದ್ಮನಾಭ ಪೈಗಳು ಮಾನಪತ್ರವನ್ನೋದಿದರು. ಶ್ರೀಗಳಾದ ಅಪ್ಪಾಭಟ್, ವಿಟ್ಠಲ ಶೆಟ್ಟಿ, ಟಿ. ಎ. ಪೈ, ಬಿ. ಎನ್. ಆಚಾರ್, ಸುರೇಂದ್ರ ಕಾಮತರೇ ಮೊದಲಾದವರು ಮಾತನಾಡಿದ ಮೇಲೆ ಅತಿಥಿಗಳು ಉತ್ತರವಿತ್ತರು. ಶ್ರೀ ಬಿ. ಜಗಜ್ಜೀವನದಾಸ ಶೆಟ್ಟಿ ವಂದನೆಗಳನ್ನರ್ಪಿಸಿದರು.

ಮಣಿಪಾಲ— ಕಸ್ತೂರಿಬಾ ಮೆಡಿಕಲ್ ಕಾಲೇಜ್ ಮತ್ತು ಹೈಸ್ಕೂಲಿನವರು ಒಟ್ಟಾಗಿ ಜರಗಿಸಿದ ಗಾಂಧೀಜಯಂತಿ ಸಮಾರಂಭದಲ್ಲಿ ಡಾ। ಟಿ. ಮಾಧವ ಪೈಗಳು ಧ್ವಜಾರೋಹಣ ಮಾಡಿದರು. ಶ್ರೀಗಳಾದ ಪುಂಡಲೀಕ ಶೆಣೈ ಮತ್ತು ಲಕ್ಷ್ಮೀನಾರಾಯಣ ನೆಲ್ಲಿಯವರು ಭಾಷಣ ಮಾಡಿದರು.

ಕುಂಬಳೆ— ಶ್ರೀ ಪಿ. ತಿಮ್ಮಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಪುತ್ತಿಗೆ ಶಾಲೆಯಲ್ಲಿ ಗಾಂಧೀ ಜಯಂತಿ ಸಂಬಂಧ ಸಭೆ, ಯಕ್ಷಗಾನ ನಾಟಕಗಳು ಜರಗಿದವು.

ಕುರುಕಾಲು— ಗಾಂಧಿಜಯಂತಿಯು ಗಿರಿಜಾ ಹಾ। ಎ। ಶಾಲೆಯಲ್ಲಿ ಶ್ರೀ ಕೆ. ಗಣಪಯ್ಯ ಶೆಟ್ಟರಿಂದ ಧ್ವಜಾರೋಹಣ ಮಹಾತ್ಮಾಗಾಂಧಿಯವರ ಜೀವನ ಚರಿತ್ರೆ, ಆದರ್ಶ, ತತ್ವ, ನಿಧಾಯಕ ಕಾರ್ಯಕ್ರಮ ಮೊದಲಾದ ವಿಷಯಗಳ ಕುರಿತು ಶ್ರೀಗಳಾದ ಕೆ. ವಾಸು ಶೆಟ್ಟಿ, ಬಿ. ಅನಂತರಾಮ ಸಾಮಗ, ಹಿ. ಸದಾನಂದ ಸೆಟ್ಟರು ಮೊದಲಾದವರ ಭಾಷಣಗಳಿಂದ ಆಚರಿಸಲ್ಪಟ್ಟಿತು; ಹಾಗೆಯೇ ಕುರುಕಾಲು ಶಾಲೆಯಲ್ಲಿಯೂ ಕಾರ್ಯಕ್ರಮಗಳಿದ್ದವು.

ಮುದರಂಗಡಿ- ಮೆರವಣಿಗೆ, ಶ್ರೀ ಎಮ್. ಎಸ್. ಗೋವಿಂದಾಚಾರ್ಯರಿಂದ ಧ್ವಜಾರೋಹಣ, ಡಾ। ಆನಂದರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ರಾಮರಾಯ ಪ್ರಭು, ಬಿ. ಜಿ. ಸೆಟ್ಟರ ಭಾಷಣಾದಿಕಾರ್ಯ ಕ್ರಮಗಳಿಂದ ಗಾಂಧಿಜಯಂತಿ ಜರಗಿತು.

ಕಿದಿಯೂರು— ಇಲ್ಲಿಯ ಹಾ। ಎ। ಶಾಲೆಯಲ್ಲಿ ಗಾಂಧಿಜಯಂತಿ ಸಂಬಂಧ ನೂಲುವ ಸ್ಪರ್ಧೆ ನಡೆದು ಗೆದ್ದವರಿಗೆ ಬಹುಮಾನ ಹಂಚಲಾಯಿತು. ಶ್ರೀ ಕೆ. ಹರಿದಾಸಾಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದು ಶ್ರೀಗಳಾದ ಎನ್. ವೆಂಕಟ್ರಮಣ ತಂತ್ರಿ, ಕೆ. ರಘುನಾಥ ಸೆಟ್ಟಿ, ಕೆ. ರಾಧಾಕೃಷ್ಣರಾವ್, ಎಚ್. ವೆಂಕಟಗಿರಿ, ಜಿ. ಕೆ. ಪದ್ಮನಾಭ ಭಟ್ ಮೊದಲಾದವರು ಮಾತನಾಡಿದರು. ಶಾಲಾ ಮೆನೇಜರ್ ಶ್ರೀ ಎ. ನಾರಾಯಣ ತಂತ್ರಿಗಳು ಉಪಹಾರವಿತ್ತರು.

ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿ ಸಭೆಯು ಕಳೆದ ತಾ 26ರಲ್ಲು ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಸೇರಿ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಆರಿಸಿತು. ಶ್ರೀಯುತರು ತಾ 30ರಲ್ಲು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡರು.

ಉಡ್ಪಿ ಡಿ. ಮು. ಕೋರ್ಟನಲ್ಲಿ

S. C. No 479/1953.

A. ರಾಮಪ್ಪಯ್ಯ —ವಾದಿ.

ಮತ್ತು

N. Vittaldas, Journalist C/o Sri. A. K. Salian, Room No 32, 8-10 Bora Bazar Fort, Bombay No 1

—ಪ್ರತಿವಾದಿ.

ಇವರೊಳಗೆ

ಸದರೀ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ

ನೀವು ವಾದಿರ ವಳಗೆ- ಉಡ್ಪಿ ಮುನ್ಸಿಪಲ್ Door No 9-1-6ನ್ನು ಬಾಡಿಗೆಗೆಅನುಭವಿಸಿ ಬರುತ್ತಿದ್ದ ಬಾಬ್ತು ನಿಮ್ಮಿಂದ, ತಾ1-10-50 ರಿಂದ, ತಾರೀಕು 30-4-53ರ ತನ್ನದ ಸಮಯಕ್ಕೆ ಬರತಕ್ಕ-ಬಾಡಿಗೆ ಹಣ, ವಕೀಲ್ ನೋಟಿಸು ಖರ್ಚು ಕೂಡಾ ರೂಪಾಯಿ 152—13—4ನ್ನು ಬರಮಾಡಿ ಕೊಳ್ಳುವರೆ ಮಾಡಿದ ಪೋಲಿಸ ದಾವೆಯು ತಾ 31-10-53ಕ್ಕೆ ನಿಮ್ಮ ಆಕ್ಷೇಪದ ಬಗ್ಗೆ ಯಿಡೋಣಾಗಿಯಿದೆ. ಆ ದಿನ ನೀವು ಸ್ವತಹಾ ವ ವಕೀಲರ ಮುಖಾಂತ್ರ ಹಗಲು ಘಂಟೆ 10ಕ್ಕೆ ಹಾಜ್ರು ಆಗಿ, ಆಕ್ಷೇಪವಿದ್ದಲ್ಲಿ ಹೇಳದಿದ್ದರೆ, ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂತ ಈ ಮೂಲ್ಕ ತಿಳಿಸೋಣಾಗಿದೆ—

K. Vittal Nayak.

Vakil for Plaintiff

Udipi 6-10-53

1. ಸಿನೇಮಾ ತಾರೆಯರ ದ್ವಿವರ್ಣರಂಜಿತ **ಮುಖಪುಟ**
2. ಪಕ್ಷಿಗರಿಗೆ ಬೋಧಪ್ರದವಾದ **ಸಂಭಾಷಣೆ.**
3. ದೇಶ-ವಿದೇಶಗಳ ವಾರದ ಘಟನೆಗಳನ್ನು ತಿಳಿಸುವ **ವಾರದ ವರದಿ.**
4. ಮಕ್ಕಳಿಂದಲೇ ಬರೆಯಲ್ಪಡುವ **ಮಕ್ಕಳ ನೋಟ.**
5. ಪ್ರತಿ ಸಂಚಿಕೆಯಲ್ಲಿ ಕನಿಷ್ಠ **12 ಚಿತ್ರಗಳು**
6. ಭವಿಷ್ಯ, ಸಿನೇಮಾ, ರಾಜಕೀಯ ವಿಮರ್ಶೆ, ನಗೆಯ ನೋಟ, ವಾರದಕಥೆ, ಇತ್ಯಾದಿ.

ಬೆಲೆ ಕೇವಲ 0 2 0

"ಸ್ವತಂತ್ರ"

ಸುದ್ದಿ ಮತ್ತು ಅಭಿಪ್ರಾಯಗಳ ಕನ್ನಡ ವಾರಪತ್ರಿಕೆ.

ಹೊಸಪೇಟೆ, (ಜಿಲ್ಲಾ: ಬಳ್ಳಾರಿ)

ಏಜೆಂಟರುಗಳಿಲ್ಲದ ಸ್ಥಳದಲ್ಲಿ ಏಜೆಂಟರು ಬೇಕು.

ಮಂಗಳೂರು

ಗಾಂಧಿ ಜಯಂತಿ— ತಾ 2ರಲ್ಲು ಮಂಗಳೂರಿನ ಜನತಾ ಶಾಲೆನಾಲಯದಲ್ಲಿ ಶ್ರೀ ಕೆ. ಶಂಕರಭಟ್ಟರ ಅಧ್ಯಕ್ಷತೆಯಲ್ಲಿ, ಬೆಸೆಂಟ್ ಬಾಲಿಕಾ ಶಾರಶಾಲೆಯಲ್ಲಿ ಶ್ರೀಮತಿ ಉಮಾ. ವಿ. ಕಾಮತರ ಅಧ್ಯಕ್ಷತೆಯಲ್ಲೂ, ಹೊಗ್ಗೆ ಬಜಾರ್ ಜ್ಞಾನೋದಯ ಶಾಲೆಯಲ್ಲಿ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲೂ, ಶಾಂಡೇಶ್ವರ ಮತ್ತು ಬೊಕ್ಕ ಪಟ್ಣ ಶಾಲೆಗಳಲ್ಲಿ ಶ್ರೀ ಬಿ. ಆರ್. ಕಕೆಲ್ಲರರ ಅಧ್ಯಕ್ಷತೆಯಲ್ಲೂ, ಅತ್ತಾವರ ಮುನಿಸಿಪಲ್ ಶಾಲೆಯಲ್ಲಿ ಶ್ರೀ ಮಾಧವ ಸುವರ್ಣರ ಅಧ್ಯಕ್ಷತೆಯಲ್ಲೂ, ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ಶ್ರೀ ಎಮ್. ಮಾರ್ಟಿಸರ ಅಧ್ಯಕ್ಷತೆಯಲ್ಲೂ, ವೈಶ್ಯ ಎಡ್ಯುಕೇಶನ್ ಸೊಸೈಟಿಯಲ್ಲಿ ಶ್ರೀ ಗೋಪಾಲಕೃಷ್ಣ ಶೇಟರ ಅಧ್ಯಕ್ಷತೆಯಲ್ಲೂ ಆಚರಿಸಲ್ಪಟ್ಟಿತು.

ಕಾಂಗ್ರೆಸ್ ಪತಿಯಿಂದ ಕೇಂದ್ರ ಮೈದಾನಿನಲ್ಲಿ ಶ್ರೀ ಎ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಸಂಜೆ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ ಕೆ. ಕೆ. ಸಟ್ಟಿ, ಡಾ। .ಯು ಪಿ. ಮಲ್ಯ, ಬೇಲಗಡ್ಡೆ ಅಪ್ಪಯ್ಯ, ಎಚ್. ಆರ್. ಮಲ್ಯ, ಎಫ್. ಎಕ್ಸ್. ಡಿ. ಪಿಂಟೊ ಮೊದಲಾದವರು ಮಾತನಾಡಿದರು. ಅಂದು ಬೆಳಿಗ್ಗೆ ಪ್ರಭಾತಫೇರಿ, ಧ್ವಜವಂದನೆ ಮತ್ತು ಸಾಮೂಹಿಕ ನೂಲುವ ಕಾರ್ಯಕ್ರಮಗಳಿದ್ದುವು.

ವಸಂತ ಪ್ರೇಮಿ ಮಂಡಳಿಯ ದಿನಾಚರಣೆಯು— ತಾ. 2ರಲ್ಲು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪ್ರಾರ ಶಾಲೆಯಲ್ಲಿ ಶ್ರೀಮತಿ ಇ. ಎ. ಪ್ಯಾಸರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷೆ ಶ್ರೀಮತಿ ಎಮ್. ಜಲಜಾಕ್ಷಿಯವರ ಸ್ವಾಗತ ಭಾಷಣ, ಕಾರ್ಯದರ್ಶಿ ಕುಮಾರಿ ಓ. ಲೀಲಾ ಸಟ್ಟಿರ ವರದಿವಾಚನ, ಕುಮಾರಿ ಕೆ. ಲಲಿತಾ ಸಟ್ಟಿರವರ ಪ್ರಶ್ನೆ ಭಾಷಣ ಮತ್ತು ಬಹುಮಾನ ವಿತರಣೆಗಳಾದುವು. ಕುಮಾರಿ ಸುಂದರಿಯವರ ಧನ್ಯವಾದಗಳಾದ ಬಳಿಕ ವಿವಿಧ ವಿನೋದಾವಳಿಗಳಾದುವು.

ಪ್ರ. ಸೋ. ಪಕ್ಷದ ಸಭೆಯು— ತಾ. 1ರಲ್ಲು ಡಾ। ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷಕ್ಕೆ ಶ್ರೀಗಳಾದ ಡಾ। ಕೆ. ನಾಗಪ್ಪ ಆಳ್ವ ಅಧ್ಯಕ್ಷ, ಇ. ಆನಂದ ಸಟ್ಟಿ ಕಾರ್ಯದರ್ಶಿ; ಪಿ. ಶ್ರೀನಿವಾಸ ರಾವ್ ಕೋಶಾಧಿಕಾರಿ ಮತ್ತು ಹನ್ನೆರಡು ಜನರು ಕಾರ್ಯಸಮಿತಿಗೆ ಆರಿಸಲ್ಪಟ್ಟರು.

ವರ್ಧಂತಿ ಸಮಾರಂಭ— ಬೆಸೆಂಟ್ ಬಾಲಿಕಾ ಪಾರ ಶಾಲೆಯ ವರ್ಧಂತಿ ಸಮಾರಂಭವೂ, ಬೆಸೆಂಟ್ ದಿನಾಚರಣೆಯೂ ತಾ 1ರಲ್ಲು ಗವರ್ನಮೆಂಟ್ ಕಾಲೇಜು ಪ್ರಿನ್ಸಿಪಾಲ್ ಕುಮಾರಿ ಸೀತಮ್ಮಾಳ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಎಮ್. ಕೇಶವ ಪೈಗಳು ಸ್ವಾಗತ ಮಾತುಗಳನ್ನಾಡಿದರು. ಮುಖ್ಯೋಪಾಧ್ಯಾಯಿನಿ ಎಮ್. ಜಲಜಾಕ್ಷಿಯವರು ಶಾಲಾ ವರದಿಯನ್ನೋದಿದರು. ಬಹುಮಾನ ವಿತರಣೆಯಾದ ಬಳಿಕ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಬೆಸೆಂಟ್ ಮಾತೆಯ ಸ್ಮಾರಕ ಭಾಷಣ ಮಾಡಿದರು. ಅಧ್ಯಕ್ಷೆಯರು, ಇಂದು ತರುಣಿಯರಿಗೆ ಬರೀ ಡಿಗ್ರಿ ಪಡೆವ ವ್ಯಾಮೋಹ ಹೋಗುವ, ನಿಜವಾದ ಸಮಾಜ ಸೇವೆ ಮಾಡುವ ಶಿಕ್ಷಣ ದೊರೆಯಬೇಕೆಂದೂ, ದೇಶ [illegible]

[illegible] ಈ ಕಾರ್ಯದಲ್ಲಿ [illegible] ಶ್ರೀ ಎಮ್. [illegible] ಅಧ್ಯಕ್ಷತೆಯಲ್ಲಿ ಜರಗಿತು.

ಸ್ಟೋರಿನಲ್ಲಿ ದೊರೆಯುವ ಅಕ್ಕಿ: ತಾ. 1ರಲ್ಲು ಶ್ರೀ ಎಲ್. [illegible] ಸಕಾರ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಶ್ರೀ ಡಿ. ಆರ್. [illegible] ಮತ್ತು ಶ್ರೀ ಎಸ್. ಎಲ್. [illegible] ಜಿಲ್ಲಾ [illegible] ಕಂಡು, [illegible] ಅಕ್ಕಿಯು [illegible] ಅದನ್ನು [illegible] ಜನತೆಗೆ [illegible] ಅಕ್ಕಿಯು [illegible] ಕೊಟ್ಟಿದ್ದಾರೆ.

ಪ್ರ. ಸೋ. ಪಕ್ಷದ ಜಿಲ್ಲಾ ಸಮಿತಿ ಸಭೆಯು [illegible] ತಾ. [illegible] ಶ್ರೀ ಕೆ. ಆರ್. [illegible] ಅಧ್ಯಕ್ಷತೆಯಲ್ಲಿ ಜರಗಿತು. [illegible] ಜಿಲ್ಲಾ [illegible] ಸಭೆ. [illegible]

(೩ನೇ ಪುಟದಿಂದ)

ಸಂಖ್ಯಾಬಲ ಈ ವಿಷಯದಲ್ಲಿ ನಿರ್ಣಾಯಕ ತತ್ವವಾಗಿಲ್ಲದೆ, ಆಯಾ ಪಕ್ಷಗಳಿಗೆ ದೊರೆತ ಒಟ್ಟು ಮತಗಳ ಸಂಖ್ಯೆಯೇ ಜನಾಭಿಪ್ರಾಯವನ್ನು ಯಥಾರ್ಥವಾಗಿ ಬಿಂಬಿಸಬಲ್ಲ ಸಾಧನವೆಂದು ಎಲ್ಲರೂ ಬಲ್ಲರು. ಆದುದರಿಂದ ಪ್ರಕಾಶಮರು ರಾಜ್ಯ ಶಕಟವನ್ನು ಮುನ್ನಡೆಸುವುದರಲ್ಲಿ ಜಯಶೀಲರಾಗುವ ಭರವಸೆಯುಂಟು. ಕಾಂಗ್ರೆಸ್ಸು ಪ್ರಕಾಶಮರ ಧುರೀಣತ್ವವನ್ನು ಒಪ್ಪಿಕೊಂಡಿರುವುದು ಈ ಭರವಸೆಯನ್ನು ದೃಢೀಕರಿಸುತ್ತದೆ. ಆದರೆ ರಾಯಲಸೀಮೆಯ ಕಡೆಗೆ ಪ್ರಕಾಶಮರ ಮಂತ್ರಿ ಮಂಡಲ ಅತ್ಯಧಿಕ ಗಮನಕೊಡಬೇಕಾಗುವುದು ನಿಶ್ಚಯ. ಕಮ್ಯೂನಿಸ್ಟ ಧುರೀಣ ಶ್ರೀ ನಾಗಿರೆಡ್ಡಿ ಈ ವಿಷಯದಲ್ಲಿ ಯಾವದೇ ನ್ಯೂನತೆಗೆ ಅವಕಾಶ ನೀಡದೆ, ಸರಕಾರದ ಧೋರಣವನ್ನು ಕಟುಮಾತಿನಲ್ಲಿ ಟೀಕಿಸಿಯಾರು. ರಾಯಲಸೀಮೆಯ ವಿವಾದಾಂಶಗಳನ್ನು ಬಗೆಹರಿಸಿ, ಅವುಗಳ ಅಭಿವೃದ್ಧಿಗೋಸ್ಕರ ದುಡಿಯಲು ಆಂಧ್ರದ ನೂತನ ಸರಕಾರ ಹೆಚ್ಚು ಉತ್ಸಾಹ ತೋರಿಸುವುದು ಇಷ್ಟವಾಗಿರುತ್ತದೆ. ಮತ್ತು ಅಲ್ಲಿಯ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಳ್ಳಲು ಪ್ರಯತ್ನಿಸುವುದೂ ಆಂಧ್ರದ ಹಿತ ದೃಷ್ಟಿಯಿಂದ ಯೋಗ್ಯವೆನಿಸುತ್ತದೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಶ್ರದ್ಧೆಯುಳ್ಳ ಪಕ್ಷಗಳು ಒಂದಾಗಿ ಸಮ್ಮಿಶ್ರ ಮಂತ್ರಿ ಮಂಡಳಿ ಸ್ಥಾಪಿಸಿರುವುದರಿಂದ, ಕಮ್ಯೂನಿಸ್ಟ್ ತತ್ವದ ಕಡೆಗೆ ಜನರ ಆಕರ್ಷಣ ಹೆಚ್ಚಿಕೊಳ್ಳದಂತೆ ಆ ಪಕ್ಷಗಳ ಧುರೀಣರು ಸರಕಾರೇತರಕ್ಷೇತ್ರದಲ್ಲಿ ಪ್ರಯತ್ನ ಶೀಲರಾಗುವುದೂ ಅಪೇಕ್ಷಣೀಯ. ಆಂಧ್ರದ ಭಾವೀ ಭದ್ರತೆ ಹಾಗೂ ಅಭ್ಯುದಯದ ದೃಷ್ಟಿಯಿಂದ ಈ ಕೆಲಸ ತುರ್ತಿನಲ್ಲಿಯೇ ನೆರವೇರಬೇಕು.

ಟೆಂಡರ್ ನೋಟೀಸ್

ಕಾಪು ಪಡುಗ್ರಾಮದ ಶ್ರೀ ಹೊಸ ಮಾರಿಗುಡಿಯ ಪತಿಯಿಂದ ರೂ. [illegible] ಆರುಸಾವಿರದ ಎಸ್ಟಿಮೇಟಿನ ಒಂದು ವಾಸ್ತವ್ಯದ ಕಟ್ಟೋಣದ ಬಗ್ಗೆ ಈ ಕೆಳಗೆ ಸಹಿಮಾಡಿದವರಿಂದ ಸೀಲ್ ಮಾಡಿದ ಟೆಂಡರುಗಳನ್ನು ಎಪ್ರೂವ್ಡ್ ಕಂಟ್ರಾಕ್ಟುದಾರರಿಂದ ತಾ. 20—10 53ರ ವರೇಗೆ ಸ್ವೀಕರಿಸಲಾಗುವುದು. ಟೆಂಡರ್ನೊಂದಿಗೆ ರೂಪಾಯಿ 150/-ನ್ನು ಮುಂಗಡವಾಗಿ ಕೆಳಗೆ ಸಹಿಮಾಡಲ್ಪಟ್ಟವರ ವಶ ಡಿಪೋಜಿಟ್ ಕೊಡತಕ್ಕದ್ದು. ಸ್ವೀಕೃತವಾಗದ ಟೆಂಡರುಗಳ ಬಾಬ್ತು ಡಿಪೋಜಿಟ್ ಹಣವನ್ನು ವಾಪಾಸು ಮಾಡಲಾಗುವದು. ತಾ. 22—10—53ರಲ್ಲು ಅ. ಗ. 4ಕ್ಕೆ ಟೆಂಡರುಗಳನ್ನು ಸದ್ರಿ ಸ್ಥಾಪನೆಯ ಪ್ರೆಸಿಡೆಂಟ್ ಕಾಪು ಮುದ್ದು ಸೆಟ್ರ್ರಿ ಹಾಗೆ ಸ್ಥಾನದಲ್ಲಿ ಪರಿಶೀಲಿಸಿ ಅತಿ ಕಡಿಮೆಯಲ್ಲಿ ಹಾಕಿದ ಟೆಂಡರನ್ನು ಸ್ವೀಕರಿಸಲಾಗುವುದು. ಹಾಗೆ ಸ್ವೀಕರಿಸಲ್ಪಟ್ಟ ಟೆಂಡರುದಾರರು ಕಟ್ಟೋಣ ಮಾಡುವ ಬಗ್ಗೆ ಎಗ್ರಿಮೆಂಟ್ ಬರಕೊಡತಕ್ಕದ್ದಲ್ಲದೆ ಪ್ರತ್ಯೇಕವಾಗಿ ಪುನಃ ರೂಪಾಯಿ 150-ನ್ನು ಜವಾಬ್ದಾರಿ ಹಣವಾಗಿ ಡಿಪೋಜಿಟ್ ಕೊಡತಕ್ಕದ್ದು. ಕಟ್ಟೋಣದ ಪ್ಲೇನ್ ಮತ್ತು ಎಸ್ಟಿಮೇಟನ್ನು ಈ ಕೆಳಗೆ ಸಹಿಮಾಡಿದವರಲ್ಲಿ ನೋಡಬಹುದು.

KAUP,
Date 28—9—1953

ಕೆ. ಸದಾಶಿವ ಹೆಗಡೆ,
ಮೊಕ್ತೇಸರ್.

ಚಿನ್ನ, ಬೆಳ್ಳಿಯ ನೆಕ್ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್.

ಜ್ಯುವೆಲರ್. ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಪ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; [illegible] ಸೇರಿಸಿದ ಶೈತ್ಯ, ವೀರ್ಯಶಕ್ತಿ, ಹೊಟ್ಟೆನೋವು, [illegible] ಕೆಮ್ಮು ದಮ್ಮು, ಬಹುಮೂತ್ರ ಮತ್ತು ವಾಯು [illegible] ರೋಗನಾಶಕ, ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, [illegible] ಮಕ್ಕಳ ಸರ್ವರೋಗ ನಿವಾರಕ ಆಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

[illegible]

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಬಾಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಲ್ಲಿ ಕೇಳಿರಿ.

[illegible]

ದ. ಕ. ಜಿಲ್ಲಾ ಭೂದಾನ ಸಮಿತಿ

[illegible]

ನೋಟೀಸು

[illegible]

[illegible]

ಹುಳುಕು ಹಲ್ಲು

ಡಾ| ಎಂ. ಗೋಪಾಲಕೃಷ್ಣರಾವ್, "ಕಲಿಯುಗ" ಸಂಪಾದಕರು.

ಆಧುನಿಕ ವಿಜ್ಞಾನವು ಮನುಷ್ಯನಿಗೆ ಅಸಂಖ್ಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದೆ. ಪ್ರಕೃತಿಯ ಅನೇಕ ಮರ್ಮಗಳನ್ನು ಬಿಚ್ಚಿ ತೋರಿಸಿದೆ. ಅದಕ್ಕಾಗಿಯೆ ಮಾನವನು ವಿಜ್ಞಾನವನ್ನು ಇಂದು ಪ್ರತಿಬ್ರಹ್ಮನ ಪಟ್ಟಕ್ಕೆ ಏರಿಸಿದ್ದಾನೆ. ತನ್ನ ಬಾಳಿನ ಅಥವಾ ವಿಶ್ವದ ಯಾವೊಂದು ಗುಟ್ಟು ತಿಳಿಯದಿದ್ದರೂ ಅವನು ವಿಜ್ಞಾನದ ಮಾತನ್ನು ಭಕ್ತಿಯಿಂದ ನಂಬುತ್ತಾನೆ. ಪರಿಣಾಮವೆಂದರೆ ಯಾವುದೆ ಸಮಸ್ಯೆಯ ಬಗ್ಗೆ "ಇದು ಹೀಗೆಯೆ ಸರಿ" ಎಂದು ತೀರ್ಪುಕೊಡುವ ಪುರಾತನ ಧರ್ಮಶಾಸ್ತ್ರಗಳ ಪಕ್ಷವನ್ನು ಇಂದು ವಿಜ್ಞಾನವು ಕಸಿದುಕೊಂಡಂತೆ ತೋರುತ್ತಿದೆ.

ಹಾಗೆಂದರೆ ಜೀವನದ ಅಥವಾ ವಿಶ್ವದ ಸಕಲ ಸಂಭವಗಳನ್ನೂ ವಿಜ್ಞಾನವು ತನ್ನ ತರ್ಕದಿಂದ ಸುಲಿದು ತೋರಿಸಬಲ್ಲುದೆಂದು ಭಾವಿಸಲಾಗದು. ವಿಜ್ಞಾನದ ಪಾತಾಳ ಯಂತ್ರಕ್ಕೂ ಸಿಲುಕದ ಅಸಂಖ್ಯ ಗುಟ್ಟುಗಳು ಇನ್ನೂ ವಿಶ್ವಗರ್ಭದಲ್ಲಿ ಅಡಗಿವೆ. ಮತ್ತೆ ಪ್ರಾಮಾಣಿಕ ವಿಜ್ಞಾನಿಗಳು ವಿಜ್ಞಾನದ ಆ ನಿರುಪಾಯತೆಯನ್ನು ವಿನಯದಿಂದ ಒಪ್ಪುತ್ತಲೂ ಇದ್ದಾರೆ. ಆದರೆ ವಿಜ್ಞಾನದ ಸಾರ್ವಭೌಮತೆಯ ಸೋಗಿನಿಂದ ಸ್ವಾರ್ಥವನ್ನು ಸಾಧಿಸುವವರ ಸಂಖ್ಯೆ ಮಾತ್ರ ದಿನ ದಿನವೂ ಬೆಳೆಯುತ್ತಿದೆ.

ಸ್ವಾರ್ಥಿಗಳು ತಮ್ಮ ಕೈಚೋಳಿಗೆಗೆ ವಿಜ್ಞಾನದ ಅಕ್ಷಯಪಾತ್ರದ ಬಣ್ಣ ಬಳೆದು ವಿಜ್ಞಾನಭಕ್ತರ ಭಂಡಾರವನ್ನು ಸುಲಿಯುತ್ತಿದ್ದಾರೆ. ಆ ವಾಮವೃತ್ತಿಯು ಮಿಕ್ಕೆಲ್ಲ ಕ್ಷೇತ್ರಗಳಿಗಿಂತ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಾಗಿ ಮೆರೆಯುತ್ತಿದೆ. ಒಂದೊಂದು ರೋಗಕ್ಕೆ ಸಾವಿರಾರು ಮದ್ದುಗಳು; ಮತ್ತೆ ಅವೆಲ್ಲವೂ ರಾಮಬಾಣಗಳೇ. ಪ್ರತಿಯೊಂದು ಮದ್ದಿನ ಜಾಹಿರಾತಿನಲ್ಲಿಯೂ ವಿಟೆಮಿನ್, ಕ್ಯಾಲ್ಸಿಯಂ, ಐರ್ಯೊನ್, ಕ್ಲೊರೊಫಿಲ್‌ಗಳ ರುಜುವಾತುದ ಸವಿಸ್ತರ ಜಪವಿದ್ದೇ ಇರುವುದು. ಪ್ರತಿಯೊಂದು ವಾಕ್ಯಕ್ಕೂ ಪ್ರಸಿದ್ಧ ವಿಜ್ಞಾನಿಯೊಬ್ಬನ ಅಭಿಪ್ರಾಯದ ಸಮರ್ಥನೆಯನ್ನು ಜೋಡಿಸುವುದು. ವಿಜ್ಞಾನದ ಮೋಹದಿಂದ ಶತಮಾನಪೂರ್ವದ ಶಾಸ್ತ್ರಗಳನ್ನೂ ಮರೆಯುತ್ತಿರುವ ಮನುಷ್ಯನು ವಿಜ್ಞಾನದ ಭಾಷೆಯಲ್ಲಿಯೆ ಬರೆಯಲ್ಪಟ್ಟ "ಬೋಳು ತಲೆಗೆ ಭೂತಕೇಶವಾಗಿಸುವ ಹೇರ್ ಆಯಿಲ್" "ಬಚ್ಚುಬಾಯಿಗೆ ವಜ್ರದಂತಗಳಾಗಿಸುವ ಟೂತ್ ಪೇಸ್ಟು" "ಉಸಿರು ಹಾರಿದರೂ ಕಸುವನ್ನೇರಿಸುವ ಟಾನಿಕ್" ನಂಬಿ ಬಕ್ಕಣ ರೊಕ್ಕವನ್ನು ಸೂರೆಗೈಯುವುದರಲ್ಲಿ ಸಂದೇಹವೇ ಇಲ್ಲ.

ಆದ್ದರಿಂದಲೇ "ವಿಜ್ಞಾನದ ಕಿರುಚಾಟದಲ್ಲಿ ಯಾವಾಗಲೂ ಸತ್—ಜ್ಞಾನವೇ ಇರುವುದೆಂದು ನಂಬಬೇಡಿ" ಎಂದು ಎಚ್ಚರಿಸುವ ಕಾಲ ಬಂದಿದೆ. ಹುಳುಕುಹಲ್ಲಿನ ಕಾರಣ, ಚಿಕಿತ್ಸೆಗಳ ಬಗೆಗೂ ವಿಜ್ಞಾನ ಭ್ರಾಂತಿ ಎಷ್ಟು ಪ್ರಚುರವಾಗಿದೆಯೆಂಬುದನ್ನು ವಿವೇಚಿಸಲು ಪ್ರಸ್ತಾವನೆಯೆಂದು ಇಷ್ಟು ಬರೆಯಬೇಕಾಯಿತು. ಏಕೆಂದರೆ ವಿಜ್ಞಾನವೆಂದು ತಿಳಿಯಲ್ಪಟ್ಟ ಕೆಲವು ವಿಷಯಗಳನ್ನು ಒಮ್ಮೆಲೆ ಒಡೆದಿಸಿ ಬಿಟ್ಟರೆ ಲೇಖಕನನ್ನು ಒಬ್ಬ ಕಗ್ಗನೆಂದಾಗಿ ಕಲ್ಪಿಸುವುದೊಂದು, ಈಗ ಸುಶಿಕ್ಷಿತರ(?) ವಾಡಿಕೆಯೆ ಆಗಿದೆ.

ಈಗ ಹುಳುಕು ಹಲ್ಲಿಗೆ ಕಾರಣವೇನು, ಎಂಬುದನ್ನು ನೋಡುವಾ. ಬಹುತರ ದಂತವೈದ್ಯರು ಪುಷ್ಟಿರಹಿತ ಆಹಾರ (Poor diet) ವೇ ಹುಳುಕು ಹಲ್ಲಿಗೆ ಕಾರಣವೆಂದು ಹೇಳುತ್ತಾರೆ. ಮತ್ತೆ ಪರ ಮಾತನ್ನು ಹೂಡೆ ವಿಜ್ಞಾನವೆಂದು ನಾವೆಲ್ಲರೂ ನುಂಗಿಬಿಡುತ್ತೇವೆ. ಆದರೂ ಈಗ ಆ ಅಭಿಪ್ರಾಯವನ್ನು ಕೊಂಚ ಅನುಭವದ ಒರೆಗಲ್ಲಿಗೆ ತಿಕ್ಕಿ ನೋಡೋಣವೇ? ಅಮೆರಿಕೆಯು ಸಿರಿವಂತರ ನಾಡಷ್ಟೆ? ಮತ್ತು ಜಗತ್ತಿನಲ್ಲಿಂದು ಜೀವನದ ಮಟ್ಟವು ಅಮೇರಿಕೆಯಲ್ಲಿ ಅತ್ಯುಚ್ಚ ಸ್ತರದಲ್ಲಿದೆಯೆಂಬುದೂ ನಮಗೆ ಗೊತ್ತಿದೆ. ಆದ್ದರಿಂದ ಅಮೆರಿಕನರ ಆಹಾರದಲ್ಲಿ ತುಂಬ ಪೌಷ್ಟಿಕಾಂಶಗಳಿವೆಯೆಂದು ಒಪ್ಪಲೇ ಬೇಕು. ಆದರೆ ದುರ್ದೈವದಿಂದ ಅಮೆರಿಕನರಲ್ಲಿ ಇರುವಷ್ಟು ಹುಳುಕು ಹಲ್ಲುಗಳು ಬಡ ದೇಶವಾದ ಭಾರತದಲ್ಲಿ ಇಲ್ಲವೆಂದು ಡಾ| ಜೆ. ಡಿ. ರ್‍ಯಾಟ್‌ಕ್ಲಿಫ್ ಹೇಳುತ್ತಾರೆ. ಮತ್ತೆ ಜಾಗತಿಕ ಆರೋಗ್ಯ ಸಂಘ ಪ್ರಕಟಿಸುವ ಪತ್ರಿಕೆಯಲ್ಲಿ, ತೀರ ಕಡಿಮೆ ಪೌಷ್ಟಿಕಾಂಶವುಳ್ಳ ಆಹಾರವು ಭಾರತದ ಹಳ್ಳಿಗರದು ಎಂದು ಬರೆಯುತ್ತಾರೆ. ಅದಕ್ಕಾಗಿಯೆ ಔದಾರ್ಯದಿಂದ ಅಮೆರಿಕೆಯು ಕೋಟ್ಯವಧಿ ಪೌಷ್ಟಿಕ ಮಾತ್ರೆಗಳನ್ನು ಬಾಲ ವಿದ್ಯಾರ್ಥಿಗಳಲ್ಲಿ ಹಂಚಲು ಕಳಿಸುತ್ತಿದ್ದಾರೆ. ಎಂದರೆ ತಮ್ಮಲ್ಲಿ ಹುಳುಕು ಹಲ್ಲುಗಳನ್ನಿಟ್ಟುಕೊಂಡು ನಮ್ಮ ಹಲ್ಲು ಬೆಳಗಲಿಕ್ಕೆ ಬಂದಿದ್ದಾರೆ.

ಬರಿಯ ಧಾನ್ಯಗಳ ಮೃದು ಆಹಾರ (Soft diet) ಸೇವಿಸುವುದರಿಂದ ಹುಳುಕು ಹಲ್ಲುಗಳಾಗುತ್ತವೆಯೆಂಬುದು ವಿಜ್ಞಾನದ ಮತ್ತೊಂದು ಉಪದೇಶ. ಭಾರತೀಯರ ತೀರ ಸಾಮಾನ್ಯವಾದ ಆಹಾರವೆಂದರೆ ಅನ್ನವೇ ಆಗಿದೆ. ಪೊಲಿನೇಶಿಯದಲ್ಲಿ ಬರಿ ಮೀನು ಮತ್ತು ರೊಟ್ಟಿಯ ಹಣ್ಣುಗಳನ್ನು ಸೇವಿಸುತ್ತಾರೆ. ಮಾಂಸ ಮೊಟ್ಟೆಗಳು ಇಲ್ಲಿಯೇ ಇಲ್ಲವೆನ್ನಬಹುದು. ಆದರೂ ಈ ಎರಡೂ ದೇಶಗಳಲ್ಲಿ ಜನರ ಹಲ್ಲಿಗೆ ಹುಳವೇಕೆ ಹಿಡಿಯುವುದಿಲ್ಲ? ವಿಜ್ಞಾನಿಗಳು ಉತ್ತರಿಸುವರೇ?

ಆಧುನಿಕ ನಾಗರಿಕತೆಯು ಬೆಳೆದಂತೆ ಸಕ್ಕರೆಯ ಸೇವನವು ಹೆಚ್ಚಾಗಿದೆ. ಸಿಹಿ ಪದಾರ್ಥಗಳ ಸೇವನದಿಂದಲೆ ಹಲ್ಲುಗಳು ಹುಳುಕಾಗುತ್ತವೆ, ಎಂಬುದು ಇನ್ನೊಂದು ವೈಜ್ಞಾನಿಕ ಮತ. ಈಗ ನೋಡಿ, ಭಾರತೀಯರು ನೂರಾರು ಶತಮಾನಗಳಿಂದ ಬೆಲ್ಲವನ್ನು ಸೇವಿಸುತ್ತಿದ್ದಾರೆ. ವೆಸ್ಟ್ ಇಂಡೀಜ್ ದ್ವೀಪ ವಾಸಿಗಳಲ್ಲಿ ಬಡವರು ವರ್ಷದಲ್ಲಿ ಮೂರು ನಾಲ್ಕು ತಿಂಗಳು ಕಬ್ಬುಗಳನ್ನು ತಿಂದೇ ಜೀವಿಸುತ್ತಾರೆ. ಆದರೂ ಇಂಗ್ಲೆಂಡ್, ಅಮೆರಿಕ, ಕೆನಡಾಗಳಲ್ಲಿಗಿಂತ ಭಾರತ ಮತ್ತು ವೆಸ್ಟ್ ಇಂಡೀಜ್‌ನಲ್ಲಿ ಹುಳುಕು ಹಲ್ಲುಏಕೆ ಕಡಿಮೆ?

ಮುಖ ಸ್ವಚ್ಛತೆಯು ಸರಿಯಾಗಿಲ್ಲದಿದ್ದರೆ ಹಲ್ಲುಗಳಿಗೆ ಹುಳ ಹಿಡಿಯುವುದೆಂಬುದು ಇನ್ನೊಂದು ವಿಜ್ಞಾನದ ಜಾಣ ನುಡಿಯಾಗಿದೆ. ಬೆಳಗ್ಗೆ ಮತ್ತು ಊಟ ಮಾಡಿದ ನಂತರ ಹಲ್ಲುಗಳನ್ನು ಬೆಳಗುವ ವಿಧಿಯನ್ನು ಭಾರತೀಯರಿಂದಲೆ ಪಾಶ್ಚಾತ್ಯರು ಕಲಿತಿರುವರೆಂಬುದು ಐತಿಹಾಸಿಕ ಸತ್ಯವಾಗಿದೆ. ಆದರೂ ಈಗಲೂ ಆಹಾರ ಸೇವನದ ಅನಂತರ ಮದ್ಯ ಸೇವಿಸಿ ಕರವಸ್ತ್ರದಿಂದ ಬಾಯಿಯನ್ನು ಒರೆಸುವ ಹೊರತಾಗಿ ಹೆಚ್ಚಿನ ಮುಖ ಶುದ್ಧಿಯನ್ನು ಪಾಶ್ಚಾತ್ಯರು ಮಾಡಿಕೊಳ್ಳುತ್ತಿಲ್ಲ. ಆದ್ದರಿಂದಲೆ ತಮ್ಮ ದೇಶಗಳಲ್ಲಿ ಪ್ರಚುರವಾದ ಹುಳುಕು ಹಲ್ಲಿಗೆ ಮುಖ ಶುದ್ಧಿಯ ಅಭಾವವೇ ಕಾರಣವೆಂಬ ವಿಜ್ಞಾನವನ್ನು ಅವರು ಸಾರುತ್ತಿರಬಹುದು. ಆದರೆ ಸಾಮೋವಾ ದ್ವೀಪದ ಮಂದಿಯರಾಗಲಿ ಎಸ್ಕಿಮೋ ಜನಾಂಗದವರಾಗಲಿ ಬಾಯಿಯನ್ನು ತೊಳೆದುಕೊಳ್ಳುವ ವಾಡಿಕೆಯನ್ನಿಟ್ಟುಕೊಂಡಿಲ್ಲ. ಅವರಲ್ಲಿಯೂ ಹುಳುಕು ಹಲ್ಲಿನ ಪ್ರಸಾರವಿಲ್ಲವೆಂಬುದು ಆಶ್ಚರ್ಯವಲ್ಲವೇ? ಮತ್ತೆ ಮುಖ ಶುದ್ಧಿಗೆ ಕೊಂಚವೂ ಗಮನ ಕೊಡದಿರುವ ದಕ್ಷಿಣ ಆಫ್ರಿಕದ ಬುಶ್‌ಮನ್ನರ ಹಲ್ಲುಗಳು ಇತರ ಎಲ್ಲಾ ಜನಾಂಗದವರ ಹಲ್ಲುಗಳಿಗಿಂತ ಭದ್ರವಾಗಿರುವವು. ಅಲ್ಲದೆ ಮನುಷ್ಯ ಜಾತಿಗೆ ಸಮೀಪಸ್ಥವಾದ ಗೊರಿಲ್ಲಾ, ಚಿಂಪಾಂಜಿ ಮುಂತಾದ ಮಂಗ ಜಾತಿಗಳೆಂದಾದರೂ ದಂತ ಮಂಜನವನ್ನು ಉಪಯೋಗಿಸುವವೇ? ಆದರೂ ಅವುಗಳ ಹಲ್ಲುಗಳಿಗೆ ಹುಳು ಹಿಡಿಯುವುದಿಲ್ಲ.

ವಿಟಮಿನ್, ಹಾಲು ತೊಪ್ಪಲ ಪಲ್ಲೆಗಳನ್ನು ವಿಪುಲವಾಗಿ ಸೇವಿಸುವವರ ಹಲ್ಲಿಗೆ ಹುಳು ಹತ್ತದು ಎಂದು ಡಾಕ್ಟರರು ಹೇಳುವುದುಂಟು. ಆದರೆ ಅಮೂರು ವರ್ಗದ ಆಹಾರಗಳನ್ನು ಸಿರಿವಂತ ರಾಷ್ಟ್ರಗಳೇ ಭಾರತೀಯರಿಗಿಂತ ಹೆಚ್ಚಾಗಿ ಸೇವಿಸುವವೆಂಬುದು ಸುತ್ತ ಸಂಗತಿಯಾದರೂ ಆ ಪಾಶ್ಚಾತ್ಯರಲ್ಲಿಯೆ ಹುಳುಕು ಹಲ್ಲು ಹೆಚ್ಚೇಕೆಂಬುದನ್ನು ಡಾಕ್ಟರರು ಯೋಚಿಸುವುದೇ ಇಲ್ಲ. ಭಾರತದಲ್ಲಿಯೆ ನೋಡಿದರೂ ಹಾಲು, ಹಣ್ಣು, ವಿಟೆಮಿನ್‌ಗಳನ್ನು ಬಡವರಿಗಿಂತ ಸಿರಿವಂತರೇ ಹೆಚ್ಚಾಗಿ ಸೇವಿಸುವರಷ್ಟೆ? ಭಾರತೀಯ ಹಳ್ಳಿಗರಲ್ಲಿ ಮುಕ್ಕಾಲು ಪಾಲು ಜನ ಜೋಳರೊಟ್ಟಿ, ಎಣ್ಣೆ ಮೆಣಸಿನಕಾಯಿ, ಬೆಲ್ಲ, ಸೀರುಳ್ಳಿ, ಬೆಳ್ಳುಳ್ಳಿಗಳನ್ನಷ್ಟೇ ಸೇವಿಸುತ್ತಾರೆ. ಆದರೂ ಹುಳುಕು ಹಲ್ಲು, ಸಡಿಲಾದ ಹಲ್ಲು, ಬಿದ್ದ ಹಲ್ಲುಗಳ ಸೌಂದರ್ಯವು ಸಿರಿವಂತರಲ್ಲಿಯೇ ಹೆಚ್ಚೆಂಬುದು ದಂತ ವೈದ್ಯರ ಅನುಭವವಾಗಿದೆ. ಮತ್ತೆ ಕರಿಬೂದಿ, ಇದ್ದಲು, ಬೇವಿನ ಕಡ್ಡಿಗಳಿಂದ ಹಲ್ಲು ಬೆಳಗುವ ಬಡವರಿಗಿಂತ ದಂತಮಂಜನ, ಟೂತ್‌ಪೇಸ್ಟ್, ಬ್ರಶ್‌ಗಳನ್ನು ಉಪಯೋಗಿಸುವವರ ಹಲ್ಲುಗಳೇ ಬೇಗನೆ ಬಿದ್ದು ಹೋಗುವವೆಂದು ಜಗತ್ ಪ್ರಸಿದ್ಧ ನಿಸರ್ಗೋಪಚಾರಿಯಾಗಿರುವ ಬರ್ನಾರ್ ಮೆಕ್ ಫೆಡನ್ ಹೇಳುತ್ತಾನೆ.

ಇಷ್ಟೆಲ್ಲವನ್ನೂ ಬರೆದ ನನ್ನನ್ನೇ "ಹುಳುಕು ಹಲ್ಲಿಗೆ ಕಾರಣವೇನು?" ಎಂದು ವಾಚಕರು ಕೇಳಿದರೆ ನನಗೆ ಗೊತ್ತಿಲ್ಲವೆನ್ನುವುದರಲ್ಲಿಯೇ ಹೆಮ್ಮೆ ಪಡುತ್ತೇನೆ. ವಿಜ್ಞಾನದ ವೇಷದಲ್ಲಿ ಸುಳ್ಳಿನ ಪ್ರಚಾರ ಮಾಡುವುದಕ್ಕಿಂತ ಅಜ್ಞಾನವೇ ಲೇಸು. ವಿಜ್ಞಾನವನ್ನು ನಂಬಿ ಹಲ್ಲಿನ ಭದ್ರತೆಗೆಂದು ವಿಟೆಮಿನ್, ಟೂತ್ ಪೇಸ್ಟ್, ಕ್ಯಾಲ್ಸಿಯಂಪುಡಿಗಳನ್ನು ಕೊಂಡುಕೊಳ್ಳುವ ವ್ಯವಧಿಸಣವನ್ನು ಪೋಲು ವೆಚ್ಚ ಮಾಡುವುದಾಗಲಿ, ಪರ ದೇಶಗಳಿಗೆ ಹರಿ ಬಿಡುವುದಾಗಲಿ ರಾಷ್ಟ್ರದ್ರೋಹ. ವಿಜ್ಞಾನವು ಅಂತಹ ಔಷದ, ಪ್ರಸಾಧನಗಳನ್ನು ತಯಾರಿಸುವ ಬಂಡವಾಳಿಗರ ಬಗಲುಗೂಸಾಗಿದೆಯೆಂಬುದು ತರ್ಕಯುತವಾದ ಸೂಕ್ಷ್ಮ ಪರಿಶೀಲನೆಗೆ ತಿಳಿಯದಿರದು. ಆಯುರ್ವೇದ ಶಾಸ್ತ್ರವು ಹೇಳುವ ಆಹಾರ, ದಿನಚರ್ಯೆ, ಸಂಯಮಗಳನ್ನವಲಂಬಿಸಿ ಬೇವಿನ ಕಡ್ಡಿ, ಇದ್ದಲ ಪುಡಿಗಳನ್ನೇ ಮುಖಸ್ವಚ್ಛತೆಗೆ ಉಪಯೋಗಿಸುತ್ತಿದ್ದರೆ ಹಲ್ಲುಗಳೂ ಭದ್ರವಾಗಿರುವವು; ದುಡ್ಡೂ ಉಳಿಯುವುದು.

ಪ್ರಕಟಣೆ

ಕುಂದಾಪುರ ತಾಲೂಕು ನಂಬ್ರ 26ನೆ ಚಿತ್ತೂರು ಗ್ರಾಮದ ಶ್ರೀ ಮಾರ್ನ ಕಟ್ಟೆ ಬ್ರಹ್ಮಲಿಂಗ ದೇವಸ್ಥಾನದ ಟ್ರಸ್ಟಿ ಚಿತ್ತೂರು ಸೀರಂಗ ಶೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸುವುದೇನೆಂದ್ರೆ ನನ್ನ ಆಡಳ್ತೆಗೆ ಒಳಪಟ್ಟ ಶ್ರೀ ಮಾರ್ನ ಕಟ್ಟೆ ದೇವಸ್ಥಾನದ ದಶಾವತಾರ ಮೇಳವನ್ನು ಫಸಲಿಯಲ್ಲಿ ನಡಿಸಿಕೊಂಡು ಹೋಗಲು, ಯಾರು ಕೇಳುವವರ ಬೇಕಾಗಿದೆ. ಇದೇ ಬರುವ ಅಕ್ಟೋಬರ್ ತಾರೀಕು 25ನೇ ಆದಿತ್ಯವಾರ ಅ. ಘಂಟೆ 2ಕ್ಕೆ ನನ್ನ ತಮ್ಮ ಕುಂದಾಪುರ ಜವುಳಿ ಸಾಹುಕಾರ್ ಚಿತ್ತೂರು ಮಂಜಯ್ಯ ಶೆಟ್ರ ಜವುಳಿ ಅಂಗಡಿಯಲ್ಲಿ ಬಹಿರಂಗವಾಗಿ ಏಲಂ ಮಾಡೋದಾಗುತ್ತದೆ. ಏಲಂನಲ್ಲಿ ಗೆದ್ದವರು ನ್ಯಾಯವಾದ ಜವಾಬ್ದಾರಿ ಕೊಡಲು ಅರ್ಹರಾಗಿರತಕ್ಕದ್ದು. ತಾ 20-9-1953.

ಪಟೇಲ ವೀರಣ್ಣ ಶೆಟ್ಟಿ.
ಆಡಳಿತೆದಾರ್

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ನ್ಯಾಸಾಚಾರ್ಯ
ರಥಬೀದಿ ಉಡುಪಿ.

ತಾರಾನಾಥ ಆಯುರ್ವೇದ ಮಂದಿರ

ವಿಳಾಸ ಬದಲಾವಣೆ

ಮಂಗಳೂರಿನ ಪಂಪನಕಟ್ಟೆಯಲ್ಲಿದ್ದ ನಮ್ಮ "ತಾರಾನಾಥ ಆಯುರ್ವೇದ ಮಂದಿರ"ವು ಕೊಡಿಯಾಲಬೈಲಿನಲ್ಲಿ ನವಭಾರತ ಪ್ರೆಸ್ಸಿನ ಪತ್ತಿರದ ಕಟ್ಟಡಕ್ಕೆ ಸ್ಥಳಾಂತರಿಸಲ್ಪಟ್ಟಿದೆ. ಇನ್ನುಮುಂದೆ ರೋಗ ಚಿಕಿತ್ಸೆಗಾಗಿ ಬರುವವರು ಈ ಕೆಳಗಿನ ಹೊಸ ವಿಳಾಸಕ್ಕೇ ಬರಬೇಕು ಅಥವಾ ಬರೆಯಬೇಕೆಂದು ವಿನಂತಿ.

ಡಾ| ಎಂ. ಗೋಪಾಲಕೃಷ್ಣರಾವ್,
ತಾರಾನಾಥ ಆಯುರ್ವೇದ ಮಂದಿರ,
ಕೊಡಿಯಾಲಬೈಲು, ಪೋಸ್ಟ್—ಮಂಗಳೂರು, ನಂ. 3

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ ಬಹಿಷ್ಠೆ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ವಂ|| ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomack pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, ಬಂಜೆತನವನ್ನು ಕೊನೆಗಾಣಿಸಿ ಸಂತಾನ ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು, ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸಲ್ ರವಾನೆ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು.(South India)

ಹಿಂದುಳಿದವರು, ಮುಂದ್ಹೋದವರು, ಬಡವರು ಮತ್ತು ಧನಿಕರು

ಮೇಲಿನ ವಿಷಯದ ಕುರಿತು ಇತ್ತೀಚೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಾದ ವಿವಾದಗಳೂ, ತರ್ಕ ವಿತರ್ಕಗಳೂ ನಡೆಯುತ್ತಿದ್ದು, ಇಂತಹ ವಿಷಯಗಳಿಗೆ ಹೆಚ್ಚು ಗಮನಕೊಡುವುದು ಕೆಲವು ಕನ್ನಡ ವಾರ್ತಾ ಪತ್ರಿಕೆಗಳಲ್ಲಿ ಕಂಡುಬರುತ್ತಿದೆ. ಇದನ್ನೆಲ್ಲಾ ಓದಿದಾಗ ಬಡ ಕನ್ನಡಿಗನಾದ ನನಗೂ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಕೆಲವು ವಿಷಯಗಳು ನೆನಪಿಗೆ ಬಂದು ನನ್ನ ಲೇಖನಿಗೆ ಪ್ರೋತ್ಸಾಹ ಕೊಟ್ಟಿತು.

ಮೇಲಿನ ವಾದ ವಿವಾದಗಳಿಗೆ ಮುಖ್ಯ ಕಾರಣವೆಂದರೆ ಇತ್ತೀಚೆಗೆ ಉಡುಪಿಯಲ್ಲಿ ತೆರೆಲ್ಪಟ್ಟ ಕಸ್ತೂರಿಬಾ ಮೆಡಿಕಲ್ ಕಾಲೇಜೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಸಹಜವಾಗಿಯೂ ನಮ್ಮ ಜಿಲ್ಲೆಯಲ್ಲಿ ಇಂತಹದೊಂದು ಮಹತ್ವದ ಕಾರ್ಯವಾದುದಕ್ಕಾಗಿ ಈ ಜಿಲ್ಲೆಯ ಪ್ರತಿಯೊಬ್ಬನೂ ಹೆಮ್ಮೆಪಡಬೇಕಾದ ಮಾತು. ಅದಲ್ಲದೆ ನಮ್ಮ ಜಿಲ್ಲೆಯಲ್ಲಿ ಇಂತಹ ಕಾರ್ಯವನ್ನು ಸಾಧಿಸುವವರಿಗೆ ಪ್ರತಿಯೊಬ್ಬನೂ ಬೆಂಬಲವನ್ನೀಯಬೇಕಾದುದು ಅಗತ್ಯ, ವಿನಹ ಅಂಥವರಿಗೆ ಟೀಕೆಯ ಸುರಿಮಳೆಯನ್ನು ಸುರಿಸುವುದಲ್ಲ. ಈಗ ಕಸ್ತೂರಿಬಾ ಮೆಡಿಕಲ್ ಕಾಲೇಜು ಶ್ರೀಮಂತರ ಮಕ್ಕಳಿಗಾದರೂ ಅದರಿಂದ ನಮ್ಮಂತಹ ಬಡ ಮಕ್ಕಳಿಗೇನೂ ನಷ್ಟವಿಲ್ಲ, ಯಾ ದೋಷವಿಲ್ಲ. ಇನ್ನು ನಾವು ನಮಗಾಗಿ ಒಂದು ಗಾಂಧಿ ಮೆಡಿಕಲ್ ಕಾಲೇಜು ಮಾಡುವ ಪ್ರಯತ್ನದಲ್ಲಿರುವ. ಬೇರೆಯವರು ಮಾಡಿದ ವಿಷಯದ ಕುರಿತು ಟೀಕೆಮಾಡಿ ನಮ್ಮ ಅಮೂಲ್ಯ ಸಮಯವನ್ನು ವೆಚ್ಚಗೊಳಿಸಿ ನಮ್ಮ ಜಿಲ್ಲೆಯ ಹಾನಿಮಾಡುವುದಲ್ಲ. ಈಗಿನ ಧೋರಣೆಯನ್ನೇ ನಾವು ಇಟ್ಟುಕೊಂಡಲ್ಲಿ ಇನ್ನು ಮುಂದೆ ನಮ್ಮ ದ. ಕನ್ನಡ ಜಿಲ್ಲೆಯಲ್ಲಿ ಯಾವುದೊಂದೂ ಮಹತ್ವದ ಕಾರ್ಯಕ್ಕೆ ಯಾರೂ ಕೈಹಾಕುವ ಹಾಗಿಲ್ಲ.

ಭಾರತವು ಸ್ವತಂತ್ರವಾಗಿ ಐದಾರು ವರ್ಷಗಳಾದವು. ಬೇರೆ ಬೇರೆ ಜಿಲ್ಲೆಗಳಲ್ಲಿ ಭಾರತವು ಪ್ರಗತಿಯ ಮಾರ್ಗಕ್ಕೆ ಸಾಗುತ್ತಿದ್ದರೂ ದ. ಕನ್ನಡ ಜಿಲ್ಲೆಯಲ್ಲಿ ಯಾವತರದ ಮಾರ್ಪಾಡೂ ಆಗಲಿಲ್ಲ. ಇದರ ಕಾರಣವೇನು? ನಮ್ಮ ನಮ್ಮೊಳಗೆ ಮತ್ಸರ, ಭೇದಭಾವ, ಕಚ್ಚಾಟಾದಿಗಳಿಂದ, ನಮ್ಮ ಜಿಲ್ಲೆಯ ಹಾನಿ ನಮ್ಮ ಜಿಲ್ಲೆಯವರಿಂದಲೇ ಎಂದು ನಾನು ಒತ್ತಿ ಹೇಳುತ್ತೇನೆ.

ಎರಡು ವರ್ಷಗಳ ಹಿಂದೆ ನಮ್ಮ ಕೇಂದ್ರ ಸರಕಾರವು ಭಾರತದಲ್ಲಿ ಎರಡು ಮುಖ್ಯ "ಬಂದರು"ಗಳನ್ನು ಮಾಡುವುದಾಗಿ ಜಾಹೀರಾತು ಮಾಡಿತ್ತು. ಒಂದು ಗುಜರಾತ್ ಕಚ್ಛನಲ್ಲಿಯೂ, ಇನ್ನೊಂದು ಮಲ್ಪೆಯಲ್ಲಿ ಎಂದು, ಗುಜರಾತಿನ ಬಂದರು ಕಟ್ಟಿ ಸಂಪೂರ್ಣವಾದರೂ ಮಲ್ಪೆಯ ಬಂದರಿನ ಪತ್ತೆಯೇ ಇಲ್ಲ. ಇದಕ್ಕೆ ಕಾರಣ ಸರಕಾರವಲ್ಲ, ನಮ್ಮ ಜಿಲ್ಲೆಯ ಮಹನೀಯರೇ! ಮಂಗಳೂರು ಮಲ್ಪೆಯೆಂದು ಇಬ್ಬರ ನ್ಯಾಯದಲ್ಲಿ ಮೂರನೆಯವನಿಗೆ ಆದಾಯ. ಎಲ್ಲಿಯಾದರೇನು ನಮ್ಮ ಜಿಲ್ಲೆಯಲ್ಲೇ ಎಂಬ ಭಾವನೆ ಯಾರಲ್ಲೂ ಇಲ್ಲ.

ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮತ್ತು ದ. ಕನ್ನಡಿಗರು

"ತಾನಾಗಿ ಮಾಡಲಾರ, ಇನ್ನೊಬ್ಬರು ಮಾಡುವುದನ್ನು ನೋಡಲಾರ" ಎಂಬ ದಕ್ಷಿಣ ಕನ್ನಡಿಗರ ವಿಚಿತ್ರ ಧೋರಣೆಯ ಕುರಿತು ಮುಂಬಯಿ ಕನ್ನಡಿಗರೊಬ್ಬರ ಹೃದಯ ನಿವೇದನೆ.

ಹೀಗೆಯೇ ಕಸ್ತೂರಿಬಾ ಮೆಡಿಕಲ್ ಕಾಲೇಜ್ ನಮ್ಮೂರಿನಲ್ಲಾದುದು ನಮ್ಮೆಲ್ಲರ ಉಪಯೋಗಕ್ಕೆ ಬೀಳುವುದು. ಬಡವರಿಗೂ, ಶ್ರೀಮಂತರಿಗೂ. ಬಡವರು ಬಡವರಾಗಿಯೇ ಉಳಿಯುವುದಿಲ್ಲ, ಶ್ರೀಮಂತರು ಶ್ರೀಮಂತರಾಗಿಯೇ ಇರಲಾರರು. ಕಾಲಚಕ್ರದ ಸುತ್ತಿಗೆ ಸಿಕ್ಕಿ ಉರುಳಾಗಿ ಕಡೆಗೆ ಬದಲಾವಣೆಹೊಂದುತ್ತಿರುತ್ತಿರುವರು ಖಂಡಿತ. ನಮ್ಮ ಕಣ್ಣ ಮುಂದೆ ನಾವು ಕಾಣುತ್ತಿರುವ ದೈನಂದಿನ ವಿಷಯವಿದು.

ಇತ್ತೀಚೆಗೆ ಯುದ್ಧ ಸಮಯದಿಂದ ಇಂದಿನ ವರೆಗೆ ಎಷ್ಟೋ ಬಡವರು ಶ್ರೀಮಂತರಾಗಿಯೂ, ಎಷ್ಟೊ ಧನಿಕರು ಬಡವರ ಸ್ಥಾನವನ್ನೂ ಆಕ್ರಮಿಸಿರುವರು. ಅಂದಮೇಲೆ ಇಂದಿಗೆ ನಾವು ಬಡವರಾಗಿರುವಾಗ ಧನಿಕರ ಕಾಲೇಜನ್ನು ಕಿತ್ತಿಕ್ಕಲು ಹವಣಿಸುತಿದ್ದರೆ, ನಾಳೆ ನಮ್ಮ ಮಕ್ಕಳು ಒಂದೊಂದು ಸಿರಿವಂತರಾದರೆ ಅವರು M. B. B. S. ಆಗಲು ಬೇರೆ ಬೇರೆ ಜಿಲ್ಲೆಗಳನ್ನು ಸುತ್ತಬೇಕಾಗುವುದು. ಆದುದರಿಂದ ಇಂದಿನ ಧನಿಕರ ಕಾಲೇಜು ನಾಳೆ ಬಡಮಕ್ಕಳ ಪ್ರಯೋಜನಕ್ಕೂ ಬೀಳಬಹುದು.

ಆದುದರಿಂದ ನಾವು ಕಸ್ತೂರಿಬಾ ಮೆಡಿಕಲ್ ಕಾಲೇಜಿಗೆ ವಿರುದ್ಧವಾಗದೆ ಅದರ ಉನ್ನತಿಯನ್ನು ಬಯಸಿ, ಡಾಕ್ಟರ್ ಮಾಧವ ಪೈಗಳಿಗೆ ಇನ್ನೂ ಹೆಚ್ಚಿನ ಬೆಂಬಲವನ್ನು ಕೊಟ್ಟು ನಮ್ಮ ಜಿಲ್ಲೆಯಲ್ಲಿ ಇಂತಹ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಿಸಬೇಕು. ಇಂದಿಗೆ ಈ ಕಾಲೇಜಿನ ಫಲವನ್ನು ಸಿರಿವಂತ ಮಕ್ಕಳುಂಡರೂ ಒಂದಾದರೂ ಅವರ ಕೈತಪ್ಪಿ ಬಿದ್ದ ಹಣ್ಣು ನಮ್ಮಂತಹ ಬಡ ಮಕ್ಕಳಿಗೆ ಸಿಕ್ಕಬಹುದು ಖಂಡಿತ. ಸುಮ್ಮನೆ ನಮ್ಮ ನಮ್ಮೊಳಗೆ ಜಗಳವಾಡಿ, ಮರವೇ ನಾಶವಾಯಿತೆಂದರೆ ನಮಗೂ ಇಲ್ಲ, ಅವರಿಗೂ ಇಲ್ಲದಂತಾದೀತು. ಯಾವುದಾದರೊಂದು ವಿಷಯದ ಕುರಿತು ಟೀಕೆಮಾಡುವ ಮೊದಲು ಆ ವಿಷಯದ ಮಹತ್ವವನ್ನು ತಿಳಿಯಲು ಪ್ರಯತ್ನಿಸಬೇಕು. ಕಾರ್ಯವು ಕೈಕೂಡಬೇಕಾದರೆ ಪ್ರಯತ್ನವು ಎಷ್ಟು ತಗಲಿರಬಹುದೆಂಬುವುದನ್ನು ಸ್ವಲ್ಪವಾದರೂ ಆಲೋಚಿಸಬೇಕು. ಬರೇ ಬಹಿರಂಗದಲ್ಲಿ ದೊಡ್ಡ ದೊಡ್ಡ ಭಾಷಣಗಳ ಸುರಿಮಳೆ ಸುರಿಸಿ ಅಥವಾ ವಾರ್ತಾ ಪತ್ರಿಕೆಗಳಲ್ಲಿ ಉದ್ದ ಉದ್ದದ ಲೇಖನಿಗಳನ್ನು ಬರೆದಮಾತ್ರಕ್ಕೆ ಅಂತಹ ಕಾರ್ಯವು ಮಾಡಿದಂತಾಗದು. ಬಡವರ ಸೇವೆ ಯಾರಿಗಾದರೂ ಮಾಡಬೇಕೆಂಬ ಬಯಕೆ ಇದ್ದರೆ ಅವರು ಈ ತರದ ಸೇವೆಗಳನ್ನು ಸಲ್ಲಿಸುವುದಲ್ಲ. ಇತರರ ಕೈಯಲ್ಲಿದ್ದ ರೊಟ್ಟಿಯನ್ನು ನಾವು ಕಿತ್ತುಕೊಳ್ಳಲು ಕಲಿಯುವುದಲ್ಲ, ಅವರ ಕೈಯೊಳಗೆ ಆ ರೊಟ್ಟಿಯು ಹೇಗೆ ಬಂತು, ಯಾವ ರೀತಿಯಿಂದ ಅವರು ರೊಟ್ಟಿ ಗಳಿಸಿದರು, ನಮ್ಮ ಕೈಯಲ್ಲಿ ಇಲ್ಲದಿರಲು ಕಾರಣವೇನಿರಬಹುದೆಂಬುದನ್ನು ಆಲೋಚಿಸುವುದು ಅಗತ್ಯ.

ನಮ್ಮ ಕೈಯಲ್ಲಿ ರೊಟ್ಟಿ ಇಲ್ಲದಿರಲು, ನಮ್ಮಲ್ಲಿರುವ ಕೆಟ್ಟ ಸ್ವಭಾವವೆಂಬುವುದನ್ನು ದಲಿತರ ಸೇವೆ ಮಾಡಲು ಹೊರಟವರು ಮೊದಲು ದಲಿತರಿಗೆ ಕಲಿಸಬೇಕಷ್ಟೆ. ಅದಲ್ಲದೆ ದಲಿತರ ಸೇವೆ ಮಾಡುವವರೂ ದಾರಿದ್ರ್ಯವೇ ಆಗಬೇಕು ಹೊರತು ಧನಿಕರಲ್ಲ. ಧನಿಕರನ್ನು ಮಾತಿನಲ್ಲೇ ಬಡವರ ಸೇವೆ! ಮನಸ್ಸಿನಲ್ಲಿ ತನ್ನ ಸೇವೆ! ಅಂದರೆ ಬಡವರ ಹೆಸರಿನಲ್ಲಿ ಮತವೊಂದು ಸೀಟುಗಳಿಸಲು ಎಣಿಸುವರು, ಸೀಟು ಸಿಕ್ಕಿದನಂತರ ಬಡವರ ಗುರುತಿಲ್ಲ, ಅಗತ್ಯವೂ ಇಲ್ಲ.

ಇಂದಿನ ತನಕ ಅದೆಷ್ಟೋ ಸ್ವಾರ್ಥಿ ಬಡವರ ಭಕ್ತರು ಬಡಜನಸೇವೆ ಸಲ್ಲಿಸಿ, ಈಗ ಪಾರ್ಲಿಮೆಂಟಿನಲ್ಲಿ ಕುರ್ಚಿಯ ಸೇವೆ ಮಾಡುತ್ತಿದ್ದಾರೆ. ನಾವು ಬಡವರಾಗಲು ಅಥವಾ ಹಿಂದುಳಿಯಲು ಡಾ. ಮಾಧವ ಪೈಗಳು ಕಾರಣವಲ್ಲ; ಮತ್ತಿತರರೂ ಅಲ್ಲ. ಇದಕ್ಕೆ ಕಾರಣ ನಮ್ಮ ಅದೃಷ್ಟ ಮತ್ತು ನಮ್ಮಲ್ಲಿರುವ ಕೆಲವು ಕೆಟ್ಟ ಸ್ವಭಾವಗಳು. ಯಾವಾಗಿನಲ್ಲಿ ಮನ, ಬುದ್ಧಿಯು ಸ್ಥಿರವಿಲ್ಲವೋ? ಅತನಿಗೆ ದಾರಿದ್ರ್ಯವು ತಪ್ಪದು. ಆದುದರಿಂದ ನಾವು ಬಡವರು, ಹಿಂದುಳಿದವರು. ನಮ್ಮನ್ನು ನಾವೇ ಸುಧಾರಿಸಿಕೊಳ್ಳಬೇಕಲ್ಲದೆ, ಬೇರೆಯವರು ಮಾಡಿದ ಸೇವೆಯಿಂದ ನಾವು ಶ್ರೀಮಂತರಾಗಲಾರೆವು, ದಾರಿದ್ರ್ಯವು ನಮ್ಮ ಬೆಂಬಿಡದು. ಇದರಿಂದಾಗಿ ನಾವು ಮುಂದೆ ಹೋಗಲಾರೆವು. ಇದು ಖಂಡಿತ.

ನಮ್ಮಂತಹ ಬಡವರಿಗೆ ಕಸ್ತೂರಿಬಾ ಮೆಡಿಕಲ್ ಕಾಲೇಜಿನಲ್ಲಿ ಶಿಕ್ಷಣ ದೊರೆತರೆ ಒಳ್ಳೆದು, ದೊರೆಯದಿದ್ದರೆ ಅದಕ್ಕೆ ಬಹಿಷ್ಕಾರ ಹಾಕುವುದು ಹಿತವಲ್ಲ. ಅಲ್ಲದೆ ಡಾ. ಮಾಧವ ಪೈಗಳೊಡನೆ ಜಗಳವಾಡುವುದೂ ಅಲ್ಲ. ಶಾಂತಿಯಿಂದ, ಪ್ರೇಮದ ಮತ್ತು ಮೃದುನುಡಿಗಳಿಂದ ದಲಿತರ ಮೇಲೆ ಪ್ರೀತಿ ಹುಟ್ಟುವಂತೆ ಅವರ ಮನಸ್ಸನ್ನು ಸೆಳೆಯಬೇಕು; ಹೊರತು ಕ್ರಾಂತಿಯಿಂದಲ್ಲ. ಅದೂ ಅಲ್ಲದೆ ಬಡವರಾದ ನಾವು ವಿದ್ಯೆ ಕಲಿತು ಡಾಕ್ಟರರೇ ಆಗಬೇಕೆಂಬುವುದೇನೂ ಇಲ್ಲ, ಬೇರೆ ಎಷ್ಟೋ ತರದ ವಿದ್ಯೆಗಳು ಇವೆ. ಆದುದರಿಂದ ನನ್ನ ಬಡ ಅಣ್ಣ ತಮ್ಮಂದಿರಲ್ಲಿ ನನ್ನ ನಮ್ರ ವಿನಂತಿಯೇನೆಂದರೆ ಕಸ್ತೂರಿಬಾ ಮೆಡಿಕಲ್ ಕಾಲೇಜಿಗೂ, ಡಾ. ಮಾಧವ ಪೈಗಳಿಗೂ ಆಶೀರ್ವಾದ ಕೊಟ್ಟು, ಪೈಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲು ಮುಂದಾಗಬೇಕೆಂಬುದೇ, ಒಂದೊಮ್ಮೆ ಡಾ. ಮಾಧವ ಪೈಗಳಲ್ಲಿ ವೈರತ್ವವಿದ್ದರೆ ಬೇರೆ ನೆವದಿಂದ ಜಗಳವಾಡಬಹುದು, ವೈರತ್ವಕ್ಕೆ ಕಸ್ತೂರಿಬಾ ಮೆಡಿಕಲ್ ಕಾಲೇಜೇ ಕಾರಣವಾದರೆ ಇನ್ನು ಮುಂದೆ ಜಿಲ್ಲೆಯಲ್ಲಿ ಯಾರಾದರೂ ಇಂತಹ ಒಳ್ಳೆಯ ಕಾರ್ಯಕ್ಕೆ ಕೈಹಾಕುವ ಮನಸ್ಸು ಮಾಡುವವರಿದ್ದರೆ, ಈ ಪ್ರಕರಣವನ್ನು ನೋಡಿ ಒಳ್ಳೆಯ ಪಾಠ ಕಲಿತು ಹಿಂಜರಿಯದಿರರು.

ನಮ್ಮ ಜಿಲ್ಲೆಯವರ ಒಂದು ದುರ್ಗುಣವೆಂದರೆ ತಾವಾಗಿ ಮಾಡಲಾರರು, ಬೇರೆಯವರನ್ನು ಮಾಡಲು ಬಿಡರು, "Dog in the manger" ಎಂಬಂತೆ, ತಾನಾಗಿ ತಿನ್ನುವುದೂ ಇಲ್ಲ ಹಸಿವೆಯಿಂದ ನರಳುತ್ತಿರುವವರನ್ನು ತಿನ್ನಲು ಬಿಡುವುದೂ ಇಲ್ಲ. ಎಂದಿನ ವರೆಗೆ ನಮ್ಮ ದ. ಕನ್ನಡದವರು ಇಂತಹ ಮತ್ಸರ, ಕಚ್ಚಾಟವನ್ನು ಬಿಡುವುದಿಲ್ಲವೋ, ಅಂದಿನವರೆಗೆ ನಮ್ಮ ಜಿಲ್ಲೆಯು ಪ್ರಗತಿಮಾರ್ಗದ ಮುನ್ನ ಹೆಜ್ಜೆ ಇಡದು. ಆದುದರಿಂದ ದ. ಕನ್ನಡಿಗರೇ! ಧನಿಕ ದಲಿತ, ಜಾತಿ ನೀತಿಗಳೆಂಬ ಭೇದಭಾವಗಳನ್ನು ಕಿತ್ತೊಗೆದು ಒಂದೇ ತಾಯಿ ಮಕ್ಕಳಂತೆ ಒಮ್ಮನಸ್ಸಿನಿಂದಿದ್ದು ನಮ್ಮ ಜಿಲ್ಲೆಯ, ಉನ್ನತಿಗಾಗಿ ಸದಾ ದುಡಿಯುತ್ತಿರೋಣವೇ?

ಇತಿ ಬಡವರ ಬಂಧು,

ಎಂ. ಕೆ. ಶೆಟ್ಟಿ,

(Reporter)

The Hindustan Spg & Wvg Mills Ltd.
Jacob Circle, Bombay No 11
BOMBAY.

ನೇಶನಲ್ ರೇಡಿಯೋ ಎಂಡ್ ಇಲೆಕ್ಟ್ರಿಕ್

(ಮರ್ಫಿ ರೇಡಿಯೋದ ಅಧಿಕೃತ ಮಾರಾಟಗಾರರು)

ಮು. ಬಸ್‌ಸ್ಟಾಂಡಿನ ಎದುರು, ಉಡುಪಿ.

ಎಲ್ಲಾ ತರದ ಹೊಸ ಮತ್ತು ಉಪಯೋಗಿಸಿದ ರೇಡಿಯೋಗಳನ್ನು ಒದಗಿಸಿಕೊಡಲಾಗುವುದು. ಸರ್ವವಿಧದ ಇಲೆಕ್ಟ್ರಿಕ್ ಸಾಮಾನುಗಳು ಮಾರಾಟಕ್ಕೆ ಸದಾಸಿದ್ಧ ಇರುವುವು. ರೇಡಿಯೋ ರಿಪೇರಿ, ಮನೆ ಮತ್ತು ಕೈಗಾರಿಕೆಗಳಿಗೆ ಇಲೆಕ್ಟ್ರಿಕ್ ವಯರಿಂಗ್ ಮಾಡುವುದು ನಮ್ಮ ವೈಶಿಷ್ಟ್ಯ. ಮದುವೆ, ಸಭೆ ಮೊದಲಾದ ಸಮಾರಂಭಗಳಿಗೆ ಅತಿಕಡಿಮೆ ಬಾಡಿಗೆಯಲ್ಲಿ ತಾತ್ಕಾಲಿಕ ವಿದ್ಯುದ್ದೀಪದ ಮತ್ತು ಲೌಡ್‌ಸ್ಪೀಕರಿನ ವ್ಯವಸ್ಥೆ ಮಾಡಿಕೊಡಲಾಗುವುದು. ● ಒಮ್ಮೆ ನಮ್ಮ ಶೋರೂಮನ್ನು ಸಂದರ್ಶಿಸಿ

ಕೆ. ಸಿ. ಹೆಗ್ಡೆ, ಮ್ಯಾನೇಜರ್.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ದುಡಿಯುವ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮದ್ರಾಸ್, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಾತೃವರರಸಾಯನ.

ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಹುಳುಕು ಹಲ್ಲು

ಡಾ| ಎಂ. ಗೋಪಾಲಕೃಷ್ಣರಾವ್, "ಕಲಿಯುಗ" ಸಂಪಾದಕರು.

ಆಧುನಿಕ ವಿಜ್ಞಾನವು ಮನುಷ್ಯನಿಗೆ ಅಸಂಖ್ಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದೆ. ಪ್ರಕೃತಿಯ ಅನೇಕ ಮರ್ಮಗಳನ್ನು ಬಿಚ್ಚಿ ತೋರಿಸಿದೆ. ಅದಕ್ಕಾಗಿಯೆ ಮಾನವನು ವಿಜ್ಞಾನವನ್ನು ಇಂದು ಪ್ರತಿಬ್ರಹ್ಮನ ಪಟ್ಟಕ್ಕೆ ಏರಿಸಿದ್ದಾನೆ. ತನ್ನ ಬಾಳಿನ ಅಥವಾ ವಿಶ್ವದ ಯಾವೊಂದು ಗುಟ್ಟು ತಿಳಿಯದಿದ್ದರೂ ಅವನು ವಿಜ್ಞಾನದ ಮುಖವನ್ನು ಭಕ್ತಿಯಿಂದ ನಿಟ್ಟಿಸುತ್ತಾನೆ. ಪರಿಣಾಮವೆಂದರೆ ಯಾವುದೇ ಸಮಸ್ಯೆಯ ಬಗ್ಗೆ "ಇದು ಹೀಗೆಯೆ ಸರಿ" ಎಂದು ತೀರ್ಪುಕೊಡುವ ಪುರಾತನ ಧರ್ಮಶಾಸ್ತ್ರಗಳ ಪಕ್ಷವನ್ನು ಇಂದು ವಿಜ್ಞಾನವು ಕಸಿದುಕೊಂಡಂತೆ ತೋರುತ್ತಿದೆ.

ಹಾಗೆಂದರೆ ಜೀವನದ ಅಥವಾ ವಿಶ್ವದ ಸಕಲ ಸಂಭವಗಳನ್ನೂ ವಿಜ್ಞಾನವು ತನ್ನ ತರ್ಕದಿಂದ ಸುಲಿದು ತೋರಿಸಬಲ್ಲದೆಂದು ಭಾವಿಸಲಾಗದು. ವಿಜ್ಞಾನದ ಪಾತಾಳ ಯಂತ್ರಕ್ಕೂ ಸಿಲುಕದ ಅಸಂಖ್ಯ ಗುಟ್ಟುಗಳು ಇನ್ನೂ ವಿಶ್ವಗರ್ಭದಲ್ಲಿ ಅಡಗಿವೆ. ಮತ್ತೆ ಪ್ರಾಮಾಣಿಕ ವಿಜ್ಞಾನಿಗಳು ವಿಜ್ಞಾನದ ಆ ನಿರುಪಾಯತೆಯನ್ನು ವಿನಯದಿಂದ ಒಪ್ಪುತ್ತಲೂ ಇದ್ದಾರೆ. ಆದರೆ ವಿಜ್ಞಾನದ ಸಾರ್ವಭೌಮತೆಯ ಸೋಗಿನಿಂದ ಸ್ವಾರ್ಥವನ್ನು ಸಾಧಿಸುವವರ ಸಂಖ್ಯೆ ಮಾತ್ರ ದಿನ ದಿನವೂ ಬೆಳೆಯುತ್ತಿದೆ.

ಸ್ವಾರ್ಥಿಗಳು ತಮ್ಮ ಕೈಜೋಳಿಗೆಗೆ ವಿಜ್ಞಾನದ ಅಕ್ಷಯಪಾತ್ರದ ಬಣ್ಣ ಬಳಿದು ವಿಜ್ಞಾನಭಕ್ತರ ಭಂಡಾರವನ್ನು ಸುಲಿಯುತ್ತಿದ್ದಾರೆ. ಆ ವ್ಯವಸಾಯವು ಮಿಕ್ಕೆಲ್ಲ ಕ್ಷೇತ್ರಗಳಿಗಿಂತ ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚಾಗಿ ಮೆರೆಯುತ್ತಿದೆ. ಒಂದೊಂದು ರೋಗಕ್ಕೆ ಸಾವಿರಾರು ಮದ್ದುಗಳು; ಮತ್ತೆ ಅವೆಲ್ಲವೂ ರಾಮಬಾಣಗಳೇ. ಪ್ರತಿಯೊಂದು ಮದ್ದಿನ ಜಾಹಿರಾತಿನಲ್ಲಿಯೂ ವಿಟಮಿನ್, ಕ್ಯಾಲ್ಸಿಯಂ, ಹಾರ್ಮೋನ್, ಕ್ಲೋರೋಫಿಲ್‌ಗಳ ಕುಭನಾಮದ ಸಹಸ್ರ ಜಪವಿದ್ದೇ ಇರುವುದು. ಪ್ರತಿಯೊಂದು ವಾಕ್ಯಕ್ಕೂ ಪ್ರಸಿದ್ಧ ವಿಜ್ಞಾನಿಯೊಬ್ಬನ ಅಭಿಪ್ರಾಯದ ಸಮರ್ಥನೆಯನ್ನು ಜೋಡಿಸುವುದು. ವಿಜ್ಞಾನದ ಮೋಹದಿಂದ ಶತಮಾನಪೂರ್ವದ ಶಾಸ್ತ್ರಗಳನ್ನೂ ಮರೆಯುತ್ತಿರುವ ಮನುಷ್ಯನು ವಿಜ್ಞಾನದ ಭಾಷೆಯಲ್ಲಿಯೆ ಬರೆಯಲ್ಪಟ್ಟ "ಬೋಳು ತಲೆಗೆ ಭೂತಕೇಶವಾಗಿಸುವ ಹೇರ್ ಆಯಿಲ್" 'ಬಚ್ಚಬಾಯಿಗೆ ವಜ್ರದಂತಗಳಾಗಿಸುವ ಟೂತ್ ಪೇಸ್ಟ್" "ಉಸಿರು ಹಾರಿದರೂ ಕಸುವನ್ನೇರಿಸುವ ಟಾನಿಕ್" ನಂಬಿ ಬಕ್ಕಣ ರೊಕ್ಕವನ್ನು ಸೂರೆಗೈಯುವುದರಲ್ಲಿ ಸಂದೇಹವೇ ಇಲ್ಲ.

ಆದ್ದರಿಂದಲೇ "ವಿಜ್ಞಾನದ ಕಿರುಚಾಟದಲ್ಲಿ ಯಾವಾಗಲೂ ಸತ್—ಜ್ಞಾನವೇ ಇರುವುದೆಂದು ನಂಬಬೇಡಿ" ಎಂದು ಎಚ್ಚರಿಸುವ ಕಾಲ ಬಂದಿದೆ. ಹುಳುಕುಹಲ್ಲಿನ ಕಾರಣ, ಚಿಕಿತ್ಸೆಗಳ ಬಗೆಗೂ ವಿಜ್ಞಾನ ಭ್ರಾಂತಿ ಎಷ್ಟು ಪ್ರಚುರವಾಗಿದೆಯೆಂಬುದನ್ನು ವಿವೇಚಿಸಲು ಪ್ರಸ್ತಾವನೆಯೆಂದು ಇಷ್ಟು ಬರೆಯಬೇಕಾಯಿತು. ಏಕೆಂದರೆ ವಿಜ್ಞಾನವೆಂದು ತಿಳಿಯಲ್ಪಟ್ಟ ಕೆಲವು ವಿಷಯಗಳನ್ನು ಒಮ್ಮೆಲೆ ಖಂಡಿಸಿ ಬಿಟ್ಟರೆ ಲೇಖಕನನ್ನು ಒಬ್ಬ ಕಗ್ಗನೆಂದಾಗಿ ಕಲ್ಪಿಸುವುದೊಂದು, ಈಗ ಸುಶಿಕ್ಷಿತರ (?) ವಾಡಿಕೆಯೆ ಆಗಿದೆ.

ಈಗ ಹುಳುಕು ಹಲ್ಲಿಗೆ ಕಾರಣವೇನು, ಎಂಬುದನ್ನು ನೋಡುವಾ. ಬಹುತರ ದಂತವೈದ್ಯರು ಪುಷ್ಟಿರಹಿತ ಆಹಾರ (Poor diet) ವೇ ಹುಳುಕು ಹಲ್ಲಿಗೆ ಕಾರಣವೆಂದು ಹೇಳುತ್ತಾರೆ. ಮತ್ತವರ ಮಾತನ್ನು ಶುದ್ಧ ವಿಜ್ಞಾನವೆಂದು ನಾವೆಲ್ಲರೂ ನುಂಗಿಬಿಡುತ್ತೇವೆ. ಆದರೂ ಈಗ ಆ ಅಭಿಪ್ರಾಯವನ್ನು ಕೊಂಚ ಅನುಭವದ ಒರೆಗಲ್ಲಿಗೆ ತಿಕ್ಕಿ ನೋಡೋಣವೇ! ಅಮೆರಿಕೆಯು ಸಿರಿವಂತರ ನಾಡಷ್ಟೆ? ಮತ್ತು ಜಗತ್ತಿನಲ್ಲಿಂದು ಜೀವನದ ಮಟ್ಟವು ಅಮೇರಿಕೆಯಲ್ಲಿ ಅತ್ಯುಚ್ಚ ಸ್ತರದಲ್ಲಿದೆಯೆಂಬುದೂ ನಮಗೆ ಗೊತ್ತಿದೆ. ಆದ್ದರಿಂದ ಅಮೆರಿಕನರ ಆಹಾರದಲ್ಲಿ ತುಂಬ ಪೌಷ್ಟಿಕಾಂಶಗಳಿವೆಯೆಂದು ಒಪ್ಪಬೇಕು. ಆದರೆ ದುರ್ದೈವದಿಂದ ಅಮೆರಿಕನರಲ್ಲಿ ಇರುವಷ್ಟು ಹುಳುಕು ಹಲ್ಲುಗಳು ಬಡ ದೇಶವಾದ ಭಾರತದಲ್ಲಿ ಇಲ್ಲವೆಂದು ಡಾ| ಜೆ ಡಿ. ರ್‍ಯಾಟ್‌ಕ್ಲಿಫ್ ಹೇಳುತ್ತಾರೆ. ಮತ್ತೆ ಜಾಗತಿಕ ಆರೋಗ್ಯ ಸಂಸ್ಥೆಯವರು ತಮ್ಮ ಪತ್ರಿಕೆಯಲ್ಲಿ, ಹೀರ ಕಡಿಮೆ ಪೌಷ್ಟಿಕಾಂಶವುಳ್ಳ ಆಹಾರವು ಭಾರತದ ಹಳ್ಳಿಗರದು ಎಂದು ಬರೆಯುತ್ತಾರೆ. ಅದಕ್ಕಾಗಿಯೆ ಔದಾರ್ಯದಿಂದ ಅಮೆರಿಕೆಯು ಕೋಟ್ಯಾವಧಿ ಪೌಷ್ಟಿಕ ಮಾತ್ರೆಗಳನ್ನು ಬಾಲ ವಿದ್ಯಾರ್ಥಿಗಳಲ್ಲಿ ಹಂಚಲು ಕಳಿಸುತ್ತಿದ್ದಾರೆ. ಎಂದರೆ ತಮ್ಮಲ್ಲಿ ಹುಳುಕು ಹಲ್ಲುಗಳನ್ನಿಟ್ಟುಕೊಂಡು ನಮ್ಮ ಹಲ್ಲು ಬೆಳಗಲಿಕ್ಕೆ ಬಂದಿದ್ದಾರೆ.

ಬರಿಯ ಧಾನ್ಯಗಳ ಮೃದು ಆಹಾರ (Soft diet) ಸೇವಿಸುವುದರಿಂದ ಹುಳುಕು ಹಲ್ಲುಗಳಾಗುತ್ತವೆಯೆಂಬುದು ವಿಜ್ಞಾನದ ಮತ್ತೊಂದು ಉಪದೇಶ. ಭಾರತೀಯರ ತೀರ ಸಾಮಾನ್ಯವಾದ ಆಹಾರವೆಂದರೆ ಅನ್ನವೇ ಆಗಿದೆ. ಪೊಲಿನೇಶಿಯದಲ್ಲಿ ಬರಿ ಮಾಂಸ ಮತ್ತು ರೊಟ್ಟಿಯ ಹಣ್ಣುಗಳನ್ನು ಸೇವಿಸುತ್ತಾರೆ. ಮಾಂಸ ರೊಟ್ಟಿಗಳು ಇಲ್ಲವೇ ಇಲ್ಲವೆನ್ನಬಹುದು. ಆದರೂ ಈ ಎರಡೂ ದೇಶಗಳಲ್ಲಿ ಜನರ ಹಲ್ಲಿಗೆ ಹುಳವೇಕೆ ಹಿಡಿಯುವುದಿಲ್ಲ! ವಿಜ್ಞಾನಿಗಳು ಉತ್ತರಿಸುವರೇ?

ಆಧುನಿಕ ನಾಗರಿಕತೆಯು ಬೆಳೆದಂತೆ ಸಕ್ಕರೆಯ ಸೇವನವು ಹೆಚ್ಚಾಗಿದೆ. ಸಿಹಿ ಪದಾರ್ಥಗಳ ಸೇವನದಿಂದಲೆ ಹಲ್ಲುಗಳು ಹುಳುಕಾಗುತ್ತವೆ, ಎಂಬುದು ಇನ್ನೊಂದು ವೈಜ್ಞಾನಿಕ ಮತ. ಈಗ ನೋಡಿ, ಭಾರತೀಯರು ನೂರಾರು ಶತಮಾನಗಳಿಂದ ಬೆಲ್ಲವನ್ನು ಸೇವಿಸುತ್ತಿದ್ದಾರೆ. ವೆಸ್ಟ್ ಇಂಡೀಜ್ ದ್ವೀಪ ವಾಸಿಗಳಲ್ಲಿ ಬಡವರು ವರ್ಷದಲ್ಲಿ ಮೂರು ನಾಲ್ಕು ತಿಂಗಳು ಕಬ್ಬುಗಳನ್ನು ತಿಂದೇ ಜೀವಿಸುತ್ತಾರೆ. ಆದರೂ ಇಂಗ್ಲಂಡ್, ಅಮೆರಿಕ, ಕೆನಡಾಗಳಲ್ಲಿಗಿಂತ ಭಾರತ ಮತ್ತು ವೆಸ್ಟ್ ಇಂಡೀಜ್‌ನಲ್ಲಿ ಹುಳುಕು ಹಲ್ಲು ಏಕೆ ಕಡಿಮೆ?

ಮುಖ ನೈರ್ಮಲ್ಯವು ಸರಿಯಾಗಿಲ್ಲದಿದ್ದರೆ ಹಲ್ಲುಗಳಿಗೆ ಹುಳ ಹಿಡಿಯುವುದೆಂಬುದು ಇನ್ನೊಂದು ವಿಜ್ಞಾನದ ಜಾಣ ನುಡಿಯಾಗಿದೆ. ಬೆಳಿಗ್ಗೆ ಮತ್ತು ಊಟ ಮಾಡಿದ ನಂತರ ಹಲ್ಲುಗಳನ್ನು ತಿಕ್ಕುವ ವಿಧಿಯನ್ನು ಭಾರತೀಯರಿಂದಲೆ ಪಾಶ್ಚಾತ್ಯರು ಕಲಿತಿರುವರೆಂಬುದು ಐತಿಹಾಸಿಕ ಸತ್ಯವಾಗಿದೆ. ಆದರೂ ಈಗಲೂ ಆಹಾರ ಸೇವನದ ಅನಂತರ ಮದ್ಯ ಸೇವಿಸಿ ಕರವಸ್ತ್ರದಿಂದ ಬಾಯಿಯನ್ನು ಒರೆಸುವ ಹೊರತಾಗಿ ಹೆಚ್ಚಿನ ಮುಖ ಶುದ್ಧಿಯನ್ನು ಪಾಶ್ಚಿಮಾತ್ಯರು ಮಾಡಿಕೊಳ್ಳುತ್ತಿಲ್ಲ. ಆದ್ದರಿಂದಲೆ ತಮ್ಮ ದೇಶಗಳಲ್ಲಿ ಪ್ರಚುರವಾದ ಹುಳುಕು ಹಲ್ಲಿಗೆ ಮುಖ ಶುದ್ಧಿಯ ಅಭಾವವೇ ಕಾರಣವೆಂಬ ವಿಜ್ಞಾನವನ್ನು ಅವರು ಸಾರುತ್ತಿರಬಹುದು. ಆದರೆ ಸಾಮೋವಾ ದ್ವೀಪದ ಸುಂದರಿಯರಾಗಲಿ ಎಸ್ಕಿಮೋ ಜನಾಂಗದವರಾಗಲಿ ಬಾಯಿಯನ್ನು ತೊಳೆದುಕೊಳ್ಳುವ ವಾಡಿಕೆಯನ್ನಿಟ್ಟುಕೊಂಡಿಲ್ಲ. ಅವರಲ್ಲಿಯೂ ಹುಳುಕು ಹಲ್ಲಿನ ಪ್ರಸಾದವಿಲ್ಲವೆಂಬುದು ಅಚ್ಚರಿಯಲ್ಲವೇ? ಮತ್ತೆ ಮುಖ ಶುದ್ಧಿಗೆ ಕೊಂಚವೂ ಗಮನ ಕೊಡದಿರುವ ದಕ್ಷಿಣ ಆಫ್ರಿಕದ ಬುಶ್‌ಮನ್ನರ ಹಲ್ಲುಗಳು ಇತರ ಎಲ್ಲಾ ಜನಾಂಗದವರ ಹಲ್ಲುಗಳಿಗಿಂತ ದೃಢಿಷ್ಠವಾಗಿರುವವು. ಅಲ್ಲದೆ ಮನುಷ್ಯ ಜಾತಿಗೆ ಸಮೀಪಸ್ಥವಾದ ಗೊರಿಲ್ಲಾ, ಚಿಂಪಾಂಜಿ ಮುಂತಾದ ಮಂಗ ಜಾತಿಗಳೆಂದಾದರೂ ದಂತ ಮಂಜನವನ್ನು ಉಪಯೋಗಿಸುವವೇ? ಆದರೂ ಅವುಗಳ ಹಲ್ಲುಗಳಿಗೆ ಹುಳು ಹಿಡಿಯುವುದಿಲ್ಲ.

ವಿಟಮಿನ್ಸ್, ಹಾಲು ತೊಪ್ಪಲ ಪಲ್ಯಗಳನ್ನು ವಿಪುಲವಾಗಿ ಸೇವಿಸುವವರ ಹಲ್ಲಿಗೆ ಹುಳು ಹತ್ತದು ಎಂದು ಡಾಕ್ಟರರು ಹೇಳುವುದುಂಟು. ಆದರೆ ಆ ಮೂರು ವರ್ಗದ ಆಹಾರಗಳನ್ನು ಸಿರಿವಂತ ರಾಷ್ಟ್ರಗಳೇ ಭಾರತೀಯರಿಗಿಂತ ಹೆಚ್ಚಾಗಿ ಸೇವಿಸುವವೆಂಬುದು ಸುತ್ಯ ಸಂಗತಿಯಾದರೂ ಆ ಪಾಶ್ಚಾತ್ಯರಲ್ಲಿಯೆ ಹುಳುಕು ಹಲ್ಲು ಹೆಚ್ಚೇಕೆಂಬುದನ್ನು ಡಾಕ್ಟರರು ಯೋಚಿಸುವುದೇ ಇಲ್ಲ. ಭಾರತದಲ್ಲಿಯೆ ನೋಡಿದರೂ ಹಾಲು, ಹಣ್ಣು, ವಿಟಮಿನ್‌ಗಳನ್ನು ಬಡವರಿಗಿಂತ ಸಿರಿವಂತರೇ ಹೆಚ್ಚಾಗಿ ಸೇವಿಸುವರಷ್ಟೆ? ಭಾರತೀಯ ಹಳ್ಳಿಗರಲ್ಲಿ ಮುಕ್ಕಾಲು ಪಾಲು ಜನ ಗಂಜಿರೊಟ್ಟಿ, ಎಂಜಿ ಮೆಣಸಿನಕಾಯಿ, ಬೆಲ್ಲ, ನೀರುಳ್ಳಿ, ಬೆಳ್ಳುಳ್ಳಿಗಳನ್ನಷ್ಟೇ ಸೇವಿಸುತ್ತಾರೆ. ಆದರೂ ಹುಳುಕು ಹಲ್ಲು, ಸಡಿಲಾದ ಹಲ್ಲು, ಬಿದ್ದ ಹಲ್ಲುಗಳ ಸೌಂದರ್ಯವು ಸಿರಿವಂತರಲ್ಲಿಯೇ ಹೆಚ್ಚೆಂಬುದು ದಂತ ವೈದ್ಯರ ಅನುಭವವಾಗಿದೆ. ಮತ್ತೆ ಕರಿಬೂದಿ, ಇದ್ದಿಲು, ಬೇವಿನ ಕಡ್ಡಿಗಳಿಂದ ಹಲ್ಲು ಬೆಳಗುವ ಬಡವರಿಗಿಂತ ದಂತಮಂಜನ, ಟೂತ್‌ಪೇಸ್ಟ್, ಬ್ರಶ್‌ಗಳನ್ನು ಉಪಯೋಗಿಸುವವರ ಹಲ್ಲುಗಳೇ ಬೇಗನೆ ಬಿದ್ದು ಹೋಗುವವೆಂದು ಜಗತ್ಪ್ರಸಿದ್ಧ ನಿಸರ್ಗೋಪಚಾರಿಯಾಗಿರುವ ಬರ್ನಾರ್ ಮೆಕ್ ಫೆಡನ್ ಹೇಳುತ್ತಾನೆ.

ಇಷ್ಟೆಲ್ಲವನ್ನೂ ಬರೆದ ನನ್ನನ್ನೇ "ಹುಳುಕು ಹಲ್ಲಿಗೆ ಕಾರಣವೇನು?" ಎಂದು ವಾಚಕರು ಕೇಳಿದರೆ ನನಗೆ ಗೊತ್ತಿಲ್ಲವೆನ್ನುವುದರಲ್ಲಿಯೇ ಹೆಮ್ಮೆ ಪಡುತ್ತೇನೆ. ವಿಜ್ಞಾನದ ವೇಷದಲ್ಲಿ ಸುಳ್ಳಿನ ಪ್ರಚಾರ ಮಾಡುವುದಕ್ಕಿಂತ ಅಜ್ಞಾನವೇ ಲೇಸು. ವಿಜ್ಞಾನವನ್ನು ನಂಬಿ ಹಲ್ಲಿನ ಭದ್ರತೆಗೆಂದು ವಿಟಮಿನ್, ಟೂತ್ ಪೇಸ್ಟ್, ಕ್ಯಾಲ್ಸಿಯಂವುಡ್‌ಗಳನ್ನು ಕೊಂಡುಕೊಳ್ಳುವ ಹವ್ಯಾಸವನ್ನು ಪೋಲು ವೆಚ್ಚ ಮಾಡುವುದಾಗಲಿ, ಪರ ದೇಶಗಳಿಗೆ ಹರಿ ಬಿಡುವುದಾಗಲಿ ದಾಸ್ಯ ದ್ರೋಹ. ವಿಜ್ಞಾನವು ಅಂತಹ ಔಷಧ ಪ್ರಸಾಧನಗಳನ್ನು ತಯಾರಿಸುವ ಬಂಡವಾಳಿಗರ ಬಗಲುಗೂಸಾಗಿದೆಯೆಂಬುದು ತರ್ಕಯುಕ್ತವಾದ ಸೂಕ್ಷ್ಮ ಪರಿಶೀಲನೆಗೆ ತಿಳಿಯದಿರದು. ಆಯುರ್ವೇದ ಶಾಸ್ತ್ರವು ಹೇಳುವ ಆಹಾರ, ದಿನಚರ್ಯೆ, ಸಂಯಮಗಳನ್ನವಲಂಬಿಸಿ ಬೇವಿನ ಕಡ್ಡಿ, ಇದ್ದಿಲ ಪುಡಿಗಳನ್ನೇ ಮುಖನೈರ್ಮಲ್ಯಕ್ಕೆ ಉಪಯೋಗಿಸುತ್ತಿದ್ದರೆ ಹಲ್ಲುಗಳೂ ಭದ್ರವಾಗಿರುವವು; ಮುದ್ದೂ ಉಳಿಯುವುದು.

ಪ್ರಕಟಣೆ

ಕುಂದಾಪುರ ತಾಲೂಕು ನಂಬ್ರ 26ನೇ ಚಿತ್ತೂರು ಗ್ರಾಮದ ಶ್ರೀ ಮಾರ್ಣ ಕಟ್ಟೆ ಬ್ರಹ್ಮಲಿಂಗ ದೇವಸ್ಥಾನದ ಟ್ರಸ್ಟಿ ಚಿತ್ತೂರು ವೀರಣ್ಣ ಶೆಟ್ಟಿಯು ಈ ಮೂಲಕ ಸರ್ವ ಜನರಿಗೆ ತಿಳಿಯ ಪಡಿಸುವುದೇನೆಂದ್ರೆ ನನ್ನ ಆಡಳ್ತೆಗೆ ಒಳಪಟ್ಟ ಶ್ರೀ ಮಾರ್ಣ ಕಟ್ಟೆ ದೇವಸ್ಥಾನದ ದಶಾವತಾರ ಮೇಳವನ್ನು ಫಸಲಿಯಲ್ಲಿ ನಡಿಸಿಕೊಂಡು ಹೋಗಲು, ಯಾರು ಕೇಳುವವರ ಬೇಕಾಗಿದೆ. ಇದೇ ಬರುವ ಅಕ್ಟೋಬರ್ ತಾರೀಕು 25ನೇ ಆದಿತ್ಯವಾರ ಬೆ. ಘಂಟೆ 2ಕ್ಕೆ ನನ್ನ ತಮ್ಮ ಕುಂದಾಪುರ ಜವುಳಿ ಸಾಹುಕಾರ್ ಚಿತ್ತೂರು ಮಂಜಯ್ಯ ಶೆಟ್ರ ಜವುಳಿ ಅಂಗಡಿಯಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ. ಏಲಂನಲ್ಲಿ ಗೆದ್ದವರು ನ್ಯಾಯವಾದ ಜವಾಬ್ದಾರಿ ಕೊಡಲು ಅರ್ಹರಾಗಿರತಕ್ಕದ್ದು. ತಾ 30-9-1953.

ಹರೇಲ ವೀರಣ್ಣ ಶೆಟ್ಟಿ.
ಆಡಳಿತೆದಾರ್

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ

ತಾರಾನಾಥ ಆಯುರ್ವೇದ ಮಂದಿರ

ವಿಳಾಸ ಬದಲಾವಣೆ

ಮಂಗಳೂರಿನ ಪೆಂಸನಕಟ್ಟೆಯಲ್ಲಿದ್ದ ನಮ್ಮ "ತಾರಾನಾಥ ಆಯುರ್ವೇದ ಮಂದಿರ"ವು ಕೊಡಿಯಾಲಬೈಲಿನಲ್ಲಿ ನವಭಾರತ ಪ್ರೆಸ್ಸಿನ ಹತ್ತಿರದ ಕಟ್ಟಡಕ್ಕೆ ಸ್ಥಳಾಂತರಿಸಲ್ಪಟ್ಟಿದೆ. ಇನ್ನುಮುಂದೆ ರೋಗ ಚಿಕಿತ್ಸೆಗಾಗಿ ಬರುವವರು ಈ ಕೆಳಗಿನ ಹೊಸ ವಿಳಾಸಕ್ಕೇ ಬರಬೇಕು ಅಥವಾ ಬರೆಯಬೇಕೆಂದು ವಿನಂತಿ.

ಡಾ| ಎಂ. ಗೋಪಾಲಕೃಷ್ಣರಾವ್,
ತಾರಾನಾಥ ಆಯುರ್ವೇದ ಮಂದಿರ,
ಕೊಡಿಯಾಲಬೈಲು, ಪೋಸ್ಟ್—ಮಂಗಳೂರು, ನಂ. 3

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಚಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ|| **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Menstrual Stomach pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ—ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನು ಪುನರುಜ್ಜೀವನಗೊಳಿಸುತ್ತದೆ

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ.— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ ಪಿ. ಇಲ್ಲ. **ಕ್ಯಾಟಲಾಗ್ ಉಚಿತ.**
ಜವಾಬಿಗಾಗಿ 2 ಆಣೆ ಸ್ಟಾಂಪ್ ಕಳಿಸಿರಿ. ತಯಾರಕರು.—

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, **ಮೈಸೂರು.** (South India)

ಹಿಂದುಳಿದವರು, ಮುಂದ್ಪೋದವರು, ಬಡವರು ಮತ್ತು ಧನಿಕರು

ಮೇಲಿನ ವಿಷಯದ ಕುರಿತು ಇತ್ತೀಚೆಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಾದ ವಿವಾದಗಳೂ, ತರ್ಕ ವಿತರ್ಕಗಳೂ ನಡೆಯುತ್ತಿದ್ದು, ಇಂತಹ ವಿಷಯಗಳಿಗೆ ಹೆಚ್ಚು ಗಮನಕೊಡುವುದು ಕೆಲವು ಕನ್ನಡ ವಾರ್ತಾ ಪತ್ರಿಕೆಗಳಲ್ಲಿ ಕಂಡುಬರುತ್ತಿದೆ. ಇದನ್ನೆಲ್ಲಾ ಓದಿದಾಗ ಬಡ ಕನ್ನಡಿಗನಾದ ನನಗೂ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ಕೆಲವು ವಿಷಯಗಳು ನೆನಪಿಗೆ ಬಂದು ನನ್ನ ಲೇಖನಿಗೆ ಪ್ರೋತ್ಸಾಹ ಕೊಟ್ಟಿತು.

ಮೇಲಿನ ವಾದ ವಿವಾದಗಳಿಗೆ ಮುಖ್ಯ ಕಾರಣವೆಂದರೆ ಇತ್ತೀಚೆಗೆ ಉಡುಪಿಯಲ್ಲಿ ತೆರೆಲ್ಪಟ್ಟ ಕಸ್ತೂರಿಬಾ ಮೆಡಿಕಲ್ ಕಾಲೇಜೆಂದು ಸ್ಪಷ್ಟವಾಗಿ ತಿಳಿಯಬರುತ್ತದೆ. ಸಹಜವಾಗಿಯೂ ನಮ್ಮ ಜಿಲ್ಲೆಯಲ್ಲಿ ಇಂತಹದೊಂದು ಮಹತ್ವದ ಕಾರ್ಯವಾದುದಕ್ಕಾಗಿ ಈ ಜಿಲ್ಲೆಯ ಪ್ರತಿಯೊಬ್ಬನೂ ಹೆಮ್ಮೆಪಡಬೇಕಾದ ಮಾತು. ಅದಲ್ಲದೆ ನಮ್ಮ ಜಿಲ್ಲೆಯಲ್ಲಿ ಇಂತಹ ಕಾರ್ಯವನ್ನು ಸಾಧಿಸುವವರಿಗೆ ಪ್ರತಿಯೊಬ್ಬನೂ ಬೆಂಬಲವನ್ನೀಯಬೇಕಾದುದು ಅಗತ್ಯ, ವಿನಹ ಅಂಥವರಿಗೆ ಟೀಕೆಯ ಸುರಿಮಳೆಯನ್ನು ಸುರಿಸುವುದಲ್ಲ. ಈಗ ಕಸ್ತೂರಿಬಾ ಮೆಡಿಕಲ್ ಕಾಲೇಜ್ ಶ್ರೀಮಂತರ ಮಕ್ಕಳಿಗಾದರೂ ಅದರಿಂದ ನಮ್ಮಂತಹ ಬಡ ಮಕ್ಕಳಿಗೇನೂ ನಷ್ಟವಿಲ್ಲ, ಯಾ ದೋಷವಿಲ್ಲ. ಇನ್ನು ನಾವು ನಮಗಾಗಿ ಒಂದು ಗಾಂಧಿ ಮೆಡಿಕಲ್ ಕಾಲೇಜ್ ಮಾಡುವ ಪ್ರಯತ್ನದಲ್ಲಿರುವ. ಬೇರೆಯವರು ಮಾಡಿದ ವಿಷಯದ ಕುರಿತು ಟೀಕೆಮಾಡಿ ನಮ್ಮ ಅನೂಹ್ಯ ಸಮಯವನ್ನು ವೆಚ್ಚಗೊಳಿಸಿ ನಮ್ಮ ಜಿಲ್ಲೆಯ ಹಾನಿಮಾಡುವುದಲ್ಲ. ಈಗಿನ ಧೋರಣೆಯನ್ನೇ ನಾವು ಇಟ್ಟುಕೊಂಡಲ್ಲಿ ಇನ್ನು ಮುಂದೆ ನಮ್ಮ ದ. ಕನ್ನಡ ಜಿಲ್ಲೆಯಲ್ಲಿ ಯಾವುದೊಂದೂ ಮಹತ್ವದ ಕಾರ್ಯಕ್ಕೆ ಯಾರೂ ಕೈಹಾಕುವ ಹಾಗಿಲ್ಲ.

ಭಾರತವು ಸ್ವತಂತ್ರವಾಗಿ ಐದಾರು ವರ್ಷಗಳಾದವು. ಬೇರೆ ಬೇರೆ ಜಿಲ್ಲೆಗಳಲ್ಲಿ ಭಾರತವು ಪ್ರಗತಿಯ ಮಾರ್ಗಕ್ಕೆ ಸಾಗುತ್ತಿದ್ದರೂ ದ. ಕನ್ನಡ ಜಿಲ್ಲೆಯಲ್ಲಿ ಯಾವತರದ ಮಾರ್ಪಾಡೂ ಆಗಲಿಲ್ಲ. ಇದರ ಕಾರಣವೇನು! ನಮ್ಮ ನಮ್ಮೊಳಗೆ ಮತ್ಸರ, ಭೇದಭಾವ, ಕಚ್ಚಾಟಾದಿಗಳಿಂದ, ನಮ್ಮ ಜಿಲ್ಲೆಯ ಹಾನಿ ನಮ್ಮ ಜಿಲ್ಲೆಯವರಿಂದಲೇ ಎಂದು ನಾನು ಒತ್ತಿ ಹೇಳುತ್ತೇನೆ.

ಎರಡು ವರ್ಷಗಳ ಹಿಂದೆ ನಮ್ಮ ಕೇಂದ್ರ ಸರಕಾರವು ಭಾರತದಲ್ಲಿ ಎರಡು ಮುಖ್ಯ "ಬಂದರು"ಗಳನ್ನು ಮಾಡುವುದಾಗಿ ಜಾಹಿರಾತು ಮಾಡಿತ್ತು. ಒಂದು ಗುಜರಾತ್ ಕಚ್ಚಿನಲ್ಲಿಯೂ, ಇನ್ನೊಂದು ಮಲ್ಪೆಯಲ್ಲಿ ಎಂದು, ಗುಜರಾತಿನ ಬಂದರು ಕಟ್ಟಿ ಸಂಪೂರ್ಣವಾದರೂ ಮಲ್ಪೆಯ ಬಂದರಿನ ಪತ್ತೆಯೇ ಇಲ್ಲ. ಇದಕ್ಕೆ ಕಾರಣ ಸರಕಾರವಲ್ಲ, ನಮ್ಮ ಜಿಲ್ಲೆಯ ಮಹನೀಯರೇ! ಮಂಗಳೂರು ಮಲ್ಪೆಯೆಂದು ಇಬ್ಬರ ನ್ಯಾಯದಲ್ಲಿ ಮೂರನೇಯವನಿಗೆ ಆದಾಯ. ಎಲ್ಲಿಯಾದರೇನು ನಮ್ಮ ಜಿಲ್ಲೆಯಲ್ಲೇ ಎಂಬ ಭಾವನೆ ಯಾರಲ್ಲೂ ಇಲ್ಲ.

ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮತ್ತು ದ. ಕನ್ನಡಿಗರು

"ತಾನಾಗಿ ಮಾಡಲಾರ, ಇನ್ನೊಬ್ಬರು ಮಾಡುವುದನ್ನು ನೋಡಲಾರ" ಎಂಬ ದಕ್ಷಿಣ ಕನ್ನಡಿಗರ ವಿಚಿತ್ರ ಧೋರಣೆಯ ಕುರಿತು ಮುಂಬಯಿ ಕನ್ನಡಿಗರೊಬ್ಬರ ಹೃದಯ ನಿವೇದನೆ.

ಹೀಗೆಯೇ ಕಸ್ತೂರಿಬಾ ಮೆಡಿಕಲ್ ಕಾಲೇಜ್ ನಮ್ಮೂರಿನಲ್ಲಾದುದು ನಮ್ಮೆಲ್ಲರ ಉಪಯೋಗಕ್ಕೆ ಬೀಳುವುದು. ಬಡವರಿಗೂ, ಶ್ರೀಮಂತರಿಗೂ. ಬಡವರು ಬಡವರಾಗಿಯೇ ಉಳಿಯುವುದಿಲ್ಲ, ಶ್ರೀಮಂತರು ಶ್ರೀಮಂತರಾಗಿಯೇ ಇರಲಾರರು. ಕಾಲಚಕ್ರದ ಸುತ್ತಿಗೆ ಸಿಕ್ಕಿ ಉರುಳಾಗಿ ಕಡೆಗೆ ಬದಲಾವಣೆಹೊಂದುತ್ತಿರುತ್ತಿರುವರು ಖಂಡಿತ. ನಮ್ಮ ಕಣ್ಣಮುಂದೆ ನಾವು ಕಾಣುತ್ತಿರುವ ದೈನಂದಿನ ವಿಷಯವಿದು.

ಇತ್ತೀಚೆಗೆ ಯುದ್ಧ ಸಮಯದಿಂದ ಇಂದಿನ ವರೆಗೆ ಎಷ್ಟೋ ಬಡವರು ಶ್ರೀಮಂತರಾಗಿಯೂ, ಎಷ್ಟೋ ಧನಿಕರು ಬಡವರ ಸ್ಥಾನವನ್ನೂ ಆಕ್ರಮಿಸಿರುವರು. ಅಂದಮೇಲೆ ಇಂದಿಗೆ ನಾವು ಬಡವರಾಗಿರುವಾಗ ಧನಿಕರ ಕಾಲೇಜನ್ನು ತಿರಸ್ಕರಿಸಲು ಹವಣಿಸುತ್ತಿದ್ದರೆ, ನಾಳೆ ನಮ್ಮ ಮಕ್ಕಳು ಒಂದೊಂದು ಸಿರಿವಂತರಾದರೆ ಅವರು M. B. B. S. ಆಗಲು ಬೇರೆ ಬೇರೆ ಜಿಲ್ಲೆಗಳನ್ನು ಸುತ್ತಬೇಕಾಗುವುದು. ಆದುದರಿಂದ ಇಂದಿನ ಧನಿಕರ ಕಾಲೇಜು ನಾಳೆ ಬಡಮಕ್ಕಳ ಪ್ರಯೋಜನಕ್ಕೂ ಬೀಳಬಹುದು.

ಆದುದರಿಂದ ನಾವು ಕಸ್ತೂರಿಬಾ ಮೆಡಿಕಲ್ ಕಾಲೇಜಿಗೆ ವಿರುದ್ಧವಾಗದೆ ಅದರ ಉನ್ನತಿಯನ್ನು ಬಯಸಿ, ಡಾಕ್ಟರ್ ಮಾಧವ ಪೈಗಳಿಗೆ ಇನ್ನೂ ಹೆಚ್ಚಿನ ಬೆಂಬಲವನ್ನು ಕೊಟ್ಟು ನಮ್ಮ ಜಿಲ್ಲೆಯಲ್ಲಿ ಇಂತಹ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಿಸಬೇಕು. ಇಂದಿಗೆ ಈ ಕಾಲೇಜಿನ ಫಲವನ್ನು ಸಿರಿವಂತ ಮಕ್ಕಳುಂಡರೂ ಒಂದಾದರೂ ಅವರ ಕೈತಪ್ಪಿ ಬಿದ್ದ ಹಣ್ಣು ನಮ್ಮಂತಹ ಬಡ ಮಕ್ಕಳಿಗೆ ಸಿಕ್ಕಬಹುದು ಖಂಡಿತ. ಸುಮ್ಮನೆ ನಮ್ಮ ನಮ್ಮೊಳಗೆ ಜಗಳವಾಡಿ, ಸುರಪೇ ನಾಶವಾಯಿತೆಂದರೆ ನಮಗೂ ಇಲ್ಲ, ಅವರಿಗೂ ಇಲ್ಲದಂತಾದೀತು. ಯಾವುದಾದರೊಂದು ವಿಷಯದ ಕುರಿತು ಟೀಕೆಮಾಡುವ ಮೊದಲು ಆ ವಿಷಯದ ಮಹತ್ವವನ್ನು ತಿಳಿಯಲು ಪ್ರಯತ್ನಿಸಬೇಕು. ಕಾರ್ಯವು ಕೈಗೂಡಬೇಕಾದರೆ ಪ್ರಯತ್ನವು ಎಷ್ಟು ತಗಲಿರಬಹುದೆಂಬುವುದನ್ನು ಸ್ವಲ್ಪವಾದರೂ ಆಲೋಚಿಸಬೇಕು. ಬರೀ ಬಹಿರಂಗದಲ್ಲಿ ದೊಡ್ಡ ದೊಡ್ಡ ಭಾಷಣಗಳ ಸುರಿಮಳೆ ಸುರಿಸಿ ಅಥವಾ ವಾರ್ತಾ ಪತ್ರಿಕೆಗಳಲ್ಲಿ ಉದ್ದ ಉದ್ದದ ಲೇಖನಿಗಳನ್ನು ಬರೆದಮಾತ್ರಕ್ಕೆ ಅಂತಹ ಕಾರ್ಯವು ಮಾದಿದಂತಾಗದು. ಬಡವರ ಸೇವೆ ಯಾರಿಗಾದರೂ ಮಾಡಬೇಕೆಂಬ ಬಯಕೆ ಇದ್ದರೆ ಅವರು ಈ ತರದ ಸೇವೆಗಳನ್ನು ಸಲ್ಲಿಸುವುದಲ್ಲ. ಇತರರ ಕೈಯಲ್ಲಿದ್ದ ರೊಟ್ಟಿಯನ್ನು ನಾವು ಕಿತ್ತುಕೊಳ್ಳಲು ಕಲಿಯುವುದಲ್ಲ, ಅವರ ಕೈಯೊಳಗೆ ಆ ರೊಟ್ಟಿಯು ಹೇಗೆ ಬಂತು, ಯಾವ ರೀತಿಯಿಂದ ಅವರು ರೊಟ್ಟಿ ಗಳಿಸಿದರು, ನಮ್ಮ ಕೈಯಲ್ಲಿ ಇಲ್ಲದಿರಲು ಕಾರಣವೇನಿರಬಹುದೆಂಬುದನ್ನು ಆಲೋಚಿಸುವುದು ಅಗತ್ಯ.

ನಮ್ಮ ಕೈಯಲ್ಲಿ ರೊಟ್ಟಿ ಇಲ್ಲದಿರಲು, ನಮ್ಮಲ್ಲಿರುವ ಕೆಟ್ಟ ಸ್ವಭಾವವೊಂದುನ್ನುವದನ್ನು ದಲಿತರ ಸೇವೆಮಾಡಲು ಹೊರಟವರು ಮೊದಲು ದಲಿತರಿಗೆ ಕಲಿಸಬೇಕಿತ್ತು. ಅದಲ್ಲದೆ ದಲಿತರ ಸೇವೆ ಮಾಡುವವರೂ ದಾರಿದ್ರ್ಯರೇ ಆಗಬೇಕು ಹೊರತು ಧನಿಕರಲ್ಲ. ಧನಿಕರೆದ್ದು ಮಾತಿನಲ್ಲೇ ಬಡವರ ಸೇವೆ! ಮನಸ್ಸಿನಲ್ಲಿ ತನ್ನ ಸೇವೆ! ಅಂದರೆ ಬಡವರ ಹೆಸರಿನಲ್ಲಿ ಮೊದಲೆಂದು ಸೀಟುಗಳಿಸಲು ಬಯಸುವರು. ಸೀಟು ಸಿಕ್ಕಿದನಂತರ ಬಡವರ ಗುರುತಿಲ್ಲ, ಅಗತ್ಯವೂ ಇಲ್ಲ.

ಇಂದಿನ ತನಕ ಅದೆಷ್ಟೋ ಸ್ವಾರ್ಥಿ ಬಡವರ ಭಕ್ತರು ಬರಿದುಸೇವೆ ಸಲ್ಲಿಸಿ, ಈಗ ಪಾರ್ಲಿಮೆಂಟಿನಲ್ಲಿ ಕುರ್ಚಿಯ ಸೇವೆ ಮಾಡುತ್ತಿದ್ದಾರೆ. ನಾವು ಬಡವರಾಗಲು ಅಥವಾ ಹಿಂದುಳಿಯಲು ಡಾ. ಮಾಧವ ಪೈಗಳು ಕಾರಣವಲ್ಲ; ಮತ್ತಿತರರೂ ಅಲ್ಲ. ಇದಕ್ಕೆ ಕಾರಣ ನಮ್ಮ ಅದೃಷ್ಟ ಮತ್ತು ನಮ್ಮಲ್ಲಿರುವ ಕೆಲವು ಕೆಟ್ಟ ಸ್ವಭಾವಗಳು. ಯಾರಾತನಲ್ಲಿ ಮನ, ಬುದ್ಧಿಯು ಸ್ಥಿರವಿಲ್ಲವೋ? ಆತನಿಗೆ ದಾರಿದ್ರ್ಯವು ತಪ್ಪದು. ಆದುದರಿಂದ ನಾವು ಬಡವರು, ಹಿಂದುಳಿದವರು. ನಮ್ಮನ್ನು ನಾವೇ ಸುಧಾರಿಸಿಕೊಳ್ಳಬೇಕಲ್ಲದೆ, ಬೇರೆಯವರು ಮಾಡಿದ ಸೇವೆಯಿಂದ ನಾವು ಶ್ರೀಮಂತರಾಗಲಾರೆವು, ದಾರಿದ್ರ್ಯವು ನಮ್ಮ ಬೆಂಬಿಡದು. ಇದರಿಂದಾಗಿ ನಾವು ಮುಂದೆ ಹೋಗಲಾರೆವು. ಇದು ಖಂಡಿತ.

ನಮ್ಮಂತಹ ಬಡವರಿಗೆ ಕಸ್ತೂರಿಬಾ ಮೆಡಿಕಲ್ ಕಾಲೇಜಿನಲ್ಲಿ ಶಿಕ್ಷಣ ದೊರೆತರೆ ಒಳ್ಳೆದು, ದೊರೆಯದಿದ್ದರೆ ಅದಕ್ಕೆ ಬಹಿಷ್ಕಾರ ಹಾಕುವುದು ಹಿತವಲ್ಲ. ಅಲ್ಲದೆ ಡಾ. ಮಾಧವ ಪೈಗಳೊಡನೆ ಜಗಳವಾಡುವುದೂ ಅಲ್ಲ ಶಾಂತಿಯಿಂದ, ಪ್ರೇಮದ ಮತ್ತು ನುಡಿಗಳಿಂದ ದಲಿತರ ಮೇಲೆ ಪ್ರೀತಿ ಹುಟ್ಟುವಂತೆ ಅವರ ಮನಸ್ಸನ್ನು ಸೆಳೆಯಬೇಕು; ಹೊರತು ಕ್ರಾಂತಿಯಿಂದಲ್ಲ. ಅದೂ ಅಲ್ಲದೆ ಬಡವರಾದ ನಾವು ವಿದ್ಯೆ ಕಲಿತು ಡಾಕ್ಟರರೇ ಆಗಬೇಕೆಂಬುವುದೇನೂ ಇಲ್ಲ, ಬೇರೆ ಎಷ್ಟೋ ತರದ ವಿದ್ಯೆಗಳು ಇವೆ. ಆದುದರಿಂದ ನನ್ನ ಬಡ ಅಣ್ಣ ತಮ್ಮಂದಿರಲ್ಲಿ ನನ್ನ ವಿನಯ ಸೂಚನೆಯೇನೆಂದರೆ ಕಸ್ತೂರಿಬಾ ಮೆಡಿಕಲ್ ಕಾಲೇಜಿಗೂ, ಡಾ. ಮಾಧವ ಪೈಗಳಿಗೂ ಆಶೀರ್ವಾದ ಕೊಟ್ಟು, ಪೈಗಳಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲು ಮುಂದಾಗಬೇಕೆಂಬುದೇ, ಒಂದೊಮ್ಮೆ ಡಾ. ಮಾಧವ ಪೈಗಳಲ್ಲಿ ವೈರತ್ವವಿದ್ದರೆ ಬೇರೆ ನೆವದಿಂದ ಜಗಳವಾಡಬಹುದು, ವೈರತ್ವಕ್ಕೆ ಕಸ್ತೂರಿಬಾ ಮೆಡಿಕಲ್ ಕಾಲೇಜೇ ಕಾರಣವಾದರೆ ಇನ್ನು ಮುಂದೆ ನಮ್ಮ ಜಿಲ್ಲೆಯಲ್ಲಿ ಯಾರಾದರೂ ಇಂತಹ ಒಳ್ಳೆ... ...ಕ್ಕೆ ಕೈಹಾಕುವ ಮನಸ್ಸು ಮಾಡುವವರಿದ್ದರೆ, ಈ ಪ್ರಕರಣವನ್ನು ನೋಡಿ ಒಳ್ಳೆಯ ಪಾಠ ಕಲಿತು ಹಿಂಜರಿಯದಿರರು.

ನಮ್ಮ ಜಿಲ್ಲೆಯವರ ಒಂದು ದುರ್ಗುಣವೆಂದರೆ ತಾನಾಗಿ ಮಾಡಲಾರರು, ಬೇರೆಯವರನ್ನು ಮಾಡಲು ಬಿಡರು, "Dog in the manger" ಎಂಬಂತೆ, ತಾನಾಗಿ ತಿನ್ನುವುದೂ ಇಲ್ಲ ಹಸಿವೆಯಿಂದ ನರಳುತ್ತಿರುವವರನ್ನು ತಿನ್ನಲು ಬಿಡುವುದೂ ಇಲ್ಲ. ಎಂದಿನ ವರೆಗೆ ನಮ್ಮ ದ. ಕನ್ನಡದವರು ಇಂತಹ ಮತ್ಸರ, ಕಚ್ಚಾಟವನ್ನು ಬಿಡುವುದಿಲ್ಲವೋ, ಅಂದಿನವರೆಗೆ ನಮ್ಮ ಜಿಲ್ಲೆಯು ಪ್ರಗತಿಮಾರ್ಗದ ಮುನ್ನ ಹೆಜ್ಜೆಯಿಡದು. ಆದುದರಿಂದ ದ. ಕನ್ನಡಿಗರೇ! ಧನಿಕ ದಲಿತ, ಜಾತಿ ನೀತಿಗಳೆಂಬ ಭೇದಭಾವಗಳನ್ನು ಕಿತ್ತೊಗೆದು ಒಂದೇ ತಾಯ ಮಕ್ಕಳಂತೆ ಐಕ್ಯಮನಸ್ಸಿನಿಂದಿದ್ದು ನಮ್ಮ ಜಿಲ್ಲೆಯ, ಉನ್ನತಿಗಾಗಿ ಸದಾ ದುಡಿಯುತ್ತಿರೋಣವೇ?

ಇತಿ ಬಡವರ ಬಂಧು,

ಎಂ. ಕೆ. ಶೆಟ್ಟಿ.

(Reporter)

The Hindustan Spg & Wvg Mills Ltd.

Jacob Circle. Bombay No 11

BOMBAY.

ನೇಶನಲ್ ರೇಡಿಯೋ ಎಂಡ್ ಇಲೆಕ್ಟ್ರಿಕ್

(ಮರ್ಫಿ ರೇಡಿಯೋದ ಅಧಿಕೃತ ಮಾರಾಟಗಾರರು)

ಮು. ಬಸ್‌ಸ್ಟಾಂಡಿನ ಎದುರು, ಉಡುಪಿ.

ಎಲ್ಲಾ ತರದ ಹೊಸ ಮತ್ತು ಉಪಯೋಗಿಸಿದ ರೇಡಿಯೋಗಳನ್ನು ಒದಗಿಸಿಕೊಡಲಾಗುವುದು. ಸರ್ವವಿಧದ ಇಲೆಕ್ಟ್ರಿಕ್ ಸಾಮಾನುಗಳು ಮಾರಾಟಕ್ಕೆ ಸದಾಸಿದ್ಧ ಇರುವುವು. ರೇಡಿಯೋ ರಿಪೇರಿ, ಮನೆ ಮತ್ತು ಕೈಗಾರಿಕೆಗಳಿಗೆ ಇಲೆಕ್ಟ್ರಿಕ್ ವಯರಿಂಗ್ ಮಾಡುವುದು ನಮ್ಮ ವೈಶಿಷ್ಟ್ಯ. ಮದುವೆ, ಸಭೆ ಮೊದಲಾದ ಸಮಾರಂಭಗಳಿಗೆ ಅತಿಕಡಿಮೆ ಬಾಡಿಗೆಯಲ್ಲಿ ತಾತ್ಕಾಲಿಕ ವಿದ್ಯುದ್ದೀಪದ ಮತ್ತು ಲೌಡ್‌ಸ್ಪೀಕರಿನ ವ್ಯವಸ್ಥೆ ಮಾಡಿಕೊಡಲಾಗುವುದು. ● ಒಮ್ಮೆ ನಮ್ಮ ಶೋರೂಮನ್ನು ಸಂದರ್ಶಿಸಿ

ಕೆ. ಸಿ. ಹೆಗ್ಡೆ, ವ್ಯಾಪಾರಕ.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜುಮ್ಲಾ ವಹಿವಾಟು .... „ 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಎಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರಂಧರ ರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ. ವಿ. ಶಾಸ್ತ್ರೀ. ಎಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕರು:— ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ವಾರದ ಒಳಿತು ಕೆಡುಕುಗಳು

ತಾ. ೮—೧೦—೫೩ರಿಂದ ತಾ. ೧೪—೧೦—೫೩ರ ವರೆಗೆ.

ಮೇಷ— ಈಗಲೀಗ ನಿಮ್ಮ ಅದೃಷ್ಟವು ಬಹಳ ಕ್ಷೀಣಾವಸ್ಥೆಗೆ ಬಂದಿದೆ. ನಿಮ್ಮ ಪ್ರಯತ್ನಗಳು ಚಂದ್ರರ ಬಯಕೆಗಳಂತೆ ವಿಫಲಗಳಾಗುವವು. ಗೃಹ ತಾಪತ್ರಯಗಳಿಂದಾಗಿ ನಿಮ್ಮ ಮನೋ ನೆಮ್ಮದಿಗೆ ಭಂಗ ಬರಲಿದೆ. ಹಣದ ಅಡಚಣೆಯೂ ವಿಶೇಷವಾಗುವದು. ಆಪ್ತ ಬಂಧುಗಳೂ ಕೂಡ ನಿಮಗೀಕಾಲದಲ್ಲಿ ನೆರವಾಗರು. ಅಂತೂ ಶ್ರಮಸಹಿಷ್ಣುಗಳಿಗೆ ವಾರಾದಿಯ ೩ ದಿನಗಳಲ್ಲಿ ಕಿಂಚಿಲ್ಲಾಭ ಗೃಹಸುಖ ಮಾನಾದಿಗಳು ಲಭಿಸುವವು

ವೃಷಭ— ಹಿಡಿದ ಕಾರ್ಯಗಳು ಜಯಶೀಲಗಳಾಗುವವು. ಬಂಧು ಜನರ ನೆರವು ಆಪ್ತೇಷ್ಟರ ಸಹಕಾರವು ನಿಮಗೆ ಲಭಿಸುವ್ರದರಿಂದ ಸಾಮಾಜಿಕ ಕ್ಷೇತ್ರದಲ್ಲಿ ವಿಜಯಿಗಳಾಗುವಿರಿ. ಶತ್ರು ವರ್ಗದವರು ದೃಗ್ಗೋಚರವಾಗಲಾರರು. ವ್ಯಾಪಾರ ವ್ಯವಹಾರ ನೌಕರಿ ಮೊದಲಾದ ಭಾಗಗಳಲ್ಲಿ ದಿನೇ ದಿನೇ ಪ್ರಗತಿ ಹೊಂದುವಿರಿ. ತಾ 8. 14. ಈ ದಿನಗಳಲ್ಲಿ ಕುಜನರ ಬಲೆಗೆ ಸಿಲುಕಿ ಕಷ್ಟ ನಷ್ಟಗಳಂ ಹೊಂದಲಿರುವಿರಿ.

ಮಿಥುನ— ಆಳಾಗಿ ದುಡಿದರೆ ಅರಸಾಗಿ ಉಣ್ಣಬಹುದೆಂಬಂತೆ ನೀವೀವಾರದಲ್ಲಿ ಶ್ರಮವಹಿಸಿ ಕಾರ್ಯ ಕ್ಷೇತ್ರದಲ್ಲಿ ಮುಂದಡಿಯಿಟ್ಟರೆ ನಿಮ್ಮಂತೆ ಫಲ ಲಾಭವಾದೀತು. ವಿಪಕ್ಷೀಯರೂ ಕೂಡ ನಿಮ್ಮ ಕಾರ್ಯದಕ್ಷತೆಗೆ ತಲೆದೂಗುವರು. ಆದರೆ ಗೃಹಕೃತ್ಯದಲ್ಲಿ ನಿಮಗೆ ಸುಖವಿರದು. ಒಂದಲ್ಲೊಂದು ತೆರನಾದ ಕಲಹ ಕಚ್ಚಾಟಗಳು ದಿನವಹಿ ಕಾಣಿಸಲಿವೆ. ವಾರಾಂತ್ಯದ ೩ ದಿನಗಳು ಇಷ್ಟಪ್ರದಗಳಿವೆ.

ಕರ್ಕಟ— ನಿಮ್ಮ ಹಿಂದಿನ ಪರಿಸ್ಥಿತಿಗೆ ಏನೂ ಕುಂದುಂಟಾಗದು. ಮಿತ್ರ ಜನರ ಮತ್ತು ಬಂಧು ವರ್ಗದವರ ಬೆಂಬಲದಿಂದಾಗಿ ಅನೇಕ ಕಾರ್ಯಗಳನ್ನು ಸಾಧಿಸಲಿರುವಿರಿ. ಖರ್ಚಿಗೆ ತಕ್ಕಷ್ಟು ದುಡಿಮೆಯಿರುವುದರಿಂದ ದಿನಯಾಪನೆಯು ದುಃಸಾಧ್ಯವೆನಿಸದು. ಅಧಿಕಾರಿಗಳ ಪೀಡೆಗೆ ಸಿಲುಕುವ ಸಂಭವವಿದೆ. ಪಿತ್ತೋಷ್ಣ ಪ್ರಕೋಪದಿಂದಾಗಿ ಆರೋಗ್ಯವು ಕೆಟ್ಟೀತು. ವಾರದ ಅದ್ಯಂತ ದಿನಗಳು ಪ್ರಶಸ್ತವಿವೆ.

ಸಿಂಹ— ಸದ್ಯ ನಿಮ್ಮ ಬಯಕೆಗಳು ನಿರ್ವಿಘ್ನದಿಂದ ಫಲಿಸುವವು. ಕರ್ಮ ಕುಜನರಿಂದಾಗಿ ವಿಶೇಷ ಧನ ಲಾಭವಾಗಲಿದೆ. ಗೃಹ ತಾಪತ್ರಯಗಳು ದೂರವಾಗುವವು. ಎಂತಹ ಕಷ್ಟಸಾಧ್ಯವಾದ ಕಾರ್ಯವೂ ಕೂಡ ನಿಮಗೆ ಸುಲಭವೆನಿಸುವದು. ಮಾತ್ರವಲ್ಲ ಸಮಾಜದಲ್ಲಿ ಒಳ್ಳೇ ಸ್ಥಾನ ಮಾನಗಳೂ ಲಭಿಸುವವು. ತಾ. 9. 10. ಬಿಟ್ಟುಳಿದ ದಿನಗಳಲ್ಲಿ ಆಕಸ್ಮಿಕ ಅಘಘಾತ ಮತ್ತು ವಿರೋಧಿಗಳ ಭಯಕ್ಕವಕಾಶವಿದೆ.

ಕನ್ಯಾ— ಆದಾಯ ಒಂದು ವೆಚ್ಚ ಎರಡು ಎಂಬಂತೆ ಸದ್ಯ ನಿಮ್ಮ ಪರಿಸ್ಥಿತಿ ಬಂದಿರುವುದು. ಶ್ರಮ ವಹಿಸಿ ದುಡಿದ ಧನವು ವ್ಯರ್ಥ ಖರ್ಚುಗಳ ಸಲುವಾಗಿ ವ್ಯಯವಾಗಲಿವೆ. ವೃಥಾ ಪರ್ಯಟನ, ದೇಹಾಲಸ್ಯ, ಶತ್ರುಗಳ ಪ್ರತೀಕಾರ ಇತ್ಯಾದಿಗಳ ಸಲುವಾಗಿ ಹೆಚ್ಚಿನ ವ್ಯಯವಾಗುವದು. ನೌಕರಿ ವ್ಯಾಪಾರಾದಿಗಳಲ್ಲಿ ಪ್ರವೃತ್ತರಾದವರಿಗೆ ಹೆಚ್ಚಿನ ತಾಪತ್ರಯವುಂಟಾಗದು. ತಾ. 11. 12. 13. ಈ ದಿನಗಳಲ್ಲಿ ನಿಮ್ಮ ಬಯಕೆಯು ಬಹುಮಟ್ಟಿಗೆ ಸಿದ್ಧಿಸಲಿವೆ.

ತುಲಾ— ಇಂದು ನಿಮ್ಮ ದೈವವು ಸಾಕಷ್ಟು ಅನುಕೂಲವಾಗಿಯೇ ಇರುವುದರಿಂದ ನಿಮ್ಮ ಪ್ರತಿಯೊಂದು ಕಾರ್ಯ ಕಲಾಪಗಳೂ ಸುಗಮವಾಗಿ ಸಾಗುವವು. ಭಾಗ್ಯಗತನಾದ ಬೃಹಸ್ಪತಿಯು ನಿಮ್ಮ ಸಕಲ ವಿಘ್ನಗಳನ್ನೂ ನಿವಾರಿಸಿ ಇಷ್ಟಾರ್ಥವನ್ನು ಕೊಡಲು ಶಕ್ತನಿರುವನು. ನಿರೀಕ್ಷಿಸಿದಕ್ಕಿಂತಲೂ ಅಧಿಕ ಫಲ ಲಾಭವಾಗುವುದರಲ್ಲಿ ಸಂದೇಹವಿಲ್ಲ. ಸಮಾಜದಲ್ಲೂ ಒಳ್ಳೆ ಸ್ಥಾನ ಮಾನಗಳು ಲಭಿಸುವವು. ತಾ. 9. 10. 14. ಈ ದಿನಗಳಲ್ಲಿ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ.

ವೃಶ್ಚಿಕ— ಕಳೆದ ದಿನಗಳಿಗಿಂತ ಸ್ವಲ್ಪ ಉತ್ತಮವಾಗಿರುವದೀಕಾಲವು. ನಿಮ್ಮ ಲಾಭಸ್ಥಾನದಲ್ಲಿರತಕ್ಕ ರವಿ ಶುಕ್ರರು ನಿಮ್ಮ ಖರ್ಚಿಗೆ ಸಾಕಷ್ಟು ಧನವನ್ನು ಸಂಪಾದಿಸಿ ಕೊಡಲಿರುವರು. ಭೃತ್ಯ ವರ್ಗದಿಂದಲೂ ನೀಚ ಜನತೆಯಿಂದಲೂ ಹೆಚ್ಚಿನ ಫಲ ಪ್ರಾಪ್ತಿಯಿದೆ. ಅನಿರೀಕ್ಷಿತವಾಗಿ ಪ್ರಾಪ್ತವಾಗತಕ್ಕ ಶೋಕಾನರ್ಥಗಳು ನಿಮ್ಮ ಮನೋ ನೆಮ್ಮದಿಗೆ ಭಂಗ ತರುವವು. ತಾ. 8. 11. 12. 13. ಈ ದಿನಗಳಲ್ಲಿ ನಿಮ್ಮ ಸುಖ ಭೋಗಗಳಿಗೆ ಕೊರತೆಯಾಗದು.

ಧನು— ಇಂದು ನಿಮ್ಮ ಅದೃಷ್ಟವು ಅತ್ಯುತ್ತಮವಿದೆಯಾದರೂ ಕೆಲವೊಮ್ಮೆ ಆಕಸ್ಮಿಕವಾಗಿ ದೂರಾಲೋಚನೆ ಮಾಡದೆ ಕಾರ್ಯ ಪ್ರವೃತ್ತರಾಗಿ ಪರಾಭವ ಹೊಂದುವ ಸಂಭವವಿದೆ. ಮಾತ್ರವಲ್ಲ ಎಷ್ಟೇ ನಾಲಿಗೆಯನ್ನು ಬಿಗಿ ಹಿಡಿದರೂ ವಾಕ್ಕಲಹವು ಆಗದಿರದು. ಆಪ್ತೇಷ್ಟ ಬಂಧು ಮಿತ್ರರಿಂದೊಡಗೂಡಿದ ನಿಮ್ಮ ಸಂಸಾರ ರಥವು ನಿರರ್ಗಲವಾಗಿ ಮುಂದೆ ಸಾಗಲಿದೆ. ತಾ. 11. 12. 13. ಬಿಟ್ಟುಳಿದ ದಿನಗಳು ಅತೀವ ಪ್ರಶಸ್ತವಿವೆ.

ಮಕರ— ದುಡಿಮೆಗೆ ತಕ್ಕ ಪ್ರತಿಫಲ ಸಿಗಲು ಏನೂ ಕೊರತೆಯಿರದು. ಆದರೂ ಖರ್ಚು ಆದಾಯವನ್ನತಿಕ್ರಮಿಸಲಿವೆ ಯಾದ ಕಾರಣ ಸ್ವಲ್ಪ ಮಟ್ಟಿನ ಆರ್ಥಿಕ ಮುಗ್ಗಟ್ಟು ಕಾಣಿಸಲಿದೆ. ಶತ್ರು ಜನರಿಂದಾಗಿ ಹಲವಾರು ಪೀಡೆಗಳು ಬರಬಹುದು. ಮಾತ್ರವಲ್ಲ ಧನ ಮಾನಗಳಿಗೆ ಧಕ್ಕೆಯುಂಟಾಗಲಿದೆ. ಕಜ್ಜಿ ಹುಣ್ಣು ಇತ್ಯಾದಿ ಚರ್ಮ ರೋಗಗಳೂ ಕಾಣಿಸುವುದು. ಆದರೂ ತಾ. ೧೧ರಿಂದ 13ರ ವರೆಗಿನ ದಿನಗಳು ಬಹುತ್ತೇಕ ನಿಮ್ಮ ಪ್ರಗತಿಗೆ ಕಾರಣವಾಗಿವೆ.

ಕುಂಭ— ಕಳೆದ ವಾರಕ್ಕಿಂತ ಈ ವಾರವು ಉತ್ತಮವೆನಿಸೀತು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಫಲಾಪ್ತಿಯಿದೆ. ಜನತೆಯ ಸಹಕಾರವೂ ಲಭಿಸುವದು. ಆದರೆ ನಿಮ್ಮ ಗೃಹ ಕೃತ್ಯದಲ್ಲೀ ಅವ್ಯವಸ್ಥೆಯು ಮನೆ ಮಾಡಿರುವುದರಿಂದ ಕಿಂಚಿತ್ತೂ ಮನಸ್ಸಿಗೆ ನೆಮ್ಮದಿಯಿರದು. ವಾತ ಕಫ ಪ್ರಕೋಪದಿಂದಾಗಿ ಆರೋಗ್ಯಕ್ಕೂ ಹಾನಿ ಸಂಭವಿಸೀತು. ವಾರಾಂತ್ಯದ ೩ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಮೀನ— ಪ್ರಯತ್ನಕ್ಕೆ ತಕ್ಕುದಾದ ಫಲ ಸಿಗದಿದ್ದರೂ ಕೂಡ ನಿರಾಶರಾಗಬೇಕಾಗಿಲ್ಲ. ಬಲೀಯರಾದ ಶತ್ರುಗಳನ್ನೂ ಕೂಡ ಲೆಕ್ಕಿಸದೆ ನೀವು ಕಾರ್ಯ ಕ್ಷೇತ್ರದಲ್ಲಿ ಮುನ್ನುಗ್ಗುವಿರಿ. ಇಂದೀ ಸಮಯದಲ್ಲಿ ಬಂಧು ಜನರೂ ನೆರವಾಗರು. ಮಾತ್ರವಲ್ಲ ಮನೆಯವರೂ ಕೂಡ ನಿಮ್ಮ ಪ್ರತಿ ಕಕ್ಷಿ ಸ್ಥಾನವನ್ನೇ ವಹಿಸಲಿರುವರು. ಆಕಸ್ಮಿಕ ಪ್ರವಾಸವು ಕಷ್ಟ ನಷ್ಟಗಳಿಗೆ ಗುರಿಮಾಡಲಿದೆ. ತರುಣ ಸಾಹಸಿ ವೃಂದಕ್ಕೆ ತಾ. 8. 14. ಅತ್ಯುತ್ತಮವಿವೆ.

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

O. S. 386/1953

ದೇಸಪ್ಪ ಶೆಟ್ಟಿ ಕೂಡಾ ವಾದಿರು

ಮತ್ತು

ದುಗ್ಗಮ್ಮ ಕೂಡಾ ಪ್ರತಿವಾದಿರು.

1ನೇ ದುಗ್ಗಮ್ಮ ಮರಕಡ ಸುಬ್ಬಯ ಶೆಟ್ರ ವಿಧವೆ. 2ನೇ ಸೀತಾರಾಮ ಶೆಟ್ಟಿ ದುಗ್ಗಮ್ಮನ ಮಗ

ಮಂಗ್ಳೂರು ಟೌನ್ ಕರೆಂಗಲಪಾಡಿಯಲ್ಲಿ ಪಿಂಟೋಸ್ ಲೇನ್‌ನಲ್ಲಿ ವಾಸಿಸುವವರು.

ವಾದಿರು ನಿಮ್ಮ ಮೇಲೆ ಆಸ್ತಿ ಸ್ವಾಧೀನತೆ ಮತ್ತು ಗೇಣಿ ಬಾಕಿಗೆ ಮಾಡಿದ ವ್ಯಾಜ್ಯವು ತಾ 20-10-1953ಕ್ಕೆ ನಿಮ್ಮ ಹಾಜರಿ ಬಗ್ಗೆ ಇಟ್ಟಿರುತ್ತದೆ. ಆ ದಿವ್ಸ ನೀವು 10 ಗಂಟೆಗೆ ಸ್ವತಃ ಯಾ ವಕೀಲರ ಮುಖಾಂತ್ರ ಹಾಜ್ರಾಗದಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯ ತೀರ್ಮಾನಿಸಲ್ಪಡುವುದು.

ಕೆ. ಸೂರ್ಯನಾರಾಯಣ ಅಡಿಗ

ವಾದಿ ಕಡೆ ಎಡ್ವಕೇಟ್.

ಮಂಗ್ಳೂರು 25-9-1953

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-

ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8/-[ವಿ. ಪಿ. ಪಾರ್ಸೆಲ್ ಚಾರ್ಜು ಪ್ರತ್ಯೇಕ]

Mrs. P. DEVEE, F.B.S.(N.J.)
CALCUTTA. 40

ಸ್ಟಾಕಿಸ್ಟರು: ಶಿವಾ ಕಂಪೆನಿ, ಮಂಗಳೂರು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ, ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮನಸ್ಸಿಗೆ ಶಾಂತಿ ಬೇಕೇ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯನ್ನು ಓದಿರಿ.

* "ಬೇರೆ ಶಾಸ್ತ್ರಗಳನ್ನೋದುವದರೇನು? ಗೀತೆಯನ್ನು ಚೆನ್ನಾಗಿ ಓದಬೇಕು."

— ವರಾಹಪುರಾಣ.

* "ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಹೊತ್ತಗೆಗಳ, ಈ ಅಪೂರ್ವ ಗ್ರಂಥವನ್ನು ಓದಬೇಕು." — ಲೋಕಮಾನ್ಯ ತಿಲಕ

* "ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." — ಮಹಾತ್ಮಾ ಗಾಂಧಿ.

* "ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು." — ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಗೀತೆಯ ಕೈಗನ್ನಡಿ ಬೆಲೆ: ೦-೧೨-೦

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮ. ಆ.—ರೂ. 1-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೇ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ: ಸಾದಾಪ್ರತಿ 1—8—0

ಉತ್ತಮ ಪ್ರತಿ ರೂ. 2—0—0

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್! ಎಲ್ಲಾ ತರದ ಕನ್ನಡ ಪುಸ್ತಕಗಳೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

Edited, Printed & Published By K. H. Shetty at the Navayuga Press, Udipi, S. India

Licensed to Post without Prepayment.

ನವಯುಗ

Vol.33. • No 7. 15-10-1953 • ವರ್ಷ ೩೩ [illegible] ವಾರ ೭

ಭೂಸುಧಾರಣೆಯ ಕುರಿತು-

ಪ್ರೊ. ಕೆನ್ನೆಥ್ ಎಚ್. ಪಾರ್ಸನ್ಸರು ಅಮೇರಿಕದ ವಿಸ್ ಕನ್ಸಿನ್ ವಿಶ್ವವಿದ್ಯಾಲಯಕ್ಕೆ ಸೇರಿದ ತಜ್ಞರಲ್ಲಿ ಒಬ್ಬರು. ಭಾರತ ಸರಕಾರದ ವಿನಂತಿಯಂತೆ ಇವರೂ ಬೇರೆ ಇಬ್ಬರೂ ಕೆಲಸಮಯದ ಹಿಂದೆ ನಮ್ಮ ದೇಶವನ್ನು ಸಂದರ್ಶಿಸಿ ಇಲ್ಲಿಯ ಕೃಷಿ ವ್ಯವಸ್ಥೆಯನ್ನು ಪರಿಶೀಲಿಸಿ ಭೂಸುಧಾರಣಾ ಸಂಗತಿಯಲ್ಲಿ ನಾವು ಬುದ್ಧಿವಂತಿಕೆಯಿಂದ ಅನುಸರಿಸಬಹುದಾದ ಕ್ರಮಗಳ ಕುರಿತು ವಿಸ್ತೃತವಾದ ವರದಿಯೊಂದನ್ನು ಯೋಜನಾ ಆಯೋಗಕ್ಕೆ ಒಪ್ಪಿಸಿರುವರು.

“ನಿಜವಾದ, ತುಂಬಕಾಲ ಬಾಳುವ ಮತ್ತು ಮಹತ್ವದ ಪ್ರಗತಿಯನ್ನು ಕೈಗೂಡಿಸುವುದಕ್ಕೋಸ್ಕರ ಭಾರತದಲ್ಲಿ ಜಾಗರೂಕತೆಯಿಂದಲೂ ಪ್ರಾಗತಿಕ ದೃಷ್ಟಿಯಿಂದಲೂ ಒಕ್ಕಲುಗಳಿಗೆ ರಕ್ಷಣೆಕೊಡುವ ಪದ್ಧತಿಯನ್ನು ಜ್ಯಾರಿಗೆ ತರುವುದರಿಂದ ಭಾರತದೇಶವು ಆರ್ಥಿಕ ಹಾಗೂ ರಾಜಕೀಯ ಮುನ್ನಡೆಯನ್ನು ಶಾಂತರೀತಿಯಲ್ಲಿ ಸಾಧಿಸಬಲ್ಲುದು” ಎಂದು ಪ್ರೊ. ಪಾರ್ಸನ್ಸರು ತಮ್ಮ ವರದಿಯಲ್ಲಿ ಹೇಳಿರುವರು. ಮುಂಬಯಿ, ಮದ್ರಾಸು, ಪೆಪ್ಸು, ಉತ್ತರಪ್ರದೇಶ ಮುಂತಾಗಿ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಕೈಗೊಂಡ ಭೂಸುಧಾರಣಾ ಕಾರ್ಯಕ್ರಮಗಳನ್ನು ಕಳೆದ ವರ್ಷ ನಿರೀಕ್ಷಿಸಿ, ಪರಿಶೀಲಿಸಿದ ಇವರ ಅಭಿಪ್ರಾಯದಂತೆ - “ಭೂಮಿಯ ಉಪಯೋಗ ಮತ್ತು ಅದರ ಮೇಲಿನ ಅಧಿಕಾರದ ವಿಷಯವನ್ನು ಬೇಗನೇ ನಿರ್ಧಾರದಿಂದ ತೀರ್ಮಾನಿಸದಿದ್ದರೆ ಆರ್ಥಿಕ ಹಾಗೂ ಸಾಮಾಜಿಕ ಕೇಡುಗಳು ಬಲಿತು ಹಾನಿಗೆ ಅವಕಾಶ ಮಾಡಿಕೊಡುತ್ತವೆ.”

ಈಗ ಭೂಸುಧಾರಣೆಗೋಸ್ಕರ ನಡೆದಿರುವ ಶಾಂತ ಚಳುವಳಿಯು ರೈತರು ನಿಕಟ ಭವಿಷ್ಯದಲ್ಲಿಯೇ ತೊಡಗಬಹುದಾದ ಉಗ್ರ ಕ್ರಮದ ಆಂದೋಲನದ ಮುನ್ಸೂಚನೆ ಎಂದು ಪ್ರೊ. ಪಾರ್ಸನ್ಸರ ಅಭಿಪ್ರಾಯ. ಇಂಥ ಉಗ್ರ ಚಳುವಳಿ ನಡೆದದ್ದೇ ಆದರೆ ಅದು ರಾಜಕೀಯ ಮುಸುಕನ್ನು ಧರಿಸಿಕೊಂಡು, ಕಮ್ಯೂನಿಸ್ಟರ ಕೈವಾಡಕ್ಕೆ ಅವಕಾಶಮಾಡಿಕೊಡುತ್ತದೆ

ಈ ಮಾತನ್ನು ಜಪಾನಿನಲ್ಲಿ ಭೂ ಸುಧಾರಣಾ ಯೋಜನೆಗಳನ್ನು ಯಶಸ್ವಿಗೊಳಿಸಿದ ಪ್ರೊ. ಲಾಡೆಜಿಂಸ್ಕಿ ಎಂಬ ಇನ್ನೊಬ್ಬ ತಜ್ಞರೂ ಅನುಮೋದಿಸುತ್ತಾರೆ. ಮದ್ರಾಸು, ಪಂಜಾಬು, ಹಾಗೂ ಕಾಶ್ಮೀರದ ಭೂ ಸುಧಾರಣಾ ಪ್ರಯತ್ನವನ್ನು ಪರಿಶೀಲಿಸಿದ ಇವರು “ನಾವು ಸಂದರ್ಶಿಸಿದ ಯಾವುದೇ ಹಳ್ಳಿಯಲ್ಲೂ ಅಧಿಕಾರಾರೂಢವಾಗಿರುವ ಕಾಂಗ್ರೆಸು ಪಕ್ಷವು ಸಾಕಷ್ಟು ಹಕ್ಕು ಬಾಧ್ಯತೆಗಳನ್ನು ಪಡೆದಿರದ ಜನಗಳ ಹಿತರಕ್ಷಣೆಗೆ ದುಡಿಯುತ್ತಿದ್ದಂತೆ ಕಾಣಲಿಲ್ಲ. ಸಾಮಾನ್ಯ ರೈತರಿಗೂ ಕೃಷಿ ಕೆಲಸಗಾರರಿಗೂ ಕಾಂಗ್ರೆಸ್ ಪಕ್ಷದೊಂದಿಗೆ ಸಂಬಂಧವಿದ್ದಂತೆ ತೋರಲಿಲ್ಲ. ಕಮ್ಯೂನಿಸ್ಟರ ಮೈತ್ರಿಯನ್ನು ಅವರೆಲ್ಲರೂ ಮೆಚ್ಚುತ್ತಿದ್ದಂತೆ ಭಾಸವಾಗುತ್ತದೆ. ಸರಕಾರದ ನೆರವಿನ ಭರವಸೆ ಅವರಿಗೆ ಇದ್ದಂತೆ ಕಂಡು ಬರಲಿಲ್ಲ. ಇದನ್ನು ಸರಕಾರವೂ ಕಾಂಗ್ರೆಸು ಪಕ್ಷವೂ ಗಂಭೀರವಾಗಿ ವಿಚಾರಿಸಿಕೊಂಡು, ಪರಿಣಾಮಕಾರಿಯಾದ ಮತ್ತು ಸಕಾಲಿಕವಾದ ಆರ್ಥಿಕ ಪುನರುಜ್ಜೀವನಕ್ಕೆ ಎಡೆಮಾಡಿಕೊಡಬಲ್ಲ ಸುಧಾರಣೆಯನ್ನು ಕೈಗೊಳ್ಳಬೇಕು” ಎಂದಿರುವರು.

❖

ಭೂ ಸುಧಾರಣೆಯ ಪ್ರಯತ್ನ ಕೈಗೊಳ್ಳುವಾಗ ಕೃಷಿಯನ್ನು ಅವಲಂಬಿಸಲು ಬಯಸುವ ಎಲ್ಲರಿಗೂ ಸಮಾನಾವಕಾಶ ಕೊಡುವುದಕ್ಕೆ ಮಹತ್ವ ನೀಡಬೇಕೆಂದು ಪ್ರೊ. ಪಾರ್ಸನ್ಸರು ಹೇಳಿದ್ದರೂ– ಈಗಿನ ಪರಿಸ್ಥಿತಿಯಲ್ಲಿ ಅಸಮಾನತೆಯನ್ನು ಹೋಗಲಾಡಿಸುವ ಪ್ರಯತ್ನದ ಪರಿಣಾಮವಾಗಿ ಬಡತನವೇ ಎಲ್ಲರ ಕೊರಳಿಗೂ ಗಂಟು ಬಿದ್ದೀತೆಂದು ಎಚ್ಚರದ ಮಾತನ್ನೂ ನುಡಿದಿರುವರು. ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಮಹತ್ವಕೊಡುವುದೇ ಈ ಅನರ್ಥವನ್ನು ದೂರೀಕರಿಸುವ ಏಕಮಾತ್ರ ಉಪಾಯ. ಎಲ್ಲರಿಗೂ ಸಮಾನಾವಕಾಶ ನೀಡಲು, ಹೊಸತಾಗಿ ಕೃಷಿಗೆ ಆಸ್ಪದವನ್ನುಂಟುಮಾಡಲು ಮತ್ತು ಹಳ್ಳಿಗರಿಗಿರುವ ಭೂಮಿಯ ಹಸಿವೆ ಹಿಂಗಿಸಿಕೊಳ್ಳಲು ಪ್ರತ್ಯೇಕವಾದ ಸುಧಾರಣೆಗಳನ್ನು ಮಾಡದೆ ಈ ಮೂರನ್ನೂ ಒಂದೇ ದೃಷ್ಟಿಯಿಂದ ಒಟ್ಟಿಗೆ ವಿಚಾರಿಸಬೇಕಾದುದು ಅಗತ್ಯ

ಎಲ್ಲರಿಗೂ ಸಮಾನಾವಕಾಶಕೊಡುವ ಹುಮ್ಮಸ್ಸಿನಲ್ಲಿ ಈಗಿನ ಭೂಮಿಯನ್ನು ಬೇಸಾಯಮಾಡುವ ಒಕ್ಕಲಿಗರ ವಶಕ್ಕೆ ಶಾಶ್ವತವಾಗಿ ಬಿಡುವುದು ಹೆಚ್ಚು ಫಲದಾಯಕವಾಗಲಾರದೆಂದು ಪ್ರೊ. ಪಾರ್ಸನ್ಸರು ಹೇಳುತ್ತಾರೆ. ಎಲ್ಲ ಒಕ್ಕಲಿಗರೂ ತಮ್ಮ ಭೂಮಿಯ ಸ್ವಾಮಿತ್ವವನ್ನು ಪಡೆಯುವಂತೆ ಪ್ರಕೃತದ ಪರಿಸ್ಥಿತಿ ಅನುಕೂಲವಾಗಿ ಕಾಣುವುದಿಲ್ಲ. ಭೂಮಾಲೀಕರಿಂದ ಭೂಮಿಯನ್ನು ಒಕ್ಕಲುಗಳಿಗೆ ಶಾಶ್ವತವಾಗಿ ನೀಡುವುದಕ್ಕೋಸ್ಕರ ಸಂಪಾದಿಸಿಕೊಳ್ಳುವಾಗ, ಭಾರತದ ರಾಜ್ಯಾಂಗ ಘಟನೆಯಲ್ಲಿ ಒಪ್ಪಿಕೊಂಡ ತತ್ವದಂತೆ, ಭೂಮಾಲಿಕರಿಗೆ ಪರಿಹಾರಕೊಡಬೇಕಾಗುವುದು ಇದಕ್ಕೆ ಬೇಕಾದಷ್ಟು ಬಂಡವಾಳ ನಮ್ಮಬಳಿಯಲ್ಲಿಲ್ಲ, ಮತ್ತು ನಮ್ಮಲ್ಲಿ ಪ್ರಾಚೀನಕಾಲದಿಂದ ರೂಢವಾಗಿರುವ ಆರ್ಥಿಕ ವ್ಯವಸ್ಥೆಯು ಇಂಥ ಸುಧಾರಣೆಯನ್ನು ಒಮ್ಮೆಲೆ ತಡೆದುಕೊಳ್ಳಲಿಕ್ಕೂ ಇಲ್ಲ. ಮಾತ್ರವಲ್ಲ—ಶಾಶ್ವತವಾಗಿ ಭೂಮಿಯನ್ನು ಸಾಗುವಳಿಮಾಡುವ ಒಕ್ಕಲಿಗನಿಗೆಯೇ ಆ ಭೂಮಿ ಸೇರಬೇಕೆಂಬ ತತ್ವವನ್ನು ಭೂಮಾಲೀಕರು ಎಷ್ಟುಮಾತ್ರಕ್ಕೂ ಒಪ್ಪಲಾರರು. ಪ್ರಾಯಶಃ ಇದನ್ನು ವಿರೋಧಿಸುವ ಉದ್ದೇಶದಿಂದಲೇ ಅವರು ಯಾವ ಒಕ್ಕಲನ್ನೂ ಶಾಶ್ವತವಾಗಿ ಒಂದು ಭೂಮಿಯ ಮೇಲೆ ಇರಗೊಡುವುದಿಲ್ಲ. ಒಂದೆರಡು ವರ್ಷಗಳು ಕಳೆದ ಕೂಡಲೇ ಒಕ್ಕಲೆಬ್ಬಿಸಿ ಬೇರೊಬ್ಬ ಹೊಸಬನ ವಶಕ್ಕೆ ಭೂಮಿಯನ್ನು ಒಪ್ಪಿಸಲು ಭೂ ಮಾಲೀಕರು ಆತುರಪಡುವರು.

ಇಂಥವರಲ್ಲಿ ಭಾರತವು ಅನುಸರಿಸಬಹುದಾದ ಕ್ರಮ—[illegible] ಮತ್ತು ಒಕ್ಕಲುಗಳ ಸಂಬಂಧದ ಅವರವರ ಹಕ್ಕುಬಾಧ್ಯತೆಗಳಿಗೆ ನ್ಯಾಯವಾಗುವಂತೆ ಊರ್ಜಿತಗೊಳಿಸುವುದೇ ಆಗಿದೆ. ಈ ಸಂಬಂಧಕ್ಕೆ ಸಿದ್ಧಾಂತ ರೂಪ ಕೊಡುವಾಗ ಮೂರು ಸಂಗತಿಗಳನ್ನು ಕಣ್ಣ ಮುಂದೆ ಇಟ್ಟುಕೊಳ್ಳುವುದು ಚೆನ್ನ– (೧) ಸಾಮಾನ್ಯ ಒಕ್ಕಲಿಗನಿಗೆ ಅವನ ವಶಕ್ಕೆ ಬಂದ ಭೂಮಿಯ ಮೇಲೆ ಐದು ವರ್ಷಗಳ ಶಾಶ್ವತ ಅಧಿಕಾರವಿರಬೇಕು, ಮತ್ತು ಒಳ್ಳೆ ರೀತಿಯಲ್ಲಿ ಅವನು ಬೇಸಾಯ ನಡೆಸುವನಾದರೆ, ಈ ಒಕ್ಕಲುತನ ತಾನಾಗಿಯೇ ಮುಂದುವರಿಯಬೇಕು; (೨) ಒಕ್ಕಲಿಗೆ ಅವನ ಶ್ರಮಕ್ಕೆ ಹೊಂದಿಕೊಂಡು, ಹೊಲ ಸಾಗುವಳಿಯ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಹಾಗೂ [illegible] ಮೇಲೆ ಧನಿ ಹಾಕಿದ ಬಂಡವಾಳವನ್ನು ಉತ್ಪಾದಕ ಕಾರ್ಯಕ್ಕೆ ಹಚ್ಚಿದ ಅವನ ಜಾಣೆಗಾರಿಕೆಯನ್ನು ಲಕ್ಷಿಸಿ ಯೋಗ್ಯ ಪ್ರತಿಫಲ ದೊರೆಯಬೇಕು, ಧನಿ [illegible] ಮೇಲಕ್ಕೆ ಹಾಕಿದ ಬಂಡವಾಳಕ್ಕೆ ಯೋಗ್ಯ ಬಡ್ಡಿ ದೊರೆಯಬೇಕು. ಆದರೆ ಈ ಬಂಡವಾಳದ ಮೌಲ್ಯ ಮಾಪನವನ್ನು ರೂಪಾಯಿ ಆಣೆ ಪೈಯಿಂದ ಲೆಕ್ಕ ಮಾಡುವುದು ಮಾತ್ರ ಸರಿಯಲ್ಲ; (೩) ಫಸಲಿನಲ್ಲಿ ತಮಗೆ ದೊರೆಯುವ ಪಾಲನ್ನು ಹೊಂದಿಕೊಂಡು ಉತ್ಪಾದನಾ ಕ್ಷೇತ್ರಗಳಲ್ಲಿ ಧನಿ ಒಕ್ಕಲುಗಳು ಭಾಗವಹಿಸುವುದಕ್ಕೆ ಅವಕಾಶ ನೀಡಬೇಕು, ಎಂದರೆ ಭೂಮಿಯ ಫಲವರ್ಧಿಸಿ, ಉತ್ಪಾದನೆ ಹೆಚ್ಚಿಸುವ ಪ್ರಯತ್ನಕ್ಕೆ ಧನಿಯ ಕಡೆಯಿಂದ ಪ್ರೋತ್ಸಾಹ ದೊರೆತೀತು.

❖

ಹಿಡುವಳಿಗೊಂದು ಮಿತಿಯನ್ನು ಕಲ್ಪಿಸುವುದು ಭೂಸುಧಾರಣಾ ಪ್ರಯತ್ನದಲ್ಲಿ ಅಗತ್ಯವೇ ಎಂಬ ಪ್ರಶ್ನೆಯನ್ನು ವಿಚಾರಿಸುತ್ತಾ ಪ್ರೊ ಪಾರ್ಸನ್ಸರು “ಇಲ್ಲಿ ಗಮನಿಸಬೇಕಾದ ಮುಖ್ಯ ಪ್ರಶ್ನೆ– ಭೂಮಿಯೆಂದರೇನೇ ಒಂದು ಬಗೆಯ ಬಂಡವಾಳ ಹೌದೇ, ಅಲ್ಲವೇ?” ಎಂದಿರುವರು. ಎರಡನೆಯ ಸಂಗತಿ, ಹಿಡುವಳಿಯು ಸಾರ್ವಜನಿಕ ಹಿತಕ್ಕೆ ಬಾಧಕ ಬರದಂತೆ ಕಾರ್ಯಕ್ಷಮ ರೀತಿಯಲ್ಲಿ ಮತ್ತು ಉತ್ಪಾದನೆ ಹೆಚ್ಚುವಂತೆ ಉಪಯೋಗಿಸಲ್ಪಡುತ್ತಿದೆಯೇ ಎಂಬುದು. ಮೂರನೆಯದಾಗಿ ದೊಡ್ಡ ದೊಡ್ಡ ಹಿಡುವಳಿದಾರರಿಗೆ ಭೂಮಿಯ ಉತ್ಪಾದನೆ ಹೆಚ್ಚಿಸಲು ಪ್ರಯತ್ನ ಕೈಗೊಂಡರೆ ತಮಗ ನಷ್ಟವಾಗುವುದಿಲ್ಲವೆನ್ನುವ ಭರವಸೆ ಬೇಕು.

ಇದೆಲ್ಲ ಸರಕಾರದ ಧೋರಣೆಗೆ ಸಂಬಂಧಿಸ ಸಂಗತಿಯಾದುದರಿಂದ ನಮ್ಮ ಜನರೇ ಯೋಗ್ಯ ನಿರ್ಣಯ ಕೈಗೊಳ್ಳ[illegible]. ಕೇಂದ್ರ ಸರಕಾರವು ಭಾರತದಲ್ಲಿ ಎಲ್ಲ ಕಡೆಯಲ್ಲೂ ಭೂ ಸುಧಾರಣಾ ನೀತಿಯಲ್ಲಿ ಏಕಸೂತ್ರತೆ ಇರುವಂತೆ ನೋಡಿಕೊಳ್ಳತಕ್ಕದ್ದು. ರಾಜ್ಯ ಸರಕಾರಗಳ ಹಾಗೂ ಕೇಂದ್ರ ಸರಕಾರದ ನಡುವೆ ಭೂ ಸುಧಾರಣೆಯಂಥ ಮಹತ್ವದ ಧೋರಣೆಯ ಸಂಬಂಧದಲ್ಲಿ ಭಿನ್ನಾಭಿಪ್ರಾಯ ವಿರುವುದು ಸಲ್ಲದು

ಭೂ ಸುಧಾರಣೆ ಸಾಧ್ಯವಾಗುವಂತೆ ಏನೆಲ್ಲ ಮಾಡಬೇಕೆಂಬ ವಿಷಯದಲ್ಲಿ ಸರಕಾರಕ್ಕೆ ಅಗತ್ಯವಿರುವ ಮಾಹಿತಿಯು ದೊರೆಯುತ್ತಿಲ್ಲ. ಭೂ ಸುಧಾರಣೆಯ ಯಶಸ್ಸು ಧೋರಣೆಯ ಸಮರ್ಪಕತೆಯನ್ನು ಹೊಂದಿಕೊಂಡಿರುವುದರಿಂದ, ಸಂಶೋಧನಾ ಮಂಡಳವೊಂದು ಈ ವಿಷಯದಲ್ಲಿ ಹೆಚ್ಚಿನ ಆಸ್ಥೆ ತೆಗೆದುಕೊಳ್ಳುವುದೂ ಭೂ ಸುಧಾರಣೆಯ ಕುರಿತು ರೈತರ ಪ್ರತಿ

(೧[illegible]ನೇ ಪುಟ ನೋಡಿರಿ)

★ ಭಾರತದ ತೈಲ ಶುದ್ಧೀಕರಣ ಕಾರ್ಖಾನೆಗಳು ★

ಬರ್ಮಾಶೆಲ್ ಹಾಗೂ ಇತರ ಕಂಪೆನಿಗಳ ಸಾಹಸ

ಈ ಯುಗದಲ್ಲಿ ಒಂದು ರಾಷ್ಟ್ರದ ಪ್ರಗತಿಯನ್ನು ಅಳೆಯಲು ಅಲ್ಲಿ ಬಳಸಲ್ಪಡುವ ಎಣ್ಣೆಯನ್ನೆ ಪ್ರಮಾಣವಾಗಿ ತೆಗೆದುಕೊಳ್ಳಬಹುದು- ಎಣ್ಣೆಯೆಂದರೇನೇ ಸಂಪತ್ತು ಎನ್ನುವಷ್ಟು ಅದಕ್ಕೆ ಮಹತ್ವ ಬಂದಿರುತ್ತದೆ. ಎಣ್ಣೆಯ ಗಣಿಗಳಿಲ್ಲದಿದ್ದರೆ ಇರಾಣದ ಕುರಿತು ಪಾಶ್ಚಾತ್ಯ ರಾಷ್ಟ್ರಗಳಲ್ಲಾಗಲೀ ನೆರೆಯ ರಶಿಯಾದಲ್ಲಾಗಲೀ ಆಸ್ಥೆ ಇರುತ್ತಿದ್ದಿಲ್ಲ. ಬರ್ಮಾದಂಥ ಸಣ್ಣ ರಾಷ್ಟ್ರಕೂಡ ಆರ್ಥಿಕೋನ್ನತಿಯನ್ನು ಸಾಧಿಸಲು ನೆರವಾದುದು ಎಣ್ಣೆಯ ಬಲವೊಂದೇ. ಸಂಯುಕ್ತ ರಾಜ್ಯ ಅಮೇರಿಕಾ ಭೂಲೋಕದ ಎಣ್ಣೆ ಉತ್ಪಾದನೆಯಲ್ಲಿ ಮೂರರಲ್ಲಿ ಎರಡಾಂಶ ಪಡೆದ. ಅಜೇಯವೆನಿಸಿದೆ. ಯುದ್ಧಕಾಲದಲ್ಲಿಯಾಗಲೀ ಶಾಂತಿಯ ಕಾಲದಲ್ಲಿಯಾಗಲೀ- ಎಣ್ಣೆಯ ಉಪಯೋಗಕ್ಕೆ ಚ್ಯುತಿ ಎಂಬುದಿಲ್ಲ. ಯುದ್ಧಕಾಲದಲ್ಲಿ ಟ್ಯಾಂಕರುಗಳು, ಹಡಗುಗಳು ಓಡಿಯಾಡಲು ಎಣ್ಣೆ ಅಗತ್ಯವೆನಿಸಿದರೆ, ಶಾಂತಿಯ ಕಾಲದಲ್ಲಿ ರಾಷ್ಟ್ರಾಭ್ಯುದಯದ ಅಸಂಖ್ಯ ಯೋಜನೆಗಳ ಬೆಳವಣಿಗೆ ಮತ್ತು ಪ್ರಾದುರ್ಭಾವಕ್ಕೆ ಎಣ್ಣೆ ಇಲ್ಲದೆ ನಡೆಯದು. ಎಣ್ಣೆಯ ಕೈಗಾರಿಕೆಯನ್ನು ತಿ ವಲಂಬಿಸಿಕೊಂಡು, ಶುದ್ಧ ಎಣ್ಣೆಯನ್ನು ಭಟ್ಟಿ ಇಳಿಸುವಾಗ ದೊರಕುವ ಅನೇಕ ಉಪವಸ್ತುಗಳನ್ನು ಉಪಯೋಗಿಸಿಕೊಂಡು, ಇತರ ಕಾರ್ಖಾನೆಗಳೂ ತಲೆಎತ್ತುವುದರಿಂದ, ತೈಲಶುದ್ಧೀಕರಣ ನಡೆಯುತ್ತಿರುವ ಪ್ರದೇಶ ದೊಡ್ಡ ಔದ್ಯಮಿಕ ಕೇಂದ್ರವಾಗುತ್ತದೆ. ಎಣ್ಣೆಯನ್ನು ಅಗೆದು ತೆಗೆಯುವ ಜಾಗಕ್ಕಿಂತಲೂ ಹೆಚ್ಚು ಪ್ರಾಧಾನ್ಯ ಈಗೀಗ ಎಣ್ಣೆ ಶುದ್ಧಮಾಡುವ ಕೇಂದ್ರಕ್ಕೆ ಸಂದಿದೆ.

ಎಣ್ಣೆಯ ಅಗತ್ಯ

ಇದಕ್ಕೆ ಕಾರಣವುಂಟು—ಲೋಕದ ಎಲ್ಲ ರಾಷ್ಟ್ರಗಳೂ ಭೂಗರ್ಭದಲ್ಲಿ ಎಣ್ಣೆಯ ನಿಕ್ಷೇಪವನ್ನು ಪಡೆದಿಲ್ಲ. ಹಾಗೆಂದು ಅಶುದ್ಧ ಎಣ್ಣೆಯನ್ನು ಈ ದೇಶಗಳಿಂದ ಎಲ್ಲಿಗೆ ಬೇಕೆಂದರೆ ಅಲ್ಲಿಗೆ ದೊಡ್ಡ ಹಡಗುಗಳಲ್ಲಿ ತುಂಬಿ ತೆಗೆದುಕೊಂಡು ಹೋಗಿ, ಶುದ್ಧೀಕರಣ ಕಾರ್ಖಾನೆಯಲ್ಲಿ ಭಟ್ಟಿ ಇಳಿಸುವುದು ಸಾಧ್ಯವಿದೆ. ಭಾರತವನ್ನು ಉದಾಹರಣೆಗೆ ತೆಗೆದುಕೊಂಡರೆ, ಇಲ್ಲಿ ಭೂಗರ್ಭದಲ್ಲಿ ಎಣ್ಣೆಸಿಗುವ ಪ್ರಮಾಣ ಅತ್ಯಲ್ಪ. ಅಸಾಮಿನ ದಿಗಬೋಯಿ ಎಂಬಲ್ಲಿ ಒಂದು ಎಣ್ಣೆ ಕಂಪೆನಿ ಸುಮಾರು ೫೦ ವರ್ಷದಿಂದ ಕೆಲಸಮಾಡುತ್ತಿದೆ. ಎಣ್ಣೆಯನ್ನು ಸಮೀಪದಲ್ಲಿಯೇ ಅಗೆದು ತೆಗೆದು, ಇಲ್ಲಿಯೇ ಶುದ್ಧೀಕರಣ ಕಾರ್ಯವನ್ನು ಕೈಗೊಳ್ಳುವರು. ಮೋಟರ್ ಪೆಟ್ರೋಲ್, ಡೀಸೆಲ್ ಎಣ್ಣೆ, ಚಿಮಿಣಿ ಎಣ್ಣೆ, ಪೆಟ್ರೋಲಿಯಂ, ಟರ್ಪೆಂಟೈನ್, ಮೇಣ, ಕೋಕ್ ಇತ್ಯಾದಿಗಳು ಭಟ್ಟಿ ಇಳಿಸುವಾಗ ದೊರೆಯುತ್ತವೆ. ಈ ಎಣ್ಣೆ ಪ್ರದೇಶದಲ್ಲಿ ಸುಮಾರು ೭೫೦೦ ಜನ ಕೆಲಸಮಾಡುತ್ತಿದ್ದು, ೧೫೦೦೦೦ ಗೆಲನ್ ಎಣ್ಣೆ ಉತ್ಪಾದನೆ ಹೊಂದುತ್ತದೆ ಆದರೆ ಇದು ಭಾರತದ ಆವಶ್ಯಕತೆಯನ್ನು ಪೂರೈಸುವಂತಿಲ್ಲ. ನಮಗೆ ಇದರ ಇಪ್ಪತ್ತು ಪಟ್ಟು ಎಣ್ಣೆ ಬೇಕಾಗಿದೆ. ಪಂಚವಾರ್ಷಿಕ ಯೋಜನೆ ಪೂರ್ಣ ಹೊಂದುವ ಕಾಲಕ್ಕೆ (೧೯೫೬) ಪ್ರಾಯಶಃ ನಮ್ಮ ಎಣ್ಣೆಯ ಬಳಕೆ ಈಗಿನದರ ಇಮ್ಮಡಿಯಾದೀತು. ಭೂಗರ್ಭದಲ್ಲಿ ಬೇರೆಲ್ಲಿಯೂ ಎಣ್ಣೆ ದೊರಕುವ ಚಿಹ್ನೆ ಇಲ್ಲದಿರುವುದರಿಂದ ಭಾರತವು ಅನಿವಾರ್ಯವಾಗಿ ಎಣ್ಣೆಯನ್ನು ಆಮದು ಮಾಡಿಕೊಳ್ಳಬೇಕು. ಆಯಾತ ಪ್ರಮಾಣ ಹೆಚ್ಚಿದಷ್ಟು ಭಾರತದ ಸಂಪತ್ತಿನ ಸೋರಿಯಾಗುವುದರಿಂದ ಇಲ್ಲಿಯೇ ಬೇರೆಯಾವುದಾದರೂ ಉಪಾಯವನ್ನು ಅನುಸರಿಸಿ ಎಣ್ಣೆ ಉತ್ಪಾದನೆಯಾಗುವಂತೆ ಮಾಡಲು ಸಾಧ್ಯವೇ—ಎಂಬ ಪ್ರಶ್ನೆ ಸರಕಾರದ ಮುಂದೆ ಬಂತು. ವೈಜ್ಞಾನಿಕ ಸಂಶೋಧನೆಗಳ ಪರಿಣಾಮವಾಗಿ ಕೋಕಿನಿಂದ ಎಣ್ಣೆಯನ್ನು ತೆಗೆಯಲು ಸಾಧ್ಯವೆಂದು ತಿಳಿದು ಬಂದುದರಿಂದ ಈ ಪ್ರಯತ್ನದತ್ತ ಗಮನವನ್ನು ಹರಿಸಿದರು. ದ್ವಿತೀಯ ಮಹಾಯುದ್ಧಕಾಲದಲ್ಲಿ ಜರ್ಮನಿ ಮತ್ತು ಬ್ರಿಟನುಗಳು ಕೋಕಿನಿಂದಲೇ ಎಣ್ಣೆಯನ್ನು ತೆಗೆದು ಆವಶ್ಯಕತೆ ತುಂಬಲು ಪ್ರಯತ್ನಿಸಿದ್ದವು. ಆದರೆ ವ್ಯಾವಹಾರಿಕ ದೃಷ್ಟಿಯಿಂದ ಇದು ಭಾರತಕ್ಕೆ ಪ್ರಯೋಜನಕಾರಿಯೆಂದು ತೋರಲಿಲ್ಲ. ಕೋಕದ ಆಕ್ಷೇಪ ಭಾರತದಲ್ಲಿ ಯಥೇಷ್ಟವಿದ್ದರೂ ಎಣ್ಣೆ ಇಳಿಸುವ ಈ ಕೃತ್ರಿಮ ವಿಧಾನ ತುಂಬ ವೆಚ್ಚವನ್ನು ತರುತ್ತದೆ; ಮತ್ತು ನಿಯಾತ ಮಾಡಿದ ಎಣ್ಣೆಯೊಂದಿಗೆ ಹೋಲಿಸಿದರೆ, ಕೃತ್ರಿಮ ಪೆಟ್ರೋಲಿನ ಬೆಲೆ ಕೈಯಳವಿನಲ್ಲಿ ಬರುವುದಿಲ್ಲ.

ವಿದೇಶೀ ಕಂಪನಿಗಳ ಸಾಹಸ

ಈ ಪರಿಸ್ಥಿತಿಯಲ್ಲಿ ಎರಡನೆಯ ಉಪಾಯವನ್ನು ಅನುಸರಿಸುವುದೇ ಪ್ರಶಸ್ತವೆಂದು ತೋರಿತು- ಬೇರೆ ದೇಶಗಳಿಂದ ಕಚ್ಚಾ ಎಣ್ಣೆಯನ್ನು ಆಮದು ಮಾಡಿಕೊಂಡು, ಭಾರತದಲ್ಲಿಯೇ ಶುದ್ಧೀಕರಣದ ಕಾರ್ಖಾನೆಗಳಲ್ಲಿ ಅದನ್ನು ಬಳಸಿಕೊಂಡರೆ, ವರ್ಷಕ್ಕೆ ಸುಮಾರು ೨೦ ಕೋಟಿ ರೂಪಾಯಿಗಳ ಉಳಿತಾಯವಾದೀತೆಂದು ಹೊಳೆಯಿತು. ಈ ಉಳಿತಾಯವಲ್ಲದೆ, ಎಣ್ಣೆ ಶುದ್ಧೀಕರಣ ಕಾರ್ಖಾನೆಯ ಅಸ್ತಿತ್ವದಿಂದಲೇ ಪ್ರೋತ್ಸಾಹ ಪಡೆದು ಅದಕ್ಕೆ ಸಂಬಂಧಿಸಿದಂತಿರುವ ಬೇರೆ ಅನೇಕ ಉದ್ಯಮಗಳು ತಲೆ ಎತ್ತಲೂ ಆಸ್ಪದ ದೊರೆಯುವುದರಿಂದ ಸರಕಾರದ ದೃಷ್ಟಿ ಇದನ್ನು ಗಮನಿಸಲು ತಡವಾಗಲಿಲ್ಲ. ರಾಷ್ಟ್ರೀಯ ಹಿತಕ್ಕೆ ಒಪ್ಪುವಂತೆ ಯೋಗ್ಯ ಶರ್ತಗಳಲ್ಲಿ ವಿದೇಶದ ಪ್ರಾಮುಖ್ಯ ಎಣ್ಣೆ ಕಂಪೆನಿಗಳು ಭಾರತದಲ್ಲಿ ಶುದ್ಧೀಕರಣ ಕಾರ್ಖಾನೆಯನ್ನು ತೆರೆಯಲು ಅವಕಾಶ ನೀಡಬೇಕೆಂದು ಸರಕಾರ ಕೂಡಲೇ ನಿರ್ಧರಿಸಿತು; ಮತ್ತು ೧೯೫೨ರಲ್ಲಿ ನಾಲ್ಕು ವಿದೇಶೀ ಎಣ್ಣೆ ಕಂಪೆನಿಗಳು ತಮ್ಮ ಪ್ರತಿನಿಧಿಗಳನ್ನು ಭಾರತ ಸರಕಾರದ ವಿನಂತಿಯಂತೆ ಇಲ್ಲಿ ತಿರುಗಾಡಿ ಮಾಹಿತಿ ಪಡೆಯಲು ಕಳಿಸಿದುವು. ಇವರು ಸುಮಾರು ಮೂರು ತಿಂಗಳಕಾಲ ಮುಂಬಯಿ, ಮದ್ರಾಸು, ವಿಶಾಖಪಟ್ಟಣ, ಕಲ್ಕತ್ತ, ಹೊಸಧಿಲ್ಲಿ ಮುಂತಾದ ನಗರಗಳನ್ನು ಸಂಚರಿಸಿ, ತಮ್ಮ ವರದಿಯನ್ನು ಒಪ್ಪಿಸಿದರು. ಮುಂಬಯಿಯ ಸಮೀಪದ ಟ್ರಾಂಬೇಯಲ್ಲಿ ಆಧುನಿಕ ಕಾರ್ಖಾನೆಗಳನ್ನು ಸ್ಥಾಪಿಸಲು ಸಿದ್ಧವಿರುವುದಾಗಿ ಬರ್ಮಾಶೆಲ್ ಕಂಪೆನಿಯವರೂ ಸ್ಟೆಂಡರ್ಡ್ ವೆಕ್ಯೂಮ್ ಕಂಪೆನಿಯವರೂ ತಿಳಿಸಿದರು. ಕಾಲ್ಟೆಕ್ಸ್ ಕಂಪೆನಿಯವರು ವಿಶಾಖಪಟ್ಟಣದಲ್ಲಿ ಕಾರ್ಖಾನೆ ತೆರೆಯಲು ನಿರ್ಧರಿಸಿದರು. ಭಾರತ ಸರಕಾರವು ಇದನ್ನು ಒಪ್ಪಿಕೊಂಡು, ಕಾರ್ಖಾನೆಗಳ ರಚನೆಗೋಸ್ಕರ ಹೊಸ ಕಂಪೆನಿಗಳ ಸ್ಥಾಪನಾ ಕಾರ್ಯ ಕೈಗೊಂಡಿತು. ಎಣ್ಣೆ ಉತ್ಪಾದನೆ ತೊಡಗುವವರೆಗೆ ಇವು ಖಾಸಗಿ ಜನರ ಕೈಯಲ್ಲಿ ಉಳಿಯುತ್ತವೆ; ಮತ್ತು ಆಕೂಡಲೇ ಇವನ್ನು ಸಾರ್ವಜನಿಕ (ಲಿಮಿಟೆಡ್) ಕಂಪೆನಿಗಳಾಗಿ ಪರಿವರ್ತಿಸಲಾಗುವುದು. ಭಾರತದ ಭಂಡವಾಳವೇ ಈ ಕಂಪೆನಿಗಳಲ್ಲಿ ಅಧಿಕ ಪ್ರಾಶಸ್ತ್ಯ ಪಡೆಯುತ್ತವೆ; ಮತ್ತು ಭಾರತೀಯ ಕೆಲಸಗಾರರಿಗೆ ಯೋಗ್ಯ ತಾಂತ್ರಿಕ ತರಬೇತಿಯೂ ದೊರೆಯುತ್ತದೆ. ಈ ಮೂರು ಕಾರ್ಖಾನೆಗಳು ಉತ್ಪಾದನೆ ತೊಡಗಿದುವೆಂದರೆ ಭಾರತಕ್ಕೆ ಹೊರಗಿನಿಂದ ಎಣ್ಣೆಯನ್ನು ಆಯಾತ ಮಾಡಿಕೊಳ್ಳುವ ಪ್ರಸಂಗವುಳಿಯುವುದಿಲ್ಲ. ಯುದ್ಧದ ಗುಂಡುಗಳು ಹಾರಿಕೊಂಡರೂ ನಮಗೆ ಅಂಜಿ

(೧೧ನೇ ಪುಟ ನೋಡಿರಿ)

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ

ರಥಬೀದಿ ಉಡುಪಿ.

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮಿ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಹೊತ್ತೊತ್ತಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅತಿಶಾಧಿಕ ಸ್ಪೆಶಲ್ ರೂ. 8-[ವಿ. ಪಿ. ಖರ್ಚು ರವಾನೆ ಪ್ರತ್ಯೇಕ]

Mrs. P. DEVEE, F.I.S.(N.J.)
CALCUTTA. 40

ಸ್ಟಾಕಿಸ್ಟರು: ಶಬಾ ಕಂಪನಿ, ಮಂಗಳೂರು.

ನವರಾತ್ರಿಯ ರಾಷ್ಟ್ರೀಯ ಮಹತ್ವ

ಶಕ್ತ್ಯಾರಾಧನೆಯೇ ಈ ಹಬ್ಬದ ವೈಶಿಷ್ಟ್ಯ

ಇದು ನವರಾತ್ರಿಯ ಪರ್ವಕಾಲ-ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವನ್ನು ಸ್ಫುಟವಾಗಿ ತೋರಿಸುವ ದಿನಗಳಿವು. ವೇದಕಾಲದಿಂದ ಪೌರಾಣಿಕಯುಗವನ್ನು ಪ್ರವೇಶಿಸಿ, ಈಚಿನ ಐತಿಹಾಸಿಕ ಪರಂಪರೆಯನ್ನು ಉಜ್ವಲಗೊಳಿಸಿದ ಭಾರತೀಯರ ರಾಷ್ಟ್ರೀಯ ಹಬ್ಬಗಳಲ್ಲಿ "ನವರಾತ್ರಿ" ಉಲ್ಲೇಖನೀಯವಾಗಿದೆ. ವಿದೇಶೀಯರ ಆಳ್ವಿಕೆಯು ಭಾರತೀಯ ಸಂಸ್ಕೃತಿಯನ್ನು ನಷ್ಟಪ್ರಾಯವಾಗಿ ಮಾಡಿರುವುದರಿಂದ, ರಾಷ್ಟ್ರೀಯ ಪರ್ವದಿನಗಳು ತಮ್ಮ ಪ್ರಾಚೀನ ವೈಭವ ಮತ್ತು ಮಹತ್ವವನ್ನು ಕಳೆದುಕೊಂಡಂತೆ ತೋರುತ್ತವೆ; ಮತ್ತು ಚೈತನ್ಯಹೀನವಾಗಿ ಭಾಸವಾಗುತ್ತವೆ. ಆದರೂ ಜನತೆಯ ಹೃದಯಪೀಠದಲ್ಲಿ ನವರಾತ್ರಿಯ ಹಬ್ಬವನ್ನು ಕುರಿತು ಇನ್ನೂ ಅನಾದರ ಭಾವನೆ ನೆಲೆಗೊಂಡಿಲ್ಲ—ಈ ಹಬ್ಬ ಭಾರತೀಯರಿಗೆ ನೀಡುವ ಸಂತೋಷಕ್ಕೆ ಇಂದಿಗೂ ಚ್ಯುತಿಬಂದಿಲ್ಲ.

ಸರ್ವರಿಗೂ ಆಚರಣೀಯ

ನವರಾತ್ರಿಯ ಉತ್ಸವ - ಭಾರತೀಯರೆಲ್ಲರಿಗೂ ಆಚರಣೀಯವಾದುದು. ಪ್ರಾಚೀನಕಾಲದಲ್ಲಿ ರೂಢವಾಗಿದ್ದ ನಾಲ್ಕು ವರ್ಣದವರೂ ನವರಾತ್ರಿಯ ಹಬ್ಬದಲ್ಲಿ ಸಂತೋಷಾಭಿಮಾನಗಳಿಂದ ಭಾಗವಹಿಸುತ್ತಿದ್ದರು. ಬ್ರಾಹ್ಮಣರು ತಮ್ಮ ತಪೋಬಲದ ವೃದ್ಧಿಗಾಗಿಯೂ ಜ್ಞಾನ ಮತ್ತು ಸಂಸ್ಕಾರವನ್ನು ಬೆಳೆಸಲು ಉದ್ದೇಶಿಸಿಯೂ ಸರಸ್ವತಿಯ ಪೂಜೆಯನ್ನು ಈ ಸಮಯ ಮಾಡುತ್ತಿದ್ದರು. ವರ್ಷವಿಡೀ ಜಾಗೃತಳಾಗಿದ್ದುಕೊಂಡು ಲೋಕಕ್ಕೆ ನೀತಿ, ನ್ಯಾಯ, ಧರ್ಮ ಮತ್ತು ಜ್ಞಾನದ ಸಂದೇಶ ನೀಡುವ ಶಾರದಾದೇವಿಯು ಆಶ್ವೀನ ಶುಕ್ಲ ೬ರಿಂದ ೯ರ ವರೆಗಿನ ನಾಲ್ಕು ದಿನಗಳಲ್ಲಿ ನಿದ್ರಾಸಕ್ತಳಾಗುತ್ತಾಳೆಂದೂ ಈ ಸಮಯದಲ್ಲಿ ಅವಳನ್ನು ಪೂಜೆಯ ಮೂಲಕ ಭಕ್ತಿಶ್ರದ್ಧೆಗಳಿಂದ ಸೇವಿಸಿ ಒಲಿಸಿಕೊಳ್ಳುವುದು ಸತ್ಸಂಪ್ರದಾಯವೆಂದೂ ತಿಳಿಯಲ್ಪಟ್ಟಿದೆ. ಕ್ಷತ್ರಿಯ ರಾಜರು "ಸೀಮೋಲ್ಲಂಘನ"ವನ್ನು ಮಾಡಿ, ತಮ್ಮ ಶೌರ್ಯ ಸಾಹಸಗಳನ್ನು ಪ್ರದರ್ಶಿಸಲು ವಿಜಯದಶಮಿಯ ದಿನ ಅತ್ಯಂತ ಪ್ರಶಸ್ತವಾದುದೆಂದು ತಿಳಿಯಲ್ಪಟ್ಟಿದೆ. ತಮ್ಮ ಆಯುಧ ಹಾಗೂ ಯುದ್ಧೋಪಕರಣಗಳನ್ನು ಪೂಜಿಸಿ, ಶಕ್ತಿ ಸ್ವರೂಪಿಣಿಯಾದ ದುರ್ಗಾಮಾತೆಯ ಕೃಪೆ ಪಡೆದುಕೊಳ್ಳುವುದಕ್ಕೆ ರಾಜವಂಶಜರು ಈ ಸಮಯ ಉದ್ಯುಕ್ತರಾಗುತ್ತಿದ್ದರು. ಮೈಸೂರಿನಲ್ಲಿ ವಿಜೃಂಭಣೆಯಿಂದ ನಡೆಯುವ ದಸರೆಯಲ್ಲಿ ಮಹಾರಾಜರು ದಿಗ್ವಿಜಯ ಕಾಂಕ್ಷಿಗಳಾಗಿ ಅಂಬಾರಿಯ ಆನೆಯಮೇಲೆ ಕುಳಿತು ಊರಿನ ಅಗಸೆ ಬಾಗಿಲನ್ನು ದಾಟಿ ಸೀಮೋಲ್ಲಂಘನ ಮಾಡುವ ಕಾರ್ಯಕ್ರಮ ಪ್ರಾಚೀನ ಕ್ಷತ್ರಿಯರಲ್ಲಿ ರೂಢವಾಗಿದ್ದ ಆಚಾರದ ದ್ಯೋತಕ. ವೈಶ್ಯರು ಭಗವತಿಯ ದಯೆಯಿಂದ ದೊರೆತ ಧನ ಧಾನ್ಯಗಳನ್ನು ಕಂಡುಹರ್ಷಿಸಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿಯ ಪೂಜೆಯಲ್ಲಿ ಮಗ್ನರಾಗುವರು. ವಿದೇಶಗಳಲ್ಲಿ ವ್ಯಾಪಾರೋದ್ದೇಶದಿಂದ ಸಂಚಾರ ಕೈಗೊಳ್ಳಲು ವೈಶ್ಯರಿಗೆ ಇದು ಪ್ರಶಸ್ತವಾದ ಕಾಲ. ಸೇವಾ ಜೀವನದಲ್ಲಿ ನಿರತರಾದ ಶೂದ್ರರಿಗೆ ಮಳೆಗಾಲ ಕಳೆದು ಶುಭ್ರ ಆಕಾಶವೂ ಬಿಳಿ ಮೋಡವೂ ಸುಗ್ಗಿಯ ಪೈರೂ ಕಂಗೊಳಿಸುವ ಈ ಸಮಯ ಉಲ್ಲಾಸಪ್ರದವೂ ಭಗವತ್ ಚಿಂತನೆಗೆ ಸುಯೋಗ್ಯವೂ ಆಗಿ ಕಾಣುವುದರಲ್ಲಿ ಆಶ್ಚರ್ಯವಿಲ್ಲ. ಉಕ್ಕೇರುವ ಸಂತೋಷದಿಂದ ಭಕ್ತಿ ಗೀತವನ್ನು ಹಾಡುತ್ತಾ ನೃತ್ಯಾಮೋದದಲ್ಲಿ ಅವರೆಲ್ಲರೂ ನವರಾತ್ರಿಯನ್ನು ಕಳೆದು ಧನ್ಯರಾಗುವರು

ಯುಗ ಸಂದೇಶ

ನವರಾತ್ರಿಯ ಸಂದರ್ಭದಲ್ಲಿ ಮುಖ್ಯವಾಗಿ ದುರ್ಗಾ ಪೂಜೆ ಶಾರದಾ ಪೂಜೆ, ಶಮೀ ಪೂಜೆ, ಇತ್ಯಾದಿಗಳು ನಡೆಯುತ್ತವೆ. ಪೌರಾಣಿಕ ಆಖ್ಯಾಯಿಕೆಯಂತೆ ಶ್ರೀರಾಮಚಂದ್ರನು ಒಂದು ಶಮೀವೃಕ್ಷದ ನೆರಳಲ್ಲಿ ಕುಳಿತು ವಿಶ್ರಮಿಸುತ್ತಿದ್ದಾಗ, ಲಂಕೆಯಲ್ಲಿ ಸೀತೆ ರಾವಣನ ಬಳಿ ಇರುವ ಸುದ್ದಿಯನ್ನು ಹನುಮಂತನಿಂದ ಕೇಳಿ ತಿಳಿದನೆಂದೂ ಮುಂದೆ ರಾಮನು ಲಂಕೆಯ ಮೇಲೇರಿ ಹೋಗುವಾಗ ಈ ಶಮೀವೃಕ್ಷದ ಪೂಜೆ ಮಾಡಿದನೆಂದೂ ತಿಳಿಯುತ್ತದೆ. ರಾಮನು ರಾವಣನನ್ನು ಆಶ್ವೀನ ಶುದ್ಧ ೧೦ನೇ ದಿನ ವಧಿಸಿ ಧರ್ಮಕ್ಕೆ ಜಯ ತಂದುದರಿಂದ ಅದು ವಿಜಯದಶಮಿಯೆಂದು ಹೆಸರಾಯಿತು. ಮಹಾಭಾರತದಲ್ಲಿ ಪಾಂಡವರು ಅಜ್ಞಾತವಾಸಕ್ಕೋಸ್ಕರ ವಿರಾಟನಗರವನ್ನು ಪ್ರವೇಶಿಸುವ ಕಾಲಕ್ಕೆ ತಮ್ಮ ಶಸ್ತ್ರಾಸ್ತ್ರಗಳನ್ನು ಒಂದು ಶಮೀವೃಕ್ಷಕ್ಕೆ ಕಟ್ಟಿದರೆಂದೂ ಉತ್ತರಗೋಗ್ರಹಣದ ಕಾಲದಲ್ಲಿ ಅರ್ಜುನನು ಶತ್ರು ಸೈನ್ಯದ ಮೇಲೆ ಏರಿಹೋಗಿ ಕೌರವರನ್ನು ಸೋಲಿಸಿದುದು ಇದೇ ವಿಜಯದಶಮಿಯ ದಿನವೆಂದೂ ಪ್ರತೀತಿ. ಹೀಗೆ ಶಮೀವೃಕ್ಷದ ಪೂಜೆ ಹಾಗೂ ವಿಜಯ ದಶಮಿಯದಿನ ಸೀಮೋಲ್ಲಂಘನ ಪದ್ಧತಿಯು ತೊಡಗಿತು. ಹಾಗೆಂದು ಪುರಾಣಕಾರರು ರಾಮನ ಕಾಲಕ್ಕೆ ಹಿಂದೆಯೇ ವಿಜಯ ದಶಮಿಯನ್ನು ಪರ್ವದಿನವಾಗಿ ಆಚರಿಸುತ್ತಿದ್ದರೆಂದು ಹೇಳುವರು. ವೇನ ಎಂಬ ಹೆಸರಿನ ಪಾಪಾಚಾರಿಯಾದ ರಾಜನನ್ನು ಪ್ರಜೆಗಳೆಲ್ಲ ಒಟ್ಟಿಗೆ ಸೇರಿ ಸಿಂಹಾಸನ ಭ್ರಷ್ಟನನ್ನಾಗಿ ಮಾಡಿದರೆಂದೂ, ಅವನ ಸ್ಥಾನದಲ್ಲಿ ಪೃಥುವೆಂಬವನನ್ನು ರಾಜ ಸಿಂಹಾಸನಕ್ಕೆ ಏರಿಸಿದರೆಂದೂ ಹೀಗೆ ಸಿಂಹಾಸನಾರೋಹಣ ನಡೆದ ದಿನವೇ ವಿಜಯ ದಶಮಿಯೆಂದೂ ಇವರ ಹೇಳಿಕೆ. ಪೃಥುವು ಹಿಂದೆ ದುಷ್ಟ ರಾಜನ ಉಪೇಕ್ಷೆಯಿಂದ ಬಂಜರು ಬಿದ್ದ ಭೂಮಿಯನ್ನು ಪ್ರಜಾಹಿತಾರ್ಥವಾಗಿ ಉತ್ತಿ ಬಿತ್ತಿ ಧಾನ್ಯೋಪೇತವಾಗಿಮಾಡಲು ನೆರವಾದನೆಂದು ಈ ಕತೆ ತಿಳಿಸುತ್ತದೆ. ಪೃಥ್ವಿಯನ್ನು ಪೃಥುವೆಂಬ ರಾಜನು ಸಂಪತ್ಸಮೃದ್ಧ ಮಾಡಿದನಾದುದರಿಂದ ಅವನ ಸಿಂಹಾಸನಾರೋಹಣ ದಿನವನ್ನು ನೆನೆಯುವುದೂ ಧಾನ್ಯ ದೇವತೆಯನ್ನು ಅರ್ಚಿಸುವುದೂ ಒಳ್ಳೆಯ ಸಂಪ್ರದಾಯವಾಗಿ ಪರಿಣಮಿಸಿತು. ಎಲ್ಲಕ್ಕೂ ಮಿಗಿಲಾಗಿ ಲೋಕ ಕಂಟಕನಾದ ರಾಜನನ್ನು ಪ್ರಜೆಗಳು ಗದ್ದುಗೆಯಿಂದ ಕೆಳಗಿಳಿಸಿ ಲೋಕ ಹಿತಕಾರಕನಾದವನನ್ನು ಪಟ್ಟಕ್ಕೇರಿಸಿದ ಘಟನೆ—ಪ್ರಜಾಪ್ರಭುತ್ವ ಪ್ರಾಬಲ್ಯಕ್ಕೆ ಬಂದಿರುವ ಈ ಯುಗಕ್ಕೆ ಅಮರ ಸಂದೇಶ ನೀಡುವಂತಿದೆ.

ಚೈತನ್ಯ ಸ್ವರೂಪ

ಭಾರತದ ಪ್ರತ್ಯೇಕ ಭಾಗದಲ್ಲೂ ನವರಾತ್ರಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವರು. ರಾಮಲೀಲೋತ್ಸವವೂ ದುರ್ಗಾ ಪೂಜೆಯೂ ಎಲ್ಲೆಲ್ಲಿಯೂ ನಡೆಯುತ್ತವೆ. ಹಿಂದೂ ಸಂಸ್ಕೃತಿಯ ಹಾಗೂ ಧರ್ಮದ ಮೂಲಾಧಾರವಾಗಿರುವ ಭಗವಂತನ ಕಲ್ಪನೆಯಲ್ಲಿ ಪ್ರಕೃತಿ ಪುರುಷರ ಸ್ಥಾನ ಅಲೌಕಿಕವಾದದ್ದು. ಓಂಕಾರ ಸ್ವರೂಪದಿಂದ ವಿಶ್ವವನ್ನೇ ಆಕ್ರಮಿಸಿರುವ ಆ ಚೈತನ್ಯಕ್ಕೆ ಪೂರಕವಾಗಿರುವುದೇ ಮಹಾಮಾಯೆ. ಇವಳೇ ಆದಿಶಕ್ತಿ, ಕಾತ್ಯಾಯಿನಿ, ಸಿದ್ಧಿದಾತ್ರಿ, ಮಹಾಗೌರಿ ಎಂದು ಮುಂತಾಗಿ ಸಹಸ್ರಾರು ನಾಮಾಂಕಿತಳಾಗಿರುವಳು. ವೇದಗಳಲ್ಲಿ ಈ ದುರ್ಗಾಮಾತೆಯನ್ನು ಕುರಿತಾದ ಅನೇಕ ಮಂತ್ರಗಳು ಇವೆ. ಋಗ್ವೇದವು, ಆದಿಶಕ್ತಿಯನ್ನು ಸೂರ್ಯದೇವಿ, ಲಕ್ಷ್ಮೀದೇವಿ, ಮಹಾಕಾಳಿ ಮಹಾದುರ್ಗೆ, ಸರಸ್ವತೀ, ಗಾಯತ್ರಿ, ಸಾವಿತ್ರಿ ಮುಂತಾದ ಹೆಸರುಗಳಿಂದ ಕರೆದು ಅಖಿಲ ಬ್ರಹ್ಮಾಂಡದಲ್ಲೆಲ್ಲ ವ್ಯಾಪ್ತವಾಗಿರುವವಳೆಂದು ವರ್ಣಿಸಿದೆ. ಶ್ರುತಿಗಳು ಅಚಿಂತ್ಯವಾದ ಬ್ರಹ್ಮದ ಶಕ್ತಿ ಸ್ವರೂಪವೇ ದುರ್ಗಾಮಾತೆಯೆಂದು ಹೇಳುತ್ತವೆ. ದುರ್ಗೆಯು ಶುಂಭ ನಿಶುಂಭರೆಂಬ ದೈತ್ಯರನ್ನು ಸಂಹರಿಸುವುದಕ್ಕೋಸ್ಕರ ಅವತೀರ್ಣಳಾಗಬೇಕಾಯಿತೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ದುರ್ಗಾಪೂಜೆಯಿಂದ ಶಕ್ತಿ ಸಾಮರ್ಥ್ಯಗಳು ಲಭಿಸಿ, ಆಸುರೀ ವೃತ್ತಿಯು ನಾಶವಾಗಿ ಸಾತ್ವಿಕ ಬುದ್ಧಿಯು ಬೆಳೆದು ಬರುವುದೆಂದು ಎಲ್ಲರ ವಿಶ್ವಾಸ. ದುರ್ಗಾಮಾತೆಯು ಪರಮ ಪೂಜನೀಯಳೂ ಬ್ರಹ್ಮಮಯಳೂ ಶಕ್ತಿ ಪ್ರದಾಯಿನಿಯೂ ಅಸುರ ಸಂಹಾರಿಣಿಯೂ ಜಗದ್ಧಾತ್ರಿಯೂ ತ್ರಿಗುಣಮಯಿಯೂ ಆದ ಮಹಾಮಾಯೆ. ಅವಳು ದ್ವಿಭುಜ, ಚತುರ್ಭುಜ, ಷಡ್ಭುಜ, ಶತಭುಜ ಹಾಗೂ ಸಹಸ್ರಭುಜಾಂಕಿತಳಾಗಿ ಧರ್ಮ ರಕ್ಷಣೆಯನ್ನೂ ಶಿಷ್ಟಪರಿಪಾಲನೆಯನ್ನೂ ಮಾಡುವಳೆಂದು ದೇವೀ ಮಹಾತ್ಮೆ ತಿಳಿಸುತ್ತದೆ. ಇಂಥ ಮಹಿಮಾನ್ವಿತಳನ್ನು ಕೇವಲ ಭಾರತದಲ್ಲಿಯಷ್ಟೇ ಅಲ್ಲ- ಈಜಿಪ್ತ, ಗ್ರೀಸ್, ಪೆಲಿಸ್ತಾಯಿನ್, ಏಸ್ಯಾ ಮೈನರ್ ಮುಂತಾದ ದೇಶಗಳಲ್ಲಿಯೂ ಆರಾಧಿಸುವ ಪದ್ಧತಿ ಪ್ರಾಚೀನ ಕಾಲದಲ್ಲಿ ರೂಢವಾಗಿತ್ತೆಂದು ವಿದ್ವಾಂಸರ ಅಭಿಪ್ರಾಯ. ಜನ ಜೀವನವನ್ನು ಸುಖಮಯವಾಗಿಸುವ ನವರಾತ್ರಿಯಂಥ ಪರ್ವದಿನಗಳಲ್ಲಿ ಭಾರತೀಯರೆಲ್ಲರೂ ಆಸ್ಥೆಯಿಂದ ಭಾಗವಹಿಸಿ ಸತ್ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವುದು ಅಗತ್ಯ. ರಾಷ್ಟ್ರೀಯ ಮನೋವೃತ್ತಿಯನ್ನು ಬೆಳೆಸಿಕೊಳ್ಳಲೂ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳಲೂ ದಸರೆಯಂಥ ಪರ್ವ ದಿನಗಳು ನಮಗೆ ಯಾವ ಕಾಲಕ್ಕೂ ಸ್ಫೂರ್ತಿಯನ್ನು ಕೊಡಬಲ್ಲವು.

In the Court of the Prl Subordinate Judge of S Kanara

O. S. 214/1953.

Lingamma alias Gowramma Pltf.
Seethamma & others. Defts.

To

1. Seethamma, w/o Laxman Naik Panemangalore Kasba Village.
2. Abbu Beary | Children of
3. Athijanma | Abdul Kadri residing at Nandavar of Munoor Village
4. Kittu Hengsu, w/o Kandige Thukra Madiwala. Sajeepumunnoor Village afosresaid, Mangalore Taluk.

The abovenamed plaintiff has filed the above suit for partition and delivery of the plaint property and mesne profits and that the said suit is posted to 26—10—1953 for your appearance. You are hereby directed to appear person or by a pleader, failing which, the same will be heard and decided exparte.

K. Balakrishna Rao
Advocate for Pltf.

ಸರ್ವೋತ್ಕೃಷ್ಟ ಬೇಂಕಿಂಗ್ ವ್ಯವಹಾರ

ಆಧುನಿಕ ಜನಜೀವನದಲ್ಲಿ ಮಿತವ್ಯಯದ ಬೆಲೆಯು ಅತೀ ಮಹತ್ವದ್ದಾಗಿದೆ. ಜೀವನ ಸಂಗ್ರಾಮದಲ್ಲಿ ಬಾಳಿ ಬದುಕಬೇಕಾದರೆ ನಾವು, ನಮ್ಮ ಮಕ್ಕಳು ಮಿತ ವ್ಯಯದ ಅಭ್ಯಾಸ ಮಾಡಬೇಕು. ಕುಟುಂಬದ ಪ್ರತಿಯೊಬ್ಬನ ಹೆಸರಿನಲ್ಲಿಯೂ ಒಂದೊಂದು ಕ್ಯುಮಿಲೇಟಿವ್ ಡೇಪಾಜಿಟ್ ಲೆಕ್ಕವನ್ನು ಪ್ರಾರಂಭಿಸುವುದು ಮಿತವ್ಯಯದ ಒಂದು ಉತ್ತಮ ಸಾಧನವಾಗಿದೆ. ಮಾತ್ರವಲ್ಲದೆ ಕನಿಷ್ಠ ಮೊತ್ತದಲ್ಲಿ ಸಾಕಷ್ಟು ಉಳಿತಾಯ ಮಾಡಲು ಶಕ್ಯವಿದೆ.

ರೂಪಾಯಿ 5,00,00,000ಕ್ಕೂ ಮಿಕ್ಕಿದ ವಹಿವಾಟು.

THE CANARA INDUSTRIAL & BANKING SYNDICATE LTD.,

Estd: 1925 H. O. UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.



ಪಂಚವಾರ್ಷಿಕ ಯೋಜನೆಯ ಪುನರ್ಘಟನೆ

ಮದ್ರಾಸಿಗೆ ಮೂರು ಮಂದಿ ಹೊಸ ಮಂತ್ರಿಗಳು

ಆಂಧ್ರರಾಜ್ಯದ ಮುನ್ನಡೆ

ಆಂಧ್ರ ಮಂತ್ರಿಮಂಡಳವು ತನ್ನ ಕಾರ್ಯಾರಂಭದಲ್ಲಿಯೇ ಪ್ರಗತಿಯನ್ನು ತೋರಿಸುತ್ತಿರುವ ಶುಭ ಚಿಹ್ನೆ ಕಾಣುತ್ತದೆ. ಶ್ರೀ ವಿಶ್ವನಾಥಮ್ಮರು ಕೆಲವು ಅಗತ್ಯದ ಸುಧಾರಣೆಗಳನ್ನು ಮಾಡಲು ಸರಕಾರ ಉದ್ದೇಶಿಸಿರುವುದೆಂದು ಬಹಿರಂಗಗೊಳಿಸಿರುವರು. ನದ್ಯ ನ್ಯಾಯಾಂಗದಲ್ಲಿ ಮಹತ್ವದ ಸುಧಾರಣೆಗಳಿಗೆ ಅವಕಾಶವಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೆನಿಸಿದ ಇನ್ನೊಂದು ಸುಧಾರಣೆ ಕೃಷಿನಿರತರಾದ ಒಕ್ಕಲಿಗರಿಗೆ ಕೊಡಬೇಕಾದ ರಕ್ಷಣೆ ಎನ್ನಬಹುದು. ವ್ಯವಸಾಯವನ್ನು ಕೈಗೊಂಡ ಒಕ್ಕಲುಗಳಿಗೆ ಯೋಗ್ಯ ಸಂರಕ್ಷಣೆಯನ್ನು ಕೊಡಲು ಭಾರತದ ಹೆಚ್ಚಿನ ರಾಜ್ಯಗಳು ಧೈರ್ಯದ ಕ್ರಮಗಳನ್ನು ಕೈಗೊಂಡಿರುವುದಿಲ್ಲ. ಕಮ್ಯೂನಿಸ್ಟರ ಪ್ರಬಲ ವಿರೋಧವನ್ನು ಇದಿರಿಸಬೇಕಾಗುವ ಆಂಧ್ರದ ಸರಕಾರ ಈ ವಿಷಯದಲ್ಲಿ ಪ್ರಾರಂಭದಿಂದಲೇ ಮುಂಜಾಗ್ರತೆಯನ್ನು ವಹಿಸಿ ದೊಣ್ಣೆಯಿಂದ ಬಡಿದು ತಲೆಯೊಡೆದು ಗಂಟು ಕಸಿದುಕೊಳ್ಳಲು ಬಿಡುವುದಕ್ಕೆ ಮುಂಚೆಯೇ ಆ ಗಂಟನ್ನು ದಾನಮಾಡಿ ಪುಣ್ಯ ಕಟ್ಟಿಕೊಳ್ಳುವುದು ಹಿತ. ಆಂಧ್ರದಲ್ಲಿರುವ ಸರಕಾರವು ಸಮ್ಮಿಶ್ರವೇ ಏಕಪಕ್ಷೀಯವೇ ಎಂಬ ವಿವಾದ ಪ್ರಾರಂಭದಲ್ಲಿ ಎದ್ದಿತು—ಈಗ ಅದು ಶಾಂತವಾದಂತೆಯೇ. ವಿಶ್ವನಾಥಮ್ಮರು ಸ್ಪಷ್ಟಗೊಳಿಸಿ, ಅದು ರೂಪಾಯಿಗೆ ಹದಿನಾರಾಣೆಸಮ್ಮಿಶ್ರ ಸ್ವರೂಪದ ಮಂತ್ರಿ ಮಂಡಳವೇ ಆಗಿರುತ್ತದೆ. ಆದರೆ ಈ ಮಂತ್ರಿ ಮಂಡಳದ ಕೆಲಸ ಇನ್ನೂ ಸುಗಮವಾಗಿರುವುದಿಲ್ಲ – ಕೃಷಿಕರ ಲೋಕ ಪಕ್ಷಕ್ಕೆ ಈಗ ಕಾಂಗ್ರೆಸ್ಸಿನೊಂದಿಗೆ ಅಸಮಾಧಾನ ಹುಟ್ಟಿಕೊಂಡಿದೆ– ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು ಕಾಂಗ್ರೆಸಿನ "ಕುಸಕತನ"ದಿಂದ ಬೇಸತ್ತಿದೆ. ಇನ್ನೊಂದು ಕಡೆ ಕಮ್ಯೂನಿಸ್ಟ ಪಕ್ಷದ ಧುರೀಣರು ಆಂಧ್ರ ರಾಜಧಾನಿಯ ಪ್ರಶ್ನೆಯನ್ನು ಇನ್ನೊಮ್ಮೆ ಎತ್ತುವ ಹವಣಿಕೆಯಲ್ಲಿದ್ದಾರೆ- ಆಂಧ್ರ ರಾಜ್ಯದ ಶಾಸನ ಸಭೆಯ ಪ್ರಾರಂಭದಲ್ಲಿಯೇ ಈ ವಿಷಯವನ್ನು ಪ್ರಸ್ತಾಪಿಸಲು ಶ್ರೀ ನಾಗಿರೆಡ್ಡಿಯವರು ನಿರ್ಧಾರ ಮಾಡಿದಂತೆ ತೋರುತ್ತದೆ. ಶಾಸನ ಸಭೆಯ ಅಧಿವೇಶನವನ್ನು "ಬೇಗನೇ" ಕರೆಯಬೇಕೆಂದು ಅವರು ಗವರ್ನರರನ್ನು ಒತ್ತಾಯದಿಂದ ಕೇಳಿರುವರು. ಪರಿಸ್ಥಿತಿ ಹೀಗಿದ್ದರೂ ಪ್ರಕಾಶಮರ ಮಂತ್ರಿ ಮಂಡಳಕ್ಕೆ ಶಾಸನ ಸಭೆಯ ೧೪೦ ಸದಸ್ಯರಲ್ಲಿ ೭೫-೮೦ ರಷ್ಟು ಬಹುಮತ ದೊರೆತೇ ತೀರುವುದೆನ್ನುವ ಆಶಾವಾದ ಮಾತ್ರ ಬಿದ್ದು ಹೋಗಿರುವುದಿಲ್ಲ. ಪ್ರಕಾಶಮರ ವ್ಯಕ್ತಿತ್ವದ ವರ್ಚಸ್ಸು ಅಷ್ಟು ಬಹುಮತವನ್ನು ಗಳಿಸಿಕೊಂಡೀತೆಂಬ ಬಗ್ಗೆ ಸಂಶಯ ಪಡುವ ಜನರು ಕಡಿಮೆ.

ದಾತಾರರ ಆಶಾವಾದ

ಕರ್ನಾಟಕದ ಪ್ರಶ್ನೆಯು ತೀವ್ರವಾಗಿ ಈಗ ಪ್ರತಿಪಾದಿಸಲ್ಪಡುತ್ತಿಲ್ಲ.— ಕನ್ನಡಿಗರ ಉತ್ಸಾಹ ಪ್ರದರ್ಶನಕ್ಕೆ ಈ ಕಾಲ ತಕ್ಕುದಾಗಿ ಕಾಣುವುದಿಲ್ಲವೆಂದು ತೋರುತ್ತದೆ. ಪ್ರಧಾನಮಂತ್ರಿ ನೆಹರೂರವರು ಕರ್ನೂಲಿಗೆ ಬಂದವರು ದಕ್ಷಿಣಭಾರತದ ಬೇರೆ ಕೆಲವು ನಗರಗಳನ್ನೂ ಸಂದರ್ಶಿಸಿ ಜನತೆಯ ಅಂತಃಕರಣವನ್ನು ಮುಟ್ಟುವಂತೆ ಪ್ರಚಂಡ ಭಾಷಣಗಳನ್ನು ಮಾಡಿದಾಗ ಏಕೀಕರಣ ನಾಗಬೇಕೆನ್ನುವ ಕನ್ನಡಿಗರ ಇಚ್ಛೆಯೂ ಬೇಡಿಕೆಯೂ ನ್ಯಾಯವಾದದ್ದೆಂದು ನುಡಿದರು. ಈ ಮಾತಿನಿಂದಲೇ ಕನ್ನಡಿಗರು ನಿಶ್ಚಿತ ಭರವಸೆಯನ್ನು ಪಡೆದುಕೊಂಡಂತಾಯಿತು. ಕೇಂದ್ರಸರಕಾರದ ಗೃಹಶಾಖೆಯ ಉಪಮಂತ್ರಿ ಮಾನ್ಯ ಶ್ರೀ ದಾತಾರರು ಹೈದರಾಬಾದಿನಲ್ಲಿ ಮಾತನಾಡುತ್ತಾ "ಮಂತ್ರಿಯೊಂದಲ್ಲ – ಕನ್ನಡಿಗನೆಂದು ಹೇಳುವುದಾದರೆ, ಇನ್ನು ಕೆಲವೇ ತಿಂಗಳುಗಳಲ್ಲಿ ಕರ್ನಾಟಕ ರಾಜ್ಯ ನಿರ್ಮಾಣವಾಗುವುದು" ಎಂದು ಭವಿಷ್ಯ ನುಡಿದರು "ಕೆಲವೇ ತಿಂಗಳು" ಎಂಬ ಮಾತೇನೋ ಸಂಶಯಕರ—ಆದರೆ ಕೆಲವು ವರ್ಷಗಳಲ್ಲಿ ಸಂಯುಕ್ತಕರ್ನಾಟಕ ರಾಜ್ಯ ತಲೆಯೆತ್ತುವುದೆಂಬಲ್ಲಿ ಮಾತ್ರ ಈಗ ಯಾರಿಗೂ ಸಂದೇಹವುಳಿದಿಲ್ಲ. ಮೈಸೂರಿನ ಮುಖ್ಯಮಂತ್ರಿಗಳು ಬಳ್ಳಾರಿಯ ಸೇರ್ಪಡೆ ಏಕೀಕರಣದ ನಾಂದಿಎಂಬುದಾಗಿ ವೃತ್ತಪ್ರವರ್ತಕ ನುಡಿದಿರುವುದನ್ನು ಅಧಿಕೃತ ಹೇಳಿಕೆಯಾಗಿ ತೆಗೆದುಕೊಳ್ಳಬಹುದೆಂದು ದಾತಾರರು ಸೂಚಿಸಿರುವುದು ಗಮನಾರ್ಹವಾಗಿರುತ್ತದೆ. ನೆಹರೂರವರು ರಾಜ್ಯ ನಿರ್ಮಾಣ ರಚನೆಯನ್ನು ಅತ್ಯಂತ ಅಗತ್ಯದ ಸಂಗತಿಯಾಗಿ ಇನ್ನೂ ತಿಳಿದುಕೊಂಡಿಲ್ಲವೆಂಬುದೊಂದೇ ಕೊರತೆ. ರಾಷ್ಟ್ರೀಯ ಐಕ್ಯ ಮತ್ತು ಅಭಿವೃದ್ಧಿ ಪ್ರಯತ್ನಗಳ ಕಡೆಗೆಯೇ ಜನರು ಹೆಚ್ಚು ಲಕ್ಷ್ಯವನ್ನು ಪೂರೈಸಿ ಪರಿಶ್ರಮ ನಿರತರಾಗಬೇಕೆಂಬ ಅವರ ನಿಲುವು ಇನಿತೂ ಬದಲಾಗಿರುವುದಿಲ್ಲ. ರಾಷ್ಟ್ರವನ್ನು ಕಟ್ಟುವುದಕ್ಕೆ ಸಮಸ್ತ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಳ್ಳಬೇಕೆಂದು ಅವರು ದಕ್ಷಿಣ ಭಾರತ ಸಂಚಾರ ಕಾಲದಲ್ಲಿ ಜನತೆಯನ್ನು ಪ್ರಾರ್ಥಿಸಿದರು. ಪ್ರಾಂತೀಯ ಭಾವನೆ, ಭಾಷಾಭಿಮಾನ, ಸಂಕುಚಿತ ಜಾತೀಯತೆಗಳು ಸ್ವಾತಂತ್ರ್ಯ ರಕ್ಷಣೆಗೆ ಮಾರಕವಲ್ಲವೆಂದವರು ಪದೇ ಪದೇ ಎಚ್ಚರಿಸಿರುವುದನ್ನು ನೋಡಿದರೆ ನಾಳೆ ಬೆಳಗ್ಗೆ ಕನ್ನಡ ರಾಜ್ಯ ಅಸ್ತಿತ್ವಕ್ಕೆ ಬಂದರೂ ಸಹ, ಹಟಮಾರಿ ಮಗುವಿನ ಆಶೆ ಪೂರೈಸುವ ತಂದೆಯ ಮನೋಭಾವನೆಯಂತೆಯೇ ಕೇಂದ್ರ ಸರಕಾರದ ಧೋರಣೆ ಕಂಡುಬಂದೀತು.

ಮದ್ರಾಸಿನ ಮಂತ್ರಿ ಮಂಡಳಿ

ಮಂತ್ರಿ ಮಂಡಳವನ್ನು ವಿಸ್ತರಿಸುವುದಕ್ಕೆ ಇನ್ನೂ ಸ್ವಲ್ಪ ಸಮಯ ಕಾಯಬೇಕಾಗುವುದೆಂದು ಹೇಳಿದ ರಾಜಾಜಿಯವರು ಕೆಲವೇ ದಿನಗಳಲ್ಲಿ ಮೂವರು ಹೊಸ ಮಂತ್ರಿಗಳನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಂಡರು ಕಾಮರಾಜನಾದರರಪ್ರಾಬಲ್ಯವಿರುವ ತಮಿಳುನಾಡಿಗೆಯೇ ಹೊಸ ಮಂತ್ರಿಗಳು ಸೇರಿರುವರು. ಶ್ರೀ ಭಕ್ತವತ್ಸಲಂ ಅವರು ಮಂತ್ರಿಗಳಾಗುವರೆಂಬ ನಿರೀಕ್ಷೆ, ಎಲ್ಲರಿಗೂ ಇದ್ದಿತು—ಕಾಮರಾಜ ನಾಡಾರರ ಬಲಗೈಯಂತೆ ಭಕ್ತವತ್ಸಲಂ ಇರುವರು, ಮಾತ್ರವಲ್ಲ ಮದ್ರಾಸಿನಲ್ಲಿ ಹಿಂದೆ ಬಾಳಿದ ಪ್ರಕಾಶಂ, ಓಮಂದೂರು ಹಾಗೂ ಕುಮಾರಸ್ವಾಮಿ ರಾಜಾರವರ ಮಂತ್ರಿಮಂಡಳದಲ್ಲಿ ಕೆಲಸಮಾಡಿದ ಅನುಭವವೂ ಇವರಿಗಿದೆ. ಆದರೆ ಉಳಿದಿಬ್ಬರು ಮಂತ್ರಿಸ್ಥಾನಕ್ಕೆ ಹೊಸಬರು. ಮಧುರಾಜಿಲ್ಲೆಗೆ ಸೇರಿದ ಶ್ರೀ ಕೆ. ರಾಜಾರಾಮರು ಅರ್ಥ ಸಚಿವರ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ಕೆಲಸಮಾಡುತಿದ್ದರು. ಇವರು ಒಳ್ಳೆಯ ಕಾಂಗ್ರೆಸ ಕಾರ್ಯಕರ್ತರೆಂದೂ ತಮ್ಮ ಜಿಲ್ಲೆ ಹಾಗೂ ಮತದಾರ ಕ್ಷೇತ್ರದಲ್ಲಿ ತುಂಬ ಜನಪ್ರಿಯರೆಂದೂ ತಿಳಿದಿದೆ. ತಮ್ಮ ಹೊಸ ಸ್ಥಾನ- ಹೊಣೆಗಾರಿಕೆಯನ್ನು ಯಶಸ್ವಿಯಾಗಿ ಇವರು ನೆರವೇರಿಸುವ ಭರವಸೆ ಇದೆ. ರಾಜಾಜಿ ಮೇಲಿನೀರ್ವರನ್ನು ಆರಿಸಿದುದು ಜೋಡ್ಯದ ಸಂಗತಿಯಲ್ಲ—ಶ್ರೀಮತಿ ಜ್ಯೋತಿ ವೆಂಕಟಾಚಲಂ ಎಂಬ ಮಹಿಳಾಮಣಿಯನ್ನು ಸಚಿವ ಸಂಪುಟದಲ್ಲಿ ಸೇರಿಸಿಕೊಂಡುದೇ ಆಶ್ಚರ್ಯ. ಶ್ರೀಮತಿ ಜ್ಯೋತಿಯವರು ಶಾಸನ ಸಭೆಯಲ್ಲಿ ಸ್ಥಾನ ಪಡೆದವರಲ್ಲ. ಮದ್ರಾಸಿನ ಶೇರಿಫರ ಪದವಿ; ಮತ್ತು ಸಾಮಾಜಿಕ ಕಾರ್ಯಕರ್ತೆಯೆಂದೇ ಇವರ ಕೀರ್ತಿ. ಗೌರವ ನ್ಯಾಯಾಧೀಶರಾಗಿಯೂ ಚಲಚ್ಚಿತ್ರ ಸೆನ್ಸಾರ್ ಮಂಡಳದ ಸದಸ್ಯೆಯಾಗಿಯೂ ಇವರು ದುಡಿಯುತಿದ್ದರು. ಶ್ರೀ ಡಿ. ಸಂಜೀವಯ್ಯನವರು ಆಂಧ್ರಕ್ಕೆ ಹೋದ ಮೇಲೆ ತೆರವಾದ ಹರಿಜನ ಮಂತ್ರಿಗಳ ಸ್ಥಾನಕ್ಕೆ ರಾಜಾಜಿ ಶ್ರೀಮತಿ ಜ್ಯೋತಿಯವರೇ ತಕ್ಕವರೆಂದು ನಿರ್ಣಯಿಸಿದರು. ಘಟನೆಯಂತೆ ಅಧಿಕಾರ ವಹಿಸಿಕೊಂಡು ಆರು ತಿಂಗಳುಗಳಲ್ಲಿ ಇವರು ಶಾಸನ ಸಭೆಯ ಯಾವುದಾದರೊಂದು ಮನೆಗೆ ಆಯ್ಕೆ ಹೊಂದಬೇಕಾಗುವುದು. ಮಂತ್ರಿ ಮಂಡಳದಲ್ಲಿ ಶಾಖೆಗಳ ಹಂಚುವಿಕೆ ನಡೆದು, ಭಕ್ತವತ್ಸಲಮರಿಗೆ ಮೂರನೆಯ ಸ್ಥಾನವೂ, ಆ ಸ್ಥಾನದಲ್ಲಿದ್ದ ಅರ್ಥ ಸಚಿವ ಸುಬ್ರಹ್ಮಣ್ಯಮರಿಗೆ ನಾಲ್ಕನೆಯಸ್ಥಾನವೂ ಸಂದಿದೆ. ಶ್ರೀ ರಾಜಗೋಪಾಲಾಚಾರಿ, ಶ್ರೀ ಎ. ಬಿ. ಶೆಟ್ಟಿ, ಹಾಗೂ ಶ್ರೀ ಕೆ. ವೆಂಕಟಸ್ವಾಮಿ ನಾಯ್ಡು ರವರು ತಮ್ಮ ಹಿಂದಿನ ಶಾಖೆಗಳನ್ನೆ ನೋಡಿಕೊಳ್ಳುವರು. ಉಳಿದವರ ಶಾಖೆಗಳಲ್ಲಿ ಸಾಮಾನ್ಯ ಬದಲಾವಣೆ ಕಂಡು ಬರುತ್ತದೆ.

ಯೋಜನೆಯ ಪುನರ್ಘಟನೆ

ಹೊಸದಿಲ್ಲಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯು ಈಚೆಗೆ ಸೇರಿತು. ಅಧ್ಯಕ್ಷ ಶ್ರೀ ನೆಹರೂರವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಪಂಚವಾರ್ಷಿಕ ಯೋಜನೆಯನ್ನು ಉದ್ಯೋಗಾವಕಾಶಗಳು ಹೆಚ್ಚುಗೊಳ್ಳುವಂತೆ ಪುನರ್ಘಟಿಸಲು ಉದ್ದೇಶಿಸಿರುವುದಾಗಿ ಹೇಳಿದರು. ಆರ್ಥಿಕ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲಿಕ್ಕೆ ಕೈಗೊಳ್ಳುವ ಯೋಜನೆಗಳು ನಿರುದ್ಯೋಗವನ್ನು ಕಳೆಯಲು ನೆರವಾಗುವುವು ಎಂಬ ತತ್ವವನ್ನು ನೆಹರೂ ಸಮರ್ಥಿಸಿದರು. ಯೋಜನಾ ಆಯೋಗವೂ ಬೇರೆ ಬೇರೆ ರಾಜ್ಯ ಸರಕಾರಗಳೂ ನಿರುದ್ಯೋಗವನ್ನು ನಿರ್ಮೂಲ ಮಾಡಲಾಗುವಂತೆ ಅನುಸರಿಸಬಹುದಾದ ಉಪಾಯಗಳ ಕುರಿತು ಸಲಹೆಗಳನ್ನು ಮುಂದಿಟ್ಟಿರುವುದಾಗಿಯೂ ಅವುಗಳೆಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ, ನಿಮಿಷಿಸಿ ಪಂಚವಾರ್ಷಿಕ ಯೋಜನೆಯಲ್ಲಿ ತಕ್ಕ ಪರಿವರ್ತನೆ ಸಾಧಿಸಬೇಕೆಂದೂ ನೆಹರೂ ಹೇಳಿದರು. ಅರ್ಥ ಸಚಿವರಾದ ದೇಶಮುಖರು ಆ ಬಳಿಕ ಮಾಡಿದ ಭಾಷಣದಲ್ಲಿ ರಾಜ್ಯ ಸರಕಾರಗಳು ಯೋಜನೆಯಲ್ಲಿ ಇನ್ನೂ ಹೆಚ್ಚಿನ ಆಸ್ಥೆಯನ್ನು ತೋರಿಸಬೇಕೆಂದು ಒತ್ತಾಯಿಸಿದರು. ಯೋಜನೆಯ ಪ್ರಾರಂಭದ ಎರಡು ವರ್ಷಗಳಲ್ಲಿ ಕೇವಲ

ನವಯುಗ ಪ್ರೆಸ್

(ಅತ್ಯಾಧುನಿಕ ಸಲಕರಣೆಗಳಿಂದ ಕೂಡಿದ ಪವರ್ ಪ್ರಿಂಟಿಂಗ್ ಪ್ರೆಸ್)

ಸಂತೆಕಟ್ಟೆ - - - ಉಡುಪಿ.

ಇಂಗ್ಲಿಷ್ ಮತ್ತು ಕನ್ನಡದಲ್ಲಿ ಯಾವದೇತರದ ಮುದ್ರಣ ಕಾರ್ಯಗಳನ್ನು ಅಚ್ಚುಕಟ್ಟಾಗಿ ಸಕಾಲದಲ್ಲಿ ಮಾಡಿಕೊಡಲಾಗುವುದು.

ಹೊಸ ಮುದ್ರಣ ಯಂತ್ರ! ಹೊಸ ಟೈಪುಗಳು!

ವಿಚಾರಿಸಿರಿ:

NAVAYUGA PRESS,

Santhekatte, : UDIPI.

ಭಾರತೀಯ ನೌಕಾ ದಳದ ಚಟುವಟಿಕೆ

ರಾಷ್ಟ್ರಾಧ್ಯಕ್ಷರಿಂದ ಚಂಡೀಗಢದ ಉದ್ಘಾಟನೆ

೭೦೦ ಕೋಟಿ ರೂಪಾಯಿಗಳು ಮಾತ್ರ ವ್ಯಯವಾಗಿವೆಯೆಂದು ಅವರು ಹೇಳಿ, ಯೋಜನೆಯು ಯಶಸ್ವಿಯಾಗುವುದಕ್ಕೆ ಇನ್ನೂ ಬಹಳ ಹೆಚ್ಚು ಕೆಲಸ ಮಾಡುವುದು ಉಳಿದಿದೆಯೆಂದು ಸೂಚಿಸಿದರು. ರಾಜ್ಯ ಸರಕಾರಗಳು ಭಂಡವಾಳವನ್ನು ಕೂಡಿಸುವುದರಲ್ಲಿ ತುಂಬ ಹಿಂದುಳಿದಿವೆಯೆಂದೂ ದೊರೆತ ಭಂಡವಾಳವನ್ನು ಸಹ ಪಂಚವಾರ್ಷಿಕ ಯೋಜನೆಗೋಸ್ಕರ ವಿನಿಯೋಗಿಸದೆ, ಹೊರಗಿನ ಕೆಲಸಗಳಿಗೆ ವೆಚ್ಚ ಮಾಡುವುದು ಕಾಣುವುದಾಗಿಯೂ ದೇಶಮುಖರು ರಾಜ್ಯ ಸರಕಾರಗಳನ್ನು ಆರೋಪಿಸಿದರು. ಕರಭಾರ ವಿಚಾರಣಾ ಸಮಿತಿಯ ಆದೇಶದಂತೆ ರಾಜ್ಯ ಸರಕಾರಗಳಿಗೆ ೧೯ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ದೊರೆಯುತ್ತದೆ. ಕೇಂದ್ರದ ಸಹಾಯವನ್ನು ಈ ಮಟ್ಟಿಗೆ ಕಡಿಮೆ ಮಾಡಬೇಕೆಂದು ಹಿಂದೊಮ್ಮೆ ಆಲೋಚಿಸಿದ್ದರೂ ಈಗ ಆ ವಿಚಾರವನ್ನು ಬಿಟ್ಟುಕೊಡಲಾಗಿದೆ. ಈ ಅನುಕೂಲ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರಕಾರಗಳು ಜವಾಬ್ದಾರಿಯಿಂದ ವರ್ತಿಸುವುದಾಗಿ ಅರ್ಥ ಸಚಿವರು ಆಶಿಸಿದರು.

ನಿರುದ್ಯೋಗಕ್ಕೆ ಮದ್ದು

ಯೋಜನಾ ಆಯೋಗದ ಉಪಾಧ್ಯಕ್ಷರಾದ ಶ್ರೀ ಕೃಷ್ಣಮಾಚಾರಿಯವರು ಪಂಚವಾರ್ಷಿಕ ಯೋಜನೆಯಲ್ಲಿ ಬದಲಾವಣೆ ಕೈಗೊಳ್ಳುವ ವಿಷಯಗಳನ್ನು ಪ್ರಸ್ತಾಪಿಸಿದರು. ನಿರುದ್ಯೋಗವನ್ನು ನಿವಾರಿಸುವುದಕ್ಕೋಸ್ಕರ ಕೈಗೊಳ್ಳ ತಕ್ಕ ಕ್ರಮಗಳಿಗೆ ೧೫೦ ರಿಂದ ೧೭೫ ಕೋಟಿ ರೂಪಾಯಿಗಳ ವಿನಿಯೋಗವಾದೀತೆಂದು ಅವರ ಹೇಳಿಕೆ. ಪರಿಣಾಮವಾಗಿ ಯೋಜನೆಗೋಸ್ಕರ ಒಟ್ಟಿಗೆ [illegible] ಕೋಟಿ ರೂಪಾಯಿ ವೆಚ್ಚ ಬರುವುದೆಂದು ಕೊಂಡಿದ್ದ ಅಂದಾಜು [illegible] ಕೋಟಿ ರೂಪಾಯಿಗಳಿಗೆ ಏರುತ್ತದೆ. ನಿರುದ್ಯೋಗ ನಿವಾರಿಕರಿಸುವ ಪ್ರಯತ್ನವೆಂದು ನಿರಾಶ್ರಿತರ ಪುನರ್ನಿವೇಶನಕ್ಕೋಸ್ಕರ ಹೆಚ್ಚಿನ ಅವಕಾಶಗಳನ್ನು ಕೊಡಲಾಗುವುದು. ಯೋಜನೆಯ ಪ್ರಾರಂಭದ ಮೂರು ವರ್ಷಗಳಲ್ಲಿ ಇದು ಮುಗಿಯಬಹುದೆಂದು ಹಿಂದೆ ಎಣಿಸಿದ್ದರೂ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಬಯಸಿ ಯೋಜನೆಯ ಐದೂ ವರ್ಷಗಳಲ್ಲಿ ಈ ದಿಸೆಯಲ್ಲಿ ಪ್ರಯತ್ನ ನಡೆಯುವುದೆಂದು ಈಗ ನಿರ್ಧಾರವಾಗಿರುವುದು. ಔದ್ಯಮಿಕ ಅಭಿವೃದ್ಧಿ ಮಂಡಳಿಗಳನ್ನೂ ಆರ್ಥಿಕ ಅಭಿವೃದ್ಧಿ ಮಂಡಳಿಗಳನ್ನೂ ರಾಜ್ಯ ಸರಕಾರಗಳು ನೇಮಿಸಬೇಕೆಂಬುದು ಎರಡನೆಯ ಉಪಾಯ. ಕೊರತೆ ಹಾಗೂ ಕ್ಷಾಮದ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರವನ್ನುಂಟು ಮಾಡುವ ಯೋಜನೆಗಳನ್ನು ಕೈಗೊಳ್ಳುವುದೂ ಮಾರ್ಗರಚನೆ ಹಾಗೂ ಚಿಕ್ಕ ವಿದ್ಯುಚ್ಛಕ್ತಿ ಕೇಂದ್ರಗಳನ್ನು ಪ್ರೋತ್ಸಾಹಿಸುವುದೂ ತಾಂತ್ರಿಕ ತರಬೇತಿಗೆ ಅಧಿಕ ಅವಕಾಶ ನೀಡುವುದೂ ಬೇರೆ ಕೆಲವು ಉಪಾಯಗಳು. ಯೋಜನೆಯನ್ನು ಕಾರ್ಯಗತ ಮಾಡುವಾಗ ತಾಂತ್ರಿಕರ ಹಾಗೂ ಮೇಸ್ತ್ರಿಗಳ ಕೊರತೆ ಬಹಳವಾಗಿ ಕಂಡು ಬಂತೆಂದು ಕೃಷ್ಣಮಾಚಾರಿಯವರು ತಿಳಿಸಿದರು. ಯೋಗ್ಯಜನರಿಗೆ ತರಬೇತಿಯನ್ನು ಕೊಡುವುದೇ ಇದಕ್ಕೆ ಮದ್ದು. ಹೆಚ್ಚಿನ ಕರ್ಚನ್ನು ಬಾಯಿಗೂಡಿಸುವುದಕ್ಕೆ ನೀರಾವರಿಯಿಂದ ಪ್ರಯೋಜನಹೊಂದಿದ ಭೂಮಿಯ ಮೇಲೆ ಅಭಿವೃದ್ಧಿ ತೆರಿಗೆಯನ್ನು ಹೊರಿಸುವುದೂ ಈಗ ಕಡಿಮೆ ತೆರಿಗೆ ಜಾರಿಯಲ್ಲಿರುವಲ್ಲೆಲ್ಲ ಅದನ್ನು ಏರಿಸುವುದೂ ಒಳ್ಳೆಯದೆಂದು ಅವರು ಸೂಚಿಸಿದರು. ಹಳ್ಳಿಗಳಲ್ಲಿ ಮಿತವ್ಯಯದ ಪ್ರವೃತ್ತಿಯನ್ನು ಪೋಷಿಸಿಕೊಂಡು ಸಾರ್ವಜನಿಕ ಸಾಲವನ್ನು ಎತ್ತುವುದು ಯೋಜನೆಯಲ್ಲಿ ಜನತೆ ಭಾಗವಹಿಸಿದಂತೆ ಮಾಡುವ ಅನುಕರಣೀಯ ಮಾರ್ಗವೆಂದವರು ಹೇಳಿದರು. ಈ ವಿಷಯದಲ್ಲಿ ಮದ್ರಾಸು ಸರಕಾರದ ಈಚಿನ ಸಾಲ ತುಂಬಿದ ಬಗೆಯನ್ನು ಅವರು ಮಾದರಿಯಾಗಿ ತೋರಿಸಿದರು. ನೆಹರೂರವರು ಪ್ರತಿಯೊಬ್ಬ ಭಾರತೀಯನೂ ತಾನು "ಇಂಡಿಯಾ ಲಿಮಿಟೆಡ್" ಎಂಬ ಕಂಪೆನಿಯ ಪಾಲುದಾರನೆಂದು ತಿಳಿಯಬೇಕಾಗಿ ಜನತೆಯನ್ನು ಕೇಳಿಕೊಂಡರು. ಜನತೆ ಈ ವಿಚಾರವನ್ನು ಬಹು ಮಟ್ಟಿಗೆ ಮನ್ನಿಸಿದಂತಾಗಿದೆಯೆಂದೂ ಸಾರ್ವಜನಿಕರಿಂದ ದೊರೆತ ಪ್ರೋತ್ಸಾಹ ಮತ್ತು ಸಹಾಯಗಳು "ಸಂತೋಷ ಪ್ರದವೂ ಆಶ್ಚರ್ಯ ಜನಕವೂ" ಆಗಿವೆಯೆಂದೂ ಅವರು ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸಿದರು.

ಹೊಸ ರಾಜಧಾನಿ

ಇವೆಲ್ಲವೂ ಮಾಮೂಲೀ ಮಾತುಗಳು – ಈ ವಾರದ ವಿಶೇಷ ಸಂಗತಿಗಳೆಂದು ಹೇಳಬಹುದಾದವುಗಳಲ್ಲಿ ಮೊದಲನೆಯದು ಪೂರ್ವ ಪಂಜಾಬಿನ ನೂತನ ರಾಜಧಾನಿ—ಚಂಡೀಗಢದ ಉದ್ಘಾಟನೆ. ಎರಡನೆಯದು ರಾಷ್ಟ್ರಾಧ್ಯಕ್ಷರಿಂದ ನಮ್ಮ ನೌಕಾದಳದ ಚಟುವಟಿಕೆಗಳ ನಿರೀಕ್ಷೆ. ಚಂಡೀಗಢದ ಉದ್ಘಾಟನೆಯನ್ನು ೭ನೆ ದಿನಾಂಕ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ನೆರವೇರಿಸಿದರು. ಪ್ರಚಂಡ ಜನಸಮುದಾಯದ ಮುಂದೆ ರಾಜೇಂದ್ರ ಪ್ರಸಾದರು ಸಿಮೆಂಟ ಗೋಡೆಯ ಮೇಲೆ ಚಿತ್ರಿಸಿದ್ದ ಬಣ್ಣಬಣ್ಣದ ಚಂಡೀಗಢದ ನಕಾಶೆಯ ಮೇಲಿನ ಪರದೆಯನ್ನು ವಿದ್ಯುತ್ತಿನ ಗುಂಡಿಯನ್ನೊತ್ತಿ ಆಚೆ ಸರಿಸಿದರು. ಈ ಸಂದರ್ಭದಲ್ಲಿ ಅವರು ಭಾಷಣ ಮಾಡುತ್ತಾ ರಾಷ್ಟ್ರದ ವಿಭಜನೆಯಿಂದ ನೊಂದ ಪಂಜಾಬವು ನಿರ್ಮಾಣ ಕಾರ್ಯದಲ್ಲಿ ಇಷ್ಟು ಆಸಕ್ತಿಯನ್ನು ತೋರಿಸಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಪೈಬಲಿನಲ್ಲಿ ಅನಿಷ್ಟವೇ ಇಷ್ಟವಾಗಿ ಪರಿಣಮಿಸುತ್ತದೆಂದು ಉಲ್ಲೇಖಿಸಿರುವುದನ್ನು ರಾಷ್ಟ್ರಾಧ್ಯಕ್ಷರು ಪ್ರಸ್ತಾಪಿಸುತ್ತಾ ಪಂಜಾಬಿಗಳ ಕಷ್ಟಗಳನ್ನು ಮರೆಸುವ ರೀತಿಯಲ್ಲಿ ಪ್ರಶಾಂತವಾದ ಪರ್ವತದ ತಪ್ಪಲಲ್ಲಿ ಈ ಹೊಸ ರಾಜಧಾನಿಯು ಆವಿರ್ಭವಿಸುತ್ತಿರುವುದೆಂದರು. ಈ ರಾಜಧಾನಿಯು ಅತ್ಯಾಧುನಿಕ ಶಿಲ್ಪ ವಿಜ್ಞಾನವನ್ನು ಅನುಸರಿಸಿ ರಚಿಸಲ್ಪಟ್ಟಿರುತ್ತದೆ. ಮನೆಗಳನ್ನೂ ನಗರಗಳನ್ನೂ ಸುವ್ಯವಸ್ಥಿತವಾಗಿ ಯೋಜನಾ ಬದ್ಧವಾಗಿ ಕಟ್ಟುವುದು ಭಾರತೀಯರ ಪ್ರಾಚೀನ ಸಂಪ್ರದಾಯವಾಗಿದ್ದರೂ- ಇಂದು ಅದು ನಶಿಸಿರುತ್ತದೆ. ಈ ನಗರವನ್ನು ಪಾಶ್ಚಾತ್ಯ ತಜ್ಞರು ಮುಖ್ಯವಾಗಿ ಫ್ರೆಂಚ ಇಂಜಿನಿಯರ ಮಾಸ್ಟರ್ ಲೀ ಕೊರ್ಬುಸಿಯರು- ದಕ್ಷತೆಯಿಂದ ಯೋಜಿಸಿ, ರಚಿಸಿರುವರು. ಇಲ್ಲಿಯ ಕೆಲಸ ಅರ್ಧಾಂಶದಷ್ಟು ಇನ್ನೂ ಬಾಕಿಯುಳಿದಿದೆ. ಆದರೂ ಈ ವರೆತ್ತಾಲದ ಶಾಸನ ಸಭಾಧಿವೇಶನವನ್ನು ನಡೆಸಲು ಅನುಕೂಲವಾಗುವಂತೆ ಎಲ್ಲ ವ್ಯವಸ್ಥೆಗಳೂ ನಡೆದಿವೆ. ಇಲ್ಲಿ ವ್ಯಕ್ತಗೊಂಡ ನಗರ ನಿರ್ಮಾಣ ಕೌಶಲವು ಉಲ್ಲೇಖ್ಯವೂ ಅನುಪಮ ಕಾಣಿಕೆ. ವಸತಿಗಳೆಲ್ಲ ಸಮಾಜವನ್ನು ಸಂಘಟಿಸುವ ರೀತಿಯಲ್ಲಿವೆ. ಸಾರಿಗೆ ಸಂಪರ್ಕದ ಅನುಕೂಲತೆಗಳು ನಗರದ ಯಾವ ಭಾಗವನ್ನೂ ಹತ್ತು ನಿಮಿಷದ ದಾರಿಗಿಂತ ದೂರ ಬಿಡುವುದಿಲ್ಲ. ಆಫೀಸು ವೇದಿಕೆಗಳಿಗೆ ಒದಗಿಸಲ್ಪಟ್ಟ ಮನೆಯು ಭಾರತದಲ್ಲಿಯೇ ಅತ್ಯಂತ ಯೋಗ್ಯ ನಮೂನೆಯದು. ಇಂಥ ಸುಸಜ್ಜಿತ ರಾಜಧಾನಿಯಲ್ಲಿ ಸದ್ಯಕ್ಕೆ ೧೫೦೦೦೦ ಜನರು ವಾಸ ಮಾಡುವವರಾದರೆ ೫ ಲಕ್ಷ ಜನ ವಸತಿಗೆ ಅವಕಾಶ ನೀಡುವಂತೆ ನಗರವನ್ನು ವಿಸ್ತರಿಸಲು ಎಡೆ ಇದೆ. ಈ ಅಪೂರ್ವವಾದ ದೇವನಗರಿಯಲ್ಲಿ ವಾಸಿಸುವ ನಾಗರಿಕರು ತಮ್ಮ ಉಚ್ಚ ಗುಣಗಳನ್ನು ಪೋಷಿಸಿಕೊಂಡು ವ್ಯಕ್ತೀಕರಿಸುವುದರಲ್ಲಿ ಹಿಂದುಳಿಯಲಿಕ್ಕಿಲ್ಲವೆಂದು ರಾಷ್ಟ್ರಾಧ್ಯಕ್ಷರು ಹಾರೈಸಿದರು.

ಭಾರತೀಯ ನೌಕಾ ಪಡೆ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ೧೦ನೇ ದಿನಾಂಕ ಮುಂಬಯಿಯಲ್ಲಿ ಭಾರತೀಯ ನೌಕಾ ದಳದ ಚಟುವಟಿಕೆಗಳ ಪರಿಶೀಲನೆ ನಡೆಸಿದರು. ಕಳೆದವಾರ ಭಾರತದ ನೌಕಾಪಡೆ ಅರಬೀ ಸಮುದ್ರದಲ್ಲಿ ಅದ್ಭುತವಾದ ಯುದ್ಧ ಪ್ರಯೋಗಗಳನ್ನು ನಡೆಸಿತು. ಪಶ್ಚಿಮ ಸಮುದ್ರದಲ್ಲಿ ಕಾರವಾರ ತೀರದ ಆಚೆಗೆ ಕಲ್ಪಿತ ಶತ್ರು ರಾಣಿಯ ಮೇಲೆ ಅಭಿಯೋಗ, ಗುಂಡುಗಳ ಸುರಿಮಳೆ, ಜಲಾಂತರ್ಗಾಮಿ ನಾವೆಯ ನಾಶ ಮುಂತಾದ ಮುಖ್ಯ ಯುದ್ಧದ ಕೋಲಾಹಲವೇ ನಡೆಯಿತು. ಇಲ್ಲಿ ವ್ಯಕ್ತಗೊಂಡ ನೌಕಾಯೋಧರ ಕಾರ್ಯಕ್ಷಮತೆ ನೇತ್ರೋತ್ಸವವಾಗಿದ್ದಿತು. ಸುಮಾರು ೩೦ ಮಂದಿ ಸಂಸತ್ ಸದಸ್ಯರೂ ಸಂರಕ್ಷಣ ಮಂತ್ರಿ ಶ್ರೀ ಮಹಾವೀರ ತ್ಯಾಗಿಯವರೂ ನೌಕಾದಳದ ಉನ್ನತಾಧಿಕಾರಿಗಳೂ ಇದನ್ನು ಪರಿಶೀಲಿಸಿದರು. ೧೯೪೭ರಲ್ಲಿ ಭಾರತದ ನೌಕಾ ಪಡೆಯನ್ನು ಸ್ಥಾಪಿಸಿದಾಗ ಇದ್ದ ಪರಿಸ್ಥಿತಿಯಲ್ಲಿ ಈಗ ಮಹತ್ವದ ಬದಲಾವಣೆಗಳಾಗಿರುತ್ತವೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನೌಕಾಪಡೆಯ ಮೇಲಿನ ಹೊಣೆಗಾರಿಕೆಯೂ ಹೆಚ್ಚಿಕೊಂಡಿದೆ. ಬ್ರಿಟನ್ ಮುಂತಾದ ರಾಷ್ಟ್ರಗಳೊಂದಿಗೆ ಹೋಲಿಸಿದರೆ ನಮ್ಮ ನೌಕಾಬಲವು ಚಿಕ್ಕದು-ತೋರಿದ್ದರೂ ರಾಷ್ಟ್ರದ ಸಂರಕ್ಷಣೆಯನ್ನು ಸ್ವತಂತ್ರವಾಗಿ ಮಾಡುವಷ್ಟರ ಮಟ್ಟಿಗೆ ಬಲವನ್ನು ಹೆಚ್ಚಿಸಿರುವರು. ಬ್ರಿಟಿಷ ರಾಣಿಯ ಪಟ್ಟಾಭಿಷೇಕ ಕಾಲದಲ್ಲಿ ರಾಷ್ಟ್ರಕೂಟದ ನೌಕಾಪಡೆಗಳೊಂದಿಗೆ ಹಾಗೂ ಭೂಮಧ್ಯ ಸಮುದ್ರದಿಂದ ಹಿಂದೂ ಸಾಗರದ ಪೂರ್ವ ದಿಸೆಯಲ್ಲಿರುವ ಇಂಡೋನೇಶಿಯಾದ ವರೆಗೆ ನಮ್ಮ ಯುದ್ಧ ನೌಕೆಗಳು ತಿರುಗಿ ಆವಶ್ಯಕ ಅನುಭವ, ಮಾಹಿತಿ ಮತ್ತು ಜ್ಞಾನವನ್ನು ಪಡೆದಿರುತ್ತವೆ. ಶಾಂತಿ ಕಾಲದಲ್ಲೂ ಯುದ್ಧ ನೌಕೆಗಳು ನೆರವಾಗ ಬಲ್ಲವೆಂಬ ದಕ್ಕೆ ಗ್ರೀಸಿನಲ್ಲಿ ಈ ವರ್ಷ ಭಯಂಕರ ಭೂಕಂಪ ನಡೆದಾಗ ಸಮೀಪದಲ್ಲಿ ಲಂಗರು ಹಾಕಿದ್ದ ಭಾರತೀಯ ನೌಕಾಪಡೆ ನೀಡಿದ ಸಹಾಯ ಮತ್ತು ಬಂಗಾಳ ಕೊಲ್ಲಿಯಲ್ಲಿ ಕಣ್ಮರೆಯಾದ ಮೀನುಗಾರರನ್ನು ಹುಡುಕಿತಂದ

([illegible]ನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR

THE
POPULAR INSURANCE CO. LTD.
"POPULAR BUILDINGS" MANGALORE-1

70 ವರುಷಗಳಿಂದ ಜಗಜ್ಜನಿತವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಅಗ್ ಮಿಕ್ಸ್ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು:
ಡಾ! ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, [illegible]
Tele. Add. "CAWASHABAD" ದಾದರ್, ಮುಂಬಾಯಿ 28.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲತತ್ವ. ಇದು ಮುಖ್ಯವಾಗಿ ಮಧ್ಯಮತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದುಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆಯೇ ಇನ್ನಿತರ ಸದುದ್ದೇಶಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ಇಂದೇ ಇಂಥ ಒಂದು ಖಾತೆಯನ್ನು ನಮ್ಮ 38 ಶಾಖೆಗಳಲ್ಲಿ ನಿಮಗೆ ಹತ್ತಿರವಿರುವ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India)

ನವಯುಗ

ಉಡುಪಿ, ಗುರುವಾರ ೧೫-೧೦-'೫೩

ವಿದೇಶೀ ವಸಾಹತುಗಳು

ಮುಂಬಯಿಯಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಾ ಪ್ರಧಾನ ಮಂತ್ರಿ ನೆಹರೂರವರು ಭಾರತದಲ್ಲಿರುವ ವಿದೇಶೀ ಉಪನಿವೇಶಗಳು ನಮ್ಮ ದೇಶದೊಂದಿಗೆ ಸೇರ್ಪಡೆ ಹೊಂದಿಯೇ ತೀರಬೇಕೆಂದು ಸ್ಪಷ್ಟವಾಗಿ ಪುನಃ ಸಾರಿದರು. ಭಾರತಕ್ಕೆ ಸ್ವಾತಂತ್ರ್ಯ ದೊರೆತಬಳಿಕ ಈ ವಿಶಾಲವಾದ ರಾಷ್ಟ್ರದ ಕರಾವಳಿಯ ಕೆಲವು ಪ್ರದೇಶಗಳಲ್ಲಿ ಇನ್ನೂ ವಿದೇಶೀಯರು ವಸಾಹತುಗಳನ್ನು ಕಟ್ಟಿಕೊಂಡು ಕುಳಿತಿರುವುದು ಭಾರತೀಯರ ಅಭಿಮಾನಕ್ಕೆ ಯೋಗ್ಯವಾದುದಲ್ಲ-ಮತ್ತು ಸ್ವಾತಂತ್ರ್ಯದ ಹಿತರಕ್ಷಣೆಯ ದೃಷ್ಟಿಯಿಂದಲೂ ಗಂಡಾಂತರಪ್ರಾಯವಾಗಿರುತ್ತದೆ. ಭಾರತವು ವಿದೇಶೀ ಉಪನಿವೇಶಗಳನ್ನು ಶಾಂತರೀತಿಯಲ್ಲಿ ತನ್ನ ವಿಶಾಲವಾದ ಭೂಭಾಗದೊಂದಿಗೆ ಸೇರ್ಪಡೆ ಹೊಂದಿಸಬೇಕೆಂದು ಪ್ರಾರಂಭದಿಂದಲೂ ಪ್ರಯತ್ನಿಸುತ್ತಾ ಬಂದಿದೆ. ಫ್ರೆಂಚ ಹಾಗೂ ಪೋರ್ತುಗೀಜ ಸರಕಾರಗಳೊಡನೆ ಭಾರತ ಸರಕಾರ ಈ ವಿಷಯದಲ್ಲಿ ಮಾತುಕತೆಗಳನ್ನು ತೊಡಗಿದರೂ ಅವುಗಳು ಪ್ರಯೋಜನಕಾರಿಯಾಗಿ ಪರಿಣಮಿಸಿರುವುದಿಲ್ಲ. ಫ್ರೆಂಚ ಸರಕಾರದ ವರ್ತನೆಗಿಂತಲೂ ಪೋರ್ತುಗೀಜ ಸರಕಾರದ ಧೋರಣೆ ಭಾರತದ ನಿಲುಮೆಗೆ ತೀರ ವ್ಯತಿರಿಕ್ತವಾಗಿದ್ದಿತು. ಪರಿಣಾಮವಾಗಿ ಈಚೆಗೆ ಲಿಸ್ಬನಿನೊಡನೆ ಇದ್ದ ರಾಯಭಾರಿ ಸಂಬಂಧವನ್ನು ಭಾರತ ಸರಕಾರವು ಕಡಿದುಕೊಂಡು ಸೌಮ್ಯ ರೂಪದ ನಿಷೇಧವನ್ನು ವ್ಯಕ್ತಗೊಳಿಸಿತು. ಆದರೆ ಇದನ್ನು ಲಿಸ್ಬನಿನ ಸರಕಾರ ಲೆಕ್ಕಕ್ಕೆ ತೆಗೆದುಕೊಂಡಂತೆಯೇ ಇಲ್ಲ; "ನಾಟೋ" (ಉತ್ತರ ಅಟ್ಲಾಂಟಿಕ) ಯುದ್ಧ ಒಪ್ಪಂದದಲ್ಲಿ ಸೇರಿರುವ ಪೋರ್ತುಗೀಜ ಹಾಗೂ ಫ್ರೆಂಚ ಸರಕಾರಗಳು ಭಾರತದ ಶಾಂತ ಧೋರಣೆಯ ಹಿಂದಿರುವ ಭಾವನೆಯನ್ನು ಗಂಭೀರವಾಗಿ ಅರ್ಥ ಮಾಡಿಕೊಂಡಿಲ್ಲ. ಗೋವೆ ಮುಂತಾದ ಪೋರ್ತುಗೀಜ ರಾಜ್ಯಗಳಲ್ಲಿ ಅಲ್ಲಿಯ ಭಾರತೀಯರ ವಿರುದ್ಧ ದಮನ ನೀತಿಯನ್ನು ಅನುಸರಿಸಲಾಗುತ್ತಿದ್ದರೆ ಪಾಂಡಿಚೇರಿಯಂಥ ಫ್ರೆಂಚ ಉಪನಿವೇಶಗಳು ಕಳ್ಳ ವ್ಯಾಪಾರದ ಕೇಂದ್ರಗಳಾಗಿರುತ್ತವೆ. ಇವುಗಳಿಗಿಂತಲೂ ಹೆಚ್ಚು ಭಯಾನಕವಾದ ವಿಚಾರವೆಂದರೆ - ಈ ಉಪನಿವೇಶಗಳು ಪ್ರಬಲ ಯುದ್ಧ ರಾಜ್ಯಗಳಾಗುವ ಸಂಭವವಿರುವುದು. ಅಟ್ಲಾಂಟಿಕ ಒಪ್ಪಂದದ ನೆಪದಲ್ಲಿ ಫ್ರೆಂಚ ಹಾಗೂ ಪೋರ್ತುಗೀಜ ಸರಕಾರಗಳು ಭಾರತದ ತಮ್ಮ ವಸಾಹತುಗಳಲ್ಲಿ ಸೈನ್ಯವನ್ನು ತಂದು ನಿಲ್ಲಿಸಬಹುದೆಂಬುದಕ್ಕೆ ಈಗ ಹೆಚ್ಚು ಹೆಚ್ಚು ಆಧಾರ ದೊರೆಯುತ್ತಿದೆ. ಅಮೇರಿಕಾ ಸರಕಾರವು ಇಂಥ ಕ್ರಮಕ್ಕೆ ಪ್ರಚೋದನೆಯನ್ನು ಕೊಡುವಂತಿದೆಯೆಂದೂ ಊಹಿಸಲು ಅಡ್ಡಿಯಿಲ್ಲ. ಕಮ್ಯೂನಿಸ್ಟರನ್ನು ಬಗ್ಗುಬಡೆಯಲು ಅಥವಾ ಮಧ್ಯ ಹಾಗೂ ಆಗ್ನೇಯ ಏಶಿಯಾದ ಮೇಲೆ ತನ್ನ ಶಕ್ತಿ ಸಾಮರ್ಥ್ಯಗಳ ವರ್ಚಸ್ಸನ್ನು ಕೆಡವಲು ಅಮೇರಿಕಾವು ಪೋರ್ತುಗೀಜ ಹಾಗೂ ಫ್ರೆಂಚ ಸರಕಾರಗಳ ಮೂಲಕ ಹವಣಿಸಬಹುದು. ಈ ಬಗೆಯ ಅಪಾಯವು ಸಂಭವನೀಯವೆಂದು ತೋರುತ್ತಿರುವುದರಿಂದ ನೆಹರೂರವರು ಸ್ಪಷ್ಟ ಮಾತುಗಳಲ್ಲಿ ಅಂಥ ಕ್ರಮಗಳನ್ನು ಆಕ್ಷೇಪಿಸಿರುವುದು ಸಕಾಲಿಕವಾಗಿರುತ್ತದೆ. ಮಾತ್ರವಲ್ಲ ವಿದೇಶೀ ಸರಕಾರಗಳು ದುಡುಕಿ ನಡೆಯದಂತೆ ಎಚ್ಚರಿಸುವಂತೆಯೂ ಇವೆ. ಭಾರತವು ಯುದ್ಧ ಮಾರ್ಗವನ್ನು ಎಂದಿಗೂ ಅವಲಂಬಿಸುವುದಿಲ್ಲೆಂಬುದರಿಂದ ವಿದೇಶೀ ಸರಕಾರಗಳು ತಪ್ಪುಧೋರಣೆಯನ್ನೂ ಕ್ರಮಗಳನ್ನೂ ಕೈಗೊಳ್ಳಲು ಉತ್ಸಾಹಗೊಂಡರೆ ಅದರ ಪರಿಣಾಮ ಕೆಟ್ಟದಾಗಿಯೇ ತೀರುವುದು. ಭಾರತದ ಶಾಂತಿಯ ಧೋರಣವು ಗಾಂಧೀಜಿಯವರ ಅಹಿಂಸಾ ನೀತಿಯಷ್ಟೇ ಪ್ರಭಾವಯುತವೂ ಚೈತನ್ಯಪೂರ್ಣವೂ ಆಗಿದ್ದು ಅದನ್ನು ಹೇಡಿತನವೆಂದೂ ಅಂಜುಬುರುಕ ಪ್ರವೃತ್ತಿಯೆಂದೂ ತಿಳಿಯುವುದು ಸಲ್ಲದು. ಮಹಾತ್ಮಾ ಗಾಂಧೀಯವರು ಸತ್ಯಾಗ್ರಹ ಹಾಗೂ ಅಹಿಂಸೆಯ ಬಲದಿಂದ ೧೫೦ ವರ್ಷಗಳಿಗೂ ಹೆಚ್ಚು ಕಾಲ ಭಾರತದಲ್ಲಿ ತಳವೂರಿದ್ದ ಬ್ರಿಟಿಷ ಸಾಮ್ರಾಜ್ಯಶಾಹಿತ್ವವನ್ನು ಕೊನೆಗಾಣಿಸಿದಂತೆ, ವಿದೇಶೀ ವಸಾಹತುಗಳೂ ಬೇಗನೇ ನಿರ್ನಾಮಗೊಂಡು ಭಾರತದ ನೆಲದೊಂದಿಗೆ ಸೇರುವ ಆತ್ಮವಿಶ್ವಾಸ ಪ್ರಧಾನಿ ನೆಹರೂರಿಗಿದೆ. ಭೌಗೋಲಿಕ, ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಕಾರಣಗಳಲ್ಲದೆ, ರಾಷ್ಟ್ರೀಯ ಭದ್ರತೆ ಮತ್ತು ಸಂರಕ್ಷಣಾ ದೃಷ್ಟಿಯಿಂದಲೂ ಇಂಥ ಸೇರ್ಪಡೆ ಅಗತ್ಯವಿದೆಯೆಂದೂ ದೇವರು ವಿದೇಶೀ ಸರಕಾರಗಳಿಗೆ ಸದ್ಬುದ್ಧಿಯನ್ನು ಕೊಟ್ಟು ಒಳಿತನ್ನುಂಟುಮಾಡಲೆಂದೂ ಪ್ರಧಾನಿ ನೆಹರೂ ಹಾರೈಸಿರುವುದನ್ನು ನಾವೂ ಹೃತ್ಪೂರ್ವಕ ಅನುಮೋದಿಸುತ್ತೇನೆ.

ಚರ್ಚಿಲ್ಲರಿಂದ ಶಾಂತಿಯ ಪ್ರಯತ್ನ

ಮೆಲೆಂಕೋವರೊಡನೆ ಭೇಟಿಯಾಗುವ ಆತುರ

ಬ್ರಿಟಿಷ ಪ್ರಧಾನ ಮಂತ್ರಿ ಸರ್ ವಿನ್‌ಸ್ಟನ್ ಚರ್ಚಿಲರ ಸುದ್ದಿ ಕಳೆದ ಕೆಲವು ತಿಂಗಳುಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಾಗಿ ಕೇಳಿಬರುತ್ತಿದ್ದಿಲ್ಲ. ವಿಶ್ರಾಂತಿಯನ್ನನುಭವಿಸುತ್ತಿದ್ದ ಚರ್ಚಿಲ್ಲರು ಇದೀಗ ಮರಳಿ ತಮ್ಮ ಹಿಂದಿನ ಲವಲವಿಕೆಯನ್ನು ಪ್ರದರ್ಶಿಸುವ ಸೂಚನೆಗಳನ್ನು ಕೊಡುತ್ತಿರುವುದು ಜಾಗತಿಕ ರಾಜಕಾರಣದ ಬಣ್ಣ ಬದಲಾಯಿಸುವಂತಿದೆ. ಚರ್ಚಿಲ್ಲರು ಅನಾರೋಗ್ಯ ಪೀಡಿತರಾಗಿರುವುದರಿಂದ ಅವರು ರಾಜಿನಾಮೆ ಕೊಡುವರೆಂದು ಊಹಾಪೋಹಗಳು ನಡೆದಿದ್ದವು. ಈಚೆಗೆ ಬ್ರಿಟಿಷ ಕೂಲಿಕಾರ ಪಕ್ಷವು ಮಾರ್ಗೇಟದಲ್ಲಿ, ಅಧಿವೇಶನ ನಡೆಸಿದಾಗ, ಆ ಪಕ್ಷದ ಧುರೀಣರಲ್ಲಿ ಒಬ್ಬರಾದ ಬೇವಾನರು ಚರ್ಚಿಲ್ಲರು ರಾಜೀನಾಮೆ ಕೊಡಬೇಕೆಂದು ಸಾರಿದರು. ಆದರೆ ಚರ್ಚಿಲ್ಲರು ಧುರೀಣರಾಗಿರುವ ಬ್ರಿಟಿಷ ಕಾನ್ಸರ್ವೇಟಿವ್ ಪಕ್ಷದ ಅಧಿವೇಶನ ಮಾರ್ಗೇಟದಲ್ಲಿ ಮೊನ್ನೆ ನಡೆದಾಗ, ತಾನು ರಾಜೀನಾಮೆ ಕೊಡುವುದಿಲ್ಲೆಂದು ಚರ್ಚಿಲ್ಲರು ಕಂಠೋಕ್ತವಾಗಿ ಹೇಳಿದರು. ಚರ್ಚಿಲ್ಲರು ರಾಜೀನಾಮೆ ಕೊಟ್ಟರೆ ಮರಳಿ ಚುನಾವಣೆಗಳಾಗುವವೆಂದೂ ಅದರಲ್ಲಿ ಕೂಲಿಕಾರ ಪಕ್ಷಕ್ಕೆ ಬಹುಮತ ದೊರೆಯಬಹುದೆಂದೂ ಇದ್ದ ಆಶೆಗೆ ಇದು ತಣ್ಣೀರೆರಚಿದಂತಾಗಿರುತ್ತದೆ. ಚರ್ಚಿಲ್ಲರು ತಾನು ರಾಜೀನಾಮೆ ಕೊಡುವುದಿಲ್ಲವೆಂದುದಷ್ಟೇ ಅಲ್ಲ—ಈಗಿನ ಪರಿಸ್ಥಿತಿಯೇ ಉಳಿದರೆ, ಇನ್ನೆರಡು ವರ್ಷಗಳವರೆಗೂ ಚುನಾವಣೆಯ ಗೊಂದಲಕ್ಕೆ ಅವಕಾಶವಿಲ್ಲವೆಂದು ಹೇಳಿದರು. ಇದಕ್ಕೂ ಮಹತ್ವಪೂರ್ಣವಾದ ಸಂಗತಿ ತಾನು ಪೂರ್ವ ಹಾಗೂ ಪಶ್ಚಿಮಗಳ ಸಂಬಂಧವನ್ನು ಊರ್ಜಿತಗೊಳಿಸಿ ಪರಸ್ಪರ ಸಹಕಾರ ಮನೋಭಾವ ಬೆಳೆಯುವಂತೆ ಪ್ರಯತ್ನಿಸುವುದಾಗಿ ಚರ್ಚಿಲ್ಲರು ಕೊಟ್ಟ ಆಶ್ವಾಸನೆ. ಮಹತ್ವದ ಭಿನ್ನಾಭಿಪ್ರಾಯಗಳನ್ನೆಲ್ಲ ಬಗೆಹರಿಸಿಕೊಂಡು ಶಾಂತಿಯನ್ನು ನೆಲೆಗೊಳಿಸಲು ಅನುಕೂಲವಾಗುವಂತೆ ಜಗತ್ತಿನ ಮಹಾರಾಷ್ಟ್ರಗಳು ಸಮ್ಮೇಳನ ನಡೆಸುವುದು ಒಳಿತೆಂದು ಕೆಲವು ತಿಂಗಳುಗಳ ಹಿಂದ ಅಭಿಪ್ರಾಯಪಟ್ಟಿದ್ದ ಚರ್ಚಿಲ್ಲರು ಈಗಲೂ ಆ ವಿಚಾರವನ್ನು ಬಿಟ್ಟುಕೊಟ್ಟಿಲ್ಲ. ಈ ಸದುದ್ದೇಶದಿಂದಲೇ ರಶಿಯಾದ ಪ್ರಧಾನಿ ಮೆಲೆಂಕೋವರೊಂದಿಗೆ ಭೇಟಿಯಾಗಲು ಚರ್ಚಿಲ್ಲರು ಹೋಗಬಹುದೆಂದು ವದಂತಿ ಹಬ್ಬಿರುತ್ತದೆ. "ಪರಸ್ಪರರನ್ನು ಟೀಕಿಸುವುದಕ್ಕಿಂತ ಏನಾದರೂ ಒಳ್ಳೆಯದನ್ನು ನಾವು ಮಾಡಬಲ್ಲೆವೇ ಹೇಗೆಂದು ನೋಡುವಾ" ಎಂಬ ಚರ್ಚಿಲ್ಲರ ಮಾತು ಹೊಸ ಆಶಾವಾದಕ್ಕೆ ಆಶ್ರಯ ಕೊಟ್ಟಿರುತ್ತದೆ. ಕಾನ್ಸರ್ವೇಟಿವ್ ಪಕ್ಷದ ಸದಸ್ಯರಂತೂ ಸರಿಯೇ— ಕೂಲಿಕಾರ ಪಕ್ಷದ ಅನುಯಾಯಿಗಳೂ ಚರ್ಚಿಲ್ಲರ ಈ ವಿಚಾರವನ್ನು ಅನುಮೋದಿಸಿರುವುದರಿಂದ, ಚರ್ಚಿಲ್ಲರ ಮುಂದಿನ ಚಟುವಟಿಕೆಗಳ ಕುರಿತು ರಾಜಕಾರಣಿಗಳಲ್ಲಿ ಹೆಚ್ಚಿನ ಆಸ್ಥೆ ಗೋಚರಿಸುತ್ತದೆ.

ನಾಜೂಕಾದ ವಾತಾವರಣ

ಜಗತ್ತಿಗಿರುವುದು ಇದೊಂದೇ ಆಶೆ— ಬೇರೆಲ್ಲ ಸಮಸ್ಯೆಗಳೂ ನಿರಾಶಾಜನಕವಾಗಿರುತ್ತವೆ. ಕೊರಿಯಾ- ಪ್ರಶ್ನೆಯನ್ನು ಎತ್ತಿಕೊಂಡರೆ ಅಲ್ಲಿಯ ಪರಿಸ್ಥಿತಿ ಎಂದಿಗಿಂತಲೂ ಹೆಚ್ಚು ಕ್ಷೋಭಕಾರಕವಾಗಿರುತ್ತದೆ. ಈ ನಾಜೂಕಿನ ವಾತಾವರಣದಲ್ಲಿ ಭಾರತೀಯ ಸೈನ್ಯಪಡೆ ಮತ್ತು ತಟಸ್ಥ ರಾಷ್ಟ್ರಮಂಡಳದ ಸದಸ್ಯರು ತೋರಿಸಿದ ಸಂಯಮ ಸ್ಪೃಹಣೀಯವಾಗಿರುತ್ತದೆ. ಅನಿವಾರ್ಯ ಪ್ರಸಂಗ ಬಂದುದರಿಂದಲೇ ಭಾರತೀಯ ಸೈನಿಕರು ಗುಂಡು ಹಾರಿಸುವ ಪ್ರಮೇಯ ಬಂದೊದಗಿತೆಂದೂ ಇದರಿಂದುಂಟಾದ ಮೂರು ಮಂದಿಯ ಸಾವು ಹಾಗೂ ೧೩ ಮಂದಿಗಾದ ಗಾಯ ಸಾಮಾನ್ಯ ಸ್ವರೂಪದ ಪರಿಣಾಮವೆಂದೂ ಕಳೆದ ವರ್ಷ ಅಮೇರಿಕನ್ ಸೈನಿಕರು ಕೈದಿಗಳ ಮೇಲೆ ನಡೆಸಿದ ಅತ್ಯಾಚಾರದೊಂದಿಗೆ ಹೋಲಿಸಿದರೆ, ಭಾರತೀಯ ಸೈನಿಕರ ವರ್ತನೆ ಸೌಮ್ಯ ಪ್ರವೃತ್ತಿಯ ದ್ಯೋತಕವೆಂದೂ ಬ್ರಿಟಿಷ ಪತ್ರಿಕೆಗಳು ಹೇಳುತ್ತವೆ. ಆದರೆ ಇಷ್ಟು ವಿವೇಕವನ್ನು ಅಮೇರಿಕಾ ಸರಕಾರವಾಗಲೀ ದಕ್ಷಿಣ ಕೊರಿಯಾದ ಲಜ್ಜೆಗೆಟ್ಟ ನಾಯಕರುಗಳಾಗಲೀ ತೋರ್ಪಡಿಸಿಲ್ಲ. ಡಲ್ಲೇಸರಂಥ ಹೊಣೆಗಾರ ವ್ಯಕ್ತಿಗಳು ಭಾರತೀಯ ಸೈನಿಕರ ವರ್ತನೆಯ ಕುರಿತು ತೀವ್ರ ಚಿಂತೆಯನ್ನು ವ್ಯಕ್ತಪಡಿಸಿದರಲ್ಲದೆ "ತಟಸ್ಥ ರಾಷ್ಟ್ರ ಮಂಡಳವೆಂದು ಹೇಳಿಕೊಳ್ಳುವ" ಸಮಿತಿಯ ವರ್ತನೆಯ ಕುರಿತು ಅಸಮಾಧಾನವನ್ನು ಸೂಚಿಸಿದರು. ಈ ರೀತಿ ಮುಖೋದ್ಗಾರಗಳನ್ನೂ ಕುತ್ಸಿತ ಹೇಳಿಕೆಯನ್ನೂ ಕೊಟ್ಟು ತಟಸ್ಥ ರಾಷ್ಟ್ರಮಂಡಳ ಹಾಗೂ ಭಾರತೀಯ ಸೈನಿಕರ ಅಪಮಾನಮಾಡುವುದು ಅಮೇರಿಕೆಯಂಥ ಮಹಾರಾಷ್ಟ್ರದ ಗೌರವಕ್ಕೆಯೇ ಕುಂದು: ಮಾತ್ರವಲ್ಲ- ಇದರಿಂದ ತಾನು ಮೊದಲು ನೀಡಿದ ಭರವಸೆಗಳಿಗೆ ಅಮೇರಿಕಾ ವ್ಯತಿರಿಕ್ತವಾಗಿ ನಡೆದಂತಾಗಿರುವುದು. ಭಾರತೀಯ ಸೈನಿಕರ ನಿಷ್ಪಕ್ಷಪಾತತನದ ಬಗ್ಗೆ ಸಂದೇಹ ಪ್ರಕಟಿಸುವುದೂ ತಟಸ್ಥ ರಾಷ್ಟ್ರಮಂಡಳವು ಕಮ್ಯೂನಿಸ್ಟರ ಕಡೆಗೆ ಒಲವುಳ್ಳದ್ದೆಂದು ಬಹಿರಂಗವಾಗಿ ಸಾರುವುದೂ ಸಿಂಗ್ಮನ್ ರ್ಹೀಯವರನ್ನು ಮತ್ತೂ ಮತ್ತೂ ಉತ್ತೇಜಿಸಿದಂತಾಗುವುದಲ್ಲದೆ-ಶಾಂತಿಯ ಪ್ರಯತ್ನಗಳೊಂದಿಗೆ ತೋರಿಸಿದ ಅಸಹಕಾರವೇ ನಿಜ. ಭಾರತದ ಪ್ರಾಮಾಣಿಕತೆಯ ಕುರಿತು ಸ್ವೀಡನಿನಂಥ ತಟಸ್ಥ ರಾಷ್ಟ್ರವು ಪ್ರಶಂಸಾರ್ಹ ನುಡಿಗಳಾಡಿರುವುದನ್ನು ಕೇಳಿದ ಬಳಿಕವೂ ಅಪಪ್ರಚಾರ ನಡೆಯುತ್ತಿರುವುದು ಶೋಚನೀಯ.

ಸಹಕಾರದ ಅಭಾವ

ತಟಸ್ಥ ರಾಷ್ಟ್ರ ಮಂಡಳಕ್ಕೆ ಯುದ್ಧವಿರಾಮದ ಒಪ್ಪಂದದಂತೆ ಸೇರಿದ ಹೊಣೆಗಾರಿಕೆಯನ್ನು ನಿರ್ವಹಿಸಲು ಅಸಾಧ್ಯವಾಗುವಂತೆ ಅಮೇರಿಕಾ ಧುರೀಣತ್ವ ವಹಿಸಿರುವ ರಾಷ್ಟ್ರ ಸಂಘದ ಸೇನಾಧಿಪತ್ಯ ನಡೆಸುತ್ತಿರುವ ಪ್ರಯತ್ನಗಳು ಇವರ

ಹಿಂದೆ ಏನೋ ಕುಹಕತನ ಅಡಗಿರುವುದನ್ನು ನಿರ್ದೇಶಿಸುವಂತಿದೆ. ಪ್ರಧಾನಿ ನೆಹರೂರವರು ಈ ಪ್ರಸ್ತಾಪವನ್ನು ಮಾಡಿ ಸಂಯುಕ್ತ ರಾಷ್ಟ್ರಸಂಘದ ಈಗಿನ ನಿಲುವಿಗೂ ಹಿಂದಿನ ಭರವಸೆಗೂ ತಾಳ ಮೇಳವುಇದಿಲ್ಲನೆಂದು ಅಭಿಪ್ರಾಯ ವ್ಯಕ್ತಗೊಳಿಸಿರುವರು. ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳು ಯಾವ ದೇಶಕ್ಕೆ ತಾವು ಹೋಗಬಯಸುವರೆಂಬುದಾಗಿ ತಿಳಿದುಕೊಳ್ಳಲು ಕೆಲವು ನಿಯಮಾವಳಿಗಳನ್ನು ತಟಸ್ಥ ರಾಷ್ಟ್ರ ಮಂಡಳ ತಯಾರಿಸಿದಾಗ ಅದನ್ನು ರಾಷ್ಟ್ರಸಂಘ ಆಕ್ಷೇಪಿಸಿತು. ವಿನಿಮಯದ ಕುರಿತೇ ಅದರಲ್ಲಿ ಜೋರು ಕೊಡಲಾಗಿದೆಯಲ್ಲದೆ — ಸ್ವತಂತ್ರವಾದ ಅಭಿಪ್ರಾಯವನ್ನು ನಿರ್ಭೀತಿಯಿಂದ ವ್ಯಕ್ತಗೊಳಿಸಲು ಈ ನಿಯಮಾವಳಿ ಅನುಕೂಲವಾಗಿಲ್ಲವೆಂದು ರಾಷ್ಟ್ರಸಂಘದ ಸೈನ್ಯಾಧಿಪತ್ಯ ದೂರಿತು. ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷಸ್ಥಾನದಲ್ಲಿರುವ ತಿಮ್ಮಯ್ಯನವರು ಇದು ಬುಡವಿಲ್ಲದ ಸಂದೇಹವೆಂದು ಸ್ಪಷ್ಟಗೊಳಿಸಿದರು. ಕೈದಿಗಳಿಗೆ ವಿವರಣೆಯ ಅವಕಾಶ ಮಾಡಿಕೊಡುವಲ್ಲಿಯೂ ರಾಷ್ಟ್ರಸಂಘದ ಕಡೆಯಿಂದ ವಿನಾ ಕಾರಣ ವಿಳಂಬವಾಗುತ್ತಿದೆ. ಕಳೆದ ಸೋಮವಾರ ನಿಶ್ಚಯವಾಗಿಯೂ ತೊಡಗುವುದೆಂದಿದ್ದ ವಿವರಣೆಯ ಕಾರ್ಯಕ್ರಮ ಈ ಗುರುವಾರಕ್ಕೆ ಮುಂದೆ ಬಿದ್ದಿದೆ. ೯೦ ದಿನಗಳೊಳಗಾಗಿ ರಾಜಕೀಯ ಪರಿಷತ್ತು ಸೇರಬೇಕೆಂದೂ ಅಷ್ಟರೊಳಗೆ ಸ್ವದೇಶಕ್ಕೆ ಮರಳಲಿಚ್ಛಿಸುವ ಕೈದಿಗಳ ನಿರ್ಗಮನವಾಗಬೇಕೆಂದೂ ಒಪ್ಪಂದದಲ್ಲಿ ಹೇಳಲಾಗಿದ್ದರೂ —ಈ ಅವಧಿಯಲ್ಲಿ ಅರೆವಾಸಿಯಷ್ಟು ಪೂರ್ವಭಾವಿಯಾದ ಸಿದ್ಧತೆಗಳಿಗೇ ಸಂದಿದೆ. ಇನ್ನುಳಿದ ಅಲ್ಪಾವಧಿಯಲ್ಲಿ ೨೨ ಸಾವಿರಕ್ಕೂ ಮೇಲ್ಪಟ್ಟ ಕೈದಿಗಳ ಅಭಿಪ್ರಾಯವನ್ನು ಸಂಗ್ರಹಿಸುವುದು ಕಷ್ಟಸಾಧ್ಯ. ಅವಧಿಯನ್ನು ಮುಂದುವರಿಸಲು ಇಕ್ಕಡೆಯವರೂ ಒಪ್ಪದಿದ್ದರೆ ಮತ್ತು ರಾಜಕೀಯ ಪರಿಷತ್ತು ಸೇರದಿದ್ದರೆ- ಕೊರಿಯದಲ್ಲಿ ಇದುವರೆಗೆ ನಡೆದ ಪ್ರಯತ್ನಕ್ಕೆ ಏನೂ ಅರ್ಥ ಉಳಿಯುವುದಿಲ್ಲ.

ಕೇವಲ ಕುಹಕ

ಇದನ್ನೇ ಕುಹಕತನವೆಂದು ಹೇಳಬಹುದು ದಕ್ಷಿಣಕೊರಿಯಾದ ಸಿಂಗ್ಮನ್ರೀಯವರ. ಯುದ್ಧ ವಿರಾಮ ಒಪ್ಪಂದದಲ್ಲಿ ಸ್ವೀಕೃತವಾದ ೯೦ ದಿನಗಳ ಅವಧಿಯ ವರೆಗೆ ಯುದ್ಧ ನಡೆಸದೆ ಸುಮ್ಮನುಳಿಯುವಂತೆ ಅಮೇರಿಕಾ ಮನವೊಲಿಸದೆ—ಈ ಅವಧಿ ತೀರಿದೊಡನೆಯೇ ಅವರು ಪ್ರತ್ಯಕ್ಷ ಯುದ್ಧವನ್ನು ಆರಂಭಿಸಬಹುದು. ಆಗ ಒಪ್ಪಂದ ವ್ಯರ್ಥವಾಗುತ್ತದೆ. ರಾಷ್ಟ್ರ ಸಂಘಕ್ಕೆ (ಅರ್ಥಾತ್ ಅಮೇರಿಕಕ್ಕೆ) ಕೊರಿಯಾದಲ್ಲಿ ಶಾಂತಿ ಸ್ಥಾಪಿಸಲು ನಡೆದ ಪ್ರಯತ್ನಗಳೊಂದಿಗೆ ಸಹಕರಿಸಿದ ಗೌರವವೂ ಬೇಕು ಇತ್ತ ಯುದ್ಧ ಮುಂದುವರಿಸುವ ಅವಕಾಶವೂ ಬೇಕು. ಈ ಎರಡೂ ಉದ್ದೇಶಗಳನ್ನು ನೆರವೇರಿಸುವ ಬಗೆಯೆಂದರೆ ನಿಧಾನವಾಗಿ ಕೆಲಸ ಮಾಡುವುದೂ ರ್‍ಹೀಯವರನ್ನು ಉತ್ತೇಜಿಸುವುದೂ ಆಗಿರುತ್ತದೆ. ಯುದ್ಧ ಕೈದಿಗಳ ಮನಸ್ಸಿನಲ್ಲಿ ಕ್ರೋಧೋದ್ವೇಗವನ್ನು ಹೆಚ್ಚಿಸಿ, ಭಾರತೀಯರವಿರುದ್ಧ ಅವರನ್ನು ಎತ್ತಿ ಕಟ್ಟಲು ಕೆಲವು ಹಸ್ತಕರು ವಿನಿಮಯಕೊಪ್ಪದ ಯುದ್ಧಕೈದಿಗಳ ನಡುವೆ ತಳವೂರಿರುವರೆಂದು ಹೇಳಲಾಗುತ್ತಿದೆ. ಇವರು ಗಲಭೆಗಳನ್ನು ಪ್ರಚೋದಿಸುತ್ತಲೂ ಅವಿಧೇಯತೆಯನ್ನು ಪ್ರೋತ್ಸಾಹಿಸುತ್ತಲೂ ರ್‍ಹೀ ಸರಕಾರಕ್ಕೆ ಸಂತೋಷ ನೀಡಿ—ತಟಸ್ಥ ರಾಷ್ಟ್ರ ಮಂಡಳಕ್ಕೆ ಪೇಚು ತರುವುದರಲ್ಲಿ ನಿಷ್ಣಾತರಾಗಿರುವರು. ಇವರ ಪತ್ತೆ ಹಚ್ಚುವುದು ಸಾಧ್ಯವಿಲ್ಲ- ಸಿಂಗ್ಮನ್ ರ್‍ಹೀಯವರನ್ನು ದಾರಿಗೆ ತಂದರೆ ಮಾತ್ರ ಈ ಹಸ್ತಕರ ಕೈವಾಡವೂ ನಿಲ್ಲುವ ಆಶೆಯಿದೆ. ಸಿಂಗ್ಮನ್ ರ್‍ಹೀಯವರಿಗೆ ಬುದ್ಧಿ ಹೇಳುವುದು ಯಾರು? ಅಮೇರಿಕಾ ಈ ಕೆಲಸ ಮಾಡಬೇಕೆಂದೂ ಬ್ರಿಟನ್, ಕೆನಡಾಗಳು ಅದನ್ನು ಒತ್ತಾಯಿಸಬೇಕೆಂದೂ ನೆಹರೂರವರು ಪತ್ರ ಬರೆದಿದ್ದರು. ಪರಿಣಾಮವಾಗಿ ಸಹನೆಯಿಂದ ವರ್ತಿಸಲು ದಕ್ಷಿಣ ಕೊರಿಯಾದ ಸರಕಾರಕ್ಕೆ ಅಮೇರಿಕಾ ಬುದ್ಧಿಮಾತು ಹೇಳಿರುತ್ತದೆ. ಆದರೆ ಕಿಡಿಗೇಡಿತನವನ್ನು ಪ್ರದರ್ಶಿಸಿದ ತುಂಟನ ಬೆನ್ನು ಚಪ್ಪರಿಸಿದಷ್ಟೇ ಮೆಲ್ಲನೆ ಅಮೇರಿಕದ ಈ ಕೋಲಿನ ಪೆಟ್ಟು ಸಿಂಗ್ಮನ್ ರ್‍ಹೀಯವರಿಗೆ ಬಿಟ್ಟಿದೆ. ನೆಹರೂರವರು ಇಷ್ಟಕ್ಕೆ ತೃಪ್ತಿ ಹೊಂದಿಲ್ಲ. ಸಿಂಗ್ಮನ್ ರ್‍ಹೀಯವರ ಧೋರಣೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಪತ್ಯ ಬಹಿರಂಗವಾಗಿ ಖಂಡಿಸಬೇಕೆಂದು ಅವರು ಹೇಳಿರುವರು. ಹಿಂದೆ ಕಮ್ಯೂನಿಸ್ಟರು ಯುದ್ಧ ವಿರಾಮ ಒಪ್ಪಂದ ಮುರಿದರೆ ಪರಿಣಾಮ ನೆಟ್ಟಗಾಗದೆಂದು ಎಚ್ಚರಿಸಿದ ಈ ಸೈನಾಧಿಪತ್ಯ ರ್‍ಹೀಯವರನ್ನು ಖಂಡಿಸುವ ವಿಚಾರಕ್ಕೆ ಮಾತ್ರ ಮನಗೊಟ್ಟಿಲ್ಲ.

ಉಡುಪಿ

ಪರಿಯಾಳ ಸಮಾಜ ಸುಧಾರಕ ಸಂಘದ— ಕಾರ್ಯಕಾರೀ ಸಮಿತಿ ಸಭೆಯು ಇದೇ ತಾ 7ರಲ್ಲು ಶ್ರೀ ಕೆ. ಬಾಲಕೃಷ್ಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿ ಸರಕಾರದ ಕಡೆಯಿಂದ ಬಂದಿದ್ದ ಪ್ರಶ್ನಾವಳಿ ಪತ್ರಕ್ಕೆ ಉತ್ತರ ಕೊಡುವರೆ ಉಪಸಮಿತಿಯನ್ನು ನೇಮಿಸಲಾಯಿತು. ಬೊಂಬಾಯಿ ಪರಿಯಾಳ ಒಕ್ಕೂಟ ಸಂಘದ ಕಡೆಯಿಂದ ಬಂದಿರುವ ವಿದ್ಯಾರ್ಥಿ ವೇತನಗಳನ್ನು ಸಂಘದ ಪತಿಯಿಂದ ವಿದ್ಯಾರ್ಥಿಗಳ ರಕ್ಷಕರ ಮುಖೇನ ಹಂಚಿ ಕೊಡಲಾಯಿತು.

ಉಪಹಾರ ಸತ್ಕಾರ— ಹಿಂದೆ ಕಂಟ್ರೋಲರ್ ಆಫ್ ಇನ್ಶೂರೆನ್ಸ್ ಆಗಿದ್ದು ಈಗ ನ್ಯೂ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯ ಮೆನೇಜರರಾಗಿರುವ ಶ್ರೀ ಪಿ. ಸಿ. ಕೃಷ್ಣಮೂರ್ತಿ ಅವರನ್ನು ಸತ್ಕರಿಸಲು ತಾ 12ನೇ ಸಂಜೆ ಸ್ಥಳೀಯ ಕೆನರಾ ಮ್ಯೂಚುವಲ್ ಇನ್ಶೂರೆನ್ಸ್ ಕಂಪೆನಿಯವರು ಉಪಹಾರ ಕೂಟವೊಂದನ್ನು ಏರ್ಪಡಿಸಿದ್ದರು. ಡೈರೆಕ್ಟರ್ ಶ್ರೀ. ಪಿ. ಪದ್ಮನಾಭ ರಾಯರು ಅತಿಥಿಗಳ ಪರಿಚಯ ಭಾಷಣ ಮಾಡಿದರು. ಅತಿಥಿಗಳು ಕೆನರಾ ಮ್ಯೂಚುವಲಿನ ಸ್ಥಾನವನ್ನು ಶ್ಲಾಘಿಸಿ ಆಭಾರ ಸೂಚಿಸಿದರು. ಡೈರೆಕ್ಟರ್ ಡಾ! ಕೆ. ಎಲ್ ಐತಾಳರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಪಾಂಗಾಳ ರಾಯಪ್ಪ ನಾಯ್ಕರ ಶೋಚನೀಯ ನಿಧನ— ಘನ ಪಾಂಗಾಳ ಮನೆತನಕ್ಕೆ ಸೇರಿದ ಹಾಗೂ ಉಡುಪಿಯ ಚಿನ್ನ ಬೆಳ್ಳಿ ವ್ಯಾಪಾರಸ್ಥ ಸಂಘದ ಅಧ್ಯಕ್ಷರೂ ಆದ ಶ್ರೀ ಪಾಂಗಾಳ ರಾಯಪ್ಪ ನಾಯ್ಕರು ಇದೇ ತಾ 8ರಲ್ಲು ಗಂಗೊಳ್ಳಿ ಹೊಳೆ ದಾಟುತ್ತಿರುವಾಗಲೇ ಹೃದಯಸ್ತಂಭನದಿಂದ ನಿಧನಹೊಂದಿದರೆನ್ನಲು ತುಂಬಾ ವಿಷಾದಪಡುತ್ತೇವೆ. ಇವರು ಇದೇ ತಾ 13ರಲ್ಲು ಪ್ರಾರಂಭವಾಗಲಿರುವ ಅಂಕೋಲೆಯ ಮಹಾಮಾಯಾ ದೇವಸ್ಥಾನದಲ್ಲಿಯ ಸ್ವರ್ಣಾಲಂಕಾರದ ಮಹೋತ್ಸವಕ್ಕೆ ಹೊರಟವರಿದ್ದರು. ಕೆಲವು ತಿಂಗಳುಗಳ ಹಿಂದೆ ಕುಳಾವಿ ಸಮಾಜದ ಈ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯದಲ್ಲಿ ಮುಂದಾಳಾಗಿ ತುಂಬಾ ಕೆಲಸ ಮಾಡಿದ್ದರು. ಇವರ ಅಕಾಲ ನಿಧನದ ಸಲುವಾಗಿ ಉಡುಪಿಯ ಚಿನ್ನ ಬೆಳ್ಳಿ ವ್ಯಾಪಾರಿಗಳ ಸಭೆಯು ತಾ 9ರಲ್ಲು ಜರಗಿ ತನ್ನ ದುಃಖವನ್ನು ಪ್ರದರ್ಶಿಸಿತು. ದಿವಂಗತರ ವಯಸ್ಸು 65. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ದುಃಖೀ ಕುಟುಂಬದೊಡನೆ ನಮ್ಮ ಸಂತಾಪವನ್ನು ಸೂಚಿಸುವೆವು.

ಕಾಂಗ್ರೆಸ್ ಕಮಿಟಿ ಸಭೆಯು

ಇದೇ ತಾ. 10ರಲ್ಲು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ತೆರೆಯಲಾಗುವ ಸಾರ್ವಜನಿಕ ಸಂಪರ್ಕ ಆಫೀಸಿನ ಜವಾಬ್ದಾರಿಯನ್ನು ತಾನು ವಹಿಸುವುದಾಗಿ ತಿಳಿಸಿದುದಕ್ಕೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರನ್ನು ಅಭಿನಂದಿಸಲಾಯಿತು. ಇದೇ ತಾ. 22ರಲ್ಲು ಉಡುಪಿಗೆ ಬರಲಿರುವ ಅರ್ಥಿಕ ಮಂತ್ರಿ ಶ್ರೀ ಸುಬ್ರಹ್ಮಣ್ಯಂ, ಅವರಿಗೆ ಕಾಂಗ್ರೆಸ್ ಕಮಿಟಿ ಪರವಾಗಿ ಮಾನಪತ್ರವೀಯಬೇಕೆಂದು ನಿರ್ಣಯವಾಯಿತು. ಖಾಲಿಬಿದ್ದ ಸ್ಥಳಕ್ಕೆ ಹೊಸ ಸದಸ್ಯರೆನ್ನು ಆರಿಸಲಾಯಿತು.

ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು ಇದೇ ತಾ. 10ರಲ್ಲು ಚೇರ್‍ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮಾರ್ಕೆಟು, ಕಸಾಯಿಖಾನೆ ಮೊದಲಾದುವುಗಳ ಕಂಟ್ರಾಕ್ಟರರು ಕಾಲದಲ್ಲಿ ಹಣಪಾವತಿ ಮಾಡದೆ ಇದ್ದುದರಿಂದ ಅವರವರ ಕಂಟ್ರಾಕ್ಟನ್ನು ರದ್ದುಗೊಳಿಸಿ ಪುನಹ ಏಲಂ ಮಾಡಬೇಕೆಂದು ಆದ ಕೌನ್ಸಿಲಿನ ಹಿಂದಿನ ನಿರ್ಣಯವನ್ನು ರದ್ದು ಮಾಡಿ ಕಂಟ್ರಾಕ್ಟರರ ಕಾರ್ಯವನ್ನು ಮುಂದುವರಿಸುವುದೇ ಈ ಸಭೆಯ ಮುಖ್ಯೋದ್ದೇಶ. ಈ ಕುರಿತು ಕಾಂಗ್ರೆಸ್ ಪಕ್ಷದ ಸದಸ್ಯರಾದ ಕೆ. ಕೆ. ಪೈ, ಸಿ. ವಿ. ಆಚಾರ್, ಎಮ್ [illegible] ಪಲಾವರು ಕಂಟ್ರಾಕ್ಟರರ ವರ್ತನೆಯನ್ನು ಟೀಕಿಸಿ ಮಾತನಾಡಿದರು. ಸ್ವತಂತ್ರ ಪಕ್ಷದ ಶ್ರೀ ಎ. ಮಂಜುನಾಥರಾಯರು ಕಂಟ್ರಾಕ್ಟರರ ಸ್ಟೇಟಮೆಂಟನ್ನು ರೆಕಾರ್ಡು ಮಾಡಿ ಅವರ ಕಾರ್ಯವನ್ನು ಮುಂದುವರಿಸಬೇಕೆಂದು ನಿರ್ಣಯವನ್ನು ಸೂಚಿಸಿದರು. ಕಾಂಗ್ರೆಸ್ ಪಕ್ಷದ ಒಂಬತ್ತು ಮಂದಿ ಸದಸ್ಯರು ಈ ನಿರ್ಣಯವನ್ನು ವಿರೋಧಿಸಿದರು. ಸ್ವತಂತ್ರ ಪಕ್ಷದ ಬಹುಮತದಿಂದ ಶ್ರೀ ರಾಯರ ನಿರ್ಣಯವು ಪಾಸಾಯಿತು.

ನಂತರ ಸಾಮಾನ್ಯ ಸಭೆಯು ಜರಗಿತು. ಪ್ರಾರಂಭದಲ್ಲಿ ಶ್ರೀಗಳಾದ ಕೆ. ಕೆ. ಪೈ ಮತ್ತು ಎ. ಮಂಜುನಾಥ ರಾಯರ ಪ್ರಶ್ನೆಗಳಿಗೆ ಉತ್ತರವೀಯಲಾಯಿತು. ಮದ್ರಾಸು ಮಂತ್ರಿ ಡಾ! ಯು. ಕೃಷ್ಣರಾಯರು ಮುನಿಸಿಪಾಲಿಟಿಗೆ ದಾನವಾಗಿ ಕೊಡಲಿರುವ ಜಮೀನಿಗೆ "ಕಮಲಮ್ಮ ಗೋಕುಲ" ಎಂಬ ಹೆಸರನ್ನು ಊರ್ಜಿತವಲ್ಲಿಡಬೇಕೆಂಬುದಕ್ಕೆ ಬಹುಮತ ದೊರೆಯಿತು. ಕಳೆದ ಮಾರ್ಚ ತಿಂಗಳ ತಾ. 31ರಲ್ಲು ಆದ ಈ ಕೌನ್ಸಿಲಿನ ನಂಬ್ರ 16ನೇ ನಿರ್ಣಯವು ರದ್ದುಗೊಳ್ಳುವ ಯೋಗ್ಯವೆಂದೂ, ಕೌನ್ಸಿಲಿನ ಮೇಲೆ ಯಾಕೆ ಕ್ರಮ ತೆಗೆದುಕೊಳ್ಳಕೂಡದೆಂಬುದಕ್ಕೆ ಉಚಾವರಣೆ ಕೊಡಬೇಕೆಂದೂ ಸೂಚಿಸಿದ ಸರಕಾರಿ ಆಜ್ಞೆಯನ್ನು ಪರಿಶೀಲಿಸಲಾಯಿತು. ಶ್ರೀ ಎ. ಮಂಜುನಾಥರಾಯರು ಕೆಲವು ಕಾರಣಗಳನ್ನು ಸೂಚಿಸಿ ಅವನ್ನು ಸರಕಾರಕ್ಕೆ ಕಳುಹಿಸಬೇಕೆಂದು ನಿರ್ಣಯ ತಂದರು. ಅದು ಬಹುಮತದಿಂದ ಪಾಸಾಯಿತು. ಕಾಂಗ್ರೆಸ್ ಪಕ್ಷದವರು ವಿರೋಧಿಸಿದರು. ನಂತರ ಕೆಲವೊಂದು ನಿರ್ಣಯಗಳಾದುವು.

ಮಂತ್ರಿಗಳ ಆಗಮನ – ಮದ್ರಾಸಿನ ಆರ್ಥಿಕ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯನವರು ಇದೇ ತಾ. 22ಕ್ಕೆ ಆಗಮಿಸಲಿರುವರೆಂದು ತಿಳಿದುಬರುತ್ತದೆ.

ದ. ಕ. ಜಿಲ್ಲಾ ಪರಿಯಾಳ ಸಮಾಜ ಸಮ್ಮೇಲನವು ಇದೇ ತಾ. 20 ನೇ ಬೆಳಿಗ್ಗೆ 10 ಗಂಟೆಗೆ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಬಿ. ಸೋಮಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಉಡುಪಿ. ಡಿ. ಮು. ಕೋರ್ಟಿನಲ್ಲಿ

ಸ್ಯೂಟ್ ನಂಬ್ರ 537/1953

ಕಲ್ಯಾಣಪುರ ಶ್ರೀ ವೆಂಕಟ್ರಮಣ ದೇವಸ್ಥಾನ–ಕಡೆಯಿಂದ ಮನೇಜಿಂಗ್ ಟ್ರಸ್ಟಿ ಕೆ. ರಾಮಕೃಷ್ಣ ಶಣೈ ವಾದಿ

ಮತ್ತು

ಚಂದಪ್ಪ ಮರಕಾಲ ಕೂಡಾ ಪ್ರತಿವಾದಿರು.

ಯಿವರೊಳಗೆ—

ಪ್ರತಿವಾದಿರು 1. ಕೆ. ಚಂದಪ್ಪ ಮರಕಾಲ- 2. ಕೆ. ಅಂಗರ ಮರಕಾಲ- 3. ಕೆ. ಸುಂದರ ಯಾನೆ ಶೀನ– ಪೊನ್ನು ಮರಕಾಲ್ತಿ ಮಗಂದಿರು– ಕಲ್ಯಾಣಪುರ–ಯಿವರಿಗೆ–

ಸದರಿ ಮೂರು ಜನ ಪ್ರತಿವಾದಿರಿಂದಾ ದೇವಸ್ಥಾನಕ್ಕೆ ಬರಾ ಕಳೆದ ವರೆ ವ ನಂದನ ಸಂವತ್ಸರಗಳ ಗೇಣಿ ವ ಬಡ್ಡಿ ಕೂಡಾ ರೂಪಾ 116—1—3ಕ್ಕೆ ವಾದಿ [illegible] ಪ್ರತಿವಾದಿರ ಮೇಲೆ ಮಾಡಿದ ಸದರೀ ವ್ಯಾಜ್ಯವು ತಾರೀಕು 30—10—53ಕ್ಕೆ ಪ್ರಥಮ ತನಿಖೆ ಬಗ್ಗೆ ಇಡೋಣಾಗಿಯದೆ— ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಸದರಿ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಇದ್ರೆ ನಿಮ್ಮಿಯವರ ಗೈರ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸೋಣಾಗಿಯದೆ.

M. D. Kamath
Advocate for Pltf.
Udipi: Date 14—10—1953.

ಸಂಗೀತದ ಸುಖ ಕಂಡ ಪ್ರಾಣಿಗಳು ಹಾಲು ಹೆಚ್ಚು ಕೊಡುವುವಂತೆ— ತಿಳಿದವರು ಹಾಡಿದರೆ ಬೇಕಾದಾಗ ಮಳೆ ಬರುವುದಂತೆ—ನಿಶ್ಚಲ ಭಕ್ತಿಯಿಂದ ಭಾವಪೂರ್ಣವಾಗಿ ಹಾಡಿದರೆ ಪರ್ವತ ಕೂಡಾ ಕರಗಿ ನೀರಾಗುವುದೆಂದು ಶಾಸ್ತ್ರ ಹೇಳಿದೆ. ಇದೆಲ್ಲ ನೀವು ಕೇಳಿದುದು ಮಾತ್ರ. ಆದರೆ ಈಗ ನೀವು ಈ ಸತ್ಯಾಸತ್ಯತೆಯನ್ನು ಕಣ್ಣ ಮುಂದೆ ಕಾಣಿರಿ.

ತಾ. 13—10—53 ರಿಂದ

ಬೈಜು ಬಾವರ

ಈ ಚಿತ್ರದ ವಿಷಯವಾಗಿ ಬೇರೆ ಹೇಳಿಕೆಯೇ ಅನಗತ್ಯ.

ಭಾರತ್‌ಭೂಷಣ್, ಮೀನಾಕುಮಾರಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಪಂಚಾಯತ ಬೋರ್ಡು ಗ್ರಾಮಕಮಿಟಿ, ಶಾಲಾ ಕಾಲೇಜು ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿರಿ:—

ನವಭಾರತಪುಸ್ತಕಭಂಡಾರ ಉಡುಪಿ.

ರಾಜಕೀಯ ಸಂತ್ರಸ್ತರಿಗೆ ಭೂದಾನದ ಕುರಿತು ಮದ್ರಾಸು ಸರಕಾರದ ತಿದ್ದುಪಡಿಯಾದ ಆಜ್ಞೆ— 1 ಸರಕಾರದ ನೊದಲಿನ ಹುಕುಮಿನ ಮೇರೆಗೆ ಒಬ್ಬ ರಾಜಕೀಯ ಸಂತ್ರಸ್ತನಿಗೆ ಭೂಮಿಯು ಮಂಜೂರಾಗಿ ಅದು ಅವನ ಸ್ವಾಧೀನ ಕೊಡಲ್ಪಟ್ಟಿದ್ದರೆ ಮತ್ತು ಅವನೊಬ್ಬ ಭೂಮಿಯಿಲ್ಲದ ಬಡವನ ವರ್ಗಕ್ಕೆ ಸೇರಿದ್ದು, ಸರ್ವಸಾಧಾರಣ ಕ್ರಮದಂತೆ ಕೂಡಾ ಭೂಮಿ ಪಡೆಯಲು ಅರ್ಹನಾಗಿದ್ದರೆ ಅಂತಹ ದರಕಾಸ್ತನ್ನು ಬದಲಾಯಿಸಲಾಗದು. ಆದರೆ ಅಂತಹ ಭೂಮಿಯಲ್ಲಿ ಮೊದಲು ಯಾರಾದರೂ ಕೃಷಿ ವಗೈರೆ ಮಾಡಿದವರಿದ್ದರೆ ಅವರಿಗೆ ಸರಕಾರವು ನಿಶ್ಚಯಿಸುವ ಪರಿಹಾರ ಕೊಡತಕ್ಕದ್ದು.

ಹಳೆಯ ಹುಕುಮು ಪ್ರಕಾರ ರಾಜಕೀಯ ಸಂತ್ರಸ್ತನೊಬ್ಬನಿಗೆ ಭೂಮಿಯು ಕೊಡಲ್ಪಟ್ಟು ಹೊಸ ಹುಕುಮಿನ ಮೊದಲು ಅವನು ಹಣ ಖರ್ಚುಮಾಡಿ ಅದರಲ್ಲಿ ಹೆಚ್ಚಿನ ಕೃಷಿ ವಗೈರೆ ಮಾಡಿದ್ದಲ್ಲಿ ಅಂತಹದನ್ನು ಕಾಯಂ ಮಾಡಬೇಕು ಸದ್ರಿ ಭೂಮಿಯಲ್ಲಿ ಮೊದಲಿದ್ದವನು ಮಾಡಿದ ಕೃಷಿ ವಗೈರೆಗಳಿಗೆ ಸರಕಾರವು ನಿಶ್ಚಯಿಸುವ ಪರಿಹಾರ ಕೊಡತಕ್ಕದು.

3 ಹೆಚ್ಚು ಆಹಾರ ಬೆಳೆಸುವ ಯೋಜನೆ ಮೇರೆಗೆ ತಾತ್ಕಾಲಿಕವಾಗಿ ರಾಜಕೀಯ ಸಂತ್ರಸ್ತರಿಗೆ ಭೂಮಿಯು ಕೊಡಲ್ಪಟ್ಟು, ಅದರಲ್ಲವರು ಹೆಚ್ಚಿನ ಕೃಷಿ ವಗೈರೆ ಮಾಡಿದ್ದ ಪಕ್ಷದಲ್ಲಿ ಅಂತಹ ಭೂಮಿಯನ್ನು ಅವರಿಗೆ 15 ವರ್ಷಗಳ ವರೆಗೆ ತಾತ್ಕಾಲಿಕ ದರಖಾಸ್ತಿಗೆ ಕೊಡತಕ್ಕದ್ದು. ಸದ್ರಿ ಭೂಮಿಯಲ್ಲಿ ಮೊದಲಿದ್ದವನು ಅದರಲ್ಲೇನಾದರೂ ಕೃಷಿ ಮಾಡಿದ ಪಕ್ಷದಲ್ಲಿ ಸರಕಾರವು ನಿಶ್ಚಯಿಸುವ ಪರಿಹಾರವನ್ನು ಆತನಿಗೆ ತೆರಲು ಬದ್ಧನಾಗಬೇಕು. ಮತ್ತು 15 ವರ್ಷಗಳ ಮೇಲೆ ಈ ಭೂಮಿಯು ತಿರುಗಿ ಸರಕಾರದ ವಶವಾಗಬೇಕು. ಈ ಸಂಬಂಧವಾದ ನಿಯಮಗಳನ್ನು ಸರಕಾರವು ಬದಲಿಸಿದ ಪಕ್ಷದಲ್ಲಿ ಅದರ ಪ್ರಯೋಜನವನ್ನು ಈ ಭೂಮಿ ಪಡೆದ ಸಂತ್ರಸ್ತನು ಪಡೆಯಲು ಬದ್ಧನಿರುತ್ತಾನೆ.

ಮದ್ರಾಸು ಸರಕಾರದ ಮೊದಲಿನ ಹುಕುಮಿನ ಮೇರೆಗೆ ಭೂಮಿ ಮಂಜೂರುಮಾಡಲ್ಪಟ್ಟು, ದರಖಾಸ್ತು ಪಟ್ಟೆ ಪಡೆಯದಿರುವ ದಕ್ಷಿಣ ಕನ್ನಡ ಜಿಲ್ಲೆಯ ರಾಜಕೀಯ ಸಂತ್ರಸ್ತರು ಮೇಲಿನ ತಿದ್ದುಪಡಿಯಾದ ಸರಕಾರದ ಹುಕುಮನ್ನು ಪರಿಶೀಲಿಸಿ ಆ ಹುಕುಮಿನ ಪ್ರಕಾರ ತಾವು ರಿಯಾಯತಿ ಪಡೆಯಲು ಅರ್ಹರಾದ ಪಕ್ಷದಲ್ಲಿ ಇದೇ ತಾ 31—12—53ರೊಳಗೆ ದ. ಕ. ಜಿಲ್ಲಾ ಕಲೆಕ್ಟರರಿಗೆ ಅರ್ಜಿ ಹಾಕಿಕೊಳ್ಳಬಹುದು ಮುಂದಿನ ಡಿಸಂಬರ ತಾ 31ರ ನಂತರ ಅರ್ಜಿಗಳು ಸ್ವೀಕರಿಸಲ್ಪಡಲಾರವು ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ. ಆರ್. ಕರ್ಕೇರರು ತಿಳಿಸುತ್ತಾರೆ.

ಮದ್ದಾರ್ಣೆ ಸ್ಥಳೀಯ ಪಳೆ ವಿದ್ಯಾರ್ಥಿಸಂಘದವರು ಇದೇ ತಾ. 2ರಲ್ಲು ಗಾಂಧಿಜಯಂತ್ಯುತ್ಸವವನ್ನು ಡಾ! ನಾರಾಯಣ ರೈ, ಸನಣೂರು, ಅವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಧ್ವಜವಂದನೆ, ಭಜನೆ, ಲಘು ಉಪಾಹಾರ ಮೊದಲಾದ ಕಾರ್ಯಕ್ರಮಗಳಿದ್ದವು.

ಹಂಗಾರಕಟ್ಟೆ—ಇಲ್ಲಿಯ ಕರ್ನಾಟಕ ಸಂಘದ ವಾರ್ಷಿಕೋತ್ಸವ ಹಾಗೂ ನಾಡಹಬ್ಬವು ಇದೇ ತಾ 16ರಿಂದ 19ರ ತನಕ ಆಟ, ಹಾಡು, ಭಾಷಣ, ಪಂದ್ಯಾಟ ಸ್ಪರ್ಧೆಗಳು, ಭಾಷಣಗಳು ಇತ್ಯಾದಿ ಕಾರ್ಯಕ್ರಮಗಳಿಂದ ಜರಗಲಿರುವುದು.

ಬ್ರಹ್ಮಾವರ— ಸ್ಥಳೀಯ ಕಾಂಗ್ರೆಸ್ ಕಮಿಟಿಯ ವಿಶೇಷ ಸಭೆಯು ಇದೇ ತಾ 8ರಲ್ಲು ಸೇರಿ ಪಂಚವಾರ್ಷಿಕ ಯೋಜನೆಯಲ್ಲಿ ಬ್ರಹ್ಮಾವರ ಮತದಾರ ಕ್ಷೇತ್ರಕ್ಕೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುವಂತೆ ವಿನಂತಿಸುವ ನಿರ್ಣಯಗಳಾದುವು. 1 ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಕತ್ತದ ಕಾರ್ಖಾನೆ ತೆರೆಯುವಿಕೆ ಮತ್ತು ಕೈಮಗ್ಗಗಳಿಗೆ ಆರ್ಥಿಕ ಸಹಾಯ ಕೊಡುವುದು. 2 ಹಾಲಾಡಿ ಹೊಳೆಯ ಬೆಳ್ವೆ ಮತ್ತು ಸೀತಾನದಿಯ ಮುಂಡಾಡಿಯಲ್ಲಿ ಆಣೆಕಟ್ಟನ್ನು ನಿರ್ಮಿಸಿ ನೀರಾವರಿಯನ್ನು ಒದಗಿಸಿಕೊಡುವುದು. 3 ಬ್ರಹ್ಮಾವರದಲ್ಲಿ ಒಂದು ಧರ್ಮಾಸ್ಪತ್ರೆಯನ್ನು ತೆರೆಯುವುದು. 4 ಮಾಬುಕಳದ ವರೆಗೆ ಬಂದ ಪೈಕಾರ ಇಲೆಕ್ಟ್ರಿಕ್ ಯೋಜನೆ ಲ್ಯಾನನ್ನು ಹಂಗಾರಕಟ್ಟೆ ವರೇಗೂ ಬ್ರಹ್ಮಾವರದಿಂದ ಬಾರಕೂರು ಮತ್ತು ಸಾಲಿಕೇರಿ ವರೇಗೂ ಮುಂದುವರಿಸುವುದು. 5 ಬಾರಕೂರು ಬಿಜ್ಜಲ್ ಕಟ್ಟೆ ಮತ್ತು ಕೋಟಗೋಳಿ ಅಂಗಡಿ ರಸ್ತೆಗೆ ಮೇಜರ್ ಸಾರಿಗೆಯ ಅನುಕೂಲತೆ ಒದಗಿಸುವುದು. ಕರ್ನಾಟಕ ಏಕೀಕರಣ, ಭೂದಾನ ಯಜ್ಞ, ಬ್ರಹ್ಮಾವರ ಸ್ಯೆಂಟ್‌ಮೇರೀಸ್ ಹೈಸ್ಕೂಲಿಗೆ ಮಹಾ ಜನರ ಬೆಂಬಲ ನೀಡುವ ಬಗ್ಗೆ ವಿನಂತಿಸುವ ನಿರ್ಣಯಗಳೂ ಆದುವು.

ಕುಂಬಳೆ— ಪಾರ್ಲಿಮೆಂಟಿನ ಕಮ್ಯೂನಿಸ್ಟ್ ಪಕ್ಷದ ಮುಖಂಡರಾದ ಶ್ರೀ ಎ. ಕೆ. ಗೋಪಾಲನ್, ಅವರು ತಾ 10ರಲ್ಲು ಮೈಲುಗಾಡಿಯಲ್ಲಿ ಕಲ್ಲಿಕೋಟೆಗೆ ಹೋಗುತ್ತಿರುವಾಗ ಇಲ್ಲಿನ ಮಜೂರರು ರೈಲ್ವೆ ನಿಲ್ದಾಣದಲ್ಲಿ ಅವರಿಗೆ ಪುಷ್ಪಹಾರಗಳನ್ನರ್ಪಿಸಿ ಗೌರವಿಸಿದರು.

ಮಣಿಪಾಲ— ಸಾರ್ವಜನಿಕ ಕಾರ್ಯಕರ್ತರಾದ ಮಣಿ ಗೋವಿಂದ ಶೆಟ್ರು ತಾಯಿ ಸೀತಮ್ಮ ಶೆಡ್ತಿರು ತಮ್ಮ 60ನೇ ವಯಸ್ಸಿನಲ್ಲಿ ತಾ. 3-10-53ರಲ್ಲಿ ದಿವಂಗತರಾದರು. ಮೃತರು ಸದ್ಗುಣಭರಿತರಾಗಿದ್ದು ಸರ್ವರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು.

ಬೆಳ್ವೆ— ಸ್ಥಳೀಯ ಬೋರ್ಡು ಪ್ರಾಥಮಿಕ ಶಾಲೆಯು ಪ್ರೌಢ ಪ್ರಾಥಮಿಕ ಶಾಲೆಯಾಗಿ ಮಾರ್ಪಟ್ಟದ್ದು, ಅದರ ಉದ್ಘಾಟನೆಯು ತಾ. 5ರಲ್ಲಿ ಶ್ರೀ ಯು. ಭವಾನಿಶಂಕರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ! ಎಸ್. ನಾರಾಯಣ ಭಟ್, ಎಸ್. ರಂಕರ ಶೆಟ್ಟಿ, ಕೋಟಿ ಲಕ್ಷ್ಮೀನಾರಾಯಣ ಪಂಡೆ ಮೊದಲಾದವರು ಶುಭಕೋರಿದ ಬಳಿಕ ಮುಖ್ಯ ಉಪಾಧ್ಯಾಯ ಅಚ್ಯುತಕಾಮತರು ವಂದನೆಗಳನ್ನರ್ಪಿಸಿದರು.

ಶಂಕರ್ನಾರಾಯಣ—ಇಲ್ಲಿಯ ಸಹಕಾರಿ ಸಂಘದ ಮಹಾಸಭೆಯು ಸಂಘದ ಅಧ್ಯಕ್ಷ ಶ್ರೀ ಕೆ. ಗಣಪಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಸಂಘದ ಕಟ್ಟಡದಲ್ಲಿ ಇದೇ ತಾ 8ರಲ್ಲು ಜರಗಿತು. ಸಾಮಾನ್ಯ ವಿಷಯಗಳ ತೀರ್ಮಾನವಾದ ಮೇಲೆ ಮುಂದಿನ ವರ್ಷಕ್ಕೆ ಶ್ರೀಗಳಾದ ಕೆ. ಗಣಪಯ್ಯ ಸೆಟ್ಟಿ, ಕೆ. ಚಿಟ್ಟು ಸೆಟ್ಟಿ, ಲಿಂಗಪ್ಪ ಸೆಟ್ಟಿ, ಚಿಟ್ಟಣ್ಣ ಸೆಟ್ಟಿ, ಕೆ. ರಾಮಕೃಷ್ಣ ಭಟ್, ಬಿ. ದೇವರಾವ್, ಸಂತಾನ ಮಾರ್ಟೀಸ್, ಇವರನ್ನು ಸರ್ವಾನುಮತದಿಂದ ಪಂಚಾಯತರನ್ನಾಗಿ ಆರಿಸಲಾಯಿತು. ಅಲ್ಲದೆ ಸೊಸೈಟಿಯ ಮೆಂಬರರಾಗಿದ್ದು ಅದರ ಮೇಲೆ ಅಪಪ್ರಚಾರಗಳನ್ನು ಮಾಡಿದರೆಂಬ ಕಾರಣದಿಂದ ಶ್ರೀ ಕೆ. ವಿ. ನರಸಿಂಹಾಚಾರ್ಯರನ್ನು ಸೊಸೈಟಿಯ ಸದಸ್ಯತ್ವದಿಂದ ತಳ್ಳಿ ಹಾಕಬೇಕೆಂಬ ವಿಶೇಷ ನಿರ್ಣಯವನ್ನು ಕೂಡಾ ಮಾಡಲಾಯಿತೆಂದು ಅಧ್ಯಕ್ಷರು ತಿಳಿಸುತ್ತಾರೆ. ಸಭೆಯಲ್ಲಿ ತುಂಬಾ ಮೆಂಬರರಲ್ಲದೆ ರಿಜಿಸ್ಟ್ರಾರ್ ಶ್ರೀ ಕೆ. ಕೇಶವ ಕಿಣಿ ಮೊದಲಾದ ಇಲಾಖಾ ಅಧಿಕಾರಿಗಳೂ ಹಾಜರಿದ್ದರು.

ಸೂಡ (ಕಾಪಿಕಾಡು)—ಶ್ರೀ ಎಸ್. ಪಿ. ದೇವು ಸೆಟ್ಟರು ಸೂಡದಲ್ಲಿ ತೆರೆಯಲ್ಪಡುವ ಶ್ರೀ ಸುಬ್ರಹ್ಮಣ್ಯ ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯ ಅಧ್ಯಾಪಕರಾಗಿ ವರ್ಗವಾಗಿ ಹೋಗುವ ಸಂದರ್ಭದಲ್ಲಿ ಅವರನ್ನು ಬೀಳ್ಕೊಳ್ಳುವ ಸಮಾರಂಭವು 12-10-53ರಂದು ಸ್ಯೆಂಟ್ ಎಂಟೊನಿಸ್ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪಿ. ರಾಮದಾಸ ನಾಯಕ್, ಜೊನ್ಸ್ ವಾಂತಿ, ಎಚ್. ಸುಂದರ, ತ್ಯಾಂಪಣ್ಣ ಸೆಟ್ಟಿ, ಜಯರಾಮ ಶೆಟ್ಟಿ, ಪೇಜಪ್ಪ ಶೆಟ್ಟಿ, ಕೆ. ಆರ್. ಶೆಣೈ ಮೊದಲಾದವರಿಂದ ಸಂದರ್ಭೋಚಿತ ಭಾಷಣಗಳಾದ ಬಳಿಕ ಶ್ರೀ ದೇವು ಸೆಟ್ಟರು ಉತ್ತರವಿತ್ತರು. ಶ್ರೀ ಶೆಟ್ಟರು ಕಾರ್ಯಪಟುತ್ವ, ನಿಸ್ವಾರ್ಥ ಸೇವೆಯೇ ಈ ಶಾಲೆಯ ಸರ್ವತೋಮುಖ ಏಳಿಗೆಗೆ ಕಾರಣವೆಂದು ಸಮರ್ಥಿಸಿ, ಅವರ ಶ್ರೇಯಸ್ಸನ್ನು ಅಧ್ಯಕ್ಷರು ಹಾರೈಸಿದಬಳಿಕ ಧನ್ಯವಾದ ಸಮರ್ಪಣೆ, ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ, ಅತಿಥಿಗಳಿಗೆ ಲಘು ಉಪಹಾರಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ರೇಡಿಯೋ ಕಾರ್ಯಕ್ರಮ— ತಾ 16ನೇ ರಾತ್ರಿ 9 15ರಿಂದ 10 ಗಂಟೆಯ ತನಕ ದಸರಾ ವಿಶೇಷ ಕಾರ್ಯಕ್ರಮವಾಗಿ ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಜರಗಲಿರುವ ಕವಿ ಸಮ್ಮೇಳನದಲ್ಲಿ ಶ್ರೀ ಕಯ್ಯಾರ ಕಿಂಞಣ್ಣ ರೈಗಳು ಭಾಗವಹಿಸಲಿರುವರೆಂದೂ ಆ ಸಮಯದಲ್ಲಿ ಅವರು ತಮ್ಮ "ನಾಡಹಬ್ಬದ ಹಾಡು" ಎಂಬ ಕವನವನ್ನು ಬ್ರಾಡ್ ಕಾಸ್ಟ್ ಮಾಡಲಿರುವರೆಂದೂ ತಿಳಿದುಬರುತ್ತದೆ.

(೫ನೇ ಪುಟದಿಂದ)

ನೌಕಾಪಡೆಯ ಸಾಹಸಗಳೇ ನಿದರ್ಶನ. ನೌಕಾ ಪಡೆಯ ಬಲವನ್ನು ಭೂಜಲ ವಿಮಾನ ದಳವೊಂದರ ಸೇರ್ಪಡೆಯಿಂದ ಹಾಗೂ ಮೂರು ಹೊಸ ವಿನಾಶಿಕೆಗಳಿಂದ ಈ ವರ್ಷ ಮರಳಿ ಬಲಗೊಳಿಸಲಾಗಿದೆ. ಡಫರಿನ್ ಎಂಬ ಯುದ್ಧ ನೌಕೆಯಲ್ಲಿ ಭಾರತೀಯ ನೌಕಾ ಯೋಧರಿಗೆ ಶಿಕ್ಷಣವನ್ನು ನೀಡುವ ವ್ಯವಸ್ಥೆ ಇದೆ. ಹೀಗೆ ಸುಸಂಬದ್ಧವಾಗಿ ವಿಸ್ತಾರ ಹೊಂದುವ ನೌಕಾ ಬಲವನ್ನು ಕಂಡ ಸಂಸತ್ ಸದಸ್ಯರು ತೃಪ್ತಿ ವ್ಯಕ್ತಗೊಳಿಸಿದುದೂ ರಾಷ್ಟ್ರಾಧ್ಯಕ್ಷರು ಪ್ರೀತಿ ಪುರಸ್ಸರವಾಗಿ ನೌಕಾ ಬಲದ ಕೂಚನ್ನು ಅವಲೋಕಿಸಿರುವುದೂ ನೌಕಾ ಯೋಧರಿಗೆ ಸ್ಫೂರ್ತಿಯನ್ನೂ ಉತ್ಸಾಹವನ್ನೂ ಕೊಡುವಂತಿದೆ. ೨೭ ಸುಸಜ್ಜಿತ ಯುದ್ಧನೌಕೆಗಳ ನಡುವೆ ರಾಷ್ಟ್ರಾಧ್ಯಕ್ಷರ ವಿಶೇಷ ನೌಕೆಯು ಹಾಯುತಿದ್ದಾಗ ಅವು ಗೌರವಾರ್ಥ ತೋಪುಗಳು ಹಾರಿದುವು. ರಾಷ್ಟ್ರಗೀತೆ ಹಾಡಲ್ಪಟ್ಟಿತು; ನೌಕಾಯೋಧರು ವಂದನೆಯರ್ಪಿಸಲು, ರಾಷ್ಟ್ರಾಧ್ಯಕ್ಷರು ಎದ್ದು ನಿಂತು ಅವನ್ನು ಸ್ವೀಕರಿಸಿದರು. ಐತಿಹಾಸಿಕ ಮಹತ್ವದಿಂದ ಕೂಡಿದ ಈ ಮಹಾಕೂಚನ್ನು ನಿರೀಕ್ಷಿಸಲು ೧೫ ಸಾವಿರ ಜನರು ಮುಂಬಯಿಯ ಮಹಾದ್ವಾರದಲ್ಲಿ ನೆರೆದಿದ್ದರು. ಅವರ ಕಣ್ಣುಗಳಿಗೆ ಇದು ಅಪೂರ್ವ ಆನಂದವನ್ನುಂಟು ಮಾಡಬಲ್ಲ ನೋಟವಾಗಿದ್ದಿತು.

ನೇಶನಲ್ ರೇಡಿಯೋ ಎಂಡ್ ಇಲೆಕ್ಟ್ರಿಕ್

(ಮರ್ಫಿ ರೇಡಿಯೋದ ಅಧಿಕೃತ ಮಾರಾಟಗಾರರು)

ಮುನಿಸಿಪಲ್ ಬಸ್‌ಸ್ಟಾಂಡಿನ ಎದುರು, ಉಡುಪಿ,

❖ ಎಲ್ಲಾ ತರದ ಹೊಸ ಮತ್ತು ಉಪಯೋಗಿಸಿದ ರೇಡಿಯೊಗಳನ್ನು ಒದಗಿಸಿಕೊಡಲಾಗುವುದು. ❖ ಸರ್ವವಿಧದ ಇಲೆಕ್ಟ್ರಿಕ್ ಸಾಮಾನುಗಳು ಮಾರಾಟಕ್ಕೆ ಸದಾ ಸಿದ್ಧವಿರುವುವು. ❖ ರೇಡಿಯೋ ರಿಪೇರಿ, ಮನೆ ಮತ್ತು ಕೈಗಾರಿಕೆಗಳಿಗೆ ಇಲೆಕ್ಟ್ರಿಕ್ ವಯರಿಂಗ್ ಮಾಡುವುದು ನಮ್ಮ ವೈಶಿಷ್ಟ್ಯ. ❖ ಮದುವೆ, ಸಭೆ ಮೊದಲಾದ ಸಮಾರಂಭಗಳಿಗೆ ಅತಿ ಕಡಿಮೆ ಬಾಡಿಗೆಯಲ್ಲಿ ತಾತ್ಕಾಲಿಕ ವಿದ್ಯುದ್ದೀಪದ ಮತ್ತು ಲೌಡ್‌ಸ್ಪೀಕರಿನ ವ್ಯವಸ್ಥೆ ಮಾಡಿಕೊಡಲಾಗುವುದು. ❖ ಒಮ್ಮೆ ನಮ್ಮ ಶೋರೂಮನ್ನು ಸಂದರ್ಶಿಸಿ

ಕೆ. ಸಿ. ಹೆಗ್ಡೆ, ಪ್ರಾಲಕ.

ಮನಸ್ಸಿಗೆ ಶಾಂತಿ ಬೇಕೇ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯನ್ನು ಓದಿರಿ.

* "ಬೇರೆ ಶಾಸ್ತ್ರಗಳನ್ನೋದದಿದ್ದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" —ವರಾಹಪುರಾಣ.

* "ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು." —ಲೋಕಮಾನ್ಯ ತಿಲಕ.

* "ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." —ಮಹಾತ್ಮಾ ಗಾಂಧಿ.

* "ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು." —ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಗೀತೆಯ ಕೈಗನ್ನಡಿ ಬೆಲೆ: ೦-೧೨-೦

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮ. ಆ. ರೂ. 1-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ರಾಷ್ಟ್ರಗೀತೆ ಸ್ಪರ್ಧೆ.

ರಾಷ್ಟ್ರಗೀತೆಗಳನ್ನು ಯೋಗ್ಯ ರೀತಿಯಲ್ಲಿ ಹಾಡುವವರನ್ನು ಸನ್ಮಾನಿಸಲು, ಈ ಸ್ಪರ್ಧೆಯನ್ನು 'ಗ್ರಾಮಸೇವಾ ಪರಿಷ್ಠಾನ'ದವರು ಉಡುಪಿ 'ಯೂತ್ ಕಾಂಗ್ರೆಸ್' ಪರಿಯಲ್ಲಿ ಏರ್ಪಡಿಸಿರುವರು. ಸ್ಪರ್ಧೆಯು 21-10-53ರಂದು 'ಮುಕುಂದ ನಿವಾಸ'ದಲ್ಲಿ ನೆರವೇರಲಿರುವುದು. ಸ್ಪರ್ಧಿಸಲಿಚ್ಛಿಸುವ ಉಮೇದ್ವಾರರು ತಾರೀಕು 19-10-53 ರೊಳಗೆ ಒಂದು ರೂಪಾಯಿ ಪ್ರವೇಶ ಹಾಸಲಿನೊಂದಿಗೆ ತಮ್ಮ ಹೆಸರನ್ನು ದಾಖಲುಮಾಡಿಕೊಳ್ಳಬೇಕು.

ಬಹುಮಾನದ ವಿವರ ಮತ್ತು ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ.

ಕಾರ್ಯದರ್ಶಿ,

ಯೂತ್ ಕಾಂಗ್ರೆಸ್, ಉಡುಪಿ.

ತಾ. 12-10-1953.

ಪ್ರತ್ಯಪ್ರತ್ಯೇಕ ಕಾರ್ಡು ಬರೆದೂ ಸಕಾಲದಲ್ಲಿ ಚಂದಾಹಣ ಕಳುಹಿಸಿ ಕೊಡದವರು ನಾವು ನಿರುಪಾಯರಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ವಿನಂತಿ.

ಮೆನೇಜರ್, **ನವಯುಗ**

ಮಂಗಳೂರು

ನಗರ ಸಭೆಯು— ತಾ 10ರಲ್ಲಿ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿದಾಗ ಪ್ರಧಮತ ಶ್ರೀಗಳಾದ ಪ್ರಭಾಕರ ಪೈ, ಪರಿಕ್ಷಂದ್ರಾಚಾರ್, ಡಾ। ಉಮಾನಾಥ ಸುವರ್ಣ ಮತ್ತು ಕೊರಗಪ್ಪ ರೈಗಳು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು. ಪಂಪನ ಕಟ್ಟೆಯಿಂದ, ಟೌನ್ ಪೋಲೀಸು ಠಾಣೆ, ಗೂಡ್ಸ್ ಶೆಡ್ಡ್ ರಸ್ತೆ, ಫೈಲ್ವೆ ಲೆವೆಲ್ ಕ್ರಾಸಿಂಗ್, ರುಜಾರಿಯೋ ಚರ್ಚ್, ಮಂಗಳಾದೇವಿ ರಸ್ತೆ, ಎಮ್ಮೆಕೆರೆ ರಸ್ತೆ, ಲೀವೆಲ್‌ಗಾಗಿ ಜಪ್ಪು ಮಾರ್ಕೆಟಿಗೆ ಹೊಸ ಬಸ್ ಸರ್ವಿಸು ಮಾಡಬಹುದೆಂಬ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರರ ಸೂಚನೆಗೆ ಒಪ್ಪಿಗೆ ಕೊಡಲಾಯಿತು. ವೆಬ್ಸ್ಟರ್ ಮಾರ್ಕೆಟಿನ ಟಾಕಿ ದುರಸ್ತಿ ಮೊದಲಾದುವುಗಳಿಗೆ ವೆಚ್ಚ ಮಂಜೂರು ಮಾಡಲಾಯಿತು. ಹಳೇ ಪೋಲೀಸು ಮೈದಾನನ್ನು ನಗರ ಸಭೆಯ ಆಫೀಸು ಕಟ್ಟಡ ಮತ್ತು ಟೌನ್‌ಹಾಲ್ ಕಟ್ಟಿಸುವ ಬಗ್ಗೆ, ಸರಾಧಾರಿ ಮಾಡಲು ಜಿಲ್ಲಾ ಕಲೆಕ್ಟರರ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ಮುಖಾಂತರ ಸರಕಾರಕ್ಕೆ ಬರಕೊಳ್ಳಬೇಕೆಂಬ ಸರಕಾರಿ ಹುಕುಮನ್ನು ಮನ್ನಿಸಿ ಆ ರೀತಿ ಸರಾಧಾರಿಗೆ ಅರ್ಜಿಯನ್ನು ಬರಕೊಳ್ಳಲು ನಿರ್ಣಯವಾಯಿತು. ಯುವಕ ಸದಸ್ಯರು ತಮ್ಮೊಳಗೆ ಚರ್ಚೆಮಾಡದೆ ಸಭೆಯ ಚರ್ಚೆಯ ಮೇಲೆ ಗಮನವೀಯಬೇಕೆಂದು ಯುವಕ ಸದಸ್ಯರನ್ನುದ್ದೇಶಿಸಿ ಹೇಳಿದರು.

ಫೆಲಿಕ್ಸ್ ಅಲ್ಬುಕರ್ಕರರ ನಿಧನ.— ಮಂಗಳೂರಿನ ಹೆಸರಾಂತ ಹಂಚು ಕಾರ್ಖಾನೆಯ ಮಾಲಿಕರೂ, ಪ್ರಖ್ಯಾತ ಉದ್ದಿಮೆದಾರರೂ ಆದ ಫೆಲಿಕ್ಸ್ ಅಲ್ಬುಕರ್ಕರರು ತಮ್ಮ 70ನೇ ವರ್ಷದಲ್ಲಿ ನಿಧನಹೊಂದಿದುದು ವಿಷಾದಕರವಿದೆ. ಇತ್ತೀಚೆಗೆ ಶ್ರೀಯುತರ ಆರೋಗ್ಯ ಕೆಟ್ಟಿದ್ದು ಅವರು ಕಂಕನಾಡಿಯ ಫಾದರ್ ಮುಲ್ಲರರ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದರು. ತಾ 9ರಲ್ಲು ಅಪರಾಹ್ನ 1 ತಾಸಿಗೆ ಆಸ್ಪತ್ರೆಯಲ್ಲಿಯೇ ತೀರಿಕೊಂಡರು.

ಅಖಿಲಕರ್ನಾಟಕ ಮಹಿಳಾ ಪರಿಷತ್ತು— ಭಗಿನೀ ಸಮಾಜದ ಕಾರ್ಯಕಾರಿ ಸಮಿತಿಯ ಸಭೆಯು ಇದೇ ತಾ 7ರಲ್ಲಿ ಸೇರಿ ನವಂಬರ ತಿಂಗಳ ತಾ 28 ಮತ್ತು 29ರಲ್ಲು ಅಖಿಲ ಕರ್ನಾಟಕ ಮಹಿಳಾ ಪರಿಷತ್ತನ್ನು ಮಂಗಳೂರಲ್ಲಿ ಜರಗಿಸುವ ನಿರ್ಣಯವನ್ನು ಮಾಡಿತು. ಅಲ್ಲದೆ ಈ ಸಮಾಜದ ಅಧ್ಯಕ್ಷೆ ಶ್ರೀಮತಿ ರಾಜಲಕ್ಷ್ಮಿ ಆಚಾರ್ ಮತ್ತು ಸದಸ್ಯೆ ಶ್ರೀಮತಿ ವಾರಿಜಾಪಾಲ್ ಅವರ ನಿಧನದ ಬಗ್ಗೆ ಸಂತಾಪ ಸೂಚಿಸುವ ಗೊತ್ತುವಳಿಗಳನ್ನು ಅಂಗೀಕರಿಸಿತು.

ಡಿ। ಕಿಲ್ಲೆಯವರ ಚಿತಾ ಭಸ್ಮ ವಿಸರ್ಜನೆ— ದಿವಂಗತ ಎನ್. ಎಸ್. ಕಿಲ್ಲೆಯವರ ಚಿತಾ ಭಸ್ಮವನ್ನು ಅವರ ಸಹೋದರ ಶ್ರೀ ಕೆ. ಎನ್. ಕಿಲ್ಲೆಯವರು ಮಂಗಳೂರಿಂದ ಬೊಂಬಾಯಿಗೆ ಒಯ್ದಿದ್ದು ಇಲ್ಲಿಂದ ಅವರ ಭಾವ ಶ್ರೀ ಕಣ್ಣಂಗಾರು ಹೊಸಮನೆ ರಘುರಾಮ ಸಟ್ಟರು ಮತ್ತಿತರ ಬಂಧುಗಳು ನಾಸಿಕಕ್ಕೆ ಹೋಗಿ ಮಹಾತ್ಮಾಜಿಯವರ ಚಿತಾಭಸ್ಮ ವಿಸರ್ಜಿಸಿದ ಸ್ಥಳದಲ್ಲಿ ಇದೇ ತಾ 2ರಲ್ಲು ಗಾಂಧಿ ಜಯಂತಿ ದಿನ, ಗೋದಾನ ಅನ್ನದಾನ ಇತ್ಯಾದಿ ವಿಧಿ ಪೂರ್ವಕವಾಗಿ ವಿಸರ್ಜನೆ ಮಾಡಿದರು. ಡಿ। ಕಿಲ್ಲೆಯವರ ಜೀವನ ಚರಿತ್ರೆಯನ್ನು "ಏಕಾಂತವಾಸಿ" ಯವರೊಬ್ಬರು ಪ್ರಕಟಿಸಲಿರುವರೆಂದು ತಿಳಿದುಬರುತ್ತದೆ.

ಸಂತಾಪ ಸೂಚಕ ನಿರ್ಣಯ— ಮಹಿಳಾ ಸಭೆಯಲ್ಲಿ ಇದೇ ತಾ 3ರಲ್ಲು ಅಧ್ಯಕ್ಷೆಯಾಗಿದ್ದ ಶ್ರೀಮತಿ ರಾಜಲಕ್ಷ್ಮಿ ಆಚಾರ್ ಅವರ ನಿಧನದ ಕುರಿತು ಸಂತಾಪ ಸೂಚಿಸುವ ನಿರ್ಣಯವಾಯಿತು.

ಜಿಲ್ಲಾ ಬೋರ್ಡಿನ ಕಾರ್ಯಕಲಾಪಗಳು— ದ. ಕ. ಜಿಲ್ಲಾಬೋರ್ಡಿನ ವಿಶೇಷ ಅಧಿಕಾರಿಗಳಾದ ಜಿಲ್ಲಾ ಕಲೆಕ್ಟರರು ಇದೇ ತಾ 3ರಲ್ಲು ಸೇರಿದ ಸಭೆಯಲ್ಲಿ ಮೊದಲು ಶಾಲೆಗಳ ದುರಸ್ತಿ ಮೊದಲಾದವುಗಳಿಗೆ ಹಣ ಮಂಜೂರು ಮಾಡಿದರು. ಉಪ್ಪಿನಂಗಡಿ ಕಡೆಗೆ ಔಷಧ ತರಿಸಲು ರೂ 150, ಕಾಸರಗೋಡು ತಾ। ಎ। ಶಾಲೆಯ ಹಿಂಬದಿಯ ಸ್ಥಳವನ್ನು ಸಮತಟ್ಟು ಗೊಳಿಸಲು ರೂ 1000, ಸೀತಾನದಿ–ಬ್ರಹ್ಮಾವರ ರಸ್ತೆಯ ರಕ್ಷಣೆಗಾಗಿ ರೂ. 9620 ಮಂಜೂರಾಯಿತು. ಮರ ಅಪದ್ನಾರು ಶಾಲೆಗೆ ಒಬ್ಬ ಉಪಾಧ್ಯಾಯರನ್ನು ನೇಮಿಸಲಾಯಿತು. ಶ್ರೀ ಕೆ. ವೆಂಕಟರಮಣ ಗೌಡರು ತಾ 4–5–53ರಲ್ಲು ಸಾರ್ವಜನಿಕ ಖಾತೆಗಳ ಮಂತ್ರಿಗಳಿಗೆ ಬರಕೊಂಡ ಮನವಿಯಲ್ಲಿ ಸೂಚಿಸಿದ ರಸ್ತೆಗಳ ಮತ್ತು ಸಂಕಗಳ ಕೆಲಸಗಳನ್ನು ಸರಕಾರವು ಕೇಂದ್ರ ಮಾರ್ಗಗಳ ನಿಧಿಯಿಂದ ಮಾಡಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು. ಬಜಪ್ಪಾರು ಹಾ। ಎ। ಶಾಲಾ ಕಟ್ಟಡಕ್ಕೆ ರೂ12500 ಮಂಜೂರು ಮಾಡಲಾಯಿತು. ಲೈಸನ್ಸುಗಳಿಗೆ ಸಂಬಂಧ ಪಟ್ಟ ಕೆಲವು ನಿರ್ಣಯಗಳೂ ಕೆಲವು ಬಿಲ್ಲುಗಳ ಮಂಜೂರಾತಿಯೂ ಆಯಿತು.

ಕಮ್ಯೂನಿಸ್ಟ ಮುಖಂಡರೂ— ಪಾರ್ಲಿಮೆಂಟಿನಲ್ಲಿ ಕಮ್ಯೂನಿಸ್ಟ ಪಕ್ಷದ ಧುರೀಣರೂ ಆದ ಶ್ರೀ ಎ. ಕೆ. ಗೋಪಾಲನ್, ಅವರು ತಾ 9ರಲ್ಲು ಬೊಂಬಾಯಿಯಿಂದ ವಿಮಾನ ಮೂಲಕ ಮಂಗಳೂರಿಗೆ ಆಗಮಿಸಿ, ಸಂಜೆ ಕೇಂದ್ರ ಮೈದಾನದಲ್ಲಿ ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ 'ಭಾರತದ ಇಂದಿನ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ತಾವು ಇತ್ತೀಚೆಗೆ ಸಂದರ್ಶಿಸಿದ ರಶ್ಯ ಹಾಗೂ ಚೀನಗಳ ಪ್ರಗತಿಯನ್ನು ವಿಮರ್ಶಿಸಿ ನಮ್ಮ ಪಂಚವಾರ್ಷಿಕ ಯೋಜನೆಯಿಂದ ನಿರುದ್ಯೋಗ ನಿವಾರಣೆ ಯಾಗುವಂತಿಲ್ಲ' ಎಂದರು. ಆಂಧ್ರ ಮಂತ್ರಿ ಮಂಡಲದ ಕುರಿತು ಮಾತನಾಡುತ್ತಾ ಇದು ಬಹಳ ದಿನಗಳವರೆಗೆ ಉಳಿಯಲಾರದೆಂದರು. ಆರಂಭದಲ್ಲಿ ಕಮ್ಯೂನಿಸ್ಟ ಪಕ್ಷದ ಆಶ್ರಯದಲ್ಲಿ ಏರ್ಪಡಿಸಲಾದ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ "ಹೈದರಾಬಾದನ್ನು ಒಡೆಯುದೆ ಸಂಯುಕ್ತ ಕರ್ನಾಟಕ ವಿಶಾಲ ಆಂಧ್ರ ಹಾಗೂ ಅಖಂಡ ಮಹಾರಾಷ್ಟ್ರಗಳು ಪೂರ್ತಿಯಾಗುವಂತಿಲ್ಲವೆಂದೂ ನಿಜಲಿಂಗಪ್ಪ ಮತ್ತಿತರ ಕಾಂಗ್ರೆಸ್ ಮುಖಂಡರು ಹೈದರಾಬಾದಿನ ವಿಭಜನೆಗೆ ವಿರೋಧವಾಗಿದ್ದರೆಂದೂ ಇದರಿಂದ, ಭಾಷಾಪ್ರಾಂತ ನಿರ್ಮಾಣಕ್ಕೆ ಸರಕಾರ ಸಿದ್ಧವಿಲ್ಲವೆಂದೂ ಹೇಳಿದರು.

ಸ್ಕೌಟು ಸಪ್ತಾಹ— ಮಂಗಳೂರಿನ ಭಾರತ ಸ್ಕೌಟುಗಳ ಸಪ್ತಾಹ ಕಾರ್ಯಕ್ರಮವು ಡಿ। ಕಲೆಕ್ಟರ್ ಶ್ರೀ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಇದೇ ತಾ 1ರಲ್ಲು ಧ್ವಜವಂದನೆ ಮತ್ತು ಪ್ರಮಾಣ ಸ್ವೀಕಾರ ಕಾರ್ಯಕ್ರಮಗಳಿಂದ ಪ್ರಾರಂಭವಾಯಿತು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸ್ಕೌಟು ತತ್ವದ ಮತ್ತು ಬೆಸೆಂಟ್ ಮಾತೆಯ ಕುರಿತು ಭಾಷಣಗೈದರು. ತಾ. 6ರಲ್ಲು ಗಣಪತಿ ಹೈಸ್ಕೂಲಿನ ವಠಾರದಲ್ಲಿ ಶ್ರೀ ಎಲ್. ಸಿ. ಪಾಯಸರ ನೇತೃತ್ವದಲ್ಲಿ ಶಿಬಿರಾಗ್ನಿ ಜರಗಿತು. ಶಿಬಿರಾಗ್ನಿಯ ಉದ್ಘಾಟನೆಯನ್ನು ಶ್ರೀ ಜಿ. ಸೋಮಶೇಖರ ರಾಯರು ನೆರವೇರಿಸಿದರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರೀ ಸಮಿತಿ ಸಭೆಯು— ಇದೇ ತಾ. 11ರಲ್ಲು, ಜರಗಿ, ಧನಿಗಳಿಂದ ಬರ ರೈತರಿಗುಂಟಾಗುವ ಸಂಕಷ್ಟಗಳನ್ನು ಕಾನೂನಿನ ಸಹಾಯವಿತ್ತು ನಿವಾರಿಸಲು ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿಯೂ ಧರ್ಮಾರ್ಥ "ಡಿಫೆನ್ಸ್ ಕಮಿಟಿ" ಗಳನ್ನು ಸ್ಥಾಪಿಸಬೇಕೆಂದೂ ಅಂತಹ ಕಮಿಟಿಗಳನ್ನು ಸ್ಥಾಪಿಸಿ ಜಿಲ್ಲಾ ಕಮಿಟಿಗೆ ಸದಸ್ಯರ ಹೆಸರುಗಳನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಒಪ್ಪಿಸುವರೆ ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಮತ್ತು ಕೆ. ಎಸ್. ಹೆಗ್ಡೆ, ಎಮ್. ಪಿ. ಅವರನ್ನು ವಿನಂತಿಸಬೇಕೆಂದೂ ನಿರ್ಣಯಿಸಲಾಯಿತು.

ಸಂಗೀತ ಕಚೇರಿ— ಸುಪ್ರಸಿದ್ಧ ಹಿಂದುಸ್ತಾನೀ ಗಾಯಕಿ ಶ್ರೀಮತಿ ಹೀರಾಬಾಯಿ ಬರೋಡಕರ, ಅವರ ಸುಶ್ರಾವ್ಯ ಗಾಯನ ಕಚೇರಿಯೊಂದು ಬಲ್ಮಠ ಪಾನಾ ಪೊಸ್ಟ್ಯ ಭವನದಲ್ಲಿ ಇದೇ ತಾ 11ರಲ್ಲು ರಾತ್ರಿ ಜರಗಿತು. ಪಕ್ಕವಾದ್ಯಗಾರರಾಗಿ ಶ್ರೀಗಳಾದ ಬಾಬುರಾವ್ ಕುಮಟೇಕರ್, ಕೆ. ಉಸ್ತಾದ್ ಶಮ್‌ಸುದ್ದೀನ್ ಮತ್ತು ರಾಜಾ ಭಾವು ಸೋನ್ಯಯವರು ಇದ್ದರು.

ಕಿಲ್ಲೆ ಸ್ಮಾರಕ ಗ್ರಂಥ

ಅಪ್ರತಿಮ ಭಾಷಣಗಾರರಾಗಿ, ಭಾಷಾಂತರಕಾರರಾಗಿ, ಅಸಾಧಾರಣ ಯಕ್ಷಗಾನ ಕಲೋಪಾಸಕರಾಗಿ, ಅಗ್ರಗಣ್ಯ ದೇಶಸೇವಕರಾಗಿ, ದೀನ ದಲಿತ ಹರಿಜನ ಸೇವಕರಾಗಿ, ಉತ್ತಮ ಸಾಮಾಜಿಕ ಕೆಲಸಗಾರರಾಗಿ ವಿವಿಧ ಕ್ಷೇತ್ರಗಳಲ್ಲಿ ಹಲವು ವಿಧದಲ್ಲಿ ಜನತೆಯ ಮೇಲೆ ತನ್ನ ವ್ಯಕ್ತಿತ್ವದ ಅಚ್ಚೊತ್ತಿ ನಡುವರೆಯದಲ್ಲೇ ನ್ಯತ್ಯವಶಗತರಾದ ಶ್ರೀ ಎನ್. ಎಸ್. ಕಿಲ್ಲೆಯವರ ಸ್ಮಾರಕವಾಗಿ ದ. ಕ. ಜಿಲ್ಲಾ ಕಿಲ್ಲೆ ಸ್ಮಾರಕ ಸಮಿತಿ, ಮಂಗಳೂರು ಇವರಿಂದ ಸಚಿತ್ರವಾಗಿ ಪ್ರಕಟಿಸಲ್ಪಟ್ಟ

ಕಿಲ್ಲೆ ಸ್ಮಾರಕ ಗ್ರಂಥವನ್ನು

ಕೊಂಡುಕೊಂಡು ಸ್ಮಾರಕ ಕಾರ್ಯಗಳಿಗೆ ನೆರವಾಗಿರಿ.

ಸಂಪಾದಕರು: ಶ್ರೀಗಳಾದ ಎಚ್. ಆರ್. ಮಲ್ಯ ಮತ್ತು ಕೆ. ಕೆ. ಶೆಟ್ಟಿ, ಮಂಗಳೂರು.

ದೊಡ್ಡ ಆಕಾರದ 160 ಪುಟಗಳು. ಬೆಲೆ ರೂ. 1 0-0 ಮಾತ್ರ

ಮುಖಂಡರನೇಕರ ಸಂದೇಶಗಳಿವೆ.

ಪ್ರಸಿದ್ಧರನೇಕರ ವಿವಿಧ ಲೇಖನಗಳಿವೆ

ಕಿಲ್ಲೆಯವರ ನಾನಾ ಕಾರ್ಯಕ್ಷೇತ್ರದ ವಿವರಣೆಗಳಿವೆ.

ಪ್ರತಿಗಳು ಸಿಗುವ ಸ್ಥಳ

ನವಯುಗ ಪ್ರೆಸ್, ಉಡುಪಿ.

ರೂ. 1 1–0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟು ಮೂಲಕ ಕಳಿಸಲಾಗುವುದು.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 100ಕ್ಕೆ

ಪ್ರಚಲಿತ ಪ್ರೀಮಿಯಮ್ ಸ್ವೀಕಾರ.

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, **ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್**

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, **ದ. ಕ.**

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ, ಬೊಂಬಾಯಿ. ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಶ್ರೇಷ್ಠ ವರ್ಜೆ ಗಡಿಯಾರ

ಪ್ರತಿಯೊಂದು 5 ವರ್ಷ ಗ್ಯಾರಂಟಿ. ಪ್ರತಿ ಆರ್ಡರ್ ಜೊತೆಗೂ ಒಂದು ಫೌಂಟನ್ ಪೆನ್ನು ಒಂದು ಸಿಗರೇಟ್ ಲೈಟರ್ ಉಚಿತ!



(ನಂ. 132 ಸೈಜ್ 7 8 1")

ಜೂ. ರೋಲ್ಡ್‌ಗೋಲ್ಡ್ ರೂ. 30.

5 ಜೂ. ರೋಲ್ಡ್ ಗೋಲ್ಡ್ ರೂ. 40.



(ಹೆಂಗಸರಿಗೆ ಮತ್ತು ಗಂಡಸರಿಗೆ)

ನಂಬ್ರ 134 (ಸೈಜ್ 6 8 1")

ಸ್ಪೆಷಲ್ ಕ್ರೋಂ. ಕೇಸ್ ರೂ. 20

" " 5 ಜೂ. ರೋಲ್ಡ್‌ಗೋಲ್ಡ್ ರೂ. 28

5 ಜೂಯಲ್ಸ್ ರೋಲ್ಡ್‌ಗೋಲ್ಡ್ ರೂ. 35

ಅಲಾರಾಂ ಗಡಿಯಾರ

ಇಂಗ್ಲೀಷ್ ರೂ. 18

ಯು. ಎಸ್. ಎ. ರೂ. 19

ರೇಡಿಯಂ ಡೈಯಲ್ ರೂ. 2 ಪ್ರತ್ಯೇಕ

ಪೋಕೆಟ್ ವಾಚ್ ರೂ. 10 ಉತ್ತಮ ರೂ. 12

ಇಂಗ್ಲಿಷಿನಲ್ಲಿ ವ್ಯವಹರಿಸಿ. ಅಂಚೆವೆಚ್ಚ ಬೇರೆ ಎರಡು 3 ಗಡಿಯಾರದ ಆರ್ಡರಿಗೆ ಉಚಿತ.

Calcutta Watch Co · Sec 268

Post Box No. 12203, CALCUTTA-5

ದಯಮಾಡಿ ನಿಮ್ಮ ಚಂದಾಹಣ ಕಳುಹಿಸಿರಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O.S. 332/53

ಕೇಶವ ಗೌಡ —ವಾದಿ.

ಸಂಜೀವ ಕಾಮತ್ ಯಾನೆ ಸಂಜೀವರಾವ್,

ವಗೈರಾ ... —ಪ್ರತಿವಾದಿಗಳು.

2ನೇ ಪ್ರತಿವಾದಿ ನಾರಾಯಣ ಕಾಮತ್, ಕೊಗ್ಗ ಯಾನೆ ಜನಾರ್ಧನ ಕಾಮತರ ಮಗ, Paduvara Halli Door No. 2372 Vani Vilas, Mohalla, Mysore, ಇವರಿಗೆ

ವಾದಿ ನಿಮ್ಮ ಮೇಲೆ ಕೊಡಾ ಆದವಿನ ಅಸ್ಲು ಬಡ್ಡಿ ಬರವಾಡುವರೆ ಮಾಡಿದ ನೋಟೀಸಿನ ವ್ಯಾಜ್ಯವು ತಾ. 28—10—53 ಕ್ಕೆ ಇಟ್ಟಿರುವದ್ರಿಂದ ಆ ದಿವಸ ಬೆಳಿಗ್ಗೆ 11 ಗಂಟೆಗೆ ನೀವು ಸ್ವತಃ ಯಾ ಪ್ಲೀಡರ್ ದ್ವಾರ ಈ ಕೋರ್ಟು ಮುಂದೆ ಹಾಜ್ರಾಗಿ ಉತ್ತರಿಸದಿದ್ದರೆ ನಿಮ್ಮನ್ನು ಏಕಪಕ್ಷ ಮಾಡಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನ ಆಗುವುದು.

(By order of Court)

Sripati Rao. B.

Advocate for Plaintiff.

Puttur, 9—10—53

ಸ್ವೀಕಾರ-ವಿಮರ್ಶೆ

ಮಾನವ—

ಬರೆದವರು: ಬಿ. ಡಿ. ಗಣಪತಿ. ಪ್ರಕಾಶಕರು: ಕೊಡಗು ಕಂಪೆನಿ, ಮಡಿಕೇರಿ ಬೆಲೆ: ರೂ. ೧-೮-೦.

ಮನುಷ್ಯನು ಹುಟ್ಟಿಕೊಂಡು ಈ ಜಗತ್ತಿನಲ್ಲಿ ಬಾಳಲು ತೊಡಗಿ ಸಹಸ್ರಾರು ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಆತನು ಜಗತ್ತನ್ನು ತಿಳಿದು ಕೊಳ್ಳಲು ಪ್ರಯತ್ನಿಸುತ್ತಾ ಬಂದಿರುವನು. ಆದರೆ ಇದೇ ಪ್ರಮಾಣದಲ್ಲಿ ಆತನು ತನ್ನನ್ನು ತಿಳಿದುಕೊಳ್ಳಲು ಪ್ರಯತ್ನಿಸಿದಂತೆ ತೋರುವುದಿಲ್ಲ. "ತನ್ನ ಜ್ಞಾನ ದೀಪವನ್ನು ಆತನು ಬಾಹ್ಯ ವಸ್ತುಗಳ ಪರಿಶೀಲನೆಗಾಗಿ ಉಪಯೋಗಿಸಿರುವನೇ ವಿನಾ ತನ್ನ ಆತ್ಮ ನಿರೀಕ್ಷಣೆಗಾಗಿ ಆ ಬೆಳಕನ್ನು ತನ್ನ ಮೇಲೆ ಚೆಲ್ಲಿರುವುದು ಕಡಿಮೆ." ಮನುಷ್ಯನಿಗೆ ಜಗತ್ತಿನಲ್ಲಿ ತನ್ನ ಸ್ಥಾನ ಮಾನವೇನೆಂಬುದನ್ನೂ ಕರ್ತವ್ಯ ಮತ್ತು ಜವಾಬ್ದಾರಿಗಳೇನೆಂಬುದನ್ನೂ ಕುರಿತಾದ ಸ್ಪಷ್ಟವಾದ ಹಾಗೂ ಸಮಂಜಸವಾದ ಜ್ಞಾನ ಸಿದ್ಧಂತೆ ಭಾಸವಾಗುವುದಿಲ್ಲ. ಜೀವನ ವಿಕಾಸ ನಡೆದ ಈ ಸುದೀರ್ಘ ಅವಧಿಯಲ್ಲಿ ಮೂಲ ಭೂತವಾದ ಎರಡು ತತ್ವಗಳನ್ನು ಹೊಂದಿಕೊಂಡು ಮಾನವನು ಅವನ್ನು ಅನುಸರಿಸಿರುವುದು ಮಾತ್ರ ಗೋಚರಿಸುತ್ತದೆ. ಗ್ರೀಕ್ ವೇದದ ತತ್ವಜ್ಞಾನಿಗಳು ಅವಲಂಬಿಸಿದ ಬಾಹ್ಯ ಪರಿಶೋಧನಾ ತತ್ವ ಇಂದಿನ ವಿಜ್ಞಾನಕ್ಕೂ ಭೌತಿಕ ವಾದಕ್ಕೂ ಕಾರಣವಾದರೆ, ಭಾರತೀಯ ಸಂಸ್ಕೃತಿಯು ಅಂತರ್ಮುಖವಾಗಿ ಜಗತ್ತಿನ ಸಮಗ್ರಹಿತದ ದೃಷ್ಟಿಯಿಂದ ವ್ಯಕ್ತಿ ಹೇಗಿರಬೇಕೆಂಬುದನ್ನು ನಿರ್ದೇಶಿಸಿ ಆಧ್ಯಾತ್ಮಿಕ ಭಾವನೆಯನ್ನು ಪೋಷಿಸಿತು. ಆದರೆ ಭಾರತೀಯ ಸಂಸ್ಕೃತಿಯು ಬಂದು ಬಲಗುಂದುತ್ತಾ ಚೈತನ್ಯ ಹೀನವಾಗುತ್ತಾ ಬರುತ್ತಿರುವುದನ್ನು ಕಂಡರೆ, ಮಾನವನ ಭವ್ಯ ಭವಿಷ್ಯತ್ತಿನ ಬಗ್ಗೆ ಚಿಂತೆಯುಂಟಾಗುತ್ತದೆ. ಮನುಷ್ಯನಿಂದು ಮೊದಲಿನಂತೆ ಸಂಸ್ಕಾರ ಹೀನನಾಗಿಲ್ಲ—ಆದರೆ ಈಗ ಆತನು ಪಡೆದಿರುವ ಸಂಸ್ಕಾರ ಆತನ ಮನುಷ್ಯತ್ವಕ್ಕೆ ತಕ್ಕುದಾಗಿಯೂ ಇಲ್ಲ. "ಮಾನವನ ಇಂದಿನ ಲೋಪದೋಷಗಳಿಗೂ ನಡೆ ತಪ್ಪಿದ ವರ್ತನೆಗಳಿಗೂ ಅಸಂಗತ ನಡೆನುಡಿಗಳಿಗೂ ಆತನ ಕುಸಂಸ್ಕಾರ ಪಡೆದ ಮನಸ್ಸು ಕಾರಣವಾಗಿದೆ." ಯಾವುದೇ ತರದ ಸಂಸ್ಕಾರವನ್ನು ಹೊಂದಿರದ ಮರುಭೂಮಿ ಸದೃಶ ಮನಸ್ಸಿಗಿಂತ ಕೆಟ್ಟ ಸಂಸ್ಕಾರವನ್ನು ಪಡೆದ ಮನಸ್ಸು ಹಾನಿಕರವೂ ನಿಷೇಧಾತ್ಮಕವೂ ಆಗಿದೆ. ಈ ಕುಸಂಸ್ಕಾರದ ಪಾಶದಿಂದ ಮನುಷ್ಯನನ್ನು ಬಂಧಮುಕ್ತ ಮಾಡಲು ಉದ್ದೇಶಿಸಿ ಶ್ರೀ ಗಣಪತಿಯವರು ಈ ಪುಸ್ತಕವನ್ನು ಬರೆದಿರುವರು. "ಮಾನವನು ಜೀವನದ ಕಲೆಯನ್ನು ಅಭ್ಯಾಸಮಾಡಿ, ಮಾನಸಿಕ ಶಾಂತಿಯ ಯೋಗವನ್ನು ಕರಗತ ಮಾಡಿ, ಕರ್ಮ ಪಥದ ಕುಶಲತೆಯನ್ನು ಪಡೆದು ಮಾನವ ಜೀವನದ ಪರಿಪೂರ್ಣತೆಯನ್ನು ಸಾಧಿಸಬೇಕು." ಮತ್ತು "ಇಂಥ ಅತಿಮಾನವರ ರಚನೆಯ ಆವಶ್ಯಕತೆಯನ್ನು ತಿಳಿಸಿ ಅದಕ್ಕಾಗಿ ಇಂದಿನಿಂದಲೇ ಪ್ರಯತ್ನಿಸುವ ಮನೋಭಾವವನ್ನು ಹೆಚ್ಚಿಸಿ, ಬಾಹ್ಯ ಸುಖ ಸೌಖ್ಯಗಳ ಜೀವಾಳವು ಆಂತರಿಕ ಶಾಂತಿ, ನೆಮ್ಮದಿಗಳ ತಳಹದಿಯ ಮೇಲೆಯೇ ನಿಂತಿದೆಯೆಂದೂ ಆದುದರಿಂದ ತಲೆ ಬೆಳೆಸುವುದರೊಂದಿಗೆ ಹೃದಯ ವಿಕಾಸವೂ ಆಗಬೇಕೆಂದೂ" ತಿಳಿಸಲು ಈ ಪುಸ್ತಕ ಪ್ರಯತ್ನಿಸಿದೆ. ಗ್ರಂಥಕರ್ತರು ಮಾನವನ ವಿಸ್ತೃತ ಜ್ಞಾನದ ಆವಶ್ಯಕತೆಯನ್ನು ತಿಳಿಸಲು ಮೊದಲನೆಯ ಅಧ್ಯಾಯದಲ್ಲಿ ಪ್ರಯತ್ನಿಸಿ, ಪ್ರಪಂಚದಲ್ಲಿ ಜೀವೋತ್ಪತ್ತಿಯಾದ ಬಗೆ, ಮತ್ತು ಮನುಷ್ಯನು ಹುಟ್ಟಿ ಬೆಳೆದು ಬಂದ ರೀತಿಯನ್ನು ದ್ವಿತೀಯಾಧ್ಯಾಯದಲ್ಲಿ ವಿವರಿಸಿರುವರು. ಮನುಷ್ಯನು ದೇವರು ಸೃಷ್ಟಿಸಿದ ದೇವತೆಗಳಲ್ಲಿ ಒಬ್ಬನೆಂದೂ ಈ ಪ್ರಪಂಚದ ವಾತಾವರಣದಲ್ಲಿ ಸಿಲುಕಿ, ಆತನ ದೈವತ್ವ ನಶ್ಯವಾಯಿತೆಂದೂ ಕೆಲವರು ಮುನ್ನಿಡುವ ವಾದವು ಸಮರ್ಪಕವಲ್ಲವೆಂದೂ ಡಾರ್ವಿನ್ನನ ವಿಕಾಸ ಕ್ರಮದ ಸಿದ್ಧಾಂತವೇ ಸತ್ಯ ಹಾಗೂ ತರ್ಕಶುದ್ಧವಾದುದೆಂದೂ ಲೇಖಕರು ಇಲ್ಲಿ ಪ್ರತಿಪಾದಿಸಿರುವರು. ಮೂರನೆಯ ಅಧ್ಯಾಯ ಅಭಿವೃದ್ಧಿಯ ಪಥದಲ್ಲಿ ಹೆಜ್ಜೆ ಇಡುತ್ತಿರುವ ಮಾನವನನ್ನು ಕುರಿತಾಗಿದೆ—ಮಾನವನು ಸಂಘ ಜೀವಿಯಾಗಿ ಬದಲಾವಣೆ ಸಾಧಿಸಿದ ರೀತಿಯನ್ನು ಇಲ್ಲಿ ಹೇಳಿರುವರು. ಈ ಸಂಘ ಜೀವನದ ಪ್ರಾದುರ್ಭಾವವೇ ಮನುಷ್ಯನಲ್ಲಿ ನೈತಿಕ ತತ್ವಕ್ಕೆ ಪ್ರಾಧಾನ್ಯವನ್ನು ಕೊಟ್ಟಿತು. ಮಾನವ ಸಮಾಜವೂ ಲೋಕವೂ ಉಳಿಯಬೇಕಾದರೆ ಮಾನವ ಸಮಾಜದ ಹಿತ ದೃಷ್ಟಿಯಿಂದ ಮಾಡಿದ ಸಾರ್ವತ್ರಿಕ ನೀತಿ ತತ್ವಗಳನ್ನು ಅವಲಂಬಿಸದೆ ಸಾಧ್ಯವಿಲ್ಲ. "ಮಾನವನಲ್ಲಿ ಅಂತರಿಕವಾಗಿರುವ ಪಶುಬುದ್ಧಿ ಅಥವಾ ಸಂಕೀರ್ಣತೆಯನ್ನು ಯಾವ ಆರ್ಥಿಕ ಅಭಿವೃದ್ಧಿಯಾಗಲೀ ಯಾವ ಮನೋವಿಜ್ಞಾನವಾಗಲೀ ಸರಿಪಡಿಸಲಾರದು; ಮಾನವನು ನೀತಿ, ನಡತೆ, ಶೀಲಗಳ ಕಡೆಗೆ ಕಣ್ಣು ತಿರುಗಿಸಿ, ಯಾವುದು ತಪ್ಪು, ಯಾವುದು ಸರಿಯೆಂಬುದನ್ನು ವಿಮರ್ಶಿಸಿ ಅದರಂತೆ ವರ್ತಿಸುವ ಯತ್ನ ಮಾಡದಿದ್ದರೆ ಆಧುನಿಕ ನಾಗರಿಕತೆ ಹಾಗೂ ಸಮಾಜದ ವಿನಾಶವಾಗದಿರದು" ಎಂದ ಪ್ರೊ. ಜೋಡ್ ಅವರ ಅಭಿಪ್ರಾಯವನ್ನು ಲೇಖಕರು ಅನುಮೋದಿಸುತ್ತಾರೆ. ಈ ನೈತಿಕ ತತ್ವದ ಮೇಲೆ ಮಾನವ ವಿಜ್ಞಾನವು ಅತಿಮಾನವನ ರಚನೆಗೆ ಹೇಗೆ ನೆರವಾಗ ಬಲ್ಲುದೆಂಬುದರ ಸೂಕ್ಷ್ಮ ವಿಮರ್ಶೆ ಮಾನವ ವಿಜ್ಞಾನ, ನಾಗರಿಕ ಪ್ರಾಣಿ ಮಾನವ, ಅಖಂಡ ಮಾನವ ಸಮಾಜ, ಮಾನವನ ಪುನರುತ್ಥಾನ ಎಂಬ ಮುಂದಿನ ನಾಲ್ಕು ಪ್ರಕರಣಗಳಲ್ಲಿ ದೊರೆಯುತ್ತದೆ. "ನಾಗರಿಕ ಪ್ರಾಣಿ—ಮಾನವ" ಎಂಬ ಅಧ್ಯಾಯ ಇಡೀ ಪುಸ್ತಕದಲ್ಲಿ ಎದ್ದು ತೋರುವಂತಿದೆ. ಇಲ್ಲಿ ಲೇಖಕರು ಧರ್ಮ, ವಿಜ್ಞಾನ, ವಿದ್ಯೆ, ರಾಜಕೀಯ, ಸುಖ ಲಾಲಸೆ, ಇವೆಲ್ಲವನ್ನೂ ವ್ಯಕ್ತಿಯ ಉನ್ನತಿ ಮತ್ತು ಸಮಷ್ಟಿಯ ಹಿತ—ಇವೆರಡೂ ನೆರವೇರುವ ರೀತಿಯಲ್ಲಿ ಸಮನ್ವಯಗೊಳಿಸುವ ಬಗೆಯನ್ನು ವಿಚಾರ ಶುದ್ಧವಾದ ರೀತಿಯಲ್ಲಿ ಹೇಳಿರುವರು. 'ಅಮೃತಸ್ಯ ಪುತ್ರಾಃ' ಎಂಬ ಉಪನಿಷತ್ತಿನ ಸಂದೇಶ ಮನುಷ್ಯನ ಅಮೃತ ಶಕ್ತಿಯನ್ನು ನಿರ್ದೇಶಿಸುತ್ತದೆ. ಅದನ್ನು ಸದುಪಯೋಗ ಪಡಿಸಿಕೊಂಡು "ಪರಸ್ಪರ ಪ್ರೀತಿ, ಪ್ರಗತಿ, ಅಭಿವೃದ್ಧಿ ಐಕ್ಯತೆಯಿಂದ ಕೂಡಿದ ಏಕ ಹಾಗೂ ಅಖಂಡ ಜಗತ್ತಿನ ಸೃಷ್ಟಿಯ ಆಸೆ" ನೆರವೇರಬೇಕೆಂದೂ ಇದು "ವ್ಯಕ್ತಿಯ ಸುಧಾರಣೆಯಲ್ಲಿಯೇ ನಿಂತಿದೆ" ಎಂದೂ ಲೇಖಕರ ಪ್ರಾಮಾಣಿಕ ಅಭಿಪ್ರಾಯ. ಮಾನವನಲ್ಲೀಗ ಮೇಲೇರುವ ಮತ್ತು ಅಧಃಪಾತಕ್ಕಿಳಿಯುವ ಎರಡು ಶಕ್ತಿಗಳೂ ಸಮಾವೇಶವಾಗಿರುವುದು ಮಾನವನ ಘನತೆಯಾಗಿದ್ದಂತೆ ದುರಂತವೂ ಹೌದೆಂದು ಹೇಳಿದ ಡಾ. ರಾಧಾಕೃಷ್ಣನ್ನರ ಮಾತು ಇಲ್ಲಿ ಗಮನಾರ್ಹವಾಗಿರುತ್ತದೆ. ಪ್ರಾಣ ಬುದ್ಧಿಯ ಹಿಡಿತದಿಂದ ಇನ್ನೂ ಬಿಡುಗಡೆಯನ್ನು ಮನುಷ್ಯನು ಹೊಂದಿಲ್ಲವಾಗಿ—ಅವನ ಭವಿಷ್ಯತ್ತಿನ ಕುರಿತು ನಿಶ್ಚಿತ ಕಲ್ಪನೆ ಸಾಧ್ಯವಿಲ್ಲವೆನಿಸಿದೆ. ಆದರೂ ಮಾನವನು ಅತಿಮಾನವನಾಗುವನೆಂದು ಜಾರ್ಜ ಬರ್ನಾರ್ಡ ಶಾರೂ ಅರವಿಂದ ಯೋಗಿಗಳೂ ಅಭಿಪ್ರಾಯ ಪಡುತ್ತಿರುವುದು ನಿರಾಶೆಯ ನಡುವೆಯೂ ಭರವಸೆ ಕೊಡುವಂತಿದೆ. "ಇಂದಿನ ನಿರ್ಜೀವ ಭೌತಿಕ ನಾಗರಿಕತೆಯನ್ನೆ ಅನುಸರಿಸಿದರೆ ಆತನು ಯಂತ್ರ ಮಾನವನಾಗಿ ಹೃದಯ ರಹಿತ ಜಡ ವಸ್ತುವಿನಂತಾಗಬಹುದು. ಬದಲು ನೀತಿಪಥವನ್ನು ಅನುಸರಿಸಿದರೆ, ದೇವತಾ ಮನುಷ್ಯನಾಗಿ ಸಾರ್ವತ್ರಿಕ ಶಾಂತಿ ನೆಮ್ಮದಿಗಳಿಗೆ ಕಾರಣನಾಗಬಹುದು". ಆದುದರಿಂದ ಇಂದು ಮನುಷ್ಯನು ಕವಲೊಡೆದ ಮಾರ್ಗದ ಮುಂದಿರುವನು. ಆತನು ಅನುಸರಿಸುವ ಮಾರ್ಗ ಉದಾತ್ತವೂ ಸತ್ಯಪೂರ್ಣವೂ ಆಗಿದ್ದರೆ ಮಾತ್ರ ಅವನು ಮೇಲೇರುವನು. ಹೀಗೆ ಮೇಲೇರುವುದರಲ್ಲಿಯೇ ಆತ್ಮೋನ್ನತಿ ಇದೆಯೆಂದೂ ವಿಶ್ವ ಕೌಟುಂಬಿಕ ತತ್ವ ನೆಲೆಗೊಳ್ಳುವುದೆಂದೂ ಗಣಪತಿಯವರ ವಿಚಾರ. ಸ್ಫುಟವಾದ ಮಾತುಗಳಲ್ಲಿ ಈ ಸಂದೇಶವನ್ನು ಎಲ್ಲ ಸಹೋದರರಿಗೆ ನೀಡಬೇಕೆಂಬ ಈ ಉದ್ದೇಶದ ಯುವ ಲೇಖಕರು ತಮ್ಮ ಕೆಲಸದಲ್ಲಿ ಕೃತಕೃತ್ಯರಾಗಿದ್ದಾರೆ. ಆಂಗ್ಲ ಭಾಷೆಯಲ್ಲಿರುವ "ಮೇನ್ ದಿ ಅನ್‌ನೋನ್" ಎಂಬ ಗ್ರಂಥದ ನೆರಳು ಹಿಡಿದು ಈ ಪುಸ್ತಕ ಸಾಗಿದಂತೆ ಕಂಡು ಬಂದರೂ—ಕನ್ನಡದಲ್ಲಿ ಮಾನವ ವಿಜ್ಞಾನದ ಬಗ್ಗೆ ಇರುವ ಪುಸ್ತಕಗಳ ಕೊರತೆಯೊಂದನ್ನು ಗಣಪತಿಯವರು ದೂರ ಮಾಡಿರುವುದು ಸ್ತುತ್ಯ.

— ಕಾರ್ತಿಕೇಯ.

- - - -

ತಾರಾನಾಥ ಆಯುರ್ವೇದ ಮಂದಿರ

ವಿಳಾಸ ಬದಲಾವಣೆ

ಮಂಗಳೂರಿನ ಸಂಪನಕಟ್ಟೆಯಲ್ಲಿದ್ದ ನಮ್ಮ "ತಾರಾನಾಥ ಆಯುರ್ವೇದ ಮಂದಿರ"ವು ಕೊಡಿಯಾಲಬೈಲಿನಲ್ಲಿ ನವಭಾರತ ಪ್ರೆಸ್ಸಿನ ಹತ್ತಿರದ ಕಟ್ಟಡಕ್ಕೆ ಸ್ಥಳಾಂತರಿಸಲ್ಪಟ್ಟಿದೆ. ಇನ್ನು ಮುಂದೆ ರೋಗ ಚಿಕಿತ್ಸೆಗಾಗಿ ಬರುವವರು ಈ ಕೆಳಗಿನ ಹೊಸ ವಿಳಾಸಕ್ಕೇ ಬರಬೇಕು ಅಥವಾ ಬರೆಯಬೇಕೆಂದು ವಿನಂತಿ.

ಡಾ| ಎಂ. ಗೋಪಾಲಕೃಷ್ಣರಾವ್,
ತಾರಾನಾಥ ಆಯುರ್ವೇದ ಮಂದಿರ,
ಕೊಡಿಯಾಲಬೈಲು, ಪೋಸ್ಟ್—ಮಂಗಳೂರು, ನಂ. 3

1. ಸಿನೇಮಾ ತಾರೆಯರ ದ್ವಿವರ್ಣರಂಜಿತ **ಮುಖಪುಟ**
2. ಹಳ್ಳಿಗರಿಗೆ ಬೋಧಪ್ರದವಾದ **ಸಂಭಾಷಣೆ**.
3. ದೇಶ-ವಿದೇಶಗಳ ವಾರದ ಘಟನೆಗಳನ್ನು ತಿಳಿಸುವ **ವಾರದ ವರದಿ**.
4. ಮಕ್ಕಳಿಂದಲೇ ಬರೆಯಲ್ಪಡುವ **ಮಕ್ಕಳ ಮೋಜು**.
5. ಪ್ರತಿ ಸಂಚಿಕೆಯಲ್ಲಿ ಕನಿಷ್ಠ 12 **ಚಿತ್ರಗಳು**
6. ಭವಿಷ್ಯ, ಸಿನೇಮಾ, ರಾಜಕೀಯ ವಿಮರ್ಶೆ, ನಗೆಯ ನೋಟ, ವಾರದ ಕಥೆ, ಇತ್ಯಾದಿ.

ಬೆಲೆ ಕೇವಲ 0 2 0

"ಸ್ವತಂತ್ರ"

ಸುದ್ದಿ ಮತ್ತು ಅಭಿಪ್ರಾಯಗಳ ಕನ್ನಡ ವಾರಪತ್ರಿಕೆ.

ಹೊಸಪೇಟೆ, (ಜಿಲ್ಲಾ: ಬಳ್ಳಾರಿ)

ಏಜೆಂಟರುಗಳಿಲ್ಲದ ಸ್ಥಳದಲ್ಲಿ ಏಜೆಂಟರು ಬೇಕು.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ನಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ವೀರ್ಯಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಮದ್ದು ನೀಲಗಿರಿ ಏಜೆಂಟರ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. 498/1953

P. ದುಗ್ಗಪ್ಪ ಶೆಟ್ಟಿ ವಾದಿ

ಮತ್ತು

ಮರ್ಗಿ ಶೆಡ್ತಿ-ಕೃಷ್ಣನ್ನು ಶೆಡ್ತಿರ ಮಗಳು—ಉಡುಪಿ ತಾಲೂಕು ನಾಲ್ಕೂರು ಗ್ರಾಮದ ಮಾಲಾಳಿ 1ನೇ ಪ್ರತಿವಾದಿ—ಇವರೊಳಗೆ.

ಸದ್ರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವದೇನಂದ್ರೆ—

ನೀವು ಕೂಡಾ ಇತರ ಜನರು ವಾದಿಗೆ ತಾರೀಕು 29-6-1953ರಲ್ಲಿ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ವ್ಯವೇಜುಗಳನ್ನು ಬಡವಾದಿ ಕೊಳ್ಳುವರೆ ಮಾಡಿದ ಮೊಕದ್ದಮೆಯ ತಾರೀಕು 23-10-1953ಕ್ಕೆ ಇಟ್ಟಿದೆ. ಉಪಾಸನ ಸಂಭಾವ್ಯದಲ್ಲಿ ಆದಿನ್ನ ಪೂರ್ವಾಹ್ನ 10ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜವಾಬು ಮಾಡಿಕೊಳ್ಳಬಹುದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

B. RAMAKRISHNA RAO
Vakil for Plaintiff.

Udipi Dated 9—10—1953

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R. E. P. 474 1953 in
O. S 85/52.
R. E. A. 451 1953.

ಮೂರ್ತಿರಾವ್. ವಾದಿಳು ಅರ್ಜಿದಾರಳು.

ಮತ್ತು

ಶ್ರೀ N. ಸಬಾರಾವು ಅತ್ಯಂತಾಯ, ಮುಂಜಪ್ಪ ಲಕ್ಷ್ಮಂತಾಯರ ಅಳಿಯ, ಕಾರ್ಕಳ ತಾಲ್ಲೂಕು ಬದಗ ಮಿಜಾರು ಗ್ರಾಮದ "ಗೀತಾಸದನ"ದಲ್ಲಿರುವವ. ಪ್ರತಿವಾದಿ. ಎದ್ರಿ.

ಸದ್ರಿ ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ—

ನಿಮ್ಮ ಪಕ್ಕಿನ ಬಾಬ್ತು ಜಪ್ತಿಯಾಗಿಂತ ಮುಂಚೆ ಜಪ್ತು ಮಾಡಿದ ಸ್ಥಿರಾಸ್ತಿಗಳನ್ನು ಮೇಲ್ಕಂಡ ಅಸಲ್ ಜ್ಯಾರಿಯಲ್ಲಿ ಅರ್ಜಿದಾರಳು ಏಲಂಗೆ ಅಪೇಕ್ಷಿಸಿ ಆ ಕುರಿತು ಇಸ್ತಿಹಾರು ದಾಖಲು ಮಾಡಿ ನಿಮಗೆ ಆ ಕುರಿತು ಸೇಲ್ ನೋಟೀಸು ಮತ್ತು ಬಿಡ್ ನೋಟಿಸಿಗೆ ಕೂಡಾ ಹುಕುಂ ಆಗಿ ತಾರೀಕು 30-10-1953ಕ್ಕೆ ಇಟ್ಟಿರುವದ್ರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ಇದ್ದಲ್ಲಿ ಆ ತಾರೀಕಿನಲ್ಲು ಬೆಳಿಗ್ಗೆ ಹತ್ತು ಘಂಟೆಗೆ ಖುದ್ದಾಗಲೀ ಯಾ, ವಕೀಲರ ದ್ವಾರವಾಗಲೀ ಸದ್ರಿ ಕೋರ್ಟು ಮುಂದೆ ಹಾಜರಾಗಿ ಉದಪರಿಸಬೇಕು. ತಪ್ಪಿದ್ದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲಾಗುವುದು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸಲಾಗಿರುವದೆ.

ಬೈಕಾಡಿ ವಾಸುದೇವ ರಾವ್
ಅರ್ಜಿದಾರಳ ಎಡ್ವಕೇಟ್.

ಕಾರ್ಕಳ. 7 10-1953

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ

ಕನ್ನಡ ಪ್ರತಿ ೧ಕ್ಕೆ 0-8-0

ಇಂಗ್ಲಿಷ್ ಪ್ರತಿ ೧ಕ್ಕೆ 0-8-0

ನವಯುಗ ಪ್ರೆಸ್, ಉಡುಪಿ.

ಭಾರತದ ತೈಲ ಶುದ್ಧೀಕರಣ ಕಾರ್ಖಾನೆಗಳು

(೨ನೇ ಪುಟದಿಂದ)

ಕೆ ಇಲ್ಲ. ಏಕೆಂದರೆ ಕಚ್ಚಾ ಎಣ್ಣೆಯನ್ನು ಯಾವ ಕಾಲವಸ್ಥೆಯೇ ಆಗಲಿ ದೊರಕಿಸಿಕೊಳ್ಳುವುದು ಕಷ್ಟವಲ್ಲ.

ಟ್ರಾಂಬೇ ದ್ವೀಪದಲ್ಲಿ

ಸ್ಟೆಂಡರ್ಡ್ ವೆಕ್ಯೂಮಿನ ಕಾರ್ಖಾನೆ ಮುಂದಿನ ವರ್ಷದಲ್ಲಿ ಕೆಲಸ ತೊಡಗುತ್ತದೆ. ೧೨ ಲಕ್ಷ ಟನ್ನು ಎಣ್ಣೆಯನ್ನು ಇದು ಪ್ರತಿ ವರ್ಷ ಉತ್ಪಾದಿಸುವುದು. ಭಾರತದ ಆವಶ್ಯಕತೆಯ ಮೂರರಲ್ಲಿ ಒಂದಂಶದಷ್ಟು ಈ ಪ್ರಮಾಣವಿರುತ್ತದೆ. ಕಾಲ್ಟೆಕ್ಸ್ ಕಂಪೆನಿಯವರು ವಿಶಾಖ ಪಟ್ಟಣದಲ್ಲಿ ಕಟ್ಟಿಸುತ್ತಿರುವ ಕಾರ್ಖಾನೆಯಲ್ಲಿ ೧೯೫೬ನೇ ಇಸವಿಯಿಂದ ಪ್ರತಿವರ್ಷ ೧೦ ಲಕ್ಷ ಟನ್ನು ಎಣ್ಣೆ ಶುದ್ಧೀಕರಣ ಹೊಂದುವುದು. ಭಾರತದ ಅವಶ್ಯಕತೆಯ ಕಾಲಂಶ ಎಣ್ಣೆ ಹೀಗೆ ಪೂರೈಸಲ್ಪಡುತ್ತದೆ. ಆದರೆ ಅಷ್ಟು ಹೊತ್ತಿಗಾಗಲೇ ಪಂಚವಾರ್ಷಿಕ ಯೋಜನೆಯ ಅವಧಿ ಮುಗಿಯುವುದರಿಂದ ನಮ್ಮ ಆವಶ್ಯಕತೆ ದ್ವಿಗುಣಿತವಾಗುತ್ತದೆ. ಈ ಎರಡೂ ಕಂಪೆನಿಗಳ ಉತ್ಪಾದನೆ ನಮಗೆ ಸಾಕಾಗುವುದಿಲ್ಲ. ಆಗ ಬರ್ಮಾಶೆಲ್ ಕಂಪೆನಿಯ ಕಾರ್ಖಾನೆಯಿಂದ ಪ್ರತಿ ವರ್ಷ ದೊರೆಯುವ ೨೦ ಲಕ್ಷ ಟನ್ನು ಎಣ್ಣೆಯ ಮಹತ್ವ ಎಷ್ಟೆಂದು ನಮಗೆ ಗೋಚರಿಸುತ್ತದೆ. ಈ ಕಾರ್ಖಾನೆ ೧೯೫೬ನೇ ಇಸವಿಯಲ್ಲಿ ಪೂರ್ಣವಾಗುವುದೆಂದು ಹಿಂದೆ ಯೋಚಿಸಿದ್ದರು—ಆದರೆ ಕೆಲಸ ಕಾರ್ಯಗಳು ಈಗ ನಡೆಯುವ ತೀವ್ರ ಗತಿಯ ಮೇಲಿಂದ, ೧೯೫೫ನೇ ಜನವರಿಯಲ್ಲೇ ಬರ್ಮಾಶೆಲ್ ಕಂಪೆನಿಯ ಕಾರ್ಖಾನೆ ಉತ್ಪಾದನೆ ತೊಡಗುವ ನಿಶ್ಚಿತ ಭರವಸೆ ಕಂಡು ಬರುತ್ತದೆ. ಬರ್ಮಾಶೆಲ್ ಕಂಪೆನಿಯವರದು ಮಹಾ ಸಾಹಸವಾದುದರಿಂದ ಭಾರತದ ದೃಷ್ಟಿ ಅವರ ಕಾರ್ಯದ ಮೇಲೆಯೇ ಈಗ ಕೇಂದ್ರೀಕೃತವಾಗಿದೆ. ಇವರು ಕಾರ್ಖಾನೆ ಕಟ್ಟಿಸುವ ಟ್ರಾಂಬೇ ದ್ವೀಪ ಮುಂಬಯಿ ನಗರದ ವಾಯುವ್ಯ ದಿಕ್ಕಿನಲ್ಲಿ ಸುಮಾರು ೧೦ ಮೈಲು ದೂರದಲ್ಲಿದೆ. ಸಾಧಾರಣ ೪೫೦ ಎಕ್ರೆ ಜಾಗವನ್ನು ಈ ಕಾರ್ಖಾನೆ ಆಕ್ರಮಿಸುತ್ತದೆ. ಈ ಕಾರ್ಖಾನೆಯ ನಿರ್ಮಾಣಕ್ಕೋಸ್ಕರ ೩೫ ಕೋಟಿ ರೂಪಾಯಿಗಳ ವೆಚ್ಚ ತಗಲುತ್ತದೆ. ೧೯೫೫ರ ಆರಂಭದಲ್ಲಿ ಕಾರ್ಖಾನೆ ಉತ್ಪಾದನೆ ತೊಡಗಿದಾಗ ಮೋಟಾರು ಪೆಟ್ರೋಲ್, ಚಿಮಿಣಿ ಎಣ್ಣೆ, ಡಿಸೇಲ್ ಎಣ್ಣೆ ಇತ್ಯಾದಿಗಳು ಸಿದ್ಧಗೊಳ್ಳುತ್ತವೆ. ಈ ಕಾರ್ಖಾನೆಯ ನಕ್ಷೆಯನ್ನು ಹಾಲೆಂಡದ ರಾಯಲ್ ಡಚ್ ಶೆಲ್ ಕಂಪೆನಿಯವರು ತಯಾರಿಸಿದ್ದು, ಅತ್ಯಾಧುನಿಕ ಮಾದರಿಯಲ್ಲಿ ಇದು ನಿರ್ಮಾಣ ಹೊಂದುವುದು.

ಬರ್ಮಾಶೆಲ್ ಕಂಪೆನಿ

೧೯೫೧ರಲ್ಲಿ ಭಾರತ ಸರಕಾರವು ಬರ್ಮಾಶೆಲ್ ಕಂಪೆನಿಯಲ್ಲಿ ಒಪ್ಪಂದ ಮಾಡಿಕೊಂಡ ಬಳಿಕ ವಿಳಂಬವಿಲ್ಲದೆ ಮುಂದಿನ ಸಿದ್ಧತೆಗಳಾದವು. ಸರಕಾರದವರು ಸ್ಥಳ ಪರೀಕ್ಷೆಯ ತಜ್ಞರನ್ನು ಕಳಿಸಿ, ಭೂಮಿಯ ಅಡಿಯಲ್ಲಿ ಕಲ್ಲು ಬಂಡೆ ಇರುವ ಆಳವನ್ನು ಗೊತ್ತುಪಡಿಸಲು ವ್ಯವಸ್ಥೆ ಮಾಡಿದರು. ಕಾರ್ಖಾನೆಯು ಭದ್ರವಾದ ನೆಲಗಟ್ಟಿನ ಮೇಲೆ ನಿಲ್ಲಬೇಕಾದುದರಿಂದ ಈ ಶೋಧ ಅಗತ್ಯ. ಸುದೈವದಿಂದ ಟ್ರಾಂಬೇಯಲ್ಲಿ ಕಲ್ಲುಬಂಡೆ ಬಹಳ ಮೇಲೆಯೇ ಇದೆ. ಈ ಸಂಗತಿ ತಿಳಿದೊಡನೆಯೇ ಮುಂಬಯಿ ಸರಕಾರದವರು ಈ ವಿಶಾಲವಾದ ಸ್ಥಳವನ್ನು ತಮ್ಮ ವಶಕ್ಕೆ ಪಡೆದುಕೊಂಡು ಬರ್ಮಾಶೆಲ್ ಕಂಪೆನಿಗೆ ಬಿಟ್ಟುಕೊಟ್ಟರು. ಭಾರತ ಸರಕಾರದ ಭೂ ಶೋಧನಾ ಇಲಾಖೆಯ ತಜ್ಞರು ಆ ಸ್ಥಳದ ಸುತ್ತಲೂ ಸಿಮೆಂಟ್ ಕಲ್ಲುಗಳನ್ನು ಹುಗಿಯಲು ನೆರವಾದರು. ಕೆಸರು, ನೀರಿನ ಕೆರೆ, ಗದ್ದೆ, ದರೆ, ಹುಲ್ಲು ಹುತ್ತಗಳಿಂದ ತುಂಬಿದ್ದ ಟ್ರಾಂಬೇಯಲ್ಲಿ ಈಗ ವಿಶಾಲವಾದ ಕಾರ್ಖಾನೆ ತಲೆ ಎತ್ತಿಕೊಂಡಿರುವುದು ನಮ್ಮ ಅಭಿಮಾನವನ್ನು ಕೆರಳಿಸುವಂತಿದೆ—ಕಾರ್ಖಾನೆಯ ಮುಂದಿನ ಕೆಲಸಗಳು ನಡೆಯುವುದಕ್ಕೆ ಮುಂಚೆ ಇಲ್ಲಿಯ ನೆಲವಡಿಯಲ್ಲಿ ಮುಂಬಯಿ ಬಂದರದ ವರೆಗೆ ಹಾಕಿದ್ದ ಎಣ್ಣೆ ನಳಿಗಳನ್ನು ಸ್ಥಾನಾಂತರಿಸುವುದು ಅಗತ್ಯವೆಂದು ತೋರಿತು. ೧೨ ಲಕ್ಷ ರೂಪಾಯಿ ವೆಚ್ಚ ಮಾಡಿ ಈ ಕೆಲಸವನ್ನು ಈಗ ಮುಗಿಸಿರುವರು. ಈಗಾಗಲೇ ಒಂದು ಗುದಾಮನ್ನು ಒಂದು ತಿಂಗಳಷ್ಟು ಅಲ್ಪಾವಧಿಯಲ್ಲಿ ಕಟ್ಟಿ ಮುಗಿಸಿದ್ದು ಇದರ ರಚನೆಗೋಸ್ಕರವೇ ೧೪೦ ಟನ್ ಉಕ್ಕು, ಅರ್ಧಲಕ್ಷ ಘನ ಅಡಿ ಕಲ್ಲಾರು ಸಿಮೆಂಟ್ ಉಪಯೋಗಿಸಲ್ಪಟ್ಟಿದೆ. ಜೊತೆ ಕೆಲವು ತಾತ್ಕಾಲಿಕ ಗುಡಿಸಲುಗಳನ್ನು ಕಟ್ಟಿ, ಯಂತ್ರೋಪಕರಣಗಳು ಕೆಡದಂತೆ ನೋಡಿರುವರು. ಈ ಕಾರ್ಖಾನೆ ಪರಿಪೂರ್ಣವಾಗಲು ಕೈಗೊಳ್ಳಬೇಕಾದ ಕೆಲಸ, ದಿಗ್ಭ್ರಾಂತಿಯನ್ನು ಹಿಡಿಸುವಂತಿದೆ. ೬೦ ಸಾವಿರ ಟನ್ನು ಉಕ್ಕು, ೨೦ ಸಾವಿರ ಕೋಟಿ ಘನಗಜ ಸಿಮೆಂಟು ಉಪಯೋಗಿಸಬೇಕಾಗುವುದಲ್ಲದೆ ೧೦೦ ಮೈಲುಗಳಷ್ಟು ಉದ್ದ ವಿದ್ಯುಚ್ಛಕ್ತಿಯ ಸರಿಗೆ ಹಾಯಬೇಕು, ೧೨ ಮೈಲುಗಳಷ್ಟು ಮಾರ್ಗ ರಚನೆಯಾಗಬೇಕು. ಒಂದೂವರೆ ಲಕ್ಷ ಟನ್ನು ಎಣ್ಣೆ ಹಿಡಿಯುವ ಸರೋವರಗಳನ್ನು ನಿರ್ಮಿಸಬೇಕು, ನಾಲ್ಕು ಲಕ್ಷ ಘನಗಜದಷ್ಟು ಮಣ್ಣು ಅಗೆಯಬೇಕು; ಮುಂಬಯಿಯಿಂದ ದಿನಂಪ್ರತಿ ಎರಡು ಲಕ್ಷ ಟನ್ನು ಸಿಹಿ ನೀರನ್ನು ನಳದ ಮೂಲಕ ಹಾಯಿಸಬೇಕು. ಈ ಕಾರ್ಖಾನೆಯನ್ನು ಬೇಕೆಂದರೆ ವಿಸ್ತರಿಸಲು ಅನುಕೂಲವಾಗುವಂತೆ ಹಾಗೂ ಶುದ್ಧೀಕರಣದಿಂದ ದೊರೆಯುವ ಬೇರೆ ಬೇರೆ ಉಪವಸ್ತುಗಳನ್ನು ಉಪಯೋಗಿಸುವ ಇತರ ಕಾರ್ಖಾನೆಗಳ ಸಹಾಯದಲ್ಲಿ ತಲೆ ಎತ್ತುವಂತೆ ದೂರದೃಷ್ಟಿ ಇಟ್ಟುಕೊಂಡು ರಚಿಸುತ್ತಿದ್ದಾರೆ. ಪರ್ಶಿಯನ್ ಕೊಲ್ಲಿ ಪ್ರದೇಶದಿಂದ ಎಣ್ಣೆಯನ್ನು ಹಡಗುಗಳಲ್ಲಿ ತರಿಸಲು ನಿರ್ಧಾರ ಮಾಡಿದ್ದು, ಅದಕ್ಕಾಗಿ ೩೦ ಸಾವಿರ ಟನ್ನು ಎಣ್ಣೆ ಹಡಗಗಳನ್ನು ಉಪಯೋಗಿಸಿಕೊಳ್ಳುವರು. ಭಾರತದಲ್ಲಿ ಇಂಥ ಹಡಗಗಳು ಇರುವುದಿಲ್ಲ. ತರಿಸಿದ ಕಚ್ಚಾ ಎಣ್ಣೆಯನ್ನು ಮುಂಬಯಿಯ ಬುಚರ್ ದ್ವೀಪದ ಬಳಿ ಶೇಖರಿಸಿಟ್ಟು, ಅಲ್ಲಿದ್ದ ನಳಗಳಿಂದ ಟ್ರಾಂಬೇ ದ್ವೀಪದ ಕಾರ್ಖಾನೆಗೆ ಒದಗಿಸಲಾಗುವುದು. ಎರಡು ಕೋಟಿ ರೂಪಾಯಿ ಬೆಲೆಯ ಪಾಲುಗಳನ್ನು ಸಾರ್ವಜನಿಕರಿಗೆ ಹಂಚ ಕೊಡಬೇಕೆಂದು ಕಂಪೆನಿಯವರ ವಿಚಾರವಿದೆ. ಭಾರತ ಸರಕಾರಕ್ಕೆ ಈಯೊಂದು ಕಂಪೆನಿಯಿಂದಲೇ ವರ್ಷಂಪ್ರತಿ ೪ರಿಂದ ಕೋಟಿ ರೂಪಾಯಿಗಳ ಲಾಭ ದೊರೆಯುವುದೆಂದು ನಿರೀಕ್ಷೆ. ಭಾರತದಲ್ಲಿ ಔದ್ಯಮಿಕ ಪ್ರಗತಿಯನ್ನೂ ಸ್ವಾವಲಂಬನವನ್ನೂ ಸಾಧಿಸಲು ನೆರವಾಗುವ ಇಂಥ ಪ್ರಯತ್ನಗಳಿಗೆ ಸರಕಾರೀ ಸಹಾಯವಲ್ಲದೆ, ಸಾರ್ವಜನಿಕರ ಪ್ರೋತ್ಸಾಹವೂ ಅಗತ್ಯವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜುಮ್ಲಾ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು ! ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಶಾಸ್ತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ
ನವಜೀವಾತು
ಎಂಬ
ಸೂತಿಕಾರಸಾಯನ

ಬಾಣಂತಿಯರ ನಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವ್ರನರಸಾಯನ.



ಹೆಚ್ಚಿನ ಸೂಚನೆಗೆ— ಡಾ| ಯಂ ಸಿ. ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲು ಪೋಸ್ಟು. (ಮಂಗಳೂರು)

ಸ್ಥಾನಿಕ ಸ್ಟಾಕಿಸ್ಟರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

Our Bombay Stockists:-

1) V. N. Shenoy, Bombay 12.
2) N. R. Kamath, General Merchant, Dahanu Road, W. Ry.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ ೨೪ ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ವಾರದ ಒಳಿತು ಕೆಡುಕುಗಳು

ತಾ. ೧೫—೧—೫೩ರಿಂದ ತಾ. ೨೨—೧೦—೫೩ರ ವರೆಗೆ.

ಮೇಷ— ಸದ್ಯದ ಪರಿಸ್ಥಿತಿಯನ್ನು ನೋಡುವಾಗ ದುರ್ದೈವವೇ ಮೂರ್ತಿಮತ್ತಾಗಿ ಬಂದು ನಿಮ್ಮನ್ನು ಪೀಡಿಸುತ್ತಿದೆಯೋ ಎಂಬಂತೆ ಭಾಸವಾಗುವದು. ವಿಘ್ನ ಪರಂಪರೆಗಳಿಂದಾಗಿ ನಿಮ್ಮ ಕಾರ್ಯಗಳಾವವೂ ಮುಂದುವರಿಯವು. ಹೆಂಡತಿ ಮಕ್ಕಳ ಆರೋಗ್ಯ ಕೆಡಲಿದೆ. ಆರ್ಥಿಕ ಬಿಕ್ಕಟ್ಟಿನಿಂದಾಗಿ ಮರ್ಯಾದೆ ಉಳಿಸಿಕೊಳ್ಳುವದು ಕಷ್ಟವೆನಿಸುವದು. ಆತ್ಮೀಯರ ಬಂಧು ಜನರ ನೆರವು ಈ ಪತ್ರೂ ಲಭಿಸಲಾರದು. ಆಧಿವ್ಯಾಧಿಗಳಿಂದ ಸತತ ತಪ್ತರಾದ ನಿಮಗೆ ತಾ. 16. 17. 18 ಈ ದಿನಗಳು ಸ್ವಲ್ಪ ಉತ್ತಮವೆನಿಸ್ಯಾವು.

ವೃಷಭ— ದಿನೇ ದಿನೇ ಪ್ರಗತಿಯನ್ನೈದುತ್ತಿರುವ ನಿಮ್ಮ ಜೀವನದಲ್ಲಿ ಚಿಂತಾ ದುಃಖಗಳಿಗೆ ಸ್ಥಾನವಿರದು. ಪ್ರತಿಯೊಂದು ಕಾರ್ಯದಲ್ಲೂ ನಿಮ್ಮ ನಿರೀಕ್ಷೆಗಿಂತ ಅಧಿಕವಾದ ಫಲ ಪ್ರಾಪ್ತಿಯಾಗುವದು. ಸಾಮಾಜಿಕ ರಾಜಕೀಯ ರಂಗಗಳಲ್ಲಿ ಸ್ಥಾನ ಮಾನಗಳನ್ನು ಪಡೆವಿರಿ. ನೌಕರಿ ವರ್ಗದವರು ಉನ್ನತ ಸ್ಥಾನ ಹೊಂದಲಿರುವರು. ಕೆಲವೊಮ್ಮೆ ದುರ್ಜನರ ಸಂಸರ್ಗದಿಂದಾಗಿ ಅನಿಷ್ಟ ಅಪವಾದಗಳಿಗೀಡಾದೀರಿ. ಜಾಗ್ರತರಾಗಿರಿ. ವಾರಾಂತ್ಯದ 4 ದಿನಗಳು ಅತ್ಯುತ್ತಮವಿವೆ.

ಮಿಥುನ— ಸುಖ ಲಾಭಗಳಿಗಿಂತ ದ್ವಿಗುಣವಾದ ದುಃಖ ನಷ್ಟಗಳು ಪ್ರಾಪ್ತವಾಗುವವು. ಆದರೂ ಪರಾಪೇಕ್ಷೆಯಿಲ್ಲದೆ ಸ್ವಯಮೇವ ಕಾರ್ಯ ನಿರ್ವಹಿಸಲು ಶಕ್ತರಾದ ನಿಮಗೆ ಪ್ರಯತ್ನಕ್ಕೆ ತಕ್ಕುದಾದ ಫಲ ಲಭಿಸುವದು. ಗೃಹತಾಪತ್ರಯಗಳ ದೆಸೆಯಿಂದಾಗಿ ಒಮ್ಮೊಮ್ಮೆ ನಿಮಗೆ ಸಂಸಾರದಲ್ಲಿ ವಿರಕ್ತಿ ಕೂಡಾ ಕಾಣಿಸಬಹುದು. ಸ್ಥಾನಚ್ಯುತಿ ಜನತೆಯಲ್ಲಿ ನಿಷ್ಠುರ ಕಲಹಗಳು ಪ್ರಾಪ್ತವಾಗಲಿವೆ. ತಾ. 15. 20. 21. ಈ ದಿನಗಳಲ್ಲಿ ಸನ್ಮಿತ್ರರ ಸಹವಾಸ ನೆರವುಗಳಿಂದಾಗಿ ಸ್ವಲ್ಪ ಸುಖ ಕಾಣುವಿರಿ.

ಕರ್ಕಟಿ— ನಿಮ್ಮ ಧನ ಸ್ಥಾನದಲ್ಲಿ ಅಂಗಾರಕನೂ ಸುಖದಲ್ಲಿ ಶನಿಯೂ ಇರುವ ಕಾರಣ ಈ ಎರಡೂ ಭಾಗಗಳಿಗೆ ಹಾನಿಯಿದೆ. ಮಾತ್ರವಲ್ಲ ಧನಪತಿಯೂ ಸುಖದಲ್ಲಿ ನೀಚನಾಗಿರುವುದು ಮತ್ತಷ್ಟು ಆರ್ಥಿಕ ಬಿಕ್ಕಟ್ಟಿಗೂ ಸುಖ ನಾಶಕ್ಕೂ ಅವಕಾಶವುಂಟಾಗುವದು. ಅಧಿಕಾರ ವರ್ಗದವರ ಪೀಡೆಯು ಸದಾ ತಪ್ಪಲೊಲ್ಲದು. ಅನಿರೀಕ್ಷಿತ ಪ್ರವಾಸದಿಂದಾಗಿ ನಷ್ಟ ಕಷ್ಟಗಳು ಪ್ರಾಪ್ತವಾಗುವವು. ಪಿತ್ತೋಷ್ಣ ವಿಕಾರದಿಂದ ಆರೋಗ್ಯವೂ ಕೆಡಲಿದೆ. ವಾರಾಂತ್ಯ 3 ದಿನಗಳು ಇದ್ದುದರಲ್ಲಿ ಸ್ವಲ್ಪ ಉತ್ತಮವೆನಿಸಿಯಾವು.

ಸಿಂಹ— ನಿಮ್ಮ ಸಂಕಲ್ಪಗಳು ಈ ವಾರದಲ್ಲಿ ನೆರವೇರಲಿವೆ. ದೈವಾನುಗ್ರಹವು ಸಾಕಷ್ಟು ಉತ್ತಮವಿದ್ದುದರಿಂದ ಜನ ಬೆಂಬಲವೂ ಲಭಿಸುವುದರಿಂದಾಗಿ ನಿಮ್ಮ ಪ್ರತಿಯೊಂದು ಕಾರ್ಯಗಳೂ ಬಯಕೆಯಂತೆ ಸಾಧಿಸುವವು. ಆರ್ಥಿಕ ಬಿಕ್ಕಟ್ಟಿನಿಂದ ಮುಕ್ತರಾಗುವಿರಿ. ಸಮಾಜದಲ್ಲಿ ಸ್ಥಾನ ಮಾನಗಳು ಲಭಿಸುವವು. ವಿರೋಧಿ ಜನರು ಹೇಳ ಹೆಸರಿಲ್ಲದಂತಾಗುವರು. ವ್ಯಾಪಾರ ವ್ಯವಹಾರ ಉದ್ಯೋಗಾದಿಗಳಲ್ಲಿ ಪ್ರಗತಿ ಹೊಂದುವಿರಿ. ತಾ. 16ರಿಂದ 19ರ ವರೆಗಿನ ದಿನಗಳು ಅತ್ಯನುಕೂಲ.

ಕನ್ಯಾ— ನಿಮ್ಮ ಪರಿಸ್ಥಿತಿಯು ಈ ವಾರದಲ್ಲಿ ಮುಂಚಿಗಿಂತ ಏನೂ ಸುಧಾರಣೆ ಹೊಂದಲಾರದು. ಧನಭಾಗ್ಯನು ನೀಚನಾಗಿ ಜನ್ಮದಲ್ಲಿರುವುದರಿಂದ ಆರ್ಥಿಕ ಮುಗ್ಗಟ್ಟು ಅನಾರೋಗ್ಯವು ಹೆಚ್ಚುವದು. ಪ್ರಯತ್ನವು ಬಹ್ವಂಶ ವಿಫಲವಾಗುವದು. ಆತ್ಮೀಯರ ವಿಯೋಗ ದುಃಖಕ್ಕೀಡಾದೀರಿ. ಪತ್ನೀ ಪುತ್ರರ ಆರೋಗ್ಯದತ್ತ ಹೆಚ್ಚಿನ ಗಮನವನ್ನಿಡಿರಿ. ರಾಜಕೀಯ ಕ್ಷೇತ್ರದಲ್ಲಿ ಪರಾಭವವುಂಟಾದೀತು. ವಾರಾಂತ್ಯದ 4 ದಿನಗಳು ಹೆಚ್ಚಿನ ಅನಿಷ್ಟಕಾರಿಗಳಾಗಲಾರವು.

ತುಲಾ— ನಿಮ್ಮ ಪ್ರಯತ್ನವಿಂದು ಸಂಪೂರ್ಣ ಫಲಕಾರಿಯಾಗಲಿದೆ. ನೆನೆದಂತೆ ಕಾರ್ಯವು ಸಿದ್ಧಿಸುವದು. ಆರ್ಥಿಕ ತಾಪತ್ರಯಗಳಿಂದ ಮುಕ್ತರಾಗಿ ಸಾಕಷ್ಟು ಧನ ಸಂಗ್ರಹಿಸುವಿರಿ. ಧನ ಧಾನ್ಯಾದಿಗಳಿಗೆ ಕೊರತೆಯಿಲ್ಲದ ಕಾರಣ ದಿನಯಾಪನೆಯು ಸುಗಮವಾದೀತು. ಆದರೆ ನಿಮ್ಮ ಮತ್ತು ಮಕ್ಕಳ ಆರೋಗ್ಯಕ್ಕೆ ವಿಶೇಷತಃ ಧಕ್ಕೆಯಿದೆ. ಕಫ ವಾತಪ್ರಕೋಪವು ಹೆಚ್ಚಾಗಿ ಕಂಡು ಬಂದೀತು. ಸೋದರ ಬಂಧುಗಳ ನೆರವಿನಿಂದಾಗಿ ತಾ. 15. 20. 21. ಈ ದಿನಗಳಲ್ಲಿ ಇಷ್ಟಾರ್ಥ ಸಿದ್ಧಿ.

ವೃಶ್ಚಿಕ— ದಿನದಿಂದ ದಿನಕ್ಕೆ ಬಿಕ್ಕಟ್ಟು ಹೆಚ್ಚುತ್ತಾ ಬರುತ್ತಿದೆ. ದೇಹಾಲಸ್ಯದಿಂದಾಗಿ ಬಹಳ ಕಷ್ಟ ನಷ್ಟಕ್ಕೊಳಗಾಗುವಿರಿ. ಆಕಸ್ಮಿಕ ಪ್ರವಾಸಾದಿಗಳಿಂದ ವ್ಯರ್ಥ ಶ್ರಮ ಧನವ್ಯಯವಾಗಲಿದೆ. ಶತ್ರು ಜನರಿಂದಾಗಿ ಪರಾಭವವುಂಟಾದೀತು. ವಿದ್ಯೋಪಜೀವಿಗಳಾದ ನೌಕರಿ ಜನತೆಗೂ ಸೇವಕ ವೃಂದಕ್ಕೂ ಈ ಕಾಲವು ಅತೀವ ದುಃಖದಾಯಿಯಾಗಿ ಪರಿಣಮಿಸಲಿದೆ. ಪತ್ನೀಪುತ್ರರ ವಿರಹವೇದನೆಗೆ ಸಿಲುಕುವ ಯೋಗವಿದೆ. ತಾ. 16. 17. ಇತರ ದಿನಗಗಿಂತ ಉತ್ತಮವೆನಿಸ್ಯಾವು.

ಧನು— ನಿಮ್ಮ ಪ್ರತಿಯೊಂದು ಬಯಕೆಯೂ ಕೂಡಾ ಈ ಕಾಲದಲ್ಲಿ ಏನೊಂದೂ ವಿಘ್ನ ವಿಧ್ವಂಸಗಳಿಲ್ಲದೆ ನೆರವೇರಲಿದೆ. ಅಲ್ಪ ಪ್ರಯತ್ನದಿಂದಾಗಿ ಅಧಿಕ ಫಲವನ್ನು ಪಡೆವಿರಿ. ತನುಸುಖಪತಿಯಾದ ಬೃಹಸ್ಪತಿಯು ಕೇಂದ್ರಗತನಾಗಿಯೂ ಧನ ಭಾಗ್ಯಪತಿಗಳು ಲಾಭಗತರಾಗಿಯೂ ಇರುವುದರಿಂದ ನಿಮ್ಮ ಆರ್ಥಿಕ ಭಾಗವು ಪರಿಪೂರ್ಣವಾಗಿದ್ದು ನಿಶ್ಚಿಂತೆಯಿಂದಲೂ ಆರೋಗ್ಯದಿಂದಲೂ ದಿನಗಳೆವಿರಿ. ಕೆಲವೊಮ್ಮೆ ವಾಕ್ಕಲಹವುಂಟಾದೀತು. ತಾ. 15. 18 19 ಅನುಕೂಲ

ಮಕರ— ಕಳೆದ ವಾರಕ್ಕಿಂತ ಸ್ವಲ್ಪ ಪರಿಸ್ಥಿತಿಯು ಸುಧಾರಿಸಲಿದೆ. ಪ್ರಯತ್ನ ಶೀಲರ ಪರಿಶ್ರಮವು ಸಾರ್ಥಕವಾಗುವದು. ಖರ್ಚಿಗಾಗಿ ಹೆರವರ ಮುಖ ನೋಡುವ ಪ್ರಸಂಗ ಬರಲಾರದು. ಆದರೆ ವಿರೋಧಿ ಜನರ ಪೀಡೆಯಿಂದಾಗಿ ನಿಮ್ಮ ಧನ ಮಾನಗಳಿಗೆ ಹಾನಿಯೊದಗಲಿರುವುದರಿಂದ ಹೆಚ್ಚಾದ ಚಿಂತೆಗೆ ಗುರಿಯಾಗುವಿರಿ. ಶಸ್ತ್ರಾದಿಗಳಿಂದಾಗಿ ದೇಹದಲ್ಲಿ ರಕ್ತಸ್ರಾವವಾದೀತು. ತಾ. 16. 17. 20. 21. ಈ ದಿನಗಳು ಉತ್ತಮವಾಗಿವೆ.

ಕುಂಭ— ನಿಮ್ಮ ಧನ ಲಾಭ ಪತಿಯಾದ ಸುರ ಗುರುವಿಂದ ನಿಮ್ಮನ್ನು ಪೂರ್ಣ ದೃಷ್ಟಿಯಿಂದ ನೋಡುತ್ತಿರುವುದರಿಂದ ನಿಮಗೆ ಪ್ರಾಪ್ತವಾಗಲಿದ್ದ ಹೆಚ್ಚಿನ ಶೋಕಾನಿಷ್ಟಗಳು ಸೂರ್ಯ ರಶ್ಮಿತಗಲಿದ ಹಿಮ ಗಡ್ಡೆಗಳಂತೆ ಮಾಯವಾಗುವವು. ಗೃಹಕೃತ್ಯದಲ್ಲಿ ಕೊಂಚ ಅವ್ಯವಸ್ಥೆಯುಂಟಾದೀತು. ಹಣದ ವ್ಯವಹಾರ ನಿಮಿತ್ತ ಕಲಹವು ಬೆಳೆದು ರಾಜದ್ವಾರದ ಪರ್ಯಂತರವೂ ಮುಂದುವರಿಯುವ ಸಂಭವವಿದೆ. ತಾ. 15. 18. 19 ಈ ದಿನಗಳು ಸುಖ ಲಾಭದಾಯಿಗಳಿವೆ.

ಮೀನ— ಪೌರುಷವು ಪುರುಷಾಯತ್ತವಾದುದು. ಫಲ ಪ್ರಾಪ್ತಿಯು ದೈವಾಯತ್ತವಿರುವುದು. ನಿಮ್ಮ ಪ್ರಯತ್ನಕ್ಕೆ ಯಾವ ತರದ ವಿಘ್ನಾದಿಗಳೂ ಬರಲಾರವು. ಆದರೆ ಪರಿಶ್ರಮಕ್ಕೆ ತಕ್ಕ ಫಲ ಕಾಣಿಸದು. ಬಂಧು ವರ್ಗದವರಲ್ಲಿ ಕಲಹವಾಗುವದು. ಸ್ತ್ರೀನಿಮಿತ್ತವಾದ ಕಲಹ ಅಪವಾದಾದಿ ಅನಿಷ್ಟಗಳೂ ಪ್ರಾಪ್ತವಾಗುವ ಯೋಗವಿದೆ. ಗೃಹ ತಾಪತ್ರಯಗಳಿಂದ ವಿಶೇಷತ: ಪೀಡಿತರಾದ ನಿಮಗೆ ತಾ. 15. 16. 17. 20. 21 ಈ ದಿನಗಳು ಸ್ವಲ್ಪ ಸುಖದಾಯಿಯಾದೀತು.

(೧ನೇ ಪುಟದಿಂದ)

ಕ್ರಿಯೆಗಳೇ ನಿರಬಹುದೆಂದು ನಿಶ್ಚಿತವಾಗಿ ತಿಳಿದುಕೊಳ್ಳುವುದೂ ಯೋಗ್ಯ. ಕೃಷಿಗೆ ಸಂಬಧಿಸಿದಂತೆ ಸಾಮಾನ್ಯ ತತ್ವಗಳನ್ನು ನಿರ್ಧರಿಸಿ ಮಾರ್ಗದರ್ಶನ ಮಾಡಬಲ್ಲ ಸಂಶೋಧನಾ ಮಂಡಳಿ ಯಾವ ಕಾಲಕ್ಕೂ ಅಸ್ತಿತ್ವದಲ್ಲಿರುವುದೊಳಿತು. ಕೇಂದ್ರ ಸರಕಾರದ ಭೂ ಸುಧಾರಣಾ ಸಮಿತಿಯನ್ನು ಈ ಆವಶ್ಯಕತೆಗೊಪ್ಪುವಂತೆ ಪುನರ್ಘಟಿಸುವುದು ಅಪೇಕ್ಷಣೀಯವಾಗಿದೆ.

ರೈತರಲ್ಲಿರುವ ಭೂಮಿಯ ತೃಷೆಯು ರಾಜಕೀಯ ಚದುರಂಗದ ವಸ್ತುವಾಗದಂತೆ ಪ್ರೈಕ್ಷಣಿಕ ಮಟ್ಟದಲ್ಲಿ ಪ್ರಯತ್ನಗಳು ನಡೆಯುವ ಅಗತ್ಯ ಬಹಳವಿದೆ. ಹಳ್ಳಿಗರು ತಮ್ಮಲ್ಲಿಯೇ ಯೋಗ್ಯ ಧುರೀಣತ್ವವನ್ನು ಕಂಡುಕೊಂಡು ಘಟನಾತ್ಮಕವಾಗಿ ತಮ್ಮ ಅಭಿವೃದ್ಧಿ ಸಾಧಿಸಲು ಪ್ರೋತ್ಸಾಹ ಕೊಡುವುದರಿಂದ, ಕಮ್ಯೂನಿಸ್ಟರ ಕಡೆಗೆ ಅವರ ಒಲವು ಹರಿಯುವುದನ್ನು ತಡೆಯಬಹುದು.

ಕೊನೆಯದಾಗಿ, ಹಳ್ಳಿಗರಿಗೆ ವ್ಯವಸಾಯಕ್ಕೋಸ್ಕರ ಸಾಲ ರೂಪದಲ್ಲಿ ಹಣ ಒದಗಿಸಿ ಕೊಡುವ ವ್ಯವಸ್ಥೆ ಇನ್ನಷ್ಟು ಚೆನ್ನಾಗಿ ಕಾರ್ಯಾರಂಭ ಮಾಡಬೇಕು. ಒಕ್ಕಲುಗಳ ದೈನ್ಯಾವಸ್ಥೆಗೆ ಅವರಿಗೆ ಸಕಾಲದಲ್ಲಿ ಯೋಗ್ಯ ಶರ್ತಗಳಲ್ಲಿ ಹಣದ ನೆರವು ದೊರೆಯದಿರುವುದೇ ಪ್ರಧಾನ ಹೇತು—ಹೀಗೆ ಪ್ರೊ. ಪಾರ್ಸನ್ಸರು ತಮ್ಮ ವರದಿಯಲ್ಲಿ ಹೇಳಿರುವರು.

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕೆರಳಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅವಿಲು ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ. 2 0 0
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನ ಜಿವಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ.

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 8 0

ಸುಲಭದಲ್ಲಿ ಇಂಗ್ಲಿಷ್ ರೂ. 1 8 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ವಿವರವಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಶನ್ ಇದೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಂಬಯಿ ಏಜಂಟರು:- ಸ್ಟೂಡೆಂಟ್ಸ್ ಬುಕ್ ಡಿಪ್ಪೊ, 6 E. ಪಿಕಾ ಸ್ಟ್ರೀಟ್, ಫೋರ್ಟ್, ಮುಂಬೈ.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦
—: ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ ಬಹಿಷ್ಠೆ ಸಂಬಂಧದ ಹೊಟ್ಟೆ ನೋವು ಪೂರ್ಣ ಗುಣವಾಗಿ ಪತಿಯ ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ ತಾರುಣ್ಯವು ಪುನರುಜ್ಜೀವನಗೊಳ್ಳುವ ವರೆಗೆ ಖಂಡಿತ ಸಂತಾನವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್ ರವರ ಸುಪ್ರಸಿದ್ಧ
ಸಂತಾನ ಸಿಂಧೂರ ಭಸ್ಮವು ಈ ಹೊಟ್ಟೆನೋವನ್ನು (Menstrual Stomach pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭಪತನವನ್ನೂ ನಿವಾರಿಸಿ, ಬಂಜೆತನ ವನ್ನು ಕೊನೆಗಾಣಿಸಿ ಸಂತಾನ ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಅತ್ಯುಷ್ಣವನ್ನು ಸಮಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತದೆ.

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಗಳ 1 ಸೆಟ್ ಸೇವಿಸಿರಿ.

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ:— 2 ಔಷಧಿಗಳ 1 ಸೆಟ್ 6 ರೂ. ಪೋಸ್ಟೇಜ್ 1 ರೂ 7 ರೂ. M. O. ಮಾಡಿರಿ. ಕೂಡ್ಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ. ಪಿ. ಇಲ್ಲ. ಕ್ಯಾಟಲಾಗ್ ಉಚಿತ.
ಜವಾಬಿಗಾಗಿ 2 ಅಣೆ ಸ್ಟಾಂಪು ಕಳಿಸಿರಿ. ತಯಾರಕರು:-
A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,
628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ)
ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು. (South India)

ಉಪಾಧ್ಯಾಯರು ಬೇಕು

ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರೊಬ್ಬರು ಬೇಕಾಗಿದ್ದಾರೆ. ಹೆಚ್ಚಿನ ವಿವರಗಳಿಗೆ ಬರೆಯಿರಿ.

Rev. Fr. K. T. Verghes
Correspondent
Cosmopolitan Ele. School,
Mabukal P. O. Brahmavar
(S. K.)

Licensed to Post without Prepayment.

ನವಯುಗ

Vol.33 No 8 22-10-1953 ವರ್ಷ ೩೩ ವಾರ ೮

ಜನಹಿತದ ಯೋಜನೆಗಳು

ಭಾರತದ ರಾಷ್ಟ್ರೀಯ ಅಭಿವೃದ್ಧಿಯ ಮೂಲಭೂತ ಅಂಗವೆಂದರೆ ಗ್ರಾಮೋದ್ಧಾರವೆಂದು ಮಹಾತ್ಮಾಗಾಂಧೀಜಿಯವರು ಹೇಳಿದುದನ್ನು ನಾವೆಲ್ಲರೂ ಒಪ್ಪಿಕೊಂಡಿರುತ್ತೇವೆ. ಗ್ರಾಮೋದ್ಧಾರದ ಪ್ರಥಮ ಪ್ರಯತ್ನವಾಗಿ ಹಳ್ಳಿಯ ಕೃಷಿ ಸಮಸ್ಯೆಗಳನ್ನು ಅಭ್ಯಸಿಸಿ, ಉತ್ಪಾದನೆ ಹೆಚ್ಚುವಂತೆ ಮತ್ತು ಬೇಸಾಯವು ಲಾಭದಾಯಕವಾಗಿ ರೈತರ ಜೀವನಮಟ್ಟ ಏರುವಂತೆ ಕೆಲಸ ಮಾಡುವುದು ಅಗತ್ಯವಾಗಿರುತ್ತದೆ. ಈ ಸಂಗತಿಯನ್ನು ನಾವು ಎಲ್ಲರೂ ಅನುಮೋದಿಸುವರು. ಪಂಚವಾರ್ಷಿಕ ಯೋಜನೆಯಲ್ಲಿ ವಿವರಿಸಲಾದ ಅನೇಕ ಸಂಗತಿಗಳು ಹಳ್ಳಿಯ ರೈತನ ಕಾರ್ಯಕ್ಷಮತೆಯನ್ನೂ ಬುದ್ಧಿ ಕೌಶಲವನ್ನೂ ಹೆಚ್ಚಿಸಿ ಅಧಿಕ ಉತ್ಪಾದನೆ ಕೈಗೂಡುವಂತೆ ಹಾಗೂ ಆಧುನಿಕ ಸಂಶೋಧನೆಗಳಿಂದ ಕೃಷಿ ಸಮೃದ್ಧವಾಗುವಂತೆ ಮಾಡಲು ಉದ್ದೇಶಿಸಿವೆ. ಈಚೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆಯಂತೆ ತರಬೇತಿಹೊಂದಿದ ನಾಗರಿಕರನ್ನು ಹಳ್ಳಿಯ ರೈತರ ಬಳಿಗೆ ಕಳುಹಿಸಿ ಅವರಿಗೆ ಆಧುನಿಕ ಕೃಷಿ ಪದ್ಧತಿಯ ಪರಿಚಯ ಮಾಡಿಸಿಕೊಡುವ ವಿಚಾರವನ್ನು ಯೋಜನಾ ಆಯೋಗ ಮಾಡಿರುವುದನ್ನು ಕಂಡರೆ, ರೈತನ ಸ್ಥಾನಮಾನದ ಮಹತ್ವವನ್ನು ಎಲ್ಲರೂ ತಿಳಿದುಕೊಳ್ಳಬಹುದು. ರಾಷ್ಟ್ರೀಯ ವಿಸ್ತರಣಾ ಸೈನ್ಯದ ಸದಸ್ಯರು ಹಳ್ಳಿಯ ರೈತನ ಪಾಲಿಗೆ ಸಲಹೆಗಾರರು, ಸ್ನೇಹಿತರು ಹಾಗೂ ಉನ್ನತಾದರ್ಶದ ಕಡೆಗೆ ಮುನ್ನಡೆಸುವ ತತ್ವಜ್ಞಾನಿಗಳು ಆಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ಈ ರೀತಿ ಹಳ್ಳಿಯ ರೈತರ ಮನಸ್ಸನ್ನು ರಾಷ್ಟ್ರೀಯ ಹಿತದ ಕಡೆಗೆ ತಿರುಗಿಸಿ, ಅವರಿಂದ ಮಹಾ ಸೇವೆಯನ್ನು ಮಾಡಿಸಿಕೊಳ್ಳಲು ಸರಕಾರವು ಹೊಸದಾಗಿ ಈ ಪ್ರಯತ್ನವನ್ನು ಕೈಗೊಂಡುದಲ್ಲ — ಕೃಷಿ ವಿಭಾಗವು ಕೆಲವು ಅಧಿಕಾರಿಗಳನ್ನು ಪ್ರತಿ ತಾಲೂಕುಗಳಲ್ಲಿ ನೇಮಿಸಿದ್ದು, ಅವರು ಹಳ್ಳಿಗರೊಡನೆ ಸಂಪರ್ಕ ಬೆಳೆಸಿ ಆಧುನಿಕ ಸಂಶೋಧನೆಗಳ ಹೆಚ್ಚಿನ ಪ್ರಯೋಜನವನ್ನು ರೈತರು ಹೊಂದುವಂತೆ ನೋಡಬೇಕೆಂಬ ಕ್ರಮ ಜಾರಿಯಲ್ಲಿರುತ್ತದೆ. ಆದರೆ ಈ ದಿಸೆಯಲ್ಲಿ ಕೈಗೂಡಿದ ಕೆಲಸವಾಗಲೀ ನಡೆದ ಪ್ರಯತ್ನವಾಗಲೀ ಹೇಳಿಕೊಳ್ಳುವಷ್ಟಿರುವುದಿಲ್ಲ. ಸ್ವಾತಂತ್ರ್ಯೋತ್ತರದಲ್ಲಿಯೇ ನಮ್ಮ ಸರಕಾರ ಗ್ರಾಮೋದ್ಧಾರ ಹಾಗೂ ಕೃಷಿ ಸಮಸ್ಯೆಗಳನ್ನು ನೋಡುವ ದೃಷ್ಟಿಯಲ್ಲಿ ಪರಿಮಾರ್ಜನೆಯನ್ನು ಸಾಧಿಸಿತು, ಮತ್ತು ತತ್ಪರಿಣಾಮವಾಗಿಯೇ ಮೂಲಭೂತ ಬದಲಾವಣೆಗೆ ಇಂಬು ಕೊಡುವಂತೆ ಯೋಜನೆಗಳನ್ನು ರಚಿಸಲಾಯಿತು.

ನಮ್ಮಲ್ಲಿಂದು ಜನಪದ ಅಭಿವೃದ್ಧಿ ಯೋಜನೆಗಳು ಕೆಲಸ ಮಾಡುತ್ತಿವೆ. ಇವಕ್ಕೂ ರಾಷ್ಟ್ರೀಯ ವಿಸ್ತರಣಾ ಸೈನ್ಯದ ಚಟುವಟಿಕೆಗಳ ಉದ್ದೇಶದಲ್ಲಿ ಭಿನ್ನತೆ ಇಲ್ಲದಿದ್ದರೂ ಕಾರ್ಯಪ್ರಣಾಳಿಯಲ್ಲಿ ಮಾತ್ರ ತುಸು ಭೇದವಿದೆ- ರಾಷ್ಟ್ರೀಯ ವಿಸ್ತರಣಾ ಯೋಜನೆಯ ಪ್ರತಿಯೊಬ್ಬ ಸದಸ್ಯನೂ ಹಳ್ಳಿಯ ಪ್ರತಿಯೊಬ್ಬ ರೈತನೊಡನೆಯೂ ನಿಕಟ ಸಂಪರ್ಕವನ್ನು ಬೆಳೆಸಿಕೊಳ್ಳುವನಲ್ಲದೆ ಅವರ ಸಾಮೂಹಿಕ ಮನೋಭಾವನೆಯ ಉಪಯೋಗವನ್ನು ಮಾಡಿಕೊಳ್ಳುವನು. ಪ್ರಾರಂಭದಲ್ಲಿ ಈ ರೀತಿಯ ತರಬೇತಿ ಹೊಂದಿದ ನಾಗರಿಕರ ಸೇವೆಯನ್ನು ಭಾರತದ ೧೨೦೦೦೦ ಹಳ್ಳಿಗಳಿಗೆ (ಸುಮಾರು ೮ ಕೋಟಿ ಭಾರತೀಯರಿಗೆ) ಒದಗಿಸಿ ಕೊಡಲಾಗುವುದು. ಇವರು ಅಲ್ಲಲ್ಲಿ ಕೆಲಸ ಮಾಡುತ್ತಿರುವ ಜನಪದ ಅಭಿವೃದ್ಧಿ ಮಂಡಳಿಗಳೊಂದಿಗೆ ಸಹಕರಿಸುವರು. ಸಮಾಜ ವಿಕಾಸ ಯೋಜನೆಗಳು ಆರಿಸಿದ ಹಳ್ಳಿಗಳ ಸರ್ವಾಂಗೀಣ ಪ್ರಗತಿಯ ಉದ್ದೇಶವನ್ನಿಟ್ಟುಕೊಂಡಿವೆ- ಆದರೆ ರಾಷ್ಟ್ರೀಯ ವಿಸ್ತರಣಾ ಯೋಜನೆಯು ಸಂಶೋಧನಾಲಯಗಳಲ್ಲಿ ವ್ಯಕ್ತಗೊಂಡ ಹಾಗೂ ತಜ್ಞರ ತಲೆಯಲ್ಲಿ ಸುಳಿಯುತ್ತಿರುವ ಅಮೂಲ್ಯ ವಿಚಾರಗಳನ್ನು ಹಳ್ಳಿಯ ರೈತನಲ್ಲಿ ತುಂಬಿ ಕೃಷಿಯಲ್ಲಿ ಅಭಿವೃದ್ಧಿಯನ್ನುಂಟುಮಾಡುವ ಧ್ಯೇಯವನ್ನಿಟ್ಟುಕೊಂಡಿದೆ. ಹೀಗೆ ಮಾಡುವಾಗ— ಸಹಕಾರಿ ಪದ್ಧತಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಲಾಗುವುದು. ಹೀಗೆ ಕೃಷಿ ವ್ಯವಸ್ಥೆಯನ್ನು ಪುನರ್ಘಟಿಸಿ ರೈತರಲ್ಲಿ ನವ್ಯಸ್ಫೂರ್ತಿಯನ್ನು ಹೊಸ ಚಟುವಟಿಕೆಯನ್ನು ತುಂಬುವುದಕ್ಕೆ ರಾಷ್ಟ್ರೀಯ ವಿಸ್ತರಣಾ ಸೈನ್ಯದ ೨೦೦೦೦ ಮಂದಿ ತರಬೇತಿ ಹೊಂದಿದ ಕೆಲಸಗಾರರು ಪ್ರಯತ್ನಶೀಲರಾಗುವರು. ಭಾರತದಲ್ಲಿ ಈ ತೆರನಾದ ಸಂಘಟನೆಯನ್ನು ಕೆಲಸಕ್ಕೆ ಹಚ್ಚುವುದು ಇದೇ ಮೊದಲನೆಯ ಸಲವಾಗಿರುತ್ತದೆ. ಸರಕಾರದ ಅಧಿಕಾರಿಗಳನ್ನು ಸ್ಥಾನಭ್ರಷ್ಟರನ್ನಾಗಿ ಮಾಡದೆ, ಅವರ ಸಹಾಯವನ್ನು ಪಡೆದು ಹಳ್ಳಿಯ ರೈತನ ಮನೆಬಾಗಿಲಿಗೆ ಆಧುನಿಕ ಕೃಷಿ ವಿಜ್ಞಾನದ ಮಾಹಿತಿಯನ್ನು ಮುಟ್ಟಿಸುವ ಈ ಪ್ರಯತ್ನವನ್ನು ಎಲ್ಲರ [illegible] ಸನ್ಮಾನವಪ್ಪ

ಹೊಸದಾಗಿ ಇಂಥ ಪ್ರಯತ್ನ ನಡೆಯುತ್ತಿರುವುದರಿಂದ ಹಿಂದೆ ಈ ಬಗೆಯ ಚಟುವಟಿಕೆಗಳಲ್ಲಿ ನಿರತರಾಗಿ ಲಾಭ ಪಡೆದವರಿಂದ ಸ್ಫೂರ್ತಿಯನ್ನೂ ಅವರ ಅನುಭವದ ಪ್ರಯೋಜನವನ್ನೂ ನಾವೆಲ್ಲರೂ ಪಡೆದುಕೊಳ್ಳಬಲ್ಲೆವು. ಜಪಾನು ದೇಶದಲ್ಲಿ ಬತ್ತ ಬೆಳೆಯುವ ಪದ್ಧತಿಯನ್ನು ಪ್ರಾಯೋಗಿಕ ರೂಪದಲ್ಲಿ ಈ ವರ್ಷ ಭಾರತದ ಕೆಲವು ರೈತರು ಅನುಸರಿಸಿರುವುದು ಪರದೇಶಗಳ ಒಳ್ಳೆಯ ಪದ್ಧತಿಯಿಂದ ನಾವು ಲಾಭ ಗಳಿಸಲು ಸಾಧ್ಯವೆಂಬುದನ್ನು ನಿರ್ದೇಶಿಸುವಂತಿದೆ. ಜನಪದ ಅಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೈನ್ಯದ ಚಟುವಟಿಕೆಗಳ ಮಟ್ಟಿಗೆ ನಮಗೆ ಅಮೇರಿಕಾ ದೇಶವು ಯೋಗ್ಯ ಮಾರ್ಗದರ್ಶನವನ್ನು ಮಾಡುವಂತಿದೆ. ಸುಮಾರು ೫೦ ವರ್ಷಗಳಿಂದ ಅಲ್ಲಿ ಹಳ್ಳಿಯ ರೈತನಿಗೆ ವೈಜ್ಞಾನಿಕ ರೀತಿಯಲ್ಲಿ ಕೃಷಿಯನ್ನು ಮಾಡುವ ಕುರಿತು ಅತ್ಯಮೂಲ್ಯವಾದ ಸಲಹೆ ಮತ್ತು ಸಹಾಯಗಳು ಕೊಡಲ್ಪಡುತ್ತಿವೆ. ರೈತರ ಮನೋಭಾವವೂ ಅವರ ಸಮಸ್ಯೆಯೂ ಲೋಕದ ಎಲ್ಲ ಕಡೆಯಲ್ಲಿ ಒಂದೇ ರೀತಿಯಾಗಿರುವುದರಿಂದ— ಅಮೇರಿಕೆಯ ಮಾರ್ಗದರ್ಶನವನ್ನು ನಮ್ಮ ಭಾರತದಲ್ಲಿ ನಾವು ಅಳವಡಿಸಿ [illegible] ಕೊರತೆಗಳು ಸಾಕಷ್ಟು ದೊರೆತರೆ— ಇತರ ಆವಶ್ಯಕತೆಗಳನ್ನು ರೈತನು ಸ್ವಂತ ಪ್ರೇರಣೆಯಿಂದಲೇ [illegible] ಮಾಡಿ ಇಟ್ಟುಕೊಳ್ಳಬಹುದು. ಉತ್ಪಾದನೆಯನ್ನು ಹೆಚ್ಚಿಸಿಕೊಂಡು ನಾಲ್ಕು ಕಾಸು ಸಂಪಾದಿಸಿ ಒಳ್ಳೆಯ ಜೀವನವನ್ನು ನಡೆಸಬೇಕೆಂದು ಪ್ರತಿಯೊಬ್ಬ ರೈತನಿಗೂ ಇದ್ದೇ ಇರುತ್ತದೆ. ಈ ದಿಸೆಯಲ್ಲಿ ಪ್ರಯೋಜನವಾಗುವಂತಿದ್ದರೆ ಅವನು ತಜ್ಞರ ಸಲಹೆಯನ್ನೂ ಮಾರ್ಗದರ್ಶನವನ್ನೂ ಸಹಾಯವನ್ನು ಸ್ವೀಕರಿಸಿ ಪ್ರಯೋಗಿಕ ಕ್ಷೇತ್ರದಲ್ಲಿ ಇಳಿಯಲು ಹಿಂಜರಿಯುವುದಿಲ್ಲ. ಅಮೇರಿಕಾ ದೇಶದಲ್ಲಿ ಸಂಶೋಧನಾಲಯಗಳ ಪ್ರಯೋಜನವು ಕೃಷಿಕರಿಗೆ ನಿತ್ಯ ನಿರಂತರವಾಗಿ ಬೇಗನೆ ಸಿಗುವಂತೆ ಉತ್ತಮ ವ್ಯವಸ್ಥೆಗಳು ಕೈಗೊಳ್ಳಲ್ಪಟ್ಟಿವೆ. ಭಾರತದಲ್ಲಿ ಇಂಥ ವ್ಯವಸ್ಥೆಗೆ ಕೆಲವು ಅಡಚಣೆಗಳು— ನಮ್ಮ ದೇಶದ ವಿದ್ಯಾಲಯಗಳನ್ನು ಹೊಂದಿಕೊಂಡು ಸಂಶೋಧನಾಲಯಗಳ ಸಂಖ್ಯೆ ಬೆಳೆದಿರುವುದಿಲ್ಲ, ರೈತರಲ್ಲಿ ಹೆಚ್ಚಿನವರು ಅನಕ್ಷರಸ್ಥರಾದುದರಿಂದ ಅವರು ಪುಸ್ತಕ ಪ್ರಕಟಣೆಯಿಂದ ಲಾಭ ಹೊಂದುವಂತಿಲ್ಲ. ಸಾಮಾನ್ಯ ರೈತನ ಹಿಡುವಳಿಯು ಚಿಕ್ಕದಾಗಿರುತ್ತದಲ್ಲದೆ ಅದನ್ನು ಬೇಕೆಂಬ ರೀತಿಯಲ್ಲಿ ಅಭಿವೃದ್ಧಿಗೊಳಿಸಲು ಧನ ಸಹಾಯವೂ ಸಾಕಷ್ಟು ಸಿಗುವುದಿಲ್ಲ. ಅಮೇರಿಕಾವು ಇಂದಿಗೆ ತೊಂಬತ್ತು ವರ್ಷಗಳ ಹಿಂದೆ (೧೮೬೨) ಈ ಅತಂಕಗಳನ್ನು ಯಶಸ್ವಿಯಾಗಿ ಎದುರಿಸಲು ಪ್ರಯತ್ನಗಳನ್ನು ಕೈಕೊಂಡಿತು. ಈಗ ನಿರ್ವಾಹಕ ರೈತನ ಮನೆಬಾಗಿಲಿಗೆ ವೈಜ್ಞಾನಿಕ ಕೃಷಿ ಸಲಹೆಯ ಅನುಭವವನ್ನು ಮುಟ್ಟಿಸಿ ರೈತನು ತನ್ನನ್ನು ತಾನೇ ಸುಧಾರಿಸಿಕೊಳ್ಳುವಂತೆ ಮಾಡಿದೆ.

ಕೇವಲ ರತ್ನ ಪ್ರಜಾರಾಜ್ಯದ ವ್ಯವಹಾರಿಕ ಪ್ರಯೋಜನವನ್ನು ಪಡೆಯುವುದಕ್ಕೆ ಇಂಥ ವ್ಯವಸ್ಥೆಗಳಲ್ಲಿ ಮಹತ್ವ ಸಲ್ಲಿಸಲಾಗುವುದು. ಅಮೇರಿಕಾದಲ್ಲಿ ಸರಕಾರದಿಂದ ಪ್ರೋತ್ಸಾಹಿಸಲ್ಪಟ್ಟ ರಾಷ್ಟ್ರೀಯ ವಿಸ್ತರಣಾ ಸೈನ್ಯ ಇದನ್ನು ಮರೆತಿರುವುದಿಲ್ಲ. ಇದಕ್ಕೂ ಹೆಚ್ಚಾಗಿ ಅಲ್ಲಿ ನಡೆಯುವ ಇನ್ನೊಂದು ಚಟುವಟಿಕೆ ಭಾರತೀಯರಿಗೆ ತುಂಬ ಅನುಕರಣೀಯವಾದುದು. ಅದೆಂದರೆ ಸ್ವಯಂ ಸೇವಕರು ಸ್ವಂತ ಪ್ರೇರಣೆಯಿಂದ ಹಳ್ಳಿಗಳ ಉದ್ಧಾರದಲ್ಲಿ ತೊಡಗುವ [illegible] ಸ್ವಯಂಸೇವಕರು ಸಂಘಗಳನ್ನು ಕಟ್ಟಿಕೊಂಡು ಸ್ವಚ್ಛ ವಿಚಾರದಲ್ಲಿ ತಲೆಯನ್ನು ಹಾಕಿ, ಆರ್ಥಿಕ ಪ್ರಾಮಾಣಿಕತೆಯಲ್ಲಿ ಹೃದಯವನ್ನು ತೊಡಗಿಸಿ, [illegible] ಕೈಗಳನ್ನು ಹಚ್ಚಿ, ಉತ್ತಮ ಜೀವನಕ್ಕೋಸ್ಕರ ಆರೋಗ್ಯವನ್ನು ಕಾಪಾಡಿಟ್ಟು ಸುತ್ತಣ ಹಳ್ಳಿಯ ರೈತರ ಉನ್ನತಿಗೋಸ್ಕರ ಪರಿಶ್ರಮ ಪಡುವರು. ಈ ನಾಲ್ಕು ಪ್ರಮಾಣ ವಚನಗಳನ್ನು ಅಂಗೀಕರಿಸಿ ಸ್ವಂತ ಸ್ಫೂರ್ತಿಯಿಂದ ಕೆಲಸಮಾಡುವ ಚಳುವಳಿ ಈಗ ಅಮೇರಿಕಾದಿಂದ ದಕ್ಷಿಣ ಅಮೇರಿಕಾ ಯುರೋಪುಗಳಿಗೆ ಹಬ್ಬಿ, ಅಮೇರಿಕಾದ ವರ್ಚಸ್ಸು ವ್ಯಾಪಿಸಿದ ಜಪಾನು, ಕೊರಿಯಾ, ಫಿಲಿಪೈನ್ಸ್ ದ್ವೀಪಗಳಲ್ಲಿಯೂ ಈ ಆಂದೋಲನ ಬೆಂಬಲ ಪಡೆದಿದೆ. ನವ ಭಾರತಕ್ಕೆ ಇಂಥ ಚಟುವಟಿಕೆಗಳ ಅಗತ್ಯ ಒದಗಿಬರುತ್ತದೆ. ನಮ್ಮ ಯುವ ಜನಾಂಗ ಹಳ್ಳಿಗಳ ಉದ್ಧಾರದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿ ದುಡಿಯುವಂತೆ ಅಮೇರಿಕಾದ ಈ ಸಂಘ ಪ್ರೇರಕವಾಗಬಹುದು. ಈಗಾಗಲೇ ಭಾರತ ಸೇವಕ ಸಮಾಜದಂಥ ಸಂಸ್ಥೆ

(ಮುಂದೆ ಪುಟ ನೋಡಿರಿ)

ಭೂ ಸಮಸ್ಯೆಯ ಪರಿಹಾರಕ್ಕೆ ಮಧ್ಯಂತರ ವ್ಯವಸ್ಥೆ

ನಮ್ಮ ದೇಶದಲ್ಲಿ ಅತಿ ದೊಡ್ಡದಾದ ಮತ್ತು ಜಟಿಲವಾದ ಸಮಸ್ಯೆಗಳಲ್ಲಿ ಭೂಮಿಯ ಪ್ರಶ್ನೆ ಬರುತ್ತದೆಂದೂ ಗಾಂಧೀಜಿಯವರು ಇದನ್ನು ಚೆನ್ನಾಗಿ ತಿಳಿದಿದ್ದರೆಂದೂ ಹೇಳುತ್ತಾ ಶ್ರೀ ಸುರೇಶರಾಮಭಾಯಿಯವರು "ಹರಿಜನ" ಪತ್ರಿಕೆಯಲ್ಲಿ ಈಚೆಗೆ ಬಾಪೂವಿನ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿರುವರು. ದಾಂಡಿಯಾತ್ರೆ, ಉಪ್ಪಿನ ಸತ್ಯಾಗ್ರಹ, ಗಾಂಧಿ-ಆಯರ್ವಿನ್ ಒಪ್ಪಂದಗಳಾಗಿ ಕರಾಚಿಯಲ್ಲಿ ೧೯೩೧ರಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದಾಗ, ಅಲ್ಲಿ ಮೂಲಭೂತ ಹಕ್ಕುಗಳ ಗೊತ್ತುವಳಿಯು ಸ್ವೀಕೃತವಾಯಿತಷ್ಟೆ! ಇವುಗಳಿಂದ ಭೂಮಿಯ ಒಡೆಯರಿಗಿದ್ದ ಶತಮಾನಗಳ ಶಾಂತಿ-ಸುರಕ್ಷತೆಗೆ ಭಂಗ ಬರುವಂತಾಗಿ ಅವರು ಗಾಂಧೀಜಿಯನ್ನು ಕಂಡು ತಮ್ಮ ಚಿಂತೆ-ಭಯಗಳನ್ನು ನಿವೇದಿಸಿಕೊಂಡರು. ಗಾಂಧೀಜಿಯವರು ಅವರ ಸಂಶಯಗಳನ್ನು ಪರಿಹರಿಸುತ್ತಾ "ನ್ಯಾಯವಾದ ಕಾರಣವಿಲ್ಲದೆ ಒಡೆಯ ವರ್ಗದವರ ಖಾಸಗಿ ಆಸ್ತಿಯನ್ನು ಕಸಿದುಕೊಳ್ಳುವಲ್ಲಿ ನಾನೆಂದೂ ಭಾಗಿಯಾಗಲಾರೆನೆಂದು ಆಶ್ವಾಸನವೀಯುತ್ತೇನೆ. ನಿಮ್ಮ ಹೃದಯವನ್ನು ಕರಗಿಸಿ ನಿಮ್ಮನ್ನು ನನ್ನ ಅಭಿಪ್ರಾಯಕ್ಕೆ ಒಲಿಸಿಕೊಂಡು, ನೀವು ನಿಮ್ಮ ರೈತರ ವಿಶ್ವಸ್ತರಾಗಿ ನಿಮ್ಮಲ್ಲಿ ಜಮೀನನ್ನು ಇಟ್ಟುಕೊಂಡು ಅವರ ಉಪಯೋಗವನ್ನು ಅವರ ಹಿತಕ್ಕಾಗಿಯೇ ಮಾಡುವಂತೆ ನೋಡುವುದೇ ನನ್ನ ಉದ್ದೇಶ"ಎಂದು ವಿವರಿಸಿದರು.

ಮಹಾತ್ಮರ ಎಚ್ಚರಿಕೆ

ಈ ಸಂದರ್ಭದಲ್ಲಿ ಗಾಂಧೀಜಿಯವರು ಒಂದು ಎಚ್ಚರಿಕೆಯ ಮಾತನ್ನೂ ಹೇಳಿದರು— "ನಿಮ್ಮ ಭೂಮಿಯ ಒಡೆತನ ನಿಮ್ಮಷ್ಟೇ ನಿಮ್ಮ ರೈತರಿಗೂ ಸೇರಿದ್ದಾಗಿದೆ ಎಂದು ನಿಮಗೆ ಹೇಳಬಯಸುತ್ತೇನೆ; ಮತ್ತು ನೀವು ನಿಮ್ಮ ಲಾಭವನ್ನು ವಿಲಾಸಕ್ಕಾಗಿ ಹಾಳು ಮಾಡದೆ ಅದನ್ನು ರೈತರ ಹಿತಕ್ಕಾಗಿ ಉಪಯೋಗಿಸಬೇಕೆಂದೂ ಹೇಳುತ್ತೇನೆ. ನೀವೊಮ್ಮೆ ನಿಮ್ಮ ರೈತರಲ್ಲಿ ನಿಮ್ಮ ವಿಷಯದಲ್ಲಿ ಬಂಧುಭಾವವನ್ನು ಹುಟ್ಟಿಸಿದ ಪಕ್ಷದಲ್ಲಿ, ಕುಟುಂಬದ ಜನರಂತೆ ನಡೆಸಿಕೊಳ್ಳಲ್ಪಟ್ಟು ತಮ್ಮ ಹಿತಕ್ಕೆ ನಿಮ್ಮಿಂದ ಎಂದಿಗೂ ಧಕ್ಕೆಯುಂಟಾಗದೆಂದು ಸುರಕ್ಷಿತತೆಯ ಭಾವವನ್ನು ಹುಟ್ಟಿಸಿದಲ್ಲಿ, ನಿಮ್ಮ ಮತ್ತು ಅವರ ನಡುವೆ ಘರ್ಷಣೆಯಾಗದು; ಮತ್ತು ವರ್ಗ ಕಲಹವೇಳಲಾರದೆಂದು ನೀವು ನಿಶ್ಚಿಂತರಾಗಿರಬಹುದು."

ಗಾಂಧೀಜಿಯವರಿಗೆ ಭೂಮಿಯ ಒಡೆತನದ ವಿಚಾರದಲ್ಲಿ ಸ್ಪಷ್ಟವಾದ ಅಭಿಪ್ರಾಯವಿದ್ದಿತು. ಬಿಹಾರದ ವೃಂದಾವನದಲ್ಲಿ ೧೯೩೯ರಲ್ಲಿ ಅವರು ರೈತರನ್ನು ಉದ್ದೇಶಿಸಿ ಮಾತನಾಡುವಾಗ "ನೀವು ಉಳುವ ಭೂಮಿ ನಿಮ್ಮದಾಗಬೇಕೆಂಬುದರಲ್ಲಿ ನನ್ನ ವಿಶ್ವಾಸವುಂಟು ಆದರೆ ಜಮೀನ್ದಾರರಿಂದ ನೀವದನ್ನು ಒಮ್ಮೆಲೆ ಕಸಿದುಕೊಳ್ಳಲಾರಿರಿ. ಅಹಿಂಸೆಯೊಂದೇ— ನಿಮ್ಮ ಶಕ್ತಿಯ ತಿಳುವಳಿಕೆಯೊಂದೇ— ಇದಕ್ಕೆ ದಾರಿ" ಎಂದರು. ಇನ್ನೊಂದೆಡೆ ಅವರು "ನಿಜವಾದ ಸಮಾಜವಾದವು ಎಲ್ಲ ಭೂಮಿಯೂ ಗೋಪಾಲನಿಗೆ ಸೇರಿದುದೆಂದು ಕಲಿಸಿದ ಪೂರ್ವಜರಿಂದಲೇ ಬಂದಿರುತ್ತದೆ. ಗೋಪಾಲನೆಂದರೆ ದನ ಕಾಯುವವನು, ಇದರರ್ಥ ದೇವರೆಂದೂ ಆಗುವುದು. ಆಧುನಿಕ ಭಾಷೆಯಲ್ಲಿ ಜನತೆಯೇ ಜನಾರ್ಧನ. ಭೂಮಿ ಎಲ್ಲರ ಸೊತ್ತು" ಎಂದರು.

ರುತಮ್ಮ ಭೂದಾನ ಯಜ್ಞವನ್ನು ಬಾಪೂವಿನ ಕಾರ್ಯವೆಂದು ತಿಳಿದು ಕೈಗೊಂಡಿರುವರು. ಅವರು ಪ್ರತಿಪಾದಿಸುವುದು ಗಾಂಧೀಜಿ ಅಂಗೀಕರಿಸಿದ ಕೆಳಗಿನ ಮೂರು ತತ್ವಗಳನ್ನೇ— (೧) ಎಲ್ಲ ಭೂಮಿಯೂ ಗೋಪಾಲನಿಗೆ ಸೇರಿರುವುದು (೨) ಭೂಮಿ ಮತ್ತು ಸಂಪತ್ತು ಅದನ್ನು ದುಡಿಯುವವರದು (೩) ಜಮೀನುದಾರರು ಸ್ವೇಚ್ಛೆಯಿಂದ ಭೂಮಿ ಕೊಡುವರು.

ಕ್ರಮಕ್ಕೆ ಮಹಾತ್ಮಾ ಗಾಂಧೀಯವರ ಒಪ್ಪಿಗೆಯೂ ಇದ್ದಂತೆ ತೋರುತ್ತದೆ.

ಇಂಥ ಕಾಯಿದೇ ಕ್ರಮಗಳನ್ನು ಸರಕಾರ ತೆಗೆದುಕೊಳ್ಳುವಲ್ಲಿ ಸಾಕಷ್ಟು ಧೈರ್ಯವನ್ನು ತೋರಿಸಿರುತ್ತದೆಯೇ? ಈಗಿನ ಕಾಲವು ಪಕ್ವವಾಗಿಲ್ಲವೆಂದು ಅದು ತಿಳಿದಂತೆ ಕಾಣುವುದಿಲ್ಲ. ಏಕೆಂದರೆ ಪ್ರತಿಯೊಂದು ಸಭೆಯಲ್ಲೂ ಅಧಿವೇಶನದಲ್ಲೂ ಭೂಸುಧಾರಣೆಯ ವಿಷಯವು ಚರ್ಚೆಗೆ ಬರುವುದನ್ನು ನೋಡುತ್ತಿದ್ದೇವೆ. ಆದರೆ ಇವುಗಳ ಪರಿಣಾಮ ರೈತರ ಮೇಲೆ ಯಾವ ರೀತಿಯಾಗಿರುತ್ತದೆ?

ಭೂಸುಧಾರಣೆಯ ಕುರಿತು ಮಾತುಗ

ಒಕ್ಕಲುಗಳ ಹಕ್ಕು ಬಾಧ್ಯತೆಗಳನ್ನು ಮನ್ನಿಸಬೇಕೆಂಬ ಒತ್ತಾಯ

ಜನರ ಪರವಾಗಿ ಭೂಮಿಯು ಸರಕಾರದ ಒಡೆತನದಲ್ಲಿ ಇರುವುದು ಮತ್ತು "ಸ್ವರಾಜ್ಯ ಬಂದ ಬಳಿಕ ಈ ತತ್ವದಲ್ಲಿ ನಂಬಿಗೆಯುಳ್ಳವರ ಕೈಯಲ್ಲಿಯೇ ಅಧಿಕಾರ ಸೂತ್ರವಿರುವುದೆಂದು" ಗಾಂಧೀಜಿ ಆಶಿಸಿದ್ದರು. "ಜಮೀನುದಾರರಲ್ಲಿ ಬಹು ಜನರು ಸ್ವೇಚ್ಛೆಯಿಂದ ಭೂಮಿಯನ್ನು ಬಿಟ್ಟುಕೊಡುವರು, ಮತ್ತು ಹಾಗೆ ಮಾಡದವರು ಕಾಯಿದೆಯಂತೆ ಹಾಗೆ ಮಾಡಬೇಕಾಗಿ ಬರುವುದು" ಎಂಬುದಾಗಿಯೂ ಗಾಂಧೀಜಿಯವರು ಮೀರಾ ಬಹೆನಳೊಡನೆ ಆಗಾಖಾನೆ ಸೆರೆಮನೆಯಲ್ಲಿ (೧೯೪೨) ಹೇಳಿದ್ದರು.

ಕಾಯಿದೆಯೂ ಬೇಕು

ಆಚಾರ್ಯ ವಿನೋಬಾ ಭಾವೆಯವ ಗಾಂಧೀಜೀಯವರ ತತ್ವಗಳನ್ನು ಕಾರ್ಯತ: ಅನುಷ್ಠಾನಕ್ಕೆ ತಂದು ಹೃದಯ ಪರಿವರ್ತನೆಯ ಅದ್ಭುತ ಉದಾಹರಣೆಯನ್ನು ಲೋಕದ ಮುಂದಿಟ್ಟವರಲ್ಲಿ ವಿನೋಬಾ ಅಗ್ರಗಣ್ಯರೆಂಬುದರಲ್ಲಿ ಸಂದೇಹವಿಲ್ಲ ಆದರೆ ಎಲ್ಲ ಜಮೀನುದಾರರೂ ಹೀಗೆ ಹೃದಯ ಪರಿವರ್ತನೆಗೆ ಸಿದ್ಧರಾಗಿದ್ದಾರೆಯೆ? ಎಲ್ಲ ಸಾಮಾಜಿಕ ಕಾರ್ಯಕರ್ತರೂ ವಿನೋಬಾರಷ್ಟು ವರ್ಚಸ್ವಿಯಾದ ವ್ಯಕ್ತಿತ್ವವನ್ನು ಪಡೆದಿರುವರೆ? ಈ ಮಾತನ್ನು ವಿಚಾರಕ್ಕೆ ತೆಗೆದುಕೊಂಡರೆ ಅಹಿಂಸೆಯೇ ಮೂಲವಾಗಿರುವ ಈ ಯಜ್ಞದ ಜೊತೆಗೆ ಸರಕಾರವೂ ಕಾಯಿದೆಯ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯವೆಂದು ಗೊತ್ತಾಗುತ್ತದೆ; ಮತ್ತು ಇಂಥ ಕಾಯಿದೆಯೇ ನಡೆದಿವೆಯಲ್ಲದೆ, ಯಾವುದೇ ಪರಿಣಾಮಕಾರಿ ಕಾಯಿದೆ ಕ್ರಮ ಕೈಗೊಳ್ಳಲ್ಪಟ್ಟಿಲ್ಲ. ಕೆಲವು ರಾಜ್ಯ ಸರಕಾರಗಳು ಭೂದಾನ ಯಜ್ಞವು ಯಶಸ್ವಿಯಾಗಿ ಆಚಾರ್ಯ ವಿನೋಬಾ ಭಾವೆಯವರ ಪ್ರಯತ್ನ ಸಾರ್ಥಕವಾಗುವಂತೆ ಭೂಮಿಯ ಒಡೆತನವನ್ನು ಹಸ್ತಾಂತರಿಸಿ ದಾನ ನೀಡುವ ಕುರಿತು ಸೌಕರ್ಯ ಕಲ್ಪಿಸುವ ಕಾಯಿದೆ ಕ್ರಮಗಳನ್ನು ಕೈಗೊಂಡಿರುತ್ತವೆ ಆದರೆ ಭೂಮಿಯನ್ನು ಉತ್ತು ಸಾಗುಮಾಡುವ ಸಾಮಾನ್ಯ ಒಕ್ಕಲಿಗನ ಹಾಗೂ ಭೂಮಿ ಒಡೆತನ ತನಗೆ ಸೇರಿದ್ದೆನ್ನುವ ಭೂಮಾಲಿಕನ ನಡುವೆ ಸೌಹಾರ್ದ ಸಂಬಂಧವಿರುವಂತೆ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅಗತ್ಯದ್ದಾಗಿದ್ದರೂ ಹಾಗೆ ಮಾಡಿರುವುದಿಲ್ಲ.

ಹೆದರುವ ಮನೋಭಾವ

ಇದರ ಕಾರಣವು ಭೂಸುಧಾರಣೆಯಲ್ಲಿ ಯಾರಿಗೂ ಆಸ್ಥೆ ಇಲ್ಲವೆನ್ನುವುದೇ ಎಂದರೆ—ಅದು ತಪ್ಪು ಅಭಿಪ್ರಾಯವೆಂದು ಪ್ರೊ ವೂಲ್ಫ್ ಐ. ಲಾಡೆಜಿಂಸ್ಕಿಯಂಥ ತಜ್ಞರು ಹೇಳುತ್ತಾರೆ— 'ಸುಧಾರಣಾ ಕ್ರಮದ ಮಾರ್ಗದಲ್ಲಿರುವ ಆತಂಕಗಳು ಹಳ್ಳಿಗಳಲ್ಲಿ ಈಗ ಉಪಲಬ್ಧವಿರುವ ಪರಿಸ್ಥಿತಿಯ ಕುರಿತಾದ ಜ್ಞಾನ ಅಥವಾ ತಜ್ಞರ ಸಲಹೆ ಸೂಚನೆಗಳ ಅಭಾವದ ಮೂಲಕ ಹುಟ್ಟಿಕೊಂಡಿಲ್ಲ. ಬಹಳ ತುರ್ತಾದ ಕ್ರಮವು ಅಗತ್ಯವೆಂದು ಪರಿಸ್ಥಿತಿ ಎತ್ತಿ ಸೂಚಿಸುತ್ತಿದ್ದರೂ ಅದನ್ನು ಒಡನೆಯೇ ಧೈರ್ಯದಿಂದ ಇದಿರಿಸುವುದಕ್ಕೆ ಹೆದರುವ ಅಧಿಕಾರಿಗಳ ಮನೋಭಾವವೇ ಇದಕ್ಕೆ ಹೇತು."

ರೈತರು ತಮ್ಮ ಸಾಗುವಳಿಗೆ ಒಳಪಟ್ಟ ಭೂಮಿಯ ಮೇಲೆ ಸ್ವಾಮಿತ್ವವನ್ನು ಅಪೇಕ್ಷಿಸುವರು—ಆದರೆ ಈ ಸಮಸ್ಯೆಗೆ ಇದೊಂದೇ ಪರಿಹಾರವಲ್ಲ; ಇದಕ್ಕಿಂತಲೂ ಕನಿಷ್ಠ ಶರತಗಳಿಗೆ ರೈತರ ಮನಸ್ಸನ್ನು ಒಪ್ಪಿಸಲು ಸಾಧ್ಯವುಂಟು. ಗೇಣಿಯಲ್ಲಿ ಕಡಿತ ಮಾಡಬೇಕು; ಒಕ್ಕಲೆಬ್ಬಿಸುವ ಪ್ರವೃತ್ತಿ ನಿಲ್ಲಬೇಕು; ಕೃಷಿ ನಿರತರಾದವರ ಕೂಲಿಗೆ ಕನಿಷ್ಠ ಮಿತಿ ಇರಬೇಕು. ಇವುಗಳು ಭೂಸಾಗುವಳಿ ಮಾಡುವ ರೈತರಿಗೆ ಬಹುಕಾಲ ಬಾಳುವ ಸಮಾಧಾನವನ್ನು ಕೊಡುವಂಥವುಗಳಾಗಿರುತ್ತವೆ. ಇಂಥ ಕ್ರಮಗಳನ್ನು ಎಲ್ಲ ಜಮೀನುದಾರರೂ ಸ್ವೇಚ್ಛೆಯಿಂದ ಸ್ವಾಗತಿಸುವರೆಂ

(೧೧ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿವೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

★ ಆಸ್ತಿಕರ ಕಾಯಿದೆಯ ಸ್ಥೂಲ ವಿವರ ★

೧೯೫೩ನೇ ಇಸವಿಯ ಆಸ್ತಿಕರ ಕಾಯಿದೆಯು ಕಳೆದ ಗುರುವಾರ (ದಿನಾಂಕ ೧೫—೧೦—೧೯೫೩) ದಿಂದ ಜ್ಯಾರಿಗೆ ಬಂದಿರುವುದಷ್ಟೆ. ಈ ಕಾಯಿದೆಯು ಒಬ್ಬನ ನಿಧನದ ಕಾರಣದಿಂದ ಹಸ್ತಾಂತರವಾಗುವ ಆಸ್ತಿಯು ಕರಮುಕ್ತ ಪ್ರಮಾಣಕ್ಕಿಂತ ಹೆಚ್ಚು ಇದ್ದರೆ ಅದರ ಬೆಲೆಯ ಮೇಲೆ ಕರವನ್ನು ಹೇರುವ ಮತ್ತು ವಸೂಲು ಮಾಡುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ಕೊಡುತ್ತದೆ. ನಮ್ಮ ಪಾರ್ಲಿಮೆಂಟಿನಲ್ಲಿ ಕಳೆದ ವರ್ಷ ಆಗೋಸ್ತು ತಿಂಗಳಲ್ಲಿ ಈ ಆಸ್ತಿಕರ ಮಸೂದೆಯನ್ನು ಮಂಡಿಸಲಾಯಿತು. ಪಾರ್ಲಿಮೆಂಟಿನ ಎರಡೂ ಸಭೆಗಳು ಇದನ್ನು ಚರ್ಚೆಗೆ ತೆಗೆದುಕೊಂಡು, ಅದನ್ನು ಮನ್ನಿಸಲು ಸುಮಾರು ಒಂದು ವರ್ಷ ಕಾಲ ಹಿಡಿಯಿತು. ಭಾರತೀಯರಿಗೆ ಈ ಕರವು ಹೊಸ ಅನುಭವವಾಗಿದ್ದರೂ- ಭಾರತ ಸರಕಾರವು ಈ ಕರವನ್ನು ಹೊರಿಸುವ ವಿಚಾರವನ್ನು ಬಹಳ ಹಿಂದಿನಿಂದಲೇ ಪರಿಶೀಲನೆಗೆ ತೆಗೆದುಕೊಂಡಿದ್ದಿತು. ಕರಭಾರ ವಿಚಾರಣಾ ಸಮಿತಿಯು ೧೯೨೫ರಲ್ಲಿ ಸರ್ವ ಪ್ರಥಮವಾಗಿ ಆಸ್ತಿಯ ಮೇಲೆ ಕರವನ್ನು ಹೊರಿಸುವ ಸೂಚನೆಯನ್ನು ಮುಂದಿಟ್ಟಿತು. ಆದರೆ ಆ ಸಮಯ ಕೆಲವು ರಾಜಕೀಯ ಸುಧಾರಣೆಗಳು ಬರಲಿದ್ದುದಾದ ಕಾರಣ ಯಾವುದೇ ಕ್ರಮ ಕೈಗೊಳ್ಳಲ್ಪಡಲಿಲ್ಲ. ಮುಂದೆ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಅನೇಕ ಜನರು ಅಪಾರ ಸಂಪತ್ತನ್ನು ಗಳಿಸಿದುದರಿಂದ, ಅವರ ಸೊತ್ತು ಮತ್ತು ಆಸ್ತಿಯ ಮೇಲೆ ಕರ ಹೇರಿದರಾಗಬಹುದೆಂದು ತೋರಿತು. ಹಾಗೆಂದು ೧೯೩೫ನೇ ಇಸವಿಯ ಭಾರತೀಯ ಕಾಯಿದೆಯಂತೆ ಈ ಕರವನ್ನು ಹೇರಲು ಬರುತ್ತಿದ್ದಿಲ್ಲ. ಆದಕ್ಕಾಗಿ ಆ ಕಾಯಿದೆಯಲ್ಲಿ ಯೋಗ್ಯ ತಿದ್ದುಪಡಿ ಮಾಡುವ ಅಗತ್ಯ ಉಂಟಾಯಿತು. ೧೯೪೬ನೇ ಇಸವಿಯಲ್ಲಿ ಒಂದು ವಿಧೇಯಕವು ಮಂಡಿಸಲ್ಪಟ್ಟರೂ ಕಾರಣಾಂತರಗಳಿಂದ ಅದು ಚರ್ಚೆಗೆ ತೆಗೆದುಕೊಳ್ಳಲ್ಪಡಲಿಲ್ಲ. ೧೯೪೮ನೇ ಇಸವಿಯಲ್ಲಿ ನಡುಗಾಲದ ಪಾರ್ಲಿಮೆಂಟಿನಲ್ಲಿ ಈ ವಿಧೇಯಕವನ್ನು ಮರಳಿ ಮಂಡಿಸಿದಾಗ, ಅದು ಪರಿಶೀಲಕ ಸಮಿತಿಯ ಘಟ್ಟವನ್ನು ಮಾತ್ರ ಮುಟ್ಟಿತು; ಮುಂದೆ ನಡುಗಾಲ ಪಾರ್ಲಿಮೆಂಟಿನ ವಿಸರ್ಜನೆಯೊಂದಿಗೆ ಈ ವಿಧೇಯಕವೂ ರದ್ದಾಯಿತು.

ಇದೇ ಅಕ್ಟೋಬರ ೧೫ನೇ ದಿನಾಂಕದಿಂದ ಅನ್ವಯ

ಕಾಯಿದೆಯ ವ್ಯಾಪ್ತಿ

ಈ ಕಾಯಿದೆಯ ಕಲಮುಗಳು ಬಹಳ ಕ್ಲಿಷ್ಟವಾಗಿರುತ್ತವೆ. ಪಾರ್ಲಿಮೆಂಟಿನಲ್ಲಿ ಇದನ್ನು ಕೆಲವು ಸದಸ್ಯರು ಎತ್ತಿತೋರಿಸಿ, ಆಕ್ಷೇಪಿಸಿದ್ದರು. ಆಗ ಅರ್ಥ ಸಚಿವ ಶ್ರೀ ದೇಶಮುಖರು ಬಾಣನ ಸಂಸ್ಕೃತ ನಾಟಕ "ಕಾದಂಬರಿ"ಯ ಶ್ಲೋಕಗಳನ್ನು ಉದಾಹರಿಸಿ ಇವು ಅತ್ಯಂತ ಕ್ಲಿಷ್ಟವಾಗಿದ್ದರೂ ರಸಿಕರನ್ನು ಮೆಚ್ಚಿಸುವಂತೆ ಇರುವುದರಿಂದ, ಆಸ್ತಿಕರ ಕಾಯಿದೆಯೂ ತಜ್ಞ ವಕೀಲರ ಪ್ರೀತಿಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ ಎಂದರು. ಆದರೆ ಸಾಮಾನ್ಯ ಮನುಷ್ಯನ ಪಾಲಿಗೆ ಈ ಕಾಯಿದೆಯ ಅರ್ಥ ವಿವರಣೆ ಮಾಡಿಕೊಳ್ಳುವುದು ಸುಲಭ ಸಾಧ್ಯವಲ್ಲ- ಇದನ್ನು ಮನಗಂಡು ಕೇಂದ್ರ ಕಂದಾಯ ಮಂಡಳದವರು "ಆಸ್ತಿಕರದ ಕುರಿತು ಸೂಚನೆಗಳು" ಎಂದೊಂದು ಚಿಕ್ಕ ವಿವರಣಾ ಪುಸ್ತಕವನ್ನು ಪ್ರಕಟಿಸಿರುವರು. ಅದರಲ್ಲಿ ಕಾಯಿದೆಯ ಕಲಮುಗಳು ತಕ್ಕ ಉದಾಹರಣೆಗಳೊಂದಿಗೆ ವಿವರಿಸಲ್ಪಟ್ಟಿವೆ.

ಆಸ್ತಿಕರ ವಿಧೇಯಕವು ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳನ್ನು ಬಿಟ್ಟು ಉಳಿದ ಭಾರತಕ್ಕೆ ಅನ್ವಯಿಸುತ್ತದೆ. ಭಾರತದ ಎಲ್ಲ ರಾಜ್ಯಗಳಲ್ಲಿರುವ ಸ್ಥಿರ-ಚರ ಆಸ್ತಿಗಳ ಮೇಲೆ ಈ ಕರವನ್ನು ಹೇರಲಾಗುವುದು. ಭಾರತದ ಹೊರಗಿನ ಸ್ಥಿರಾಸ್ತಿಯ ಮೇಲೆ ಈ ಕರವು ಬೀಳುವುದಿಲ್ಲವಾದರೂ ಮರಣ ಕಾಲದಲ್ಲಿ ಒಬ್ಬ ಮನುಷ್ಯನು ಭಾರತದಲ್ಲಿ ನೆಲಸಿದ್ದು, ಅವನಿಗೆ ವಿದೇಶಗಳಲ್ಲಿ ಚರಾಸ್ತಿ ಇದ್ದರೆ, ಅದು ಆಸ್ತಿ ತೆರಿಗೆಗೆ ಅರ್ಹವಾಗುತ್ತದೆ.

ಆಸ್ತಿಯ ಅರ್ಥ ವಿವರಣೆ

ಮರಣಾನಂತರ ಆ ವ್ಯಕ್ತಿಯ ಆಸ್ತಿಯು ಯಾರ ಕೈಗೆಯೇ ಹೋಗಲಿ ಅದನ್ನು ಗಮನಿಸದೆ ಕರಾಕರಣೆಯನ್ನು ಮಾಡಲಾಗುವುದು. ಆಸ್ತಿ ಎಂದರೇನೆಂಬುದನ್ನು ಕಾಯಿದೆಯ ಕೆಲವು ಕಲಮುಗಳಲ್ಲಿ ವಿವರಿಸಿದ್ದು, ಅವುಗಳಲ್ಲಿ ಕೆಳಗಿನವುಗಳೂ ಸಮಾವೇಶವಾಗಿವೆ—(೧) ಸ್ಥಿರ–ಚರ ಆಸ್ತಿಯಲ್ಲಿ ಪಾಲು (೨) ಇಂಥ ಪಾಲಿನ ಮಾರಾಟದಿಂದ ಬರುವ ಹಣ (೩) ಇಂಥ ಹಣವು ಎಲ್ಲಿಯಾದರೂ ತೊಡಗಿಸಲ್ಪಟ್ಟಿದ್ದರೆ ಅದು (೪) ಯಾವುದೇ ಪದ್ಧತಿಯಿಂದ ಒಂದು ವರ್ಗದಿಂದ ಇನ್ನೊಂದಕ್ಕೆ ಪರಿವರ್ತಿಸಲ್ಪಟ್ಟ ಆಸ್ತಿ (೫) ನ್ಯಾಯವಾಗಿ ದೊರೆತಂಥ ಆಸ್ತಿ (೬) ಮೃತನ ಸಾಲ (೭) ವಾದಗ್ರಸ್ತ ಆಸ್ತಿಗಳು (೮) ಹಣಕ್ಕೆ ಪರಿವರ್ತಿಸಲ್ಪಡುವ ಯಾವುದೇ ತರದ ಹಕ್ಕು ಮತ್ತು (೯) ಮೃತನ ಹಕ್ಕು ಇಲ್ಲವೆ ಸಾಲ ರದ್ದತಿಯ ಪರಿಣಾಮವಾಗಿ ದೊರೆಯುವ ಲಾಭ.

ಕೆಲವು ಆಸ್ತಿಗಳು ಮರಣದ ಬಳಿಕ ಹಸ್ತಾಂತರವಾಗುವುದಿಲ್ಲ. ಆದರೂ ಅವುಗಳನ್ನು ಆಸ್ತಿಕರವನ್ನು ಹೇರುವ ಬಗ್ಗೆ ಲೆಕ್ಕಕ್ಕೆ ತೆಗೆದು ಕೊಳ್ಳಲಾಗುವದು--(೧) ಮೃತನು ವಿಲೆವಾರಿ ಮಾಡಬಹುದಾಗಿದ್ದ ಆಸ್ತಿ (೨)ಮರಣದಿಂದ ಪಾಲುಗಾರಿಕೆ ನಷ್ಟವಾಗುವಂತಹ ಆಸ್ತಿ. (ಮಿತಾಕ್ಷರ, ಮರು ಮಕ್ಕತ್ತಾಯಂ ಮತ್ತು ಅಳಿಯಸಂತಾನ ಪದ್ಧತಿಯ ಅವಿಭಕ್ತ ಕುಟುಂಬಗಳಿಗೂ ಇದು ಅನ್ವಯಿಸುತ್ತದೆ. ಆದರೆ ಈ ಅವಿಭಕ್ತ ಕುಟುಂಬದ ಆಸ್ತಿಯಲ್ಲಿ ಪಾಲಿರುವಾತನು ೧೮ ವರ್ಷಕ್ಕೆ ಮೊದಲು ಮೃತ ಪಟ್ಟರೆ ಅವನ ಪಾಲಿನ ಆಸ್ತಿಯ ಮೇಲೆ ಕರಾ ಕರಣೆ ಮಾಡಲಾಗುವುದಿಲ್ಲ. ಆದರೆ ಮಿತಾಕ್ಷರ ಪದ್ಧತಿಯ ಕುಟುಂಬದಲ್ಲಿ ಮೃತನು ೧೮ ವರ್ಷಕ್ಕೆ ಕೆಳಗಿನವನಿದ್ದರೂ ಅವನ ಆಸ್ತಿಯ ಪಾಲಿನಲ್ಲಿ ಇನ್ನೊಬ್ಬ ಪುರುಷ ಭಾಗೀದಾರನಿರದಿದ್ದರೆ ಅದಕ್ಕೆ ಕರ ಅನ್ವಯಿಸುತ್ತದೆ.) (೩) ಮರಣ ನಿರೀಕ್ಷೆಯಿಂದ ದಾನರೂಪದಲ್ಲಿ ಸ್ವೀಕರಿಸಿದ ಆಸ್ತಿ. (ಯಾಕೆಂದರೆ ಇಂಥ ದಾನವು ರದ್ದಾಗುವುದಿಲ್ಲ ಮತ್ತು ಮರಣಕ್ಕೆ ಮೊದಲು ಜ್ಯಾರಿಗೆ ಬರುವುದಿಲ್ಲ) (೪)ಸಾರ್ವಜನಿಕ ಉದ್ದೇಶಗಳಿಗಾಗಿ ಮರಣಕ್ಕೆ ಆರು ತಿಂಗಳು ಪೂರ್ವದಲ್ಲಿ ಮತ್ತು ಬೇರೆ ಉದ್ದೇಶಗಳಿಗಾದರೆ ಎರಡು ವರ್ಷ ಮುಂಚಿತವಾಗಿ ದಾನ ನೀಡಿದ ಆಸ್ತಿ. ಆದರೆ ವಿವಾಹೋದ್ದೇಶದಿಂದ ೫೦೦೦ ರೂಪಾಯಿಗೆ ಮಿಕ್ಕದಂತೆ ತೆಗೆದಿಟ್ಟ ಆಸ್ತಿಗೆ ಇದು ಅನ್ವಯಿಸುವುದಿಲ್ಲ. (೫) ಜೀವಾವಧಿಯವರೆಗೆ ಹಕ್ಕು ಇದ್ದಂಥ ಆಸ್ತಿಯನ್ನು ನಿರ್ದಿಷ್ಟ ಅವಧಿಯಲ್ಲಿ ವಿಲೇವಾರಿ ಮಾಡಿದ್ದರೆ ಅದರ ಮೇಲೆ ಕರ ಬೀಳುವುದು. (೬) ಸಂಯುಕ್ತ ಹೆಸರಿನಲ್ಲಿದ್ದಂಥ ಆಸ್ತಿಯು ಅವರಲ್ಲಿಯೇ ಒಬ್ಬನ ಮರಣಾನಂತರ ಇನ್ನೊಬ್ಬನಿಗೆ ಹೋಗುವಂತಿದ್ದರೆ ಅದು (೭) ಜೀವಾವಧಿಯವರೆಗೆ ಹಕ್ಕು ಇಟ್ಟುಕೊಂಡು ಅನಂತರ ಬಿಟ್ಟುಕೊಟ್ಟ ಆಸ್ತಿ (೮) ವಿಮೆಯ ಹಣವು ಎರಡನೆಯವರ ಕೈಗೆ ಅಧಿಕಾರಪೂರ್ವಕ ಸಿಗುವಂತಿದ್ದರೆ ಇತ್ಯಾದಿ.

ಕೆಲವನಮೂನೆ ಆಸ್ತಿಗಳು ಮರಣ ಕಾರಣದಿಂದ ಹಸ್ತಾಂತರವಾ[illegible] ವಾದುದರಿಂದ, ಅವುಗಳ ಮೇಲೆ ಕರಾಕರಣೆ ಮಾಡಲಾಗುವುದಿಲ್ಲ — (೧) ಕೇವಲ ಆಡಳಿತಗಾರನೆಂದು ಧಾರಣ ಮಾಡಿದ ಆಸ್ತಿ (ಕಂಪೆನಿ ಮೆನೇಜರ, ಗುರುಪೀಠಗಳು ಈ ಕಕ್ಷೆಯಲ್ಲಿ ಬರುತ್ತವೆ. (೨) ವಿಶ್ವಸ್ತನೆಂದು ನೋಡಿಕೊಳ್ಳುತ್ತಿದ್ದ ಆಸ್ತಿ. (ಆ

(೧೦ನೇ ಪುಟ ನೋಡಿರಿ)

ಸೇವಿಂಗ್ಸ್ ಬೇಂಕ್ ಲೆಖ್ಖ ತೆರೆಯುವ ಉಪಯುಕ್ತತೆ

ಬೇಂಕಿನಲ್ಲಿ ಸೇವಿಂಗ್ಸ್ ಲೆಖ್ಖ ತೆರೆಯಲ್ಪಟ್ಟಲ್ಲಿ ನಿಮ್ಮಲ್ಲಿದು ಬ್ಯಾಂಕಿಂಗ್ ವ್ಯವಹಾರದ ಅಭ್ಯಾಸಕ್ಕೆ ಆಸ್ಪದವೀಯುವುದಲ್ಲದೆ, ಅನಾಯಾಸವಾಗಿ ನಿಮ್ಮ ತಿಳುವಳಿಕೆಗೆ ಬಾರದೇನೇ ಖರ್ಚಾಗಿಹೋಗುವ ಚಿಕ್ಕ ಐವೇಜುಗಳೆಷ್ಟೋ ಶೇಖರಿಸಲ್ಪಡುವವು. ನಿಮ್ಮ ಬೇಂಕಿನಲ್ಲಿ ಸೇವಿಂಗ್ಸ್ ಖಾತೆಯೊಂದನ್ನು ತೆರೆದು ಕ್ರಮವಾಗಿ ಹಣವನ್ನು ಪಾವತಿ ಮಾಡುತ್ತ ಬಂದಲ್ಲಿ ಅದು ದೊಡ್ಡ ಮೊತ್ತವಾಗಿ ನೀವು ಹೆಚ್ಚಾಗಿ ಅಪೇಕ್ಷಿಸುವ, ನಿಮ್ಮ ಕುಟುಂಬಕ್ಕೆ ಬೇಕಾದ ಮನೆಮಾರುಗಳನ್ನು ಕೊಂಡುಕೊಳ್ಳುವುದಕ್ಕಾಗಲೀ, ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಲೀ, ಇಲ್ಲವೆ ಇನ್ನಾವುದಾದರೂ ಸದುಪಯೋಗ ಕಾರ್ಯಗಳಿಗಾಗಲಿ ಒದಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯಿರಿ.

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

NOTICE

It is alleged that the Library Security deposit and library subscription amounts collected by the Ex-Librarians, Sri U. Muddu and Sri Peter D'mello (both absconding), during the period from 1—4—1947 to 5—7—1952 have not been accounted for. The undersigned is investigating into the matter with a view to assess the total amount not accounted for by the said Ex-Librarians. Such of the persons who have made payments to the said Ex-Librarians are requested to appear either personally or through their authorised agents before the undersigned at the Municipal Office, Udipi, on any of the days from 26—10—1953 to 29—10—1953 inclusive) between 3 P. M. and 5 P. M. with evidence available with them. Any person who fails to appear will have no claim against the Municipality for the refund of deposits alleged to have been paid to the said Ex-Librarians.

Municipal Office, Udipi, K. Gopala Menon
Dated 15—10—1953. Commissioner.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.



Our Bombay Stockists:-

1) V. N. Shenoy, Bombay 12.

2) N. R. Kamath, General Merchant, Dahanu Road, W. Rly.

ರಾಜಕಾರಣಿಗೆ ಸಾಹಿತಿಯೆಂಬ ಗೌರವ

ಸರ್ ವಿನ್‌ಸ್ಟನ್ ಚರ್ಚಿಲ್ಲರಿಗೆ ನೋಬೆಲ್ ಪುರಸ್ಕಾರ

ಈ ವಾರದ 'ವ್ಯಕ್ತಿ'—ಸರ್ ವಿನ್‌ಸ್ಟನ್ ಚರ್ಚಿಲ್. ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಈ ವರ್ಷ ಇದೀಗ ಎರಡನೇ ಗೋಲು ಹೊಡೆದಿದ್ದಾರೆ. ಬ್ರಿಟಿಷ್ ರಾಣಿಯ ಪಟ್ಟಾಭಿಷೇಕ ಕಾಲಕ್ಕೆ ಅವರು "ಸರ್" ಗೌರವೋಪಾಧಿಯನ್ನು ಸ್ವೀಕರಿಸಿದರು. ದ್ವಿತೀಯ ಯುದ್ಧ ಸಮಾಪ್ತಿಯ ಬೆನ್ನಿಗೆಯೇ ಕೊಡಮಾಡಿದ್ದ ಈ ಗೌರವವನ್ನು ಅವರು ಅಂದು ವಿನಯಪೂರ್ವಕ ನಿರಾಕರಿಸಿದ್ದರೂ—ಈ ವರ್ಷ ಅದನ್ನು ಸ್ವೀಕರಿಸಿ ಕೀರ್ತಿಗಳಿಸಿದರು. ಸ್ಟಾಕ್‌ಹೋಮಿನಿಂದ ಈಗ ತಾನೆ ಬಂದ ವರದಿಯೊಂದು ಸರ್ ವಿನ್‌ಸ್ಟನ್ ಚರ್ಚಿಲ್ಲರ ಕೀರ್ತಿಮಂದಿರಕ್ಕೆ ಕಳಸವಿಡುವಂತಿದೆ. ಈ ವರ್ಷದ ವಿಶ್ವವಂದ್ಯ ಸಾಹಿತಿಯಾಗಿ ಚರ್ಚಿಲ್ಲರನ್ನು ನೋಬೆಲ್ ಪುರಸ್ಕಾರ ಸಮಿತಿಯು ಮನ್ನಿಸಿರುತ್ತದೆ. ಪರಿಣಾಮತಃ ಹತ್ತು ಔನ್ಸು ತೂಕದ ಚಿನ್ನದ ಪದಕವಲ್ಲದೆ ೧೨೫೦ ಪವನುಗಳಷ್ಟು ಬಹುಮಾನವೂ ಚರ್ಚಿಲ್ಲರಿಗೆ ಸಿಗುವುದು. ಈ ಯುದ್ಧಪ್ರಿಯ ರಾಜಕಾರಣಿಯು ಸಾಹಿತ್ಯದ ಪ್ರತಿಯೊಂದೂ ಕ್ಷೇತ್ರದಲ್ಲಿ ಕೈಯಾಡಿಸಿದ ಅಪ್ರತಿಮ ವ್ಯಕ್ತಿ. ಜೀವನಚರಿತ್ರೆ, ಆತ್ಮಚರಿತ್ರೆ, ಪ್ರವಾಸಾನುಭವಗಳಲ್ಲಿ ಇವರದು ನುರಿತ ಕೈ. ಆದರೆ ನಾಳಿನ ಇತಿಹಾಸಕಾರನು ಚರ್ಚಿಲ್ಲರನ್ನು ಗೌರವಿಸುವನಾದರೆ ಅದು ಅವರು ಬರೆದ ಯುದ್ಧಕಾಲದ ಸಂಸ್ಮರಣೆಗಳಿಗೋಸ್ಕರವೇ ನಿಜ. ಚರ್ಚಿಲ್ಲರ ಸತ್ವಯುತವಾದ ಶೈಲಿ ಹಾಗೂ ಪದಗುಂಫನದ ಮಾಧುರ್ಯ ಸಾಹಿತ್ಯಪ್ರಿಯರಿಗೆ ಆಪ್ಯಾಯಮಾನವೆನಿಸಿವೆ. ಪುರಸ್ಕಾರ ಸಮಿತಿಯು ಈ ವೈಶಿಷ್ಟ್ಯವನ್ನು ಮೆಚ್ಚಿಕೊಂಡಿದೆಯಲ್ಲದೆ "ಅತ್ಯುನ್ನತ ಮಾನವೀಯ ಗುಣಗಳ ಸಂರಕ್ಷಕ" ಎಂಬುದಾಗಿ ಚರ್ಚಿಲ್ಲರನ್ನು ಪ್ರಶಂಸಿಸಿದೆ.

ಆಂಧ್ರ ರಾಜ್ಯದಲ್ಲಿ

ಆಂಧ್ರ ಮಂತ್ರಿಮಂಡಳದ ಸಭೆಯೊಂದು ದಿನಾಂಕ ೧೨ರಂದು ಸೇರಿದಾಗ ನವೆಂಬರ ತಿಂಗಳ ೨೩ನೇ ದಿನಾಂಕ ಶಾಸನ ಸಭೆಯ ಮೊದಲನೇ ಅಧಿವೇಶನವನ್ನು ಕರೆಯುವ ನಿರ್ಧಾರವಾಯಿತು. ಗವರ್ನರರ ಭಾಷಣದೊಂದಿಗೆ ಅಂದಿನ ಕಾರ್ಯಕ್ರಮವು ಮೊದಲಾಗುವುದು. ಪ್ರಾರಂಭಿಕ ಕಾರ್ಯಕಲಾಪಗಳನ್ನು ಸಾಗಿಸಲು ಗವರ್ನರರು ತಾತ್ಕಾಲಿಕ ಅಧ್ಯಕ್ಷರನ್ನು ನೇಮಿಸುವರು. ಗವರ್ನರರ ಭಾಷಣಾನಂತರ ಅಧ್ಯಕ್ಷರ ಚುನಾವಣೆಯು ನಡೆಯುವುದು. ಸರಕಾರೇತರ ಕೆಲಸಗಳು ೨೬ನೇ ದಿನಾಂಕ ತೊಡಗುವುವು.

ಆಂಧ್ರ ಮಂತ್ರಿ ಮಂಡಳದ ಈ ಸಭೆಯಲ್ಲಿ ರಾಜ್ಯಚಿಹ್ನದ ಕುರಿತು ಚರ್ಚೆಯೂ ನಡೆಯಿತು. ಅಮರಾವತಿಯ ಸ್ತೂಪದಲ್ಲಿರುವ ಧರ್ಮಚಕ್ರ, ಅಮರಾವತಿ ಸ್ತಂಭದಲ್ಲಿರುವ ಪೂರ್ಣಕುಂಭ ಮತ್ತು ಅಶೋಕ ಸಿಂಹಗಳನ್ನು ಪರಸ್ಪರ ಹೊಂದಿಕೊಳ್ಳುವಂತೆ ಕಲಾತ್ಮಕವಾಗಿ ಸೇರಿಸಿಕೊಳ್ಳಬೇಕೆಂದೂ ಈ ಬಗ್ಗೆ ಕಲಾವಿದರಿಂದ ಚಿತ್ರಗಳನ್ನು ಆಹ್ವಾನಿಸಿ ಯಶಸ್ವಿ ಕಲಾವಿದನನ್ನು ಪುರಸ್ಕರಿಸಬೇಕೆಂದೂ ನಿರ್ಣಯವಾಯಿತು.

ಮಂತ್ರಿ ಮಂಡಳದಲ್ಲಿರುವ ಪ್ರಜಾ ಸಮಾಜವಾದೀ ಪಕ್ಷದ ಆಂಧ್ರ ಶಾಖೆಯ ಅಧ್ಯಕ್ಷ ಶ್ರೀ ವಿಶ್ವನಾಥಂ ಮತ್ತು ಆ ಪಕ್ಷದ ಕಾರ್ಯದರ್ಶಿ ಶ್ರೀ ಸಿ. ಪಿ. ಜೆ. ರಾಜೂರವರಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ತಲೆದೋರಿರುತ್ತವೆ. ಇಬ್ಬರೂ ಪರಸ್ಪರರ ವರ್ತನೆಯನ್ನು ಆರೋಪ ಪ್ರತ್ಯಾರೋಪಗಳಿಂದ ಪ್ರಶ್ನಿಸತೊಡಗಿರುವರು. ಈ ವಿವಾದವನ್ನು ಚರ್ಚೆಗೆ ತೆಗೆದುಕೊಂಡು ಇತ್ಯರ್ಥಕ್ಕೆ ಬರಲು ಪ್ರಜಾಸಮಾಜವಾದೀ ಪಕ್ಷದ ಸಭೆಯು ಸದ್ಯದಲ್ಲಿಯೇ ಸೇರಲಿದೆ.

ಕೃಷಿಕರ ಲೋಕಪಕ್ಷವು ಕಾಂಗ್ರೆಸಿನೊಂದಿಗೆ ಸಂಬಂಧ ಕಡಿದುಕೊಂಡಿದ್ದರೂ ಮಂತ್ರಿಮಂಡಳದಲ್ಲಿ ಶ್ರೀ ಲಚ್ಚಣ್ಣನವರನ್ನು ಸೇರಿಸಲು ಪ್ರಯತ್ನಗಳು ನಡೆಯುತ್ತಿವೆಯೆಂದೂ ಶ್ರೀ ಪ್ರಕಾಶಂರು ಇನ್ನೊಬ್ಬ ಮಂತ್ರಿಯನ್ನು ಸೇರಿಸಿಕೊಳ್ಳುವುದರ ಮೂಲಕ ಮಂತ್ರಿಮಂಡಳವನ್ನು ವಿಸ್ತರಿಸುವ ವಿಚಾರದಲ್ಲಿರುವರೆಂದೂ ತಿಳಿದಿದೆ.

ಕರ್ನೂಲನ್ನು ರಾಜಧಾನಿಯಾಗಿ ಸಿಂಗರಿಸುವುದಕ್ಕೋಸ್ಕರ ಕೇಂದ್ರ ಸರಕಾರ ನೀಡಿದ ೪೦ ಲಕ್ಷ ರೂಪಾಯಿಗಳ ಸಹಾಯಧನ ಮುಗಿದು ಹೋಗಿತೆಂದೂ ಇನ್ನೂ ಸೌಕರ್ಯಗಳನ್ನು ಒದಗಿಸುವುದು ಬಾಕಿಯುಳಿದಿರುವುದರಿಂದ ಕೇಂದ್ರದಿಂದ ಹೆಚ್ಚಿನ ಸಹಾಯ ದೊರೆಯುವ ಅಗತ್ಯವಿದೆಯೆಂದೂ ಆಂಧ್ರ ಸರಕಾರ ಹೇಳುತ್ತದೆ.

ಕಲ್ಯಾಣ ಕೇಂದ್ರಗಳಿಗೆ ನೆರವು

ಯೋಗ್ಯ ಕಂಡ ಸಮಾಜ ಕಲ್ಯಾಣ ಕೇಂದ್ರ ಹಾಗೂ ಸಂಸ್ಥೆಗಳಿಗೆ ಸಹಾಯ ನೀಡುವುದಕ್ಕೋಸ್ಕರ ಯೋಜನಾ ಆಯೋಗ ತೆಗೆದಿಟ್ಟ ೪ ಕೋಟಿ ರೂಪಾಯಿಗಳ ವಿತರಣೆಯನ್ನು ವಿಚಾರ ಮಾಡಲು ಕೇಂದ್ರ ಸರಕಾರವು ಸಮಾಜ ಕಲ್ಯಾಣ ಮಂಡಳದ ಸಲಹಾ ಸಮಿತಿಗಳ ರಚನೆಯನ್ನು ಈಗ ಪೂರ್ಣಗೊಳಿಸಿರುತ್ತದೆ. ಈ ಸಮಿತಿಯ ಸದಸ್ಯರು ಸಹಾಯಧನವನ್ನು ಅಪೇಕ್ಷಿಸಿದ ಸಮಾಜ ಕಲ್ಯಾಣ ಕೇಂದ್ರಗಳ ಸಂದರ್ಶನ ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು. ಇದರಲ್ಲಿ ನುರಿತ ಸಾಮಾಜಿಕ ಕಲ್ಯಾಣ ಕಾರ್ಯಕರ್ತರನ್ನು ನೇಮಿಸಲಾಗಿದ್ದ ಮಹಿಳಾ ಸದಸ್ಯೆಯರೇ ಅಧಿಕ ಇರುವರು. ನವೆಂಬರ ಮಧ್ಯದಲ್ಲಿ ಸೇರಲಿರುವ ಮಂಡಳದ ಸಭೆಯಲ್ಲಿ ಇವರು ತಮ್ಮ ಸಂದರ್ಶನದ ವರದಿಯನ್ನು ಒಪ್ಪಿಸಲಿರುವರು. ಮಂಡಳದ ಸಭೆಯು ಈ ವರದಿಯಲ್ಲಿನ ಅಂಶಗಳನ್ನು ಪರಿಶೀಲಿಸಿ ಸಹಾಯಧನದ ಮೊತ್ತವನ್ನು ನಿರ್ಧರಿಸುವುದು, ಅಲ್ಲದೆ ಸಹಾಯ ಧನವನ್ನು ಅಪೇಕ್ಷಿಸಿದ ಸಂಸ್ಥೆಗಳು ಯಾವ ರೀತಿ ಮುನ್ನಡೆಯತಕ್ಕದ್ದೆಂಬ ಕುರಿತು ಯೋಗ್ಯ ಮಾರ್ಗದರ್ಶನವನ್ನೂ ಪಂಚವಾರ್ಷಿಕ ಯೋಜನೆಯ ಉದ್ದೇಶಗಳಿಗೆ ಪೂರಕವಾಗುವಂತೆ ಅವುಗಳ ಕಾರ್ಯಪ್ರಣಾಳಿ ಇರುವ ಬಗ್ಗೆ ಸೂಚನೆಯನ್ನೂ ಕೊಡುವುದು. ಆದರೆ ಈ ಸಮಿತಿಯ ಮುಂದಿರುವ ಅವಧಿಯು ಅತ್ಯಲ್ಪವಾಗಿರುವುದರಿಂದ, ಎಲ್ಲ ಸಾಮಾಜಿಕ ಕಲ್ಯಾಣ ಸಂಸ್ಥೆಗಳೊಂದಿಗೆ ಸದಸ್ಯರು ಸಂಪರ್ಕ ಸ್ಥಾಪಿಸಿಕೊಳ್ಳಲು ಸಾಕಷ್ಟು ಅವಕಾಶವಿಲ್ಲದೆ ಹೋಗುವ ಭಯವಿರುತ್ತದೆ. ಸಾಕಷ್ಟು ವಿವರವಾದ ಪರಿಶೀಲನೆಯಿಲ್ಲದೆ ಸ್ಥೂಲವಾದ ಅಂಶಗಳ ಆಧಾರದ ಮೇಲೆ ರಚಿತವಾದ ವರದಿಯಂತೆ ಸಹಾಯಧನ ಹಂಚುವಾಗ ನ್ಯೂನಾತಿರೇಕಗಳುಂಟಾಗುವುದು ಸಹಜ. ಇದನ್ನು ದಕ್ಷತೆಯಿಂದ ತಪ್ಪಿಸಲು ಪ್ರಯತ್ನಿಸುವುದರಲ್ಲಿ ಸಮಿತಿಯ ಸದಸ್ಯರು ಹಿಂದುಳಿಯಬಾರದು.

ತುಂಗಭದ್ರೆ ಮತ್ತು ಲಕ್ಕವಳ್ಳಿ

ಕೇಂದ್ರಸರಕಾರವು ಮೈಸೂರು ಸರಕಾರಕ್ಕೆ ತುಂಗಭದ್ರ ಅಣೆಕಟ್ಟಿನ ಕೆಲಸವನ್ನು ನಿರಾತಂಕವಾಗಿ ಮುಂದುವರಿಸಿಕೊಂಡು ಹೋಗುವುದಕ್ಕೆ ೪೬ ಲಕ್ಷ ರೂಪಾಯಿಗಳ ಸಹಾಯವನ್ನು ಕೊಟ್ಟಿದೆ. ಇದರಲ್ಲಿ ೪೨ ಲಕ್ಷ ರೂಪಾಯಿಗಳು ನೀರಾವರಿ ಕೆಲಸಗಳಿಗಾಗಿಯೂ ೪ ಲಕ್ಷ ರೂಪಾಯಿ ವಿದ್ಯುಚ್ಛಕ್ತಿಯ ಕಾರ್ಯಕ್ಕೂ ವ್ಯಯವಾಗುವುದು. ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯು ಈಚೆಗೆ ಹೊಸ ದೆಹಲಿಯಲ್ಲಿ ಸೇರಿದಾಗ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಇದು ವರೆಗೆ ಮದ್ರಾಸು ಸರಕಾರ ನೋಡಿಕೊಳ್ಳುತ್ತಿದ್ದ ತುಂಗಭದ್ರಾ ಅಣೆಕಟ್ಟಿನ ಕೆಲಸಕ್ಕೆ ಮೈಸೂರು ಅನಿರೀಕ್ಷಿತವಾಗಿಯೇ ಹೆಗಲುಕೊಡಬೇಕಾಗಿ ಬಂದಿತೆಂದೂ ಮೈಸೂರು ಸರಕಾರದ ಮುಂಗಡ ಪತ್ರದಲ್ಲಿ ಈ ವೆಚ್ಚವನ್ನು ಕಾಣಿಸಿರುವುದಿಲ್ಲವೆಂದೂ ಆದ ಕಾರಣ ಕೇಂದ್ರದ ಸಹಾಯ ಅತ್ಯಗತ್ಯವೆಂದೂ ತಮ್ಮ ಬೇಡಿಕೆಯನ್ನು ಮುಂದಿಟ್ಟಿದ್ದರು. ಅದರ ಪರಿಣಾಮವಾಗಿ ಈ ಸಾಲ ದೊರೆತಿದೆ.

ಇದಲ್ಲದೆ ಮೈಸೂರಿನಲ್ಲಿ ಪಂಚವಾರ್ಷಿಕ ಯೋಜನೆಯಂತೆ ನಡೆಯುವ ಲಕ್ಕವಳ್ಳಿ ಯೋಜನೆಯನ್ನು ಪೂರ್ಣಗೊಳಿಸಲು ಮೂರು ಕೋಟಿ ರೂಪಾಯಿಗಳ ಸಾಲವನ್ನು ಕೇಂದ್ರ ಸರಕಾರ ಮೈಸೂರಿಗೆ ನೀಡಿದೆ. ಇದು ವರೆಗೆ ಒಂದು ಕೋಟಿ ರೂಪಾಯಿಗಳನ್ನು ಮೈಸೂರು ಸರಕಾರವು ಈ ಯೋಜನೆಗೆ ವ್ಯಯಮಾಡಿದೆ. ಈಚೆಗೆ ಹಣದ ಅಭಾವ ಕಂಡು ಬಂದುದರಿಂದ ಯೋಜನೆಯನ್ನು ನಿಧಾನವಾಗಿ ಮುಂದುವರಿಸಲು ಸರಕಾರ ನಿರ್ಧರಿಸಿತು. ಈ ಯೋಜನೆಯ ಪ್ರಥಮ ಘಟ್ಟದಲ್ಲಿ ಅಣೆಕಟ್ಟು ನದಿಯ ನೀರಿನ ಮಟ್ಟದ್ಯಾಂತ ೩೫ ಅಡಿಗಳಷ್ಟು ಎತ್ತರವಿರುತ್ತದೆ. ಯೋಜನೆ ಪೂರ್ಣಗೊಂಡಾಗ ಈ ಎತ್ತರ ೧೫೨ ಅಡಿಗಳಷ್ಟಾಗುತ್ತದೆ. ಉದ್ದ ೧೪೦೦ ಅಡಿಗಳಾಗುತ್ತದೆ. ಆಳವಾದ ನದಿಯ ಪಾತ್ರದಿಂದ ಅಣೆಕಟ್ಟಿನ ತುದಿ ೨೩೦ ಅಡಿಗಳಷ್ಟು ಎತ್ತರವಿರುತ್ತದೆ. ೧೫೦೦೦೦ ಎಕ್ರೆ ಜಮೀನಿಗೆ ಇದು ನೀರುಣಿಸಿ, ಶಿವಮೊಗ್ಗಾ, ಚಿತ್ರದುರ್ಗಾ, ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಸಮೃದ್ಧ ಮಾಡುತ್ತದೆ. ಈಚೆಗೆ ರಾಮಮೂರ್ತಿ ಸಮಿತಿಯು ಮದ್ರಾಸು, ಮೈಸೂರು ಮತ್ತು ಹೈದರಾಬಾದು ರಾಜ್ಯಗಳಲ್ಲಿ ಬರಗಾಲದ ನಿವಾರಣೋಪಾಯಗಳ ಕುರಿತು ಸಲಹೆ ನೀಡಿದಾಗ, ಲಕ್ಕವಳ್ಳಿಯ ಯೋಜನೆಗೆ ಪ್ರಾಶಸ್ತ್ಯ ಕೊಡಬೇಕೆಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದಿತು. ಕೇಂದ್ರ ಸರಕಾರವನ್ನು ಈ ಯೋಜನೆ ತ್ವರಿತದಲ್ಲಿಯೇ ಮುಗಿಯುವಂತೆ ಮೈಸೂರು ಒತ್ತಾಯ ಪಡಿಸಿದುದರಿಂದ, ಮೂರು ಕೋಟಿ ರೂಪಾಯಿಗಳ ನೆರವು ದೊರೆಯಿತು.

ಧರ್ಮಾರ್ಥ—ಮುಕ್ತಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3

ಬೇಕಾಗಿದ್ದಾರೆ

ಕಾರ್ಕಳ ತಾಲೂಕು ಯರ್ಲಪಾಡಿ ಗ್ರಾಮದ ಅನಂತಮತಿ ಎಯಿಡೆಡ್ ಎಲಿಮೆಂಟರಿ ಶಾಲೆಗೆ ಹಾಯರ್ ಗ್ರೇಡ್ ತರಬೇತುಹೊಂದಿದ ಉಪಾಧ್ಯಾಯರು ಯಾ ಉಪಾಧ್ಯಾಯಿನಿಯರು ಒಬ್ಬರು ಬೇಕಾಗಿದ್ದಾರೆ. ಅಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ತಾರೀಕು 1—11—53ರ ಒಳಗೆ ತಮ್ಮ ಅರ್ಜಿಯನ್ನು ಕಳುಹಿಸತಕ್ಕದ್ದು.

The Manager,
Ananthamathi aided Ele. School, Hokkadka
Post. YERLAPADY, S. K.
ಯರ್ಲಪಾಡಿ, ತಾ. 19—10—53

ಬೇಕಾಗಿದ್ದಾರೆ

ಹೊಸ ನಮೂನೆಯ ಫೌಂಟನ್ ಪೆನ್ನುಗಳನ್ನು ಆಕರ್ಷಕ ಶರ್ತಗಳಿಂದ ವ್ಯಾಪಾರ ಮಾಡಲು ಏಜಂಟರು ಬೇಕಾಗಿದ್ದಾರೆ. ಸ್ಟ್ಯಾಂಪಲು ಮತ್ತು ಮಾಹಿತಿಪತ್ರಕ್ಕೆ ಬರೆಯಿರಿ:

Standard Pen House (N.U.)
Bhandari Street, BOMBBY 3.

ನಿಮಗೆ ಸುಲಭದಲ್ಲಿ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಸುಲಭದಲ್ಲಿ ಇಂಗ್ಲಿಷ್

ಎಂಬ ಆಂಗ್ಲ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ: ಸಾದಾಪ್ರತಿ 1—8—0
ಉತ್ತಮ ಪ್ರತಿ ರೂ. 2—0—0
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಶನ್!
ಎಲ್ಲಾ ತರದ ಕನ್ನಡ ಪುಸ್ತಕಗಳೂ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೊಲೊಂಬೋ ಯೋಜನೆಯ ವಿಮರ್ಶೆ

ಏಶಿಯಾದ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ನೆರವು

ಕೊಲೊಂಬೋ ಯೋಜನೆಯ ಪ್ರಗತಿಯನ್ನು ವಿಮರ್ಶಿಸಲು ಹೊಸದೆಹಲಿಯಲ್ಲಿ ಸಭೆಯೊಂದು ಜರಗಿತು. ವಿಸ್ತೃತವಾದ ವರದಿಯೊಂದನ್ನು ಅದು ಅಂಗೀಕರಿಸಿದ್ದು, ಅದರಲ್ಲಿ ಇದುವರೆಗೆ ಕೈಗೂಡಿಸಿದ ಪ್ರಗತಿಯ ಚಿತ್ರವನ್ನು ಕೊಡಲಾಗಿರುವುದು. ಮಾತ್ರವಲ್ಲ ಕೊಲೊಂಬೋದಲ್ಲಿ ಪ್ರಚಾರ ಕಾರ್ಯಕ್ಕೋಸ್ಕರ ಸುದ್ದಿಶಾಖೆಯ ಕೇಂದ್ರವೊಂದನ್ನು ತೆರೆಯಬೇಕೆಂದೂ ನಿರ್ಣಯವಾಗಿರುವುದು. ಐದು ದಿನಗಳ ಪರಿಷತ್ತಿನ ಬಳಿಕ ಹೊರಬಿದ್ದ ಪ್ರಕಟಣೆಯಂತೆ, ಕೊಲೊಂಬೊ ಯೋಜನೆಯಲ್ಲಿ ಭಾಗ ವಹಿಸಿರುವ ರಾಷ್ಟ್ರಗಳು ತಮ್ಮ ಕಾರ್ಯಕ್ರಮವನ್ನು ಯಶಸ್ವಿಯಾಗಿ ಕೈಗೂಡಿಸುವ ಭರವಸೆಯನ್ನು ತಳೆದಿರುವವೆಂದು ಹೇಳಲ್ಪಟ್ಟಿದೆ. ಕೃಷಿ, ವಿದ್ಯುತ್ತು, ಸಾರಿಗೆ—ಸಂಪರ್ಕ ಮುಂತಾದ ಕ್ಷೇತ್ರಗಳಲ್ಲಿ ಒಳ್ಳೆಯ ಪ್ರಗತಿಯಾಗಿರುವುದನ್ನು ಕಂಡು ಪರಿಷತ್ತು ತೃಪ್ತಿ ಸೂಚಿಸಿರುವುದಲ್ಲದೆ, ಯಂತ್ರ ಸಾಮಾಗ್ರಿ ಹಾಗೂ ಇತರ ಸರಕುಗಳ ಆಯಾತ—ನಿರ್ಯಾತ ಪ್ರಮಾಣವೂ ತೃಪ್ತಿಕರವಾಗಿರುವುದೆಂದು ಅದು ಒಪ್ಪಿದೆ. ಆದರೆ ಯೋಜನೆಯನ್ನು ಕಾರ್ಯರೂಪಕ್ಕಿಳಿಸುವಲ್ಲಿ ವೆಚ್ಚವು ಮಾತ್ರ ಹೆಚ್ಚುತ್ತಿದೆಯೆಂದೂ ಆದ ಕಾರಣ ಆಯಾದೇಶೀಯ ಸಾಧನ ಸಂಪತ್ತುಗಳನ್ನೆಲ್ಲ ಸೂರೆಗೊಳ್ಳುವುದಲ್ಲದೆ ವಿದೇಶೀ ಸರಕಾರಗಳ ಸಹಾಯವನ್ನೂ ಹೆಚ್ಚಾಗಿ ಸ್ವಾಗತಿಸುವ ಅಗತ್ಯ ಬೀಳುವುದೆಂದೂ ಪರಿಷತ್ತು ನಿರ್ಣಯಿಸಿದೆ. ಕೊಲೊಂಬೋ ಯೋಜನಾ ಪ್ರದೇಶದಲ್ಲಿ ಸೇರಿರದ ಅಮೇರಿಕಾ, ಬ್ರಿಟನ್, ಆಸ್ಟ್ರೇಲಿಯಾ, ಕೆನಡಾ, ನ್ಯೂಜೀಲೇಂಡಗಳಂಥ ರಾಷ್ಟ್ರಗಳು ಆಗ್ನೇಯ ಹಾಗೂ ದಕ್ಷಿಣ ಏಶ್ಯಾದ ಈ ಅಭಿವೃದ್ಧಿ ಯೋಜನೆಗೆ ಒಂದು ನೂರು ಕೋಟಿ ಡಾಲರುಗಳ ಸಹಾಯವನ್ನು ಸ್ವೇಚ್ಛೆಯಿಂದ ಕೊಟ್ಟಿವೆ.

ನಮ್ಮ ಅಭಿವೃದ್ಧಿ

ಯೋಜನೆಯು ಜ್ಯಾರಿಗೆ ಬಂದಂದಿನಿಂದ ಇದು ವರೆಗೆ ದೊರೆತ ಸರಕು, ಯಂತ್ರತಂತ್ರ ಹಾಗೂ ಧನ ಸಹಾಯದ ವಿವರವನ್ನು ಪರಿಷತ್ತಿನ ವರದಿ ಒಳಗೊಂಡಿರುವುದು. ಭಾರತವು ಈ ಯೋಜನೆಯಲ್ಲಿ ಹೊರಗೆ ಕೊಡುವುದಕ್ಕಿಂತಲೂ ಹೆಚ್ಚಾಗಿ ತಾನೇ ಸಹಾಯವನ್ನು ಸ್ವೀಕರಿಸಿರುತ್ತದೆ. ಭಾರತದಲ್ಲಿ ೧೯೫೨-೫೩ನೇ ವರ್ಷದಲ್ಲಿ ೩೫ ಲಕ್ಷ ಎಕ್ರೆ ಜಮೀನುಗಳಿಗೆ ನೀರಾವರಿಯ ಸೌಕರ್ಯ ದೊರೆಯಿತು. ಕೇಂದ್ರ ಟ್ರ್ಯಾಕ್ಟರು ಮಂಡಳವು ೫೧೦೦೦೦ ಎಕ್ರೆ ಜಮೀನನ್ನು ಸಾಗುವಳಿಗೆ ಹಸನುಮಾಡಿತು. ಒಳ್ಳೆಯ ಹವಾಮಾನ ಹಾಗೂ ಮನುಷ್ಯಪ್ರಯತ್ನಗಳ ಸಂಯುಕ್ತ ಫಲವಾಗಿ ಆಹಾರೋತ್ಪಾದನೆಯು ಶೇಕಡಾ ಐದರಷ್ಟು ಹೆಚ್ಚಿಕೊಂಡಿತು. ಭಾಕ್ರಾ-ನಾಂಗಲ, ಹಿರಾಕುದು, ತುಂಗಭದ್ರಾ ಹಾಗೂ ದಾಮೋದರ ನದೀ ಕಣಿವೆಯಂಥ ಯೋಜನೆಗಳು ತೃಪ್ತಿಕರ ಪ್ರಗತಿಯನ್ನು ತೋರಿಸಿದವು. ೩೧೫೦೦೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯ ಉತ್ಪಾದನೆ ಹೆಚ್ಚಿಕೊಂಡಿತು. ಸಿಂಧ್ರಿಯ ಗೊಬ್ಬರ ಕಾರ್ಖಾನೆ, ಚಿತ್ತರಂಜನದ ರೈಲ್ವೆಯಂತ್ರ ಕಾರ್ಖಾನೆ, ಬೆಂಗಳೂರಿನ ಟೆಲಿಫೋನು ಕಾರ್ಖಾನೆಗಳು ಉತ್ಪಾದನೆಯನ್ನು ತೊಡಗಿದವು. ವಿಶಾಖಪಟ್ಟಣದಲ್ಲಿ ಮೂರು ಹಡಗಗಳನ್ನು ನಿರ್ಮಿಸಲಾಯಿತು. ಉಕ್ಕು ಮತ್ತು ಕಬ್ಬಿಣವನ್ನು ಉತ್ಪಾದಿಸುವ ಎರಡು ಪ್ರಮುಖ ಕಾರ್ಖಾನೆಗಳು ವಿಸ್ತರಣೆಹೊಂದಿದವು. ಮುಂಬಯಿಯಲ್ಲಿ ಎರಡು ತೈಲ ಶುದ್ಧೀಕರಣ ಕಾರ್ಖಾನೆಗಳು ತಲೆಎತ್ತುವ ಸಿದ್ಧತೆ ಭರದಿಂದ ನಡೆದಿದೆ. ಯುದ್ಧೋತ್ತರ ದಿನಗಳಲ್ಲಿಯೇ ಹೊಸ ಸಾಖಲೆ ಸ್ಥಾಪಿಸುತ್ತಾ ಬಟ್ಟೆಯ ಕೈಗಾರಿಕೆ ೪೭೦ ಕೋಟಿ ಗಜ ಬಟ್ಟೆಯನ್ನು ಉತ್ಪಾದಿಸಿರುತ್ತದೆ. ಕಲ್ಲಿದ್ದಲಿನ ಉತ್ಪಾದನೆಯು ೧೯೫೦ರಲ್ಲಿ ೩೨೦ ಲಕ್ಷ ಟನ್ನು ಇದ್ದುದು ೧೯೫೩ರಲ್ಲಿ ೩೬೦ಲಕ್ಷ ಟನ್ನಿಗೆ ಏರಿರುತ್ತದೆ. ಈ ಅವಧಿಯಲ್ಲಿ ಉಕ್ಕಿನ ಉತ್ಪಾದನೆ ೧೦,೦೪,೦೦೦ ಟನ್ನುಗಳಿಂದ ೧೧,೩೦,೦೦೦ ಟನ್ನಿಗೆ ಮುಟ್ಟಿರುತ್ತದೆ.

ಹಾರ್ದಿಕ ಪ್ರಶಂಸೆ

ಭಾರತ ದಿನದಿಂದ ದಿನಕ್ಕೆ ಹೊಂದುತ್ತಿರುವ ಈ ತೆರನಾದ ಪ್ರಗತಿಯನ್ನು ಪ್ರಧಾನ ಮಂತ್ರಿ ನೆಹರೂರವರು ತುಂಬ ಮೆಚ್ಚಿಕೊಂಡಿರುವರು. ದಿನಾಂಕ ೧೩ರಂದು ಅವರು ಕೊಲೊಂಬೋ ಯೋಜನೆಯ ಸಲಹಾ ಸಮಿತಿಯ ಸಭೆಯನ್ನು ಉದ್ಘಾಟಿಸುತ್ತಾ ದಕ್ಷಿಣ ಹಾಗೂ ಆಗ್ನೇಯ ಏಶಿಯಾದ ಜನತೆಯಲ್ಲಿ ತಮ್ಮ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಮತ್ತು ಸಾಮಾಜಿಕ ನ್ಯಾಯವನ್ನು ಪಡೆಯಲು ಪ್ರಬಲವಾದ ಬಯಕೆ ಇರುತ್ತದೆಂದೂ ಈ ಹಿನ್ನೆಲೆಯಲ್ಲಿ ದೂರದೃಷ್ಟಿಯಿಂದ ಯೋಜನೆಯ ಅಧ್ವರ್ಯುಗಳು ಕೆಲಸ ಮಾಡಬೇಕೆಂದೂ ಹೇಳಿದರು. ಮಾತ್ರವಲ್ಲ "ಇಲ್ಲಿಯ ಜನರಿಗೆ ತಾವು ಈ ಮಹಾಸಾಹಸದ ಪಾಲುದಾರರೆಂಬ ಅರಿವಾಗುವಂತೆ ಮಾಡಬೇಕು" ಎಂದು ನೆಹರೂ ಸಲಹೆಮಾಡಿದರು. ಭಾರತದ ಉದಾಹರಣೆಯನ್ನು ಅಭಿಮಾನದಿಂದ ಮುಂದಿಡುತ್ತಾ ನೆಹರೂರವರು "ನಾವಿಲ್ಲಿ ಅವಸರದ ಪ್ರಯತ್ನವೆಂದು ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಅಭಿವೃದ್ಧಿ ಕಾರ್ಯಗಳನ್ನು ತೊಡಗಿರದೆ ಅತ್ಯುನ್ನತವಾದ ಸ್ಥಾನಮಾನವನ್ನೂ ಸಾಮಾಜಿಕ ನ್ಯಾಯದ ತಳಹದಿಯನ್ನೂ ಕೊಟ್ಟು ಕೆಲಸಕ್ಕೆ ಪ್ರಾರಂಭಿಸಿರುವೆವು. ಸಾಮಾನ್ಯ ರೈತನಲ್ಲಿ ಕೂಡ ಕ್ಷಿಪ್ರ ಅಭಿವೃದ್ಧಿಯ ಕುರಿತು ಅಸ್ಪಷ್ಟ ವ್ಯಾಮೋಹಗಳನ್ನು ಕಾಣಬಲ್ಲೆವು ಎಲ್ಲೆಲ್ಲಿಯೂ ಹೆಚ್ಚು ಸಂಪರ್ಕಾನುಕೂಲತೆ, ಹೆಚ್ಚು ರಸ್ತೆಗಳು ಮತ್ತು ಹೆಚ್ಚು ಶಾಲೆಗಳು ಬೇಕೆಂಬ ಬೇಡಿಕೆ ಇದೆ ಶಾಲೆಗಳು, ಕಟ್ಟೋಣಗಳು, ಆಸ್ಪತ್ರೆಗಳು, ಕಾಲುವೆಗಳು, ರಸ್ತೆಗಳು ಮುಂತಾದವುಗಳ ಸಂಬಂಧದಲ್ಲಿ ಸ್ವಯಂ ಪ್ರೇರಣೆಯ ಸಾರ್ವಜನಿಕ ಸಹಾಯ ಹಾಗೂ ಶ್ರಮದಾನ ದೊರೆತಿರುವುದು ಆಶ್ಚರ್ಯವನ್ನುಂಟುಮಾಡುವಂತಿದೆ. ಜನರೆಲ್ಲರೂ ತಮಗಾಗಿ ತಾವು ಕೆಲಸ ಮಾಡುತ್ತೇವೆ ಎನ್ನುವ ಅಭಿಮಾನದಿಂದ ಶ್ರಮದಾನ ನೀಡಿದರು" ಎಂಬುದಾಗಿ ಸಾಮಾನ್ಯ ಭಾರತೀಯ ಪ್ರಜೆಗಳನ್ನು ಕೊಂಡಾಡಿದರು.

ವಿದೇಶದ ನೆರವು

ನೆಹರೂರವರು ಭಾರತದ ಆರ್ಥಿಕ ನೀತಿಯನ್ನೂ ಹಿಂದುಳಿದ ದೇಶಗಳ ಈಗಿನ ಮನೋಭಾವವನ್ನೂ ಪ್ರಸ್ತಾಪಿಸಿ ಕೆಲವು ಮಾತುಗಳನ್ನು ಹೇಳಿದರು. ಅವರ ತರ್ಕಶುದ್ಧವಾದ ಹಾಗೂ ದೂರದರ್ಶಿತ್ವದ ಅಚ್ಚು ಪಡೆದ ವಾಕ್ಸರಣಿಯು ಅಭಿವೃದ್ಧಿ ಯೋಜನೆಗಳಲ್ಲಿ ಪ್ರವೃತ್ತರಾಗುವ ಜನಕ್ಕೆ ಕೈದೀವಿಗೆಯಾಗಬಲ್ಲುದು. ಕೊಲೊಂಬೋ ಯೋಜನೆಯ ಪ್ರದೇಶಕ್ಕೆ ೨೦೦೦ ವರ್ಷಗಳಿಗೂ ದೀರ್ಘವಾದ ಇತಿಹಾಸವುಂಟು. ಸುಮಾರು ೩೦೦ ವರ್ಷಗಳ ಹಿಂದೆ ವಿದೇಶೀಯರು ಇಲ್ಲಿ ಕಾಲೂರಿದ ಬಳಿಕ ಈ ದೇಶಗಳು ದುರ್ಬಲ ಹೊಂದಿ, ಸತ್ವಹೀನವಾದವು. ನೆಹರೂ ಹೇಳಿದಂತೆ — ಇಷ್ಟ ಹಾಗೂ ಅನಿಷ್ಟ ಪರಿಣಾಮಗಳ ರಡನ್ನೂ ವಿದೇಶೀಯರ ಆಗಮನ ಎಡೆಮಾಡಿಕೊಟ್ಟಿತು. ಆದರೆ ಈಚೆಗೆ ಇಲ್ಲಿಯ ದೇಶಗಳು ಒಂದೊಂದೇ ಆಗಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುತ್ತಿವೆ. ಈ ಸ್ವಾತಂತ್ರ್ಯದೊಂದಿಗೆ ಸ್ವತಂತ್ರ ವಿಚಾರಧಾರೆಯೂ ಬೆಳೆದು ಸಾಮಾಜಿಕ ಹಾಗೂ ಆರ್ಥಿಕ ಕಲ್ಯಾಣವನ್ನುಂಟುಮಾಡುವ ಅನೇಕ ಬಯಕೆ ಹಾಗೂ ಯೋಜನೆಗಳು ಅಂಕುರಿಸಿವೆ. ಜೀವನಾವಶ್ಯಕ ವಸ್ತುಗಳಾದ ಅನ್ನ, ಬಟ್ಟೆ, ವಸತಿ, ಆರೋಗ್ಯ, ಶಿಕ್ಷಣ ಯಾವುದೇ ವಿಷಯವೂ ನಮ್ಮಲ್ಲಿ ಸಾಕಷ್ಟಿಲ್ಲದಿರುವುದರಿಂದ ಪ್ರಗತಿಗೆ ಆತಂಕವೆನಿಸಿದೆ. ನಮ್ಮೆಲ್ಲ ಶಕ್ತಿಯನ್ನು ಜನತೆಯ ಅವಶ್ಯಕತೆಗಳ ಪೂರೈಕೆಗೋಸ್ಕರ ಕೇಂದ್ರೀಕರಿಸುವ ಅಗತ್ಯ ಈಗುಂಟು. ಮಂತ್ರದಂಡದಿಂದ ನೆರವೇರುವ ಕೆಲಸವು ಇದಲ್ಲ. ಪರಿಶ್ರಮಪಟ್ಟು ನಾವೇ ಮುನ್ನುಗ್ಗಿ ದುಡಿಯಬೇಕು. ವಿದೇಶೀ ರಾಷ್ಟ್ರಗಳು ನಮಗೆ ಯೋಗ್ಯ ಸಹಾಯವನ್ನು ಕೊಡಬಲ್ಲವು ಅದನ್ನು ಹಿಂದುಳಿದ ಪ್ರದೇಶಗಳು ಸ್ವಾಗತಿಸುತ್ತವೆ. ಸ್ವತಂತ್ರಗೊಂಡ ರಾಜ್ಯಗಳು ವಿದೇಶೀ ಬಂಡವಾಳದಿಂದ ಬೆಳೆದ ಉದ್ದಿಮೆಗಳನ್ನು ರಾಷ್ಟ್ರೀಕರಿಸಿದ ಪಕ್ಷದಲ್ಲಿ ಅಪಾರ ಹಾನಿಯಾಗುವ ಪ್ರಮೇಯವಿರುವುದರಿಂದ, ಪರದೇಶಗಳು ಬಂಡವಾಳವನ್ನು ಅಂಥ ದೇಶದಲ್ಲಿ ತೊಡಗಲು ಹಿಂಜರಿಯಬಹುದು. ಆದರೆ ಭಾರತದ ನೀತಿಯು ಸ್ಪಷ್ಟವಾಗಿರುತ್ತದೆ. ಇಲ್ಲಿ ರಾಷ್ಟ್ರವು ಸ್ವಂತ ಹೊಣೆಯಿಂದ ನಿರ್ವಹಿಸಬಲ್ಲ ಕೆಲಸ ಸಾರ್ವಜನಿಕರು ನೇರಾಗಿ ಖಾಸಗಿ ರೀತಿಯಲ್ಲಿ ತೊಡಗುವ ಉದ್ಯಮಗಳಿಂದ ಪ್ರತ್ಯೇಕ ಮಾಡಲಾಗಿರುತ್ತದೆ. ವಿದೇಶೀ ಬಂಡವಾಳವನ್ನು ರಾಷ್ಟ್ರೀಕರಿಸುವಲ್ಲಿ ಸರಕಾರಕ್ಕೆ ಈಗ ಅಷ್ಟು ಆಸ್ಥೆ ಇಲ್ಲ — ನಮ್ಮ ಉದ್ದಿಮೆಗಳು ವಿದೇಶಗಳನ್ನು ಸಂಪೂರ್ಣವಾಗಿ ಅವಲಂಬಿಸುವಂತಾಗಬಾರದೆಂಬುದೇ ಸರಕಾರದ ಧೋರಣೆ. ಇದಕ್ಕೋಸ್ಕರ ವಿದೇಶೀ ಕಂಪೆನಿಗಳಲ್ಲಿ ದೇಶೀಯ ಬಂಡವಾಳಕ್ಕೂ ಪ್ರಾಶಸ್ತ್ಯ [illegible] ಸಿ ೫೧:೪೯ ಪ್ರಮಾಣದಲ್ಲಿ ದೇಶೀಯ ಹಾಗೂ ವಿದೇಶೀಯ ಬಂಡವಾಳಕ್ಕೆ ಅವಕಾಶ ಕೊಡಲಾಗುತ್ತದೆ. ಇದು ವಿದೇಶೀ ಬಂಡವಳ ತೊಡಗುವವರ ಇಚ್ಛೆಗೂ ಭಾರತ ಸರಕಾರದ ನೀತಿಗೂ ಹೊಂದಾಣಿಕೆಯನ್ನು ಸ್ಥಾಪಿಸುವಂತಿದೆ.

PLACE YOUR LIFE ASSURANCE WITH A COMPNAY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಅಮರ್ ನಾಥರ
ಅಲೀಫ್ ಲೈಲಾ (ಹಿಂದಿ)
ನಿಮ್ಮಿ, ಆಶಾಮಥುರ್, ಪ್ರಾಣ್, ವಿಜಯಕುಮಾರ್ ಗೋಪ್.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಆರ್ಥಿಕ ಉಳಿತಾಯ ಯೋಜನೆಗಳಲ್ಲಿ "ಕ್ಯುಮುಲೇಟಿವ್ ಡಿಪೋಜಿಟ್" ಯೋಜನೆಯು ಅತಿ ಪರಿಣಾಮಕಾರಿ ಹಾಗೂ ಅನುಕೂಲವಾದುದು. ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗೆ, ನಿಯಮಿತ ಕಾಲಕ್ಕೆ ನಿಯಮಿತ ಹಣವನ್ನು ಒಂದು ನಿಯಮಿತ ಅವಧಿಯೊಳಗೆ ಬಡ್ಡಿಯೊಂದಿಗೆ ವಾಪಸು ಸಿಗುವಂತೆ ಬ್ಯಾಂಕಿನಲ್ಲಿ ಶೇಖರಿಸಿಡುವುದೇ ಈ ಯೋಜನೆಯ ಮೂಲತತ್ವ. ಇದು ಮುಖ್ಯವಾಗಿ ಮಧ್ಯಮತರಗತಿಯ ಜನರಿಗೆ ಇಲ್ಲವೆ ನಿಯಮಿತ ಸಂಬಳದ ನೌಕರರಿಗೆ ತಮ್ಮ ಮುದ್ದು ಮಕ್ಕಳ ವಿದ್ಯಾಭ್ಯಾಸ, ಮುಂಜಿ, ಮದುವೆಯಂಥ ಇನ್ನಿತರ ಸದುದ್ದೇಶಗಳಿಗೆ ಅತ್ಯನುಕೂಲ ಹಾಗೂ ಅತಿ ಫಲಕಾರೀ ಯೋಜನೆ.

ಇಂದೇ ಇಂಥ ಒಂದು ಖಾತೆಯನ್ನು ನಮ್ಮ 38 ಶಾಖೆಗಳಲ್ಲಿ ನಿಮಗೆ ಹತ್ತಿರವಿರುವ ಯಾವುದಾದರೊಂದು ಶಾಖೆಯಲ್ಲಿ ತೆರೆಯಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India)

ನ ವ ಯು ಗ

ಉಡುಪಿ, ಗುರುವಾರ ೨೨-೧೦-'೫೩

ವರ್ಣದ್ವೇಷದ ಭರ್ತ್ಸನೆ

ದಕ್ಷಿಣ ಆಫ್ರಿಕಾ ಸರಕಾರವು ಅನುಸರಿಸಿರುವ ವರ್ಣದ್ವೇಷದ ಒಳಿತು ಕೆಡುಕುಗಳನ್ನು ವಿಮರ್ಶಿಸಿ ವರದಿ ಮಾಡಲು ಸಂಯುಕ್ತ ರಾಷ್ಟ್ರ ಸಂಘವು ಚಿಲಿಯ ಹೆರ್ನಾನ್ ಸಾಂತಾಕ್ರೂಜರ ಧುರೀಣತ್ವದಲ್ಲಿ ನೇಮಿಸಿದ್ದ ವಿಚಾರಣಾ ಸಮಿತಿಯು ಈಗ ತಾನೆ ತನ್ನ ವರದಿಯನ್ನು ಒಪ್ಪಿಸಿರುತ್ತದೆ ದಕ್ಷಿಣ ಆಫ್ರಿಕದ ಮಲಾನ ಸರಕಾರವು ಅತ್ಯಂತ ಕಠೋರವಾದ ಕಾಯಿದೆ ಕ್ರಮಗಳನ್ನು ಜ್ಯಾರಿಗೆ ತಂದು ವರ್ಣದ್ವೇಷದಿಂದ ಯುದ್ಧ ಜ್ವಾಲೆಯನ್ನು ಎಬ್ಬಿಸುವಷ್ಟು ಮುಂದುವರಿದಿರುವುದು ನಿಜವೆಂದು ಈ ಸಮಿತಿಯು ಸಾಮಾನ್ಯಾಭಿಪ್ರಾಯವನ್ನು ವ್ಯಕ್ತಗೊಳಿಸಿದೆ. ದಕ್ಷಿಣ ಆಫ್ರಿಕದಲ್ಲಿ ವಿದ್ಯಮಾನವಿರುವ ವರ್ಣಭೇದ ನೀತಿಯ ಮೂಲದಲ್ಲಿರುವ ಸಂಗತಿಯನ್ನು ಪ್ರಸ್ತಾಪಿಸುತ್ತಾ ಪಾಶ್ಚಿಮಾತ್ಯ ಕ್ರಿಶ್ಚಿಯನ್ ಸಂಸ್ಕೃತಿಯನ್ನು ದೇಶೀಯರ ಮೇಲೆ ಹೇರಲೆತ್ನಿಸುವುದೂ ಬಿಳಿ ಜನರ ಪ್ರಭುತ್ವವನ್ನೆ ಬಹುಸಂಖ್ಯಾಕರಾದ ಆಫ್ರಿಕನ್ನರ ಮೇಲೆ ಹೇರುವುದೂ ವರ್ಣದ್ವೇಷದಿಂದ ತಿಕ್ಕಾಟವುಂಟಾಗಲು ಅವಕಾಶ ಮಾಡಿಕೊಟ್ಟಿವೆಂದು ಸಮಿತಿ ನಿರ್ಣಯಿಸಿರುತ್ತದೆ. ಸಂಭಾವಿತನಾದ ಯಾವ ಕ್ರಿಶ್ಚಿಯನ್ನನೂ ವರ್ಣ ದ್ವೇಷದಲ್ಲಿ ನಂಬಿಕೆವುಳ್ಳವನಾಗಿರುವುದಿಲ್ಲ—ಅಂಥದರಲ್ಲಿ ಡಾ. ಮಲಾನರು ಮಾತ್ರ ವರ್ಣದ್ವೇಷದಲ್ಲಿ ಅಪರಿಮಿತ ವಿಶ್ವಾಸವನ್ನು ಇಟ್ಟುಕೊಂಡಿರುವ ಪಕ್ಷದಲ್ಲಿ ಅದು ಅವರ ಮೌಢ್ಯದ ಪ್ರತೀಕ ಮಾತ್ರವಲ್ಲ— ಶಾಶ್ವತ ಗಂಡಾಂತರಕ್ಕೂ ಕಾರಣವಾಗುತ್ತದೆ. ಅಲ್ಪಸಂಖ್ಯೆಯ ಬಿಳಿಯರು ಪ್ರತಿಶತ ೮೦ರಷ್ಟಿರುವ ಕರಿಯರ ಹಿತವನ್ನು ಉಪೇಕ್ಷಿಸಿ ವರ್ಣದ್ವೇಷವನ್ನು ಸಾಧಿಸುವುದು ಯಾವ ಹೊಣೆಗಾರ ಸರಕಾರಕ್ಕೂ ಭೂಷಣಪ್ರಾಯವಾಗಲಾರದು. ಬಹುಜನರನ್ನು ಮಲಾನರ ಸರಕಾರವು ಕ್ಷುದ್ರ ಅಲ್ಪಸಂಖ್ಯಾಕರಂತೆ ಕಡೆಗಣಿಸಿರುವುದೆಂದು ಸಮಿತಿಯು ಸ್ಪಷ್ಟ ಮಾತುಗಳಲ್ಲಿ ತನ್ನ ಖಂಡನೆಯನ್ನು ಸೂಚಿಸಿರುತ್ತದೆ. ಈ ಧೋರಣೆಯು ಬಿಳಿಜನರಲ್ಲದವರ ಮನಸ್ಸನ್ನು ನೋಯಿಸಿರುವುದಲ್ಲದೆ ಅವರಲ್ಲಿ ಪ್ರತಿಭಟನೆಯ ಭಾವನೆಯನ್ನೂ ರೊಚ್ಚಿಗೆಬ್ಬಿಸಿರುತ್ತದೆ. ಇದು ಹೀಗೆಯೇ ಮುಂದರಿವರೆ ಬಿಳಿಯರಲ್ಲದ ಜನರಿಗೆ ವರ್ಣದ್ವೇಷದಿಂದ ಬಿಡುಗಡೆಹೊಂದುವ ಏಕಮೇವ ಮಾರ್ಗವೆಂದರೆ ಉಗ್ರ ಚಳುವಳಿಯೊಂದೇ ಎಂದು ತೋರಿ ತತ್ಪರಿಣಾಮವಾಗಿ ಆಂತರಿಕ ಹಾಗೂ ಬಾಹ್ಯ ಶಾಂತಿಯ ಭಂಗವಾಗುವಂಥ ಉತ್ಕಟ ಪರಿಸ್ಥಿತಿಯು ನಿರ್ಮಾಣವಾದೀತು" ಎಂಬುದಾಗಿ ಸಮಿತಿಯು ಎಚ್ಚರಿಕೆಯನ್ನು ಕೊಟ್ಟಿರುತ್ತದೆ. ಹೀಗೆ ಶಾಂತಿ ಭಂಗಕ್ಕೆ ಪ್ರೋತ್ಸಾಹ ನೀಡುವ ದಕ್ಷಿಣ ಆಫ್ರಿಕಾ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಆದೇಶವನ್ನು ಸಹ ನೇರಾಗಿ ನಿರಾಕರಿಸಿ ಮಹಾಪರಾಧವನ್ನು ಮಾಡಿರುತ್ತದೆ. ರಾಷ್ಟ್ರಸಂಘದ ಸದಸ್ಯ ರಾಷ್ಟ್ರವಾದ ದಕ್ಷಿಣ ಆಫ್ರಿಕವು ವರ್ಣದ್ವೇಷವು ತನ್ನ ದೇಶದ ಆಂತರಿಕ ವ್ಯವಹಾರಕ್ಕೆ ಸಂಬಂಧಪಟ್ಟಿದೆಂದು ಹೇಳುತ್ತಾ ಈ ವಿಚಾರಣಾ ಸಮಿತಿಯೊಂದಿಗೆ ಅಸಹಕರಿಸಿರುವುದೊಂದು ತಪ್ಪು—ಅದನ್ನು ಬಿಟ್ಟರೂ ಸಂಯುಕ್ತ ರಾಷ್ಟ್ರ ಸಂಘದ ಪ್ರಣಾಳಿಕೆಯಲ್ಲಿ ಉಲ್ಲೇಖವಾದ ಮತ್ತು ದಕ್ಷಿಣ ಆಫ್ರಿಕವು ಸ್ವೀಕರಿಸಿದ "ಸಮಾನಾಧಿಕಾರ ಹಾಗೂ ವಿಶ್ವಮಾನ್ಯವಾದ ಮೂಲಭೂತ ಹಕ್ಕುಗಳನ್ನು ವರ್ಣಭೇದ ಇತ್ಯಾದಿಗಳಿಗೆ ಅವಕಾಶವಿಲ್ಲದಂತೆ ನೀಡುವುದರಲ್ಲಿ" ಸಂಯುಕ್ತ ರಾಷ್ಟ್ರಸಂಘದೊಂದಿಗೆ ಸೇರಿಯೂ ಪ್ರತ್ಯೇಕವಾಗಿಯೂ ಕ್ರಮ ಕೈಗೊಳ್ಳಲಾಗುವುದೆಂಬ ದ ಪ್ರತಿಜ್ಞೆಗೆ ವಿರುದ್ಧವಾಗಿ ನಡೆದಿರುವುದನ್ನು ಸಮಿತಿ ಬಲವಾಗಿ ಆಕ್ಷೇಪಿಸಿದೆ ಇದು ಮಾತ್ರವಲ್ಲ ಮಾನವೀಯ ಹಕ್ಕು ಬಾಧ್ಯತೆಗಳ ಪ್ರಣಾಳಿಕೆಯನ್ನೂ ರಾಷ್ಟ್ರಸಂಘದ ಹಿಂದಿನ ಅನೇಕ ನಿರ್ಣಯಗಳನ್ನೂ ದಕ್ಷಿಣ ಆಫ್ರಿಕೆ ಗಣನೆಗೆ ತೆಗೆದುಕೊಳ್ಳದಿರುವುದರಿಂದ ಅಲ್ಲಿರುವ ೩ ಲಕ್ಷ ೬೫ ಸಾವಿರ ಮಂದಿ ಭಾರತೀಯ ಹಾಗೂ ಪಾಕಿಸ್ತಾನೀ ವಲಸೆಗಾರರ ಪರವಾಗಿ ಮಾತನಾಡುವ ಈ ಉಭಯ ರಾಷ್ಟ್ರಗಳಷ್ಟೇ ಅಲ್ಲ—ಸಂಯುಕ್ತ ರಾಷ್ಟ್ರ ಸಂಘದ ಬಹುಮತವೇ ಮಲಾನರ ನೀತಿಯನ್ನು ಖಂಡಿಸುತ್ತದೆ. ವಿಶೇಷ ರಾಜಕೀಯ ಸಮಿತಿಯು ಇನ್ನು ಮುಂದೆ ಯಾವ ಕ್ರಮಗಳನ್ನು ರಾಷ್ಟ್ರಸಂಘ ತೆಗೆದುಕೊಳ್ಳಬೇಕೆಂಬುದು ಈಗ ಚರ್ಚೆ ನಡೆಸುವುದು. ಭಾರತವು ೧೭ ರಾಷ್ಟ್ರಗಳ ಸಂಯುಕ್ತ ಬೆಂಬಲದಿಂದ ಒಂದು ಗೊತ್ತುವಳಿಯನ್ನು ಸಮಿತಿಯ ಮುಂದಿಟ್ಟಿದೆ; ಅದರಲ್ಲಿ ದಕ್ಷಿಣ ಆಫ್ರಿಕೆಯ ನೀತಿಯನ್ನು ಖಂಡಿಸಲಾಗಿದೆಯಲ್ಲದೆ ಆ ಸರಕಾರ ಇನ್ನಾದರೂ ಸಹಕಾರ ನೀಡುವುದೆಂದು ಆಶೆ ವ್ಯಕ್ತಗೊಳಿಸಲ್ಪಟ್ಟಿದೆ. ವರ್ಣದ್ವೇಷ ವಿಚಾರಣಾ ಸಮಿತಿಯು ಇನ್ನು ಮುಂದೆಯೂ ಕೆಲಸ ಮಾಡಿ, ಈ ಪ್ರಶ್ನೆಯ ಪರಿಹಾರ ಮಾರ್ಗವನ್ನು ಸೂಚಿಸುವಂತೆ ಕೇಳಿಕೊಳ್ಳಬೇಕೆಂದೂ ಅದರಲ್ಲಿ ಹೇಳಿದೆ. ಬಿಳಿ ಮತ್ತು ಕರಿಜನರ ನಡುವೆ ಭೇದ ಕಲ್ಪಿಸುವುದನ್ನು ಖಂಡಿಸಿದ ಭಾರತದ ನಿಲುಮೆಯು ಸತ್ಯವಾದುದೂ ಸಾರ್ಥಕವಾದುದೂ ಎಂಬುದರಲ್ಲಿ ಈಗ ಯಾರಿಗೂ ಸಂದೇಹವುಳಿದಿರಲಿಕ್ಕಿಲ್ಲ. ದಕ್ಷಿಣ ಆಫ್ರಿಕಾದ ಸರಕಾರವೂ ಈ ಸತ್ಯವನ್ನು ಅರ್ಥಮಾಡಿಕೊಂಡರೆ ಅದರಿಂದ ಎಲ್ಲರಿಗೂ ಕ್ಷೇಮವಿದೆ. ಹಾಗೆ ಮಾಡದೆ ಈಗಿರುವಂತೆ ಬಿಳಿಯರಲ್ಲದವರನ್ನು ಅನ್ಯಾಯ ಹಾಗೂ ಅಮಾನುಷ ರೀತಿಯಲ್ಲಿ ನಡೆಸಿಕೊಂಡರೆ ವಿಪತ್ಪರಂಪರೆಗಳೇ ಹುಟ್ಟಿಕೊಳ್ಳುತ್ತವೆ. ವರ್ಣ ಭೇದವು ಯಾವುದೇ ವ್ಯತ್ಯಾಸವನ್ನು ಮನುಷ್ಯನ ಗುಣಗಳಲ್ಲಿ ಕಲ್ಪಿಸಲಾರದೆಂದು ರಾಷ್ಟ್ರಸಂಘದ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕಮಂಡಳಿ ಮೂರು ವರ್ಷಗಳ ಮುಂಚೆ ಹೇಳಿದ ಮಾತನ್ನು ಮಲಾನರು ತಿರಸ್ಕರಿಸಿದ್ದರು. ಈಗಲಾದರೂ ವಿಚಾರಣಾ ಸಮಿತಿಯ ನಿರ್ಣಯದ ಬೆಳಕಿನಲ್ಲಿ ಅವರ ಕಣ್ಣಿಗೆ ಹತ್ತಿದ ಮಬ್ಬು ಸರಿಯುವುದೆಂದು ಆಶಿಸಿದ್ದೇವೆ.

ಜಾಗತಿಕ ವಿಷ ವರ್ತುಲಗಳು

ಅಂತಾರಾಷ್ಟ್ರೀಯ ದ್ವೇಷವನ್ನು ಹೆಚ್ಚಿಸುವ ಸನ್ನಿವೇಶ

ಮೊರೊಕ್ಕೋ ಪ್ರಶ್ನೆ

ಅರಬ-ಏಶಿಯಾ ರಾಷ್ಟ್ರಗಳು ಸಂಯುಕ್ತ ರಾಷ್ಟ್ರಸಂಘದ ಮುಂದೆ ಮೊರೊಕ್ಕೋದ ಪ್ರಶ್ನೆಯನ್ನು ತಂದಿರುತ್ತವೆ. ರಾಜಕೀಯ ಸಮಿತಿಯು ಈ ವಿಷಯದಲ್ಲಿ ಚರ್ಚೆಯನ್ನು ನಡೆಸಿ, ಮೊರೊಕ್ಕೋದ ಜನರಿಗೆ ಸ್ವಯಂನಿರ್ಣಯಾಧಿಕಾರವಿರಬೇಕೆಂಬ ನಿರ್ಣಯವನ್ನು ಅಂಗೀಕರಿಸಿದೆ. ಉತ್ತರ ಆಫ್ರಿಕದಲ್ಲಿ ಅನೇಕ ಸಣ್ಣಪುಟ್ಟ ದೇಶಗಳು ಫ್ರಾನ್ಸ್ ಮುಂತಾದ ಸಾಮ್ರಾಜ್ಯಶಾಹೀ ಪ್ರಭುತ್ವದ ಚಿಹ್ನೆಯಾಗಿ ಈಗಲೂ ಉಳಿದಿರುತ್ತವೆ. ಇದು ಪ್ರಜಾಪ್ರಭುತ್ವ ಹಾಗೂ ಸ್ವಾತಂತ್ರ್ಯದ ಹುಮ್ಮಸ್ಸು ತುಂಬಿರುವ ಈಗಿನ ದಿವಸಕ್ಕೆ ಹೇಳಿಸಿದುದಲ್ಲ. ಮೊರೊಕ್ಕೋದಲ್ಲಿ ಫ್ರೆಂಚ್ ಸರಕಾರವು ಬರ್ಬರರನ್ನು ಇಸ್ತಿಕಲಾಲ ಪಕ್ಷದವರ ವಿರುದ್ಧ ಎತ್ತಿಕಟ್ಟಿ, ಸಿದಿ ಸುಲ್ತಾನರನ್ನು ಕೊರ್ಸಿಕಾ ದ್ವೀಪದಲ್ಲಿ ದಿಗ್ಬಂಧನದಲ್ಲಿ ಇಟ್ಟ ಮಾತ್ರಕ್ಕೆ, ಎಲ್ಲವೂ ಚೆನ್ನಾಯಿತೆಂದು ಭಾವಿಸುವಂತಿರಲಿಲ್ಲ. ಮೊರೊಕ್ಕೋದಂತೆ ಟ್ಯುನೀಸಿಯಾದ ಪ್ರಶ್ನೆಯೂ ರಾಷ್ಟ್ರಸಂಘದ ಮುಂದೆ ಸದ್ಯದಲ್ಲಿಯೇ ಚರ್ಚೆಗೆ ಬರಲಿದೆ. ಆದರೆ ಈ ರಾಜ್ಯದಲ್ಲಿ ರಾಷ್ಟ್ರೀಯ ಜಾಗೃತಿಯು ಈಗಾಗಲೇ ಪ್ರಬಲವಾಗಿ ಬೇರು ಬಿಟ್ಟಿರುವುದರಿಂದ ಮೊರೊಕ್ಕೋದಲ್ಲಿ ಮಾಡಿದಷ್ಟು ಸುಲಭವಾಗಿ ಫ್ರೆಂಚ ಸರಕಾರವು ಕೈಗೊಂಬೆ ಸುಲ್ತಾನನನ್ನು ನೇಮಿಸಿಕೊಳ್ಳುವಂತಹ ಕೆಲಸದಲ್ಲಿ ಪ್ರವೃತ್ತವಾಗಲಾರದು. ಮೊರೊಕ್ಕೋದಲ್ಲಿ ಫ್ರೆಂಚ ಸರಕಾರವು ಸುಧಾರಣೆಗಳ ಸೋಗನ್ನು ಧರಿಸಿದ್ದರೂ ಅವುಗಳು ಏತಕ್ಕೂ ಪ್ರಯೋಜನಕ್ಕೆ ಬಾರದಂಥವುಗಳು—ನಗರ ಸಭೆ ಹಾಗೂ ಪ್ರಾದೇಶಿಕ ಸಮಿತಿಗಳಲ್ಲಿ ಜನರಿಗೆ ಸ್ವಾಯತ್ತಾಧಿಕಾರ ಕೊಡುವಂತಹ ಸುಧಾರಣೆ ರಾಷ್ಟ್ರೀಯ ಸ್ವಾತಂತ್ರ್ಯದ ಪ್ರಶ್ನೆಗೆ ತಕ್ಕ ಉತ್ತರವಾಗುವಂತಿಲ್ಲ. ಪಾಕಿಸ್ತಾನದ ಪ್ರತಿನಿಧಿಗಳು ಸ್ಪಷ್ಟವಾಗಿ ಹೇಳಿದಂತೆ ಇದೇ ರೀತಿಯಲ್ಲಿ ಸುಧಾರಣೆಗಳು ಜ್ಯಾರಿಗೆ ಬಂದದ್ದೇ ಆದರೆ ರಾಷ್ಟ್ರೀಯ ಆಕಾಂಕ್ಷೆಯಾದ ಸ್ವಾತಂತ್ರ್ಯ ಪ್ರಾಪ್ತಿಗೆ ಕನಿಷ್ಠ ಪಕ್ಷ ಇನ್ನೂ ೬೫ ವರ್ಷಗಳು ಕಳೆದುಹೋಗಬೇಕಾದೀತು. ಇಷ್ಟು ದೀರ್ಘಾವಧಿಯ ವರೆಗೆ ಒಂದು ರಾಷ್ಟ್ರದ ಮೇಲೆ ಅಂಕುಶ ಹೇರಬಲ್ಲೆವೆನ್ನುವುದು ಫ್ರೆಂಚ ಸರಕಾರದ ದುರಾಗ್ರಹವೇ ನಿಜ. ಅರಬ ಏಶಿಯಾದ ರಾಷ್ಟ್ರಗಳು ಇಂಥ ಮನೋಭಾವವನ್ನು ಖಂಡಿಸಿರುತ್ತವೆ. ರಾಜಕೀಯ ಸಮಿತಿಯ ಮುಂದೆ ಅವು ಮಂಡಿಸಿದ್ದ ಗೊತ್ತುವಳಿಯಲ್ಲಿ ಮೊರೊಕ್ಕೋದಲ್ಲಿ ಫ್ರೆಂಚ ಸರಕಾರ ಜ್ಯಾರಿ ಮಾಡಿದ ನಂದಿನ ಕಾಯಿದೆ ಹಿಂದೆಗೆಯಲ್ಪಡಬೇಕು; ಹೊಸ ಚುನಾವಣೆಗಳನ್ನು ನಡೆಸಿ ಹೊಣೆಗಾರ ಸರಕಾರವನ್ನು ಸ್ಥಾಪಿಸಬೇಕು; ಮತ್ತು ಐದು ವರ್ಷಗಳೊಳಗೆ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು ಎಂದು ಸೂಚಿಸಿದ್ದವು. ಈ ವಿಚಾರವು ಫ್ರಾನ್ಸಿಗೆ ಸರ್ವಥಾ ಮೆಚ್ಚುಗೆಯಾಗಲಿಲ್ಲ ಅದು ತನ್ನ ಆಂತರಿಕ ವಿಷಯವೆಂದು ಹೇಳಿ ಫ್ರಾನ್ಸ್ ಚರ್ಚೆಯಿಂದ ಹೊರಗುಳಿಯಿತು. ಬ್ರಿಟಿಷ್ ಮತ್ತು ಅಮೇರಿಕನ್ ಪ್ರತಿನಿಧಿಗಳು ಫ್ರಾನ್ಸನ್ನು ಬೆಂಬಲಿಸುವ ಧೋರಣೆಯನ್ನು ಅನುಸರಿಸಿದವು. ಮೊರೊಕ್ಕೋದ ಪ್ರಶ್ನೆ ಶಾಂತಿ ಭಂಗದಂಥ ಗಂಡಾಂತರವನ್ನು ಉಂಟುಮಾಡಲಾರದೆಂದು ಅಮೇರಿಕಾದ ಪ್ರತಿನಿಧಿ ಸೂಚಿಸಿ, ಗೊತ್ತುವಳಿಯನ್ನು ವಿರೋಧಿಸಿ, ಫ್ರಾನ್ಸಿನ ನಿಲುಮೆಗೆ ಬೆಂಬಲ ಕೊಟ್ಟದ್ದು ವಿವೇಕವಲ್ಲ. ಆದರೆ ರಾಷ್ಟ್ರ ಸಂಘವು ಪಾಶ್ಚಾತ್ಯ ದೇಶಗಳ ಹಾರಿಸಿಕೊಳ್ಳುವ ಪ್ರವೃತ್ತಿಯನ್ನು ಮನ್ನಿಸದೆ, ಮೊರೊಕ್ಕೋದ ವಿಷಯದಲ್ಲಿ ತೃಪ್ತಿಕರವಾದ ನಿರ್ಣಯ ಕೈಗೊಂಡುದು ಶ್ಲಾಘನೀಯ.

ಟ್ರೀಸ್ಟೆಯ ಸಮಸ್ಯೆ

ಸಂಯುಕ್ತ ರಾಷ್ಟ್ರ ಸಂಘದ ಕಡೆಗೆ ಬಂದಿರುವ ಇನ್ನೊಂದು ಪ್ರಾಮುಖ್ಯವಾದ ದೂರು ಟ್ರೀಸ್ಟೆಗೆ ಸಂಬಂಧಿಸಿರುತ್ತದೆ. ಈ ಪ್ರಶ್ನೆಯನ್ನು ಭದ್ರತಾ ಮಂಡಳವು ರಶಿಯಾದ ಸೂಚನೆಯಂತೆ ಪರಾಮರ್ಶೆಗೆ ತೆಗೆದುಕೊಂಡಿರುತ್ತದೆ. ಟ್ರೀಸ್ಟೆಯು ನಿಜವಾಗಿ ಇಟೆಲಿ ಮತ್ತು ಯುಗೊಸ್ಲಾವಿಯಾ ರಾಷ್ಟ್ರಗಳಿಗೆ ಸಂಬಂಧಿಸಿದ ವಿಷಯ: ಆದರೆ ಘಟನೆಗಳು ಬದಲಾವಣೆ ಹೊಂದಿದಂತೆಲ್ಲ ಈ ಪ್ರಶ್ನೆಯಲ್ಲಿ ಹಿತಸಂಬಂಧವಿರುವವರು ಹೆಚ್ಚಾದರು. ಪರಿಣಾಮತಃ ಇಟಲಿ ಮತ್ತು ಯುಗೊಸ್ಲಾವಿಯಾದ ಕಲಹರಂಗವಾಗಿ ಟ್ರೀಸ್ಟೆ ಉಳಿಯದೆ ಆಂಗ್ಲೋ, ಅಮೇರಿಕನ್—ಹಾಗೂ ರಶಿಯನ ಬಣಗಳ ನಡುವೆ ಬಿಕ್ಕಟ್ಟಾಗಿ ಮಾರ್ಪಟ್ಟಿದೆ. ಈ ಬಿಕ್ಕಟ್ಟು ಸುಲಭವಾದ ಶಾಂತಿ ಮಾರ್ಗದಲ್ಲಿ ಬಗೆಹರಿಯದಿದ್ದರೆ ಯುದ್ಧ ಪ್ರಾರಂಭಕ್ಕೆ ಪ್ರೇರಣೆಯಾ…

ಯೂ ಪರಿಣಮಿಸಬಹುದಾದಷ್ಟು ಮಹತ್ವದಿಂದ ಕೂಡಿದೆ. ಟ್ರೀಸ್ಟೆಯಲ್ಲಿ ಕಲಹ ಬಂದಿರುವುದು ಹೀಗೆ-ಅಲ್ಲಿ ಎ ವಿಭಾಗವು ಆಂಗ್ಲೋ ಅಮೇರಿಕಾನರ ವಶವಿದೆ. ಬಿ ವಿಭಾಗವನ್ನು ಯುಗೊಸ್ಲಾವಿಯಾಕ್ಕೆ ಒಪ್ಪಿಸಿ ಕೊಡಲಾಗಿದೆ. ಯುಗೊಸ್ಲಾವಿಯಾದ ಟಿಟೋ ಸಾಹೇಬರು ಎ ವಿಭಾಗದಲ್ಲಿರುವ ಬಂದರವನ್ನು ಸಂಯುಕ್ತ ರಾಷ್ಟ್ರದ ಸ್ವಾಧೀನಕ್ಕೆ ಒಪ್ಪಿಸಿ ಕೊಟ್ಟು, ಉಳಿದ ಪ್ರದೇಶವನ್ನು ಯುಗೊಸ್ಲಾವಿಯಕ್ಕೆಯೇ ನೀಡಬೇಕಾಗಿ ಹೇಳುತಿದ್ದರು. ಇದು ಸರಿಯಲ್ಲ — ಎ ವಿಭಾಗ ಇಟಲಿಗೇ ಸೇರಬೇಕಾದುದು ನ್ಯಾಯವೆಂದು ಇಟಲಿ ಪ್ರತಿವಾದ ಹೂಡುತಿದ್ದಿತು. ಕಳೆದ ಅಗೋಸ್ತು ತಿಂಗಳಲ್ಲಿ ಈ ಮತಭೇದಗಳು ಉಲ್ಬಣಾವಸ್ಥೆಯನ್ನು ಮುಟ್ಟಿ ಇಟಲಿ ಹಾಗೂ ಯುಗೊಸ್ಲಾವಿಯಾಗಳು ಟ್ರೀಸ್ಟೆಯಲ್ಲಿ ಸೈನ್ಯ ಶೇಖರಣೆ ಮಾಡಲು ತೊಡಗಿದವು. ಈಗ ಆಂಗ್ಲೋ ಅಮೆರಿಕನ್ನರು ತಮ್ಮ ವಶದಲ್ಲಿರುವ ಎ ವಿಭಾಗವನ್ನು ಇಟಲಿಗೇ ಬಿಟ್ಟುಕೊಡುವುದಾಗಿ ಅಕಸ್ಮಾತ್ತಾಗಿಯೇ ಸಾರಿರುವರು. ಇದು ಯುಗೊಸ್ಲಾವಿಯಾದ ಅಭಿಮಾನವನ್ನು ಕೆಣಕಿದಂತಾಗಿರುತ್ತದೆ; ಮತ್ತು ಟಿಟೋರವರು ಪ್ರತಿಭಟನೆಯ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ಕೊಡಹತ್ತಿರುವರು. ಆದರೆ ಮಿತ್ರರು ತಮ್ಮ ನಿರ್ಧಾರವನ್ನು ಬದಲಿಸುವುದಿಲ್ಲವೆಂದು ಮೊನ್ನೆ ವಿದೇಶ ಮಂತ್ರಿಗಳ ಪರಿಷತ್ತು ಸೇರಿದ ನಂತರವೂ ಹೇಳುತ್ತಿರುವರು. ಹಿಂದೆ ರಶಿಯಾದ ಗೆಳೆತನವನ್ನು ಯುಗೊಸ್ಲಾವಿಯಾ ಪಡೆದಿದ್ದಾಗ, ಅದನ್ನು ಕೆಣಕುವ ಧೈರ್ಯ ಆಂಗ್ಲೋ-ಅಮೇರಿಕನ್ನರಿಗೆ ಇರಲಿಲ್ಲ. ಅಂತೆಯೇ ೧೯೪೭ರಲ್ಲಿ ಆದ ಇಟಲಿಯ ಶಾಂತಿ ಒಪ್ಪಂದದಲ್ಲಿ ಟ್ರೀಸ್ಟೆಯನ್ನು ಸಂಯುಕ್ತರಾಷ್ಟ್ರ ಸಂಘದ ವಶಕ್ಕೆ ಒಪ್ಪಿಸಿ ಕೊಡುವ ನಿರ್ಣಯವಾಗಿತ್ತು. ಆಗ ಅಲ್ಲಿ ಆಡಳಿತ ನಡೆಸುವ ನಿಷ್ಪಕ್ಷಪಾತ ಗವರ್ನರನ ಸಂಬಂಧದಲ್ಲಿ ಒಮ್ಮತ ಉಂಟಾಗದ್ದರಿಂದ ವಿಷಯ ಅಲ್ಲಿಗೇ ನಿಂತು ಹೋಯಿತು. ಈಗ ಟಿಟೋರವರು ರಶಿಯಾದ ಸಂಬಂಧ ಕಡಿದುಕೊಂಡಿರುವರು, ಮತ್ತು ಮಿತ್ರ ರಾಷ್ಟ್ರಗಳ ಸ್ನೇಹ ಕಾಂಕ್ಷಿಗಳಾಗಿರುವರು. ಹೀಗಿದ್ದರೂ ಅವರ ಮನಸ್ಸಿಗೆ ಬಾರದ ಕ್ರಮವನ್ನು ಆಂಗ್ಲೊ ಅಮೇರಿಕನ್ನರು ಕೈಗೊಳ್ಳುವುದರ ಉದ್ದೇಶ ಅರ್ಥವಾಗುವುದಿಲ್ಲ- ಅದರಂತೆ ರಶಿಯಾವು ಭದ್ರತಾ ಮಂಡಳದಲ್ಲಿ ಈ ಪ್ರಶ್ನೆಯನ್ನು ಏಕಾಗಿ ಎತ್ತಿದೆ ಎಂಬುದಕ್ಕೂ ಯೋಗ್ಯ ಸಮಾಧಾನ ದೊರಕುವುದಿಲ್ಲ. ತನ್ನ ಸಂಬಂಧ ವಿಚ್ಛೇದ ಮಾಡಿಕೊಂಡ ಯುಗೊಸ್ಲಾವಿಯಾಕ್ಕೆ ಆಂಗ್ಲೊ ಅಮೇರಿಕನ್ನರೊಡನೆ ಶಾಶ್ವತ ವೈಮನಸ್ಯ ಸ್ಥಾಪಿಸುವಂತೆ ಮಾಡುವುದೇ ರಶಿಯಾದ ಉದ್ದೇಶವಾಗಿರಬಹುದು - ಆದರೆ ಅದು ಇಟಲಿಯ ಒಪ್ಪಂದದ ಕಾರ್ಯಾಚರಣೆಗೆಯೇ ಮಹತ್ವ ಕೊಟ್ಟವನ್ನು ನೋಡಿದರೆ ಈ ಉದ್ದೇಶ ಫಲಕಾರಿಯಾಗುವುದು ಸಂಶಯ. ಈ ವಿವಾದ ಆಂಗ್ಲೊ ಅಮೇರಿಕನ್ ಹಾಗೂ ರಶಿಯಾದ ನಡುವಿನ ಕಂದಕವನ್ನು ಇನ್ನಷ್ಟು ಅಗಲ ಮಾಡುವಂತಿರುವುದೇ ಹೆದರಿಕೆ.

ಗಿಯಾನದ ರಾಜಕೀಯ

ಅಶಾಂತಿಯ ಇನ್ನೊಂದು ಕೇಂದ್ರವಾಗಿ ದಕ್ಷಿಣ ಅಮೇರಿಕದ ಬ್ರಿಟಿಷ್ ಗಿಯಾನಾ ಪರಿಣಮಿಸಿರುತ್ತದೆ. ಇದುವರೆಗೆ ದಕ್ಷಿಣ ಅಮೇರಿಕಾ ದೇಶದ ರಾಜಕೀಯ ಎನ್ನು ನಾವು ಕೇಳಿ ತಿಳಿದುಕೊಳ್ಳುತಿದ್ದದ್ದು ಕಡಿಮೆ. ಈವಾಪೆರೋನಳಂಥ ಅಂತಾರಾಷ್ಟ್ರೀಯ ಖ್ಯಾತಿವೆತ್ತ ಮಹಿಳೆಯ ನಿಧನಕ್ಕೋಸ್ಕರ ನಾವು ಕಳೆದ ವರ್ಷ ಕಂಬನಿ ಹರಿಸಿರಬಹುದು—ಆದರೂ ಆ ಭೂಖಂಡದ ರಾಜಕೀಯದಲ್ಲಿ ನಮಗೆ ಅಷ್ಟು ಆಸ್ಥೆ ಇರಲಿಲ್ಲ. ಈಗ ಆಸಕ್ತಿಯುಂಟಾಗುವಂಥ ಸನ್ನಿವೇಶ ಪ್ರಾಪ್ತವಾಗಿರುತ್ತದೆ. ಸೂರ್ಯ ಮುಳುಗದ ಬ್ರಿಟಿಷ್ ಸಾಮ್ರಾಜ್ಯದ ಒಂದು ತುಣುಕು ಇಲ್ಲಿಯೂ ಇದೆ. ಕೆಲವು ಸಮಯ ಪೂರ್ವದಲ್ಲಿ ಇಲ್ಲಿಯ ಜನರ ಆಶೋತ್ತರಗಳನ್ನು ಗಮನಿಸಿ, ಬ್ರಿಟಿಷ್ ಸರಕಾರವು ರಾಜಕೀಯ ಸುಧಾರಣೆಗಳನ್ನು ತಂದಿತು. ಅದರ ಪ್ರಕಾರ ಸಾರ್ವತ್ರಿಕ ಚುನಾವಣೆಗಳು ನಡೆದು ಜನಪ್ರಿಯ ಮುಂದಾಳುಗಳು ಸರಕಾರವನ್ನು ರಚಿಸಿದರು. ರಾಜ್ಯ ಘಟನೆಯೊಂದು ತಯಾರಿಸಲ್ಪಟ್ಟಿತು. ಹೊಸ ಸರಕಾರದ ನೇತೃತ್ವವನ್ನು ಡಾ. ಜೇದಿಜಗಾನರು ವಹಿಸಿಕೊಂಡರು. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದೆ ಎನ್ನುವಾಗ- ಒಮ್ಮೆಲೇ ರಾಜಕೀಯ ಬಿಕ್ಕಟ್ಟು ಸಂಭವಿಸಿದೆ. ಬ್ರಿಟಿಷ್ ಗಿಯಾನಾದಲ್ಲಿ ಕಮ್ಯೂನಿಸ್ಟರು ಒಳಸಂಚು ಹೂಡಿರುವರೆಂಬ ಕಾರಣವನ್ನು ಮುಂದಿಟ್ಟುಕೊಂಡು ಗವರ್ನರರು ಸರಕಾರವನ್ನೂ ರಾಜ್ಯಘಟನೆಯನ್ನೂ ಬರ್ಖಾಸ್ತುಗೊಳಿಸಿರುವರು; ಮತ್ತು ಬ್ರಿಟಿಷ್ ಯುದ್ಧನೌಕೆಗಳೂ ಸೈನಿಕರೂ ಗುಪ್ತಪ್ರಯಾಣ ಮಾಡಿ ಗಿಯಾನಾದಲ್ಲಿ ಇಳಿದಿವೆ. ಜನತಾ ಧುರೀಣರ ಮನೆ ಮಠಗಳನ್ನೆಲ್ಲ ಜಪ್ತಿ ಮಾಡಿ ಕಮ್ಯೂನಿಸ್ಟ ಒಳಸಂಚಿನ ಬಗ್ಗೆ ಪ್ರಮಾಣವನ್ನು ಸಂಗ್ರಹಿಸುವ ಪ್ರಯತ್ನ ನಡೆದರೂ ಯಾವುದೇ ತರದ ರುಜುವಾತು ದೊರಕದೆ ಹೋಗಿದೆ. ಚರ್ಚಿಲ್ಲರ ಸರಕಾರವು ಬುಡವಿಲ್ಲದ ಸಂದೇಹದಿಂದ ಇಂಥ ಕ್ರಮ ಕೈಕೊಂಡಿರುವುದನ್ನು ಗಿಯಾನಾದ ಧುರೀಣರಂತೂ ಸರಿಯೇ — ಬ್ರಿಟಿಷ್ ಕೂಲಿಕಾರ ಪಕ್ಷದ ನಾಯಕರೂ ಮೆಚ್ಚಿಕೊಂಡಿಲ್ಲ. ಯೋಗ್ಯ ಸಮಾಧಾನವನ್ನು ಕೊಡಬೇಕೆಂದು ಬ್ರಿಟಿಷ ಸರಕಾರವನ್ನು ಅವರು ಒತ್ತಾಯಿಸಿರುವರು, ಮತ್ತು ಇಷ್ಟರಲ್ಲಿಯೇ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರು ತಮ್ಮ ನಿಲುಮೆಯ ಹಿನ್ನೆಲೆಯನ್ನು ವಿವರಿಸಬಹುದು. ಗಿಯಾನಾದ ಸರಕಾರವು ೪ ಲಕ್ಷ ಜನಸಂಖ್ಯೆಯಲ್ಲಿರುವ ೧೫ ಸಾವಿರ ಬಿಳಿ ಜನರ ಹಿತವನ್ನು ದುರ್ಲಕ್ಷಿಸಿ ಬಹುಜನ ಕಲ್ಯಾಣದ ಸುಧಾರಣಾ ಕ್ರಮಗಳನ್ನು ಕೈಗೊಂಡುದಕ್ಕಾಗಿಯೇ ಅಲ್ಲಿ ಕಮ್ಯೂನಿಸ್ಟರ ಪ್ರವೇಶವಾಗಿದೆಯೆಂಬ ಮಿಥ್ಯಾರೋಪ ಹೊರಿಸಲ್ಪಟ್ಟಿತೆಂದು ಸಾಮಾನ್ಯ ಅಭಿಪ್ರಾಯ. ಡಾ. ಜಗಾನರು ಭಾರತೀಯ ಪ್ರಧಾನಿ ನೆಹರೂರವರ ಮಧ್ಯಸ್ಥಿಕೆ ವಹಿಸಲು ಬಿನ್ನವಿಸಿರುವರಲ್ಲದೆ- ಸದ್ಯದಲ್ಲಿಯೇ ಅವರು ಭಾರತಕ್ಕೆ ಹಾರಿ ಬರುವ ನಿರೀಕ್ಷೆಯಿದೆ. ಲಂಡನಿನಲ್ಲಿ ಅಭಿಪ್ರಾಯ ವಿನಿಮಯಕ್ಕೋಸ್ಕರ ಅವರು ಈಗಾಗಲೇ ಗಿಯಾನಾದಿಂದ ಹೊರಟಿರುವರೆಂದು ಕೇಳುತ್ತೇವೆ.

ಕೊರಿಯಾ ರಂಗ

ಕೊರಿಯಾದಲ್ಲಿ ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳಿಗೆ ತಿಳಿಸಿ ಹೇಳುವ ಕಾರ್ಯ ಕಳೆದ ಗುರುವಾರದಿನ ತೊಡಗಿತು. ಆದರೆ ಎಣಿಸಿದಷ್ಟು ಸುಲಭವಾಗಿ ಇದು ನಡೆಯಲಿಲ್ಲ. ಹೆಚ್ಚಿನ ಕಮ್ಯೂನಿಸ್ಟ ಸೈನಿಕರು ಸ್ವದೇಶಕ್ಕೆ ಮರಳಲು ನಿರಾಕರಿಸಿದರು. ಕೆಲವು ಮಂದಿ ಯಾವ ನಿರ್ಧಾರಕ್ಕೂ ಬರದಿದ್ದುದರಿಂದ ತಟಸ್ಥ ರಾಷ್ಟ್ರ ಮಂಡಳದ ಅಧೀನಕ್ಕೆ ತೆಗೆದುಕೊಳ್ಳಲ್ಪಟ್ಟರು. ಕಮ್ಯೂನಿಸ್ಟಪಕ್ಷದ ಕಡೆಯಿಂದ ವಿವರಣೆ ಹೇಳಲು ಬಂದವರನ್ನು ಹಿಂಸಿಸಲು ಯುದ್ಧ ಕೈದಿಗಳು ನೋಡಿದಾಗಲೆಲ್ಲ—ಅವರನ್ನು ಉಪಾಯದಿಂದ ಸಮಾಧಾನಗೊಳಿಸಲಾಯಿತು. ಭಾರತೀಯ ಸೈನಿಕರು ಅವರನ್ನು ಶಾಂತವಾಗಿರಲು ಪದೇ ಪದೇ ಪ್ರಾರ್ಥಿಸುತಿದ್ದರು. ಕೆಲವು ರುಷ್ಟ ಕೈದಿಗಳು ಭಾರತೀಯ ಸೈನಿಕರ ಹೊಟ್ಟೆಗೆ ಮೊಣಗಂಟಿನಿಂದ ತಿವಿಯುವುದೇ ಮುಂತಾದ ಕಿರುಕುಳ ಕೊಡುತ್ತಿದ್ದರು. ಇದೆಲ್ಲವನ್ನು ಸಹಿಸಿಕೊಂಡು ಭಾರತೀಯ ಸೈನ್ಯ ಸಾವಧಾನದಿಂದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಿದೆ. ಆದರೆ ಹೀಗೆ ತಿಳಿಸಿ ಹೇಳುವ ಕಾರ್ಯದಲ್ಲಿ ಭಾಗವಹಿಸಲು ಯುದ್ಧ ಕೈದಿಗಳು ಹಿಂದಿನಿಂದ ನಿರಾಕರಿಸಿದರೆಂದೂ ಪರಿಣಾಮವಾಗಿ ಇನ್ನೊಂದು ಮೂರು ದಿನಗಳ ಕಾಲ ಈ ಕೆಲಸ ಸ್ಥಗಿತವಾಗುವುದೆಂದೂ ತಿಳಿದಿದೆ. ಆತಂಕಗಳು ಇದೇ ರೀತಿ ಉಪಸ್ಥಿತವಾದರೆ, ಕೊರಿಯಾದಲ್ಲಿ ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟುವುದೋ ಹೇಳಲು ಬಾರದು. ರಾಜಕೀಯ ಸಮಿತಿಯು ಇನ್ನೂ ಸೇರಿರುವುದಿಲ್ಲ—ಹಾಗೆ ಸೇರುವ ಮೊದಲು ರಾಜಕೀಯ ಸಮಿತಿಯ ಸ್ಥಳ ಮತ್ತು ಅದು ಕೂಡುವ ತಾರೀಕು ಇತ್ಯಾದಿಗಳನ್ನು ನಿರ್ಧರಿಸಲು ಪ್ರಾಸ್ತಾವಿಕ ಮಾತುಕತೆಗಳು ಇದೇ ೨೬ನೇ ದಿನಾಂಕ ಕಮ್ಯೂನಿಸ್ಟ ಹಾಗೂ ಅಮೇರಿಕಾನ ಪ್ರತಿನಿಧಿಗಳ ನಡುವೆ ನಡೆಯಬೇಕೆಂಬ ಸೂಚನೆ ಮಾತ್ರ ಮಾನ್ಯವಾಗಿದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 963/53 O. S. 123/1950.

ರಾಮಯ್ಯ ಗೌಡ— ಅರ್ಜಿದಾರ.

ಪರಮೇಶ್ವರಿ ಹೆಂಗ್ಸು ಕೂಡ— ಎದ್ರಿರು

೩ನೇ ಎದ್ರಿ. ಮುತ್ತಪ್ಪ ರೈ, ಮುಕ್ರಪ್ಪ ರೈಗಳ ಅಳಿಯ, ಪುತ್ತೂರು ತಾಲ್ಲೂಕು ಸವಣೂರು ಗ್ರಾಮದ ಸಾಲತ್ತಡುಂಬಿಲ್ಲಿ ಇವರಿಗೆ

ಮೇಲ್ಕಂಡ ದಾವೆಯಲ್ಲಿ ಆದ ರಿಡೆಮ್ಶನ್ ಡಿಕ್ರಿ ವಿಧಿ ಮೇರೆಗೆ ಸಲತಕ್ಕ ಹ್ರಣವನ್ನು ಕೋರ್ಟಿಗೆ ಡಿಪೊಸಿಟ್ ಮಾಡಿ, ರಿಡೆಮ್ಶನ್ ಬಗ್ಗೆ ಫೈನಲ್ ಡಿಕ್ರಿ ಕೊಡಿಸಬೇಕೆಂತಲೂ, ವಗೈರೆ ಮೇಲ್ಕಂಡ ಅರ್ಜಿ ಮಾಡಿರುತ್ತಾನೆ. ಸದ್ರಿ ಅರ್ಜಿಯು ತಾ. 29-10-53ಕ್ಕೆ ವಿಚಾರಣೆಯಿರುವುದರಿಂದ, ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿನ್ನ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಜಾರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು [illegible] ಮಾಡಲಾಗುವುದೆಂತಲೂ, ಕೋರ್ಟು ಹುಕುಂಪ್ರಕಾರ ತಿಳಿಸೋಣಾಗಿಯದೆ.

(Sd) N. V. Kolathaya

Vakil for Petr.

Puttur: Date 19—10—53.

ಉಡುಪಿ

ದ.ಕ. ಜಿಲ್ಲಾ ಪರಿಯಾಳ ಸಮಾಜ ಸಮ್ಮೇಳನವು - ತಾ. 20ರಲ್ಲು ಬೆಳಗ್ಗೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮಂಗಳೂರಿನ ಶ್ರೀ ಪಿ. ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ಕೆ. ಕೆ. ಪೂಜಾರಿ ಮತ್ತು ಪಾರ್ಟಿಯವರು ಸ್ವಾಗತ ಗೀತೆ ಮತ್ತು ಪ್ರಾರ್ಥನೆ ಮಾಡಿದರು. ಕಾರ್ಯದರ್ಶಿ ಶ್ರೀ ಟಿ. ಟಿ. ಸಾಲಿಯಾನರು ಸ್ವಾಗತ ಭಾಷಣಮಾಡಿ ಸಂಘದ ಕಾರ್ಯಕಲಾಪಗಳನ್ನೂ ಜಿಲ್ಲಾ ಸಮ್ಮೇಳನಕರೆದ ಉದ್ದೇಶವನ್ನೂ ವಿವರಿಸಿ ಹೇಳಿದರು. ಅನಂತರ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಯವರು ಸಮ್ಮೇಳನ ಉದ್ಘಾಟಿಸುತ್ತಾ ಸಮಾಜದವರು ಸಂಘಟಿತರಾಗಿ ಸಮಾಜ ಉನ್ನತಿಯ ಕಾರ್ಯದಲ್ಲಿ ಮುಂದೊತ್ತಬೇಕೆಂದು ಹೇಳಿದರು. ಸಮಾಜವು ಸರಕಾರದಿಂದ ಅಪೇಕ್ಷಿಸುವ ಸಹಾಯಗಳ ಕುರಿತು ಭಿನ್ನವತ್ತಳೆಯೊಂದು ಶ್ರೀ ಪೈಗಳಿಗೆ ಅರ್ಪಿಸಲಾಯಿತು. ಬಳಿಕ ಸಭಿಕರಲ್ಲಿ-ಶ್ರೀಗಳಾದ ಆರ್. ಆರ್. ಕುಂಜೂರು, ಎಮ್. ವಿ. ಹೆಗ್ಡೆ, ಕಾಳು ಸೆಟ್ಟಿ, ಜಗನ್ನಾಥ ನಾಯಕ್, ಎಚ್. ಸುಬ್ಬ ಚೆನ್ನ, ಸುಂದರ ಬಿ. ಉದ್ಯಾವರ ಮೊದಲಾದವರು ಸಮಾಜದ ಏಳಿಗೆ ಕುರಿತು ಭಾಷಣವಿತ್ತರು. ಜಿಲ್ಲಾ ಸಮಿತಿಯನ್ನು ರಚಿಸಬೇಕೆನ್ನುವ, ಪರಿಯಾಳ ಸಮಾಜವನ್ನು ಸರಕಾರವು ಹಿಂದುಳಿದ ಜಾತಿಎಂದು ಪರಿಗಣಿಸಿ ಹಿಂದುಳಿದ ಜಾತಿಯವರಿಗೆ ನೀಡುವ ಎಲ್ಲಾ ಸವಲತ್ತುಗಳನ್ನು ಇವರಿಗೆ ಕೊಡಬೇಕೆನ್ನುವ, ಸಮಾಜದವರೆಲ್ಲರೂ ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಆಸಕ್ತಿವಹಿಸಬೇಕೆನ್ನುವ ಇತ್ಯಾದಿ ಠರಾವುಗಳಾಗಿ ತಾತ್ಕಾಲಿಕ ಜಿಲ್ಲಾ ಸಮಿತಿಯೊಂದನ್ನು ರಚಿಸಲಾಯಿತು. ಬಳಿಕ ಅಧ್ಯಕ್ಷರ ಭಾಷಣ, ಉಪಸಂಹಾರ, ಕಾರ್ಯದರ್ಶಿಗಳ ಧನ್ಯವಾದಾರ್ಪಣೆ, ಜನಗಣಮನ ಗೀತೆಯೊಂದಿಗೆ ಸಭಾಂತ್ಯವಾಯಿತು. ಆರಂಭದಲ್ಲಿ ಬೊಂಬಾಯಿ ಮೊದಲಾದ ಕಡೆಗಳಿಂದ ಬಂದ ಶುಭ ಸಂದೇಶಗಳನ್ನು ಓದಲಾಯಿತು.

ಎಡಿಶನಲ್ ಡಿ। ಮುನ್ಸಿಫ್ ಕೋರ್ಟು— ತಾ. 19ರಲ್ಲು ಪ್ರಾರಂಭವಾಗಿಯದೆ. ಶ್ರೀ ಲಕ್ಷ್ಮಣ ಸಾಲಿಯಾನರು ಎ। ಡಿ। ಮುನ್ಸಿಫರಾಗಿ ಚಾರ್ಜು ವಹಿಸಿರುವರು.

ಉಪಾಹಾರ—ಸ್ಥಳೀಯ ಸ್ಟ್ಯಾಂಡರ್ಡ್ ವ್ಯಾಕೊಮ್ ಓಯಿಲ್ ಕಂಪೆನಿಯ ಇನ್ಸ್ಪೆಕ್ಟರರಾದ ಶ್ರೀ ಕೆ. ಗೋಪಾಲ ಹೆಗ್ಡೆಯವರು ತನ್ನ ಪುತ್ರ ಕೃಷ್ಣ ಕುಮಾರನ ಜನ್ಮದಿನೋತ್ಸವದ ನಿಮಿತ್ತವಾಗಿ ಇದೇ ತಾ. 14ರ ಸಂಜೆ ಆಪ್ತರಿಗೆ ತಮ್ಮ ಮನೆಯಲ್ಲಿ ಉಪಹಾರ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು.

ನಾಡಹ [illegible] –ಪರ್ಯಾಯ ಪೇಜಾವರ ಮಠ ಮತ್ತು ಉಡುಪಿ [illegible] ದ ಸಂಯುಕ್ತ ಆಶ್ರಯದಲ್ಲಿ ಶ್ರೀ ಕೃಷ್ಣಮಠದ ವಸಂತ ಮಹಲಿನಲ್ಲಿ ಇದೇ ತಾ 11ರಿಂದ 16ರ ತನಕ ಸಾಂಗವಾಗಿ ಜರಗಿತು. ಕವಿತಾ ವಾಚನ, ಭಾಷಣ, ಸಂಗೀತ, ನಾಟಕ, ಯಕ್ಷಗಾನ ಕಾಲಕ್ಷೇಪ ಮೊದಲಾದ ಕಾರ್ಯಕ್ರಮಗಳಿದ್ದುವು.

ಕವಿಭೂಷಣ ಕೆ ಪಿ. ವೆಂಕಪ್ಪ ಶೆಟ್ಟಿ
ರಿಂದ ರಚಿಸಲ್ಪಟ್ಟು ಅಂತರಂಗ
ಕಾರ್ಯಾಲಯದಿಂದ
ಪ್ರಕಟಿಸಲ್ಪಟ್ಟ

ಭಾರತದ ಗುರುಕುಲ
(ಯಕ್ಷಗಾನ)

ಮದರಾಸು ಸರಕಾರದಿಂದ
ಸಂಭಾವನೆ ಪಡೆದ ಗ್ರಂಥ.

ಬೆಲೆ: 0 6 0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಾರ್ಕಡ—ಇಲ್ಲಿಯ ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ಇದೇ ತಾ 10ರಲ್ಲು ರಾತ್ರಿ "ನಾಡ ಹಬ್ಬವು" ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಹಂದೆಯವರು ಸ್ವಾಗತ ಮಾತುಗಳನ್ನಾಡಿದರು. "ಕರ್ಣಪರ್ವ" ಎಂಬ ಯಕ್ಷಗಾನ ಕಾಲಕ್ಷೇಪವು ಯಶಸ್ವಿಯಾಗಿ ಜರಗಿ ಸಭಾಂತ್ಯವಾಯಿತು.

ಕಮಲಶಿಲೆ—ಕುಂದಾಪುರ ತಾಲೂಕಿನ ಕಮಲಶಿಲೆ ಗ್ರಾಮದ ಬರೇ ಗುಂಡಿಯಲ್ಲಿ ಶ್ರೀ ಎ. ಶೇಷಪ್ಪ ಶಾಸ್ತ್ರಿರ ಆಡಳಿತದಲ್ಲಿ ಹೊಸ ಎಲಿಮೆಂಟರಿ ಶಾಲೆಯೊಂದು ಇದೇ ತಾ 10ರಲ್ಲು ಶ್ರೀ ಹಾನಂಜೆ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ನೂತನ ಶಾಲೆಯ ಕುರಿತು ಹಲವರ ಮಾತುಗಳಾಗಿ ಮಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮದೊಡನೆ ಸಮಾರಂಭ ಮುಕ್ತಾಯವಾಯಿತು.

ಸುರತ್ಕಲ್—ಅಗ್ರಿಕಲ್ಚರ್ ಹಾ। ಎ। ಶಾಲೆಯ 58ನೆ ವಾರ್ಷಿಕೋತ್ಸವವೂ ದಸರಾ ಮಹೋತ್ಸವವೂ ಇದೇ ತಾ 14ರಲ್ಲು ವಿದ್ವಾನ್ ಶ್ರೀ ಎಸ್. ಸುಬ್ರಾಯ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಸಂದರ್ಭದಲ್ಲಿ ಶಾಲೆಯ "ಉದಯ" ಹಸ್ತ ಪತ್ರಿಕೆಯ ಉದ್ಘಾಟನೆಯೂ ನಡೆಯಿತು.

ಶೀರೂರು—ಉಡುಪಿ ತಾಲೂಕಿನ ಶೀರೂರು ಗ್ರಾಮದ ಗುಡ್ಡೆಯೊಂದರಲ್ಲಿ ಇದೇ ತಾ 11ರಲ್ಲು ಮಧ್ಯಾಹ್ನ ಮೇಯುತ್ತಿದ್ದ ಸುಮಾರು 50 ಜಾನುವಾರುಗಳಿಗೆ ಸಿಡಿಲು ಬಡಿದು 12 ಜಾನುವಾರುಗಳು ಮರಣ ಪಟ್ಟವು. ದನ ಮೇಯಿಸುವವರ ಪ್ರಾಣ ಹಾನಿಯಾಗಿಲ್ಲ.

ಕುಂಬಳೆ:—ಸ್ಥಳೀಯ ಸೆಂಟ್ರಲ್ ಎಕ್ಸೈಜ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ಎ. ಮೆನೋನ್ ಅವರಿಗೆ ವರ್ಗವಾದುದರಿಂದ ಅವರ ಸ್ಥಳದಲ್ಲಿ ಶ್ರೀ ಜಿ. ಜಿ. ಶೆಣೈಯವರು ನೇಮಕ ಹೊಂದಿರುವರು.

ದೇವಿಪುರ:—ಶ್ರೀ ದುರ್ಗಾ ಪ್ರಸಾದಿಕ ಪ್ರಾಥಮಿಕ ಶಾಲೆಯಲ್ಲಿ ಶಾರದಾಪೂಜೆ ಸಮಾರಂಭವು ತಾ 15ರಲ್ಲು ಮಂಗಳೂರಿನ ಶ್ರೀ ಎನ್. ವಿ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ನೀಲಾವರ: ಸ್ಥಳೀಯ ಮಹಿಷಮರ್ದಿನಿ ಶಾಲೆಯ ವರ್ಧಂತಿ ಸಮಾರಂಭ ಮತ್ತು ಶಾರದಾಪೂಜ ಸಮಾರಂಭಗಳು ತಾ 14ರಲ್ಲು ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಸಿ. ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಭಾಷಣ, ಬಹುಮಾನವಿತರಣೆ, ಶಾಲಾ ಮಕ್ಕಳಿಂದ ನಾಟಕವೇ ಮೊದಲಾದ ಇತರ ವಿನೋದಾವಳಿಗಳಾದುವು.

ಕಾಲ್ತೋಡು:—ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯ ಶಾರದಾ ಪೂಜಾ ಸಮಾರಂಭವು ತಾ 16ರಲ್ಲು ಜರಗಿತು ಕೆ. ಗೋವಿಂದ ಸೆಟ್ರ ಪುತ್ರ ಎ. ಶೇಷ ಸೆಟ್ಟರ ಮುಂದಾಳುತ್ವದಲ್ಲಿ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು.

ಹಿರಿಯಡಕ:—ಬೊಮ್ಮರಬೆಟ್ಟು ಗ್ರಾಮದ ಕುಯಿಲಾಡಿ-ಕುಳೆದು, ಸಾಣೆಕಲ್ಲು ಭಾಗದವರಿಗೆ 4 ಮೈಲುಗಳೊಳಗೆ ಶಾಲೆಯಿಲ್ಲದಿರುವ ಕೊರತೆ ನಿವಾರಿಸುವರೆ ಒಂದು ಎಲಿಮೆಂಟರಿ ಶಾಲೆ ತೆರೆಯಬೇಕೆಂದು ತೋಟ ಎಂಬಲ್ಲಿ ಜರಗಿದ ಗ್ರಾಮಸ್ಥರ ಸಭೆಯಲ್ಲಿ ನಿರ್ಣಯಿಸಲಾಯಿತು. ಆ ಬಗ್ಗೆ ಶ್ರೀ. ಕೆ. ಬೊಮ್ಮಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಕಟ್ಟಡದ ಸಲುವಾಗಿ ರೂ. 1600ಕ್ಕೆ ಮಿಕ್ಕಿ ಸಹಾಯ ಧನದ ಆಶ್ವಾಸನೆಗಳು ದೊರೆತಿರುವುವು. ಸದ್ಯ ಈ ಕಾರ್ಯವು ದಿ. ಹಿರಿಯಡ್ಕ ಎಜ್ಯುಕೇಶನ್ ಸೊಸೈಟಿಯ ಆಶ್ರಯದಲ್ಲಿ ನಡೆಯಿಸುವುದೆಂದಾಯಿತು. ಅಗತ್ಯವುಳ್ಳ ಪತ್ರ ವ್ಯವಹಾರ ಈಗಾಗಲೇ ಆರಂಭಿಸಲಾಗಿದೆ.

ಹಿರಿಯಡ್ಕದಿಂದ ಬಸ್ತಿ-ಸಾಣೆಕಲ್ಲು-ಕುಳೆದುಗಾಗಿ ಗುಡ್ಡೆ ಅಂಗಡಿಯಲ್ಲಿ ರಾಜ ಮಾರ್ಗ ಸೇರುವ ಹೊಸ ರಸ್ತೆಯು ಹಲವು ಶಾಖೆಗಳೊಂದಿಗೆ ಗ್ರಾಮದ ಸ್ವಯಂ ಸೇವಕರಿಂದ ರಚಿತವಾಗಿದೆ. ಈ ರಸ್ತೆಯು ತಾ 22-10-53ರಲ್ಲಿ ಮದ್ರಾಸು ಸರಕಾರದ ಮಾನ್ಯ ಮಂತ್ರಿ ಶ್ರೀ. ಸಿ. ಸುಬ್ರಹ್ಮಣ್ಯಂ ರವರಿಂದ ತೆರೆಯಲ್ಪಡಲಿರುವುದು.

ಸುರತ್ಕಲ್: ಸ್ಥಳೀಯ ಹ್ಯಾಸ್ಕೂಲಿನಲ್ಲಿ ನಾಡ ಹಬ್ಬದ ನಿಮಿತ್ತ ಇದೇ ತಾ 15ರಲ್ಲು ಶಾಲೆಯ ಹಳೆಯ ಮತ್ತು ಈಗಿನ ವಿದ್ಯಾರ್ಥಿಗಳೊಳಗೆ ಕ್ರಿಕೆಟ್ ಪಂದ್ಯಾಟ, ಶಾರದಾ ಪೂಜೆ ಮೊದಲಾದ ಕಾರ್ಯಕ್ರಮಗಳು ಶ್ರೀ ಪಿ. ಶ್ರೀನಿವಾಸ ರಾವ್, ಎಡ್ವಕೇಟ್, ಅವರ ಅಧ್ಯಕ್ಷತೆಯಲ್ಲಿ ಜರಗಿದವು. ಶ್ರೀ ಟಿ. ಗೋಪಾಲ ಕೃಷ್ಣ ಭಟ್ ಮೊದಲಾದವರ ಭಾಷಣಗಳಾಗಿ ಮಕ್ಕಳ ಕಾರ್ಯಕ್ರಮಗಳು ನಡೆದವು.

ಕಿನ್ನಿಮೂಲ್ಕಿ:—ಇಲ್ಲಿಯ ಹನುಮಾನ್ ಶಿವಾಜಿ ವ್ಯಾಯಾಮ ಸಂಘದ ವಾರ್ಷಿಕೋತ್ಸವ ಹಾಗೂ ಆಯುಧ ಪೂಜಾ ಸಮಾರಂಭವು ಇದೇ ತಾ 18ರಲ್ಲು ರಾತ್ರಿ ಶ್ರೀ ಯು. ಪಿ. ಸುವರ್ಣರ ನೇತೃತ್ವದಲ್ಲಿ ಸಾಂಗವಾಗಿ ಜರಗಿತು.

ಮಾಣಿಯಲ್ಲಿ ಬಸ್ಸು ಅಪಘಾತ—ಇದೇ ತಾ 12ರಲ್ಲು ಬೆಳಿಗ್ಗೆ ಮಂಗಳೂರಿನಿಂದ ಶಿರಾಡಿಗೆ ಹೋಗುವ ಶಂಕರ ವಿಠಲ ಮೋಟಾರು ಕಂಪೆನಿಯವರ ಸರ್ವಿಸು ಬಸ್ಸು ಮತ್ತು ಹೊಸಪಟ್ಟಣದಿಂದ ಮಂಗಳೂರಿಗೆ ಬರುತ್ತಿದ್ದ ಪಾಪ್ಯುಲರ್ ಮೋಟರ್ ಕಂಪೆನಿಯವರ ಸರ್ವಿಸು ಬಸ್ಸು ಮಾಣಿಯಿಂದ ಒಂದೆರಡು ಮೈಲು ದೂರದಲ್ಲಿ ಒಂದಕ್ಕೊಂದು ಡಿಕ್ಕಿ ಹೊಡೆದವು. ಈ ಅಪಘಾತದಲ್ಲಿ ಹತ್ತಿಪ್ಪತ್ತು ಪ್ರಯಾಣಿಕರು ಗಾಯಗೊಂಡರು. ಡ್ರೈವರನ ಮತ್ತು ಒಬ್ಬರ ಕೈಕಾಲು ಜಜ್ಜಿ ಹೋಗಿದ್ದು ಅವರ ಪರಿಸ್ಥಿತಿ ಚಿಂತಾಜನಕವಿದೆ ಎನ್ನಲಾಗಿದೆ. ಅಪಘಾತಕ್ಕೆ ತುತ್ತಾದ ಕೆಲವರನ್ನು ಮಂಗಳೂರಿನ ಆಸ್ಪತ್ರೆಗೂ, ಕೆಲವರನ್ನು ಪುತ್ತೂರಿನ ಆಸ್ಪತ್ರೆಗೂ ಒಯ್ಯಲಾಗಿದೆ.

ದುರ್ಗ—ಕಾರ್ಕಳ ತಾಲೂಕಿನ ದುರ್ಗ ಗ್ರಾಮದಲ್ಲಿ ಇದೇ ತಾ 13ರಲ್ಲು ಮಧ್ಯಾಹ್ನ ನಾಲ್ಕು ಗಂಟೆಗೆ ಗುಡುಗು ಮಿಂಚು ಹಾಗೂ ಭಯಂಕರ ಬಿರುಗಾಳಿ ಮಳೆಗಳ ದೆಸೆಯಿಂದ ತೆಂಗಿನ ಮರಗಳೂ, ಅಡಿಕೆ ಮರಗಳೂ ಬಾಳೆ ಮರಗಳೂ ಬಹುಸಂಖ್ಯೆಯಲ್ಲಿ ನಾಶವಾಗಿವೆ.

ಬೆಳ್ತಂಗಡಿ—ಲ್ಯಾಲ ಗ್ರಾಮದ ಶ್ರೀ ಸಂತಾನ ಮೊರಾಸ್ ಎಂಬವರು ಗ್ರಾಮಸ್ಥರಿಗೆ ಉಪದ್ರ ಕೊಡುತ್ತಿದ್ದ ಚಿರತೆಯೊಂದನ್ನು ಗೂಡನ್ನು ಉಪಯೋಗಿಸಿ ಹಿಡಿದರು. ಗೂಡಿನಲ್ಲಿ ನಾಯಿಯನ್ನು ಇಡಲಾಗಿತ್ತು.

ಕುಂತೂರ—ಸ್ಥಳೀಯ ಪಂಚಾಯತ ಬೋರ್ಡ್ ಪ್ರಸಿಡೆಂಟರ ಚುನಾವಣೆಯು ಇದೇ ತಾ 14ರಲ್ಲು ನಡೆದು ಶ್ರೀ ವೆಂಕಟ್ರಾಯ ಪ್ರಭುಗಳು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ತಣ್ಣೀರು ಪಂತ—ಇದೇ ತಾ 17ರಲ್ಲು ಶಾರದಾ ಪೂಜಾ ಸಮಾರಂಭವು ಬೆಳಿಗ್ಗೆ ಶ್ರೀ ಎ. ತಿಮ್ಮಪ್ಪ ಸಾಮಾನಿಯವರ ನೇತೃತ್ವದಲ್ಲಿ ಪ್ರಭಾತಫೇರಿಯಿಂದ ಪ್ರಾರಂಭವಾಯಿತು. ಶಾಲಾ ಮಕ್ಕಳಿಗೆ ತಿಂಡಿ ಹಂಚೋಣವಾದ ಬಳಿಕ ಜರಗಿದ ಹೆತ್ತವರ ಸಭೆಯಲ್ಲಿ ಶ್ರೀಗಳಾದ ಎಚ್. ಮಂಜಪ್ಪ ಬಾಬುಸಾಲಿಯಾನ್, ಚಂದಪ್ಪ ಪೂಜಾರಿ, ಅಬ್ಬುಬಕ್ಕರ್ ಬ್ಯಾರಿ ಮೊದಲಾದವರು ಭಾಷಣವಿತ್ತರು. ಶ್ರೀ ಕೆ. ಧರ್ಣಪ್ಪನವರ ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಸುರತ್ಕಲ್.—ಮುಕ್ಕ ಮಿತ್ರ ಪಟ್ಟಣ ಗಂಗಯ ಸ್ಮಾರಕ ರಾತ್ರಿ ಶಾಲೆಯಲ್ಲಿ ದಸರಾ ಮಹೋತ್ಸವವು ತಾ 16ರಂದು ಸಂಜೆ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಪುತ್ತೂರು—ಪುತ್ತೂರಿನ ಶ್ರೀ ಕೆ. ವಿ. ಶೆಣೈಯವರ ಮಕ್ಕಳಿಂದ ತಾ 14ರಲ್ಲು ಮಂಗಳೂರಿನ ಶ್ರೀ ಕಾತ್ಯಾಯಿನಿ ದೇವಸ್ಥಾನದಲ್ಲಿ ಶಾರದಾ ಪೂಜೆಯ ಕಾಲದಲ್ಲಿ ಸಂಗೀತ ಮತ್ತು ಪಿಟೀಲು ವಾದನವು ವಿದ್ವಾನ್ ರಾಜನ್ ಅಯ್ಯರರ ಮೃದಂಗ ವಾದನದೊಡನೆ ನಡೆಯಿತು.

THE VIJAYA BANK, LTD., BRAHMAVARA.
ದಿ ವಿಜಯಾ ಬೇಂಕ್ ಲಿಮಿಟೆಡ್ ಬ್ರಹ್ಮಾವರ.
ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರುಗಳು, ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವದರಿಂದ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರೀ ನೋಟೀಸು ಕೊಟ್ಟಲ್ಲಿಯೂ, ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದ, ಸದ್ರಿಯವರು ಈಡಿಟ್ಟ ನಗಗಳನ್ನು, ತಾರೀಕು 30-10-53ನೇ ಶುಕ್ರವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ, ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನ: ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
896 67	ಗಾಸ್ಪಾರ್ ಪಿಲ್ಲ, ಪಾವ್ಲ್ ಕಿಸ್ತೋಜಿ ಪಿಲ್ಲರ ಮಗ, ವಾರಂಬಳ್ಳಿ ಗ್ರಾಮ, ಗಣಪರ ಹಿತ್ಲು ಪೋಸ್ಟ್ ಬ್ರಹ್ಮಾವರ	170-13—0
938/52	Do	140—8—0
648/51	ಶೇಷ ಸೆಟ್ಟಿ, ತಿಮ್ಮಪ್ಪ ಸೆಟ್ರ ಅಳಿಯ, ತೋಟಮನೆ, ಬೈಕಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ	40—0—0
561/51	ಐ. ಪ್ರಭಾಕರ ಹೆಗ್ಡೆ, ಐ. ನಾರಾಯಣ ಸೆಟ್ರ ಅಳಿಯ, ಪೋಸ್ಟ್ ಕುಂಜಾಲ್	437—1—0
274/51	Do	328—9—0
1036 51	ಶೀನಪ್ಪ ದಾಸ್, ಅಣ್ಣಪ್ಪ ದಾಸರ ಮಗ, ವಾರಂಬಳ್ಳಿ ಗ್ರಾಮ, ಪೋಸ್ಟ್ ಬ್ರಹ್ಮಾವರ	45—5—0
485 52	ಶಂಕ್ರಯ್ಯ ಆಚಾರಿ, ಕೃಷ್ಣ ಆಚಾರಿಯ ಮಗ, ಕುಂಜಾಲ್	91—1—0
419 52	ಮಾದಯ್ಯ ಸೆಟ್ಟಿ, ಸದಿಯಣ್ಣ ಸೆಟ್ರ ಮಗ, ಶಿರೂರ್ ಗ್ರಾಮ, ಪೋಸ್ಟ್ ಕೊಕ್ಕರ್ಣೆ.	219-11—0
455/52	ಮಂಜುನಾಥ, ಕೊರಗ ಗಾಣಿಗನ ಅಳಿಯ, ಕುಂಕ್ಯ, ಹರಾಡಿ ಗ್ರಾಮ, ಪೋಸ್ಟ್ ಸಾಲಿಕೇರಿ.	95—0—0
54 51	ಎಮ್. ಸಂಜೀವ ಸೆಟ್ಟಿ, ತಿಮ್ಮಪ್ಪ ಸೆಟ್ರ ಅಳಿಯ, ಮಟ್ಪಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	183-14—0
248/—	Do	25-10—0
780/—	Do	604—0—0
450/—	Do	349-12—0
641/52	Do	22—9—0
699/52	Do	60—0—0
708/—	Do	22—0—0

Office of the Bank,
BRAHMAVAR,
Dated 19-10-53

(Sd.) ಬಿ. ಬಾಸ್ಕರ್ ಸೆಟ್ಟಿ,
ಏಜಂಟ್.

ವೀರಮಾತೆ

ವನಿತಾ ಸೇವಾ ಸಮಾಜದ ಬೆಳ್ಳೀ ಹಬ್ಬ—ವಿಶೇಷ ಸಂಚಿಕೆ
(ಸಪ್ಟಂಬರ-ಅಕ್ಟೋಬರ ಸಂಯುಕ್ತ ಸಂಚಿಕೆ)

ವನಿತಾ ಸೇವಾ ಸಮಾಜವು ನಡಿಸಿಕೊಂಡು ಹೋಗುತ್ತಿರುವ ಸಂಸ್ಥೆಗಳ—ಸಂಚಾಲಕರು—ಆಜೀವ ಸದಸ್ಯರೂ ಮುಂತಾದ ವಿವರಗಳುಳ್ಳ, ಲೇಖನಗಳು, ಹಾಗೂ ವಾಡಿಕೆಯಂತೆ ಸಾಮಾನ್ಯ ವಿಷಯಗಳೊನ್ನೊಳಗೊಂಡ ಮನನೀಯ ಲೇಖನಗಳುಳ್ಳದ್ದು. ಪ್ರತಿಯೊಬ್ಬರು ಸಂಗ್ರಹಿಸಲೇ ಬೇಕಾದದ್ದು ಆದ ವಿಶೇಷ ಸಂಚಿಕೆಯು.

ಏಜಂಟರು ಮಾರಾಟಗರು ಓದುಗರು, ತಮ್ಮ ಬೇಡಿಕೆಗಳಿಗಾಗಿ ತ್ವರೆ ಮಾಡಬೇಕು.

ಮುಖ್ಯ ಸಂಪಾದಕಿಯರು:- **ಕು. ಸರೋಜಿನಿ ಮಹಿಷಿ, M. A.**

ಪ್ರಕಾಶಕರು:- **ಬಿ. ನಾ. ಬೈಚವಾಳ, B. A.**

ವೀರಮಾತೆ ಕಾರ್ಯಾಲಯ ಧಾರವಾಡ.

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕುದುರಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅವಿಲು ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ. 2 0 0
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 8 0

ಸುಲಭದಲ್ಲಿ ಇಂಗ್ಲಿಷ್ ರೂ. 1 3 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ವಿವರವಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಷನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಗೇರುಬೀಜ ಕಾರ್ಖಾನೆಗೆ ಬೆಂಕಿ– ಇದೇ ತಾ 18ರಲ್ಲು ರಾತ್ರಿ ಸಾಧಾರಣ 11 ಗಂಟೆಗೆ ಮಂಗಳೂರಿನ ಮಟ್ಟೋಳಿಯ ಫೆರ್ನಾಂಡಿಸ್ ಸಹೋದರರ ಗೇರುಬೀಜ ಕಾರ್ಖಾನೆಯ ಗೋಡೌನಿಗೆ ಬೆಂಕಿ ತಗಲಿ ಸಾಧಾರಣ ಮೂರು ಲಕ್ಷಕ್ಕೂ ಮಿಕ್ಕಿ ನಷ್ಟ ಉಂಟಾಗಬಹುದೆನ್ನಲಾಗಿದೆ. ಬೆಂಕಿಯ ಕಾರಣವೇನೆಂದು ಇನ್ನೂ ವರದಿಯಾಗಿಲ್ಲ. ಮಂಗಳೂರಿನ ಅಗ್ನಿ ಶಾಮಕ ದಳದ 90 ಮಂದಿ ಒಂದೂವರೆ ಗಂಟೆ ಕಾಲ ಬೆಂಕಿಯೊಡನೆ ಹೋರಾಡಿ ಬೆಂಕಿಯನ್ನು ಹತೋಟಿಗೆ ತಂದುದರಿಂದ ಇಡೀ ಕಾರ್ಖಾನೆಗೇ ಬೆಂಕಿ ಹಬ್ಬುವುದನ್ನು ತಡೆ ಹಿಡಿದಂತಾಯಿತು.

ಶಾಲಾ ದಿನಾಚರಣೆ— ಸ್ಥಳೀಯ ಗಣಪತಿ ಹೈಸ್ಕೂಲಿನ ಶಾಲಾ ದಿನಾಚರಣೆಯು ಇದೇ ತಾ 17ರಲ್ಲು ಉಡುಪಿ ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಎಚ್. ಪಾಂಡುರಂಗ ರಾಯರು ಶಾಲಾ ವರದಿಯನ್ನೋದಿದರು. ಬಹುಮಾನ ವಿತರಣೆಯಾದ ಬಳಿಕ ಶ್ರೀ ಎಸ್. ರಾಮಚಂದ್ರ ಭಟ್ಟರು ಶಾಲಾ ಸ್ವಸ್ತಿವಾಚನ ಮಾಡಿದರು. ಶ್ರೀ ಜಿ. ಸೋಮಶೇಖರ ರಾಯರು ಧನ್ಯವಾದಗಳನ್ನೀಯುತ್ತಾ ಶಾಲೆಯನ್ನು ಪೂರಾಟ ಮಾಡುವ ಆಲೋಚನೆಯಲ್ಲಿವೆಂದು ಹೇಳಿದರು. ವಿವಿಧ ವಿನೋದಗಳಾಗಿ ಸಮಾರಂಭ ಕೊನೆಗೊಂಡಿತು.

ಚಿಟ್ ಫಂಡ್ ಮೊಕದ್ದಮೆ— ಮಂಗಳೂರು ಮತ್ತು ಉಡುಪಿಯಲ್ಲಿ 1951—52 ರಲ್ಲು ಠಕಾರಿ ಚಿಟ್ ಫಂಡುಗಳನ್ನು ನಡೆಸಿ ಜನರನ್ನು ಮೋಸ ಗೊಳಿಸಿದರೆಂಬ ಆರೋಪಕ್ಕೆ ಗುರಿಯಾದ ಮಲಬಾರಿನ ಕೆ. ಸಿ. ಗೋಪಿನಾಥ ಮೆನೋನ್ ಎಂಬವರಿಗೆ ಒಂದು ವರ್ಷದ ಸಶ್ರಮ ಶಿಕ್ಷೆಯನ್ನು ಚಿಟ್ ಫಂಡ್ ಕೇಸುಗಳ ಸ್ಪೆಶಲ್ ಮೆಜಿಸ್ಟ್ರೇಟರಾದ ಶ್ರೀ ಎಸ್. ಯು. ಪಿ. ನಾಯಕರು ವಿಧಿಸಿದರು.

ಗೋ ಸಂರಕ್ಷಣಾ ಕಮಿಟಿ ಸಭೆಯು— ತಾ 11ರಲ್ಲಿ ಜರಗಿ ನಗರದಲ್ಲಿ ಇದೇ ತಾ 14ರಿಂದ ಗೋಸಪ್ತಾಹವನ್ನು ಆಚರಿಸಬೇಕೆನ್ನುವ, ಪಟ್ಟಿ ಕೊಟ್ಟಿಗೆಯಲ್ಲಿ ಕಟ್ಟಿ ಸಾಕುವ ದನ ಕರುಗಳನ್ನು ಆಯಾಯಾ ವಾರ್ಡುಗಳಲ್ಲಿ ಕೆಲವು ತಾಸುಗಳ ವರೆಗಾದರೂ ಮೇಯಿಸುವ ವ್ಯವಸ್ಥೆ ಮಾಡಬೇಕೆಂದು ನಗರ ಸಭೆಯನ್ನೂ ಕೇಳಿಕೊಳ್ಳುವ ನಿರ್ಣಯಗಳಾದುವು.

ಹೆಮ್ಮಕ್ಕಳಲ್ಲಿ ಉಳಿತಾಯದ ಪ್ರಚಾರ— ಮಾಡುವ ಸಲುವಾಗಿ ಮಂಗಳೂರಿನ ಭಗಿನೀ ಸಮಾಜದ ಕೊಡಿಯಾಲ ಬೈಲು ಸೆಂಟರಿನಲ್ಲಿ ಉಳಿತಾಯ ಯೋಜನೆಯ ಸಭೆಯೊಂದು ಶ್ರೀಮತಿ ಶಾಂತೇರಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಉಳಿತಾಯ ಯೋಜನೆಯ ಕುರಿತು ಶ್ರೀಮತಿ ಶಾಂಭವಿ ಆರ್. ಪೂಂಜರೂ ಶ್ರೀ ಎಸ್. ಜಿ. ಪಾಲರೂ ಮಾತನಾಡಿದರು. ಶ್ರೀಮತಿ ಉಮಾದೇವಿ ವಿ. ಕಾಮತರು ಧನ್ಯವಾದಗಳನ್ನರ್ಪಿಸಿದರು. ಉಳಿತಾಯದ ಕುರಿತು ಚಲಚ್ಚಿತ್ರ ಪ್ರದರ್ಶನದೊಡನೆ ಸಭೆಯು ಮುಕ್ತಾಯವಾಯಿತು.

ವಾರ್ಷಿಕ ದಿನಾಚರಣೆ— "ವಿವೇಕಾಭ್ಯುದಯ"ದ 20ನೇ ವಾರ್ಷಿಕ ದಿನಾಚರಣೆಯು ತಾ 14ರಲ್ಲು ಮಂಗಳೂರಿನ ಪತ್ರಿಕೋದ್ಯೋಗಿ ಸಂಘದ ಕಾರ್ಯಾಲಯದಲ್ಲಿ ಶ್ರೀ ಎಮ್. ಕೆ. ದೇವರಾಜರವರ ಅಧ್ಯಕ್ಷತೆಯಲ್ಲಿ ಜರಗಿತು. "ವಿವೇಕಾಭ್ಯುದಯ" ಪತ್ರಿಕಾ ಸಂಪಾದಕರಾದ ಶ್ರೀ ಡಿ. ಪುಟ್ಟ ಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಅಜಲಾಡಿ ಮಹಾಬಲ ರೈ, ಎಚ್. ಭೀಮ ರಾವ್ ಮೊದಲಾದವರು ಮಾತನಾಡುತ್ತಾ, ಇಪ್ಪತ್ತು ವರ್ಷ ಪತ್ರಿಕೆಯನ್ನು ಮುನ್ನಡೆಸಿಕೊಂಡು ಬಂದ ಶ್ರೀ ಪುಟ್ಟ ಸ್ವಾಮಿಯವರನ್ನು ಅಭಿನಂದಿಸಿ ಈ ಪತ್ರಿಕೆಯು ರಜತ, ಸ್ವರ್ಣ ಮಹೋತ್ಸವಗಳನ್ನು ಆಚರಿಸುವಂತಾಗಲಿ ಎಂದೂ ಆಶಿಸಿದರು.

ರೆ! ಫಾ! ಕೊಯಿಲೋರವರ ನಿಧನ— ಮಂಗಳೂರಿನ ಸೈಂಟ್ ಎಲೋಸಿಯಸ್ ಕಾಲೇಜಿನ ಮಾಜಿರೆಕ್ಟರ್ ಮತ್ತು ಪ್ರಿನ್ಸಿಪಾಲರಾಗಿದ್ದ ರೆ! ಫಾ! ಜೆ. ಎ. ಸಿ. ಕೊಯಿಲೋ, ಎಸ್. ಜೆ. ಅವರು ಇದೇ ತಾ 18ರಲ್ಲುಬೆಳಿಗ್ಗೆ ಹೃದಯ ಸ್ತಂಭನದಿಂದಾಗಿ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ. ಶ್ರೀಯುತರ ಶವ ಸಂಸ್ಕಾರವು ತಾ 19ರಲ್ಲು ಬೆಳಿಗ್ಗೆ ನಡೆಯಿತು.

ವಿಜಯ ದಶಮಿ ಸಮಾರಂಭವು ಸ್ಥಳೀಯ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಡೆಯಿಂದ ತಾ. 17ರಲ್ಲು ಸಂಜೆ ಕೇಂದ್ರ ಮೈದಾನಿನಲ್ಲಿ ಗವರ್ನಮೆಂಟ್ ಕಾಲೇಜಿನ ನಿವೃತ್ತ ಕನ್ನಡ ಲೆಕ್ಚರರ್ ಶ್ರೀ ಕೆ. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜಯ ದಶಮಿ ಉತ್ಸವ ನಡೆಯಿತು.

ಹೆತ್ತವರ ದಿನಾಚರಣೆ:— ಗಣಪತಿ ಹೈಸ್ಕೂಲಿನ ಉಪಾಧ್ಯಾಯ ಹಾಗೂ ಹೆತ್ತವರ ಸಂಘದ ದಿನಾಚರಣೆಯು ಇದೇ ತಾ. 15ರಲ್ಲು ಸಂಜೆ ಡಾ. ಎಮ್. ಎಸ್. ಎ. ಶರ್ಮರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಮದ್ರಾಸು ಸರಕಾರದ ಹೊಸ ಪ್ರಾಥಮಿಕ ಶಿಕ್ಷಣ ಯೋಜನೆಯ ಮೇಲೆ ಭಾಷಣಗಳಾದುವು. ಹೊಸ ವರುಷಕ್ಕೆ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು. ಸಭಾರಂಭಕ್ಕೆ ಮೊದಲು ಶ್ರೀ ಎಮ್. ಎಸ್. ಎ. ಶರ್ಮರು ಶಾಲಾಸ್ಮೃತಿಗಳ ಪ್ರದರ್ಶನವನ್ನು ತೆರೆದರು.

ರೈಲ್ವೆ ಸ್ಥಳೀಯ ಸಲಹಾಸಮಿತಿ ಸಭೆಯು— ತಾ 15ರಲ್ಲು ಮಧ್ಯಾಹ್ನ ಕೆನರಾ ಚೇಂಬರ್ ಆಫ್ ಕೊಮರ್ಸ್ ಕಚೇರಿಯಲ್ಲಿ ಕಲ್ಲಿಕೋಟೆಯ ಅಸಿಸ್ಟೆಂಟ್ ಟ್ರಾಫಿಕ್ ಸುಪರಿಂಟೆಂಡೆಂಟ್ ಶ್ರೀ ಇ. ಪಿ. ಮತ್ತಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ರೈಲ್ವೆ ಸ್ಟೇಶನಿನ ಪಾರ್ಸೆಲ್ ಆಫೀಸಿನಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಬೇಂಚನ್ನು ಇಡುವ ವ್ಯವಸ್ಥೆ, ರೈಲಿನ ಮೂಲಕ ಟಿಕೇಟಿಲ್ಲದೆ ಪ್ರಯಾಣ ಮಾಡಿಕೊಂಡು ಮಂಗಳೂರಲ್ಲಿ ತುಂಬಿಹೋದ ತಮಿಳು, ಮಳೆಯಾಳಿ ಭಿಕ್ಷುಕರ ಹಾವಳಿಗೆ ನಿಗಾ ಕೊಡಲಾಗುವುದೆನ್ನುವ ಇತ್ಯಾದಿ ಭರವಸೆಗಳು ಅಧ್ಯಕ್ಷರಿಂದ ಸಭಿಕರಿಗೆ ಕೊಡಲಾದುವು.

ದೀಪದಾನ

ಕನ್ನಡದ ಏಕಮಾತ್ರ ವಾರ್ಷಿಕ

ವಿಜೃಂಭಣೆಯ ದ್ವಿತೀಯ ಸಂಪುಟ

ಪ್ರಕಾಶನ ದೀಪಾವಳಿ: ೭-೧೧-೧೯೫೩

ಬೆಲೆ: ೧-೮-೦ ಇನ್ನೂರು ಪುಟಗಳು ಅಂಚೆ ಸಹಿತ ೨-೦-೦

ಈ ಸಲದ ವಿಶೇಷ ಆಕರ್ಷಣೆ

ಕನ್ನಡ ಸುಪ್ರಸಿದ್ಧ ಕಾದಂಬರಿಕಾರರಾದ ಪ್ರೊ. ವಿ. ಎಂ. ಇನಾಂದಾರ್ ಅವರ

'ಮುಗಿಯದ ಕತೆ'

ಸಂಪೂರ್ಣ ಕಾದಂಬರಿ ಅಲ್ಲದೆ

ಶ್ರೀಪೇಜಾವರ ಮಠದ ಶ್ರೀಪಾದಂಗಳು, ಶ್ರೀ. ಆಲೂರ ವೆಂಕಟರಾಯರು, ಶ್ರೀ. ಬಿ. ವಿ. ರಮಣ, ಪ್ರೊ. ಬಿ. ಆರ್. ಕುಲಕರ್ಣಿ, ಶ್ರೀಮತಿ ಶಾಂತಾದೇವಿ ಮಾಳವಾಡ, ಶ್ರೀ. ವ್ಯಾಸರಾಯ ಬಲ್ಲಾಳ, ಪ್ರೊ. ಹರಿದಾಸಭಟ್ಟ, ಶ್ರೀ. ವಿ. ರಾ. ಜೋಶಿ, ಶ್ರೀಮತಿ ಸರೋಜಿನಿ ಮಹಿಷಿ, ಪಂಡಿತ ಕೆ. ಟಿ. ಪಾಂಡುರಂಗಿ ಮುಂ .

ಸಮಾಜಧರ್ಮ-ಸಾಹಿತ್ಯ-ಸಂಸ್ಕೃತಿ-ರಾಜನೀತಿ ವಿಷಯದ

ಮೌಲಿಕ ಲೇಖನಗಳು ಶ್ರೀ. ನಗಳೂರು ರಂಗನಾಥ ಮುತಾ್ತ

ಪ್ರೊ. ಬೇಂದ್ರೆ, ಶ್ರೀ. ಪು. ತಿ. ನ., ಪ್ರೊ. ಗೋಕಾಕ, ಡಾ. ಕೆರ್, ಪ್ರೊ. ಅಡಿಗ, ಶ್ರೀ. ಈಶ್ವರ ಸಣಕಲ್ಲ, ಶ್ರೀ. ರಾಮಚಂದ್ರಶರ್ಮ, ಶ್ರೀ. ಎಕ್ಕುಂಡಿ.

ಅವರಿಂದ 'ಕಾವ್ಯಕುಂಜ' ಇನ್ನೂ

ಪ್ರೊ. ನಾ. ಕಸ್ತೂರಿ, ಶ್ರೀ. ಪಾಟೀಲ ಪುಟ್ಟಪ್ಪ, ಪ್ರೊ. ಶ್ರೀಧರ, ಪ್ರೊ. ಈಶ್ವರನ್, ಪ್ರೊ. ಅನಂತನಾರಾಯಣ, ಶ್ರೀ. ಗೊರೂರು ರಾಮಸ್ವಾಮಯ್ಯಂಗಾರ್ ಶ್ರೀ ವಸಂತ ಕವಲಿ ಮುಂತಾದವರ ಹರಟೆ ನಾಟಕ-ಕಥೆಗಳು.

ಮಿಹಿರಾ ವರ್ಷಭವಿಷ್ಯ

ವ್ಯಕ್ತಿ ಚಿತ್ರಗಳು, ಚಿತ್ರಪ್ರಪಂಚ, ಕುಟುಂಬಯೋಜನೆ, ಕಲಾ ಸೌಂದರ್ಯ, ಕೌಟುಂಬಿಕ ಸಮಸ್ಯೆಗಳು ಮತ್ತು ಸಂಸ್ಕೃತ ಕಥೆಗಳು ಇತ್ಯಾದಿ.

ಇಂದೇ ಬರೆದು ನಿಮ್ಮ ಪ್ರತಿ ಕಾಯ್ದಿರಿಸಿರಿ

—ದೀಪದಾನ ಪ್ರಕಾಶನ, ಧಾರವಾಡ—

ಶೋಭನವಾಗಿ ಎಷ್ಟು ವರ್ಷವಾದರೇನು? ಸತಿಯ ಶರೀರದಲ್ಲಿ ಬೇರೂರಿರುವ **ಬಹಿಷ್ಠೆ ಸಂಬಂಧದ ಹೊಟ್ಟೆ ನೋವು** ಪೂರ್ಣ ಗುಣವಾಗಿ **ಪತಿಯ** ಶರೀರದಲ್ಲಿ ಸಂತಾನ ಸಾಧಕವಾದ ವೀರ್ಯಾಣು (Sperms) ಗಳು ವೃದ್ಧಿಯಾಗಿ ನಶಿಸಿದ **ತಾರುಣ್ಯವು ಪುನರುಜ್ಜೀವನಗೊಳ್ಳುವ** ವರೆಗೆ ಖಂಡಿತ **ಸಂತಾನ**ವಾಗುವುದಿಲ್ಲ. ತಿಳಿಯಿರಿ.

94 ವರ್ಷ ಖ್ಯಾತಿಪಡೆದ ಪಂ॥ **ಅಂಬಳೆ ರಾಮಸ್ವಾಮಿ ಅಯ್ಯರ್** ರವರ ಸುಪ್ರಸಿದ್ಧ

ಸಂತಾನ ಸಿಂಧೂರ ಭಸ್ಮವು ಈ **ಹೊಟ್ಟೆನೋವನ್ನು** (Men-[illegible] [illegible] pain) ನಿರ್ಮೂಲಿಸಿ, ಬಹಿಷ್ಠೆಯ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಾಶಯ ರೋಗಗಳನ್ನೂ, ಗರ್ಭ ಪತನವನ್ನೂ ನಿವಾರಿಸಿ, **ಬಂಜೆತನ** ವನ್ನು ಕೊನೆಗಾಣಿಸಿ **ಸಂತಾನ** ಕೊಡುತ್ತದೆ.

ಮದನ ವಿಲಾಸ— ಈ ಗುಳಿಗೆಗಳು ಪುರುಷನ ಶರೀರದ ಅತ್ಯುತ್ತಮ ಧಾತುವಾಗಿ ಮಾಡಿ, ವೀರ್ಯಾಣು (Sperms) ಗಳನ್ನು ವೃದ್ಧಿಪಡಿಸಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ನಪುಂಸಕತ್ವವನ್ನು ಹೋಗಲಾಡಿಸಿ, ನಶಿಸಿದ ತಾರುಣ್ಯವನ್ನು ಪುನರುಜ್ಜೀವನಗೊಳಿಸುತ್ತವೆ

ಈ ಹೊಟ್ಟೆ ನೋವು ಇತ್ಯಾದಿಗಳು ಕೂಡಲೆ ಗುಣವಾಗಿ ಜಾಗ್ರತೆ ಸಂತಾನ ಫಲ ಬೇಕೋ? ಹಾಗಾದರೆ ಇಬ್ಬರೂ ಈ ಔಷಧಿಗಳ 1 ಸೆಟ್ ಸೇವಿಸಿ

ನಿಷೇಕ (NUPTIALS) ವಾಗಿ 16-18 ವರ್ಷ ಮಕ್ಕಳಿಲ್ಲದ ನೂರಾರು ಬಂಜೆ ದಂಪತಿಗಳೂ ತಾಯಿತಂದೆಗಳಾಗಿದ್ದಾರೆ.

ಕ್ರಯ: — 2 ಔಷಧಿಗಳ 1 ಸೆಟ್ ಗೆ ಪೋಸ್ಟೇಜ್ ಸಹ ರೂ. 7 ರೂ. M. O. ಮಾಡಿರಿ. ಕೂಡಲೆ ರಿಜಿಸ್ಟರ್ ಪಾರ್ಸೆಲ್ ರವಾನೆ. ತಮಿಳು ಕ್ಯಾಟಲಾಗ್ ಉಚಿತ.

ಜವಾಬಿಗಾಗಿ 2 ಆಣೆ ಸ್ಟಾಂಪು ಕಳಿಸಿರಿ. ತಯಾರಕರು:-

A. ರಾಮಸ್ವಾಮಿ ಅಯ್ಯರ್ ಸನ್ & ಕಂಪೆನಿ,

628, "ಸಂತಾನ ಸಿಂಧೂರ" ನಿಲಯ, (ಸೀತಾ ವಿಲಾಸ ಛತ್ರದ ಹಿಂಭಾಗ) ರಾಮರಾಜ ರೋಡ್ ಪೋಸ್ಟ್ ಬಾಕ್ಸ್. ಮೈಸೂರು. (South India)

ಮದ್ರಾಸು ಸರಕಾರದ ಗ್ರಂಥ ಸ್ಪರ್ಧೆ

ಈ ವರ್ಷದ ಸ್ಪರ್ಧೆಯಲ್ಲಿ ಬಹುಮಾನ ಪಡೆಯಲು ಈ ಕೆಳಗಿನ ಗ್ರಂಥಗಳು ಯೋಗ್ಯವೆಂದು ಮದ್ರಾಸು ಕರ್ನಾಟಕ ಸಂಘವು ನಿಶ್ಚಯಿಸಿದೆ.

ಕನ್ನಡ ವರ್ಣಗಳು (ವಿಮರ್ಶೆ-ಕೈ ಬರಹದ ಕೃತಿ) ಶ್ರೀ. ಸೇಡಿಯಾಪು ಕೃಷ್ಣ ಭಟ್ಟ.

ಸೌಂದರಾನಂದ ಮಹಾ ಕಾವ್ಯ (ಹಸ್ತ-ಕೈಬರಹ) ಶ್ರೀ ಕಡವ ಶಂಭು ಶರ್ಮ

ಭಾರತದ ಗುರುಕುಲ (ಯಕ್ಷಗಾನ) ಕವಿ ಭೂಷಣ ಶ್ರೀ. ಕೆ. ಪಿ. ವೆಂಕಪ್ಪ ಶೆಟ್ಟಿ.

ಈ ನಿರ್ಣಯವನ್ನು ಸರಕಾರವು ಒಪ್ಪಿಕೊಂಡಿದೆ. ಇದರಂತೆ ಪ್ರತಿ ಪುಸ್ತಕಕ್ಕೂ ರೂ 500 ರ ಬಹುಮಾನವು ಕೊಡಲ್ಪಡುವುದು.

ಪತ್ರ ವ್ಯವಹಾರ

ದ. ಕ. ಜಿಲ್ಲಾ ಬೋರ್ಡು ಸ್ಪೆಶಲ್ ಆಫೀಸರರು ಈ ಕಡೆ ಗಮನಿಸುವರೇ?

ಅಯ್ಯಾ! ಉಡುಪಿ ತಾಲೂಕು ಕುಕ್ಕೆಹಳ್ಳಿ ಗ್ರಾಮದಲ್ಲಿ ಒಂದು ಬೋರ್ಡು ಎಲಿಮೆಂಟರಿ ಶಾಲೆ ಇದೆ. ಅದು ಸ್ಥಳೀಯ ಮಹನೀಯರೊಬ್ಬರ ಬಾಡಿಗೆಯ ಕಟ್ಟೋಣದಲ್ಲಿ ಇದೆ. 1948ನೇ ಇಸವಿಯ ವರೇಗೆ ಈ ಕಟ್ಟೋಣಕ್ಕೆ ತಿಂಗಳೊಂದರ ರೂ 7-0-0 ಬಾಡಿಗೆ ಸಲ್ಲುತಿತ್ತು. ಸದ್ರಿ ಕಟ್ಟೋಣ ಮಾಲಿಕರ ಮನೆಯೂ ಕೂಡ ಶಾಲೆಯ ಸಮೀಪವೇ ಇದೆ. ಸದ್ರಿ ಶಾಲಾ ಕಟ್ಟೋಣದ ಮಾಲಿಕರು ಒಂದು ಬಾವಿಯನ್ನು ತೋಡಿಸಿ ಅದೇ ಬಾವಿಯನ್ನು ಶಾಲಾ ಉಪಯೋಗಕ್ಕೆಂದು ತೋರಿಸಿ 1948ನೇ ಇಸವಿಯಾರಭ್ಯ ರೂಪಾಯಿ 3-0-0ನ್ನು ಹೆಚ್ಚಿಗೆಯಾಗಿ ಬಾವಿ ಬಗ್ಗೆ ಬಾಡಿಗೆಯನ್ನು ಜಿಲ್ಲಾ ಬೋರ್ಡಿನಿಂದ ಪಡೆಯುತ್ತಿರುತ್ತಾರೆ.

ಈಗ ಶಾಲಾ ಸಮೀಪವೇ ಒಂದು ಸರಕಾರಿ ಬಾವಿ ತೋಡಿಸಲ್ಪಟ್ಟಿರುತ್ತದೆ. ಹಾಗಾದ್ದರಿಂದ ಶಾಲಾ ಉಪಯೋಗಕ್ಕೆ ಬಾಡಿಗೆಯ ಬಾವಿಯು ಅಗತ್ಯವಿರುವುದಿಲ್ಲ.

ಮಾಲಿಕರು ಸದ್ರಿ ಬಾವಿಯಿಂದ ಸೇಕಡಾ 90ರಷ್ಟು ಪ್ರಯೋಜನವನ್ನು ತಾವೇ ಹೊಂದುತ್ತಿರುತ್ತಾರೆ. ಎಂದರೆ ತನ್ನ ಮನೆಯ ಉಪಯೋಗದ ಬಗ್ಗೆ, ಜಾನುವಾರುಗಳ ಉಪಯೋಗದ ಬಗ್ಗೆ ತಾನು ಬೆಳೆಸಿದ ಬಾಳೆ ತೆಂಗು ಮಾವು ತರಕಾರಿ ಮೊದಲಾದ ಕೃಷಿಯ ಬಗ್ಗೆ ಸದ್ರಿ ಬಾವಿಯ ನೀರನ್ನು ಉಪಯೋಗಿಸುತ್ತಾ ಬರುತ್ತಾರೆ. ಇವರ ಸ್ವಂತ ಉಪಯೋಗದ ಬಗ್ಗೆ ಬೇರೆ ಬಾವಿ ಇರುವುದಿಲ್ಲ.

ಈ ವರೇಗೆ ಶಾಲೆಗಾಗಿ ಸದ್ರಿ ಬಾವಿಯ ಉಪಯೋಗವು ಸ್ವಲ್ಪ ಮಟ್ಟಿಗೆ ಇತ್ತು. ಈಗಂತೂ ಸರಕಾರಿ ಬಾವಿ ಶಾಲೆಯ ಹತ್ತಿರವೇ ಇರುವುದರಿಂದ ಬಾಡಿಗೆಯ ಬಾವಿಯು ಅಗತ್ಯವೇ ಇರುವುದಿಲ್ಲ

ಆದುದರಿಂದ ಮಾನ್ಯ ದ. ಕ. ಜಿಲ್ಲಾ ಬೋರ್ಡು ಸ್ಪೆಶಲ್ ಆಫೀಸರರು ಈ ಕಡೆ ತನ್ನ ನಿಗಾ ವಹಿಸಿ ಸಾರ್ವಜನಿಕ ಹಣವು ದುರುಪಯೋಗವಾಗದಂತೆ ನೋಡಿಕೊಳ್ಳಬೇಕಾಗಿ ಕೋರಿಕೆ.

ಸದ್ರಿ ಶಾಲಾ ಕಟ್ಟೋಣದ ನಾದುರಸ್ತಿಯಲ್ಲಿ ಇದ್ದು ಶಾಲಾ ಕೋಣೆಯಲ್ಲಿ ಹುತ್ತವು ಬೆಳೆದಿರುತ್ತದೆ. ಒಂದು ದಿನ ಒಂದು ನಾಗರ ಹಾವು ಆ ಹುತ್ತದಲ್ಲಿ ಇತ್ತೆಂದೂ ಶಾಲಾ ಮಕ್ಕಳು ಗಾಬರಿಯಾದರೆಂದೂ ಉಪಾಧ್ಯಾಯರು ಆ ನಾಗರ ಹಾವನ್ನು ಓಡಿಸಿದರೆಂದೂ ಕೇಳುತ್ತೇನೆ. ಇದು ಬಹಳ ಅಪಾಯದ ವಿಷಯವಾಗಿಯದೆ.

ಅದ್ದರಿಂದ ಕಟ್ಟೋಣದ ರಿಪೇರಿಯೂ ಅಗತ್ಯವಾಗಿರುತ್ತದೆ ಎಂಬುದನ್ನು ಸಂಬಂಧಪಟ್ಟವರ ಅವಗಾಹನೆಗೆ ಈ ಮೂಲಕ ತಂದಿರುತ್ತೇನೆ.

K. Subbanna Hegde.
Contractor Kukkehalli.

ಹೆಗ್ಡೆ ಡಿಸ್ಪೆನ್ಸರಿ

ಕೆಂಜೆ—ಡಾ! ಬಿ. ಆರ್. ಹೆಗ್ಡೆಯವರ "ಹೆಗ್ಡೆ ಡಿಸ್ಪೆನ್ಸರಿ"ಯ ಉದ್ಘಾಟನಾ ಸಮಾರಂಭವು ಇದೇ ತಾ 16ನೇ ಬೆಳಗ್ಗೆ ಬಳ್ಳಾರಿಯ ಕೆಂಜೆಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಆಸ್ತಿಕರ ಕಾಯಿದೆಯ ಸ್ಥೂಲ ವಿವರ

(೧೦ನೇ ಪುಟದಿಂದ)

ದರೆ ಮೃತನು ತಾನಾಗಿಯೇ ವಿಶ್ವಸ್ತ ಮಂಡಳವೊಂದನ್ನು ರಚಿಸಿದ್ದು ಆದರಲ್ಲಿ ಸಹ-ಸದಸ್ಯನಾಗಿದ್ದರೆ ಮರಣಕ್ಕೆ ಎರಡು ವರ್ಷ ಪೂರ್ವದಲ್ಲಿ ಆ ಮಂಡಳ ಅಸ್ತಿತ್ವದಲ್ಲಿರಬೇಕಾಗುವುದು. ತಾನು ರಚಿಸಿದ ವಿಶ್ವಸ್ತ ಮಂಡಳದ ಪೂರ್ಣ ಸದಸ್ಯನೇ ಮೃತನಾಗಿದ್ದರೆ ಮರಣಕ್ಕೆ ೫ ವರ್ಷ ಪೂರ್ವ ಆ ಮಂಡಳ ಅಸ್ತಿತ್ವದಲ್ಲಿರಬೇಕು.) (೩) ಯಾವ ಕರಾರೂ ಹಾಕದೆ ನಿರ್ದಿಷ್ಟ ಅವಧಿಯಲ್ಲಿ ದಾನಮಾಡಿದ ಆಸ್ತಿ ಇತ್ಯಾದಿ.

ಕೆಲವು ರಿಯಾಯತಿಗಳು

ಕರಾಕರಣೆಗೆ ಅರ್ಹವಾದ 'ಆಸ್ತಿಯ ಒಟ್ಟು ಬೆಲೆಯ ಮೇಲೆ ಕಂಟ್ರೋಲರರೆಂಬ ಅಧಿಕಾರಿಗಳು ಕರವನ್ನು ಹೊರಿಸುವರು. ಮೃತನ ಮರಣ ಸಮಯದಲ್ಲಿ ಅವನ ಹೆಸರಿನಲ್ಲಿರುವ ಮೇಲೆ ವಿವರಿಸಿದ ವಿವಿಧ ಬಗೆಯ ಆಸ್ತಿಗಳನ್ನು ಬಹಿರಂಗ ಪೇಟೆಯಲ್ಲಿ ಮಾರುತ್ತಿದ್ದರೆ ಯಾವ ಬೆಲೆ ಬರುತಿತ್ತೋ ಅದನ್ನೆ ಆಸ್ತಿಯ ಬೆಲೆಯಾಗಿ ಗಣಿಸಲಾಗುವುದು. ಅವಿಭಕ್ತ ಕುಟುಂಬಕ್ಕೆ ಸೇರಿದ ಅಳಿಯ ಸಂತಾನ ಮರುಮಕ್ಕತ್ತಾಯಂ ಮತ್ತು ಮಿತಾಕ್ಷರಪದ್ಧತಿಗಳಲ್ಲಿ ಮೃತನದೆಸೆಯಿಂದ ಅವನ ಪಾಲು ಪ್ರತ್ಯೇಕವಾಗುವುದಿಲ್ಲವಾದರೂ ಅವನ ಆಸ್ತಿಯ ಬೆಲೆ ಕಟ್ಟುವಾಗ ಅದು ಪ್ರತ್ಯೇಕವಾಗಿರುವುದೆಂದೇ ಗಣನೆಗೆ ತೆಗೆದುಕೊಳ್ಳಲಾಗುವುದು. ಆಸ್ತಿಕರವನ್ನು ಹೇರುವುದಕ್ಕೋಸ್ಕರ ಬೆಲೆ ನಿರ್ಣಯಿಸುವಾಗ ಕೆಲವು ಸಾಲ ಮುಂತಾದವುಗಳನ್ನು ವಜಾ ಮಾಡಲಾಗುವುದು -(೧) ಒಂದು ಸಾವಿರ ರೂಪಾಯಿಯನ್ನು ಮೀರದಂತೆ ಮೃತನ ಅಂತ್ಯ ಸಂಸ್ಕಾರದ ವೆಚ್ಚ. (೨) ಯೋಗ್ಯ ಹಾಗೂ ಅಧಿಕೃತ ಸಾಲಗಳು (೩) ಮರದ ಕ್ಷಿಣೆಗಾಗಿ ೫೦೦೦ ರೂಪಾಯಿ ವರೆಗೆ ಮಾಡಿದ ಸಾಲ (೪) ಪರದೇಶಗಳಲ್ಲಿ ಇರುವ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವಾಗ ಆಗುವ ವೆಚ್ಚದಲ್ಲಿ ಆ ಆಸ್ತಿಯ ಬೆಲೆಯ ಪ್ರತಿಶತ ೫ನ್ನು ಮೀರದಷ್ಟು; ಮತ್ತು (೫) ಮರಣದ ದಿನದ ವರೆಗೆ ಮೃತನು ಕೊಡಬೇಕಾಗಿದ್ದ ಕರ ಬಾಕಿ.

ಕರದ ದರಗಳನ್ನು ಹಂತಗಳಲ್ಲಿ ನಿರ್ಣಯಿಸಲಾಗಿರುವುದು. ಮಿತಾಕ್ಷರ, ಮರುಮಕ್ಕತ್ತಾಯಂ ಮತ್ತು ಅಳಿಯಸಂತಾನ ಪದ್ಧತಿಯ ಕುಟುಂಬದ ಸದಸ್ಯನ ಸಂಬಂಧದಲ್ಲಿ ೫೦೦೦೦ ರೂಪಾಯಿಯನ್ನೂ ಬೇರೆಯವರ ಸಂಗತಿಯಲ್ಲಿ ಒಂದು ಲಕ್ಷ ರೂಪಾಯಿಯನ್ನೂ ಕರ ಮುಕ್ತತೆಯ ಪರಮಾವಧಿ ಮಿತಿಯಾಗಿ ನಿರ್ಣಯಿಸಲಾಗಿದೆ.

ಇದಲ್ಲದೆ ಬೇರೆ ಕೆಲವು ಕರಮುಕ್ತ ಆಸ್ತಿಗಳೂ ಇವೆ. ಅವುಗಳ ಮೇಲೆ ಕರಾಕರಣೆ ಮಾಡಲಾಗುವುದಿಲ್ಲವಾದರೂ ಆಸ್ತಿಯ ಒಟ್ಟು ಬೆಲೆ ನಿರ್ಣಯ ಕಾಲಕ್ಕೆ ಅವನ್ನ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು:- (೧) ಸಾರ್ವಜನಿಕ ಉದ್ದೇಶಕ್ಕಾಗಿ ಮರಣದ ಆರುತಿಂಗಳ ಮೊದಲು ದಾನಮಾಡಿದ ೨೫೦೦ ರೂಪಾಯಿ ವರೆಗೆ ಬೆಲೆಯುಳ್ಳ ಆಸ್ತಿ (೨) ಇತರ ಯಾವುದೇ ಉದ್ದೇಶಕ್ಕಾಗಿ ಮರಣದ ಎರಡು ವರ್ಷ ಪೂರ್ವದಲ್ಲಿ ದಾನಕೊಟ್ಟ ೧೫೦೦ ರೂಪಾಯಿ ವರೆಗಿನ ಆಸ್ತಿ. (೩) ಆಸ್ತಿ ಕರವನ್ನು ಕೊಡುವುದಕ್ಕೋಸ್ಕರ ಸರಕಾರದ ಹೆಸರಿನಲ್ಲಿ ಮಾಡಿಟ್ಟ ೫೦೦೦೦ ರೂಪಾಯಿ ವರೆಗಿನ ಜೀವವಿಮೆ. (೪) ಕರಕೊಡುವುದಕ್ಕೆಂದು ಸರಕಾರದೊಡನೆ ನಿಕ್ಷೇಪಿಸಿದ ೫೦೦೦ರ ರೂಪಾಯಿ ವರೆಗಿನ ಹಣ. (೫) ತನ್ನನ್ನು ಅವಲಂಬಿಸಿದ ಹೆಮ್ಮಕ್ಕಳ ವಿವಾಹೋದ್ದೇಶದಿಂದ ಅವರಲ್ಲಿ ಪ್ರತಿಯೊಬ್ಬನ ಹೆಸರಲ್ಲಿ ೫೦೦೦ ರೂಪಾಯಿಯನ್ನು ಮೀರದಂತೆ ಇಳಿಸಿದ ಜೀವವಿಮೆ.

ಆಸ್ತಿಯ ಒಟ್ಟು ಬೆಲೆಯ ಮೇಲೆ ಕರಾಕರಣೆ ಮಾಡುವಾಗ ಮೇಲಿನ ವಿನಾಯತಿಗಳ ಮಟ್ಟಿಗೆ ವಟ್ಟವನ್ನು ಕೊಡಲಾಗುವುದು.

ಇದಲ್ಲದೆ ಮೇಲಿಂದ ಮೇಲೆ ಮರಣಗಳು ಸಂಭವಿಸಿ ಹಸ್ತಾಂತರವು ತೀವ್ರಗತಿಯಿಂದ ಸಾಗಿದರೆ, ಅಲ್ಲಿ ಆಸ್ತಿಕರ ಹೇರುವಾಗ ಕೆಲವು ರಿಯಾಯತಿಯನ್ನು ತೋರಿಸಲಾಗುವುದು. ಒಂದು ಮರಣದ ಬಳಿಕ ಮೂರು ತಿಂಗಳುಗಳೊಳಗೆ ಎಷ್ಟೇ ಮರಣ ಸಂಭವಿಸಿದರೂ ಮತ್ತು ಆಸ್ತಿಯ ಹಸ್ತಾಂತರ ಎಷ್ಟುಬಾರಿ ನಡೆದರೂ ಅದನ್ನು ಒಂದೇ ಮರಣವಾಗಿ ತೆಗೆದುಕೊಳ್ಳಲಾಗುವುದು ಸಾಂಕ್ರಾಮಿಕ ರೋಗ ಮತ್ತು ಅಪಘಾತಗಳಿಂದ ಈ ರೀತಿ ಕುಟುಂಬಕ್ಕೆ ರಕ್ಷಣೆ ದೊರೆಯುತ್ತದೆ. ಮೊದಲನೆಯ ಮರಣದ ಬಳಿಕ ಎರಡನೇ ಮರಣವು ಆ ವರ್ಷದಲ್ಲಿಯೇ ನಡೆದರೆ ಕರ ಪ್ರಮಾಣವನ್ನು ಶೇಕಡಾ ೫೦ರಷ್ಟು ಇಳಿಸಲಾಗುವುದು, ೨, ೩, ೪ ಮತ್ತು ೫ನೇ ವರ್ಷಗಳಲ್ಲಾದರೆ ಕ್ರಮವಾಗಿ ಪ್ರತಿ ಶತ ೪೦, ೩೦, ೨೦ ಮತ್ತು ೧೦ರಷ್ಟು ಕಡಿಮೆ ಮಾಡಲಾಗುವುದು. ಹಿಂದೂ ವಿಧವೆಯು ತನ್ನ ಪತಿಯ ಮರಣಾನಂತರ ಏಳು ವರ್ಷಗಳಲ್ಲಿ ತೀರಿಕೊಂಡರೆ ಅವಳ ಆಸ್ತಿಯ ಹಸ್ತಾಂತರ ಕಾಲದಲ್ಲಿ ತೆರಿಗೆ ಹೊರಿಸುವಾಗಲೂ ಕೆಲವು ರಿಯಾಯತಿಗಳಿವೆ.

ಅಪೀಲಿಗೆ ಅವಕಾಶ

ಆದಾಯ ತೆರಿಗೆಯ ಇಲಾಖೆಯವರೇ ಆಸ್ತಿ ತೆರಿಗೆಯನ್ನೂ ಗಮನಿಸುವರು; ಮತ್ತು ಅವರಿಗೆ ಮೃತನ ಆಸ್ತಿಯನ್ನು ವಹಿಸಿಕೊಳ್ಳುವ ಆಡಳಿತಗಾರ, ಅವಿಭಕ್ತ ಕುಟುಂಬದ ವ್ಯವಸ್ಥಾಪಕ, ವಿಶ್ವಸ್ತ, ಪಾಲಕ, ಸಮಿತಿ ಅಥವಾ ಯಾವುದೇ ವ್ಯಕ್ತಿ ಕರ ಸಲ್ಲಿಸಬೇಕು. ಅವರವರ ಪಾಲಿಗೆ ಮೃತನ ಆಸ್ತಿಯಲ್ಲಿ ಎಷ್ಟೆಷ್ಟು ಬರುತ್ತದೋ ಅದರ ಮಟ್ಟಿಗೆ ಮಾತ್ರ ಅವರು ಕರಕೊಡಲು ಬಾಧ್ಯರು. ಮೃತನ ಮರಣದ ಆರು ತಿಂಗಳೊಳಗೆ ಅವನ ಆಸ್ತಿಯ ಲೆಕ್ಕವನ್ನು ವಿವರವಾಗಿ ತನ್ನ ಅಂದಾಜಿನಂತೆ ಆಸ್ತಿ ವಹಿಸಿಕೊಳ್ಳುವವನು ತಿಳಿಸ ಬೇಕಾಗುವುದು ಇದನ್ನು ಕಂಟ್ರೋಲರನು ಪರಾಮರ್ಶಿಸಿ, ಆಸ್ತಿಯ ಬೆಲೆಯನ್ನು ನಿರ್ಣಯಿಸಿ, ಕರ ತುಂಬಲು ಅವಧಿ ನಿರ್ಧರಿಸಿ, ತಿಳಿಸುವನು. ಆಸ್ತಿಯು ಒಬ್ಬನಿಗಿಂತ ಹೆಚ್ಚು ಜನರಿಗೆ ಹೋಗುವ ಪಕ್ಷದಲ್ಲಿ ಕರ ತುಂಬುವ ಹೊಣೆಯು ಸಂಯುಕ್ತವಾಗಿದ್ದು, ಇವರಲ್ಲಿ ಯಾವನೊಬ್ಬನು ಬೇರೆಯೊಬ್ಬನ ಹೆಸರಲ್ಲಿ ಕರ ತುಂಬಿಸಬಲ್ಲನು; ಮತ್ತು ಹಾಗೆ ತುಂಬಿಸಿದ ಹಣವನ್ನು ಆ ಸದಸ್ಯನಿಂದ ಕಾಯಿದೆ ಬದ್ಧವಾಗಿಪಡೆಯಲು ಅರ್ಹನು.

ಕಂಟ್ರೋಲರನು ಬೆಲೆ ಕಟ್ಟುವಾಗ ಅನ್ಯಾಯವಾಯಿತೆಂದು ಕಂಡು ಬಂದರೆ ಕೇಂದ್ರ ಕಂದಾಯ ಮಂಡಳಕ್ಕೆ ಅಪೀಲು ಮಾಡಲು ಎಡೆಯಿದೆ. ಕಾಯಿದೆ ಸಂಬಂಧದ ತಕರಾರುಗಳಲ್ಲಿ ನಿರ್ಣಯ ಬೇಕಾಗಿದ್ದರೆ ೧೦೦ ರೂಪಾಯಿಯನ್ನು ಮಂಡಳಕ್ಕೆ ಕಟ್ಟಿ ಅವರ ಮೂಲಕ ಹೈಕೋರ್ಟಿನ ವಿವರಣೆಯನ್ನು ಕೇಳಬಹುದು. ಮಂಡಳದ ನಿರ್ಣಯದ ವಿರುದ್ಧ ಹೈಕೋರ್ಟಿಗೂ ಅಲ್ಲಿಂದ ಅಗತ್ಯದ ಸಂದರ್ಭಗಳಲ್ಲಿ ವರಿಷ್ಠ ನ್ಯಾಯಾಲಯಕ್ಕೂ ಅಪೀಲು ಮಾಡಬಹುದು.

ಇನ್ನು ಮುಂದೆ ಒಬ್ಬನ ಮರಣಾನಂತರ ಅವನ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವವರು ಆ ಆಸ್ತಿಯ ಮೇಲೆ ಕರವನ್ನು ತೆತ್ತಬಾಗಿರುವುದೋ ಹೇಗೆಂಬುದನ್ನು ಮೊದಲು ದೃಢಪಡಿಸಿಕೊಳ್ಳುವ ಅಗತ್ಯವಿದೆ. ಕಂಟ್ರೋಲರನು ವಸೂಲಾದ ತೆರಿಗೆಯ ಬಗ್ಗೆ ಕೊಟ್ಟ ರಶೀದಿಯನ್ನು ಹಾಗೆ ವಿಕ್ರಯಕ್ಕಿಳಿಯುವವರು ನೋಡಿಕೊಳ್ಳುವುದು ಒಳ್ಳೆಯದು ಹೆಚ್ಚಿನ ಆಸ್ತಿಗಳು ಕರಮುಕ್ತ ಪ್ರಮಾಣದಲ್ಲಿ ಬರುವ ಸಂಭವವಿದೆ. ಇಲ್ಲಿ ಕೂಡ—ಈ ರೀತಿ ಕರ ಮುಕ್ತತೆಯ ಬಗ್ಗೆ ಸಿಫಾರಸು ಪತ್ರವನ್ನು ಪಡೆದು ಇಟ್ಟುಕೊಳ್ಳುವುದು ಅಪೇಕ್ಷಣೀಯ

ಡಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಜುಮ್ಲಾ ವಹಿವಾಟು ... . ,, **60,50,000**

ಕಾಯಂ ಠೇವಣಾತಿಗಳು ೧ ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರಂಧರಸಾಯನ.

ಹೆಚ್ಚಿನ ಮಾಹಿತಿಗೆ— ಡಾ। ಯಂ ಸಿ ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ



ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ



ಶಿಲಾಜಿತ್ ಔಷಧಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಹೊರತು)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋನಲ್ಲಿ ಕೇಳಿರಿ.

ಪ್ರತ್ಯಪ್ರತ್ಯೇಕ ಕಾರ್ಡು ಬರೆದು ಸಕಾಲದಲ್ಲಿ ಚಂದಾಹಣ ಕಳುಹಿಸಿ ಕೊಡದವರು ನಾವು ನಿಯಮಾನುಸಾರವಾಗಿ ಕಳುಹಿಸುವ ವಿ. ಪಿ. ಪಿ. ಯನ್ನು ದಯಮಾಡಿ ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು ವಿನಂತಿ.

ಮೆನೇಜರ್, **ನವಯುಗ**

ಭೂ ಸಮಸ್ಯೆಯ ಪರಿಹಾರಕ್ಕೆ ಮಧ್ಯಂತರ ವ್ಯವಸ್ಥೆ

(೨ನೇ ಪುಟದಿಂದ)

ದು ನಾವು ಹೇಳಲಾರೆವು. ಸರಕಾರದ ಕಡೆಯಿಂದ ಸರಿಯಾದ ಮಾರ್ಗದರ್ಶನ ಹಾಗೂ ಧುರೀಣತ್ವ ದೊರೆಯುವುದೊಂದೇ ಇದಕ್ಕೆ ಮದ್ದು. ಸರಕಾರದ ಬೆಂಬಲದಿಂದ ಹಲವು ಸುಧಾರಣೆಗಳನ್ನು ಸಾಧಿಸಬಲ್ಲೆವು. ಹಳ್ಳಿಯ ವಾತಾವರಣದಲ್ಲಿ ಅಪೂರ್ವ ಪರಿವರ್ತನೆಯಾಗಬೇಕೆಂದು ನಿರೀಕ್ಷಿಸುವ ಹಾಗೂ ರೈತರು ಸರಕಾರದೊಡನೆ ಸಹಕರಿಸಬೇಕೆನ್ನುವ ಜನರು ಈ ಉಪಾಯವನ್ನು ಬೇರಾವುದರಿಂದಲೂ ಪ್ರತಿಕ್ಷೇಪಿಸಲಾರರು.

ನ್ಯೂನಾತಿರೇಕಗಳು

ಪ್ರಜಾಪ್ರಭುತ್ವ ಜ್ಯಾರಿಯಲ್ಲಿರುತ್ತಾ ಮತ್ತು ಗಾಂಧೀಜಿ ಹೇಳಿದ ಸ್ವರಾಜ್ಯ ಬಂದಿರುತ್ತಾ ಬಹುಜನರ ಕಲ್ಯಾಣವನ್ನುಂಟುಮಾಡಬಲ್ಲ ಮತ್ತು ಮೂಲಭೂತ ಸಮಸ್ಯೆಯೊಂದನ್ನು ಸಮಾಧಾನಕರವಾಗಿ ಬಿಡಿಸಬಲ್ಲ ಕ್ರಮವನ್ನು ನಮ್ಮ ರಾಜ್ಯ ಸರಕಾರಗಳು ಯೋಗ್ಯ ರೀತಿಯಲ್ಲಿ ಇನ್ನೂ ಕೈಗೊಂಡಿಲ್ಲವೆನ್ನುವುದು ಭೂಷಣಪ್ರಾಯವಾಗಲಾರದು. ಭೂಸುಧಾರಣೋದ್ದೇಶದಿಂದ ಕೆಲವು ರಾಜ್ಯ ಸರಕಾರಗಳು ಅನುಸರಿಸಿದ ಕಾಯಿದೆ ಕ್ರಮಗಳಲ್ಲಿ ಪರಸ್ಪರ ಏಕಸೂತ್ರತೆಯಾಗಲೀ ನ್ಯಾಯದೃಷ್ಟಿಯಾಗಲೀ ಇದ್ದಂತೆ ನಿಷ್ಪಕ್ಷಪಾತ ವಿಮರ್ಶಕರಿಗೆ ತೋರಿರುವುದಿಲ್ಲ. ಮದ್ರಾಸು ರಾಜ್ಯದಲ್ಲಿ ಇರುವ ಭೂಸುಧಾರಣಾ ಕಾಯಿದೆಯನ್ನೇ ಪರಿಶೀಲಿಸಿದರೆ— ಇದರಲ್ಲಿರುವ ನ್ಯೂನಾತಿರೇಕಗಳು ಸ್ಪಷ್ಟವಾಗಿ ಮನವರಿಕೆಯಾಗುತ್ತವೆ.

ಜಪಾನು ದೇಶದಲ್ಲಿ ಭೂಸುಧಾರಣಾ ಯೋಜನೆಗಳನ್ನು ಕೈಗೊಂಡ ಪ್ರೊ. ಲಾಡೆಜಿನ್ಸ್ಕಿಯವರ ವಿಚಾರದಂತೆ "ಕೃಷಿ ಸಂಬಂಧದ ಕಾರ್ಯಕ್ಷಮತೆ, ಉತ್ಪಾದನೆ ಮತ್ತು ಹಳ್ಳಿಯ ಜನರ ಜೀವನ ಮಟ್ಟ ಇವೆಲ್ಲವೂ ಅತ್ಯಂತ ನಿಕೃಷ್ಟಾವಸ್ಥೆಯಲ್ಲಿವೆ. ಇದಕ್ಕೆ ಕಾರಣವಾಗಿ ಚೆಂಗಲ್ಪೇಟೆಯಂಥ ಜಿಲ್ಲೆಗಳಲ್ಲಿ ನೀರಿನ ಕೊರತೆಯನ್ನು ತೋರಿಸಲಾಗುತ್ತಿದ್ದರೆ ಮಲಬಾರು, ತಂಜಾವೂರು ಮುಂತಾದೆಡೆಗಳಲ್ಲಿ ನಿಬಿಡವಾದ ಜನವಸತಿ ಹಾಗೂ ಪ್ರಾಚೀನ ಕಾಲದ ಕೃಷಿ ಸಲಕರಣೆಗಳ ಬಳಕೆಯನ್ನು ನೆಪವಾಗಿ ಕೊಡುವರು. ಆದರೆ ನಿಜವಾದ ವಿವರಣೆಯನ್ನು ಕೊಡುವ ಪಕ್ಷದಲ್ಲಿ—ಭೂಮಿಯ ಮೇಲೆ ಹಿತ ಸಂಬಂಧವುಳ್ಳವರಲ್ಲಿ ಘರ್ಷಣೆ ಇರುವುದನ್ನೇ ಎತ್ತಿ ಹಿಡಿಯಬೇಕಾಗುವುದು."

ಬೆಳೆಯಲ್ಲಿ ಶೇಕಡಾ ೫೦ರಿಂದ ೮೦ರಷ್ಟು ಪಾಲನ್ನು ಗೇಣಿಯಾಗಿ ಕೊಡಬೇಕಾಗುವುದು. ಇದರ ಮೇಲೆ ಭೂಸಾಗುವಳಿಯ ಖರ್ಚನ್ನು ರೈತನೇ ಹೊರಬೇಕಾಗುವುದು. ಇಷ್ಟಾದರೂ ಭೂಮಿಯ ಮೇಲೆ ಸ್ಥಿರವಾದ ಭದ್ರವಾದ ಹಕ್ಕುಬಾಧ್ಯತೆಗಳಿಂದ ಅವನು ವಂಚಿತನು. ಭೂಮಾಲಿಕ—ಹಾಗೂ ಒಕ್ಕಲುಗಳ ನಡುವಿನ ಸಂಬಂಧದ ಸಾಮಾನ್ಯ ಸ್ವರೂಪವಿರುವುದು ಹೀಗೆ. ಇಂಥದರಲ್ಲಿ ಕೃಷಿಕನು ಯಾತಕ್ಕಾಗಿ ಹೆಚ್ಚು ಉತ್ಪಾದಿಸಬೇಕೆಂದು ಉದಾಸೀನನಾಗಿದ್ದರೆ—ಭೂಮಾಲಿಕನು ತನ್ನ ಪಾಲಿಗೆ ನ್ಯಾಯವಾಗಿ ಸಲ್ಲಬೇಕಾದುದಕ್ಕಿಂತ ಹೆಚ್ಚಿನದನ್ನು ಪಡೆದುಕೊಂಡು ನಿಶ್ಚಿಂತೆಯಿಂದಿರುವನು. ಪರಿಣಾಮವಾಗಿ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನ ನಡೆಯುವುದೇ ಇಲ್ಲವೆನ್ನಬಹುದು.

ಇದನ್ನು ಸುಧಾರಿಸಿ, ಒಕ್ಕಲುತನವು ಭದ್ರವಾಗಿರುವಂತೆ ಮತ್ತು ಉತ್ಪಾದನೆಯಲ್ಲಿ ಹೆಚ್ಚಳ ಕೈಗೂಡುವಂತೆ ಮಾಡಬಲ್ಲ ಪರಿಣಾಮಕಾರಿಯಾದ ಕಾಯಿದೆ ಕ್ರಮಗಳ ಅಗತ್ಯ ಬಹಳ ಕಾಲದಿಂದ ಇದ್ದರೂ— ಸರಕಾರದ ಗಮನ ಆ ಕಡೆ ಇನ್ನೂ ಹರಿದಿರುವುದಿಲ್ಲ. ಈ ಕಾರಣಕ್ಕಾಗಿಯೇ ರೈತರೂ ಸಾಮಾನ್ಯ ಕೃಷಿ ಮಜದೂರರೂ ಸರಕಾರದೊಡನೆ ಅಸಂತೃಪ್ತಿಯಿಂದ ಇರುವರು. ರೂಢಿ ಮತ್ತು ಸಂಪ್ರದಾಯದ ಬಂಧನ ಹಾಗೂ ಭಯಗಳು ಅವರನ್ನು ಬಹಳ ಹೆಚ್ಚು ಸಮಯದ ವರೆಗೆ ತಡೆದು ಹಿಡಿಯಲಾರವು. ತಂಜಾವೂರಿನಲ್ಲಿ ಆದಂತೆ ಬೇಗನೇ ಆಗಲೀ ತುಸು ಸಮಯದ ಬಳಿಕವೇ ಆಗಲೀ ರೈತರು ತಮ್ಮ ಹಕ್ಕುಬಾಧ್ಯತೆಗಳಿಗೋಸ್ಕರ ವಿದ್ರೋಹಕ್ಕೆ ಮುಂಬರಿಯುವುದು ನಿಶ್ಚಿತ.

ಮೂಡಿದ ಆಶಾವಾದ

ಮದ್ರಾಸು ರಾಜ್ಯವು ಅನೇಕ ಸಂಗತಿಗಳಲ್ಲಿ ಮುಂಬಂದಿರುತ್ತದೆ—ಸಾಮಾಜಿಕ ಕೇಡುಗಳನ್ನೂ ಅಸಮತೆಯನ್ನೂ ದೂರೀಕರಿಸುವುದಕ್ಕೆ ಮದ್ರಾಸು ರಾಜ್ಯವೇ ಸರ್ವ ಪ್ರಥಮವಾಗಿ ಪ್ರಯತ್ನ ಮಾಡಿತು. ಪಾನ ಪ್ರತಿಬಂಧವನ್ನು ಎಲ್ಲರಿಗೂ ಮೊದಲು ಜ್ಯಾರಿಗೆ ತಂದವರು ರಾಜಾಜಿ—ಮತ್ತದು ಕಾರ್ಯಕ್ಷೇತ್ರದಲ್ಲಿಳಿದುದೂ ಮದ್ರಾಸಿನಲ್ಲಿ. ಭೂಸುಧಾರಣೆಯ ಸಂಬಂಧದಲ್ಲೂ ಮದ್ರಾಸು ಸರಕಾರವು ಜಮೀನುದಾರಿ ನಿರ್ಮೂಲನ ಮಸೂದೆಯನ್ನು ಪಾಸುಮಾಡಿಕೊಳ್ಳುವುದರ ಮೂಲಕ ಭಾರತದಲ್ಲಿಯೇ ಮೊದಲನೆಯ ಪ್ರಯತ್ನವನ್ನು ಕೈಗೊಂಡಿತು. ಮದ್ರಾಸು ರಾಜ್ಯ ಈ ಎರಡು ವಿಷಯಗಳಲ್ಲಿ ನೀಡಿದ ಮಾರ್ಗದರ್ಶನವನ್ನು ಬೇರೆ ರಾಜ್ಯಗಳೂ ಕ್ರಮೇಣ ಅಂಗೀಕರಿಸಿದುವು.

ಹೀಗಿದ್ದರೂ ಮದ್ರಾಸು ರಾಜ್ಯದಲ್ಲಿ ಒಕ್ಕಲಿಗನ ಸುರಕ್ಷಿತತೆಯ ಬಗ್ಗೆ ಉಚಿತವಾದ ಕಾಯಿದೆ ಇರುವುದಿಲ್ಲವೆಂದರೆ ಆಶ್ಚರ್ಯವಾಗುತ್ತದೆ! ಮೊನ್ನೆ ಮೊನ್ನೆ ಅಸ್ತಿತ್ವಕ್ಕೆ ಬಂದ ಆಂಧ್ರ ರಾಜ್ಯ ಕೂಡಾ ಒಕ್ಕಲು ಹಿತಮಸೂದೆಯನ್ನು ಪರಿಶೀಲಿಸುತ್ತಿದೆಯೆಂದು ನಾವು ಕೇಳುತ್ತಿರುವಾಗ—ಮದ್ರಾಸು ರಾಜ್ಯವು ಅಂಥ ಕ್ರಮಗಳ ಕುರಿತು ಸಾಕಷ್ಟು ಆಸ್ಥೆ ತೋರಿಸುತ್ತಿರುವ ಲಕ್ಷಣ ತೋರುವುದಿಲ್ಲ. ಈಚೆಗೆ ನಮ್ಮ ಜಿಲ್ಲೆಯ ಕೆಲವು ಶಾಸನಸಭಾ ಸದಸ್ಯರು ಒಕ್ಕಲು ಹಿತ ಮಸೂದೆಯ ಕುರಿತು ಆಶಾವಾದಕವಾದ ಮಾತುಗಳನ್ನು ಆಡುತ್ತಿರುವರು. ಇವರು ರಾಜಾಜಿ ಮತ್ತಿತರ ಮಂತ್ರಿಗಳನ್ನು ಕಂಡು ದಕ್ಷಿಣಕನ್ನಡ ಜಿಲ್ಲೆಯಲ್ಲಿ ವಿದ್ಯಮಾನವಿರುವ ಪರಿಸ್ಥಿತಿಯನ್ನು ನಿವೇದಿಸಿಕೊಂಡು, ಬೇಗನೇ ಒಕ್ಕಲುಹಿತ ಮಸೂದೆಯನ್ನು ಜ್ಯಾರಿಗೆ ತರುವ ಆಶ್ವಾಸನೆಯನ್ನು ಪಡೆದುಕೊಂಡರೆಂದು ತಿಳಿಯುತ್ತದೆ.

ಇದು ಹೊರತು—ಶ್ರೀ ಕೆ.ಆರ್. ಕಾರಂತರ ಧುರೀಣತ್ವದಲ್ಲಿ ಪ್ರಜಾಸಮಾಜವಾದೀ ಪಕ್ಷದ ಕೆಲವರೂ ಮದ್ರಾಸಿಗೆ ತೆರಳಿ ಮಂತ್ರಿಗಳ ಕೂಡೆ ಸಂಗತಿಯನ್ನು ಚರ್ಚಿಸಿದರಾಗಿ ಕೇಳುತ್ತೇನೆ. ಇವರೆಲ್ಲರಿಗೂ ಯೋಗ್ಯ ಭರವಸೆ ದೊರೆತಿದೆ ಆಂಧ್ರರಾಜ್ಯ ಪ್ರತ್ಯೇಕವಾದ ಬೆನ್ನಿಗೆಯೇ ಒಕ್ಕಲುಹಿತ ರಕ್ಷಣೆಯ ಮಸೂದೆಯ ಕಡೆಗೆ ಸರಕಾರದ ಗಮನ ಹೋಗುವುದೆಂಬಷ್ಟು ಆಶಾದಾಯಕ ವಾತಾವರಣವನ್ನು ಈ ಸಮಾಲೋಚನೆಗಳು ಹಬ್ಬಿಸಿದ್ದವು. ಈ ಆಶೆಗೆ ಬುಡವಿಲ್ಲವೆ? ಎಂಬುದೀಗ ವಿಚಾರಣೀಯ ಅಂಶ.

ಅಲ್ಪ ಸಂತೃಪ್ತಿ

ಮದ್ರಾಸಿನ ಮುಖ್ಯಮಂತ್ರಿತ್ವವನ್ನು ವಹಿಸಿಕೊಂಡಿರುವ ರಾಜಾಜಿಯವರು ಮಹಾ ಮೇಧಾವಿ—ಅವರ ಕಾರ್ಯಕ್ಷಮತೆ ಹಾಗೂ ಅನುಭವ ಅನ್ಯಾದೃಶವಾದುದೆಂದು ದಕ್ಷಿಣ ಭಾರತದಲ್ಲಿ ಮೊನ್ನೆ ಸಂಚಾರಕೈಗೊಂಡ ನೆಹರೂರವರು ಪ್ರಶಂಸಿಸುತ್ತಾ "ಆದರೆ ರಾಜಾಜಿ ದ್ರಾವಿಡ ಕಜಗಮಿನವರ ಚಟುವಟಿಕೆಗಳ ಸಂಗತಿಯಲ್ಲಿ ಸ್ವಲ್ಪ ನಯವಾಗಿ ನಡೆದುಕೊಂಡಂತೆ ತೋರುತ್ತದೆ" ಎಂದು ತಮ್ಮ ಅತೃಪ್ತಿಯನ್ನು ಸೂಚಿಸಿದರು. ಇದನ್ನು ಒಡನೆಯೇ ರಾಜಾಜಿ ಅನುಮೋದಿಸಿ, ತಪ್ಪು ಒಪ್ಪಿಕೊಂಡರು. ಕೆಲವೇ ದಿನಗಳಲ್ಲಿ ತಮ್ಮ ನಂಬ್ರ ೧ನೇ ವೈರಿಗಳ ಸ್ಥಾನದಲ್ಲಿ ಕಮ್ಯೂನಿಸ್ಟರ ಬದಲು ಕಜಗವನ್ನು ಪ್ರತಿಷ್ಠಾಪಿಸಿದರು.

ರಾಜಾಜಿಯವರು ಭೂಸುಧಾರಣೆಯ ಕ್ರಮಗಳನ್ನು ಕೈಗೊಳ್ಳುವ ಮಟ್ಟಿಗೂ ಬಹಳ ರಿಯಾಯತಿಯಿಂದ ನಡೆದುಕೊಂಡಂತೆ ನಮಗೆ ತೋರುತ್ತದೆ. ತಂಜಾವೂರಿನಲ್ಲಿ ರೈತರಿಗೂ ಭೂಮಾಲಿಕರಿಗೂ ಮನಸ್ತಾಪ ಉತ್ಕಟಾವಸ್ಥೆಯನ್ನು ಮುಟ್ಟಿದಾಗ ಒಂದು ಮಸೂದೆಯನ್ನು ಪ್ರಾರಂಭದಲ್ಲಿ ಸುಗ್ರೀವಾಜ್ಞೆಯ ಬಲದಿಂದಲೇ ಜ್ಯಾರಿಗೆ ತಂದವರು ರಾಜಾಜಿ ಹೌದು. ಆದರೆ ಇದು ಸಾಕಷ್ಟು ಪ್ರಭಾವಿಯಾಗಿಲ್ಲವೆನ್ನುವುದೇ ದೂರು—ಮಾತ್ರವಲ್ಲ ರಾಜ್ಯದ ಒಂದು ವಿಶಿಷ್ಟ ಪ್ರದೇಶಕ್ಕೆ ಮಾತ್ರ ಇಂಥ ಸಂರಕ್ಷಣೆಯ ಪ್ರಯೋಜನ ದೊರೆಯುತ್ತಲಿದೆ. ಬೇರೆ ಯಾರೂ ಲಾಭ ಹೊಂದಲು ಅವಕಾಶವಾಗಲಿಲ್ಲ.

ತಂಜಾವೂರಿನ ಮಸೂದೆಯ ಕುರಿತಾಗಿಯೂ ಎಲ್ಲರಿಗೆ ಸಮಾಧಾನವೆನಿಸಿಲ್ಲ — ಒಕ್ಕಲಿಗರು ಧನಿಗೆ ಕೊಡಬೇಕಾದ ಗೇಣಿಯ ಪರಮಾವಧಿ ಮಿತಿಯನ್ನು ಶೇಕಡಾ ೭೫-೮೦ರಿಂದ ೬೦ಕ್ಕೆ ಇಳಿಸಿರುವುದು ಸ್ತುತ್ಯವಾದರೂ ಇದರ ಬೆನ್ನಿಗೆ ಕೆಲವು ಹೊಸ ಜವಾಬ್ದಾರಿಗಳು ಒಕ್ಕಲಿಗನ ಪಾಲಿಗೆ ಬಂದವು—ಹೊಲ ಸಾಗುವಳಿಯ ಖರ್ಚನ್ನು ಒಕ್ಕಲೇ ನೋಡಿಕೊಳ್ಳಬೇಕೆಂದು ಈ ಮಸೂದೆ ವಿಧಿಸಿದುದರಿಂದ ಅದು ವರೆಗೆ ಭೂಮಾಲಿಕರು ನೀಡುತ್ತಿದ್ದ ಸಹಾಯಕ್ಕೆ ಕಲ್ಲು ಬಿತ್ತು. ಈ ಖರ್ಚನ್ನು ವಹಿಸಿಕೊಂಡ ಬಳಿಕ ಒಕ್ಕಲಿಗನಿಗೆ ದೊರೆಯುವುದು ಉತ್ಪಾದನೆಯಲ್ಲಿ ಶೇಕಡಾ ೧೦ ಪಾಲು ಮಾತ್ರ. ಇಷ್ಟು ಅಲ್ಪ ಪ್ರತಿಫಲದಿಂದ ಅವನು ಸಂತೃಪ್ತನಾಗುವುದು ಎಂದಾದರೂ ಸಾಧ್ಯವೆ?

ಮಧ್ಯಂತರದ ಕ್ರಮ

ಈ ಅಂಶವನ್ನು ಸರಕಾರ ಪೂರ್ಣ ಉಪೇಕ್ಷೆಯಿಂದ ನೋಡಿರುತ್ತದೆ. ಸರಕಾರದ ಬೇರೆ ಬೇರೆ ಭೂಸುಧಾರಣಾ ಸಮಿತಿಗಳು ಮುಂದಿಡಿಸಿದ ವರದಿಗಳು ಇದ್ದರೂ ಅದು ಅವುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಉದಾಹರಣೆಗೆ ಸುಬ್ರಹ್ಮಣ್ಯಂ ಸಮಿತಿಯು ಧನಿ ಮತ್ತು ಒಕ್ಕಲುಗಳಿಗೆ ಉತ್ಪಾದನೆಯಲ್ಲಿ ಕ್ರಮವಾಗಿ ಶೇಕಡಾ ೪೦ ಅಥವಾ ೩೫—೬೦ ಸಲ್ಲಬೇಕೆಂದು ಹೇಳಿದೆ. ಈ ಮಿತಿಯೂ ನ್ಯಾಯಪೂರ್ಣವಲ್ಲವೆಂದೂ ಧನಿಗೆ ಮೂರರಲ್ಲಿ ಒಂದು ಪಾಲು, ಒಕ್ಕಲಿಗೆ ಮೂರರಲ್ಲಿ ಒಂದು ಪಾಲು ಮತ್ತು ಬೇಸಾಯದ ಖರ್ಚು ನೋಡಿಕೊಳ್ಳುವವರಿಗೆ ಮೂರರಲ್ಲಿ ಒಂದು ಪಾಲೆಂದು ಉತ್ಪಾದನೆಯನ್ನು ಹಂಚಿ ಹಾಕಬೇಕೆಂದೂ ನಿಷ್ಪಕ್ಷಪಾತ ವಿಮರ್ಶಕರ ಮತ್ತು ತಜ್ಞರ ಅಭಿಪ್ರಾಯ. ಇದನ್ನು ಗಮನಿಸಿದರೆ ಧನಿಗೆ ಹೆಚ್ಚೆಂದರೆ ಶೇಕಡಾ ೩೫ ಹಾಗೂ ಒಕ್ಕಲಿಗೆ ಕನಿಷ್ಠ ಶೇಕಡಾ ೬೫ ಪಾಲು ದೊರೆಯಬೇಕಾಗುವುದು. ತಂಜಾವೂರಿನಲ್ಲಿ ಇದರ ತದ್ವಿರುದ್ಧವಾಗಿರುವುದು ಅನ್ಯಾಯ

ಮಲಬಾರು ಜಿಲ್ಲೆಗೆ ಕೆಲಸಮಯದ ಹಿಂದೆ ಒಕ್ಕಲುಹಿತ ಮಸೂದೆಯೊಂದನ್ನು ಅನ್ವಯಿಸಿದ್ದರೂ ಈಗ ಧನಿ ಹಾಗೂ ಒಕ್ಕಲುಗಳೆಂಬ ಎರಡೂ ಪಕ್ಷಗಳ ವಿರೋಧದಿಂದ ಅದು ಅಸ್ತಿತ್ವದಲ್ಲಿ ಉಳಿದಿಲ್ಲ. ಸರಕಾರ ಇಲ್ಲಿಗೆ ಹೊಸತೊಂದು ಮಸೂದೆಯನ್ನು ಜ್ಯಾರಿಮಾಡುವ ಸಿದ್ಧತೆಯಲ್ಲಿ ತೊಡಗಿದೆ—ಆದರೆ ಹೀಗೆ ತುಂಡು ತುಂಡಾಗಿ ಸಂರಕ್ಷಣೋಪಾಯಗಳನ್ನು ಕೈಗೊಳ್ಳುವುದು ಉಚಿತವಲ್ಲವೆಂಬುದನ್ನು ಅದು ತಿಳಿದಂತಿಲ್ಲ.

ನಮ್ಮ ಜಿಲ್ಲೆಗೆ ಮಾತ್ರವಲ್ಲ-ಇಡಿಯ ರಾಜ್ಯಕ್ಕೆ ಅನ್ವಯಿಸುವಂತೆ ಜ್ಯಾರಿಗೆ ಬರಬೇಕಾದ ಒಕ್ಕಲು ಹಿತ ಮಸೂದೆ ಧನಿಯ ಪಕ್ಷಪಾತಿಯಾಗಿರಬಾರದು. ಅದು ಒಕ್ಕಲಿಗನ ಜೀವನ ಮಟ್ಟವನ್ನು ಎತ್ತರಿಸುವುದಕ್ಕೆ ನೆರವಾಗಬೇಕು. ಬಲಾತ್ಕಾರದಿಂದ, ಹಿಂಸೆಯಿಂದ, ಕಮ್ಯೂನಿಸ್ಟರ ಒತ್ತಾಸೆಯಿಂದ ಒಂದಲ್ಲ ಒಂದು ದಿನ ಜಮೀನನ್ನು ಕಿತ್ತುಕೊಳ್ಳಲು ಅವಕಾಶ ಮಾಡಿಕೊಡುವುದನ್ನು ಅದು ತಪ್ಪಿಸಿ ಧನಿಗಳೂ ಉಳಿಯಬೇಕು ಮತ್ತು ಒಕ್ಕಲುಗಳ ಹಿತವೂ ಮಾನ್ಯವಾಗಬೇಕೆಂಬುದನ್ನು ಎತ್ತಿ ಹಿಡಿಯತಕ್ಕದ್ದು.

ಇವಕ್ಕೋಸ್ಕರ ೫ ವರ್ಷಗಳ ಸಾಗುವಳಿಯ ಗ್ಯಾರಂಟಿಯು ಅಷ್ಟು ಪ್ರಭಾವಿಯಾಗದು. ನ್ಯಾಯವಾದ ಗೇಣಿಯನ್ನು ಕೊಡುತ್ತಾ ಬಂದಷ್ಟು ಕಾಲ ಆ ಒಕ್ಕಲನ್ನು ಎಬ್ಬಿಸಲು ಅವಕಾಶವಿಲ್ಲವೆನ್ನುವ ಕ್ರಮವೇ ಯೋಗ್ಯವಾದದ್ದು. ಒಕ್ಕಲುಗಳಿಗೆ ಸಂರಕ್ಷಣೆ ಕೊಡುವ ಇಂಥ ಮಸೂದೆಗಳು ಶಾಶ್ವತವಾಗಿ ಭೂಮಾಲಿಕರಿಗೆ ಭರವಸೆ ಕೊಡದಿದ್ದರೂ ಒಂದಲ್ಲ ಒಂದು ದಿನ ಭೂಮಿ ಉಳುವವನದೇ ಆಗಿ ತೀರುವುದು—ತಾತ್ಕಾಲಿಕ ಗಂಡಾಂತರವನ್ನು ದೂರೀಕರಿಸುವ ಭರವಸೆಯುಂಟು. ಆದ ಕಾರಣ ಒಕ್ಕಲುಗಳಿಗಿಂತಲೂ ಹೆಚ್ಚು ಜಮೀನುದಾರರಿಗೆಯೇ ಈ ಮಸೂದೆಯ ಅಗತ್ಯ ಹೆಚ್ಚೆಂದು ಪರ್ಯಾಯವಾಗಿ ಹೇಳಬಹುದು.

— ಕಾರ್ತಿಕೇಯ.

ದಯಮಾಡಿ ನಿಮ್ಮ ಚಂದಾಹಣ ಕಳುಹಿಸಿರಿ.

ವಾರದ ಒಳಿತು ಕೆಡುಕುಗಳು

ಮೇಷ— ಮ ಖಸಾಗರದಲ್ಲಿ ಮಳು ತ್ತಿದ್ದ ನೀವಿಂದು ಸ್ವಲ್ಪ ಚೇತರಿಸಿಕೊಳ್ಳುವ ಸುದಿನವಿಂದು ಬಂದಿದೆ ನಿಮ್ಮ ಪ್ರಯತ್ನವು ಸಂಪೂರ್ಣ ಫಲಕಾರಿಯಾದಿತು ಅನಿರೀಕ್ಷಿತವಾಗಿ ಧನಪ್ರಾಪ್ತಿಯಾಗುವದು. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವಿರಿ. ವ್ಯಾಪಾರೀ ವೃತ್ತಿಯಲ್ಲೂ ನೌಕರಿ ವಿಭಾಗದಲ್ಲೂ ಫಲಪ್ರಾಪ್ತಿಯು ಚೆನ್ನಾಗಿರದು ರಾಜಕೀಯ ರಂಗದಲ್ಲಿ ಕಾರ್ಯಗಳು ನಿಮ್ಮಂತೆ ಸಿದ್ಧಿಸಲಿವೆ ತಾ 22 23 27 28 ಈ ದಿನಗಳು ಸಾಕಷ್ಟು ಉತ್ತಮವಾಗಿವೆ

ವೃಷಭ— ಭಾಗ್ಯಪತಿ ಉಚ್ಛನಾಗಿಯೂ ಲಾಭಪತಿಯು ಧನಸ್ಥಾನಗತನಾಗಿಯೂ ಅನುಕೂಲರಾಗಿರುವುದರಿಂದ ಸದ್ಯ ನಿಮ್ಮ ಸಂಪದ್ಭಾಗ್ಯಕ್ಕೆ ಏನೊಂದೂ ಹಾನಿಯೊದಗದು ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲವನ್ನು ಪಡೆವಿರಿ ಪ್ರಬಲರಾದ ಶಕ್ತಿಯುತರಾದ ಇದಿರಾಳುಗಳನ್ನು ಪರಾಭವಗೊಳಿಸುವ ಶಕ್ತಿಯುತರಾದ ನಿಮಗೆ ಗುರುಹಿರಿಯರ ಮತ್ತು ಸನ್ಮಿತ್ರರ ಸ್ನೇಹ ಬಂಬಲಗಳು ಸಾಕಷ್ಟಿವೆ ತಾ. 21. 25 26 ಈ ದಿನಗಳು ನಿಮಗೆ ಸುಖಭೋಗ ಲಾಭದಾಯಿಗಳಾಗಿವೆ

ಮಿಥುನ— ನಿಮ್ಮ ಸುಖಸ್ಥಾನದಲ್ಲಿ ನೀಚ ಶುಕ್ರನು ಅಂಗಾರಕಯುಕ್ತನಾದುದರಿಂದ ನಿಮ್ಮ ಮನಸ್ಸಿಗ ಈ ಹತ್ತು ನೆಮ್ಮದಿ ಲಭಿಸದು ತತ್ರಾಪಿಸ್ತ್ರೀ ಹೇತುಕವಾದ ಅನಿಷ್ಟ ದು. ಖಗಳಿಗೆ ಗುರಿಯಾಗುವಿರಿ ಮಕ್ಕಳ ಆರೋಗ್ಯ ಕೆಡುವದು. ವಿದ್ಯೋಪಜೀವಿಗಳಿಗೆ ಸಾಕಷ್ಟು ಫಲ ಲಾಭವಾದೀತು ತಂತಮ್ಮ ಉದ್ಯೋಗದಲ್ಲಿ ವಿರೋಧಿ ಜನರ ಮಾಯಾಜಾಲಕ್ಕೆ ಸಿಲುಕಲಿರುವಿರಿ. ಬಂಧು ಜನರೂ ಮಿತ್ರವರ್ಗದವರೂ ಈ ಕಾಲದಲ್ಲಿ ನಿಮಗೆ ನೆರವಾಗರು ತಾ 22 23. 27. 28 ಈ ದಿನಗಳು ಉಳಿದ ದಿನಗಳಿಗಿಂತ ಲೇಸು

ಕರ್ಕಟ— ಈ ವಾರದಲ್ಲಿ ಆರ್ಥಿಕ ಪರಿಸ್ಥಿತಿಯು ಮುಂಚಗಿಂತ ಎಷ್ಟೋ ಸುಧಾರಿಸಲಿದೆ ಅನುದಿನದ ಖರ್ಚಿಗೆ ಬೇಕಾದುದನ್ನು ನೀವೇ ಸ್ವಯಂ ದುಡಿಯಲಿರುವಿರಿ ಆದರೆ ಸಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುವವು ತಂದೆ ಮಕ್ಕಳಲ್ಲೂ ಗಂಡ ಹೆಂಡಿರಲ್ಲೂ ನಿತ್ಯ ಕಲಹವಾಗುವ ಸಂಭವವಿದೆ. ನಿಮ್ಮ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಸಿಕ್ಕಾಪಟ್ಟೆ ಹರಿಯಲಿದೆ. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗಮಾಡುವಿರಿ ವಾರಾದಿಯ 5 ದಿನಗಳು ಇತರ ದಿನಗಳಿಗಿಂತ ಉತ್ತಮವಿರುವವು

ಸಿಂಹ— ಅಂಗಾರಕನು ಹೊರತಾಗಿ ಇತರ ಎಲ್ಲಾ ಗ್ರಹರು ನಿಮ್ಮ ಮೇಲೆ ಅನುಕೂಲರಿರುವುದರಿಂದ ಈ ಕಾಲದಲ್ಲಿ ನಿಮಗಾವ ತೆರನಾದ ಚಿಂತೆಗೂ ಅವಕಾಶವಿಲ್ಲವು ನೆನೆದಂತೆ ಪ್ರತಿಯೊಂದು ಕಾರ್ಯವು ನೆರವೇರುವು

ದು ನಿಮ್ಮ ಕರ್ಮ ಕೌಶಲವಂ ಕಂಡ ವಿಪಕ್ಷೀಯರು ನಿಮ್ಮೆಡರಿಗೆ ಬರಲಾರರು ಸಮಾಜದಲ್ಲಿ ಸ್ಥಾನಮಾನಗಳನ್ನು ಪಡೆವಿರಿ ಧನಧಾನ್ಯಾದಿಗಳಿಂದ ಕೂಡಿದ ನಿಮಗೆ ವಾರಾಂತ್ಯದ 5 ದಿನಗಳು ವಿಶೇಷ ಸಂತಸದಾಯಕವಾಗಿವೆ

ಕನ್ಯಾ— ನಿಮಗಿಂದು ದುರ್ದಿನಗಳು ಸನ್ನಿಹಿತವಾಗಿವಯೆಂದರೆ ತಪ್ಪಾಗದು ಎತ್ತಲಿಂದ ನೋಡಿದರೂ ನಿರಾಶೆಯೇ ಮುಂದಾಗಿ ಕಾಣಿಸಲಿದೆ. ಪರಿಶ್ರಮ ಪಾದರೋ ನೀರಿನಲ್ಲಿ ಮಾಡಿದ ಹೋಮದಂತೆ ನಿಷ್ಫಲವಾಗುವದು ಹಣದ ಅಡಚಣೆ ತಲೆದೋರದು ಗೃಹವು ಜ್ವರಾದಿಗಳ ತವರು ಮನೆಯಾಗಿ ಪರಿಣಮಿಸಲಿದೆ ಆಪ್ತಜನರ ವಿರಸ ಶತ್ರುಜನರ ಪೀಡೆ ಸಾಲಿಗರ ಕಾಟ ಗೃಹತಾಪತ್ರಯಗಳಿಂದ ನಿತ್ಯ ದು ಖಿಗಳಾದ ನಿಮಗ ವಾರಾಂತ್ಯದ 2 ದಿನಗಳು ಉತ್ತಮವೆನಿಸೀತು

ತುಲಾ— ಈ ವಾರದಲ್ಲಿ ನಿಮ್ಮ ಖರ್ಚಿನ ಭಾಗವು ಮುಂಚಿಗಿಂತ ಹೆಚ್ಚಲಿದೆಯಾದರೂ ಹಣದ ಅಡಚಣೆಯು ಕಾಣಿಸಲೊಲ್ಲದು ನೌಕರಿ ವ್ಯಾಪಾರಗಳಲ್ಲಿ ದಿನೇ ದಿನೇ ಪ್ರಗತಿಯುಂಟಾಗುವದು ಸಾಂಸಾರಿಕ ತಾಪತ್ರಯಗಳು ಮುಂಚಿಗಿಂತ ಕಡಿಮೆಯಾಗುವವು ರಾಜಕೀಯ ಕ್ಷೇತ್ರದಲ್ಲಿ ಪರಾಭವವುಂಟಾದೀತು ವಾತ ಪಿತ್ತಪ್ರಕೋಪದಿಂದ ಆರೋಗ್ಯಕ್ಕೆ ಕೊಂಚ ಧಕ್ಕೆಯಿದೆ. ಸನ್ಮಿತ್ರರ ಮತ್ತು ಬಂಧುಬಾಂಧವರ ನೆರವು ಉತ್ತಮವಾಗಿರುವುದು ವಾರಾದಿಯ 2 ದಿನಗಳಲ್ಲಿ ವಿಜಯಸ್ತ್ರೀ ಧನಲಾಭವಾಗಲಿದೆ

ವೃಶ್ಚಿಕ— ಕಳೆದ ವಾರಕ್ಕಿಂತ ಎಷ್ಟೋ ಉತ್ತಮವಾಗಿರುವವೀ ದಿನಗಳು. ನಿಮ್ಮ ಖರ್ಚ ವೆಚ್ಚಗಳಿಗೆ ಸಾಕಷ್ಟು ಧನವನ್ನು ಸ್ವಯಂ ದುಡಿಯುವಿರಿ ಸಮಾಜದಲ್ಲಿ ಗೌರವಾದರಗಳು ಲಭಿಸುವವು ಹಲವಾರು ತೆರದಿಂದ ಧನವು ಕೈ ಸೇರಲಿದೆ ಆದರೆ ದೇಹಾಲಸ್ಯದಿಂದ ಪೀಡಿತರಾದ ನಿಮಗೆ ಶೋಕಾನರ್ಥಗಳು ಮೇಲಿಂದ ಮೇಲೆ ಬರಲಿವೆ ಸನ್ಮಿತ್ರರ ಸಹಕಾರವು ಸದಾ ಲಭಿಸುವದು ವಾರಾದಿಯ 5 ದಿನಗಳಲ್ಲಿ ನಿಮ್ಮ ಬಯಕೆಗಳು ಬಹ್ವಂಶ ನೆರವೇರಲಿವೆ.

ಧನು— ಈ ವಾರದಲ್ಲಿ ನಿಮ್ಮ ದೈವವು ಮುಂಚಿನಷ್ಟು ಉತ್ತಮವಿಲ್ಲದೆ ಪ್ರಯತ್ನಕ್ಕೆ ತಕ್ಕದಾದ ಫಲ ಕಾಣಿಸದು ಆದರೂ ಖರ್ಚ ವೆಚ್ಚಗಳಿಗೆ ಹಿಂದಿಲ್ಲಾಗಿ ದುಡಿಯುವಿರಿ ಸಮಾಜದಲ್ಲಿ ಮಾನ ಮರ್ಯಾದೆಗಳು ಲಭಿಸುವವು ಜನರ ಇಂಗಿತವನ್ನರಿತು ಮಾತನಾಡಬಲ್ಲ ನಿಮಗೆ ಎಲ್ಲರೂ ಮಿತ್ರರಾಗಿ ಪರಿವರ್ತಿಸುವರು ರಾಜಕೀಯ ಕ್ಷೇತ್ರದಲ್ಲಿ ನಿಮ್ಮ ಕಾರ್ಯವು ಫಲಿಸಲಿದೆ ವಾರಾಂತ್ಯದ 5 ದಿನಗಳಲ್ಲಿ ನಿಮ್ಮ ಇಷ್ಟಾರ್ಥಗಳು ನಿರಾಯಾಸದಿಂದ ನೆರವೇರಲಿವೆ.

ಮಕರ— ನೌಕರಿ ವ್ಯಾಪಾರ ವ್ಯವಹಾರ ಮುಂತಾದ ಉದ್ಯಮಗಳಲ್ಲಿ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲ ಲಭಿಸುವದು ಸಂಪದ್ಭಾಗ್ಯವು ತೃಪ್ತಿಕರವಿರುವುದರಿಂದ ಹಣದ ಭಾಗದಲ್ಲಿ ಚಿಂತೆಯಿರದು ಆದರೆ ಪಿತ್ತಪ್ರಕೋಪದಿಂದಾಗಿ ಆರೋಗ್ಯಕ್ಕೆ ಕೆಡುಕಿದೆ ದೇಹದಲ್ಲಿ ದಿನೇ ದಿನೇ ದೌರ್ಬಲ್ಯ ಕಾರ್ಶ್ಯಗಳು ಹೆಚ್ಚುವವು ಇಂದ್ರಿಯ ನಿಗ್ರಹ ... ಜನಾಪವಾದಕ್ಕೆ ಗುರಿಯಾಗುವ ಸಂಭವವಿದೆ ವಾರಾಂತ್ಯದ 2 ದಿನಗಳು ಉಳಿದ ದಿನಗಳಿಗಿಂತ ಉತ್ತಮವಿರುವವು.

ಕುಂಭ— ನಿಸರ್ಗದ ಶುಭರಾದ ಬುಧ ಗುರು ಶುಕ್ರರಿಂದ ನಿಮ್ಮ ಮೇಲೆ ಅನುಕೂಲ ದೃಷ್ಟಿ ಬೀರಿರುವುದರಿಂದ ಕೈಕೊಂಡ ಕಾರ್ಯಗಳೂ ನಿರ್ವಿಘ್ನದಿಂದ ನೆರವೇರಲಿವೆ ವಿದ್ಯೋಪಜೀವಿಗಳಿಗೆ ಜೀವನ ಸೌಕರ್ಯವು ಹೆಚ್ಚುವದು ಅನರ ಧರ್ಮಕಾರ್ಯಗಳಲ್ಲೂ ದೈವ ದೇವರುಗಳಲ್ಲೂ ಆದರವುಂಟಾದೀತು ಹೆಚ್ಚಿನ ಕಾಲವನ್ನು ಪರ್ಯಟನದಲ್ಲಿ ಕಳೆವಿರಿ ತಾ 22 23 ಈ ದಿನಗಳಲ್ಲಿ ಗೃಹಸುಖ ಧನಲಾಭ ವಿಜಯಾದಿಗಳಿವೆ

ಮೀನ— ಗೃಹಪಂಚಕವೇ ನಿಮ್ಮ ಮೇಲಿಂದು ವಿಮುಖವಾಗಿರುವುದರಿಂದ ನೀವಿಂದು ನಾನಾ ತೆರನಾದ ಕಷ್ಟ ನಷ್ಟಗಳನ್ನನುಭವಿಸಬೇಕಾಗುವದು ಆದಾಯವು ಶೂನ್ಯವಾಗಿ ಸರ್ವತೋಮುಖದಿಂದ ಖರ್ಚುಗಳು ಪ್ರಾಪ್ತವಾಗುವುದರಿಂದ ಸಿಕ್ಕಸಿಕ್ಕವರೊಡನೆ ಸಾಲ ಕಡಗಳನ್ನು ಮಾಡುವ ಪ್ರಸಕ್ತಿ ಬರಲಿದೆ ಮಧುವಿಲ್ಲದ ಕುಸುಮವನ್ನು ಮಧುಕರಗಳು ದೂರೀಕರಿಸುವಂತೆ ನಿಮ್ಮ ಆಪ್ತೇಷ್ಟರೂ ಬಂಧು ವರ್ಗದವರೂ ನಿಮ್ಮಿಂದ ದೂರವಾಗುವರು ಕರ್ಮಠರಾದ ಜನರಿಗೆ ತಾ. 23. 25 26 ಈ ದಿನಗಳು ಸ್ವಲ್ಪ ಅನುಕೂಲವೆನಿಸೀತ

(೧ನೇ ಪುಟದಿಂದ)

ನೆಗಳು ಯುವಕರ ಮನೋಭಾವನೆಯನ್ನು ರಚನಾತ್ಮಕ ಕಾರ್ಯಗಳ ಕಡೆಗೆ ಒಲಿಸಿಕೊಂಡಿರುತ್ತವೆ ಮುಖ್ಯವಾಗಿ ವಿದ್ಯಾರ್ಥಿಗಳು ಇಂಥ ಚಟುವಟಿಕೆಯ ಮಹತ್ವವನ್ನು ಶೀಘ್ರವಾಗಿ ಅರಿತುಕೊಂಡಿರುವುದು ಕಂಡು ಬರುತ್ತದೆ ಭಾರತದ ಸಾರ್ವಾಂಗಿಕ ಏಳಿಗೆಯಿಂದ ಪ್ರಯೋಜನ ಹೊಂದುವ ಮುಂದಿನ ಜನಾಂಗ ಈಗಿಂದಲೇ ತ್ಯಾಗ ಮತ್ತು ಸೇವೆಗಳ ಆದರ್ಶವನ್ನಿಟ್ಟುಕೊಂಡಿರುವುದು ನಮಗೊಂದು ಅಭಿಮಾನ ಇವರ ಚಟುವಟಿಕೆಗಳಲ್ಲಿ ನಮ್ಮ ಹಳ್ಳಿಯ ಎಲ್ಲಾ ರೈತರೂ ಸಹಕರಿಸಿ, ಯುವಕರ ಸದುದ್ದೇಶ ಕೈಗೂಡುವಂತೆ ನೋಡಿಕೊಳ್ಳುವುದರಿಂದ ರಾಷ್ಟ್ರದ ಏಳಿಗೆಯೊಂದಿಗೆ, ಸ್ವತಃ ರೈತರ ಲಾಭವೂ ಆಗುತ್ತದೆಂದು ಬಲ್ಲವರ ಅಭಿಪ್ರಾಯ

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ ಭಾರತ

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ ... ಪೋಸ್ಟು ಖರ್ಚು ರೂ ೦—೧೪—೦

—:ವಿಳಾಸ—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಶ್ರೀ ಸ್ಮಾರಕ ಗ್ರಂಥ

ಶ್ರೀ ಸ್ಮಾರಕ ಗ್ರಂಥವನ್ನು

ಒಂದೊಂದು ಸ್ಮಾರಕ ಕಾರ್ಯಗಳಿಗೆ ನೆರವಾಗಿರಿ.

ಪುಸ್ತ ಆಕಾರದ 160 ಪುಟಗಳು ಬೆಲೆ ರೂ. 1-0 0 ಮಾತ್ರ

ಮಹನೀಯರ ಸಂದೇಶಗಳಿವೆ

ಪ್ರಸಿದ್ಧ ಲೇಖಕರ ಲೇಖನಗಳಿವೆ

... ನಾನಾ ... ಚಿತ್ರಗಳಿವೆ

... ಉಡುಪಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

THE MOOLKY BANK LTD

Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗವುದು, ಪತೋಟಿಗ ಒಯ್ಯುವುದು ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ ಖಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ ರೂ. 3/-, ಸ್ಪೆಶ್ಯಲಾ ರೂ 5/- ಅ ಕಾಫಿಕ ಸ್ಪೆಶ್ಯಲಾ ರೂ 8-[ವಿ ಪಿ ಪಶ್ಚೆಲದಾಣೆ ಪ್ರತ್ಯೇಕ]

Mrs. P DEVEE, I I S (N.J)
CALCUTTA 40

ಸ್ಟಾಕಿಸ್ಟರು ವಹಾ ಕಂಪೆನಿ, ಮಂಗಳೂರು

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol 33 • No 9 29-10-1953 ವರ್ಷ ೩೩ ವಾರ ೯

ಲೋಕ ಶಾಂತಿಯ ಧೋರಣೆ

"ಸರ್ವೇಪಿ ಜನಾ ಸುಖಿನೋ ಭವಂತು" – ಸಂಯುಕ್ತ ರಾಷ್ಟ್ರಸಂಘದ ಮುಂದಿರುವ ಉದ್ದೇಶವನ್ನು ಈಯೊಂದೇ ಪದ ಸಮುಚ್ಛಯದಿಂದ ಹೇಳಿಬಿಡಬಲ್ಲೆವು ಲೋಕ ಶಾಂತಿಯ ಆತುರ ತೋರಿಸುವ ಹಾಗೂ ವಿಶ್ವಬಾಂಧವ್ಯದಲ್ಲಿ ಆಸ್ಥೆ ಇರುವ ಎಲ್ಲರೂ ಇಂದು ಸಂಯುಕ್ತ ರಾಷ್ಟ್ರ ಸಂಘವನ್ನೆ ಆಶ್ರಯಿಸುತಿದ್ದಾರೆ ಎಂಟು ವರ್ಷಗಳ ಪೂರ್ವದಲ್ಲಿ ದ್ವಿತೀಯ ಮಹಾಯುದ್ಧದ ಸಮಾಧಿಯ ಮೇಲೆ ಮುಂದೆಂದೂ ಅಂಥ ಭೀಕರ ಗಂಡಾಂತರ ಒದಗಿ ಬರಬಾರದೆಂದೂ ಲೋಕದಲ್ಲಿ ಸರ್ವತ್ರ ಸುಖಶಾಂತಿ ಸೌಹಾರ್ದಗಳೇ ನೆಲೆಗೊಳ್ಳಬೇಕೆಂದೂ ಬಯಸಿ ಜನಾಂಗಗಳ ಈ ಸಂಘ ನಿರ್ಮಾಣಗೊಂಡಿತು ಇದು ವರೆಗಿನ ಚಟುವಟಿಕೆಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿಮರ್ಶಿಸಿದರೆ, ರಾಷ್ಟ್ರಸಂಘವು ಅನೇಕ ಸಂದರ್ಭಗಳಲ್ಲಿ ತನ್ನ ಮೂಲೋದ್ದೇಶಗಳಿಗೆ ವ್ಯತಿರಿಕ್ತವಾಗಿ ನಡೆದುದು ಕಂಡುಬರುತ್ತದೆ. ಮುಖ್ಯತಃ ಕಳೆದ ಒಂದು ವರ್ಷದಲ್ಲಿ ರಾಷ್ಟ್ರ ಸಂಘದ ನಿರ್ಣಯ ಹಾಗೂ ವರ್ತನೆಗಳು ಭಾರತ ಹಾಗೂ ಇತರ ಕಡೆಗಳಲ್ಲಿ ವಿಸ್ಮಯವನ್ನೂ ಕ್ಲೇಶವನ್ನೂ ಹುಟ್ಟಿಸಿವೆ. ಆದರೆ ನಮ್ಮ ಪ್ರಧಾನಮಂತ್ರಿ ನೆಹರೂರವರು ಹೇಳಿದಂತೆ "ಈ ಎಲ್ಲ ಅಸಫಲತೆಗಳಿಂದ ಕೂಡಿದ್ದರೂ ಸಂಯುಕ್ತ ರಾಷ್ಟ್ರ ಸಂಘವು ಒಂದು ಮಹಾ ವಿಶ್ವಸಂಸ್ಥೆಯಾಗಿರುತ್ತದೆ ಅದರಲ್ಲಿಯೇ ಶಾಂತಿ ಹಾಗೂ ಆಶೆಯ ಬೀಜ ಅಡಕವಾಗಿರುತ್ತದೆ ಹೀಗಿರುತ್ತಾ ಯಾವುದಾದರೊಂದು ದೇಶವು ತನ್ನ ಮನಸ್ಸಿನಂತೆ ರಾಷ್ಟ್ರ ಸಂಘ ವರ್ತಿಸುತ್ತಿಲ್ಲ ವೆಂಬುದಕ್ಕಾಗಿ ಅದು ಹಾಳಾಗಲೆಂದು ಭಾವಿಸುವುದಿದ್ದರೆ, ಅದು ತೀರ ಶೋಚನೀಯ ಇದಲ್ಲದೆ ಯಾವುದಾದರೊಂದು ದೇಶವು ಇಂಥ ಪ್ರಯತ್ನ ಮಾಡುತ್ತದಾದರೆ ರಾಷ್ಟ್ರಸಂಘಕ್ಕಿಂತಲೂ ಹೆಚ್ಚು ಆ ದೇಶವೇ ಹಾನಿಗೀಡಾಗುವುದು ನಿಶ್ಚಯ.' ಇದೇ ಮಾತನ್ನು ಕಳೆದ ವರ್ಷ ಭಾರತದ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರೂ ಹೇಳಿದ್ದಾರೆ— "ಮಾನವ ಜನಾಂಗವು ಮುಂದಕ್ಕೂ ಉಳಿಯಬೇಕಾದರೆ ಸಂಯುಕ್ತ ರಾಷ್ಟ್ರಸಂಘದ ಆದರ್ಶ ಸ್ಥಾಪನೆಗೋಸ್ಕರ ನಿರಂತರ ಪ್ರಯತ್ನಗಳು ನಡೆಯುವುದು ಎಂದಿಗಿಂತಲೂ ಹೆಚ್ಚು ಅವಶ್ಯಕ"

❖

ಆದರೆ ಈಚೆಗೆ ದಕ್ಷಿಣ ಆಫ್ರಿಕದ ಮುಖ್ಯ ಮಂತ್ರಿ ಡೇನಿಯಲ್ ಮಲಾನರು ಸಂಯುಕ್ತ ರಾಷ್ಟ್ರಸಂಘವು ಲೋಕ ಶಾಂತಿಗೆ ಗಂಡಾಂತರ ಪ್ರಾಯವಾದುದೆಂದು ಸಾರುವ ಎದೆಗಾರಿಕೆಯನ್ನು ತೋರಿಸಿದರು. ಸಂಯುಕ್ತ ರಾಷ್ಟ್ರ ಸಂಘವನ್ನು ದೇಹಕ್ಕೆ ಮಾರಕವಾದ ಕ್ಯಾನ್ಸರ್ ವ್ರಣಕ್ಕೆ ಹೋಲಿಸುತ್ತಾ ಮಲಾನರು ಒಂದೋ ರಾಷ್ಟ್ರಸಂಘವು ಆಮೂಲಾಗ್ರ ಸುಧಾರಣೆಗಳಿಗೆ ಗುರಿಯಾಗಬೇಕು, ಅದವಾ ಈ ಲೋಕದಿಂದ ಮಾಯವಾಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು ಮಾತ್ರವಲ್ಲ ತಮ್ಮ ಈ ಧೋರಣೆಯನ್ನು ಪೆಚ್ಚು ಪಚ್ಚು ರಾಷ್ಟ್ರಗಳು ಅನುಮೋದಿಸುತ್ತವೆಂದು ಹೇಳಲೂ ಮಲಾನರು ಹಿಂಜರಿಯಲಿಲ್ಲ ದಕ್ಷಿಣ ಆಫ್ರಿಕವು ವಿಶ್ವಸಂಸ್ಥೆಯೊಂದಿರಬೇಕೆಂಬ ತತ್ವವನ್ನು ವಿರೋಧಿಸುವುದಿಲ್ಲ—ಆಧುನಿಕ ಸಂಪರ್ಕ ಸಾಧನಗಳು ಲೋಕದ ವೈಶಾಲ್ಯವನ್ನು ಸಂಕುಚಿತಮಾಡಿವೆ, ಮತ್ತು ಒಂದನ್ನೊಂದು ನಿಕಟಕ್ಕೆ ತಂದಿವೆ ಎಂಬುದು ನಿಜ ಆದರೆ ಸಂಯುಕ್ತ ರಾಷ್ಟ್ರ ಸಂಘದ ಕೆಲಸ ತೃಪ್ತಿಕರವಾಗಿಲ್ಲ- ಅದು ಭಾರತದ ನಿಲುಮೆಯನ್ನೆ ಸಮರ್ಥಿಸಿಕೊಂಡು ದಕ್ಷಿಣ ಆಫ್ರಿಕೆಯನ್ನು ಖಂಡಿಸುತ್ತಿದೆ-ಎಂದು ಮಲಾನರು ಆರೋಪಿಸಿರುವರು ಇದರಲ್ಲಿ ತಥ್ಯಾಂಶವಿದೆಯೆ? ರಾಷ್ಟ್ರಸಂಘ ಮಾಡಿದ ದೊಡ್ಡ ತಪ್ಪುಗಳಲ್ಲಿ ವರ್ಣದ್ವೇಷವನ್ನು ಮನ್ನಿಸದಿರುವುದನ್ನು ಒಂದಾಗಿ ತೆಗದುಕೊಳ್ಳಬಲ್ಲೆವೆ? ಈ ವಿಷಯದಲ್ಲಿ ಭಾರತದ ಅಭಿಪ್ರಾಯ ಸ್ಪಷ್ಟವಾಗಿಯೇ ಇದೆ–೧೯೪೬ರಿಂದ ಭಾರತವು ಏಶಿಯಾ—ಅರಬ ರಾಷ್ಟ್ರಗಳ ಬೆಂಬಲದಿಂದ ದಕ್ಷಿಣ ಆಫ್ರಿಕೆಯ ವರ್ಣದ್ವೇಷ ಧೋರಣೆಯ ಭರ್ತ್ಸನೆಗಾಗಿ, ನಿರ್ಮೂಲಕ್ಕಾಗಿ ಪ್ರಯತ್ನ ನಡೆಸಿರುತ್ತದೆ ರಾಷ್ಟ್ರಸಂಘದ ಮೂಲಭೂತ ಹಕ್ಕುಗಳ ಪ್ರಣಾಳಿಕಾನುಸಾರವಾಗಿಯೇ ಈ ಪ್ರಯತ್ನ ಕೈಗೊಳ್ಳಲ್ಪಟ್ಟಿರುವುದರಿಂದ ಮತ್ತು ಮಾನವೀಯ ಕಲ್ಯಾಣವೇ ಇದರ ಉದ್ದೇಶವಾಗಿರುವುದರಿಂದ ಭಾರತದ ತಕರಾರನ್ನು ಸಹಾನುಭೂತಿಯಿಂದ ರಾಷ್ಟ್ರಸಂಘ ವಿಚಾರಿಸುವುದು ಅನಿವಾರ್ಯವಾಗಿರುತ್ತದೆ ೮೦ ಲಕ್ಷ ಆಫ್ರಿಕನರು ಭಾರತೀಯ ವಲಸೆಗಾರರ ಸಹಕಾರದಿಂದ ಈಗ ದಕ್ಷಿಣ ಆಫ್ರಿಕಯಲ್ಲಿ ಸತ್ಯಾಗ್ರಹ ಚಳವಳದಲ್ಲಿ ಧುಮುಕಿರುವರು ಅವರ ಧ್ಯೇಯ ಧೋರಣೆಗಳನ್ನು ಸಮರ್ಥಿಸುವುದರ ಮೂಲಕ ರಾಷ್ಟ್ರಸಂಘದ ಉನ್ನತಾದರ್ಶವನ್ನು ಭಾರತ ಎತ್ತಿ ಹಿಡಿದಿದೆ, ಮತ್ತು ಈ ವರ್ಣಭೇದ ನೀತಿಯು ಶಾಂತಿಗೆ ಗಂಡಾಂತರ ಪ್ರಾಯವೆಂಬ ಅಭಿಪ್ರಾಯಕ್ಕೆ ಬಂದಿದೆ ಭಾರತದ ಅಭಿಪ್ರಾಯ ಯಥಾರ್ಥವಾದ ದೆಂದು ಮೊನ್ನೆ ತಾನೆ ಸಂಯುಕ್ತ ರಾಷ್ಟ್ರಸಂಘಕ್ಕೆ ಈ ವಿಷಯದಲ್ಲಿ ಒಪ್ಪಿಸಲಾದ ಸಂಶೋಧಕರ ವರದಿ ಸಮರ್ಥಿಸುತ್ತದೆ

❖

ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಎಲ್ಲ ರಾಷ್ಟ್ರಗಳಿಗೂ ತನ್ನ ನೈತಿಕ ಬೆಂಬಲವನ್ನು ಸೂಚಿಸಿದೆ ಟ್ಯುನೀಸಿಯಾ ಮತ್ತು ಮೊರೊಕ್ಕೋದ ಪ್ರಶ್ನೆಗಳಲ್ಲಿ ಇದು ಅಸ್ಪಷ್ಟವನ್ನು ಈ ಕಾರಣಕ್ಕಾಗಿಯೇ ವಹಿಸಿದೆ ಇದರಂತೆ ಸಂಯುಕ್ತ ರಾಷ್ಟ್ರ ಸಂಘವು ತನ್ನ ಹೆಸರಿಗೆ ಸರಿಯಾದ ಪ್ರಾತಿನಿಧಿಕ ವಿಶ್ವ ಸಂಸ್ಥೆಯಾಗಬೇಕೆನ್ನುವುದೂ ಭಾರತದ ಮನೀಷೆ ಪ್ರಧಾನಿ ನೆಹರೂರವರ ಶಬ್ದಗಳಲ್ಲಿ "ಪ್ರತಿಯೊಂದೂ ಸ್ವತಂತ್ರ ರಾಷ್ಟ್ರಕ್ಕೆ ನೇರ್ಪಡೆಯಾಗಲು ಅವಕಾಶವಿರುವ ಸಂಸ್ಥೆಯಾಗಿ ರಾಷ್ಟ್ರಸಂಘ ವಿರುತ್ತದೋ ಅದವಾ ಒಂದು ವಿಶಿಷ್ಟ ದೃಷ್ಟಿಕೋಣವನ್ನಿಟ್ಟುಕೊಂಡಿರುವ ಕೆಲವೇ ಆರಿಸಿದ ದೇಶಗಳ ಗುಂಪಿಗೆ ಮಾತ್ರ ಈ ಸಂಸ್ಥೆ ಪರಿಮಿತವಾಗಿರುವುದೋ ಎಂಬುದು ಇಲ್ಲಿ ... ಮೂಲ ಪ್ರಶ್ನೆ" ರಾಷ್ಟ್ರಸಂಘವು ಅಸ್ತಿತ್ವಕ್ಕೆ ಬಂದ ಕಾಲದ ... ಹೇಳಿದ ಹೊಣೆಗಾರಿಕೆಗಳನ್ನು ನಿರ್ವಹಿಸಿಕೊಂಡು ಹೋಗಬಲ್ಲ ಪ್ರತಿಯೊಂದು ಸ್ವತಂತ್ರ ರಾಷ್ಟ್ರಕ್ಕೆ ಪ್ರಾತಿನಿಧ್ಯ ಕೊಡುವ ಇಚ್ಛೆ ವ್ಯಕ್ತಗೊಳಿಸಲ್ಪಟ್ಟಿತ್ತು. ಇದನ್ನು ಈಗ ಬತ್ತಿಟ್ಟಿಗೆ ಸರಿಸಿ ಪ್ರಾತಿನಿಧ್ಯದ ಸಂಬಂಧದಲ್ಲಿ ಆತಂಕಗಳನ್ನು ಮುಂದಿಡುವುದೆಂದರೆ, ರಾಷ್ಟ್ರ ಸಂಘದ ಧ್ಯೇಯಕ್ಕೆ ಚಂದವಲ್ಲ ಈ ಕಾರಣದಿಂದಲೇ ಭಾರತವು ೪೫ ಕೋಟಿ ಪ್ರಜಾ ಜನರನ್ನು ಕೂಡಿರುವ ಕಮ್ಯೂನಿಸ್ಟ ಚೀನಾಕ್ಕೆ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ಸದಾ ಕಾಲ ಪ್ರತಿಪಾದಿಸಿರುತ್ತದೆ ಮಾತ್ರವಲ್ಲ, ಅಲ್ಬೇನಿಯಾ, ಬಲ್ಗೇರಿಯಾ, ರುಮೇನಿಯಾ, ಹಂಗರಿ, ಫಿನ್‌ಲೆಂಡ್, ಇಟಲಿ ಪೋರ್ಚುಗಲ್ ಐರ್ಲೆಂಡ್, ಜೋರ್ಡಾನ್, ಆಸ್ಟ್ರಿಯಾ, ಸಿಂಹಳ, ನೇಪಾಳ, ಲಿಬಿಯಾ, ಜಪಾನು ಮುಂತಾದ ದೇಶಗಳಿಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯವಿರತಕ್ಕುದೆಂದು ಹೇಳಿದೆ

❖

ಭಾರತದ ಮೂಲಭೂತ ಧೋರಣೆಯು ಲೋಕ ಶಾಂತಿಯ ಆದರ್ಶದಿಂದ ಕೂಡಿರುವುದರಿಂದ ರಾಷ್ಟ್ರ ಸಂಘದಲ್ಲಿ ಅದಕ್ಕೆ ಉನ್ನತವಾದ ಸ್ಥಾನ ಮಾನಗಳು ಪ್ರಾಪ್ತವಾಗಿರುತ್ತವೆ ಭಾರತ ಲೋಕ ಶಾಂತಿಗಾಗಿ ಮಾಡಿದ ಪ್ರಯತ್ನಗಳ ಮೆಚ್ಚುಗೆ ಯೆಂಬಂತೆ ಈ ಸಲದ ಎಂಟನೇ ಸಾಮಾನ್ಯಾಧಿವೇಶನಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಧ್ಯಕ್ಷರಾಗಿ ಆಯ್ಕೆಹೊಂದಿರುವರು ಸಂಯುಕ್ತ ರಾಷ್ಟ್ರ ಸಂಘದ ಅಂಗ ಸಂಸ್ಥೆಗಳಲ್ಲಿಯೂ ಭಾರತವು ಯೋಗ್ಯ ಸ್ಥಾನ ಮಾನವನ್ನು ಪಡೆದಿರುತ್ತದೆ ಇವುಗಳಲ್ಲಿ ಕೆಲಸಮಾಡುವಾಗಲೆಲ್ಲ ಭಾರತೀಯ ಪ್ರತಿನಿಧಿಗಳ ಶಾಂತಿಗೆ ನೆರವಾಗಬೇಕು, ಮಾನವಕೋಟಿಯ ಕಲ್ಯಾಣವಾಗಬೇಕು, ಮತ್ತು ಯಥಾರ್ಥವಾದ ಸೂಚನೆಗಳ ಮೇಲೆ ಪಚ್ಚಿಸ ಜನರು ಒಮ್ಮತಕ್ಕೆ ಒರುವಂತಾಗಬೇಕು ಎಂಬ ತ್ರಿವಿಧ ಉದ್ದೇಶಗಳನ್ನಿಟ್ಟುಕೊಂಡು ಕೆಲಸ ಮಾಡಿರುವರು. ಮಹಾರಾಷ್ಟ್ರಗಳೊಡನೆ ತುಲನೆ ಮಾಡಿದಲ್ಲಿ ಭಾರತವು ದುರ್ಬಲವೆಂದು ಕಂಡುಬಂದರೂ ಪರಂಪರೆಯ ಬೆಂಬಲದಿಂದ ಅದು ಪಡೆದಿರುವ ನೈತಿಕ ಸಾಮರ್ಥ್ಯ ಬಹಳದೊಡ್ಡದು ಈ ಬಲದ ಸದುಪಯೋಗವಿಂದಲೇ ಅದು ಕೊರಿಯಾದ ಕದನ ನಿಲುಗಡೆ ಹಾಗೂ ಆ ಬಳಿಕದ ಘಟನೆಗಳಲ್ಲ ಇರಸ್ಕೃಯಯರಾಗೆ ಸುವರ್ಣಾಕ್ಷರಗಳಲ್ಲಿ ಬರೆಯಲು ತಕ್ಕದಾದ ಕೆಲಸಗಳನ್ನು ಮಾಡಿರುತ್ತದೆ ೧೯೫೦ರಲ್ಲಿ ಕೊರಿಯಾದ ಯುದ್ಧದ ಕಿಡಿ ಹಾರಿದ ಬೆನ್ನಿಗೆಯೇ ಪ್ರಧಾನಿ ನೆಹರೂರವರು ಮಾರ್ಶಲ್ ಸ್ಟಾಲಿನ್ನ ಹಾಗೂ ಅಧ್ಯಕ್ಷ ಟ್ರೂಮನ್ನರಿಗೆ ವ್ಯಕ್ತಿಗತ ಪತ್ರ ಬರೆದು ಯುದ್ಧ ನಿಲ್ಲಿಸಲು ತಮ್ಮ ವರ್ಚಸ್ಸನ್ನು ಉಪಯೋಗಿಸಲು ಕೇಳಿಕೊಂಡರು. ಮುಂದೆ ಉತ್ತರ ಕೊರಿಯನ್ನರನ್ನು ಹಿಮ್ಮೆಟ್ಟಿಸುತ್ತಾ ರಾಷ್ಟ್ರಸಂಘದ ಸೈನ್ಯ ಮುನ್ನಡೆಯುವಾಗ ಚೀನೀ ಆಕ್ರಮಣ ಅಪಾಯವನ್ನು ಪಾಟಬಾರದೆಂದು ಭಾರತದ ಪ್ರಧಾನಿ ಎಚ್ಚರಿಸಿದರು ಇವುಗಳು ವಿಫಲಗೊಂಡರೂ-ಮೊನ್ನೆ ಮೊನ್ನೆ ಕೊರಿಯಾದಲ್ಲಿ ಕದನ ನಿಲುಗಡೆಯು ಒಪ್ಪಂದ ಸಾಧ್ಯವಾಗುವಂತೆ ಮಾಡಿದ ಶ್ರೇಯಸ್ಸು ಭಾರತಕ್ಕೆ ಸಲ್ಲಬೇಕು ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳ ಸಂಬಂಧದಲ್ಲಿ ಭಾರತ ಕಂಡು ಹಿಡಿದ ಸೂತ್ರ ಅವರ ಕೊರಳಿಗೊಂದು

([illegible]ನೇ ಪುಟ ನೋಡಿರಿ)

ಸಮಾಜ ವಿಕಾಸ ಯೋಜನೆಯ ಕಾರ್ಯಫಲ

ಭಾರತದ ಸಾರ್ವಾಂಗಿಕ ಏಳಿಗೆಯ ಭರವಸೆ ಕೊಡುವ ಬಹುಮುಖ ಚಟುವಟಿಕೆ

ಭಾರತ ಸರಕಾರವು ಕಳೆದ ವರ್ಷ ಅಕ್ಟೋಬರ ಮಾಸದಲ್ಲಿ ಗಾಂಧೀ ಜಯಂತಿಯಂದು ದೇಶದ ವಿವಿಧ ಪ್ರದೇಶಗಳಲ್ಲಿ ಪ್ರಾರಂಭಿಸಿದ ಜನಪದ ಅಭಿವೃದ್ಧಿ ಯೋಜನೆಗಳು ಅತ್ಯದ್ಭುತವಾದ ಸಾರ್ವಜನಿಕ ಸಹಕಾರವನ್ನು ಪಡೆದು ಪ್ರಗತಿ ಹೊಂದಿವೆ ಎಂದರೆ ಅತಿಶಯೋಕ್ತಿಯಾಗಲಾರದು. ಇದು ವರೆಗೆ ಸಮಾಜ ವಿಕಾಸದ ಈ ಕೇಂದ್ರಗಳಲ್ಲಿ ಸಾರ್ವಜನಿಕರ ಸ್ಫೂರ್ತಿ ಉತ್ಸಾಹಗಳು ಕಾರ್ಯರೂಪದಲ್ಲಿ ಪರಿಣತರಾದ ಬಗೆಯನ್ನು ಮನಗಂಡರೆ, ಈ ವರ್ಷದ ಗಾಂಧೀ ಜಯಂತಿಯಂದು ಈ ಯೋಜನೆಯನ್ನು ಇನ್ನಷ್ಟು ವಿಸ್ತರಿಸಿರುವುದು ಯಥಾಯೋಗ್ಯವಾದ ಹೆಜ್ಜೆ ಎಂಬ ತೃಪ್ತಿ ದೊರೆಯುತ್ತದೆ. ವಿವಿಧ ರಾಜ್ಯ ಸರಕಾರಗಳಿಂದ ಬಂದ ವರದಿಯಂತೆ, ಹಳ್ಳಿಯ ಜನರು ಸ್ವಯಂಪ್ರೇರಣೆಯಿಂದ ಮಾರ್ಗರಚನೆಯ ಕಾರ್ಯದಲ್ಲಿ ಪ್ರವೃತ್ತರಾದರು; ನೀರಾವರಿಗೋಸ್ಕರ ಕಾಲುವೆಗಳನ್ನು ತೋಡಿದರು; ಸುಧಾರಿತ ರೀತಿಯ ಕೃಷಿ ಪದ್ಧತಿಯ ಅಭ್ಯಾಸ ಪ್ರದರ್ಶನವನ್ನು ಏರ್ಪಡಿಸಿ ಜ್ಞಾನ ಪ್ರಸಾರ ಮಾಡಿದರು. ಹೊಸ ಶಾಲೆಗಳನ್ನೂ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆದು ವಿದ್ಯಾಭ್ಯಾಸದ ಪ್ರಚಾರ ಕೈಗೊಂಡರು. ಜನ ಹಾಗೂ ಜಾನುವಾರುಗಳ ಆರೋಗ್ಯ ರಕ್ಷಣೆಯ ಬಗ್ಗೆ ಯೋಗ್ಯ ಕ್ರಮಗಳನ್ನು ಕೈಗೊಳ್ಳಲಾಯಿತು. ಈಗಿರುವ ಗೃಹೋದ್ಯಮಗಳನ್ನು ಊರ್ಜಿತಗೊಳಿಸುವುದಕ್ಕೋಸ್ಕರ ಸಾಲಗಳು ಹಾಗೂ ಪರಿಷ್ಕರಿಸಿದ ತಾಂತ್ರಿಕ ತರಬೇತಿಗಳು ನೀಡಲಾದುವು. ಹೊಸತಾಗಿ ಸಹಕಾರೀ ಸಂಘಗಳು ತಲೆಯೆತ್ತಿಕೊಂಡು ರೈತರಿಗೆ ಆಪತ್ಕಾಲದಲ್ಲಿ ಧನ ಸಹಾಯ ಮಾಡಿದವು. ಜನರೆಲ್ಲರೂ ಸಮಾಜ ವಿಕಾಸ ಕಾರ್ಯದಲ್ಲಿ ಹೆಚ್ಚಿನ ಆಸ್ಥೆಯನ್ನು ಪ್ರಕಟಿಸಿ, ಬಹಳ ಚಟುವಟಿಕೆಯಿಂದ ಪರಿಶ್ರಮ ನಿರತರಾದ ಉದಾಹರಣೆಯಿದೆ. ಸ್ವೇಚ್ಛೆಯಿಂದ ತನು ಮನ, ಧನ ಸಹಾಯ ನೀಡುವ ಮನೋಭಾವ ದಿನದಿನಕ್ಕೆ ಬಲಿಯುತ್ತಾ ಬರುತ್ತಿದೆ. ಇದಕ್ಕೆ ನಿದರ್ಶನವಾಗಿ ಇದುವರೆಗೆ ಅಲ್ಲಲ್ಲಿ ಆದ ಕೆಲಸದ ಕೆಲವು ವಿವರಗಳನ್ನು ಕೆಳಗೆ ಕೊಟ್ಟಿರುತ್ತೇವೆ

ಮಾರ್ಗಗಳ ರಚನೆ

ಅಸ್ಸಾಮು ರಾಜ್ಯದಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ೭೧ ಮೈಲು ಉದ್ದದ ಹಳ್ಳಿಯ ರಸ್ತೆಯನ್ನು ಜನರೇ ರಚಿಸಿರುವರು. ಅಲ್ಲಿಯೇ ಇನ್ನೊಂದು ಕೇಂದ್ರದಲ್ಲಿ ಸರಕಾರದಿಂದ ಯಾವುದೇ ಹಣ ಸಹಾಯವನ್ನು ಪಡೆಯದೆ, ಸ್ವತಃ ಜನರೇ ಬೆವರಿಳಿಸಿ ದುಡಿದು ೧೫ ಅಡಿ ಅಗಲವುಳ್ಳ ೧೫೬ ಮೈಲು ಉದ್ದದ ಮಾರ್ಗ ರಚನೆ ಮಾಡಿರುವರು.

ಮುಂಬಯಿಯ ಕೊಲ್ಹಾಪುರ ಕೇಂದ್ರದಲ್ಲಿ ಸುಮಾರು ಒಂದು ಲಕ್ಷ ಜನರು ಹಳ್ಳಿಯ ರಸ್ತೆಗಳ ನಿರ್ಮಾಣ ಕಾರ್ಯದಲ್ಲಿ ಭಾಗ ವಹಿಸಿದರು. ಅವರು ಮಾಡಿದ ದುಡಿತಕ್ಕೆ ಕೂಲಿ ಕೊಡುವುದಾದರೆ ೧ ಲಕ್ಷ ೧೫ ಸಾವಿರ ರೂಪಾಯಿಗಳಷ್ಟಾಗುತ್ತದೆ. ಇದಲ್ಲದೆ ಗ್ರಾಮಾಣರು ಮಾರ್ಗರಚನೆಗೋಸ್ಕರ ತಮ್ಮ ಜಮೀನಿನ ಕೆಲವಂಶವನ್ನು ಧರ್ಮಾರ್ಥವಾಗಿ ಕೊಟ್ಟಿರುವರು. ಹೀಗೆ ದಾನ ಮಾಡಿದ ಭೂಮಿಯ ಬೆಲೆ ೧೬೭೦೦ ರೂಪಾಯಿಯಾಗುತ್ತದೆ. ೩೬ ಮೈಲು ಉದ್ದದ ಸಾಧಾರಣ ರಸ್ತೆಯನ್ನು ಇಲ್ಲಿ ಮಾಡಿರುವರು ಇದಲ್ಲದೆ ಒಂದೂವರೆಯಿಂದ ಎರಡು ಲಕ್ಷ ರೂಪಾಯಿ ವೆಚ್ಚ ಬರುವ ಕೆಲವು ಸೇತುವೆಗಳೂ ನಿರ್ಮಾಣಗೊಂಡಿವೆ.

ಪಂಜಾಬದಲ್ಲಿ ೧೬೩ ಮೈಲುಗಳಷ್ಟು ಸಾಧಾರಣ ರಸ್ತೆ ಹಾಗೂ ೬ ಮೈಲು ಉದ್ದದ ಉತ್ತಮ ರಸ್ತೆಯನ್ನು ಸಮಾಜ ವಿಕಾಸ ಕೇಂದ್ರಗಳಲ್ಲಿ ಮಾಡಲಾಯಿತು. ಫರಿದಾಬಾದಿನಲ್ಲಿ ಗ್ರಾಮಸ್ಥರೆಲ್ಲ ಒಟ್ಟಿಗೆ ಸೇರಿ ೧೭ ಮೈಲು ಉದ್ದದ ಮಾರ್ಗವರಚನೆಯನ್ನು ಮೂರು ವಾರಗಳಷ್ಟು ಕಡಿಮೆ ಸಮಯದಲ್ಲಿ ಮಾಡಿ ಮುಗಿಸಿದರು. ಇದಕ್ಕೆ ಬೇಕಾದ ಭೂಮಿಯನ್ನು ಸಂಬಂಧಿಸಿದ ಹಳ್ಳಿಗರೇ ದಾನ ಮಾಡಿದರು; ಮತ್ತು ಎಲ್ಲರೂ ಸ್ವೇಚ್ಛೆಯಿಂದ ದುಡಿಯಲು ಬಂದರು. ಈ ಪರಿಶ್ರಮದ ಬೆಲೆ ಒಂದು ಲಕ್ಷ ರೂಪಾಯಿಯಾಗುತ್ತದೆ. ಮಳೆಗಾಲ ತೊಡಗುವುದಕ್ಕೆ ಮುಂಚೆಯೇ ಕೇವಲ ೧೫ ದಿನಗಳಲ್ಲಿ ಒಂದು ಅಣೆಕಟ್ಟನ್ನು ಪಂಜಾಬದಲ್ಲಿ ಕಟ್ಟಿದರು. ಅಲ್ಲಿಯೇ ಇನ್ನೊಂದು ಕೇಂದ್ರದಲ್ಲಿ ೩೦ ಲಕ್ಷ ಘನಅಡಿ ಮಣ್ಣಿನ ಮೇಲೆ ಮೂರು ಮಾರ್ಗಗಳ ರಚನೆಗೋಸ್ಕರ ಹಳ್ಳಿಗರು ಕೆಲಸ ಮಾಡಿದರು. ಸ್ವೇಚ್ಛೆಯಿಂದ ಶ್ರಮದಾನ ಮಾಡುವುದಲ್ಲದೆ, ೧೦ ಸಾವಿರ ರೂಪಾಯಿ ಹಣವನ್ನೂ ಹಳ್ಳಿಗರು ಕೂಡಿಸಿದರು. ೨೯ ಶಾಲಾ ಕಟ್ಟೋಣಗಳನ್ನು ರಚಿಸಿರುವರಲ್ಲದೆ ಇನ್ನೂ ಹೆಚ್ಚು ಶಾಲೆಗಳನ್ನು ಕಟ್ಟಲು ೨೮೦೦೦ ರೂಪಾಯಿ ಸಂಗ್ರಹಿಸಿರುವರು. ಜವುಗು ಪ್ರದೇಶವನ್ನು ಸಾಗುವಳಿ ಯೋಗ್ಯ ಮಾಡಲು ಪ್ರಯತ್ನಿಸಿ ಒಂದು ಸಾವಿರ ಎಕ್ರೆ ಭೂಮಿಯನ್ನು ಹಸನು ಮಾಡಿರುವರು. ಪಂಜಾಬದ ಬೇರೊಂದು ಕೇಂದ್ರದಲ್ಲಿ ೬೭ ಮೈಲು ಉದ್ದದ ಮಾರ್ಗ ರಚನೆಯನ್ನು ಗ್ರಾಮಸ್ಥರು ಮಾಡಿರುವರು. ಇಲ್ಲಿ ಭೂಮಿದಾನ ಹಾಗೂ ಶ್ರಮದಾನ ೧೦ ಲಕ್ಷ ರೂಪಾಯಿಗಳನ್ನು ಮುಟ್ಟಿದೆ. ನೆರೆಯಿಂದ ಭೂಮಿಯನ್ನು ಉಳಿಸಲು ಯೋಗ್ಯ ಕಾಲುವೆಗಳನ್ನು ಏಳು ಮೈಲುಗಳಷ್ಟು ತೋಡಲಾಗಿದೆ.

ನೀರಾವರಿಯ ಅನುಕೂಲತೆ

ಉತ್ತರ ಪ್ರದೇಶದಲ್ಲಿ ಶ್ರಮದಾನ ಚಳುವಳಿಯನ್ನು ಈ ವರ್ಷದ ಮೇ ತಿಂಗಳಲ್ಲಿ ಆರಂಭಿಸಿ ಸುಮಾರು ೧೪೦೦೦ ರೂಪಾಯಿ ಬೆಲೆಯಾಗುವ ೫೧ ಕೆರೆಗಳನ್ನು ತೋಡಿ ಇನ್ನಷ್ಟು ಆಳ ಮಾಡಲಾಯಿತು. ಫೈಜಾಬಾದು ಕೇಂದ್ರದಲ್ಲಿ ೪೧ ತೂತು ಬಾವಿಗಳನ್ನು ನಿರ್ಮಿಸಿ ೧೫೦೦೦ ಎಕ್ರೆ ಭೂಮಿಗೆ ನೀರುಣಿಸಲಾಗಿದೆ. ಮಣ್ಣುಮುಚ್ಚಿಕೊಂಡು ನಿರುಪಯೋಗಿಯಾಗಿದ್ದ ೨೯ ಕೆರೆಗಳನ್ನು ಮರಳಿ ಉಪಯೋಗಕ್ಕೆ ಯೋಗ್ಯವನ್ನಾಗಿ ಮಾಡಿರುವರು. ನಾಲ್ಕು ಪ್ರಾಥಮಿಕ ಶಾಲೆಗಳು, ೪ ಪಂಚಾಯತು ಕಾರ್ಯಾಲಯ, ೮೦ ಮೈಲುದ್ದದ ಸಾಮಾನ್ಯ ರಸ್ತೆ, ೨೮ ವಸತಿಗೃಹ ಹಾಗೂ ಎರಡು ಅಣೆಕಟ್ಟುಗಳ ನಿರ್ಮಾಣಕ್ಕೋಸ್ಕರ ಜನರ ಸಹಕಾರವನ್ನೂ ಶ್ರಮವನ್ನೂ ಪಡೆಯಲಾಯಿತು. ಈ ರೀತಿ ಒಂದೂವರೆ ಲಕ್ಷ ರೂಪಾಯಿ ಉಳಿತಾಯಗೊಂಡಿತು.

ಬಂಗಾಳದಲ್ಲಿ ತೂತು ಬಾವಿಗಳನ್ನು ಪ್ರತಿಯೊಂದೂ ಕೇಂದ್ರದಲ್ಲಿ ರಚಿಸಲು ಹಣ ಹಾಗೂ ಶ್ರಮರೂಪದಲ್ಲಿ ನೆರವು ದೊರೆತಿದೆ. ಹೊಸ ಶಾಲೆಗಳನ್ನು ಹಳ್ಳಿಗರು ಕಟ್ಟಿಕೊಳ್ಳುತ್ತಿರುವರು; ಮತ್ತು ಅದಕ್ಕೋಸ್ಕರ ಉದಾರವಾದ ಸಹಾಯ ಧನವೂ ದೊರೆತಿದೆ.

ಹೈದರಾಬಾದಿನಲ್ಲಿ ೭೫೦೦ ಎಕ್ರೆ ಬೀಳು ಭೂಮಿಯನ್ನು ಸಾಗುವಳಿ ಯೋಗ್ಯವಾಗಿ ಮಾಡಿರುವರು. ೧೫೦೦೦ ಎಕ್ರೆ ಪ್ರದೇಶಕ್ಕೆ ನೀರಾವರಿಯ ಅನುಕೂಲತೆ ದೊರೆತಿದೆ. ತುಂಗಭದ್ರಾ ಯೋಜನಾ ಪ್ರದೇಶದಲ್ಲಿ ೧೯ ಹೊಸ ಮಾದರಿಯ ಗ್ರಾಮಗಳ ನಿರ್ಮಿಸಿ ಅಲ್ಲಿ ತುಂಗಭದ್ರೆಯ ಜಲಾಶಯದಿಂದ ಊರು ಬಿಡಬೇಕಾಗಿ ಬಂದ ಜನರ ಪುನಃ ನಿವೇಶನಕ್ಕೆ ವ್ಯವಸ್ಥೆ ಮಾಡಲಾಗುವದು. ನಿಜಾಮು ಸಾಗರ ಕೇಂದ್ರದಲ್ಲಿ ಮೂರೂವರೆ ಮೈಲು ಉದ್ದದ ರಸ್ತೆಯನ್ನು ಹಳ್ಳಿಗರ ಶ್ರಮದಿಂದ ೪೧೮೦ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಯಿತು. ಸರಕಾರವೇ ಎಲ್ಲದಕ್ಕೂ ಹಣ ಒದಗಿಸುತಿದ್ದರೆ ಈ ಮಾರ್ಗಕ್ಕೆ ೧೪೦೯೭ ರೂಪಾಯಿಗಳು ತಗಲುತಿದ್ದವು. ಇದರಂತೆ ಹಳ್ಳಿಯ ಜನರು ೧೬ ಬಾವಿಗಳನ್ನು ಕೇವಲ ಆರು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಮಾಡಿರುವರು.

ಮಧ್ಯ ಭಾರತದಲ್ಲಿ ೧೩೬೪ ಬಾವಿಗಳನ್ನು ಹೊಸದಾಗಿ ನಿರ್ಮಿಸಿದ್ದಲ್ಲದೆ ಹಳೆಯ ೧೦೩೨ ಬಾವಿಗಳ ಜೀರ್ಣೋದ್ಧಾರವೂ ನಡೆಯಿತು. ಇವುಗಳಲ್ಲಿ ಒಂದು ನೂರು ಬಾವಿಗಳ ರಚನೆಗೆ ಸರಕಾರದಿಂದ ಯಾವುದೇ ಸಹಾಯವನ್ನೂ ಹಳ್ಳಿಗರು ಅಪೇಕ್ಷಿಸಲಿಲ್ಲ. ರೊಕ್ಕ ಹಾಗೂ ಶ್ರಮದಾನದ ಮೂಲಕ ಹಳ್ಳಿಗರು ನೀಡಿದ ಸಹಾಯ ೬೭೬೫೦೦ ರೂಪಾಯಿಗಳು. ಸರಕಾರದ ಸಾಲ ಕೊಡುವ ಯೋಜನೆಯಿಂದ ಸಹಾಯ ಪಡೆದು ಅನೇಕ ಪಂಪು ಸೆಟ್ಟುಗಳನ್ನು ಅಲ್ಲಲ್ಲಿ ಉಪಯೋಗಿಸಲಾಯಿತು. ೬ ತಿಂಗಳ ಅಲ್ಪಾವಧಿಯಲ್ಲಿ ೯೦ ಪಂಪು ಸೆಟ್ಟುಗಳನ್ನು ಹಳ್ಳಿಗರಿಂದ ೯೦೦೦೦ ರೂಪಾಯಿಗಳ ನೆರವಿನ ಬಲದಿಂದ ಸ್ಥಾಪಿಸಲಾಯಿತು.

ಅಲ್ಲಿಯೇ ಇನ್ನೊಂದು ಕೇಂದ್ರದಲ್ಲಿ ಜಪಾನೀ ಪದ್ಧತಿಯಂತೆ ಭತ್ತವನ್ನು ಬೆಳೆಯುವ ಚಳವಳಿಗೆ ಉತ್ತೇಜನ ದೊರೆಯಿತು ಪರಿಣಾಮವಾಗಿ ೫೦೦೦ ಎಕ್ರೆ ಜಮೀನಿನಲ್ಲಿ ಈ ಪ್ರಯೋಗ ನಡೆಸಲ್ಪಟ್ಟಿತು. ಇದರಿಂದ ಒಂದು ಲಕ್ಷ ಮಣದಷ್ಟು

(೧೦ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಲಾಭಸಹಿತ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನಮ್ಮ ವಿದ್ಯಾಭ್ಯಾಸದ ಭವಿಷ್ಯ

ರಾಷ್ಟ್ರೀಯ ಪದ್ಧತಿಯ ಸ್ಥೂಲ ಸ್ವರೂಪ

ಭಾರತದಲ್ಲಿ ಶಿಕ್ಷಣದ ಭವಿಷ್ಯವೇನೆಂದು ತಜ್ಞರ ಅಭಿಪ್ರಾಯವನ್ನು ಕ್ರೋಢೀಕರಿಸಲು ಇಂದು ಪ್ರಯತ್ನ ನಡೆದಿದೆ. ಅಲೀಘರ ವಿಶ್ವ ವಿದ್ಯಾಲಯದ ಉಪ ಕುಲಪತಿಗಳಾದ ಡಾ.ಝಾಕೀರ ಹುಸೇನರ ಅಭಿಪ್ರಾಯದಂತೆ ಭಾರತೀಯರ ಭವಿಷ್ಯವೇ ಇಲ್ಲಿಯ ಶಿಕ್ಷಣದ ಭವಿಷ್ಯವೂ ಹೌದು. ಅಂದರೆ ಶಿಕ್ಷಣಕ್ಕೂ ಜನ ಜೀವನಕ್ಕೂ ಅಷ್ಟು ಅನ್ಯೋನ್ಯತೆ ಇದೆ; ಸಾಮ್ಯವಿದೆ. ನ್ಯಾಯಬದ್ಧವಾದ, ಪ್ರಾಮಾಣಿಕವಾದ ಮತ್ತು ಚಲೋದಾದ ಜೀವನವನ್ನು ಬಾಳಲು, ವರ್ಗರಹಿತವಾದ, ಪರಸ್ಪರ ಸಹಾಯೋದ್ದೇಶವೇ ಮುಖ್ಯವಾಗಿರುವ ಸಮಾಜವನ್ನು ಸ್ಥಾಪಿಸಲು, ಅಭಾವದ ಅಂಜಿಕೆ ಇಲ್ಲದೆ ಸ್ವಯಂಪೂರ್ಣರಾಗಲು ಪ್ರಭಾವ ಶಾಲಿಯಾದ ವರ್ಚಸ್ವಿಯಾದ ಶಿಕ್ಷಣ ಪದ್ಧತಿ ಇರುವುದು ಅನಿವಾರ್ಯ. ಈ ದೃಷ್ಟಿಯಿಂದ ಭಾರತೀಯ ಶಿಕ್ಷಣ ಪದ್ಧತಿ ಒಂದು ಐತಿಹಾಸಿಕ ಹೊಣೆಗಾರಿಕೆಯನ್ನು ನಿರ್ವಹಿಸುವ ಆವಶ್ಯಕತೆಯುಂಟು. ಭಾರತೀಯರ ಪರಂಪರಗತವಾದ ಗೌರವಯುತ ಜೀವನವನ್ನು ಈ ಪದ್ಧತಿ ಪೋಷಿಸಿಕೊಂಡು ಬಂದು, ಲೋಕದಲ್ಲಿ ಸರ್ವತ್ರ ಮನ್ನಣೆಯನ್ನು ಹೊಂದಬೇಕು. ಈ ದೃಷ್ಟಿಯಿಂದ ಭಾರತದಲ್ಲಿ ಶಿಕ್ಷಣ ವಿಕಾಸ ಹೊಂದುವ ಬಗೆಯನ್ನು ಸಹೃದಯತೆಯಿಂದ ವಿಮರ್ಶಿಸುವುದೊಳಿತು.

ಹುಸಿಹೋಗುವ ಭಯ

ನಮ್ಮಲ್ಲಿ ಈಗ ಪ್ರಚಾರದಲ್ಲಿರುವುದಕ್ಕಿಂತಲೂ ವ್ಯಾಪಕವಾದ ಮತ್ತು ಪರಿಣಾಮಕಾರಿಯಾದ ಶಿಕ್ಷಣಪದ್ಧತಿ ರೂಪುಗೊಳ್ಳುವುದಕ್ಕೆ ನಾವು ಆಸ್ಪದ ಕೊಡಲೇಬೇಕು. ಈಗಿರುವಂತೆ ನಮ್ಮ ವಿದ್ಯಾಭ್ಯಾಸಕ್ಕೆ ಬಹಳ ಮಿತವಾದ ಕ್ಷೇತ್ರವುಂಟು. ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಲ್ಲಿ ಪ್ರತಿ ಶತ ೪೦ರಷ್ಟು ಮಾತ್ರ ವಿದ್ಯೆ ಪಡೆಯುತ್ತಾರೆ. ಜನಸಂಖ್ಯೆಯಲ್ಲಿ ಶೇಕಡಾ ೧೬ಮಂದಿಯಷ್ಟೇ ಅಕ್ಷರಸ್ಥರು. ಇದರಲ್ಲೂ ೧೧ರಿಂದ ೧೭ ವರ್ಷ ವಯಸ್ಸಿನವರು ಶಾಲೆಗೆ ಹೋಗುವುದು ಶೇಕಡಾ ೧೦ ಮಾತ್ರ; ಮತ್ತು ೧೭ರಿಂದ೨೨ ವರ್ಷ ವಯಸ್ಸಿನವರಲ್ಲಿ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಕಲಿಯುವಾತ ನೂರಕ್ಕೆ ಒಬ್ಬನೂ ಇಲ್ಲ. ಈ ಪರಿಸ್ಥಿತಿಯಲ್ಲಿ ತೀವ್ರ ಸುಧಾರಣೆಯಾಗಲೇ ಬೇಕು. ಭಾರತದ ರಾಜ್ಯ ಘಟನೆಯು ೧೪ ವರ್ಷ ವಯಸ್ಸಿನೊಳಗಣ ಎಲ್ಲ ಮಕ್ಕಳಿಗೂ ಧರ್ಮಾರ್ಥ ಕಡ್ಡಾಯ ಶಿಕ್ಷಣವನ್ನು ಹತ್ತು ವರ್ಷಗಳೊಳಗಾಗಿ ನೀಡಬೇಕೆಂದು ವಿಧಿಸಿರುತ್ತದೆ. ಆದರೆ ಈ ಮಾತು ಹುಸಿಹೋಗುವ ಸಂಭವವೇ ಹೆಚ್ಚಾಗಿ ಕಾಣಿಸುತ್ತದೆ. ಬಹಳ ಕಾಲದಿಂದ ತೋರಿಸುತ್ತಾ ಬಂದ ಉಪೇಕ್ಷೆ ಮತ್ತು ಉದಾಸೀನತೆಯನ್ನು ಒಂದು ಹೇಳಿಕೆಯಿಂದ ಅಥವಾ ಲೇಖನಿಯ ಗೆರೆಯಿಂದ ತೊಡೆದು ಬಿಡಲಾರೆವು. ಅದಕ್ಕೆ ನಿರಂತರವಾದ ದುಡಿಮೆ ಬೇಕು ಸರಿಯಾದ ಮಾರ್ಗದಲ್ಲಿ, ಅಚಲ ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಅಪಾರ ಪ್ರಯತ್ನಗಳು ನಡೆಯಬೇಕು ನಾವು ಶಿಕ್ಷಣದ ವಿಷಯದಲ್ಲಿ ಮುನ್ನಿಡುತ್ತಿರುವ ಹೆಜ್ಜೆ ಕಂಪನದಿಂದ ಕೂಡಿದೆ. ಆತ್ಮ ವಿಶ್ವಾಸದ ಅಭಾವವೇ ಇದರ ಮೂಲದಲ್ಲಿ ಕಾತುಬರುತ್ತದೆ. ಹೀಗಿರುವುದರಿಂದಲೇ ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಿದ ಗುರಿಯನ್ನು ಮುಟ್ಟುವಲ್ಲಿಯೂ ನಾವು ಹಿಂದುಳಿಯುವ ಸಂಭವವಿದೆ. ೬ರಿಂದ ೧೧ ವರ್ಷ ಪ್ರಾಯದ ಮಕ್ಕಳಲ್ಲಿ ಶೇಕಡಾ ೬೦ (ಈ ಪ್ರಾಯದ ಶಾಲೆಗೆ ಹೋಗುವ ಹುಡುಗಿಯರ ಪ್ರಮಾಣವನ್ನು ಶೇಕಡಾ ೨೩ ರಿಂದ ೪೦) ಮಾಡುವುದು; ಮಾಧ್ಯಮಿಕ ಶಾಲೆಗಳಿಗೆ ಶೇಕಡಾ ೧೫ಮಂದಿಯನ್ನು ತರುವುದು; ೧೪ರಿಂದ ೪೦ ವರ್ಷ ವಯಸ್ಸಿನ ಜನರಲ್ಲಿ ಶೇಕಡಾ ೩೦ ಮಂದಿಗೆ ಸಾಮಾಜಿಕ ಶಿಕ್ಷಣವನ್ನು ನೀಡುವುದು ಪಂಚವಾರ್ಷಿಕ ಯೋಜನೆಯ ಮುಖ್ಯೋದ್ದೇಶ. ಆದರೆ ತಜ್ಞರು ಈ ಗುರಿಮುಟ್ಟುವಲ್ಲಿ ನಾವು ಹಿಂದುಳಿಯುವುದೇ ನಿಜವೆಂದು ತರ್ಕಿಸಿರುವರು. ಎರಡು ಸಾವಿರ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ತಿನ್ನುವ ಈ ಯೋಜನೆಯಲ್ಲಿ ಶಿಕ್ಷಣಕ್ಕೋಸ್ಕರ ಶೇಕಡಾ ೭ರಷ್ಟು ಕಡಿಮೆ ವೆಚ್ಚವಾಗುತ್ತದೆ. ಈ ಅಲ್ಪ ಹಣವನ್ನು ಸಹ ಚೆನ್ನಾಗಿ ಉಪಯೋಗಿಸಿಕೊಳ್ಳಲು ಆಗದೆ ಹೋಗುವ ಭಯವಿದೆಯೆಂದರೆ-ನಮ್ಮ ಪ್ರಗತಿಯ ಕುರಿತು ಭಯೋತ್ಪನ್ನವಾಗುವುದು ಸ್ವಾಭಾವಿಕ.

ನಮ್ಮ ಉದ್ದೇಶ

ಹಾಗೆಂದು ಇಷ್ಟು ಮಾತ್ರದಿಂದ ನಾವು ನಿರಾಶರಾಗುವುದು ಅನಗತ್ಯ: ಭಾರತಕ್ಕೆ ಯೋಜನಾಬದ್ಧ ಪ್ರಗತಿಯ ಅನುಭವ ಇದುವರೆಗೆ ಆಗಿಲ್ಲ. ಆದುದರಿಂದಲೇ ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ ನ್ಯೂನಾತಿರೇಕಗಳೂ ಲೋಪದೋಷಗಳೂ ಕಾಣಿಸಿಕೊಂಡವು. ಇವುಗಳಿಂದ ಅನುಭವವನ್ನು ಪಡೆದುಕೊಂಡು ದಕ್ಷತೆಯಿಂದ ಕೆಲಸಮುಂದುವರಿಸಿದರೆ,ಇನ್ನುಮುಂದಿನ ಪಂಚವಾರ್ಷಿಕ ಯೋಜನೆಗಳಲ್ಲಿ ನಾವು ಹೆಚ್ಚು ಫಲವು ಕೈಗೂಡಿ ಬರುವ ನಿರೀಕ್ಷೆ ಇಟ್ಟುಕೊಳ್ಳಬಲ್ಲೆವು. ಶಿಕ್ಷಣಕ್ಕೆ ಹೆಚ್ಚು ಉದಾರವಾದ ಸಹಾಯವನ್ನೂ ಯೋಜನೆಯ ಅಧ್ವರ್ಯುಗಳು ಒದಗಿಸಿಕೊಡಬೇಕು; ಮತ್ತು ರಾಷ್ಟ್ರೀಯ ಶಿಕ್ಷಣದ ನೆಲಗಟ್ಟನ್ನು ಭದ್ರವಾಗಿ ಹಾಕುವುದಕ್ಕೆ ಕಾರ್ಯಕ್ಷಮ ರೀತಿಯಲ್ಲಿ ಅದರ ವಿನಿಯೋಗವಾಗಬೇಕು. ೬ರಿಂದ ೧೪ ವರ್ಷ ಪ್ರಾಯದ ಎಲ್ಲ ಮಕ್ಕಳಿಗೂ ಮೂಲ ಶಿಕ್ಷಣದ ವ್ಯವಸ್ಥೆ, ಶೇಕಡಾ ೨೦ ಮಂದಿಗಾದರೂ ಮಾಧ್ಯಮಿಕ ಶಿಕ್ಷಣ, ಅದನ್ನು ಮುಗಿಸಿದವರಲ್ಲಿ ಶೇಕಡಾ ೧೦ ಮಂದಿಗಾದರೂ ವಿಶ್ವ ವಿದ್ಯಾಲಯದ ವಿದ್ಯಾಭ್ಯಾಸ ದೊರೆಯಬೇಕು. ಭಾರತದ ಸರ್ವಾಂಗ ಸಂಪನ್ನವಾಗುವಂತೆ ವಿಸ್ತೃತ ಆರ್ಥಿಕ ಪ್ರಗತಿ ಕೈಗೂಡುವಂತೆ ಯೋಗ್ಯ ತಾಂತ್ರಿಕ ಶಿಕ್ಷಣದ ವ್ಯವಸ್ಥೆಯೂ ನಡೆಯಬೇಕಾಗುವುದು. ಇದೆಲ್ಲ ಸಾಧ್ಯವಾಗಲು ೨೭ ಲಕ್ಷದ ೫೦ ಸಾವಿರ ಅಧ್ಯಾಪಕರ ಅಗತ್ಯ ಬೀಳುತ್ತದೆ; ಮತ್ತು ಹಣದ ಅನುಕೂಲತೆ ಮತ್ತು ಇತರ ಸೌಕರ್ಯಗಳು ನಿರಂತರವಾಗಿ ದೊರೆಯುತ್ತಾ ಹೋದರೂ ಇಷ್ಟು ಮಂದಿಗೆ ತರಬೇತಿಯಾಗಲು ಇನ್ನೂ ೨೫ ವರ್ಷ ತಗಲಬಹುದು. ಆದರೆ ಇಂಥದೊಂದು ಪ್ರಯತ್ನ ನಡೆದರೆ ಅದು ಮಹಾ ಸಾಹಸವಾಗುವುದಲ್ಲದೆ, ಲೋಕದ ಮುಂದೆ ಹೊಸ ಆದರ್ಶವನ್ನು ಇಟ್ಟು, ಹಿಂದಿನ ದಾಖಲೆಗಳನ್ನೆಲ್ಲ ಮುರಿಯುವುದು ಇಂಥ ಅಭೂತಪೂರ್ವ ಯೋಜನೆಯಲ್ಲಿ ಪ್ರವೃತ್ತರಾಗುವುದಕ್ಕೆ ಮುಂಚೆ ನಮ್ಮ ಶಿಕ್ಷಣದ ಧ್ಯೇಯದ ಕುರಿತು ಸ್ಪಷ್ಟವಾದ ತಿಳುವಳಿಕೆ ಮತ್ತು ಜ್ಞಾನವಿರಲೇ ಬೇಕು. ನಮ್ಮ ಮನಸ್ಸು ಮತ್ತು ಬುದ್ಧಿಗಳ ವಿಕಾಸದೊಡನೆ ದೈಹಿಕ ಚಟುವಟಿಕೆಗಳಿಗೂ ಶಿಕ್ಷಣದಲ್ಲಿ ಪ್ರಾಶಸ್ತ್ಯ ದೊರೆಯಬೇಕೆಂದು ಗಾಂಧೀಜಿ ಅಭಿಪ್ರಾಯ ಪಡುತಿದ್ದರು. ಅವರು ಪ್ರತಿಪಾದಿಸಿದ ಮೂಲ ಶಿಕ್ಷಣದಲ್ಲಿ ಈ ತತ್ವವನ್ನು ಅನುಷ್ಠಾನಕ್ಕೆ ತರುವ ಯಶಸ್ವೀ ಪ್ರಯತ್ನವನ್ನು ಕಾಣುತ್ತೇವೆ. ರಾಷ್ಟ್ರೀಯ ಪುನರುತ್ಥಾನಕ್ಕೆ ಪೋಷಕವಾಗುವಂತೆ ನಮ್ಮ ಶಿಕ್ಷಣದ ಪ್ರಣಾಳಿಯನ್ನು ರೂಪಿಸುವುದು ಸರಕಾರದ ಕರ್ತವ್ಯ. ಈ ವಿಷಯದಲ್ಲಿ ಯಾವ ತಜ್ಞನೂ ಭಿನ್ನಾಭಿಪ್ರಾಯವನ್ನು ಹೊಂದಲಾರ--ಪ್ರತಿಯಾಗಿ ಇತರ ಸಲಹೆ ಸೂಚನೆಗಳೆಲ್ಲವೂ ಇದಕ್ಕೆ ಪೋಷಕವಾಗಿಯೇ ಬರುವ ನಿರೀಕ್ಷೆ ನಮ್ಮದು.

ಉತ್ತಮ ವ್ಯಕ್ತಿತ್ವ

ಉತ್ತರ ಪ್ರದೇಶದ ರಾಜ್ಯಪಾಲರಾದ ಮುನ್ಶೀಯವರು ನಾವು ಯೋಜನೆ ಇಲ್ಲದೆ ಶಿಕ್ಷಣ ಪದ್ಧತಿಯ ವ್ಯವಸ್ಥೆಯನ್ನು ಹದಗೆಡಿಸುವುದಕ್ಕೆ ನೋಡಬಾರದೆಂದು ಒತ್ತಿ ನುಡಿಯುತ್ತಾರೆ. ನಿಶ್ಚಿತವಾದ ಧ್ಯೇಯ ಧೋರಣೆ ಇಲ್ಲದೆ, ದೃಢವಾದ ಧುರೀಣತ್ವವಿಲ್ಲದೆ ಶಿಕ್ಷಣ ಪದ್ಧತಿಯಲ್ಲಿ ಹೊಯ್ದಾಟಕ್ಕೆ ಅಸ್ಪದ ಕೊಡಬಾರದೆಂದು ಅವರ ಅಭಿಪ್ರಾಯ. ‘ನಮಗೀಗ ಬೇಕಾದುದು ಅಧ್ಯಾಪಕ ಹಾಗೂ ಇಡೀ ಜನಾಂಗದ ನೈತಿಕ ಹಾಗೂ ಆಧ್ಯಾತ್ಮಿಕ ಪುನರುತ್ಥಾನ ಅವರಲ್ಲಿ ಒಳ್ಳೆಯದನ್ನು ಕೆಟ್ಟದರಿಂದ ಪ್ರತ್ಯೇಕಿಸುವ ಸೂಕ್ಷ್ಮ ಬುದ್ಧಿಯನ್ನು ಹುಟ್ಟಿಸಿ, ಒಳ್ಳೆಯದನ್ನು ಮೆಚ್ಚಿ ಪುರಸ್ಕರಿಸುವ ಭಾವನೆಯನ್ನು ಬೆಳೆಯಗೊಡಬೇಕು. ದೇವರಿಲ್ಲದ ಉದಾತ್ತವಾದ ವ್ಯಕ್ತಿತ್ವವನ್ನು ನಿರ್ಮಾಣ ಮಾಡದ, ಶಿಕ್ಷಣದಿಂದ ಯಾವ ರಾಷ್ಟ್ರವೂ ಶ್ರೇಯಸ್ಸು ಪಡೆಯದು.” ಇದನ್ನು ಸುಧಾರಿಸುವ ಕೆಲಸ ಯಾರದು- ಅಧ್ಯಾಪಕರೇ ಇದಕ್ಕೆ ಹೊಣೆಗಾರರೆಂದು ಹೇಳಬಹುದು: ಆದರೆ, ಅವರ ಸ್ಥಾನ ಮಾನಗಳನ್ನು ಕೆಳಗಿಳಿಸಿದವರು ನಾನೇ. ಈಚಿನ ವರ್ಷಗಳಲ್ಲಿ ಆರ್ಥಿಕ ದೃಷ್ಟಿಯಿಂದ ಅವರ ಜೀವನ ನಿಕೃಷ್ಟಾವಸ್ಥೆಯನ್ನು ಮುಟ್ಟಿರುತ್ತನೆ. ಇದರಿಂದ ನಿರ್ವಿಣ್ಣರಾದ ಅಧ್ಯಾಪಕ ವೃಂದ ತನ್ನ ಉಜ್ವಲ ಪರಂಪರೆಯ

(೯ನೇ ಪುಟ ನೋಡಿರಿ.)

ಪ್ರಕಟಣೆ

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಭಂಡಾರದ ದಶಾವತಾರ ಮೇಳವನ್ನು ಇದೇ 1953–54ನೇ ಇಸವಿಯಲ್ಲಿ ನಡೆಸತಕ್ಕ ಹಕ್ಕನ್ನು ಭಂಡಾರದ ಕಡೆಯಿಂದ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಇದೇ ತಾ 15—11—53ನೇ ದಿನ ಅಪರಾಹ್ನ ಗಂಟೆ ೩ಕ್ಕೆ ಎಕ್ಸಿಕ್ಯೂಟಿವ್ ಆಫೀಸರರಿಂದ ಏಲಂ ಕರೆಯಲಾಗುವದು. ಖಾಯುಷ್ಯವರು ಸದ್ರಿ ತಾರೀಕಿಗೆ ಹಾಜರಾಗಿ ಏಲಂನಲ್ಲಿ ಪಡಕೊಳ್ಳಬಹುದು. ಏಲಂ ಶರ್ತವನ್ನು ಏಲಂ ಮುಂಚೆ ಆಫೀಸಿಗೆ ಹಾಜರಾಗಿ ತಿಳಿದುಕೊಳ್ಳತಕ್ಕದ್ದು.

sd. **N. R. Bolar**
Executive officer
ಮಂದಾರ್ತಿ ದೇವಸ್ಥಾನ ತಾ 28-10-53

ಸೇವಿಂಗ್ಸ್ ಬೇಂಕ್ ಲೆಖ್ಖ ತೆರೆಯುವ ಉಪಯುಕ್ತತೆ

ಬೇಂಕಿನಲ್ಲಿ ಸೇವಿಂಗ್ಸ್ ಲೆಖ್ಖ ತೆರೆಯಲ್ಪಟ್ಟಲ್ಲಿ ನಿಮ್ಮಲ್ಲಿಯ ಬ್ಯಾಂಕಿಂಗ್ ವ್ಯವಹಾರದ ಅಭ್ಯಾಸಕ್ಕೆ ಆಸ್ಪದವೀಯುವುದಲ್ಲದೆ, ಅನಾಯಾಸವಾಗಿ ನಿಮ್ಮ ತಿಳುವಳಿಕೆಗೆ ಬಾರದೇನೇ ಖರ್ಚಾಗಿಹೋಗುವ ಚಿಕ್ಕ ಹಣಗಳನ್ನೇ ಕೂಡಿಸಲ್ಪಡುವವು. ನಿಮ್ಮ ಬೇಂಕಿನಲ್ಲಿ ಸೇವಿಂಗ್ಸ್ ಖಾತೆಯೊಂದನ್ನು ಪ್ರಾರಂಭಿಸಿ ಕ್ರಮವಾಗಿ ಹಣವನ್ನು ಪಾವತಿ ಮಾಡುತ್ತ ಒಂದಲ್ಲಿ ಒಂದು ದೊಡ್ಡ ಮೊತ್ತವಾಗಿ ನೀವು ಹೆಚ್ಚಾಗಿ ಅಪೇಕ್ಷಿಸುವ, ನಿಮ್ಮ ಕುಟುಂಬಕ್ಕೆ ಬೇಕಾದ ಮನೆಮಾರುಗಳನ್ನು ಕೊಂಡುಕೊಳ್ಳಲಿಕ್ಕಾಗಲಿ, ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಲಿ, ಇಲ್ಲವೆ ಇನ್ನಾವದಾದರೂ ಸದುಪಯೋಗ ಕಾರ್ಯಗಳಿಗಾಗಲಿ ಒದಗುವದು.

ಇಂದೇ ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯಿರಿ.

THE CANARA INDUSTRIAL & BANKING SYNDICATE LTD.,
Estd: 1925 H. O: UDIPI, S. India.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ನಂಬಿಕೆಗೆ ಅರ್ಹತೆ
ಅತ್ಯುತ್ತಮ ಬೀಡಿಗಳಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ
ಎಸ್.ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ ಹೇಳುತ್ತೇವೆ
ಎಲ್ಲಾ ಕಡೆಗಳಲ್ಲಿಯೂ ದೊರಕುತ್ತವೆ
S.R. Beedi Works

Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

ಜನತೆಯ ನಿಕಟ ಸಂಪರ್ಕವೇ ಯೋಜನೆಗಳ ಗುರಿ

ದ್ವಿಮುಖ ಜವಾಬ್ದಾರಿ ಹೊತ್ತ ಕಾಂಗ್ರೆಸ್ಸಿಗರ ಕರ್ತವ್ಯ

ವರ್ಗೀಕರಣ

ಮದ್ರಾಸು ಸರಕಾರವು ರಾಜ್ಯದ ೧೪ ಜಿಲ್ಲೆಗಳನ್ನು ಮೂರು ವಿಭಾಗಗಳಾಗಿ ವಿಂಗಡಿಸಿ, ಅವುಗಳಲ್ಲಿ ಒಬ್ಬೊಬ್ಬ ಕಮಿಶನರನ್ನು ನೇಮಿಸಲು ನಿರ್ಧರಿಸಿದೆ. ಇನ್ನು ಕೆಲವೇ ದಿನಗಳಲ್ಲಿ ಈ ವ್ಯವಸ್ಥೆ ಜ್ಯಾರಿಗೆ ಬರಲಿದೆ. ಈಗ ಕಂದಾಯ ಮಂಡಳವು ನಿರ್ವಹಿಸುವ ಹೊಣೆಗಾರಿಕೆಯನ್ನು ಈ ಕಮಿಶನರುಗಳು ಹೊರಬೇಕಾಗುವುದು; ಮತ್ತು ಸದ್ಯಕ್ಕೆ ಕಂದಾಯ ಮಂಡಳದ ಸದಸ್ಯರ ಸಂಖ್ಯೆಯನ್ನು ೩ ರಿಂದ ೨ಕ್ಕೆ ಇಳಿಸಲಾಗಿದ್ದರೂ ಇನ್ನೊಂದೆರಡು ವರ್ಷಗಳಲ್ಲಿ ಈ ಮಂಡಳವೇ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದು. ಸರಕಾರದ ಈ ಹೊಸ ಧೋರಣೆಯನ್ನು ವಿವರಿಸುತ್ತಾ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ರಾಮುಣ್ಣಿ ಮೆನೊನ್ನರು ಈ ಕಮಿಶನರುಗಳು ತಮ್ಮ ವಿಭಾಗದೊಳಗೆ ಕೆಲಸಮಾಡುವ ಜಿಲ್ಲಾ ಕಲೆಕ್ಟರರ ವ್ಯವಹಾರದ ಬಗ್ಗೆ ಬಹಳ ಹತ್ತಿರದಿಂದ ನಿಗಾ ತೆಗೆದುಕೊಳ್ಳುವರೆಂದೂ ಜಿಲ್ಲೆಗಳಲ್ಲಿ ನಡೆಯುವ ಅಭಿವೃದ್ಧಿ ಪ್ರಯತ್ನಗಳಲ್ಲಿ ದಕ್ಷತೆ ಮತ್ತು ಕಾರ್ಯಕ್ಷಮತೆ ಹೆಚ್ಚುವಂತೆ ನೋಡಿಕೊಳ್ಳುವರೆಂದೂ ಹೇಳಿದರು. ಈಗ ಈ ಜಿಲ್ಲಾಧಿಕಾರಿಗಳು ಮದ್ರಾಸಿನಲ್ಲಿರುವ ಕಂದಾಯ ಮಂಡಳದ ಅಧೀನದಲ್ಲಿರುವರು. ಈ ಮಂಡಳಕ್ಕೆ ರಾಜ್ಯದೊಳಗಿನ ಜಿಲ್ಲೆಗಳ ಕಲೆಕ್ಟರರ ಮೇಲೆ ಕಣ್ಣಿಡಲು ಸ್ವಲ್ಪ ಕಷ್ಟವೆನಿಸಿರುತ್ತದೆ. ಪಂಚವಾರ್ಷಿಕ ಯೋಜನೆಯಂಥ ರಾಷ್ಟ್ರ ಪುನರುದ್ಧಾರದ ಕೆಲಸಗಳು ಭರದಿಂದ ನಡೆಯಬೇಕಾದ ಈ ದಿನದಲ್ಲಿ ಜಿಲ್ಲಾಧಿಕಾರಿಗಳ ನಡವಳಿಕೆಯನ್ನು ಮೇಲಿಂದ ಮೇಲೆ ವಿಚಾರಿಸಿಕೊಂಡು ಅವರಿಗೆ ಯೋಗ್ಯ ಮಾರ್ಗದರ್ಶನವನ್ನೂ ಅನುಭವ ಹಾಗೂ ಸಲಹೆಯನ್ನೂ ಕೊಡಲು ಉನ್ನತಾಧಿಕಾರಿಗಳಿರುವುದು ಅಗತ್ಯವಾಗಿರುತ್ತದೆ. ಈಗಿನ ಜಿಲ್ಲಾಧಿಕಾರಿಗಳಲ್ಲಿ ಅನನುಭವಿಕರಾದ ತರುಣರೇ ಹೆಚ್ಚಾಗಿರುವರು – ದಕ್ಷರಾದ ಐ. ಸಿ. ಎಸ್. ಪದವೀಧರ ಕಮಿಶನರುಗಳ ನೇತೃತ್ವದಲ್ಲಿ ಈ ಜಿಲ್ಲಾಧಿಕಾರಿಗಳು ಕಾರ್ಯ ನಿರ್ವಹಿಸುವುದರಿಂದ, ಜಿಲ್ಲೆಗಳ ಪರಿಸ್ಥಿತಿ ಬಹಳ ಮಟ್ಟಿಗೆ ಊರ್ಜಿತ ಹೊಂದುವ ನಿರೀಕ್ಷೆ ಇಟ್ಟುಕೊಳ್ಳಬಲ್ಲೆವು. ಈ ಕಮಿಶನರುಗಳ ಮುಖ್ಯ ಕಾರ್ಯಾಲಯವು (೧) ಮದ್ರಾಸು ನಗರ; (೨) ತಿರುಚಿರಪಳ್ಳಿ, ಮಧುರೆ ಅಥವಾ ಮದುಕೋಟೆ; ಮತ್ತು (೩) ಕೊಯಮುತ್ತೂರು ಅಥವಾ ಉದಕಮಂಡಲ. ಈ ಕಮಿಶನರುಗಳ ಅಧೀನವಿರುವ ಜಿಲ್ಲೆಗಳು ಕ್ರಮವಾಗಿ (೧) ಮದ್ರಾಸು, ಚೆಂಗಲ್ಪೇಟೆ, ಉತ್ತರ ಮತ್ತು ದಕ್ಷಿಣ ಆರ್ಕಾಟು. ಸೇಲಂ ಮತ್ತು ತಂಜಾವೂರು; (೨) ತಿರುಚಿರಪಳ್ಳಿ, ಮಧುರೆ, ರಾಮನಾಡು ಮತ್ತು ತಿರುನೆಲ್ವೆಲ್ಲಿ; ಮತ್ತು (೩) ಕೊಯಮುತ್ತೂರು, ನೀಲಗಿರಿ, ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆ.

ಕಾರ್ಯಕ್ಷಮತೆಯೇ ಉದ್ದೇಶ

ಯೋಜನಾ ಆಯೋಗವು ಇಡೀ ರಾಜ್ಯವನ್ನು ಅಭಿವೃದ್ಧಿ ಪ್ರಯತ್ನದ ಒಂದು ಘಟಕವಾಗಿ ತೆಗೆದುಕೊಳ್ಳುವುದಕ್ಕಿಂತಲೂ ಅದನ್ನು ಪ್ರಮಾಣಬದ್ಧವಾಗಿ ವಿಂಗಡಿಸಿ, ಸ್ಥಳೀಯ ಅಭಿವೃದ್ಧಿಯನ್ನು ಯೋಜಿಸುವುದು ಹೆಚ್ಚು ಪರಿಣಾಮಕಾರಿಯೆಂದು ಸಲಹೆಮಾಡಿದ್ದಿತು. ಮದ್ರಾಸು ಸರಕಾರ ರಾಜ್ಯವನ್ನು ಈ ರೀತಿ ಮೂರು ವಿಭಾಗ ಮಾಡಿರುವುದು ಈ ಸಿಫಾರಸಿಗೆ ತಕ್ಕಂತಿದೆ. ತಂತಮ್ಮ ವಿಭಾಗಗಳ ಮಟ್ಟಿಗೆ ಅಲ್ಲಿಯ ಕಮಿಶನರುಗಳು ಪೂರ್ಣ ಹೊಣೆಗಾರರಿದ್ದರೂ ರಾಜ್ಯದ ಸಮಷ್ಟಿ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಮೂವರೂ ಆಗಾಗ್ಗೆ ಒಟ್ಟಿಗೆ ಸಭೆಸೇರಿ, ಎಲ್ಲರಿಗೂ ಸಾಮಾನ್ಯವಾದ ಮಹತ್ವದ ವಿಷಯಗಳನ್ನು ಚರ್ಚಿಸಬಹುದು; ಅಥವಾ ಕಂದಾಯ ಮಂಡಳದ ಇಬ್ಬರು ಸದಸ್ಯರೊಡನೆ ಮಾತುಕತೆ ನಡೆಸಬಹುದು. ಆದರೆ ಅವರೆಲ್ಲರೂ ಸರಕಾರದೊಡನೆ ನೇರವಾದ ಸಂಪರ್ಕವನ್ನು ಯಾವಾಗಲೂ ಪಡೆದಿರುವರು. ಆಂಧ್ರ ರಾಜ್ಯ ಪ್ರತ್ಯೇಕವಾದ ಬಳಿಕ ರಾಜಾಜಿಯವರು ಸರಕಾರದ ವೆಚ್ಚವನ್ನು ಕಡಿಮೆಮಾಡಲು ಉದ್ದೇಶಿಸಿ ಕೆಲವು ಕ್ರಮಗಳನ್ನು ಕೈಗೊಂಡಿರುವರು. ಉದಾಹರಣೆಗಾಗಿ ತಾತ್ಕಾಲಿಕ ಕೆಲಸದಲ್ಲಿದ್ದ ಸೆಕ್ರೆಟೇರಿಯಟ್ ನೌಕರರನ್ನು ಮನೆಗೆ ಕಳಿಸಲು ಅವರು ಯೋಚಿಸಿರುವರು ಅದರಂತೆ ಮೊದಲಿದ್ದ ೧೫ ಸರಕಾರೀ ಶಾಖೆಗಳಲ್ಲಿ ಪರಸ್ಪರ ಪೂರಕವಾದವುಗಳನ್ನು ಕ್ರೋಢೀಕರಿಸಿ ಅವುಗಳ ಸಂಖ್ಯೆಯನ್ನು ೯ಕ್ಕೆ ಇಳಿಸಿರುವರು. ಇದರಂತೆ ಕಮಿಶನರುಗಳ ನೇಮಕವೂ ಒಂದು ಮಿತವ್ಯಯದ ಹೆಜ್ಜೆ ಇರಬಹುದೆಂದು ಭಾಸವಾದರೂ, ಸದ್ಯಕ್ಕೆ ಈ ಭಾವನೆ ಸರಿಯೆಂದು ಕಾಣುವುದಿಲ್ಲ. ಆಡಳಿತದಲ್ಲಿ ಬಿಗಿಯನ್ನೂ ದಕ್ಷತೆಯನ್ನೂ ಕಾರ್ಯಕ್ಷಮತೆಯನ್ನೂ ಹೆಚ್ಚಿಸಿಕೊಳ್ಳುವುದೇ ರಾಜಾಜಿ ಸರಕಾರದ ಈ ನಿರ್ಧಾರಕ್ಕೆ ಹೇತು. ರಾಜಾಜಿಯವರು ಒಂದೂವರೆ ವರ್ಷಕ್ಕೆ ಮೊದಲು ಜನತೆಯ ಅಂತಃಕರಣವನ್ನು ಮುಟ್ಟುವ ಸಮರ್ಥ ಆಡಳಿತವನ್ನೆ ಸರಕಾರದಿಂದ ಪ್ರಜೆಗಳು ಅಪೇಕ್ಷಿಸುವರೆಂದು ಕಾಂಗ್ರೆಸಿಗರನ್ನು ಉದ್ದೇಶಿಸಿ ಭಾಷಣ ಮಾಡಿದ್ದರು. ಅವರು ಅಂದು ತಮ್ಮ ಮುಂದಿಟ್ಟುಕೊಂಡಿದ್ದ ಧ್ಯೇಯ ಹಾಗೂ ಧೋರಣೆಗಳಲ್ಲಿ ಒಂದೊಂದನ್ನೆ ಕ್ರಮವಾಗಿ ಜ್ಯಾರಿಗೆ ತರುತ್ತಿರುವುದು ಸ್ತುತ್ಯ.

ಜನತಾ ಸಂಪರ್ಕ

ಕಾಂಗ್ರೆಸು ಸಂಸ್ಥೆಯು ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲಿ ಜನತಾ ಪ್ರತಿನಿಧಿಗಳಾಗಿರುವ ಎಲ್ಲರೂ ತಂತಮ್ಮ ಮತದಾರ ಕ್ಷೇತ್ರದೊಡನೆ ನಿಕಟ ಸಂಬಂಧವನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತಾ ಬಂದಿದೆ. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಸಹ ವರ್ಷಕ್ಕೊಮ್ಮೆ ಬಿಹಾರದ ತಮ್ಮ ಹಳ್ಳಿಗೆ ಸಂದರ್ಶನ ಕೊಡುವ ಅಭ್ಯಾಸವನ್ನಿಟ್ಟುಕೊಂಡಿರುವರು. ಆದರೆ ಎಷ್ಟೋಮಂದಿ ಪ್ರತಿನಿಧಿಗಳು ತಮ್ಮ ಮತದಾರ ಕ್ಷೇತ್ರದ ಸಂಪರ್ಕವನ್ನು ಊರ್ಜಿತಾವಸ್ಥೆಯಲ್ಲಿಡಲು ಪ್ರಯತ್ನಿಸುತ್ತಿಲ್ಲ. ಬಹುಶಃ ಇನ್ನೊಂದು ಚುನಾವಣೆಯ ಬಿಸಿ ತಗಲದೆ, ಈ ಮಹಾಶಯರು ತಮ್ಮ ಮತದಾರ ಕ್ಷೇತ್ರಕ್ಕೆ ಕಾಲಿಡುವುದಿಲ್ಲವೆಂದು ತೋರುತ್ತದೆ. ಈ ಪ್ರವೃತ್ತಿಯು ನಿಜಕ್ಕೂ ಖಂಡನೀಯವಾದದ್ದು ಮತ್ತು ಕೆಟ್ಟ ಪರಂಪರೆಯೂ ಹೌದು. ಪ್ರಧಾನಿ ನೆಹರೂರವರು ಇಂಥ ಕರ್ತವ್ಯ ಪರಾಙ್ಮುಖ ಪ್ರತಿನಿಧಿಗಳ ಕಣ್ಣು ತೆರೆಯುವಂತೆ ಮೊನ್ನೆ ಮೊನ್ನೆ ನಡೆದುಕೊಂಡಿರುವರು. ಕೇಂದ್ರ ಪಾರ್ಲಿಮೆಂಟಿಗೆ ತಮ್ಮನ್ನು ಆರಿಸಿದ ಮತದಾರ ಕ್ಷೇತ್ರಕ್ಕೆ ಅವರು ಎರಡು ಮೂರು ದಿನಗಳ ಭೇಟಿ ಕೊಟ್ಟು, ಜನತೆಗೆ ಸರಕಾರದ ಚಟುವಟಿಕೆಗಳನ್ನು ತಿಳಿಸಿ ಹೇಳಿದರು; ಮತ್ತು ಆ ಪ್ರದೇಶದ ಜನರ ಕಷ್ಟ ಸುಖಗಳನ್ನೂ ಕೇಳಿ ತಿಳಿದುಕೊಂಡರು. ಕುಂಭ ಮೇಳದ ಕುರಿತು ಅಲಹಾಬಾದಿನಲ್ಲಿ ನಡೆಯುವ ವ್ಯವಸ್ಥೆ, ಕೋಸಿ ನದಿಗೆ ಬಂದ ಮಹಾಪೂರದ ಹಾವಳಿ ತಡೆಯುವ ಉಪಾಯ ಮುಂತಾದವುಗಳ ಕುರಿತು ಅವರು ವಿಚಾರವಿನಿಮಯ ಮಾಡಿದರು. ಭಾರತವು ಸ್ವಾತಂತ್ರ್ಯೋತ್ತರದ ಆರು ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದೆಯೆಂದೂ ಇನ್ನು ಹತ್ತು ಹದಿನೈದು ವರ್ಷಗಳಲ್ಲಿ ಅದು ಬಲಾಢ್ಯ ರಾಷ್ಟ್ರವಾಗುವುದು ನಿಶ್ಚಯವೆಂದೂ ಪ್ರಧಾನಿಗಳು ವಿಶ್ವಾಸ ವ್ಯಕ್ತಪಡಿಸಿದರು. ಜನರು ಕೂಡ ತಮ್ಮ ಹೊಣೆಗಾರಿಕೆಯ ಪೂರ್ಣ ಕಲ್ಪನೆಯನ್ನಿಟ್ಟುಕೊಂಡು ಎಲ್ಲ ಜಗಳಗಳನ್ನು ಮರೆತು ಸ್ವಾತಂತ್ರ್ಯ ರಕ್ಷಣೆ ಹಾಗೂ ಆರ್ಥಿಕ ಪುನಾರಚನೆಯ ಕಾರ್ಯಕ್ರಮಗಳಲ್ಲಿ ಸಹಕಾರ ನೀಡಬೇಕು ಎಂದವರು ವಿನಂತಿಸಿದರು. ಸ್ವಾತಂತ್ರ್ಯದ ಹೋರಾಟವು ವರ್ಷಕಾಲವಾಗಿದ್ದರೂ ಇಂದು ಆಗಿನ ಉದ್ವೇಗ ಮತ್ತು ಆವೇಶಗಳಿಗೆ ಎಡೆ ಇರುವುದಿಲ್ಲ. ಕ್ರಮಬದ್ಧವಾದ, ಯೋಜನೆಗೆ ಸರಿಯಾದ, ದೃಢವಾದ ಆರ್ಥಿಕ ಅಭಿವೃದ್ಧಿಯ ಪ್ರಯತ್ನಗಳೇ ಇಂದಿನ ಆವಶ್ಯಕತೆ. ಈಗ ಬಾಯಿಂದ ಘೋಷಣೆಗಳನ್ನು ಹೊರಡಿಸಿದರೆ ಕೆಲಸವಾಗುವುದಿಲ್ಲ; ಮೈ ಮುರಿಯುವಂತೆ ಬೆವರಿಳಿಸಿ ದುಡಿಯಬೇಕಾಗಿರುತ್ತದೆ. ಇದಕ್ಕೆ ತಕ್ಕ ಮನೋಭೂಮಿಕೆಯನ್ನು ಉಂಟುಮಾಡುವುದೇ ಸ್ಥಳೀಯ ಅಭಿವೃದ್ಧಿ ಪ್ರಯತ್ನಗಳ ಉದ್ದೇಶ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಧ್ಯೇಯ ಸಹ ಜನತೆಯೊಡನೆ ನಿಕಟ ಸಂಪರ್ಕ ಸಾಧಿಸುವುದೇ ಆಗಿದೆ ಎಂದು ನೆಹರೂರ ಅಭಿಪ್ರಾಯ.

ದ್ವಿಮುಖ ಜವಾಬ್ದಾರಿ

ಎಲ್ಲ ಅಭಿವೃದ್ಧಿ ಪ್ರಯತ್ನಗಳಲ್ಲಿಯೂ ಭಾರತದ ಸಾಮಾನ್ಯ ನಾಗರಿಕರಿಗೆ ಆಸ್ಥೆ ಹುಟ್ಟುವಂತೆ, ಮತ್ತು "ತನ್ನತನ" ಬೆಳೆದುಬರುವಂತೆ ಮಾಡುವುದಕ್ಕಾಗಿಯೇ ಚಿಕ್ಕ ಉಳಿತಾಯದ ಚಳುವಳಿ, ರಾಜ್ಯ ಸರ

ಉಡುಪಿ. ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 460/47 ಕ್ರಮ ಅಮಲ್‌ಜ್ಯಾರಿ 453/53

ಲಕ್ಷ್ಮೀನಾರಾಯಣ ಆಚಾರ್—ಅರ್ಜಿದಾರ

ಮತ್ತು

ಪಟಿಬಾಬೀಬಿ ಕೂಡಾ ೪ ಜನರು—ಎದುರಿಗರು

2ನೇ ಎದುರಿ ರಜ್ಜಾಬಿ ಅಬ್ದುಲ್ ಗಫರ್ ಸಾಹೇಬರ ಮಗಳು. 3ನೇ ಎದುರಿ ರಹಿಮತ್ತುಲ್ಲಾ-ಅಬ್ದುಲ್ ಗಫರ್ ಸಾಹೇಬರ ಮಗನು

ಮಗ-ಗಾರ್ಡಿಯನ್ ಇವರ ತಾಯಿ ಪಟಿಬಾಬೀಬಿ. ಉಡುಪಿ ತಾಲ್ಲೂಕು ಸಂಬ್ರ 76ನೇ ಬಡಗಬೆಟ್ಟು ಗ್ರಾಮದಲ್ಲಿರುವವರು ಈ ಮೂಲಕ ತಿಳಿಯಪಡಿಸುವದೇನೆಂದ್ರೆ:—

ಅರ್ಜಿದಾರರ ಗುಣಕ್ಕೆ ಈ ಕೋರ್ಟಿನವರಿಂದ ಕೊಡೋಣಾದ ಮೇಲ್ಕಂಡ ದಾವೆಯ ಡಿಕ್ರಿಯ ಮೇಲೆ, ನಡ್ಸಿದ ಮೇಲ್ಕಾಣ್ಸಿದ ಅಮಲ್‌ಜ್ಯಾರಿಯಲ್ಲಿ, ಸದ್ರಿ 2ನೇ ಮತ್ತು 3ನೇ ಎದುರಿಗರ ಹೆಸರಿನಲ್ಲಿ ಉಡುಪಿಯಲ್ಲಿರುವ 'The Canara Industrial and Banking Syndicate Ltd' ನಲ್ಲಿ ಡಿಪೋಜಿಟಿನಲ್ಲಿರುವ ಐವೇಜುಗಳನ್ನು ಜಪ್ತಿ ಮಾಡಿ, ಸದ್ರಿ ಡಿಕ್ರಿ ಪ್ರಕಾರ ಅರ್ಜಿದಾರರಿಗೆ ಬರತಕ್ಕ ಐವೇಜಿನ ಸಂದಾಯಾರ್ಥವಾಗಿ ಕೊಡಿಸುವಂತೆ ಕೇಳಿ ವಾಕ್ಯಮಾಡಿದ ಮೇಲ್ಕಂಡ ಅಮಲ್‌ಜ್ಯಾರಿಯು ತಾ 11-11-53 ಕ್ಕೆ ಇಟ್ಟಿರುತ್ತದೆ. ಅದ್ದರಿಂದ ಆ ಕುರಿತು ನಿಮ್ಮ ಆಕ್ಷೇಪಗಳು ಇದ್ದರೆ ಸದ್ರಿ ತಾರೀಕು ಹಗಲು ಘಂಟೆ 10-30ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹಿರು ಮಾಡಬೇಕಾಗಿಯೂ, ತಪ್ಪಿದ್ರೆ ನಿಮ್ಮನ್ನು ಗೈರ್ ಹಾಜರ್ ಮಾಡಿ ಸದ್ರಿ ಅಮಲ್‌ಜ್ಯಾರಿಯನ್ನು ಮುಂದರಿಸಲಾದೀತು ಎಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

(By order of court)

K. Vittal Nayak

Vakil for Petr.

ಉಡುಪಿ ತಾ 23-10-53



ಮಿತ ದರದಲ್ಲಿ
ಚಲೋ ಗಡಿಯಾರಗಳೂ
ಟಾಯಂಪೀಸುಗಳೂ
ದೊರೆಯುತ್ತವೆ.
ವಿವರಗಳಿಗೆ ಬರೆಯಿರಿ:
MUBARAK & CO.
Watch & Clock Specialists,
MADRAS 3.
ಮುಬಾರಕ್ & ಕೊ.
ವಾಚ್ ಎಂಡ್ ಕ್ಲಾಕ್ ಸ್ಪೆಶೆಲಿಸ್ಟ್ಸ್
ಮದ್ರಾಸು 3

ಬೇಕಾಗಿದ್ದಾರೆ

ಹೊಸ ನಮೂನೆಯ ಫೌಂಟನ್ ಪೆನ್ನುಗಳನ್ನು ಆಕರ್ಷಕ ದರಗಳಿಂದ ಮಾರಾಟ ಮಾಡಲು ಏಜಂಟರು ಬೇಕಾಗಿದ್ದಾರೆ. ಸ್ಯಾಂಪಲು ಮತ್ತು ಮಾಹಿತಿಪತ್ರಕ್ಕೆ ಬರೆಯಿರಿ:

Standard Pen House (N.U.)
Bhandari Street, BOMBAY 3.

ಎರಡನೇ ಪಂಚವಾರ್ಷಿಕ ಯೋಜನೆಯ ವಿಚಾರ

ನ್ಯೂನಾತಿರೇಕವಿಲ್ಲದಂತೆ ನೋಡಿಕೊಳ್ಳುವ ಸಿದ್ಧತೆ

ಕಾರಗಳ ಸಾಲ ಮುಂತಾಗುವಕ್ಕೆ ಪ್ರಾಶಸ್ತ್ಯ ನೀಡಲಾಗಿದೆಯಲ್ಲದೆ, ಸರಕಾರಕ್ಕೆ ಹಣದ ಅಡಚಣೆ ಇರುವುದೊಂದೇ ಇದರ ಹಿನ್ನೆಲೆಯಲ್ಲವೆಂದೂ ನೆಹರೂ ವಿವರಿಸಿದರು. ಹಣವೊಂದೇ ದೇಶದ ಪ್ರಗತಿಗೆ ಸಹಾಯಕವಾಗದು. ಜನತೆಯ ಹೃದಯದಲ್ಲಿ ಮಾರ್ದವತೆ ವಾತ್ಸಲ್ಯ ಹಾಗೂ ರಾಷ್ಟ್ರೀಯ ದೃಷ್ಟಿ ಮೊಳೆಯಬೇಕು ವರ್ಷಕ್ಕೆ ೬೦೦೦೦ ಮಂದಿ ರಾಷ್ಟ್ರೀಯ ವಿಸ್ತರಣಾ ಯೋಜನೆಯಂತೆ ತರಬೇತಿಹೊಂದಿ ಹಳ್ಳಿಯ ಮೂಲೆ ಮೂಲೆಗೂ ಭಾರತದ ಪುನಾರಚನೆಯ ಸಂದೇಶ ಬೀರುತ್ತಾ ಹೋದಂತೆ, ಸರ್ವಾಂಗಿಕ ಏಳಿಗೆಯ ಕನಸೂ ನನಸಾಗುವುದೆಂದು ನೆಹರೂ ಭರವಸೆ ನೀಡಿದರು ಕಾಂಗ್ರೆಸ ಸಭೆಯೊಂದರಲ್ಲಿ ನೆಹರೂರವರು ಮಾತನಾಡುತ್ತಾ ವಿಶಾಲವಾದ ತಳಹದಿಯ ಮೇಲೆ ರಚಿಸಲ್ಪಟ್ಟ ಸಂಸ್ಥೆಯೆಂದೂ ಚುನಾವಣೆ ಹಾಗೂ ದೇಶದ ಸಂಗತಿಯಲ್ಲಿ ಒಂದು ಪ್ರಬಲ ಪಕ್ಷವೆಂದೂ ಕಾಂಗ್ರೆಸು ಇಂದು ದ್ವಿಮುಖ ಕಾರ್ಯದಲ್ಲಿ ಪ್ರವೃತ್ತವಾಗಿರುತ್ತದೆಂದು ನೆಹರೂ ಹೇಳಿದರು ಮಹಾತ್ಮಾಗಾಂಧೀಯವರ ನೇತೃತ್ವದಲ್ಲಿ ಕಾಂಗ್ರೆಸ್ಸು ರಾಷ್ಟ್ರಕ್ಕೆ ಅತ್ಯಮೂಲ್ಯವಾದ ಸೇವೆ ಸಲ್ಲಿಸಿತು ಈಗಲೂ ಆ ಉದಾತ್ತ ಪರಂಪರೆಗೆ ಅನುಗುಣವಾಗಿ ಕಾಂಗ್ರೆಸ ಕಾರ್ಯಕರ್ತರು ವರ್ತಿಸಬೇಕು ಹೊಣೆಗೆಟ್ಟ ರೀತಿಯಲ್ಲಿ ಮಾತನಾಡುವುದೂ ಜನತೆಯ ಸಂಪರ್ಕ ಪಡೆದುಕೊಳ್ಳುವ ಕೆಲಸದಲ್ಲಿ ವಿಮುಖರಾಗುವುದೂ ಕಾಂಗ್ರೆಸ ಕಾರ್ಯಕರ್ತರಿಗೆ ಹೇಳಿಸಿದುದಲ್ಲ ರಚನಾತ್ಮಕ ಪ್ರಗತಿಯಲ್ಲಿ ಹೇಗೋ ಪಾರ್ಲಿಮೆಂಟರಿ ಪದ್ಧತಿಯಲ್ಲೂ ಶಿಸ್ತಿಗೆ ಮಹತ್ವವಿದೆ. ಶಿಸ್ತು ಭಂಗದ ಚಟುವಟಿಕೆಗಳನ್ನು ಕಾಂಗ್ರೆಸು ಸಂಸ್ಥೆ ಸಹಿಸುವುದು ಶಕ್ಯವಿಲ್ಲ ಎಂದು ನೆಹರೂ ಎಚ್ಚರಿಸಿದರು ಸಾರ್ವಜನಿಕರು ಸರಕಾರದ ವರಿಷ್ಠ ಸ್ಥಾನದಲ್ಲಿರುವ ನೆಹರೂರ ಮಾತು ಮತ್ತು ಧೋರಣೆಗಳಲ್ಲಿ ಪ್ರಾಮಾಣಿಕ ವಿಶ್ವಾಸವನ್ನಿಟ್ಟುಕೊಂಡು ಎಲ್ಲ ರೀತಿಯ ಸಹಕಾರವನ್ನೂ ನೀಡುತ್ತಾ ಬರಬೇಕು

ಹೈದರಾಬಾದಿನಲ್ಲಿ

ಉದಾಹರಣೆಗೆ ಈಗ ತಾನೆ ಹೈದರಾಬಾದು ಸರಕಾರವು ಎತ್ತುವ ೩೦೦ ಲಕ್ಷ ರೂಪಾಯಿಗಳ ಸಾಲಕ್ಕೆ ಜನರು ಉದಾರವಾದ ದೇಣಿಗೆ ಕೊಡಬಹುದು ಕಳೆದ ಜೂಲೈ ತಿಂಗಳಲ್ಲಿ ಮದ್ರಾಸು ಸರಕಾರ ಎತ್ತಿದ ಸಾಲದಷ್ಟೇ ಇದೂ ಆಕರ್ಷಕವಾಗಿರುತ್ತದೆ ಪ್ರತಿ ನೂರು ರೂಪಾಯಿಗೆ ೮ ಆಣೆ ವಟ್ಟವನ್ನು ಕೊಡಲಾಗುವುದು, ಮತ್ತು ಬಡ್ಡಿ ದರವು ಶೇಕಡಾ ೪ನ್ನು ಮೀರುವುದು ಹಣವಿದ್ದವರಿಗೆ ಇದು ಉತ್ತೇಜನ ರೂಪದಲ್ಲಿದ್ದರೆ ರಾಷ್ಟ್ರದ ಹಿತದೃಷ್ಟಿಯಿಂದ ಈ ಸಾಲ ಇನ್ನೂ ಹೆಚ್ಚು ಮಹತ್ವದಿಂದ ಕೂಡಿದೆ ಮದ್ರಾಸಿನಂತೆ ಇಲ್ಲಿಯೂ ರಾಜ್ಯ ಸರಕಾರವು ಅಭಿವೃದ್ಧಿ ಪ್ರಯತ್ನಗಳಿಗೋಸ್ಕರ ಸಾಲವೆತ್ತಿದ ಹಣವನ್ನು ವ್ಯಯಿಸುವುದು ಸಾಧ್ಯವಿದ್ದಷ್ಟೂ ಹೆಚ್ಚು, ಆಯಾ ಪ್ರದೇಶದಲ್ಲಿ ಎತ್ತಿದ ಸಾಲವನ್ನು ಅಲ್ಲಿಯ ಅಭಿವೃದ್ಧಿಗೋಸ್ಕರವೇ ವಿನಿಯೋಗ ಮಾಡಲಾಗುವುದು ಹೈದರಾಬಾದಿನಲ್ಲಿ ಈಗ ನಡೆಯುವ ಮುಖ್ಯ ಅಭಿವೃದ್ಧಿ ಪ್ರಯತ್ನವೆಂದರೆ ತುಂಗಭದ್ರೆಯ ಯೋಜನ ಫಲವತ್ತಾದ ಸಾವಿರಾರು ಎಕ್ರೆ ಪ್ರದೇಶಕ್ಕೆ ಈ ಯೋಜನೆಯಿಂದ ನೀರಾವರಿಯ ಅನುಕೂಲತೆ ದೊರೆಯುವುದರಿಂದ ಕೃಷಿಯಲ್ಲಿ ಅದ್ಭುತ ಪ್ರಗತಿಯನ್ನು ಕೈಗೂಡಿಸುವುದು ಸಾಧ್ಯ ಆದರೆ ಇದುವರೆಗೆ ಬಂಜರು ಬಿದ್ದಿದ್ದ ಪ್ರದೇಶದಲ್ಲಿ ಒಮ್ಮೆಲೇ ಕುಶಲ ರೈತರನ್ನು ತರುವುದೂ ಅವರ ನಿವೇಶನ ವ್ಯವಸ್ಥೆಯನ್ನು ಮಾಡುವುದೂ ಅಷ್ಟು ಸುಲಭದ ಕೆಲಸವಲ್ಲ. ಭಾರತದಲ್ಲಿ ಸಾಗುವಳಿ ಯೋಗ್ಯವಾದ ಭೂಮಿಯ ಕೊರತೆ ಇರುವಾಗ, ಅದನ್ನು ಕಡಿಮೆ ಮಾಡುವ ತುಂಗಭದ್ರೆಯಂಥ ಯೋಜನೆಗಳಿಗೆ ಕೊಟ್ಟ ಮಹತ್ವವನ್ನೆ ಹಾಗೆ ಹೊಸತಾಗಿ ನೀರುಣ್ಣುವ ಪ್ರದೇಶಗಳಲ್ಲಿ ರೈತರನ್ನು ನೆಲೆಗೊಳಿಸುವುದಕ್ಕೂ ಕೊಡುವುದು ಅನಿವಾರ್ಯ ಅನ್ಯಥಾ ನೀರಿನ ಪೂರೈಕೆಯಾದರೂ ಬೆಳೆ ಬೆಳೆಯುವವರಿಲ್ಲದ ಹೋಗಬಹುದು ಜನ ಸಾಂದ್ರತೆ ವಿರಳವಾಗಿರುವ ತುಂಗಭದ್ರೆಯ ಪ್ರದೇಶಕ್ಕೆ ನಿಬಿಡ ಜನಸಂಖ್ಯೆಯುಳ್ಳ ಕಡೆಯಿಂದ ಹೊಲ ಬೇಕೆನ್ನುವ ರೈತರು ವಲಸ ಹೋಗುವುದನ್ನು ಪ್ರೋತ್ಸಾಹಿಸುವ ಕಾಲ ಬಂದಿರುತ್ತದೆ

ಯೋಜನೆಯ ಲೋಪದೋಷ

ರಾಷ್ಟ್ರೀಯ ಯೋಜನೆಯನ್ನು ರೂಪಿಸುವಾಗ ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಕೆಲಮಟ್ಟಿಗೆ ನ್ಯೂನಾತಿರೇಕಗಳು ಕಂಡುಬರುವುದಕ್ಕೆ ಈ ಅನುಭವದ ಅಭಾವವೂ ದೂರದರ್ಶಿತ್ವದ ಕೊರತೆಯೂ ಒಂದು ಕಾರಣ ಒಟ್ಟು ಉತ್ಪಾದನೆಯು ಪರಮಾವಧಿ ಮಿತಿಯನ್ನು ಯೋಜನಾ ಅವಧಿಯ ಎರಡನೇ ವರ್ಷದಲ್ಲೇ ಮುಟ್ಟಲಾಯಿತು ಅಂದಾಜು ಕಟ್ಟಿದವರ ತಪ್ಪು ಇದು ಈಗಲೇ ೨೦೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ವೆಚ್ಚ ಬರುವ ಈ ಯೋಜನೆ ಎಲ್ಲಿ ಎಲ್ಲ ಕೆಲಸವೂ ಸರಿಯಾಗಿ ನೆರವೇರುವ ಭರವಸೆ ಕಾಣುವುದಿಲ್ಲ ಅರ್ಥ ಸಚಿವ ದೇಶಮುಖರು ನಾವು ಯೋಜನೆಯಲ್ಲಿ ಅಪೇಕ್ಷಿಸಿದಷ್ಟು ಹಣವನ್ನು ಕರ್ಚು ಮಾಡಲಾರದೆ ಹೋಗುವ ಸಂಭವವಿದೆ ಎಂದಿರುವರು ಹಣದ ಅಭಾವವು ಕರ್ಚು ಕಡಿಮೆಯಾಗುವುದಕ್ಕೆ ಕಾರಣವಲ್ಲ ಹಣದ ಪೂರೈಕೆಯಾದರೂ ಅದನ್ನು ಕರ್ಚು ಮಾಡುವುದಕ್ಕೆ ಮಾರ್ಗ ತೋರುವುದಿಲ್ಲವಂತೆ ಇದು ಹೊಸ ಸಮಸ್ಯೆಯೇ ಸರಿ. ಇದರ ಜೊತೆಗೆಯೇ ೬೦೦ ಕೋಟಿ ರೂಪಾಯಿಗಳಷ್ಟು ನೋಟುಗಳನ್ನು ಮುದ್ರಿಸಿ ಅವುಗಳ ಬಲದಿಂದ ಯೋಜನೆಗಳನ್ನು ಪೂರೈಸಲು ಸರಕಾರ ನಿರ್ಧರಿಸಿದೆಯೆಂದು ಕೇಳುತ್ತೇವೆ. ಅತಿ ಪ್ರಸರಣದ ಭೀತಿಯು ಇದರಿಂದ ಹೆಚ್ಚಾಗಿದ್ದರೂ, ಅದಕ್ಕೆ ಆಸ್ಪದವಿಲ್ಲೆಂಬ ಆಶ್ವಾಸನ ಸರಕಾರದ ಕಡೆಯಿಂದ ದೊರೆತಿದೆ ಕೊರತೆ ಧನ ವಿನಿಯೋಗವು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ ಹಾಗೆ ಹೆಚ್ಚಿದ ಉತ್ಪಾದನೆಯು ಈ ಕೊರತೆಯನ್ನು ನುಂಗಿ ನೀರು ಕುಡಿದು ಸಮತೋಲವನ್ನು ಕಾಯ್ದುಕೊಳ್ಳುವುದೆಂದು ಸರಕಾರದ ಸಮಾಧಾನ ಕೇಂದ್ರ ಸರಕಾರದ ವೆಚ್ಚವನ್ನು ಹೆಚ್ಚಿಸಿದಂತೆ ರಾಜ್ಯ ಸರಕಾರಗಳೂ ಯೋಜನೆಯಲ್ಲಿ ಅಪೇಕ್ಷಿಸಿದಂತೆ ತಮ್ಮ ಹೊಣೆ ನಿರ್ವಹಿಸುವುದು ಶಕ್ತಿಗೆ ಮೀರಿದ ಮಾತೆಂದೂ ಗೊಣಗುತ್ತವೆ ನಿರೀಕ್ಷಿಸಿದಷ್ಟು ಬಂಡವಾಳವನ್ನು ಕೂಡಿಸಲು ತಮಗೆ ಶಕ್ಯವಾಗಿಲ್ಲೆಂದು ಹೆಚ್ಚಿನ ರಾಜ್ಯಗಳು ದೂರಿಕೊಂಡಿವೆ ಕೇಂದ್ರ ಸರಕಾರ ತನ್ನ ವಶದಲ್ಲಿರುವ ನಾಸಿಕದ ನೋಟು ಮುದ್ರಿಸುವ ಟಂಕಸಾಲೆಯನ್ನು ಕೊರತೆ ನೀಗಿಸಲು ಉಪಯೋಗಿಸಬಹುದು ಆದರೆ ತಮಗೆ ಆ ಸೌಕರ್ಯವಿಲ್ಲ ಎಂದವು ಮುಖ ಸಣ್ಣದು ಮಾಡಿವೆ ಪರಿಣಾಮವಾಗಿ, ಇಡೀ ಯೋಜನೆಯ ಹೊಣೆಗೆ ಕೇಂದ್ರ ಸರಕಾರವೇ ಹೆಗಲು ಕೊಡುವ ಪ್ರಮೇಯ ಬಂದಿತು

ಭವಿಷ್ಯದ ಸಿದ್ಧತೆ

ಇವು ವ್ಯವಹಾರಕ್ಕೆ ಸಂಬಂಧಿಸಿದ ಕೆಲವು ಅಡಚಣೆಗಳು. ಸರಕಾರ ಅಥವಾ ಯೋಜನಾ ಆಯೋಗದ ಗಮನವನ್ನು ಇವು ಸೆಳೆದುಕೊಂಡಿಲ್ಲವೆಂದರೆ ತಪ್ಪಾಗುವುದು [illegible] ರೀತಿಯಿಂದಲೂ ಪಂಚವಾರ್ಷಿಕ ಯೋಜನೆ ನಿಶ್ಚಿತ ಗುರಿ ಮುಟ್ಟುವಂತೆ ಭರದಿಂದ ಪ್ರಯತ್ನಗಳು ಮುನ್ನಡೆಯುತ್ತಿವೆ ಇಷ್ಟರಲ್ಲೇ ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ ಪೂರ್ವಭಾವೀ ಕಾರ್ಯಗಳು ನಡೆಯುತ್ತಿವೆ ಪ್ರಕೃತದ ಯೋಜನೆಯಲ್ಲಿ ಕಂಡುಬಂದ ನ್ಯೂನಾತಿರೇಕಗಳಿಗೆಡೆ ಕೊಡದಂತೆ ಜಾಗ್ರತೆಯನ್ನು ವಹಿಸಲಾಗುತ್ತದೆ ಎರಡನೆಯ ಯೋಜನೆಯಲ್ಲಿಯೂ ವಿವಿಧೋದ್ದೇಶದ ನೀರಾವರಿ ಯೋಜನೆಗಳಿಗೆಯೇ ಪ್ರಾಶಸ್ತ್ಯ ದೊರೆಯುತ್ತದೆ ಗುಡಿ ಕೈಗಾರಿಕೆಗಳನ್ನು ನಿರುದ್ಯೋಗ ನಿರ್ಮೂಲನಕ್ಕೆ ಸಹಕಾರಿಯಾಗುವಂತೆ ಅಳವಡಿಸಿಕೊಳ್ಳುವದನ್ನು ಈ ಯೋಜನೆಯಲ್ಲಿ ಮಹತ್ವ ಕೊಡಲ ನಿರೀಕ್ಷೆ ಇದೆ ಕೇಂದ್ರ ಸರಕಾರವು ನೀರಾವರಿ ಹಾಗೂ ಜಲವಿದ್ಯುಚ್ಛಕ್ತಿ ಸಂಬಂಧದಲ್ಲಿ ಸಲಹೆ ಮಾಡಲು ಒಂದು ಮಂಡಳವನ್ನು ಇಷ್ಟರಲ್ಲೇ ನೇಮಿಸಿರುವುದು ಬೇರೆ ಬೇರೆ ರಾಜ್ಯ ಸರಕಾರಗಳು ಸೂಚಿಸಿದ ಯೋಜನೆಗಳು (೧) ವಿವರವಾದ ಪರಿಶೀಲನೆಯ ತರುವಾಯ ಸಿದ್ಧಗೊಳಿಸಲ್ಪಟ್ಟಿವೆ, (೨) ಅಂದಾಜುಗಳೆಲ್ಲವೂ ಪೂರ್ಣ ಹಾಗೂ ತಾಂತ್ರಿಕ ದೃಷ್ಟಿಯಿಂದ ಸಮರ್ಪಕವಾಗಿವೆ, ಮತ್ತು (೩) ಯೋಜನೆ ಪೂರ್ತಿಯಾದ ಬಳಿಕ ದೊರಕುವ ಲಾಭಗಳ ಅಂದಾಜು ರೂಪ ಮುನ್ನೋಟದ ದರಗಳಿಗೆ ಹೊಂದಿಕೊಂಡಿದೆ— ಎಂಬೀ ಸಂಗತಿಗಳನ್ನು ಈ ಸಲಹಾ ಮಂಡಳವು ನಿರ್ಧರಿಸುತ್ತದೆ ಮಂಡಳವು ತನ್ನ ಶಿಫಾರಸುಗಳನ್ನು ಯೋಜನಾ ಆಯೋಗಕ್ಕೆ ನೀಡುತ್ತದೆ. ಯೋಜನಾ ಆಯೋಗವು ಆ ಬಳಿಕ ಪ್ರಾಶಸ್ತ್ಯಾನುಕ್ರಮವನ್ನು ಗೊತ್ತುಮಾಡುವುದು ಹೀಗೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಪದ್ಧತಿಗಳು ಈಗಿನಿಂದಲೇ ನಡೆದಿರುವುದರಿಂದ, ವಿಶಿಷ್ಟ ಯೋಜನೆಗಳಲ್ಲಿ ಆಸಕ್ತಿಯುಳ್ಳ ಸಾರ್ವಜನಿಕರು, ಅವು ಬೇಗನೆ ಕೈಗೂಡಿ ಬರುವಂತೆ ಮಂಡಿಸಿದ ಯೋಜನೆಯಲ್ಲಿಯೇ ಸೇರಿಸಲ್ಪಡುವಂತೆ, ತಕ್ಕ ಕ್ರಮಗಳನ್ನು ಕೈಗೊಳ್ಳುವುದು ಉಚಿತ ಎಲ್ಲ ಶಾಸನ ಸಭಾ ಸದಸ್ಯರೂ ತಂತಮ್ಮ ಮತದಾರ ಕ್ಷೇತ್ರದ ಆವಶ್ಯಕತೆಗಳನ್ನು ಸರಕಾರಕ್ಕೆ ಮನದಟ್ಟು ಮಾಡಿಕೊಡುವಂತೆ, ಮತದಾರರಲ್ಲಿಗೂ ಈಗ ಒತ್ತಾಯ ನೀಡಬೇಕು ಯಾವ ಪ್ರದೇಶವೂ ಯಾವುದೇ ಅಗತ್ಯದ ಯೋಜನೆಯೂ ಉಪೇಕ್ಷಿಸಲ್ಪಡದಂತೆ ಈಗಿಂದಲೇ ಜಾಗ್ರತೆ ವಹಿಸ ತಕ್ಕದ್ದು



PLACE YOUR LIFE ASSURANCE WITH A COMPNAY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR

THE POPULAR INSURANCE CO. LTD.
POPULAR BUILDINGS' MANGALORE-1

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಸಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಿಚ್ಚು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India)

ನ ವ ಯು ಗ

ಉಡುಪಿ, ಗುರುವಾರ ೨೯-೧೦-'೫೩

ನಿರಾಧಾರ ಆರೋಪ

ಹೈದರಾಬಾದು ಕಾಂಗ್ರೆಸ ಪಕ್ಷದಲ್ಲಿ ತೀವ್ರ ಭಿನ್ನಾಭಿಪ್ರಾಯ ತಲೆದೋರಿದುದನ್ನು ವಿಚಾರಿಸಿ ಯೋಗ್ಯ ನಿರ್ಣಯವನ್ನು ಕೈಗೊಳ್ಳಲು ಕಳೆದ ೨೨ ಮತ್ತು ೨೩ನೇ ದಿನಾಂಕ ಹೊಸ ದೆಹಲಿಯಲ್ಲಿ ಕೇಂದ್ರ ಪಾರ್ಲಿಮೆಂಟರಿ ಮಂಡಳವು ಸಭೆ ಸೇರಿದ್ದಿತು. ಹೈದರಾಬಾದಿನಲ್ಲಿ ಈಚೆಗೆ ಮಂತ್ರಿಮಂಡಳದ ಪುನರ್ಘಟನೆ ಮಾಡುವಾಗ ೧೩ಮಂದಿ ಮಂತ್ರಿಗಳ ಬದಲು ೧೦ ಮಂದಿಯನ್ನು ಮಾತ್ರ ಸಚಿವಸಂಪುಟದಲ್ಲಿ ಉಳಿಸಿಕೊಳ್ಳಲಾಯಿತು. ಹೀಗೆ ಮಂತ್ರಿಪದವಿಯನ್ನು ಕಳೆದುಕೊಂಡ ಮೂವರು ಮತ್ತು ಅವರ ಅನುಯಾಯಿಗಳಾದ ಬೇರೆ ೨೨ ಮಂದಿ ಶಾಸನ ಸಭಾಸದಸ್ಯರು ಪುನರ್ಘಟಿತ ಮಂತ್ರಿ ಮಂಡಳದ ಸದಸ್ಯರಲ್ಲಿ ಕೆಲವರ ಮೇಲೆ ವಿಶಿಷ್ಟ ಆರೋಪಗಳನ್ನು ಇಟ್ಟು, ಅವುಗಳ ವಿಚಾರಣೆಯಾಗಬೇಕೆಂದು ಆಗ್ರಹ ಹಿಡಿದರು. ಈ ನಡುವೆ ರಾಜ್ಯ ಶಾಸನ ಸಭೆಯಲ್ಲಿ ಒಕ್ಕಲುತನ ವಿಧೇಯಕವು ಚರ್ಚೆಗೆ ಬಂದಾಗ ಅದನ್ನು ಬೆಂಬಲಿಸಲು ಈ ಕಾಂಗ್ರೆಸ್ಸಿಗರು ನಿರಾಕರಿಸಿದ್ದಲ್ಲದೆ, ವಿರುದ್ಧ ಮತವನ್ನೂ ನೀಡಿದರು. ಪರಮಾವಧಿ ಹಿಡುವಳಿಯ ಕ್ಷೇತ್ರವನ್ನು ಕಡಿಮೆಮಾಡಬೇಕೆಂದು ಬಂಡೆದ್ದ ಕಾಂಗ್ರೆಸ ಗುಂಪು ಒಕ್ಕಲುತನ ವಿಧೇಯಕಕ್ಕೆ ಒಂದು ತಿದ್ದುಪಡಿಯನ್ನು ಮಂಡಿಸಿತು. ಈ ವಿಧೇಯಕವನ್ನು ಯೋಜನಾ ಆಯೋಗದ ಸಲಹೆಯಂತೆ ಸಿದ್ಧಪಡಿಸಲಾಗಿದೆಯೆಂದೂ ಪರಮಾವಧಿ ಹಿಡುವಳಿಯ ಕ್ಷೇತ್ರ ಕಡಿಮೆ ಮಾಡುವ ವಿಷಯದಲ್ಲಿ ಭಿನ್ನಾಭಿಪ್ರಾಯಕ್ಕೆ ಬಂದ ಕಾಂಗ್ರೆಸ ಸದಸ್ಯರು ಯೋಜನಾಆಯೋಗಕ್ಕೆ ತಮ್ಮ ತಿದ್ದುಪಡಿಯ ಮಹತ್ವವನ್ನು ಮನವರಿಕೆ ಮಾಡಿಕೊಡುವುದುಚಿತವೆಂದೂ ಸರಕಾರದ ಕಡೆಯಿಂದ ತಿಳಿಸಿದರೂ ಅದನ್ನು ಅಲಕ್ಷದಿಂದ ನೋಡಲಾಯಿತು. ಹೀಗೆ ವಿರಸ—ವಿಕೋಪಗಳು ಉಂಟಾದರೂ ಕಾಂಗ್ರೆಸ ವರಿಷ್ಠರು ಹೇಳುವ ನಿರ್ಣಯಕ್ಕೆ ತಾವೆಲ್ಲರೂ ಬದ್ಧರೆಂದು ಬಂಡೆದ್ದ ಕಾಂಗ್ರೆಸ್ಸಿಗರು ಹೇಳುತ್ತಿದ್ದರು. ಗೃಹಮಂತ್ರಿ ಡಾ. ಕೈಲಾಸನಾಥ ಕಟಜೂರವರು ಆಂಧ್ರ ರಾಜ್ಯದ ಉದ್ಘಾಟನಾ ಸಂದರ್ಭದಲ್ಲಿ ದಕ್ಷಿಣ ಭಾರತಕ್ಕೆ ಬಂದಾಗ ಹೈದರಾಬಾದಿನಲ್ಲಿ ಕೆಲವು ದಿನ ತಂಗಿ, ಕಾಂಗ್ರೆಸ್ಸಿನಲ್ಲಿ ಉಂಟಾದ ಒಡಕಿನ ಕುರಿತು ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಅವರು ಇಲ್ಲಿಯ ಪರಿಸ್ಥಿತಿಯ ಬಗ್ಗೆ ಕಾಂಗ್ರೆಸ ಅಧ್ಯಕ್ಷ ನೆಹರೂರವರಿಗೆ ವಿಸ್ತೃತ ವರದಿಯನ್ನು ಒಪ್ಪಿಸಿದರೂ ತಮ್ಮ ಸ್ವಂತ ಅಭಿಪ್ರಾಯವನ್ನು ಪ್ರಕಟಪಡಿಸಲಿಲ್ಲ. ಈ ವಿಚಾರವನ್ನು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿಗೇ ತೀರ್ಮಾನಿಸಲು ಅವರು ಬಿಟ್ಟರು. ಕಾಂಗ್ರೆಸ ಕಾರ್ಯದರ್ಶಿ ಶ್ರೀ. ಬಳವಂತರಾಯ ಮೆಹತಾರವರೂ ಮೊನ್ನೆ ಹೈದರಾಬಾದಿಗೆ ಆಗಮಿಸಿ ಪರಿಸ್ಥಿತಿಯನ್ನು ವಿಶದವಾಗಿ ವಿಚಾರಿಸಿ ತಿಳಿದುಕೊಂಡರು. ಇವರು ನಹ ನೆಹರೂರಿಗೆ ತಮ್ಮ ಕೆಲಸದ ಕುರಿತು ವರದಿ ಮಾಡಿದರು. ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡು ಆರೋಪಕ್ಕೆ ಗುರಿಯಾದ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣ ರಾವ್, ಬೇರೆ ಇವರು ಮಂತ್ರಿಗಳಾದ ವಂಕರದೇವ ರಂಗರೆಡ್ಡಿ ಮತ್ತು ಚಿನ್ನ ರೆಡ್ಡಿಯವರನ್ನೂ ಬಂಡುಗಾರ ಕಾಂಗ್ರೆಸ ಗುಂಪಿನ ಪ್ರಭೃತಿಗಳಾದ ಶ್ರೀ. ಫೂಲಚಂದ ಗಾಂಧೀ ಇತ್ಯಾದಿಯವರನ್ನೂ ಹೊಸ ದೆಹಲಿಗೆ ಕರೆಸಿಕೊಂಡು ಉಭಯ ಪಕ್ಷದವರ ಹೇಳಿಕೆಯನ್ನು ತಾಳ್ಮೆಯಿಂದ ಕೇಳಿಕೊಂಡಿತು ಪರಿಣಾಮವಾಗಿ ಮಂತ್ರಿಗಳ ಮೇಲೆ ಹೊರಿಸಲಾದ ಆರೋಪಗಳು ಹುರುಳಿಲ್ಲದವೆಂದೂ ಆದರೂ ಮಂತ್ರಿಮಂಡಳದ ಸದಸ್ಯರು ಕೆಲ ಮಟ್ಟಿಗೆ ಜಾಗರೂಕತೆಯಿಂದ ವರ್ತಿಸುವುದು ಅವಶ್ಯವೆಂದೂ ತೀರ್ಮಾನಿಸಿತು. ಲಂಚಗುಳಿತನ ಮುಂತಾದ ಯಾವ ದೋಷಕ್ಕೂ ಮಂತ್ರಿಗಳು ಬಾಧ್ಯರಲ್ಲವೆಂದು ಪಾರ್ಲಿಮೆಂಟರಿ ಬೋರ್ಡು ನಿರ್ಣಯ ಮಾಡಿದುದರಿಂದ, ಹೊಣೆಗಾರ ಸ್ಥಾನದಲ್ಲಿರುವ ಕಾಂಗ್ರೆಸ್ಸಿಗರ ಚಾರಿತ್ರ್ಯ ಶುದ್ಧಿಯ ಬಗ್ಗೆ ಏನೇನೂ ಸಂದೇಹವುಳಿಯದಂತಾಗಿದೆ. ಇಷ್ಟು ಮಟ್ಟಿಗೆ ಒಳ್ಳೆಯದೇ ಆದರೂ ಸದಸ್ಯರು ಗಂಭೀರ ಆರೋಪಗಳನ್ನು ಬಹಿರಂಗವಾಗಿಯೂ ಪತ್ರಿಕೆಗಳ ಮೂಲಕವಾಗಿಯೂ ಮಾಡಿರುವುದು ವಿಡಂಬನೆಗೆ ಕಾರಣವಾಗಿರುತ್ತದೆ. ಇದು ಶಿಸ್ತಿನ ಅಭಾವದ ದ್ಯೋತಕವಾಗಿರುವುದಲ್ಲದೆ, ಅಸಭ್ಯತನವನ್ನು ಪ್ರಚೋದಿಸುತ್ತದೆ. ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡು ಅಂಗೀಕರಿಸಿದ ಗೊತ್ತುವಳಿಯಲ್ಲಿ ಇದನ್ನು ಸ್ಪಷ್ಟವಾಗಿ ಪ್ರಸ್ತಾಪಿಸಿದ್ದು "ಕಾಂಗ್ರೆಸ ಸಂಸ್ಥೆಗಳು ಈ ರೀತಿಯ ಅನುಚಿತ ಕಾರ್ಯ ಮಾಡಬಾರದು. ಒಳಪಂಗಡಗಳು ತಲೆಯೆತ್ತಿ ಒಬ್ಬರಿನ್ನೊಬ್ಬರನ್ನು ಕೆಳಗೆಳೆಯಲು ಪ್ರಯತ್ನಿಸಿ, ಸಂಸ್ಥೆಗೂ ಪಕ್ಷಕ್ಕೂ ದ್ರೋಹವೆಸಗುವುದು ಅನ್ಯಾಯ. ಆದುದರಿಂದ ಸಾರ್ವಜನಿಕ ಸೇವಾ ಜೀವನದಲ್ಲಿ ತೊಡಗಿದ ಎಲ್ಲ ಕಾಂಗ್ರೆಸ್ಸಿಗರೂ ಉಚ್ಚ ಮಟ್ಟದ ಚಾರಿತ್ರ್ಯವನ್ನು ಕಾಯ್ದುಕೊಳ್ಳಬೇಕು. ತಕರಾರುಗಳ ಪೂರ್ಣ ವಿಚಾರಣೆ ಆಗತ್ಯ ಹೌದಾದರೂ ಹೊಣೆಗಾರಸ್ಥಾನದಲ್ಲಿರುವವರನ್ನು ಅನ್ಯಾಯದ ಟೀಕೆಗಳಿಂದ ರಕ್ಷಿಸುವುದೂ ಅಷ್ಟೇ ಅಗತ್ಯವಿದೆ. ಶಾಸನಸಭೆಯ ಕಾಂಗ್ರೆಸಪಕ್ಷವೂ ಪ್ರದೇಶ ಕಾಂಗ್ರೆಸ್ ಸಮಿತಿಯೂ ಪರಸ್ಪರ ಸಹಕಾರ ಮತ್ತು ಶಿಸ್ತಿನಿಂದ ಕೆಲಸ ಮಾಡಬೇಕು" ಎಂದಿದೆ. ಇದನ್ನು ಎಲ್ಲ ಕಾಂಗ್ರೆಸ್ಸಿಗರೂ ಸದಾ ಸ್ಮರಣೆಯಲ್ಲಿಟ್ಟುಕೊಳ್ಳಬೇಕಾಗಿ ವಿನಂತಿಸುತ್ತೇವೆ. ಹೈದರಾಬಾದಿನ ಕಾಂಗ್ರೆಸ್ಸಿಗರು ಎಲ್ಲ ಭಿನ್ನಾಭಿಪ್ರಾಯಗಳೂ ಇಲ್ಲಿಗೆ ಮುಗಿದವೆಂದಿಟ್ಟುಕೊಂಡು ಮೊದಲಿನಂತೆ ಪರಸ್ಪರ ಕೂಡಿ ನಡೆದುಕೊಳ್ಳಲೆಂದೂ ಹಾರೈಸುತ್ತೇವೆ.

ಪ್ರಾಸ್ತಾವಿಕ ಮಾತುಕತೆಗಳ ಪ್ರಾರಂಭ

ರಾಜಕೀಯ ಪರಿಷತ್ತಿನ ಪೂರ್ವಭಾವಿ ಸಿದ್ಧತೆ

ಯುದ್ಧ ವಿರಾಮ ಒಪ್ಪಂದದ ಬಳಿಕ ರಾಜಕೀಯ ಪರಿಷತ್ತೊಂದು ನಡೆಯಬೇಕೆಂದು ಹೇಳಿದ್ದರೂ ಈ ವಿಷಯದಲ್ಲಿ ಉಭಯ ಪಕ್ಷಗಳಾದ ಕಮ್ಯೂನಿಸ್ಟ ಮತ್ತು ರಾಷ್ಟ್ರ ಸಂಘಗಳೊಳಗೆ ಏಕಾಭಿಪ್ರಾಯವುಂಟಾಗಿರುವುದಿಲ್ಲ. ಪರಿಷತ್ತನ್ನು ಸೇರಿಸುವುದಕ್ಕೆ ಎರಡೂ ಕಡೆಯವರು ಇಷ್ಟಪಟ್ಟರೂ, ಆ ಪರಿಷತ್ತಿನ ಸ್ವರೂಪ, ಅದರಲ್ಲಿ ಭಾಗವಹಿಸಬೇಕಾದ ರಾಷ್ಟ್ರಗಳು, ಅದು ಸೇರುವ ಸ್ಥಳ ಮತ್ತು ಸಮಯ ಮುಂತಾದ ವಿಷಯಗಳು ಮಾರ್ಗದ ನಡುವೆ ಆತಂಕವಾಗಿ ನಿಂತಿವೆ. ಇದನ್ನು ಪರಿಹರಿಸುವುದು ಅಗತ್ಯವಾಗಿ ಕಂಡು ಬಂದುದರಿಂದ, ರಾಜಕೀಯ ಪರಿಷತ್ತಿಗೆ ಪೂರ್ವಭಾವಿಯಾಗಿ ಪ್ರಾಸ್ತಾವಿಕ ಮಾತುಕತೆಗಳನ್ನು ಈ ಸೋಮವಾರ ತೊಡಗಿರುವರು. ಇಲ್ಲಿ ಉಭಯ ಪಕ್ಷಗಳೂ ಗೌರವಯುತವಾದ ರೀತಿಯಲ್ಲಿ ಒಮ್ಮತಕ್ಕೆ ಬಂದರೆ, ರಾಜಕೀಯ ಪರಿಷತ್ತು ಬೇಗನೇ ಸೇರುವುದೆಂದು ನಿರೀಕ್ಷಿಸಲಾಗಿದೆ. ಅಮೇರಿಕಾ ನೇತೃತ್ವ ವಹಿಸಿರುವ ಸಂಯುಕ್ತ ರಾಷ್ಟ್ರ ಸಂಘದ ಸೈನ್ಯಾಧಿಪತ್ಯವು ಎಷ್ಟೇ ತಡವಾದರೂ ದಶಂಬರ ೧ನೇ ದಿನಾಂಕ ರಾಜಕೀಯ ಪರಿಷತ್ತು ಸೇರಬೇಕೆಂದು ಹೇಳುವುದಾಗಿ ಕೇಳುತ್ತೇವೆ.

ಹಿಂದಿನದೇ ಧೋರಣೆ

ಪ್ರಾಸ್ತಾವಿಕ ಮಾತುಕತೆಗಳಲ್ಲಿ ಉತ್ತರ ಕೊರಿಯಾ, ಚೀನಾ ಮತ್ತು ಅಮೇರಿಕಗಳು ಭಾಗವಹಿಸಿವೆ. ಎರಡು ದಿನಗಳ ಕಾಲ ಈ ಚರ್ಚೆ ಈಗಾಗಲೇ ನಡೆದಿದೆ. ಅವರ ಮೊಳಕೆಯಲ್ಲಿ ಮರದ ಗುಣ ಗೊತ್ತಾಗುವುದು ನಿಜವಾದರೆ—ಮಾತುಕತೆಗಳು ಯಶಸ್ವಿಯಾಗುವ ಲಕ್ಷಣವಿಲ್ಲ ಕಮ್ಯೂನಿಸ್ಟರು ಸಂಯುಕ್ತ ರಾಷ್ಟ್ರ ಸಂಘವು ಪ್ರಸ್ತಾಪಿಸಲೇ ಬಾರದೆಂದು ಹೇಳುತ್ತ ಬಂದಿರುವ ರಾಜಕೀಯ ಪರಿಷತ್ತಿನ ರಚನಾ ಕ್ರಮ ಮತ್ತು ಅದರಲ್ಲಿ ಭಾಗವಹಿಸಬೇಕಾದ ತಟಸ್ಥ ರಾಷ್ಟ್ರಗಳ ಪ್ರಶ್ನೆಯಲ್ಲಿ ಮೊದಲು ಒಮ್ಮತವಾಗಬೇಕೆಂಗು ಇಲ್ಲಿಯೂ ಹಟ ತೊಟ್ಟಿರುವರು. ಅಮೇರಿಕದ ಕಡೆಯಿಂದ ಮಾತನಾಡುವ ಅರ್ಥರ್ ಡೀನರು ತಮಗೀ ವಿಷಯದಲ್ಲಿ ನಿರ್ಣಯಕ್ಕೆ ಬರಲು ಅಧಿಕಾರವಿಲ್ಲವೆಂದೂ ಅಧ್ಯಕ್ಷ ಐಸೆನ ಹೋವರರಿಗೆ ಕಮ್ಯೂನಿಸ್ಟರ ಸೂಚನೆಯನ್ನು ತಿಳಿಸುವುದಾಗಿಯೂ ಹೇಳಿದರು. ಮಾತ್ರವಲ್ಲ ಪ್ರಾಸ್ತಾವಿಕ ಮಾತುಕತೆಗಳಲ್ಲಿ ಕ್ರಮವಾಗಿ (೧) ಸಮಯ (೨) ಸ್ಥಳ (೩) ಪರಿಷತ್ತು ನಡೆಸುವ ರೀತಿ ಮತ್ತು (೪) ಇತರ ವಿಷಯಗಳು ಚರ್ಚೆಗೆ ತೆಗೆದುಕೊಳ್ಳಲ್ಪಡಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಎರಡೂ ಕಡೆಯವರು ತಮ್ಮ ಹಿಂದಿನ ನಿಲುಮೆಗೇ ಅಂಟಿಕೊಂಡಿರುವುದರಿಂದ ಈ ಪ್ರಾಸ್ತಾವಿಕ ಮಾತುಕತೆಗಳು ಯಾವುದೇ ಉತ್ತಮ ಪರಿಣಾಮವನ್ನುಂಟುಮಾಡಲಾರವು. ಆದರೆ ರಾಜಕೀಯ ಪರಿಷತ್ತಿನಲ್ಲಿ ತಟಸ್ಥ ರಾಷ್ಟ್ರಗಳನ್ನು ಸೇರಿಸಿಕೊಳ್ಳುವುದಕ್ಕೆ ಕೊನೆಗಾದರೂ ಅಮೇರಿಕಾ ಒಪ್ಪಿಕೊಂಡೀತೆಂಬ ಬಗ್ಗೆ ಸೂಚನೆಗಳಿವೆ. ಮಾತುಕತೆಗಳು ಮುರಿಯುವುದೆಂದು ಭವಿಷ್ಯವಾಣಿ ನುಡಿಯುವುದು. ಈ ಕಾರಣದಿಂದ ಸರಿಯಾಗದೆಂದು ಹೇಳಬಹುದು ಹಾಗೆಂದು ಬೇಗನೇ ಬಿಕ್ಕಟ್ಟು ಬಗೆಹರಿಯದೆಂದೂ ಕನಿಷ್ಠ ಪಕ್ಷ ಎರಡು—ಮೂರು ವಾರಗಳಾದರೂ ಈ ಪ್ರಾಸ್ತಾವಿಕ ಮಾತುಕತೆಗಳು ನಡೆದಾವೆಂದೂ ನಿರೀಕ್ಷಕರ ಅಭಿಪ್ರಾಯ.

ಇನ್ನೊಂದು ಬಿಕ್ಕಟ್ಟು

ಈ ನಡುವೆ ಕೊರಿಯದಲ್ಲಿ ಬೇರೊಂದು ಬಿಕ್ಕಟ್ಟು ತಲೆದೋರಿದೆ. ವಿನಿಮಯಕ್ಕೊಪ್ಪದ ಯುದ್ಧ ಕೈದಿಗಳಿಗೆ ಸ್ವದೇಶಕ್ಕೆ ಬರಬೇಕೆಂದು ತಿಳಿಸಿ ಹೇಳುವ ಕಾರ್ಯಕ್ರಮವು ಈಗ ಸ್ಥಗಿತಗೊಂಡಿದೆ. ಉತ್ತರ ಕೊರಿಯನ್ನ ಯುದ್ಧ ಕೈದಿಗಳು ಕಮ್ಯೂನಿಸ್ಟ ವಿವರಣೆಗಾರರನ್ನು ಕಾಣಲು ನಿರಾಕರಿಸಿದುದೇ ಇದಕ್ಕೆ ಕಾರಣ. ತಟಸ್ಥ ರಾಷ್ಟ್ರಗಳ ಮಂಡಳದ ಕಡೆಯಿಂದ ಯುದ್ಧ ಕೈದಿಗಳ ಯೋಗ ಕ್ಷೇಮ ನೋಡಿಕೊಳ್ಳುವ ಭಾರತೀಯ ರಕ್ಷಣಾ ಸೇನೆಯು ಒತ್ತಾಯವನ್ನು ಪ್ರದರ್ಶಿಸಿಯಾದರೂ ಈ ಕೈದಿಗಳು ವಿವರಣೆಗಾರರ ಮುಂದೆ ಬಂದು ಚೆನ್ನಾದ ರೀತಿಯಲ್ಲಿ ವರ್ತಿಸುವಂತೆ ನೋಡಬೇಕೆಂದು ಪೋಲಿಶ್ ಹಾಗೂ ಜೆಕ್ಕ ಪ್ರತಿನಿಧಿಗಳು ಸೂಚಿಸಿರುವರು. ಇದನ್ನು ಸ್ವಿಜರಲೇಂಡದ ಪ್ರತಿನಿಧಿಯು ಸಂಪೂರ್ಣ ವಿರೋಧಿಸುವರೆಂದೂ ಸ್ವೀಡನ್ನವು ಬಲಾತ್ಕಾರ ಪ್ರಯೋಗವನ್ನು ಮೆಚ್ಚದಿದ್ದರೂ ಕೈದಿಗಳನ್ನು ಪುಸಲಾಯಿಸಿ ಅವರ ಮನವೊಲಿಸುವುದಕ್ಕೆ ಭಾರತದ ಸೇನೆ ಪ್ರಯತ್ನಿಸುವುದೊಳಿತೆಂದು ಹೇಳುವುದಾಗಿಯೂ ತಿಳಿಯುತ್ತದೆ. ಹೀಗೆ ತಟಸ್ಥ ರಾಷ್ಟ್ರ ಮಂಡಳದಲ್ಲಿ ಮಹತ್ವದ ಭಿನ್ನಾಭಿಪ್ರಾಯವು ಕಂಡುಬಂದಿದೆ. ಈ ಪ್ರಸಂಗದಲ್ಲಿ ಮಂಡಳದ ಅಧ್ಯಕ್ಷಸ್ಥಾನದಲ್ಲಿರುವ ಭಾರತೀಯ ಪ್ರತಿನಿಧಿ ತಿಮ್ಮಯ್ಯನವರ ತೀರ್ಮಾನವೇ ಮಂಡಳಕ್ಕೆ ಬಂಧನಕಾರಿಯಾಗುವುದಾದರೂ-ಅಂಥ ತೀರ್ಪು ಹೇಳಿ ವಿರಸವನ್ನುಂಟುಮಾಡಲು ಅವರು ಇಚ್ಛಿಸುವುದಿಲ್ಲ. ಭಾರತೀಯ ಸೇನೆಯು ಬಾಯಿಮಾತಿನ ಬೆದರಿಕೆಯಲ್ಲದೆ ಶಕ್ತಿ ಪ್ರದರ್ಶನದಿಂದ ಯುದ್ಧ ಕೈದಿಗಳನ್ನು ಹೇಳಿದಂತೆ ಕೇಳಲು ಬಲಾತ್ಕಾರ ಮಾಡುವುದಕ್ಕೆ ತಿಮ್ಮಯ್ಯನವರದು ಆಕ್ಷೇಪವಿಲ್ಲ. ಆದರೆ ಅದು ಅಷ್ಟು ಅಗತ್ಯವಿದೆಯೋ

ಎಂಬುದೀಗ ವಿಚಾರಣೀಯ ಅಂಶ. ವಿವರಣೆಗಾರರನ್ನು ನೋಡಲು ನಿರಾಕರಿಸಿದ ಯುದ್ಧ ಕೈದಿಗಳನ್ನು ಸುಮ್ಮನೆ ಬಿಟ್ಟರೆ ತಿಳಿಸಿ ಹೇಳುವ ಕಾರ್ಯಕ್ರಮವೇ ನಡೆ[illegible]ದೆಂದು ಕಮ್ಯೂನಿಸ್ಟರು ಹೇಳುವುದರಲ್ಲಿ ತಥ್ಯಾಂಶವಿದೆ. ಕಾರಣ ಹೆಚ್ಚಿನ ಬಲಾತ್ಕಾರದ ಬದಲು ಸಾಮಾನ್ಯ ಕ್ರಮಗಳನ್ನು ಕೈಗೊಂಡು ಯುದ್ಧ ಕೈದಿಗಳನ್ನು ದಾರಿಗೆ ತರಬೇಕೆಂಬುದು ಭಾರತದ ಮನೀಷೆ. ಈ ವಿಷಯದಲ್ಲಿ ತಟಸ್ಥ ರಾಷ್ಟ್ರ ಮಂಡಳದಲ್ಲಿ ಏಕಾಭಿಪ್ರಾಯವುಂಟಾಗಲು ಪ್ರಯತ್ನ ನಡೆದಿದೆ. ಈಚೆಗೆ ಬಂದ ವರದಿಯಂತೆ ತಿಮ್ಮಯ್ಯನವರು ತುಂಬ ನಿರಾಶೆಯಲ್ಲಿ ಬಿದ್ದಿದ್ದು ತಟಸ್ಥ ರಾಷ್ಟ್ರ ಮಂಡಳದ ನಿರ್ಮಾಣೋದ್ದೇಶದಂತೆ ಕೆಲಸ ಮಾಡಲಾರದಷ್ಟು ಪರಿಸ್ಥಿತಿ ಕೆಟ್ಟಿರುತ್ತದೆ. "ಸ್ವದೇಶಕ್ಕೆ ಮರಳಲು ಇಚ್ಛಿಸದ ಕೈದಿಗಳ ವಿವರಣೆ ಪುನರಾರಂಭವಾಗುವ ಸಂಭವವು ತೋರುವುದಿಲ್ಲ" ಎಂದು ತಿಮ್ಮಯ್ಯನವರು ನಿರಾಶೆಯ ಮಾತಾಡಿದರೆಂದು ವಾರ್ತಾ ಸಂಸ್ಥೆಗಳು ವರದಿ ಮಾಡಿವೆ.

ಗಿಯಾನದ ಕುರಿತು

ಬ್ರಿಟಿಷ್ ಗಿಯಾನಾದಲ್ಲಿ ಅಸ್ತಿತ್ವದಲ್ಲಿದ್ದ ಘಟನೆಯನ್ನೂ ಡಾ. ಜೇದಿ ಜಗನರ ಮಂತ್ರಿ ಮಂಡಳವನ್ನೂ ರದ್ದುಗೊಳಿಸಿದ ಸಂಬಂಧದಲ್ಲಿ ಒಂದು ಶ್ವೇತಪತ್ರವನ್ನು ಬ್ರಿಟನ್ನಿನ ಸರಕಾರ ಪ್ರಕಟಿಸಿರುತ್ತದೆ "ಇತರ ಕಡೆಗಳಲ್ಲಿ ಕಮ್ಯೂನಿಸ್ಟರು ಯಾವ ತಂತ್ರವನ್ನು ಅನುಸರಿಸಿ ಅಧಿಕಾರಕ್ಕೆ ಬಂದರೊ ಅದೇ ಕ್ರಮವನ್ನು ಕ್ರಮೇಣ ಜನತಾ ಪ್ರಾಗತಿಕ ಪಕ್ಷವೂ ಬ್ರಿಟಿಷ ಗಿಯಾನಾದಲ್ಲಿ ಅನುಸರಿಸಿದೆ" ಎಂದು ಅದರಲ್ಲಿ ಹೇಳಲಾಗಿದೆ. ಮಾತ್ರವಲ್ಲ ಮಂತ್ರಿ ಮಂಡಳವು ಕಾರ್ಯಕ್ಷಮ ರೀತಿಯಲ್ಲಿ ವರ್ತಿಸುತ್ತಿರಲಿಲ್ಲವೆಂದೂ ರಾಜಕೀಯ ಉದ್ದೇಶಗಳಿಗೋಸ್ಕರ ಮಂತ್ರಿಗಳು ಸಂಪು ಇತ್ಯಾದಿಗಳನ್ನು ಪ್ರಚೋದಿಸುತಿದ್ದರೆಂದೂ ಆಡಳಿತದ ಹೊಣೆಗಾರಿಕೆಯನ್ನು ಉಪೇಕ್ಷಿಸಿ ಹಿಂಸೆಯ ಬೆದರಿಕೆ ಹಾಕುತ್ತಿದ್ದರೆಂದೂ ಅದರಲ್ಲಿ ಆರೋಪಿಸಲಾಗಿದೆ. ಮಂತ್ರಿ ಮಂಡಳವು ವಸಾಹತಿನ ಹಿತವನ್ನು ಕಡೆಗಣಿಸಿ, ವೆಸ್ಟ್ ಇಂಡಿಯನ್ ಕಮ್ಯೂನಿಸ್ಟರ ಪ್ರವೇಶ ನಿರ್ಬಂಧವನ್ನು ತೆಗೆದು ಹಾಕಿ, ಅಧಿಕಾರದ ದುರುಪಯೋಗ ಮಾಡಿದರೆಂದೂ ಶ್ವೇತಪತ್ರ ತಿಳಿಸಿದೆ. ಡಾ| ಜಗನರು ಈ ಆರೋಪಗಳೆಲ್ಲ ಸುಳ್ಳಿನ ಕಂತೆಯೆಂದು ಹೇಳಿ, ನಿರಾಕರಿಸಿದರಲ್ಲದೆ ತಮ್ಮ ಪಕ್ಷವು ಕಮ್ಯೂನಿಸ್ಟ ರಾಷ್ಟ್ರಗಳೊಡನೆ ಯಾವುದೇ ಸಂಪರ್ಕ ಪಡೆದಿಲ್ಲವೆಂದು ಸಾರಿದರು.

ಇದೀಗ ಪ್ರದರ್ಶಿಸುತ್ತಿರುವ—
ಗೀತಬಾಲಿ, ರಾಜಕಪೂರ್, ನಟಿಸಿದ
ಉತ್ತಮ ಚಿತ್ರ
ಬಾವ್ರೆ ನೈನಾ
ಬರುವ ಚಿತ್ರ:— ಶಾಂತಾರಾಮ್‌ರ
ತೀನ್ ಬತ್ತಿ ಚಾರ್ ರಸ್ತಾ.
ಶ್ರೀ ರಾಮಕೃಷ್ಣ ಥಿಯೇಟರ್
ಲಿಮಿಟೆಡ್ ಉಡುಪಿ.

ಬ್ರಿಟಿಷ ಕೂಲಿಕಾರ ಧುರೀಣರನ್ನು ಇವರು ಭೇಟಿಯಾಗಿ ಗಿಯಾನದ ಪರಿಸ್ಥಿತಿಯನ್ನು ನಿವೇದಿಸಿದರು. ಕಮ್ಯೂನಿಸ್ಟರ ಕುರಿತು ಬ್ರಿಟಿಷ ಕೂಲಿಕಾರ ಪಕ್ಷಕ್ಕೆ ಇರುವಷ್ಟೇ ಸಹಾನುಭೂತಿ ತಮಗೂ ಇರುವುದೆಂದು ಡಾ| ಜಗಾನರು ಒಪ್ಪಿಕೊಂಡರೂ ಬ್ರಿಟಿಷ ಕೂಲಿಕಾರ ಪಕ್ಷದ ಧುರೀಣರು ಶ್ವೇತಪತ್ರದಲ್ಲಿ ಮಂತ್ರಿಮಂಡಳದ ಬೇರೆ ಬೇರೆ ಚಟುವಟಿಕೆಗಳ ಕುರಿತು ಆರೋಪ ಹೊರಿಸಿರುವುದನ್ನು ಪ್ರಸ್ತಾಪಿಸಿದಾಗ ಡಾ| ಜಗಾನರು ಕೊಟ್ಟ ವಿವರಣೆ ಅಷ್ಟು ಪರಿಣಾಮಕಾರಿಯಾಗಲಿಲ್ಲ. ಇದರಿಂದ ಕಾಮನ್ಸ ಸಭೆಯಲ್ಲಿ ಬ್ರಿಟಿಷ ಸರಕಾರದ ಧೋರಣೆಯನ್ನು ಕೂಲಿಕಾರ ಪಕ್ಷ ಟೀಕಿಸಿದಾಗ, ಘಟನೆಯನ್ನು ರದ್ದುಗೊಳಿಸಿ ಸೈನ್ಯವನ್ನು ಕಳಿಸುವಂಥ ಉಗ್ರ ಕ್ರಮ ಕೈಗೊಳ್ಳುವುದಕ್ಕಿಂತಲೂ ಮಂತ್ರಿ ಮಂಡಳವನ್ನು ಮಾತ್ರ ಬರ್ಖಾಸ್ತು ಮಾಡುವ ಸಾಮಾನ್ಯ ನೀತಿಯನ್ನು ಅನುಸರಿಸಲು ಅವಕಾಶವಿತ್ತೆಂದಷ್ಟೇ ಅಭಿಪ್ರಾಯಪಟ್ಟಿತು. ಕಾಮನ್ಸ ಸಭೆಯಲ್ಲಿ ಸರಕಾರದ ಧೋರಣೆಗೆ ಬಹುಮತ ದೊರೆಯಿತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈಗ ಡಾ. ಜಗಾನರು ನಿರಾಶೆಗೊಂಡಂತೆ ತೋರುತ್ತದೆ. ಮಹಾತ್ಮಾ ಗಾಂಧೀಯವರು ಅನುಸರಿಸಿದ ಸತ್ಯಾಗ್ರಹ ಕ್ರಮವನ್ನು ಬ್ರಿಟಿಷ ಗಿಯಾನದಲ್ಲಿ ಆಚರಣೆಗೆ ತಂದು, ಚಳವಳಿ ಹೂಡುವುದಾಗಿ ಅವರು ಹೇಳುತ್ತಿರುವರು; ಮತ್ತು ಸದ್ಯದಲ್ಲಿಯೇ ಭಾರತಕ್ಕೆ ಭೇಟಿ ಕೊಡುವ ಆಶೆಯನ್ನೂ ಇಟ್ಟುಕೊಂಡಿರುವರು.

ಇಸ್ರೇಲ ಅರಬ ತಿಕ್ಕಾಟ

ಮಧ್ಯಪೂರ್ವದಲ್ಲಿ ಇಸ್ರೇಲ ಮತ್ತು ಜೋರ್ಡಾನ್ ಗಡಿ ಪ್ರದೇಶಗಳಲ್ಲಿ ಸಣ್ಣ ಪುಟ್ಟ ಘರ್ಷಣೆಗಳು ತಲೆಎತ್ತಿಕೊಂಡು, ಮರಳಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿರ್ಮಿಸಿವೆ. ಪಾಲಿಸ್ತೈನವನ್ನು ವಿಭಜಿಸಿ ಅರಬ ಇಸ್ರೇಲ ಗಡಿಯನ್ನು ನಿರ್ಮಿಸಿದ ಬಳಿಕ ಸಣ್ಣ ಪುಟ್ಟ ಬಡಿದಾಟಗಳು ಯಾವಾಗಲೂ ಗಡಿ ಪ್ರದೇಶದಲ್ಲಿ ನಡೆಯುತ್ತಿದ್ದುವು. ಅರಬ ರಾಷ್ಟ್ರಗಳಿಗೆ ಇಸ್ರೇಲವು ಅಸ್ತಿತ್ವದಲ್ಲಿರುವುದೇ ಇಷ್ಟವಿಲ್ಲ. ಹಿಂದೊಮ್ಮೆ ರಣಗಹಳೆ ಊದಲ್ಪಟ್ಟಾಗ, ಸಂಯುಕ್ತ ರಾಷ್ಟ್ರ ಸಂಘ ಮಧ್ಯಸ್ಥಿಕೆಯನ್ನು ವಹಿಸಿ ಯುದ್ಧ ವಿರಾಮ ಒಪ್ಪಂದ ಸಮಿತಿಯನ್ನು ರಚಿಸಿತು. ಆದರೆ ಅಂದಿನ ತ್ವೇಷಾಸೂಯೆ ಇಂದಿಗೂ ಮಾಯವಾಗಿಲ್ಲ. ಈಗಿನ ಈ ಕಲಹಕ್ಕೆ ಮೂಲವಾಗಿ ಜೋರ್ಡನದ ಸೈನಿಕರು ಇಸ್ರೇಲವನ್ನು ಹೊಕ್ಕು ಕೆಲ ಯೆಹೂದಿಗಳನ್ನು ಕೊಂದು ಸಿಕ್ಕಿದುದನ್ನು ದೋಚಿ ಓಡಿಹೋದ ಪ್ರಕರಣವಿದೆ. ಇವರ ಮುಯ್ಯಿ ತೀರಿಸಲು ಇಸ್ರೇಲದ ಸೈನಿಕರು ಜೋರ್ಡಾನದಲ್ಲಿ ಪ್ರವೇಶಿಸಿ ಒಂದು ಹಳ್ಳಿಯನ್ನು ಸುಡಗೈದರು; ಅನೇಕ ನಿವಾಸಿಗಳನ್ನು ಕೊಂದರು. ಈ ಪರಿಸ್ಥಿತಿಯನ್ನು ವಿಚಾರಿಸಲು ಭದ್ರತಾ ಮಂಡಳದ ಸಭೆಯನ್ನು ಕ್ಷಿಪ್ರದಲ್ಲಿಯೇ ಕರೆಯುವ ಏರ್ಪಾಡು ನಡೆದಿದೆ. ಮಾತ್ರವಲ್ಲ ಅಮೇರಿಕಾದ ಅಧ್ಯಕ್ಷ ಐಸೆನಹೋವರು ಎರಿಕ್ ಜೋನ್ಸ್ಟನ್ನರನ್ನು ಇಲ್ಲಿಗೆ ಕಳುಹಿಸಿ ಉಭಯ ಪಕ್ಷಗಳ ಹಿತಸಂಬಂಧ ಸೌಹಾರ್ದವಿರುವಂತೆ ಕೆಲವು ಯೋಜನೆಗಳನ್ನು ಮುಂದಿಟ್ಟಿರುವರು. ಆದರೆ ಅರಬ ರಾಷ್ಟ್ರಗಳು ಇಸ್ರೇಲದ ಮೇಲೆ ಕಿಡಿಗಾರುತ್ತಲೇ ಇವೆ; ಮತ್ತು ಸಂಯುಕ್ತ ರಾಷ್ಟ್ರಸಂಘದ ನಿರೀಕ್ಷಕರು ಇಸ್ರೇಲವೇ ತಪ್ಪು ಮಾಡಿರುವುದೆಂದು ವರದಿ ಕೊಟ್ಟ ಕಾರಣ, ಅವುಗಳಿಗೆ ನೈತಿಕ ಬೆಂಬಲವೂ ದೊರೆತಿದೆ.

THE VIJAYA BANK, LTD., BRAHMAVAR.
ದಿ. ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮನುಷ್ಯರುಗಳು, ನಗಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವದರಿಂದ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರೀ ನೋಟೀಸು ಕೊಟ್ಟಲ್ಲಿಯೂ ಸದ್ರಿ ನಗಗಳನ್ನು ಬಿಡಿಸಿಕೊಂಡು ಹೋಗದಿದ್ದುದರಿಂದ, ಸದ್ರಿಯವರು ಈಡಿಟ್ಟ ನಗಗಳನ್ನು ತಾ. 9—11—53ನೇ ಸೋಮವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ, ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
278/51	ಕೆ. ಮಹಾಬಲ ಶೆಟ್ಟಿ, ಸುಬ್ಬಯ್ಯ ಶೆಟ್ರ ಮಗ, ಚೆರ್ಕಾಡಿ ಗ್ರಾಮ P. O. ಪೇತ್ರಿ.	241—14—0
495/ .	Do	61—4—0
690/ .	Do	87—0—0
604/ .	Do	9[illegible]—11—0
357/ .	ವೆಂಕಟ ಪೂಜಾರಿ, ಸಾಬ ಹೆಂಗ್ಸಿನ ಮಗ, ಕುಮ್ರಗೋಡು ಗ್ರಾಮ P. O. ಬ್ರಹ್ಮಾವರ.	188—3—0
480/52	ಮಹಲಿಂಗ ಆಚಾರಿ, ಹಿರಿಯಣ್ಣ ಆಚಾರಿಯ ಮಗ, ವಾರಂಬಳ್ಳಿ ಗ್ರಾಮ, P. O. ಬ್ರಹ್ಮಾವರ.	56—14—0
648/53	ವಿಠಲ ಶೆಟ್ಟಿ, ಕೃಷ್ಣಪ್ಪ ಶೆಟ್ರ ಸಹೋದರ, ವಂಡಾರ್ ಗ್ರಾಮ, ಹಳ್ಳಿಬೈಲ್ ಹೊಸಮನೆ, P. O. ಸಾಹೇಬರ ಕಟ್ಟೆ,	50—9—0
399/50	ಎಚ್. ಭುಜಂಗ ಶೆಟ್ಟಿ, ಮಟ್ಪಾಡಿ ಕೃಷ್ಣಯ್ಯ ಶೆಟ್ರ ಮಗ, ಹಂದಾಡಿ ಹಳ್ಳಮನೆ, P. O. ಬ್ರಹ್ಮಾವರ.	32—5—0
1054/50	Do	122—0—0
346/51	Do	497—3—0
528/ .	Do	74—0—0
865/ .	Do	110—11—0
860/ .	Do	210—13—0
965/ .	Do	109—1—0
992 .	Do	84—10—0
1050/	Do	295—10—0
250/52	Do	116—0—0
520/52	Do	7[illegible]—10—0

Office of the Bank, Brahmavar. Dated 24-10-53

(Sd) ಬಿ. ಭಾಸ್ಕರ್ ಶೆಟ್ಟಿ, ಏಜಂಟ್.

ಉಡುಪಿ

ಶೋಚನೀಯ ನಿಧನ— ಉಡುಪಿ ಪ್ರಭಾಕರ ಪ್ರೆಸ್ಸಿನ ಮೆನೇಜಿಂಗ್ ಪ್ರೊಪ್ರೈಟರ್ ಶ್ರೀ ಪಿ. ಬಾಲಕೃಷ್ಣ ಪ್ರಭುಗಳ ಧರ್ಮಪತ್ನಿ ಶ್ರೀಮತಿ ರಾಧಾ ಬಾಯಿಯವರು ತಮ್ಮ 40ನೆ ವರ್ಷ ಪ್ರಾಯದಲ್ಲಿ ನಿಧನರಾದರೆಂದು ತುಂಬಾ ವಿಷಾದಿಸುತ್ತೇವೆ.

ಶ್ರೀ. ಇ ಎ. ಪಾಲಿನ್ಸರ ನಿಧನ— ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಸುಮಾರು 40 ವರ್ಷ ಸೇವೆ ಸಲ್ಲಿಸಿ, ಮುಖ್ಯ ಅಧ್ಯಾಪಕರಾಗಿ ನಿವೃತ್ತರಾಗಿದ್ದ ಶ್ರೀ. ಇ. ಎ. ಪಾಲಿನ್ಸ್, ಬಿ. ಎ. ಅವರು ಇದೇ ತಾ 14ರಲ್ಲು 84ನೇ ವಯಸ್ಸಿನಲ್ಲಿ ಮುಂಬಯಿಯಲ್ಲಿ ಮೃತರಾದುದು ವಿಷಾದಕರವಿದೆ.

ವಿವಾಹ ಸಮಾರಂಭ— ಶ್ರೀ ಎ. ಜನಾರ್ಧನ ಅಡ್ಯಂತಾಯರ ನಾದಿನಿ ಶ್ರೀಮತಿ ಶಾರದೆಯವರನ್ನು ಉಡುಪಿ ಬನ್ನಿಲ್ಲಾಯ ಶ್ರೀ ಸಂಜೀವ ರಾಯರು ಇದೇ ತಾ 21ರಲ್ಲು ಶ್ರೀ ಆರ್. ಆರ್. ಕುಂಜೂರರ ಗುಂಡಿಬೈಲು ನಿವಾಸದಲ್ಲಿ ವಿವಾಹವಾದರು.

ಛಾಯಾಚಿತ್ರ ಅನಾವರಣ— ದಿ| ಕಡೆಕಾರು ರಾಜಗೋಪಾಲಕೃಷ್ಣರಾಯರ ಛಾಯಾಚಿತ್ರದ ಅನಾವರಣೋತ್ಸವವು ಸಾಹಿತ್ಯೋತ್ಸವದ ಸಂದರ್ಭದಲ್ಲಿ ತಾ 18ರಂದು ಪೇಜಾವರ ಸ್ವಾಮಿಯ ಅಧ್ಯಕ್ಷತೆಯಲ್ಲಿ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರರಿಂದ ನೆರವೇರಿತು.

'ವಿಜಯ'ಕ್ಕೆ ಸ್ವಾಗತ— ಕಮರ್ಶಿಯಲ್ ಕೋಪರೇಶನ ವತಿಯಿಂದ ಶ್ರೀ. ಯು. ಭಾಸ್ಕರ ಶೆಟ್ಟರ ಸಂಪಾದಕತ್ವದಲ್ಲಿ ವಿಜಯ ದಶಮಿಯಿಂದ ಹೊರಡಲಾರಂಭಿಸಿದ ನೂತನ ವಾರಪತ್ರಿಕೆ "ವಿಜಯ"ಕ್ಕೆ ಹೃತ್ಪೂರ್ವಕ ಸ್ವಾಗತ ಬಯಸುತ್ತೇವೆ.

ಶಿರೂರು [illegible]— ದ. ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಗಡಿನಾಡಾದ ಬೈಂದೂರು ಶಿರೂರಿನಲ್ಲಿ ಮಂಗಳೂರು ಬೈಂದೂರು ಕಾರವಾರ ರಸ್ತೆಯ 79/7ನೆ ಮೈಲಿನಲ್ಲಿರುವ ಹೊಳೆಗೆ ಹೊಸತಾಗಿ ಕಟ್ಟಲಾದ ಸೇತುವೆಯನ್ನು ಇದೇ ತಾ 17ರಲ್ಲು ಸಂಜೆ ಮದ್ರಾಸಿನ ಹೈವೇಸ್ ಚೀಫ್ ಎಂಜಿನಿಯರ್ ಶ್ರೀ ಕೆ. ಕೆ. ನಂಬಿಯಾರರು ಉದ್ಘಾಟಿಸುತ್ತಾ, ಕನ್ಯಾಕುಮಾರಿ—ಮುಂಬಯಿ ಹೆದ್ದಾರಿಯು ದ. ಕ. ಜಿಲ್ಲೆಯಲ್ಲಿ ಹಾದು ಹೋಗುವ ಹೊಳೆಗಳಿಗೆ ಹಾಕಲಾಗುವ ಸೇತುವೆಗಳಲ್ಲಿ ಇದೇ ಪ್ರಥಮವಾಗಿದೆ ಎಂದರು. ಈ ಜಿಲ್ಲೆಯಲ್ಲಿ ರಸ್ತೆಗಳ ನಿರ್ಮಾಣವು ಸರ್ವ ಋತುಗಳನ್ನು ಅವಲಂಬಿಸಿ ಮಾಡಬೇಕಾಗಿದೆ ಎಂದೂ ಸೂಚಿಸಿದರು. ಆರಂಭದಲ್ಲಿ ಡಿಸ್ಟ್ರಿಕ್ ಬೋರ್ಡಿನ ಸೂಪರಿಂಟೆಂಡಿಂಗ್ ಎಂಜಿನಿಯರ್ ಶ್ರೀ ಎಸ್. ಪಿ. ನಾಯಕರು ಸ್ವಾಗತ ಭಾಷಣ ಮಾಡುತ್ತಾ ಈ ಸೇತುವೆ ನಿರ್ಮಾಣಕ್ಕೆ ಒಂದು ಲಕ್ಷದ ನಾಲ್ವತ್ತು ಸಾವಿರ ರೂಪಾಯಿ ವೆಚ್ಚ ಮಾಡಲಾಗಿದೆ ಎಂದು ಹೇಳಿದರು. ಹೈವೇಸ್ ಡಿವಿಜನಲ್ ಎಂಜಿನಿಯರ್ ಶ್ರೀ ಎಮ್. ಎಸ್. ಸ್ವಾಮಿಯವರು ಧನ್ಯವಾದಗಳನ್ನರ್ಪಿಸಿ... [illegible] ಕಂಟ್ರಾಕ್ಟರ್ ಶ್ರೀ ಪಿ. ರಘುನಾಥ ಶೆಟ್ಟರು ಚಹಾ ಸತ್ಕಾರವನ್ನಿತ್ತರು.

ಮಾನ್ಯ ಮಂತ್ರಿ ಸುಬ್ರಹ್ಮಣ್ಯಂರವರ ಜಿಲ್ಲಾ ಸಂಚಾರ

ಮದ್ರಾಸು ಸರಕಾರದ ಆರ್ಥಿಕ, ಆಹಾರ ಹಾಗೂ ವಿದ್ಯಾಮಂತ್ರಿ ಸಿ. ಸುಬ್ರಹ್ಮಣ್ಯಂರವರು ತಾ. 20ನೇ ಸಂಜೆ ಮೈಲ್ ಗಾಡಿಯಲ್ಲಿ ಮಂಗಳೂರಿಗೆ ಚಿತ್ತೈಸಿದರು. ರೈಲು ನಿಲ್ದಾಣದಲ್ಲಿ ನಗರದ ಅಧ್ಯರನೇಕರು ಮಂತ್ರಿಗಳನ್ನು ಸ್ವಾಗತಿಸಿದರು. ಮಂತ್ರಿಗಳು ಬಂಗ್ಲೆಗೆ ತೆರಳಿ ಅನಂತರ ಏಳುವರೆ ಗಂಟೆ ಸುಮಾರಿಗೆ ಕಾಂಗ್ರೆಸ್ ಆಫೀಸಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ತೆಕ್ಕಿಲ ಸೇತುವೆ ಉದ್ಘಾಟನೆ—ಮರುದಿವಸ ಬೆಳಿಗ್ಗೆ ಮಂತ್ರಿಗಳು ಮಂಗಳೂರಿನಿಂದ ಹೊರಟು ತುಂಬೆಯಲ್ಲಿಯ ನೀರು ಸರಬರಾಯಿ ಸ್ಥಳವನ್ನು ಸಂದರ್ಶಿಸಿ ವಿಟ್ಲ ಮಾರ್ಗವಾಗಿ ತೆಕ್ಕಿಲಕ್ಕೆ ಹೋಗಿ ಅಲ್ಲಿಯ ಪಯಸ್ವಿನಿ ಹೊಳೆಗೆ ಹಾಕಿದ ಸಂಕದ ಉದ್ಘಾಟನೆ ಮಾಡುತ್ತಾ ಜನರು ತಮ್ಮ ಕೇಳಿಕೆಗಳನ್ನು ಸಭೆಯಲ್ಲಿ ಅದರೆನನ್ನು ತೋರದೆ ತಾಳ್ಮೆಯಿಂದ ಕೆಲಸಮಾಡಿ ಪ್ರಗತಿ ಹೊಂದಬೇಕೇಬುದನ್ನು ಮರೆಯಬಾರದೆಂದು ಹೇಳಿದರು. ಆರಂಭದಲ್ಲಿ ಹ್ಯಾವೇ ಇಂಜಿನೀಯರ್ ಶ್ರೀ ಸ್ವಾಮಿಯವರು ಸ್ವಾಗತ ಮಾತುಗಳನ್ನಾಡಿದರು. ಬಳಿಕ ಹ್ಯಾವೇ ಚೀಫ್ ಎಂಜಿನಿಯರ್ ಶ್ರೀ ಕೆ. ಕೆ. ನಂಬಿಯಾರರು ಈ ಸೇತುವೆಯ ಮತ್ತು ದ. ಕ. ಜಿಲ್ಲೆಯ ರಸ್ತೆ ಸೇತುವೆಗಳ ವಿಚಾರವಾಗಿ ಒಂದು ಹೇಳಿಕೆಯನ್ನಿತ್ತು ಕನ್ಯಾಕುಮಾರಿಯಿಂದ ಬೊಂಬಾಯಿ ವರೆಗೆ ಹೋಗಲಿರುವ ಈ ರಸ್ತೆಯು ರಾಷ್ಟ್ರೀಯ ವರಿಷ್ಠ ಮಾರ್ಗವಾಗಲಿದೆ, ಈ ತೆಕ್ಕಿಲ ಸಂಕವನ್ನು ನಿರ್ಮಿಸಲು ಹನ್ನೊಂದು ಲಕ್ಷ ರೂಪಾಯಿ ವೆಚ್ಚ ತಗಲಿದೆ ಎಂದರು. ಹ್ಯಾವೇ ಸುಪರಿಂಟೆಂಡಿಂಗ್ ಎಂಜಿನಿಯರ್ ಶ್ರೀ ಕೆ. ಸಿ ನಾಯಕರು ಧನ್ಯವಾದಗಳನ್ನರ್ಪಿಸಿದರು.

ಕೆನರಾ ಚೇಂಬರ್ ಒಫ್ ಕೊಮರ್ಸ್ ಕಚೇರಿಯಲ್ಲಿ -

ಮಂತ್ರಿಗಳು ಆಗಮಿಸಿದಾಗ ಶ್ರೀ ಪಿ ಉಮಾನಾಥ ರಾಯರು ಅವರನ್ನು ಸ್ವಾಗತಿಸಿ ಭಿನ್ನವತ್ತಳೆಯನ್ನೋದಿ ಒಪ್ಪಿಸಿದರು. ಮಂತ್ರಿಗಳು ಉತ್ತರವೀಯುತ್ತಾ ಮಾರಾಟಕರದ ಸುಧಾರಣೆಯ ವಿಚಾರವಾಗಿ ರಾಜಾಜಿಯವರೇ ಈಗ ಪರ್ಯಾಲೋಚನೆ ಮಾಡುತ್ತಿದ್ದಾರೆಂದೂ, ಅದರೆ ಈಗಿನಷ್ಟೇ ಉತ್ಪತ್ತಿಯಾದರೆ ಅದನ್ನು ಏಕಮುಖ ಮಾರಾಟಕರವಾಗಿ ಬದಲಾಯಿಸಲು ಆಕ್ಷೇಪವಿಲ್ಲವೆಂದೂ ತಿಳಿಸಿದರು. ಎಂಜಿನಿಯರಿಂಗ್ ಕಾಲೇಜಿನಿಂದ ಈಗಾಗಲೇ ಹೊರಬರುವ ಒಂದು ಸಾವಿರ ಮಂದಿಯಲ್ಲಿ ಇನ್ನೂರ ಐವತ್ತು ಮಂದಿ ಮಾತ್ರ ಕೆಲಸ ಪಡೆಯುತ್ತಿದ್ದಾರೆ ಆದುದರಿಂದ ಕಾಲೇಜು ಖಂಡಿತವಾಗಿ ಆಗುವಂತಿಲ್ಲ. ಪಶ್ಚಿಮ ಕರಾವಳಿಯ ರಸ್ತೆಯು ಇಂದು ಮುಖ್ಯವಾಗಿರುವುದರಿಂದ ಇತರ ಕೆಲಸಗಳು ನಿಧಾನವಾಗಿ ಆಗುವುದು ಎಂದು ತಿಳಿಸಿದರು. ಶ್ರೀ ಜಿ ಎನ್. ಟಿಯಟೋರವರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮಂತ್ರಿಗಳು ಸೈಂಟ್ ಎಲೋಸಿಯಸ್ ಕಾಲೇಜಿಗೆ ಸಂದರ್ಶನವಿತ್ತು ಮುನಿಸಿಪಲ್ ಆಫೀಸಿಗೆ ಬಂದರು.

ನಗರ ಸಭೆಯ ಬಿನ್ನವತ್ತಳೆ— ಮುನಿಸಿಪಲ್ ಚೇರ್‌ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ ಉಪಾಧ್ಯಕ್ಷ ಶ್ರೀ ಬಿ. ಎಸ್. ಭಾಸ್ಕರ ಶೈಗಳೂ ಮಂತ್ರಿಗಳನ್ನು ಸ್ವಾಗತಿಸಿದರು. ನಂತರ ಒಪ್ಪಿಸಿದ ಬಿನ್ನವತ್ತಳೆಯಲ್ಲಿ 1895 ರಿಂದ ಸರಕಾರದ ಮುಂದೆ ಮಂಡಿಸುತ್ತಾ ಬಂದ ನೀರಿನ ಸರಬರಾಯಿಯ ಕೆಲಸವೂ ಇನ್ನು ಆಗದಿರುವುದು ಶೋಚನೀಯ ಈಗಾಗಲೇ ಹದಿಮೂರು ಲಕ್ಷ ರೂಪಾಯಿ ಖರ್ಚಾಗಿದೆ. ಬರೇ 20,000 ಅಡಿ ಪೈಪುಗಳು ಬಂದಿವೆ ಮುಂದೆ 10,000 ಅಡಿ ಪೈಪುಗಳ ಬರುವಂತೆಯೂ ಇನ್ನಿತರ ವ್ಯವಸ್ಥೆ ಇದಷ್ಟು ಬೇಗನೆ ಆಗುವಂತೆಯೂ ಮಾಡಬೇಕು. ರಸ್ತೆಗಳಿಗಾಗಿ ಗ್ರಾಂಟು ಕೊಡಬೇಕು ಇತ್ಯಾದಿ ಕೇಳಿಕೆಗಳಿದ್ದುವು ಅಂದು ಸಂಜೆ ಮಳೆ ಬಂದುದರಿಂದ ಸಾರ್ವಜನಿಕ ಸಭೆ ಮತ್ತು ಮಂತ್ರಿಗಳ ಭಾಷಣ ಜರಗಲಿಲ್ಲ.

ಪಂಚನ ಬೆಟ್ಟು ರಸ್ತೆಯ ಉದ್ಘಾಟನೆ

ತಾ. 22ರಲ್ಲಿ ಬೆಳಿಗ್ಗೆ ಮಂತ್ರಿಗಳು ಮಂಗಳೂರಿನಿಂದ ಹೊರಟು ಉಡುಪಿ ತಾಲೂಕಿನ ಬೊಮ್ಮರಬೆಟ್ಟು ಗ್ರಾಮಕ್ಕೆ ಬಂದು ಅಲ್ಲಿಯ ಪಂಚನಬೆಟ್ಟು ಕೇಂದ್ರದ ಜನರೇ ಸ್ವಶ್ರಮದಿಂದ ನಿರ್ಮಿಸಿದ ಒಂಭತ್ತೂವರೆ ಮೈಲು ಹೊಸ ರಸ್ತೆಯನ್ನು ಉದ್ಘಾಟಿಸಿದರು. ಪಂಚಾಯತ ಬೋರ್ಡ ಪರವಾಗಿ ಅಧ್ಯಕ್ಷ ಶ್ರೀ. ಎ. ಜಗನ್ನಾಥ ಹೆಗ್ಡೇರೂ ಒರಿಯಡ್ಕ ಎಜ್ಯುಕೇಶನಲ್ ಸೊಸೈಟಿಯ ಪರವಾಗಿ ಕಾರ್ಯದರ್ಶಿ ಡಾ| ಬಿ. ಚಂದಯ್ಯ ಹೆಗ್ಡೇರೂ ಮಾನಪತ್ರಗಳನ್ನು ಅರ್ಪಿಸಿದರು. ಶ್ರೀ. ಟಿ. ರಮಾನಾಥ ಪೈಗಳು ಸ್ವಾಗತ ಭಾಷಣವನ್ನೂ ಶ್ರೀ. ಜೆ. ಎಸ್. ಕೋಲ್ಯಾರರು ರಸ್ತೆ ನಿರ್ಮಾಣದ ವರದಿಯನ್ನೂ ಓದಿದರು. ಗ್ರಾಮಸ್ಥರು ಇತರರ ಸಹಾಯ ನೋಡದೆ ತಾವೇ ಕಾಯಕಷ್ಟದಿಂದ ಈ ತೆರನಾದ ಗ್ರಾಮೋದ್ಧಾರ ಕಾರ್ಯದಲ್ಲಿ ಮುನ್ನಡೆದುದು ಅಭಿನಂದನೀಯವಿದೆ ಎಂದು ಹೇಳಿ ಬೊಮ್ಮರಬೆಟ್ಟು ಗ್ರಾಮಸ್ಥರ ಉದ್ಯಮ ಸಾಹಸವನ್ನು ಶ್ಲಾಘಿಸಿ ಮಂತ್ರಿಗಳು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ. ಟಿ ಎ. ಪೈ, ಎಮ್. ಎಲ್. ಎ. ಅವರು ಮಂತ್ರಿಗಳ ಇಂಗ್ಲಿಷ ಭಾಷಣದ ಸಾರವನ್ನು ಕನ್ನಡದಲ್ಲಿ ತಿಳಿಸಿ ಹಳ್ಳಿಗರ ಸ್ಫೂರ್ತಿಯನ್ನು ಕೊಂಡಾಡಿದರು. ಉದ್ಘಾಟಿಸಲಾದ ಹೊಸ ರಸ್ತೆಯ ಮಧ್ಯದಲ್ಲಿ ಹಾದುಹೋಗುವ ಹಳ್ಳಕ್ಕೆ ಮೋರಿಗಳನ್ನು ಕಟ್ಟಿಸುವಂತೆ ಜಿಲ್ಲಾ ಕಲೆಕ್ಟರರಿಗೆ ಮಂತ್ರಿಗಳು ಸೂಚಿಸಯಿತ್ತರು.

ಎಮ್. ಜಿ. ಎಮ್ ಕಾಲೇಜಿನಲ್ಲಿ

ಅಲ್ಲಿಂದ ಮಂತ್ರಿಗಳು ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿಗೆ ಬಂದು ವಿದ್ಯಾರ್ಥಿ ಸಂಘದ ಸಭೆಯಲ್ಲಿ ಭಾಷಣವಿತ್ತರು ಡಾ| ಟಿ ಎಂ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಡಾ| ಎಸ್. ಆರ್. ಪೈಗಳು ಬಿನ್ನವತ್ತಳೆಯ ನ್ನೊಪ್ಪಿಸಿದರು. ಮಂತ್ರಿಗಳು ಉತ್ತರಿಸುತ್ತಾ ಎಂಡೋಮೆಂಟ್ ರೇವು ಕೊಡುವುದು ಕಷ್ಟವಾದರೂ ಕಾಲೇಜಿನ ಭದ್ರತೆಗಾಗಿ ಅಗತ್ಯವೆಂದರಲ್ಲದೆ ಈ ಕಾಲೇಜಿನ ಪ್ರಗತಿಯನ್ನೂ ಕಾಲೇಜನ್ನೂ ಸ್ಥಾಪಿಸಲು ಕಾರಣೀಭೂತರಾದವರನ್ನೂ ಅಭಿನಂದಿಸಿ ಇಂತಹ ಸಾಹಸವು ಅನುಕರಣೀಯವೆಂದರು. ಸಭಾಧ್ಯಕ್ಷತೆ ವಹಿಸಿದ ಶ್ರೀ ಕೊಟ್ಟಾರ್ ಪದ್ಮನಾಭ ಪೈಗಳು ವಂದನೆಗಳನ್ನರ್ಪಿಸಿದರು.

ನಂತರ ಮಂತ್ರಿಗಳು ಸ್ಥಳೀಯ ಸಂಸ್ಕೃತ ಕಾಲೇಜನ್ನು ಸಂದರ್ಶಿಸಿದರು. ಸಂಸ್ಕೃತ ಶಾಲೆಗಳಲ್ಲಿ ಅರ್ಧ ಸಂಬಳ ವಸೂಲು ಮಾಡಬೇಕೆಂದು ಹೊರಡಿಸಲಾದ ಆಜ್ಞೆಯನ್ನು ಪುನರಾಲೋಚಿಸಬೇಕಾಗಿ ಮಂತ್ರಿಗಳನ್ನು ಕೇಳಿಕೊಳ್ಳಲಾಯಿತು. ಅನಂತರ ಮಂತ್ರಿಗಳು ಕಾಂಗ್ರೆಸಿನ ಸಂಪರ್ಕ ಶಾಖೆಯನ್ನು ಉದ್ಘಾಟಿಸಿ, ಪರಿಯಾಳ ಸಮಾಜದ ಮನವಿಯನ್ನು ಸ್ವೀಕರಿಸಿ, ಕ್ರಿಶ್ಚಿಯನ್ ಹೈಸ್ಕೂಲಿಗೆ ಬಂದು ಟ್ರಸ್ಟಿನವರು ಕೊಟ್ಟ ಹೊಸ ರೇಡಿಯೋ ಸೆಟ್ಟನ್ನು ಚಾಲು ಮಾಡಿದರು. ಬೆನಿಫಿಟ್ ಟ್ರಸ್ಟಿನ ಆಜೀವ ಸದಸ್ಯರ ಕೆತ್ತನೆ ಕಲ್ಲನ್ನು ಉದ್ಘಾಟಿಸಿದರು. ಆರಂಭದಲ್ಲಿ ಹೆಡ್ಮಾಸ್ತರ್ ಶ್ರೀ ಎಸ್. ಎನ್. ಮತಾಯಸರು ಸ್ವಾಗತ ಪತ್ರವನ್ನೋದಿದರು.

ಮಧ್ಯಾಹ್ನ ಮಂತ್ರಿಗಳು ಸ್ಥಳೀಯ ಸಹಕಾರಿ ನೇಕಾರ ಸಂಘವನ್ನು ಸಂದರ್ಶಿಸಿ ಅವರ ಮನವಿ ಸ್ವೀಕರಿಸಿದರು.

ವಿದ್ಯುದ್ದೀಪಗಳ ಉದ್ಘಾಟನೆ

ಮಂತ್ರಿಗಳು ಉದ್ಯಾವರ ಮತ್ತು ಕಲ್ಯಾಣಪುರಗಳಲ್ಲಿ ಹೊಸದಾಗಿ ಹಾಕಲ್ಪಟ್ಟ ವಿದ್ಯುದ್ದೀಪಗಳನ್ನು ಉದ್ಘಾಟಿಸಿ ಅಲ್ಲಿಯ ಪಂಚಾಯತ ಬೋರ್ಡುಗಳ ಮಾನಪತ್ರಗಳನ್ನು ಅಧ್ಯಕ್ಷರುಗಳಾದ ಶ್ರೀ ಯು. ಭಾಸ್ಕರ ಶೆಟ್ಟಿ ಮತ್ತು ಶ್ರೀ ಶೇಷಗಿರಿ ಮಲ್ಯರಿಂದ ಸ್ವೀಕರಿಸಿದರು ಉದ್ಯಾವರ ಹೊಳೆಯ ಸಂಕ ಯಥಾವಕಾಶದಲ್ಲಾಗುವುದೆಂದೂ ಹೊಳೆಗಳ ಕಡವು ಸುಂಕದ ದರವನ್ನು ಕಡಿಮೆ ಮಾಡುವ ಕುರಿತು ಪರಿಶೀಲಿಸುವೆನೆಂದೂ ಮಂತ್ರಿಗಳು ಹೇಳಿದರು. ತನ್ಮಧ್ಯೆ ಉಡುಪಿ ಬಾರ್ ಎಸೋಸಿಯೇಶನಿಗೆ ಭೇಟಿಯಿತ್ತು ಡಿ| ಮುನ್ಸಿಫ್ ಜನಾಬ್ ಅಬ್ದುಲ್ ರಹೀ ಆಹಮ್ಮದಾ ಅಧ್ಯಕ್ಷ ಶ್ರೀ ಕೆ.ಜಿ. ಬಲ್ಲಾಳ್ ಮೊದಲಾದವರಿಂದ ಸ್ವಾಗತಿಸಲ್ಪಟ್ಟು ಚಹಾ ಸತ್ಕಾರ ಪಡೆದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ

ಸಂಜೆ ಮಂತ್ರಿಗಳು ಮಣಿಪಾಲಕ್ಕೆ ಆಗಮಿಸಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜ ಫಿಜಿಯೋಲಜಿ ಬ್ಲಾಕಿನ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಡಾ| ಟಿ. ಮಾಧವ ಪೈಗಳು ಈ ಕಾಲೇಜು ಸ್ಥಾಪಿಸುವ ಕಾರ್ಯದಲ್ಲಿ ಉಂಟಾದ ಕಷ್ಟ ನಿಷ್ಠುರಗಳನ್ನು ಪ್ರಸ್ತಾಪಿಸಿ ಸರಕಾರದ ಬಲವನ್ನು ಅಪೇಕ್ಷಿಸಿದರು. ಮಂತ್ರಿಗಳು ಭಾಷಣ ಮಾಡುತ್ತಾ ಈ ಕಾಲೇಜು ಸ್ಥಾಪನೆ ಯೋಜನೆಯು ದುಸ್ಸಾಧ್ಯ ಸಾಹಸವೆಂದು ಮೊದಲು ನನಗೆ ಅಭಿಪ್ರಾಯವಿದ್ದರೂ ಇಂದು ಸ್ವತಃ ಇಲ್ಲಿಗೆ ಬಂದು ವಿದ್ಯಮಾನಗಳನ್ನು ಪರಿಶೀಲಿಸುವಾಗ ಈ ಕಾಲೇಜು ಭದ್ರವಾಗಿ ಶಾಶ್ವತವಾಗಿ ಬಾಳಿ ಬರುವುದರಲ್ಲಿ ಸಂಶಯವಿಲ್ಲವೆಂದರು ಈ ಕಾಲೇಜಿಗೆ ಸರಕಾರದ ನೆರವು ಶಕ್ಯವಿದ್ದಷ್ಟು ದೊರಕುವುದೆಂದೂ ತಿಳಿಸಿದರು. ನಂತರ ಉಡುಪಿಗೆ ಬಂದು ಮಹಿಳಾ ಸಮಾಜವನ್ನು ತೆರೆದು ವಿನೋದಾವಳಿಗಳನ್ನು ನೋಡಿ ಆನಂದಪಟ್ಟರು.

ಸಾರ್ವಜನಿಕ ಸಭೆ

ನಂತರ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಟಿ ಎ. ಪೈಗಳ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಮಂತ್ರಿಗಳಿಗೆ ಸ್ವಾಗತವಿತ್ತು ಪುಷ್ಪಹಾರವನ್ನರ್ಪಿಸಿದರು. ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ನರಹರಿ ಕಾಮತರು ಬಿನ್ನವತ್ತಳೆಯನ್ನೊಪ್ಪಿಸಿದರು. ಭದ್ರ ಕಾಂಗ್ರೆಸ್ ಸರಕಾರದ ಕುರಿತು ಮಂತ್ರಿಗಳು ಮಾತನಾಡಿ ಜನತೆಯ ಸಹಕಾರವನ್ನು ಕೋರಿದರು. ಶ್ರೀ ಆರ್ ಆರ್. ಕುಂಜೂರರು ಧನ್ಯವಾದಗಳನ್ನರ್ಪಿಸಿದರು ನಂತರ ಶ್ರೀ ಕೃಷ್ಣ ಮಠ ಸಂದರ್ಶಿಸಿದರು.

ಸ್ಥಳೀಯ ಬ್ಯಾಂಕು ಮತ್ತು ವಿಮಾ ಕಂಪೆನಿಗಳು ಮುಕುಂದ ನಿವಾಸದಲ್ಲಿ ಏರ್ಪಡಿಸಿದ ಭೋಜನ ಸಮಾರಂಭ ಮುಗಿದ ಮೇಲೆ ರಾತ್ರಿ ಎಸ್. ಆರ್. ಥಿಯೇಟರಿನಲ್ಲಿ ಗೋದಾವರಿ ನೆರೆಹಾವಳಿ ಪೀಡಿತರ ಸಹಾಯಾರ್ಥವಾಗಿ ಸಜ್ಜುಗೊಳಿಸಲಾದ ಬೆನಿಫಿಟ್ ವಿನೋದಾವಳಿಗಳ ಅಧ್ಯಕ್ಷತೆ ವಹಿಸಿದರು ವಿವಿಧ ವಿನೋದಾವಳಿಗಳಲ್ಲಿ ಕಾಲೇಜ್ ವಿದ್ಯಾರ್ಥಿನಿಯರೂ ಮಂಗಳೂರಿನ ಕು| ನಳಿನಿ ರಾವ್‌ರವರೂ ಭಾಗವಹಿಸಿದ್ದರು ನಗರ ಸಭೆಯ ಮಾನಪತ್ರವನ್ನು ಸಾಕಷ್ಟು ಮುಂದಾಗಿ ತಿಳಿಸದ್ದರಿಂದ, ಮಂತ್ರಿಗಳು ಸ್ವೀಕರಿಸಲೊಪ್ಪಲಿಲ್ಲವೆನ್ನಲಾಗಿದೆ.

ಕಾರ್ಕಳದಲ್ಲಿ

ತಾ. 23ರಲ್ಲು ಬೆಳಿಗ್ಗೆ ಮಂತ್ರಿಗಳು ಉಡುಪಿಯಿಂದ ಕಾರ್ಕಳಕ್ಕೆ ಬಂದು ಅಲ್ಲಿಯ ಬೋರ್ಡ ಹ್ಯಾಸ್ಕೂಲಿನಲ್ಲಿ ಸೇರಿದ ಉಪಾಧ್ಯಾಯ ಉಪಾಧ್ಯಾಯನಿಯರ ಸಭೆಯಲ್ಲಿ ಹೊಸ ಪ್ರಾಥಮಿಕ ವಿದ್ಯಾ ಯೋಜನೆ ಕುರಿತು ಭಾಷಣವಿತ್ತರು. ಶ್ರೀ. ಎಸ್. ನರ್ಸಪ್ಪಯ್ಯ ಎಮ್ ಎಲ್. ಸಿ. ಯವರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ. ಎಚ್. ವಿ. ಶೆಣೈಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ. ಎ. ಸೀತಾರಾಮರಾಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಮಂಗಳೂರಿಗೆ ತೆರಳಿದರು.

ಗವರ್ನಮೆಂಟ್ ಕಾಲೇಜು ದಿನಾಚರಣೆಯು

ಇದೇ ತಾ 23ರಲ್ಲು ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಮ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಕೆ. ವಸಂತ ಪೈಗಳು ಸ್ವಾಗತಿಸಿದರು. ಪ್ರಿನ್ಸಿಪಾಲ್ ಕುಮಾರಿ ಪಿ. ಸೀತಮ್ಮಾಳ್, ಅವರು ಕೆಲವು ಕೇಳಿಕೆಗಳುಳ್ಳ ಕಾಲೇಜು ವರದಿಯನ್ನೋದಿದರು. ಬಹುಮಾನ ವಿತರಣೆ, ಹಳೆ ವಿದ್ಯಾರ್ಥಿ ಶ್ರೀ ಪಿ. ರಾಮಚಂದ್ರ ರಾಯರಿಂದ ಸ್ವಸ್ತಿವಾಚನ, ಕುಮಾರಿ ಎಮ್. ಶಾಂತಾ ನಾಯಕರಿಂದ ಉತ್ತರ ನಡೆಯಿತು.

ಮಂತ್ರಿಗಳು ಭಾಷಣ ಮಾಡುತ್ತಾ "ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಬೇರೆ ಸ್ಥಳದಲ್ಲಿ ಕಟ್ಟಡ ಕಟ್ಟುವ ವ್ಯವಸ್ಥೆ ಆಗಿದೆ. ಈ ಕಾಲೇಜು ಕಟ್ಟಡವು ಸುಂದರವಾಗಿದ್ದು ಚಾರಿತ್ರಿಕ ಹಿನ್ನಲೆಯುಳ್ಳದಾಗಿದೆ. ಆದುದರಿಂದ ಕಾಲೇಜನ್ನು ಬೇರೆ ಸ್ಥಳಕ್ಕೆ ವರ್ಗಾಯಿಸುವ ಅಗತ್ಯವಿಲ್ಲವೆಂದರು. ಶಿಕ್ಷಣ ವ್ಯವಸ್ಥೆಯ ಕುರಿತು ಮಾತನಾಡುತ್ತ ದೇಶದ ಶಿಕ್ಷಣ ಪ್ರಗತಿಗೆ ಸರಕಾರವೆ ಮಾತ್ರವಲ್ಲ, ಜನತೆಯೂ ಕೂಡ ಸಹಕರಿಸಬೇಕಾಗಿದೆ ಎಂದು ಹೇಳಿದರು. ಶ್ರೀ ಕೆ. ಕಮಲಾಕ್ಷನವರು ಧನ್ಯವಾದಗಳನ್ನರ್ಪಿಸಿದರು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 175, 1953.

ಕೊರಗ ಶೆಟ್ಟಿ —ವಾದಿ

ಮತ್ತು

ದಾವೀದ್ ಕರ್ಕಡ —ಪ್ರತಿವಾದಿ

ಯಿವರೊಳಗೆ

ಮೇಲ್ಕಂಡ ವ್ಯಾಜ್ಯವು ವಾದಿಯು ಪ್ರತಿವಾದಿ ಮೇಲೆ ಮೂಲಗೇಣಿ ಗೇಣಿ ಬಾಕಿ ಆಸ್ತಿ ಸ್ವಾಧೀನತೆಗೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯ ಪ್ರತಿವಾದಿ ಕೊಟ್ಟ ಬಗ್ಗೆ ತಾರೀಕು 10—11—53ಕ್ಕೆ ಯಿಟ್ಟಿರುವದ್ರಿಂದ ಆ ದಿವ್ಸ ಸದ್ರಿ ಪ್ರತಿವಾದಿಯು ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padamanabha Rao.

Vakil for Plaintiff

Dat,e 27-10-53 Udipi.

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ಡಿವಿಜನ್ ರೆವಿನ್ಯು ಡಿವಿಜನಲ್ ಆಫೀಸರವರ ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲ್ಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂಡದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು ಇದೇ 1953ನೇ ಇಸವಿ ನವಂಬ್ರ 20ನೇ ತಾರೀಕಿನಿಂದ ದಶಂಬ್ರ ತಿಂಗಳ 6ನೇ ತಾರೀಕಿನ ವರೆಗೆ ಜರಗುವುದು ಅಂದರೆ ಸಂತೆಯು ಕಾರ್ತಿಕ ಪೂರ್ಣಿಮೆ ದಿವಸ ಪ್ರಾರಂಭವಾಗಿ ಕಾರ್ತಿಕ ಅಮವಾಸ್ಯೆ ದಿವಸದ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ವರೆಗೆ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ ನಾಲ್ಕಾಣೆ ಮೇರೆಗೆ ಫೀಸು ವಸೂಲು ಮಾಡಲಾಗುತ್ತದೆ. ಒಂದು ತಿಂಗಳ ಕರುಗಳನ್ನು ಸದ್ರಿ ಫೀಸುಗಳಿಂದ ವಿರಹಿತ ಮಾಡಲಾಗಿದೆ. ಸಂದರ್ಭನುಸಾರ ಅವಶ್ಯ ಬಿದ್ದಲ್ಲಿ ಸದ್ರಿ ಫೀಸನ್ನು ಏರಿಸಲೂ ಬಹುದು ಯಾ ಇನ್ನಿತರ ಫೀಸನ್ನು ಹೊರಿಸಲೂ ಬಹುದು.

ಹರಂಬೆ ರೆವಿನ್ಯು ಡಿವಿಜನಲ್ ಆಫೀಸರರು ಅವಶ್ಯವೆಂದು ತೋರಿದ ಯಾವತ್ತು ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿನಾಯತಿ ಪಡಿಸಲೂ ಬಹುದು.

ಬಿ ಎನ್. ಹೆಗ್ಡೆ

ರೆವಿನ್ಯು ಡಿವಿಜನಲ್ ಆಫೀಸರರು.

ಪುತ್ತೂರು 11-10-53

ಮಂಗಳೂರು

ದ. ಕ ಜಿಲ್ಲೆಯ 83 ಎಕ್ರೆ ಭೂದಾನ—ದ. ಕ. ಜಿಲ್ಲಾ ಭೂದಾನ ಸಮಿತಿ ಸಭೆಯೊಂದು ಕಳೆದ ತಾ 18ರಲ್ಲಿ ಜರಗಿತು. ಜಿಲ್ಲೆಯ ಆಯಾಯಾ ತಾಲೂಕುಗಳಲ್ಲಿ ಭೂದಾನ ಸಮಿತಿಗಳನ್ನು ರಚಿಸಿ ಅವುಗಳ ಮೂಲಕ ಭೂದಾನ ಚಳವಳಿಯನ್ನು ಮುಂದೊತ್ತುವುದು, ಜಿಲ್ಲೆಯಲ್ಲಿ ಭೂಮಾಲಿಕರು ತಮ್ಮ ಒಕ್ಕಲುಗಳಿಗೆ ಈಗ ಪಾಲಗೇಣಿಗೆ ಭೂಮಿ ಕೊಟ್ಟಿರುವುದನ್ನು ಮೂಲಗೇಣಿಗೆ ಕೊಡುವಂತೆ ಪ್ರಯತ್ನಿಸಿ ಆ ಮೂಲಕ ಭೂಮಿ ಸುಧಾರಣೆಗೆ ಅನುಕೂಲ ವಾತಾವರಣವನ್ನುಂಟು ಮಾಡುವುದು ಇತ್ಯಾದಿ ನಿರ್ಣಯಗಳಾದುವು. ದ. ಕ. ಜಿಲ್ಲೆಯಲ್ಲಿ ಈ ಕೆಳಗಿನ ಮಹನೀಯರಿಂದ 83 ಎಕ್ರೆ ಭೂಮಿಯನ್ನು ದಾನವಾಗಿ ಕೊಡುವ ವಾಗ್ದಾನಗಳಾಗಿವೆ: ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆ 25 ಎಕ್ರೆ, ಶ್ರೀ ನೆಲ್ಸನ್ ಪಿಂಟೋ ಮಂಗಳೂರು 10 ಎಕ್ರೆ, ಶ್ರೀ ದಾಕ್ಟ. ಪ್ರಭು ಮಂಗಳೂರು 10 ಎಕ್ರೆ, ಶ್ರೀ ಮಹಮ್ಮದ್ ಹಸನ್ ಕಲ್ಯಾಡ 10 ಎಕ್ರೆ, ಶ್ರೀ ಎಸ್. ಯು ರಾಮಚಂದ್ರ ರಾವ್ 10 ಎಕ್ರೆ; ಕುಂದಾಪುರ ತಾಲೂಕಿನಲ್ಲಿ ಶ್ರೀ ಗಣಪತಿ ಪಿರಲ ಶೆಟ್ಟಿ 10 ಎಕ್ರೆ, ಶ್ರೀ ಮಂಜಯ್ಯ ಶೆಟ್ಟಿ 2 ಎಕ್ರೆ, ಶಿವರಾಮ ಶೆಟ್ಟಿ 5 ಎಕ್ರೆ, ವೆಂಕಟ್ರಮಣಯ್ಯ 1 ಎಕ್ರೆ ಮಾತ್ರವಲ್ಲದೆ ಶ್ರೀ ಪಿ. ನಾಗಯ್ಯ ಶೆಟ್ಟಿಯು ತನಗೆ ಸಿಕ್ಕುವ ಆದಾಯದಿಂದ ಪ್ರತಿ ವರ್ಷ 2 ಮುಡಿ ಅಕ್ಕಿ ಕೊಡುವುದಾಗಿ ವಾಗ್ದಾನ ಮಾಡಿರುವರು.

ಪುಣ್ಯ ತಿಥಿಯಾಚರಣೆ—ಬಾಲಸಾಹಿತ್ಯದ ಪಿತಾಮಹ ದಿ. ಪಂಜೆ ಮಂಗೇಶರಾಯರ ಪುಣ್ಯ ತಿಥಿಯು ಇದೇ ತಾ 25ರಲ್ಲು ಸಂಜೆ ವರುಣ ಕಲಾವೃಂದದ ಆಶ್ರಯದಲ್ಲಿ ಕೊಡಿಯಾಲ ಬೈಲಿನ ರಿಯೋನ ಪಿಕಲ್ ಲಾಜಿನಲ್ಲಿ ಆಚರಿಸಲ್ಪಟ್ಟಿತು. ಶ್ರೀ ಕಡಂಗೋಡ್ಲು ಶಂಕರ ಭಟ್ಟರು ಸಭಾಧ್ಯಕ್ಷರಾಗಿದ್ದರು. ಶ್ರೀ ಆ ಕ ಸಂಕಪ್ಪ ರೈಗಳು ಭಾಷಣವಿತ್ತರು.

ಪೋಸ್ಟು ಮಾಸ್ಟರ್ ಜನರಲ್—ಶ್ರೀ ಸೇವರನ್ನು ತಾ 21ರಲ್ಲು ಮದ್ರಾಸು ಸಂಸ್ಥಾನದ ಪೋಸ್ಟು ಮಾಸ್ಟರ್ ಜನರಲ್ ಕಾರ್ಯಾಲಯಕ್ಕೆ ಬರುವರು ...ಸಿ ಒಂದು ಮನ್ನಪತ್ರವನ್ನಿತ್ತು ಅ ಮೂಲಕ ಮಂಗಳೂರು ಹಾಗೂ ಜಿಲ್ಲೆಯ ಇತರ ಕೇಂದ್ರಗಳ ರೀತಿ, ಅಂಚೆ ಕಛೇರಿಗಳ ಆವಶ್ಯಕತೆಯ ಕೆಲವು ಕಾರ್ಯಗಳನ್ನು ತಿಳಿಸಿದರು.

—

ಮೂಲ್ಕಿ—ಸ್ಥಳೀಯ ಪಂಚಾಯತು ಬೋರ್ಡು ಪ್ರೌಢ ಶಿಕ್ಷಣ ಶಾಲೆಯ ವತಿಯಿಂದ ... ಮಂಗಳೂರು ರೇಂಜಿನ ಶಾಲಾ ವಿದ್ಯಾಭಿವೃದ್ಧಿ ಇನ್ಸ್ಪೆಕ್ಟರ್ ... ನಾಯಕ ... ಅಧ್ಯಕ್ಷತೆಯಲ್ಲಿ ಜರಗಿತು. ... ಶ್ರೀ ... ಗಳವರ ಬಿ ಭೋಜ ರಾವ್, ಪಿ, ... ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(೬ನೇ ಪುಟದಿಂದ ಮುಂದುವರಿದುದು)

ನ್ನು ಕಳೆದುಕೊಳ್ಳುತ್ತಿದೆ, ಮತ್ತು ಜನಾಂಗವನ್ನು ನಿರ್ಮಿಸುವ ಶಕ್ತಿ ಇದ್ದರೂ ಅದನ್ನು ಉಪಯೋಗಿಸಲಾರದೆ ಕುಳಿತಿವೆ ಸರಕಾರ ಈ ಕಡೆ ತ್ವರಿತದಲ್ಲಿಯೇ ಗಮನ ನೀಡುವ ಅಗತ್ಯ ಎಷ್ಟು ಒತ್ತಾಯದಿಂದ ಹೇಳಿದರೂ ಕಡಿಮೆಯೇ ಸೈ. ಇದರಂತೆ ಅಧ್ಯಾಪಕರು ಬೋಧನೆಗೆ ವರ್ತನೆಗೆ ಮನಸ್ಸು ಮಾಡದಂತೆ ಎಚ್ಚರಿಸುವುದೂ ಅಗತ್ಯ--ಹಳ್ಳಿಗಳಲ್ಲಿ ಇಂದು ಶಿಕ್ಷಣವನ್ನು ಪೇಟೆಯ ವಾತಾವರಣಕ್ಕೆ ಒಪ್ಪುವಂತೆ ರೂಪಿಸಲಾಗುತ್ತದೆ. ಇದನ್ನು ಅಕ್ಷಮ್ಯ ಅಪರಾಧವೆಂದು ಹೇಳಬೇಕು. ನಾವಿನ್ನೂ ಮನ್ನ ಮಹಾರಾಣೀ ವಿಕ್ಟೋರಿಯಾ ರಾಣಿ ಕಾಲದ ವಿದ್ಯಾ ಪದ್ಧತಿಯಲ್ಲೇ ಮುಳುಗಿರುವಂತಿದೆ. ಹಳ್ಳಿಯ ಕುರಿತು ಶ್ರದ್ಧೆ ಮತ್ತು ಆಸ್ಥೆಗಳನ್ನು ಬೆಳೆಸಲು ನಾವೂ ನಮ್ಮ ಅಧ್ಯಾಪಕರೂ ತಪ್ಪಿದ್ದೇವೆ. ಹಳ್ಳಿಯ ಪುನಾರಚನೆಗೆ ಸಾಧ್ಯವಾಗುವಂತೆ ಮತ್ತು ನಮ್ಮ ಆರ್ಥಿಕ ಏಳಿಗೆ ಭದ್ರವಾಗುವಂತೆ ರಾಜಾಜಿಯವರು ಇದ್ದ ಪರಿಸ್ಥಿತಿಯನ್ನು ಕ್ರಾಂತಿಕರ ಪ್ರಯೋಗಕ್ಕೆ ಆಳವಡಿಸಿಕೊಂಡರು. ಇದನ್ನು ಎಲ್ಲರೂ ಮೆಚ್ಚಿ ಅವರಿಸುವುದು ಹತ್ತೈವತ್ತು ವರ್ಷಗಳ ಮುಂದಿನ ಭವ್ಯ ಭವಿಷ್ಯತ್ತಿಗೆ ಕಾರಣವಾಗುತ್ತದೆ ಕೇವಲ ಆರ್ಥಿಕ ಸ್ವಾವಲಂಬನವೇ ಶಿಕ್ಷಣದ ಗುರಿಯಲ್ಲ ಪ್ರಜಾ ಪ್ರಭುತ್ವದಲ್ಲಿ ಉತ್ತಮ ನಾಗರಿಕನ ಹೊಣೆಯನ್ನು ವ್ಯಕ್ತಿ ನಿರ್ವಹಿಸುವಂತೆ ಏನು ತರಬೇತಿ ನೀಡಬೇಕು ಈ ದೃಷ್ಟಿಯಿಂದ ನಮ್ಮ ರಾಷ್ಟ್ರೀಯ ಶಿಕ್ಷಣದಲ್ಲಿ ಕೆಳಗಿನ ವೈಶಿಷ್ಟ್ಯಗಳಿರುವುದು ಅಗತ್ಯ. (೧) ಮಾನಸಿಕ ಹಾಗೂ ದೈಹಿಕ ಶಕ್ತಿ ತುಂಬಬೇಕು, ಬಿವರಿಳಿಸಿ ದುಡಿದು ಉತ್ತಮ ಬಾಳ್ವೆ ಮಾಡುವುದರಲ್ಲಿ ಉತ್ಸಾಹ ಹುಟ್ಟಬೇಕು. (೨) ಭೌತಿಕ ಸುಖಕ್ಕಿಂತಲೂ ಮೇಲ್ಮಟ್ಟದ ಸುಖದ ಅನುಭವವನ್ನು ಮಾಡಿಕೊಡಬೇಕು; ಸಮಾಜದ ಏಳಿಗೆ ಮತ್ತು ಸಾಮಾಜಿಕರೊಡನೆ ಸೌಹಾರ್ದ ಸಂಬಂಧ ವ್ಯಕ್ತಿಯ ಉದ್ದೇಶವಾಗಬೇಕು. (೩) ಕೊರತೆಯನ್ನು ಅನುಭವಿಸದ ಜೆನ್ನಾದ ಆರ್ಥಿಕ ಸೌಖ್ಯವನ್ನು ಶಿಕ್ಷಣ ವ್ಯಕ್ತಿಗೆ ಒದಗಿಸಿಕೊಡಬೇಕು. (೪) ಒಳ್ಳೆಯದಕ್ಕಾಗಿ ಹೋರಾಡಲು ಮತ್ತು ಉತ್ಸಾಹದಿಂದ ಕಾರ್ಯಪ್ರವೃತ್ತವಾಗಲು ಆತ್ಮ ಚೈತನ್ಯವನ್ನು ಶಿಕ್ಷಣ ದಯಪಾಲಿಸಬೇಕು. ಎಲ್ಲ ನೇತಾರರೂ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ಶಿಕ್ಷಣ ಪದ್ಧತಿಯೊಂದನ್ನು ಎಷ್ಟು ಬೇಗನೇ ಜಾರಿಗೆ ತಂದರೋ ಅಷ್ಟು ಕ್ಷೇಮ.

ಶ್ರೀ ಕೆ ವಿಠಲ ಶೆಣೈಯವರು ಮೂಲ್ಕಿ ಸರಕಾರಿ ಹ್ಯಾಸ್ಪಿಟಲಿನ ಹೆಡ್ಮಾಸ್ತರರಾಗಿ ನೇಮಕ ಹೊಂದಿರುವರು.

ಕುಂಬಳೆ—ಮದ್ರಾಸಿನ ವಿದ್ಯಾ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ತಾ 21ರಂದು ಮಧ್ಯಾಹ್ನ ಹಾಗೂ ... ಬಡಾಜೆ ಶಾಲೆಯ ಆವರಣದ ವನ್ನು ತೆರೆದರು

ಬೈಂದೂರು—ಇಲ್ಲಿಯ ಸಾರ್ವಜನಿಕ ಪತ್ತೆಯಿಂದ, ಸಂತೆ ಮಾರ್ಕೆಟಿನ ಅವ್ಯವಸ್ಥಿತಿಯನ್ನು ... ಬಗ್ಗೆ ಸಂಬಂಧಪಟ್ಟವರು ನಿಗಾ ಕೊಡಬೇಕೆಂದು ಅಲ್ಲಿಯ ಪಟ್ಟಣಿಗರೊಬ್ಬರು ಬರೆಯುತ್ತಾರೆ

ಕುಂದಾಪುರ—ಕುಂದಾಪುರ ಮತದಾರ ಪಟ್ಟಿಯ 1953ನೆ ಇಸವಿಯ ಮತದಾರರ ಪಟ್ಟಿಯು ಇದೇ ತಾ 30ರಲ್ಲಿ ಪ್ರಕಟಿಸಲಾಗಿದೆಯೆಂದು ಕೋರ್ಟ್ ತಹಸಿಲ್ದಾರರು ತಿಳಿಸುತ್ತಾರೆ.

ಕಿದಿಯೂರು—ಸ್ಥಳೀಯ ... ಶಾಲೆಯಲ್ಲಿ ಇದೇ ತಾ 15ರಲ್ಲು ಶಾರದಾಪೂಜೆ, ಪೆಸ್ತವರ ಸಭೆ ಇತ್ಯಾದಿ ಕಾರ್ಯಕ್ರಮಗಳು ಶಾಲಾ ಡಿಸ್ಟ್ರಿಕ್ಟ ಇನ್ಸ್ಪೆಕ್ಟರ್ ಶ್ರೀ ಕೆ ಚಂದ್ರಶೇಖರ ರಾವ್ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿದವು

ಮೂಡಬಿದ್ರೆ—ಸರಸ್ವತಿ ಸೇವಾ ಸಂಘದ ಆಶ್ರಯದಲ್ಲಿ ಸಾಹಿತ್ಯೋತ್ಸವವು ಪೂಜಾ ಸಾಂಗವಾಗಿ ನಡೆಯಿತು. ... ಗಳವರ ಎ. ... ರೈ, ಪಿ. ಎಸ್. ... ರಾವ್, ... ಶಂಕರ ನಾರಾಯಣ ಶಾಸ್ತ್ರಿ, ... ರಾವ್, ಪಿ, ... ಮೊದಲಾದವರ ... ಕಾರ್ಯಕ್ರಮಗಳು ... ನಡೆದುವು.

ಹಂಗಾರಕಟ್ಟೆ - ಸ್ಥಳೀಯ ಕರ್ನಾಟಕ ... ಶಾಲೆಯ ... ಹಂಗಾರಕಟ್ಟೆ ... ಹಾಯ್ಸ್ಕೂಲ್ ... ಇದೇ ತಾ 18ರಲ್ಲಿ ... ಶ್ರೀ ಕೆ ... ಅಧ್ಯಕ್ಷತೆಯಲ್ಲಿ ... ಕಾರ್ಯಕ್ರಮ ... ಸಾಂಗವಾಗಿ ಜರಗಿದವು

ಸೂಡೆ—ಕಟಪಾಡಿ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದವರಿಂದ ಈ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಸುಬ್ರಹ್ಮಣ್ಯ ... ಶಾಲಾ ... ದ ತಾ 11ರಂದು ... ಶ್ರೀ ಕೆ ... ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ... ರಾವ್ ನಾಯಕರು ಸ್ವಾಗತ ಭಾಷಣವನ್ನು ಮಾಡಿದರು. ... ಶ್ರೀಯುತ ... ಶ್ರೀ ... ಮ್ಯಾನೇಜರ್. ಜಗನ್ನಾಥ ಶೆಟ್ಟಿ, ಜಯರಾಮ ಶೆಟ್ಟಿ, ಎಸ್ ಎ. ಹೆಗ್ಡೆ ಮತ್ತು ಕೆ. ಆರ್. ಶೆಟ್ಟಿ ಯವರಿಂದ ಭಾಷಣಗಳಾದುವು ಅಧ್ಯಕ್ಷರು ... ವಿದ್ಯಾ ಪ್ರಚಾರದ ಆವಶ್ಯಕತೆಯನ್ನು ... ಈ ಸಂಸ್ಥೆ ... ಯನ್ನು ... ಶಾಲೆಗಳ ... ಅಭಿವೃದ್ಧಿಯನ್ನು ಕೋರಿದರು ... ಶ್ರೀ ... ಶೆಟ್ಟರು ಆಭಾರ ಸೂಚಿಸಿದರು.

—

ಶ್ರೇಷ್ಠ ದರ್ಜೆ ಗಡಿಯಾರ

ಪ್ರತಿಯೊಂದಕ್ಕೂ 5 ವರ್ಷ ಗ್ಯಾರಂಟಿ. ಪ್ರತಿ ಆರ್ಡರಿಗೆ ... ಒಂದು ಫೌಂಟನ್ ಪೆನ್ನು ಒಂದು ಸಿಗರೇಟ್ ಲೈಟರ್ ಉಚಿತ!

ನಂ. 152 (ಸೈಜ್ 7 ... ")

5 ಜ್ಯೂ. ರೋಲ್ಡ್‌ಗೋಲ್ಡ್ ರೂ. 30.

15 ಜ್ಯೂ. ರೋಲ್ಡ್ ಗೋಲ್ಡ್ ರೂ. 40.



(ಹೆಂಗಸರಿಗೆ ಮತ್ತು ಗಂಡಸರಿಗೆ)

ನಂ 131 (ಸೈಜ್ 6 ... ")

... ರೂ 20

... ರೂ. 28

15 ಜ್ಯೂ. ರೋಲ್ಡ್‌ಗೋಲ್ಡ್ ರೂ 35



ಅಲಾರಾಂ ಗಡಿಯಾರ

... ರೂ. 15

... ರೂ. 19

ರೇಡಿಯಂ ಡೈಯಲ್ ರೂ. 2 ಪ್ರತ್ಯೇಕ

ಪಾಕೆಟ್ ವಾಚ್ ರೂ. 10 ಉತ್ತಮ ರೂ. 12 ... ಅಂಚೆವೆಚ್ಚ ಬೇರೆ ಆರ್ಡರ ... ಉಚಿತ.

Calcutta Watch Co - Sec 268
Post Box No. 12203, CALCUTTA-5

ಧರ್ಮಾರ್ಥ—ಮುಕ್ತಟ

ಒಂದು ಕಾರ್ಡ ಬರೆದರೆ ... ಬೇಡಿದ ... ಉಚಿತವಾಗಿ ...

Diamond Commercial Chambers (N. U.)
Bhandari Street,
BOMBAY—3

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ... ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 16 } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ... 1000ಕ್ಕೆ

(ಪ್ರಚಲಿತ ... ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯವನ್ನು ಪಡೆಯಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂದ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಲಕ್ಷಾಂತರ ಜನರು ಗುಣಹೊಂದಿದ್ದಾರೆ.

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಔಷಧಿಗಳ ರಾಜ, ... ಕೆಮ್ಮು, ದಮ್ಮು, ... ಮತ್ತು ... ವಿದ್ಯಾರ್ಥಿಗಳಿಗೆ ... ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ... ಸಕಲ ... ಸರ್ವರಿಗೂ ಅನುಕೂಲವಾದ್ದು.

ಅಲ್ಲ ದಿನದ ... ರೂ. 3 ... ದಿನದ ... ರೂ 1-8-0. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಮತ್ತು ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಲ್ಲಿ ಕೇಳಿರಿ.

ಕವಿಭೂಷಣ ಕೆ ಪಿ ವೆಂಕಪ್ಪ ಶೆಟ್ಟಿ ರಿಂದ ರಚಿಸಲ್ಪಟ್ಟು ಅಂತರಂಗ ಕಾರ್ಯಾಲಯದಿಂದ ಪ್ರಕಟಿಸಲ್ಪಟ್ಟ

ಭಾರತದ ಗುರುಕುಲ

(ಯಕ್ಷಗಾನ)

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಬೆಲೆ: 0 6 0

ನವಭಾರತ ಪುಸ್ತಕ ಭಂಡಾರ, ಉಡುಪಿ

ಸಮಾಜ ವಿಕಾಸ ಯೋಜನೆಯ ಕಾರ್ಯ ಫಲ

(೨ನೇ ಪುಟದಿಂದ ಮುಂದರಿದುದು)

ಭತ್ತವು ಅಧಿಕ ಉತ್ಪಾದನೆ ಹೊಂದಿತು. ೧೩೩ ಪ್ರಾಥಮಿಕ ಶಾಲೆಗಳನ್ನೂ ೨ ಮೂಲ ಶಿಕ್ಷಣದ ಸಂಸ್ಥೆಗಳನ್ನೂ ಎರಡು ಹುಡುಗಿಯರ ಶಾಲೆಯನ್ನೂ ನಿರ್ಮಿಸಲಾಗಿದೆ. ಅವಕ್ಕೆ ಹಳ್ಳಿಗರಿಂದ ವಸೂಲಾದ ಸಹಾಯದ ಮೊತ್ತ ೧೬೨೦೦ ರೂಪಾಯಿ.

ವಿಕಾಸ ಮಂಡಲಗಳು

ರಾಜಸ್ಥಾನದಲ್ಲಿ ೮೫ ವಿಕಾಸ ಮಂಡಲಗಳು ಕೆಲಸ ಮಾಡುತ್ತಿವೆಯಲ್ಲದೆ ೨೦೧ ಸಹಕಾರೀ ಸಂಘಗಳೂ ಇವೆ. ಕೃಷಿ, ಜಾನುವಾರು ಸಂರಕ್ಷಣೆ, ನೀರಾವರಿ, ಆರೋಗ್ಯ, ಸಾಮಾಜಿಕ ಶಿಕ್ಷಣ ಮತ್ತು ಸಾರಿಗೆ ಸಂಪರ್ಕಗಳ ಅಭಿವೃದ್ಧಿಯನ್ನೂ ಸುಧಾರಣೆಯನ್ನೂ ಇವು ಉದ್ದೇಶವಾಗಿಟ್ಟುಕೊಂಡಿವೆ. ಇಲ್ಲಿ ೩೬ ಮೈಲು ಉದ್ದದ ಉತ್ತಮ ರಸ್ತೆ ಮತ್ತು ೧೭ ಮೈಲು ಉದ್ದದ ಸಾಮಾನ್ಯರಸ್ತೆಯನ್ನು ಜನರು ನಿರ್ಮಿಸಿರುವರು ೬೫೦೦೦ ರೂಪಾಯಿ ಬೆಲೆಯ ಶ್ರಮದಾನವಲ್ಲದೆ ೨೪೦೦೦ ರೂಪಾಯಿ ಬೆಲೆಬಾಳುವ ಕಟ್ಟೋಣಗಳನ್ನೂ ದಾನ ನೀಡಿರುವರು. ಮೇಲಾಗಿ ೮೬೦೦೦ ರೂಪಾಯಿ ಸಹಾಯಧನ ಕೊಟ್ಟಿರುವರು

ಆಂಧ್ರದ ಗೋದಾವರೀ ಕೇಂದ್ರದಲ್ಲಿ ತುಲ್ಯಭಾಗಾ ನದಿಯು ರಾಮಚಂದ್ರಪುರಂ ಮತ್ತು ಕಾಕಿನಾಡ ತಾಲೂಕುಗಳಲ್ಲಿ ಅಪಾರ ಜಲವನ್ನು ಕೊಂಡೊಯ್ಯುತ್ತಿರುವುದರಿಂದ, ಅದನ್ನು ಬಳಸಲು ಏತಗಳನ್ನು ಹೊಸತಾಗಿ ನಿರ್ಮಿಸಲಾಯಿತು. ೩೫೦೦೦ ರೂಪಾಯಿ ಭಂಡವಾಳದ ಮೇಲೆ ಒಂದು ಸಂಘವನ್ನು ಮಾಯಾಪರಂನಲ್ಲಿ ಸ್ಥಾಪಿಸಿಕೊಂಡಿರುವರು. ವಿದ್ಯುಚ್ಛಕ್ತಿಯ ಬಲದಿಂದ ನಡೆಯುವ ಪಂಪು ಸೆಟ್ಟುಗಳನ್ನು ಈ ಸಂಘ ಒದಗಿಸಿರುವುದು. ಪರಿಣಾಮವಾಗಿ ಒಂದು ಸಾವಿರ ಎಕ್ರೆ ಪ್ರದೇಶದಲ್ಲಿ ಎರಡನೇ ಭತ್ತದ ಬೆಳೆಯನ್ನು ತೆಗೆಯಲು ಸಾಧ್ಯವಾಗುತ್ತದೆ. ಈ ನದಿಯ ನೀರನ್ನು ಕೆಳಪ್ರದೇಶದಲ್ಲೂ ಇದೇ ರೀತಿ ಉಪಯೋಗಿಸಲು ಸಿದ್ಧತೆ ನಡೆದಿದೆ.

ಮದ್ರಾಸಿನ ಮಲಂಪುಜ ಕೇಂದ್ರದಲ್ಲಿ ೨೦ ಮೈಲು ಉದ್ದದ ಸಾಮಾನ್ಯ ರಸ್ತೆಯಾಗಿದೆ. ಹತ್ತು ಸಾವಿರ ರೂಪಾಯಿ ವೆಚ್ಚದಿಂದ ಒಂದು ಸೇತುವೆಯು ನಿರ್ಮಾಣಗೊಂಡಿದೆ ೨೦೦೦೦ ರೂಪಾಯಿ ವೆಚ್ಚದಿಂದ ಒಂದು ಆರೋಗ್ಯ ಕೇಂದ್ರವನ್ನು ರಚಿಸಿರುವರು ೨೫ ಹಳ್ಳಿಗಳಲ್ಲಿ ಕೆಲಸ ಮಾಡುವ ಆರು ಪ್ರಸೂತಿಕಾ ಕೇಂದ್ರಗಳನ್ನು ತೆರೆಯಲಾಗಿದೆ.

ಬಿಹಾರದಲ್ಲಿ ೧೯೬ ರಾತ್ರಿಶಾಲೆಗಳನ್ನು ವಯಸ್ಕರಿಗಾಗಿ ತೆರೆದಿರುವರು ಹೆಚ್ಚಿನ ಕಡೆಗಳಲ್ಲಿ ಹಳ್ಳಿಗರು ಸ್ವತಃ ದುಡಿದು ಶಾಲಾ ಕಟ್ಟೋಣವನ್ನೂ ಸಾರ್ವಜನಿಕ ವಾಚನಾಲಯವನ್ನೂ ನಿರ್ಮಿಸಿರುವರು.

ಮುಂಬಯಿಯ ಮೆಹಸನಾ ಕೇಂದ್ರದಲ್ಲಿ ಮೂರು ಗ್ರಾಮಗಳಲ್ಲಿ ಒಂದೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ಹೊರಗಿನ ಯಾವ ಸಹಾಯವನ್ನೂ ಅಪೇಕ್ಷಿಸದೆ ಹೈಸ್ಕೂಲುಗಳನ್ನು ಜನರು ನಿರ್ಮಾಣಗೈಯುತಿದ್ದಾರೆ. ವಿಜಾಪುರದಲ್ಲಿ ಸ್ಥಳೀಯ ಆಸ್ಪತ್ರೆಯ ವಿಸ್ತರಣಕ್ಕೋಸ್ಕರ ೬೨೦೦೦ ರೂಪಾಯಿಗಳ ದೇಣಿಗೆಯನ್ನು ಜನರು ಕೊಟ್ಟಿರುವರು. ಒಂದು ಪ್ರಸೂತಿಕಾ ಕೇಂದ್ರವನ್ನು ತೆರೆಯಲು ಪ್ರೋತ್ಸಾಹರವಲ್ಲ ೩೫೦೦೦ ರೂಪಾಯಿಗಳನ್ನು ಕೂಡಿಸಲಾಯಿತು

ಪೆಪ್ಸುದಲ್ಲಿ ೫೩ ಸಹ ಶಿಕ್ಷಣದ ಪ್ರಾಥಮಿಕ ಶಾಲೆಗಳನ್ನು ತೆರೆದು, ಇಂಥ ಸಂಸ್ಥೆಗಳ ಸಂಖ್ಯೆಯನ್ನು ೧೫೭ಕ್ಕೆ ಏರಿಸಲಾಯಿತು. ಈಗ ಸುಮಾರು ೬೪೭ ಚದರ ಮೈಲಿಯೊಳಗಿನ ಪ್ರದೇಶದಲ್ಲಿ ಯಾವುದೇ ಮಗುವಿಗೆ ಶಾಲೆಗೆ ಹೋಗಲು ಒಂದು ಮೈಲಿಗಿಂತ ಹೆಚ್ಚು ನಡೆಯುವ ಅಗತ್ಯವಿಲ್ಲ ೩೫ ಶಾಲೆಗಳಿಗೆ ಹಳ್ಳಿಗರೇ ಸ್ಥಳವನ್ನೂ ಕಟ್ಟೋಣವನ್ನೂ ಒದಗಿಸಿ ಕೊಟ್ಟಿರುವರು. ಈ ರೀತಿ ಹಳ್ಳಿಯ ಜನರು ವಿದ್ಯಾಭ್ಯಾಸದ ಪ್ರಚಾರಕ್ಕೋಸ್ಕರ ನೀಡಿದ ಸಹಾಯವು ರೂ. ೧೪೧೩೦೦ ಆಗುತ್ತದೆ.

ಪ್ರದರ್ಶನಗಳ ವ್ಯವಸ್ಥೆ

ತಿರುಕೊಚ್ಚಿಯಲ್ಲಿ ಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲಕ ವ್ಯವಸಾಯದ ನೂತನ ತಂತ್ರವನ್ನು ಪ್ರಚಾರ ಮಾಡಿದರು. ತಿರುವನಂತಪುರದಲ್ಲಿರುವ ವಿಶ್ವವಿದ್ಯಾಲಯದ ಸಂಶೋಧನಾ ಕೇಂದ್ರದಲ್ಲಿ ಅಭಿವೃದ್ಧಿಗೊಳಿಸಿದ ಟಪಿಯೋಕಾದ ಬೀಜಗಳನ್ನು ಬಳಸುವ ಅನೇಕ ನಮೂನೆಗಳನ್ನು ಗ್ರಾಮಸ್ಥರಿಗೆ ತೋರಿಸಲಾಯಿತು. ಇದರಂತೆ ಬಗೆಬಗೆಯ ಗೊಬ್ಬರಗಳ ಉಪಯೋಗ ಕ್ರಮದಲ್ಲೂ ಆವಶ್ಯಕ ಮಾಹಿತಿಯು ನೀಡಲಾಯಿತು. ಕರಾವಳಿಯಲ್ಲಿರುವ ಬೆಸ್ತರಿಗೋಸ್ಕರ ಮನೆಗಳನ್ನು ಕಟ್ಟುವ ಕೆಲಸವೂ ಇಲ್ಲಿ ಬೇರೆ ಚಟುವಟಿಕೆಯೊಂದಿಗೆ ನಡೆದಿದೆ.

ಮೈಸೂರಿನ ಸೊರಬ—ಶಿಕಾರಿಪುರ ಪ್ರದೇಶದಲ್ಲಿ ೧೩ ಕೆರೆಗಳನ್ನೂ ನಾಲ್ಕು ಮೈಲು ಉದ್ದದ ಕಾಲುವೆಗಳನ್ನೂ ೭೫೦೦೦ ರೂಪಾಯಿಗಳ ಅಂದಾಜಿನ ನಿರ್ಮಾಣಗೈದರು. ಇದರಿಂದ ೧೯೫ ಎಕ್ರೆ ಜಮೀನಿಗೆ ನೀರಿನ ಪೂರೈಕೆಯಾಗುತ್ತದೆ.

ಅಜಮೀರದಲ್ಲಿ ೮೦೦೦ ಟನ್‌ಗಳಷ್ಟು ಕಂಪೋಸ್ಟು ಗೊಬ್ಬರವನ್ನು ಕೃಷಿಕರು ತಯಾರಿಸಿ ೨೦೦೦ ಎ[ಕ್ರೆ] ಪ್ರದೇಶಕ್ಕೆ ಉಪಯೋಗಿಸಿದರು ಇದ[ರಿಂ]ದ ೪೦೦೦ ಮಣ ಹೆಚ್ಚು ಆಹಾರಧಾ[ನ್ಯ] ಉತ್ಪಾದನೆಯಾಯಿತು.

ಭೋಪಾಳದಲ್ಲಿ ಯುವಕರ ಕೇಂದ್ರಗ[ಳು] ತೆರೆಯಲ್ಪಟ್ಟು ಅವುಗಳಲ್ಲಿ ವಿದ್ಯಾರ್ಥಿ[ಗ]ಳೂ ಉಪಾಧ್ಯಾಯರೂ ಶಾಲಾ ಕಟ್ಟೋಣಗಳ ನಿರ್ಮಾಣ ಮುಂತಾದವುಗಳಲ್ಲಿ [ಸ]ಹಕರಿಸುವ ಚಟುವಟಿಕೆಗಳನ್ನು ತೆ[ರೆ]ರಿಸಿದರು.

ಕೊಡಗಿನಲ್ಲಿ ನೀರಾವರಿಯ ಅನೇಕ [ಕೆ]ಲಸಗಳು ಪೂರ್ಣಗೊಂಡವು. ಸೇತು[ವೆ] ಹಾಗೂ ಮಾರ್ಗಗಳ ರಚನೆಯೂ ಆಗಿ[ದೆ] ಜನರಿಂದ ದೊರೆತ ಶ್ರಮದಾನದ ಮೊ[ತ್ತ] ೧೪೬ ಸಾವಿರ ರೂಪಾಯಿ.

ದೆಹಲಿಯಲ್ಲಿ ಮಾಡಿದ ಮುಖ್ಯ ಕೆ[ಲ]ಸವೆಂದರೆ ಅನೇಕದಶಕಗಳಿಂದ ಮ[ಣ್ಣು] ಮುಚ್ಚಿ ಹೋಗಿದ್ದ ನೀರು ಹರಿಯ[ವ] ತೋಡುಗಳ ಜೀರ್ಣೋದ್ಧಾರ ಇದ[ಕ್ಕೆ] ೩೦ ಹಳ್ಳಿಗಳ ೧೫ ಸಾವಿರ ಜನರು ಸಹ[ಕ]ರಿಸಿ ದುಡಿದರು ಪರಿಣಾಮವಾಗಿ ತೋ[ಡಿ]ನಲ್ಲಿ ನೀರು ತುಂಬಿ ನೆರೆ ಬಂದು ಹಾ[ಳಾ]ಗುತಿದ್ದ ಎರಡು ಸಾವಿರ ಎಕ್ರೆ ಭೂಮಿ[ಯ]ಲ್ಲಿ ಇನ್ನು ಮುಂದೆ ಚೆನ್ನಾದ ಬೆಳೆಯಾ[ಗ]ುವುದು

ಕಚ್ಛದಲ್ಲಿಯೂ ನೀರಾವರಿಯ [ಕೆ]ಲಸ ಹೆಚ್ಚು ನಡೆದಿವೆ ನಾಲ್ಕು ಮೈ[ಲು] ಉದ್ದದ ಎರಡು ಕಾಲುವೆಗಳ[ನ್ನೂ] ೯೦ ಬಾವಿಗಳಲ್ಲದೆ ೬೦೦ ಎಕ್ರೆ ಜಮೀನಿ[ಗೆ] ನೀರೊದಗಿಸುವ ೧೨ ಸಾಮಾನ್ಯ ಕೆರೆ[ಗಳ] ಜೀರ್ಣೋದ್ಧಾರವನ್ನು ಮಾಡಲಾಗಿದೆ. [ಇದರ]ಲ್ಲಿ ಜನರಿಂದ ದೊರೆತ ನೆರವು ೨೩೫೦೦ ರೂಪಾಯಿಗಳಷ್ಟಾಗುವುದು

ಮಣಿಪುರದಲ್ಲಿಯೂ ೨ ಲಕ್ಷ ರೂಪಾಯಿಗಳಷ್ಟು ಜನತಾ ಸಹಕಾರ ದೊ[ರೆತಿ]ದೆ. ಇವೆಲ್ಲ ಸ್ಥೂಲವಾದ ಕೆಲವೇ ವಿವರಗಳು. ನಿಜವಾದ ಕೆಲಸ ಇದರ ನಾಲ್ಕೈದು ಪಟ್ಟಾದರೂ ನಡೆದಿದೆ. ಎತ್ತಿ ಹೇಳಲ್ಪಟ್ಟ ಈ ವಿವರ ಭಾರತದ ಪುನರುದ್ಧಾರ ಕಾರ್ಯದಲ್ಲಿ ಜನಸಾಮಾನ್ಯರು ತೋರು[ವ] ಆಸ್ಥೆ ಮತ್ತು ಅವರಲ್ಲಿ ಉಂಟಾಗಿರುವ ಆತ್ಮವಿಶ್ವಾಸದ ದ್ಯೋತಕವೆಂದು ಭಾವಿಸಿದರೆ ತಪ್ಪಾಗದು.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ತ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು—ವ—ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವ್ಪದರಿಂದ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ನವಂಬರ ತಿಂಗಳ ತಾ 7ನೇ ಶನಿವಾರ ಅಪರಾಹ್ನ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನ. ನೋಟೀಸು ಕೊಡದೇನೇ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು ತಿಳಿದಿರಲಿ.

ಸಾಲದ ಜಂಜ್ರಾ ಸಂಖ್ಯೆ.	ಹೆಸರು ಮತ್ತು ವಿಳಾಸ.	ಮೊಬಲಗು ರೂ. ಆ. ಪೈ.
611/51	ಶ್ರೀ. ರಾಮ ಹೊಳೆಕಡಿನ ಮನೆ ಪಂಕ್ತಿಯ ಮಗ, ಹೊಸಾಡು ಬೈಂದೂರು	18—3—0
671 51	ಶ್ರೀ ಲಕ್ಷ್ಮಣ ಸೇಟ್, ದುಗ್ಗಪ್ಪ ಸೇಟರ ಮಗ, ಚನಿವಾರ ಬೈಂದೂರು.	35—0—0
720/51	ಶ್ರೀ ನಾರಾಯಣ ಗಾಣಿಗ, ತಿಮ್ಮಪ್ಪ ಗಾಣಿಗನ ಮಗ, ಬಂಕೇಶ್ವರ ಬೈಂದೂರು.	6—9—0
891 51	ಶ್ರೀ. ನರಸಿಂಹ ಶೆಟ್ಟಿ, ಮಂಜಯ್ಯ ಶೆಟ್ಟರ ಅಳಿಯ, ಹೊಸಮನೆ ಶಿರೂರು	48—15—0
972 51	ಶ್ರೀ ಗೋವಿಂದ, ಚಣ್ಣಮ್ಮನ ಮಗ, ತಾರಾಪತಿ ಪಡುವರಿ.	17—12—0
1072/51	ಶ್ರೀ. D. K. ಸುಬ್ರಾಯ ನ್ಯಾಕ್, ರಾಮಯ್ಯ ನ್ಯಾಕರ ಮಗ, ಕೋಟೆಬಾಗಿಲು ಪಡುವರಿ.	34—3—0
117/51	ಶ್ರೀ. M. P. ವೆಂಕಟ್ರಮಣ ಸೇರುಗಾರ, ಮದ್ದೋಡಿ ಗಣಪಯ್ಯ ಸೇರುಗಾರರ ಮಗ, ಮಯ್ಯಾಡಿ.	71—3—0
1277/51	ಜ. ಬಸ್ರೂರು ಕಾಧೀರ್ ಸಾಹೇಬ್, ಮಹಮ್ಮದ್ ಸಾಹೇಬರ ಮಗ, ಗೋಳಿಹೊಳೆ ಯೇಳಜಿತ್.	113—5—0
666/51	ಶ್ರೀ ಕಂಚಿಕ್ಕೋಡು ತಿಮ್ಮಪ್ಪ ಸೇರುಗಾರ, ರಾಮ್ಮ ಸೇರುಗಾರರ ಮಗ, ಮಯ್ಯಾಡಿ.	30—10—0
1311/51	ಶ್ರೀ. ಕೃಷ್ಣ ದೇವಾಡಿಗ, ಸುಕ್ರ ದೇವಾಡಿಗನ ಅಳಿಯ, ಬಿಸ್ಕೂರು ಪಡುವರಿ.	23—0—0
1352/51	ಶ್ರೀ. ಮದ್ದೋಡಿ ರಾಮಕೃಷ್ಣ ಸೇರುಗಾರ, ಹನುಮಂತ ಸೇರುಗಾರರ ಮಗ, ಮಯ್ಯಾಡಿ.	33—11—0
1333 51	ಶ್ರೀ. D. K. ರಾಮಯ್ಯ ನ್ಯಾಕ್, ನಾಗಪ್ಪ ನ್ಯಾಕರ ಮಗ, ಕೋಟೆಬಾಗಿಲು ಪಡುವರಿ.	69—3—0
13 53	ಶ್ರೀ --do--	63—9—0
89/52	ಶ್ರೀ. ಹೋಬಳಿದಾರ ಮಂಜುನಾಥ ಸೇರುಗಾರ, ನಾರಾಯಣ ಸೇರುಗಾರರ ಮಗ, ನ್ಯಾಹಾರಿ ಬೈಂದೂರು.	21—13—0
273/52	ಶ್ರೀ. ಆಲ್ವಾಡಿ ನಡುಮನೆ ಮುದೂರ ಬಿಲ್ಲವ, ದುರ್ಗ ಮಗ, ಕಾಲ್ತೋಡುಗ್ರಾಮ ಕಾಲ್ತೋಡು.	29—2—0
209/52	ಶ್ರೀ. ಮದ್ದೋಡಿ ಸುಬ್ರಾಯ ಸೇರುಗಾರ, ಕೃಷ್ಣಪ್ಪ ಸೇರುಗಾರರ ಮಗ, ಮಯ್ಯಾಡಿ	25—5—0
1111/50	ಶ್ರೀ ಯು. ವೀರಣ್ಣ ಶೆಟ್ಟಿ, ಕುಪ್ಪಯ್ಯ ಶೆಟ್ಟರ ಅಳಿಯ, ಕುಪ್ಪಯ್ಯ ಶೆಟ್ಟರ ಮನೆ, ಉಪ್ಪುಂದ.	77—1—0
149/52	ಶ್ರೀ. ಪಂಚ್ಯಾತ್ ಬೋರ್ಡ್ ಪೇದೆ ನಾರಾಯಣ, ಸುಬ್ಬನ ಅಳಿಯ, ಯಡ್ತರೆ ಗ್ರಾಮ ಬೈಂದೂರು.	119—11—0

ಬೈಂದೂರು. 23-10-53

ಎಚ್. ರಾಜೀವ ಶೆಟ್ಟಿ, ಏಜಂಟ್

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 2[4] ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD

Moolky, S. K.

"ಮಾಲ್ಥೂಸನು ಮತ್ತು ಮಿತಸಂತತಿ"

ಲೇಖಕರು:- ಸಿ. ಯಚ್. ಶೆಟ್ಟಿ.

ಭೂಮಿಯಲ್ಲಿ ಜನ್ಮವೆತ್ತಿದ ಸಕಲ ಜೀವಾತ್ಮಗಳಲ್ಲಿ ಕಾಣುವ ಎರಡು ಪ್ರಾಮುಖ್ಯ ಸ್ವಾಭಾವಿಕ ಗುಣಗಳೆಂದರೆ ಆಹಾರದ ಅಪೇಕ್ಷೆ ಮತ್ತು ಕಾಮಾತುರ ಅಥವಾ ಹಸಿವೆ ಮತ್ತು ಪ್ರೀತಿ. ಇವುಗಳೊಳಗೆ ನಿಕಟ ಸಂಬಂಧವಿದೆ. ಆಹಾರ ಸರಿಯಿಲ್ಲದಿದ್ದರೆ ಕ್ರೀಡಾ ವಿಲಾಸ ನಡಿಸಲು ಕಷ್ಟವಾಗುವುದು. ಇನ್ನೊಂದು ದೃಷ್ಟಿಯಿಂದ ನೋಡುವಾಗ ಇವುಗಳೊಳಗೆ ಒಂದು ತರದ ವಿರೋಧವು ಸಹಾ ಕಂಡು ಬರುವದು. ಕಾಮಾತುರವನ್ನೇ ತೃಪ್ತಿಪಡಿಸುತ್ತಾ ಹೋದರೆ ಸಂತತಿ ವೃದ್ಧಿಯಾಗಿ ಆಹಾರದ ಅಭಾವದಿಂದ ಕಷ್ಟಕ್ಕೀಡಾಗುವೆವು. ಹಾಗೆಂದು ವಿಷಯಾಸಕ್ತಿಯನ್ನು ನಿಲ್ಲಿಸಿದರೆ ಕ್ರಮೇಣ ಕುಲದ ಆತ್ಮಹತ್ಯ (Race suicide) ಮಾಡಿದಂತಾಗುವುದು. ಈ ರೀತಿ ಹರ್ಬರ್ಟ ಸ್ಪೆನ್ಸರರು ಹೇಳಿದಂತೆ ವ್ಯಕ್ತಿತ್ವವನ್ನು ಉಳಿಸುವ ಮತ್ತು ಕುಲದ ವೃದ್ಧಿಯನ್ನು ನೋಡುವ ಉಭಯ ಸಂಕಟಗಳೊಳಗೆ (The antagonism between individuation and growth of species) ಮಾನವರು ಸಿಲುಕಿರುವರು. ಇವೆರಡಕ್ಕೂ ಏಟು ಬಾರದಂತೆ ಪಾರಾಗುವ ಬಗೆ ಹೇಗೆಂಬುದೆ ಮಾನವರಲ್ಲಿ ಪ್ರಾಚೀನ ಕಾಲದಿಂದಲೂ ಇದ್ದ ಪ್ರಶ್ನೆಯಾಗಿದೆ.

ಜನಬಲವು ಬೇಕೆಂತಿದ್ದಾಗ ಹೆಚ್ಚಿಸುವ ಪ್ರಯತ್ನವೂ ಬೇಡವೆಂದಿದ್ದಾಗ ಕಡಮೆಯಾಗುವ ಪ್ರಯತ್ನವೂ ಹಲವು ಕಡೆಗಳಲ್ಲಿ ಅನೇಕ ಸಮಯ ನಾನಾ ರೀತಿಗಳಲ್ಲಿ ನಡೆದಿದೆ. ಅಧಿಕಾರ ಬಲ ಮತ್ತು ಕಾನೂನು ನಿಬಂಧನೆಗಳಿಂದ ಮಾಡಿದ ಇಕ್ಕಡೆಯ ಪ್ರಯತ್ನಕ್ಕೆ ತಕ್ಕ ಫಲ ಸಿಕ್ಕಿಯದೆಂದು ಹೇಳಲು ಬರುವದಿಲ್ಲ. ಸಾಮಾಜಿಕ ಕಟ್ಟು ನಿಯಮ, ರಿವಾಜುಗಳಿಂದ ಜನಸಂಖ್ಯೆಯ ಮೇಲೆ ಹೆಚ್ಚಿನ ಪರಿಣಾಮಗಳಾಗಿವೆಯೆಂದು ಕಂಡುಬರುವದೆ. ಜನಸಂಖ್ಯೆಯ ಕುರಿತು ಸರಕಾರಗಳೇನಾದರೂ ಧ್ಯೇಯಗಳಿದ್ದರೆ ಪ್ರಚಾರ ಮೂಲಕ ಜನಮತವನ್ನು ಕೇಂದ್ರೀಕರಿಸಿ ಬೆಂಬಲ ಪಡದರೆ ಮಾತ್ರ ಪ್ರಯತ್ನಗಳು ಫಲಕಾರಿಯಾದಾವು. ಜನರ ಪ್ರೋತ್ಸಾಹವಿಲ್ಲದೆ ಸಂತತಿ ನಿಯಂತ್ರಣವು ಜಯಶೀಲವಾಗಲಾರದು.

ಕ್ರಿಸ್ತಶಕದ 1798ನೆ ವರುಷದಲ್ಲಿ ಮಾಲ್ಥುಸನೆಂಬ ಪಾದರಿ ಗುರುವು ಈ ಪ್ರಶ್ನೆಯ ಕಡೆಗೆ ಲೋಕವು ಕಣ್ದೆರೆಯುವಂತೆ ಪ್ರಯತ್ನ ಮಾಡಿದನು. ಆಹಾರಕ್ಕೂ ಜನಸಂಖ್ಯೆಗೂ ನಿಕಟ ಸಂಬಂಧವಿದೆ; ಆಹಾರವು ಅಂಕಗಣಿತ ರೀತಿಯಲ್ಲಿ 1, 2, 3, 4, 5 ಮತ್ತು 6 ರಂತೆ (arithmetically) ಏರುವದು. ಜನಸಂಖ್ಯೆಯು 1, 2, 4, 8, 16 ಮತ್ತು 32ರಂತೆ ರೇಖಾಗಣಿತದಲ್ಲಿ (Geometrically) ಹೆಚ್ಚುವದು; ಆಹಾರ ಹೆಚ್ಚುವದಕ್ಕೆ ಮಿತಿಯಿದೆ ಜನಸಂಖ್ಯೆಯ ವೃದ್ಧಿಗೆ ಮಿತಿಯಿಲ್ಲದ ಕಾರಣ ಆಹಾರ ತುಟ್ಟಿಯಾಗಿ ಜನರು ಉಪವಾಸಬಿದ್ದು ರೋಗ ರುಜೆಯಿಂದ ಸಾಯಬೇಕಾಗುವದೆಂದೂ ಆದ್ದರಿಂದ ಉಪವಾಸ ಅಥವಾ ಸಂತತಿ ಪ್ರತಿಬಂಧಕ (Starvation or Restriction) ಇವೆರಡರಲ್ಲೊಂದನ್ನು ಜನರು ಆರಿಸಬೇಕಾಗುವದೆಂದನು.

ಮಾಲ್ಥುಸನ ತತ್ವವನ್ನು ಜನರು ತಪ್ಪು ಭಾವನೆಯಿಂದ ಅರ್ಥಮಾಡಿಕೊಂಡು ಟೀಕೆ ಮಾಡಿ ಅಲ್ಲಗಳೆಯಲಾರಂಭಿಸಿದರು. ಲೋಕವು ದೊಡ್ಡದು; ಆಹಾರೋತ್ಪನ್ನಕ್ಕೆ ನಾನಾ ದಾರಿಗಳಿವೆ, ಅವುಗಳೆಲ್ಲವನ್ನು ನಾವು ಉಪಯೋಗಿಸಲಿಲ್ಲ; ಮಾಲ್ಥುಸನು ಹೇಳಿದಂತೆ ಲೋಕವು ತುಂಬಾ ಜನರಾಗಬೇಕಾದರೆ ಸಹಸ್ರಗಟ್ಟಲೆ ವರುಷಗಳು ಬೇಕು; ಉಂಟುಮಾಡಿದ ದೇವರು ಊಟಕ್ಕೆ ಕೊಡುವನು ಎಂದರು. ಇನ್ನು ಕೆಲವರು ಆಹಾರೋತ್ಪನ್ನವು ಎಲ್ಲರಿಗೂ ಸಾಕಾಗುವಷ್ಟಿದೆ ಮತ್ತು ಹೆಚ್ಚಿಸಲಿಕ್ಕೂ ಅನುಕೂಲತೆ ಇದೆ ಆದರೆ ನಮ್ಮ ಸಾಗುವಳಿಯ ಕ್ರಮವು ಹಳೆದು ಮತ್ತು ಸಾಗಾಟವು ಸರಿಯಿಲ್ಲ ಎಂದರು. ಮತ್ತೆ ಕೆಲವರು ಯಂತ್ರೋತ್ಪನ್ನವು ಇಷ್ಟರೊಳಗೆ ಸಂಪೂರ್ಣ ಆಗಿಯದೆ. ಅನೇಕ ರಾಷ್ಟ್ರಗಳಲ್ಲಿ ಮೊದಲಿಗಿಂತ ಈಗ ಇಮ್ಮಡಿ, ಮತ್ತು ಮುಮ್ಮಡಿ ಜನರು ಜೀವಿಸುವರು ಮತ್ತು ಅವರ ಜೀವನದ ಸೌಕರ್ಯದ ಮಟ್ಟವು ಸಹಾ ಏರಿರುವದು. ಜನನಕ್ಕೆ ಬರುವ ಪ್ರತಿಯೋರ್ವನೂ ಉಣಲು ಒಂದು ಬಾಯಿಯೊಂದನ್ನು ಮಾತ್ರವಲ್ಲ ದುಡಿಯಲು ಎರಡು ಕೈಗಳನ್ನು ಸಹಾ ತರುವವನಾದ್ದರಿಂದ ಈಗಿನ ಅಧಿಕೋತ್ಪನ್ನದ ಕಾಲದಲ್ಲಿ ಹೆಚ್ಚು ದುಡಿಯಲು ಸಹಾಯಕವಾಗುವದಾದ್ದರಿಂದ ಹೊಸತಾಗಿ ಬರುವ ಜನರು ಒಂದು ಆಸ್ತಿಯೇ ಹೊರತು ಹೊಣೆಯಲ್ಲವೆಂದರು.

ಲೋಕವು ಆಷ್ಟೈರಿಗೆ ಎಷ್ಟು ಜನರನ್ನು ಪೋಷಿಸೀತು ಮತ್ತು ಅವರಲ್ಲಿ ಎಷ್ಟು ಜನರಿಗೆ ಬಗೆದು ಎಂಬುವದರ ಕುರಿತು ಮಾಲ್ಥುಸನು "ಸ್ಟೇಟಿಕ್" (static) ಜನಸಂಖ್ಯೆಯ ಕುರಿತು ವಿಚಾರ ಮಾಡಿದ್ದಲ್ಲ. ತತ್ಕಾಲದ "ಕಿನೆಟಿಕ್" (Kinetic) ಜನಸಂಖ್ಯೆಯ ಕುರಿತು ಹೇಳಿದುದಾಗಿದೆ. ಯಾವದಾವದೊಂದು ಸಮಯದಲ್ಲಿರುವ ಜನಸಂಖ್ಯೆಗೆ ಆಗಿರುವ ಆಹಾರ ಸಂಗ್ರಹವು ಸಾಕೆ ಮತ್ತು ಜನವೃದ್ಧಿಯಾದ ತೆರದಲ್ಲಿಯೇ ಆಹಾರೋತ್ಪನ್ನವು ಸಹಾ ಹೆಚ್ಚುವದೊ ಎಂಬುವದನ್ನು ವಿಚಾರಿಸಿ ಜನಸಂಖ್ಯೆಯು ಹೆಚ್ಚಾದಂತೆ ಜನರಿಗೆ ಬೇಕಾಗುವಷ್ಟು ಆಹಾರೋತ್ಪನ್ನವಾಗುವದಿಲ್ಲವೆಂಬುದು ಹೇಳಿದುದಾಗಿದೆ. ಎರಡನೇಯವರು ಹೇಳುವದರಲ್ಲಿ ಸ್ವಲ್ಪ ಸತ್ಯಾಂಶವಿದೆ. ಆದರೆ ಸಾಗುವಳಿ ಕ್ರಮ ಮತ್ತು ಸಾಗಾಟದ ಸುಧಾರಣೆಗಳಿಂದ ತತ್ಕಾಲದ ಆಹಾರದ ಅಡಚಣೆಯು ತೀರೀತೆ ಹೊರತು ಆಹಾರದ ಅಭಾವವು ಅವುಗಳಿಂದ ಬಗೆಹರಿಯದು. ಎಲ್ಲರಿಗೂ ಸಾಕಾಗುವಷ್ಟು ಆಹಾರವಿದೆ ಎನ್ನುವಾಗ ಪ್ರಕೃತದ "ಎಲ್ಲರೂ" ಎಂಬ ಭಾವನೆಯಿಂದ ಹೇಳುವುದೇ ಹೊರತು ದಿನದಿಂದ ದಿನಕ್ಕೆ ಹೆಚ್ಚಾಗುವ ಜನರ ಅಂದಾಜು ಮಾಡದೆ ಆಡುವ ಮಾತಾಗಿದೆ. ಆಹಾರ ಹೆಚ್ಚಿಸಲು ಸಮಯ ಬೇಕಾಗುತ್ತದೆ ಅಷ್ಟರೊಳಗೆ ಮತ್ತಷ್ಟು ಜನರು ಜಾಸ್ತಿಯಾಗುವರು. ಶಾಸ್ತ್ರೀಕ ರೀತಿಯ ಸಾಗುವಳಿಯಿಂದ ಕೆಲವು ರಾಷ್ಟ್ರಗಳು ಹೆಚ್ಚು ಬೆಳೆದಿರುವದು ಇನ್ನು ಕೆಲವರು ತಮಗೆ ಬೇಕಾದಕ್ಕಿಂತ ಹೆಚ್ಚಿಗೆ ಬೆಳೆದಿರಬಹುದು. ಸೌಕರ್ಯದ ಮಟ್ಟವು ಸಹಾ ಏರಿರುವದು. 1800ರಲ್ಲಿ ಇಂಗ್ಲೆಂಡಿನಲ್ಲಿ ಸುಮಾರು 9 ಮಿಲಿಯ ಜನರಿದ್ದರು 1900ರಲ್ಲಿ 31½ ಮಿಲಿಯವಾದರು 1951ರಲ್ಲಿ 41½ ಮಿಲಿಯಕ್ಕೇರಿದರು. 19ನೇ ಶತಮಾನದಲ್ಲಿ ಜರ್ಮನಿಯಲ್ಲಿ 30 ಮಿಲಿಯವಿದ್ದರು ಈಗ 6[illegible] ಮಿಲಿಯವಿರುವರು. ಅಮೇರಿಕದಲ್ಲಿ ಈಗ 150 ಮಿಲಿಯ ಜನರಿರುವರು ಅಮೇರಿಕದ ಪತ್ತೆ ಹಚ್ಚಿದ ಒಂದಂಶದಷ್ಟು ಇರುವ ಜಾಗದಲ್ಲಿ 70 ಮಿಲಿಯ ಜನರಿರುವರು. 19ನೆ ಶತಮಾನದ ಒಂದರೊಳಗೆ ಜರೋಪ್ಯದ ಜನಸಂಖ್ಯೆಯು ಮೊದಲಿಗಿಂತ ಮೂರರಷ್ಟಾಯಿತು.

ಉದ್ದಿಮೆ ವ್ಯಾಪಾರಿಕೆಗಳ ಪರಿಣಾಮಗಳನ್ನು ಮತ್ತು ಆಧುನಿಕ ಕಾಲದ ಸಾಗಾಟದ ಕ್ರಮವನ್ನು ಮಾಲ್ಥುಸನು ತಿಳಿಯದವನಾದರೂ ಇವುಗಳು ಲೋಕದ ಆಹಾರ ಭಾರದ ಅಡಚಣೆಯನ್ನು ಪರಿಹರಿಸಿವೆ ಹೊರತು ನಿರ್ಮೂಲಗೊಳಿಸಲಿಲ್ಲ. ಲೋಕದಲ್ಲಿ ಈಗಲೂ ಆಹಾರದ ಕೊರತೆಯಿದೆ. ಹೊಟ್ಟೆತುಂಬಾ ಊಟ ಸಿಗದೆ ಅಥವಾ ಜನರು ಉಪವಾಸ ಬೀಳುವದೇ ಎಂಬ ಕರೆದು ರೀತಿಯ ವರೀಕ್ಷೆಯಿಂದ ರಾಷ್ಟ್ರವು ಜನಸಂಪತ್ತು ಏರಿಳಿವು ಎಂದು ಜನರು ತಿಳಿದುಕೊಳ್ಳಬಹುದಾಗಿದೆ. ಈಜಿಪ್ಟು, ಇಂಡಿಯಾ, ಚೈನಾ, ಮಲಯ ಮತ್ತು ಇಂಡೋನೇಸ್ಯ ಮತ್ತಿತರ ಪೂರ್ವ ರಾಷ್ಟ್ರಗಳನ್ನು ನೋಡಿದರೆ ಮಾಲ್ಥುಸನ ತತ್ವವು ಅಕ್ಷರಶಃ ಸರಿಯೆಂದು ಒಪ್ಪಬೇಕು. ಲೋಕದಲ್ಲಿ ದಿನ ಒಂದರ 70,000 ಜನರು ಹೆಚ್ಚುವರು ಅದೇ ರೀತಿಯಲ್ಲಿ ದಿನ ಒಂದರ 70,000 ತಟ್ಟೆ ಅನ್ನ ಅಥವಾ 70,000 ರೊಟ್ಟಿ ಹಾಲು ಹೆಚ್ಚಾಗುತ್ತದೆಂದು ಹೇಳಲು ಬರುವದಿಲ್ಲ. ಹೊಸತಾಗಿ ಬರುವವರು 70,000 ಜೊತೆ ಕೈಗಳನ್ನು ತಕ್ಕೊಂಡು ಬರುವದಾದರೂ 70,000 ಬಾಯಿಗಳಿಗೆ ಬಾಲ್ಯದಿಂದ ಆಹಾರ ಕೊಡಬೇಕು. ಕೈಗಳು ಕೆಲಸಮಾಡಬೇಕಾದರೆ ಕೆಲವು ವರುಷಗಳು ಬೇಕು. ಅಷ್ಟರವರೆಗೆ ನಾವು ಜಾಗರೂಕತೆಯಿಂದ ಅವುಗಳನ್ನು ಸಾಕಿ ಸಲಹಬೇಕು. ಜನವೃದ್ಧಿ ಇರುವ ಐರೋಪ್ಯ ಮತ್ತಿತರ ರಾಷ್ಟ್ರಗಳಲ್ಲಿ ಸಹಾ ಅಪ್ರಾಯಸ್ಥರ ಸಂಖ್ಯೆಯು ಶೇಕಡ 20ರಿಂದ 30ರ ವರೆಗಿರುವದು. ಇಂಡಿಯಾ, ಈಜಿಪ್ಟು, ಚೈನ, ಜಪಾನ್, ಮಲಯ, ಫಿಲಿಪ್ಪೈನ್ ಇಂಡೋನೇಸ್ಯಗಳಲ್ಲಿ ಇವರ ಸಂಖ್ಯೆಯು ಶೇಕಡ 35ರಿಂದ 45ರ ವರೆಗಿರುವದು.

ಪ್ರಾಚೀನ ಕಾಲದಲ್ಲಿ ಆನಾಗರಿಕ ಪಂಗಡಿಗರು ತಮ್ಮ ಪಂಗಡಗಳಿಗೆ ಯಾವಾಗಲೂ ಕಾದಾಡುವರು. ಹಗೆತನ ಮತ್ತು ಅಳಲು ತೀರಿಸುವ ಹಂಬಲ ಅವರ ಸ್ವಭಾವ ರಕ್ತದಲ್ಲೇ ಇದೆ. ಆಯುಧಗಳ ಅನುಕೂಲತೆಗಳಿಲ್ಲದ ಕಾರಣ ಒಬ್ಬರನ್ನೊಬ್ಬರು ಅದಿಸಾರಬೇಕಾದರೆ ಜನಬಲವೇ ಬೇಕಿತ್ತು. ಆದ್ದರಿಂದ ಜನವೃದ್ಧಿಯ ಕಡೆಗೆ ಗಮನವಿತ್ತರು. ಆಧುನಿಕ ಕಾಲದಲ್ಲಿ ಅಧಿಕಾರದ ಲಾಲಸೆ ಮತ್ತು ರಾಷ್ಟ್ರವಿಸ್ತರಣದ ಕಾಂಕ್ಷೆಯಿಂದ ಸರಕಾರಗಳು ಜನವೃದ್ಧಿಗೆ ಪ್ರೋತ್ಸಾಹಕೊಟ್ಟವು. ಒಂದು ದಿನ ಒಂದೇ ಇಟಲಿಯಲ್ಲಿ ಮುಸಲೊನಿಯು 19,000 ದಂಪತಿಗಳಿಗೆ ವಿವಾಹ ಮಾಡಿಸಿದನಂತೆ. ಕಮ್ಯೂನಿಸ್ಟರಿಗೆ ಸಹಾ ಪಾರಿ ಕಟ್ಟಿದರೆ. ಮಿಲಿಟರಿ ಚಟುವಟಿಕೆ ನಡೆಸುವದೆ ಮತ್ತು ಸಾರ್ವಜನಿಕಕ್ಕೆ ತುಂಬಾ ಜನರು ಬೇಕಿದೆ. ಹೆಚ್ಚು ಜನ ಮಕ್ಕಳ ತಾಯಂದಿರಿಗೆ ರಷ್ಯದಲ್ಲಿ ಪದಕ ಕೊಡುತಿಯಾದೆ. ಈ ರಾಷ್ಟ್ರಗಳಲ್ಲಿ ಆಗಲೇ ಜನಸಂಖ್ಯಾಬಲವನ್ನು ಜಾಸ್ತಿ ಮಾಡುವದನ್ನು ನೋಡಿ ಪಶ್ಚಿಮ ಐರೋಪ್ಯದ ರಾಷ್ಟ್ರಗಳು ಗಾಬರಿಗೊಂಡವು. ಕಳೆದ ಮಹಾ ಯುದ್ಧದಲ್ಲಿ ಜರ್ಮನ್ ಸೈನ್ಯದ ಇದಿರು ಸೋತಾಗ ಫ್ರಾನ್ಸ್ ಸೈನ್ಯವು ಮುದುರಿಕೊಳಲು ತಾವು ಅಬಲರೆಂಬ ಹೀನಸ್ಥಿತಿ (Inferiority Complex) ಕಾರಣವೆಂದು ಮಾರ್ಶಲ್ ಪೆಟೇನರು ಹೇಳಿರುವರು.

[ಮುಂದುವರಿಯುವುದು]

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಶೇರ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000
ಜುಮ್ಲಾ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ.ಎ.ಬಿ.ಎಲ್., ವಕೀಲ,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು

THE VIJAYA BANK, Limited.

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ನರ
ನವಜೀವಾತು
ಎಂಬ
ಸೂತಿಕಾರಸಾಯನ



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಧಾತುವೃದ್ಧಿರಸಾಯನ.

ಹೆಚ್ಚಿನ ಮಾಹಿತಿಗೆ— ಡಾ॥ ಯಂ. ವಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ॥ ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ಪಾತ್ರೆ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು, ಪಕ್ಕೊಳಿಗೆ ಬರುವುದು ಈ ಔಷಧ ಸೇವನೆಯಿಂದ ಶೀಘ್ರ ಗುಣವೊಂದುವದು. ಯಾವ ಬಾಧಕವೂ ಇಲ್ಲ. ಶಾಂತವಾಗಿ ಸುಲಭದ ಚಿಕಿತ್ಸೆ ಗುಣವಾಗದೆ. ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅತಿಶಕ್ತಿಕ ಸ್ಪೆಶಲ್ ರೂ. 8/- [ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, L.M.S.(N.J.)
CALCUTTA. 40
ಸ್ಟಾಕಿಸ್ಟರು. ಕರಂಗಲಪಾಡಿ, ಮಂಗಳೂರು.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರದ ಒಳಿತು ಕೆಡುಕುಗಳು

ತಾ. ೨೯—೧೦—೫೩ರಿಂದ ತಾ. ೪—೧೧—೫೩ರ ವರೆಗೆ.

ಮೇಷ— ಕರ್ಮ ಕುಶಲರಾದ ನಿಮ್ಮ ಕಾರ್ಯದಕ್ಷತೆಯನ್ನು ನೋಡಿ ಶತ್ರುಜನರೂ ನಿಮ್ಮ ಮೈತ್ರಿಯನ್ನು ಯಾಚಿಸುವರು. ನಿಮ್ಮ ಪ್ರಯತ್ನವಿಂದು ಸಫಲವಾದೀತು. ಹಣದ ಮುಗ್ಗಟ್ಟಿನಿಂದ ಪಾರಾಗುವಿರಿ. ಹೆಚ್ಚಿನ ಕಾಲವನ್ನು ಮಾನಸಿಕ ಕ್ರಮಣದಲ್ಲೇ ಕಳೆಯಬೇಕಾಗುವದು. ಕಫ ವಾತ ಪ್ರಕೋಪದಿಂದಾಗಿ ಅಂಗಾಂಗಗಳಲ್ಲಿ ನೋವು ಕಂಡುಬಂದೀತು. ಸ್ಥಾನ ಚಲನೆಯ ಯೋಗವಿದೆ. ವಾರಾಂತ್ಯದ 2 ದಿನಗಳು ನಿಮ್ಮ ಭಾಗಕ್ಕೆ ಅನುಕೂಲಗಳಾಗಿವೆ.

ವೃಷಭ— ಗೃಹ ತಾಪತ್ರಯಗಳಿಂದ ಮುಕ್ತರಾದ ನೀವಿಂದು ಸುಖದಿಂದ ಕಾಲಹರಣ ಮಾಡುವಿರಿ. ನಿಮ್ಮ ಯಾವತ್ತೂ ಆಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರುವವು. ನಷ್ಟವಾದ ವಸ್ತು ಒಡವೆಗಳೂ ಇಂದು ಪುನಃ ಲಭಿಸಲಿವೆ. ಸಮುದ್ರ ಸುದಲ್ಲಿ ಕಾಲಯಾಪನೆ ಮಾಡುವಿರಿ. ಹೆಂಡತಿ ಮಕ್ಕಳ ಆರೋಗ್ಯವು ಕೆಡುವಸಂಭವವಿದೆ. ವಿಜಾತಿಯವರೊಡನೆ ವಾಕ್ಕಲಹವಾದೀತು. ಸೇವಕ ವರ್ಗದವರಿಗೀಕಾಲವು ಅತ್ಯುತ್ತಮವಿದೆ. ತಾ. 29, 30 ಈ ದಿನಗಳು ಸುಖ ವಿಜಯಲಾಭಕಾರಿಗಳಿವೆ.

ಮಿಥುನ— ಈ ವಾರದಲ್ಲಿ ತಮ್ಮ ಆರ್ಥಿಕ ಪರಿಸ್ಥಿತಿಯು ಅಷ್ಟೊಂದು ಚೆನ್ನಾಗಿರದಿದ್ದರೂ ಸಾಂಸಾರಿಕ ತಾಪತ್ರಯಗಳು ದೂರವಾಗುವವು. ಶತ್ರುಜನರ ಪೀಡೆಯಿಂದಾಗಿ ನಿಮ್ಮ ಹಲವಾರು ಕಾರ್ಯಗಳು ವಿಫಲಗಳಾಗಲಿವೆ. ಮಾತ್ರವಲ್ಲ ಕೆಲವೊಮ್ಮೆ ದುಡುಕಿನಿಂದುಂಟಾದ ದುಷ್ಪರಿಣಾಮವನ್ನು ಅನುಭವಿಸಬೇಕಾಗುವದು. ಕುಜನರ ಸಹವಾಸವು ಕಷ್ಟ ನಷ್ಟ ಅಪವಾದಗಳಿಗೆ ಗುರಿಮಾಡೀತು. ವ್ಯಾಪಾರ ಚತುರರಾದ ನಿಮಗೆ ತಾ. 27, 28, 31, 1, 2 ಈ ದಿನಗಳು ಅನುಕೂಲವಾಗಿವೆ.

ಕರ್ಕಾಟ— ನಿಮ್ಮ ಸಂಪದ್ಭಾಗವು ಮುಂಚಿಗಿಂತ ಅದೆಷ್ಟೋ ಸುಧಾರಿಸಲಿದೆ. ಕೈಗೊಂಡ ಕಾರ್ಯಗಳಲ್ಲಿ ಫಲಪ್ರಾಪ್ತಿಯು ನಿರೀಕ್ಷೆಗಿಂತ ಅಧಿಕವಾಗಿ ಲಭಿಸೀತು. ಆದರೆ ಹಿಡಿದ ಕಾರ್ಯವನ್ನು ಕೊನೆತನಕ ಸಾಧಿಸುವ ಚಿತ್ತಸ್ಥೈರ್ಯವು ನಿಮ್ಮಲ್ಲಿಲ್ಲದಕಾರಣ ಕೆಲವೊಮ್ಮೆ ನಷ್ಟ ಕಂಡುಬಂದೀತು. ಮನೆಯಲ್ಲಿ ಪರಸ್ಪರ ಮನಸ್ತಾಪದಿಂದಾಗಿ ಐಕಮತ್ಯವು ಕೆಡಲಿದೆ. ಪ್ರವಾಸದಲ್ಲಿ ಕಷ್ಟ ನಷ್ಟಗಳು ಹೆಚ್ಚುವವು ತಾ. 29, 30, 3, 4 ಈ ದಿನಗಳು ಉತ್ತಮವಾಗಿವೆ.

ಸಿಂಹ— ಸಧ್ಯ ನಿಮ್ಮ ಅದೃಷ್ಟದ ಕದವು ತರೆದಿರುವದೆಂದರೂ ತಪ್ಪಾಗದು. ಎಂತಹ ಕಷ್ಟಸಾಧ್ಯವಾದ ಕಾರ್ಯವೇ ಇರಲಿ ನಿಮ್ಮ ಭಾಗಕ್ಕದು ತೃಣಸಮವೆನಿಸುವದು. ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಿನ ಫಲವು ಪ್ರತಿಯೊಂದು ಕಾರ್ಯದಲ್ಲೂ ಕಾಣಸುವದು ಲೇಖಕ ಜನತೆಗೂ ನೌಕರಿ ವರ್ಗಕ್ಕೂ ಈ ಕಾಲವು ಅತೀವ ಅನುಕೂಲವಿದೆ. ಸಕಲಸಂಪತ್ ಸಮೃದ್ಧಿಯಿಂದ ಕೂಡಿರತಕ್ಕ ನಿಮಗೆ ತಾ. 29, 30, 3, 4 ರಲ್ಲಿ ಕಿಂಚಿದಾಲಸ್ಯ ವ್ಯರ್ಥ ಖರ್ಚುಗಳು ಕಾಣಿಸಬಹುದು.

ಕನ್ಯಾ— ನಿಮ್ಮ ಪ್ರಕೃತಿಯು ಪಿತ್ಥ ದೋಷದಿಂದಾಗಿ ಕೆಡಲಿದೆ. ಆದಾಯವು ಕಡಿಮೆಯಿದ್ದು ಖರ್ಚು ಹೆಚ್ಚುವುದರಿಂದ ಹಣದ ಬಿಕ್ಕಟ್ಟಿಗೆ ಸಿಲುಕುವಿರಿ. ಮಾತ್ರವಲ್ಲ ಆಪತ್ತಿಗೆಂದು ಸಂಗ್ರಹಿಸಿಟ್ಟ ಧನಾದಿಗಳೂ ಉಳಿಯಲಾರವು. ನೌಕರಿ ಜನರ ಮೇಲೆ ಅಧಿಕಾರಿವರ್ಗದವರ ವಕ್ರದೃಷ್ಟಿ ಬೀಳಲಿದೆ. ಮನೋ ದೌರ್ಬಲ್ಯದಿಂದಾಗಿ ಆಪ್ತಮಿತ್ರರಲ್ಲೂ ಅವಿಶ್ವಾಸ ಕಂಡುಬಂದೀತು. ತಾ. 31, 1, 2, ಈ ದಿನಗಳು ಕಿಂಚಿದನಿಷ್ಟಕಾರಿಗಳಿವೆ.

ತುಲಾ— ನಿಮ್ಮ ಸ್ವೇಹಾರೋಗ್ಯ ವಿಚಾರದಲ್ಲಿ ಕೊಂಚ ನಿಗಾ ತೆಗೆದು ಕೊಳ್ಳಿರಿ. ಮತ್ತು ನಿಮ್ಮ ಉದ್ಯೋಗದಲ್ಲಿ ಫಲಪ್ರಾಪ್ತಿಯು ತೃಪ್ತಿಕರವಿದ್ದು ಸಂಪದ್ಭಾಗವು ಪರಿಪೂರ್ಣವಿದ್ದರೂ ವ್ಯರ್ಥ ಖರ್ಚುಗಳು ನಷ್ಟ ಮುಂತಾದವು ಅನಿರೀಕ್ಷಿತವಾಗಿ ಕಾಣಿಸಬಹುದು. ವಿಷ ಜಂತುಗಳಿಂದ ಅಪಾಯ ಸಂಭವಿಸೀತು. ಪರ್ಯಟನದಲ್ಲಿ ಕಷ್ಟ ನಷ್ಟಗಳು ಹೆಚ್ಚಲಿವೆ. ವಾರಾದಿಯ 5 ದಿನಗಳಲ್ಲಿ ನಿಮ್ಮ ಬಯಕೆಗಳು ನಿರ್ವಿಘ್ನದಿಂದಲೂ ನಿರಾಯಾಸದಿಂದಲೂ ಫಲಿಸುವವು.

ವೃಶ್ಚಿಕ— ದೈವವು ವಿಮುಖವಿದ್ದರೂ ಗುರುಹಿರಿಯರು ಬಂಧು ಬಾಂಧವರು ಮಿತ್ರ ವರ್ಗದವರೂ ಕೂಡಾ ನಿಮಗೆ ಪ್ರತಿಕೂಲವಾಗಿದ್ದರೂ ಪರರ ಸಹಾಯವನ್ನು ಯೋಚಿಸದೆ ಕಾರ್ಯರಂಗದಲ್ಲಿ ಮುಂದರಿವ ಆತ್ಮಶಕ್ತಿ ಧೈರ್ಯಗಳು ನಿಮ್ಮಲ್ಲಿರುವವು. ತತ್ಫಲವಾಗಿ ನಿಮ್ಮ ದಿನಯಾಪನೆಯು ಸುಗಮವಾಗುವದು. ಆದರೆ ಮಾತು ಮಾತಿಗೆ ಕಲಹ ಆಕಸ್ಮಿಕ ಪ್ರವಾಸ ಅನಿರೀಕ್ಷಿತ ಶೋಕಾನರ್ಥಗಳು ವಾರಾದಿಯ 2 ದಿನಗಳಲ್ಲಿ ಕಾಣಿಸಬಹುದು.

ಧನು— ಸುಖದುಃಖ ಲಾಭನಷ್ಟಗಳು ಸಮತೂಕದಲ್ಲಿ ನಿಲ್ಲಲಿವೆ ನಿಮಗೀವಾರದಲ್ಲಿ. ವಿಶೇಷತಃ ಸ್ವೀಜ ಜನರಿಂದ ಹೆಚ್ಚಿನಂಶ ಲಾಭ ಹೊಂದುವಿರಿ. ಸಾಮಾಜಿಕ ಕಾರ್ಯಗಳಲ್ಲೂ ರಾಜಕೀಯ ಕ್ಷೇತ್ರಗಳಲ್ಲೂ ನಿಮ್ಮ ಅಭಿಮತದಂತೆ ಕಾರ್ಯವು ಸಿದ್ಧಿಸುವದು. ಆದರೆ ಆದಾವ ದುರ್ದೈವದಿಂದಲೋ ನೀವೆಷ್ಟೇ ಮಾತುಬಲ್ಲವರಿದ್ದರೂ ವಾಕ್ಕಲಹ ಬೇರೆ ತಪ್ಪಲಾರದು. ವಾರಾಂತ್ಯದ 2 ದಿನಗಳು ನಿಮ್ಮ ಇಷ್ಟಾರ್ಥಗಳನ್ನು ಪೂರೈಸುವದರಲ್ಲಿ ಸಮರ್ಥಗಳಾಗಿವೆ.

ಮಕರ— ನೀವು ಅನನ್ಯಾಪೃರ ಪ್ರಯತ್ನಶಾಲಿಗಳಿರುವಿರಿ. ಆದರೆ ನಿಮ್ಮ ದೌರ್ಭಾಗ್ಯದಿಂದ ಪರಿಶ್ರಮಕ್ಕೆ ತಕ್ಕ ಫಲ ಲಭಿಸದು. ಆತನವವೈಸಂದಿನದ ಖರ್ಚಿನ ಸಲುವಾಗಿ ಸ್ವಲ್ಪ ಹಿಂದು ಮುಂದು ನೋಡುವ ಪ್ರಸಂಗ ಬರಲಿದೆ. ಮತ್ತು ಆರೋಗ್ಯವು ಕಫ ವಾತಪ್ರಕೋಪದಿಂದ ಕೆಟ್ಟೀತು. ಚಂಚಲವಾದ ನಿಮ್ಮ ಮನವು ಯಾವಾಗಲೂ ದುರ್ಮಾಗದತ್ತ ನಿಮ್ಮನ್ನು ಸೆಳೆಯಲಿದೆ. ವಾರಾದಿಯ 2 ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಕುಂಭ— ಸಧ್ಯ ನಿಮ್ಮ ಶೋಕತಾಪಗಳು ದೂರಾದುವೆಂದರೆ ತಪ್ಪಾಗದು. ಗೃಹ ತಾಪತ್ರಯಗಳಿಂದ ಮುಕ್ತರಾಗುವಿರಿ. ವ್ಯಾಪಾರ ವ್ಯವಹಾರ ನೌಕರಿ ಲೇಖನಾದಿ ವ್ಯವಸಾಯಗಳಲ್ಲಿ ಉತ್ತಮ ಫಲವು ಲಭಿಸುವದು. ಬಂಧು ಮಿತ್ರರ ಸಹಕಾರದಿಂ ಕೂಡಿದ ನಿಮಗೆ ಸಮಾಜದಲ್ಲೂ ಒಳ್ಳೆ ಸ್ಥಾನ ಮಾನಗಳು ಲಭಿಸಲಿವೆ. ಆದರೆ ಅನಿಷ್ಟಕಾರಿಯಾದ ಅಂಗಾರಕನು ಅಷ್ಟಮಕ್ಕೆ ಪ್ರವೇಶಿಸಿದ್ದರಿಂದ ಶತ್ರು ಜನರಿಂದ ಪೀಡೆ ಧನ ಮಾನಗಳಿಗೆ ಹಾನಿ ಆಕಸ್ಮಿಕ ಅಪಘಾತಾದಿಗಳಿಗೆ ಗುರಿಮಾಡ್ಯಾನು. ವಾರಾಂತ್ಯದ 2 ದಿನಗಳು ಹಿತಕರವಲ್ಲವು.

ಮೀನ— ಕಗ್ಗತ್ತಲೆಯ ವೇಳೆ ಕಗ್ಗಾಡಿನಲ್ಲಿ ದಾರಿತಪ್ಪಿದ ಪಾಂಥನ ಪರಿಸ್ಥಿತಿಯಂತೆ ಇಂದಿನ ನಿಮ್ಮ ಪರಿಸ್ಥಿತಿಯಿರುವದು. ಯಾವದನ್ನು ಹೂಡಲಿ ಏನನ್ನು ಬಿಡಲಿ ಎಂಬುದನ್ನು ತಿಳಿಯದೆ ಬರೀ ಭ್ರಮಿಷ್ಠರಂತೆ ಆಡಿವಾಡುವಿರಿ. ಕಾಸು ಇಲ್ಲದ ವರ ಕಲ್ಲಿಗೆ ಸಮನೆಂಬ ಗಾದೆಯು ಇಂದೀಗ ನಿಮ್ಮ ಅನುಭವಕ್ಕೆ ಬರಲಿದೆ. ಸರ್ವತ್ರ ನಿರಾಶೆಯೇ ನಿಮ್ಮ ಕಣ್ಣಿಗೆ ಕಾಣಿಸುವುದು. ನಿತ್ಯ ದುಃಖಿಗಳಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಕೊಂಚ ಸುಖನೆಮ್ಮದಿ ಕಾಣಿಸುವ ಸಂಭವವಿದೆ.

(೧ನೇ ಪುಟದಿಂದ)

ಉರುಳಾಗಿಬಿಟ್ಟಿದ್ದರೂ ಶಾಂತಿಗೋಸ್ಕರ ಸರ್ವ ಪ್ರಯತ್ನವನ್ನು ಕೈಗೊಳ್ಳುವ ಭಾರತದ ನಿಲುವು ಈ ಆತಂಕಗಳಿಗೆ ಅಂಜುವಂತಿಲ್ಲ. ತಟಸ್ಥ ರಾಷ್ಟ್ರ ಮಂಡಳಿಯ ಅಧ್ಯಕ್ಷ ಸ್ಥಾನದಲ್ಲಿ ಭಾರತದ ಪ್ರತಿನಿಧಿ ತಿಮ್ಮಯ್ಯನವರು ಇರುವುದೂ ಯುದ್ಧಕ್ಕಲ್ಲ, ಶಾಂತಿ ಸ್ಥಾಪನೆಗೋಸ್ಕರ ಭಾರತದ ಸೇನೆಯು ಕೊರಿಯಾಕ್ಕೆ ತೆರಳಿರುವುದೂ ಭಾರತದ ರಾಷ್ಟ್ರಪಿತ ಬಾಪೂಗೆ ಆತ್ಮಶಾಂತಿಯನ್ನು ನೀಡುವಂತಿದೆ. ಭಾರತೀಯರೆಲ್ಲರಿಗೂ ಇದು ಅಭಿಮಾನಾಸ್ಪದವಾದ ವಿಷಯ ಸಂಯುಕ್ತ ರಾಷ್ಟ್ರಸಂಘದೊಡನೆ ಭಾರತದ ಸಂಬಂಧವನ್ನು ವಿಮರ್ಶಿಸುವಾಗ ಎದ್ದು ತೋರುವ ಈ ವೈಶಿಷ್ಟ್ಯಗಳು ಇತರ ರಾಷ್ಟ್ರಗಳ ಪಾಲಿಗೂ ಮಾದರಿಯಾಗಿ, ಸ್ಫೂರ್ತಿ ನೀಡಲಿ!

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 521/1953

ಮಾರ್ಸೆಲ್ ಕ್ವಾಸ್ತಾ ವಾದಿ.

ಮತ್ತು

ಕಾಷ್ಮೀರ್ ಜೋನ್ ಲೂವಿಸ್ ಕಾಮಿಲ್ ಲೂವಿಸರ ಮಗ. ಉಡುಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದ ಬಗ್ಗಾರ್ ಬೆಟ್ಟು ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದ್ರೆ:—

ವಾದಿಗೆ ಪ್ರತಿವಾದಿಯು ತಾ 1-7-1952 ಲ್ಲು ರೂಪಾಯಿ 400—0—0ಕ್ಕೆ ಬರಕೊಟ್ಟ ಡಿಮಾಂಡ್ ನೋಟಿನ ಬಾಬ್ತು ಅಸಲು ಬಡ್ಡಿ ಖ್ಯಾವೇಜು ವಿ. ನೋಟೀಸು ಖರ್ಚು ಕೂಡಾ ರೂಪಾಯಿ 432—9—0ಕ್ಕೆ ವಾದಿಯು ಪ್ರತಿವಾದಿಯ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 10—11—53ಕ್ಕೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಸಾಧನೆಯಿದ್ದಲ್ಲಿ ಸದ್ರಿ ತಾ 10—11—1953ನೇ ದಿವಸ ಬೆಳಗ್ಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ವಾ ವಕೀಲರ ಮುಖಾಂತರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ದಲ್ಲಿ ಏಕ್ಸ್‌ಪಾರ್ಟಿ ಮಾಡಿ ಸದ್ರಿ ವ್ಯಾಜ್ಯವು ತೈಸಲು ಮಾಡಲ್ಪಡುವುದು.

P. V. Acharya
Vakil for Plaintiff.

ಉಡುಪಿ ತಾ 22—10—53.

ಖಾತ್ರಿ ಚಿನ್ನದ ನೆಕ್‌ಲೇಸ್. ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್. ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮನಸ್ಸಿಗೆ ಶಾಂತಿ ಬೇಕೋ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯನ್ನು ಓದಿರಿ.

* "ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು" —ವರಾಹಪುರಾಣ.

* "ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು." —ಲೋಕಮಾನ್ಯ ತಿಲಕ.

* "ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." —ಮಹಾತ್ಮಾ ಗಾಂಧಿ.

* "ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು." —ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಗೀತೆಯ ಕೈಗನ್ನಡಿ ಬೆಲೆ: ೦-೧೨-೦

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ಮ. ಆ.—ರೂ. 1 0 0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ

ಕನ್ನಡ ಪ್ರತಿ ೧ಕ್ಕೆ 0-8-0

ಇಂಗ್ಲಿಷ್ ಪ್ರತಿ ೧ಕ್ಕೆ 0-8-0

ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 ದೀಪಾವಳಿಯ ಶುಭಾಶಯಗಳು Licence No 31
Licensed to Post without Prepayment.

ನವಯುಗ

Vol.33 No 10 5-11-1953 ವರ್ಷ ೩೩ ವಾರ ೧೦

ಇದೇ ನವಂಬರ ೧ನೇ ತಾರೀಕಿಗೆ ಭಾರತದಲ್ಲಿ ತಂತಿ ವ್ಯವಸ್ಥೆಯನ್ನು ಸ್ಥಾಪಿಸಿ ಒಂದು ನೂರು ವರ್ಷಗಳಾದವು ಈ ಸಂದರ್ಭವನ್ನು ನೆನೆದು ಶತಮಾನೋತ್ಸವವನ್ನು ಸಂಭ್ರಮದಿಂದ ಆಚರಿಸಿರುವುದು ಕ್ರಮ ಪ್ರಾಪ್ತವೂ ಯಥಾಯೋಗ್ಯವೂ ಆಗಿರುತ್ತದೆ. ನಮ್ಮ ದೇಶದಲ್ಲಿ ತಂತಿಯ ವ್ಯವಸ್ಥೆಯನ್ನು ಪ್ರಾರಂಭಿಸಿ ಉಪಕಾರ ಮಾಡಿದ ಶ್ರೇಯಸ್ಸು ಡಾ- ವಿಲಿಯಂ ಬ್ರೂಕ್ ಓಶಾನೆಸೀ ಎಂಬ ತಜ್ಞರಿಗೆ ಸಲ್ಲಬೇಕು. ಇವರು ಕಲ್ಕತ್ತೆಯ ವೈದ್ಯಕೀಯ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ೧೮೩೯ರಲ್ಲಿ ಇವರು ವಿದ್ಯುಚ್ಛಕ್ತಿಯ ಸಹಾಯದಿಂದ ಸರಿಗೆಯ ಮೂಲಕ ಸುದ್ದಿ ಕಳುಹಿಸಿಕೊಡುವ ಪ್ರಯೋಗವನ್ನು ಮೊದಲು ಮಾಡಿದರು; ಮತ್ತು ೧೮೫೧ನೇ ವರ್ಷದೊಳಗಾಗಿ ಕಲ್ಕತ್ತೆಯಿಂದ ಡೈಮಂಡ್ ಹಾರ್ಬರಿನ ಕಡೆಗೆ ೨೧ ಮೈಲು ದೂರದಷ್ಟು ತಂತಿಯನ್ನು ಎಳೆದು ಸಫಲಗೊಂಡರು

ಈ ವರ್ಷ ಐತಿಹಾಸಿಕ ಮಹತ್ವದಿಂದ ಕೂಡಿದೆ. ಒಂದೊಮ್ಮೆ ಬ್ರಿಟಿಷ್ ಸಾಮ್ರಾಜ್ಯದ ಅಸ್ತಿತ್ವವನ್ನು ಪ್ರಶ್ನಿಸಿ ಆಹ್ವಾನ ನೀಡುತ್ತಿದ್ದ ವಿಶಾಲವಾದ ಸಿಕ್ಖ ಹಾಗೂ ಮರಾಠಾ ರಾಜ್ಯಗಳು ಹೇಳ ಹೆಸರಿಲ್ಲದಂತಾಗಿದ್ದವು, ಮತ್ತು ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತ ಕ್ಷೇತ್ರವು ಕೊನೆಯದಾಗಿ ಅಳಿದುಳಿದ ಭಾರತದ ಭೂ ಭಾಗಗಳನ್ನು ನುಂಗಿಕೊಂಡು ವಿಸ್ತಾರಗೊಂಡು ತಿದ್ದಿತು. ಇತ್ತ ತಾಂತ್ರಿಕ ವಿಜ್ಞಾನದಲ್ಲಿ ಬಹಳ ಅಮೂಲ್ಯವಾದ ಪ್ರಯೋಗಗಳೂ ಸಂಶೋಧನೆಗಳೂ ನಡೆಯುತ್ತಿದ್ದವು. ಸಾವಿರಾರು ಮೈಲು ದೂರದ ಅಮೇರಿಕಾದಲ್ಲಿ ಸಾಮುಯೆಲ್ ಮೂರ್ಸ್‌ಯವರು ವಾಶಿಂಗಟನ್ನನ್ನೂ ಬಾಲ್ಟಿಮೋರನ್ನೂ ಜೋಡಿಸುವಂತೆ ೪೦ ಮೈಲು ಉದ್ದ ಸರಿಗೆಯನ್ನೆಳೆದಿದ್ದರು. ಹೀಗೆ ಸರ್ವ ಪ್ರಥಮವಾಗಿ ತಂತಿಯ ಮೂಲಕ ಸಂಪರ್ಕ ಬೆಳೆಸಲು ನೋಡಿದ ದೇಶಗಳು ಭಾರತ ಮತ್ತು ಅಮೇರಿಕ.

೦೦ ೦೦

ಆದರೆ ಈ ಸಾಹಸಕ್ಕೆ ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಕಂಪೆನಿ ಸರಕಾರದ ಪ್ರೋತ್ಸಾಹ ದೊರೆಯುವುದಕ್ಕೆ ಮತ್ತೂ ೧೧ ವರ್ಷಗಳು ಸಂದವು. ೧೮೫೦ರಲ್ಲಿ ಕಂಪೆನಿಯವರು ಡಾ. ಓಶಾನೆಸೀಯವರು ಅಪೂರ್ಣ ಮಾಡಿಬಿಟ್ಟಿದ್ದ ಕಲ್ಕತ್ತ— ಡೈಮಂಡ್ ಹಾರ್ಬರ‍್ಗಳನ್ನು ತಂತಿ ಮೂಲಕ ಜೋಡಿಸುವ ಕೆಲಸಕ್ಕೆ ಒಪ್ಪಿಗೆ ನೀಡಿದರು. ಮೊದಲಾಗಿ ತಂತಿಯ ಮೂಲಕ ಸಮಾಚಾರ ಕಳಿಸುವ ಸೌಭಾಗ್ಯವು ನೀಲಚಂದ್ರ ಮುಖಂಡಿ ಎಂಬೋರ್ವ ಭಾರತೀಯನಿಗೆ ಸೇರಿತು. ಈ ಮಹಾಶಯನು ಮುಂದೆ ಭಾರತದಲ್ಲಿ ನಡೆದ ತಂತಿ ವ್ಯವಸ್ಥೆಯ ವಿಸ್ತಾರಣಾ ಕಾರ್ಯದಲ್ಲಿ ಮಹತ್ವದ ಭಾಗವಹಿಸಿದನು ಸರಕಾರೀ ಕೆಲಸ ಕ್ಕೋಸ್ಕರವಾಗಿಯೇ ಇದ್ದರೂ, ೧೮೫೧ರಲ್ಲಿ ಮೊದಲನೇ ತಂತಿಯ ವಿನಿಮಯವಾಯಿತು.

೧೮೫೧ನೇ ವರ್ಷದಲ್ಲಿಯೇ ಮೊದಲನೇ ಸಲ ಬಹಳ ದೂರ ತಂತಿ ಸಂಪರ್ಕವನ್ನು ಏರ್ಪಡಿಸುವ ಪ್ರಯತ್ನ ತೊಡಗಿತು ಕಲ್ಕತ್ತೆಯಿಂದ ಆಗ್ರಕ್ಕೆ ತಂತಿ ಹಾಕುವ ಕೆಲಸವು ೧ನೇ ನವೆಂಬರ ೧೮೫೩ರಂದು ಪ್ರಾರಂಭಿಸಲ್ಪಟ್ಟು ೫ ತಿಂಗಳಲ್ಲಿ ಅದು ಪೂರ್ಣವಾಯಿತು. ೨೪ನೇ ಮಾರ್ಚ

ತಂತಿಯ ಮೂಲಕ ಸಂಪರ್ಕ

ತಂತಿಯ ವ್ಯವಸ್ಥೆಯೇ ಭಾರತ ಸರಕಾರವೇ ತನ್ನ ಆಡಳಿತದಲ್ಲಿ ಇಟ್ಟುಕೊಂಡ ಬಹಳ ಹಳೆಯ ಸಾರ್ವಜನಿಕ ಉಪಯೋಗದ ಏರ್ಪಾಡು ಒಹುಶ ಜಗತ್ತಿನಲ್ಲಿಯೇ ಇಷ್ಟು ಹಳೆಯ ವ್ಯವಸ್ಥೆ ಸರಕಾರದ ವಶದಲ್ಲಿ ಬೇರೆ ಇರಲಿಕ್ಕಿಲ್ಲ. ಇಷ್ಟೆಲ್ಲ ಆಗುವಾಗ ಡಾ ಓಶಾನೆಸೀಯವರು ತಂತಿ ವ್ಯವಸ್ಥೆಯ ಕ್ಷೇತ್ರದಲ್ಲಿ ಅಂತರ್ರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ್ದರು. ಮೂರ್ಸ್ ವೀಟ್‌ಸ್ಟನ್, ಹಸ್ರಿ, ಕೋಕ್, ಮುಂತಾದವರ ಹೆಸರಿನೊಂದಿಗೆ ಇವರದೂ ಸೇರಿದ್ದಿತು. ಆಗ ಭಾರತದ ಗವರ್ನರ ಜನರಲರಾಗಿದ್ದ ಲಾರ್ಡ ಡಾಲಹೌಸಿಯು ಡಾ ಓಶಾನೆಸೀಯವರನ್ನು ಇಂಗ್ಲೆಂಡಿಗೆ ಕಳುಹಿಸಿ, ಆಲ್ಲಿ ಕಂಪೆನಿಯ ನಾಯಕ ಮಂಡಳಿಯವರಿಗೆ ಭಾರತದ ಆಗಿನ ರಾಜಧಾನಿ ಕಲ್ಕತ್ತೆಯನ್ನು ತಂತಿಯ ಮೂಲಕ ಆಗ್ರಾ, ಮುಂಬಯಿ, ಪೇಶಾವರ ಮತ್ತು ಮದ್ರಾಸುಗಳಿಗೆ ಜೋಡಿಸುವ ವ್ಯವಸ್ಥೆಯನ್ನು ವಿವರಿಸಲು ಹೇಳಿದರು. ಇಂಗ್ಲೆಂಡಿನಿಂದ ಮರಳಿದ ಬಳಿಕ ಡಾ. ಓಶಾನೆಸೀಯವರನ್ನು ವಿದ್ಯುತ್ ತಂತಿಯ ಸುಪರಿಂಟೆಂಡಂಟರೆಂದು ನೇಮಕ ಮಾಡಲಾಯಿತು. ೧೮೫೨ರಲ್ಲಿ ಡೈರೆಕ್ಟರ್ ಜನರಲ್ ಹುದ್ದೆಯನ್ನು ಏರ್ಪಡಿಸಿದಾಗ ಸ್ವಾಭಾವಿಕವಾಗಿಯೇ ಆ ಸ್ಥಾನ ಡಾ. ಓಶಾನೆಸೀಯವರಿಗೆ ಸಂದಿತು.

೦೦ ೦೦

೧೮೫೪ರಂದು ಮೊದಲನೇ ಸಮಾಚಾರವು ಆಗ್ರಾ – ಕಲ್ಕತ್ತಾಗಳೊಳಗೆ ವಿನಿಮಯಗೊಂಡಿತು. ಕೇವಲ ಹದಿನೈದು ತಿಂಗಳುಗಳೊಳಗೆ, ಅಂದರೆ ೧ನೇ ಫೆಬ್ರುವರಿ, ೧೮೫೫ರಲ್ಲಿ ಕಲ್ಕತ್ತೆಯಿಂದ ಆಗ್ರಾ, ಅಲ್ಲಿಂದ ಮುಂಬಯಿ, ಮದ್ರಾಸುಗಳಿಗೆ ತಂತಿ ಎಳೆದು ೪೧ ಕಾರ್ಯಾಲಯಗಳನ್ನೂ ೩೦೫೦ ಮೈಲು ದೂರವನ್ನೂ ಈ ಮಾರ್ಗ ಒಳಗೊಂಡಿದ್ದಿತು. ೧೮೫೭ರಲ್ಲಿ ಆಗ್ರಾದ ಮೂಲಕ ಪೇಶಾವರವನ್ನೂ, ಬೆಂಗಳೂರಿನ ಮೂಲಕ ಉದಕಮಂಡಲವನ್ನೂ, ರಂಗೂನಿನ ಮೂಲಕ ಬರ್ಮಾ ಸರಹದ್ದಿನಲ್ಲಿರುವ ಪೂಡೆಯನ್ನೂ ಜೋಡಿಸಿದರು.

೧೮೫೫ನೇ ಫೆಬ್ರುವರಿಯಲ್ಲಿ ಸಾರ್ವಜನಿಕರು ತಂತಿ [illegible] ಪ್ರಯೋಜನವನ್ನು ಪಡೆಯುವಂತೆ ಮಾಡಿದರು. ಆ ಕಾಲದಲ್ಲಿ ತಂತಿಗೆ [illegible] ನಿಗದಿ ಸಲ್ಲಿಸುತ್ತಿದ್ದರು. ೪೦೦ ಮೈಲು ದೂರವನ್ನು ಮೀರಿದ್ದರೆ ೧೬ ಶಬ್ದಗಳಿಗೆ ಒಂದಾಣೆ ಕೊಡಬೇಕು ಹಣವನ್ನು ತಂತಿ ಆಫೀಸಿನಲ್ಲಿಯೇ ಕೊಡಬೇಕೆಂಬ ನಿಯಮವಿದ್ದುದರಿಂದ ತಂತಿ ಆಫೀಸಿಲ್ಲದ ಹಳ್ಳಿಗಳಿಂದ ಟಪ್ಪಾಲು ಮೂಲಕ ಪತ್ರದ ತಂತಿ ಆಫೀಸುಗಳಿಗೆ ಕಳುಹಿಸಲಾದ ಸುದ್ದಿಗಳ ವಿಷಯದಲ್ಲಿ ಹಣ ವಸೂಲು ಮಾಡುವುದು ಕಷ್ಟವಾಗಿ ತೋರಿತು. ಬೇರೆ ಬೇರೆ ಸೌಕರ್ಯಗಳ ಪರಿಶೀಲನೆ ಮಾಡಿದ ಬಳಿಕ, ಬೇರೆಯೇ ತಂತಿ ಟಿಕೇಟುಗಳನ್ನು ಮುದ್ರಿಸಲು ನಿರ್ಣಯವಾಯಿತು.

೦೦ ೦೦

ಆಂಗ್ಲೇಯರು "ಸಿಪಾಯಿ ದಂಗೆ" ಎಂದು ಕರೆದ ೧೮೫೭ನೇ ವರ್ಷದ ಭಾರತೀಯ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ೪೫೫೫ ಮೈಲು ಉದ್ದ ತಂತಿ ಸರಿಗೆಯನ್ನು ಎಳೆದಿದ್ದರು ಮತ್ತು ೬೬ ಕಾರ್ಯಾಲಯಗಳಿದ್ದವು. ೧೮೫೪ನೇ ಇಸವಿಯಲ್ಲಿ ಸರಕಾರವು ಅನಧಿಕೃತವಾಗಿ ತಂತಿ ಸಂಪರ್ಕವನ್ನು ಏರ್ಪಡಿಸುವುದೂ ಉಪಯೋಗಿಸುವುದೂ ದಂಡನಾರ್ಹವೆಂದು ಕಾನೂನು ಮಾಡಿತು ಸರಕಾರಕ್ಕೆ ಈ ತಂತಿ ವ್ಯವಸ್ಥೆಯಿಂದ ಎಷ್ಟರ ಮಟ್ಟಿನ ಪ್ರಯೋಜನ ದೊರೆಯುತೆಂಬುದಕ್ಕೆ ೧೮೫೭ನೇ ಇಸವಿಯ ಘಟನೆಯನ್ನು ನಿದರ್ಶನವಾಗಿ ಕೊಡಬಹುದು. ತಂತಿಯ ಮೂಲಕ ಸಂಪರ್ಕ ಏರ್ಪಡಿಸಿಲ್ಲದಿರುತಿದ್ದರೆ, ಬ್ರಿಟಿಷ ಸಾಮ್ರಾಜ್ಯವು ೧೮೫೭ರಲ್ಲಿಯೇ ನೆಲ ಸಮವಾಗಿ ಹೋಗುತ್ತಿತ್ತು. ಬ್ರಿಟಿಷ ಸಾಮ್ರಾಜ್ಯವನ್ನು ತಂತೀ ವ್ಯವಸ್ಥೆಯೇ ಉಳಿಸಿರುವುದಕ್ಕೆ ದಿಲ್ಲಿಯಿಂದ ಅಂಬಾಲಕ್ಕೂ ಅಲ್ಲಿಂದ ಎಲ್ಲ ಕೇಂದ್ರಗಳಿಗೂ ಕಳುಹಿಸಲಾದ ಈ ಕೆಳಗಿನ ತಂತೀ ಸಮಾಚಾರವೇ ಸಾಕ್ಷಿ.

'ನಾವೀಗಲೇ ಆಫೀಸು ಬಿಡಬೇಕು. ಮೀರತಿನ ಸಿಪಾಯಿಗಳು ಎಲ್ಲ ಬಂಗಲೆಯನ್ನೂ ಸುಟ್ಟು ಹಾಕುತ್ತಿರುವರು. ಈ ಬೆಳಿಗ್ಗೆ ಅವರು ಬಂದರು. ಬಹುಶಃ ಸಿ| ಸಿ. ಟೋಡರು ಮರಣ ಹೊಂದಿರುವರು ಬೆಳಿಗ್ಗೆ ಹೋದ [illegible] ಬಂದಿಲ್ಲ ೯ ಯುರೋಪಿಯನರನ್ನು ಕೊಂದರಾಗಿ ಕೇಳುತ್ತೇವೆ."

ತಂತಿಯ ಸಂಪರ್ಕದಿಂದ ಸಿಪಾಯಿಗಳೆ ಪ್ರತ್ಯಕ್ಷ ವಿಫಲ ಹೊಂದಿತು. ಅವರು ೯೧೮ ಮೈಲು ಉದ್ದ ತಂತಿಯನ್ನು ನಾಶ ಮಾಡಿ ೫ ಲಕ್ಷ ರೂಪಾಯಿ ಹಾನಿ ತಂದರೆಂದು ಆ ಬಳಿಕ ಲೆಕ್ಕ ಹಾಕಿದರು.

೦೦ ೦೦

ತಂತಿಯ ಮೂಲಕ ಸಂಪರ್ಕವನ್ನು ಅಧಿಕಾರ ಸಂಕೇತವೆಂದೇ ಸರಕಾರ ಭಾವಿಸಿದ್ದುದರಿಂದ, ಕಲ್ಕತ್ತೆಯಲ್ಲಿ ಕುಳಿತೇ ಸಮಗ್ರ ಭಾರತದ ಘಟನೆಗಳೊಂದಿಗೆ ಕಣ್ಣಿಡಲು ಅನುಕೂಲವಾಗುವಂತೆ ಎಲ್ಲ ವ್ಯವಸ್ಥೆಯೂ ಮಾಡಲಾಯಿತು. ಬ್ರಿಟಿಷ ಸ್ವತ್ವವು ಸಾಮ್ರಾಜ್ಯ ವಿಸ್ತರಿಸುತ್ತಾ ಸಾಗಿದಂತೆಲ್ಲ ಕಬ್ಬಿಣ ಹಾಗೂ ತಾಮ್ರದ ತಂತಿಗಳು ಈ ಕ್ಷೇತ್ರದಲ್ಲಿ ಯೋಗ್ಯ ಕಟ್ಟು ನಿರ್ಬಂಧಗಳನ್ನು ಹೇರಿದವು. ಹಾಗೆಂದು ತಂತಿ ಎಳೆಯುವ ಕೆಲಸ ಸುಲಭವಾಗಿರಲಿಲ್ಲ. ಎತ್ತರವಾದ ಗುಡ್ಡ ಬೆಟ್ಟಗ

(೧೩ನೇ ಪುಟ ನೋಡಿರಿ)

KANTILAL BROTHERS
Wholesale Hosiery Merchants
Market Road, MANGALORE S. K
Presents their best wishes to all Customers
for a Happy Deepavali &
Prosperous New Year.
Use always our
K. K. C. BANIAN FOR YOUR COMFORT.

ನಮ್ಮ ಟಪ್ಪಾಲು ವ್ಯವಸ್ಥೆಯ ಮುಖ್ಯ ವೈಶಿಷ್ಟ್ಯ

ವಿದೇಶಗಳಲ್ಲೂ ಲಭ್ಯವಿಲ್ಲದ ಕೆಲವು ಉತ್ತಮ ಸೌಕರ್ಯ

ಟಪ್ಪಾಲು ಸೌಕರ್ಯಕ್ಕೆ ನಾವು ಎಷ್ಟು ಮಹತ್ವ ಕೊಡುತ್ತೇವೆಂದರೆ ಒಮ್ಮೆಂದೊಮ್ಮೆ ಈ ಅನುಕೂಲತೆಯನ್ನು ಸ್ಥಗಿತಗೊಳಿಸಿದ ಪಕ್ಷದಲ್ಲಿ ನಮ್ಮ ನಾಗರಿಕತೆ ಕುಸಿದು ಬೀಳಬಹುದು, ನಿತ್ಯ ವ್ಯವಹಾರದಲ್ಲಿ ಕೈಕಟ್ಟಿ ಹೋದೀತು ಹೀಗಿದ್ದರೂ ಟಪ್ಪಾಲು ಇಲಾಖೆಯೊಂದು ಇದೆ ಎಂಬುದನ್ನು ನಾವು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಂತೆ ಕಾಣುವುದಿಲ್ಲ—ಏಕೆಂದರೆ ಈ ಇಲಾಖೆಯಲ್ಲಿ ಬೇರಾವುದೇ ಸರಕಾರೀ ಕಾರ್ಯಾಲಯದಲ್ಲ ನಡೆಯುತ್ತಿರುವದಕ್ಕಿಂತ ಹೆಚ್ಚು ಕಾರ್ಯಕ್ಷಮ ರೀತಿಯಲ್ಲಿ ಕೆಲಸ ನೆರವೇರುತ್ತದೆ ಕಾಗದಗಳನ್ನು ಬಟವಾಡೆ ಮಾಡುವ ಟಪ್ಪಾಲು ಪೇದೆಯು ನಮ್ಮ ಮನೆಯ ಮುಂದೆ ಹಾದು ಹೋಗುವ ಸಮಯವನ್ನು ಕಂಡೇ ನಮ್ಮ ಮನೆಯ ಗಡಿಯಾರದ ಮುಳ್ಳನ್ನು ತಿರುಗಿಸಿ ಸಮಯ ಸರಿಪಡಿಸಲು ಬರುತ್ತದೆ. ಟಪ್ಪಾಲು ಪೇದೆ ನಮಗೊಬ್ಬ ಸಂದೇಶವಾಹಕನಂತೆ ಸ್ಪೃಹಣೀಯ ಕೆಲಸ ಮಾಡುತ್ತಾನೆ. ಶ್ರೀ ದಿನಕರ ದೇಸಾಯಿಯವರು ಅಂಚೆಯಾಳಿನ ಬಾಯಿಂದ "ಮನೆಯಲಿ ನೀವು–ಬಿಸಿಲಲಿ ನಾನು" ಎಂಬ ಉದ್ಗಾರ ಹೊರಡಿಸಿದ್ದರೂ, ಅವನಿಗೆ ಅದೂ ಒಂದು ಆಟವೇ.

ರಾಷ್ಟ್ರೀಕೃತ ಉದ್ಯಮ

ಭಾರತದ ಸಂಪರ್ಕ ಸಾಧನಗಳಲ್ಲಿ ಟಪ್ಪಾಲು ಇಲಾಖೆಯು ರೈಲ್ವೆಗೆ ಎರಡನೆ ಸ್ಥಾನದಲ್ಲಿರುತ್ತದೆ ಕಾಗದ ಪತ್ರಗಳ ಸಾಗಾಟ, ತಂತಿ, ಟೆಲಿಫೋನು ಮತ್ತು ವಯರ್‌ಲೆಸ್ ಸಂಪರ್ಕಾನುಕೂಲತೆಗಳನ್ನು ಈ ಇಲಾಖೆಯು ಸಾರ್ವಜನಿಕರಿಗೆ ಒದಗಿಸಿಕೊಡುತ್ತದೆ. ಸಾಮಾನ್ಯ ಜನಕ್ಕೆ ಮಾತ್ರವಲ್ಲ, ವ್ಯವಹಾರಾಸಕ್ತ ವ್ಯಾಪಾರೀ ವರ್ಗಕ್ಕೆ, ಪತ್ರಿಕೋದ್ಯಮಕ್ಕೆ, ರೈಲ್ವೆಗೆ, ಕಾಲುವೆ ಆಡಳಿತಕ್ಕೆ ಮತ್ತು ಸಂರಕ್ಷಣಾ ವ್ಯವಸ್ಥೆಗೆ ಸಹ ಟಪ್ಪಾಲುಖಾತೆಯು ಒಟ್ಟಾಗಿ ನೀಡುವ ಸೇವೆ ಮತ್ತು ಸೌಲಭ್ಯಗಳು ಬಹಳ ಮಹತ್ವದಿಂದ ಕೂಡಿವೆ ಹೀಗೆ ಸಾರ್ವಜನಿಕರ ಹಿತಸಾಧನೆಗೋಸ್ಕರವಾಗಿಯೇ ಈ ಇಲಾಖೆಯು ಮುಖ್ಯವಾಗಿ ಕೆಲಸಮಾಡುತ್ತಿದ್ದರೂ, ಸರಕಾರದ ಮೇಲೆ ಕರ್ಚಿನಪಟ್ಟಿಗೆ ಹೊರೆಯಾಗಿ ನಿಲ್ಲಬಾರದೆಂದು ಪ್ರಯತ್ನಿಸಲಾಗುತ್ತದೆ ಈ ಪಟ್ಟಿಗೆ ಇದನ್ನು ಒಂದು ಬಿಸಿನೆಸ್ಸಿನಂತೆ ನಡೆಸಿಕೊಳ್ಳಲಾಗುವುದು. ಆದರೂ ವಿಶಿಷ್ಟ ಉಪ ವಿಭಾಗದಲ್ಲಿ ಸರಕಾರಕ್ಕೆ ತುಂಬಾ ಹಾನಿಯುಂಟಾಗುವುದೆಂದು ಮಂತ್ರಿಗಳಾದವರು ತಿಳಿಸಿರುವರು. ಉದಾಹರಣೆಗೆ ಒಂಭತ್ತು ಪೈ ಬೆಲೆ ಬಾಳುವ ಒಂದು ಟಪ್ಪಾಲು ಕಾರ್ಡನ್ನು ಮಾಡುವುದಕ್ಕೆ ಇನ್ನೂ ನಾಲ್ಕುವರೆ ಪೈಯಷ್ಟು ಹೆಚ್ಚು ಕರ್ಚು ಬೀಳುತ್ತದ ನಾವು ಎರಡು ಕಾರ್ಡು ತೆಗೆದು ಕೊಳ್ಳುವಾಗ, ಸರಕಾರಕ್ಕೆ ೯ ಪೈ ನಷ್ಟ ಮಾಡುತ್ತೇವೆ ಇದೇ ರೀತಿ ಟಪ್ಪಾಲು ಇಲಾಖೆಯ ಬೇರೆ ಕೆಲವು ವಸ್ತುಗಳ ಮಾರಾಟ ಕ್ರಯವು ಅಸಲು ಕ್ರಯಕ್ಕಿಂತ ಕಡಿಮೆಯೇ ಇದೆ ಈಗ ಪ್ರತಿಯೊಂದು ವಸ್ತುವಿನ ಬಾಳಿಕೆಯೂ ಏರುತ್ತಾ ಹೋಗುತ್ತಿರುವಾಗ, ಭಾರತದಲ್ಲಿ ವಿದ್ಯಮಾನವಿರುವ ಟಪ್ಪಾಲು ದರಗಳು ಬಹಳ ಕಡಿಮೆಯೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ ನಿಜ ಹೇಳಬೇಕೆಂದರೆ ಜಗತ್ತಿನಲ್ಲಿಯೇ ಇಷ್ಟು ಕಡಿಮೆ ದರದಲ್ಲಿ ಇಲ್ಲಿಯಷ್ಟು ಹೆಚ್ಚು ಟಪ್ಪಾಲಿನ ಅನುಕೂಲತೆಯನ್ನು ಒದಗಿಸಿ ಕೊಟ್ಟ ರಾಷ್ಟ್ರ ಬೇರೊಂದಿಲ್ಲ

ಹಳ್ಳಿಗಳಲ್ಲಿ ವಿಸ್ತರಣೆ

ಟಪ್ಪಾಲು ಇಲಾಖೆಯೊಂದಿಗೆಯೇ ತಂತಿ, ಟೆಲಿಫೋನು ಮತ್ತಿನ್ನಿತರ ವಿಭಾಗಗಳು ಸಮಾವೇಶಗೊಂಡಿದ್ದರೂ, ಭಾರತದ ಸಾಮಾನ್ಯ ರೈತನವರೆಗೂ ಮುಟ್ಟುವ ಸೇವೆ, ಕಾಗದ, ಮನಿಯಾರ್ಡರುಗಳ ಬಟವಾಡೆಯೇ ಆಗಿರುತ್ತದೆ. ಕಳೆದ ಒಂದು ನೂರು ವರ್ಷಗಳಿಂದ ಭಾರತದಲ್ಲಿ ಟಪಾಲುಖಾತೆಯು ಕಾರ್ಯಪ್ರವೃತ್ತವಾಗಿದ್ದು, ದಿನೇ ದಿನೇ ತನ್ನ ಕಾರ್ಯಕ್ಷೇತ್ರವನ್ನು ವ್ಯಾಪಕಗೊಳಿಸುತ್ತಲೂ ಹೊಸ ಹೊಸ ಸಂವಿಧಾನಗಳನ್ನು ಅಳವಡಿಸುತ್ತಲೂ ಪ್ರಗತಿಯನ್ನು ಹೊಂದುತ್ತಾ ಬಂದಿರುವುದು ದ್ವಿತೀಯ ಮಹಾಯುದ್ಧಾನಂತರ ಅವರಲ್ಲೂ ಮುಖ್ಯವಾಗಿ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೇ ಟಪ್ಪಾಲು ವಿಭಾಗದಲ್ಲಿ ಎಂದಿಲ್ಲದಷ್ಟು ಅಧಿಕ ಚಟುವಟಿಕೆಗಳು ಕಂಡುಬಂದವು ಎಷ್ಟರಮಟ್ಟಿಗೆ ಎಂದರೆ, ಸುಮಾರು ಹತ್ತು ವರ್ಷಗಳಿಗೆ ಹಿಂದೆ ಇದ್ದುದರ ಇಮ್ಮಡಿ ವ್ಯವಹಾರವನ್ನು ಈಗ ಭಾರತದ ಟಪ್ಪಾಲು ವಿಭಾಗ ನಿರ್ವಹಿಸುತ್ತಿದೆ ಪಂಚವಾರ್ಷಿಕ ಯೋಜನೆಯಲ್ಲಿ ಅಪೇಕ್ಷಿಸಿದ ಸಾರ್ವಾಂಗಿಕವಾದ ಸುಧಾರಣೆಗಳು ಕೈಗೂಡಿ ಬಂದ ಬಳಿಕವಂತೂ, ಟಪ್ಪಾಲು ಇಲಾಖೆಯ ಕೆಲಸ ಈಗಿರುವುದರ ಇಮ್ಮಡಿಯಾದೀತು ೧೯೪೭ನೇ ಆಗೋಸ್ತು ೧೫ನೇ ದಿನ ಭಾರತದ ಹಳ್ಳಿಗಳಲ್ಲಿ ೧೬೦೦೦ ಟಪ್ಪಾಲು ಕಚೇರಿಗಳು ಇದ್ದುವು ಎರಡು ಮೂರು ವರ್ಷಗಳಲ್ಲಿ ಹೊಸತಾಗಿ ೧೬೦೦೦ ಕಚೇರಿಗಳನ್ನು ತೆರೆಯಲಾಯಿತು ಎಂದರೆ ೧೦೦% ಪ್ರಗತಿಯನ್ನು ಸ್ವತಂತ್ರ ಭಾರತದ ರಾಷ್ಟ್ರೀಯ ಸರಕಾರ ಕೈಗೂಡಿಸಿತು. ನೂರು ವರ್ಷ ಕಾಲದಲ್ಲಿ ಬ್ರಿಟಿಷರು ಕೈಗೊಂಡಷ್ಟೇ ಹೆಚ್ಚು ಪ್ರಮಾಣದ ಕೆಲಸವನ್ನು ನಾಲ್ಕು ವರ್ಷಗಳ ಅವಧಿಯಲ್ಲಿ ನಮ್ಮ ಸರಕಾರ ನೆರವೇರಿಸಿರುವುದೆಂದರೆ ಆಶ್ಚರ್ಯವೆನಿಸುತ್ತದ. ಗ್ರಾಮಾಂತರ ಪ್ರದೇಶದಲ್ಲಿ ೨೦೦೦ ಜನ ವಸತಿಯುಳ್ಳ ಪ್ರತಿಯೊಂದೂ ಹಳ್ಳಿಗೆ ಒಂದೊಂದು ಟಪ್ಪಾಲು ಕಚೇರಿಯನ್ನು ತೆರೆಯಲು ಸರಕಾರ ಉದ್ದೇಶಿಸಿದೆ ಇಷ್ಟರಲ್ಲಿಯೇ ೩೫೦೦೦ ಕಚೇರಿಗಳನ್ನು ತೆರೆದಾಗಿವೆಯೆಂದೂ ಮುಂದಿನ ವರ್ಷದಲ್ಲಿ ಸರಕಾರದ ಉದ್ದೇಶ ಸಂಪೂರ್ಣ ಫಲಪ್ರದವಾಗುವುದೆಂದೂ ಯೋಜನಾ ಆಯೋಗದ ವರದಿಯಿಂದ ತಿಳಿಯುತ್ತೇವೆ

ವಿಮಾನ ಮೂಲಕ ಸಾಗಾಟ

ನಮ್ಮ ಟಪ್ಪಾಲು ಇಲಾಖೆಯು ಒದಗಿಸಿ ಕೊಡುವ ಇನ್ನೊಂದು ಮುಖ್ಯ ಸೌಕರ್ಯ ವಿಮಾನಗಳಲ್ಲಿ ಕಾಗದ ಪತ್ರಗಳ ಸಾಗಾಟವೆಂದೆನ್ನಬೇಕು. ಈ ಸುಧಾರಣೆಯನ್ನು ಸಹ ಸ್ವಾತಂತ್ರ್ಯೋತ್ತರದಲ್ಲಿಯೇ ಮಾಡಲಾಯಿತು ಒಂದು ಸ್ವಲ್ಪವನ್ನೂ ಹೆಚ್ಚು ತೆಗೆದುಕೊಳ್ಳದೆ ಭಾರತದೊಳಗೆ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿಗೆಲ್ಲ ವಿಮಾನ ಮೂಲಕವೇ ಟಪ್ಪಾಲುಗಳನ್ನು ಒಯ್ಯುವ ಈ ಹೊಸ ವ್ಯವಸ್ಥೆ ಭಾರತದಂಥ ವಿಶಾಲ ದೇಶದಲ್ಲಿ ಜನರ ಹೃದಯ ಮನಸ್ಸುಗಳನ್ನು ಬಹಳ ಹತ್ತಿರ ಮಾಡುವಷ್ಟು ಪ್ರಭಾವಿಯಾಗಿರುತ್ತದೆ ಕೇವಲ ಮೂರು ಆಣೆಗೆ ಭಾರತದಂಥ ವಿಶಾಲ ದೇಶದಲ್ಲಿ ಎಲ್ಲಿಂದಲ್ಲಿಗೂ ಒಂದು ಕಾರ್ಡು ತಿರುಗಲು ಅವಕಾಶ ನೀಡಿರುವುದು ಬ್ರಿಟಿಷ್ ಪರಂಪರೆಯ ಉಪಕಾರವಾದರೆ – ಸ್ವತಂತ್ರ ಭಾರತದಲ್ಲಿ ವಿಮಾನ ಮೂಲಕ ಈ ಕಾರ್ಡನ್ನು ಇನ್ನಷ್ಟು ಕ್ಷಿಪ್ರವಾಗಿ ಊರಿಂದೂರಿಗೆ ಮುಟ್ಟಿಸುವುದು ಅನುಕರಣೀಯವಾದ ಪ್ರಶಂಸಾರ್ಹವಾದ ಪ್ರಯೋಗವೇ ನಿಜ ಬೇರೆ ಯಾವ ದೇಶದಲ್ಲೂ ಹೆಚ್ಚು ಹಣವನ್ನು ಕೊಡದೆ, ವಿಮಾನಗಳಲ್ಲಿ ಟಪ್ಪಾಲನ್ನು ಸಾಗಿಸುವ ಏರ್ಪಾಡು ಇರುವುದಿಲ್ಲ. ತುಂಬ ಮುಂದುವರಿದ ದ್ದ ರಾಷ್ಟ್ರಗಳಿಗೆ ಕೂಡ ಈಯೊಂದು ವಿಷಯದಲ್ಲಿ ಭಾರತವು ಆದರ್ಶವನ್ನು ಹಾಕಿಕೊಟ್ಟಿದೆ

ಈ ಹಾಗೂ ಇತರ ಕಾರಣಗಳಿಂದ ಟಪ್ಪಾಲು ಇಲಾಖೆಯ ಮೇಲೆ ಹೆಚ್ಚಿನ ಹೊರೆ ಬಿದ್ದಿದೆ, ಇನ್ನೂ ಇನ್ನೂ ಬೀಳುತ್ತಲೇ ಇದೆ ಪಂಚವಾರ್ಷಿಕ ಯೋಜನೆಯಲ್ಲಿ ಟಪ್ಪಾಲು, ಹಾಗೂ ತಂತಿ ಇತ್ಯಾದಿ ಸಂಪರ್ಕಾನುಕೂಲತೆಗಳ ಸೌಕರ್ಯವನ್ನು ವಿಸ್ತರಿಸಲು ೫೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವರು ಈ ಮೊತ್ತವನ್ನು ಉಪಯೋಗಿಸಿಕೊಂಡು ಬಹಳ ಕೆಲಸವನ್ನು ಸಾಧಿಸಲು ಪ್ರಯತ್ನ ನಡೆದಿದೆ.

ಸುಖ ದುಃಖದ ವಿಚಾರ

ಟಪ್ಪಾಲು ಇಲಾಖೆಯ ಸಲಕರಣೆಗಳೆಲ್ಲ ಬಹಳ ಹಳತಾಗಿವೆ, ಅವುಗಳನ್ನು ಹೊಸತಾಗಿ ಸಿದ್ಧಪಡಿಸುವ ಅಗತ್ಯ ಬಹಳವಿದೆ. ಮೊದಲಿನ ಇಮ್ಮಡಿಯಷ್ಟು ವ್ಯವಹಾರ ಬೆಳೆದಿರುವಾಗ, ಕಾರ್ಯಕ್ಷಮ ರೀತಿಯಲ್ಲಿ ದಕ್ಷತೆಯಿಂದ ಕೆಲಸ ಮಾಡಬಲ್ಲ ನೌಕರರು ಅದೇ ಪ್ರಮಾಣದಲ್ಲಿ ದೊರೆತಿಲ್ಲ ಹಳ್ಳಿಗಳಲ್ಲಿ ಹೊಸತಾಗಿ ಟಪ್ಪಾಲು ಸೌಕರ್ಯಗಳನ್ನು ಒದಗಿಸುವಾಗಲೂ, ಪೇಟೆಯಲ್ಲಿರುವ ಕಚೇರಿಗಳಿಗೂ ಸ್ಥಳದ ಅಭಾವ, ಕಟ್ಟಡಗಳ ಕೊರತೆ ಇತ್ಯಾದಿಗಳ ಬಾಧೆ ಕಂಡುಬರುತ್ತದೆ ಹೆಚ್ಚಿನ ಟಪ್ಪಾಲು ಕಚೇರಿಗಳು ಬಾಡಿಗೆ ಕಟ್ಟಡಗಳಲ್ಲಿವೆ ವ್ಯವಹಾರ ದೆಷ್ಟಾದಂತೆ, ವಿಶಾಲವಾದ ಕಟ್ಟಡಗಳನ್ನು ಆಕ್ರಮಿಸುವುದು ಅನಿವಾರ್ಯವಾಗಿದ್ದರೂ ಅದಕ್ಕೆ ತಕ್ಕ ಅನುಕೂಲವಿಲ್ಲ ಮೇಲಾಗಿ ಟಪ್ಪಾಲು ಇಲಾಖೆಯಲ್ಲಿ ಆವಶ್ಯಕ ನೌಕರರು ಕಚೇರಿಗೆ ಬಹಳ ಹತ್ತಿರದಲ್ಲೇ ನೆಲಸಿರುವ ಆವಶ್ಯಕತೆಯುಂಟು ಅರ್ಥಾತ್ ಮುಖ್ಯ ನೌಕರರಿಗೆ ವಸತಿ ಗೃಹಗಳನ್ನೂ ಇಲಾಖೆ ಒದಗಿಸಿ ಕೊಡಬೇಕಾಗಿದೆ ಮುಂಬಯಿ ಮತ್ತು ಕಲ್ಕತ್ತಗಳಲ್ಲಿರುವ ಟಪ್ಪಾಲು ಮತ್ತು ತಂತಿ ಇಲಾಖೆಯ ವರ್ಕ ಶಾಪುಗಳು ಪೇಟೆಯ ಮಧ್ಯದಲ್ಲಿವೆ ಹೆಚ್ಚುಕೊಂಡಿರುವ ಈಗಿನ ಆವಶ್ಯಕತೆಗನುಗುಣವಾಗಿ ಅವುಗಳನ್ನು ಅಲ್ಲಿಯೇ ವಿಸ್ತರಿಸಲು ಸ್ಥಳಾಭಾವವೆನಿಸಿದ ಬೇರಲ್ಲಿಗಾದರೂ ಈ ಕಾರ್ಯಾಲಯಗಳನ್ನು ತೆಗೆದುಕೊಂಡು ಹೋಗುವುದು ಅನಿವಾರ್ಯವಾಗಿರುತ್ತದೆ ವೈಜ್ಞಾನಿಕ ಕ್ಷೇತ್ರದಲ್ಲಿ ಹೊಸ ಸಂಶೋಧನೆಗಳು ನಡೆಯುತ್ತಲೇ ಇವೆ ಅವುಗಳಿಗೆ ಹೊಂದಿಕೊಂಡು ಕೆಲವು ವಿಶಿಷ್ಟ ರೀತಿಯ ಸುಧಾರಣೆಗಳನ್ನೂ ಟಪ್ಪಾಲು ಇಲಾಖೆಯಲ್ಲಿ ಜ್ಯಾರಿಗೆ ತರುವ ಹವಣಿಕೆ ನಡೆದಿದೆ. ವಾಹನಗಳ ಮೂಲಕ ಜನಸಾಂದ್ರತೆಯುಳ್ಳ ನಗರಗಳಲ್ಲಿ ಟಪ್ಪಾಲು ಸೌಕರ್ಯವನ್ನು ಒದಗಿಸಿ ಕೊಡುವ ಹೊಸ ವ್ಯವಸ್ಥೆಯೊಂದು ಈಗಾಗಲೇ ಜನಪ್ರಿಯತೆ ಗಳಿಸುತ್ತದೆ ತಾಂತ್ರಿಕ ಹಾಗೂ ಯಾಂತ್ರಿಕ ಕ್ಷೇತ್ರದಲ್ಲಿಯೂ ಸುಧಾರಣೆಯಾದಾಗ ಮತ್ತು ಟಪ್ಪಾಲು ನೌಕರರಿಗೆ ಹೆಚ್ಚಿನ ಸೌಕರ್ಯಗಳು ಕೊಡಲ್ಪಟ್ಟಾಗ, ಭಾರತದ ಟಪ್ಪಾಲು ಇಲಾಖೆಯ ಹೊಣೆಗಾರಿಕೆ ಇನ್ನೂ ಹೆಚ್ಚುತ್ತದೆ



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದ, ಒಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲಿಸುವ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0

ಸಣ್ಣ ಬಾಟ್ಲಿಗೆ ರೂ. 2—0 - 0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ರಾಷ್ಟ್ರಪಿತ ಗಾಂಧೀಜಿಯವರು "ರಾಮರಾಜ್ಯ"ವನ್ನು ಭಾರತದಲ್ಲಿ ಪುನಃ ಸ್ಥಾಪಿಸಬೇಕೆಂದು ಉನ್ನತವಾದ ಧ್ಯೇಯವನ್ನು ನಮ್ಮ ಮುಂದಿಟ್ಟಿದ್ದರು. ಈ ಆದರ್ಶದ ಕಡೆಗೆ ಸಾಗುವ ಪ್ರೇರಣೆಯನ್ನು ನಮಗೆ ದೀಪಾವಳಿಯ ಪರ್ವದಿನಗಳು ನೀಡುತ್ತವೆ.

ರಾವಣಾಸುರನ ವಧೆಯ ಬಳಿಕ ಸೀತಾ ಮಾತೆಯೊಂದಿಗೆ ಶ್ರೀರಾಮಚಂದ್ರನು ಅಯೋಧ್ಯೆಯ ರಾಜಸಿಂಹಾಸನವನ್ನು ಏರಿದ ಶುಭದಿನವೇ ಕಾರ್ತಿಕ ಕೃಷ್ಣ ಅಮಾವಾಸ್ಯೆಯೆಂದು ಜನಜನಿತವಾಗಿರುತ್ತದೆ. ಮಹರ್ಷಿ ವಸಿಷ್ಠರು ಸೀತಾರಾಮರ ಮೇಲೆ ಕಿರೀಟಾಭಿಷೇಕ ಮಾಡಿದಾಗ, ಲೋಕದಲ್ಲಿ ನೆಲಸಿದ್ದ ತಮಸ್ಸು ಕಾಲ್ದೆಗೆದು, ಅಲ್ಲಿ ಸಾತ್ವಿಕ ಗುಣದ ಪ್ರತೀಕವೆನಿಸಿದ ಬೆಳಕು ನೆಲೆಗೊಂಡಿತು. ಸಮಸ್ತ ವಿಶ್ವ ಸಂತೋಷದಿಂದ ತುಂಬಿ ತುಳುಕಿ ಕಾರಿರುಳು ಕಳೆದ ದೀಪೋತ್ಸವವನ್ನು ಉತ್ಸಾಹದಿಂದ ಆಚರಿಸಿತು.

ಇನ್ನೊಂದು ಆಖ್ಯಾಯಿಕೆಯಂತೆ, ಅಸುರಮರ್ದನದಲ್ಲಿ ತೊಡಗಿದ ಲೋಕಮಾತೆ ಕಾಳಿಯು ಕೊನೆ ಕೊನೆಗೆ ಆವೇಶಯುಕ್ತಳಾಗಿ ಪ್ರಾಣಿಮಾತ್ರದ ಸಂಹಾರಕ್ಕೆ ಇಳಿದಾಗ, ವಿಶ್ವದಲ್ಲಿ ಎಲ್ಲರೂ ಗೊಂದಲದಲ್ಲಿ ಬಿದ್ದರು. ಮದೋನ್ಮತ್ತ, ಆವೇಶಯುಕ್ತ ಮಹಾ ಕಾಳಿಯನ್ನು ಶಾಂತಗೊಳಿಸುವ ಮಹಾ ಮಹಿಮ ಯಾರೆಂದು ತಿಳಿಯದ ಆ ಗಳಿಗೆಯಲ್ಲಿ ಪರಮಶಿವನು ಲೋಕೋದ್ಧಾರಕನಾಗಿ ಕಂಗೊಳಿಸಿದನು. ಮಹಾಕಾಳಿಯ ಶಿರಸ್ಸು ಮಹಾದೇವನ ತಪ್ತ ವಕ್ಷಕ್ಕೆ ಸೋಂಕಿದೊಡನೆಯೇ ಲೋಕಮಾತೆ ಅಸುರೀಭಾವದಿಂದ ಮುಕ್ತಗೊಂಡಳು; ಮತ್ತು ಕಲ್ಯಾಣಪ್ರದಾಯಿನಿಯೂ ಶಾಂತಿ ಸ್ವರೂಪೆಯೂ ಆಗಿ ಪರಿವರ್ತನೆಹೊಂದಿದಳು. ಕಾರ್ತಿಕ ಕೃಷ್ಣ ಅಮಾವಾಸ್ಯೆ ಈ ಚೋದ್ಯ ನಡೆಯಿತು. ತಮಸ್ಸು ತಪಸ್ಸಿನ ಮುಂದೆ ಸೋಲೊಪ್ಪಿಕೊಂಡ, ಮನಸ್ಸಿನ ಉದ್ವೇಗ ಕಳೆದುಕೊಂಡು ಜನರೆಲ್ಲರೂ ಶಾಂತರಾದ ಈ ದಿನ ಎಲ್ಲರ ಹೃದಯದಲ್ಲೂ ಹೊಸ ಭರವಸೆಯ ಜ್ಯೋತಿಯನ್ನು ಬೆಳಗಿತು.

ದೀಪಾವಳಿಯ ಪರ್ವದಿನ

ಬಲಿರಾಜನನ್ನು ಪಾತಾಳಕ್ಕೆ ಮೆಟ್ಟಿದ ವಾಮನಾವತಾರದ ಕತೆಯೂ ದೀಪಾವಳಿಗೆ ಸಂಬಂಧಿಸಿದೆ. ತನ್ನ ಪರೀಕ್ಷೆ ಹಾಗೂ ದಮನಕ್ಕೋಸ್ಕರವೇ ವಾಮನ ಮೂರ್ತಿ ಬಂದಿರುವುದನ್ನು ಗಮನಿಸಿಯೂ ಬಲಿಚಕ್ರವರ್ತಿ ತನ್ನ ಔದಾರ್ಯವನ್ನು ಬಿಡಲಿಲ್ಲ. ಭಾರತೀಯ ಪರಂಪರೆಯ ವೈಶಿಷ್ಟ್ಯವೇ ಇದು. ಉಜ್ವಲವಾದ ಈ ಪರಂಪರೆಯ ರಕ್ಷಣೆಗೋಸ್ಕರವೇ ಎಲ್ಲರೂ ದೀಪಾವಳಿಯನ್ನು ಸಂಭ್ರಮದಿಂದ ಆಚರಿಸಿ ಮನದ ಮಾಲಿನ್ಯವನ್ನೂ ಸಂಕುಚಿತ ಭಾವನೆಯನ್ನೂ ದೂರೀಕರಿಸುವಂತೆ ಭಗವಂತನು ವರದಾನ ಮಾಡಿದನು.

ಆಸುರೀ ಪ್ರವೃತ್ತಿಯ ಮೇಲೆ ದೇವತಾ ಶಕ್ತಿಯ ವಿಜಯಕ್ಕೆ ನರಕಾಸುರನ ವಧೆಯೂ ಒಂದು ಉತ್ತಮ ನಿದರ್ಶನ: ತೈಲಾಭ್ಯಂಜನದ ಮೂಲಕ ನಾವೆಲ್ಲ ಪವಿತ್ರಾತ್ಮರಾಗಬೇಕೆಂದೂ, ಹಿಂಸೆ ಹಾಗೂ ಅನ್ಯಾಯದ ಭಾವನೆಯಿಲ್ಲದ ಸಹೃದಯರಾಗಬೇಕೆಂದೂ ಶ್ರೀಕೃಷ್ಣನು ಆದೇಶವಿತ್ತನು.

ಧನಲಕ್ಷ್ಮಿ, ಧಾನ್ಯ ಲಕ್ಷ್ಮಿಯ ಪೂಜೆಯೂ ಈ ಸಮಯ ನಡೆಯುತ್ತದೆ. ದರಿದ್ರ ಲಕ್ಷ್ಮಿ ಅಂಧಕಾರ ಪ್ರಿಯಳು; ಶುಚಿತ್ವವಿಲ್ಲದೆಡೆಯೇ ಅವಳಿಗೆ ಮೆಚ್ಚಿಗೆ. ಗೃಹಿಣಿಯರು ತಮ್ಮ ಮನೆಯನ್ನು ರಂಗೋಲೆಗಳಿಂದ ಸಿಂಗರಿಸಿಯೂ ದೀಪಮಾಲೆಗಳಿಂದ ಬೆಳಗಿಯೂ ಧನಲಕ್ಷ್ಮಿಯ ಸ್ವಾಗತವನ್ನು ಕೋರುವುದು ಸಂಪ್ರದಾಯ. ರೈತರೂ ಒಕ್ಕಲಿಗರೂ ಭೂಮಿತಾಯಿ ನೀಡಿದ ಧಾನ್ಯವನ್ನು ಭಕ್ತಿಶ್ರದ್ಧೆಯಿಂದ ಪೂಜಿಸುವುದಕ್ಕೆ ಈ ಸಂದರ್ಭವನ್ನು ಪ್ರಶಸ್ತವೆಂದು ಭಾವಿಸಿರುವುದು ನಮ್ಮ ಸಂಸ್ಕೃತಿಗೆ ತಕ್ಕುದಾಗಿರುತ್ತದೆ.

ಎಲ್ಲಕ್ಕೂ ಹೆಚ್ಚು ಮಹತ್ವದ ಸಂಗತಿ-ದೀಪಾವಳಿಯು ಭಾರತೀಯರ ಪಾಲಿಗೆ ನಿರ್ವಾಣೋತ್ಸವವಾಗಿ ಬಂದಿರುವುದೆನ್ನಬಹುದು. ಅವತರಣ ದೃಷ್ಟಿ ಪ್ರಾಮುಖ್ಯತೆಯನ್ನು ಭಾರತೀಯ ಸಂಸ್ಕೃತಿ ನಿರ್ಮಾಣಕ್ಕೆ ಕೊಟ್ಟಿರುತ್ತದೆ. ಯೋಗೀಶ್ವರನಾದ ಶ್ರೀ ಕೃಷ್ಣ ಪರಮಾತ್ಮನು ಕಾರ್ತಿಕ ಕೃಷ್ಣ ಅಮಾವಾಸ್ಯೆಯಂದು ಪರಂಧಾಮವನ್ನೈದಿದನು. ಜೈನ ಧರ್ಮ ಸಂಸ್ಥಾಪಕನಾದ ಮಹಾವೀರನು ಇದೇ ದಿನ ನಿರ್ವಾಣವನ್ನು ಹೊಂದಿದನು. ಜಡತ್ವದ ಮೇಲೆ ಚೈತನ್ಯದ ವಿಜಯವನ್ನು ಪ್ರಸ್ಥಾಪಿಸಿದ ಈ ಮಹಾ ಜೀವಗಳು ಲೋಕ ಬಿಟ್ಟು ತೆರಳಿದ ಮೇಲೆ-ಈ ನೆನಪನ್ನು ಚಿರಸ್ಥಾಯಿಯಾಗಿಸುವುದಕ್ಕೋಸ್ಕರ, "ಅಂಧಕಾರದಿಂದ ಬೆಳಕಿನೆಡೆಗೆ" ಎಂಬ ಆದರ್ಶವನ್ನು ಕಾಯ್ದುಕೊಳ್ಳುವುದಕ್ಕೋಸ್ಕರ-ದೀಪಾವಳಿಯನ್ನು ಜನರು ಆಚರಿಸತೊಡಗಿದರು.

ಇಷ್ಟು ಮಹತ್ವವನ್ನೊಳಗೊಂಡ ದೀಪಾವಳಿ ನಮ್ಮೆಲ್ಲರ ಮನವನ್ನು ಬೆಳಗಿಸಲಿ! ಎಲ್ಲರ ಮನೆಯಲ್ಲೂ ಸುಖ ಸಂತೋಷವನ್ನು ನೆಲೆಗೊಳಿಸಲಿ!

—ಕಾರ್ತಿಕೇಯ.

ತಂತಿಯ ಮೂಲಕ ಸಂಪರ್ಕ

(೧ನೇ ಪುಟದಿಂದ)

ನೂರು ವರ್ಷಗಳ ಬೆಳವಣಿಗೆ

ಳು, ಉನ್ನತ ಪರ್ವತಗಳು, ಧುಮುಕಿ ಭೋರ್ಗರೆದು ಹರಿಯುವ ನದಿಗಳು, ಕ್ರೂರ ಶ್ವಾಪದಗಳು. ಕಾಡಿನಲ್ಲಿ ವಾಸಿಸುತ್ತಿದ್ದ ಪ್ರಾಚೀನಾಭಿರುಚಿಯ ಮನುಷ್ಯರು—ಇವರೆಲ್ಲರ ಕೂಡೆ ಸೆಣಸಾಡಿ ಮುನ್ನಡೆಯುವುದು ಗಂಡಾಂತರದ ಕೆಲಸ. ಮೊದಲ ದಿನಗಳಲ್ಲಿ ಕಲ್ಲಿನ ಕಂಭಗಳನ್ನು ನೆಡುತ್ತಿದ್ದರು; ಕ್ರಮೇಣ ಬಿದಿರು, ಮರ, ತಾಳೆ ಮರ ಮುಂತಾದವುಗಳನ್ನು ಉಪಯೋಗಿಸಿದರು. ಕಬ್ಬಿಣದ ಕಂಭಗಳನ್ನು ನೆಟ್ಟಿದ್ದು [illegible]ರಲ್ಲಿ.

ವಿದೇಶಗಳೊಡನೆ ಸಂಪರ್ಕ ಸಾಧಿಸಲು [illegible]ನೇ ಇಸವಿಯ ನಂತರ ಪ್ರಯತ್ನಗಳಾದವು. ಸಿಂಹಳದ ಕೆಂಡೀಯನ್ನು ತಂತಿಯಿಂದ ಮೊತ್ತಮೊದಲು ಭಾರತಕ್ಕೆ ಜೋಡಿಸಿದರು. [illegible]ರಲ್ಲಿ ಸಿಂಹಳ ವಿಭಾಗದ ತಂತಿಯ ಅಧಿಕಾರವನ್ನು ಭಾರತ ಸರಕಾರ ಬಿಟ್ಟುಕೊಟ್ಟಿತು. ಆ ನಂತರ ಯುರೋಪಿನೊಂದಿಗೆ ಸಂಪರ್ಕವೇರ್ಪಡಿಸಲು ನೋಡಿದರು. ಕರಾಚಿಯಿಂದ ಪರ್ಶಿಯನ್ ಕೊಲ್ಲಿಯ ಮೂಲಕ ಕೇಬಲುಗಳನ್ನು ಹಾಕುವುದಕ್ಕೆ ೫ ಹಡಗುಗಳನ್ನು ಉಪಯೋಗಿಸಿದರು. ೧೮೬೬ರಲ್ಲಿ ಈ ಸಂಪರ್ಕವನ್ನು ಕಾನ್‌ಸ್ಟೆಂಟಿನೋಪಲ್ಲಿನ ವರೆಗೆ ವಿಸ್ತರಿಸಿದರು

ಯುರೋಪಿಗೂ ಭಾರತಕ್ಕೂ ಮೊದಲನೇ ಸಲ ತಂತಿ ಮೂಲಕ ಸಮಾಚಾರ ವಿನಿಮಯವಾದುದು ೨೭ನೇ ಜನವರಿ ೧೮೬೫ರಲ್ಲಿ. ಆಗ ತಿಂಗಳಿಗೆ ೬೦ ಸಮಾಚಾರಗಳು ಮಾತ್ರ ವಿನಿಮಯವಾಗುತ್ತಿದ್ದವು. ಆದರೆ ಮುಂದೆ ಕೆಲವೇ ತಿಂಗಳುಗಳಲ್ಲಿ [illegible] ಸುದ್ದಿಗಳು [illegible]ವು. ೨೦ ಶಬ್ದಗಳಿಗೆ ಐದು ಪವನುಗಳಷ್ಟು ಚಾರ್ಜು ಬೀಳುತಿತ್ತು; ಮತ್ತು ಸಮಾಚಾರ ತಲುಪಲು ೬ ದಿನ ೮ ತಾಸು ೪೬ ನಿಮಿಷಗಳು ತಗಲುತ್ತಿದ್ದವು. ಆ ಕಾಲದಲ್ಲಿ ಮುಂಬಯಿಗೆ ಯುರೋಪಿನಿಂದ ಒಂದು ಕಾಗದವು ಹಡಗದಲ್ಲಿ ಬರಲಿಕ್ಕೆ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯ ಬೇಕಿದ್ದಿತು. ೧೮೭೦ರಲ್ಲಿ ಭಾರತದಿಂದ

(೧೦ನೇ ಪುಟ ನೋಡಿ)

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C 550/1953

K. ಲಕ್ಷ್ಮಿನಾರಾಯಣ ಶೆಟ್ಟಿ — ವಾದಿ

ಪ್ರತಿ

ಪುಟ್ಟಯ್ಯ ಹೆಗ್ಡೆ-ಸುಬ್ಬಯ್ಯ ಹೆಗ್ಡೆರವರ ಮಗ-ಉಡುಪಿ ತಾಲೂಕು ಕುಮ್ರಗೋಡು ಗ್ರಾಮದ ಮುಕ್ಕಾರ ಕಟ್ಟೆಯಲ್ಲಿರುವವ-ಪ್ರತಿವಾದಿ-ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:--

ನೀವು ವಾದಿಯ ಜವುಳಿ ಅಂಗಡಿಯಲ್ಲಿ ಸಾಲ ಮಾಡಿದ ಬಾಕಿ ಬರಬೇಕಾದ ಅಸಲು ಬಡ್ಡಿ, ರಿಜಿಸ್ಟ್ರಿ ನೋಟೀಸು ಖರ್ಚು ವಗೈರೆ [illegible] ಬರಮಾಡಿ ಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾರೀಕು. 7-11-1953ಕ್ಕೆ ಮುಟ್ಟಿನ ವಿಚಾರಣೆ [illegible] ಆ ದಿವ್ಸ ಪೂರ್ವಾಹ್ನ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ವ್ಯಾಜ್ಯ ನಡೆಸಿಕೊಳ್ಳಬಹುದು ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು-

K. Ramakrishna Rao
Vakil for Plaintiff

Udipi. Dated 31-10-1953

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ದೀಪಾವಳಿಯ ಶುಭಾಶಯಗಳು

ಈ ಶುಭ ಸಮಯದಲ್ಲಿ ನಮ್ಮ ಮಿತ್ರ ಪರಿವಾರಕ್ಕೆ, ಹಿತಚಿಂತಕರ ಬಳಗಕ್ಕೆ ಮತ್ತು ಗ್ರಾಹಕರಿಗೆ ಹಾರ್ದಿಕ ಅಭಿವಂದನೆಗಳನ್ನು ಸಲ್ಲಿಸಲು ಆನಂದವೆನಿಸುತ್ತದೆ. ಅಲ್ಲದೆ ಕಳೆದ ೨೮ ವರುಷಗಳ ನಮ್ಮ ಅವಿರತ ಅನುಭವ ಸೇವೆಯನ್ನು ನೀಡಿ ೪೬ ಶಾಖೆಗಳ ಮೂಲಕ ತಮ್ಮ ಕಾರ್ಯವನ್ನು ತತ್ಪರವಾಗಿ ... ಸುಗಮವಾಗಿ ಮಾಡಿದ್ದನ್ನು ತಿಳಿಸಲು ಅಭಿಮಾನಪಡುತ್ತದೆ. ತಮ್ಮೆಲ್ಲರ ವಿಶ್ವಾಸ—ನೆರವು ಇದೇ ಬಗೆಯಾಗಿ ಮುಂದೆಯೂ ದೊರೆಯುವುದೆಂದು ಖಚಿತವಾಗಿ ನಂಬಿದ್ದೇವೆ.

ರೂ. ೫,೦೦,೦೦,೦೦೦ ಕ್ಕೂ ಮಿಕ್ಕಿದ ಚಲಾವಣೆ ಭಂಡವಾಳ.

The Canara Industrial & Banking Syndicate Ltd.,
Estd. 1925] [Head Office: UDIPI, S India

The Canara Mutual Assurance Co., LTD.
Estd: 1935.] [Head Office: UDIPI, S. India

[illegible] ಎಲ್ಲಾ ವರ್ಷಗಳಿಗೂ ಬೋನಸ್ [illegible] ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31-12-1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ [illegible] ಎಲ್ಲಾ [illegible] ಪಾಲಿಸಿಗಳಿಗೆ [illegible] ಉಳಿತಾಯವನ್ನು [illegible] ಕಂಪೆನಿಯ ಪಾಲಿಸಿಯನ್ನು [illegible] ಈ ಉಳಿತಾಯದಲ್ಲಿ [illegible] ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ಕಾಂಗ್ರೆಸು ಸಂಸ್ಥೆಯ ವರಿಷ್ಠರು ಒಗ್ಗಟ್ಟನ್ನು ಕಾಯ್ದುಕೊಂಡು ಭಿನ್ನಾಭಿಪ್ರಾಯಗಳಿಗೆಡೆಕೊಡದೆ ಸೇವಾಪರ ಜೀವನವನ್ನು ನಡೆಸಬೇಕಾಗಿ ತಮ್ಮ ಅನುಯಾಯಿಗಳನ್ನು ಪದೇ ಪದೇ ವಿನಂತಿಸಿಕೊಳ್ಳುತಿದ್ದರೂ ಅಧಿಕಾರ ವ್ಯಾಮೋಹವೇ ಹೇತುವಾಗಿ-ವೈಯಕ್ತಿಕ ಮತಭೇದವೇ ಪ್ರೇರಣೆಯಾಗಿ – ವರಿಷ್ಠರ ಆದೇಶಗಳನ್ನು ಒಳಗಿಂದೊಳಗೆಯೇ ಮೂಲೆ ಪಾಲು ಮಾಡಲು ಕೆಲವು ಕಾಂಗ್ರೆಸ ವೃತ್ತಗಳು ಪ್ರಯತ್ನಿಸುತ್ತಿರುವುದು ಕಂಡುಬರುತ್ತದೆ ಇದು ಸಂಸ್ಥೆಯ ಚೈತನ್ಯವನ್ನು ಬಲಗುಂದಿಸುವುದಂತೂ ನಿಶ್ಚಯ. ಕೆಲವೊಮ್ಮೆ ರಾಷ್ಟ್ರವಿಘಾತುಕ ಪರಿಣಾಮವನ್ನೂ ಉಂಟುಮಾಡುತ್ತದೆ. ಹೀಗೆ ಇಕ್ಕಡೆಯಿಂದಲೂ ಕೇಡುಂಟುಮಾಡುವ ದುಷ್ಟ ಪ್ರವೃತ್ತಿಯನ್ನು ಪ್ರಾರಂಭದಲ್ಲಿಯೇ ನಿರ್ಮೂಲ ಮಾಡದಿದ್ದರೆ, ಮುಂದೆ ಅದರ ದಮನ ಅಸಾಧ್ಯವಾಗಿಹೋದೀತು. ಕಾಂಗ್ರೆಸ ವರಿಷ್ಠರು ತತ್ವೋಪದೇಶದಲ್ಲಿಯೇ ಸಾರ್ಥಕ್ಯ ಕಾಣುವುದಕ್ಕಿಂತ ಕಠೋರ ಕ್ರಮಗಳಿಂದ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಸುಧಾರಿಸುವುದು ಸೂಕ್ತವಾಗಿರುತ್ತದೆ.

ಅನುಚಿತ ಚಟುವಟಿಕೆ

ಈ ಮಾತನ್ನು ಎತ್ತಿ ಹೇಳುವುದಕ್ಕೆ ಮದ್ರಾಸು ರಾಜ್ಯದ ಕಾಂಗ್ರೆಸ್ ಪಕ್ಷದಲ್ಲಿ ಒಳಗಿಂದೊಳಗೆ ನಡೆದ ಅನುಚಿತ ಚಟುವಟಿಕೆಗಳೇ ಕಾರಣ. ಈ ಚಟುವಟಿಕೆಗಳ ಬಗ್ಗೆ ಸಂಪೂರ್ಣ ವಿವರವು ತಿಳಿದಿಲ್ಲ. ವಿಷಯವು ಬಹಳ ಮಹತ್ವಪೂರ್ಣವಾಗಿದ್ದರೂ ಮೊನ್ನೆಯವರೆಗೆ ಅದನ್ನು ಬಹಳ ಗುಟ್ಟಿನಲ್ಲಿ ಇಟ್ಟಿದ್ದರು. ಆದರೆ ಈಗ ರಹಸ್ಯೋದ್ಘಾಟನ ವಾಗಿದ್ದರೂ ನಾವೆಲ್ಲರೂ ಸತರ್ಕರಾಗಿದ್ದುಕೊಂಡು ವಿವೇಕ ಶೀಲತೆಯನ್ನು ತೋರಿಸುವ ಆವಶ್ಯಕತೆಯೇನು ಕಡಿಮೆಯಾಗಿಲ್ಲ. ಮದ್ರಾಸಿನಲ್ಲಿ ರಾಜಾಜಿ ಧುರೀಣತ್ವದ ವಿರುದ್ಧ ಕೆಲವು ಕಾಂಗ್ರೆಸ್ ಶಾಸನ ಸಭಾಸದಸ್ಯರು ಆಕ್ಷೇಪಸೂಚಿಸಿ, ಕಾಂಗ್ರೆಸಾಧ್ಯಕ್ಷ ನೆಹರೂರ ಕಡೆಗೆ ತಕರಾರು ಕಳಿಸಿರುವುದೇ ಈ ಚಟುವಟಿಕೆಗಳ ತಿರುಳು. "ರಾಜಾಜಿಯವರು ತಮ್ಮ ಧೋರಣೆಯನ್ನು ಬದಲಾಯಿಸ ಬೇಕು; ಅಥವಾ ಕಾಂಗ್ರೆಸ್ ಪಕ್ಷಕ್ಕೆ ಹೊಸಧುರೀಣನನ್ನು ಆರಿಸಲು ಬಿಡಬೇಕು" ಎಂಬುದು ನೆಹರೂರ ಕಡೆಗೆ ದೂರು ಕೊಂಡೊಯ್ದವರ ಹೇಳಿಕೆ. ಮದ್ರಾಸು ಶಾಸನ ಸಭೆಯಲ್ಲಿ ಸುಮಾರು ೧೩೦ ಕಾಂಗ್ರೆಸ್ ಸದಸ್ಯರು ಇದ್ದು ಅವರಲ್ಲಿ ೪೦ ಮಂದಿ ಈ ತಕರಾರು ಅರ್ಜಿಗೆ ಸಹಿಹಾಕಿರುವರೆಂದು ತಿಳಿದಿದೆ. ಡಾ. ಪಿ. ವರದರಾಜುಲು ನಾಯುಡುರವರು ರಾಜಾಜಿಯ ಧುರೀಣತ್ವದಲ್ಲಿ ಅತೃಪ್ತಿ ಸೂಚಿಸಿದ ಕಾಂಗ್ರೆಸ ಸದಸ್ಯರ ಧುರೀಣರೆಂದೂ ತಿಳಿದಿದೆ.

ಜಾತೀಯತೆಯ ವಿಷ

ಆಂಧ್ರರಾಜ್ಯ ಪ್ರತ್ಯೇಕವಾದ ಬಳಿಕ ಉಳಿಕೆಯ ಮದ್ರಾಸು ರಾಜ್ಯದಲ್ಲಿ ತಮಿಳು ನಾಡಿನವರೇ ಪ್ರಾಧಾನ್ಯ ನೆಲೆಗೊಂಡಿದೆ. ದಕ್ಷಿಣಕನ್ನಡ, ಮಲಬಾರು, ನೀಲಗಿರಿಗಳು ಮಾತ್ರ ಒಂದು ಮೂಲೆಯಲ್ಲಿ ಉಳಿದಿವೆ ಈ ಜಿಲ್ಲೆಯ ಪ್ರತಿನಿಧಿಗಳಿಗೆ ಕಾಂಗ್ರೆಸದ ಧುರೀಣತ್ವವನ್ನು ರಾಜಾಜಿಯವರು ವಹಿಸಿರುವ ಕುರಿತು ಪೂರ್ಣ ಸಮಾಧಾನವೂ ತೃಪ್ತಿಯೂ ಇದೆ. ಆದರೆ ತಮಿಳು ನಾಡು ಕಾಂಗ್ರೆಸ ವಲಯದಲ್ಲಿ

ರಾಜಾಜಿಯ ನಾಯಕಪೀಠ

ವಿಶಿಷ್ಟ ಹಿತಸಂಬಂಧಗಳ ರಹಸ್ಯಪೂರ್ಣ ಕೈವಾಡ

ಈ ಕುರಿತು ಮೊದಲಿಂದಲೂ ಅಪಸ್ವರವು ಕೇಳಿಬರುತಿದ್ದಿತು. ರಾಜಾಜಿಯವರು ಯಾರದೇ ಕೈಗೊಂಬೆಯಾಗಿ ಕೆಲಸ ಮಾಡುವವರಲ್ಲ. ಅವರ ಅಪ್ರತಿಮ ಮೇಧಾವಿತನ, ದಕ್ಷವಾದ ಆಡಳಿತೆ, ಯಥಾಯೋಗ್ಯ ಮುನ್ನೋಟಗಳು ತಮಿಳು ನಾಡು ಕಾಂಗ್ರೆಸ್ಸಿಗರ ಕೈವಾಡಕ್ಕೆ ಎಷ್ಟು ಮಾತ್ರಕ್ಕೂ ಆಸ್ಪದ ಕೊಡುವುದಿಲ್ಲ. ಪ್ರಕಾಶಮರ ಮಂತ್ರಿಮಂಡಳವನ್ನು ಇದೇ ತಮಿಳುನಾಡು ಕಾಂಗ್ರೆಸು ಉರುಳಿಸಿತು; ಮುಂದೆ ರೆಡ್ಡಿ ಮತ್ತು ರಾಜಾ ಮಂತ್ರಿಮಂಡಳಗಳಲ್ಲಿಯೂ ತಮಿಳುನಾಡು ಕಾಂಗ್ರೆಸೇ ಸೂತ್ರಧಾರನ ಪಾತ್ರವನ್ನು ವಹಿಸಿದ್ದಿತು. ಇದೆಲ್ಲವನ್ನು ಮುಚ್ಚಿಡುವುದು ಅಪ್ರಸ್ತುತ ತಮಿಳುನಾಡಿನ ಕಾಂಗ್ರೆಸು ಕಾಮರಾಜ ನಾಡಾರರ ಕೈಮುಷ್ಟಿಯಲ್ಲಿದೆ- ಮತ್ತು ಅಲ್ಲಿ ಬ್ರಾಹ್ಮಣ – ಅಬ್ರಾಹ್ಮಣ ಭೇದ ಸದಾ ತಾಂಡವವಾಡುತ್ತಿದೆ. ರಾಜಾಜಿಯ ಧುರೀಣತ್ವ ತಮಗೆ ಬೇಡವೆಂದು ತಮಿಳುನಾಡು ಕಾಂಗ್ರೆಸ್ಸಿನ ಕೆಲವು ವೃತ್ತಗಳು ಹೇಳುತ್ತಿರುವುದಕ್ಕೆ ರಾಜಾಜಿ ಬ್ರಾಹ್ಮಣರೆಂಬುದೂ ಒಂದು ಕಾರಣ. ಜಾತಿಮತ ಭೇದವನ್ನು ಎಣಿಸದ ಉಜ್ವಲ ಪರಂಪರೆಯುಳ್ಳ ಕಾಂಗ್ರೆಸು ಸಂಸ್ಥೆಯ ಮುಖ್ಯ ಘಟಕಗಳಲ್ಲೊಂದಾದ ತಮಿಳು ನಾಡು ಕಾಂಗ್ರೆಸು ಜಾತೀಯತೆಯ ವಿಷ ವಾತಾವರಣದಲ್ಲಿ ಉಸಿರಾಡಿಸುವುದು ನಿಜಕ್ಕೂ ಶೋಚನೀಯ.

ತಕರಾರು ಅರ್ಜಿ

ನೆಹರೂರ ಕಡೆಗೆ ಕಳಿಸಿದ ತಕರಾರುಗಳ ವಿವರ ಗೊತ್ತಿಲ್ಲವಾದರೂ ನೆಹರೂ ಅದಕ್ಕೆ ಬರೆದ ಸುದೀರ್ಘ ಉತ್ತರದ ಮುಖ್ಯಾಂಶಗಳು ಬಹಿರಂಗಗೊಂಡಿವೆ ನಿಜ ಹೇಳ ಬೇಕೆಂದರೆ ನೆಹರೂರ ಉತ್ತರದಿಂದಲೇ ತಮಿಳು ನಾಡು ಕಾಂಗ್ರೆಸು ವಲಯದ ಚಟುವಟಿಕೆಯು ಸಾರ್ವಜನಿಕರ ಅವಗಾಹನೆಗೆ ಬರುವಂತಾಯಿತು. ಆಂಧ್ರರಾಜ್ಯ ಅಸ್ತಿತ್ವಕ್ಕೆ ಬಂದೊಡನೆಯೇ ಮದ್ರಾಸು ಶಾಸನ ಸಭಾ ಕಾಂಗ್ರೆಸ ಪಕ್ಷದ ಹೊಸ ನಾಯಕನನ್ನು ಆರಿಸಬೇಕೆಂದು ಸ್ವತಃ ಕಾಮರಾಜ ನಾಡರರೇ ಪ್ರಯತ್ನಿಸಿದ್ದರು. ಆಗ ರಾಜಾಜಿಯವರೂ ಈ ವಿಷಯವನ್ನು ಒಮ್ಮೆಯೇ ಮುಗಿಸಿ ಬಿಡಲು ನಿರ್ಧರಿಸಿದವರಂತೆ, ಕಾಂಗ್ರೆಸ ಶಾಸನ ಸಭಾ ಸದಸ್ಯರ ಅವಸರದ ಸಭೆ ಕರೆಯುವ ಆತುರ ತೋರಿಸಿದರು. ಆದರೆ ಕಾಂಗ್ರೆಸಾಧ್ಯಕ್ಷ ನೆಹರೂರವರು ರಾಜಾಜಿಯನ್ನು ನಾಯಕ ಪೀಠದಿಂದ ತೆಗೆದೊಗೆಯುವ ಪ್ರಶ್ನೆಯೇ ಇಲ್ಲವೆಂದೂ ಅವರೇ ಕಾಂಗ್ರೆಸ ಪಕ್ಷದ ಧುರೀಣತ್ವವನ್ನು ಮುಂದಕ್ಕೂ ವಹಿಸಬೇಕೆಂದೂ ಆದೇಶವಿತ್ತರು. ಕಾಮರಾಜ ನಾಡರರೂ ರಾಜಾಜಿಯ ಧುರೀಣತ್ವದಲ್ಲಿ ತಮಗೆ ಅತೃಪ್ತಿ ಇಲ್ಲವೆಂದು ಹೇಳಿದರು. ಇದು ನಡೆದ ಸಾಬೀತಿನಲ್ಲಿ

ಕೆ. ಆರ್. ಕೆ. ಶೇಟ್,

ಡಯಮಂಡ್-ಮಾರ್ಟ- ಮಂಗಳೂರು.

ಇವರು

ಮಹಾಜನರಿಗೆ– ತಮ್ಮ ಹಾರ್ದಿಕ ಸುಸ್ವಾಗತವನ್ನು ಈ ಮೂಲಕ ಕೊಡುತ್ತಾರಲ್ಲದೆ

ಈ ವರೇಗೂ– ಕೊಟ್ಟ

ಇನ್ನುಮುಂದೆಯೂ ಕೊಡುವ ಸಹಾನುಭೂತಿಗೆ ತುಂಬಾ ಕೃತಜ್ಞರಾಗಿರುತ್ತಾರೆ.

ಕೆ. ಕೆ. ಆರ್. ಶೇಟ್.
ಪ್ರೊಪ್ರೈಟರ್.

ಬೇಗನೆ ಪ್ರಕಟವಾಗಲಿರುವುದು– ನಿಮ್ಮ ಪ್ರತಿಗಳನ್ನು ಕಾದಿರಿಸಿರಿ

ಡಿ। ಶಿಲ್ಲಿಯವರ ಮೂರು ಗ್ರಂಥಗಳು

1. ಪ್ರಾಚೀನ ತುಳುನಾಡ ಇತಿಹಾಸ	ಬೆಲೆ. ರೂ.	೨	೮	೦
2. ಭಾರತದ ಕರ್ಣ (ಗದ್ಯ)	ಬೆಲೆ. ರೂ.	೧	೪	೦
4. ಮುರಳಿ (ಪದ್ಯ)	ಬೆಲೆ. ರೂ.	೦	೪	೦

ಡಿಸೆಂಬರ ೫ನೇ ತಾರೀಕಿಗೆ ಈ ಪುಸ್ತಕಗಳು ಪ್ರಕಟವಾಗಲಿದ್ದು, ಮುಂದಗವಾಗಿ ರೂ. 3–8–0 ಕಳುಹಿಸುವವರಿಗೆ ರಿಜಿಷ್ಟರ್ಡ ಪೋಸ್ಟ್ ಮೂಲಕ ಮೂರೂ ಪುಸ್ತಕಗಳನ್ನು ಕಳುಹಿಸಲಾಗುವುದು. ತ್ವರೆ ಮಾಡಿರಿ.

A. T. Mohan Rai,
Valancia, Kankanady,
MANGALORE 2

UDIPI MUNICIPALITY.

Sealed tenders will be received by the Commissioner, Udipi Municipality upto 4 p. m. on 19—11—1953 for the following work:

Name of work.	Estimate.	Earnest money deposit.
Repairs to drain walls of Kadbettu Road ...	Rs. 1920/-	Rs. 20/-

Particulars of tender, schedule of quantities, specifications etc. can be obtained from the Municipal Office during office hours on working days.

Municipal Office, Udipi, Dated 29—10—1953.

K. GOPALA MENON,
Commissioner,
Udipi Municipality, Udipi.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R I A no 963/1953 Os. 123/1950

ರಾಮಯ್ಯ ಗೌಡ —ಅರ್ಜಿದಾರ ವಾದಿ

ಮತ್ತು

ಪರಮೇಶ್ವರಿ ಹೆಂಗ್ಸು ಕೂಡಾ

—ಎದ್ರಿರು ಪ್ರತಿವಾದಿರು

3ನೇ ಎದ್ರಿ:—ಮುತ್ತಪ್ಪ ರೈ, ಜೊಂಮಣ ಬಂಟರ ಅಳಿಯ. ಪುತ್ತೂರು ತಾಲ್ಲೂಕು ಕೊಳ್ತಿಗೆ ಗ್ರಾಮದ ವಾಲ್ತಾಡಿ ಎಂಬಲ್ಲಿ,

ಇವರಿಗೆ.

ಮೇಲಿನ ರಿಡೆಮ್ಷನ್ ದಾವೆಯಲ್ಲಾದ ಡಿಕ್ರಿ ವಿಧಿ ನೋರೆಗೆ 1, 2ನೇ ಪ್ರತಿವಾದಿರಿಗೆ ಸಲತಕ್ಕ ಕಾಣಿ ಕೃತ ವಗೈರೆ ಕೋರ್ಟಿಗೆ ಕಟ್ಟಿ ಫೈನಲ್ ಡಿಕ್ರಿ ಕೊಡಿಸಬೇಕೆಂತ ಮಾಡಿದ ಮೇಲಿನ ಅರ್ಜಿಯು ತಾರೀಕು 16–11.53 ಕ್ಕೆ ವ್ಯಾಜೆಯಿರುತ್ತದೆ. ಆ ರೀತಿ ಫೈನಲ್ ಡಿಕ್ರಿಯಾಗುವಲ್ಲಿ ನಿಮಗೇನಾದರೂ ಆಕ್ಷೇಪ ವಗೈರೆ ಯಿದ್ದರೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಉಜಾವರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಂಮನ್ನು ಠಿಪ್ಪಾ ಮಾಡಿ ಫೈನಲ್ ಡಿಕ್ರಿ ಮಾಡಲಾಗುವುದೆಂತ ಕೋರ್ಟಿನ ಹುಕ್ಕುಂ ಪ್ರಕಾರ ನಿಮಗೆ ಈ ಮೂಲ್ಕ ತಿಳಿಸೋಣಾಗ್ಯದೆ.

(Sd) N. V. Kolathaya.
Vakil for Petioner,

ಮೊಕ್ಕಾಂ: ಪುತ್ತೂರು, ತಾ 31–10–1953

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. 348/53

ಸೀತಂಮ ಹೆಂಗ್ಸು --ವಾದಿ

ವಿಷ್ಣುಮೂರ್ತಿ ಕೂಡಾ —ಪ್ರತಿವಾದಿರು

4ನೇ ಪ್ರತಿವಾದಿ ವೆಂಕಟ್ರಮಣ ಭಟ್ಟ, 5ನೇ ಪ್ರತಿವಾದಿ ಪದ್ಮನಾಭ ಭಟ್ಟ. ಗುಡ್ಡೆಮನೆ ರಾಮಕೃಷ್ಣ ಭಟ್ರ ಮಕ್ಕಳು. ಕಾರ್ಕಳ ತಾಲ್ಲೂಕು ಮೂರೂರು ಗ್ರಾಮದ ಗುಡ್ಡೆಮನೆಯಲ್ಲಿ P.O. ಮೂಡಬಿದ್ರೆ, ಯಿವರಿಗೆ ಕೋರ್ಟಿನ ಹುಕ್ಕುಂ ಪ್ರಕಾರ ತಿಳಿಸುವುದೇನೆಂದ್ರೆ–

ವಾದಿಳು ನಿಂಮ ಮೇಲೆ ಕೂಡಾ ಜೀವನಾಂಶ ಬಾಕಿಬಗ್ಗೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 13—11—1953ಕ್ಕೆ ಯಿಟ್ಟಿರುವುದರಿಂದ ಅದಕ್ಕೆ ನಿಂಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟಿನ ಮುಂದೆ ನೀವು ಸ್ವತಃ ವ ವಕೀಲರ ದ್ವಾರಾ ಹಾಜರಾಗಿ ಉಜಾವರಿಸಿಕೊಳ್ಳತಕ್ಕದ್ದು ತಪ್ಪಿದ್ರೆ ನಿಂಮ ಗೈರುಹಾಜರಿಯಿಂದ ತೀರ್ಮಾನಿಸಲಾದೀತು. ಎಂತ ಯಿದ ಮೂಲ್ಕ ತಿಳಿಸಿಯದೆ.

(Sd) C. S. Shastry.
Vakil, Puttur.

ಪುತ್ತೂರು, ತಾ, ೨೯—10—53

ಉರುಳಿಸುವ ಹವಣಿಕೆ

ಕಾಂಗ್ರೆಸ ವರಿಷ್ಠರಿಂದ ಭರ್ತ್ಸನೆ ಮತ್ತು ಎಚ್ಚರಿಕೆ

ಒಂದು ತಿಂಗಳೂ ಕಳೆದಿಲ್ಲ. ಅಷ್ಟರೊಳಗೆಯೇ ಡಾ॰ ವರದರಾಜುಲು ನಾಯುಡುರವರ ತಕರಾರು ಅರ್ಜಿ ಹೋಗಿದೆ. ರಾಜಾಜಿಗೆ ಈ ವಿಷಯ ಗೊತ್ತಿಲ್ಲವೆಂದಲ್ಲ. ಅವರು ತಾನು ಸ್ವತಃ ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸದೆ, ಎಲ್ಲವನ್ನೂ ಕಾಂಗ್ರೆಸ ಸಂಸ್ಥೆಯ ವರಿಷ್ಠರ ಮೇಲೆ ಬಿಟ್ಟಿರುವಂತಿದೆ.

ಘಟನಾಬದ್ಧ ಸೇವಕ

ಇದರಿಂದ ನೆಹರೂರ ನಿಲುವು ಹಾಗೂ ವರ್ತನೆಗೆ ತುಂಬ ಮಹತ್ವ ಬಂದಿದೆ. ಕಾಂಗ್ರೆಸ ವರಿಷ್ಠರು ತಮ್ಮ ಅನುಯಾಯಿಗಳು ತಪ್ಪು ದಾರಿಯನ್ನು ತುಳಿಯದಂತೆ ಎಚ್ಚರಿಕೆಯನ್ನೂ ಯೋಗ್ಯ ಮಾರ್ಗದರ್ಶನವನ್ನೂ ನೀಡ ಬೇಕಾದುದು ಕರ್ತವ್ಯ. ಯಾವಾಗಲೂ ಶಿಸ್ತಿಗೇಡಿತನವನ್ನು ಪ್ರದರ್ಶಿಸುವ ತುಂಟ ಅನುಯಾಯಿಗಳ ಕುರಿತು ತುಸು ಕಠೋರತೆಯನ್ನು ತೋರಿಸುವುದೂ ಕ್ರಮಪ್ರಾಪ್ತ. ತಮಿಳುನಾಡು ಕಾಂಗ್ರೆಸನ್ನು ಕೆಲವು ವಿಶಿಷ್ಟ ಹಿತ ಸಂಬಂಧವುಳ್ಳ ಜನರು ಸೇರಿಕೊಂಡು ಪದೇಪದೇ ಗೊಂದಲ ಹೆಚ್ಚಿಸುವುದನ್ನು ಕೂಡಲೇ ನಿಲ್ಲಿಸಲು ಕಾಂಗ್ರೆಸ್ ವರಿಷ್ಠರು ಪ್ರಯತ್ನಿಸುವುದವಶ್ಯ. ಈ ಪ್ರಯತ್ನದ ಪ್ರತೀಕವೆಂಬಂತೆ ನೆಹರೂರ ಉತ್ತರ ವಿರುತ್ತದೆ. ರಾಜಾಜಿಯವರು "ಹಿತ್ತಿಲ ಬಾಗಿಲು" ಮೂಲಕ ಪ್ರವೇಶವನ್ನು ಪಡೆದು ಧುರೀಣತ್ವಗಳಿಸಿದರೆಂಬ ಆರೋಪವನ್ನು ಖಂಡತುಂಡವಾಗಿ ನೆಹರೂ ನಿರಾಕರಿಸಿರುವರು. ರಾಜ್ಯಾಂಗ ಘಟನೆಯಂತೆ ಗವರ್ನರರು ಯೋಗ್ಯರಾದವರನ್ನು ಮೇಲ್ಮನೆಗೆ ನಾಮಕರಣ ಮಾಡಬಹುದೆಂದಿರುವಾಗ, ಮತ್ತು ಹಾಗೆ ಸದಸ್ಯರಾದವರು ಮಂತ್ರಿಮಂಡಳ ರಚಿಸುವುದಕ್ಕೆ ತಡೆ ಇಲ್ಲದಿರುವಾಗ-ಕಾಂಗ್ರೆಸ್ ಪಕ್ಷದ ಸದಸ್ಯರು ರಾಜಾಜಿಯ ಕುರಿತು ವ್ಯರ್ಥ ಆರೋಪವನ್ನು ಹೊರಿಸಿರುವುದು ನಾಚಿಕೆಗೇಡು. ಪ್ರಜಾ ತಾಂತ್ರಿಕ ಪ್ರಣಾಳಿಯ ಗಂಧಗಾಳಿಯನ್ನೆ ಅರಿಯದವರೆಂದು ಮತ್ತು ಘಟನೆಯ ಕುರಿತು ವಿದ್ರೋಹಭಾವನೆಯನ್ನು ತಳೆದವರೆಂದು ತಮ್ಮನ್ನು ವರ್ಜಿಸಿರುವುದನ್ನು ಕಂಡಾದರೂ, ತಪ್ಪು ತಿದ್ದಿಕೊಳ್ಳಲು ಈ ಸದಸ್ಯರು ಪ್ರಯತ್ನಿಸುವುದು ಇಷ್ಟವಾಗಿರುತ್ತದೆ.

ತಪ್ಪಿಬಿದ್ದುದಿಲ್ಲ

ರಾಜಾಜಿಯವರು ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಿರುವರೆಂದು ಅವರ ಮೇಲೆ ಆರೋಪ ಹೊರಿಸಲಾಗಿದೆ. ಇದನ್ನು ಸಮರ್ಥಿಸುವುದಕ್ಕೋಸ್ಕರ ಈಚೆಗೆ ಮಂತ್ರಿಮಂಡಳಕ್ಕೆ ಮೂವರು ಹೊಸಬರನ್ನು ಸೇರಿಸಿಕೊಳ್ಳುವಾಗ ಕಾಂಗ್ರೆಸ ಪಕ್ಷದೊಡನೆ ವಿಚಾರಿಸಲಿಲ್ಲವೆಂದು ಹೇಳಲಾಗಿದೆ. ಇದನ್ನು ಉತ್ತರಿಸುತ್ತಾ ನೆಹರೂರವರು ತಮ್ಮ ಸಮ್ಮತಿಯನ್ನು ಪಡೆದುಕೊಂಡೇ ಹೊಸಬರನ್ನು ಮಂತ್ರಿಮಂಡಳಕ್ಕೆ ರಾಜಾಜಿ ಸೇರಿಸಿಕೊಂಡರು ಎಂದು ನುಡಿದಿರುವರು. ಕಾಂಗ್ರೆಸ ವರಿಷ್ಠರ ಮನೋಗತವನ್ನು ರಾಜಾಜಿ ಮುಂದಾಗಿ ತಿಳಿದುಕೊಳ್ಳುತ್ತಿದ್ದರೆಂಬುದನ್ನು ನೆಹರೂರ ಈ ವಿವರಣೆ ಸ್ಪಷ್ಟೀಕರಿಸುತ್ತದೆ. ಶಾಸನ ಸಭಾ ಸದಸ್ಯೆಯಲ್ಲದ ಶ್ರೀಮತಿ ಜ್ಯೋತಿ ವೆಂಕಟಾಚಲಮರನ್ನು ಮಂತ್ರಿಯಾಗಿ ನೇಮಿಸಿದ ಸಂಗತಿಯನ್ನು ಪ್ರಸ್ತಾಪಿಸುತ್ತಾ ನೆಹರೂರವರು "ಮಹಿಳಾ ಸದಸ್ಯೆಯೊಬ್ಬಳು—ಅದರಲ್ಲೂ ಸಮಾಜಸೇವಾ ಕಾರ್ಯದಲ್ಲಿ ದುಡಿದ ಹರಿಜನ ಮಹಿಳೆ ಮಂತ್ರಿಮಂಡಳದಲ್ಲಿರುವುದು ಮದ್ರಾಸಿಗೆ ಭೂಷಣಪ್ರಾಯವಾಗಿದೆ" ಎಂದಿರುವರು. ರಾಜಾಜಿ ಯಾವಾಗಲೂ ಯೋಗ್ಯತೆಯುಳ್ಳವರನ್ನೆ ಹೊಣೆಗಾರ ಸ್ಥಾನಕ್ಕೆ ನೇಮಿಸಿಕೊಳ್ಳುವರೆಂಬದು ಎಲ್ಲರಿಗೂ ತಿಳಿದ ವಿಷಯ.

ರಾಜಾಜಿಯೇ ನಾಯಕ.

ತಮಿಳು ನಾಡು ಕಾಂಗ್ರೆಸ ಪಕ್ಷದ ಈ ಸದಸ್ಯರು ಹೊಸ ಧುರೀಣನನ್ನು ಆರಿಸಲು ಅವಕಾಶ ನೀಡಬೇಕೆಂದು ಕೇಳಿರುವರು. ಇದು ಕೃತಘ್ನತೆಯ ಪರಮಾವಧಿಯೆಂದು ನೆಹರೂರ ಅಭಿಪ್ರಾಯ. ಮದ್ರಾಸಿನಲ್ಲಿ ಕಾಂಗ್ರೆಸ ಪಕ್ಷಕ್ಕಾಗಲೀ ಬೇರೆ ಯಾರಿಗೇ ಆಗಲೀ ಸಮರ್ಥ ಮಂತ್ರಿಮಂಡಳವನ್ನು ರಚಿಸುವುದು ಅಸಾಧ್ಯವೆಂಬ ಪರಿಸ್ಥಿತಿ ನಿರ್ಮಾಣಗೊಂಡಿದ್ದ ಆ ಕಾಲದಲ್ಲಿ—ಇದೇ ತಮಿಳು ನಾಡಿನ ಕಾಂಗ್ರೆಸಿಗರು ವರಿಷ್ಠರ ಕಾಲಿಗೆಬಿದ್ದು ರಾಜಾಜಿ ನಾಯಕ ಪೀಠವನ್ನು ಏರುವಂತೆ ಮನವೊಲಿಸಲು ಕೇಳಿಕೊಂಡಿದ್ದರು. ನೆಹರೂರವರ ವಿನಂತಿ ಮತ್ತು ಒತ್ತಾಯಗಳಿಲ್ಲದಿದ್ದರೆ ರಾಜಾಜಿ ಮದ್ರಾಸಿನ ರಾಜಕಾರಣದಲ್ಲಿ ಮರಳಿ ಪ್ರವೇಶಿಸುತ್ತಲೇ ಇರಲಿಲ್ಲ. ಈಗ ಅದೇ ರಾಜಾಜಿಯ ನಾಯಕತ್ವ ಬೇಡವೆನ್ನುವವರು ನೀಚ ಪ್ರವೃತ್ತಿಯನ್ನು ಪ್ರದರ್ಶಿಸುವಂತಿದೆ. ನೆಹರೂರವರು ರಾಜಾಜಿಯ ನಾಯಕತನದ ಕುರಿತು ಏನೊಂದೂ ತಕರಾರು ಇರಬಾರದೆಂದೂ ರಾಜಾಜಿಯೇ ಮದ್ರಾಸಿನಲ್ಲಿ ಮಂತ್ರಿಮಂಡಳವನ್ನು ನಡೆಸಿಕೊಂಡು ಹೋಗಬೇಕೆನ್ನುವುದು ತಮ್ಮ ಹಾಗೂ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಇಚ್ಛೆಯೆಂದೂ ಸ್ಪಷ್ಟ ಮಾತುಗಳಲ್ಲಿ ತಿಳಿಸಿರುವರು. ಇಷ್ಟು ಮಾತ್ರದಿಂದಲೇ ರಾಜಾಜಿಯ ವಿಷಯದಲ್ಲಿ ಉಂಟಾದ ಅಸಮಾಧಾನದ ಭಾವನೆ ಮಾಯವಾದೀತೆ? ರಾಜಾಜಿ ಈ ವಿಷಯವನ್ನು ಪ್ರಸ್ತಾಪಿಸುತ್ತಾ ಜಾತೀಯತೆಯನ್ನು ತಾವು ಎಂದಿಗಾದರೂ ವಿರೋಧಿಸಿಯೇ ಸಾಗುವೆವೆಂದೂ ಕಾಂಗ್ರೆಸ್ ವರಿಷ್ಠರಾದರೂ ಈ ಸಂಗತಿಯಲ್ಲಿ ಬಿಗಿಯಾಗಿ ನಡೆದುಕೊಳ್ಳಬೇಕೆಂದೂ ಹೇಳಿರುವರು. ರಾಜಾಜಿಯ ಭದ್ರ ಮುಷ್ಟಿಯ ಮುಂದೆ ಕೆಲವು ತಮಿಳು ನಾಡ. ಕಾಂಗ್ರೆಸಿಗರ ಹಠಕತನ ಸೋಲುಂಡರೂ ಈ ಪ್ರವೃತ್ತಿಯನ್ನು ಬುಡಸಹಿತ ನಿರ್ಮೂಲ ಮಾಡಲು ಪ್ರಯತ್ನಗಳಾಗುವುದು ಅಪೇಕ್ಷಣೀಯವೂ ಅನಿವಾರ್ಯವೂ ಆಗಿದೆ. ಕಾಂಗ್ರೆಸ್ ಸಂಸ್ಥೆಯಲ್ಲಿ ಆತ್ಮಘಾತಕ ಪ್ರವೃತ್ತಿಗೂ ದೌರ್ಬಲ್ಯಕ್ಕೂ ಎಷ್ಟು ಮಾತ್ರಕ್ಕೂ ಅವಕಾಶವಿರಕೂಡದು.

ಪ್ರಾದೇಶಿಕ ಸೈನ್ಯಪಡೆ

ನಾಲ್ಕು ವರ್ಷ ಪೂರ್ವದಲ್ಲಿ ಆಗ ಭಾರತದ ಗವರ್ನರ ಜನರಲರಾಗಿದ್ದ ಶ್ರೀ ರಾಜಗೋಪಾಲಾಚಾರಿಯವರಿಂದ ಪ್ರವರ್ತಿಸಲ್ಪಟ್ಟ "ಪ್ರಾದೇಶಿಕ ಸೈನ್ಯ"ವು ಇಂದು ಬಹಳ ಜನಪ್ರಿಯತೆಯನ್ನು ಗಳಿಸಿಕೊಂಡಿದೆ; ಮತ್ತು ದ್ವಿತೀಯ ಸಂರಕ್ಷಣಾ ವ್ಯೂಹವೆಂದು ಪ್ರಸಿದ್ಧಿ ಪಡೆದಿದೆ. ಇದರಲ್ಲಿ ೧೮ರಿಂದ ೩೫ ವಯಸ್ಸಿನ ಪುರುಷರು ಸೇರಿಕೊಂಡು ಯುದ್ಧ ಶಿಕ್ಷಣ, ತಾಂತ್ರಿಕ ತರಬೇತಿ ಮುಂತಾದವುಗಳನ್ನು ಪಡೆದುಕೊಳ್ಳುವರು. ತತ್ಪರಿಣಾಮವಾಗಿ ನಿತ್ಯ ಜೀವನದಲ್ಲಿ ತಮ್ಮ ಗಳಿಕೆಯನ್ನು ಹೆಚ್ಚಿಸಿಕೊಳ್ಳುವರಲ್ಲದೆ ಅಗತ್ಯ ಬಿದ್ದಾಗ, ರಾಷ್ಟ್ರಕ್ಕೂ ಅವರ ಸೇವೆ ಲಭ್ಯವಾಗುತ್ತದೆ. ರಾಜಾಜಿಯವರು ದಿನಾಂಕ ೨೯ರಂದು ಪ್ರಸಾರ ಭಾಷಣದಲ್ಲಿ ಹೇಳಿದಂತೆ "ಪ್ರಾದೇಶಿಕ ಸೈನ್ಯವು ರಾಷ್ಟ್ರೀಯ ಭದ್ರತೆಯ ಮುಖ್ಯಾಂಗವಾಗಿರುವುದಲ್ಲದೆ, ಭಾರತದ ಸೇನೆಯು ಜನತೆಯೊಂದಿಗೆ ಸಮಾವೇಶವಾಗುವಂತೆಯೂ ಮಾಡುತ್ತದೆ.' ಬೇರೆ ಬೇರೆ ಉದ್ಯೋಗದಲ್ಲಿರುವ ಜನರಿಗೆ ಸಹ ಈ ಸೈನ್ಯದಲ್ಲಿ ಸೇರಲು ಅವಕಾಶ ಕೊಡುವುದಕ್ಕೋಸ್ಕರ ಪಾರ್ಲಿಮೆಂಟು ಒಂದು ಕಾಯಿದೆ ಮಾಡಿ, ಅಂಥವರ ಸಾಮಾನ್ಯ ನೌಕರಿಗೆ ಭದ್ರತೆ ನೀಡಿದೆ. ಆದುದರಿಂದ ನೌಕರಿ ಕಳೆದುಕೊಳ್ಳುವ ಭಯವಿಲ್ಲದೆ, ಯಾರು ಬೇಕಾದರೂ ಈ ಸೈನ್ಯದಲ್ಲಿ ಭರ್ತಿಯಾಗಬಹುದು.

ರೈಲ್ವೇಗಳಲ್ಲಿ ಸೌಕರ್ಯ

ರೈಲ್ವೆ ಬಳಕೆಗಾರರ ಸಲಹಾ ಮಂಡಳವು ಹೊಸ ದಿಹಲಿಯಲ್ಲಿ ಸಭೆ ಸೇರಿದಾಗ ಮಂತ್ರಿ ಲಾಲಬಹಾದುರ ಶಾಸ್ತ್ರಿಗಳು ರೈಲ್ವೆಯಲ್ಲಿ ಸೌಕರ್ಯವನ್ನು ಹೆಚ್ಚಿಸುವ ಕುರಿತು ತಮಗಿರುವ ಆಸ್ಥೆಯನ್ನು ವ್ಯಕ್ತಗೊಳಿಸಿದರು. ಪ್ರತಿಯೊಂದೂ ಡಬ್ಬಿಗೂ ಬೇಕಾದ [illegible] ಮೂರನೆ ವರ್ಗದ ಪ್ರಯಾಣಿಕರಿಗೆ ಕುಳಿತುಕೊಳ್ಳಲು ಸಾಕಷ್ಟು ಉತ್ತಮ ಹಾಗೂ ವಿಶಾಲವಾದ ಜಾಗ ಮುಂತಾದವುಗಳನ್ನು ಒದಗಿಸುವ ಭರವಸೆ ದೊರೆತಿದೆ. ಬಂಡಿಗಳ ಓಡಾಟವು ಹೆಚ್ಚಿಕೊಳ್ಳದಿದ್ದರೆ, ಈಗ ರೈಲ್ವೆಯಲ್ಲಿರುವ ಜನಸಮ್ಮರ್ದ ಕಡಿಮೆಯಾಗುವುದು ಶಕ್ಯವಿಲ್ಲ. ಆದರೆ ಬಂಡಿಗಳ ಪೂರೈಕೆಯು ಸಾಕಷ್ಟು ಇಲ್ಲದಿರುವುದರಿಂದ ಈ ವಿಷಯದಲ್ಲಿ ಪ್ರಗತಿ ನಿಧಾನವಾಗಿರುತ್ತದೆ. ಪ್ರಯಾಣಿಕರ ಕಷ್ಟ ಹೆಚ್ಚಿಸುವಂತೆ ಭಿಕ್ಷುಕರ ಮತ್ತು ತಿಕೇಟು ಪಡೆಯದೆ ಪ್ರಯಾಣಿಸುವವರ ಹಾವಳಿಯೂ ಮಿತಿ ಮೀರಿದೆ. ಟಿಕೇಟಿಲ್ಲದ ಪ್ರಯಾಣಿಕರು ರಾಷ್ಟ್ರೀಯ ಬೊಕ್ಕಸಕ್ಕೆ ವಂಚನೆ ಮಾಡಿದರೆ, ಭಿಕ್ಷುಕರು ಪ್ರಯಾಣಿಕರ ಕಷ್ಟ ಹೆಚ್ಚಿಸುವರು. ಸಾರ್ವಜನಿಕರೂ ತಿಕೇಟು ತಪಾಸಣೆ ಮಾಡುವ ಅಧಿಕಾರಿಗಳೂ ಪರಸ್ಪರ ಸಹಕರಿಸಿ, ಈ [illegible] ತಡೆಗಟ್ಟಲು ಪ್ರಯತ್ನಿಸಬೇಕೆಂದು ಸಚಿವರು ಸೂಚಿಸಿರುವುದು ಸಮಂಜಸ.

ಉಡುಪಿ ಡಿ. ಮು. ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 501 1953.

ದಿ. ನೆಶನಲ್ ಪ್ರಿಂಟರ್ಸ್ ಎಂಡ್ ಪಬ್ಲಿಶರ್ಸ್ ಲಿಮಿಟೆಡ್ ಉಡುಪಿ-ಕಡೆಯಿಂದ ಮೆನೇಜಿಂಗ್ ಡೈರೆಕ್ಟರ್ ಕೆ. ಮಂಜುನಾಥ ಪೈ—ವಾದಿ

ಮತ್ತು

ಕೆ. ಮಹಾಬಲ ಅಡಿಲ- ಬೊಂಮ್ಮಯ್ಯ ಅಡಿಲರ ಮಗ ನ ಶ್ರೀ ಮಹಾಲಿಂಗೇಶ್ವರ ಟಾಕೀಸಿನ ಪ್ರೋಪ್ರೈಟರ್—ಮಂಗಳೂರು ತಾಲೂಕು ಕವತಾರು ಗ್ರಾಮ —ಪ್ರತಿವಾದಿ

ಸದರಿ ಪ್ರತಿವಾದಿಗೆ—

ವಾದಿಯ ಕಂಪೆನಿಯಲ್ಲಿ ಪ್ರತಿವಾದಿಯು ಮಾಡ್ಸಿದ ಪ್ರಿಂಟಿಂಗ್ಸ್ ಬಾಬಿನಲ್ಲಿ ತಾರೀಕು 24—11—52ರಿಂದಾ 30-6-53ರ ವರೆಗೆ ನಡ್ಸಿದ ಲೇವಾದೇವಿ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರಬೇಕಾದ ಅಸಲು ಬಡ್ಡಿ ಕೂಡಾ ರೂಪಾಯಿ 100-1-0ಕ್ಕೆ ದಾಕಲು ಮಾಡಿದ ಸದರಿ ದಾವೆಯು ತಾರೀಕು 16-11-53ಕ್ಕೆ ಯಿತ್ಯೋರ್ಥವಾಗಿಯದೆ—ಆ ದಿವಸ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಸದರಿ ಕೋರ್ಟಿನ ಮುಂದೆ ಹಾಜರಾಗಿ ಉಪಸರಿಸದೆ ಯಿದ್ರೆ ಆತನ ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು—ಸದರಿ ಪ್ರತಿವಾದಿಗೆ ಯಿ ಮೂಲಕ ತಿಳಿಯಪಡಿಸಲಾಗಿಯದೆ.

M Damodhar Kamath.
Advocate for Plff.

ಉಡುಪಿ, ತಾ 3—11—53,

SCINDIA (B. S. N. LINE)
SARASVATI AND SABARMATI
LUXURIOUS CABINS SPACIOUS DECKS
BOMBAY — KARACHI
Via Cutch Mandvi — Every Saturday.
BOMBAY — COCHIN
Via Mormugao and Mangalore.
From Cochin for Bombay — Every Sunday.
From Bombay for Cochin — Every Thursday.
FURTHER PARTICULARS FROM:—
100 Frere Road, Bomby 9
or from **Company's Offices at Outports.**

Deepavali Greetings
to
All Our Customers & Wellwishers
UDIPI SRI KRISHNA BHAVAN
BOARDING & LODGING
MANGALORE.
Specially noted for attached latrines & bathrooms.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India.

ನವಯುಗ

ಉಡುಪಿ, ಗುರುವಾರ ೫-೧೧-'೫೩

ತಿದ್ದಿಕೊಂಡ ತಪ್ಪು

ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯು ೩ನೇ ಅಕ್ಟೋಬರ ೧೯೫೩ರಂದು ಹುಬ್ಬಳ್ಳಿಯಲ್ಲಿ ಸಭೆ ಸೇರಿದಾಗ ಕಳೆದ ಎಪ್ರಿಲ್ ತಿಂಗಳ ೨೦ನೇ ದಿನಾಂಕ ತಾನು ಸ್ವೀಕರಿಸಿದ ಗೊತ್ತುವಳಿಯಂತೆ ಕ್ರಮ ತೆಗೆದುಕೊಳ್ಳುವುದು ಅನಗತ್ಯವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಹಿಂದಿನ ಗೊತ್ತುವಳಿಯು ೧೯೫೩ನೇ ಅಕ್ಟೋಬರದೊಳಗೆ ಕರ್ನಾಟಕ ರಾಜ್ಯವ ನಿರ್ಮಾಣವಾಗಬೇಕೆಂದೂ ಈ ಅಕ್ಟೋಬರ ಮಾಸಾಂತ್ಯದೊಳಗೆ ಕೇಂದ್ರ ಸರಕಾರದಿಂದ ಈ ಬಗ್ಗೆ ಆಶ್ವಾಸನೆ ದೊರೆಯಬೇಕೆಂದೂ ಹೇಳಿದ್ದಿತು. ಇದಕ್ಕೆ ತಪ್ಪಿದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸದಸ್ಯರೂ ಕರ್ನಾಟಕದ ಪಾರ್ಲಿಮೆಂಟು ಮತ್ತು ಶಾಸನ ಸಭಾ ಸದಸ್ಯರೂ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ ಸಮಿತಿ ನಿರ್ಧರಿಸಿದ್ದಿತು. ಕೇಂದ್ರ ಸರಕಾರವು ಭಾಷಾ ರಾಜ್ಯಗಳ ನಿರ್ಮಾಣ ಪ್ರಶ್ನೆಯನ್ನು ಮೊದಲಿನಿಂದಲೂ ಮುನ್ನಿಸುತ್ತಾ ಬಂದಿರುವಾಗ, ಆಂಧ್ರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಕೈಗೆ ತೆಗೆದುಕೊಂಡಿರುವಾಗ, ಬೇರೆ ಭಾಷಾ ರಾಜ್ಯಗಳ ಪ್ರಶ್ನೆಯನ್ನು ವಿಚಾರಿಸಲು ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕ ಮಾಡುವುದಾಗಿ ಸಾರಿರುವಾಗ- ಕರ್ನಾಟಕ ಪ್ರದೇಶ ಕಾಂಗ್ರೆಸು ಸಮಿತಿಯು ಕೇವಲ ಉದ್ವೇಗ ಹಾಗೂ ವಿಕಾರವಶವಾಗಿ ರಾಜೀನಾಮೆ ಕೊಡುವ ಬೆದರಿಕೆ ತುಂಬಿದ ಗೊತ್ತುವಳಿಯನ್ನು ಸ್ವೀಕರಿಸಿದುದು ಯಾರಿಗೂ ಸಮಾಧಾನಕರವೆಂದು ತೋರಿರಲಿಲ್ಲ. ಕೇಂದ್ರ ಸರಕಾರದ ಮೇಲೆ ಕಾಲ ನಿರ್ಧಾರವನ್ನು ಹೇರುವವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸು ಸಮಿತಿ ಹೋದುದು ಮತ್ತು ಮನವೊಲಿಸುವ ಕಾರ್ಯವನ್ನು ಬಿಟ್ಟುಕೊಟ್ಟು ರಾಜೀನಾಮೆಯ ಬೆದರು ಗುಂಡಿಗೆ ಅವಕಾಶ ನೀಡಿದುದು ಯೋಗ್ಯ ಕ್ರಮವಾಗಿರಲಿಲ್ಲ. ಈ ತಪ್ಪನ್ನು ಈಗಲಾದರೂ ಪ್ರದೇಶ ಕಾಂಗ್ರೆಸು ತಿದ್ದಿಕೊಂಡಿರುವುದು ತೃಪ್ತಿಕರವಿದೆ. ಇದರಿಂದ ರಾಜೀನಾಮೆಯ ಬೆದರು ಗುಂಡು ಹಾಕುವುದರಲ್ಲಿ ಕನ್ನಡಿಗರನ್ನು ಮೀರಿಸುವವರಿಲ್ಲೆಂಬ ವ್ಯರ್ಥ ವ್ಯಂಗ್ಯಕ್ಕೆ ಮಾತ್ರ ಬೇಕೆಂದು ಅವಕಾಶವಾಯಿತು ಏನೇ ಇರಲಿ- ಎಪ್ರಿಲ್ ೨೦ನೇ ದಿನಾಂಕದ ಬಳಿಕ ಘಟನೆಗಳು ಕರ್ನಾಟಕ ಪ್ರದೇಶ ಕಾಂಗ್ರೆಸದ ಬೇಡಿಕೆಗಳಿಗೆ ಬಹಳ ಅನುಕೂಲವಾಗಿ ಬದಲಾವಣೆ ಹೊಂದಿರುವುದನ್ನು ಈಗಿನ ಗೊತ್ತುವಳಿಯಲ್ಲಿ ಗುರುತಿಸಿರುವರು. "ಕರ್ನಾಟಕ ಪ್ರಾಂತ ರಚನೆಯ ಪ್ರಶ್ನೆಯು ಹೆಚ್ಚು ಸುಲಭವಾದುದೂ ಸುಪರಿಚಿತವೂ ಸಾಮಾನ್ಯವಾಗಿ ಒಪ್ಪಿಗೆ ಪಡೆದಂಥವೂ ಅದರ ಮಾರ್ಗದಲ್ಲಿ ವಿಶೇಷ ಅಡಚಣೆಗಳಿಲ್ಲವೆಂದೂ ಪ್ರಧಾನ ಮಂತ್ರಿಗಳು ಸ್ಪಷ್ಟವಾಗಿ ಹೇಳಿರುವರು. ಕರ್ನಾಟಕ ಪ್ರಾಂತ ರಚನೆಯ ಮಾರ್ಗದಲ್ಲಿ ಮೈಸೂರು ಆತಂಕವಾಗಲ್ಲೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿರುವರು. ಕರ್ನಾಟಕ ಪ್ರಾಂತರಚನೆ ಮಾಡಿದರೆ ನೆರೆಪ್ರಾಂತಗಳಲ್ಲಿ ತೊಂದರೆಗಳುದ್ಭವಿಸುವವೆಂಬ ಕಾರಣದಿಂದ ಕರ್ನಾಟಕ ಪ್ರಾಂತ ರಚನೆಯನ್ನು ಮುಂದೂಡುವ ಉದ್ದೇಶವು ಭಾರತ ಸರಕಾರಕ್ಕೆ ಇಲ್ಲವೆಂದೂ ಅವರು ಭರವಸೆ ನೀಡಿರುವರು. ಈ ಭರವಸೆಗಳು ಪ್ರದೇಶ ಕಾಂಗ್ರೆಸ್ ಸಮಿತಿಯು ಎಪ್ರಿಲ ೨೦ರಂದು ಸ್ವೀಕರಿಸಿದ ಗೊತ್ತುವಳಿಯ ಬೇಡಿಕೆಗಳನ್ನು ಸ್ವಾರಸ್ಯವಾಗಿ ಪೂರೈಸಿರುವುವು" ಎಂದು ಪ್ರದೇಶ ಕಾಂಗ್ರೆಸು ಅಭಿಪ್ರಾಯ ಗೊಂಡಿದೆ. ಪ್ರಧಾನಿ ನೆಹರೂರವರು ಶ್ರೀ ನಿಜಲಿಂಗಪ್ಪನವರಿಗೆ ದಿನಾಂಕ ೨ರಂದು ಬರೆದ ಪತ್ರದಲ್ಲಿ ಕರ್ನಾಟಕ ರಾಜ್ಯದ ನಿರ್ಮಾಣದ ಬಗ್ಗೆ ಹಾಗೂ ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕದ ಕುರಿತು ತಮ್ಮ ಅಭಿಪ್ರಾಯಗಳೇನೆಂಬುವನ್ನು ವಿವರವಾಗಿ ತಿಳಿಸಿರುವರು. ಈ ಪತ್ರವನ್ನು ನಿಜಲಿಂಗಪ್ಪನವರು ಪ್ರದೇಶ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಓದಿ ಹೇಳಿ ಎಲ್ಲ ಕಾಂಗ್ರೆಸ್ಸಿಗರಿಗೆ ನೆಹರೂರವರು ಏಕೀಕರಣದ ಮಾರ್ಗದಲ್ಲಿ ಆತಂಕವೊಡ್ಡುವ ಮನಸ್ಸಿಟ್ಟುಕೊಂಡಿಲ್ಲವೆಂದು ಸ್ಪಷ್ಟೀಕರಿಸಿರುವರು. ಮೊನ್ನೆ ತಾನೆ ಕೇಂದ್ರ ಗೃಹಮಂತ್ರಿ ಡಾ. ಕಟಜೂರವರು ಮಂಗಳೂರಿಗೆ ಬಂದಾಗ ಕರ್ನಾಟಕ ಏಕೀಕರಣದ ಕುರಿತು ಬಹಳ ಆಶಾದಾಯಕವಾದ ಮಾತುಗಳನ್ನು ಆಡಿರುವರು. ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕವನ್ನು ಈ ತಿಂಗಳಲ್ಲಿ ಸೇರುವ ಪಾರ್ಲಿಮೆಂಟು ಅಧಿವೇಶನದಲ್ಲಿ ಸಾರಲಾಗುವುದೆಂದೂ ಪರಿಸ್ಥ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾದ ಪತಂಜಲಿ ಶಾಸ್ತ್ರಿಯವರು ಅಥವಾ ಪಂಡಿತ ಹೃದಯನಾಥ ಕುಂಜ್ರೂ ಅವರು ಈ ಆಯೋಗದ ಅಧ್ಯಕ್ಷರಾಗಬಹುದೆಂದೂ ವರದಿಗಳು ಸೂಚಿಸುತ್ತವೆ. ಹೀಗೆ ಎಲ್ಲವೂ ಸುಗಮವಾಗಿದೆ. ಮತ್ತು ಗೊತ್ತುವಳಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸು ಹೇಳಿದಂತೆ "ಈಗ ಶಾಂತಿಯುತವಾದ ಹಾಗೂ ವಿಧಾಯಕ ರೀತಿಯಲ್ಲಿ ಜನರ ಪೇಳೆ ಹಾಗೂ ಶಕ್ತಿಗಳನ್ನು ಉಪಯೋಗಿಸುವ ಮತ್ತು ಕರ್ನಾಟಕ ಪ್ರಾಂತ ರಚನೆಯ ಪ್ರಶ್ನೆಯನ್ನು ಉಚ್ಚ ಮಟ್ಟದ ಆಯೋಗದ ಮುಂದೆ ಸಮರ್ಥ ರೀತಿಯಲ್ಲಿ ಮಂಡಿಸುವ ಕಾಲ ಬಂದಿರುತ್ತದೆ." ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಒಂದುಗೂಡಿಸಿ ಸಂಯುಕ್ತ ಕರ್ನಾಟಕ ರಾಜ್ಯ ರಚನೆಯ ಮಹತ್ವದ ಹಾಗೂ ಅವಸರದ ಕಾರ್ಯದಲ್ಲಿ ಪ್ರದೇಶ ಕಾಂಗ್ರೆಸ್ಸಿನೊಡನೆ ಸಹಕರಿಸಲು ನಾವೂ ಜನತೆಯನ್ನು ಬಿನ್ನವಿಸುತ್ತೇವೆ.

ಕೊಮಿಂಟಾಂಗ ಪಡೆಯ ಚಟುವಟಿಕೆ

ಇನ್ನೂ ನಿಂತಿಲ್ಲವೆಂದು ಬರ್ಮಾದ ಆಕ್ಷೇಪ

ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯ ಮುಂದೆ ಮರಳಿ ಬರ್ಮಾದಲ್ಲಿ ರಾಷ್ಟ್ರೀಯ ಚೀನೀ ಕೂಟ ಯೋಧರ ಚಟುವಟಿಕೆಗಳ ಪ್ರಸಂಗ ಚರ್ಚೆಗೆ ಬಂದಿರುತ್ತದೆ. ಕೆಲವು ತಿಂಗಳುಗಳ ಪೂರ್ವದಲ್ಲಿ ರಾಷ್ಟ್ರಸಂಘವು ಒಂದು ಸಮಿತಿಯನ್ನು ನೇಮಿಸಿ, ಬರ್ಮಾದ ನೆಲದಿಂದ ಈ ಕೂಟ ಯೋಧರ ನಿರ್ಗಮನಕ್ಕೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವಂತೆ ವಿಧಿಸಿತು. ಆದರೆ ಈ ಸಮಿತಿಯ ಕಾರ್ಯವು ಯಶಸ್ವಿಯಾಗಿರುವುದಿಲ್ಲ — ಚಿಯಾಂಗ ಕೈಶೇಕರ ರಾಷ್ಟ್ರೀಯ ಚೀನಾವು ವಚನ ಭಂಗ ಮಾಡಲು ಉದ್ಯುಕ್ತವಾದುದರಿಂದ ಈ ಸಮಿತಿಯ ಕಾರ್ಯಕಲಾಪಗಳು ಅಲ್ಲಿಗೇ ಮುಕ್ತಾಯವಾಗುವ ಪರಿಸ್ಥಿತಿ ನಿರ್ಮಾಣಗೊಂಡಿತು ಅಲ್ಪಸ್ವಲ್ಪ ಸೈನಿಕರು ಹಿಂದೆರಳಿರುವುದು ನಿಜವಾದರೂ ಈ ಪ್ರಮಾಣಕ್ಕೆ ನಾಲ್ಕಾರು ಪಟ್ಟು ಹೆಚ್ಚಾಗಿಯೇ ಹೊಸ ಕೂಟ ಯೋಧರು ಬರ್ಮಾದ ನೆಲವನ್ನು ಪ್ರವೇಶಿಸುತ್ತಿರುವರು. ಇದರ ಕಾರಣವೇನೋ ಹೇಳಲು ಬಾರದು — ಹಾಗೆಂದು ಥ್ಯಾಲೆಂಡ, ಅಮೇರಿಕಾ, ರಾಷ್ಟ್ರೀಯ ಚೀನಾ ಇತ್ಯಾದಿ ದೇಶಗಳ ಉತ್ತೇಜನವಿಲ್ಲದೆ ಹೀಗಾಗುವುದು ಸಾಧ್ಯವಿಲ್ಲೆಂಬುದು ಮಾತ್ರ ಸ್ಪಷ್ಟವಾಗಿರುತ್ತದೆ. ಈಗ ಬರ್ಮಾದಲ್ಲಿ ಹೆಚ್ಚು ಕಡಿಮೆ ೧೨ ಸಾವಿರ ಮಂದಿ ರಾಷ್ಟ್ರೀಯ ಚೀನೀ ಕೂಟ ಯೋಧರು ಶಸ್ತ್ರಾಸ್ತ್ರ ಸನ್ನಿಹಿತರಾಗಿರುವರು. ಇವರಿಗೆಲ್ಲ ಆಯುಧಗಳನ್ನು ಪೂರೈಸಿದವರು ಯಾರು? ಮರೆಗಾಲದಲ್ಲಿ ಇವರು ಗುಡ್ಡಗಾಡು ಪ್ರದೇಶಗಳಲ್ಲಿಯೂ ಬಹಳ ದೂರದ ಗ್ರಾಮಾಂತರಗಳಲ್ಲಿಯೂ ತಲೆ ಮರೆಸಿಕೊಂಡಿದ್ದರೆಂದೂ ಈಗ ಪುನಃ ತಮ್ಮ ಉಪಟಳಕ್ಕೆ ತೊಡಗಿರುವರೆಂದೂ ಬರ್ಮಾ ಸರಕಾರಕ್ಕೆ ತಿಳಿದುಬಂದಿದೆ. ಈ ಸೈನಿಕರು ಯಾವ ಶಿಸ್ತು ಅಥವಾ ಕಟ್ಟುನಿಟ್ಟಿಗೂ ಒಳಪಟ್ಟಿಲ್ಲವಾದುದರಿಂದ ಅವರಿಂದ ಇನ್ನೊಂದು ಬಗೆಯ ಗಂಡಾಂತರವೂ ಸಂಭವಿಸಿದೆ - ಮನೆಮಾರುಗಳ ಲೂಟಿಯಂತೂ ಸರಿಯೇ, ಹಳ್ಳಿಯ ಹೆಣ್ಣುಮಕ್ಕಳನ್ನೂ ಅವರು ಅಪಹರಿಸಿಕೊಂಡು ಹೋಗುತ್ತಿರುವರು. ತಮ್ಮ ಮನೆಮಾರುಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಎಷ್ಟೋ ವೇಳೆ ಸ್ವತಃ ಗ್ರಾಮಸ್ಥರೇ ಹೆಣ್ಣುಗಳ ಕಾಣಿಕೆಯನ್ನು ಈ ಅಸಂಯತ ಸೈನಿಕರಿಗೆ ಒಪ್ಪಿಸಿಕೊಟ್ಟ ವರದಿಗಳೂ ಬಂದಿವೆ.

"ಬೆದರಿಕೆ ಹಾಕಬೇಕು"

ಇಷ್ಟು ಗಂಭೀರ ಪರಿಸ್ಥಿತಿ ಇರುವುದರಿಂದ ಬರ್ಮಾವು ರಾಜಕೀಯ ಸಮಿತಿಯ ಮುಂದೆ ಈ ಪ್ರಶ್ನೆಯನ್ನು ಮಂಡಿಸುತ್ತಾ "ರಾಷ್ಟ್ರೀಯ ಚೀನಾವು ಮನಸ್ಸು ಮಾಡುತಿದ್ದರೆ, ಈ ಸೈನಿಕರ ನಿರ್ಗಮನಕ್ಕೆ ಯೋಗ್ಯ ವ್ಯವಸ್ಥೆ ಮಾಡುವುದು ಕಷ್ಟವಾಗುತ್ತಿರಲಿಲ್ಲ"ವೆಂದು ಹೇಳಿರುವರು. ಆದರೆ ಈ ಮನಸ್ಸು ಚಿಯಾಂಗ - ಕೈಶೇಕರಿಗೆ ಬರುವುದು ಹೇಗೆ ಸಾಧ್ಯ? ಅವರು ಫೋರ್ಮೋಸಾದ ನಡುಗುಡ್ಡೆಯಿಂದಲೂ ಬರ್ಮಾದ ಈಶಾನ್ಯಗಡಿಪ್ರದೇಶದಿಂದಲೂ ಕಮ್ಯೂನಿಸ್ಟ ಚೀನಾದ ಮೇಲೆ ಇನ್ನೂ ಆಕ್ರಮಣ ಮಾಡಬಹುದೆಂದು ಕನಸು ಕಾಣುತ್ತಿರುವರು. ಆದುದರಿಂದಲೇ ಉತ್ತರ ಬರ್ಮಾದಲ್ಲಿ ಕೊಮಿಂಟಾಂಗ ಕೂಟ ಯೋಧರ ಚಟುವಟಿಕೆಗಳಿಗೆ ಬೆಂಬಲ ನೀಡುವರು. ಚಿಯಾಂಗರ ಈ ವರ್ತನೆಯನ್ನು ಕಮ್ಯೂನಿಸ್ಟ ವಿರೋಧಿ ಅಮೇರಿಕಾ ಪುರಸ್ಕರಿಸಿರುವಂತೆ ಬರ್ಮಾಕ್ಕೆ ಕಾಣುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಆದಕಾರಣ ಚಿಯಾಂಗರನ್ನು ಹಾದಿಗೆ ತರಬೇಕಾದರೆ ಅಮೇರಿಕಾವು ತನ್ನ ನೈತಿಕ ವರ್ಚಸ್ಸನ್ನು ಸಂಪೂರ್ಣ ಉಪಯೋಗಿಸಬೇಕೆಂದೂ ತಾನು ನೀಡುವ ಸಹಾಯವನ್ನು ನಿಲ್ಲಿಸುವ ಬೆದರಿಕೆ ಹಾಕಬೇಕೆಂದೂ ರಾಷ್ಟ್ರಸಂಘವು ಫೊರ್ಮೋಸಕ್ಕೆ ಕೊಟ್ಟಿರುವ ಸ್ಥಾನಮಾನವನ್ನು ಹಿಂದೆಗೆದುಕೊಳ್ಳಬೇಕೆಂದೂ ಬರ್ಮಾದ ಪ್ರತಿನಿಧಿ ಹೇಳಿರುವರು. ಆದರೆ ರಾಷ್ಟ್ರೀಯ ಚೀನಾದ ಪ್ರತಿನಿಧಿ ಹೇಳುವ ಸುದ್ದಿಯೇ ಬೇರೆ—ಬರ್ಮಾದ ಗಡಿಪ್ರದೇಶದಲ್ಲಿ ಇರುವುದು ರಾಷ್ಟ್ರೀಯ ಚೀನೀ ಸೈನಿಕರಲ್ಲ ವಿದ್ರೋಹಿ ಭಾವನೆಯುಳ್ಳ ಕರೇನರು, ಶಾನರು, ಕಾಚನರು ಮತ್ತು ಸ್ವತಃ ಬರ್ಮಾಯರೇ ಅಲ್ಲಿ ಕಿರುಕುಳ ಕೊಡುತ್ತಿರುವುದಾಗಿ ರಾಷ್ಟ್ರೀಯ ಚೀನಾದ ಪರಿಶೀಲನೆ ತಿಳಿಸುತ್ತದೆ. ಇವರ ಮೇಲೆ ಚಿಯಾಂಗರ ಅಧಿಕಾರ ಕಾನೂನಿನಂತೆ ನಡೆಯದಿರಬಹುದು- ಆದರೆ ಚೀನೀ ಕೂಟ ಯೋಧರ ನೆರವಿನಿಂದಲೇ ಇವರೂ ಬಲ ಪಡೆದಿರುವರೆಂಬ ಅಂಶವನ್ನು ದುರ್ಲಕ್ಷಿಸಲಾಗದು.

ಟ್ಯೂನೀಸಿಯಾಕ್ಕೆ ಸ್ವಾತಂತ್ರ್ಯ

ಏಶಿಯಾ - ಆಫ್ರಿಕಾ ರಾಷ್ಟ್ರಗಳು ಸಂಯುಕ್ತ ರಾಷ್ಟ್ರಸಂಘದ ರಾಜಕೀಯ ಸಮಿತಿಯ ಮುಂದೆ ಟ್ಯೂನೀಸಿಯಾಕ್ಕೆ

NAVAYUGA

Popular Kannada Weekly.

Founder:—

Sri A. B. SHETTY,

Minister for Public Health,

Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.

ಸ್ಥಾಪಕರು.- ಶ್ರೀ. ಎ. ಬಿ. ಶೆಟ್ಟಿ,

ಮದ್ರಾಸಿನ ಆರೋಗ್ಯಮಂತ್ರಿ.

ವಾ. ಚಂದಾ: ರೂ. 5-12-0

ಬಿಡಿಪ್ರತಿ: 0- 2-0

ಸ್ವಾತಂತ್ರ್ಯವನ್ನು ಕೊಡಬೇಕೆಂಬ ಮಂಡಿಸಿದ ಠರಾವಿನ ಮಹತ್ವದ ಅಂಶಗಳು ತಿರಸ್ಕೃತವಾದರೂ ಸಾಮಾನ್ಯ ತತ್ವವು ಅಂಗೀಕರಿಸಲ್ಪಟ್ಟಿವೆ. ದಂಡಿನ ಕಾಯಿದೆಯನ್ನು ರದ್ದುಗೊಳಿಸಿ, ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ನಾಗರಿಕ ಹಕ್ಕು ಸ್ವಾತಂತ್ರ್ಯಗಳನ್ನು ಮನ್ನಿಸಬೇಕೆನ್ನುವ ಹಾಗೂ "ವಯಸ್ಕರ ಮತದಾನ ಪದ್ಧತಿಯಂತೆ ನಡೆದ ಮಹಾ ಚುನಾವಣೆಯಲ್ಲಿ ಆಯ್ಕೆ ಹೊಂದಿದ ಜನತಾ ಪ್ರತಿನಿಧಿಗಳೊಂದಿಗೆ ಸಂಪೂರ್ಣ ಸ್ವಾಯತ್ತಾಧಿಕಾರವನ್ನು ಕುರಿತು ಕೂಡಲೇ ಮಾತುಕತೆ ನಡೆಸಲು ಸಿದ್ಧತೆಯಾಗಬೇಕು" ಎನ್ನುವ ಎರಡು ಮುಖ್ಯಾಂಶಗಳು ನಿರಾಕೃತವಾದವು ಮತದಾನದ ಕಾಲದಲ್ಲಿ ಬೆಲ್ಜಿಯಂ ನೆದರ್ಲೆಂಡ, ಬ್ರಿಟನು ಮುಂತಾದ ಸಾಮ್ರಾಜ್ಯಶಾಹಿತ್ವದ ಸಂಕೇತವುಳ್ಳ ದೇಶಗಳಂತೂ ಸರಿಯೇ— ಪ್ರಜಾಪ್ರಭುತ್ವದ ಕುರಿತು ಹೆಮ್ಮೆಯ ಮಾತನ್ನಾಡುವ ಅಮೇರಿಕಾವೂ ವಿರೋಧ ಮತವನ್ನು ನೀಡಿತು. ಫ್ರಾನ್ಸು ಆದಿಯಿಂದ ಅಂತ್ಯದ ವರೆಗೂ ಈ ಚರ್ಚೆಯನ್ನು ಬಹಿಷ್ಕರಿಸಿ ಹೊರಗುಳಿಯಿತು. ಮತದಾನದಲ್ಲಿ ೨೫ ಅನುಕೂಲ ಮತಗಳ ವಿರುದ್ಧ ೨೩ ವಿರೋಧ ಮತಗಳು ಬಿದ್ದುದನ್ನು ಕಂಡರೆ, ಸಾಮಾನ್ಯ ಸಭೆಯಲ್ಲಿ ಇದು ಸ್ವೀಕರಿಸಲ್ಪಡುವ ಸಂಭವ ಕಡಿಮೆಯೆಂದೇ ತೋರುವುದು. ಒಂದುವೇಳೆ ನಿರ್ಣಯ ಪಾಸಾದರೂ ಫ್ರಾನ್ಸು ಅದರಂತೆ ನಡೆದುಕೊಳ್ಳುವುದೆಂಬ ಭರವಸೆ ಇಟ್ಟುಕೊಳ್ಳುವಂತಿಲ್ಲ.

ಹೋಚಿಮಿನರೊಡನೆ ಸಂಧಾನ

ಫ್ರಾನ್ಸು ಹೋಚಿಮಿನ್ಹರೊಡನೆ ಇಂಡೋ ಚೀನಾದಲ್ಲಿ ಕಳೆದ ಎಂಟು ವರ್ಷಗಳಿಂದ ಯುದ್ಧಾಸಕ್ತವಾಗಿರುತ್ತದೆ. ದ್ವಿತೀಯ ಮಹಾ ಯುದ್ಧವು ಜಗತ್ತಿನ ಪಾಲಿಗೆ ೧೯೪೫ರಲ್ಲಿಯೇ ಕೊನೆಗಂಡಿದ್ದರೂ ಇಂಡೋಚೀನಾದ ಕಾಳಗಕ್ಕೆ ಅದುವೇ ನಾಂದಿಯಾಯಿತು. ಜಪಾನು ಪೂರ್ವ ಏಶಿಯಾದ ರಾಷ್ಟ್ರಗಳನ್ನು ಒಂದೊಂದೇಯಾಗಿ ನುಂಗುತ್ತಾ ಬಂದಾಗ, ಇಂಡೋ ಚೀನವನ್ನೂ ಅದು ಗಿಳಂಕರಿಸಿತು. ಆದರೆ ಅಣುಬಾಂಬಿನ ಮಾರಕಘೋಷಕ್ಕೆ ಅಂಜಿ ಅದು ಅಂಬೆಗಾಲೂರಿದಾಗ, ಫ್ರೆಂಚ ಸೈನಿಕರು ಇಂಡೋ ಚೀನಾದಲ್ಲಿ ಮರಳಿ ಪ್ರವೇಶಿಸಿದರು. ಜಪಾನರು ತಮಗೆ ನೇರಾದ ಆಳಿಕೆ ನಡೆಸಲು ಪುರಸೊತ್ತಿಲ್ಲದವರಂತೆಯೋ ಏನೋ — ಇಂಡೋ ಚೀನಾದ ಜನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನಲ್ಲದಿದ್ದರೂ ಸಾಮಾನ್ಯ ಸ್ವರಾಜ್ಯವನ್ನು ನೀಡಿದ್ದರು. ಆದರೆ ಫ್ರೆಂಚರು ತಮ್ಮ ವಸಾಹತು ಧೋರಣೆಯನ್ನೇ ಮುಂದುವರಿಸಲು ಹವಣಿಸಿರುವುದನ್ನು ಕಂಡು ಸ್ವಾತಂತ್ರ್ಯದ ಸವಿ ಕಂಡ ಇಂಡೋ ಚೀನಾದ ಪ್ರಗತಿಶೀಲ ಪ್ರಜೆಗಳು ಹೋಚಿಮಿನ್ಹರ ನೇತೃತ್ವದಲ್ಲಿ ಸಂಘಟಿತ ಪ್ರತಿಭಟನೆಯನ್ನು ಕೊಡಲು ಮುಂಬಂದರು. ಇವರಿಗೆ ಚೀನೀ ಕಮ್ಯುನಿಸ್ಟರ ಬೆಂಬಲವುಂಟೆಂದು ವದಂತಿ ಇದ್ದರೂ— ಸ್ವಾತಂತ್ರ್ಯಕ್ಕೋಸ್ಕರ ಆಂದೋಲನ ಹೂಡುವ ಹಕ್ಕು ಯಾವ ಗುಲಾಮ ರಾಷ್ಟ್ರಕ್ಕೂ ಇದೆಯೆಂಬ ತತ್ವವನ್ನು ಅಲ್ಲಗಳೆಯಲಾರೆವು. ಭಾರತವು ಶಾಂತಿ-ಅಹಿಂಸೆಯ ಧೋರಣೆಯ ಭವ್ಯ ಆದರ್ಶವನ್ನು ಸ್ವಾತಂತ್ರ್ಯಕ್ಕಾಗಿ ಹಳುಹಳಿಸುವ ಇತರ ದೇಶದ ನಾಗರಿಕರ ಮುಂದೆ ಇಟ್ಟಿದ್ದರೂ ಅದಕ್ಕೆ ತಕ್ಕ ಹಿನ್ನೆಲೆ ಇನ್ನೂ ನಿರ್ಮಾಣವಾಗಿರುವುದಿಲ್ಲ. ಹೀಗೆ ನ್ಯಾಯವಾದ ಆಕಾಂಕ್ಷೆಯನ್ನು ದಮನಿಸುತ್ತಾ ಫ್ರೆಂಚರು ತಮ್ಮಲ್ಲಿ ಶಕ್ತಿಯನ್ನು ಕಳೆದುಕೊಳ್ಳುತ್ತಾ ಬಂದಿರುವರು. ಅಮೇರಿಕಾದಿಂದ ಶಸ್ತ್ರಾಸ್ತ್ರ ಪೂರೈಕೆಯಾಗುತಿದ್ದರೂ ಫ್ರಾನ್ಸಿನ ಹ್ರಾಸವೇ ಹೆಚ್ಚುತ್ತಿದೆ. ಈಗ ಮರ್ಯಾದೆ ಉಳಿಸಿಕೊಳ್ಳಲು ಹೋಚಿಮಿನ್ಹರೊಡನೆ ಸಂಧಾನದ ಮಾತುಕತೆಗೆ ತೊಡಗುವ ನಿರ್ಧಾರವನ್ನು ಫ್ರಾನ್ಸು ಮಾಡಿರುವಂತಿದೆ. ಆದರೆ ಇದನ್ನು ಅಮೇರಿಕಾ ಮೆಚ್ಚುವುದಿಲ್ಲ—ಫ್ರಾನ್ಸಿನ ಬೆನ್ನನ್ನು ಅದು ಇನ್ನೂ ಚಪ್ಪರಿಸುತ್ತಿದೆ. ಅಲ್ಲದೆ, ಇಂಡೋಚೀನಾದ ನಾಗರಿಕರ ಪಾಲಿಗೆ ಸ್ವಾತಂತ್ರ್ಯವೆಂದರೆಯೇ ಕಮ್ಯುನಿಸ್ಟ ದಾಸ್ಯವಾಗಿ ಪರಿಣಮಿಸಬಹುದೆಂದು ಗಂಭೀರ ಎಚ್ಚರಿಕೆಯನ್ನೂ ಅಮೇರಿಕನ ಉಪಾಧ್ಯಕ್ಷರು ನೀಡಿರುವರು.

ತಿಮ್ಮಯ್ಯನವರಿಗೆ ಯಶಸ್ಸು

ಕೊರಿಯಾದಲ್ಲಿ ತಿಮ್ಮಯ್ಯನವರು ಸಂಪೂರ್ಣ ನಿರಾಶೆಯನ್ನೇ ವ್ಯಕ್ತ ಪಡಿಸಿದ್ದರೂ ಪರಿಸ್ಥಿತಿ ಒಂದೆರಡು ದಿನಗಳಲ್ಲಿ ಸುಧಾರಿಸಿತು. ಚೀನೀ ಯುದ್ಧ ಕೈದಿಗಳು ವಿಚಾರಣೆಯನ್ನು ಕೇಳಲು ಒಪ್ಪಿದ್ದರೂ ಉತ್ತರ ಕೋರಿಯನ್ನರು ಹಾಗೆ ಮಾಡಲು ನಿರಾಕರಿಸಿದ್ದರು. ಉತ್ತರ ಕೊರಿಯನ್ನರನ್ನು ಹಾದಿಗೆ ತರಲು ಭಾರತೀಯ ಸೈನ್ಯ ಪಡೆಯು ಶಕ್ತಿಯನ್ನು ಉಪಯೋಗಿಸಬೇಕೆಂದು ತಟಸ್ಥ ರಾಷ್ಟ್ರ ಮಂಡಳಿಯ ಕಮ್ಯುನಿಸ್ಟ ಸದಸ್ಯರು ಕೇಳಿದರು. ಇದನ್ನು ಬೇರೆ ಸದಸ್ಯರು ಪುರಸ್ಕರಿಸದ್ದರಿಂದ ಮತ್ತು ಭಾರತವೇ ಒಂದು ತೀರ್ಪನ್ನು ಉಳಿದ ಸದಸ್ಯರ ಮನಸ್ಸಿನ ಇಚ್ಛೆಗೆ ವಿರುದ್ಧವಾಗಿ ಹೇರುವುದು ಅನಿಷ್ಟಪ್ರದವೆನಿಸಿದ್ದರಿಂದ – ತಟಸ್ಥ ರಾಷ್ಟ್ರ ಮಂಡಳಿಯೇ ನಿಷ್ಪ್ರಯೋಜಕಾವಸ್ಥೆಯನ್ನು ಮುಟ್ಟಿದ್ದಿತು. ಬಲ ಪ್ರಯೋಗ ಮಾಡುವಂತಾಗದೆ, ಉತ್ತರ ಕೊರಿಯನ್ನರು ತಾವಾಗಿಯೇ ವಿವರಣೆ ಕೇಳಲು ಬರಲೆಂದು ತಿಮ್ಮಯ್ಯನವರು ಪರಿಪರಿಯಾಗಿ ಮನವೊಲಿಸುವ ಪ್ರಯತ್ನ ಮಾಡಿದರು. ಇದರ ಫಲವಾಗಿ ಉತ್ತರ ಕೊರಿಯನ್ನರಿಗೆ ವಿವರಣೆ ಕೊಡುವ ಕೆಲಸವು ಪುನಃ ತೊಡಗಿದೆ. ಯುದ್ಧ ವಿರಾಮ ಒಪ್ಪಂದದಲ್ಲಿ ಮೂರು ತಿಂಗಳ ಕಾಲಾವಧಿಯನ್ನು ವಿವರಣೆಗೋಸ್ಕರ ನಿರ್ಧಾರ ಮಾಡಲಾಗಿದೆ. ಇದರಲ್ಲಿ ಒಂದು ತಿಂಗಳ ಕಾಲ ಈಗಾಗಲೇ ಸಂದುಹೋಯಿತು. ಈ ಅವಧಿಯಲ್ಲಿ ೨೫ ಸಾವಿರ ಮಂದಿ ಮಿತ್ರ ಕೈದಿಗಳಲ್ಲಿ ೨ ಸಾವಿರ ಮಂದಿಗೆ ಮಾತ್ರ ವಿವರಣೆ ನೀಡಲಾಗಿದೆ. ಕಮ್ಯೂನಿಸ್ಟ ಕೈದಿಗಳೂ ೮ ಸಾವಿರದಷ್ಟಿದ್ದಾರೆ. ಎರಡು ತಿಂಗಳ ಅವಧಿಯಲ್ಲಿ ಇಷ್ಟು ಹೆಚ್ಚು ಜನಕ್ಕೆ ವಿವರಣೆ ನೀಡುವುದು ಸಾಧ್ಯವಾದೀತೋ ತಿಳಿಯುವುದಿಲ್ಲ. ರಾಜಕೀಯ ಪರಿಷತ್ತಿಗೆ ಪೂರ್ವಭಾವಿಯಾಗಿ ನಡೆಯುವ ಸಮ್ಮೇಳನದಲ್ಲೂ ಆಶಾದಾಯಕ ಪ್ರಗತಿ ನಡೆದಿಲ್ಲ. ಈ ಮಂಗಳವಾರದ ವರೆಗೆ ೮ ಸಲ ಕಮ್ಯೂನಿಸ್ಟ ಹಾಗೂ ಅಮೇರಿಕಾದ ಪ್ರತಿನಿಧಿಗಳು ಸಭೆ ಸೇರಿದರೂ ತಮ್ಮ ಹಿಂದಿನ ನಿಲುವಿಗೇ ಈಗಲೂ ಇವರು ಅಂಟಿಕೊಂಡಿರುವರು; ಹೊರತು ಯಾವ ಪಕ್ಷವೂ "ರಾಷ್ಟವೇ ರಿಯಾಯುತಿ ತೋರಿಸುವ ಇಚ್ಛೆ ವ್ಯಕ್ತ ಪಡಿಸಿಲ್ಲ. ಹೀಗಾದರೆ "ಒಪ್ಪಂದಕ್ಕೆ ಒದಗುವ ಆಸೆ ಇನ್ನೂ ಇದೆ' ಎಂಬ ಅಮೇರಿಕದ ಪ್ರತಿನಿಧಿಯ ಉದ್ಗಾರಕ್ಕೆ ಏನು ಬೆಲೆಯೋ – ನಮಗರಿಯದು.

— — - -

ಪ್ರಧಾನಿ ರಾಜಾಜಿಯವರ ಆಗಮನ— ಮದ್ರಾಸಿನ ಮುಖ್ಯಮಂತ್ರಿ ಶ್ರೀ. ಸಿ. ರಾಜಗೋಪಾಲಾಚಾರಿಯವರು ಇದೇ ತಾ ೨೯ನೇ ಸಾಯಂಕಾಲ ಮೈಲಿನಲ್ಲಿ ಮಂಗಳೂರಿಗೆ ಬಂದು ಅಂದೇ ಸಂಜೆ ಸ್ಟೇಡಿಯಮಿನಲ್ಲಿ ಸಾರ್ವಜನಿಕ ಭಾಷಣ ಮಾಡಲಿರುವರು. ಮರುದಿನ ಬೆಳಿಗ್ಗೆ ನಗರಸಭೆಯ ಮಾನಪತ್ರ ಸ್ವೀಕರಿಸಿ, ವಿದ್ಯಾರ್ಥಿಗಳನ್ನು, ಮಹಿಳೆಯರನ್ನು, ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುವರು ಕೆನರಾ ಚೇಂಬರ್ ಆಫ್ ಕಾಮರ್ಸಿಗೆ ಭೇಟಿಯಿತ್ತು ಬಜ್ಪೆಗೆ ತೆರಳಿ ಅಲ್ಲಿಂದ ವಿಮಾನ ಮೂಲಕ ಹಿಂತಿರುಗುವರು.

ಆರೂರು ವೆಂಕಟ್ರಾಯರ ಕೊಲೆ ಮೊಕದ್ದಮೆ:— ಯ ತೀರ್ಮಾನವನ್ನು ಜಿಲ್ಲಾ ಸೆಶನ್ಸ ಜಡ್ಜರಾದ ಶ್ರೀ. ಪಿ. ಟಿ. ರಾಮನ್ ನಾಯರ್‌ರವರು ತಾ ೩ನೇ ಬೆಳಿಗ್ಗೆ ಕೊಟ್ಟು ಆರೋಪಿಗಳೆಲ್ಲರೂ ನಿರಪರಾಧಿಗಳೆಂದು ತೀರ್ಮಾನಿಸಿ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು.

ಉಡುಪಿ

ಬರುವರು:- ಶ್ರೀ ರಾಮಕೃಷ್ಣ ಸಂಘದ ಆಡಳಿತೆ ಮಂಡಳಿಯ ಸದಸ್ಯರೂ ಹಿರಿಯ ಸನ್ಯಾಸಿಗಳೂ ಪರಮಹಂಸರ ಪ್ರತ್ಯಕ್ಷ ಶಿಷ್ಯರೂ ಆದ ಸ್ವಾಮಿ ಯತೀಶ್ವರಾನಂದಜೀಯವರು ಈ ತಿಂಗಳ ಮಧ್ಯದಲ್ಲಿ ನಮ್ಮ ಜಿಲ್ಲೆಯ ಪ್ರವಾಸವನ್ನು ಕೈಕೊಳ್ಳಲಿದ್ದು ಉಡುಪಿಗೆ ಕೂಡಾ ಬರಲಿರುವರು. ಪೂರ್ವ ಪಾಶ್ಚಿಮಾತ್ಯ ತತ್ವಜ್ಞಾನ ಸಂಪನ್ನರೂ ವಿದೇಶಗಳಲ್ಲಿ ಹಲವು ಹೊಸ ಕೇಂದ್ರಗಳನ್ನು ತೆರೆದವರೂ ಆದ ಇವರ ಉಪನ್ಯಾಸವನ್ನು ಕೇಳುವ ಸುಸಂಧಿಯನ್ನು ಉಡುಪಿಯ ಜನತೆ ಕಳಕೊಳ್ಳಲಾರದಾಗಿ ನಿರೀಕ್ಷಿಸಲಾಗಿದೆ.

ಆರ್. ಎಸ್. ಎಸ್. ಮುಖಂಡರ ಆಗಮನ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರಾದ ಶ್ರೀ ಎಮ್. ಎಸ್. ಗೋಳ್ವಾಲ್ಕರರು ಕಳೆದ ತಾ. 29ರಲ್ಲು ಪೂರ್ವಾಹ್ನ ಉಡುಪಿಗೆ ಆಗಮಿಸಿ ಸಂಜೆ ಕೊಟ್ಟಾರ್ ಬಂಧುಗಳ ಇನ್ಸ್ಯೂರೆನ್ಸ್ ಆಫೀಸಿನ ವಠಾರದಲ್ಲಿ ಸಾರ್ವಜನಿಕ ಭಾಷಣವಿತ್ತರು. ಶ್ರೀ ಬಂಡಾರಕೆರೆ ಮಠದ ಸ್ವಾಮಿಗಳವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಗೋಳ್ವಾಲ್ಕರರು ತಮ್ಮ ಭಾಷಣದಲ್ಲಿ ಹಿಂದೂ ರಾಷ್ಟ್ರ, ಹಿಂದೂ ಸಂಘಟನೆ ಇತ್ಯಾದಿ ಕುರಿತು ತಮ್ಮ ಸಂಘದ ಧೋರಣೆಗಳನ್ನು ವಿವರಿಸಿದರು. ಜಿಲ್ಲಾ ಸಂಘಚಾಲಕ ಶ್ರೀ ಕಾರ್ಕಳ ಸದಾಶಿವರಾಯರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭಕ್ಕೆ ಪೂರ್ವದಲ್ಲಿ ಸಂಘದ ಸ್ವಯಂ ಸೇವಕರ ಪಥಸಂಚಲನ ಕಾರ್ಯವು ಮಳೆ ಸುರಿಯುತ್ತಿದ್ದರೂ ಕ್ಲಪ್ತ ಸಮಯದಲ್ಲಿ ಶಿಸ್ತಿನಿಂದ ನಡೆಯಿತು.

ಕೇಂದ್ರದ ಗೃಹಮಂತ್ರಿ ಶ್ರೀ ಕಟ್ಜೂರವರ ಆಗಮನ— ಕೇಂದ್ರ ಸರಕಾರದ ಗೃಹ ಮಂತ್ರಿ ಶ್ರೀ ಕೆ. ಎನ್. ಕಾಟ್ಜೂರವರು ಕಳೆದ ತಾ. 31ರಲ್ಲು ರಾತ್ರಿ ಉಡುಪಿಗೆ ಆಗಮಿಸಿದರು. ಮರುದಿವಸ ಬೆಳಿಗ್ಗೆ ಶ್ರೀಕೃಷ್ಣ ದರ್ಶನ ಮಾಡಿದರು. ನಂತರ ಅಷ್ಟ ಮಠಗಳ ಮತ್ತು ಸಂಸ್ಕೃತ ಕಾಲೇಜು ಅಧ್ಯಾಪಕರ ಕಡೆಯಿಂದ ಮಾನಪತ್ರವೊಂದನ್ನು ಪ್ರಿನ್ಸಿಪಾಲ್ ಕಾಳಗಿ ರೇವಾಚಾರ್ಯರು ಓದಿ ಗೃಹ ಮಂತ್ರಿಗಳಿಗೆ ಅರ್ಪಿಸಿದರು. ಪಾಜಕ ಹಾಗೂ ಪರ್ಯಾಯ ಪೇಜಾವರ, ಪುತ್ತಿಗೆ, ಭಂಡಾರಕೆರೆ ಮತ್ತು ಕಾಣಿಯೂರು ಮಠಾಧೀಶರು ಶ್ರೀ ಕಾಟ್ಜೂರವರಿಗೆ ಪ್ರಸಾದಗಳನಿತ್ತರು. ಗೃಹಮಂತ್ರಿಗಳು ಉತ್ತರ ಕೊಡುತ್ತಾ ಸಂಸ್ಕೃತ ವಿದ್ಯೆಯನ್ನು ಎಲ್ಲರೂ ಕಲಿಯುವ ಆವಶ್ಯಕತೆಯನ್ನು ಸೂಚಿಸಿದರು. ನಂತರ ಮಂತ್ರಿಗಳು ಸಂಸ್ಕೃತ ಕಾಲೇಜಿಗೆ ಸಂದರ್ಶನವಿತ್ತು, ಬಾರ್ ಎಸೋಸಿಯೇಶನಿನಲ್ಲಿ ಉಪಹಾರ ಸ್ವೀಕರಿಸಿ ಎಮ್. ಜಿ. ಎಮ್. ಕಾಲೇಜು ಕಸ್ತೂರ್ಬಾ ಮೆಡಿಕಲ್ ಕಾಲೇಜುಗಳ ಸ್ವಾಗತವನ್ನು ಸ್ವೀಕರಿಸಿ ಕಾರ್ಕಳ ಮಾರ್ಗವಾಗಿ ಮೂಡುಬಿದ್ರೆ ಬಸ್ತಿಯನ್ನು ನೋಡಿ ಬಜ್ಪೆಗೆ ಹೋಗಿ ಅಲ್ಲಿಂದ ವಿಮಾನ ಮೂಲಕ ಕೊಚ್ಚಿಗೆ ತೆರಳಿದರು. ಗೃಹ ಮಂತ್ರಿಗಳ ಜತೆಯಲ್ಲಿ ಶ್ರೀಗಳಾದ ಕೆ. ಎಸ್. ಹೆಗ್ಡೆ, ಎಮ್. ಪಿ., ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ., ಡಾ| ಯು. ಪಿ. ಮಲ್ಯರವರು ಬಂದಿದ್ದರು.

ನಗರ ಸಭೆಯು— ಕಳೆದ ತಾ. 31ರಲ್ಲಿ ಅಧ್ಯಕ್ಷ ಶ್ರೀ ಮು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಪ್ರಶ್ನೋತ್ತರ, ಸರಕಾರಿ ಹುಕುಂಗಳ ಓದಿಕೆ, ಬೇರೆ ಬೇರೆ ಕಮಿಟಿಗಳ ವರದಿ ಪರಿಶೀಲನೆ ಮೊದಲಾದ ಕಾರ್ಯಕ್ರಮಗಳು ಜರಗಿದವು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 323/49. R. E. P. 469/53.

ಅರ್ಜಿದಾರ— ಜಗನ್ನಾಥ ಸೆಟ್ಟಿ
ಎದುರು— 1. ಸರ್ವೋತ್ತಮ.
2. ತುಂಗಮ್ಮ ಸೆಡ್ತಿ.

ಕುಂದಾಪುರ ತಾಲ್ಲೂ ಕೋಟೇಶ್ವರ ಗ್ರಾಮದಲ್ಲಿರುವ ಜೇಟಿಮನೆ ಶೀನಗಿರಿಯಪ್ಪನವರ ಮಗ ಸರ್ವೋತ್ತಮ 1 ವಳನಾಡು ಗ್ರಾಮದಲ್ಲಿರುವ ನಾರಾಯಣ ಸೆಟ್ಟಿ ಹೆಂಡ್ತಿ ತುಂಗಮ್ಮ ಸೆಡ್ತಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹರಣೆಯಲ್ಲಿ 2ನೇ ಎದ್ರಿಯಿಂದ ಮೇಲಿನ ಡಿಕ್ರಿ ಹಣ ವಸೂಲು ಮಾಡುವ ಪಕ್ಷವನ್ನು ಅರ್ಜಿದಾರನು ಟ್ರಾನ್ಸ್‌ಫರ್ ಪಡಕೊಂಡಿರುತ್ತಾನೆ. ಅರ್ಜಿದಾರನಿಗೆ ಆದ ಟ್ರಾನ್ಸ್‌ಫರ್ ಮಂಜೂರಾತಿ ಬಗ್ಗೆ ಅರ್ಜಿದಾರನು ದಾಕ್ಲು ಮಾಡಿದ ಮೇಲಿನ ಅಮಲ್ದಾರಿಯು ತಾ. 11—11—1953ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು.

(Sd· N S· Parameshwarich
Advocate for Petr.
Coondapoor Date 31—10—53.

ಉತ್ಕೃಷ್ಟವಾದ ಮಂಗಳೂರಿನ
ಕೃಷ್ಣಾ ನಶ್ಯವನ್ನೇ

ಉಪಯೋಗಿಸಿರಿ.
ಪ್ರೊಪ್ರೈಟರ್: ಪಿ. ನಾರಾಣಪ್ಪ,
ಮಂಗಳೂರು.

ಒಂದೆರಡು ವರ್ಷಗಳ ಮಾಹಿತಿಯುಳ್ಳ ಯೋಗ್ಯ ಕಂಪೋಜಿಟರರು ಬೇಕು.
14 ವರ್ಷಕ್ಕೆ ಮೇಲ್ಪಟ್ಟ ಕೆಲವು ಹುಡುಗರನ್ನು ತರಬೇತಿಗಾಗಿಯೂ ಸೇರಿಸಿಕೊಳ್ಳಲಾಗುವುದು,
ವಿಚಾರಿಸಿ:
ನವಯುಗ ಪ್ರೆಸ್, ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 30 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India.

ಕೊಮಿಂಟಾಂಗ ಪಡೆಯ ಚಟುವಟಿಕೆ

ಇನ್ನೂ ನಿಂತಿಲ್ಲವೆಂದು ಬರ್ಮಾದ ಆಕ್ಷೇಪ

ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯ ಮುಂದೆ ಮರಳಿ ಬರ್ಮಾದಲ್ಲಿ ರಾಷ್ಟ್ರೀಯ ಚೀನೀ ಕೂಟ ಯೋಧರ ಚಟುವಟಿಕೆಗಳ ಪ್ರಸಂಗ ಚರ್ಚೆಗೆ ಬಂದಿರುತ್ತದೆ. ಕೆಲವು ತಿಂಗಳುಗಳ ಪೂರ್ವದಲ್ಲಿ ರಾಷ್ಟ್ರಸಂಘವು ಒಂದು ಸಮಿತಿಯನ್ನು ನೇಮಿಸಿ, ಬರ್ಮಾದ ನೆಲದಿಂದ ಈ ಕೂಟ ಯೋಧರ ನಿರ್ಗಮನಕ್ಕೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವಂತೆ ವಿಧಿಸಿತು. ಆದರೆ ಈ ಸಮಿತಿಯ ಕಾರ್ಯವು ಯಶಸ್ವಿಯಾಗಿರುವುದಿಲ್ಲ — ಚಿಯಾಂಗ ಕೈಶೇಕರ ರಾಷ್ಟ್ರೀಯ ಚೀನಾವು ವಚನಭಂಗ ಮಾಡಲು ಉದ್ಯುಕ್ತವಾದುದರಿಂದ ಈ ಸಮಿತಿಯ ಕಾರ್ಯಕಲಾಪಗಳು ಅಲ್ಲಿಗೇ ಮುಕ್ತಾಯವಾಗುವ ಪರಿಸ್ಥಿತಿ ನಿರ್ಮಾಣಗೊಂಡಿತು. ಅಲ್ಪಸ್ವಲ್ಪ ಸೈನಿಕರು ಹಿಂದೆರಳಿರುವುದು ನಿಜವಾದರೂ ಈ ಪ್ರಮಾಣಕ್ಕೆ ನಾಲ್ಕಾರು ಪಟ್ಟು ಹೆಚ್ಚಾಗಿಯೇ ಹೊಸ ಕೂಟ ಯೋಧರು ಬರ್ಮದ ನೆಲವನ್ನು ಪ್ರವೇಶಿಸುತ್ತಿರುವರು. ಇದರ ಕಾರಣವೇನೋ ಹೇಳಲು ಬಾರದು — ಹಾಗೆಂದು ಥ್ಯಾಲೇಂಡ, ಅಮೇರಿಕಾ, ರಾಷ್ಟ್ರೀಯ ಚೀನಾ ಇತ್ಯಾದಿ ದೇಶಗಳ ಉತ್ತೇಜನವಿಲ್ಲದೆ ಹೀಗಾಗುವುದು ಸಾಧ್ಯವಿಲ್ಲೆಂಬುದು ಮಾತ್ರ ಸ್ಪಷ್ಟವಾಗಿರುತ್ತದೆ. ಈಗ ಬರ್ಮಾದಲ್ಲಿ ಹೆಚ್ಚುಕಡಿಮೆ ೧೨ ಸಾವಿರ ಮಂದಿ ರಾಷ್ಟ್ರೀಯ ಚೀನೀ ಕೂಟ ಯೋಧರು ಶಸ್ತ್ರಾಸ್ತ್ರ ಸನ್ನಿಹಿತರಾಗಿರುವರು. ಇವರಿಗೆಲ್ಲ ಆಯುಧಗಳನ್ನು ಪೂರೈಸಿದವರು ಯಾರು? ಮಳೆಗಾಲದಲ್ಲಿ ಇವರು ಗುಡ್ಡಗಾಡು ಪ್ರದೇಶಗಳಲ್ಲಿಯೂ ಬಹಳ ದೂರದ ಗ್ರಾಮಾಂತರಗಳಲ್ಲಿಯೂ ತಲೆ ಮರೆಸಿಕೊಂಡಿದ್ದರೆಂದೂ ಈಗ ಪುನಃ ತಮ್ಮ ಉಪಟಳಕ್ಕೆ ತೊಡಗಿರುವರೆಂದೂ ಬರ್ಮಾ ಸರಕಾರಕ್ಕೆ ತಿಳಿದುಬಂದಿದೆ. ಈ ಸೈನಿಕರು ಯಾವ ಶಿಸ್ತು ಅಥವಾ ಕಟ್ಟುನಿಟ್ಟಿಗೂ ಒಳಪಟ್ಟಿಲ್ಲವಾದುದರಿಂದ ಅವರಿಂದ ಇನ್ನೊಂದು ಬಗೆಯ ಗಂಡಾಂತರವೂ ಸಂಭವಿಸಿದೆ - ಮನೆಮಾರುಗಳ ಲೂಟಿಯಂತೂ ಸರಿಯೇ, ಹಳ್ಳಿಯ ಹೆಣ್ಣುಮಕ್ಕಳನ್ನೂ ಅವರು ಅಪಹರಿಸಿಕೊಂಡು ಹೋಗುತ್ತಿರುವರು. ತಮ್ಮ ಮನೆಮಾರುಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಎಷ್ಟೋ ವೇಳೆ ಸ್ವತಃ ಗ್ರಾಮಸ್ಥರೇ ಹೆಣ್ಣುಗಳ ಕಾಣಿಕೆಯನ್ನು ಈ ಅಸಂಯತ ಸೈನಿಕರಿಗೆ ಒಪ್ಪಿಸಿಕೊಟ್ಟ ವರದಿಗಳೂ ಬಂದಿವೆ.

"ಬೆದರಿಕೆ ಹಾಕಬೇಕು"

ಇಷ್ಟು ಗಂಭೀರ ಪರಿಸ್ಥಿತಿ ಇರುವುದರಿಂದ ಬರ್ಮಾವು ರಾಜಕೀಯ ಸಮಿತಿಯ ಮುಂದೆ ಈ ಪ್ರಶ್ನೆಯನ್ನು ಮಂಡಿಸುತ್ತಾ "ರಾಷ್ಟ್ರೀಯ ಚೀನಾವು ಮನಸ್ಸು ಮಾಡುತ್ತಿದ್ದರೆ, ಈ ಸೈನಿಕರ ನಿರ್ಗಮನಕ್ಕೆ ಯೋಗ್ಯ ವ್ಯವಸ್ಥೆ ಮಾಡುವುದು ಕಷ್ಟವಾಗುತ್ತಿರಲಿಲ್ಲ"ವೆಂದು ಹೇಳಿರುವರು. ಆದರೆ ಈ ಮನಸ್ಸು ಚಿಯಾಂಗ - ಕೈಶೇಕರಿಗೆ ಬರುವುದು ಹೇಗೆ ಸಾಧ್ಯ? ಅವರು ಫೋರ್ಮೋಸಾದ ನಡುಗುಡ್ಡೆಯಿಂದಲೂ ಬರ್ಮಾದ ಈಶಾನ್ಯಗಡಿಪ್ರದೇಶದಿಂದಲೂ ಕಮ್ಯೂನಿಸ್ಟ ಚೀನಾದ ಮೇಲೆ ಇನ್ನೂ ಆಕ್ರಮಣ ಮಾಡಬಹುದೆಂದು ಕನಸು ಕಾಣುತ್ತಿರುವರು. ಆದುದರಿಂದಲೇ ಉತ್ತರ ಬರ್ಮಾದಲ್ಲಿ ಕೊಮಿಂಟಾಂಗ ಕೂಟ ಯೋಧರ ಚಟುವಟಿಕೆಗಳಿಗೆ ಬೆಂಬಲ ನೀಡುವರು. ಚಿಯಾಂಗರ ಈ ವರ್ತನೆಯನ್ನು ಕಮ್ಯೂನಿಸ್ಟ ವಿರೋಧಿ ಅಮೇರಿಕಾ ಪುರಸ್ಕರಿಸಿರುವಂತೆ ಬರ್ಮಾಕ್ಕೆ ಕಾಣುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಆದಕಾರಣ ಚಿಯಾಂಗರನ್ನು ಹಾದಿಗೆ ತರಬೇಕಾದಗೆ ಅಮೇರಿಕಾವು ತನ್ನ ನೈತಿಕ ವರ್ಚಸ್ಸನ್ನು ಸಂಪೂರ್ಣ ಉಪಯೋಗಿಸಬೇಕೆಂದೂ ತಾನು ನೀಡುವ ಸಹಾಯವನ್ನು ನಿಲ್ಲಿಸುವ ಬೆದರಿಕೆ ಹಾಕಬೇಕೆಂದೂ ರಾಷ್ಟ್ರಸಂಘವು ಫೋರ್ಮೋಸಕ್ಕೆ ಕೊಟ್ಟಿರುವ ಸ್ಥಾನಮಾನವನ್ನು ಹಿಂದೆಗೆದುಕೊಳ್ಳಬೇಕೆಂದೂ ಬರ್ಮಾದ ಪ್ರತಿನಿಧಿ ಹೇಳಿರುವರು. ಆದರೆ ರಾಷ್ಟ್ರೀಯ ಚೀನಾದ ಪ್ರತಿನಿಧಿ ಹೇಳುವ ಸುದ್ದಿಯೇ ಬೇರೆ—ಬರ್ಮಾದ ಗಡಿಪ್ರದೇಶದಲ್ಲಿ ಇರುವುದು ರಾಷ್ಟ್ರೀಯ ಚೀನೀ ಸೈನಿಕರಲ್ಲ ವಿದ್ರೋಹಿ ಭಾವನೆಯುಳ್ಳ ಕರೇನರು, ಶಾನರು, ಕಾಚನರು ಮತ್ತು ಸ್ವತಃ ಬರ್ಮಾಯರೇ ಅಲ್ಲಿ ಕಿರುಕುಳ ಕೊಡುತ್ತಿರುವುದಾಗಿ ರಾಷ್ಟ್ರೀಯ ಚೀನಾದ ಪರಿಶೀಲನೆ ತಿಳಿಸುತ್ತದೆ ಇವರ ಮೇಲೆ ಚಿಯಾಂಗರ ಅಧಿಕಾರ ಕಾನೂನಿನಂತೆ ನಡೆಯದಿರಬಹುದು- ಆದರೆ ಚೀನೀ ಕೂಟ ಯೋಧರ ನೆರವಿನಿಂದಲೇ ಇವರೂ ಬಲ ಪಡೆದಿರುವರೆಂಬ ಅಂಶವನ್ನು ದುರ್ಲಕ್ಷಿಸಲಾಗದು.

ಟ್ಯುನೀಸಿಯಾಕ್ಕೆ ಸ್ವಾತಂತ್ರ್ಯ

ಏಶಿಯಾ - ಆಫ್ರಿಕಾ ರಾಷ್ಟ್ರಗಳು ಸಂಯುಕ್ತ ರಾಷ್ಟ್ರಸಂಘದ ರಾಜಕೀಯ ಸಮಿತಿಯ ಮುಂದೆ ಟ್ಯುನೀಸಿಯಾಕ್ಕೆ

ನವಯುಗ

ಉಡುಪಿ, ಗುರುವಾರ ೫-೧೧-'೫೬

ತಿದ್ದಿಕೊಂಡ ತಪ್ಪು

ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯು ೩೧ನೇ ಅಕ್ಟೋಬರ ೧೯೫೬ರಂದು ಹುಬ್ಬಳ್ಳಿಯಲ್ಲಿ ಸಭೆ ಸೇರಿದಾಗ ಕಳೆದ ಎಪ್ರಿಲ್ ತಿಂಗಳ ೨೦ನೇ ದಿನಾಂಕ ತಾನು ಸ್ವೀಕರಿಸಿದ ಗೊತ್ತುವಳಿಯಂತೆ ಕ್ರಮ ತೆಗೆದುಕೊಳ್ಳುವುದು ಅನಗತ್ಯವೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಹಿಂದಿನ ಗೊತ್ತುವಳಿಯು ೧೯೫೬ನೇ ಅಕ್ಟೋಬರದೊಳಗೆ ಕರ್ನಾಟಕ ರಾಜ್ಯದ ನಿರ್ಮಾಣವಾಗಬೇಕೆಂದೂ ಈ ಅಕ್ಟೋಬರ ಮಾಸಾಂತ್ಯದೊಳಗೆ ಕೇಂದ್ರ ಸರಕಾರದಿಂದ ಈ ಬಗ್ಗೆ ಆಶ್ವಾಸನೆ ದೊರೆಯಬೇಕೆಂದೂ ಹೇಳಿದ್ದಿತು. ಇದಕ್ಕೆ ತಪ್ಪಿದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ ಸಮಿತಿಯ ಸದಸ್ಯರೂ ಕರ್ನಾಟಕದ ಪಾರ್ಲಿಮೆಂಟು ಮತ್ತು ಶಾಸನ ಸಭಾ ಸದಸ್ಯರೂ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ ಸಮಿತಿ ನಿರ್ಧರಿಸಿದ್ದಿತು. ಕೇಂದ್ರ ಸರಕಾರವು ಭಾಷಾ ರಾಜ್ಯಗಳ ನಿರ್ಮಾಣ ಪ್ರಶ್ನೆಯನ್ನು ಮೊದಲಿನಿಂದಲೂ ಮನ್ನಿಸುತ್ತಾ ಬಂದಿರುವಾಗ, ಆಂಧ್ರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ಕೈಗೆ ತೆಗೆದುಕೊಂಡಿರುವಾಗ, ಬೇರೆ ಭಾಷಾ ರಾಜ್ಯಗಳ ಪ್ರಶ್ನೆಯನ್ನು ವಿಚಾರಿಸಲು ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕ ಮಾಡುವುದಾಗಿ ಸಾರಿರುವಾಗ- ಕರ್ನಾಟಕ ಪ್ರದೇಶ ಕಾಂಗ್ರೆಸು ಸಮಿತಿಯು ಕೇವಲ ಉದ್ವೇಗ ಹಾಗೂ ವಿಕಾರವಶವಾಗಿ ರಾಜೀನಾಮೆ ಕೊಡುವ ಬೆದರಿಕೆ ತುಂಬಿದ ಗೊತ್ತುವಳಿಯನ್ನು ಸ್ವೀಕರಿಸಿದುದು ಯಾರಿಗೂ ಸಮಾಧಾನಕರವೆಂದು ತೋರಿರಲಿಲ್ಲ. ಕೇಂದ್ರ ಸರಕಾರದ ಮೇಲೆ ಕಾಲ ನಿರ್ಧಾರವನ್ನು ಹೇರುವ ವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸು ಸಮಿತಿ ಹೋದುದು ಮತ್ತು ಮನವೊಲಿಸುವ ಕಾರ್ಯವನ್ನು ಬಿಟ್ಟುಗೊಟ್ಟು ರಾಜೀನಾಮೆಯ ಬೆದರು ಗುಂಡಿಗೆ ಅವಕಾಶ ನೀಡಿದುದು ಯೋಗ್ಯ ಕ್ರಮವಾಗಿರಲಿಲ್ಲ. ಈ ತಪ್ಪನ್ನು ಈಗಲಾದರೂ ಪ್ರದೇಶ ಕಾಂಗ್ರೆಸು ತಿದ್ದಿಕೊಂಡಿರುವುದು ತೃಪ್ತಿಕರವಿದೆ. ಇದರಿಂದ ರಾಜೀನಾಮೆಯ ಬೆದರು ಗುಂಡು ಹಾಕುವುದರಲ್ಲಿ ಕನ್ನಡಿಗರನ್ನು ಮೀರಿಸುವವರಿಲ್ಲೆಂಬ ಸ್ಪರ್ಧೆ ಸ್ವಾಂಗ್ಯಕ್ಕೆ ಮಾತ್ರ ಬೇಕೆಂದು ಅವಕಾಶವಾಯಿತು ಏನೇ ಇರಲಿ- ಎಪ್ರಿಲ್ ೨೦ನೇ ದಿನಾಂಕದ ಬಳಿಕ ಘಟನೆಗಳು ಕರ್ನಾಟಕ ಪ್ರದೇಶ ಕಾಂಗ್ರೆಸದ ಬೇಡಿಕೆಗಳಿಗೆ ಬಹಳ ಅನುಕೂಲವಾಗಿ ಬದಲಾವಣೆ ಹೊಂದಿರುವುದನ್ನು ಈಗಿನ ಗೊತ್ತುವಳಿಯಲ್ಲಿ ಗುರುತಿಸಿರುವರು. "ಕರ್ನಾಟಕ ಪ್ರಾಂತ ರಚನೆಯ ಪ್ರಶ್ನೆಯು ಹೆಚ್ಚು ಸುಲಭವಾದುದೂ ಸುಪರಿಚಿತವೂ ಸಾಮಾನ್ಯವಾಗಿ ಒಪ್ಪಿಗೆ ಪಡೆದಂಥದೂ ಅದರ ಮಾರ್ಗದಲ್ಲಿ ವಿಶೇಷ ಅಡಚಣೆಗಳಿಲ್ಲವೆಂದೂ ಪ್ರಧಾನ ಮಂತ್ರಿಗಳು ಸ್ಪಷ್ಟವಾಗಿ ಹೇಳಿರುವರು. ಕರ್ನಾಟಕ ಪ್ರಾಂತ ರಚನೆಯ ಮಾರ್ಗದಲ್ಲಿ ಮೈಸೂರು ಆತಂಕವಾಗಿಲ್ಲೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿರುವರು. ಕರ್ನಾಟಕ ಪ್ರಾಂತರಚನೆ ಮಾಡಿದರೆ ನೆರೆಪ್ರಾಂತಗಳಲ್ಲಿ ತೊಂದರೆಗಳುದ್ಭವಿಸುವದೆಂಬ ಕಾರಣದಿಂದ ಕರ್ನಾಟಕ ಪ್ರಾಂತ ರಚನೆಯನ್ನು ಮುಂದೂಡುವ ಉದ್ದೇಶವು ಭಾರತ ಸರಕಾರಕ್ಕೆ ಇಲ್ಲವೆಂದೂ ಅವರು ಭರವಸೆ ನೀಡಿರುವರು. ಈ ಭರವಸೆಗಳು ಪ್ರದೇಶ ಕಾಂಗ್ರೆಸ್ ಸಮಿತಿಯು ಎಪ್ರಿಲ ೨೦ರಂದು ಸ್ವೀಕರಿಸಿದ ಗೊತ್ತುವಳಿಯ ಬೇಡಿಕೆಗಳನ್ನು ಸ್ವಾರಸ್ಯವಾಗಿ ಪೂರೈಸಿರುವುವು" ಎಂದು ಪ್ರದೇಶ ಕಾಂಗ್ರೆಸು ಅಭಿಪ್ರಾಯಗೊಂಡಿದೆ. ಪ್ರಧಾನಿ ನೆಹರೂರವರು ಶ್ರೀ ನಿಜಲಿಂಗಪ್ಪನವರಿಗೆ ದಿನಾಂಕ ೨೮ರಂದು ಬರೆದ ಪತ್ರದಲ್ಲಿ ಕರ್ನಾಟಕ ರಾಜ್ಯದ ನಿರ್ಮಾಣದ ಬಗ್ಗೆ ಹಾಗೂ ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕದ ಕುರಿತು ತಮ್ಮ ಅಭಿಪ್ರಾಯಗಳೇನೆಂಬುವನ್ನು ವಿವರವಾಗಿ ತಿಳಿಸಿರುವರು. ಈ ಪತ್ರವನ್ನು ನಿಜಲಿಂಗಪ್ಪನವರು ಪ್ರದೇಶ ಕಾಂಗ್ರೆಸ ಸಮಿತಿಯ ಸಭೆಯಲ್ಲಿ ಓದಿ ಹೇಳಿ ಎಲ್ಲ ಕಾಂಗ್ರೆಸ್ಸಿಗರಿಗೆ ನೆಹರೂರವರು ಏಕೀಕರಣದ ಮಾರ್ಗದಲ್ಲಿ ಆತಂಕವೊಡ್ಡುವ ಮನಸ್ಸಿಟ್ಟುಕೊಂಡಿಲ್ಲವೆಂದು ಸ್ಪಷ್ಟೀಕರಿಸಿರುವರು. ಮೊನ್ನೆತಾನೆ ಕೇಂದ್ರ ಗೃಹಮಂತ್ರಿ ಡಾ. ಕಟಜೂರವರು ಮಂಗಳೂರಿಗೆ ಬಂದಾಗ ಕರ್ನಾಟಕ ಏಕೀಕರಣದ ಕುರಿತು ಬಹಳ ಆಶಾದಾಯಕವಾದ ಮಾತುಗಳನ್ನು ಆಡಿರುವರು. ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕವನ್ನು ಈ ತಿಂಗಳಲ್ಲಿ ಸೇರುವ ಪಾರ್ಲಿಮೆಂಟು ಅಧಿವೇಶನದಲ್ಲಿ ಸಾರಲಾಗುವುದೆಂದೂ ವರಿಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಾಧೀಶರಾದ ಪತಂಜಲಿ ಶಾಸ್ತ್ರಿಯವರು ಅಥವಾ ಪಂಡಿತ ಹೃದಯನಾಥ ಕುಂಜ್ರೂ ಅವರು ಈ ಆಯೋಗದ ಅಧ್ಯಕ್ಷರಾಗಬಹುದೆಂದೂ ವರದಿಗಳು ಸೂಚಿಸುತ್ತವೆ. ಹೀಗೆ ಎಲ್ಲವೂ ಸುಗಮವಾಗಿದೆ. ಮತ್ತು ಗೊತ್ತುವಳಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸು ಹೇಳಿದಂತೆ "ಈಗ ಶಾಂತಿಯುತವಾದ ಹಾಗೂ ವಿಧಾಯಕ ರೀತಿಯಲ್ಲಿ ಜನರ ವೇಳೆ ಹಾಗೂ ಶಕ್ತಿಗಳನ್ನು ಉಪಯೋಗಿಸುವ ಮತ್ತು ಕರ್ನಾಟಕ ಪ್ರಾಂತ ರಚನೆಯ ಪ್ರಶ್ನೆಯನ್ನು ಉಚ್ಚ ಮಟ್ಟದ ಆಯೋಗದ ಮುಂದೆ ಸಮರ್ಥ ರೀತಿಯಲ್ಲಿ ಮಂಡಿಸುವ ಕಾಲ ಬಂದಿರುತ್ತದೆ." ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಒಂದುಗೂಡಿಸಿ ಸಂಯುಕ್ತ ಕರ್ನಾಟಕ ರಾಜ್ಯ ರಚನೆಯ ಮಹತ್ವದ ಹಾಗೂ ಅವಸರದ ಕಾರ್ಯದಲ್ಲಿ ಪ್ರದೇಶ ಕಾಂಗ್ರೆಸ್ಸಿನೊಡನೆ ಸಹಕರಿಸಲು ಸಾರ್ವ ಜನತೆಯನ್ನು ಬಿನ್ನವಿಸುತ್ತೇವೆ.

NAVAYUGA

Popular Kannada Weekly.

Founder: —

Sri A. B. SHETTY,

Minister for Public Health,

Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.

ಸ್ಥಾಪಕರು.— ಶ್ರೀ. ಎ. ಬಿ. ಶೆಟ್ಟಿ,

ಮದ್ರಾಸಿನ ಆರೋಗ್ಯಮಂತ್ರಿ.

ವಾ. ಚಂದಾ: ರೂ. 5-12-0

ಬಿಡಿಪ್ರತಿ: 0- 2-0

ಸ್ವಾತಂತ್ರ್ಯವನ್ನು ಕೊಡಬೇಕೆಂದು ಮಂಡಿಸಿದ ಠರಾವಿನ ಮಹತ್ವದ ಅಂಶಗಳು ತಿರಸ್ಕೃತವಾದರೂ ಸಾಮಾನ್ಯ ತತ್ವವು ಅಂಗೀಕರಿಸಲ್ಪಟ್ಟಿವೆ. ದಂಡಿನ ಕಾಯಿದೆಯನ್ನು ರದ್ದುಗೊಳಿಸಿ, ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಿ, ನಾಗರಿಕ ಹಕ್ಕು ಸ್ವಾತಂತ್ರ್ಯಗಳನ್ನು ಮನ್ನಿಸಬೇಕೆನ್ನುವ ಹಾಗೂ "ವಯಸ್ಕರ ಮತದಾನ ಪದ್ಧತಿಯಂತೆ ನಡೆದ ಮಹಾ ಚುನಾವಣೆಯಲ್ಲಿ ಆಯ್ಕೆ ಹೊಂದಿದ ಜನತಾ ಪ್ರತಿನಿಧಿಗಳೊಂದಿಗೆ ಸಂಪೂರ್ಣ ಸ್ವಾಯತ್ತಾಧಿಕಾರವನ್ನು ಕುರಿತು ಕೂಡಲೇ ಮಾತುಕತೆ ನಡೆಸಲು ಸಿದ್ಧತೆಯಾಗಬೇಕು" ಎನ್ನುವ ಎರಡು ಮುಖ್ಯಾಂಶಗಳು ನಿರಾಕೃತವಾದವು. ಮತದಾನದ ಕಾಲದಲ್ಲಿ ಬೆಲ್ಜಿಯಂ, ನೆದರ್ಲೆಂಡ, ಬ್ರಿಟನು ಮುಂತಾದ ಸಾಮ್ರಾಜ್ಯಶಾಹಿತ್ವದ ಸಂಕೇತವುಳ್ಳ ದೇಶಗಳಂತೂ ಸರಿಯೇ— ಪ್ರಜಾಪ್ರಭುತ್ವದ ಕುರಿತು ಹೆಮ್ಮೆಯ ಮಾತನ್ನಾಡುವ ಅಮೇರಿಕಾವೂ ವಿರೋಧ ಮತವನ್ನು ನೀಡಿತು. ಫ್ರಾನ್ಸು ಆದಿಯಿಂದ ಅಂತ್ಯದ ವರೆಗೂ ಈ ಚರ್ಚೆಯನ್ನು ಬಹಿಷ್ಕರಿಸಿ ಹೊರಗುಳಿಯಿತು. ಮತದಾನದಲ್ಲಿ ೨೯ ಜನರ ಅನುಕೂಲ ಮತಗಳ ವಿರುದ್ಧ ೨೩ ವಿರೋಧ ಮತಗಳು ಬಿದ್ದುದನ್ನು ಕಂಡರೆ, ಸಾಮಾನ್ಯ ಸಭೆಯಲ್ಲಿ ಇವು ಸ್ವೀಕರಿಸಲ್ಪಡುವ ಸಂಭವ ಕಡಿಮೆಯೆಂದೇ ತೋರುವುದು. ಒಂದುವೇಳೆ ನಿರ್ಣಯ ಪಾಸಾದರೂ ಫ್ರಾನ್ಸು ಅದರಂತೆ ನಡೆದುಕೊಳ್ಳುವುದೆಂಬ ಭರವಸೆ ಇಟ್ಟುಕೊಳ್ಳುವಂತಿಲ್ಲ.

ಹೋಚಿಮಿನರೊಡನೆ ಸಂಧಾನ

ಫ್ರಾನ್ಸು ಹೋಚಿಮಿನ್ನರೊಡನೆ ಇಂಡೋ ಚೀನಾದಲ್ಲಿ ಕಳೆದ ಎಂಟು ವರ್ಷಗಳಿಂದ ಯುದ್ಧಾಸಕ್ತವಾಗಿರುತ್ತದೆ. ದ್ವಿತೀಯ ಮಹಾ ಯುದ್ಧವು ಜಗತ್ತಿನ ಪಾಲಿಗೆ ೧೯೪೫ರಲ್ಲಿಯೇ ಕೊನೆಗಂಡಿದ್ದರೂ ಇಂಡೋಚೀನಾದ ಪಾಲಿಗಲ್ಲ ಅದುವೇ ನಾಂದಿಯಾಯಿತು. ಜಪಾನು ಪೂರ್ವ ಏಶಿಯಾದ ರಾಷ್ಟ್ರಗಳನ್ನು ಒಂದೊಂದೇಯಾಗಿ ನುಂಗುತ್ತಾ ಬಂದಾಗ, ಇಂಡೋ ಚೀನವನ್ನೂ ಅದು ಗಿಳಂಕರಿಸಿತು ಆದರೆ ಅಣುಬಾಂಬಿನ ಮಾರಕಹೋಮಕ್ಕೆ ಅಂಜಿ ಅದು ಅಂಬೆಗಾಲೂರಿದಾಗ, ಫ್ರೆಂಚ ಸೈನಿಕರು ಇಂಡೋ ಚೀನಾದಲ್ಲಿ ಮರಳಿ ಪ್ರವೇಶಿಸಿದರು ಜಪಾನರು ತಮಗೆ ನೇರವಾದ ಆಳಿಕೆ ನಡೆಸಲು ಪುರಸೊತ್ತಿಲ್ಲದವರಂತೆಯೋ ಏನೋ — ಇಂಡೋ ಚೀನಾದ ಜನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನಲ್ಲವಿದ್ದರೂ ಸಾಮಾನ್ಯ ಸ್ವರಾಜ್ಯವನ್ನು ನೀಡಿದ್ದರು. ಆದರೆ ಫ್ರೆಂಚರು ತಮ್ಮ ವಸಾಹತು ಧೋರಣೆಯನ್ನೇ ಮುಂದುವರಿಸಲು ಹವಣಿಸಿರುವುದನ್ನು ಕಂಡು ಸ್ವಾತಂತ್ರ್ಯದ ಸವಿ ಕಂಡ ಇಂಡೋ ಚೀನಾದ ಪ್ರಗತಿಶೀಲ ಪ್ರಜೆಗಳು ಹೋಚಿಮಿನ್ನರ ನೇತೃತ್ವದಲ್ಲಿ ಸಂಘಟಿತ ಪ್ರತಿಭಟನೆಯನ್ನು ಕೊಡಲು ಮುಂಬಂದರು ಇವರಿಗೆ ಚೀನೀ ಕಮ್ಯುನಿಸ್ಟರ ಬೆಂಬಲವುಂಟೆಂದು ವದಂತಿ ಇದ್ದರೂ — ಸ್ವಾತಂತ್ರ್ಯಕ್ಕೋಸ್ಕರ ಆಂದೋಲನ ಹೂಡುವ ಹಕ್ಕು ಯಾವ ಗುಲಾಮ ರಾಷ್ಟ್ರಕ್ಕೂ ಇದೆಯೆಂಬ ತತ್ವವನ್ನು ಅಲ್ಲಗಳೆಯಲಾರೆವು ಭಾರತವು ಶಾಂತಿ-ಅಹಿಂಸೆಯ ಧೋರಣೆಯ ಭವ್ಯ ಆದರ್ಶವನ್ನು ಸ್ವಾತಂತ್ರ್ಯಕ್ಕಾಗಿ ಹಕುವಳಿಸುವ ಇತರ ದೇಶದ ನಾಗರಿಕರ ಮುಂದೆ ಇಟ್ಟಿದ್ದರೂ ಅದಕ್ಕೆ ತಕ್ಕ ಹಿನ್ನೆಲೆ ಇನ್ನೂ ನಿರ್ಮಾಣವಾಗಿರುವುದಿಲ್ಲ ಹೀಗೆ ನ್ಯಾಯವಾದ ಆಕಾಂಕ್ಷೆಯನ್ನು ದಮನಿಸುತ್ತಾ ಫ್ರೆಂಚರು ತಮ್ಮೆಲ್ಲ ಶಕ್ತಿಯನ್ನು ಕಳೆದುಕೊಳ್ಳುತ್ತಾ ಬಂದಿರುವರು. ಅಮೇರಿಕಾದಿಂದ ಶಸ್ತ್ರಾಸ್ತ್ರ ಪೂರೈಕೆಯಾಗುತ್ತಿದ್ದರೂ ಫ್ರಾನ್ಸಿನ ಹ್ರಾಸವೇ ಹೆಚ್ಚುತ್ತಿದೆ. ಈಗ ಮರ್ಯಾದೆ ಉಳಿಸಿಕೊಳ್ಳಬ ಹೋಚಿಮಿನ್ನರೊಡನೆ ಸಂಧಾನದ ಮಾತುಕತೆಗೆ ತೊಡಗುವ ನಿರ್ಣಯವನ್ನು ಫ್ರಾನ್ಸು ಮಾಡಿರುವಂತಿದೆ. ಆದರೆ ಇದನ್ನು ಅಮೇರಿಕಾ ಮೆಚ್ಚುವುದಿಲ್ಲ—ಫ್ರಾನ್ಸಿನ ಬೆನ್ನನ್ನು ಅದು ಇನ್ನೂ ಚಪ್ಪರಿಸುತ್ತಿದೆ ಅಲ್ಲದೆ, ಇಂಡೋಚೀನಾದ ನಾಗರಿಕರ ಪಾಲಿಗೆ ಸ್ವಾತಂತ್ರ್ಯವೆಂದರೆಯೇ ಕಮ್ಯುನಿಸ್ಟ್ ದಾಸ್ಯವಾಗಿ ಪರಿಣಮಿಸಬಹುದೆಂದು ಗಂಭೀರ ಎಚ್ಚರಿಕೆಯನ್ನೂ ಅಮೇರಿಕದ ಉಪಾಧ್ಯಕ್ಷರು ನೀಡಿರುವನು.

ತಿಮ್ಮಯ್ಯನವರಿಗೆ ಯಶಸ್ಸು

ಕೊರಿಯಾದಲ್ಲಿ ತಿಮ್ಮಯ್ಯನವರು ಸಂಪೂರ್ಣ ನಿರಾಶೆಯನ್ನೇ ವ್ಯಕ್ತ ಪಡಿಸಿದ್ದರೂ ಪರಿಸ್ಥಿತಿ ಒಂದೆರಡು ದಿನಗಳಲ್ಲಿ ಸುಧಾರಿಸಿತು. ಚೀನೀ ಯುದ್ಧ ಕೈದಿಗಳು ವಿಚಾರಣೆಯನ್ನು ಕೇಳಲು ಒಪ್ಪಿದ್ದರೂ ಉತ್ತರ ಕೊರಿಯನ್ನರು ಹಾಗೆ ಮಾಡಲು ನಿರಾಕರಿಸಿದ್ದರು. ಉತ್ತರ ಕೊರಿಯನ್ನರನ್ನು ಹಾದಿಗೆ ತರಲು ಭಾರತೀಯ ಸ್ವಸ್ಥ ಪಡೆಯು ಶಕ್ತಿಯನ್ನು ಉಪಯೋಗಿಸಬೇಕೆಂದು ತಟಸ್ಥ ರಾಷ್ಟ್ರ ಮಂಡಳದ ಕಮ್ಯುನಿಸ್ಟ ಸದಸ್ಯರು ಕೇಳಿದರು. ಇದನ್ನು ಬೇರೆ ಸದಸ್ಯರು ಪುರಸ್ಕರಿಸದ್ದರಿಂದ ಮತ್ತು ಭಾರತವೇ ಒಂದು ತೀರ್ಪನ್ನು ಉಳಿದ ಸದಸ್ಯರ ಮನಸ್ಸಿನ ಇಷ್ಟಿಗೆ ವಿರುದ್ಧವಾಗಿ ಹೇರುವುದು ಅನಿಷ್ಟಪ್ರದವೆನಿಸಿದ್ದರಿಂದ — ತಟಸ್ಥ ರಾಷ್ಟ್ರ ಮಂಡಳವೇ ನಿಷ್ಕ್ರಿಯೋಪಕಾರವನ್ನು ಹುಟ್ಟಿದ್ದಿತು ಬಲ ಪ್ರಯೋಗ ಮಾಡುವಂತಾಗದೆ, ಉತ್ತರ ಕೊರಿಯನ್ನರು ತಾವಾಗಿಯೇ ವಿವರಣೆ ಕೇಳಲು ಬರಬೇಕೆಂದು ತಿಮ್ಮಯ್ಯನವರು ಸರಿಸರಿಯಾಗಿ ಮನವೊಲಿಸುವ ಪ್ರಯತ್ನ ಮಾಡಿದರು. ಇದರ ಫಲವಾಗಿ ಉತ್ತರ ಕೊರಿಯನ್ನರಿಗೆ ವಿವರಣೆ ನೀಡುವ ಕೆಲಸವು ಪುನಃ ತೊಡಗಿದೆ ಯುದ್ಧ ವಿರಾಮ ಒಪ್ಪಂದದಲ್ಲಿ ಮೂರು ತಿಂಗಳ ಕಾಲಾವಧಿಯನ್ನು ವಿವರಣೆಗೋಸ್ಕರ ನಿರ್ಧಾರ ಮಾಡಲಾಗಿದೆ. ಇದರಲ್ಲಿ ಒಂದು ತಿಂಗಳ ಕಾಲ ಈಗಾಗಲೇ ಸಂದುಹೋಯಿತು. ಈ ಅವಧಿಯಲ್ಲಿ ೨೨ ಸಾವಿರ ಮಂದಿ ಯುದ್ಧ ಕೈದಿಗಳಲ್ಲಿ ೨ ಸಾವಿರ ಮಂದಿಗೆ ಮಾತ್ರ ವಿವರಣೆ ನೀಡಲಾಗಿದೆ ಕಮ್ಯುನಿಸ್ಟ ಕೈದಿಗಳೂ ೮ ಸಾವಿರವಿದ್ದಾರೆ. ಎರಡು ತಿಂಗಳ ಅವಧಿಯಲ್ಲಿ ಇಷ್ಟು ಹೆಚ್ಚು ಜನಕ್ಕೆ ವಿವರಣೆ ನೀಡುವುದು ಸಾಧ್ಯವೇ ಏನೋ ತಿಳಿಯುವುದಿಲ್ಲ ರಾಜಕೀಯ ಪರಿಷತ್ತಿಗೆ ಪೂರ್ವಭಾವಿಯಾಗಿ ನಡೆಯುವ ಸಮ್ಮೇಳನದಲ್ಲೂ ಆಶಾದಾಯಕ ಪ್ರಗತಿ ನಡೆದಿಲ್ಲ ಈ ಮುಂಗಡದಾರದ ವರೆಗೆ ೮ ಸಲ ಕಮ್ಯುನಿಸ್ಟ ಹಾಗೂ ಅಮೇರಿಕಾದ ಪ್ರತಿನಿಧಿಗಳು ಸಭೆ ಸೇರಿದರೂ ತಮ್ಮ ಹಿಂದಿನ ನಿಲುವಿಗೇ ಈಗಲೂ ಇವರು ಅಂಟಿಕೊಂಡಿರುವರು; ಹೊರತು ಯಾವ ಪಕ್ಷವೂ ರಾಜಿಯಾಗುವ ರೀತಿ ತೋರಿಸುವ ಇಚ್ಛೆ ವ್ಯಕ್ತ ಪಡಿಸಿಲ್ಲ. ಹೀಗಿದ್ದರೆ ... ಒಬ್ಬರ ಅಪ್ಪ ಇನ್ನೂ ಇವೆ ಎಂಬ ಅಮೇರಿಕದ ಪ್ರತಿನಿಧಿಯು ಉದ್ಗಾರಕ್ಕೆ ಏನು ಬೆಲೆಯೋ — ನೋಡಬೇಕು.

- -

ಪ್ರಧಾನಿ ರಾಜಾಜಿಯವರ ಆಗಮನ— ಮದ್ರಾಸಿನ ಮುಖ್ಯಮಂತ್ರಿ ಶ್ರೀ. ಸಿ ರಾಜಗೋಪಾಲಾಚಾರಿಯವರು ಇದೇ ತಾ ೨೨ನೇ ಸಾಯಂಕಾಲ ವಿಮಾನದಲ್ಲಿ ಮಂಗಳೂರಿಗೆ ಬಂದು ಅಂದೇ ಸಂಜೆ ನೆಹರೂ ಮೈದಾನದಲ್ಲಿ ಸಾರ್ವಜನಿಕ ಭಾಷಣ ಮಾಡಲಿರುವರು ಮರುದಿನ ಬೆಳಿಗ್ಗೆ ನಗರಸಭೆಯ ಮಾನಪತ್ರ ಸ್ವೀಕರಿಸಿ, ವಿದ್ಯಾರ್ಥಿಗಳನ್ನು, ಮಹಿಳೆಯರನ್ನು, ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡುವರು ಕೆನರಾ ಚೇಂಬರ್ ಆಫ್ ಕಾಮರ್ಸಿನ ಭೇಟಿಯಿತ್ತು ಬಸ್ಸಿನ ಕೆಲಸ ಅಲ್ಲಿಂದ ವಿಮಾನ ಮೂಲಕ ಹಿಂದಿರುಗುವರು.

ಆರೂರು ವೆಂಕಟ್ರಾಯರ ಕೊಲೆ ಮೊಕದ್ದಮೆ:— ಮ. ತೀರ್ಮಾನವನ್ನು ಜಿಲ್ಲಾ ಸೆಷನ್ಸ್ ಜಡ್ಜ ಶ್ರೀ ಪಿ. ಡಿ ರಾಮನ್ ಸಂಜೆಯಾದ ಮೇಲೆ ಕೊಟ್ಟು ಆರೋಪಿಗಳೆಲ್ಲರೂ ನಿರಪರಾಧಿಗಳೆಂದು ತೀರ್ಮಾನಿಸಿ ಎಲ್ಲರನ್ನೂ ಬಿಡುಗಡೆ ಮಾಡಲಾಯಿತು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S 323/49. R E P 469/53.

ಅರ್ಜಿದಾರ— ಜಗನ್ನಾಥ ಸೆಟ್ಟಿ

ಎದ್ರಿರು— 1. ಸರ್ವೋತ್ತಮ.

2 ತುಂಗಮ್ಮ ಸೆಡ್ತಿ

ಕುಂದಾಪುರ ತಾಲ್ಲು ಕೋಟೇಶ್ವರ ಗ್ರಾಮದಲ್ಲಿರುವ ಪೇಟೆಮನೆ ಶೀನಗಿರಿಯಪ್ಪ ಸೆಟ್ಟರ ಮಗ ಸರ್ವೋತ್ತಮ 1 ವಳನಾಡು ಗ್ರಾಮದಲ್ಲಿರುವ ನಾರಾಯಣ ಸೆಟ್ಟಿ ಹೆಂಡ್ತಿ ತುಂಗಮ್ಮ ಸೆಡ್ತಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹರಣೆಯಲ್ಲಿ ೨ನೇ ಎದ್ರಿಯಿಂದ ಮೇಲಿನ ಡಿಕ್ರಿ ಹಣ ವಸೂಲು ಮಾಡುವ ಪಕ್ಷನ್ನು ಅರ್ಜಿದಾರನು ಟ್ರಾನ್ಸ್ಫರ್ ಪಡೆ ಕೊಂಡಿರುತ್ತಾನೆ. ಅರ್ಜಿದಾರಗೆ ಆದ ಟ್ರಾನ್ಸ್ಫರ್ ಮಂಜೂರಾತಿ ಬಗ್ಗೆ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅಮಲ್ದಾರಿಯು ತಾ. 11—11—1953ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆ-ಇದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಬ್ಯಾಹೇರು ಮಾಡಿಕೊಳ್ಳತಕ್ಕದ್ದು.

(Sd N S· Parameshwarich

Advocate for Petn.

Coondapoor Date 31—10—53

ಉತ್ಕೃಷ್ಟವಾದ ಮಂಗಳೂರಿನ

ಕೃಷ್ಣಾ ನಶ್ಯವನ್ನೇ

ಉಪಯೋಗಿಸಿರಿ.

ಪ್ರೊಪ್ರೈಟರ್: ಪಿ. ನಾರ್ಣಪ್ಪ

ಮಂಗಳೂರು

ಉಡುಪಿ

ಬರುವರು: ಶ್ರೀ ರಾಮಕೃಷ್ಣ ಸಂಘದ ಆಡಳಿತೆ ಮಂಡಳಿಯ ಸದಸ್ಯರೂ ಹಿರಿಯ ಸನ್ಯಾಸಿಗಳೂ ಪರಮಹಂಸರ ಪ್ರತ್ಯಕ್ಷ ಶಿಷ್ಯರೂ ಆದ ಸ್ವಾಮಿ ಯತೀಶ್ವರಾನಂದಜೀಯವರು ಈ ತಿಂಗಳ ಮಧ್ಯದಲ್ಲಿ ನಮ್ಮ ಜಿಲ್ಲೆಯ ಪ್ರವಾಸವನ್ನು ಕೈಕೊಳ್ಳಲಿದ್ದು ಉಡುಪಿಗೆ ಕೂಡಾ ಬರಲಿರುವರು. ಸ್ವಾಮಿ ಶಾಸ್ತ್ರ ಮತ್ತು ತತ್ವಜ್ಞಾನ ಸಂಪನ್ನರೂ ವಿದೇಶಗಳಲ್ಲಿ ಹಲವು ಹೊಸ ಕೇಂದ್ರಗಳನ್ನು ತೆರೆದವರೂ ಆದ ಇವರ ಉಪನ್ಯಾಸವನ್ನು ಕೇಳುವ ಸುಸಂಧಿಯನ್ನು ಉಡುಪಿಯ ಜನತೆ ಕಳಕೊಳ್ಳಬಾರದಾಗಿ ನಿರೀಕ್ಷಿಸಲಾಗಿದೆ

ಆರ್ ಎಸ್. ಎಸ್. ಮುಖಂಡರ ಆಗಮನ: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖಂಡರಾದ ಶ್ರೀ. ಎಮ್. ಎಸ್. ಗೋಳ್ವಾಲಕರರು ಕಳೆದ ತಾ. 29ರಲ್ಲು ಪೂರ್ವಾಹ್ನ ಉಡುಪಿಗೆ ಆಗಮಿಸಿ ಸಂಜೆ ಕೊಟ್ಟಿಕಾರ್ ಬಂಧುಗಳ ಇನ್ಸೂರೆನ್ಸ್ ಆಫೀಸಿನ ಪಟಾಂಗಣದಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಶ್ರೀ ಬಂಜಾರಕೆರೆ ಮಠದ ಸ್ವಾಮಿಗಳವರು ಸಭಾಧ್ಯಕ್ಷತೆ ವಹಿಸಿದ್ದರು ಶ್ರೀ ಗೋಳ್ವಾಲಕರರು ತಮ್ಮ ಭಾಷಣದಲ್ಲಿ ಹಿಂದೂ ರಾಷ್ಟ್ರ, ಹಿಂದೂ ಸಂಘಟನೆ ಇತ್ಯಾದಿ ಕುರಿತು ತಮ್ಮ ಸಂಘದ ಧೋರಣೆಗಳನ್ನು ವಿವರಿಸಿದರು. ಜಿಲ್ಲಾ ಸಂಚಾಲಕ ಶ್ರೀ ಕಾರ್ಕಳ ಸದಾಶಿವರಾಯರು ಧನ್ಯವಾದಗಳನ್ನರ್ಪಿಸಿದರು. ಸಭಾರಂಭದ ಮೊದಲಲ್ಲಿ ಸಂಘದ ಸ್ವಯಂ ಸೇವಕರ ಪಥಸಂಚಲನ ಕಾರ್ಯಕ್ರಮ ಮಳೆ ಸುರಿಯುತ್ತಿದ್ದರೂ ಕ್ಲಪ್ತ ಸಮಯದಲ್ಲಿ ಶಿಸ್ತಿನಿಂದ ನಡೆಯಿತು

ಕೇಂದ್ರದ ಗೃಹಮಂತ್ರಿ ಶ್ರೀ ಕಟ್ಜೂರವರ ಆಗಮನ— ಕೇಂದ್ರ ಸರಕಾರದ ಗೃಹ ಮಂತ್ರಿ ಶ್ರೀ ಕೆ. ಎನ್. ಕಾಟ್ಜೂರವರು ಕಳೆದ ತಾ. 31ರಲ್ಲು ರಾತ್ರಿ ಉಡುಪಿಗೆ ಆಗಮಿಸಿದರು ಮರುದಿನ ಬೆಳಿಗ್ಗೆ ಶ್ರೀಕೃಷ್ಣ ದರ್ಶನ ಮಾಡಿದರು. ನಂತರ ಅಷ್ಟ ಮಠಗಳ ಮತ್ತು ಸಂಸ್ಕೃತ ಕಾಲೇಜು ಸ್ಥಾಪಕರ ಕಡೆಯಿಂದ ಮಾನಪತ್ರವೊಂದನ್ನು ಶ್ರೀ ಸ್ವಾಮಿ ... ... ವರು ಗೃಹ ಮಂತ್ರಿಗಳಿಗೆ ಅರ್ಪಿಸಿದರು ಹಾಜರಿದ್ದ ಪರ್ಯಾಯ ಸೋದೆ, ಕೃಷ್ಣಾಪುರ, ಅದಮಾರು ಮತ್ತು ಕಾಣಿಯೂರು ಮಠಾಧೀಶರು ಶ್ರೀ ಕಾಟ್ಜೂರವರಿಗೆ ಮನ್ನಣೆಯಿತ್ತರು. ಗೃಹಮಂತ್ರಿಗಳು ಉತ್ತರ ನೀಡುತ್ತಾ ಸಂಸ್ಕೃತ ವಿದ್ಯೆಯನ್ನು ಎಲ್ಲರೂ ಕಲಿಯುವ ಆವಶ್ಯಕತೆಯನ್ನು ಸೂಚಿಸಿದರು. ನಂತರ ಮಂತ್ರಿಗಳು ಸಂಸ್ಕೃತ ಕಾಲೇಜಿಗೆ ಸಂದರ್ಶನವಿತ್ತು, ಬಾರ್ ಎಸೋಸಿಯೇಶನ್ನಲ್ಲಿ ಉಪಾಹಾರ ಸ್ವೀಕರಿಸಿ ಎಮ್. ಜಿ. ಎಮ್. ಕಾಲೇಜು ... ನನ್ನು ಭೆಟ್ಟಿಯಾಗಿ ... ಸ್ವೀಕರಿಸಿ ಕಾರ್ಕಳ ಮಾರ್ಗವಾಗಿ ಮುಂದುವರಿದ್ದು ಬಸ್ಸಿಯನ್ನು ನೋಡಿ ಬಜ್ಪೆಗೆ ಹೋಗಿ ಅಲ್ಲಿಂದ ವಿಮಾನದ ಮೂಲಕ ಕೊಚ್ಚಿನ್ ತೆರಳಿದರು. ಗೃಹ ಮಂತ್ರಿಗಳ ಜತೆಯಲ್ಲಿ ಶ್ರೀಯುತರಾದ ಕೆ. ಎಸ್. ಹೆಗ್ಡೆ. ಎಮ್. ಪಿ., ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ., ಡಾ॥ ಟಿ. ಎ. ಪೈ, ಮಲ್ಯರವರು ಬಂದಿದ್ದರು.

ನಗರ ಸಭೆಯು— ಕಳೆದ ತಾ. 31ರಲ್ಲಿ ಅಧ್ಯಕ್ಷ ಶ್ರೀ ಟಿ. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಪ್ರಶ್ನೋತ್ತರ, ಸದೆ ಕಾರಿ ಮೊಕದ್ದಮೆ ಲಭಿತ, ಬೇರೆ ಬೇರೆ ಕಮಿಟಿಗಳ ವರದಿ ಪರಿಶೀಲನೆ ಮೊದಲಾದ ಕಾರ್ಯಕ್ರಮಗಳು ಜರಗಿದವು.

ಒಂದೆರಡು ವರ್ಷಗಳ ಮಾಹಿತಿಯುಳ್ಳ ಯೋಗ್ಯ ಕಂಪೋಜಿಟರರು ಬೇಕಾ.

14 ವರ್ಷಕ್ಕೆ ಮೇಲ್ಪಟ್ಟ ಕಲಿವ ಹುಡುಗರನ್ನು ಏಪ್ರೆಂಟಿಸ್ಗಾಗಿಯೂ ಸೇರಿಸಿಕೊಳ್ಳಲಾಗುವುದು,

ವಿಚಾರಿಸಿ.

ನವಯುಗ ಪ್ರೆಸ್, ಉಡುಪಿ.

ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿರ ಜಿಲ್ಲಾ ಸಂಚಾರ ಕಾರ್ಯಕ್ರಮ

ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ ಎ ಬಿ ಶೆಟ್ಟರು ಇದೇ ತಾ 6ರಲ್ಲಿ ಸಂಜೆ ಮಂಗಳೂರಿಗೆ ಬಂದು ತಾ 10 ರ ತನಕ ಮೊಕ್ಕಾಂ ಮಾಡುವರು. ತಾ 7 ರ ಲ್ಲಿ ಬಜ್ಪೆ ಆರೋಗ್ಯ ಕೇಂದ್ರಕ್ಕೆ ಸಂದರ್ಶನ ತಾ 9 ರಲ್ಲಿ ಬೆಳಗ್ಗೆ ವೆನ್‌ಲಾಕ್ ಆಸ್ಪತ್ರೆ ಸಂದರ್ಶನೆ ತಾ 9 ರಲ್ಲಿ ಮಂಗಳೂರು ಅಗುಂಬೆ ರಸ್ತೆಯ ಸಂಕದ ಉದ್ಘಾಟನೆ ಮಧ್ಯಾಹ್ನ ಹೆಬ್ರಿ ಆರೋಗ್ಯ ಕೇಂದ್ರಕ್ಕೆ ಭೇಟಿ ಸಂಜೆ ಮಂಗಳೂರಿಗೆ ಪುನರಾಗಮನ ತಾ 10 ರಲ್ಲು ಬೆಳಿಗ್ಗೆ ಮದ್ರಾಸಿಗೆ ಪ್ರಯಾಣ

ಹಿಂದೂ ಅನಾಥಾಶ್ರಮ-ಪ್ರೊಂದು ದ ಕ ಜಿಲ್ಲೆಯ ಮುರ ದೇವಸ್ಥಾನಗಳ ನೆರವಿನಿಂದ ಮಂಗಳೂರಲ್ಲಿ ಈ ತಿಂಗಳ ತಾ 8 ರ ಸುಮಾರಿಗೆ ಪ್ರಾರಂಭವಾಗಲಿದ್ದು ಅದರ ಉದ್ಘಾಟನೆಯನ್ನು ಧಾರ್ಮಿಕ ಉಂಬಳಿ ಇಲಾಖಾ ಮಂತ್ರಿಗಳು ನೆರವೇರಿಸಲಿರುವರು ಆರು ವರ್ಷಕ್ಕೆ ಮೇಲ್ಪಟ್ಟು ಹತ್ತು ವರುಷದೊಳಗಿನ ಹಿಂದೂ ಅನಾಥ ಮಕ್ಕಳನ್ನು ಈ ಆಶ್ರಮಕ್ಕೆ ಸೇರಿಸಿಕೊಳ್ಳಲಾಗುವುದು ಈ ಆಶ್ರಮಕ್ಕೆ ಸೇರಲಿಚ್ಛಿಸುವವರ ಅರ್ಜಿಗಳನ್ನು ಸೆಕ್ರೆಟರಿ ಹಿಂದೂ ಅನಾಥಾಶ್ರಮ, ಶ್ರೀ ವೆಂಕಟ್ರಮಣ ದೇವಸ್ಥಾನ, ಮಂಗಳೂರು, ಅವರಿಗೆ ಕಳುಹಿಸುವುದು

ಬೆಳ್ಮಾರೆ ಬೆಳ್ಮಾರೆ.ಸುಳ್ಯ ಬೋರ್ಡ್ ಹೈಸ್ಕೂಲುಗಳ ಟೂರ್ನಮೆಂಟ್ "Hard Ball' ಕ್ರಿಕೆಟ್ ಪಂದ್ಯಾಟವು ಕಳೆದ ತಾ25 ಮತ್ತು 26ರಲ್ಲಿ ಸ್ಥಳೀಯ ಆಟದ ಮೈದಾನಿನಲ್ಲಿ ಜರಗಿತು ಬೆಳ್ಮಾರೆ ಶಾಲಾ ವಿದ್ಯಾರ್ಥಿಗಳು 20 ರನ್ನು ಹೆಚ್ಚು ಗಳಿಸಿ ವಿಜಯಿಗಳಾದರು.

ಕಾಂತಾವರ—ದೇವಸ್ಥಾನದಲ್ಲಿ ನವರಾತ್ರಿಯು ಶಾಲಾ ವಿದ್ಯಾರ್ಥಿಗಳ ನೃತ್ಯ, ಶ್ರೀಗಳಾದ ಶ್ಯಾಮ ಭಟ್ ಶ್ರೀನಿವಾಸ ರಾವ್, ಶಿವರಾಯರ ಭಾಷಣಗಳಿಂದ ನೆರವೇರಿತು.

ಕಾಸರಗೋಡು—ದ. ಕ. ಜಿಲ್ಲಾ ವಿದ್ಯಾ ಸಮ್ಮೇಳನವು ಇದೇ ತಾ 8 ರಲ್ಲು ಕಾಸರಗೋಡು ಡಾ! ಎ. ಶಾಲೆಯ ಪಶ್ಚಿಮ ಭಾಗದ ಕಟ್ಟಡದಲ್ಲಿ ಸಂಜೆ 3-30ಕ್ಕೆ ಕಾಸರಗೋಡು ಸೆಂಟ್ರಲ್ ತೆಂಗು ಕೃಷಿ ಪರಿಶೋಧನೆ, ಕೇಂದ್ರದ ಡೈರೆಕ್ಟರ್ ಶ್ರೀ ಸಿ ಎಮ್ ಜೋನ್ ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು ಅಂದು ಮಧ್ಯಾಹ್ನ 10 30ಕ್ಕೆ ಪ್ರತಿನಿಧಿಗಳ ಸಭೆ ಸೇರುವುದು

ಶಿರ್ವ: ಪಂಚಾಯಿತ ಬೋರ್ಡಿನ ಸಭೆಯು ಕಳೆದ ತಾ 21ರಲ್ಲಿ ಶ್ರೀ ಎಸ್, ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶಿರ್ವ ಕೋಡು ಮುಲ್ಲಾಡಿ ದೇವಸ್ಥಾನ ರಸ್ತೆ ನಿರ್ಮಿಸುವ, ಶಿರ್ವ ಮಂಚಕಲ್ಲು ಪೇಟೆಯಲ್ಲಿ ರಾಜಾರಸ್ತೆಗೆ ಡಾಮಾರು ಹಾಕುವಂತೆ ಡ್ಯಾನೇಸ್ ಇಲಾಖೆಯವರನ್ನು ಕೇಳಿಕೊಳ್ಳುವ, ಶಿರ್ವ ಸಬ್ ಪೋಸ್ಟಾಫೀಸಿನಲ್ಲಿ ತಂತಿ ಟೆಲಿಗ್ರಾಫ ಶಾಖೆಯನ್ನು ಬೇಗನೇ ತೆರೆಯುವಂತೆ ಅಧಿಕಾರಿಗಳನ್ನು ತಿರುಗಿಕೇಳಿಕೊಳ್ಳುವ ನಿರ್ಣಯಗಳಾದುವು

ಮಣಿಪಾಲ ಸ್ಥಳೀಯ ಹೈಸ್ಕೂಲಿನಲ್ಲಿ ಸಂ. ರಾಷ್ಟ್ರಸಂಘದ ವಿಚಾರಣೆಯು ಕಳೆದ ತಾ 28ರಲ್ಲಿ ಡಾ! ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು, ಯುಕ್ತರಾಷ್ಟ್ರ ಸಂಘದ ಧ್ವಜಾರೋಹಣವಾಗಿ ಮುಖ್ಯೋಪಾಧ್ಯಾಯರಿಂದ ಪ್ರಾಸ್ತಾವಿಕ ಭಾಷಣ ನಡೆಯಿತು ಶ್ರೀ ಕು ಶಿ ಹರಿದಾಸ ಭಟ್ಟರು ಉಪನ್ಯಾಸ ನಿತ್ತರು ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ಅಧ್ಯಕ್ಷರು ವಿತರಣೆ ಮಾಡಿದರು

ಕುಂದಾಪುರ—ಸ್ಥಳೀಯ ಸಹಕಾರಿ ಯೂನಿಯನ್ನಿನ ಮಹಾಸಭೆಯು ಕಳೆದ ತಾ 31ರಲ್ಲು ಯೂನಿಯನ್ ಪ್ರೆಸಿಡೆಂಟ್ ಶ್ರೀ ನರಸಿಂಹ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಮುಂದಿನ ವರುಷಕ್ಕೆ ಶ್ರೀ ಗಳಾದ ಕಾಪು ಸಂಜೀವ ಸೆಟ್ಟಿ, ಟಿ ನಾರಾಯಣ ರಾವ್, ಬಿ ವೀರರಾಜೇಂದ್ರ ಹೆಗ್ಡೆ ಕೆ ಮಹಾಲಿಂಗ ಸೆಟ್ಟಿ, ಎಸ್ ನರಸಿಂಹ ಆಚಾರ್ಯ, ಬಿ. ಸಂಜೀವ ರಾವ್ ಮತ್ತು ಬಿ ಸುಬ್ಬಣ್ಣ ಹೆಗ್ಡೇರು ಯೂನಿಯನ್ ಡೈರೆಕ್ಟರಾಗಿ ಆರಿಸಲ್ಪಟ್ಟರು ದ ಕ ಜಿಲ್ಲಾ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರ್ ಸ್ಥಾನಕ್ಕೆ ಈ ಯೂನಿಯನ್ ಪ್ರತಿನಿಧಿಯಾಗಿ ಶ್ರೀ ಕಾಪು ಸಂಜೀವ ಸೆಟ್ಟರ ಆರಿಸಲಾಯಿತು

ಹೊಂಬಾಡಿ-ಮಂಡಾಡಿಗ್ರಾಮದ ಮುಸ್ಸಾರಿ ಸೆಂಟರಿನಲ್ಲಿ ಶ್ರೀ ಕಾಪು ಸಂಜೀವ ಸೆಟ್ಟರ ಹೆಸರಲ್ಲಿಯ ಹೊಸ ಎಯಿಡೆಡ್ ಎಲಿಮೆಂಟರಿ ಶಾಲೆಯ ಪ್ರವೇಶೋತ್ಸವವನ್ನು ಕಳೆದ ತಾ 31 ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ ಸಂಜೀವ ಭಟ್ಟರು ನೆರವೇರಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರದ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್, ಎಲ್, ಎ, ಅವರು ವಹಿಸಿದ್ದರು ಶ್ರೀ ಎಮ್. ಎಮ್ ಹೆಗ್ಡೆಯವರು ರಾಷ್ಟ್ರ ಧ್ವಜಾರೋಹಣ ನಡೆಸಿದರು ವಿದ್ಯೆಯ ಅವಶ್ಯಕತೆ, ಇಂತಹ ಶಾಲೆಗಳು ಹೆಚ್ಚು ಹೆಚ್ಚಾಗಿ ತೆರೆಯಲ್ಪಡುವ ಜರೂರಾತಿ, ಊರವರ ಮತ್ತು ಹೆತ್ತವರ ಕರ್ತವ್ಯ ಇತ್ಯಾದಿ ವಿಷಯಗಳನ್ನೆತ್ತಿ ಜಿಲ್ಲಾ ವಿದ್ಯಾಧಿಕಾರಿಗಳೂ ಸಭಾಧ್ಯಕ್ಷರೂ ಮಾತನಾಡಿದರು. ಶ್ರೀ ಕಾಪು ಸಂಜೀವ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ದೀಪಾವಳಿಯು

ನಿಮ್ಮ ಮನೆ-ಮನೆ ಬೆಳಗಲಿ!

ಎಲ್ಲಾ ತರದ ಎಕೌಂಟು ಪುಸ್ತಕಗಳು ಸಿಗುತ್ತವೆ.

ಉತ್ತಮ ಕಾಗದ! ದರ ಕಡಿಮೆ!

ನವಯುಗ ಪ್ರೆಸ್,

ಉಡುಪಿ.

THE MAHARASHTRA APEX BANK, LTD.

(Incorporated in India Liability of Shareholders Limited)

"Ramanjaneya Building', UDIPI, S Kanara

* * * * * * *

NOTICE

NOTICE is hereby given that an Extra ordinary General Meeting of the shareholders of the Bank will be held at the Registered Office of the Bank at 'Ramanjaneya Building", Udipi, on Monday the 23rd November 1953 at 4 p m for the purpose of considering and if thought fit passing the following resolutions as Special Resolutions

"Resolved that the assets and liabilities of the Bank be transferred to The Canara Industrial & Banking Syndicate, Ltd, Udipi, in terms of the agreement, the draft of which is attached hereto and that the Board of Directors be authorised to execute the agreement between this bank and the Syndicate

Resolved that the Board of Directors be empowered to carry out the terms of the agreement by executing and accepting the necessary deeds, documents, conveyances, transfers etc, in full compliance with the Articles of Association of this Bank"

The presence of all the shareholders of the Bank at the said meeting is earnestly solicited If, however, a shareholder is unable to attend the meeting in person, he may appoint a shareholder of the Bank as his proxy by sending the proxy form duly stamped with revenue stamp of the value of two annas and duly signed and attested, so as to reach the Registered Office of the Bank by 4 p m of the 20th November, 1953

(By Order of the Board)

"Ramanjaneya Building,"
UDIPI,
Dated 22nd October, 1953

K. Panduranga Pai,
Chairman.

DRAFT OF THE AGREEMENT TO BE ENTERED INTO BY AND BETWEEN THE CANARA INDUSTRIAL & BANKING SYNDICATE, LTD, AND THE MAHARASHTRA APEX BANK, LTD

AGREEMENT made and executed this the .. ..day of November, 1953 between the Canara Industrial & Banking Syndicate Ltd incorporated under the Indian Companies Act, with its registered Head Office at Udipi South Kanara District, hereinafter called the Syndicate, of the one PART and the Maharashtra Apex Bank Ltd, a public limited liability Banking Company, registered under the Indian Companies Act and having its registered Head Office at Udipi, South Kanara District hereinafter called the Apex Bank of the OTHER PART

WHEREAS it is deemed expedient to transfer the business undertaking of the Apex Bank unto the Syndicate in order to render better banking service, it is agreed as hereinafter appearing

NOW these presents witness and it is hereby agreed by and between the Syndicate and the Apex Bank as follows

That the Syndicate shall take over from the Apex Bank all its liabilities to its depositors and creditors and accept the assets of the Apex Bank of an equal value

That the Apex Bank shall transfer and make over to the Syndicate and the Syndicate shall take over from the Apex Bank all the liabilities and obligations of the Apex Bank to its depositors and creditors on the same terms on which the Apex Bank holds the said various accounts and the Syndicate shall on and after such transfer pay and discharge the various moneys due to depositors and creditors of the Apex Bank as shown by their respective accounts with the Apex Bank

In consideration of the premises the Apex Bank shall deliver, assign and transfer to the Syndicate such of the assets of the Apex Bank of a value equal to the amounts of the total liability to be taken over by the Syndicate as may be mutually agreed upon between the Apex Bank and the Syndicate Valuation of assets is to be done at the market value of the securities for the Investments on G P Notes held by the Apex Bank, and with regard to the immoveable properties at the book value and with regard to the other assets, necessary to make up the amount to be certified to be good by the Auditor of the Apex Bank

The Apex Bank shall execute such transfers, endorsements or documents as may be necessary in favour of the Syndicate in respect of such assets, as may be necessary to completely and effectually vest such assets in the Syndicate

The transfer of such liabilities and making over of the assets will be completed as on the close of the business of the Apex Bank on 30th November, 1953

On and after the 1st day of December, 1953 the Apex Bank shall not carry on any banking business except to the extent necessary for the realisation of its residuary and other assets and convert the same into cash

That the Managing Directors respectively of the two Banks shall decide upon all the necessary details, drafts of conveyances, transfers and endorsements and all other incidental matters for effectually carrying out the terms of this agreement

IN WITNESS WHEREOF the common seals of the Canara Industrial & Banking Syndicate Ltd, and the Maharashtra Apex Bank, Ltd, have been hereunto affixed this the . . . . day and year first herein-above written

---

ಕವಿಭೂಷಣ ಕೆ ಪಿ ವೆಂಕಪ್ಪ ಶೆಟ್ಟರ

ಭಾರತದ ಗುರುಕುಲ

(ಯಕ್ಷಗಾನ)

ಬೆಲೆ: 0 8 0

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ

ಸಾಹಸ ಭೀಮ ವಿಜಯ	0— 8—0
ಲಕ್ಷ್ಮಿ ಹಗರಣ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ನವಭಾರತ ಪುಸ್ತಕ ಭಂಡಾರ, ಉಡುಪಿ

ಮಂಗಳೂರು

ಮಂಗಳೂರಲ್ಲಿ ಕೇಂದ್ರದ ಗೃಹ ಮಂತ್ರಿಗಳು

ಇಂಡಿಯಾ ಸರಕಾರದ ಗೃಹ ಮಂತ್ರಿಗಳಾದ ಡಾ| ಕೈಲಾಸನಾಥ ಕಟ್ಜೂರವರು ಕಳೆದ ತಾ 30ರಲ್ಲಿ ಪೂರ್ವಾಹ್ನ ಬೊಂಬಾಯಿಯಿಂದ ಬಜ್ಪೆ ವಿಮಾನ ನಿಲ್ದಾಣದಲ್ಲಿ ಬಂದಿಳಿದರು. ಆಗ ಜಿಲ್ಲಾ ಕಲೆಕ್ಟರ್, ನಗರದ ಆಡ್ಮಿನಿಸ್ಟ್ರೇಟರ್ ಮಹನೀಯರನೇಕರು ಅವರನ್ನು ಸ್ವಾಗತಿಸಿದರು. ಅಲ್ಲಿಂದ ಮಂತ್ರಿಗಳು ನೇರಾಗಿ ನಗರಸಭಾಭವನಕ್ಕೆ ಬಂದು ಚೆರ್ ಮೆನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಂದ ಓದಿ ಅರ್ಪಿಸಲಾದ ಮಾನಪತ್ರವನ್ನು ಸ್ವೀಕರಿಸಿದರು. ಮಾನಪತ್ರದಲ್ಲಿ ಗೃಹ ಮಂತ್ರಿಗಳು ದೇಶಕ್ಕೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ ಅವರಿಗೆ ಸುಸ್ವಾಗತ ಬಯಸಲಾಗಿತ್ತು, ಅಲ್ಲದೆ ಆಂಧ್ರಪ್ರಾಂತವಾಗುವಾಗ ಕರ್ನಾಟಕ ಪ್ರದೇಶಗಳನ್ನು ಒಟ್ಟುಗೂಡಿಸಿ ಕರ್ನಾಟಕ ಪ್ರಾಂತ ಮಾಡದಿದ್ದರಿಂದ ಕನ್ನಡಿಗರಿಗೆ ಬೇಸರ ವಾಗಿದೆಯೆಲ್ಲದೆ ಸ್ವರಾಜ್ಯ ಸರಕಾರದಲ್ಲೂ ಪಂಚವಾರ್ಷಿಕ ಯೋಜನೆಯಲ್ಲೂ ಉತ್ಸಾಹಕುಂದುತ್ತಿದೆಯಾದುದರಿಂದ ಕೇಂದ್ರ ಸರಕಾರವು ಕೂಡಲೇ ಪ್ರಾಂತರಚನೆಯ ಕಾರ್ಯ ಕೈಕೊಳ್ಳಬೇಕು ಎಂದು ಸ್ಪಷ್ಟಪಡಿಸಲಾಗಿತ್ತು. ನೀರಿನಸರಬರಾಯಿ, ಮಂಗಳೂರನ್ನು ದೊಡ್ಡ ಬಂದರವಾಗಿ ಮಾಡುವುದು, ಮಂಗಳೂರು ಹಾಸನ ರೈಲು ಮಾರ್ಗ, ವಿಮಾನ ನಿಲ್ದಾಣದಿಂದ ನಗರಕ್ಕೆ ನೇರಾಗಿ ಎಂಟು ಮೈಲುಗಳ ಮರವೂರು ಮಾರ್ಗ ವಾಗುವಂತೆ ಮರವೂರಲ್ಲಿ ಸೇತುವೆ ಹಾಕಿಸುವುದು, ಉಳ್ಳಾಲ ಸಂಕದ ಪಕ್ಕದಲ್ಲೇ ಇತರೆ ವಾಹನಗಳೂ ಚಲಿಸುವಂತೆ ಮಾಡುವುದು, ಅನೇಕಾಲು ರೋಗ ನಿವಾರಣೆಯಲ್ಲಿ ಸಹಾಯ ಮಾಡುವದು, ಇತ್ಯಾದಿ ವಿಷಯಗಳನ್ನು ಮಾನಪತ್ರದಲ್ಲಿ ಹೇಳಲಾಗಿತ್ತು.

ಮಂತ್ರಿಗಳು ಉತ್ತರ ಕೊಡುತ್ತಾ, ಮೊದಲು ನಗರ ಸಭಾಸದಸ್ಯರ ಸೇವೆಯ ಕುರಿತು ಮಾತನಾಡುತ್ತಾ, ನಿಮಗೆ ಜನತೆಯ ಸಮೀಪವಿದ್ದು ಸೇವೆಮಾಡುವ ಸಂದರ್ಭವಿದೆ. ನೀವೇ ನಿಜವಾದ ನಿಸ್ವಾರ್ಥ ದೇಶ ಸೇವಕರು. ಉಳಿದೆಲ್ಲಾ ಪ್ರತಿನಿಧಿಗಳು ಸಂಬಳ ಪಡೆಯುತ್ತಾರೆ ಎಂದು ಹೇಳಿದರು. ನಗರ ಸಭೆಯವರು ಮಕ್ಕಳಿಗೆ ಹಾಲುಕೊಡುವ ವ್ಯವಸ್ಥೆ ಮಾಡಲು ಪ್ರಯತ್ನಿಸಬೇಕು. ಅವರಿಗೆ ಹೆಚ್ಚು ಆಟದ ಬಯಲುಗಳನ್ನು ಒದಗಿಸಬೇಕು. ಅವರೇ ನಮ್ಮ ರಾಷ್ಟ್ರದ ಸಂಪತ್ತು. ಕರ್ನಾಟಕಪ್ರಾಂತ್ಯ ನಿರ್ಮಾಣ ವಿಚಾರದಲ್ಲಿ ಉಚ್ಚ ಮಟ್ಟದ ಸಮಿತಿಯ ನೇಮಕ ಸಧ್ಯದಲ್ಲೇ ಆಗುವುದು. ಅದು ಆಗಿಯೇ ತೀರುವುದು. ಆದರೆ ಕೊಡಗು ಮತ್ತು ಪೈವರಾಬಾದುಗಳ ವಿಚಾರವನ್ನು ನೀವು ಮರೆಯಬಾರದು. ನಾವು ಕೈಕೊಳ್ಳುವ ಯಾವ ಕಾರ್ಯವೇ ಆಗಲಿ ದೇಶದ ಐಕ್ಯತೆಗೆ ಕುಂದು ತರಬಾರದು, ಎಂದು ಹೇಳುತ್ತಾ ಪ್ರತಿಯೊಬ್ಬ ವಿದ್ಯಾವಂತ ನಾಗರಿಕನೂ ಚರಿತ್ರೆ ಓದಿ ಅದರಿಂದ ಪಾಠ ಕಲಿಯಬೇಕೆಂದರು. ಇಂದು ನಿಷ್ಕ್ರಿಯರಾಗಿದ್ದ ಹಳ್ಳಿಗರುಎಚ್ಚೆತ್ತಿದ್ದಾರೆ ಭಾರತವೇ ಎಂದು ನಿಂತಿದೆ. ಆದರಿಂದ ಹಳ್ಳಿಗರನ್ನು ಕಡೆಗಣಿಸಬಾರದು. ಅವರಿಗೂ ಶುದ್ಧ ನೀರು, ಶಾಲೆ, ಆಸ್ಪತ್ರೆ, ದಾದಿಯರ ಸೌಕರ್ಯಬೇಕಾಗಿದೆ, ಆದುದರಿಂದಲೇ ನಾವಿಂದು ಪ್ರಾಥಮಿಕ ಶಿಕ್ಷಣದ ಕಡೆಗೆ ವಿಶೇಷ ಗಮನಿಸಬೇಕು ಎಂದು ಕೊನೆಯದಾಗಿ ಹೇಳಿದರು. ಅದೇ ದಿನ ಸಂಜೆ ಗೃಹ ಮಂತ್ರಿಗಳು ಮಡಿಕೇರಿಗೆ ಹೋಗಿ ಮರುದಿನ ಮಧ್ಯಾಹ್ನ ಮಂಗಳೂರಿಗೆ ಬಂದರು.

ವಕೀಲ ಸಂಘದಲ್ಲಿ ಸತ್ಕಾರ— ತಾ 31ರಂದು ಸಂಜೆ ಗೃಹಮಂತ್ರಿಗಳಿಗೆ ವಕೀಲ ಸಂಘದಲ್ಲಿ ಸತ್ಕಾರಕೂಟ ಜರಗಿತು. ಸಂಘದ ಅಧ್ಯಕ್ಷ ಶ್ರೀ ಜಿ. ಸೋಮಶೇಖರ ರಾಯರು ಮಂತ್ರಿಗಳನ್ನು ಸ್ವಾಗತಿಸುತ್ತಾ, ಇಂದಿನ ನ್ಯಾಯಸ್ಥಾನಗಳ ಆಡಳಿತೆಯಲ್ಲಿ ವ್ಯತ್ಯಾಸವಾಗದೆ ಯಾವ ನಂಬಿಗಸ್ತ ಮರ್ಯಾದಸ್ಥ ನಾಗರಿಕನೂ ನ್ಯಾಯ ಸ್ಥಾನದಮುಂದೆ ಸಾಕ್ಷಿ ಹೇಳಲು ಬರುವುದಿಲ್ಲ. ನ್ಯಾಯ ಪರಿಪಾಲನೆಗೆ ಇದೊಂದು ದೊಡ್ಡ ತಡೆ. ಆದುದರಿಂದ ಸಾಕ್ಷ್ಯ ಕಾಯಿದೆ ಇತ್ಯಾದಿ ಕಾಯಿದೆಗಳ ಸುಧಾರಣೆಯಾಗಬೇಕು. ನ್ಯಾಯವು ಕಡಿಮೆ ಖರ್ಚಿನಲ್ಲಿ ತ್ವರಿತದಲ್ಲಿ ಸಿಗುವಂತಾಗಬೇಕೆಂಬ ಅಭಿಪ್ರಾಯವು ಮನವಿಯನ್ನರ್ಪಿಸಿದರು. ಮಂತ್ರಿಗಳು ಉತ್ತರಕೊಡುತ್ತಾ, ಸುಳ್ಳು ಮರಾವೆಗಳನ್ನು, ಸುಳ್ಳು ಸಾಕ್ಷಿಗಾರರನ್ನು ಮತ್ತು ಸಾಕ್ಷಿಗಳನ್ನು ತರಬೇತಿಗೊಳಿಸಿ ತಯಾರಿಸುವುದನ್ನು ನೀವು ಪ್ರೋತ್ಸಾಹಿಸಬಾರದು. ಅಂತಹ ಕೆಲಸ ಮಾಡುವ ವಕೀಲರು ನ್ಯಾಯ ಪರಿಪಾಲನೆಗೆ ಸಹಾಯಕ ರಾಗುವ ಬದಲು ತಡೆಯಾಗುತ್ತಾರೆ ಎಂದುಹೇಳಿದರು.

ಸಂಜೆ 6 ಗಂಟೆಗೆ ಗೃಹಮಂತ್ರಿ ಗಳಿಗೆ ಅಭ್ಯಾಗತ ಸಮಿತಿಯವರು ಸಹಕಾರಿ ಸೆಂಟ್ರಲ್ ಬೇಂಕಿನ ಮಾಳಿಗೆಯಲ್ಲಿ ಸತ್ಕಾರಕೂಟ ಗೌರವಿಸಿದರು, ಶ್ರೀ ಕೆ. ಆರ್. ಕಾರಂತರು ಸ್ವಾಗತಿಸಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಕರ್ನಾಟಕ ಪ್ರಾಂತದ ಕುರಿತು ನಿಮ್ಮಲ್ಲಿ ಎಲ್ಲರಿಗೂ ಹೆಚ್ಚು ಉತ್ಸಾಹವಿದೆ. ನಿಮ್ಮ ಪ್ರಾಂತಕ್ಕೆ ರಾಜಧಾನಿ, ಹ್ಯಾಕೋರ್ಟು ಹುಡುಕ ಬೇಕಾಗಿಲ್ಲ. ಆದುದರಿಂದ ಪ್ರಾಂತರಚನೆಗೆ ಹೆಚ್ಚು ತಡೆಗಳಿಲ್ಲ ಎಂದುಹೇಳಿದರು. ಸರ್ವ ಪಕ್ಷೀಯ ಮುಖಂಡರು ಮಂತ್ರಿ ಗಳಿಗೆ ಕರ್ನಾಟಕ ಪ್ರಾಂತ ನಿರ್ಮಾಣದ ಕುರಿತು ಒಂದು ಮನವಿಯನ್ನು ಕೊಟ್ಟರು. ಗೋ ರಕ್ಷಣಾ ಸಮಿತಿಯ ಪರವಾಗಿಯೂ ಒಂದು ಮನವಿ ಒಪ್ಪಿಸಲಾಯಿತು. ರಾತ್ರಿ ರೋಟರಿ ಕ್ಲಬ್ಬಿನಲ್ಲಿ ಗೃಹ ಮಂತ್ರಿ ಗಳಿಗೆ ಭೋಜನ ಸತ್ಕಾರ ನಡೆಯಿತು. ಕ್ಲಬ್ಬಿನ ಅಧ್ಯಕ್ಷ ಶ್ರೀ ವಿ. ಮಸ್ಕುರುರವರು ಮಂತ್ರಿ ಗಳನ್ನು ಸ್ವಾಗತಿಸಿದರು. ಮಂತ್ರಿಗಳು ಉತ್ತರಕೊಡುತ್ತಾ, ಮಹಾತ್ಮಾ ಗಾಂಧಿಯವರು ತಾವು ಉಪದೇಶಿಸುವುದನ್ನು ಆಚರಣೆಯಲ್ಲಿಯೂ ತೋರಿಸುತ್ತಿದ್ದುದರಿಂದಲೇ ಅವರನ್ನು ನಾವಿಂದು ಅವತಾರಪುರುಷರೆಂದು ಎಣಿಸುತ್ತೇನೆ. ನೀವು ನಿಮ್ಮ ಬುದ್ಧಿ ಜ್ಞಾನಗಳನ್ನು ದೇಶಹಿತಕ್ಕಾಗಿ ಉಪಯೋಗಿಸಿರಿ. ರೋಟರಿ ತತ್ವವನ್ನು ಜನರ ಜೀವನದೊಂದಿಗೆ ಮಿಳಿತಮಾಡಿರಿ ಎಂದರು. ಪಿ. ಆರ್. ರಂಗನಾಥ ಪೂಂಜರು ಧನ್ಯವಾದಗಳನ್ನರ್ಪಿಸಿದರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. A. 833/1953 O. S. 1/1953

ಸಂಕಪ್ಪ ರೈ-ಅರ್ಜಿದಾರ —ವಾದಿ

ಮತ್ತು

ಲಕ್ಷ್ಮಿ ಹೆಂಗ್ಸು ಕೂಡಾ

ಎದ್ರಿರು—ಪ್ರತಿವಾದಿರು

ಎದ್ರಿರು 9 ಮುತ್ತಕ್ಕ ಹೆಂಗ್ಸು 10 ದೂಮಂಣ ಶೆಟ್ಟಿ, 12 ಬಚ್ಚು ಶೆಟ್ಟಿ ಬೇಂಗ್ರೋಡಿ ಲಕ್ಷ್ಮಿ ಹೆಂಗ್ಸು ಮಕ್ಕಳು 19 ಕರಿಯಪ್ಪು ಚೌಟ ಬೇಂಗ್ರೋಡಿ ಮುತ್ತಕ್ಕ ಹೆಂಗ್ಸು ಮಗ, ಪುತ್ತೂರು ತಾಲ್ಲೂ ಕೇಪು ಗ್ರಾಮದಲ್ಲಿ

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಮೇಲಿನ ವಾದಿಯು ಹಿಕಿ ಬಗ್ಗೆ ಮಾಡಿದ ಮೊಲ್ಲಂಡ ದಾವೆಯಲ್ಲಿ, ದಾವಾ ಆಸ್ತಿಗಳಿಗೆ ರಿಸೀವರ್ ಮೊಕ್ರರು ಮಾಡಬೇಕೆಂತ ಮಾಡಿದ ಮೇಲಿನ ಅರ್ಜಿಯು ತಾ 17 11-53ಕ್ಕೆ ವ್ಯಾಜ್ಯೆಯಿರುತ್ತದೆ. ದಾವಾ ಆಸ್ತಿಗಳಿಗೆ ರಿಸೀವರ್ ನೇಮಕ ಮಾಡುವ ವಿಷಯದಲ್ಲಿ ನಿಮಗೇನಾದರೂ ಆಕ್ಷೇಪ ವಗೈರೆ ಯಿದ್ದರೆ, ಆ ದಿನ್ಸ ಬೆಳಿಗ್ಗೆ 11 ಗಂಟೆಗೆ ಮೊಲ್ಲಂಡ ಕೋರ್ಟು ಮುಂದೆ ಹಾಜ್ರಾಗಿ ಉಜಾಪರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಂಮುಂನು ಶಿವಾಯಿ ಮಾಡಿ ತೀರ್ಮಾನಿಸಲಾಗುವುದೆಂತಲೂ, ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗ್ಯದೆ.

(Sd) P. Krishna Bhat,

Vakil Puttur.

ಮೊಕ್ಕಾಂ ಪುತ್ತೂರು, ತಾ 31-10-1953.

NOTICE

The East & West Insurance Co. Ltd.,

East & West Bldg. Apollo Street,

Fort. BOMBAY-1.

The Notice having been given of the Loss of Policy No. 29068 on the life of Mr. MONTHU P. BARBOZA, Cloth Merchant, Shirva, a duplicate policy will be issued and the claim will be settled thereunder, unless objection is lodged with us within one month from this date.

28-10-1953. MANAGER.

ನಂದಿ ಬಾರ್ ಸೋಪು

ತಯಾರಕರು ಮತ್ತು ಡಿಸ್ಟ್ರಿಬ್ಯೂಟರರು

ತಮ್ಮ ಎಲ್ಲಾ ಗ್ರಾಹಕರಿಗೂ ಪ್ರೋತ್ಸಾಹಕರಿಗೂ ಮತ್ತು ಹಿತಚಿಂತಕರಿಗೂ

ದೀಪಾವಳಿ ಶುಭಾಶಯ ಕೋರುತ್ತಾರೆ.

ನಮ್ಮ ಪೋಲಿಸಿದಾರರಿಗೆ

ಸಕಲ ಪ್ರತಿನಿಧಿಗಳಿಗೆ

ಸಮಸ್ತ ಹಿತೈಷಿಗಳಿಗೆ

ನಮ್ಮ ಪ್ರೀತಿಪುರಸ್ಸರವಾದ—

ದೀಪಾವಳಿ ಶುಭಾಶಯಗಳನ್ನು ಸಲ್ಲಿಸುತ್ತೇವೆ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಕನ್ನಡ ಓದುಗರಿಗೆಲ್ಲ ದೀಪಾವಳಿಯ

ಶು ಭಾ ಶ ಯ!

ಇದು ಜಾಹೀರಾತಲ್ಲ: ದೀಪಾವಳಿಯ ಶುಭಪ್ರಸಂಗಕ್ಕಾಗಿ ಡಿಸೆಂಬರ ಕೊನೆಯವರೆಗೆ ಹೆಚ್ಚಿನ ಸೌಲಭ್ಯದಲ್ಲಿ ಪುಸ್ತಕ ಪೂರೈಸುತ್ತೇವೆ. ವಿವರಕ್ಕೆ ಬರೆಯಿರಿ. ಪ್ರಯಪಟ್ಟಿ ಉಚಿತ!

ಸಮಾಜ ಪುಸ್ತಕಾಲಯ, ಭಗತಸಿಂಗಬೀದಿ ಧಾರವಾಡ.

ನಡೆಯುವ ಚಿತ್ರ: ರಾಜಕಮಲ್ ಕೃತಿ

"ತೀನ್ ಬತ್ತಿ ಚಾರ್ ರಾಸ್ತಾ"

ಭೂಮಿಕೆಯಲ್ಲಿ:— ಶಿವಾನ್ ರಶೀದ್, ಕರನ್ ದಿವಾನ್, ನಿರುಪಾರಾಯ್, ಶಶಿಕಲಾ, ಸಂಧ್ಯಾ ಮೊದಲಾದವರು.

ಬರುವ ಚಿತ್ರ: "ಗುಮಾಸ್ತಾ" (ತಮಿಳು) ನಾಗಯ್ಯ, ಪಂಡರಿ ಬಾಯಿ, ಜಯಮ್ಮ

ತಾ. 6—11—53 ಬೆಳಿಗ್ಗೆ 10ಕ್ಕೆ ಅದ್ಭುತ ಸಾಹಸಮಯ ಇಂಗ್ಲಿಷ್ ಚಲಚಿತ್ರ

"ರೆಡ ಮೌಂಟನ್"

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. 106/49 R. E. P. 228 1953:

ವಾದಿ ಪಿಟ್ಟ ಭಟ್ಟ ಮೊಕ್ತ್ಯಸರದಾರ, ಮಾಣಿಜಪ್ಪಾಡಿ ರಾಮಣ್ಣ ರೈ —ಅರ್ಜಿದಾರ.

1 ನೀಲಮ್ಮ, 2 ಗಿರಿಜಮ್ಮ ಸೋಮಕ್ಕ ಹೆಂಗ್ಸಿನ ಮಕ್ಕಳು 1ನೆ ಎದ್ರಿ ನೆಕ್ಕಿಲಾಡಿ ಗ್ರಾಮ, 2ನೆ ಎದ್ರಿ ಕೆಯ್ಯೂರು ಗ್ರಾಮದ ಇರಿತಂಜೆ ಕಿಷ್ಟಪ್ಪ ರೈ ಮನೆಯಲ್ಲಿ —ಎದ್ರಿರು

Pro-order to respondents

ಅರ್ಜಿದಾರನಿಗೆ ಬರಬೇಕಾದ ಡಿಕ್ರಿ ಆ್ಯಮನ ವಸೂಲು ಕೊಡಲು ನೀವು ತಪ್ಪಿದ್ದರಿಂದ ಎದ್ರಿರ ಬಾಬ್ತು ಬಾಳಿಲ ಗ್ರಾಮದ ಬಾಬ್ತು ಸರ್ವೆ ನಂಬ್ರ $\frac{19}{2}$ ಪೈಕಿ, $\frac{23}{4}$ ಪೈಕಿ, $\frac{19}{7}$ ಪೈಕಿ, $\frac{19}{1.4.6}$ ನೇದಕ್ಕೆ ಪಟ್ಟಿಮಾಡಿದ ರೂಪಾಯಿ 42-0-0 ಬೆಲೆಬಾಳುವ ಸ್ಥಿರ ಆಸ್ತಿಯು ಜಪ್ತಾಗಿದ್ದು ಸದ್ರಿ ಆಸ್ತಿ ಸವಾಲಿಯನ್ನು ಈ ಕೋರ್ಟಿನವರು ಮತ್ತೊಂದು ಹುಕುಂ ಕೊಡುವ ತನಕ ವಿಕ್ರಯದ ಮೂಲಕವಾಗಿ ದಾನದ ಮೂಲವಾಗಿಯೂ ಅನ್ಯಥಾ ಪರಾಭಾರೆ ಮಾಡಲು ಯಾ ಸಾಲ ಹೊರಿಸಲು ಕೂಡದೆಂದು ಸದ್ರಿ ಎದ್ರಿರು ನಿರ್ಬಂಧವಾಗಿ ಆತಂಕಿಸಲ್ಪಡತಕ್ಕದ್ದು, ಮತ್ತು ಇದರಿಂದ ನೀವು ನಿರ್ಬಂಧವಾಗಿ ಆತಂಕಿಸಲ್ಪಟ್ಟಿದ್ದೀರಿ. ಮತ್ತು ಯಾವ ವಿಧದ ಬಡಿದಿ ದಾನ ಯಾ ಅನ್ಯಥಾ ತೆಗೆದುಕೊಳ್ಳ ಕೂಡದೆಂದು ಎಲ್ಲಾ ಜನಸ್ತರು ಆತಂಕಿಸಲ್ಪಡತಕ್ಕದ್ದು ಮತ್ತು ಇದರಿಂದ ಆತಂಕಿಸಲ್ಪಟ್ಟಿದ್ದಾರೆ.—ಎಂತ ಈ ಕೋರ್ಟು ಹುಕುಂ ಪ್ರಕಾರವೂ R. E. A. 623/53ನೇ ಅರ್ಜಿ ಹುಕುಂ ಪ್ರಕಾರವೂ ಪ್ರಕಟಿಸಿಯದೆ.

(Sd) B. Ramachandra Rao B.A.B.L.

Pleader for Petitioner.

ತಾ 23-10-1953, ಪುತ್ತೂರು.

WANTED

District Development Officers on Rs. 250/- Plus Rs. 150 - car allowance. Apply with testimonials to:

Indian Dominion Airways Limited, 6/3, Madan Street, CALCUTTA.

(೪ನೇ ಪುಟದಿಂದ)

ಇಂಗ್ಲೆಂಡ್ ಮತ್ತು ಅಲ್ಲಿಂದ ಅಮೇರಿಕಕ್ಕೆ ನೇರವಾದ ಸಂಪರ್ಕ ಏರ್ಪಟ್ಟಿತು. ೨೫ನೇ ಜೂನ್ ೧೯೩೦ ರಲ್ಲಿ ಭಾರತದ ವೈಸರಾಯರು ಸಿಮ್ಲಾದಿಂದ ಮತ್ತು ಅಮೇರಿಕಾದ ಅಧ್ಯಕ್ಷರು ವಾಶಿಂಗಟನ್ನಿನಿಂದ ಪರಸ್ಪರ ಶುಭಾಶಯಗಳನ್ನು ತಂತಿ ಮೂಲಕ ವಿನಿಮಯ ಮಾಡಿಕೊಂಡರು.

೦೦ ೦೦

ಈ ಅವಧಿಯಲ್ಲಿ ಪೂರ್ವದಿಕ್ಕಿಗೂ ತಂತಿಯ ಸಂಪರ್ಕವನ್ನು ಬೆಳಸಲಾಯಿತು. ಮದ್ರಾಸಿನಿಂದ ಪೆನಾಂಗಿಗೆ ಕೇಬಲುಗಳು ಹಾಕಲ್ಪಟ್ಟವು. ೧೯೨೩ರಲ್ಲಿ ಟಿಬೇಟಿನಲ್ಲಿ ಗ್ಯಾಂತ್ಸೇಯಿಂದ ಲ್ಹಾಸಾಕ್ಕೆ ತಂತಿ ಸಂಪರ್ಕ ಒದಗಿಸಲಾಯಿತು. ನೇಪಾಳದಲ್ಲಿ ಈಚಿನವರೆಗೆ ತಂತಿ ಸಂಪರ್ಕದ ವ್ಯವಸ್ಥೆ ಇರಲಿಲ್ಲ. ೧೯೫೦ರಲ್ಲಿ ಕಾಠಮಂಡು ಮತ್ತು ಪಾಟ್ನಾಗಳ ನಡುವೆ ರೇಡಿಯೋ ಟೆಲಿಫೋನಿನ ಸಂಪರ್ಕ ಏರ್ಪಡಿಸಿದರು. ಈ ಜೋಡಣೆಯೇ ತೇನ್‌ಸಿಂಗ್ ನೋರ್ಗೇ ಮತ್ತು ಎಡ್ಮಂಡ್ ಹಿಲಾರಿಯವರು ಗೌರೀಶಂಕರದ ಶಿಖರವನ್ನು ಪಾದಾಕ್ರಾಂತ ಮಾಡಿದರೆಂದು ಲೋಕಕ್ಕೆ ಪ್ರಸಾರ ಮಾಡಿತು!

ವಿಭಜನ ಮೊದಲು ಉತ್ತರ ಭಾರತದಲ್ಲಿ ಲಾಹೋರು ನಗರವು ತಂತಿ ವ್ಯವಸ್ಥೆಯ ಕೇಂದ್ರವಾಗಿದ್ದಿತು. ಆದರೆ ಪಾಕಿಸ್ತಾನವು ಬೇರೆಯಾದ ನಂತರ ಭಾರತಕ್ಕೆ ಸೇರಿದ ಪೂರ್ವ ಪಂಜಾಬದ ಗಡಿ ಪ್ರದೇಶಗಳಿಗಷ್ಟೇ ಅಲ್ಲ--ಅಮೃತಸರ, ಜಲಂಧರ ಮುಂತಾದ ಮುಖ್ಯ ಪಟ್ಟಣಗಳಿಗೂ ನೇರವಾದ ಸಂಪರ್ಕ ಇಲ್ಲದಾಯಿತು. ಲಾಹೋರಿನ ಮೂಲಕ ಸಂಪರ್ಕ ಸ್ಥಾಪಿಸುವುದು ವ್ಯಾವಹಾರಿಕ ಹಾಗೂ ಸಂರಕ್ಷಣಾ ದೃಷ್ಟಿಯಿಂದ ಅನಪೇಕ್ಷಿತ ಸಂಗತಿಯಾದುದರಿಂದ ಲಾಹೋರದ ಸಂಪರ್ಕವನ್ನು ಕೂಡಲೇ ಕಡಿದುಕೊಂಡು ಹೊಸತಾಗಿ ನೇರ ವ್ಯವಸ್ಥೆಯನ್ನು ಏರ್ಪಡಿಸಲಾಯಿತು. ಜಮ್ಮುವನ್ನು ನೇರವಾದ ಟೆಲಿಫೋನಿನಿಂದ ಜೋಡಿಸಲಾಯಿತು ಭಾರತದ ಪೂರ್ವಭಾಗದಲ್ಲಿಯೂ, ಹೀಗೆಯೇ ಮಾಡಿದರು. ಪೂರ್ವ ಪಾಕಿಸ್ತಾನದಲ್ಲಿ ಹಾದು ಹೋಗದೆ ನೇರವಾಗಿ ಭಾರತದೊಂದಿಗೆ ಸಂಪರ್ಕವಿಡುವಂತೆ ತ್ರಿಪುರಾದಲ್ಲಿ ೪೮ ತಾಸುಗಳಷ್ಟು ಅಲ್ಪಾವಧಿಯಲ್ಲಿ ತಂತಿ ವ್ಯವಸ್ಥೆ ಏರ್ಪಡಿಸಲ್ಪಟ್ಟಿತು. ಆಸಾಮಿನ ಗೌಹಾತಿ, ಹಿಮಾಲಯದ ದಾರ್ಜಲಿಂಗಕ್ಕೂ ಹೀಗೆಯೇ ಹೊಸ ಸಂಪರ್ಕದ ವ್ಯವಸ್ಥೆಯಾಯಿತು.

೦೦ ೦೦

ಸ್ವಾತಂತ್ರ್ಯೋತ್ತರದಲ್ಲಿ ತಂತಿ ವ್ಯವಸ್ಥೆಯಲ್ಲಿ ಶೀಘ್ರ ಪ್ರಗತಿ ಕೈಗೂಡಿದೆ. ಭೂಸಂಪರ್ಕವಲ್ಲದೆ ವಯರ್‌ಲೆಸ್ ಸಂಪರ್ಕವೂ ವ್ಯಾಪಕಗೊಂಡಿದೆ ಪ್ರಕೃತ ಭಾರತದಲ್ಲಿ ೮೩೬೦ ತಂತಿ ಕಾರ್ಯಾಲಯಗಳು ಇವೆ; ಮತ್ತು ಪ್ರತಿ ವರ್ಷ ೩ ಕೋಟಿ ಸಮಾಚಾರಗಳು ಕಳುಹಿಸಲ್ಪಡುತ್ತಿವೆ ಭಾರತೀಯ ಭಾಷೆಯಲ್ಲಿ ತಂತಿ ಕಳುಹಿಸುವ ಮತ್ತು ಟೆಲಿ ಸಂಪರ್ಕ ವ್ಯವಸ್ಥೆಯನ್ನು ಪ್ರೋತ್ಸಾಹಿಸುವ ವಿಷಯಗಳಲ್ಲಿ ಹೆಚ್ಚಿನ ಗಮನ ನೀಡಲ್ಪಡುತ್ತಿದೆ ೧೯೪೯ರಲ್ಲಿ ಸರ್ವ ಪ್ರಥಮವಾಗಿ ಹಿಂದೀ ಭಾಷೆಯಲ್ಲಿ ತಂತೀ ಸಮಾಚಾರ ಕಳುಹಿಸುವ ವ್ಯವಸ್ಥೆಯನ್ನು ಏರ್ಪಡಿಸಲಾಯಿತು. ಕಳೆದ ವರ್ಷ ೪೪೮ ತಂತಿ ಕಾರ್ಯಾಲಯಗಳಲ್ಲಿ ೧೫೬೯ ಹಿಂದೀ ಸಮಾಚಾರಗಳು ವಿನಿಮಯಗೊಂಡವು.

ಈ ಮೊದಲು ಕನಿಷ್ಠ ೫೦೦೦ ಜನವಸತಿಯುಳ್ಳ ಹಳ್ಳಿ ಪಟ್ಟಣಗಳಲ್ಲಿ ವರ್ಷಕ್ಕೆ ಹೆಚ್ಚೆಂದರೆ ೫೦೦ ರೂಪಾಯಿಗಳ ವರೆಗೆ ಮಾತ್ರ ನಷ್ಟ ಸಂಭವಿಸುತ್ತಿದ್ದರೆ ಅದನ್ನು ಸಹಿಸಿಕೊಂಡು ತಂತಿಕಾರ್ಯಾಲಯ ತೆರೆಯುವ ಪದ್ಧತಿ ಇತ್ತು. ಆದರೆ ಇಂದು ಈ ನಿಯಮವನ್ನು ಸಡಿಲು ಮಾಡಿ. ಎಷ್ಟೇ ನಷ್ಟವಾಗಲಿ ಪ್ರತಿಯೊಂದೂ ಜಿಲ್ಲಾ ಕೇಂದ್ರದಲ್ಲೂ ತಂತಿ ವ್ಯವಸ್ಥೆ ಏರ್ಪಡಿಸಿರುವರು. ಮಾತ್ರವಲ್ಲ ಉಪ ವಿಭಾಗ ಹಾಗೂ ತಾಲೂಕು ಕೇಂದ್ರಗಳಲ್ಲಿ, ನಷ್ಟದ ಪರಮಾವಧಿ ಮಿತಿಯನ್ನು ೫೦೦ ರಿಂದ ೧೦೦೦ ರೂಪಾಯಿಗೆ ಏರಿಸಿರುವರು, ಹಾಗೂ ಕನಿಷ್ಠ ಜನವಸತಿಯ ನಿರ್ಬಂಧವನ್ನು ತೆಗೆದುಹಾಕಿರುವರು. ಇದರಿಂದ ತಂತಿವ್ಯವಸ್ಥೆಯ ವಿಸ್ತರಣಾ ಕಾರ್ಯ ತುಂಬ ಹೆಚ್ಚಿಕೊಂಡಿದೆ. ಪ್ರಕೃತ ಭಾರತದಲ್ಲಿ ೭,೭೮,೮೭೩ ಮೈಲುಉದ್ದ ತಂತಿ ಸರಿಗೆಗಳುಇವೆ, ಮತ್ತು ಜಗತ್ತಿನಲ್ಲಿಯೇ ಈ ವಿಷಯದಲ್ಲಿ ತೃತೀಯಸ್ಥಾನವನ್ನು ಭಾರತಗಳಿಸಿರುತ್ತದೆ. ವ್ಯವಹಾರದ ಹೆಚ್ಚಳದಲ್ಲಿಯೂ ಜಗತ್ತಿನಲ್ಲಿ ಅಮೇರಿಕಾ, ಜಪಾನು, ಗ್ರೇಟ್‌ಬ್ರಿಟನ್ ಆಸ್ಟ್ರೇಲಿಯಾ ಮತ್ತು ಇಟಲಿಗಳನ್ನುಳಿದರೆ ಭಾರತಕ್ಕೆಯೇ ಮಹತ್ವ (೬ನೇ ಸ್ಥಾನ) ಸಲ್ಲುತ್ತದೆ.

ತಂತಿ ಮತ್ತು ಟಪ್ಪಾಲುಇಲಾಖೆಯಲ್ಲಿ ೧೦೦೦ ಗಜೆಟೆಡ್ ಅಧಿಕಾರಿಗಳನ್ನೊಳಗೊಂಡು ೨೨೧೦೦೦ಜನನೌಕರರು ಕೆಲಸದಲ್ಲಿರುವರು. ಪಂಚವಾರ್ಷಿಕ ಯೋಜನೆಯನ್ವಯ ಒಂದುಕೋಟಿ ರೂಪಾಯಿ ವೆಚ್ಚದಿಂದ ೮೦೦ ಹೊಸ ತಂತಿ ಕಾರ್ಯಾಲಯಗಳು ತೆರೆಯಲ್ಪಡುತ್ತವೆ. ೨೧ ಲಕ್ಷ ರೂಪಾಯಿ ಖರ್ಚಿನಿಂದ ಮುಂಬಯಿಯ ಕೇಂದ್ರ ತಂತಿ ಕಾರ್ಯಾಲಯದ ಯಾಂತ್ರೀಕರಣವನ್ನು ಸಾಧಿಸಲಾಗುವುದು. ಮತ್ತು ಹೊಸತಾಗಿ ಏರ್ಪಡಿಸಿದ "ಟೆಲೆಕ್ಸ್" ವ್ಯವಸ್ಥೆಯನ್ನು ಜನಪ್ರಿಯಗೊಳಿಸಲಾಗುವುದು. ಇನ್ನೂ ಹಲವು ಸುಧಾರಣೆಗಳು ನಡೆಯಲಿವೆ, ಮತ್ತು ಭಾರತದ ಯಾವ ಮೂಲೆಯೂ ದುರ್ಲಕ್ಷಿಸಲ್ಪಡದೆ ಒಗ್ಗಟ್ಟು ಬಲಗೊಳ್ಳುವಂತೆ ನೋಡಲಾಗುವುದು.

ಮೇಟ್ರನ್ ಬೇಕಾಗಿದ್ದಾರೆ

ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಮೇಟ್ರನ್ ಹುದ್ದೆಗೆ ಬಂಟ ಸಮಾಜದ ವಿದ್ಯಾವಂತೆ ಮಹಿಳೆಯರಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು ಸಂಬಳ ಇತ್ಯಾದಿ ಪ್ರತ್ಯಕ್ಷ ಸಂದರ್ಶನ ಕಾಲದಲ್ಲಿ ನಿರ್ಧರಿಸಲಾಗುವುದು.

ಅರ್ಜಿಗಳನ್ನು ಹೊಸ್ಟೆಲ್ ಕಮಿಟಿ ಪ್ರೆಸಿಡೆಂಟ್ ಶ್ರೀ. ಬಿ ಎಸ್. ಹೆಗ್ಡೆ, ಬಿ ಎ ಬಿ ಎಲ್. ಅವರಿಗಾಗಲೀ ಯಾ ಎಸ ಆರ್. ವಿ ಭವನದ ಗೌ ಕಾರ್ಯದರ್ಶಿನಿ ಶ್ರೀಮತಿ ಶಾಂಭವಿ ಆರ್. ಪೂಂಜರಿಗಾಗಲೀ ಕಳುಹಿಸತಕ್ಕದು.

ಸ್ವೀಕಾರ—ವಿಮರ್ಶೆ

ಶ್ರೀ ಕೃಷ್ಣನ ಉಡುಪಿ

ಬರೆದವರು· ಶ್ರೀ ಒನ್ನಂಜೆ ರಾಮಾಚಾರ್ಯರು. ಪ್ರಕಾಶಕರು. ಪಾಸಂಜೆ ಗುರುರಾವ್ & ಸನ್ಸ್ ಉಡುಪಿ ಬೆಲೆ. 0-8-0

ಅಚ್ಚುಕಟ್ಟಾದ ಮುದ್ರಣ ಮತ್ತು ಸುಂದರ ಚಿತ್ರಗಳಿಂದ ಕೂಡಿದ ಈ ಕೈ ಹೊತ್ತಿಗೆ ಉಡುಪಿ ಕ್ಷೇತ್ರದ ಸ್ಥಳ ಇತಿಹಾಸ, ಶ್ರೀ ಕೃಷ್ಣನ ಮಹಿಮೆ, ಉಡುಪಿಯ ಹತ್ತಿರದ ಪ್ರೇಕ್ಷಣೀಯ ಸ್ಥಳಗಳ ವಿವರಣೆ ಮುಂತಾದ ಸಾಮಾನ್ಯ ಸಂಗತಿಗಳನ್ನಲ್ಲದೆ— ಉಡುಪಿಯ ಹೆಸರು ಭಾರತದಲ್ಲಿ ಪ್ರಖ್ಯಾತವಾಗುವುದಕ್ಕೆ ಕಾರಣರಾದ ಶ್ರೀ ಮಧ್ವಾಚಾರ್ಯರ ಜೀವನ ಹಾಗೂ ಅವರ ಉಪದೇಶ ಸಾರಗಳನ್ನು ಒಳಗೊಂಡಿರುವುದರಿಂದ, ಇದುವರೆಗೆ ಪ್ರಕಟವಾದ ಈ ಮಾದರಿಯ ಕೈಪಿಡಿಗಳಲ್ಲಿಲ್ಲದ ವೈಶಿಷ್ಟ್ಯವನ್ನು ನಾವಿಲ್ಲಿ ಕಾಣುತ್ತೇವೆ. ಕ್ಷೇತ್ರ ಪರಿಚಯ ಮಾಡಿಕೊಡುವಲ್ಲಿನ ಭಿನ್ನತೆಯನ್ನೆ ಭಾಷಾ ಶೈಲಿ ಹಾಗೂ ಸೌಂದರ್ಯದ ಮಟ್ಟಿಗೂ ನಾವು ಅನ್ವಯಿಸ ಬಲ್ಲೆವು. ಇಲ್ಲಿಯವರೆಗೂ ಅನಿಶ್ಚಿತವಾದ ಮತ್ತು ಅಪೂರ್ಣತರವಾದ ವೃತ್ತಾಂತ ಆದ ಕಾರಣ ಈ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳಿಗೆ ಹೆಚ್ಚಿನ ಪ್ರಯೋಜನ ನಿಶ್ಚಯವಾಗಿಯೂ ದೊರೆಯುತ್ತದೆ

ವಿಕ್ರಮ (ವಿಜಯದಶಮಿ ಸಂಚಿಕೆ)

ಸಂಪಾದಕರು. ಬಿ ಎಸ್. ಎನ್. ಮಲ್ಯ ಬೆಂಗಳೂರು ೨ ಬೆಲೆ ೦-೧೨-೦

ವಿಕ್ರಮದ ಈ ವಿಶೇಷಾಂಕ ಉತ್ತಮ ಬರಹಗಳಿಂದ ಕೂಡಿದೆ. ವಿಜಯದಶಮಿಗೆ ಸಂಬಂಧಿಸಿದ ಲೇಖನ ಹಾಗೂ ತಿರುಮಲೇಶ್ವರ ಭಟ್ಟರ ಬರಹಗಳಲ್ಲದೆ ಭಾರತೀಯ ಧರ್ಮ ಮತ್ತು ಸಂಸ್ಕೃತಿಯನ್ನು ಕುರಿತಾದ ಲೇಖನಗಳನ್ನು ಶ್ರೀಗಳಾದ ಸಿ. ಎನ್. ಶಾಸ್ತ್ರಿ, ಎಂ. ಎ. ವೆಂಕಟರಾವ್, ಸಿ ಕೆ ಗುರುರಾಜರಾವ್, ರಂಗನಾಥ ದಿವಾಕರ, ಸ್ವಾಮಿ ಪ್ರಣವೇಶಾನಂದ ಇವರು ಬರೆದಿರುವರು. ರಾಷ್ಟ್ರ ಕವಿ ಗೋವಿಂದ ಪೈಗಳ "ರುದ್ರಕಿರ್ಕಪಟ" ನಾಟಕದ "ಅಮೋಘಶ್ರೀ" ಸೂಕ್ತ ರಚಿಸಿದ ವಿಮರ್ಶಕನೊಬ್ಬನ ಅಂತಸ್ಸತ್ವವನ್ನು ತೆರೆದು ತೋರಿಸುತ್ತವೆ. ಶ್ರೀ. ಪಾ ವಿರಿಯವರು ಮಾನವೀ ಶ್ರಮ ಹಾಗೂ ಬುದ್ಧಿಯ ಸದುಪಯೋಗವಾಗುವಂತೆ ಯೋಜನೆ ತಯಾರಾಗ ಬೇಕೆಂದು ಬರೆದ ಲೇಖನವು ಸ್ವಾರಸ್ಯವಾಗಿರುತ್ತದೆ. ಗೋವಧೆಯ ಪ್ರತಿಬಂಧ, ಪತ್ರಿಕೋದ್ಯಮ ಮತ್ತು ಸಹಕಾರಿ ಚಳುವಳಿಯ ಕುರಿತು ಬೆಲುವಾದ ಬರಹಗಳಿವೆ. ಆದರೆ ಕರ್ನಾಟಕ ಏಕೀಕರಣದ ಕುರಿತು ಬರೆದ ಲೇಖನಗಳು ಏಕಪಕ್ಷೀಯವಾಗಿದ್ದು ಸಹೃದಯ ವಿಮರ್ಶೆಯಿಂದ ಕೂಡಿಲ್ಲವೆಂದು ಹೇಳಬೇಕಾಗುತ್ತದೆ.

PLACE YOUR LIFE ASSURANCE WITH A COMPNAY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಧರ್ಮಾರ್ಥ—ಸುಕೃತಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ

Diamond Commercial
Chambers (N. U.)
Bhandari Street,
BOMBAY—3

70 ವರುಷಗಳಿಂದ ಜಗಜ್ಜನಿತವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಆಗ್ ಮಿಕ್ಸ್ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು;
ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್ಸ್, ಪೋರ್ತುಗೀಸ್ ಚರ್ಚ್ ಸ್ಟ್ರೀಟ್,
Tele. Add "CAWASHABAD" ದಾದರ್, ಬೊಂಬಾಯಿ 28.

ಮುತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಮುತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಸಾವಿರಾರು ಜನರಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅಧಿಕಾಧಿಕ ಸ್ಪೆಶಲ್ ರೂ. 8/-[ವಿ. ಪಿ. ಪಾರ್ಸೆಲ್ ಡಾಕ್ ಪ್ರತ್ಯೇಕ]

Mrs. P. DEVEE, L.D.S.(N.J.)
CALCUTTA. 40
ಸ್ಟಾಕಿಸ್ಟರು: ದಯಾಕಂಪೆನಿ, ಮಂಗಳೂರು.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:
ಸರ್ ಜೀವನ್ ಶಿಲಾಜಿತ್‌ಲೇಹ
ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)
ನೀಲಗಿರಿ ದಿಪೋ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ದಿಪೋವಿನಲ್ಲಿ ಕೇಳಿರಿ.

"ಮಾಲ್ಥೂಸನು ಮತ್ತು ಮಿತಸಂತತಿ"

(ಕಳೆದ ಸಂಚಿಕೆಯಿಂದ ಮುಂದರಿದುದು)

ಆಧುನಿಕ ಕಾಲದಲ್ಲಿ ಲೋಕದ ಮೂಲೆ ಮೂಲೆಗಳಲ್ಲಿ ಸಹಾ ಜನರು ತುಂಬಿರುವರು. ಕೆಲವು ಕಡೆಗಳಲ್ಲಿ ಜನರ ಒತ್ತಡವು ಜಾಸ್ತಿಯಾಗಿ ಇತರ ದೇಶಗಳಿಗೆ ಸ್ಥಳಾಂತರಿಸಿರುವರು. ಇದರಿಂದ ಹೊಸ ಪ್ರಶ್ನೆಗಳು ತಲೆಎತ್ತಿ ಕೆಲವು ಕಡೆಗಳಲ್ಲಿ ತಲೆಶಿಗತಕ್ಕೆ ಆರಂಭವಾಗಿವೆ. ಈ ಯಾಂತ್ರಿಕ ಕಾಲದಲ್ಲಿ ಹೆಚ್ಚು ಜನರಿದ್ದರೆ ಬಲವೆನ್ನಲು ಬರುವದಿಲ್ಲ. ನಾಗಸಾಕಿ ಮತ್ತು ಹಿರೋಶೀಮದ ಮೇಲೆ ಅಟಂ ಬಾಂಬು ಬಿದ್ದಾಗ ಅವುಗಳ ಜನಸಂಖ್ಯೆಯ ದೆಸೆಯಿಂದ ಕಷ್ಟಗಳು ಜಾಸ್ತಿಯಾಯಿತೆನ್ನಬೇಕು. ಯಾವ ಯುದ್ಧದಲ್ಲಾದರೂ ದೊಡ್ಡ ರಾಷ್ಟ್ರಗಳೇ ಮಡಿಯುವವು. ಹೆಚ್ಚು ಜನರಿರುವುದರಿಂದ ಯಾವ ಪವಿತ್ರತೆಯು ಕಾಣುವದಿಲ್ಲ. ಸಣ್ಣ ಪುಟ್ಟ ಗ್ರೀಕ್ ರಾಷ್ಟ್ರಗಳು ಇಟಲಿಯ ಪಟ್ಟಣಗಳು, ಜರ್ಮನಿಯ ಪ್ರಿನ್ಸಿಪಾಲಿಟಿಗಳು ಸ್ವಿಜರ್ಲ್ಯಾಂಡಿನ ಕ್ಯಾಂಟನ್ಸ್‌ಗಳು ಚರಿತ್ರೆಯಲ್ಲಿ ಶಾಶ್ವತ ಸ್ಥಾನ ಪಡೆದಿರುವವು. ಕಲೆ ಮತ್ತು ಸಂಸ್ಕೃತಿಯಲ್ಲಿ ಸಹಾ ಸಣ್ಣ ರಾಷ್ಟ್ರಗಳಾದ ನೋರ್ವೆ ಮತ್ತು ಐಯರ್ಲ್ಯಾಂಡುಗಳು ಇಬ್ಸೆನ್, ಈಟ್ಸ್, ಬರ್ನಾರ್ಡಶಾರಂಥ ಕಲಾವಿದರನ್ನು ಜಗತ್ತಿಗೆ ತಂದಿರುವವು. ಡೆನ್ಮಾರ್ಕ ತನ್ನ ಆರ್ಥಿಕ ಪರಿಸ್ಥಿತಿಯನ್ನು ಹೋಗಲಾಡಿಸಿ ಮೇಲಕ್ಕೇರಿದುದನ್ನು ತಿಳಿದವರಿಗೆ ಜನರ ಆರೋಗ್ಯ ರಕ್ಷಣೆ ಮಾಡಿ ಯುವಕರಿಗೆ ಪ್ರೌಢ ವಿದ್ಯಾಭ್ಯಾಸವನ್ನು ಸಹಾ ಕೊಡುವರು. ಹೆಚ್ಚು ಜನರಿರುವಲ್ಲಿ ಕೆಲವು ಗುಣಗಳು ತೋರಿಬರುವದಾದರೂ ಮುಂದಿನಂತೆಯೇ ಹೆಚ್ಚಾಗಿ ಅಬಲರನ್ನು ಬದಿಗೊತ್ತುವದು.

ಗುಣ ದೋಷಗಳನ್ನು ನೋಡುವಾಗಲೂ ಸುಗುಣಗಳಲ್ಲಿ (qualitative) ಜನರು ಬೇಕೆಂದಿದ್ದರೆ ಸಂಖ್ಯೆಯ ಪರಿಮಾಣವು (Quantitative) ಕಡಿಮೆಯಾಗುವದು ಒಳ್ಳೆಯದೆಂದು ತಜ್ಞರು ಅಭಿಪ್ರಾಯಪಡುವರು. ಪ್ರತಿಭೆಯು ಕೇಂದ್ರೀಕೃತವಾಗಬೇಕಾದರೆ ಮಕ್ಕಳು ಕಡಿಮೆಯಿರುವದು ಒಳ್ಳೆಯದೆಂದು ಶ್ರೀ ಅರವಿಂದ ಘೋಷರು ಹೇಳಿರುವರು. ಹೆಚ್ಚು ಮಕ್ಕಳಿರುವಲ್ಲಿ ಪ್ರತಿಭೆಯು ಚಿದಿ ಚಿದಿಯಾಗಿ ಹಂಚಿಹೋಗುವದೆಂದಿರುವರು. ಹೀಗಾದುದರಿಂದ ಜನರಲ್ಲಿ ವೃದ್ಧಿಯು ತೋರಿದುದರಿಂದ ಕೀಳುಮಟ್ಟದ ಜನರೇ ಹೆಚ್ಚಾಗುವರೆಂಬ ಅಭಿಪ್ರಾಯ ಕೆಲವರು ಸೂಚಿಸುವರು. ಇದು ಚರ್ಚಾಸ್ಪದವಾದ ವಿಚಾರ. ಹೆಚ್ಚು ಜನರಿರುವಲ್ಲಿ ಸೊತ್ತುಗಳು ಪ್ರಿಯವಾಗಿ ಜೀವನದ ಕಾದಾಟವು ಬಿಗುವಾಗಿ ಸೌಕರ್ಯದ ಮಟ್ಟವು ಕೆಳಗಿಳಿಯುವುದು ಸೌಕರ್ಯದ ಮಟ್ಟವು ಎಲ್ಲಾ ರಾಷ್ಟ್ರಗಳಿಗೂ ಒಂದೇ ಎಂದು ಹೇಳಬರುವದು ತಪ್ಪು. ಇದು ಹಲವು ಸಂಗತಿಗಳನ್ನು ಹೊಂದಿದೆ. ಸಾಮಾಜಿಕ ರೀತಿ, ವಿದ್ಯೆ, ನಾಗರಿಕತೆ, ವಾತಾವರಣ ಇವುಗಳ ಆಧಾರದಿಂದ ಅಳತೆಮಾಡುವದಾಗಿದೆ.

ನಾವು ಹೆಚ್ಚಾದರೆ ಒಳ್ಳೆಯದೆಂಬ ಕಾಲವು ದಾಟಿತು. ಸಂತಾನವು ತಮ್ಮ ಜನರು ವೃದ್ಧಿಯಾಗಬೇಕೆನ್ನುವಾಗ ಅತನ ಜೊತೆಗಿರುವ ಬರೆ ಎಂಟುಜನರಿದ್ದರು. ಯಹೋದ್ಯರು ವೃದ್ಧಿಗಳಿಗೆಯಲ್ಲ ಬಾಳಬೇಕಾದುದರಿಂದ ಕಡಲು ತೀರದ ಮಳಲಿನಷ್ಟೆ ವೃದ್ಧಿಯಾಗಿರೆಂದು ಗುರುವಿನಿಂದ ಆಶೀರ್ವಾದ ಪಡೆದರು. ಪುತ್ರರು ಸಗತಿಗೆ ಮುಂದಿನ ಗತಿಯೇ ಇಲ್ಲವೆಂದು ಹಿಂದು ಧರ್ಮವು ಸಾರಿತು. ಹೀಗೆ ಎಲ್ಲರೂ ತಮ್ಮ ಪಂಥದವರೆ ಜಾಸ್ತಿಯಾಗಬೇಕೆಂದು ಹಾರೈಸಿದವು. ಹೆಚ್ಚು ಜನರಿದ್ದರೆ ಈಗಿನ ಹಿತ ಸರಕಾರಗಳ ಜವಾಬ್ದಾರಿಕೆಯನ್ನು ಹೆಚ್ಚಿಸುವದು. ಹೆಚ್ಚು ಮಕ್ಕಳಿದ್ದ ಕುಟುಂಬದ ಯಜಮಾನನಿಗೆ ಕಷ್ಟಗಳು ಜಾಸ್ತಿ. ಲೋಕದ ಪ್ರತಿ ಪತ್ತು ಜನರ ಪೈಕಿ ಹೆಚ್ಚುಕಡಿಮೆ ಮೂರು ಜನರು ಪೇಟೆ, ಪಟ್ಟಣಗಳಲ್ಲಿ, ವ್ಯಾಪಾರ ಉದ್ದಿಮೆ ಕೈಗಾರಿಕೆ ಕೇಂದ್ರಗಳಲ್ಲಿ ಕಿಕ್ಕಿರಿದು ನೆಲಸಿರುವರು. ಇವರಲ್ಲಿ ಕೆಲವರಿಗೆ ವಸತಿ ಇಲ್ಲ. ಕೆಲವರಿಗೆ ಉದ್ಯೋಗವಿಲ್ಲ ಇನ್ನು ಕೆಲವರಿಗೆ ಊಟಕ್ಕಿಲ್ಲ. ಪ್ರೊಫೆಸ್ಸರ್ ಹಾರ್ಡಿಂಜರು ಹೇಳಿದಂತೆ ಮಕ್ಕಳ ಪ್ರತಿ ಹತ್ತು ಮಕ್ಕಳುಗಳ ಪೈಕಿ ಒಂಭತ್ತು ಜೀವಂತವಿಲ್ಲವಾದರೂ ಬೇಕು ಬೇಕೆಂತ ಹುಟ್ಟಿದವುಗಳಲ್ಲ. 'ದಂಪತಿಗಳೇ ಅರ್ಥವಾ ಉಚ್ಚತರ ಕಾಮೋದ್ರೇಕದ ಫಲಿತಾಂಶವಾಗಿ ಜಗತ್ತಿಗೆ ಬಂದವುಗಳೆಂದೆ ಹೇಳಬೇಕು. ಮಕ್ಕಳನ್ನು ಪಡೆಯಬೇಕೆಂಬ ಉದ್ದೇಶವಾದವರಲ್ಲಿ ಬಹಳ ಕಡಿಮೆ ಜನರು ಈ ರೀತಿಯ ಪ್ರಕಾರವಾಗಿ ಗರ್ಭೋತ್ಪತ್ತಿಯಾಗದೇ ಬೇಕೆಂಬ ನಿಯಮವಿಲ್ಲ. ಮಕ್ಕಳು ಹುಟ್ಟಿದ ಮೇಲೆ ನಾನಾವುಗಳನ್ನು ಪ್ರೀತಿಸುವುದಾಗಿದೆ.

ಪ್ರಕೃತಿ ರೀತಿಯನ್ನು ತಪ್ಪಿಸಲು ಮಾನವರು ಹಲವು ಉಪಾಯಗಳನ್ನು ಹುಡುಕಿರುವರು. ಭ್ರೂಣಹತ್ಯ, ಶಿಶುಹತ್ಯೆ, ಸತಿ, ವಿಧವಾ ವಿವಾಹ ನಿರೋಧ ಸಾಂಪ್ರದಾಯಿಕ ನಿಯಮ ಕಟ್ಟು. ರಿವಾಜುಗಳು ಇವೇ ಮೊದಲಾಗಿವೆ. ಮಾಲ್ಥೂಸನ ಕಾಲದಿಂದೀಚೆಗೆ ಸಂತತಿ ಪ್ರತಿಬಂಧಕವು ಪ್ರಚಾರಗೊಂಡಿದೆ. ಮಾಲ್ಥೂಸನು ಅಸ್ವಾಭಾವಿಕ ಪ್ರತಿಬಂಧಕಗಳನ್ನು ನಿಷೇಧಿಸಿ ನೈತಿಕ ಪ್ರತಿಬಂಧಕವನ್ನೆ ಎತ್ತಿಹಿಡಿದನು. ಈಗಿನ ಕಾಲದ ನವ ಮಾಲ್ಥೂಸರು (Neo-Malthusians) ಕೃತಕ ಪ್ರತಿಬಂಧಕ ಮತ್ತು ಗರ್ಭನಿರೋಧದ ಮದ್ದನ್ನು ತೆಗೆದುಕೊಂಡು ಬಂಜೆಯರಾಗುವದರಲ್ಲಿ ನೈತಿಕ ತಪ್ಪೇನಿಲ್ಲವೆನ್ನುವರು. ಸಂತತಿ ಪ್ರತಿಬಂಧಕವು ಕಡ್ಡಾಯವಲ್ಲವಾದುದರಿಂದಲೂ ಕಾರಣವಿದೆಯೆಂದು ಸ್ವಾಭಾವಿಕ ಗುಣವು ಸಂತತಿ ವೃದ್ಧಿಯ ಬಗ್ಗೆ ಬೇಕಾದರೆ, ಹಾಗಿನ ಗರ್ಭಪಾತದಿಂದ ಕೂಡಿದ ಅನೈತಿಕ ಮಾರ್ಗವೆಂದವರು. ಇದನ್ನು ಆಚರಿಸುವವರು ತಮ್ಮ ಅವನತಿಗೆ ಕಾರಣವಾಗುವರು. ಹಿಂದಿನ ಕಾಲದವರು ಬದಲು ಮಾರ್ಗವೆಂದು ಆದರಿಸಿದ್ದ ಎರೆಯನ್ನು ಮಾತ್ರ ತಿನ್ನುವ ಉಪಾಯ ಕಂಡಿರುವರು. ಮಕ್ಕಳನ್ನು ಪಡೆಯುವ ಭೀತಿಯಲ್ಲದೆ ಕ್ರೀಡಾ ನಿರಾತಂಕವನ್ನು ತಪ್ಪಿಸಬೇಕಿ ಕೊಳ್ಳಬಹುದೆಂದವರು. ಇದರ ನೈತಿಕತೆ ಅನೈತಿಕತೆ ಮತ್ತು ಗುಣದೋಷಗಳ ಕುರಿತು ನಾನಾ ರೀತಿಯ ಅಭಿಪ್ರಾಯಗಳು ತೋರಿಬಂದಿವೆ. ಚರ್ಚಾಸ್ಪದವಾಗಿ ಮುಟ್ಟಬಾರದ ಈ ವಿಷಯವನ್ನು ಇಲ್ಲಿ ವಿವರಿಸಲು ಸಾಧ್ಯವಿಲ್ಲ.

ಹೆಚ್ಚು ಸಾಧಿ ಸಂಪತ್ತಿದ್ದವರ ಜನವೃದ್ಧಿಯು ಕಡಮೆ ಎಂಬುದು ಅನುಭವ ಸತ್ಯವಾಗಿದೆ. ನಿಜವಾದರೆ ದರಿದ್ರರಿಗೆ ದಾರಿದ್ರ್ಯ ಒಳಗಾದ ನಾಡಿನಲ್ಲಿ 'ಸಂತತಿಗೆ ಬಹಳ ಪ್ರತಿಸಂಪತ್ತಿ ಒಂದೇ ರೀತಿ ಎಂಬುದು ಅರ್ಥ ಗರ್ಭಿತವಾದ ಮಾತು. ಹೆಚ್ಚು ಜನ ತಜ್ಞರು ತಮ್ಮ ಜೀವನಮಾನವನ್ನೇ ಈ ರೋಗದ ಬಗ್ಗೆ ವ್ಯಯಿಸಿ ಯುಜೆನಿಕ್ಸ (Eugenics) ಶಾಸ್ತ್ರದ ಮತ್ತು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಸುಧಾರಿಸಲಿಕ್ಕೆ ಸಂತತಿನ್ಯೂನ್ಯ ಕಡಮೆ ಎಂಬ ತೀರ್ಮಾನಕ್ಕೆ ಬಂದಿರುವರು. ಒಳ್ಳೇ ಸಂಪತ್ತಿಯಿಂದ ಬಿಗಿದವರಿಗೆ ಅಗ್ರಹಾರ ದಿನಗಳ ಬಗ್ಗೆ ದರಿದ್ರ ದೇಶಗಳಲ್ಲಿ ಹೆಚ್ಚು ಸ್ವಭಾವಗಳು ಸಹಾ ಇವುಗಳಿಗೆ ಅಪವಾದವು. ಅಲ್ಲಿ ಇಲ್ಲಿ ಕೆಲವು ಶ್ರೀಮಂತ ಕುಟುಂಬಗಳಲ್ಲಿ ಹೆಚ್ಚು ಮಕ್ಕಳಿದ್ದರೆ ಈ ಪ್ರಮಾಣವನ್ನು ಅವುಗಳು ದೃಢಪಡಿಸುವವು (Exceptions that prove the rule) ಶಾಲೆ ಕಲ್ಪನಾಮಾರ್ಗ ಜನರಲ್ಲಿ ಪ್ರತಿ ಹೊತ್ತನ್ನು ಜೋಡಿಸಿದರೆ ಮಗನದೇ ಸಹಾ ಕಡಿಮೆಯಿರು. ಕಾಮುಕತ್ವ ಹೆಚ್ಚಾಗುವದು ಹೆಚ್ಚಿನ ಶ್ರೀಮಂತರಲ್ಲದ ಕಾರಣ ಆಗಿರಬಹುದು.

ಜನಸಂಖ್ಯೆಯ ಕುರಿತು ಇನ್ನೊಂದು ವಿಷಯವೇನೆಂದರೆ ಜಾರರು ಮತ್ತು ಸ್ವಭಿಚಾರರವರು ಹೆಚ್ಚಾಗಿರುವ ಕುಲಗಳಲ್ಲಿ ಸಂತತಿಯು ವೃದ್ಧಿಯ ಬದಲಿಗೆ ಕ್ಷೀಣಿಸುವದು. ಸಂತತಿ ವೃದ್ಧಿ ಅಥವಾ ಕ್ಷೀಣವಾಗಲು ಅನೇಕ ಕಾರಣಗಳಿವೆ. ಒಂದೇ ಕಾರಣದಿಂದ ಎಂದು ಹೇಳುವದು ತಪ್ಪು. ಶೋಧಕರು ಒಂದೊಂದು ಕಡೆಯಲ್ಲಿ ಒಂದೊಂದು ಕಾರಣವು ಪ್ರಮುಖ್ಯವಾಗಿ ಕಾಣುವವು ಎಂದಿರುವರು. ಇತ್ತೀಚೆಗೆ ಆಕ್ತ ಉಪಯೋಗಿಸುವ ಜನಾಂಗದಲ್ಲಿ ಮೋರಿದ ಸಂತತಿ ವೃದ್ಧಿಯಾಗುವುದೆಂದು ಕೆಲವರು ಅಭಿಪ್ರಾಯ ಪಟ್ಟಿರುವರು. ಈ ಕುರಿತು ಇನ್ನು ಶೋಧ ನಡೆಯುತ್ತಾ ಇದೆ. ಇದಿಗ ಲೋಕವನ್ನೇ ದೃಷ್ಟಿಸಿ ನೋಡುವವಾದರೆ ಜನಸಂಖ್ಯೆಯು ಹಿಂದು ಏರಿ, ರಾತಿಗಳಲ್ಲಿ ಕಂಡು ಬರುವದು; ನಾಗರಿಕತೆಯಲ್ಲಿ ಮುಂದುವರಿದ, ಆರ್ಥಿಕ ಸ್ಥಿತಿಯಲ್ಲಿ ಉತ್ತಮವಿರುವ ರಾಷ್ಟ್ರಗಳಲ್ಲಿ ಸಂತತಿ ವೃದ್ಧಿಯು ನಿಧಾನವಾಗಿರುವದು ಅಥವಾ ಇದ್ದಂತೆ ಇರುವದು ಅಥವಾ ಕಡಿಮೆಯಾಗುತ್ತಾ ಹೋಗುವದು. ನಾಗರಿಕತೆಯಲ್ಲಿ ಹಿಂದುಳಿದ ಮತ್ತು ಆರ್ಥಿಕ ಪರಿಸ್ಥಿತಿ ಹೀನವಿದ್ದ ಜನಾಂಗದಲ್ಲಿ ಜನಸಂಖ್ಯೆಯು ತೀವ್ರವಾಗಿ ವೃದ್ಧಿಯಾಗುತ್ತಾ ಹೋಗುವದು.

ಜನಸಂಖ್ಯೆಯ ಏರಿಳಿತದ ಕುರಿತು ಗಾಬರಿಯಾಗುವದು ಅನಾವಶ್ಯಕವೆಂದು ಕೆಲವರು ಅಭಿಪ್ರಾಯ ಪಡುವರು. ಲೋಕದಲ್ಲಿ ಜನ್ಮ ದಿಕ್ಕಿನ ಸಕಲ ವಿಂಗಡಣೆಗಳ, ಪರಿಮಾಣ ನಕ್ಷೆ ಪ್ರಕಾರ ಹುಟ್ಟಿದ ಜೀವಿಯೂ ಸಂತತಿ ವೃದ್ಧಿಯೂ ಕಾಲ ಚಕ್ರದಂತೆ ತಿರುಗುವ ಬದಲಾವಣೆ (Cyclic Change) ಹೊಂದಿರುವವನ್ನು ಕಂಡು, ಒಂದು ಕಾಲವು ವೃದ್ಧಿಯಾಗುತ್ತಾ ಬಂದು, ಕೊನೆಯಲ್ಲಿ ಕೊಡು ಕೊಳ್ಳು ವೃದ್ಧಿಯು ನಿಲ್ಲುವದು. ಕೆಲವು ಕಾಲ ನಿಲ್ಲುವ ತನಕ ವೃದ್ಧಿಯಾಗಲಾರಂಭಿಸುವದನ್ನು ನೋಡಿ ಎಷ್ಟರ ಮಟ್ಟಿಗೆ ನಿಜವೆಂಬದು ಹೇಳಲು ಬರುವದಿಲ್ಲ. ಇತ್ತೀಚೆಗೆ ಪಶ್ಚಿಮ ಯುರೋಪ್ಯದ ಕೆಲವು ರಾಷ್ಟ್ರಗಳ ಮತ್ತು ಅಮೇರಿಕದ ಕೆಲವು ರಾಷ್ಟ್ರಗಳಲ್ಲಿ ಹುಟ್ಟಿದ ಮಕ್ಕಳ ಸಂಖ್ಯೆಯು ಕಡಿಮೆಯನ್ನು ತನ್ನ ಈ ಮಾತಿಗೆ ಆಧಾರವಾಗಿ ತೋರಿಸುವರು. 1870ರಲ್ಲಿ ಅಮೇರಿಕದಲ್ಲಿ ಸಾವಿರಕ್ಕೆ 47 ಮಕ್ಕಳು ಹುಟ್ಟಿದವು. 1911ರಲ್ಲಿ ಸಾವಿರಕ್ಕೆ 18.1 ಮಕ್ಕಳು ಹುಟ್ಟಿದವು. 1931ರಲ್ಲಿ ಸಾವಿರಕ್ಕೆ 21 ಮಕ್ಕಳು ಹುಟ್ಟಿದವು. 1942ರಲ್ಲಿ ಸಾವಿರಕ್ಕೆ ... ಜನರು ಹುಟ್ಟಿಬರುವರೆಂದು ಅಂದಾಜು ಮಾಡಲಾಗಿದೆ.

ಹೆಚ್ಚು ಮಕ್ಕಳಿದ್ದರೆ ತನ್ನ ಆಸ್ತಿಪಾಸ್ತಿಗೆ ಕೊಡಲಾಗುವುದೆಂದು ಹೆಚ್ಚು ಮಕ್ಕಳು ಹುಟ್ಟಬಾರದೆಂದು ಹಾರೈಸುವರು. ಅಥವಾ ತಮ್ಮ ಸ್ವಂತದ ಸೌಕರ್ಯದ ಮಟ್ಟಕ್ಕೆ ಸರಿಯಾಗಿ ಇಷ್ಟನ್ನು ಸಾಕಲು ಕಷ್ಟವಾಗುವುದರಿಂದಲೋ ಅಥವಾ ತಮ್ಮ ಸುಖ ಭೋಗದ ವಿಷಯದಲ್ಲಿ ಬೇಕಾದಷ್ಟು ಉತ್ತಮ ಮತ್ತು ಸುಖವು ದೊರೆಯದು ಜನರಲ್ಲಿ ಸಂತತಿ ಪ್ರತಿಬಂಧಕವು ಇದ್ದರೊಳಗೆ ಸಾಧಾರಣ ಮಟ್ಟಕ್ಕೆ ಬಂದಿದೆ. ಇದೀಗ ಕೆಳ ತರಗತಿಯ ಜನರಲ್ಲಿ ಹೆಚ್ಚು ಬೇಕಾಗಿಯದೆ. ಇತರರ ಮನೆಯ ತೊಟ್ಟಿಲು ಬರಿದಾಗ ಬೇಕೆನ್ನುವಾಗ ಜನರು ತಿಳಿಸ್ಸದ ಕಣ್ಣು ಕೆಂಪುಮಾಡಿ ಕುಲನಾಶಕರಿಂದು ಬೈಯ್ಯುವರು ಆರೋಗ್ಯ ನೀಡುವುದುವಾದರೆ ಇದಕ್ಕೂ ಒಂದು ಅರ್ಥ ಕಟ್ಟಬಹುದು. ಕೆಳವರ ಜನರು ಅಗ್ನನಾದರೆ ಯಾರಿಗೆ ಬೇಡವಾಗಿದೆ?

ಮೋರಿನಿಂದ ಸಂತತಿ ವೃದ್ಧಿಯಾಗುವ ಈ ಜೆಪಾನ್, ರಷ್ಯ, ಇಂಡಿಯ ಚೈನ ಮುಂತಾದ ಪೂರ್ವ ರಾಷ್ಟ್ರಗಳಲ್ಲಿ ಲೆಕ್ಕೆಂದರೆ ಸಾವಿರಕ್ಕೆ 50ರವನ್ನು ಜಾಸ್ತಿಯಾಗುವರು. ಸಾಯುವವರ ಸಂಖ್ಯೆಯು ಕಡಿಮೆಯೆಂದರೆ ಸಾವಿರಕ್ಕೆ 10ರಷ್ಟು (ಪ್ರಕೃತ ಇಂಡಿಯದಲ್ಲಿ 1000ಕ್ಕೆ 16.5 ಜನರು ಸಾಯುವರು) ಈ ಲೆಕ್ಕದಲ್ಲಿ 1000ಕ್ಕೆ 40ರಂತೆ ಪ್ರತಿ ವರುಷ ಜಾಸ್ತಿಯಾಗುವದು. ಈ ಮೇರೆಗೆ ಪ್ರತಿ 17½ ವರುಷಕೊಮ್ಮೆ ಜನಸಂಖ್ಯೆ ಇಮ್ಮಡಿಕ್ಕರವಾಗುವದು. ಆದರೆ ಕಾರಣಾಂತರದಿಂದ ಈ ಲೆಕ್ಕದಲ್ಲಿ ಜಾಸ್ತಿಯಾಗುವುದಿಲ್ಲ. ಇಂಥಾ ಪ್ರಸಂಗ ಬರಬೇಕೆಂತ ಯಾರೂ ಇಚ್ಛಿಸುವದಿಲ್ಲ. ಸಂತಾನೋತ್ಪತ್ತಿಗೆ ಒಂದು ಮಿತಿಯಿರಬೇಕು. ಸಂತಾನವೃದ್ಧಿಯಾಗುವ ಮದುವೆಯ ಕಾಲವು ಕಡಿಮೆಯೆಂದು ಸರಿಯ ಪ್ರಾಯದಿಂದ ಇಪ್ಪತ್ತೈದು ವರುಷದೊಳಗೆಂದು ಕೆಲವು ತಜ್ಞರು ಅಭಿಪ್ರಾಯಪಟ್ಟಿರುವರು. ಐಯರ್ಲ್ಯಾಂಡಿನವರಂತೆ ಮದುವೆಯ ಕಾಲವನ್ನು ಮುಂದುವರಿಸುವದು ಒಳ್ಳೆಯದು. ಇದರಿಂದ ಅನಾಚಾರಕ್ಕೆ ಎಡೆಯಾಗುವದೆಂದು ಕೆಲವರು ಹೇಳುವರು. ಅಂಥಾ ಸಂದರ್ಭಗಳನ್ನು ಸಮಾಜಿಕ ನಿಯಮ ನಡತೆಯಿಂದ ಪರಿಹರಿಸಬೇಕು. ಹೀಗಿಲ್ಲವಾದರೆ ಡಾಕ್ಟರ್ ಮೇರಿ ಸ್ಟೋಪ್ಸರು ಹೇಳಿದಂತೆ 'ಅವಧಿ ಕ್ರಮ' (Rhythm System) ಅನುಸರಿಸಿ ಮಕ್ಕಳನ್ನು ಪಡೆಯುವ ಅಂತರವನ್ನು (Spacing of Children) ಮಾಡಬೇಕು. ಒಬ್ಬರ ಹೊರತು ಹೆಚ್ಚಾದರೆ ಒಂದು ಗಂಡು 2 ಹೆಣ್ಣುಗಳು ಅಥವಾ 1 ಹೆಣ್ಣು 2 ಗಂಡುಗಳು.

'ಜೀವನದ ಕಾದಾಟ' (Struggle for life) ಎಂಬ ಮಾಲ್ಥೂಸನ ತತ್ವವು ಡಾರ್ವಿನನ "ಬಲಿಷ್ಠರು ಉಳಿಯುವರು" (Survival of the fittest) ಎಂಬ ತತ್ವಕ್ಕೆ ಮೂಲಾಧಾರವಾಗಿದೆ. ಡಾರ್ವಿನನ ತತ್ವಕ್ಕೆ ಜನರು ಮೊದಲು ಸ್ವಲ್ಪ ಆಕ್ಷೇಪವೆತ್ತಿದರೂ ಕೊನೆಗದನ್ನು ಒಪ್ಪಿಕೊಂಡರು. ಆದರೆ ಅದಕ್ಕೆ ಎಳೆದಿಯಾದ ಮಾಲ್ಥೂಸನ ತತ್ವವನ್ನು ಜನರು ಈಗಲೂ ಶಂಕಿಸುವದು ಮತ್ತು ಉಪೇಕ್ಷೆ ಮಾಡುವದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇನ್ನೊಂದು ಚೋದ್ಯದ ವಿಷಯವೇನೆಂದರೆ ನೈತಿಕ ಪ್ರತಿಬಂಧಕವನ್ನು ಸರಿಸಿ ಶಿಕ್ಷಿತರ ಬೋಧನೆ ಗುರುಗಳು ಬ್ರಹ್ಮಚರ್ಯ ವೈರಾಗ್ಯ ಜೀವನ ನಡೆಸುವದಾದರೂ ಇತರರು ಹಾಗೆ ಮಾಡಬಾರದೆಂದು ಮಾಲ್ಥೂಸನ ತತ್ವವನ್ನು ಅಲ್ಲಗಳೆಯುವರು. ಇದು ಹೇಗೆ ಇರಲಿ. ಮಾಲ್ಥೂಸನು ತನ್ನ ತತ್ವವನ್ನು ಜನರ ಮುಂದಿಟ್ಟು 150 ವರುಷಗಳಾದರೂ ಈಗಲೂ ಜೀವಂತವಾಗಿದೆ. ಜನಸಂಖ್ಯೆಯ ಕುರಿತು ವಿಶೇಷವಾಗಿ ಯಾಗಲಿ ಅವಿರೋಧವಾಗಿಯಾಗಲಿ ಚರ್ಚಿಸ ಬಯಸುವವರು ಮತ್ತು ಬರೆಯುವವರು ಮಾಲ್ಥೂಸನನ್ನೆ ಬುಡವಾಗಿ ತೆಗೊಳ್ಳುವದಾದ್ದರಿಂದ ಅವನ ತತ್ವದಲ್ಲಿ ಸಾರ ಮತ್ತು ನಿಜಾಂಶವಿದೆಯೆಂಬುದು ನಿಸ್ಸಂದೇಹ.

— ಸಿ. ಎಚ್. ಶೆಟ್ಟಿ.

"ಗೋಪಾಲ ಭೇಷಜಶಾಲೆ" ಮಂಗಳೂರು.

(ಸ್ಥಾಪಿತ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ.

ಬಾಣಂತಿಯರ ಸಲುವಾಗಿಯೇ ದೇಹ ಮತ್ತು ಪ್ರಕೃತಿಯ ದೋಷ ಸ್ತ್ರೀಯನ್ನು ನಿರ್ಮೂಲಿಸಿ ತಯಾರಿಸಲ್ಪಟ್ಟ ಅತಿಶ್ರೇಷ್ಠವಾದ ಧಾರುಣ್ಯವರಸಾಯನ

ಇವರ ನವಜೀವಾತು ಎಂಬ ಸೂತಿಕಾರಸಾಯನ



ಹೆಚ್ಚಿನ ಮಾಹಿತಿಗೆ- ಡಾ। ಯಂ ಸಿ ಶಾಸ್ತ್ರೀ, ಯಲ್ ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಶಾಖೆ - ಡಾ। ಐ. ಕೆ. ಶಿವರಾಮಯ್ಯ, ಕುಂಜಿಬೆಟ್ಟು, ಉಡುಪಿ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೫—೧೧—೫೩ರಿಂದ ತಾ. ೧೧—೧೧—೫೩ರ ವರೆಗೆ.

ಮೇಷ—ಗುರುಹಿರಿಯರ ಮತ್ತು ಮಿತ್ರ ವರ್ಗದವರ ಸಹಕಾರವಿಲ್ಲದಿದ್ದರೂ ನೀವಿಂದು ಸ್ವಕಾರ್ಯಗಳನ್ನು ಪೂರೈಸಲು ಸಮರ್ಥರಿರುವಿರಿ. ಆದರೆ ಶತ್ರುಜನರಿಂದ ಆಗಾಗ ವಿಘ್ನ ವಿದ್ರೋಹಗಳು ಬರಲಿವೆ. ನಿಮ್ಮ ಆರೋಗ್ಯವು ಉತ್ತಮವಿದ್ದರೂ ಹೆಂಡತಿ ಮಕ್ಕಳ ಆರೋಗ್ಯ ದೆಸೆಯಿಂದ ಬಹಳ ಧನ ವ್ಯಯಿಸ ಬೇಕಾಗುವದು. ಸ್ತ್ರೀನಿಮಿತ್ತವಾಗಿ ಕೆಲವ ನಷ್ಟ ಅನಾಸವಾದವನ್ನು ಕೂಡ ಹೊಂದುವ ಸಂಭವವಿದೆ ಅಕಸ್ಮಾತ್ ಪ್ರವಾಸದಿಂದಾಗಿ ಹಣದ ಅಡಚಣೆಗೆ ಸಿಲುಕುವಿರಿ. ವಾರಾದಿಯ 3 ದಿನಗಳು ಇದ್ದುದರಲ್ಲಿ ಉತ್ತಮ.

ವೃಷಭ—ಈಗೆರಡು ವಾರದಿಂದ ನಿಮ್ಮ ಅದೃಷ್ಟವು ಕೊಂಚ ಹ್ರಾಸವಾಗುತ್ತಾ ಬರುತ್ತಿದೆ. ಆದರೂ ಆರ್ಥಿಕ ಭಾಗಕ್ಕೇನೂ ಕೊರತೆ ಬಾರದು. ಪ್ರಬಲವಾದ ಶತ್ರುಗಳನ್ನು ಕೂಡ ಪರಾಭವಗೊಳಿಸುವ ಶಕ್ತಿ ಸಾಹಸಗಳಿಂದ ಕೂಡಿರುವಿರಿ. ಪ್ರಣಯಿಗಳಿಗೆ ವಾರವು ಉತ್ತಮವಾಗಿಯೇ ಫಲಿಸೀತು. ಸಾಂಸಾರಿಕ ತಾಪತ್ರಯಗಳು ಸ್ವಲ್ಪ ಹೆಚ್ಚುವವು. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ನಷ್ಟವುಂಟಾದೀತು ವಿವೇಕಿಯವರೊಡನೆ ವಾಕ್ಕಲಹದ ಯೋಗವಿದೆ. ವಾರಾದಿಯ 3 ದಿನಗಳಲ್ಲಿ ನಿಮ್ಮ ಬಯಕೆಗಳು ಸಿದ್ಧಿಸಲಿವೆ.

ಮಿಥುನ— ಇಂದೀಗ ನಿಮ್ಮ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗದು. ಕೃತ್ರಿಮ ಮಿತ್ರರ ಸಂಸರ್ಗದಿಂದಾಗಿ ನಷ್ಟ. ಜನನಿಂದೆಗೆ ಗುರಿಯಾಗುವ ಸಂಭವವಿದೆ. ಗೃಹ ತಾಪತ್ರಯಗಳು ಸದಾ ಪೀಡಿಸುವವು. ಖರ್ಚು ವೆಚ್ಚಗಳು ಅಧಿಕವಾಗಿದ್ದರೂ ನಿಮ್ಮ ದುಡಿಮೆಯು ಸಾಕಷ್ಟಿರುವುದರಿಂದ ಹಣದ ಬಿಕ್ಕಟ್ಟು ಕಾಣಿಸದು. ಪ್ರಣಯಿಗಳಿಗೂ ಸೇವಕ ವರ್ಗದವರಿಗೂ ಈ ಕಾಲವು ಅಷ್ಟೊಂದು ಉತ್ತಮವಾಗಿಲ್ಲವು. ವಾರಾಂತ್ಯದ 1 ದಿನಗಳು ಉಳಿದ ದಿನಗಳಿಗಿಂತ ಲೇಸಾಗಿರುವವು.

ಕರ್ಕಾಟಿ—ದೈವವು ಸಾಕಷ್ಟು ಅನುಕೂಲವಿಲ್ಲದಿದ್ದರೂ ಕರ್ಮ ಲಾಭಪತಿಗಳು ಅನುಕೂಲರಾಗಿರುವುದರಿಂದ ನಿಮ್ಮ ಕಾರ್ಯ ಕಲಾಪಗಳಿಗೆ ಏನೊಂದೂ ಎಡರು ತೊಡರುಗಳು ಬಾರದೆ ನ್ಯಾಯವಾದ ಫಲವನ್ನು ಕೂಡ ಹೊಂದುವಿರಿ. ನಿಮ್ಮ ವರ್ತನೆಯು ನಿಮ್ಮ ಪತ್ನೀ ಪುತ್ರರಿಗೂ ಪರಿಕಾಣಿಸದೆ ನಿತ್ಯ ಕಲಹಕ್ಕೆ ಪಕಾರವಾಗುವದು. ಹೆಚ್ಚಿನ ಕಾಲವನ್ನು ನೀವು ಪ್ರವಾಸದಲ್ಲೇ ಕಳೆವ ಸಂಭವವಿದೆ. ಕಷ್ಟ ಸಹಿಸುವವರಿಗೆ ವಾರಾಂತ್ಯದ 2 ದಿನಗಳಲ್ಲಿ ಇಷ್ಟಾರ್ಥಗಳು ಸಿದ್ಧಿಸುವವು.

ಸಿಂಹ—ಅಂಗಾರಕನು ಹೊರತು ಮಿಕ್ಕೆಲ್ಲಾ ಗ್ರಹರೂ ನಿಮ್ಮ ಮೇಲೆ ಅನುಗ್ರಹ ದೃಷ್ಟಿಯನ್ನು ಬೀರಿರುವುದರಿಂದ ನೀವಿಂದು ಮಾಡಿದ್ದೇ ಕಾರ್ಯ, ಮಣ್ಣು ಹಿಡಿದರೂ ಹೊನ್ನಾದೀತು. ಜನತೆಯು ನಿಮ್ಮ ಮಾತನ್ನು ವಿರಸಾ ಮಾನ್ಯ ಮಾಡುವರು. ಯಾವ ಮಹತ್ಕಾರ್ಯವೇ ಇರಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬೇಕಾದ ಪ್ರಸಂಗ ಬರಲಾರದು. ಸಕಲ ಸಂಪತ್ಸಮೃದ್ಧವಾಗಿದ್ದ ನಿಮಗೆ ತಾ. 5, 6, 7 ಈ ದಿನಗಳಲ್ಲಿ ಸುಖಭೋಗ ಲಾಭ ವಿಜಯಗಳು ಲಭಿಸುವವು

ಕನ್ಯಾ—ದೈವವು ತೀರಾ ದುರ್ಬಲವಾಗಿರುವದು. ಅದೇ ಕಾರಣ ನಿಮ್ಮ ಪರಿಶ್ರಮವು ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವದು. ಈ ಮುಂಚೆ ಹೊಗಳಿಸಿಕೊಂಡ ಜನರಿಂದಲೇ ಇಂದು ತೆಗಳಿಸಿಕೊಳ್ಳುವ ಪ್ರಸಂಗ ಬರಬಹುದು. ಗೃಹತಾಪತ್ರಯ ದೇಹಾಲಸ್ಯ ಆರ್ಥಿಕ ಬಿಕ್ಕಟ್ಟು ಇತ್ಯಾದಿಗಳಿಂದ ನಿಮಗೆ ಸ್ವಪ್ನದಲ್ಲೂ ಸುಖಲಭಿಸದೆಂದರೆ ಅತಿಶಯೋಕ್ತಿಯಾಗಲಾರದು. ತಾ. 8, 9 ಈ ದಿನಗಳು ಇತರ ದಿನಗಳಂತೆ ಹೆಚ್ಚಿನ ಅನಿಷ್ಟಕಾರಿಗಳಲ್ಲವು.

ತುಲಾ— ಭಾಗ್ಯಪತಿ ಬೃಹಸ್ಪತಿಯು ಧನಸ್ಥಾನದಲ್ಲೂ ನಿಂತಿರುವುದರಿಂದ ನಿಮಗೀ ವಾರದಲ್ಲಿ ಹೆಚ್ಚಿನ ಧನಾಗಮವಾಗಲಿದೆ. ನೀವು ಕೈಗೊಂಡ ಕಾರ್ಯವೂ ಕೂಡ ನಿರ್ವಿಘ್ನದಿಂದ ಕೊನೆಗಾಣುವದು. ಧನಕನಕ ವಸ್ತು ವಾಹನಾದಿಗಳಲ್ಲಿ ಏನೊಂದೂ ಕೊರತೆ ಯಿಲ್ಲದುದರಿಂದ ದಿನಯಾಪನೆಯು ಸುಗಮ ಸಾಗುವದು. ಆದರೆ ವ್ಯಯಗತ ಅಂಗಾರಕನೂ ಜನ್ಮಗತ ಶನಿಯೂ ದೇಹಾಲಸ್ಯ ಪ್ರಿಯಜನರ ವಿರಹವನ್ನು ತಂದುಕೊಡಲಿರುವರು. ಸ್ತ್ರೀಯರಿಂದ ಕಲಹವಾದೀತು ತಾ. 5, 6, 7, 10 11 ಈ ದಿನಗಳಲ್ಲಿ ಭೋಗಲಾಭ ವಿಜಯಗಳನ್ನು ಪಡೆವಿರಿ.

ವೃಶ್ಚಿಕ—ಧನಪತಿಯು ಅಸ್ತಮದಲ್ಲೂ ಕರ್ಮಪತಿಯು ವ್ಯಯದಲ್ಲಿ ನೀಚನಾಗಿಯೂ ಇರುವ ಕಾರಣ ನಿಮ್ಮ ಕಾರ್ಯಗಳು ನಷ್ಟ ಹೊಂದುವವಲ್ಲದೆ ಆರ್ಥಿಕ ದುರವಸ್ಥೆಗೆ ಗುರಿಯಾಗುವಿರಿ. ದೈವವು ಸಾಕಷ್ಟು ಅನುಕೂಲವಿಲ್ಲೆಂದು ಉದಾಸೀನರಾಗದೆ ಉದ್ಯಮವು ನರನ ಕರ್ತವ್ಯವೆಂಬ ಭಾವನೆಯಿಂದ ಕಾರ್ಯರಂಗದಲ್ಲಿ ಮುಂದರಿಯಿರಿ. ಪ್ರಮಸಹಿಷ್ಣುಗಳಾದ ನಿಮ್ಮ ಪರಿಶ್ರಮವು ಪೂರ್ಣ ವ್ಯರ್ಥವಾಗದು. ಜನತೆಯ ಸಹಕಾರವು ಚೆನ್ನಾಗಿರುವುದು. ತಾ. 8, 9 ರಲ್ಲಿ ನಿಮ್ಮ ಇಷ್ಟಾರ್ಥವು ನೆರವೇರುವದು.

ಧನು—ಹಿಂದಿನ ದಿನಗಳಿಗಿಂತ ಈ ವಾರವು ನಿಮಗೆ ಉತ್ತಮವಿರುವುದು ಹೆಸರಿಗೆ ಮಾತ್ರ ನಿಮ್ಮ ಪ್ರಯತ್ನವಿದ್ದರೆ ಸಾಕು. ಫಲವು ತಾನಾಗಿ ಪ್ರಾಪ್ತವಾಗುವದು ಸಮಾಜದಲ್ಲೂ ರಾಜಕೀಯ ಕ್ಷೇತ್ರದಲ್ಲೂ ಸ್ಥಾನಮಾನಗಳನ್ನು ಹೊಂದುವಿರಿ. ನಮ್ಮ ನಿಮ್ಮ ಕರ್ಮ ಕುಶಲತೆಯನ್ನು ಕಂಡ ಶತ್ರುಜನರು ನಿಮ್ಮ ಸ್ನೇಹವನ್ನು ಬಯಸಲು ಮುಂದಾಗುವರು. ಹೆಂಡತಿ ಮಕ್ಕಳ ಆರೋಗ್ಯವು ಕೊಂಚ ಕೆಡಲಿದೆ. ತಾ. 8, 9 ಹೊರತಾಗಿ ಉಳಿದ ದಿನಗಳು ಸರ್ವಾತ್ಮ ಉತ್ತಮವಾಗಿವೆ.

ಮಕರ:- ವಿಪಕ್ಷೀಯರು ಪ್ರತೀಕಾರಸ್ತರಾಗಿರುವರು. ಸಿಕ್ಕಸಿಕ್ಕವರೊಡನೆ ವಾಕ್ಕಲಹವಾಗುವದು. ಗುರುಹಿರಿಯರೂ ಮಿತ್ರರೂ ಕೂಡ ಸದ್ಯ ನಿಮ್ಮಿಂದ ದೂರವಾಗುವರು. ಇದರಿಂದಾಗಿ ನಿಮ್ಮ ಮನೋರೋಗವಧಿಕವಾಗಲಿದೆ. ವಾತ ಪ್ರಕೋಪದಿಂದಾಗಿ ಆರೋಗ್ಯವು ಕೆಡುವುದು. ಖರ್ಚಿಗೆ ಸಾಕಷ್ಟು ಧನಾಗಮವಿಲ್ಲದ್ದರಿಂದಲೂ ದೇಹಾಲಸ್ಯ ಮನೋರೋಗಗಳಿಂದಲೂ ಸತತ ದುಃಖಿಗಳಾದ ನಿಮಗೆ ವಾರಾದಿಯ 5 ದಿನಗಳು ಹೆಚ್ಚು ಅನಿಷ್ಟಕಾರಿಗಳಾಗಲಾರವು.

ಕುಂಭ—ಇಂದೀಗ ಧನಸುಖ ಭಾಗ್ಯ ಲಾಭಪತಿಗಳಾದ ಗುರು ಶುಕ್ರರ ಪೂರ್ಣ ಅನುಗ್ರಹವು ನಿಮ್ಮ ಮೇಲಿರುವುದರಿಂದ ಮೇಲಿನ ಎಲ್ಲಾ ಭಾಗಗಳಲ್ಲೂ ನಿಮಗೆ ಯಾವ ತೆರನಾದ ತೊಂದರೆಯೂ ಕಾಣಿಸದು, ಕುಂದು ಕೊರತೆಯು ಉಂಟಾಗದು. ನೆನದಂತೆ ಕಾರ್ಯವು ನೆರವೇರುವದು. ಆದರೆ ನಿಮ್ಮ ಉತ್ಕರ್ಷವನ್ನು ಕಂಡು ಅಸೂಯೆಗೊಂಡ ಶತ್ರುವೃಂದವು ಸಮಯ ನಿರೀಕ್ಷಣೆಯಲ್ಲಿರುವುದು. ವಾರಾಂತ್ಯದ 4 ದಿನಗಳು ಅತ್ಯುತ್ತಮವಾಗಿರುವವು.

ಮೀನ—ಹಿಂದಿನ ದಿನಗಳಂತೆ ಅಷ್ಟೊಂದು ಅನಿಷ್ಟಕಾರಿಯಾಗಿ ಪರಿಣಮಿಸದೀವಾರವು ವ್ಯಾಪಾರ ವ್ಯವಹಾರಗಳಲ್ಲಿ ಕುಶಲರಾದವರು ತಂತಮ್ಮ ಉದ್ಯಮದಲ್ಲಿ ಉತ್ತಮ ಪ್ರಯೋಜನವನ್ನು ಪಡೆವರು. ಬಂಧುಜನರೊಡನೆ ಮನಸ್ತಾಪ ವುಂಟಾಗಲಿದೆ. ಕೈಹಿಡಿದಾಕೆಯು ಕಲಹಪ್ರಿಯಳಾದಾಳು. ವಾತ ಪಿತ್ತ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ಜನತೆಯ ಸಹಕಾರವಿಲ್ಲದಿದ್ದರೂ ಸನ್ಮಿತ್ರರ ಬೆಂಬಲದಿಂದ ಕೂಡಿದ ನಿಮಗೆ ತಾ 10, 11ರಲ್ಲಿ ಇಷ್ಟಾರ್ಥಗಳು ನೆರವೇರುವವು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. P. 47/53

1. ಗಣಪತಿ ಮಯ್ಯ, 2. ಪರಮೇಶ್ವರ ಮಯ್ಯ, 3. ಕಾವೇರಮ್ಮ — ಅರ್ಜಿದಾರರು

ಈ ಮೂಲಕ ಸರ್ವರೂ ತಿಳಿಯ ಪಡಿಸುವುದೇನೆಂದ್ರೆ:—

ಕುಂದಾಪುರ ತಾಲೂಕು ಬಿಜೂರು ಗ್ರಾಮದಲ್ಲಿರುವ ಮೃತ ಮಂಜುನಾಥ ಮಯ್ಯರ ಮಕ್ಕಳಾದ 1–2ನೇ ಅರ್ಜಿದಾರರು ಮತ್ತು ಸದ್ರಿ ಮಂಜುನಾಥ ಮಯ್ಯರ ವಿಧವೆ 3ನೇ ಅರ್ಜಿದಾರಳಾದ ಕಾವೇರಮ್ಮನು ಕೂಡಾ 3 ಜನರು ಏಕಸ್ಥರಾಗಿ, 1-2ನೇ ಯವರ ಸಹೋದರ, ಯಾ 3ನೇ ಯವಳ ಮಗ,* ಇತ್ತಲಾಗಿ ಮೃತಪಟ್ಟ, ಸೀತಾರಾಮ ಮಯ್ಯರ ವಾರಿಸು ಸರ್ಟಿಫಿಕೇಟನ್ನು, ತಮ್ಮೆಲ್ಲರ ಬಗ್ಗೆ, ತಮ್ಮ ಸಮಷ್ಟಿ ಕುಟುಂಬದ ಯಜಮಾನನಾದ 1ನೇ ಅರ್ಜಿದಾರನ ಹೆಸರಿಗೆ ಕೊಡಬೇಕಾಗಿಯೂ ವಗೈರೆ ಸಂಗ್ತಿ ಕಾಣ್ಸಿ ಸದ್ರಿ ಅರ್ಜಿಯನ್ನು ದಾಖ್ಲೆ ಮಾಡಿರುತ್ತಾರೆ. ಅದು ತಾ 20–11–53ಕ್ಕೆ ಈ ಕೋರ್ಟಿನ ಮುಂದೆ ತನಿಖೆ ಇದೆ. ಆ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ, ಸದ್ರಿ ದಿವಸ ಕೋರ್ಟಿನ ಮುಂದೆ ಹಾಜರಾಗಿ ಆಪೇಕ್ಷಿಸಿ ಮಾಡಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ವಾರಿಸು ಸರ್ಟಿಫಿಕೇಟನ್ನು ಕೊಡಲಾಗುವದು.

Halsnad Laxminarayanayya
Advocate for Petitioners
ಕುಂದಾಪುರ 27–10–53

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ 1931] [ಪ್ರಧಾನ ಕಛೇರಿ: ಮಂಗಳೂರು.

ಶೇರ್ತು ಭಂಡವಾಳ ಮತ್ತು ಕ್ಷೇಮನಿಧಿ ರೂ. 10,37,000
ಜುಮ್ಲಾ ವಹಿವಾಟು .... „ 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ ಸುಂದರರಾಮ ಶೆಟ್ಟಿ,
ಬಿ ಎ ಬಿ.ಯಲ್., ವಕೀಲ,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಚಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್. ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W Rly.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

Edited Printed & Published By K. H. Shetty at the Navayuga Press, Udipi, S. India

Regd. No. M. 618

Licence No 31
Licensed to Post without Prepayment

ನವಯುಗ

Vol 33 No 11 | 12-11-1953 | ವರ್ಷ ೩೩ ವಾರ ೧೧

ಕರ್ನಾಟಕದ ಶಾರದಾ ಪೀಠ

"ಭಾರತ ಮಾತೆಯು ನಿಮ್ಮಿಂದ ತ್ಯಾಗಪೂರ್ವಕ ಸೇವೆ, ಪರಿಶುದ್ಧ ಜೀವನ, ಇವುಗಳನ್ನು ಅಪೇಕ್ಷಿಸುವಳು ಈ ಅಪೇಕ್ಷೆಯನ್ನು ಪೂರೈಸಲು ನೀವೆಲ್ಲರೂ ಮುಂಬರಬೇಕು" ಎಂಬುದಾಗಿ ಈಚೆಗೆ (ದಿನಾಂಕ ೨೬ನೇ ಅಕ್ಟೋಬರ ೧೯೫೩) ಭಾರತದ ಉಪರಾಷ್ಟ್ರಾಧ್ಯಕ್ಷ ಡಾ ರಾಧಾಕೃಷ್ಣನ್ನರು ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವೀದಾನ ಭಾಷಣ ಮಾಡುತ್ತ ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದರು ಅಂದು ೬೩೨ ಜನರು ಪದವಿಗಳನ್ನು ಪಡೆದುಕೊಂಡರು ಇದಕ್ಕೆ ಮುಂಚೆ ಡಾ ರಾಧಾಕೃಷ್ಣನ್ನರು ಛೋಟಾ ಮಹಾಬಳೇಶ್ವರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಕಟ್ಟಡವನ್ನು ಉದ್ಘಾಟಿಸಿದರು. ವಿಶ್ವವಿದ್ಯಾಲಯವು ಯಶಸ್ವಿಯಾಗಬೇಕಾದರೆ ಅದು ಸತ್ವಯುತವಾಗಬೇಕು ಉತ್ತಮ ಶಿಕ್ಷಕರೇ ವಿಶ್ವವಿದ್ಯಾಲಯದ ಜೀವಾಳ ಎಂದಿಲ್ಲಿ ಉಪರಾಷ್ಟ್ರಾಧ್ಯಕ್ಷರು ಹೇಳಿದರು

ಕರ್ನಾಟಕ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದು ನಾಲ್ಕು ವರ್ಷಗಳಾದವು, ಆಷ್ಟೆ ಅಂದಿನಿಂದ ಈ ವರೆಗೆ ನಾಲ್ಕು ಪದವೀದಾನ ಸಮಾರಂಭಗಳು ಜರುಗಿವೆ ಮೊದಲನೇ ವರ್ಷ ಕೇವಲ ೧೩೫ ಪದವೀಧರರೂ ಎರಡನೇ ವರ್ಷ ೩೦೫ ಪದವೀಧರರೂ ಈ ವಿಶ್ವವಿದ್ಯಾಲಯದಿಂದ ಪದವಿಗಳನ್ನು ಸ್ವೀಕರಿಸಿದ್ದರು ಆದರೆ ಈ ಪ್ರಮಾಣ ಈಗ ವರ್ಷ ವರ್ಷಕ್ಕೂ ಹೆಚ್ಚುತ್ತಾ ನಡೆದಿದೆ

ಧಾರವಾಡದ ಗಂಡಸರ ತರಬೇತಿ ಕಾಲೇಜಿನ ಮೂರು ಕೋಣೆಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕಾರ್ಯಾಲಯವನ್ನು ಮೊದಲು ಸ್ಥಾಪಿಸಿ, ಕೆಲಸಕ್ಕೆ ತೊಡಗಿದರು ಆದರೆ ವಿಶ್ವವಿದ್ಯಾಲಯದ ಚಟುವಟಿಕೆಗಳು ಹೆಚ್ಚಿದಂತೆ ಮತ್ತು ಕಾರ್ಯಕ್ಷೇತ್ರವು ವ್ಯಾಪಕಗೊಂಡಂತೆ ಸ್ಥಳ ಬಾಧವು ಗೋಚರಿಸಿತು ತರಬೇತಿ ಕಾಲೇಜಿನಲ್ಲಿ ಮತ್ತೆ ನಾಲ್ಕು ಕೋಣೆಗಳನ್ನು ತೆಗೆದುಕೊಂಡು ಕೆಲಸ ನಡೆಸಬೇಕಾಯಿತು ೧೯೫೧ನೇ ಮಾರ್ಚದಲ್ಲಿ ಮುಂಬಯಿ ಸರಕಾರವು ೪ ಲಕ್ಷ ರೂಪಾಯಿಗಳ ಅನಾವರ್ತ ವೆಚ್ಚ ಮತ್ತು ೩೫೦ ಸಾವಿರ ರೂಪಾಯಿಗಳ ಆವರ್ತ ವೆಚ್ಚವನ್ನು ನೀಡಿದುದರಿಂದ ವಿಶ್ವವಿದ್ಯಾಲಯದ ಕಟ್ಟಡವನ್ನು ಕಟ್ಟಿಸಲು ಅನುಕೂಲವಾಯಿತು

❀

ಛೋಟಾ ಮಹಾಬಳೇಶ್ವರದಲ್ಲಿ ವಿಶ್ವವಿದ್ಯಾಲಯದ ಎಲ್ಲ ಕಟ್ಟಡಗಳೂ ನಿರ್ಮಾಣವಾಗುವುದಕ್ಕೆ ೮೫ ಲಕ್ಷ ರೂಪಾಯಿ ವೆಚ್ಚ ಬಂದೀತೆಂದು ಅಂದಾಜು ಮೊದಲಿಗೆ ಆಡಳಿತ ಕಟ್ಟಡವನ್ನು ಸುಮಾರು ೨,೦೦,೦೦೦ ರೂಪಾಯಿಗಳ ಕರ್ಚಿನಲ್ಲಿ ಕಟ್ಟಿರುವರು ಇದರ ಶಂಕುಸ್ಥಾಪನೆಯನ್ನು ೧೯೫೨ನೇ ಮಾರ್ಚ ೩೦ನೇ ದಿನಾಂಕ ರಾಷ್ಟ್ರಾಧ್ಯಕ್ಷ ಡಾ ರಾಜೇಂದ್ರ ಪ್ರಸಾದರು ಮಾಡಿದ್ದರು ಯೋಗಾಯೋಗ ಬಲದಿಂದ ಉಪರಾಷ್ಟ್ರಾಧ್ಯಕ್ಷರ ಹಸ್ತದಿಂದ ಕಟ್ಟಡದ ಉದ್ಘಾಟನೋತ್ಸವವು ಜರಗಿದೆ

ಭಾರತ ಸರಕಾರದವರು ಎರಡು ಲಕ್ಷ ರೂಪಾಯಿಗಳನ್ನು ಕೆಮಿಸ್ಟ್ರಿ, ಫಿಜಿಕ್ಸ ಮತ್ತು ಜಿಯಾಲಜಿಗಳಲ್ಲಿ ಸ್ನಾತಕೋತ್ತರ ಶಿಕ್ಷಣಕೊಡುವುದಕ್ಕೋಸ್ಕರ ಕೊಟ್ಟಿದೆ ಸ್ಟ್ಯಾಟಿಸ್ಟಿಕ್ಸದಲ್ಲಿ ಶಿಕ್ಷಣಕೊಡಲಾಗುತ್ತಿದೆಯಲ್ಲದೆ ಸ್ಟ್ಯಾಟಿಸ್ಟಿಕ್ಸದಲ್ಲಿಯೂ ಸ್ನಾತಕೋತ್ತರ ಶಿಕ್ಷಣದ ವ್ಯವಸ್ಥೆಯನ್ನು ವಿಶ್ವವಿದ್ಯಾಲಯದವರು ಮಾಡಿರುವರು

ಶ್ರೀಮಂತರು ಮುಕ್ತಹಸ್ತದಿಂದ ಸಹಾಯ ಮಾಡಬೇಕೆಂದು ವಿಶ್ವವಿದ್ಯಾಲಯವು ಅಪೇಕ್ಷಿಸುತ್ತದೆ ೫೦ ಸಾವಿರ ರೂಪಾಯಿಗಳಷ್ಟು ದಾನದ ವಚನ ಈಗಾಗಲೇ ದೊರೆತಿದ್ದು, ೪೩ ಸಾವಿರ ರೂಪಾಯಿಗಳೂ ಸಂಗ್ರಹವಾಗಿವೆ ಇದು ಎಷ್ಟು ಮಾತ್ರಕ್ಕೂ ಸಾಲದು ವಿಶ್ವವಿದ್ಯಾಲಯವು ತನ್ನೆಲ್ಲ ಆವಶ್ಯಕತೆಗಳನ್ನು ಪೂರೈಸುವಂತೆ ಮತ್ತು ಎಲ್ಲ ವಿಷಯದಲ್ಲಿ ಉತ್ಕರ್ಷ ಹೊಂದುವಂತೆ ನೋಡಿಕೊಳ್ಳುವುದು ಕನ್ನಡಿಗರ ಕರ್ತವ್ಯ

❀

ಬ್ರಿಟಿಷರಿಂದ ನೂರಾರು ವರ್ಷ ಪರಪ್ರಾಂತ್ಯಗಳಲ್ಲಿ ಹಂಚಿ ಹೋದ ಕನ್ನಡ ಪ್ರದೇಶಕ್ಕೆ ಒಂದು ವಿಶ್ವವಿದ್ಯಾಲಯವು ಬೇಕೆಂದು ತೋರಿದುದು ಸಹಜವೇ ಕಳ

ಅಲ್ಪಾವಧಿಯಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯವು ಸ್ವಂತದ ಆಡಳಿತ ಕಟ್ಟಡವನ್ನು, ಉಪ ಕುಲಪತಿ ರಜಿಸ್ಟ್ರಾರ ಅಸಿಸ್ಟಂಟರ ಜಿಸ್ಟ್ರಾರ, ಮತ್ತು ನಾಲ್ಕು ಜನ ಪ್ರಾಧ್ಯಾಪಕರಿಗೋಸ್ಕರ ವಸತಿ ಗೃಹಗಳನ್ನು ಕಟ್ಟಿಸಿಕೊಂಡು ಆಡಳಿತ ನಡೆದಿದೆ ಆದರೆ ಕಟ್ಟಡಗಳ ರಚನೆಗೂ ವಿಶ್ವವಿದ್ಯಾಲಯದ ಚಟುವಟಿಕೆಗಳ ವಿಸ್ತರಣೆಗೂ ಹೆಚ್ಚು ಹಣದ ಆವಶ್ಯಕತೆ ಇದೆ ಕರ್ನಾಟಕದ ಉದಾರ ವನೋಭಾವದ

ದ ರತನಾನದಾವಿಯಲ್ಲಿ ಭಾರತದಲ್ಲಿ ನವಜಾಗೃತಿಯ ಪ್ರಸರಣವಾಗ, ಕನ್ನಡಿಗರಲ್ಲೂ ಆತ್ಮವಿಶ್ವಾಸವು ಹುಟ್ಟಿಕೊಂಡಿತು ತಮ್ಮ ಸಂಸ್ಕೃತಿಯ ಅಭಿವೃದ್ಧಿಗೋಸುಗ ಆಸಯು ಕನ್ನಡಿಗರಿಗೆ ಆಯಿತು. ಉಚ್ಚ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆನ್ನುವುದು ಈ ಆಶೆಯ ದ್ಯೋತಕ ... ೧೯೧೭ರಲ್ಲಿ ಧಾರವಾಡದಲ್ಲಿ ಕರ್ನಾಟಕ ... ಸ್ಥಾಪನೆಗೊಂಡಿತು ... ಸ್ತ್ರೀ ...

ಕರ್ನಾಟಕದವರೆಲ್ಲ ಉಚ್ಚ ಶಿಕ್ಷಣಕ್ಕೋಸ್ಕರ ಪುಣೆಯ ಡೆಕ್ಕನ ಕಾಲೇಜವನ್ನೆ ಆಶ್ರಯಿಸುತ್ತಿದ್ದರು ಪುಣೆಯ ಕಾಲೇಜಿನ ಸ್ಥಾಪನೆಯಾದ ೫೦ ವರ್ಷಗಳ ಮೇಲೆ ಕನ್ನಡಿಗರು ತಮ್ಮದೊಂದು ಉಚ್ಚ ಶಿಕ್ಷಣ ಸಂಸ್ಥೆಯನ್ನು ಕಟ್ಟಿಕೊಂಡರು!

ಆದರ ಮುಂಬಯಿ ಪ್ರದೇಶದ ಕನ್ನಡ ವಿಭಾಗಗಳ ಜನರಿಗೆ ಇದರಿಂದಲೇ ಪೂರ್ಣ ಸಮಾಧಾನವಾಗಲಿಲ್ಲ ಕನ್ನಡದ ಉಜ್ವಲ ಭವಿಷ್ಯವನ್ನು ಕಾಯ್ದುಕೊಂಡು ಹೋಗುವುದಕ್ಕೆ ವಿಶ್ವವಿದ್ಯಾಲಯದ ಅಗತ್ಯ ಬಹಳ ಕಂಡ ಬಂತು ಅದೇ ಸಮಯ (೧೯೨೪) ಮುಂಬಯಿ ಇಲಾಖಾ ಶಿಕ್ಷಣ ಪರಿಷತ್ತು ಪ್ರಾದೇಶಿಕ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸಂಬಂಧಿಸಿದ ಗೊತ್ತುವಳಿಯೊಂದನ್ನು ಅಂಗೀಕರಿಸಿದು ೧೯೨೫ರಲ್ಲಿ ಸ್ಥಾಪ್ತರ ಸಮಿತಿಯೂ ೧೯೨೬ರಲ್ಲಿ ನೇಮಿಸಿದ ಸಮಿತಿಯೂ ಈ ತತ್ವವನ್ನು ಸ್ವೀಕರಿಸಿದವು.

ಮುಂದೆ ೧೯೨೮ರಲ್ಲಿ ಆಂಧ್ರ ವಿಶ್ವವಿದ್ಯಾಲಯ ಮದರಾಸ ಸಂಸ್ಥಾನದ ಶಾಸನ ಸಭೆಯ ಮುಂದೆ ಚರ್ಚೆಗೆ ಬಂದಾಗ-ಬಳ್ಳಾರಿಯ ಶಾಸಕರೊಬ್ಬರು ಕನ್ನಡ ಪ್ರದೇಶಗಳನ್ನು ಈ ವಿಶ್ವವಿದ್ಯಾಲಯದ ಅಧಿಕಾರಕ್ಷೇತ್ರದಿಂದ ಹೊರತುಪಡಿಸಬೇಕೆಂದು ಹೋರಾಡಿ ಚಳವಳ ನಡೆಯಿತು ಇದಕ್ಕೆ ಯಶಸ್ಸು ದೊರೆಯಿತು, ಮಾತ್ರವಲ್ಲ ಕರ್ನಾಟಕಕ್ಕಾಗಿ ಸ್ವತಂತ್ರವಾದ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಬೇಕೆಂದು ಆಗಲೇ ಒಂದು ಪರ್ಯಾಲೋಚನೆ ಪ್ರಾರಂಭವಾಯಿತು

೧೯೪೭ರಲ್ಲಿ ಮುಂಬಯಿ ಕಾಯಿದೆ ಮಂಡಳವು ಮಹಾರಾಷ್ಟ್ರ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದರಿಂದ ಕನ್ನಡಿಗರ ಬೇಡಿಕೆಯಲ್ಲಿ ಒತ್ತಾಯ ಹೆಚ್ಚಾಯಿತು ಬೆಳಗಾವಿ ಮತ್ತು ಧಾರವಾಡಗಳಲ್ಲಿ ಸಮಿತಿಗಳು ಸ್ಥಾಪಿಸಲ್ಪಟ್ಟು ಪ್ರಜ್ಞಾವಂತ ಮೂಲಕ ಜನಮತವನ್ನು ಸಂಗ್ರಹಿಸಿ ಒಂದು ಯೋಜನೆಯನ್ನು ಸಿದ್ಧಪಡಿಸಿದರು ೧೯೪೭ನೇ ಸಪ್ಟೆಂಬರ ತಿಂಗಳಲ್ಲಿ, ಮುಂಬಯಿ ಮುಖ್ಯಮಂತ್ರಿ ಹಾಗೂ ಶಿಕ್ಷಣಾಮಂತ್ರಿಗಳೆಡೆಗೆ ಕನ್ನಡಿಗರೊಂದು ಶಿಷ್ಟಮಂಡಳವನ್ನು ಒಯ್ದು ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಗೋಸ್ಕರ ತತ್ಕ್ರಮ ಕೈಗೊಳ್ಳಲು ನಿವೇದಿಸಿದರು

❀

ಮುಂಬಯಿ ಸರಕಾರವು ೧೯೪೯ನೇ ಏಪ್ರೀಲ ೧ರಿಂದು ನ್ಯಾಯಮೂರ್ತಿ ನಾರಾಯಣರಾವ ಕೋಕಡೆಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯನ್ನು ನೇಮಿ

(೧೦ನೇ ಪುಟ ನೋಡಿರಿ)

ಕನ್ನಡ ಓದುಗರಿಗೆಲ್ಲ ದೀಪಾವಳಿಯ

ಶುಭಾಶಯ!

ಇದು ಬರಿ ಬಾಯುಪಚಾರವಲ್ಲ ದೀಪಾವಳಿಯ ಶುಭಪ್ರಸಂಗಕ್ಕಾಗಿ
ಡಿಸೆಂಬರ ಕೊನೆಯವರೆಗೆ ಹೆಚ್ಚಿನ ಸೌಲಭ್ಯದಲ್ಲಿ ಪುಸ್ತಕ ಪೂರೈಸು
ತ್ತೇವೆ ವಿವರಕ್ಕೆ ಬರೆಯಿರಿ ಕ್ರಯಪಟ್ಟಿ ಉಚಿತ!

ಸಮಾಜ ಪುಸ್ತಕಾಲಯ, ಭಗತಸಿಂಗಬೀದಿ ಧಾರವಾಡ.

ಬೇಗನೆ ಪ್ರಕಟವಾಗಲಿರುವುವು— ನಿಮ್ಮ ಪ್ರತಿಗಳನ್ನು ಕಾದಿರಿಸಿರಿ

ಡಾ| ಕಿಲ್ಲೆಯವರ ಮೂರು ಗ್ರಂಥಗಳು

1 ಪ್ರಾಚೀನ ತುಳುನಾಡ ಇತಿಹಾಸ ... ರೂ ... ೦ ೦
2 ಭಾರತದ ಕಲೆ (ಗದ್ಯ) ... ರೂ ೦ ೪ ೦
4 ಮುರಲಿ (ಪದ್ಯ) ... ರೂ ೦ ... ೦

ದರ್ಶನ ... ಈ ಪುಸ್ತಕ ... ರೂ 3—8—0 ... ಪುಸ್ತಕಗಳನ್ನು ...

A T Mohan Rai,
Valanur Karkanady
MANGALORE.

ಪುಣೆಯ ಹೊಸ ಆಕಾಶವಾಣಿ ನಿಲಯ

ಅತ್ಯಾಧುನಿಕ ತಾಂತ್ರಿಕ ವ್ಯವಸ್ಥೆಯ ಅಚ್ಚುಕಟ್ಟು

ಪಂಚವಾರ್ಷಿಕ ಯೋಜನೆಯಲ್ಲಿ ಅಖಿಲ ಭಾರತ ಆಕಾಶವಾಣಿಯ ವಿಸ್ತರಣೆ ಮತ್ತು ಪುನರ್ಘಟನೆಗಳಿಗಾಗಿಯೂ ಯೋಗ್ಯ ವ್ಯವಸ್ಥೆಯನ್ನು ಮಾಡಿರುವರು. ಇದರನ್ವಯ ಇದೇ ಅಕ್ಟೋಬರ ೨ನೇ ದಿನಾಂಕ ಪುಣೆಯಲ್ಲಿ ಸುಮಾರು ೩ ಲಕ್ಷ ರೂಪಾಯಿಗಳ ವೆಚ್ಚದಿಂದ ಹೊಸ ಆಕಾಶವಾಣಿ ಕೇಂದ್ರವೊಂದು ತೆರೆಯಲ್ಪಟ್ಟಿದೆ. ಇದು ಅತ್ಯಾಧುನಿಕ ರೀತಿಯಲ್ಲಿ ಕೇವಲ ಏಳು ತಿಂಗಳುಗಳಷ್ಟು ಅಲ್ಪಾವಧಿಯಲ್ಲಿ ಎಲ್ಲ ತಾಂತ್ರಿಕ, ವೈಜ್ಞಾನಿಕ ಸೌಲಭ್ಯಗಳನ್ನೊಳಗೊಂಡು ನಿರ್ಮಾಣಗೊಂಡಿದೆ. ಭಾರತದಲ್ಲಿರುವ ಆಕಾಶವಾಣಿ ಕೇಂದ್ರಗಳಲ್ಲಿ ಇದು ಇಪ್ಪತ್ತ ಎರಡನೆಯದು. ಸದ್ಯ ಇಲ್ಲಿ ಒಂದು ಕಿಲೋವಾಟು ಶಕ್ತಿಯ ಪ್ರಸಾರ ಸಾಧನವನ್ನು ನೆಲೆಗೊಳಿಸಿದ್ದರೂ ಬೇಗನೇ ಇದನ್ನು ಐದು ಕಿಲೋವಾಟುಗಳಿಗೆ ಏರಿಸಿ, ಪ್ರಸಾರವು ಹೆಚ್ಚು ಶಕ್ತಿಯಿಂದ ಕೂಡುವಂತೆ ನೋಡಲಾಗುವುದು.

ಅಚ್ಚುಕಟ್ಟಾದ ಕಾರ್ಯಕ್ರಮ

ಕಲಾವಿದರಿಗೂ ಸಂದರ್ಶಕರಿಗೂ ಅನುಕೂಲವಾಗುವಂತೆ, ಪುಣೆಯ ರೈಲ್ವೆ ನಿಲ್ದಾಣಕ್ಕೆ ಹತ್ತಿರದಲ್ಲಿಯೇ ಪ್ರಿನ್ಸ್ ಜೇ ಜೇಜಿ ಭ್ಯಾ ರಸ್ತೆಯ ಮುಂದೆ ಇರುವ ಕೇಂದ್ರ ಸರಕಾರೀ ಕಾರ್ಯಾಲಯಗಳ ಕಟ್ಟಡದಲ್ಲಿ ಈ ಆಕಾಶವಾಣಿ ನಿಲಯವನ್ನು ಸ್ಥಾಪಿಸಿರುವರು. ಇಲ್ಲಿಂದ ಕಾರ್ಯಕ್ರಮಗಳನ್ನು ಟೆಲಿಫೋನು ತಂತಿಗಳ ಮೂಲಕ ಸುಮಾರು ಎರಡು ಮೈಲು ದೂರದ ಕೋರೇಗಾಂವ ಪಾರ್ಕಿನಲ್ಲಿರುವ ಪ್ರಸಾರ ಯಂತ್ರಕ್ಕೆ ಒಯ್ದು ಮುಟ್ಟಿಸುವರು. ಇಲ್ಲಿಂದ ಎಲ್ಲ ಕಾರ್ಯಕ್ರಮಗಳೂ ಆಕಾಶ ಸಂಚಾರ ಮಾಡುತ್ತವೆ. ಇದೇ ಸ್ಥಳದಲ್ಲಿ ಮರುಪ್ರಸಾರಕ್ಕೆ ಯೋಗ್ಯವಾದ ಕಾರ್ಯಕ್ರಮಗಳನ್ನು ಗ್ರಹಿಸುವ ಕೇಂದ್ರವೂ ನೆಲೆಗೊಂಡಿದೆ.

ಆಕಾಶವಾಣಿ ಕೇಂದ್ರದಲ್ಲಿ ನಾಲ್ಕು ಕಾರ್ಯಕ್ರಮ ನಿಲಯಗಳೂ ಅವಕ್ಕೆ ಪ್ರತ್ಯೇಕ ನಿಯಂತ್ರಣ ಕೋಣೆಗಳೂ ಇವೆ. ಕಾರ್ಯಕ್ರಮಗಳು ತೀರ ಸ್ವಾಭಾವಿಕವಾಗಿಯೇ ಪ್ರಸಾರಗೊಳ್ಳುವಂತೆ ಮಾಡಲು ಉದ್ದೇಶಿಸಿ, ಅತ್ಯಾಧುನಿಕ ತಾಂತ್ರಿಕ ವ್ಯವಸ್ಥೆಯನ್ನು ಏರ್ಪಡಿಸಿರುವರು. ಭಾಷಣಗಳು, ಸಂಗೀತ, ನಾಟಕ, ಪ್ರಹಸನ ಮುಂತಾದ ವಿವಿಧ ಕಾರ್ಯಕ್ರಮಗಳಿಗೆ ಚೆನ್ನಾಗಿ ಒಪ್ಪುವಂತೆ ನಾಲ್ಕೂ ನಿಲಯಗಳನ್ನು ಅಳವಡಿಸಿರುವರು. ಅಲ್ಲದೆ ಹೊರಗಿನಿಂದ ಯಾವುದೇ ತರದ ಸಪ್ಪಳವು ಈ ನಿಲಯವನ್ನು ಪ್ರವೇಶಿಸಿ, ಕಾರ್ಯಕ್ರಮದ ಅಚ್ಚುಕಟ್ಟನ್ನು ಕೆಡಿಸದಂತೆ ಗೋಡೆ ಹಾಗೂ ಮುಚ್ಚಿಗೆಯನ್ನು ಧ್ವನಿಪ್ರವೇಶ ನಿರ್ಬಂಧ ವ್ಯವಸ್ಥೆಯಿಂದ ಸಜ್ಜುಗೊಳಿಸಿರುವರು. ಕಾರ್ಯಕ್ರಮವನ್ನು ನಿರೀಕ್ಷಿಸುತ್ತಾ ನಿರ್ದೇಶಿಸುತ್ತಾ ನಿರೀಕ್ಷಣಾಧಿಕಾರಿಗೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ನಾಲ್ಕು ನಿಲಯಗಳಲ್ಲಿ ಪ್ರತ್ಯೇಕ ಕೋಣೆಗಳು ಏರ್ಪಟ್ಟಿವೆ.

ನಿಯಂತ್ರಣ ವ್ಯವಸ್ಥೆ

ನಿಯಂತ್ರಣ ಕೋಣೆಯನ್ನು ಆಕಾಶವಾಣಿ ಕೇಂದ್ರದ "ನರ"ವೆನ್ನಬೇಕು. ಪ್ರಸಾರವಾಗುವುದಕ್ಕೆ ಮುಂಚೆ ಕಾರ್ಯಕ್ರಮದ ಅಚ್ಚುಕಟ್ಟು ತಿಳಿಯಲೂ ಕೆಡದಂತೆ ನೋಡಿಕೊಳ್ಳುವ ಹೊಣೆ ಇಲ್ಲಿರುವ ಅಧಿಕಾರಿಗೆ ಸೇರಿದೆ. ಕಾರ್ಯಕ್ರಮದಲ್ಲಿ ಎಲ್ಲಿ ಏನು ತಪ್ಪು ಬಂದರೂ ಅದರ ಮೇಲೆ ಯೋಗ್ಯ ನಿಯಂತ್ರಣವಿಟ್ಟುಕೊಂಡು ಸರಿಪಡಿಸಲು ಅನುಕೂಲವಾಗುವಂತೆ ಅತ್ಯಾಧುನಿಕ ತಾಂತ್ರಿಕ ಸಲಕರಣೆಯನ್ನು ಜೋಡಿಸಿರುವರು. ಆಕಾಶವಾಣಿಯಲ್ಲಿ ಪ್ರತಿಯೊಂದು ನಿಮಿಷವೂ ಅತ್ಯಮೂಲ್ಯವಾದುದರಿಂದ, ಸರಿಯಾದ ಸಮಯ ತೋರಿಸಲು ಯೋಗ್ಯ ಗಡಿಯಾರವನ್ನೂ ಇಲ್ಲಿ ಇಟ್ಟಿರುವರು. ಅಂತರಾಷ್ಟ್ರೀಯ ಸಮಯದ ಮಟ್ಟಕ್ಕೆ ಸರಿಯಾಗಿ ಈ ಕೇಂದ್ರದ ಸಮಯವೂ ಇರುವಂತೆ ಅದನ್ನು ಕ್ರಮವಾಗಿ ಪರಿಶೀಲಿಸಲಾಗುವುದು.

ತುಂಬ ಜನಪ್ರಿಯವಾದ ಕಾರ್ಯಕ್ರಮಗಳನ್ನು ಭವಿಷ್ಯತ್ಕಾಲದಲ್ಲಿ ಪುನಃ ಪ್ರಯೋಜನಕ್ಕೆ ಬರುವಂತೆ ಜೋಪಾನ ಮಾಡಬೇಕಾಗುವುದು. ಇದಕ್ಕೋಸ್ಕರ ವಿದ್ಯುತ್ ಗ್ರಹಣದ ವ್ಯವಸ್ಥೆ ಇದೆ. ಇದಲ್ಲದೆ, ಜನರು ಬಹಳವಾಗಿ ಮೆಚ್ಚಬಹುದಾದ ಜಾತ್ರೆ, ಉತ್ಸವ, ಸಾಮಾಜಿಕ ಸಮಾರಂಭಗಳು ಮುಂತಾದವುಗಳ ವರದಿ ಹಾಗೂ ವಿವರಗಳನ್ನು ಪ್ರಸಾರ ಮಾಡಲು ಮತ್ತು ಮಹತ್ವದ ವ್ಯಕ್ತಿಗಳನ್ನು ಭೇಟಿಯಾಗಿ ಅವರಿಂದ ಸಂದೇಶ ಸಂಗ್ರಹಿಸಲು ಯೋಗ್ಯ ವ್ಯವಸ್ಥೆಯನ್ನು ಈ ಹೊಸ ಕೇಂದ್ರವು ಪಡೆದಿರುತ್ತದೆ.

ಕಲಾವಿದರಿಗೂ ಭಾಷಣಗಾರರಿಗೂ ಏನೂ ತ್ರಾಸವಾಗಬಾರದೆಂದು ಇಲ್ಲಿಯ ನಿಲಯಗಳಲ್ಲಿ ಉತ್ತಮ ಹವಾಮಾನದ ವ್ಯವಸ್ಥೆಯನ್ನು ಮಾಡಿರುವರು. ಹೊರಗಿಂದ ತಂಪಾದ ಗಾಳಿಯು ಈ ನಿಲಯವನ್ನು ಪ್ರವೇಶಿಸುವಾಗ ಅದರಲ್ಲಿ ಹೊರಗಿನ ಧ್ವನಿಯೂ ಸೇರಿಕೊಳ್ಳದಂತೆ ವಿಶೇಷ ತರದ ಏರ್ಪಾಡನ್ನು ಮಾಡಲಾಗಿದೆ. ಉತ್ತಮ ಕಲಾಭಿರುಚಿಯನ್ನು ವ್ಯಕ್ತಗೊಳಿಸುವಂತೆ-ಆದರೆ ಎಂದಿಗೂ ಕಣ್ಣಿನ ದೃಷ್ಟಿಗೆ ಕೇಡು ಮಾಡದಂತೆ-ದೀಪಾಲಂಕಾರವನ್ನು ಸಜ್ಜುಗೊಳಿಸಿರುವರು.

ತಾಂತ್ರಿಕ ಕೌಶಲ್ಯ

ಇಲ್ಲಿಯ ಪ್ರಸಾರ ಸಾಧನ ೨೦೦ ಕಿಲೊ ಸೈಕಲ್ ಅಥವಾ ೩.೭೫ ಮೀಟರುಗಳಲ್ಲಿ ಕಾರ್ಯಕ್ರಮವನ್ನು ಬಿತ್ತರಿಸುತ್ತದೆ. ಆಧುನಿಕ ಆಕಾಶವಾಣಿ ಪ್ರಸಾರದಲ್ಲಿ ಏನೆಲ್ಲ ಅಗತ್ಯವಿದೆಯೆಂದು ಕಂಡು ಬಂದಿದೆಯೋ ಅವುಗಳಲ್ಲಿ ಯಾವುದೇ ನ್ಯೂನತೆ ಇರದಂತೆ ಈ ಪ್ರಸಾರ ಸಾಧನಗಳಲ್ಲಿ ನೋಡಿಕೊಳ್ಳಲಾಗಿದೆ. ಇದರಿಂದ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ಪ್ರಸಾರ ಮಾಡುವಷ್ಟು ತಾಂತ್ರಿಕ ಕೌಶಲ್ಯವನ್ನು ಈ ಸಾಧನ ಪಡೆದಿರುತ್ತದೆ. ಉತ್ತಮ ವೈಶಿಷ್ಟ್ಯಗಳಿಂದ ಕೂಡಿದ ಈ ಪ್ರಸಾರ ಸಾಧನ ಯೋಗ್ಯ ಸೇವೆಯನ್ನು ನೀಡುವ ಭರವಸೆ ನಮಗಿದೆ.

ರಾಷ್ಟ್ರೀಯ ಹಾಗೂ ವೈಶೇಷಿಕ ಮಹತ್ವದಿಂದ ಕೂಡಿದ ಕಾರ್ಯಕ್ರಮಗಳನ್ನು ಬೇರೆ ಪ್ರಸಾರ ನಿಲಯಗಳಿಂದ ಬಿತ್ತರಿಸಿದಾಗ ಅವುಗಳನ್ನು ಗ್ರಹಿಸಿಕೊಂಡು ಮರುಪ್ರಸಾರ ಮಾಡುವುದಕ್ಕೂ ಅತ್ಯುತ್ತಮ ತಾಂತ್ರಿಕ ವ್ಯವಸ್ಥೆಯನ್ನು ಮಾಡಿರುವರು. ಧ್ವನಿ ಗ್ರಹಣದಲ್ಲಿ ಮಾಂದ್ಯ ತಲೆದೋರದಂತೆ ಮಾಡುವುದು ಬಹಳ ಕಷ್ಟದ ಕೆಲಸವಾದರೂ, ಇಲ್ಲಿರುವ ನವೀನ ಮಾದರಿಯ ಯಾಂತ್ರಿಕ ಸಲಕರಣೆ ಇಂಥ ತೊಂದರೆಯನ್ನು ನಿವಾರಿಸಲು ಸಾಮರ್ಥ್ಯ ಪಡೆದಿದೆ. ಇಲ್ಲಿ ಗ್ರಹಣ ಮಾಡಿದ ಕಾರ್ಯಕ್ರಮವನ್ನು ಟೆಲಿಫೋನು ತಂತಿಗಳ ಮೇಲಿಂದ ನಿಯಂತ್ರಣ ಕೋಣೆಗೊಯ್ದು ಅಲ್ಲಿ ಪ್ರಸಾರ ಸಾಧನದ ಮೂಲಕ ಮರಳಿ ಬಿತ್ತರಿಸುವರು.

ಏಳು ತಿಂಗಳುಗಳ ಅವಿರತ ಶ್ರಮ ಮತ್ತು ಯೋಜನಾಬದ್ಧವಾದ ಕಾರ್ಯಕ್ರಮಗಳು ಪುಣೆಯ ಆಕಾಶವಾಣಿ ಕೇಂದ್ರದಲ್ಲಿ ಅತ್ಯಾಧುನಿಕವಾದ ತಾಂತ್ರಿಕ ಹಾಗೂ ವೈಜ್ಞಾನಿಕ ವ್ಯವಸ್ಥೆಯನ್ನು ನೆಲೆಗೊಳಿಸಿವೆ. ಕಲಾವಿದನಿಗೆ ತನ್ನ ಅಮೂಲ್ಯ ಸಂಪತ್ತನ್ನು ವಿತರಿಸಲು ಅನುಕೂಲ ಮಾಡಿಕೊಡುವ ಮತ್ತು ಶ್ರೋತೃಗಳಿಗೆ ಸ್ವಲ್ಪವೂ ಬಾಧೆಯಾಗದಂತೆ ಮನೋರಂಜನೆ ಒದಗಿಸಿ ಕೊಡುವ ಇಂಥ ಪ್ರಸಾರ ಕೇಂದ್ರಗಳು ಇನ್ನೂ ಇನ್ನೂ ಹೆಚ್ಚಿಕೊಳ್ಳಲಿ!

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ನಾಶವಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲಿಸಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

WANTED

District Development Officers on Rs. 250/- Plus Rs. 150 - car allowance. Apply with testimonials to:

Indian Dominion Airways Limited, 6 3. Madan Street, CALCUTTA.

★ ಸಿಹಿ ನೀರು ತಯಾರಿಸುವ ಕಾರಖಾನೆ ★

ಸಮುದ್ರದ ಉಪ್ಪುನೀರನ್ನು ಬಾಷ್ಪೀಕರಿಸುವ ಸಫಲ ಪ್ರಯೋಗ

“ನೋಡಿದಲ್ಲೆಲ್ಲ ನೀರೇ ನೀರು-ಆದರೆ ಕುಡಿಯಲು ಮಾತ್ರ ಅಸಾಧ್ಯ” ಎಂದೊಬ್ಬ ಕವಿ ಸಮುದ್ರದ ನಡುವೆ ಬಾಯಾರಿ ಬೆಂಡಾದವನಿಂದ ಉದ್ಗಾರ ಹೊರಡಿಸಿರುವನು. ಆದರೆ ಮರುಭೂಮಿಯಲ್ಲಿ ನೀರು ಹೀಗೆ ಕಾಣಲೂ ಸಿಗುವುದಿಲ್ಲ ಅಂಥಲ್ಲಿ ಜನ ಸಿಹಿನೀರಿಗೋಸ್ಕರ ಎಷ್ಟು ತ್ರಾಸ ಪಡಬೇಕಾಗುವುದೆಂದರೆ, ಈ ಬಾಳ್ವೆಯ ಎಲ್ಲ ಕಷ್ಟಗಳನ್ನೂ ಜಲಬಾಧೆ ಮೀರಿಸುತ್ತದೆ ಕುವೈತ್ ಎನ್ನುವುದು ಅಂಥದೊಂದು ಮರುಪ್ರದೇಶ-ಆದರೆ ಅಲ್ಲಿ ಈಗ ವಿಜ್ಞಾನದ ಕೈವಾಡ ಅದ್ಭುತ ಚಮತ್ಕಾರವನ್ನು ಮಾಡಿದೆ

ಕೆಲವು ವರ್ಷ ಪೂರ್ವದ ಮಾತು-ಪಾರ್ಶಿ ಕೊಲ್ಲಿಯ ಉತ್ತರದಲ್ಲಿರುವ ಕುವೈತ್ ಎಂಬ ಈ ಸಣ್ಣ ರಾಜ್ಯದಲ್ಲಿ ಮಧ್ಯ ಏಶಿಯಾದಲ್ಲಿಯೇ ಅತ್ಯಂತ ಹೆಚ್ಚು ಪ್ರಮಾಣದಲ್ಲಿ ತೈಲ ನಿಕ್ಷೇಪವಿರುವುದು ಕಂಡು ಬಂತು. ಮರುಭೂಮಿಯಾಗಿದ್ದ ಈ ರಾಜ್ಯದಲ್ಲಿ ತೈಲ ವಿಜ್ಞಾನದ ವಿಶೇಷಜ್ಞರು ಬಂದಿಳಿದರು; ಮತ್ತು ಅವರ ಪರಿಶ್ರಮ ಮತ್ತು ಪ್ರಯತ್ನಗಳಿಗೆ ಅನಾಶೀತ ಫಲವು ದೊರೆಯಿತು. ಇದರಿಂದ ಕುವೈತ ರಾಜ್ಯದ ಶೇಖನು ರಾತ್ರಿ ಬೆಳಗಾಗುವುದರೊಳಗೆ ಕೋಟ್ಯಾಧಿಪತಿಯಾಗಿ ಮೆರೆದನು. ಲೋಕದಲ್ಲಿ ಇಂದು ಈ ಶುಕ್ರಾತ್ಮನ್ನು ಹಣದಲ್ಲಿ ಮೀರಿಸುವ ಇನ್ನೊಬ್ಬನಿಲ್ಲವೆಂದರೆ ಅತಿಶಯೋಕ್ತಿಯಾಗದು.

ಆದರೆ ಈ ಮರುಭೂಮಿಯಲ್ಲಿ ಪ್ರಕೃತಿಯ ವಿಡಂಬನೆಯೂ ನಡೆದಿದೆ- ಎಲ್ಲಿ ನೋಡಿದರಲ್ಲಿ ಎಣ್ಣೆಯ ಗಣಿಗಳೇ ಇಲ್ಲಿ ಕಂಡು ಬರುತಿದ್ದರೂ ಇನ್ನೊಂದು ಅತ್ಯಂತ ಆವಶ್ಯಕವಾದವಸ್ತುವು ಹುಡುಕಿಕೊಂಡು ಹೋದರೂ ಇಲ್ಲಿ ಸಿಗುವುದಿಲ್ಲ. ಅದೆಂದರೆ ಕುಡಿಯಲು ಯೋಗ್ಯವಾದ ಸಿಹಿ ನೀರು! ಮನುಷ್ಯ ಎಣ್ಣೆ ಕುಡಿದು ಬದುಕಲು ಸಾಧ್ಯವೆ? ಅವನು ಮರುಭೂಮಿಯಲ್ಲಿ ಸಿಹಿ ನೀರಿಲ್ಲದೆ ಒಂದು ದಿನವಾದರೂ ಕಳೆಯುವುದು ಅಸಾಧ್ಯ. ಈ ಬಂಜರು ಭೂಮಿಯು ಕೃಷಿಗೆ ಸ್ವಲ್ಪವೂ ಯೋಗ್ಯವಿಲ್ಲ. ಇಲ್ಲಿ ಹಸುರೆಂಬುವೇ ಇಲ್ಲ—ಎಣ್ಣೆಯು ಚಿಮ್ಮುವ ಜಾಗವು ನೆಲವು ಗೋಚರಿಸುವಲ್ಲಿ ಯಾತನೆಯಂಥ ಸಸ್ಯವನ್ನು ಮಾತ್ರ ಹಸುರೆಂದರೆ ಇದೇ ಎಂಬುದಕ್ಕೋಸ್ಕರ ತೋರಿಸಬಹುದು, ಅಷ್ಟೆ!

ಹೀಗೆ ಕುಡಿಯಲು ಬೇಕಾದ ಸಿಹಿ ನೀರು ನೈಸರ್ಗಿಕ ಪ್ರಸಾದದ ರೂಪದಲ್ಲಿ ಈ ರಾಜ್ಯದಲ್ಲಿ ದೊರೆಯದುದರಿಂದ, ಕುವೈತಿನ ಪ್ರಜೆಗಳು ವರ್ಷವೂ ಮತ್ತು ಇರಾಕಿನ ಗಡಿಪ್ರದೇಶದಲ್ಲಿರುವ ಶಟಲ್-ಎಲ್-ಅರಬ ಎಂಬ ನದಿಯ ನೀರನ್ನು ತುಂಬಿಕೊಂಡು ಬರುತಿದ್ದರು. ದೋಣಿಗಳಲ್ಲಿ ದೊಡ್ಡ ದೊಡ್ಡ ಪಾತ್ರೆಗಳಲ್ಲಿ ತುಂಬ ನೀರು ತುಂಬಿ ತಂದು, ಬೇರೆ ಜೀವನೋಪಯೋಗಿ ವಸ್ತುಗಳಂತೆ ನೀರನ್ನು ಟಿನ್ನಿನ ಡಬ್ಬಿಯಲ್ಲಿ ಸಂತೆಗೆ ಕೊಂಡೊಯ್ದು ಮಾರುತಿದ್ದರು. ಗ್ರೀಷ್ಮಋತುವಿನಲ್ಲಿ ಸೀನಾ ಪ್ರದೇಶದ ಆ ಅಮೃತ ಧಾರೆಯ ನದಿ ಒಣಗಿಹೋದಾಗ, ಸಿಹಿನೀರಿನ ಬೆಲೆ ಬಹಳ ಹೆಚ್ಚುತ್ತದೆ; ಆಗ ಅಮೃತ ತುಲ್ಯವಾಗಿ ಸಿಹಿನೀರು ಪರಿಣಮಿಸುವುದು ಸಹಜವೇ ಆಗಿದೆ ಕೆಲವೊಮ್ಮೆ ಜಲಬಾಧೆ ಎಷ್ಟು ಹೆಚ್ಚಿಕೊಳ್ಳುವುದೆಂದರೆ ಜನರು ತಿನ್ನಲು ಅನ್ನವಿಲ್ಲದಿದ್ದರೂ ಬೇಡವೆಂದು ಹೇಳಿದರ ಬದಲು ಕುಡಿಯಲು ನೀರನ್ನು ಕೊಂಡುಕೊಳ್ಳುತಿದ್ದರು.

ತೈಲ ನಿಕ್ಷೇಪವನ್ನು ಕಂಡುಹಿಡಿದ ಕ್ಷಣದಿಂದ ಕುವೈತದ ಆರ್ಥಿಕ ಮುಖದಲ್ಲಿ ಅಭೂತಪೂರ್ವವಾದ ಆಮೂಲಾಗ್ರ ಬದಲಾವಣೆ ಕೈಗೂಡಿತು. ಹೆಚ್ಚಿನ ಕುವೈತೀ ನಿವಾಸಿಗಳು ವಂಶ ಪರಂಪರೆಯಿಂದ ಬಂದ ತಮ್ಮ ವೃತ್ತಿಯನ್ನು ತ್ಯಜಿಸಿ, ಎಣ್ಣೆಯ ಗಣಿಗಳಲ್ಲಿ ನೌಕರಿಯನ್ನು ಹಿಡಿದರು. ಇದರಿಂದ ಅವರ ಸಂಪಾದನೆ ತುಂಬ ಹೆಚ್ಚಿಕೊಂಡಿತು. ನಿಜ ಹೇಳಬೇಕೆಂದರೆ ಕುವೈತದ ಅಭಿವೃದ್ಧಿಯ ಶ್ರೇಯಸ್ಸು ಮತ್ತು ಕೀರ್ತಿ ಅಲ್ಲಿರುವ ಎಣ್ಣೆ ಕಂಪೆನಿಗೇ ಸಲ್ಲಬೇಕು ಅದರಿಂದಾಗಿಯೇ ಭೂಪಟದಲ್ಲಿ ಕುವೈತಿಗೊಂದು ಅದ್ವಿತೀಯ ಸ್ಥಾನ ಪ್ರಾಪ್ತವಾಯಿತು.

ಇದು ದೊಡ್ಡ ಉಪಕಾರವೆನ್ನಬಹುದು; ತೈಲ ನಿಕ್ಷೇಪದ ಲಾಭ ಪಡೆಯುವ ಬೊಕ್ಕಸ ಬೆಳೆಸುವುದರಲ್ಲಿಯೇ ಈ ಕಂಪೆನಿ ಕೃತಾರ್ಥತೆಯನ್ನು ಕಾಣಲಿಲ್ಲ ಅದು ಜನರಿಗೆ ಅತ್ಯಂತ ಉಪಯುಕ್ತವೂ ಅನಿವಾರ್ಯವೂ ಆಗಿದ್ದ ಕುಡಿಯುವ ನೀರನ್ನು ಒದಗಿಸುವ ಪ್ರಯತ್ನವನ್ನು ಶೀಘ್ರದಲ್ಲಿಯೇ ಕೈಗೊಂಡಿತು.

ಈ ಸಮಸ್ಯೆಯ ಪರಿಹಾರಕ್ಕೋಸ್ಕರ ಎಣ್ಣೆ ಕಂಪೆನಿಯು ಸಮಿಪಸಮಿಪದ್ದ ಮೇನಾ ಉಲ್-ಅಹಮದೀ ಎಂಬ ಸ್ಥಾನದಲ್ಲಿ ಉಪ್ಪು ನೀರಿನಿಂದ ಸಿಹಿ ನೀರನ್ನು ತಯಾರು ಮಾಡುವ ಒಂದು ಕಾರ್ಖಾನೆಯನ್ನು ತೆರೆಯಿತು. ಇಲ್ಲಿ ಉಪ್ಪು ನೀರಿನ ಬಾಷ್ಪೀಕರಣದಿಂದ ಪ್ರತಿ ದಿನ ಆರು ಲಕ್ಷ ಗೆಲನು ಸಿಹಿ ನೀರನ್ನು ಉತ್ಪಾದಿಸುವುದಕ್ಕೆ ಪ್ರಯತ್ನಪಟ್ಟರು. ಎಣ್ಣೆ ಕಂಪೆನಿಯ ಕೆಲಸಗಾರರ ನಿತ್ಯದ ಆವಶ್ಯಕತೆಯನ್ನು ಪೂರೈಸುವುದಕ್ಕೆ ಮೂರುವರೆ ಲಕ್ಷ ಗೆಲನು ನೀರು ಯಥೇಷ್ಟವಾಯಿತು. ಉಳಿದ ನೀರಿನ ಉಪಯೋಗವನ್ನು ಕುವೈತಿನ ಪ್ರಜೆಗಳು ಮಾಡಿಕೊಂಡರು. ಇದಕ್ಕೋಸ್ಕರ ಬಲ್ಮೈಲುಉದ್ದದ ದೊಡ್ಡ ಪಂಪುಗಳನ್ನು ಹಾಕಿ ನೀರನ್ನು ಕುವೈತಿಗೆ ಮುಟ್ಟಿಸುವ ವ್ಯವಸ್ಥೆಯನ್ನು ಶೀಘ್ರದಲ್ಲಿಯೇ ಏರ್ಪಡಿಸಿದರು.

ಕುವೈತಿನ ಎಣ್ಣೆ ಕಂಪೆನಿಯು ಚಟುವಟಿಕೆಗಳನ್ನು ವಿಸ್ತರಿಸಿದಂತೆಲ್ಲ – ಇಲ್ಲಿಯ ಜನಸಂಖ್ಯೆಯೂ ವರ್ಷಂಪ್ರತಿ ಹೆಚ್ಚಿಕೊಳ್ಳುತ್ತಿದೆ. ಸಾವಿರಾರು ಅರಬರೂ ಇರಾಕಿನ ನಿವಾಸಿಗಳೂ ಈ ಪ್ರದೇಶದಲ್ಲಿ ಸ್ಥಾಯೀ ರೂಪದಲ್ಲಿ ನೆಲೆಗೊಂಡಿರುವರು. ಇವರೆಲ್ಲರಿಗೆ ಉಳಿದುಕೊಳ್ಳುವುದಕ್ಕೆ ಹೊಸ ಹೊಸ ಮನೆಗಳನ್ನು ಕಟ್ಟಿಸುವ ಕೆಲಸವೂ ನಡೆದಿದೆ. ಹೀಗಿರುವುದರಿಂದ, ಸಿಹಿ ನೀರಿನ ಆಗತ್ಯ ಇನ್ನೂ ಇನ್ನೂ ಹೆಚ್ಚುತ್ತಾ ನಡೆದಿದೆ.

ತನ್ನ ಕಂಪೆನಿಯ ಹಿತ ರಕ್ಷಣೆಗೋಸ್ಕರ ಹಾಗೂ ಕುವೈತಿನ ನಿವಾಸಿಗಳನ್ನು ಸಂತುಷ್ಟರನ್ನಾಗಿ ಮಾಡಲು ಉದ್ದೇಶಿಸಿ ಕುವೈತಿನ ಎಣ್ಣೆ ಕಂಪೆನಿಯು ಕುವೈತಿನ ಶಾಸಕನಾದ ಶೇಖ್ ಅಬ್ದುಲ್ಲಾ-ಉಲ್-ಸಲೀಂ-ಉಲ್-ಸೂಬಾನ ಅಪ್ಪಣೆಯನ್ನು ಪಡೆದುಕೊಂಡು ರಾಜಧಾನಿಯ ಕೇಂದ್ರಯದಲ್ಲಿ ಅತ್ಯಾಧುನಿಕ ಯಂತ್ರಗಳಿಂದ ಸುಸಜ್ಜಿತವಾದ ಜಲಬಾಷ್ಪೀಕರಣ ಮಾಡುವ ಕಾರಖಾನೆಯನ್ನು ತೆರೆದಿದೆ.

ಈಗ ಈ ಕಾರ್ಖಾನೆಯಲ್ಲಿ ಪ್ರತಿದಿನ ಹತ್ತುಲಕ್ಷ ಗೆಲನ್ ಸಿಹಿ ನೀರು ತಯಾರು ಮಾಡಲ್ಪಡುತ್ತದೆ. ಆದರೆ ಆಗತ್ಯ ಕಂಡಲ್ಲಿ

(೧೦ನೇ ಪುಟ ನೋಡಿರಿ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 46/53

1. ತಿಂಮ್ಮ, 2. ಅಂಣಪ್ಪ—ಯಕ್ಕು ಹೆಂಗ್ಸಿನ ಮಕ್ಕಳು, ದೇವಡಿಗರ ಜ್ಯಾತಿ, ಕುಂದಾಪುರ ತಾಲ್ಕು ಕನ್ಯಾನ ಗ್ರಾಮದ ಕೂಡ್ಲಲ್ಲಿರುವವರು. —ಅರ್ಜಿದಾರರು.

1. ಮಂಜ, 2. ಲಿಂಗ-ಗೋಪಿ ಹೆಂಗ್ಸಿನ ಮಕ್ಕಳು, ಕುಂದಾಪುರ ತಾಲ್ಕು ಕನ್ಯಾನ ಗ್ರಾಮದ ಕೂಡ್ಲು. —ಎದ್ರಿಗಳು.

ಸದ್ರಿ ಎದ್ರಿಗೆ ಮತ್ತು ಇತರೆ ಸಮಸ್ತರಿಗೆ ಸಹಾ ಈ ಮೂಲಕ ತಿಳಿಯಪಡಿಸಿದ್ದು.

ಸದ್ರಿ 1ನೇ ಅರ್ಜಿದಾರನ ತಮ್ಮ ವ 2ನೇ ಅರ್ಜಿದಾರನ ಅಂಣ ದೇವಡಿಗ ರಾಮನು ಜ್ವರದ ಕಾಯಿಲೆಯಿಂದ ಕುಂದಾಪುರ ತಾಲ್ಕು ಕೆರಾಡಿ ಗ್ರಾಮದ ದೀಟ ಎಂಬಲ್ಲಿ ತಾ. 1—9—53ರಲ್ಲು ಮೃತಪಟ್ಟಿರುತ್ತಾನೆ. ಸದ್ರಿಯವನು ದಿ ಪ್ರಫ್ಲಿ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸು, ಇದರಲ್ಲಿ ರೂಪ್ಯಾ 1000—0—0ಕ್ಕೆ ನಂಬ್ರ 20163ನೇಗೆ ಜೀವವಿಮಾ ಪೋಲಿಸಿಯನ್ನು ಪಡೆದಿರುತ್ತಾನೆ. ಸದ್ರಿ ಪೋಲಿಸಿ ಬಾಬ್ತು ಅರ್ಜಿದಾರರಿಗೆ ಸಿಗತಕ್ಕ ಅರ್ಜಿಯಲ್ಲಿ ಕಾಣ್ಸಿದ ರೂಪ್ಯಾ 1012—6—0ನ್ನು ಪಡಕೊಳ್ಳುವರೇ ಅರ್ಜಿದಾರರು ತಮ್ಮ ಹೆಸರಲ್ಲಿ ವಾರಿಸು ಸರ್ಟಿಫಿಕೇಟು ಕೊಡಿಸಬೇಕೆಂತ ದಾಕ್ಲು ಮಾಡಿದ ಸದ್ರಿ ಅರ್ಜಿ ತಾ. 16—11—53ಕ್ಕೆ ಇಟ್ಟಿದೆ. ಆ ಕುರಿತು ಆಕ್ಷೇಪವುಳ್ಳವರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Peter.

ಕುಂದಾಪುರ, ತಾ. 6—11—53

ಸೇವಿಂಗ್ಸ್ ಬೇಂಕ್ ಲೆಖ್ಖ ತೆರೆಯುವ ಉಪಯುಕ್ತತೆ

ಬೇಂಕಿನಲ್ಲಿ ಸೇವಿಂಗ್ಸ್ ಲೆಖ್ಖ ತೆರೆಯಲ್ಪಟ್ಟಲ್ಲಿ ನಿಮ್ಮಲ್ಲಿರು ಬ್ಯಾಂಕಿಂಗ್ ಸ್ವಭಾವದ ಅಭ್ಯಾಸಕ್ಕೆ ಆಸ್ಪದವೀಯುವುದಲ್ಲದೆ, ಅನಾಯಾಸವಾಗಿ ನಿಮ್ಮ ತಿಳುವಳಿಕೆಗೆ ಬಾರದೇನೇ ಖರ್ಚಾಗಿಹೋಗುವ ಚಿಕ್ಕ ಐವೇಜುಗಳೆಷ್ಟೋ ಶೇಖರಿಸಲ್ಪಡುವವು. ನಿಮ್ಮ ಬೇಂಕಿನಲ್ಲಿ ಸೇವಿಂಗ್ಸ್ ಖಾತೆಯೊಂದನ್ನು ಪ್ರಾರಂಭಿಸಿ ಕ್ರಮವಾಗಿ ಹಣವನ್ನು ಪಾವತಿ ಮಾಡುತ್ತ ಬಂದಲ್ಲಿ ಅದು ದೊಡ್ಡ ಮೊತ್ತವಾಗಿ ನೀವು ಬೇಕಾಗಿ ಅಪೇಕ್ಷಿಸುವ, ನಿಮ್ಮ ಕುಟುಂಬಕ್ಕೆ ಬೇಕಾದ ಮನೆಮಾಡುಗಳನ್ನು ಕೊಂಡುಕೊಳ್ಳುವುದಾಗಲೀ, ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಲೀ, ಇಲ್ಲವೆ ಇನ್ನಾವುದಾದರೂ ಸದುಪಯೋಗ ಕಾರ್ಯಗಳಿಗಾಗಲಿ ಒದಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯಿರಿ

THE CANARA INDUSTRIAL &
BANKING SYNDICATE LTD.,

Estd: 1925 H. O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10-) ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8) ರೂ. 1000ಕ್ಕೆ

ಪ ಚಲಿತ ಪ್ರೀಮಿಯಮ್ ಪ್ರಕಾರದಂತೆ)

ಜೀವ ವಿಮೆಗಾಗಲೀ, ಪ್ರತಿನಿಧಿತ್ವಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲದಾಯಕವಾಗುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜೆಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲೈಫ್ ಬಿಲ್ಡಿಂಗ್, ಊಟಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಉತ್ಕೃಷ್ಟವಾದ ಮಂಗಳೂರಿನ

ಕೃಷ್ಣಾ ನಶ್ಯವನ್ನೇ

ಉಪಯೋಗಿಸಿರಿ.

ಪ್ರೊಪ್ರೈಟರ್: ಪಿ. ನಾಣಪ್ಪ,
ಮಂಗಳೂರು.

ನವಭಾರತದ ಕನಸುಗಾರ-

ನೂರುವರ್ಷಕ್ಕೂ ಮುಗಿಯದ ಕೆಲಸಗಳನ್ನು



ರಾಜಾಜಿ ಉವಾಚ

ತಮ್ಮನ್ನು ನಾಯಕ ಪೀಠದಿಂದ ಉರುಳಿಸುವ ಪಂಚಿಕೆಯನ್ನು ಪ್ರಸ್ತಾಪಿಸುತ್ತಾ ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಟೆಂಕಾಸಿಯ ಒಂದು ಭಾಷಣದಲ್ಲಿ ಹೀಗೆ ಹೇಳಿದರು- "ನನ್ನ ಧುರೀಣತ್ವಕ್ಕೆ ಯಾವುದೇ ಅಪಾಯವಿಲ್ಲ. ಸಾಮಾನ್ಯವಾಗಿ ರಾಜಕೀಯ ಪಕ್ಷಗಳು ಜನತೆಯ ಬೆಂಬಲದಿಂದ ಹುಟ್ಟಿಕೊಳ್ಳುತ್ತವೆ; ಆದರೆ ಕ್ರಮೇಣ ಈ ಬಲವನ್ನವು ಕಳೆದುಕೊಳ್ಳುತ್ತವೆ, ಕಾಂಗ್ರೆಸೂ ಇದೇ ಸ್ಥಿತಿಯಲ್ಲಿದೆ. ಇದನ್ನು ಹೋಗಲಾಡಿಸಿ, ಕಾಂಗ್ರೆಸು ಸಂಸ್ಥೆಯಲ್ಲಿ ದೌರ್ಬಲ್ಯದ ಬದಲು ಶಕ್ತಿ ಇರಬೇಕೆಂದು ನಾನು ಪ್ರಯತ್ನಿಸುತಿದ್ದೇನೆ. ಆದರೆ ಇದನ್ನು ಕೆಲವು ಕಾಂಗ್ರೆಸಿಗರು ಅರ್ಥಮಾಡಿಕೊಳ್ಳುವುದಿಲ್ಲ" ಧುರೀಣತ್ವ ವಹಿಸಿದವನು ಅಂಧಾನುಕರುಣೆಯನ್ನು ಮಾಡದೆ ಪಕ್ಷದ ಬಲವನ್ನು ಹೆಚ್ಚಿಸುವ ಮತ್ತು ಜನತೆಯ ಶ್ರೇಯಸ್ಸನ್ನುಂಟುಮಾಡುವ ಕೆಲಸಗಳಲ್ಲಿ ಪ್ರವೃತ್ತನಾಗುವುದುಕರ್ತವ್ಯ ಮಂತ್ರಿಮಂಡಳದ ವಿಸ್ತರಣೆಯು ತನಗೆ ಅವಶ್ಯವಾಗಿ ಕಂಡುಬಂತೆಂದೂ ತನ್ನ ವಿಶ್ವಾಸಾರ್ಹರಾದವರಲ್ಲಿ ಆ ಹೊಣೆಗಾರ ಸ್ಥಾನವನ್ನು ಚೆನ್ನಾಗಿ ನಿರ್ವಹಿಸಬಲ್ಲವರನ್ನೆ ಆರಿಸಿದೆನೆಂದೂ ಅವರು ಹೇಳಿದರು. ಮದ್ರಾಸಿಗೆ ಹಿಂತಿರುಗಿದ ಮೇಲೆ ಅವರೊಂದು ಪತ್ರಿಕಾ ಪ್ರಕಟಣೆಯಲ್ಲಿ ಹೀಗೆ ನುಡಿದರು — "ಪ್ರಜಾ ಪ್ರಭುತ್ವದಲ್ಲಿ ಅಧಿಕಾರ ಸ್ಥಾನವನ್ನು ಪಡೆಯುವ ಕೆಟ್ಟ ಹವ್ಯಾಸವಿರುವುದನ್ನು ನಾನು ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ, ಜೀವದಿಂದ ಇರುವ ವರೆಗೆ ಮತ್ತು ಶಕ್ತಿ ತುಂಬಿರುವ ವರೆಗೆ ವಿರೋಧಿಸಿಯೇ ತೀರುವೆನು. ನಮ್ಮ ರಾಜ್ಯಘಟನೆಯಲ್ಲಿ ಇದಕ್ಕೆ ಅವಕಾಶವಿಲ್ಲ. ಈ ಸಮಸ್ಯೆಯನ್ನು ಒಳಹೊಕ್ಕು ವಿಚಾರಿಸಿದಲ್ಲಿ ಈ ಜನರು ಏನು ಬಯಸುತ್ತಾರೆಂಬುದನ್ನು ನಾನು ತಿಳಿದಿದ್ದೇನೆ- ನಾನು ಅಧಿಕಾರ ಸ್ಥಾನಗಳನ್ನೂ ರಿಯಾಯತಿಗಳನ್ನೂ ಹಂಚಬೇಕೆಂದೂ ಅದಲ್ಲದಿದ್ದರೆ ಸ್ಥಳೀಯ ಸರಕಾರೀ ನೌಕರರ ಮೇಲೆ ತಮ್ಮ ವರ್ಚಸ್ಸನ್ನು ಉಪಯೋಗಿಸಲು ಅವಕಾಶ ನೀಡಬೇಕೆಂದೂ ಇವರ ಬಯಕೆ. ಇವೆರಡಕ್ಕೂ ನಾನು ಒಪ್ಪುವಂತಿಲ್ಲ."

ಜಾತೀಯತೆಯ ಖಂಡನೆ

ಈ ಹಂಚಿಕೆಯ ಮೂಲದ ಮೇಲೆ ಬೆಳಕು ಚೆಲ್ಲುತ್ತಾ "ಅಧಿಕಾರಸ್ಥಾನದ ಮೂಲಕ ಲಾಭ ಹೊಂದುವ ಆಸೆಯೊಂದಿಗೆ ದಕ್ಷಿಣ ಭಾರತದಲ್ಲಿ ಜಾತಿ ಪದ್ಧತಿಯೂ ಜನಜೀವನವನ್ನು ಹಾಳುಗೆಡವುತ್ತಿದೆ. ಜಾತಿ ಪದ್ಧತಿಯು ಹೇಳಹೆಸರಿಲ್ಲದಾಗಬೇಕೆಂದು ಪ್ರತಿಜ್ಞೆಯನ್ನು ಸ್ವೀಕರಿಸುವಾಗಲೇ ಜನರು ಜಾತಿಮತಗಳ ಆಧಾರದ ಮೇಲೆ ಪ್ರಾಶಸ್ತ್ಯ ಸೌಕರ್ಯ ಮತ್ತು ಹಕ್ಕುಗಳನ್ನು ಕೇಳುವರು. ನಮ್ಮ ರಾಜ್ಯಘಟನೆಯು ಜಾತೀಯ ತಳಹದಿಯ ಮೇಲೆ ಅಧಿಕಾರ ಹಂಚುವುದನ್ನು ನಿಷೇಧಿಸುತ್ತದೆ. ಜಾತೀಯ, ಉಪಜಾತೀಯ ಇಲ್ಲವೆ ಹೀನವಾದ ವಿಚಾರಗಳಿಂದ ದೂರವಿರುವ ರಾಜಕಾರಣವೇ ಕಾಂಗ್ರೆಸಿಗೆ ಬೇಕು. ಒಂದು ಜಾತಿಗೆ ಪ್ರಾಶಸ್ತ್ಯ ನೀಡುವುದು ತತ್ಕಾಲ ಸರಿ ಕಂಡರೂ ಅದರಿಂದ ಕೊನೆಗೆ ಆಡಳಿತೆ ಕುಸಿದುಬೀಳುವುದು. ರಾಜ್ಯಘಟನೆಯು ಪ್ರತಿಬಂಧಿಸುತಿದ್ದರೂ ಈ ಅನಿಷ್ಟ ಪದ್ಧತಿಯನ್ನು ಮುಂದುವರಿಸಲಿಚ್ಛಿಸುವ ಕಾಂಗ್ರೆಸಿಗರು ದೇಶಕ್ಕೂ ಸಂಸ್ಥೆಗೂ ದ್ರೋಹ ಮಾಡುವರು" —ಎಂದು ರಾಜಾಜಿಯವರು ಪ್ರಕಟಣೆಯಲ್ಲಿ ಸ್ಪಷ್ಟವಾಗಿ ನಿರೂಪಿಸಿರುವರು. ಇದಕ್ಕೆ ಉತ್ತರವಾಗಿ ರಾಜಾಜಿಯ ಮೇಲೆ ದೂರು ಕೊಂಡೊಯ್ದವರ ಧುರೀಣತ್ವ ವಹಿಸಿದ ಶ್ರೀ ವರದರಾಜುಲು ನಾಯ್ಡುರವರೂ ಒಂದು ಪ್ರಕಟಣೆ ಹೊರಡಿಸಿರುವರು. ಅದರಲ್ಲಿ ಮುಖ್ಯಮಂತ್ರಿಗಳ ಮೇಲೆ ಮಾಡಿದ ಆರೋಪಗಳು ನ್ಯಾಯಬದ್ಧವಾದವುಗಳೆಂದೂ ಈ ಆರೋಪವನ್ನು ಹೊರಿಸಿದ ಎಂ. ಎಲ್. ಎ. ಗಳು ಬಹಳ ಹಿಂದಿನಿಂದಲೂ ಕಾಂಗ್ರೆಸದ ನಿಷ್ಠಾವಂತ ಕೆಲಸಗಾರರಾಗಿದ್ದವರೇ ಇರುವರೆಂದೂ ಜಾತೀಯತೆಯನ್ನು ಎತ್ತಿ ತೋರಿಸಿ ರಾಜ್ಯದ ನಿಜವಾದ ಪರಿಸ್ಥಿತಿಯನ್ನು ಮುಚ್ಚಿಟ್ಟು ರಾಜಾಜಿಯವರು ನೆಹರೂರಿಗೆ ನಿಜಸಂಗತಿ ತಿಳಿಯದಂತೆ ಮಾಡಿರುವುದು ಚಾಣಾಕ್ಷ ಬುದ್ಧಿಯೇ ಸರಿಯೆಂದೂ ಹೇಳಿರುವರು. ಆದರೆ ಶ್ರೀ ಸುಬ್ರಹ್ಮಣ್ಯಂ ಹೇಳಿದಂತೆ ನೆಹರೂರಿಗಾಗಲೀ ಕೇಂದ್ರ ಸರಕಾರಕ್ಕಾಗಲೀ ಕಾಂಗ್ರೆಸು ಸಂಸ್ಥೆಗಾಗಲೀ ರಾಜಾಜಿಯ ಮೇಲೆ ಪೂರ್ಣ ಭರವಸೆಇದೆ— ಆದುದರಿಂದ ರಾಜಾಜಿಯ ಮೇಲೆ ಹೊರಿಸಿದ ಆರೋಪಗಳು ಹುರುಳಿಲ್ಲದವುಗಳೆಂದು ತೀರ್ಮಾನಿಸುವುದೇ ಲೇಸು.

ಲಚ್ಚಣ್ಣನವರಿಗೆ ಮಂತ್ರಿತ್ವ

ನೆರೆಯ ಆಂಧ್ರ ರಾಜ್ಯದಲ್ಲಿ ಕೃಷಿಕರ ಲೋಕ ಪಕ್ಷದ ಸಹಕಾರವನ್ನು ಪಡೆದುಕೊಳ್ಳುವುದಕ್ಕೋಸ್ಕರವೆಂಬಂತೆ ಶ್ರೀ ಎನ್. ಜಿ. ರಂಗಾರ ಬಲಗೈ ಬಂಟ ಶ್ರೀ ಲಚ್ಚಣ್ಣನವರನ್ನು ಮಂತ್ರಿಮಂಡಳಕ್ಕೆ ಸೇರಿಸಿಕೊಂಡಿರುವರು. ಇದರಿಂದ ಆಂಧ್ರದಲ್ಲಿರುವ ಪ್ರಕಾಶಮರ ಮಂತ್ರಿಮಂಡಳದ ಸದಸ್ಯರ ಸಂಖ್ಯೆ ಎಂಟಕ್ಕೆಏರಿತು. ಮಂತ್ರಿಮಂಡಳವನ್ನು ಇನ್ನು ವಿಸ್ತರಿಸುವುದಿಲ್ಲವೆಂದು ಉಪಮುಖ್ಯಮಂತ್ರಿ ಶ್ರೀ ಸಂಜೀವರೆಡ್ಡಿಯವರು ಹೇಳಿರುವರು. ಕೃಷಿಕರ ಲೋಕ ಪಕ್ಷವು ಇನ್ನು ಮುಂದೆ ಪ್ರಕಾಶಮರ ಸರಕಾರವನ್ನು ಸಂಪೂರ್ಣವಾಗಿ ಬೆಂಬಲಿಸುವುದರಿಂದ ಸರಕಾರವನ್ನು ನಡೆಸುವಲ್ಲಿ ಯಾವುದೇ ತೊಂದರೆಗಳು ಉಪಸ್ಥಿತವಾಗಲಿಕ್ಕಿಲ್ಲ. ಆಂಧ್ರದಲ್ಲಿ ಹಳ್ಳಿಗಳ ಪುನರುದ್ಧಾರಕ್ಕೆ ಹೆಚ್ಚು ಮನಸ್ಸು ಕೊಡಬೇಕೆಂದು ಮಂತ್ರಿಗಳೊಬ್ಬರು ಹೇಳಿದ್ದಾರೆ ಈಚೆಗೆ ಹನ್ನೆರಡು ದಿನಗಳವರೆಗೆ ಪೂರ್ವ ಮತ್ತು ಪಶ್ಚಿಮ ಗೋದಾವರಿ ಹಾಗೂ ಕೃಷ್ಣಾ ಜಿಲ್ಲೆಗಳಲ್ಲಿ ಆಂಧ್ರದ ಗವರ್ನರ ತ್ರಿವೇದಿಯವರು ಸಂಚರಿಸಿದಾಗ ಪಂಚಾಯತುಗಳ ಕೆಲಸ ಸಮರ್ಪಕವಾಗಿಲ್ಲವೆಂದು ಅಭಿಪ್ರಾಯಪಟ್ಟರು. ಅವು ಸ್ವಾವಲಂಬಿಯಾಗಬೇಕೆಂದೂ ನಾಗರಿಕರಿಗೆ ಅಧಿಕಾಧಿಕ ಸೌಕರ್ಯಗಳನ್ನು ಒದಗಿಸಿಕೊಡಲು ನೋಡಬೇಕೆಂದೂ ತ್ರಿವೇದಿಯವರು ಹಿತ ನುಡಿದರು. ನೆರೆಹಾವಳಿಯಿಂದ ಆಂಧ್ರವು ಸ್ವಲ್ಪಮಟ್ಟಿಗೆ 'ಕಂಗೆಟ್ಟಿದ್ದರೂ ಈ ವರ್ಷದ ಫಸಲು ಚೆನ್ನಾಗಿಯೇ ಕೈಸೇರುವ ನಿರೀಕ್ಷೆ ಇದೆಯೆಂದೂ ಮದ್ರಾಸಿನ ಸಹೋದರರಿಗೆ ಎರಡುಲಕ್ಷಟನ್ನು ಅಕ್ಕಿಯನ್ನು "ಅನ್ನದಾತ" ಎನಿಸಿದ ಆಂಧ್ರ ಪೂರೈಸಬಹುದೆಂದೂ ಸಂಜೀವ ರೆಡ್ಡಿ ಸೂಚಿಸಿರುವರು.

ವಿಶಾಲಾಂಧ್ರಕ್ಕೆ ಪ್ರಯತ್ನ

ಲೋಕಸಭೆಯ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು ಆಂಧ್ರದೇಶದಲ್ಲಿ ಸಂಚಾರ ಮಾಡಿದಾಗ, ವಿಶಾಲಾಂಧ್ರವನ್ನು ನಿರ್ಮಿಸುವುದಕ್ಕೆ ಪ್ರಯತ್ನಗಳು ನಡೆಯಬೇಕೆಂದು ಅಭಿಪ್ರಾಯಪಟ್ಟರು. ಕರ್ನೂಲಿನಲ್ಲಿ ತಾತ್ಕಾಲಿಕ ರಾಜಧಾನಿಯನ್ನು ನಿರ್ಮಿಸಲಾಗಿದೆ; ಅದನ್ನು ಇನ್ನೊಂದೆಡೆಗ ಕೊಂಡೊಯ್ಯುವುದಕ್ಕೆ ಹವಣಿಸುವುದಕ್ಕಿಂತ ಎರಡು— ಮೂರು ವರ್ಷಗಳೊಳಗೆ ಹೈದರಾಬಾದನ್ನು ರಾಜಧಾನಿಯಾಗುಳ್ಳ ವಿ ಶಾ ಲಾಂ ಧ್ರ ಅಸ್ತಿತ್ವಕ್ಕೆ ಬರುವಂತೆ ಪ್ರಯತ್ನಿಸುವುದು ಯೋಗ್ಯವೆಂದವರು ಹೇಳಿದರು. ಪ್ರಕಾಶಮರು ರಾಜಧಾನಿಯ ಪ್ರಶ್ನೆಯನ್ನು ತಾವು ಮಂತ್ರಿಮಂಡಳದ ಮೇಲೆ ವಿಶ್ವಾಸ ಸೂಚಿಸುವಂಥದೆಂದು ತಿಳಿದುಕೊಳ್ಳುವುದಿಲ್ಲವಾಗಿ ಈಗಾಗಲೇ ಹೇಳಿರುವರು. ಹಲವು ಲಕ್ಷ ರೂಪಾಯಿಗಳ ವೆಚ್ಚದಿಂದ ಕರ್ನೂಲನ್ನು ಈಗಾಗಲೇ ರಾಜಧಾನಿಯಾಗಿ ಕಟ್ಟುತ್ತಿದ್ದರೂ ಆಂಧ್ರದ ಕಮ್ಯೂನಿಸ್ಟ ಸದಸ್ಯರು ಈ ಪ್ರಶ್ನೆಯನ್ನು ನವೆಂಬರ ೩೦ನೇ ದಿನಾಂಕ ಸೇರುವ ಶಾಸನ ಸಭಾಧಿವೇಶನದಲ್ಲಿ ಎತ್ತುವರೆಂದು ತಿಳಿದಿದೆ. ಆದರೆ ಲೋಕಸಭೆಯ ನವೆಂಬರದ ಅಧಿವೇಶನದಲ್ಲಿ ಉಚ್ಚಾಧಿಕಾರ ಸಂಪನ್ನ ಆಯೋಗದ ನೇಮಕವಾಗುವುದೆಂದೂ ಭಾಷಾವಾರು ರಾಜ್ಯಗಳ ನಿರ್ಮಾಣ ಪ್ರಶ್ನೆಯನ್ನು ಅದು ಕೂಲಂಕಷವಾಗಿ ವಿವೇಚಿಸಿ ನಿರ್ಣಯಕ್ಕೆ ಬರುವುದೆಂದೂ ಎಲ್ಲರಿಗೂ ತಿಳಿದಿರುವಾಗ- ವಿಶಾಲಾಂಧ್ರದ ಪ್ರಶ್ನೆಯು ಕಡೆಗೆಯೇ ಆಂಧ್ರರ ಗಮನ ಹರಿಯಬೇಕಾದುದು ನ್ಯಾಯ ಈ ಆಯೋಗವು ಭಾಷಾ ರಾಜ್ಯಗಳ ಪ್ರಶ್ನೆಯನ್ನು ಅಖಿಲ ಭಾರತದ ತಳಹದಿಯಲ್ಲಿ ವಿಮರ್ಶಿಸುವುದರಿಂದ ಹೈದರಾಬಾದು ರಾಜ್ಯವನ್ನು ಒಡೆದು ಪುನರ್ಘಟಿಸುವ ಸಂಗತಿಯನ್ನೂ ಅದು ಚರ್ಚಿಸುವುದು ನಿಶ್ಚಯ. ಉತ್ತರದಲ್ಲಿ ಈಗಾಗಲೇ ಪಂಜಾಬಿ ಮಾತನಾಡುವ ಜನರಿಗೋಸ್ಕರ ಪ್ರತ್ಯೇಕ ರಾಜ್ಯ ನಿರ್ಮಾಣಗೊಳ್ಳಬೇಕೆಂದು ಬೇಡಿಕೆ ಬಲವತ್ತರವಾಗಿದೆ. ಪೆಪ್ಸೂದ ಹಿಂದಿನ ಮುಖ್ಯಮಂತ್ರಿ ಸರದಾರ ಜ್ಞಾನಸಿಂಗ ರಾರೇವಾಲಾರು ಗಡಿಯ ಭದ್ರತೆ ಹಾಗೂ ಹಿಂದು ಸೀಕರ ವಿಶ್ವಾಸ ಸಂಪಾದನೆಗೆ ಪಂಜಾಬಿ ಭಾಷಾವಾದಿಗಳ ರಾಜ್ಯ ಅಗತ್ಯವೆಂದಿರುವರು.

"ಜೀವ ಶರದಃ ಶತಂ"

ಉಚ್ಚಮಟ್ಟದ ಆಯೋಗದ ವರದಿಯ ಕುರಿತು ಕ್ರಮ ತೆಗೆದುಕೊಳ್ಳುವುದು ಕೊನೆಯದಾಗಿ ಪಾರ್ಲಿಮೆಂಟಿಗೆಯೇ ಸೇರಿದೆ ಎಂಬ ಅಂಶವನ್ನು ನೆಹರೂರವರು ಪಂ

ಕೆ. ಆರ್. ಕೆ. ಶೇಟ್,

ದಯಮಂಡ್—ಮಾರ್ಟ—ಮಂಗಳೂರು.

ಇವರು

ಮಹಾಜನರಿಗೆ—ತಮ್ಮ ಹಾರ್ದಿಕ ಸುಸ್ವಾಗತವನ್ನು ಈ ಮೂಲಕ ಕೊಡುತ್ತಾರಲ್ಲದೆ ಈ ವರೇಗೂ—ಕೊಟ್ಟ ಇನ್ನುಮುಂದೆಯೂ ಕೊಡುವ ಸಹಾನುಭೂತಿಗೆ ತುಂಬಾ ಕೃತಜ್ಞರಾಗಿರುತ್ತಾರೆ.

ಕೆ. ಕೆ. ಆರ್. ಶೇಟ್.

ಪ್ರೊಪ್ರೈಟರ್.

ವಿವೇಕಿಗಳು............

ತಾವು ಚಿಕ್ಕಂದಿನಲ್ಲಿ ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸುತ್ತ ಕುಳಿತುಕೊಳ್ಳುವುದಿಲ್ಲ. ತಮಗೆ ಬಿಡುವಿದ್ದಾಗ '**ಸುಲಭದಲ್ಲಿ ಇಂಗ್ಲಿಷ್**' ಎಂಬ ಆಂಗ್ಲ ಸ್ವಯಂಬೋಧಿನಿಯ ಸಹಾಯದಿಂದ ಸಾಕಷ್ಟು ಇಂಗ್ಲಿಷ್ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಅಲ್ಪಾವಧಿಯಲ್ಲಿಯೇ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಳ್ಳಬಹುದು. ಬೆಲೆ ರೂ. 1-8-0 ಮಾತ್ರ. ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ ಉಡುಪಿ, ಇವರಿಗೆ ಬರೆಯಿರಿ.

-ನೆಹರೂ ಚಿರಾಯುವಾಗಲಿ!

ಹತ್ತು ವರ್ಷದಲ್ಲಿಯೇ ಪೂರೈಸುವ ಆತುರ

ಜಾಬದ ಶ್ರೀ ಅಜಿತಸಿಂಗರೆಂಬ ಪಾರ್ಲಿಮೆಂಟ್ ಸದಸ್ಯರಿಗೆ ಬರೆದ ಪತ್ರದಲ್ಲಿ ಪ್ರಕಟಪಡಿಸಿರುವರು. ಪಾರ್ಲಿಮೆಂಟು ಭಾಷಾ ರಾಜ್ಯದ ರಚನಾ ತತ್ವವನ್ನು ಮನ್ನಿಸಿರುವುದಕ್ಕೆ ಆಂಧ್ರ ರಾಜ್ಯದ ಅಸ್ತಿತ್ವವೇ ನಿದರ್ಶನ - ಆದುದರಿಂದ ಭಾರತದ ಪುನರ್ಘಟನೆ ಶೀಘ್ರದಲ್ಲಿಯೇ ಆಗುವುದೆಂಬಲ್ಲಿ ಸಂದೇಹ ಅನಗತ್ಯ. ಶ್ರೀ ನೆಹರೂರವರು ಈಚೆಗೆ ಜನರ ಒಲವು ನಿಲುವುಗಳನ್ನು ತಿಳಿದುಕೊಳ್ಳುವುದರಲ್ಲಿ ಹೆಚ್ಚು ಜಾಣ್ಮೆಯನ್ನು ವ್ಯಕ್ತಗೊಳಿಸಿರುವರು. ಭಾಷಾ ರಾಜ್ಯದ ಪ್ರಶ್ನೆಯೂ ಅವುಗಳಲ್ಲಿ ಒಂದು. ಪಂಚವಾರ್ಷಿಕ ಯೋಜನೆಯು ಸರ್ವತಸಮಾನ ಕಾರ್ಯ ಬಿದ್ದಿದ್ದರೂ ಸಹ ಜೀವದ ಜನತೆ ಒಕ್ಕೊರಲಿನಿಂದ ಬೇಡುವ ಈ ರಾಜಕೀಯ ಸುಧಾರಣೆಯ ಕಡೆಗೆ ಅವರು ಮನಸ್ಸುಗೊಟ್ಟುದು ಪ್ರಜಾಪ್ರಭುತ್ವದ ಸಲ್ಲಕ್ಷಣ. ನೆಹರೂಗೆ ಇದೇ ನವೆಂಬರ ೧೪ನೇ ದಿನಕ್ಕೆ ೬೪ ವಯಸ್ಸು ತುಂಬುತ್ತದೆ. ಅವರ ಕೂದಲುಗಳು ಈ ಮೊದಲೇ ಹಣ್ಣಾಗಿವೆ. ಆದರೆ ಅವರ ಧಮನಿಯಲ್ಲಿ ಅಪ್ರತಿಮ ದೇಶವಾತ್ಸಲ್ಯವೂ ಭಾರತವನ್ನು ಸಂಪನ್ನವೃದ್ಧ ಮಾಡಬೇಕೆನ್ನುವ ಉತ್ಕಟೇಚ್ಛೆಯೂ ಹರಿಯುತ್ತದೆ. 'ನಾಯಕ ಪೂಜೆ' ಸರಿಯೋ ತಪ್ಪೋ – ಕೇಳಲು ಬಾರದು. ಆದರೆ ನೆಹರೂ ಜನತೆಯ ಹೃದಯ ಪೀಠದಲ್ಲಿ ಸ್ಥಿರವಾದ, ಉನ್ನತವಾದ, ಭದ್ರವಾದ ಸ್ಥಾನವನ್ನು ಪಡೆದಿರುವರೆಂಬಲ್ಲಿ ಯಾರಿಗೂ ಸಂದೇಹವಿಲ್ಲ. ನೆಹರೂರ ಕೈಯಲ್ಲಿ ಭಾರತದ ರಾಜ್ಯಸೂತ್ರವಿರುವುದರಿಂದಲೇ ನಾವಿಂದು ನಿಶ್ಚಿಂತರಾಗಿದ್ದೇವೆ. "ಜವಾಹರಲಾಲ ನೆಹರೂ ಚಿರಾಯುವಾಗಲಿ!" ಎಂದು ಕೋಟಿ ಕೋಟಿ ಜನತೆ ಹಾರೈಸುತ್ತದೆ.

ಭಾವ ಜೀವಿಯ ಕನಸು

ಪ್ರಧಾನಿ ನೆಹರೂರವರು ಪೂರ್ವ ಪಂಜಾಬ ರಾಜ್ಯದಲ್ಲಿ ಕಳೆದವಾರ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಹೋದೆಡೆಯಲ್ಲೆಲ್ಲ ಜನಸಾಮಾನ್ಯರಿಂದ ಭವ್ಯ ಸ್ವಾಗತವನ್ನು ಪಡೆದರೆಂದು ಪ್ರತ್ಯೇಕ ಹೇಳಬೇಕಾಗಿಲ್ಲ ಅವರು ಚಂಡೀಗಢವನ್ನು ಸಂದರ್ಶಿಸಿ, ೯ ಅಂತಸ್ತುಗಳುಳ್ಳ ಸೆಕ್ರೆಟೇರಿಯಟ್ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿದರು ಈ ಕಟ್ಟಡವು ಅತ್ಯಾಧುನಿಕ ಮಾದರಿಯಲ್ಲಿ ನಿರ್ಮಾಣವಾಗಲಿದ್ದು ೧೩೩ ಲಕ್ಷ ರೂಪಾಯಿಗಳ ವೆಚ್ಚ ಬರುತ್ತದೆ ೮೬೭ ಅಡಿ ಉದ್ದ, ೮೦ ಅಡಿ ಅಗಲ ಮತ್ತು ೧೫೧ ಅಡಿ ಎತ್ತರವುಳ್ಳ ಈ ಭವ್ಯ ಕಟ್ಟಡ ಚಂಡೀಗಢದ ಶೋಭೆಯನ್ನು ಇನ್ನಷ್ಟು ಹೆಚ್ಚಿಸುವುದು ನಿಶ್ಚಯ. ನೆಹರೂರವರು ಇಂಥ ಕಟ್ಟಡಗಳನ್ನು ರಚಿಸುವಾಗ ಸೌಂದರ್ಯವನ್ನು ಕಾಯ್ದುಕೊಳ್ಳುವ ಹಾಗೂ ಅಸಮಾನತೆಯನ್ನು ದೂರೀಕರಿಸುವ ದೃಷ್ಟಿ ಇಟ್ಟುಕೊಳ್ಳುವುದು ಅಗತ್ಯವೆಂದು ನುಡಿದರು ನೆಹರೂರವರು ಭಾಕ್ರಾ–ನಾಂಗಲಯೋಜನಾ ಪ್ರದೇಶವನ್ನೂ ಭೇಟಿಮಾಡಿದರು. ಇಲ್ಲಿ ಕೈಗೂಡಿದ ಪ್ರಗತಿಯು ಭಾವಜೀವಿಯಾದ ನೆಹರೂರ ಮನಸ್ಸನ್ನು ಬಹಳವಾಗಿ ರಂಜಿಸಿತು. ಅಂತೆಯೇ ಅವರ ಬಾಯಿಂದ "ಬೇರೆ ರಾಷ್ಟ್ರಗಳು ಒಂದು ನೂರು ವರ್ಷಗಳಲ್ಲಿ ಮಾಡಿದುದನ್ನು ಹತ್ತೇವರ್ಷಗಳಲ್ಲಿ ನಾವು ಸಾಧಿಸಬೇಕೆಂದು ನನ್ನ ಅಪೇಕ್ಷೆ" ಎಂಬ ಉದ್ಗಾರ ಹೊರಡಿತು.

ಸಾರ್ವಜನಿಕ ಸಹಕಾರ

ಭಾಕ್ರಾ ನಾಂಗಲಯೋಜನೆಯಲ್ಲಿ ಕಾರ್ಯನಿರತರಾದ ಇಂಜಿನಿಯರ ಹಾಗೂ ಬೇರೆ ಅಧಿಕಾರಿಗಳನ್ನು ಉದ್ದೇಶಿಸಿ ನೆಹರೂ ಭಾಷಣ ಮಾಡುತಿದ್ದರು. "ಭಾರತವು ಮಹತ್ವದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸದಿದ್ದರೆ ಅದು ಬಿದ್ದುಹೋಗುವುದರಲ್ಲಿ ಸಂದೇಹವಿಲ್ಲ. ಆದುದರಿಂದ ಕಾರ್ಯ ಸಾಧಿಸುವಲ್ಲಿ ವೇಗಕ್ಕೆ ಬಹಳ ಮಹತ್ವವಿದೆ. ಅವಸರದಿಂದ ಕೆಲಸ ಕೆಟ್ಟು ಹೋಗುವಂತಿರಬಾರದು. ಆದರೂ ಭಾಕ್ರಾ—ನಾಂಗಲ,ದಾಮೋದರ ಕಣಿವೆ ಮುಂತಾದೆಡೆಯ ಅಭಿವೃದ್ಧಿ ಪ್ರಯತ್ನಗಳನ್ನು ನೋಡಿದಾಗ ನಮ್ಮ ಉತ್ಸಾಹ ಉಕ್ಕೇರುತ್ತದೆ. ನವಸೃಷ್ಟಿ ಅಥವಾ ನವನಿರ್ಮಾಣ ಕಾರ್ಯ ಯಾವುದೇ ಇದ್ದರೂ ಅದರಲ್ಲಿ ಉತ್ಸಾಹವೂ ಹೆಮ್ಮೆಯೂ ತುಂಬಿರುತ್ತದೆ.' ಹೀಗೆ ಜನಸಾಮಾನ್ಯರಲ್ಲಿ ಸ್ಫೂರ್ತಿಯನ್ನು ಚಿಮ್ಮಿಸುವ ಭಾಷಣಗಳನ್ನು ನೆಹರೂರವರು ಜಲಂಧರ ಮುಂತಾದ ಬೇರೆ ನಗರಗಳಲ್ಲೂ ಮಾಡಿದರು. ಮುಖ್ಯವಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕರ ಸಹಕಾರ ಹಾಗೂ ಪರಿಶ್ರಮದಿಂದ ದುಡಿದು ಆರ್ಥಿಕ ಸ್ವಾವಲಂಬನವನ್ನು ಗಳಿಸುವ ಅಗತ್ಯವನ್ನು ಕುರಿತು ಅವರು ಜೋರು ಕೊಟ್ಟರು. ನಿರುದ್ಯೋಗತನ ಹಾಗೂ ದಾರಿದ್ರ್ಯದ ಸಮಸ್ಯೆಗಳು ಪರಿಶ್ರಮದಿಂದ ದುಡಿಯುವುದರ ಮೂಲಕವೇ ನಿವಾರಣೆಗೊಳ್ಳುವುವೆಂದು ನೆಹರೂ ಉಪದೇಶಿಸಿದರು.

ವಿದ್ಯಾರ್ಥಿಗಳ ಪುಂಡುತನ

ಜನರು ಸಾಮಾನ್ಯವಾಗಿ ಭವಿಷ್ಯತ್ತನ್ನು ತಿಳಿದುಕೊಳ್ಳುವುದಕ್ಕೋಸ್ಕರ ಜ್ಯೋತಿಷಿಯ ಕಡೆಗೆ ಹೋಗುವರು ಆದರೆ ಭಾರತದ ಭವಿಷ್ಯವು ನಮ್ಮ ಮನೆಯಲ್ಲಿ ಬೆಳೆಯುತ್ತಿರುವ ಮಕ್ಕಳ ಕೈಯಲ್ಲಿದೆ ಎಂದು ನೆಹರೂ ಅಭಿಪ್ರಾಯಪಟ್ಟರು. ಮಕ್ಕಳನ್ನು ಯೋಗ್ಯ ನಾಗರಿಕರನ್ನಾಗಿ ಮಾಡುವುದು ಬಹಳ ದೊಡ್ಡ ಹೊಣೆಗಾರಿಕೆ ಹಾಗೂ ದೇಶಸೇವೆ ಎಂದವರು ಹೇಳಿದರು. ಆದರೆ ಸ್ವತಃ ನಮ್ಮ ತರುಣರು ಏನು ಮಾಡುತ್ತಿದ್ದಾರೆ? ಲಕ್ನೋದಲ್ಲಿ ಕಳೆದ ವಾರ ಪ್ರಕ್ಷುಬ್ಧ ಪರಿಸ್ಥಿತಿಯುಂಟಾಗಿತ್ತು. ವಿದ್ಯೆಯು ಮನುಷ್ಯನ ಪಶು-ಬುದ್ಧಿಯನ್ನು ದೂರಗೊಳಿಸಿ ಅವನನ್ನು ಜ್ಞಾನಿಯನ್ನಾಗಿಯೂ ದೇವತಾಪುರುಷನಾಗಿಯೂ ಮಾಡುವುದೆಂದು ಹೇಳುತ್ತೇವೆ—ಆದರೆ ಲಕ್ನೋ ವಿಶ್ವವಿದ್ಯಾಲಯದಲ್ಲಿ ಶಿಕ್ಷಣಕ್ಕೋಸ್ಕರ ಬಂದ ವಿದ್ಯಾರ್ಥಿಗಳು ತಾವು ಕಟ್ಟಿಕೊಂಡ ಸಂಘದ ಹಕ್ಕುಬಾಧ್ಯತೆಗಳ ಸಂಬಂಧದಲ್ಲಿ ಶಿಕ್ಷಕ ಹಾಗೂ ಅಧಿಕಾರೀ ವರ್ಗದವರೊಡನೆ ಮನಃಕ್ಲೇಶ ಬೆಳೆಸಿಕೊಂಡರು. ಮಾತ್ರವಲ್ಲದೆ ಪುಂಡಾಟಿಕೆಯನ್ನು ನಡೆಸಿದರು. ಇದನ್ನು ತಡೆಗಟ್ಟಲು ಪೋಲೀಸರು ಗುಂಡು ಹಾರಿಸಬೇಕಾಯಿತು; ಮತ್ತು ಶಾಂತಿ ರಕ್ಷಣೆಗೋಸ್ಕರ ಕರ್ಫ್ಯೂ ಆಜ್ಞೆಯನ್ನು ಜಾರಿಮಾಡಬೇಕಾಯಿತು. ವಿದ್ಯಾರ್ಥಿಗಳ ಪುಂಡುತನವನ್ನು ನೆಹರೂರವರು ಖಾಟಿಣಾದ ತಮ್ಮ ಭಾಷಣದಲ್ಲಿ ಖಂಡತುಂಡವಾಗಿ ಖಂಡಿಸಿದರಲ್ಲದೆ, ಹೀಗೆ ಹಿಂಸಾಚಾರಕ್ಕಿಳಿಯುವುದರಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ವೃಂದ ತೃಪ್ತಿಹೊಂದುವುದಾದರೆ–ಎಲ್ಲ ಶೈಕ್ಷಣಿಕ ಕೇಂದ್ರಗಳನ್ನು ಭಾರತದಲ್ಲಿ ಮುಚ್ಚಿದ ಚಿಂತೆಯಿಲ್ಲವೆಂದು ಗರ್ಜಿಸಿದರು. ಈಗ ಲಕ್ನೋದಲ್ಲಿ ಪರಿಸ್ಥಿತಿಯು ಹಿಡಿತದಲ್ಲಿದೆ ಆದರೆ ಶಿಕ್ಷಕ ವೃಂದದೊಡನೆ ಸಹಕರಿಸಿ ಅವರನ್ನು ಆದರಿಸಿ ನಡೆದುಕೊಳ್ಳುವ ಭಾವವನ್ನು ತ್ಯಜಿಸಿದ ಈ ಯುವ ಜನಾಂಗದ ಮೇಲೆಯೇ ನಾಳಿನ ಭಾರತದ ಹೊಣೆ ಬೀಳುವುದನ್ನು ಕಂಡು ಮನಃ ತಲೆದೋರುವುದು. ವಿದ್ಯಾರ್ಥಿಗಳು ಎಂದಿಗೂ ಅಕ್ರಮ ಕೃತ್ಯಗಳಲ್ಲಿ ಪ್ರವೃತ್ತರಾಗಕೂಡದು.

ಹೊಸ ಯೋಜನೆಗಳು

ನಾಗರಿಕತೆ ಹಿಂಸಾಚಾರವನ್ನು ಪುರಸ್ಕರಿಸುವುದಿಲ್ಲ. ದೈಹಿಕ ಹಿಂಸೆಯಲ್ಲಿ, ಮಾನಸಿಕ ಹಿಂಸೆಯೂ ಅಗಬಾರದೆಂಬುದಕ್ಕಾಗಿಯೇ ನ್ಯಾಯ ಮತ್ತು ಧರ್ಮದ ಕಟ್ಟುಕಟ್ಟಳೆಗಳಿರುತ್ತವೆ. ಗೃಹಮಂತ್ರಿ ಕಟ್ಜೂರವರು ವಿದ್ಯಾರ್ಥಿಗಳು ಕಮ್ಯೂನಿಸ್ಟ ಪದ್ಧತಿಯತ್ತ ಆಕರ್ಷಿಸಲ್ಪಡುವವರಂತೆ ವರ್ತಿಸುವುದಕ್ಕೆ ಖೇದ ವ್ಯಕ್ತಗೊಳಿಸಿರುವುದನ್ನು ಗಮನಿಸುವುದವಶ್ಯ. ನಾಗರಿಕತೆ ಇರಬಾರದೆಂಬುದೇ ನಮ್ಮ ಇಚ್ಛೆಯಾದರೆ ನ್ಯಾಯಾಲಯ ಹಾಗೂ ವಕೀಲರೇ ಮುಂತಾದ ಅದರ ಅಂಗಗಳು ಅನಗತ್ಯವಾಗಿ ಗೋಚರಿಸಬಹುದೆಂದು ರಾಜಾಜಿ ಹೇಳಿರುವುದೂ ಅರ್ಥವತ್ತಾಗಿರುತ್ತದೆ. ಆದರೆ ನಮ್ಮ ಪ್ರಾಮಾಣಿಕ ಇಚ್ಛೆ ಭವ್ಯ ಭಾರತವನ್ನು ನಿರ್ಮಿಸುವುದೇ ಆಗಿರುತ್ತದೆ – ಪಂಚವಾರ್ಷಿಕ ಯೋಜನೆಯನ್ನು ಈ ಉದ್ದೇಶದಿಂದಲೇ ಕಾರ್ಯಗತಗೊಳಿಸಲಾಗುತ್ತಿದೆ. ಅಗತ್ಯ ಕಂಡಲ್ಲೆಲ್ಲ ಅದರಲ್ಲಿ ಬದಲಾವಣೆಯನ್ನುಂಟು ಮಾಡುವುದಕ್ಕೂ ಯೋಜನಾ ಆಯೋಗ ಹಿಂದುಳಿದಿಲ್ಲ. ಹೀಗೆ ಮದ್ರಾಸ ರಾಜ್ಯದಲ್ಲಿ ಹೊಸತಾಗಿ ಎರಡು ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ಮಧುರಾ ಜಿಲ್ಲೆಯಲ್ಲಿ ವೈಗೈ ಹಾಗೂ ಕೊಯಂಬತ್ತೂರು ಜಿಲ್ಲೆಯಲ್ಲಿ ಅಮರಾವತಿ ಇವೇ ಆ ಎರಡು ನದೀ ಯೋಜನೆಗಳು. ಇವುಗಳಿಗೆ ಕ್ರಮವಾಗಿ ೩೫೦ ಮತ್ತು ೨೭೦ ಲಕ್ಷ ರೂಪಾಯಿಗಳ ವೆಚ್ಚ ಬರುತ್ತದೆ. ಭಾಕ್ರಾ-ನಾಂಗಲ ಯೋಜನೆಯಷ್ಟು ಈ ಅಭಿವೃದ್ಧಿ ಪ್ರಯತ್ನಗಳು ಲಾಭ ತರುವುದಿಲ್ಲ. ಆದ ಕಾರಣ ಸರಕಾರವು ಒಂದು ಎಕರೆಗೆ ೭೦೦ ರೂಪಾಯಿಗಳ ವರೆಗೆ ಅಭಿವೃದ್ಧಿ ತೆರಿಗೆಯನ್ನು ಹೇರಲು ನಿರ್ಧರಿಸಿದೆ. ರೈತರು ಇದನ್ನು ೨೦ ಕಂತುಗಳಲ್ಲಿ ಪಾವತಿ ಮಾಡಬೇಕಾಗುವುದು. ಮೊದಲನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೇ ಇವು ಪೂರ್ಣವಾಗುವಂತಿಲ್ಲ—ಆದರೂ ಇವುಗಳ ಕಾರ್ಯ ಪೂರ್ಣಗೊಂಡಾಗ ನಾವಿಂದು ಎಕ್ರೆ ಜಮೀನು ನೀರುಂಡು ಸಮೃದ್ಧಗೊಳ್ಳುತ್ತದೆ. ಭಾರತೀಯರು ಈಗ ಇಂಥ ರಚನಾತ್ಮಕ ಕಾರ್ಯಗಳಲ್ಲಿಯೇ ಆಸ್ಥೆ ವಹಿಸಬೇಕು; ಹೊರತು ಪುಂಡುಪೋಕರತನ ಸಲ್ಲದು.

ಜುಪಿಟರ್ ಜನರಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ.

ಸ್ಥಾಪನೆ: 1919

ಒಟ್ಟು ನಿಧಿ	ರೂ.	33615973
1952ರ ಹೊಸ ಬಿಸಿನೆಸ್ಸು	,,	10640350
1952ರ ಅೄನ್ ಲಾಭ	,,	655010

ಮೈಸೂರು ಸ್ಟೇಟಿನ ಶಿವಮೊಗ್ಗಾ, ಹಾಸನ, ಕಡೂರು ಜಿಲ್ಲೆಗಳು, ಕೊಡಗು ಸ್ಟೇಟ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉತ್ತಮ ಪ್ರತಿನಿಧಿಗಳು ಬೇಕಾಗಿದ್ದಾರೆ.

ಯಸ್. ಎ. ಹೆಗ್ಡೆ,
ಏಜನ್ಸಿ ಸುಪರಿಂಟೆಂಡೆಂಟ್,
ಜುಪಿಟರ್ ಜನರಲ್, ಇನ್ಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಶಿರ್ವ, ದ. ಕ.

ಪ್ರಕಟಣೆ

ಚಿತ್ತೂರು ಗ್ರಾಮದ ನೂರಪ್ಪ ಸೆಟ್ರ ಆಳಿಯ ಶ್ರೀ ಮಾರಣಕಟ್ಟೆ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಟ್ರಸ್ಟೀ ಚಿತ್ತೂರು ವೀರಣ್ಣ ಸೆಟ್ರಿಗೆ ಕುಂದಾಪುರ ತಾಲೂಕು ಚಿತ್ತೂರು ಗ್ರಾಮದಲ್ಲಿರುವ ಮುದ್ದಾರಿ ನಾರಾಯಣ ನಾಯ್ಕನ ಮಗ ಬಿ. ವೀರಭದ್ರ ನಾಯ್ಕನು ಜಾಹೀರು ಮಾಡಿಕೊಂಡದ್ದು. ಶ್ರೀ ಮಾರಣಕಟ್ಟೆ ಬ್ರಹ್ಮಲಿಂಗೇಶ್ವರ ದೇವಸ್ಥಾನದ ಮೇಳವನ್ನು ಈ ಸಾಲಿಯಲ್ಲಿ ನಡೆಸಿಕೊಂಡು ಹೋಗಲು ಉಮೇದ್ವಾರರಾಗಿರುವವರು ತಾ. 25–10–53 ರಲ್ಲು ದರ್ಖಾಸ್ತಿಗೆ ನೀವು ಕುಂದಾಪುರದಲ್ಲಿ ಇಟ್ಟ ದಿನ್ನ ನಾನು ಹಾಜರಿರುವುದಾದರೂ ಕಾರಣಾಂತರದಿಂದ ಆ ದಿನ್ನ ನನಗೆ ದರ್ಖಾಸ್ತಿಗೆ ನಿಲ್ಲಲು ಅವಕಾಶ ಸಿಕ್ಕಲಿಲ್ಲ. ಆದುದರಿಂದ ಸದ್ರಿ ಮೇಳವನ್ನು ಈ ಸಾಲಿಯಲ್ಲಿ ನಡೆಸಿಕೊಂಡು ಹೋಗಲು ನಾನು ಪುನಃ ಉಮೇದ್ವಾರನಾಗಿರುತ್ತೇನೆ. ಸದ್ರಿ ಮೇಳ ನಡೆಸಿಕೊಂಡು ಹೋಗಲು, ಬವುಳಿ, ಜವಿ, ಗಜ್ಜೆ ಇತ್ಯಾದಿಗಳ ಬಗ್ಗೆ ಶ್ರೀ ದೇವಸ್ಥಾನದಿಂದ ರೂಪಾಯಿ 1225—0—0ನ್ನು ನನಗೆ ನೀವು ಕೊಟ್ಟಲ್ಲಿ ನಾನು ನಿಮ್ಮ ಅನುಮತಿಯಿಂದ ಮೇಳ ನಡೆಸಿಕೊಂಡು ಹೋಗಲಿಕ್ಕೆ ಬದ್ಧನಾಗಿದ್ದೇನೆಂತಲೂ, ತಕ್ಕ ಕಂಟ್ರಾಕ್ಟು ಬರೆಕೊಟ್ಟು ಮೇಳ ನಡಿಸುತ್ತೇನೆಂತ ಈ ಮೂಲಕ ಜಾಹೀರು ಮಾಡಿಕೊಂಡಿರುತ್ತೇನೆ.

ಬಿ. ವೀರಭದ್ರ ನ್ಯಾಕನ ರುಜು,

9—11—1953

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATION LTD.,

Estd: 1906] [H. O: UDIPI (S. India.)

ಕೋರ್ಟಿನ ಮುಂದೆ ಮುಸಾದಿಕರ ವಿಚಾರಣೆ

ಎಣ್ಣೆ ರಾಷ್ಟ್ರೀಕರಿಸಿದ ಮಾಜಿ ಪ್ರಧಾನಿಯ ಕಣ್ಣೀರು

ಇರಾಣದಲ್ಲಿ ಎಣ್ಣೆ ಕಂಪೆನಿಗಳನ್ನು ರಾಷ್ಟ್ರೀಕರಿಸುವಷ್ಟರ ಮಟ್ಟಿನ ಎದೆಗಾರಿಕೆಯನ್ನು ತೋರಿಸಿದ ಮಾಜಿ ಪ್ರಧಾನಿ ಡಾ. ಮುಸಾದಿಕರು ಇಂದು ದಂಡಿನ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಯಾಗಿರುವುದು ಪರಿಸ್ಥಿತಿ ವಿಪರ್ಯಾಸಗೊಳ್ಳುತ್ತಾ ಹೇಗೆ ಸಾಗುವುದೆಂಬುದಕ್ಕೆ ಉತ್ತಮ ನಿದರ್ಶನ. ಇರಾಣದ ಶಹಾರೂ ಮುಸಾದಿಕರ ಪ್ರಾಬಲ್ಯ ಮತ್ತು ಅವರಿಗಿರುವ ಜನತಾ ಬೆಂಬಲವನ್ನು ಕಂಡು ಇದೇ ಆಗೋಸ್ಟು ತಿಂಗಳಲ್ಲಿ ಪಲಾಯನ ಸೂತ್ರವನ್ನು ಹಿಡಿದಿದ್ದರು. ಆದರೆ ಮುಸಾದಿಕರ ದೈವಬಲ ಚೆನ್ನಾಗಿಲ್ಲದೆ ಹೋಗಿ ಅವರು ಜನರಲ್ ಜಹೇದಿಯವರ ಸರಕಾರದ ಬಂದಿಗಳಾಗಬೇಕಾಯಿತು. ಮುಸಾದಿಕರ ಮೇಲೆ ಶಹಾರ ಆಜ್ಞೆಯನ್ನು ಉಲ್ಲಂಘಿಸಿ ಪ್ರಧಾನಿ ಪಟ್ಟದಲ್ಲಿ ಉಳಿದ, ಶಹಾರ ವಿರುದ್ಧ ಸಶಸ್ತ್ರ ಕ್ರಾಂತಿ ನಡೆಸಿದ ಮುಂತಾದ ಆರೋಪಗಳಿರುತ್ತವೆ. ಇಷ್ಟು ಸಮಯ ಜೈಲಿನಲ್ಲಿದ್ದುಕೊಂಡು ಮುಸಾದಿಕರು ಸ್ವರಕ್ಷಣೆಗೋಸ್ಕರ ತಮ್ಮ ಪಕ್ಷವನ್ನು ಸಿದ್ಧಪಡಿಸುತ್ತಿದ್ದರು. ಹಿಂದೊಮ್ಮೆ ಇರಾಣದ ಇದೇ ವೀರನು ಆಂಗ್ಲೋ ಇರಾಣಿಯನ್ ಎಣ್ಣೆ ತಂಟೆಯಲ್ಲಿ ವಿಶ್ವನ್ಯಾಯಾಲಯಕ್ಕೆ ಕೈಹಾಕುವ ಅಧಿಕಾರವಿಲ್ಲೆಂದು ಇರಾಣದ ನಿಲುಮೆಯನ್ನು ಸಮರ್ಥವಾಗಿ ಮಂಡಿಸಿ ವಿಜಯಗಳಿಸಿದ ನೆನಪು ಈ ಸಮಯ ಸ್ವಾಭಾವಿಕವಾಗಿಯೇ ಬರುತ್ತದೆ. ಆದರೆ ಸ್ವತಃ ಮುಸಾದಿಕರೇ ಹೇಳಿದಂತೆ, ಜಹೇದಿಯವರ ದಂಡಿನ ನ್ಯಾಯಾಲಯವು ಮುಸಾದಿಕರನ್ನು ಗಲ್ಲಿಗೆ ಕೊಡಲು ಇಚ್ಛಿಸುತ್ತದೆ. ಮುಸಾದಿಕರ ಬೆಂಬಲಿಗರನ್ನೆಲ್ಲ ಕಮ್ಯೂನಿಸ್ಟ ವಿದ್ರೋಹಿಗಳೆಂದು ಘೋಷಿಸಿ, ಅವರ ಚಟುವಟಿಕೆಗಳನ್ನು ಅಲ್ಲಲ್ಲಿಯೇ ಹತ್ತಿಕ್ಕಲು ಜಹೇದಿಯವರ ಸರಕಾರ ಹವಣಿಸಿರುತ್ತದೆ. ಎಪ್ಪತ್ತೆರಡು ವರ್ಷ ವಯಸ್ಸಿನ ಹಣ್ಣು ಹಣ್ಣು ಮುದುಕ ಮುಸಾದಿಕರು ಕೋರ್ಟಿನ ಮುಂದೆ ಕಣ್ಣೀರು ಕರೆಯುತ್ತಾ "ಈಗಲೂ ನಾನು ನ್ಯಾಯಬದ್ಧವಾಗಿ ಪ್ರಧಾನಿಯಾಗಿರುತ್ತೇನೆ; ಮತ್ತು ಈ ನ್ಯಾಯಾಲಯಕ್ಕೆ ನನ್ನನ್ನು ವಿಚಾರಿಸುವ ಅಧಿಕಾರವಿಲ್ಲ ಎಂದು ವಾದಿಸಿದರು. ಅಲ್ಲದೆ "ನನ್ನ ಕೊರಳು ಕೊಯಿದರೂ ಈ ನ್ಯಾಯಾಲಯದ ಮುಂದೆ ವಿಚಾರಣೆಗೋಸ್ಕರ ನಾನು ಮರಳಿ ಬರುವುದಿಲ್ಲ" ಎಂದರು. ಇಂಥ ಪರಿಸ್ಥಿತಿಯಲ್ಲಿ ಮುಸಾದಿಕರು ಆತ್ಮಹತ್ಯೆಗೋಸ್ಕರ ಪ್ರಯತ್ನಿಸಿದರೂ ಆಶ್ಚರ್ಯವಿಲ್ಲವೆಂದು ವಾರ್ತೆಗಳು ಸೂಚಿಸುತ್ತವೆ.

ಬ್ರಿಟನ್ನಿನ ಸ್ನೇಹ ಹಸ್ತ

ಜನರಲ್ ಜಹೇದಿಯವರು ಇರಾಣದ ಪ್ರಧಾನಿಯಾದ ಬಳಿಕ ಅಲ್ಲಿಯ ಪರಿಸ್ಥಿತಿ ಸುಧಾರಿಸದಿದ್ದರೂ ಬ್ರಿಟನಿಗೆ ಅನುಕೂಲವಾಗಿ ಕೆಲವು ಸೌಕರ್ಯಗಳು ದೊರೆತಿವೆ. ಮುಸಾದಿಕರು ಕಡಿದುಕೊಂಡ ರಾಯಭಾರಿ ಸಂಬಂಧವನ್ನು ಮರಳಿ ತೊಡಗಲು ಜನರಲ್ ಜಹೇದಿಯವರು ಸಮ್ಮತಿ ವ್ಯಕ್ತಗೊಳಿಸಿರುವರು. ಹಾಗೆಯೇ ಆಂಗ್ಲೋ ಇರಾಣಿಯನ್ ಎಣ್ಣೆ ತಂಟೆಯನ್ನು ಯೋಗ್ಯ ರೀತಿಯಲ್ಲಿ ತೀರ್ಮಾನಿಸುವ ವಚನವನ್ನೂ ಅವರಿಗಿದೆ. ಸ್ವತಃ ಬ್ರಿಟನಿಗೆ ಇರಾಣದೊಡನೆ ವೈಷಮ್ಯ ಕಟ್ಟಿಕೊಂಡು ಅಲ್ಲಿ ದೊರೆಯುವ ಅತ್ಯಮೂಲ್ಯವಾದ ಎಣ್ಣೆಯ ಉಪಯೋಗದಿಂದ ವಂಚಿತವಾಗುವುದು ಬೇಕಾಗಿಲ್ಲ. ಇರಾಣದಲ್ಲಿ ಡಾ. ಮುಸಾದಿಕರು ರಾಷ್ಟ್ರೀಕರಣದಂಥ ಮಹತ್ವದ ಹೆಜ್ಜೆ ಇಟ್ಟಾಗ ಮಧ್ಯ ಏಶಿಯಾದಲ್ಲಿ ಎಣ್ಣೆಗನಿಗಳಿರುವ ಬೇರೆ ರಾಷ್ಟ್ರಗಳೂ ಅವರ ಮಾದರಿಯನ್ನು ಅನುಸರಿಸಬಹುದೆಂಬ ಅಂಜಿಕೆ ಇದ್ದಿತು. ರಾಷ್ಟ್ರೀಕರಣವಲ್ಲದಿದ್ದರೂ—ಸೌದಿ ಆರೇಬಿಯಾ, ಇರಾಕ, ಕುವೈತ ಮುಂತಾದ ಪ್ರದೇಶಗಳಲ್ಲಿ ಎಣ್ಣೆ ಗನಿಗಳಲ್ಲಿ ಕೆಲವು ಬಿಕ್ಕಟ್ಟುಗಳು ಉದ್ಭೂತವಾಗಿರುತ್ತವೆ. ಅವುಗಳನ್ನು ಹೋಗಲಾಡಿಸುವ ಆಂಗ್ಲೋ-ಅಮೇರಿಕನ್ನರ ಪ್ರಯತ್ನ ಸಫಲಗೊಂಡರೂ ಇರಾಣದ ಗೊಡವೆಯೇ ಬೇಡವೆನ್ನುವ ಪರಿಸ್ಥಿತಿ ಇರುವುದಿಲ್ಲ. ಮುಸಾದಿಕರಂತೆ ಜನರಲ್ ಜಹೇದಿಯವರು ನೆರೆಯ ರಶಿಯಾದೊಡನೆ ಇರಾಣವು ವ್ಯವಹಾರವನ್ನು ತೊಡಗಬಹುದೆಂಬ ಅಂಜಿಕೆ ಬ್ರಿಟನಿಗಿಲ್ಲವೇನೋ ನಿಜ—ಹಾಗೆಂದು ಈ ಯುಗದಲ್ಲಿ ಎಣ್ಣೆಯೇ ಮಿಲಿಟರಿ ಶಕ್ತಿಯಾಗಿರುವುದರಿಂದ ಹಾಗೂ ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಎಣ್ಣೆ ಕಂಪೆನಿಗಳಿಗೋಸ್ಕರ ಬ್ರಿಟನು ಪೂರೈಸಿರುವುದರಿಂದ ಆಂಗ್ಲರು ಮರಳಿ ಸ್ನೇಹದ ಕೈಚಾಚುತ್ತಾ ಮುಂಬಂದಿರುವರು.

ಜರ್ಮನಿಯ ಪ್ರಶ್ನೆ

ಆಂಗ್ಲೋ ಅಮೇರಿಕನ್ನ ರಾಷ್ಟ್ರಗಳು ರಶಿಯಾದ ಕಡೆಗೂ ಇದೇ ರೀತಿ ಸ್ನೇಹ ಹಸ್ತವನ್ನು ಮುನ್ನೀಡಿದ್ದರು. ಜರ್ಮನಿ ಹಾಗೂ ಆಸ್ಟ್ರಿಯದ ಸಮಸ್ಯೆಗಳನ್ನು ಚರ್ಚಿಸಲು ಲುಗಾನೋದಲ್ಲಿ ಚತುರಾಷ್ಟ್ರಗಳ ಪರಿಷತ್ತು ನೆರೆಯಬೇಕೆಂದು ರಶಿಯಾವಿಗೆ ಕೊಟ್ಟ ಸೂಚನೆ ಈಗ ತಿರಸ್ಕೃತವಾಗಿರುತ್ತದೆ. ಜರ್ಮನಿಯ ಪ್ರಶ್ನೆಯನ್ನು ವಿಚಾರಿಸುವುದಕ್ಕೆ ಮುಂಚೆ, ಯುರೋಪಿಯನ್ ಸೈನ್ಯ ಅಥವಾ ಉತ್ತರ ಅಟ್ಲಾಂಟಿಕ ಒ

ನವಯುಗ

ಉಡುಪಿ, ಗುರುವಾರ ೧೨-೧೧-'೫೩

ಇಸ್ಲಾಂ ಪ್ರಜಾರಾಜ್ಯ

ನೆರೆ ರಾಷ್ಟ್ರವಾದ ಪಾಕಿಸ್ತಾನವು ರಾಜ್ಯಾಂಗ ಘಟನೆಯನ್ನು ತಯಾರಿಸುವುದರಲ್ಲಿ ಈಗ ಮಗ್ನವಾಗಿರುತ್ತದೆ. ಆದರೆ ಅದರ ಇದುವರೆಗಿನ ಚಟುವಟಿಕೆಗಳನ್ನು ನೋಡಿದರೆ, ಪಾಕಿಸ್ತಾನದಲ್ಲಿರುವ ಅಲ್ಪಸಂಖ್ಯಾಕರಿಗೆ ಯಾವುದೇ ತರದ ಸಂರಕ್ಷಣೆ ಅಥವಾ ಆಶ್ವಾಸನೆ ದೊರೆತಿರುವುದಿಲ್ಲವೆಂದು ಹೇಳಬೇಕಾಗುವುದು. ಅಲ್ಪಸಂಖ್ಯಾಕರಿಗೋಸ್ಕರ ವಿಶೇಷರಿಯಾಯತಿಗಳನ್ನು ತೋರಿಸುವ ಅಗತ್ಯವಿಲ್ಲ ನಿಜ. ಆದರೆ, ಸಮಾನಾಧಿಕಾರವನ್ನೂ ಸಮಾನಾವಕಾಶವನ್ನೂ ಕೊಟ್ಟು, ಅವರ ನಾಗರಿಕ ಹಕ್ಕುಬಾಧ್ಯತೆಗಳನ್ನು ಮನ್ನಿಸುವುದಕ್ಕೆ ಪಾಕಿಸ್ತಾನವು ಸಿದ್ಧವಿಲ್ಲದಿದ್ದರೆ, ಅದು ತೀರ ಶೋಚನೀಯವಾಗುವುದು. ಸದ್ಯ ತಿಳಿದು ಬಂದಂತೆ ಪಾಕಿಸ್ತಾನವು ಇಸ್ಲಾಮ ಪ್ರಜಾರಾಜ್ಯವಾಗುತ್ತದೆ; ಮತ್ತು ಈ ಪ್ರಜಾರಾಜ್ಯದ ಮುಖ್ಯಸ್ಥನಾಗಿ ಮುಸ್ಲಿಮನೇ ಇರುವನು. ಮಾತ್ರವಲ್ಲ ಪಾಕಿಸ್ತಾನದ ಯಾವುದೇ ಶಾಸನಾಂಗವೂ ಪವಿತ್ರವಾದ ಕುರಾನಿನಲ್ಲಿ ಹೇಳಿದ ಸೂತ್ರಗಳಿಗೆ ವ್ಯತಿರಿಕ್ತವಾಗಿ ಕಾನೂನು ಕಾಯಿದೆಗಳನ್ನು ಮಾಡುವಂತಿಲ್ಲ. ಇವು ಮೂರು ಸಂಗತಿಗಳನ್ನು ಗಮನಿಸಿದರೆ, ಪಾಕಿಸ್ತಾನವು ಈ ಇಪ್ಪತ್ತನೆಯ ಶತಮಾನದಲ್ಲೂ ಮಧ್ಯಯುಗೀನ ಆಡಳಿತೆಯ ಮೋಹಕ್ಕೆ ಸಿಲುಕಿರುವುದು ಕಂಡುಬರುತ್ತದೆ. ಕೆಲವು ತಿಂಗಳುಗಳ ಪೂರ್ವದಲ್ಲಿ ಪಾಕಿಸ್ತಾನೀ ಘಟನೆಯ ಕರಡಿನ ಮುಖ್ಯಾಂಶ ಪ್ರಕಟಗೊಂಡಾಗ ಅದರಲ್ಲಿ ಇನ್ನೂ ಕೆಲವು ಚೋದ್ಯದ—ಆದರೆ ನಿಜವಾಗಿ ಮರುಕ ಹುಟ್ಟಿಸುವ—ಸಂಗತಿಗಳೂ ಇದ್ದವು. ಯಾವ ಕಾನೂನು ಕುರಾನಿನ ಹೇಳಿಕೆಗೆ ಸರಿ ಅಥವಾ ವಿರುದ್ಧವೆಂದು ನಿರ್ಣಯಿಸಲು ಮೌಲವಿಗಳ ಸಮಿತಿ ನೇಮಿಸಬೇಕೆಂದು ಘಟನೆಯ ಕರಡಿನಲ್ಲಿ ಹೇಳಿದ್ದರು. ಇದನ್ನು ಇತರರೊಂದಿಗೆ ಸ್ವತಃ ಮೌಲವಿಗಳೇ ವಿರೋಧಿಸಿದುದರಿಂದ ಈಗ, ಈ ಅಧಿಕಾರವು ಪಾಕಿಸ್ತಾನೀ ಪರಮ ನ್ಯಾಯಾಲಯಕ್ಕೆ ಕೊಡಲ್ಪಟ್ಟಿದೆ. ಘಟನೆಯ ಕರಡಿನಲ್ಲಿ ಅಲ್ಪಸಂಖ್ಯಾಕರಿಗೆ ಬೇರೆಯೇ ಮತಘಟ್ಟಗಳನ್ನು ಒದಗಿಸುವ ಹಾಗೂ ಅವರಲ್ಲಿ ಒಗ್ಗಟ್ಟಿನ ಭಾವನೆಯೇ ಉಳಿಯದಂತೆ ಜಾತಿವಾರಾಗಿ ವಿಂಗಡಿಸಿ ಮತಾಧಿಕಾರ ನೀಡುವ ತೀರ ಗರ್ಹಣೀಯ ಸೂಚನೆಯೂ ಇದ್ದಿತು. ಈಗ ಸ್ವೀಕಾರಗೊಂಡ ಅತಿ ಮುಖ್ಯಾಂಶಗಳಲ್ಲಿ ಅಲ್ಪಸಂಖ್ಯಾಕರ—ಮುಖ್ಯವಾಗಿ ಹಿಂದೂ ಮತೀಯರ—ಹಿತ ಸಂಬಂಧಗಳೆಲ್ಲವೂ ನಿರ್ಲಕ್ಷಿಸಲ್ಪಟ್ಟಿವೆ. ಕೊರಾನಿನ ನ್ಯಾಯದಂತೆ ಸರಕಾರ ಕೆಲಸ ನಡೆಸುವುದಾದರೆ, ಹಿಂದೂ ಧರ್ಮಶಾಸ್ತ್ರದಂತೆ ನಡೆದುಕೊಳ್ಳುವ ಜನರ ಭವಿಷ್ಯವೇನು? ಅವರೆಲ್ಲರೂ ಒತ್ತಾಯದಿಂದ ಇಸ್ಲಾಂ ತತ್ವಗಳನ್ನು ಶರಣೆನ್ನಬೇಕಾಗುವುದು. ರಾಜ್ಯದ ವರಿಷ್ಠ ಸ್ಥಾನಕ್ಕೆ ಮುಸ್ಲಿಮನೇ ಏರಬೇಕೆಂಬ ಕಾಯಿದೆಯು ಬೇರೆ ಮತಾವಲಂಬಿಗಳಾದ ನಾಗರಿಕರಿಗೆ ಇರುವ ಸಮಾನಾಧಿಕಾರ ಹಾಗೂ ಸಮಾನಾವಕಾಶದ ಹಕ್ಕು ಬಾಧ್ಯತೆಗಳನ್ನು ಕಸಿದುಕೊಂಡಿದೆ. ಪಾಕಿಸ್ತಾನೀ ಸರಕಾರವು ಕುರಾನಿನ ಸೂತ್ರಗಳಿಗನುಸಾರ ಇಸ್ಲಾಂ ತತ್ವಗಳೇನೆಂಬುದನ್ನು ಪ್ರಚಾರ ಮಾಡುವುದೆಂದೂ ತಿಳಿದಿದೆ. ಸಣ್ಣ ಮಕ್ಕಳಿಗೆ ಶಾಲೆಯಲ್ಲಿಯೇ ಈ ಶಿಕ್ಷಣ ದೊರೆಯಬಹುದು. ಘಟನೆಯ ನಿರ್ದೇಶಕ ತತ್ವದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಅವನವನ ಧರ್ಮದಂತೆ ನಡೆದುಕೊಳ್ಳುವ ಅಧಿಕಾರ ಬಿಟ್ಟುಕೊಡಲ್ಪಡುವುದಕ್ಕೂ ಆ ಬಳಿಕ ಮೇಲಿನ ಮಾದರಿಯ ವಿಪರೀತ ಕಲಮುಗಳ ಸ್ವೀಕಾರ ಮಾಡುದಕ್ಕೂ ಏನೆನ್ನಬೇಕು? ಒಂದು ಸಣ್ಣ ಕುಂಟು ಪಂಕ್ತಿಯನ್ನು ಮಾತ್ರ ತಿದ್ದುಪಡಿಯಾಗಿ ಈ ಕಲಮುಗಳಿಗೆ ಸಂಬಂಧಿಸಿದಂತೆ ಜೋಡಿಸಿರುವರು— ಅದೆಂದರೆ, ಹಣದ ವ್ಯವಹಾರದ ಮಟ್ಟಿಗೆ ಸರಕಾರೀ ಕಾಯಿದೆಗಳು ಇನ್ನೂ ಇಪ್ಪತ್ತೈದು ವರ್ಷಗಳ ವರೆಗೆ ಕುರಾನಿನ ತತ್ವದಂತೆ ಇರಬೇಕಾಗಿಲ್ಲ; ಮತ್ತು ಈ ಅವಧಿಯ ಬಳಿಕವೂ ಸರಕಾರದ ಕಾಯಿದೆಗಳು ಕುರಾನಿನ ಸೂತ್ರದಂತೆ ಇರಬೇಕೆ ಹೇಗೆ ಎಂಬುದನ್ನು ಅದುವರೆಗಿನ ಅನುಭವ ಹಾಗೂ ಪರಿಸ್ಥಿತಿಯ ಮೇಲಿಂದ ತೀರ್ಮಾನಿಸಲಾಗುವುದು. ಕುರಾನಿನಲ್ಲಿ ಬಡ್ಡಿ ಇಲ್ಲದೆ ಹಣ ಕೊಡಬೇಕೆಂದು ಹೇಳಿದೆಯಂತೆ—ಹೀಗಾದರೆ ಪಾಕಿಸ್ತಾನದ ಸರಕಾರ ಕೆಲಸ ನಡೆಸುವುದು ಹೇಗೆ? ಅದಕ್ಕೋಸ್ಕರ ಈ ವಿನಾಯತಿ. ಆದರೆ, ಪರಸ್ಪರ ವಿರುದ್ಧವಾದ ಹಾಗೂ ಅಲ್ಪಸಂಖ್ಯಾಕರ ಹಿತ ಮತ್ತು ಅಭ್ಯುದಯಗಳನ್ನು ದುರ್ಲಕ್ಷಿಸಿ, ಕೇವಲ ದ್ವಿರಾಷ್ಟ್ರ ತತ್ವವನ್ನೇ ಪುರಸ್ಕರಿಸುವ ಪಾಕಿಸ್ತಾನೀ ಘಟನೆ ಕೊನೆಯವರೆಗೂ ತೀವ್ರ ಜುಗುಪ್ಸೆಯನ್ನು ಹುಟ್ಟಿಸುವುದು ನಿಶ್ಚಯ. ಅದು ಈ ಯುಗಧರ್ಮದ ಸಂದೇಶವನ್ನು ಕಿವುಡು ಗಿವಿಯಿಂದ ಕೇಳಿದೆ—ಅಲ್ಪಸಂಖ್ಯಾಕರ ಪ್ರತಿಭಟನೆಯನ್ನು ದುರ್ಲಕ್ಷಿಸಿರುತ್ತದೆ.

ನಮ್ಮ ಚಂದಾದಾರರಲ್ಲಿ ವಿಶೇಷ ವಿಜ್ಞಾಪನೆ

'ನವಯುಗ'ದ ಚಂದಾ ಹಣ ಬಾಕಿಯ ಬಗ್ಗೆ ನಾವು ಈ ಸರೆಗೆ ಹಲವು ಬಾರಿ ಪತ್ರಿಕೆಯಲ್ಲಿ ವಿಜ್ಞಾಪಿಸಿಕೊಂಡೆವು; ಪ್ರತ್ಯೇಕ ಪ್ರತ್ಯೇಕ ಕಾರ್ಡು ಬರೆದೆವು, ಕೆಲವರು ನಮ್ಮ ವಿನಂತಿಯಂತೆ ಚಂದಾಹಣ ಕಳಿಸಿರುತ್ತಾರೆ. ಆದರೆ ಮತ್ತೆ ಕೆಲವರು ಇನ್ನೂ ಕಳುಹಿಸಿಲ್ಲವೆನ್ನಲು ಬೇಸರವಾಗುತ್ತದೆ. ಅಂಥವರೊಡನೆ ಈ ಸಂಚಿಕೆ ತಲಿಪಿದೊಡನಾದರೂ ದಯಮಾಡಿ ಚಂದಾ ಬಾಕಿಯನ್ನು ಕಳುಹಿಸಿಕೊಟ್ಟು ಸಹಕರಿಸುವಂತೆ ಇನ್ನೊಮ್ಮೆ ಕೇಳಿಕೊಳ್ಳುತ್ತೇವೆ.

ಮೆನೇಜರ್

ಸ್ವಂಡದ ರಾಷ್ಟ್ರಗಳಲ್ಲಿ ಜರ್ಮನಿಯನ್ನು ಸೇರಿಸುವುದು ಮಿತ್ರರ ಇಚ್ಛೆಯೇ ಹೇಗೆಂದು ರಶಿಯಾ ಸ್ಪಷ್ಟೀಕರಣ ಕೇಳಿದೆ. ಜರ್ಮನಿಯ ಸೈನ್ಯ ಬಲವನ್ನು ಹೆಚ್ಚಿಸುವ ಕ್ರಮಗಳನ್ನು ಮಿತ್ರ ರಾಷ್ಟ್ರಗಳು ಕೈಗೊಳ್ಳುತ್ತಾ ಹೋಗುವ ಪಕ್ಷದಲ್ಲಿ, ಈ ಸಮಸ್ಯೆಯನ್ನು ಚತೂರಾಷ್ಟ್ರದ ಪ್ರತಿನಿಧಿಗಳು ಚರ್ಚಿಸುವುದು ನಿಷ್ಪ್ರಯೋಜಕವೆಂದು ರಶಿಯಾದ ಅಭಿಪ್ರಾಯ. ಚತೂರಾಷ್ಟ್ರಗಳಲ್ಲ ಕಮ್ಯೂನಿಸ್ಟ ಚೀನಾವನ್ನೊಳಗೊಂಡು ಪಂಚ ಮಹಾರಾಷ್ಟ್ರಗಳು ಸಭೆಗೂಡುವುದೇ ಶ್ರೇಯಸ್ಕರವೆಂದು ರಶಿಯಾ ಹೇಳಿದುದಕ್ಕೆ ಮಹತ್ವವಿಲ್ಲದಿದ್ದರೂ ಪಶ್ಚಿಮ ಜರ್ಮನಿಯಲ್ಲಿ ಮಿತ್ರರಾಷ್ಟ್ರಗಳ ಮಿಲಿಟರಿ ಚಟುವಟಿಕೆಯ ಕುರಿತು ಅದು ವ್ಯಕ್ತಗೊಳಿಸಿದ ಅಭಿಪ್ರಾಯ ಗಮನಾರ್ಹವಿರುತ್ತದೆ. ಈಡನರೂ ಐಸೆನಹಾವರರೂ ರಶಿಯಾದ ಶರ್ತಗಳು ಅಯೋಗ್ಯವೆಂದು ತೀರ್ಮಾನಿಸಿರುವರು. ಆದರೆ ಫ್ರಾನ್ಸಿಗೆ ಈ ಮಾತನ್ನು ಅನ್ವಯಿಸುವುದು ಸ್ವಲ್ಪ ಕಷ್ಟ. ಅದಕ್ಕೆ ಪಶ್ಚಿಮ ಜರ್ಮನಿಯ ಶಸ್ತ್ರೀಕರಣ ಒಂದು ತಲೆ ಸಿಡಿತವೇ ಆಗಿದೆ; ಮತ್ತು ರಶಿಯಾದಿಂದ ಎಚ್ಚರಿಕೆಯನ್ನೂ ಈ ಸಂಬಂಧದಲ್ಲಿ ಫ್ರಾನ್ಸು ಪಡೆದಿದೆ. ಅಮೇರಿಕನ್ ಮಿತ್ರರು ತಮ್ಮ ಸೈನ್ಯವನ್ನು ಯುರೋಪಿನಲ್ಲಿ ನೆಲೆಗೊಳಿಸುವ ಆಶ್ವಾಸನೆ ಕೊಟ್ಟಿರುವುದು ಫ್ರಾನ್ಸಿಗೆ ಸಶಸ್ತ್ರ ಜರ್ಮನಿಯ ವಿರುದ್ಧ ರಕ್ಷಣೆಯೊದಗಿದಂತೆ ತೋರುತ್ತದೆ. ಆದರೂ ಕಾದ ಕಾವಲಿಯ ಮೇಲೆ ಕುಣಿಯುತ್ತಾ ಎಷ್ಟು ದಿನ ಕಳೆಯುವುದು ಸಾಧ್ಯವೆಂಬುದನ್ನು ರಶಿಯವೂ ಮಿತ್ರ ರಾಷ್ಟ್ರಗಳೂ ಯೋಚಿಸುವುದು ಒಳಿತು.

ತ್ರಿರಾಷ್ಟ್ರ ಪರಿಷತ್ತು

ಬ್ರಿಟಿಷ ಪ್ರಧಾನಿ ಚರ್ಚಿಲ್ಲರು ಈ ಅಂಶವನ್ನು ಚೆನ್ನಾಗಿಯೇ ಗುರುತಿಸಿದ್ದಾರೆ. ಅಂತೆಯೇ ರಶಿಯಾದ ಮೆಲೆಂಕೋವರನ್ನು ಕಾಣಲೂ ಆತುರ ತೋರಿಸಿದ್ದರು. ಬ್ರಿಟಿಷ ರಾಣಿಯ ಭಾಷಣದಲ್ಲಿ ಹಾಗೂ ಆ್ಯಟ್ಲಿಯವರ ಟೀಕೆಗೆ ಚರ್ಚಿಲ್ಲರು ಕೊಟ್ಟ ಉತ್ತರದಲ್ಲಿ ರಶಿಯಾದೊಡನೆ ಸಂಧಾನ ನಡೆಸುವುದರಿಂದ ಒಳಿತಾಗುವುದೆಂಬ ಸರಕಾರೀ ಅಭಿಪ್ರಾಯ ಇನ್ನಷ್ಟು ಸ್ಪಷ್ಟವಾಗಿ ಒಡಮೂಡಿರುತ್ತದೆ. ಇದೇ ಚರ್ಚಿಲ್ಲರು ಕಳೆದ ಎಪ್ರಿಲ್ ತಿಂಗಳಲ್ಲಿ ಬರ್ಮುಡಾದ ಚತುರಾಷ್ಟ್ರಗಳ ಪ್ರಧಾನರ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ತ್ರಿರಾಷ್ಟ್ರ ಪರಿಷತ್ತು ಸೇರಬೇಕೆಂದು ಹೇಳಿದ್ದರು. ಕಾರಣಾಂತರಗಳಿಂದ ಅದು ಕ್ಲುಪ್ತ ಸಮಯದಲ್ಲಿ ಸೇರದೆ ಮುಂದರಿಯಿತು. ಆದರೂ ಅಂಥದೊಂದು ಪರಿಷತ್ತು ಚತುರಾಷ್ಟ್ರಗಳ ಪ್ರಧಾನರ ಸಮ್ಮೇಳನದಲ್ಲಿ ಮಹತ್ವದ ಸಮಸ್ಯೆಗಳ ಕುರಿತು ಮಿತ್ರರ ನಿಲುಮೆಯನ್ನು ಸಮರ್ಥವಾಗಿ ಮಂಡಿಸಲು ಸಹಾಯಕವಾದೀತೆಂದೂ ಇದರಿಂದ ಚರ್ಚಿಲ್ಲರಂತೆ, ರಶಿಯಾದ ಕಡೆಗೆ ರಿಯಾಯತಿಯಿಂದ ಕೂಡಿದ ಧೋರಣವನ್ನು ಫ್ರಾನ್ಸು ಮತ್ತು ಅಮೇರಿಕಾಗಳೂ ಕೆಲಮಟ್ಟಿಗೆ ಅನುಸರಿಸುವಂತಾದೀತೆಂದೂ ರಾಜಕಾರಣಿಗಳು ಎಣಿಸಿದ್ದರು. ಈಗ ತಾನೆ ಬಂದ ವಾರ್ತೆಯಂತೆ ಮುಂದಿನ ತಿಂಗಳು ೪-೮ನೇ ತಾರೀಕಿನ ವರೆಗೆ ಬ್ರಿಟಿಷ್, ಅಮೇರಿಕ ಮತ್ತು ಫ್ರಾನ್ಸುಗಳ ವಿದೇಶಾಂಗ ಸಚಿವರು ಬರ್ಮುಡಾದಲ್ಲಿ ಸಭೆ ಸೇರಿ "ಮೂರು ರಾಷ್ಟ್ರಗಳಿಗೂ ಸಾಮಾನ್ಯ ಆಸ್ಥೆಯುಳ್ಳ ಮಹತ್ವದ ವಿಷಯಗಳನ್ನು" ಚರ್ಚಿಸುವರು. ಇಲ್ಲಿ ಜರ್ಮನಿಯ ಪ್ರಶ್ನೆಯೇ ಅತ್ಯಂತ ಮುಖ್ಯವಾದುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಚಿಯಾಂಗರ ಕಪಿ ಸೇನೆ

ಕೊಮಿಂಟಾಂಗ ಪಡೆಗಳ ನಿರ್ಗಮನ ವಿಚಾರದಲ್ಲಿ ಬರ್ಮಾವು ರಾಜಕೀಯ ಸಮಿತಿಯ ಮುಂದೆ ತಂದ ದೂರಿನ ವಿಚಾರಣೆಯು ಮುಂದೂಡಲ್ಪಟ್ಟಿದೆ. ಸುಮಾರು ೧೨ ಸಾವಿರದಷ್ಟಿರುವ ಕೊಮಿಂಟಾಂಗ ಸೈನಿಕರಲ್ಲಿ ಅಮೇರಿಕಾದ ಒತ್ತಾಯದಿಂದೆಂಬಂತೆ ೨ ಸಾವಿರ ಮಂದಿಯನ್ನು ಹಿಂದಕ್ಕೆ ಕರೆಸಿಕೊಳ್ಳಲು ಚಿಯಾಂಗರು ಒಪ್ಪಿರುವರು. ಇವರಲ್ಲಿ ಮೊದಲನೇ ತಂಡವು ಈಗಾಗಲೇ ಬರ್ಮಾದ ಗಡಿಪ್ರದೇಶವನ್ನು ದಾಟಿ ಥ್ಯಾಲೆಂಡಿಗೆ ಹೊರಡಿದೆ. ಗುಡ್ಡಗಾಡುಗಳಿಂದ ಈ ಸೈನಿಕರನ್ನು ಒಂದು ಕೇಂದ್ರದಲ್ಲಿ ಒಟ್ಟುಗೂಡಿಸಲಾಗುತ್ತಿದೆ: ಮತ್ತು ಅವರನ್ನು ನಿಃಶಸ್ತ್ರೀಕರಿಸಿ, ಫೋರ್ಮೋಸಾಕ್ಕೆ ಕಳಿಸುವ ಹೊಣೆಯನ್ನು ಅಮೇರಿಕಾ ಹೊತ್ತಿದೆ. ಆದರೆ ಭಾರತೀಯ ಪ್ರತಿನಿಧಿ ಶ್ರೀ ಕೃಷ್ಣಮೆನೊನ್ನರು ರಾಜಕೀಯ ಸಮಿತಿಯ ಮುಂದೆ ಹೇಳಿದಂತೆ ನಿಜವಾದ ಪ್ರಶ್ನೆ ಉಳಿದ ಹತ್ತು ಸಾವಿರ ಮಂದಿ ಸೈನಿಕರ ಕುರಿತು ತೆಗೆದುಕೊಳ್ಳುವ ಕ್ರಮವೇನೆಂಬುದೇ ಆಗಿರುತ್ತದೆ. ಬರ್ಮಾದ ಸಂಕಟವನ್ನು ಕಂಡು ಪ್ರತಿಯೊಬ್ಬ ರಾಷ್ಟ್ರದ ಪ್ರತಿನಿಧಿಯೂ ಸಂತಾಪ ಮತ್ತು ಸಹಾನುಭೂತಿಯನ್ನು ವ್ಯಕ್ತಪಡಿಸಿದರೂ ಅಷ್ಟಕ್ಕೆ ಸಮಸ್ಯೆ ಪರಿಹಾರವೊಂದುವುದಿಲ್ಲ. ಉಳಿದ ಹತ್ತು ಸಾವಿರ ಮಂದಿ ಸೈನಿಕರು ರಾಷ್ಟ್ರೀಯ ಚೀನೀಯರಲ್ಲವೆಂದು ಚಿಯಾಂಗ ಸರಕಾರದ ವಾದ. ಇವರಿಗೆ ಆಕಾಶಯಾನದಿಂದ ಮದ್ದು ಗುಂಡುಗಳು ಪೂರೈಸಲ್ಪಡುತ್ತವೆ. ಇವುಗಳನ್ನು ಬರ್ಮಾದ ಸರಕಾರದ ಮೇಲೆ ಉಪಯೋಗಿಸದಂತೆ ತಡೆಗಟ್ಟಲು ತಕ್ಕ ಕ್ರಮ ತೆಗೆದುಕೊಳ್ಳುವುದು ಅಗತ್ಯವಿದೆ. ಮದ್ದು ಗುಂಡುಗಳ ಪೂರೈಕೆ ನಿಂತ ಪಕ್ಷದಲ್ಲಿ, ಹತ್ತು ಸಾವಿರ ಮಂದಿ ಸೈನಿಕರು ಬರ್ಮಾದ ನೆಲದಲ್ಲಿ ಉಳಿದರೂ ಬಾಧೆಯಾಗಲಿಕ್ಕಿಲ್ಲ—ಆದರೆ ಆ ಭರವಸೆ ಕೊಡುವವರು ಯಾರು? ಅಮೇರಿಕವು ಉಳಿದ ಸೈನಿಕರ ನಿರ್ಗಮನ ಕಾರ್ಯದಲ್ಲೂ ತಾನು ಆಸ್ಥೆ ವಹಿಸುವ ಆಶ್ವಾಸನೆ ಕೊಟ್ಟಿರುತ್ತದೆ. ಇದು ಚಿಯಾಂಗರ ಮೇಲೆ ಪರಿಣಾಮ ಬೀರಿದರೆ, ಬರ್ಮಾವಿಗೆ ಲಾಭವಿದೆ. ಅನ್ಯಥಾ ತನ್ನ ಮಿತವಾದ ಸೈನ್ಯವನ್ನು ಅಕ್ರಮವಾಗಿ ಪ್ರವೇಶಿಸಿದ ಸೈನ್ಯದ ಗೋಣು ಮುರಿಯುವುದಕ್ಕೆಂದೇ ಸಜ್ಜುಗೊಳಿಸುವ ಪ್ರಮೇಯ ಬರ್ಮಾಕ್ಕೆ ತಪ್ಪದು.

ಉಡುಪಿ

ಆಗಮನ—ಮದ್ರಾಸು ಸರಕಾರದ ಡೈರೆಕ್ಟರು ಆಫ್ ಮೆಡಿಕಲ್ ಸರ್ವಿಸಸ್‍ರಾದ ಲೆಫ್ಟಿನೆಂಟ್ ಕರ್ನಲ್ ಸಂಗಮಲಾಲ್, ಎಫ್. ಆರ್. ಸಿ. ಎಸ್. ಐ. ಎಮ್. ಎಸ್.,—ಇವರು ತಾರೀಕು 7ರಂದು ಉಡುಪಿಗೆ ಆಗಮಿಸಿ ಸ್ಥಳೀಯ ಸರಕಾರಿ ಆಸ್ಪತ್ರೆ ಮತ್ತು ಮಿಶನ್ ಆಸ್ಪತ್ರೆಗಳನ್ನು ಸಂದರ್ಶಿಸಿದರು. ಅಲ್ಲಿಂದ ಮಣಿಪಾಲಕ್ಕೆ ಹೋಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ ಅಲ್ಲಿಯ ವ್ಯವಸ್ಥೆಯನ್ನು ಪರಿಶೀಲಿಸಿ ತುಂಬಾ ತೃಪ್ತಿಪಟ್ಟರಲ್ಲದೆ, ಖಾಸಗೀ ಪ್ರಯತ್ನದಿಂದ ಇಷ್ಟೊಂದು ಸುಸಜ್ಜಿತ ರೀತಿಯಲ್ಲಿ ನಡೆಯುತ್ತಿರುವ ಈ ಕಾಲೇಜು ಅಖಿಲ ಭಾರತಕ್ಕೊಂದು ಆದರ್ಶವೆಂದು ನುಡಿದರು. ಅಲ್ಲದೆ ಈ ಕಾಲೇಜಿಗೆ ತನ್ನಿಂದಾಗಬೇಕಾದ ಯಾವತ್ತು ಸಹಾಯವನ್ನು ಮಾಡುವುದಾಗಿ ಭರವಸೆಯಿತ್ತರು. ಮಂಗಳೂರಿನಲ್ಲಿ ವೆನ್‍ಲಾಕ್ ಆಸ್ಪತ್ರೆಯನ್ನು ಪರಿಶೀಲಿಸಿ ಮೆಡಿಕಲ್ ಕಾಲೇಜಿನ ಉಪಯೋಗಾರ್ಥವಾಗಿ ಅಲ್ಲಿ ಮಾಡಬೇಕಾದ ವ್ಯವಸ್ಥೆಗಳ ಕುರಿತು ವಿಚಾರ ವಿನಿಮಯ ಮಾಡಿದರು.

ವಿದ್ಯಾರ್ಥಿನಿ ಸಭೆ—ತಾ. 8ನೇ ಸಂಜೆ ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ವಿದ್ಯಾರ್ಥಿನೀ ಸಭೆಯು ಪ್ರೊ. ಕುಮಾರ್ ರೋಯ್ ಇವರ ಅಧ್ಯಕ್ಷತೆಯಲ್ಲಿ ಜರಗಿದಾಗ ಉ. ಲ. ಕಿಣಿಯವರು ತಮ್ಮ ಯಾತ್ರಾ ಪ್ರವಾಸದ ಅನುಭವವನ್ನು ವಿವರಿಸಿದರು. ಕುಮಾರಿ ಮನೋರಮಾ ದೇವಿಯ ಮಧುರ ಸಂಗೀತವಾದ ಬಳಿಕ ಲೀಲಾ ದೇವಿಯವರು ಧನ್ಯವಾದಗಳನ್ನರ್ಪಿಸಿದರು.

ರಷ್ಯಾ ಕ್ರಾಂತಿ ದಿನಾಚರಣೆ—ಉಡುಪಿಯಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ರಷ್ಯಾ ಕ್ರಾಂತಿ ದಿನಾಚರಣೆಯು ಇದೇ ತಾ. 7ರಲ್ಲು ಸಂಜೆ ತೆಂಕುಬೀದಿಯಲ್ಲಿ ಸೇರಿದ ಸುಮಾಜನ ಸಭೆಯಲ್ಲಿ ಆಚರಿಸಲಾಯಿತು. ಶ್ರೀ ಶೀನ ನಾಯ್ಕರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ದಾಸ ಸೇರಿಗಾರ್, ಕೃಷ್ಣಪ್ಪ ಮೊದಲಾದವರ ಸಂದರ್ಭೋಚಿತ ಮಾತುಗಳನ್ನಾಡಿದರು. [illegible] ಸಂಜೆ ಮಜೂರರ ಮೆರವಣಿಗೆಗಳಿದ್ದವು.

ಕೆ. ಪಿ. ಸಿ. ಸಿ. ಕಾರ್ಯಕಾರಿ ಸಮಿತಿಗೆ ದಿ| ಶಿಲ್ಲೆಯವರ ನಿಧನದಿಂದ ತೆರವಾದ ಸ್ಥಾನಕ್ಕೆ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರನ್ನು ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಚುನಾಯಿಸಿರುತ್ತಾರೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C. ನಂಬ್ರ 587/53

ಬಿ. ನಾರಾಯಣ ಹೆಗ್ಡೆ — ವಾದಿ

ಮತ್ತು

ನಾಗಮ್ಮ ಶೆಡ್ತಿ ಕೂಡಾ — ಪ್ರತಿವಾದಿರು

ಇವರೊಳಗೆ

ಉಡ್ಪಿ ತಾಲ್ಕು ಬೆಳ್ಳಂಪಳ್ಳಿ ಗ್ರಾಮದ ಪುಣ್ಚಾಲು ನಾಗಮ್ಮ ಶೆಡ್ತಿರ ಮಗ ೪ನೇ ಪ್ರತಿವಾದಿ ನಾರಾಯಣ ಶೆಟ್ರಿಗೆ:—

ನೀವು ಕೂಡಾ ೩ ಜನರು ತಾ 10—10—50ರಲ್ಲು ವಾದಿಗೆ ಬರಕೊಟ್ಟ ಡಿ. ಪ್ರೊ. ನೋಟಿನ ಅಸ್ಲು ಬಡ್ಡಿ ವಗೈರೆ ಬಾಕಿ ರೂಪಾಯಿ 153—1—0 ವಸೂಲು ಮಾಡುವರೆ ವಾದಿರು ಹೂಡಿರುವ ಮೋಕದ್ದಮೆ ವಾದಿ ನಿಮಗೆ ನೋಟೀಸು ಬಗ್ಗೆ ತಾ 24—11—53ಕ್ಕೆ ಇಡಲಾಗಿದೆ. ಆ ದಿವಸ ಬೆಳಗ್ಗೆ 10 ಗಂಟೆಗೆ ಕೋರ್ಟಿನ ಮುಂದೆ ನೀವು ಹಾಜರಾಗಿ ವ್ಯವಹರಿಸತಕ್ಕದ್ದು. ಇಲ್ಲದಿದ್ದರೆ ನಿಮ್ಮ ಗೈರುಹಾಜರಿಯಿಂದ ತೀರ್ಮಾನಿಸಲಾಗುವದು.

Narayana Rao K.
Advocate for Plaintiff

ಉಡ್ಪಿ 12—11—53

ಕನೆಕ್ಷನ್ ಬಗ್ಗೆ ಸಾಲ ಕೊಡಬೇಕಾಗಿಲ್ಲ

ಮಾನ್ಯ ಮಂತ್ರಿಗಳಾದ ಸಿ. ಸುಬ್ರಮಣ್ಯಂರು ಉಡುಪಿಗೆ ಬಂದಾಗ ಮಾಡಿಕೊಂಡ ಬೇಡಿಕೆಯಂತೆ ಇಲ್ಲಿ ಇಲೆಕ್ಟ್ರಿಕ್ ಕನೆಕ್ಷನ್‍ಗಳ ಬಗ್ಗೆ ಸಾಲ ಕೊಡಬೇಕೆಂಬ ಕ್ರಮವನ್ನು ಸರಕಾರ ಇದೀಗ ರದ್ದುಗೊಳಿಸಿರುವುದೆಂಬುದನ್ನು ಸಾರ್ವ[illegible] ತಿಳಿಸಲು ಸಂತೋಷಪಡುತ್ತೇನೆ. ಸರಕಾರದೊಡನೆ ಹಿಡಿದ ಹಣವನ್ನು ತೀವ್ರವಾಗಿ ಇಡಲು ಅನುಕೂಲತೆ ಇಲ್ಲದ ಅನೇಕರಿಗೆ ವಿದ್ಯುಚ್ಛಕ್ತಿಯ ಪ್ರಯೋಜನವನ್ನು ಪಡೆಯಲು ಹಿಂದಿನ ಪದ್ಧತಿ ಒಂದು ತೊಡಕಾಗಿತ್ತು. ಈಗ ಈ ಪದ್ಧತಿಯ ರದ್ದಿಯಾತಿಯಿಂದ ಉಡುಪಿ, ಉದ್ಯಾವರ, ಮಲ್ಪೆ, ಕಲ್ಯಾಣಪುರಗಳ ನಮ್ಮ ನಾಗರಿಕರು ಕೃಷಿ, ಕೈಗಾರಿಕೆ ಹಾಗೂ ಗೃಹಕೃತ್ಯದ ಬಗ್ಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡು ಅದರ ಸಂಪೂರ್ಣ ಪ್ರಯೋಜನವನ್ನು ಪಡೆಯುವಂತಾಗಲಿ ಎಂದು ಆಶಿಸುತ್ತೇನೆ.

ಟಿ. ಎ. ಪೈ. ಎಮ್. ಎಲ್. ಎ.,
ಉಡುಪಿ.

ಮಧುವಿಗಿಂತಲು ಮಧುರವಾದ ಕಥಾ ಸಂಗ್ರಹ.

ಮಧುವನ

ಕರ್ನಾಟಕದ ಸುಪ್ರಸಿದ್ಧ ಕತೆಗಾರರ ಕತೆಗಳು. ಕತೆಗಳೊಂದಿಗೆ ಕತೆಗಾರರ ಪರಿಚಯಗಳಿವೆ, ಪಡಿಯಚ್ಚುಗಳಿವೆ.

"ಮಧುವನ"ವೆಂಬ ಕಥಾಸಂಗ್ರಹವನ್ನು ನಾನು ಓದಿ ನೋಡಿದ್ದೇನೆ. "ಸವಿಲುಗರಿ" "ಕಾಮನ ಬಿಲ್ಲು" ಎಂಬ ಸಂಗ್ರಹಗಳು ಹೊರಬಿದ್ದರೂ ಅಲ್ಲಿ ಕಾಣಬಾರದ ಹೆಸರುಗಳು ಕೆಲವು "ಮಧುವನ"ದಲ್ಲಿ ನನಗೆ ಪರಿಚಿತವಾಗಿ ಸಿಕ್ಕುತ್ತವೆ. "ಮಧುವನ"ದ ಸಂಪಾದಕರ ಕೆಲಸವು ಸಣ್ಣದಲ್ಲ. ಹತ್ತು ಎಡೆ ಹಾಲು ಕರೆದರೂ ಅದನ್ನು ಹೆಪ್ಪು ಹಾಕುವ ಹೊಣೆಯು ಅವರದಾಗಿದೆ. ಅದನ್ನು ಎಲ್ಲರೂ ಒಪ್ಪುವಂತೆ ಕೊನೆಗಾಣಿಸಿದ್ದಾರೆ. ಲೇಖಕ, ಲೇಖಕಿಯರ ಭಾವಚಿತ್ರಗಳು, ಅವರ ಕತೆಗಳ ವಿಷಯದಲ್ಲಿ ಬರೆದ ವಿಮರ್ಶಾತ್ಮಕ ಟಿಪ್ಪಣಿಗಳು [illegible] ಕೂಡಿ ಈ ಪುಸ್ತಕಕ್ಕೆ ಸಹಜವಾಗಿರುವ ಸೊಬಗನ್ನು ಹೆಚ್ಚಿಸಿವೆ. ಕತೆಯ ದೃಷ್ಟಿಯಿಂದ ಇದೊಂದು ಉಚ್ಚ ತರಗತಿಯ ಕಥಾಸಂಗ್ರಹವಾಗಿದೆ.

—ವಿ. ಕೃ. ಗೋಕಾಕ.

ಬಿಳಿ ಕಾಗದ—ಆಕರ್ಷಕ ಹೊರ ಪ್ಯಾ. ಬೆಲೆ ರೂ. ೨—೦—೦.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Popular Kannada Weekly.
Founder:—
Sri A. B. SHETTY,
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು.- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ಮಂಗಳೂರು

ಮುನಿಸಿಪಲ್ ಕೌನ್ಸಿಲು— ಸಭೆಯು ಕಳೆದ ತಾ 30ರಲ್ಲು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಕಂಕನಾಡಿ ಸಂತೆಯ ಬಳಿಯಲ್ಲಿ ಶ್ರೀ ಬಿ. ಬಾಬು, ಅವರು ಕಲ್ಲು ಸಾರಣೆಯ ಗೂಡಂಗಡಿಯನ್ನು ಕಟ್ಟಿ 1954ನೆ ಮಾರ್ಚ ತನಕ ಉಪಯೋಗಿಸಲು ಅನುಮತಿ ದೊರೆಯಿತು. ಈ ತಿಂಗಳ ತಾ 15ರಲ್ಲು ಕೇಂದ್ರ ಮೈದಾನಿನಲ್ಲಿ ನಾಟಕವಾಡುದಕ್ಕಾಗಿ ಚಪ್ಪರ ಹಾಕಲು ಅನುಮತಿ ಕೊಡಬೇಕೆಂದು ಕ್ರುಸೇಡರ್ ಪತ್ರಿಕೆಯ ಸಂಪಾದಕರು ಮಾಡಿಕೊಂಡ ಅರ್ಜಿಯನ್ನು, ಅವರು ಆಡುವ ನಾಟಕದಿಂದ ಸಾರ್ವಜನಿಕ ಶಾಂತಿ ಭಂಗವಾಗಬಹುದೆಂಬ ಅಭಿಪ್ರಾಯದಿಂದ, ನಿರಾಕರಿಸಲಾಯಿತು. ಈ ವಿಚಾರದಲ್ಲಿ ಕೌನ್ಸಿಲಿಗೆ ಹಲವು ರೋಮನ್ ಕೆಥೋಲಿಕರ ದಸ್ಕತುಗಳುಳ್ಳ ಮನವಿಯೂ, ಡಿ. ಪೈ. ಎಸ್ಸಿಯವರ ಪತ್ರವೂ ಬಂದಿತ್ತು. ಈ ತಿಂಗಳ ತಾ 23ರಲ್ಲು ನಗರದ ಸಂಸ್ಥೆಗಳಿಗೆ ಭೇಟಿ ಕೊಡಲಿರುವ ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರಿಗೆ ಮಾನಪತ್ರನೀಯಬೇಕೆಂಬ ಠರಾವಾಯಿತು.

ಬಲಿದಾನ ದಿನಾಚರಣೆ— ಮಹರ್ಷಿ ದಯಾನಂದರ ಬಲಿದಾನ ದಿನಾಚರಣೆಯು ಆರ್ಯಸಮಾಜ ಮಂದಿರದಲ್ಲಿ ಇದೇ ತಾ 6ರಲ್ಲು ಸಂಜೆ ಶ್ರೀ ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೇಶವ ರಾಮಚಂದ್ರ ಶೆಣೈ, ಕೆ. ಶಂಕರನಾರಾಯಣ ಕಾರಂತ ಬಿ. ಎಮ್. ತಿಂಗಳಾಯ ಮೊದಲಾದವರು ಮಾತನಾಡಿದರು. ಈ ದಿನದ ಸ್ಮರಣಾರ್ಥವಾಗಿ ಕೆಲವರು ಜನಿವಾರ, ವಸ್ತ್ರಾದಿಗಳನ್ನು ಆಶ್ರಮದ ಮಕ್ಕಳಿಗೆ ಕಳುಹಿಸಿರುವರು.

ಶ್ರೀ ಎಮ್.ಎಸ್. ಗುರುಪಾದಸ್ವಾಮಿ ಪಾರ್ಲಿಮೆಂಟಿನ ಪ್ರ. ಸೋ. ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎಮ್.ಎಸ್. ಗುರುಪಾದಸ್ವಾಮಿ ಅವರು ಇದೇ ತಾ. 1ರಲ್ಲು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ಕಾಶ್ಮೀರ ಪ್ರಶ್ನೆಯನ್ನು ರಾಷ್ಟ್ರ ಸಂಘಕ್ಕೆ ಕೊಂಡೊಯ್ದುದು ತಪ್ಪೆಂದು ಹೇಳಿದರು. ಕರ್ನಾಟಕ ಪ್ರಾಂತದ ಪ್ರಶ್ನೆ ಬಹಳ ಸುಲಭವಿದೆ. ಯಾಕೆಂದರೆ ಈಗಾಗಲೇ ಒಂದು ಕರ್ನಾಟಕ ಪ್ರಾಂತವಿದೆ. ಸುವ್ಯವಸ್ಥಿತ ರಾಜಧಾನಿ, ವಿಶ್ವವಿದ್ಯಾಲಯಗಳು ತಯಾರಿವೆ. ಉಳಿದ ಕನ್ನಡ ಭಾಗಗಳು ಕನ್ನಡ ಪ್ರಾಂತಕ್ಕೆ ಸೇರಬೇಕಾಗಿದೆ. ಇನ್ನೊಂದು ವರ್ಷದೊಳಗಾದರೂ ಸಂಯುಕ್ತ ಕರ್ನಾಟಕವಾಗಬೇಕೆಂದು ನಮ್ಮ ಪಕ್ಷದ ನಿಲುವು ಎಂದು ಸೂಚಿಸಿದರು. ಸಂಜೆ ಕೇಂದ್ರ ಮೈದಾನಿನಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಮಾಡಿದ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತರು. ಶ್ರೀ ಇರ್ವಾಡಿ ಆನಂದ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಆರೋಗ್ಯ ಮಂತ್ರಿ ಶ್ರೀ ಎ. ಬಿ ಶೆಟ್ಟರು—ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರು ತಾ 6ರಲ್ಲು ಸಂಜೆ ಮಂಗಳೂರಿಗೆ ಆಗಮಿಸಿದರು. ಶ್ರೀಗಳಾದ ಯು. ಶ್ರೀನಿವಾಸ ಮಲ್ಯ, ಕೆ. ಸದಾನಂದ ಹೆಗ್ಡೆ, ಎಸ್. ನರ್ಸಪ್ಪಯ್ಯ, ಎ. ಎಸ್. ಕುಡ್ವಾ, ಕೆ. ಸೂರ್ಯನಾರಾಯಣ ಅಡಿಗ, ಯು. ಪಿ. ಮಲ್ಯ ಮೊದಲಾದ ನಗರ ಪ್ರಮುಖರೂ, ಇತರ ಅಧಿಕಾರಿಗಳೂ ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು.

ತಾ 7ರಲ್ಲು ಬೆಳಿಗ್ಗೆ ಶ್ರೀ ಶೆಟ್ಟರು ಬಜಪೆಗೆ ಹೋಗಿ ಅಲ್ಲಿ ಕಮ್ಯೂನಿಟಿ ಪ್ರೊಜೆಕ್ಟಿನ ಆಶ್ರಯದಲ್ಲಿ ನಡೆಸಲ್ಪಡುವ ಈಗಿನ ಔಷಧಾಲಯವನ್ನು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾಗಿ ಕಟ್ಟುತ್ತಿರುವ ಕಟ್ಟೋಣದ ಕೆಲಸವನ್ನು ಪರಿಶೀಲಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾಗಿ ಕಟ್ಟುತ್ತಿರುವ ಕಟ್ಟಡಕ್ಕೆ ಹೆಂಗಸರಿಗಾಗಿ ಒಂದು ಹೊಸ ವಿಭಾಗವನ್ನು ಸೇರಿಸಿ ಅದರಲ್ಲಿ ಆರು ಮಂಚಗಳ ಅವಕಾಶ ಒದಗಿಸಬೇಕೆಂದೂ ಒಂದು ಹೆರಿಗೆ ವಿಭಾಗವನ್ನು ತೆರೆಯಬೇಕೆಂದೂ ಅದರ ಕಟ್ಟಡಕ್ಕಾಗಿ ತಗಲಬಹುದಾದ ಸಾಧಾರಣ ರೂಪಾಯಿ ಹತ್ತು ಸಾವಿರದ ಪೈಕಿ ಅರ್ಧಾಂಶವನ್ನು ಆಸ್ಪತ್ರೆ ಕಮಿಟಿಯವರು ಕೊಟ್ಟು ಸಹಕರಿಸುವುದಾಗಿಯೂ ಆಸ್ಪತ್ರೆ ಕಮಿಟಿ ಕಡೆಯಿಂದ ಶ್ರೀಗಳಾದ ಉಗ್ಗಪ್ಪ ಶೆಟ್ಟಿ, ರೆ| ಫಾ|| ಕರ್ವಾಲೊ, ಎಚ್. ಫೆರ್ನಾಂಡೀಸ್, ಬಿ. ಎಸ್. ಭಾಸ್ಕರ ರೈ ಮೊದಲಾದವರು ಮಾನ್ಯ ಮಂತ್ರಿಗಳಲ್ಲಿ ಹೇಳಿಕೊಂಡರು. ಆರೋಗ್ಯ ಕೇಂದ್ರಕ್ಕಾಗಿ ಈಗ ಕಟ್ಟುತ್ತಿರುವ ಕಟ್ಟೋಣಕ್ಕೆ ಸಾಧರಣ ರೂ 27500 ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಅದರಲ್ಲಿ ಅರ್ಧ ಖರ್ಚನ್ನು ಕಮ್ಯೂನಿಟಿ ಪ್ರೊಜೆಕ್ಟಿನಿಂದ ಕೊಡಲಾಗುತ್ತದೆ.

ಸಂಕಗಳ ಉದ್ಘಾಟನೆ—ಶ್ರೀ ಎ. ಬಿ. ಶೆಟ್ಟರು ತಾ 8ನೇ ಬೆಳಿಗ್ಗೆ ಮಂಗಳೂರು ಆಗುಂಬೆ ರಸ್ತೆಯ 49/3 ಮತ್ತು 52/5 ಮೈಲುಗಳಬಳಿ ಸಂಕಗಳನ್ನು ಉದ್ಘಾಟಿಸಿದರು. (ಉದ್ಘಾಟನಾ ಭಾಷಣವನ್ನು ಬೇರೆಕಡೆ ಕೊಡಲಾಗಿದೆ)

ಸಭಾರಂಭದಲ್ಲಿ ಶ್ರೀ. ಎಮ್. ಎಸ್. ಶ್ರೋತ್ರಿಯವರು ಸರ್ವರನ್ನೂ ಸ್ವಾಗತಿಸಿದರು. ಶ್ರೀ ಕೆ. ಕೆ. ನಂಬಿಯಾರರು ಜಿಲ್ಲೆಯ ಸಾರಿಗೆ ವ್ಯವಸ್ಥೆ ಹಾಗೂ ಈ ಎರಡು ಸೇತುವೆಗಳ ವಿಷಯದಲ್ಲಿ ಮಾತನಾಡುತ್ತಾ, ರೈಲ್ವೆಯನ್ನು ಈಗಿನ ಪರಿಸ್ಥಿತಿಯಲ್ಲಿ ಹೆಚ್ಚಿಸಲು ಅಸಾಧ್ಯವಾದುದರಿಂದ ರಸ್ತೆ ಸಾರಿಗೆಯನ್ನು ಹೆಚ್ಚಿಸುವುದೇ ಈಗಣ ಪರಿಸ್ಥಿತಿಯಲ್ಲಿ ಸಾಧ್ಯ. ಹೆಚ್ಚು ಮಳೆ ಬೀಳುವ ಈ ಜಿಲ್ಲೆಯಲ್ಲಿ ರಸ್ತೆಗಳನ್ನು ದುರಸ್ತಿ ಸ್ಥಿತಿಯಲ್ಲಿಡುವುದು ಬಹಳ ಕಷ್ಟ ಸಾಧ್ಯ; ಹೆಚ್ಚಿನ ರಸ್ತೆಗಳಿಗೆ ಡಾಮರು ಹಾಕುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಮುಂತಾಗಿ ಹೇಳಿದರು. ಅಧ್ಯಕ್ಷ ಸ್ಥಾನ ವಹಿಸಿದ ಶ್ರೀ ಬಿ. ವೈಕುಂಠ ಬಾಳಿಗರು ಮಾತನಾಡುತ್ತಾ ಸ್ವರಾಜ್ಯ ದೊರೆತ ನಂತರ ಈ ಜಿಲ್ಲೆಯಲ್ಲಿ ಅಂಚೆ ತಂತಿ ಸಾರಿಗೆ ಕೈಗಾರಿಕೆ ಕೃಷಿ ಮೊದಲಾದ ಇಲಾಖೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ತಿಳಿಸುತ್ತಾ ಪಕ್ಷ ಪಂಗಡಗಳ ಭೇದವನ್ನು ಮರೆತು ರಾಷ್ಟ್ರದ ಬೆಳವಣಿಗೆಗೆ ಸಹಕಾರಿಯಾಗುವ ಎಲ್ಲಾ ಕಾರ್ಯಗಳಲ್ಲಿ ಮಹಾಜನರೆಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು. ಶ್ರೀ ಎಸ್. ಪಿ. ನ್ಯಾಕರು ಧನ್ಯವಾದಗಳನ್ನರ್ಪಿಸಿದರು. ನಂತರ ಮಂತ್ರಿಗಳು ಕೆಲಕ್ಕಳ ಸಂಕವನ್ನು ನಂತರ ಬಚ್ಚಪ್ಪು ಸಂಕವನ್ನು ಉದ್ಘಾಟಿಸಿದರು. ಈ ಎರಡು ಸಂಕಗಳಿಗೆ ಕ್ರಮವಾಗಿ ರೂಪಾಯಿ 1.82 ಲಕ್ಷ ಮತ್ತು 1.25 ಲಕ್ಷ ವೆಚ್ಚವಾಗಿರುತ್ತದೆ.

ಹೆಬ್ರಿಯಲ್ಲಿ—ಮಾನ್ಯ ಮಂತ್ರಿ ಎ. ಬಿ. ಶೆಟ್ಟರು ಹೆಬ್ರಿಗೆ ಬಂದು ಅಲ್ಲಿಯ ಬೋರ್ಡು ಹಾ| ಎ| ಶಾಲೆಯಲ್ಲಿ ಜರಗಿದ ಸಭೆಯಲ್ಲಿ ಹೆಬ್ರಿ ಪಂಚಾಯತ ಬೋರ್ಡಿನ ಕಡೆಯಿಂದ ಅದರ ಅಧ್ಯಕ್ಷ ಶ್ರೀ ಸುಂದರ ಬಲ್ಲಾಳರು ಒಪ್ಪಿಸಿದ ಮನವಿಯನ್ನು ಸ್ವೀಕರಿಸಿದರು. ಹೆಬ್ರಿಗೆ ಹೈಸ್ಕೂಲು ಬೇಕೆನ್ನುವ ಹೆಬ್ರಿಯಲ್ಲಿ ಬೆತ್ತದ ಗುಡಿಕೈಗಾರಿಕೆ ಕೇಂದ್ರವನ್ನು ತೆರೆಯಬೇಕೆನ್ನುವ, ಕಾರ್ಕಳ ಹೆಬ್ರಿ ನಡುವೆ ಬಸ್ ಸರ್ವಿಸನ್ನು ಕೊಡಬೇಕೆನ್ನುವ ಇತ್ಯಾದಿ ವಿಷಯಗಳು ಮನವಿಯಲ್ಲಿ ಹೇಳಲ್ಪಟ್ಟಿತ್ತು. ಕಾರ್ಕಳ ಮತ್ತು ಆಜೆಕಾರು ಫಿರ್ಕಗಳ ಪರವಾಗಿ ಶ್ರೀ ಸಂಜೀವ ನ್ಯಾಕರು ಅರ್ಪಿಸಿದ ಮನವಿಯಲ್ಲಿ ಹೆಬ್ರಿ ಬೆಳ್ವೆ ಮತ್ತು ಮುದ್ರಾಡಿ ಅಲ್ಬಾಡಿ ರಸ್ತೆಗಳಲ್ಲಿರುವ ಪಂಚಾಯತ ರಸ್ತೆಗಳನ್ನು ಹೈವೇ ಇಲಾಖೆಯವರು ತೆಗೆದುಕೊಂಡು ಅವುಗಳ ದುರಸ್ತಿ, ರಕ್ಷಣೆ ನೋಡಿಕೊಳ್ಳಬೇಕೆಂದು ಸೂಚಿಸಲಾಗಿತ್ತು. ಶ್ರೀ ಕೆ. ಸದಾನಂದ ಹೆಗ್ಡೆ. ಎಮ್. ಪಿ ಯವರು ಹೆಬ್ರಿಯು ಕಮ್ಯೂನಿಟಿ ಪ್ರೊಜೆಕ್ಟಿನ ಮುಂದಿ ಕೇಂದ್ರವಾದುದರಿಂದ ಹೆಬ್ರಿಗೆ ತುಂಬಾ ಪ್ರಯೋಜನವಿದೆಯೆಂದೂ, ಹೆಬ್ರಿ ಆಜೆಕಾರುಗಳ ನಡುವೆ ಒಂದು ಬೆತ್ತದ ಕೈಗಾರಿಕೆ ಕೇಂದ್ರವನ್ನು ತೆರೆಯುವಂತೆ ತಾನು ಕೇಂದ್ರ ಹಾಗೂ ಪ್ರಾಂತಿಕ ಸರಕಾರಗಳನ್ನು ಒತ್ತಾಯಿಸುತ್ತಿದ್ದೇನೆಂದೂ ಹೇಳಿದರು. ಬಳಿಕ ಗ್ರಾಮಾಭ್ಯುದಯ ಅಧಿಕಾರಿ ಶ್ರೀ ಕೆ. ಎಮ್. ಬಾಬು ಶೆಟ್ಟರು ಜನರು ಕಮ್ಯೂನಿಟಿ ಪ್ರೊಜೆಕ್ಟುಗಳ ಕಾರ್ಯಕ್ರಮಗಳಲ್ಲಿ ಸಹಕರಿಸಿ ಅವುಗಳ ಪ್ರಯೋಜನ ಪಡೆಯಬೇಕೆಂದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಹೆಬ್ರಿಯ ಸಾರ್ವಜನಿಕ ಕೆಲಸಗಾರರ ನಿಸ್ವಾರ್ಥ ಸೇವಾ ತತ್ಪರತೆಯನ್ನು ಹೊಗಳಿ ಮುಂದಿನ ಎರಡು ವರ್ಷಗಳ ಕಮ್ಯೂನಿಟಿ ಪ್ರೊಜೆಕ್ಟಿನಿಂದ ತುಂಬ ಪ್ರಯೋಜನ ಪಡೆಯಬಹುದೆಂದು ಸೂಚಿಸಿದರು. ಶ್ರೀ ರಾಮರಾಯರು ಧನ್ಯವಾದಗಳನ್ನರ್ಪಿಸಿದರು.

ನಂತರ ಮಾನ್ಯ ಮಂತ್ರಿಗಳು ಹೆಬ್ರಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಂದರ್ಶನವಿತ್ತಾಗ ಆ ಕೇಂದ್ರದ ಡಾಕ್ಟರ್ ಕುಮಾರಿ ಲಲಿತ ಚನ್ನಮೊರ್ಕೆಯವರು ಸ್ವಾಗತವಿತ್ತರು. ಬಳಿಕ ಕಮ್ಯೂನಿಟಿ ಹಾಲಿನ ಶಂಕು ಸ್ಥಾಪನೆಯನ್ನು ನೆರವೇರಿಸಿದರು. ಈ ಹಾಲಿಗೆ ಸಾಧಾರಣ ಎಂಟು ಸಾವಿರ ರೂಪಾಯಿ ಖರ್ಚು ತಗಲಬಹುದೆಂದೂ ಆ ಪೈಕಿ ಹೆಚ್ಚಿನಂಶವನ್ನು ಊರವರೇ ಕೊಡಲಿರುವರು. ಅಲ್ಲಿಂದ ಮುಂದೆ ಮಂತ್ರಿಗಳು ಆರೋಗ್ಯ ಕೇಂದ್ರಕ್ಕಾಗಿ ಸಾಧಾರಣ ರೂಪಾಯಿ 30,000 ವೆಚ್ಚದಿಂದ ಕಟ್ಟಿಸಲಾರಂಭವಾದ ಆಸ್ಪತ್ರೆ ಕೆಲಸಗಳನ್ನು ಪರಿಶೀಲಿಸಿದರು. ಆಸ್ಪತ್ರೆಯಲ್ಲಿ ಆರು ಹಾಸಿಗೆಗಳ ವ್ಯವಸ್ಥೆಯಿರುವುದು.

ಕಾರ್ಕಳದಲ್ಲಿ— ಮಾನ್ಯ ಮಂತ್ರಿಗಳು ಸಂಜೆ ಕಾರ್ಕಳಕ್ಕೆ ಆಗಮಿಸಿ ಕಾರ್ಕಳ ಪಂಚಾಯತ ಬೋರ್ಡಿನ ಪರವಾಗಿ ಅಧ್ಯಕ್ಷ ಶ್ರೀ ರಂಜಾಳ ಹರಿ ಶೆಣೈಯವರು ಒಪ್ಪಿಸಿದ ಮನವಿಯನ್ನು ಸ್ವೀಕರಿಸಿದರು. ಕಾರ್ಕಳ ಆಸ್ಪತ್ರೆಯನ್ನು ಸರಕಾರವೇ ಸ್ವಾಧೀನ ಪಡಿಸಿಕೊಂಡು ಅದನ್ನು ಉತ್ತಮ ಗೊಳಿಸಬೇಕು ಎಂದು ಮೊದಲಾಗಿ ಮನವಿಯಲ್ಲಿ ಸೂಚನೆಗಳಿದ್ದುವು. ಮಂತ್ರಿಗಳು ಉತ್ತರವೀಯುತ್ತಾ ದೇಶದ ಮುಂದಿರುವ ಎಲ್ಲಾ ಸಮಸ್ಯೆಗಳನ್ನು ಒಮ್ಮೆಗನೇ ಪರಿಹರಿಸಲು ಶಕ್ಯವಿಲ್ಲ. ಒಂದೊಂದೇ ಯೋಜನೆಯನ್ನು ಪೂರೈಸಿಕೊಂಡು ಮುನ್ನಡೆಯಬೇಕು. ಪಂಚವಾರ್ಷಿಕ ಯೋಜನೆಗಳ ಮುಖೇನ ಇವೆಲ್ಲವೂ ಕಾರ್ಯರೂಪಕ್ಕೆ ಬಂದು ಎಲ್ಲವೂ ಸರಿಹೋಗುವುದೆಂದು ಹೇಳಿದರು. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ಕೂಡಾ ತಾನು ಸಹಕಾರ ನೀಡುವುದಾಗಿ ತಿಳಿಸಿದರು. ಪಂಚಾಯತ ಬೋರ್ಡು ಉಪಾಧ್ಯಕ್ಷ ಶ್ರೀ ಎನ್. ಮೋಹನದಾಸ ಅಧ್ಯಂತಾಯರು ವಂದನೆಗಳನ್ನರ್ಪಿಸಿದರು. ಮಂತ್ರಿಗಳು ತತ್ಪೂರ್ವದಲ್ಲಿ ಕಾರ್ಕಳ ಬಂಗ್ಲೆಯಲ್ಲಿ ವಿದ್ಯುದ್ದೀಪವನ್ನು ಬೆಳಗಿಸಿದರು.

ಇರ್ವತ್ತೂರು-ಸಾಣೂರು ರಸ್ತೆ—ಗ್ರಾಮಸ್ಥರು ಸ್ವಶ್ರಮದಿಂದ ಕಮ್ಯೂನಿಟಿ ಪ್ರೊಜೆಕ್ಟ್ ಆಶ್ರಯದಲ್ಲಿ ಮಾಡುತ್ತಿರುವ ಇರ್ವತ್ತೂರು—ಸಾಣೂರು ರಸ್ತೆಯನ್ನು ಮಾನ್ಯ ಮಂತ್ರಿಗಳು ಕಾರ್ಕಳದಿಂದ ಮಂಗಳೂರಿಗೆ ಹೋಗುವಾಗ್ಗೆ ಪರಿಶೀಲಿಸಿದರು.

ಶ್ರೀ ಯು. ಎಸ್. ಮಲ್ಯರ ಆಗಮನ—ಅ. ಭಾ. ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳೂ ಭಾರತ ಪಾರ್ಲಿಮೆಂಟಿನ ಸದಸ್ಯರೂ ಆದ ಶ್ರೀ ಯು. ಶ್ರೀನಿವಾಸ ಮಲ್ಯರು ತಾ 6ನೇ ಬೆಳಿಗ್ಗೆ ವಿಮಾನದಲ್ಲಿ ಮಂಗಳೂರಿಗೆ ಬಂದಿದ್ದು ಮರುದಿನ ಕಾಂಗ್ರೆಸ್ ಕಾರ್ಯಕರ್ತರೊಡನೆಯೂ ಶಾಸನ ಸಭಾ ಸದಸ್ಯರೊಡನೆಯೂ ಕಾಂಗ್ರೆಸ್ ಪ್ರಚಾರ, ರಚನಾತ್ಮಕ ಕಾರ್ಯಕ್ರಮಾದಿಗಳ ಕುರಿತು ವಿಚಾರ ವಿನಿಮಯ ಮಾಡಿ ಸಂಜೆ ಹಿಂತೆರಳಿರುತ್ತಾರೆ.

ಜಾನುವಾರು ಪ್ರದರ್ಶನವು-ಇದೇ ತಾ. 14ರಲ್ಲು ಮಧ್ಯಾಹ್ನ 3 ಗಂಟೆಯಿಂದ ತಾಲೂಕು ಕಚೇರಿ ವಠಾರದಲ್ಲಿ ಮದ್ರಾಸು ಎನಿಮಲ್ ಹಸ್ಬೆಂಡರಿ ಇಲಾಖೆ ಮತ್ತು ಜಿಲ್ಲಾ ಗೋರಕ್ಷಣ ಕಮಿಟಿಗಳ ಆಶ್ರಯದಲ್ಲಿ ಜರಗುವುದು. ಸೈಲೇಜು ಮಾಡುವ ಕ್ರಮವನ್ನು ಈ ಪ್ರದರ್ಶನ ಕಾಲದಲ್ಲಿ ಪ್ರದರ್ಶಿಸಲಾಗುವುದು. ಅಲ್ಲದೆ ಉತ್ತಮ ಜಾನುವಾರುಗಳಿಗೆ ಬಹುಮಾನಗಳನ್ನು ಕೊಡಲಾಗುವುದು.

ಬಿಜಕಲ್ ಕಟ್ಟೆ—ಇದೇ ತಾ 7ರಲ್ಲು ಹಾರ್ದಳ್ಳಿ ಮಂಡಳ್ಳಿ ಗ್ರಾಮದ ಬಿಜಕಲ್ ಕಟ್ಟೆಯಲ್ಲಿ ಶ್ರೀ ಕಿರಾಡಿ ಹಿರಿಯಣ್ಣ ಶೆಟ್ಟರ ನೇತೃತ್ವದಲ್ಲಿ "ಕೃಷ್ಣ ಸಂಧಾನ" ಯಕ್ಷಗಾನ ಕೂಟ ಸಮಾರಂಭವೊಂದು ಶ್ರೀ ವೈ. ಮಂಜಯ್ಯ ಶೆಟ್ಟಿ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಮ್. ಎನ್. ಹೆಗ್ಡೆ, ಎಮ್. ವಿಶ್ವೇಶ್ವರಯ್ಯ, ಕೆ. ಸಂಜೀವ ರಾವ್, ಕೆ. ಅಣ್ಣಪ್ಪ ಕಾರಂತ ಮೊದಲಾದವರು ಪ್ರಮುಖ ಪಾತ್ರಗಳನ್ನು ವಹಿಸಿದ್ದರು. ಜನಸ್ತೋಮವು ತುಂಬಾ ಯಿತ್ತು.

ಕುಂಬಳೆ.— ಕಳೆದ ಫೆಬ್ರವರಿ ತಾ. 18ರಲ್ಲು ಇಲ್ಲಿಯ ಪಂಚಾಯತ ಬೋರ್ಡು ಅಧ್ಯಕ್ಷ ಸ್ಥಾನಕ್ಕೆ ಚುನಾಯಿಸಲ್ಪಟ್ಟ ಶ್ರೀ ಕೆ. ಕಣ್ಣಪ್ಪನವರ ಚುನಾವಣೆಯನ್ನು ರದ್ದುಗೊಳಿಸಬೇಕೆಂದು ಶ್ರೀ ಕೆ. ಬಾಬುರಾಯ ಭಟ್ಟರು ಕಾಸರಗೋಡು ಡಿ| ಮು| ಕೋರ್ಟಿನಲ್ಲಿ ಮಾಡಿದ ಅರ್ಜಿ ತನಿಖೆ ನಡಿಸಲ್ಪಟ್ಟು, ಚುನಾವಣೆಯು ಸಿಂಧುವೆಂದಾಯಿತಲ್ಲದೆ ಕೋರ್ಟು ಖರ್ಚನ್ನು ಶ್ರೀ ಭಟ್ಟರೇ ಕೊಡಬೇಕೆಂದೂ ತೀರ್ಪು ಕೊಡಲಾಯಿತು.

ಪ್ರದರ್ಶಿಸುತ್ತಿರುವ ಚಿತ್ರ

ಕನ್ನಿಯನ್ ಕಾದಲಿ

ತಾರಾಗಣ: ಅಂಜಲಿದೇವಿ, ಮಾಧುರಿ, ಪುಳಿಮೂಟೆ, ಸಾರಂಗಪಾಣಿ, ಲಲಿತಾ, ಪದ್ಮಿನಿ.

ಮುಂದಿನ ಚಿತ್ರ: ಪರ್‌ಮಾಯಿಶ್, ಲೈಲಾಮಜ್ನು, ಪೆಟ್ರೆತಾಯಾ.

15-11-53 ಆದಿತ್ಯವಾರ ಬೆಳಿಗ್ಗೆ 10ಕ್ಕೆ "ನೈಟ ವಿದೌಟ್ ಸ್ಲೀಪ್"

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಓದ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕುದುರಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅವಿಲು ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ 2 0 0
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ.

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 6 0

ಸುಲಭದಲ್ಲಿ ಇಂಗ್ಲಿಷ್ ರೂ. 1 3 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ಭಾರತದ ಗುರುಕುಲ

(ಯಕ್ಷಗಾನ)

ಬೆಲೆ: 0 8 0

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ಸಾಹಸ ಭೀಮ ವಿಜಯ	0—8—0
ಲಕ್ಷ್ಮಣ ಪತನ	0—6—0
ಭರತೇಶ ದಿಗ್ವಿಜಯ	0—8—0
ವಾಲಿ ಸುಗ್ರೀವ	0—8—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು—ಆಗುಂಬೆ ಘಾಟಿ ರಸ್ತೆಯಲ್ಲಿಯ ಎರಡು ಸೇತುವೆಗಳ ಉದ್ಘಾಟನೆ

ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರ ಭಾಷಣ

ಮದ್ರಾಸು ಸರಕಾರದ ಆರೋಗ್ಯ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರು ಇದೇ ತಾ. 9ರಲ್ಲಿ ಪೂರ್ವಾಹ್ನ 10-30 ಗಂಟೆಗೆ ಮಂಗಳೂರು-ಆಗುಂಬೆ ಹೆದ್ದಾರಿಯಲ್ಲಿಯ ಎರಡು ಸೇತುವೆಗಳನ್ನು ಉದ್ಘಾಟಿಸುತ್ತಾ ಹೀಗೆಂದರು 'ಈ ಪ್ರಾಮುಖ್ಯ ಹೆದ್ದಾರಿಯಲ್ಲಿಯ ಎರಡು ಸೇತುವೆಗಳನ್ನು ತೆರೆಯುವರೆ ನನಗೆ ತುಂಬಾ ಸಂತೋಷವಾಗುತ್ತದೆ. ನಮ್ಮ ಜಿಲ್ಲೆಯ ಒಳಪ್ರದೇಶಗಳಲ್ಲಿ ಹೆಚ್ಚಿನ ನದಿಗಳಿಗೂ, ಹಳ್ಳಗಳಿಗೂ ಸೇತುವೆಗಳಾಗಲೀ [illegible] (ಬಿದಿರಿನ ಪಾಲ)ಗಳಾಗಲೀ ಇಲ್ಲದಿರುವ ಕುರಿತು ಸರಕಾರದ ಗಮನಕ್ಕೆ ತರಲಾಗಿದೆ. ಈ ಜಿಲ್ಲೆಯ ಸಾರಿಗೆ ಸಂಪರ್ಕವನ್ನು ಸುಗಮವಾಗಿ ನಡೆಸಲು ಯೋಗ್ಯ ರೀತಿಯ ಮಾರ್ಗ ನಿರ್ಮಾಣದ ಅವಶ್ಯಕತೆಯಿದೆ. ಈ ಜಿಲ್ಲೆಯಲ್ಲಿರುವ ಹೆಚ್ಚಿನ ಸೇತುವೆಗಳು ಸಂಕಗಳು ಬಹಳ ಹಳೆಯದಿದ್ದುದರಿಂದ ಅವುಗಳ ಪುನರ್ ನಿರ್ಮಾಣ ಅತ್ಯಗತ್ಯವಿದೆ. ಕರಾವಳಿ ಮಾರ್ಗದಲ್ಲಿ 21 ನದಿಗಳಿದ್ದು ಕುಳೂರು ನದಿಗೆ ಮಾತ್ರ ಈಚೆಗೆ ಸೇತುವೆ ಹಾಕಲಾಗಿದೆ.

1946ರಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರ ಸ್ವೀಕರಿಸಿತು.

1946ನೆ ಎಪ್ರಿಲ್ ತಿಂಗಳಲ್ಲಿ ಪ್ಯಾವೇಸ್ ಇಲಾಖೆಯನ್ನು ಪ್ರಥಮತ ಊರ್ಜಿತಕ್ಕೆ ತಂದುದು ಮದ್ರಾಸ್ ಸರಕಾರವು. ಅಂದಿನಿಂದ ಈ ಜಿಲ್ಲೆಯ ಹೆದ್ದಾರಿಗಳಲ್ಲಿ ಗಣನೀಯ ಸುಧಾರಣೆಯಾಗಿದೆ. 1946 ಎಪ್ರಿಲ್ ತಿಂಗಳಿಂದ 1953ನೆ ಮಾರ್ಚ್ ತಿಂಗಳ ತನಕ 61.16 ಲಕ್ಷ ರೂಪಾಯಿಗಳು ಸೇತುವೆ, Causeway ಮತ್ತು ದಾರಿಗಳಿಗಾಗಿ ವೆಚ್ಚ ಮಾಡಲಾಯಿತು. ದೊಡ್ಡ ಸೇತುವೆಗಳನ್ನು ನಿರ್ಮಾಣ ಮಾಡುವುದು ನಮಗೆ ಅತೀ ಪ್ರಾಮುಖ್ಯವಾಗಿದೆ. ನಮ್ಮ ಜಿಲ್ಲೆಗೆ ಅಂತಹ ಹನ್ನೆರಡು ದೊಡ್ಡ ಸೇತುವೆಗಳ ನಿರ್ಮಾಣವು ಮಂಜೂರಾಗಿರುವುದು. ಈ ಬಗ್ಗೆ ಸಾಧಾರಣ 42.5 ಲಕ್ಷದಷ್ಟು ಖರ್ಚು ಅಂದಾಜು ಮಾಡಲಾಗಿದೆ. ಈ ಪೈಕಿ ಆರು ಪೂರ್ಣಗೊಂಡು ವಾಹನ ಸಂಚಾರಕ್ಕೆ ತಕ್ಕುದಾಗಿವೆ. ಕೂಳೂರು ಮತ್ತು ತೆಕ್ಕಟ್ಟೆ ಸೇತುವೆಗಳು ಈ ಪೈಕಿ ಅತಿ ದೊಡ್ಡದಾದುವು. ಪೂಜೆಮುಗರ್, ಪುತ್ತಿಗೆ, ಕಲ್ಯಾಣಿ, ನೀಲೇಶ್ವರ, ಕರಿಯಂಗೊಡೆ ಸೇತುವೆ ನಿರ್ಮಾಣ ಕಾರ್ಯವು ಕೆಲವು ಪ್ರಾರಂಭಿಸಲಾಗಿವೆ, ಇನ್ನು ಕೆಲವು ಪ್ರಾರಂಭಗಳಾಗುವುದು.

ಈ ತನಕ ನಮ್ಮ ಜಿಲ್ಲೆಗೂ ನೆರೆಯ ಮಲಬಾರ ಜಿಲ್ಲೆಗೂ ಸಾರಿಗೆ ಸಂಪರ್ಕಕ್ಕೆ ಸಾಕಷ್ಟು ರಸ್ತೆಗಳ ಸೌಕರ್ಯವಿದ್ದಿಲ್ಲ. ಈ ಕೊರತೆಯು ತೆಕ್ಕಟ್ಟೆ ಸೇತುವೆ ಪೂರ್ಣತೆಯಿಂದ ನೀಗಿದಂತಾಯಿತು. ಮಾತ್ರವಲ್ಲದೆ ಹೊಸದುರ್ಗ ಸಬ್ ತಾಲೂಕು ಕೂಡಾ ಈಗ ಈ ಜಿಲ್ಲೆಯ ಸಾರಿಗೆಗೆ ಅನುಕೂಲತೆಯನ್ನು ಪಡೆದಂತಾಗಿದೆ. ಮಲಬಾರು ಜಿಲ್ಲೆಯ ಪಲ್ಲೂರು ಮತ್ತು ಕರಿವೆಳ್ಳೂರು ಹೆದ್ದಾರಿಯು ಪೂರ್ಣವಾಗುತ್ತಿರುವುದರಿಂದ ನಮ್ಮ ಜಿಲ್ಲೆಗೂ ಮಲಬಾರು ಜಿಲ್ಲೆಗೂ ಸಾರಿಗೆ ವಾಹನ ಸಂಚಾರವು ನೇರವಾಗಿ ನಡೆಯಲು ಸುಲಭ ಸಾಧ್ಯವಾದಂತಾಯಿತು.

ತೆಕ್ಕಟ್ಟೆ, ಬಂಟ್ವಾಳ, ಕಾರ್ಕಳ, ಮೂಡಬಿದ್ರಿ ಇತ್ಯಾದಿ ಒಳ ಪ್ರದೇಶಗಳ ಸಾಧಾರಣ 176 ಮೈಲು ರಸ್ತೆಗಳನ್ನು ರೂಪಾಯಿ 90 ಲಕ್ಷ ವೆಚ್ಚದಿಂದ ಸರಿಪಡಿಸಿ ಭಾವೀ ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಡಿಸುವ ಯೋಜನೆಯ ಕುರಿತು ಇಂಡಿಯಾ ಸರಕಾರವು ಪರ್ಯಾಲೋಚಿಸುತ್ತದೆ. ಈ ವೆಚ್ಚದಲ್ಲಿ 39 ಲಕ್ಷ ದೊಡ್ಡ ಸೇತುವೆಗಳಿಗೂ 28 ಲಕ್ಷ ತಾರು ಹಾಕಲಿಕ್ಕೂ 23 ಲಕ್ಷ ಇತರ ಕಾಮಗಾರಿಗಳಿಗೂ ವಿಂಗಡಿಸಲಾಗುವುದು. ಇದರಿಂದ ಈ ಜಿಲ್ಲೆಗೆ ಸರ್ವತೋಮುಖ ಹೆದ್ದಾರಿ ಸೌಕರ್ಯ ಸಿಕ್ಕುವುದು.

ನಮ್ಮ ಜಿಲ್ಲೆಯಲ್ಲಿ 1503 ಮೈಲುದ್ದದ ರಸ್ತೆಯಿದ್ದು ಆ ಪೈಕಿ 900 ಮೈಲು ರಸ್ತೆಗೆ ಜಲ್ಲಿ ಕಲ್ಲು ಹಾಕಲಾಗಿದೆ. ಸಾಧಾರಣ 600 ಮೈಲು ರಸ್ತೆಗಳಿಗೆ ಜಲ್ಲಿ ಕಲ್ಲು ಹಾಕಲಿಲ್ಲ. ಹೆಚ್ಚು ಹಳ್ಳಿ ರಸ್ತೆಗಳನ್ನು ರಚಿಸಬೇಕಾಗಿದೆ ಮತ್ತು ಈಗ ಇರುವ ರಸ್ತೆಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದೆ. ಈ ಜಿಲ್ಲೆಯ ರಸ್ತೆಗಳ ಧೂಳಿನ ಹಾವಳಿಯನ್ನು ನಿವಾರಿಸುವುದಕ್ಕಾಗಿ ಸಾಧಾರಣ 12 ಲಕ್ಷ ರೂಪಾಯಿ ವೆಚ್ಚದಿಂದ ಅಂದಾಜು 56.5 ಮೈಲು ಮಾರ್ಗಗಳಿಗೆ ಡಾಮರು ಹಾಕಲಾಗಿದೆ. ಬಾಕಿ ಸಮಯದಲ್ಲಿ 69 ಮೈಲು ರಸ್ತೆಗಳಿಗೆ ಡಾಮರು ಹಾಕುವ ಯೋಜನೆ ನಡೆದಿದೆ. ಈ ಪೈಕಿ ಮಂಗಳೂರು-ಮಡಿಕೇರಿ ರಸ್ತೆ, ಮಂಗಳೂರು-ಮೈಸೂರು ರಸ್ತೆ, ಮಂಗಳೂರು-ಆಗುಂಬೆ ರಸ್ತೆ, ಮತ್ತು ಮಲ್ಪೆ ಉಡುಪಿ-ಕಾರ್ಕಳ ರಸ್ತೆ ಇವುಗಳಲ್ಲಿ ಹೆಚ್ಚಿನಂಶವು ಡಾಮರು ರಸ್ತೆಗಳಾಗಿ ರೂಪಾಂತರ ಹೊಂದುವವು.

ಪ್ರಕೃತ ನಮ್ಮ ರಾಜ್ಯದಲ್ಲಿ ಎರಡು ಸರಕಾರಿ ಇಂಜಿನಿಯರಿಂಗ್ ಕಾಲೇಜುಗಳೂ ಮೂರು ಸರಕಾರೇತರ ಎಂಜಿನಿಯರಿಂಗ್ ಕಾಲೇಜುಗಳಿದ್ದು ವರ್ಷಂಪ್ರತಿ ಸಾಧಾರಣ 500 ಮಂದಿ ಎಂಜಿನಿಯರಿಂಗ್ ಗ್ರ್ಯಾಜುವೇಟುಗಳನ್ನು ತಯಾರಿಸುತ್ತಿರುವವು. ಐದು ಪೊಲಿಟೆಕ್ನಿಕ್ ವಿದ್ಯಾಲಯಗಳಿದ್ದು, ಅವು ಸಾಧಾರಣ 470 ಮಂದಿಯನ್ನು ವರ್ಷಂಪ್ರತಿ ತಯಾರಿಸುತ್ತಿವೆ. ಹೀಗೆ ಪಾಸಾಗಿ ಬಂದವರಲ್ಲಿ ಹೆಚ್ಚಿನವರು ಇತರ ರಾಜ್ಯಗಳಲ್ಲಿ ನೌಕರಿಯನ್ನು ಪಡೆಯುತ್ತಿದ್ದವರು. ಇನ್ನು ಮುಂದೆ ಅವರಿಗೆ ಇತರ ರಾಜ್ಯಗಳಲ್ಲಿ ನೌಕರಿ ದೊರೆಯುವುದು ಕಷ್ಟ ಸಾಧ್ಯ. ನಮ್ಮ ಮದ್ರಾಸು ರಾಜ್ಯದಲ್ಲಿ ಸರಕಾರಿ ಇಲಾಖೆಯವರು ಕೆಲವೇ ಮಂದಿಗೆ ಕೆಲಸ ಒದಗಿಸಲು ಸಮರ್ಥರಿರುವರು. ಪ್ರೈವೇಟು ಮತ್ತು ಅನುದಾನಿತ ಪ್ರೊಜೆಕ್ಟುಗಳಲ್ಲಿ ಕೆಲವರಿಗೆ ಮಾತ್ರ ಕೆಲಸ ದೊರೆಯಲು ಸಾಧ್ಯವಿದ್ದು ಎಂಜಿನಿಯರಿಂಗ್ ಪದವೀಧರರ ನಿರುದ್ಯೋಗ ಸಮಸ್ಯೆಯು ಮುಂದೆ ಕಠಿಣವಾಗಲಿರುವುದು. ಆದುದರಿಂದ ನಮ್ಮಲ್ಲಿಯ ಎಂಜಿನಿಯರಿಂಗ್ ಪದವೀಧರರು ರಸ್ತೆ, ಸೇತುವೆ, ಕಟ್ಟೋಣಗಳ ನಿರ್ಮಾಣ ಕಾರ್ಯದಲ್ಲಿ ಸ್ವತಂತ್ರ ಉದ್ಯೋಗವನ್ನು ಮಾಡಬೇಕಾಗಿದೆ.

ಈ ಜಿಲ್ಲೆಯ ಎಂಜಿನಿಯರಿಂಗ್ ಖಾತೆಯ ನಾಯಕರಾಗಿ ಶ್ರೀ ಕೆ. ಕೆ. ನಂಬಿಯಾರರ ಕೆಲಸ ಮಾಡಿದ್ದು ಈ ಜಿಲ್ಲೆಯ ಅವಶ್ಯಕತೆಗಳ ಪರಿಜ್ಞಾನವು ಅವರಿಗಿದೆ. ಈಗ ಈ ರಾಜ್ಯದ ಮುಖ್ಯ ಎಂಜಿನಿಯರರಾಗಿರುವುದರಿಂದ ನಾವು ಅವರಿಂದ ಹೆಚ್ಚಿನ ಸಹಾಯವನ್ನು ಈ ಜಿಲ್ಲೆಗೆ ನಿರೀಕ್ಷಿಸಬಹುದು.



ನಮ್ಮ ಪೋಲಿಸಿದಾರರಿಗೆ
ಸಕಲ ಪ್ರತಿನಿಧಿಗಳಿಗೆ
ಸಮಸ್ತ ಹಿತೈಷಿಗಳಿಗೆ
ನಮ್ಮ ಪ್ರೀತಿಪುರಸ್ಸರವಾದ—
ದೀಪಾವಳಿ ಶುಭಾಶಯಗಳನ್ನು
ಸಲ್ಲಿಸುತ್ತೇವೆ.
ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ. 0-12-0
V. P. P. ಮೂಲಕ 1—4—0
ಒಂದು ರೂಪಾಯಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.
ನೂರುಗಟ್ಟಲೆ ಪಡಕೊಳ್ಳುವವರಿಗೆ ರಿಯಾಯತಿ ದರವಿದೆ. ವಿಚಾರಿಸಿರಿ:-
ನವಯುಗ ಪ್ರೆಸ್, ಉಡುಪಿ.

ಬಹಿರಂಗ ಏಲಂ

ತೊಟ್ಟಾಂ ಕಥೋಲಿಕ್ ಎಸೋಸಿಯೇಶನ್ ಮತ್ತು ಪೇರು ಹೋಲ್ಡರರು ಒಟ್ಟುಗೂಡಿ ಪಡೆದ, ಚಾಲೂ ಸ್ಥಿತಿಯಲ್ಲಿರುವ ಪೆಟ್ರೋಲ್ ಮೆಶಿನ್ 10 H. P. ಮತ್ತು ಪಂಪ್ ಸೆಟ್ (ಪೈಪ್ ಸಮೇತ) ಇದೇ ತಾ. 23-11-53 ನೇ ಆದಿತ್ಯವಾರ ಬೆಳಿಗ್ಗೆ 10 ಗಂಟೆಗೆ ತೊಟ್ಟಾಂ ಇಗರ್ಜಿ ಕಂಪೌಂಡಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಂಗೆ ನಿಲ್ಲ ಬಯಸುವವರು ಅವಶ್ಯಕಂಡಲ್ಲಿ ಸದರಿ ಇಗರ್ಜಿ ಕಂಪೌಂಡಿನಲ್ಲಿ ಇಂಜಿನನ್ನು ಮುಂದಾಗಿ ಪರೀಕ್ಷಿಸಿಕೊಳ್ಳಬಹುದು.

ಕಾರ್ಯದರ್ಶಿ.
ತೊಟ್ಟಾಂ ಕಥೋಲಿಕ್ ಎಸೋಸಿಯೇಶನ್
ತೊಟ್ಟಾಂ, ದ. ಕ. ತಾ. 9-11-53.

ಕಿಲ್ಲೆ ಸ್ಮಾರಕ ಗ್ರಂಥ

ಅಪ್ರತಿಮ ಭಾಷಣಗಾರರಾಗಿ, ಭಾಷಾಂತರಕಾರರಾಗಿ, ಅಸಾಧಾರಣ ಯಕ್ಷಗಾನ ಕಲೋಪಾಸಕರಾಗಿ, ಅಗ್ರಗಣ್ಯ ದೇಶಸೇವಕರಾಗಿ, ದೀನ ದಲಿತ ಹರಿಜನ ಸೇವಕರಾಗಿ, ಉತ್ತಮ ಸಾಮಾಜಿಕ ಕೆಲಸಗಾರರಾಗಿ ವಿವಿಧ ಕ್ಷೇತ್ರಗಳಲ್ಲಿ ಹಲವು ವಿಧದಲ್ಲಿ ಜನತೆಯ ಮೇಲೆ ತನ್ನ ವ್ಯಕ್ತಿತ್ವದ ಅಚ್ಚೊತ್ತಿ ನಡುಪ್ರಾಯದಲ್ಲೇ ಮೃತ್ಯುವಿಗೆ ತುತ್ತಾದ ಶ್ರೀ. ಎಸ್. ಎಸ್. ಕಿಲ್ಲೆಯವರ ಸ್ಮಾರಕವಾಗಿ ದ. ಕ. ಜಿಲ್ಲಾ ಕಿಲ್ಲೆ ಸ್ಮಾರಕ ಸಮಿತಿ, ಮಂಗಳೂರು ಇವರಿಂದ ಸಚಿತ್ರವಾಗಿ ಪ್ರಕಟಿಸಲ್ಪಟ್ಟ

ಕಿಲ್ಲೆ ಸ್ಮಾರಕ ಗ್ರಂಥವನ್ನು

ಕೊಂಡುಕೊಂಡು ಸ್ಮಾರಕ ಕಾರ್ಯಗಳಿಗೆ ನೆರವಾಗಿರಿ.
ಸಂಗ್ರಹಕಾರರು: ಶ್ರೀಗಳಾದ ಎಚ್. ಆರ್. ಸುಬ್ಬ ಮತ್ತು ಕೆ. ಕೆ. ಶೆಟ್ಟಿ, ಮಂಗಳೂರು.
ದೊಡ್ಡ ಆಕಾರದ 160 ಪುಟಗಳು. ಬೆಲೆ ರೂ. 1-0-0 ಮಾತ್ರ.
ಮುಖಂಡರನೇಕರ ಸಂದೇಶಗಳಿವೆ.
ಪ್ರಸಿದ್ಧರನೇಕರ ವಿವಿಧ ಲೇಖನಗಳಿವೆ.
ಕಿಲ್ಲೆಯವರ ನಾನಾ ಕಾರ್ಯಕ್ಷೇತ್ರದ ವಿವರಣೆಗಳಿವೆ.
ಪ್ರತಿಗಳು ಸಿಗುವ ಸ್ಥಳ
ನವಯುಗ ಪ್ರೆಸ್, ಉಡುಪಿ
ರೂ. 1-4-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಶ್ರೀಮಾನ್ ವಿ. ಸೀ. ಅವರು ೩೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

ಇದೇ ಡಿಸೆಂಬರ ಕೊನೆಯ ವಾರದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟೆಯಲ್ಲಿ ನಡೆಯಲಿರುವ ೩೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಪ್ರಖ್ಯಾತ ಕವಿಗಳೂ ನಾಟಕಕಾರರೂ ವಾಗ್ಮಿಗಳೂ ಆದ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ. ಎ., ಅವರನ್ನು ಸಮ್ಮೇಳನದ ಸ್ವಾಗತ ಸಮಿತಿಯವರೂ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯವರೂ ಸರ್ವಾನುಮತದಿಂದ ಆರಿಸಿದ್ದಾರೆ.

ತಣ್ಣೀರು ಪಂತ—ಸ್ಥಳೀಯ ವಯಸ್ಕರ ಶಿಕ್ಷಣ ಸಪ್ತಾಹದ ಅಂಗವಾಗಿ ಇದೇ ತಾ 4ರಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಧರ್ಣಪ್ಪನವರು 40 ಮಂದಿ ವಯಸ್ಕರೊಡನೆ ಮಚ್ಚಿನ ಗ್ರಾಮದ ಬಳ್ಳಮಂಜಕ್ಕೆ ಪ್ರವಾಸ ಹೋಗಿ ಶ್ರೀ ಕೆ. ಶೀನ ಶೆಟ್ಟಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವಯಸ್ಕರ ಪ್ರಚಾರ ಗೀತ, ಚಟುವಟಿಕೆ ಮೊದಲಾದವನ್ನು ಪ್ರದರ್ಶಿಸಿದರು. ಶ್ರೀಗಳಾದ ಕೆ. ಸಂಜೀವ, ಎನ್. ನಾರಾಯಣ ಶೆಟ್ಟಿ ಮೊದಲಾದವರು ವಯಸ್ಕರ ಶಿಕ್ಷಣದ ಕುರಿತು ಭಾಷಣವಿತ್ತರು. ಶ್ರೀ ಕೆ. ಧರ್ಣಪ್ಪನವರು ಧನ್ಯವಾದಗಳನ್ನು ಅರ್ಪಿಸಿದರು.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಕರ್ನಾಟಕದ ಶಾರದಾ ಪೀಠ

(೧ನೇ ಪುಟದಿಂದ)

ಸಿತು. ಮುಂಬಯಿ ರಾಜ್ಯದ ಹೊರಗಿನ ಶಿಕ್ಷಣ ಸಂಸ್ಥೆಗಳ ಮನ್ನಣೆ ಮುಂತಾದ ಪ್ರಶ್ನೆಗಳನ್ನು ವಿಚಾರಿಸುವುದಕ್ಕೆ ಆ ಪ್ರದೇಶಗಳ ಪ್ರತಿನಿಧಿಗಳಿರುವುದು ಅಗತ್ಯವಾದುದರಿಂದ ಮುಂಬಯಿ ಸರಕಾರದ ಅಪ್ಪಣೆಪಡೆದ ದಕ್ಷಿಣ ಕನ್ನಡ,ಬಳ್ಳಾರಿ ಮತ್ತು ಕೊಡಗುಗಳಿಂದಲೂ ಒಬ್ಬೊಬ್ಬ ಪ್ರತಿನಿಧಿಯನ್ನು ಈ ಸಮಿತಿಯ ಸದಸ್ಯರಾಗಿ ಸೇರಿಸಿಕೊಂಡರು

ಸಮಿತಿಯು ಪ್ರಶ್ನಾವಳಿಯನ್ನು ಹೊರಡಿಸಿಯೂ ಶಿಕ್ಷಣ ತಜ್ಞರು ಹಾಗೂ ಈ ವಿಷಯದಲ್ಲಿ ಆಸ್ಥೆಯುಳ್ಳ ಮಹನೀಯರು ಮತ್ತು ಸಂಸ್ಥೆಗಳ ಸಾಕ್ಷಿ ಪಡೆದುಕೊಂಡೂ ತನ್ನ ಕೆಲಸವನ್ನು ಸಮರ್ಪಕವಾಗಿ ಪೂರೈಸಿತು. ಮದ್ರಾಸ ರಾಜ್ಯದಲ್ಲಿರುವ ಕನ್ನಡ ಪ್ರದೇಶಗಳ ಶಿಕ್ಷಣ ಸಂಸ್ಥೆಗಳಿಗೆ ಮನ್ನಣೆ ನೀಡುವ ವಿಷಯ ವಿಚಾರ ವಿನಿಮಯ ಮಾಡಲು ಕೆಲವು ಸದಸ್ಯರು ಆಗ ಇಲ್ಲಿ ಶಿಕ್ಷಣ ಮಂತ್ರಿಯಾಗಿದ್ದ ಶ್ರೀ ಅವಿನಾಶಲಿಂಗಂ ಚೆಟ್ಟಿಯಾರರನ್ನು ಕಂಡರು ಮೈಸೂರಿಗೆ ಸಮಿತಿಯ ಸದಸ್ಯರು ಹೋದಾಗ ಮೈಸೂರು ವಿಶ್ವವಿದ್ಯಾಲಯದ ಉಪಯೋಗವನ್ನೇ ಯಾಕೆ ಮಾಡಿಕೊಳ್ಳಬಾರದೆಂಬ ಸೂಚನೆ ಮುಂಬಂದಿತು. ಆದರೆ ಕನ್ನಡಕ್ಕೆ ಒಂದಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳು ಇರುವುದು ಒಳ್ಳೆಯದೆಂದೆನಿಸಿದ್ದರಿಂದ ಆ ಸಲಹೆಗೆ ಮಹತ್ವ ಬರಲಿಲ್ಲ.

ಬೆಳಗಾವಿ ಧಾರವಾಡ, ಬಿಜಾಪುರ, ಉತ್ತರ ಕನ್ನಡಜಿಲ್ಲೆ, ವಿಲೀನಹೊಂದಿದ ಕನ್ನಡ ಸಂಸ್ಥಾನಗಳು, ಕೊಲ್ಲಾಪುರದ ಕನ್ನಡ ಪ್ರದೇಶ ಇವು ಈ ವಿಶ್ವವಿದ್ಯಾಲಯದ ಕಕ್ಷೆಯಲ್ಲಿ ಬರಬೇಕೆಂದೂ ಮುಂಬಯಿ ರಾಜ್ಯದ ಹೊರಗಿರುವ ಕನ್ನಡ ಪ್ರದೇಶಗಳಲ್ಲಿರುವ ಶಿಕ್ಷಣ ಸಂಸ್ಥೆಗಳನ್ನು ಮನ್ನಿಸುವ ಅಧಿಕಾರ ಈ ವಿಶ್ವವಿದ್ಯಾಲಕ್ಕೆ ಇರಬೇಕೆಂದೂ ಸಮಿತಿಯು ಸರಕಾರಕ್ಕೆ ೧೯೪೮ನೇ ಮೇ ತಿಂಗಳಲ್ಲಿ ವರದಿ ಒಪ್ಪಿಸಿತು

ಈ ವರದಿಯಂತೆ ಮುಂಬಯಿ ಸರಕಾರವು ೧೯೪೯ನೇ ಮಾರ್ಚ ತಿಂಗಳಲ್ಲಿ ಕಾಯಿದೆ ಪಾಸು ಮಾಡಿತು; ಮತ್ತು ಜುಲೈ ತಿಂಗಳಲ್ಲಿ ಶ್ರೀ ಆರ್. ಎ. ಜಾಗಿರದಾರರು ಉಪಕುಲಪತಿಗಳಾಗಿ ನೇಮಕ ಹೊಂದಿದರು.

ಸದ್ಯಕ್ಕೆ ಈ ವಿಶ್ವವಿದ್ಯಾಲಯದಿಂದ ೧೨ ಶಿಕ್ಷಣ ಸಂಸ್ಥೆಗಳು ಮನ್ನಣೆ ಹೊಂದಿವೆ. ಅಲ್ಲದೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯೂ ಉಡುಪಿಯ ಮಣಿಪಾಲದಲ್ಲಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜೂ ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿವೆ ಮುಂಬಯಿ ರಾಜ್ಯದ ಹೊರಗಿನ ಕನ್ನಡ ಪ್ರದೇಶಗಳ ಶಿಕ್ಷಣ ಸಂಸ್ಥೆಗೂ ಮನ್ನಣೆ ಕೊಡುವ ದೂರ ದೃಷ್ಟಿಯನ್ನಿಟ್ಟುಕೊಂಡು ವಿಶ್ವವಿದ್ಯಾಲಯ ಸಮಿತಿ ಕೆಲಸ ಮಾಡಿದುದರ ಮಹತ್ವ ಈಗ ಸ್ಪಷ್ಟವಾಗಿರುತ್ತದೆ.

ಸಿಹಿ ನೀರು ತಯಾರಿಸುವ ಕಾರಖಾನೆ

(೪ನೇ ಪುಟದಿಂದ)

ಈ ಉತ್ಪಾದನಾ ಪ್ರಮಾಣವನ್ನು ಐವತ್ತು ಲಕ್ಷ ಗೆಲನುಗಳಿಗೇರಿಸಲು ಅನುಕೂಲವಾಗುವಂತೆ ಈ ರಾಕ್ಷಸ ಸದೃಶ ಕಾರ್ಖಾನೆಯು ನಿರ್ಮಾಣವಾಗಿರುತ್ತದೆ. ಬಾಷ್ಪೀಕರಣ ಕ್ರಿಯೆಯನ್ನು ನಡೆಸುವ ಯಂತ್ರಗಳು ಇಲ್ಲಿಯೇ ಮಣ್ಣಿಂದ ದೊರೆಯುವ ಎಣ್ಣೆಯಿಂದ ಕೆಲಸ ಮಾಡುತ್ತವೆ. ಈ ಕಾರ್ಖಾನೆಯಲ್ಲಿ ಶುದ್ಧೀಕರಣ ಹೊಂದಿದ ಲವಣ ಸಮುದ್ರದ ನೀರು ನಿರ್ಮಲವಾದ ನದಿಯ ನೀರಿಗಿಂತಲೂ ಹೆಚ್ಚು ಸಿಹಿಯಾಗಿ ಕಂಡುಬಂದಿದೆ.

ಕುವೈತಿನಲ್ಲಿ ಯಶಸ್ವಿಯಾದ ಈ ಪ್ರಯೋಗವನ್ನು ಮರುಭೂಮಿಯೇ ಹೆಚ್ಚಾಗಿರುವ ಬೇರೆ ಕೆಲವು ರಾಜ್ಯಗಳೂ ಅನುಕರಿಸಲು ಹವಣಿಸುತ್ತವೆ. ಇಲ್ಲಿ ಕೆಲಸ ಮಾಡುತ್ತಿರುವ ಆಂಗ್ಲ ವಿಶೇಷಜ್ಞರನ್ನು ಆಮಂತ್ರಿಸಿ ತಮ್ಮ ರಾಜ್ಯದಲ್ಲಿಯೂ ಜಲ ಬಾಷ್ಪೀಕರಣ ಯಂತ್ರವುಳ್ಳ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ಅವು ಆತುರ ತೋರುತ್ತವೆ.

ಆದರೆ ಇಲ್ಲಿ ಕೆಲಸ ಮಾಡುವಂಥ ಸಿಹಿ ನೀರಿನ ಕಾರಖಾನೆಯನ್ನು ಬೇಕೆಂದಲ್ಲಿ ಸ್ಥಾಪಿಸುವುದು ಸಾಧ್ಯವಿಲ್ಲ. ಉಪ್ಪು ನೀರನ್ನು ಕುದಿಸುವುದಕ್ಕೆ ಇಂಧನವು ಬೇಕಾಗಿದೆ- ಅದು ಕುವೈತಿನಲ್ಲಿ ಬಹಳ ಅಗ್ಗವಾಗಿ ದೊರೆಯುವ ಎಣ್ಣೆಯಷ್ಟೇ ಬೇರೆಡೆಯಲ್ಲಿಯೂ ಸಿಗುತ್ತದಾದರೆ ಮಾತ್ರ, ಪ್ರಯೋಜನ ಹೊಂದಬಹುದು. ನಿಸರ್ಗ ನೀಡಿದ ಈ ಕಾಣಿಕೆಯು, ಕುವೈತಿನ ಎಣ್ಣೆ ಕಂಪೆನಿಯ ಸಾಹಸಕ್ಕೆ ಮೂಲ ಪ್ರೇರಣೆಯಾಗಿರುತ್ತದೆ ಪ್ರಕೃತಿಯ ಈ ವರದಾನದಿಂದ ವಂಚಿತವಾದ ಇತರ ಮರು ಪ್ರದೇಶಗಳಲ್ಲಿ ಕಟ್ಟಿಗೆ ಅಥವಾ ಕಲ್ಲಿದ್ದಲನ್ನು ಇಂಧನವಾಗಿ ಉಪಯೋಗಿಸಿ ಸಿಹಿ ನೀರು ತಯಾರಿಸಲು ನೋಡುವುದು ಲಾಭದಾಯಕವೆನಿಸದು.

ಈ ಅಪೂರ್ವ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಬೇಕಾದ ನವೀನ ತಮ ಯಂತ್ರೋಪಕರಣಗಳಿಗೋಸ್ಕರ ಎಣ್ಣೆ ಕಂಪೆನಿಯು ಎರಡೂವರೆ ಕೋಟಿ ರೂಪಾಯಿಗಳನ್ನು ವ್ಯಯಿಸಿದೆ. ಈ ವೆಚ್ಚವು ಅನಗತ್ಯವೆಂದೂ ಅಪವ್ಯಯವೆಂದೂ ಕೆಲವರು ದೂರುವುದುಂಟು ಅವರ ಹೇಳಿಕೆಯಂತೆ, ಇದಕ್ಕಿಂತ ಎಷ್ಟೋ ಕಡಿಮೆ ಖರ್ಚಿನಲ್ಲಿ ಇರಾಕಿನ ಸೀಮಾ ಪ್ರದೇಶದಲ್ಲಿ ಹರಿಯುವ ನದಿಯಿಂದ ನಳುಗಳ ಮೂಲಕ ನೀರನ್ನು ಕುವೈತಿಗೆ ಒದಗಿಸಿಕೊಳ್ಳಲು ಸಾಧ್ಯವಿದೆ. ಆದರೆ ಸ್ವಯಂ ಕುವೈತಿನ ಪ್ರಜೆಗಳು ಈ ವಾದದಲ್ಲಿ ಹುರುಳಿಲ್ಲವೆಂದು ಪ್ರತಿಭಟಿಸುವರು ಇರಾಕ ಸರಕಾರವು ತನ್ನ ಗಡಿ ಪ್ರದೇಶದಲ್ಲಿ ಹರಿಯುವ ನದಿಯ ನೀರಿನ ಪೂರೈಕೆಯನ್ನು ಬೇಕೆಂದಾಗ ನಿಲ್ಲಿಸಿ ಬಿಡಬಹುದು. ಅವರ ಮರ್ಜಿಯನ್ನು ಕಾಯುತ್ತಾ, ಕೃಪಾಛತ್ರದ ನೆರಳಲ್ಲಿರುವುದು ಶೋಭೆಯಲ್ಲ ಸಿಹಿನೀರಿನ ಕಾರಖಾನೆಯನ್ನು ನಡೆಸುವುದೇ ಈ ಗಂಡಾಂತರದಿಂದ ಎಷ್ಟೋ ಶ್ರೇಯಸ್ಕರ.

ನಿಜಕ್ಕೂ ಈ ಸಿಹಿನೀರಿನ ಕಾರ್ಖಾನೆ ಕುವೈತಿನ ನಿವಾಸಿಗಳಲ್ಲಿ ಅತ್ಯಪೂರ್ವ ತೃಪ್ತಿಯನ್ನು ಹುಟ್ಟಿಸಿರುತ್ತದೆ. ಶತಮಾನಗಳಿಂದ ಮನಸೋಕ್ತ ನೀರಿನ ಉಪಯೋಗ ಮಾಡಿಕೊಳ್ಳದೆ ಬಹಳ ಕಷ್ಟ ಪಡುತಿದ್ದ ಈ ಜನಕ್ಕೆ ಈಗ ನೀರಿನ ಸರಾಗ ಪೂರೈಕೆ ಹರ್ಷವನ್ನುಂಟುಮಾಡಿರುತ್ತದೆ. ಕನಿಷ್ಠ ಇನ್ನು ಹತ್ತು ವರ್ಷಗಳ ವರೆಗಾದರೂ ಅವರಿಗೆ ಈ ಆನಂದ ದೊರೆತೇ ತೀರುವ ಭರವಸೆ ಇದೆ. —ನವನೀತ

ಮೇಟ್ರನ್ ಬೇಕಾಗಿದ್ದಾರೆ

ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಮೇಟ್ರನ್ ಹುದ್ದೆಗೆ ಬಂಟ ಸಮಾಜದ ವಿದ್ಯಾವಂತೆ ಮಹಿಳೆಯರಿಂದ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಸಂಬಳ ಇತ್ಯಾದಿ ಪ್ರತ್ಯಕ್ಷ ಸಂದರ್ಶನ ಕಾಲದಲ್ಲಿ ನಿರ್ಧರಿಸಲಾಗುವುದು.

ಅರ್ಜಿಗಳನ್ನು ಹೊಸ್ಟೆಲ್ ಕಮಿಟಿ ಪ್ರೆಸಿಡೆಂಟ್ ಶ್ರೀ. ಬಿ. ಎಮ್. ಹೆಗ್ಡೆ, ಬಿ.ಎ. ಬಿ. ಎಲ್. ಅವರಿಗಾಗಲೀ ಯಾ ಎಸ್. ಆರ್. ವಿ. ಭವನದ ಗೌ| ಕಾರ್ಯದರ್ಶಿನಿ ಶ್ರೀಮತಿ ಶಾಂಭವಿ ಆರ್. ಪೂಂಜರಿಗಾಗಲೀ ಕಳುಹಿಸತಕ್ಕದು.

ಧರ್ಮಾರ್ಥ—ಮುಕ್ತಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3



ಓದಲೇ ಬೇಕಾದ ಪುಸ್ತಕಗಳು

ಹೆಂಗುಸರ ಕತೆಗಳು

ಬೆಲೆ ರೂ. ೨—೦—೦

ಪಂಚಕಜ್ಜಾಯ — ಅವಿಲು

ಬೆಲೆ ರೂ ೧—೮—೦ ಬೆಲೆ ರೂ. ೨—೦—೦

ಉಡುಗೊರೆ ಕೊಡಲು ಅನುಕೂಲವಾಗುವಂತೆ ಗಟ್ಟಿಮುಟ್ಟಾದ ರಟ್ಟಿನ ರಕ್ಷಾಕವಚವುಳ್ಳ ಪುಸ್ತಕಗಳಿವು.

ಬಾಳಿನ ಬೆಡಗು

ಬೆಲೆ: ರೂ. 1—4—0

ವಿದ್ಯೆಕಲಿತ ಯುವಕನೋರ್ವನು ವರಿಸಿದ ಹಳ್ಳಿಯ ಮುಗ್ಧೆಯೋರ್ವಳ ಪ್ರೇಮವನ್ನು ಅರಿಯದೆ,ಅವಳನ್ನು ತ್ಯಜಿಸಿ ಓದುಕಲಿತ ಬೆಡಗಿನ ಹೆಣ್ಣಿನ ನಟನೆಗೆ ಮರುಳಾಗಿ, ಹಾಳಾಗಿ, ಸ್ವಾಮಿಯೋರ್ವರ ಅನುಗ್ರಹದಿಂದ ಮತ್ತೆ ಮಿಲನವಾಗುವ ಕಥಾವಸ್ತುವನ್ನೊಳಗೊಂಡ ಸರಸ—ಸುಂದರ ಕಾದಂಬರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ದೈಸಿ ತಯಾರಿಸಲ್ಪಟ್ಟ ಅಮೋಘವಾದ ಧುರವ್ರನರಸಾಯನ.



ಹೆಚ್ಚಿನ ಮಾಹಿತಿಗೆ— ಡಾ| ಯಂ ವಿ ಶಾಸ್ತ್ರೀ, ಯಲ್. ಐ. ಎಂ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಚಿಕಿತ್ಸಕರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಒಂದೆರಡು ವರ್ಷಗಳ ಮಾಹಿತಿಯುಳ್ಳ ಯೋಗ್ಯ ಕಂಪೋಜಿಟರರು ಬೇಕು.

14 ವರ್ಷಕ್ಕೆ ಮೇಲ್ಪಟ್ಟ ಕೆಲವು ಹುಡುಗರನ್ನು ತರಬೇತಿಗಾಗಿಯೂ ಸೇರಿಸಿಕೊಳ್ಳಲಾಗುವುದು.

ವಿಚಾರಿಸಿರಿ.

ನವಯುಗ ಪ್ರೆಸ್,-ಉಡುಪಿ.

ಸ್ವೀಕಾರ—ವಿಮರ್ಶೆ

ಪರಾಗ (ಒಕ್ಟೋಬರ, ೧೯೫೩) —

ಉಡುಪಿಯ ಮಹಾತ್ಮಾ ಗಾಂಧೀ ಸ್ಮಾರಕ ಕಾಲೇಜಿನವರು ಈ ಸುಂದರವಾದ ಸಚಿತ್ರ ಪತ್ರಿಕೆಯನ್ನು ಹೊರಡಿಸಿರುವರು. ಬಹು ಸಾಹಿತ್ಯದಿಂದ, ವಿಮರ್ಶೆ, ಜೀವನ ಚರಿತ್ರೆ, ವಿಜ್ಞಾನದ ಪರಿಗಾ ಸ್ವಾರಸ್ಯವಾದ ಬರಹಗಳನ್ನು ಈ ಸಂಚಿಕೆಯು ಒಳಗೊಂಡಿರುತ್ತದೆ. ಕನ್ನಡ ವಿಭಾಗದಲ್ಲಿ "ಲೈಫ್ ಮೇಕರ್ ಬೇಕ್" ಎಂಬ ವಿಮರ್ಶೆ "ವಿನಾಯಕ ಚರಿತೆ" ಎಂಬ ಕತೆ ಪ್ರಕೃತಿ ಎಂಬ ಕವನ, "ಕತ್ತೆ" ಎಂಬ ಪ್ರಹಸನ [illegible] ಚೆನ್ನಾಗಿವೆ. ಹಿಂದೀ ವಿಭಾಗದಲ್ಲಿ ದಾ| ಕೋಟ್ನೀಸರ ಜೀವನವನ್ನು ಕುರಿತಾದ ಲೇಖನವು ಸುಂದರವಾಗಿದೆ. ಸಂಚಿಕೆಯ ಕುರಿತು ಹೇಳಬೇಕಾದ ಒಂದು ವೈಶಿಷ್ಟ್ಯ ಎಂದರೆ ಶ್ರೀ ಅನಿರುದ್ಧನ ಕುರಿತು [illegible] ಈ ತರುಣನಿಗೆ ಚಿತ್ರಕಲೆಯಲ್ಲಿ ಉಜ್ವಲ ಭವಿಷ್ಯವಿರುವುದನ್ನು ಅವರು ಬರೆದ ಕೆಲವು ವರ್ಣ ಚಿತ್ರಗಳು ಸ್ಪಷ್ಟವಾಗಿ ಸೂಚಿಸುತ್ತವೆ. ಹಿಂದೀ ವಿಭಾಗದ ಲೇಖನಗಳನ್ನು ಮುದ್ರಿಸದೆ, ಸುಂದರವಾದ ಅಕ್ಷರಗಳಲ್ಲಿ ನಕಲು ತೆಗೆದಿರುವುದು ಸಂಚಿಕೆಯ ಸೌಂದರ್ಯಕ್ಕೆ ಒಪ್ಪವಿಡುವಂತಿದೆ. ಆದರೆ ಕನ್ನಡ ವಿಭಾಗವನ್ನು ನಾಲ್ಕಾರು ಜನರಿಂದ ಬರೆಸಿದಂತೆ ಕಾಣುತ್ತದೆ; ಒಬ್ಬೊಬ್ಬರ ಅಕ್ಷರವು ಅಷ್ಟು ಚೆನ್ನಾಗಿಲ್ಲ. [illegible] ಪುಟಗಳನ್ನು ಬರೆಸಲಾಗಿದೆ; ಕನ್ನಡ ವಿಭಾಗವನ್ನು ಅಚ್ಚುಕಟ್ಟಾಗಿ ಬರೆಸುತ್ತಿದ್ದ

ಲ್ಲಿ [illegible] ನಂ. [illegible] ಕನ್ನಡ [illegible]

ಯೋಗಪ್ರದೀಪ ([illegible])

[illegible] (ಕನ್ನಡ) [illegible] ರೂ. ೧ [illegible]

ಈ [illegible] ಕನ್ನಡ [illegible]

[illegible]

[illegible]

[illegible]

[illegible]

[illegible]

Mrs. P. DEVEE, [illegible]
CALCUTTA.

[illegible]

THE MAHARASHTRA APEX BANK, LTD.

(Incorporated in India. Liability of Shareholders Limited.)

"Ramanjaneya Building". UDIPI, S. Kanara.

* * * * * * *

NOTICE

NOTICE is hereby given that an Extra-ordinary General Meeting of the shareholders of the Bank will be held at the *Registered Office* of the Bank at "Ramanjaneya Building", Udipi, on Monday the 23rd November, 1953 at 4 p. m. for the purpose of considering and if thought fit passing the following resolutions as Special Resolutions:

"Resolved that the assets and liabilities of the Bank be transferred to The Canara Industrial & Banking Syndicate, Ltd., Udipi, in terms of the agreement the draft of which is attached hereto and that the Board of Directors be authorised to execute the agreement between this Bank and the Syndicate.

Resolved that the Board of Directors be empowered to carry out the terms of the agreement by executing and accepting the necessary deeds, documents, conveyances, transfers etc., in full compliance with the Articles of Association of the Bank."

The presence of all the shareholders of the Bank at the said meeting is earnestly solicited. If, however, a shareholder is unable to attend the meeting in person, he may appoint a shareholder of the Bank as his proxy by sending the proxy form duly stamped with revenue stamp of the value of two annas and duly signed and attested, so as to reach the Registered Office of the Bank by 4 p. m. of the 20th November, 1953

By Order of the Board

"Ramanjaneya Building,"
UDIPI,
Dated: 22nd October, 1953.

K. Panduranga Pai,
Chairman.

DRAFT OF THE AGREEMENT TO BE ENTERED INTO BY AND BETWEEN THE CANARA INDUSTRIAL & BANKING SYNDICATE, LTD., AND THE MAHARASHTRA APEX BANK, LTD

AGREEMENT made and executed this the.............. day of November, 1953 between the Canara Industrial & Banking Syndicate Ltd., incorporated under the Indian Companies Act, with its registered *Head Office* at Udipi, South Kanara District, hereinafter called the Syndicate, of the one PART and the Maharashtra Apex Bank Ltd., a public limited liability Banking Company, registered under the Indian Companies Act and having its registered Head Office at Udipi, South Kanara District hereinafter called the Apex Bank of the OTHER PART

WHEREAS it is deemed expedient to transfer the business undertaking of the Apex Bank unto the Syndicate, in order to render better banking service it is agreed as hereinafter appearing.

NOW these presents witness and it is hereby agreed by and between the Syndicate and the Apex Bank as follows:

That the Syndicate shall take over from the Apex Bank all its liabilities to its depositors and creditors and accept the assets of the Apex Bank of an equal value

That the Apex Bank shall transfer and make over to the Syndicate and the Syndicate shall take over from the Apex Bank all the liabilities and obligations of the Apex Bank to its depositors and creditors on the same terms on which the Apex Bank holds the said various accounts and the Syndicate shall on and after such transfer pay and discharge the various moneys due to depositors and creditors of the Apex Bank as shown by their respective accounts with the Apex Bank.

In consideration of the premises the Apex Bank shall deliver, assign and transfer to the Syndicate such of the assets of the Apex Bank of a value equal to the amounts of the total liability to be taken over by the Syndicate as may be mutually agreed upon between the Apex Bank and the Syndicate. Valuation of assets is to be done at the market value of the securities for the Investments on G. P. Notes held by the Apex Bank, and with regard to the immoveable properties at the book value and with regard to the other assets, necessary to make up the amount to be certified to be good by the Auditor of the Apex bank.

The Apex Bank shall execute such transfers, endorsements or documents as may be necessary in favour of the Syndicate in respect of such assets, as may be necessary to completely and effectually vest such assets in the Syndicate

The transfer of such liabilities and making over of the assets will be completed as on the close of the business of the Apex Bank on 30th November 1953

On and after the 1st day of December 1953 the Apex Bank shall not carry on any banking business except to the extent necessary for the realisation of its residuary and other assets and convert the same into cash.

That the Managing Directors respectively of the two Banks shall decide upon all the necessary details, drafts of conveyances, transfers and endorsements and all other incidental matters for effectually carrying out the terms of this agreement.

IN WITNESS WHEREOF the common seals of the Canara Industrial & Banking Syndicate Ltd., and the Maharashtra Apex Bank, Ltd., have been hereunto affixed this the........................ day and year first herein-above written

ಶ್ರೇಷ್ಠ ದರ್ಜೆ ಗಡಿಯಾರ

ಪ್ರತಿಯೊಂದು 5 ವರ್ಷ ಗ್ಯಾರಂಟಿ. ಪ್ರತಿ ಆರ್ಡರ್ ಜೊತೆಗೂ ಒಂದು ಫೌಂಟನ್ ಪೆನ್ನು ಒಂದು ಸಿಗರೇಟ್ ಲೈಟರ್ ಉಚಿತ!

ನಂ. 132 (ಸೈಜ್ 7 3/4")
5 ಜೂ. ರೋಲ್ಡ್ ಗೋಲ್ಡ್ ರೂ. 30.
15 ಜೂ. ರೋಲ್ಡ್ ಗೋಲ್ಡ್ ರೂ. 40.



(ಹೆಂಗಸರಿಗೆ ಮತ್ತು ಗಂಡಸರಿಗೆ)
ನಂಬ್ರ 131 (ಸೈಜ್ 6 3/4")
ಸ್ಟ್ಯಾನ್ಲಿ ಕ್ರೋಂ. ಕೇಸ್ ರೂ. 20
,, ,, 5 ಜೂ. ರೋಲ್ಡ್ ಗೋಲ್ಡ್ ರೂ. 26
15 ಜೂಯಲ್ಸ್ ರೋಲ್ಡ್ ಗೋಲ್ಡ್ ರೂ. 35



ಅಲಾರಾಂ ಗಡಿಯಾರ
ಇಂಗ್ಲೀಷ್ ರೂ. 18
ಯು. ಎಸ್. ಎ. ರೂ. 19
ರೇಡಿಯಂ ಡೈಯಲ್ ರೂ. 2 ಪ್ರತ್ಯೇಕ

ಪಾಕೆಟ್ ವಾಚ್ ರೂ. 10 ಉತ್ತಮ ರೂ. 12
ಇಂಗ್ಲಿಷಿನಲ್ಲಿ ವ್ಯವಹರಿಸಿ. ಅಂಚೆವೆಚ್ಚ ಬೇರೆ ಆದರೆ 3 ಗಡಿಯಾರದ ಆರ್ಡರಿಗೆ ಉಚಿತ.

Calcutta Watch Co, Sec 268
Post Box No. 12203, CALCUTTA-5

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೧೨—೧೧—೫೩ರಿಂದ ತಾ. ೧೮—೧೧—೫೩ರ ವರೆಗೆ.

ಮೇಷ:— ಸದ್ಯ ನಿಮ್ಮ ಭವಿತವ್ಯವು ಏನೂ ಉತ್ತಮವಿರುವುದಿಲ್ಲ. ಹೆಚ್ಚಿನ ನಿಮ್ಮ ಕಾರ್ಯಕಲಾಪಗಳು ವಿಘ್ನಪರಂಪರೆಗಳಿಂದಾಗಿ ಮಧ್ಯದಲ್ಲೇ ನಿಂತು ಹೋಗಲಿವೆ, ವ್ಯಾಪಾರ ವ್ಯವಹಾರ ನೌಕರಿ ಮೊದಲಾದುವುಗಳಲ್ಲಿ ನಿರೀಕ್ಷಿಸಿದ ಫಲ ಲಭಿಸದು. ವಿಶೇಷತಃ ಸ್ತ್ರೀವರ್ಗದವರಿಂದ ಕಲಹ ಅಪವಾದಗಳು ಪ್ರಾಪ್ತವಾಗುವ ಸಂಭವವಿದೆ. ಆದರೂ ತರುಣ ಉತ್ಸಾಹೀ ಜನವೃಂದಕ್ಕೆ ವಾರಾದಿಯ 2 ದಿನಗಳಲ್ಲಿ ಪ್ರಯತ್ನ ಸಾಧ್ಯವಾದ ಕಾರ್ಯಗಳಲ್ಲಿ ವಿಜಯವೂ ಮಿತ್ರವರ್ಗದವರ ಬೆಂಬಲವೂ ಲಭಿಸುವದು.

ವೃಷಭ:— ಹೆಚ್ಚಿನ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರಲಿವೆ. ನಿಮ್ಮ ಕಾರ್ಯಚತುರತೆಗೆ ಶತ್ರುಗಳೂ ಬೆರಗಾಗುವರು. ಬಂಧು ಜನತೆಯ ಮತ್ತು ಗುರುಹಿರಿಯರ ಅನುಗ್ರಹದಿಂದಾಗಿ ಸಾಂಸಾರಿಕ ತಾಪತ್ರಯಗಳು ದೂರವಾಗಲಿವೆ. ಉದ್ಯೋಗದಲ್ಲಿ ಭಢತಿ ಸಿಗುವದು. ಮಕ್ಕಳ ಆರೋಗ್ಯದ ಕಡೆ ಸ್ವಲ್ಪ ಗಮನಿಸಿರಿ. ವ್ಯಾಪಾರೀ ವರ್ಗಕ್ಕೆ ಆಕಸ್ಮಿಕ ನಷ್ಟ ಪ್ರಾಪ್ತವಾದೀತು. ಪ್ರವಾಸವು ಸುಖಮಯವಾಗಲಿದೆ. ವಾರಾಂತ್ಯದ 5 ದಿನಗಳು ವಾಂಛಿತಾರ್ಥ ಪ್ರದಗಳಿವೆ.

ಮಿಥುನ: ಸದ್ಯ ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟ ಕಾಣಿಸೀತು. ನಿಮ್ಮಲ್ಲಿನ ಧೈರ್ಯೋತ್ಸಾಹಗಳು ಮಾಯವಾಗುವವು. ದುರ್ಜನರ ಸಂಸರ್ಗದಿಂದಾಗಿ ನಷ್ಟ ಕಷ್ಟ ಅಪವಾದಗಳಿಗೆ ಗುರಿಯಾದೀರಿ. ಗೃಹ ಕೃತ್ಯದ ಅವ್ಯವಸ್ಥೆಯಿಂದಾಗಿ ಪರಸ್ಪರ ಜಗಳ ಮನಸ್ತಾಪಗಳು ಹೆಚ್ಚುವವು. ಸೈನ್ಯಕೀಯ ಜನತೆಯೊಂದನ್ನುಳಿದು ಇತರರಾರಿಗೂ ಈ ಕಾಲವು ಚೆನ್ನಾಗಿಲ್ಲ. ವಾರಾಂತ್ಯದ 3 ದಿನಗಳಲ್ಲಿ ಮಿತ್ರವರ್ಗದವರ ಬೆಂಬಲದಿಂದಾಗಿ ಹಣದ ತಾಪತ್ರಯವು ದೂರಾಗುವದು. ಮನಸ್ಸಿಗೆ ಕೊಂಚ ಶಾಂತಿ ಲಭಿಸುವದು.

ಕರ್ಕಾಟಿ.— ಕೈಕೆಸರಾದರೆ ಬಾಯಿ ಮೊಸರಾದೀತು ಎಂಬಗಾದೆಯಂತೆ ನೀವಿಂದ್ಯ ಶ್ರಮವಹಿಸಿ ಕಾರ್ಯರಂಗದಲ್ಲಿ ಮುನ್ನುಗ್ಗಿರಿ. ದೈವವು ಸಾಕಷ್ಟು ತೃಪ್ತಿಕರವಿಲ್ಲದಿದ್ದರೂ ನಿಮ್ಮ ಪೌರುಷದಿಂದಾಗಿ ಇಷ್ಟಾರ್ಥವನ್ನು ಪಡೆವಿರಿ. ಹದಗೆಡ ಹುಲ್ಲೆಯಂತಿರುವ ನಿಮ್ಮ ಮನಸ್ಸನ್ನು ಬಿಗಿಹಿಡಿದು ಉದ್ಯೋಗ ಪ್ರವೃತ್ತರಾಗುವಿರಿ. ಕಫ ದೋಷದಿಂದಾಗಿ ಆರೋಗ್ಯಕ್ಕೆ ಧಕ್ಕೆಯಿದೆ. ಆಪ್ತಜನರ ವಿಯೋಗವುಂಟಾಗಲಿದೆ. ತಾ. 12, 13 ಈ ದಿನಗಳು ಇದ್ದುದರಲ್ಲಿ ಉತ್ತಮ ಇವೆ.

ಸಿಂಹ:— ಇಂದಿನ ನಿಮ್ಮ ಅದೃಷ್ಟವು ಮುಂಚಿನಷ್ಟು ಬಲಶಾಲಿಯಾಗಿಲ್ಲವು. ಅದ ಕಾರಣವೇ ಪ್ರಯತ್ನಕ್ಕೆ ತಕ್ಕ ಫಲಕಾಣಿಸಲಾರದು. ಜನತೆಯ ಸಹಕಾರವು ದಿನೇ ದಿನೇ ಕಡಿಮೆಯಾಗುತ್ತದೆ. ಪಿತ್ತಪ್ರಕೋಪದಿಂದಾಗಿ ದೇಹಾರೋಗ್ಯವು ಕೆಡುವದು. ಗೃಹತಾಪತ್ರಯಗಳು ಕೆಲಮಟ್ಟಿಗೆ ಕಡಿಮೆಯಾಗಲಿವೆ. ಆದರೂ ರಾಜಕೀಯ ಅಧಿಕಾರಿಗಳಿಂದ ನಾನಾ ತರದ ಪೀಡೆಗಳುಂಟಾಗುವ ಸಂಭವವಿದೆ. ವಾರಾದಿಯ 4 ದಿನಗಳು ಇದ್ದುದರಲ್ಲಿ ಹಿತಕರವೆನಿಸುವವು.

ಕನ್ಯಾ:— ಸದ್ಯ ನಿಮ್ಮ ಸುಖಪತಿಯು ಭಾಗ್ಯಕ್ಕೆ ಬರಲಿರುವುದರಿಂದಲೂ ಧನಪತಿಯು ಸ್ವಸ್ಥಾನದಲ್ಲಿದ್ದುದರಿಂದಲೂ ನಿಮಗೀ ವಾರದಲ್ಲಿ ಆರ್ಥಿಕ ಬಿಕ್ಕಟ್ಟು ಕಾಣಿಸದು. ಮನಸ್ಸಿಗೂ ನೆಮ್ಮದಿ ದೊರೆತೀತು. ಪ್ರವಾಸವು ಅನಿಷ್ಟದಾಯಿಯಾಗಲಿದೆ. ವಾಹನಾದಿಗಳ ಪ್ರಯಾಣ ಮರೆಹತ್ತುವಿಕೆ ಶಸ್ತ್ರ ಸಂಬಂಧವಾದ ಕಾರ್ಯಗಳನ್ನ ಸದ್ಯ ಬಹಿಷ್ಕರಿಸಿರಿ. ಸಂಸಾರದಲ್ಲಿ ಸಕಲಂಡು ಕೊರತೆಗಳು ಮಾಯವಾಗುವವು. ವಾರಾಂತ್ಯದ 5 ದಿನಗಳಲ್ಲಿ ಹೆಚ್ಚಿನ ನಿಮ್ಮ ಬಯಕೆಗಳು ಈಡೇರಲಿವೆ.

ತುಲಾ:— ಕೆಲವೊಂದು ವಾರಗಳಿಂದ ಸ್ವಲ್ಪ ಸುಧಾರಿಸಿದ್ದ ನಿಮ್ಮ ಪರಿಸ್ಥಿತಿಯು ಇಂದು ಪುನಃ ಬಿಕ್ಕಟ್ಟು ಕಾಣಲಾರಂಭಿಸುವದು. ಕೆಲವೇ ದಿನಗಳಲ್ಲಿ ಭಾಗ್ಯಗತನಾದ ಗುರುವು ಅಷ್ಟಮಕ್ಕೆ ಬರಲಿರುವನು. ಆದಾಯವು ಅಲ್ಪವಾಗಿದ್ದು ಖರ್ಚಿನ ಮಾರ್ಗಗಳು ದಿನೇ ದಿನೇ ಹೆಚ್ಚುವವು ಕಫ ಪಿತ್ತ ದೋಷದಿಂದಾಗಿ ಆರೋಗ್ಯವೂ ಕೆಡಲಿದೆ. ರಾಜಕೀಯ ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚಿನಂಶ ಪರಾಭವವುಂಟಾದೀತು. ಅಷ್ಟೇಶ್ವರ ವಿಧದ ಗೃಹತಾಪತ್ರಯಾದಿಗಳಿಂದ ಚಿಂತಾಕ್ರಾಂತರಾದ ನಿಮಗೆ ವಾರಾಂತ್ಯದ 2 ದಿನಗಳಲ್ಲಿ ಮಿತ್ರ ಜನರ ಸಮಾಗಮ ಸಹಕಾರಗಳೂ ಸುಖಲಾಭಗಳೂ ಲಭಿಸಲಿವೆ.

ವೃಶ್ಚಿಕ: ಬಂದದ್ದೆಲ್ಲಾ ಬರಲಿ ಗೋವಿಂದನ ದಯೆಯೊಂದಿರಲಿ ಎಂಬ ದೃಢಚಿತ್ತದಿಂದ ಕಾರ್ಯ ಪ್ರವೃತ್ತರಾಗಿರಿ. ನಿಮ್ಮ ಪರಿಶ್ರಮಕ್ಕೆ ತಕ್ಕ ಪ್ರತಿಫಲವು ಸಿಕ್ಕಿಯೇ ತೀರುವುದು. ಜನತೆಯಿಂದ ವಂದನಾದರಗಳನ್ನು ಹೊಂದುವಿರಿ. ಆದರೆ ಏಳೂವರೆ ಶನಿಯ ಕಾಟದಿಂದಾಗಿ ಆಕಸ್ಮಿಕ ಅನಿಷ್ಟ ಅನರ್ಥ ಪರಂಪರೆಗಳುಂಟಾಗಲಿವೆ. ಸೇವಕ ಜನತೆಗೀಕಾಲವು ಹೆಚ್ಚಿನ ಕಷ್ಟದಾಯಿಯಾಗಿ ಪರಿಣಮಿಸೀತು. ವಾರಾದಿಯ 2 ದಿನಗಳಲ್ಲಿ ಗೃಹ ಸುಖ ಮಿತ್ರ ಭೆಟ್ಟಿ ಸೋದರರ ಸಹಕಾರಗಳು ಲಭಿಸುವವು.

ಧನು:— ಪ್ರಕೃತ ನಿಮ್ಮ ಅದೃಷ್ಟವು ಉತ್ತಮವಾಗಿರುವುದು. ಲಾಭಸ್ಥಾನದಲ್ಲಿ ಗ್ರಹತ್ರಯರ ಸಮಾಗಮವಿರುವುದರಿಂದ ನಿಮ್ಮ ಪ್ರಯತ್ನಕ್ಕೆ ಮಿಕ್ಕಿ ಫಲವನ್ನು ಪಡೆವಿರಿ. ಸಮಾಜಗಳಲ್ಲಿ ಗಣ್ಯ ಸ್ಥಾನವನ್ನು ಪಡೆಯಲಿರುವಿರಿ. ಮಾತ್ರವಲ್ಲ ವ್ಯಾಪಾರ ನೌಕರಿ ಸೇವಾದಿಗಳಲ್ಲಿ ಹೆಚ್ಚಿನ ಲಾಭ ಸ್ಥಾನಮಾನಗಳು ಲಭಿಸುವವು. ರಾಜಕೀಯದ ಸಲುವಾಗಿ ಕೆಲವೊಂದು ಹಣ ವ್ಯಯವಾಗಲಿದೆ ಸನ್ಮಿತ್ರ ಬಂಧು ಬಾಂಧವರಿಂದ ಕೂಡಿದ ನಿಮಗೆ ತಾ, 14, 15, 16 ಒಳ್ಳೆಯ ವಿಜಯ ಲಾಭಕಾರೀ ದಿನಗಳಾಗಿವೆ.

ಮಕರ:— ನಿಮ್ಮ ತನುಮನೋರೋಗಗಳು ಸದ್ಯದಲ್ಲೇ ನಿವೃತ್ತಿ ಹೊಂದುವವು. ಆಪ್ತ ಜನರ ಸಹಾಯದಿಂದಾಗಿ ನೌಕರಿ ವ್ಯಾಪಾರದಲ್ಲಿ ಅಧಿಕವಾದ ಫಲವನ್ನು ಪಡೆವಿರಿ. ಸಾಂಸಾರಿಕ ತಾಪತ್ರಯಗಳಿಂದಲೂ ಮುಕ್ತರಾಗುವಿರಿ. ಆದರೆ ಮನಬಂದಂತೆ ವರ್ತಿಸತಕ್ಕ ನಿಮಗೆ ಜನತೆಯ ಬೆಂಬಲವು ಸಿಗದು. ಅಪವಾದಕ್ಕೂ ಗುರಿಯಾದೀರಿ ವಿಶೇಷತಃ ವಾಕ್ಕಲಹಕ್ಕೆ ಗುರಿಯಾಗುವಿರಿ. ಉಷ್ಣವಿಕಾರದಿಂದ ಆಗಾಗ ತಲೆಸಿಡಿತ ಹೊಟ್ಟೆನೋವು ಕಾಣಿಸೀತು ತಾ, 12, 13, 17, 18 ಈ ದಿನಗಳಲ್ಲಿ ಕೊಂಚ ನೆಮ್ಮದಿಯಿದೆ.

ಕುಂಭ:— ನಿಮ್ಮ ದೈವವಿಂದು ಸಾಕಷ್ಟು ತೃಪ್ತಿಕರವಿರುವುದು, ಆರ್ಥಿಕ ವಿಚಾರದಲ್ಲಿ ನಿಶ್ಚಿಂತರಾಗುವಿರಿ. ಗೃಹತಾಪತ್ರಯಗಳೆಲ್ಲವೂ ಮಾಯವಾಗುವವು. ಆದರೆ ನಿಮ್ಮ ಕಾರ್ಯಕಲಾಪಗಳು ನಿರೀಕ್ಷಿಸಿದಂತೆ ಕೊನೆಮುಟ್ಟಲಾರವು. ಶತ್ರುವರ್ಗದವರ ಕಾಟವು ವಿಶೇಷವಾಗಿದ್ದು ಹೆಚ್ಚಿನ ಹಾನಿಯಾದೀತು. ಮಾನಕ್ಕೂ ಕೂಡ ಧಕ್ಕೆಯುಂಟಾಗುವ ಸಂಭವವಿದೆ. ಚರ್ಮರೋಗಗಳಿಗೆ ಸಿಲುಕಲಿರುವಿರಿ. ತಾ. 14, 15 ಹೊರತಾಗಿ ಇತರ ದಿನಗಳು ಒಳ್ಳೆಯದಿಲ್ಲವು.

ಮೀನ:— ಗ್ರಹರೆಲ್ಲರೂ ಅನಿಷ್ಟ ಸ್ಥಾನಗತರಾಗಿರುವುದರಿಂದ ಸದ್ಯ ನಿಮ್ಮ ಯಾವ ಕಾರ್ಯಗಳೂ ಫಲಿಸುವಂತಿಲ್ಲ. ಒಂದೊಮ್ಮೆಗೇ ಪೌರುಷದಿಂದ ಕಾರ್ಯವನ್ನು ಮುಂದೊತ್ತಿದರೂ ಅದರಲ್ಲಿ ಕಷ್ಟನಷ್ಟಗಳೇ ಅಧಿಕವಾದಾವು ಆಪ್ತ ಜನರು ವಿರೋಧವಾಗಿ ವರ್ತಿಸುವರು. ಕೈಹಿಡಿದಾಕೆಯೂ ಕೂಡ ನಿತ್ಯ ಜಗಳವಾಡಲಿರುವಳು. ಹಣದ ನಿಮಿತ್ತ ಕಲಹ ಕಚ್ಚಾಟಗಳುಂಟಾದಾವು. ತಾ. 14, 15, 16 ಈ ಮೂರು ದಿನಗಳು ಅನುಕೂಲವಾಗಲಿವೆ.

ಪ್ರಕಟಣೆ

ಉಡ್ಪಿ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಭಂಡಾರದ ದಶಾವತಾರ ಮೇಳವನ್ನು ಇದೇ 1953-54ನೇ ಇಸವಿಯಲ್ಲಿ ನಡೆಸತಕ್ಕ ಹಕ್ಕನ್ನು ಭಂಡಾರದ ಎಕ್ಸಿಕ್ಯೂಟಿವ್ ಆಫೀಸರರ ಕಡೆಯಿಂದ ಆಫೀಸಿನಲ್ಲಿ ಇದೇ ತಾ 15—11—53 ನೇ ದಿನ ಅಪರಾಹ್ನ ಗಂಟೆ ೩ಕ್ಕೆ ಎಕ್ಸಿಕ್ಯೂಟಿವ್ ಆಫೀಸರರಿಂದ ಏಲಂ ಕರೆಯಲಾಗುವದು. ಖಾಯಿಸುಳ್ಳವರು ಸದ್ರಿ ತಾರೀಕಿಗೆ ಹಾಜರಾಗಿ ಏಲಂನಲ್ಲಿ ಪಡಕೊಳ್ಳಬಹುದು. ಏಲಂ ಶರ್ತವನ್ನು ಏಲಂ ಮುಂಚೆ ಆಫೀಸಿಗೆ ಹಾಜರಾಗಿ ತಿಳಿದುಕೊಳ್ಳತಕ್ಕದ್ದು.

sd. N. R. Bolar
Executive officer

ಮಂದಾರ್ತಿ ದೇವಸ್ಥಾನ ತಾ 23-10-53

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**
ಜಮಾ ವಹಿವಾಟು .... „ **60,50,000**

ಕಾಯಂ ಠೇವಣಾತಿಗಳು ! ತಿಂಗಳಿನಿಂದ 24 ತಿಂಗಳ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್ ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೪ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋದಲ್ಲಿ ಕೇಳಿರಿ.

ಖಾತ್ರಿ ಚಿನ್ನದ ನೆಕ್‌ಲೇಸ್. ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನ ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33 No 12

19-11-1953

ವರ್ಷ ೩೩ ವಾರ ೧೨

ನಾಳೆಯ ನಾಯಕನ ಚಿಂತೆ

ಅಖಿಲ ಭಾರತ ಸ್ವರೂಪದ ಲೇಖನ ಸ್ಪರ್ಧೆಯೊಂದನ್ನು ಈಗ ಯಾರಾದರೂ ಏರ್ಪಡಿಸುವುದಿದ್ದರೆ—ಅವರು ವಿಷಯಕ್ಕೋಸ್ಕರ ತಲೆ ಕೆಡಿಸಿ ಕೊಳ್ಳಬೇಕಾಗಿಲ್ಲ. "ನೆಹರೂರ ಬಳಿಕ ಯಾರು?" ಎಂದವರು ಸುಲಭದಲ್ಲಿಯೇ ಲೇಖನ ಸ್ಪರ್ಧೆಯ ವಿಷಯವನ್ನು ಹೇಳಿ ಬಿಡಬಹುದು. ಹೌದು. ಭಾರತೀಯರ ಆಸಕ್ತಿ ಮತ್ತು ವಿಚಾರವನ್ನು ಕೆಣಕುವ, ಕೆರಳಿಸುವ ರೀತಿಯಲ್ಲೇ ಈ ವಿಷಯವಿದೆ. ಇಷ್ಟು ವರ್ಷ ಕಳೆದಿದೆ—ನಾವು ನೆಹರೂವನ್ನು ನಾಯಕ ಪೂಜೆಯಿಂದ ಒಲೈಸಿದ್ದೇವೆ. ಎಂದೇ ಆಗಲಿ, ನೆಹರೂವಿನ ಬಳಿಕ ಯಾರು ಎಂದು ವಿಚಾರಿಸಿದ್ದೇವೆಯೆ? ಸಾಮಾನ್ಯವಾಗಿ ನಮ್ಮಲ್ಲಿ ಯಾರೂ ಹಾಗೆ ಮಾಡಿಲ್ಲ. "ನೆಹರೂ ಚಿರಾಯುವಾಗಲಿ! ನೂರು ವರ್ಷ ಬದುಕಿ ಭಾರತ ಮಾತೆಯ ಸೇವೆಮಾಡಲಿ!" ಎಂದು ಹಾರೈಸುವ ಭರದಲ್ಲಿ ನಮಗೆ ಒಂದು ದಿನ ನೆಹರೂ ನಮ್ಮ ನಡುವಿಂದ ಮಾಯವಾಗಿ ಹೋದಾರೆಂಬ ಕಲ್ಪನೆಯೇ ಬರುವುದಿಲ್ಲ.

ಆದರೆ ದೇಶದ ವಿದ್ಯಮಾನಗಳನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುವ ಕೆಲವು ಘನ ಗಂಭೀರ ವಿಚಾರದ ಜನರನ್ನು ನೆಹರೂರ ಬಳಿಕ ಯಾರೆಂಬ ಪ್ರಶ್ನೆ ಎಂದಿನಿಂದಲೂ ಪೀಡಿಸುತ್ತಿದೆ. ನೆಹರೂ ಭಾರತದ ಸ್ವಾತಂತ್ರ್ಯ, ಐಕ್ಯ ಮತ್ತು ಪ್ರಗತಿಯ ದ್ಯೋತಕವೆನಿಸಿದ ಮಹಾಜೀವ. ಭಾರತದ ಭವ್ಯ ಸಂಸ್ಕೃತಿಯೇ ಮೈವೆತ್ತು ಬಂದಂತೆ ಅವರ ವ್ಯಕ್ತಿತ್ವವಿದೆ. ಭಾರತೀಯನಿಗೋಸ್ಕರ ಅವರಷ್ಟು ಹೆಚ್ಚು ಸಹಾನುಭೂತಿಯನ್ನು ತೋರಿಸುವ ಹಾಗೂ ಅವರಿಗಿಂತ ಮಿಗಿಲಾಗಿ ಭಾರತದ ಸರ್ವಾಂಗೀಣ ಏಳಿಗೆಯ ಧ್ಯೇಯದಿಂದ ಶ್ರಮಿಸುವ ಇನ್ನೊಬ್ಬನಿಲ್ಲ. ಎಲ್ಲರ ಕಷ್ಟವನ್ನೂ ತಾನೊಬ್ಬನೇ ನಿಶ್ಚಿಂತೆಯಿಂದ ಹೊತ್ತುಕೊಂಡು ಕೆಚ್ಚೆದೆಯಿಂದ ಪ್ರತಿಕೂಲ ಪರಿಸ್ಥಿತಿಯೊಂದಿಗೆ ಹೋರಾಡುವ ನೆಹರೂ ಭೂಮಂಡಲವನ್ನು ಹೊತ್ತ ಆದಿಶೇಷನಂತೆಯೇ ಭಾರತೀಯರ ಪಾಲಿಗೆ ತೋರುವುದು ಆಶ್ಚರ್ಯವಲ್ಲ. ಮಹಾಶೇಷನು ತನ್ನ ಸಾವಿರ ಹೆಡೆಗಳಲ್ಲಿ ಒಂದರಿಂದ ಇನ್ನೊಂದಕ್ಕೆ ಭೂಭಾರವನ್ನು ವರ್ಗಾಯಿಸುವ ಗಳಿಗೆಯಲ್ಲೇ ಭೂಕಂಪವಾಗುವುದೆಂದು ಹಿಂದೂಗಳ ನಂಬಿಕೆ. ಅಂಥವರಲ್ಲಿ— ನೆಹರೂ ತಾನೊಬ್ಬನೇ ತನ್ನ ವ್ಯಕ್ತಿತ್ವದ ಬಲದಿಂದ ಹೊತ್ತ ಹೊಣೆಗೆ ಹೆಗಲು ಕೊಡುವಷ್ಟು ಸಾಮರ್ಥ್ಯ ಬೇರೆ ಯಾರಲ್ಲುಂಟು? ಆದಿಶೇಷನಿಗೆ ಸಾವಿರ ಹೆಡೆಗಳಿದ್ದಂತೆ, ನೆಹರೂರಷ್ಟೇ ಪ್ರತಿಭಾನ್ವಿತರು ಭಾರತದಲ್ಲಿ ಸಾವಿರ ಮಂದಿ ಇದ್ದಾರೆಯೇ?

ಈ ಚಿಂತೆಯೇ ನಮ್ಮನ್ನು "ನೆಹರೂರ ಬಳಿಕ ಯಾರು?" ಎಂದು ಒಬ್ಬರನ್ನೊಬ್ಬರು ಪ್ರಶ್ನಿಸುವಂತೆ ಮಾಡುತ್ತದೆ. ನಮ್ಮ ರಾಷ್ಟ್ರದ ಪ್ರಧಾನಿ ಪಟ್ಟವನ್ನು ಏರಲು ಅವರಷ್ಟು ಯೋಗ್ಯತಾ ಸಂಪನ್ನರು ಬೇರೆ ಯಾರಿದ್ದಾರೆ? ಕಾಂಗ್ರೆಸ ಸಂಸ್ಥೆಯ ಮೇಲೆ ಸರ್ವಸ್ವಾಮ್ಯದ ಹಿಡಿತವನ್ನು ಬೇರೆ ಯಾರಿಂದ ಇಟ್ಟುಕೊಳ್ಳಲು ಸಾಧ್ಯವಿದೆ? ಯೋಜನಾ ಆಯೋಗಕ್ಕೆ ಯೋಗ್ಯ ಮಾರ್ಗದರ್ಶನವನ್ನು ಬೇರೆ ಯಾರು ಕೊಡಬಲ್ಲರು? ಭಾರತದ ರಾಜಕೀಯದಲ್ಲಿ ಜಾತೀಯತೆ ಮಾಡುವ ಆ ಸಾಹಸದ ವಿರುದ್ಧ ಗಂಭೀರ ಎಚ್ಚರಿಕೆ ನೀಡುವ ಧೈರ್ಯ ಬೇರೆ ಯಾರಿಗಿದೆ? ಅಂತರ್ರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತವು ಗೌರವದಿಂದ ತಲೆಯೆತ್ತುವಂತೆ ಮಾಡಬಲ್ಲ ರಾಜನೀತಿ ವಿಶಾರದರು ನೆಹರೂ ಒಬ್ಬರೇ ಅಲ್ಲವೇ? ಹೀಗೆ ಯೋಚಿಸಿದಷ್ಟು 'ಭಾರತವೆಂದರೆ ನೆಹರೂ, ನೆಹರೂವೆಂದರೆ ಭಾರತ' ಎನ್ನುವಷ್ಟು ಸಾಮರಸ್ಯ ಕಂಡು ಬರುತ್ತಿರುವುದರಿಂದ, 'ನೆಹರೂರ ಬಳಿಕ ಯಾರು?' ಎಂಬ ಪ್ರಶ್ನೆ ನಮ್ಮನ್ನು ದಿಗಿಲುಗೊಳಿಸುತ್ತದೆ.

ನಾವು ಹಾಗೆ ದಿಗಿಲುಗೊಳ್ಳಬೇಕಾದುದು ಅನಗತ್ಯ - ಎಂಬುದಾಗಿ ಶ್ರೀ ಎಸ್. ಜಿ. ಜೋಗಳೇಕರರು ಧೈರ್ಯ ಹೇಳುವರು. "ನೆಹರೂರ ಬಳಿಕ ಯಾರೆಂಬರೆ ನೀವು" ಎಂದವರು ನಗೆಯಿಂದ ಅದರ ಜೋಡು ಕೊಟ್ಟು ಹೇಳುತ್ತಾರೆ. "ನೆಹರೂರ ಬಳಿಕ ನಾವೇ" ಎಂದು ಎಲ್ಲ ಭಾರತೀಯರೂ ಹೆಮ್ಮೆಪಟ್ಟುಕೊಂಡು ಈಗಲೇ ಒಬ್ಬರನ್ನೊಬ್ಬರ ಬೆನ್ನನ್ನು ತಟ್ಟಿ ಸಂತೋಷಿಸಬಹುದೆಂದು ಅವರ ಅಭಿಪ್ರಾಯ. ಅದಕ್ಕೆ ಅವರು ಕೆಲವು ಉತ್ತಮ ಕಾರಣಗಳನ್ನೂ ನಿದರ್ಶನಗಳನ್ನೂ ನಮ್ಮ ಮುಂದೆ ಇಟ್ಟಿರುವರು. ಮೊದಲನೆಯದಾಗಿ, ಪ್ರಜಾಪ್ರಭುತ್ವದ ಈ ದಿನಮಾನದಲ್ಲಿ ನೆಹರೂ ಇಲ್ಲದಿದ್ದರೆ ಭಾರತಕ್ಕೆ ಏನೂ ಇಲ್ಲವೆಂದು ಭಾವಿಸುವುದೇ ತಪ್ಪು. ನೆಹರೂ ಪ್ರಸಿದ್ಧ ಮಹಾ ಮಾನವರೇ ಮುಂದಕ್ಕೂ ನಮ್ಮ ದೇಶದ ಸೂತ್ರಧಾರರು ಆಗಿರಲಿಕ್ಕಿಲ್ಲ-ಅವರೆ, ನಾಯಕನೊಬ್ಬನು ಇಲ್ಲದೆ ನಮ್ಮ ದೇಶ ಮೂರಾಬಟ್ಟೆಯಾಗಲಿಕ್ಕೂ ಇಲ್ಲ ಎಂಬವರ ಸಮಾಧಾನ. ಯಾರಾದರೊಬ್ಬ, ಎಲ್ಲಿಂದಾದರೂ ಬಂದು, ಆ ಗಳಿಗೆಯಲ್ಲಿ ಭಾರತದ ಭಾರ ಹೊರುವುದು ನಿಶ್ಚಯ. ಆ ಸೌಭಾಗ್ಯ ನಮ್ಮಲ್ಲಿಯೇ ಯಾರಾದರೊಬ್ಬನ ಪಾಲಿಗೆ ಒದಗೀತು. "ಅದು ನೀವೇ ಆಗಬಹುದು."

ಮಹಾತ್ಮಾ ಗಾಂಧೀ ಯುಗಪುರುಷ-ಅವರು ರಾಜಕೀಯ ಕ್ಷೇತ್ರದಲ್ಲಿ ತನ್ನ ಉತ್ತರಾಧಿಕಾರಿಯನ್ನಾಗಿ ನೆಹರೂವನ್ನು ಹೆಸರಿಸಿ, ಹೋದರು. ನಿಜ ಹೇಳಬೇಕೆಂದರೆ ಗಾಂಧೀಜಿಯವರ ವ್ಯಕ್ತಿತ್ವದ ಒಂದಂಶ ಮಾತ್ರ ನೆಹರೂರಲ್ಲಿ ತುಂಬಿದೆ—ಗಾಂಧೀಜಿಯ ಮರಣದ ಬಳಿಕ ಭಾರತ ಕಳೆದು ಕೊಂಡುದು ಮತ್ತೆ ತುಂಬಿ ಬಂದಿಲ್ಲವೆನ್ನುವುದು ಸ್ಪಷ್ಟ. ಆದಾಗ್ಯೂ ನಾವು ನೆಹರೂರನ್ನು ಪ್ರೀತಿಸಿ, ಗೌರವಿಸಿ, ಗಾಂಧಿಯ ಅಭಾವದ ಸ್ಮರಣೆ ಮಾಡದೆ ಸಾಗುತ್ತೇವೆ. ಇಲ್ಲಿಯೇ ಹೀಗೆಯೇ ನೆಹರೂ ಇಲ್ಲದಿದ್ದರೂ ಭಾರತದ ರಾಜ್ಯ ಸೂತ್ರ ಬೇರೆ ಯಾರದೋ ಕೈಯಲ್ಲಿ ಹೇಗಾದರೂ ನಿರ್ವಹಿಸಲ್ಪಡುತ್ತದೆ. ಒಂದು ರೀತಿಯಲ್ಲಿ ವಿಚಾರಿಸಿದರೆ, ಪ್ರಜೆಗಳ ನಿಜವಾದ ಮಟ್ಟಕ್ಕೆಯೆ ಈ ನಾಯಕ ಪೀಠದ ಅಂತಸ್ತು ಇಳಿಯುತ್ತದೆ. ಈಗ ನೆಹರೂ ೬೦ ಅಡಿ ಎತ್ತರದ ಅಟ್ಟಣಿಗೆಯಲ್ಲಿ ನಿಂತು ಭಾಷಣ ಮಾಡುವಂತೆ, ಮತ್ತು ನಾವೆಲ್ಲರೂ ಕೆಳಗೆ ನಿಂತು ಕೇಳುವಂತೆ ಭಾಸವಾಗುತ್ತದೆ. ಮುಂದಿನ ಧುರೀಣ ಪ್ರಾಯಶಃ ನಮ್ಮಂತೆಯೇ ನೆಲದ ಮೇಲೆಯೇ ನಿಂತುಕೊಂಡು ಮಾತಾಡಿಯಾನು; ಅರ್ಥಾತ್, ಅವನ ವ್ಯಕ್ತಿತ್ವ ನಮ್ಮಷ್ಟೇ ಸಾಮಾನ್ಯ.

ಇತಿಹಾಸದ ಪುಟ ತಿರುಗಿಸಿದರೆ ಒಂದು ದೇಶ ಸದಾಕಾಲವೂ "ರಾಮರಾಜ್ಯ"ದ ಸುಖವನ್ನು ಅನುಭವಿಸುತ್ತಿದ್ದಿಲ್ಲವೆಂದು ವ್ಯಕ್ತವಾಗುವುದು. ಎಲ್ಲರೂ ಸೀಜರ್, ಕ್ರಾಮವೆಲ್ಲರಾಗಿರಲಿಲ್ಲ. ಅಮೇರಿಕಾದ ಅಧ್ಯಕ್ಷ ಸ್ಥಾನಕ್ಕೆ ಏರಿದ ಹ್ಯಾರಿ ಟ್ರೂಮನ್ನರಲ್ಲಿ ಯಾವುದೇ ಬುದ್ಧಿವಂತಿಕೆ ಇರಲಿಲ್ಲ. ಯುದ್ಧ ಕಾಲದಲ್ಲಿ ಅತ್ಯಂತ ಬುದ್ಧಿವಂತಿಕೆಯಿಂದ ರಾಜ್ಯಭಾರವನ್ನು ನಿರ್ವಹಿಸಿದ ವಿನ್‌ಸ್ಟನ್ ಚರ್ಚಿಲ್ಲರು ಯುದ್ಧ ಮುಗಿದ ಆ ಗಳಿಗೆಯಲ್ಲೇ ಸೋಲುತ್ತಾರೆಂದು ಕನಸಿನಲ್ಲಿಯೂ ನೆನಸುವುದು ಸಾಧ್ಯವಿದ್ದಿಲ್ಲ—ಆದರೆ, ಬ್ರಿಟನ್ನಿನ ನಾಗರಿಕರು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನುರಿತು, ಪಳಗಿದವರು. ಎಂತಲೇ ಆಟ್ಲೀ ಮಹಾಶಯರನ್ನು ಗದ್ದುಗೆಗೆ ಏರಿಸಲು ಅವರು ಹಿಂಜರಿಯಲಿಲ್ಲ. ಈಗ ಮರಳಿ ಚರ್ಚಿಲ್ಲರು ಹಿರಿಯರಾಗ [illegible] ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯರ ಒಲವು ನಿಲುವು ವ್ಯಕ್ತಗೊಳಿಸುವ ಗತಿಶೀಲತೆಯು ಇದೇ. ಜನತೆಯು ನಾಗರಿಕ ಹೊಣೆಗಾರಿಕೆಯನ್ನು ಅರಿತಿದ್ದರೆ, ನಾಯಕನು ಇಂಥವನೇ ಆಗಬೇಕೆಂಬ ನಿಯಮ ಬೇಡ. ಯಾರೂ ನಾಯಕರಾಗಬಹುದು ಮತ್ತು ಯೋಗ್ಯ ರೀತಿಯಲ್ಲಿ ಆ ವಿಶಿಷ್ಟ ಪದವಿಯ ಜವಾಬ್ದಾರಿಯಂತೆ ನಡೆದುಕೊಳ್ಳಬಹುದು. ಜನತೆಯೇ ಅವನಿಗೆ ಮಾರ್ಗದರ್ಶನ ಮಾಡುತ್ತದೆ; ಅದಕ್ಕನುಸರಿಸಿ ಅವನು ನೀಡುವ ಆದೇಶಗಳನ್ನೂ ಅದು ಮನ್ನಿಸುತ್ತದೆ.

ನಮಗೆ ಚಿಂತೆ ಇರಬೇಕಾದುದೇ ಹೌದಾದರೆ— 'ನೆಹರೂರ ಬಳಿಕ ಯಾರು?' ಎಂಬ ಪ್ರಶ್ನೆ ತಲೆ ಕೆಡಿಸಬಾರದು; ಬದಲಿಗೆ 'ನಾವೆಲ್ಲರೂ ಯೋಗ್ಯ ನಾಗರಿಕರಾಗುವುದು ಹೇಗೆ' ಎಂಬ ಪ್ರಶ್ನೆಗೆ ಸಮಾಧಾನ ಹುಡುಕಲು ನೋಡಬೇಕು. ಉತ್ತಮ ನಾಗರಿಕರೇ ಪ್ರಜಾಪ್ರಭುತ್ವದ ಅಡಿಗಲ್ಲು.

(೧೨ನೇ ಪುಟ ನೋಡಿರಿ)

ವಿವೇಕಿಗಳು............

ತ್ರಾಸ ಚಿಕ್ಕಂದಿನಲ್ಲಿ ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸುತ್ತ ಕಾಲ ಕಳೆಯುವುದಿಲ್ಲ. ತಮಗೆ ಬಿಡುವಿದ್ದಾಗ 'ಸುಲಭದಲ್ಲಿ ಇಂಗ್ಲಿಷ್' ಎಂಬ ಆಂಗ್ಲ ಸ್ವಯಂಬೋಧಿನಿಯ ಸಹಾಯದಿಂದ ಸಾಕಷ್ಟು ಇಂಗ್ಲಿಷ್ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಾರೆ. 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಅಲ್ಪಾವಧಿಯಲ್ಲಿಯೇ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಳ್ಳಬಹುದು. ಬೆಲೆ ರೂ. 1 ೯-೦ ಮಾತ್ರ. ಪ್ರತಿಗಳು ಎಲ್ಲಾ ಪ್ರಮುಖ ಪುಸ್ತಕ ವ್ಯಾಪಾರಿಗಳಲ್ಲಿ ಸಿಗುವುವು. ನವಯುಗ ಪುಸ್ತಕ ಭಂಡಾರ ಉಡುಪಿ, ಇವರಿಗೆ ಬರೆಯಿರಿ.

ಕನ್ನಡಿಗರಿಗೆ ದೀಪೋತ್ಸವದ ಸಂಭ್ರಮ

ಕನ್ನಡದ ಆರ್ಥಿಕ ಪ್ರಗತಿ ಕೈಗೂಡಿದ ದಿನವೇ ನಮಗೆಲ್ಲ ಹಬ್ಬ

ದೀಪಾವಳಿ ಮುಗಿದ ಮೇಲೇಕೆ ದೀಪೋತ್ಸವದ ಸಂಭ್ರಮವೆಂದು ಕೇಳಬಾರದು—ಉಡುಪಿಯಲ್ಲಿ ಈ ವರ್ಷದ ಲಕ್ಷ ದೀಪೋತ್ಸವವು ಈಗಾಗಲೇ ತೊಡಗಿರುತ್ತದೆ. ಹಾಗೆಂದು ಕನ್ನಡಿಗರು ಆಚರಿಸಿದ ದೀಪಾವಳಿಯಾಗಲೀ, ದೀಪೋತ್ಸವವಾಗಲೀ— ಎರಡೂ ಒಂದೇ ತಾನೆ ಇನ್ನೂ ವರೆಗೆ ತುಂಬು ಸಂಭ್ರಮದ್ದಾಗಿ ಪರಿಣಮಿಸಿರುವುದಿಲ್ಲ. ಅದರಲ್ಲಿ ಚೆಲುವು ಎಷ್ಟು ಗೋಚರವಾಗಬೇಕಿತ್ತೋ ಅಷ್ಟು ಕಾಣಿಸಿಲ್ಲ. ಹೀಗೆ ನಾವು ಹೇಳುವಾಗ ಅನೇಕ ಆಕ್ಷೇಪದ ಮಾತುಗಳು ಏಳಬಹುದು; ಮತ್ತಿದನ್ನು ಮೊದಲೇ ಊಹಿಸಿಕೊಂಡು ತಕ್ಕ ಸಮಾಧಾನ ಕೊಡುವುದೇ ಪ್ರಸ್ತುತ ಲೇಖದ ಉದ್ದೇಶ

ದೀಪೋತ್ಸವ ನಮ್ಮ ಮನಸ್ಸನ್ನು ಅರಳಿಸಿ ನಗಿಸುವ, ಅಜ್ಞಾನ ತಿಮಿರವನ್ನು ಕಳೆದು ಸುಜ್ಞಾನ ನೀಡುವ ರಾಷ್ಟ್ರೀಯ ಹಬ್ಬ. ಇಂಥ ಉತ್ಸವದ ಸಂಭ್ರಮದಲ್ಲೂ ಸೂತಕದ ಮನೆಯ ಶೋಕಾನುಭವ ನಮಗಾಗುತ್ತಿರುವುದನ್ನು ಕನ್ನಡಿಗರು ಮುಚ್ಚಿಟ್ಟುಕೊಳ್ಳುವಂತಿಲ್ಲ – ತುಂಬಿದ ಮನೆಯಲ್ಲಿ ಕನ್ನಡಮ್ಮನ ಮುದ್ದು ಮಕ್ಕಳೆಲ್ಲ ಒಂದುಗೂಡಿ ಹರ್ಷಪುಳಕಿತರಾಗಿ ದೀಪೋತ್ಸವದ ಸಂಭ್ರಮಕ್ಕೆ ಮನಸೋತು ಕೇಕೆ ಹಾಕುವಂತೆ ಈಗಿನ ಪರಿಸ್ಥಿತಿ ಇಲ್ಲ– ಆಧುನಿಕ ಕೌಟುಂಬಿಕ ವಾತಾವರಣಕ್ಕೆ ಒಪ್ಪಿದ ರೀತಿಯೋ ಎಂಬಂತೆ ಕನ್ನಡಮ್ಮನ ಮಕ್ಕಳು ನಾವೆಲ್ಲ ಒಬ್ಬೊಬ್ಬರು ಒಂದೊಂದು ದಿಕ್ಕು ಹಿಡಿದು ಒಬ್ಬರಿನ್ನೊಬ್ಬರ ಸುಖಕಷ್ಟದ ಲಕ್ಷ್ಯವಿಲ್ಲದೆ ಸಾಗುತಿದ್ದೇವೆ. ಈ ಕಾರಣಕ್ಕಾಗಿಯೇ ಕನ್ನಡಿಗರ ದೀಪೋತ್ಸವ ಕನ್ನಡಮ್ಮನ ಸಂತಸದ ಸುಗ್ಗಿಯಾಗಿಲ್ಲ ಮಕ್ಕಳೆಲ್ಲ ಒಂದುಗೂಡಿ ನಲಿಯುತ್ತಿರುವುದನ್ನು ಕಾಣದ ಕನ್ನಡಮ್ಮ ತನ್ನ ಕಂದಮ್ಮಗಳ ದುರವಸ್ಥೆ ಕಂಡು ಕಣ್ಣೀರು ಮಿಡಿಯುತ್ತಿರುವಳು – ಈ ಮೂಕ ಶೋಕದ ನಡುವೆ ದೀಪೋತ್ಸವದ ಮಿಂಚಿನ ಸಂತಸ ಕೇವಲ ಅರ್ಥಶೂನ್ಯವೆನಿಸುತ್ತದೆ.

ರಾಜಕೀಯ ನೋವು

ಹಾಗಾದರೆ ಕರ್ನಾಟಕ ಏಕೀಕರಣವಾದಂದೇ ಕನ್ನಡಿಗರ—ಅರ್ಥಾತ್ ಕನ್ನಡಮ್ಮನ—ನಿಜವಾದ ದೀಪೋತ್ಸವ ಆಚರಿಸಲ್ಪಡುವುದೆಂದು ನಾವು ಸುಲಭದಲ್ಲಿ ತೀರ್ಮಾನಿಸಲು ಸಾಧ್ಯವುಂಟು. ನಿಜ ಹೇಳಬೇಕೆಂದರೆ ಕನ್ನಡಿಗರಾದ ಎಲ್ಲರ ಮನಸ್ಸಿಗೂ ಸರ್ವ ಪ್ರಥಮವಾಗಿ ಹೊಳೆಯುವ ಉತ್ತರ ಇದೊಂದೇ. ಕರ್ನಾಟಕದ ಏಕೀಕರಣ ಕೈಗೂಡಿ ಒಂದರೆ, ಕನ್ನಡಮ್ಮನ ಮುದ್ದು ಕಂದಮ್ಮಗಳೆಲ್ಲ ಒಂದೆಡೆ ಸೇರಿ ಅವಳನ್ನು ಓಲೈಸಿದರೆ— ಅಂದಿನ ದೀಪೋತ್ಸವ ನಿಜವಾದ ದೀಪೋತ್ಸವವಾಗದೇನು? ನಿಶ್ಚಯವಾಗಿಯೂ ಆಗುತ್ತದೆ. ಸುಮಾರು ಎರಡು ಕೋಟಿ ಜನಸಂಖ್ಯೆಯುಳ್ಳ, ಪ್ರಾಚೀನ ಸಂಸ್ಕೃತಿಯ ಉಜ್ವಲ ಪರಂಪರೆಯುಳ್ಳ, ಅಪಾರ ನೈಸರ್ಗಿಕ ಸಂಪತ್ತನ್ನು ಪಡೆದ ಕನ್ನಡದ ನೆಲ ದೀಪೋತ್ಸವದ ಸಡಗರದಲ್ಲಿ ನಕ್ಕು ನಲಿಯುವುದನ್ನು ಕಾಣಲು ನಮಗೆಲ್ಲರಿಗೂ ತವಕ.

ಇಂದಿರುವಂತೆ ಕನ್ನಡದ ಕಂದಮ್ಮಗಳಿಗೆ ಮದ್ರಾಸು, ಹೈದರಾಬಾದು, ಮುಂಬಯಿ ರಾಜ್ಯಗಳ ಪರಕೀಯರ ನೆರಳೇ ಆಶ್ರಯಸ್ಥಾನವೆನಿಸಿದೆ. ಮೈಸೂರಿನ ಹಿರಿಯಣ್ಣ ಕನ್ನಡದ ಉಳಿದ ತಮ್ಮಂದಿರ ಗೋಜಿಗೆ ಬರುವುದಿಲ್ಲ. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಹೊರಗಿನ ಕನ್ನಡ ಪ್ರದೇಶಗಳು ಮೈಸೂರಿನೊಂದಿಗೆ ಕೂಡಿಕೊಳ್ಳುವುದಕ್ಕೆ ಸ್ವಾಗತ ಕೋರುವಷ್ಟು ವಿಶಾಲ ಹೃದಯವನ್ನು ತೋರಿಸಿರುವರು, ನಿಜ. ಆದರೆ ಈಚೆಗೆ "ಟೈಮ್ಸ್ ಒಫ್ ಇಂಡಿಯಾ" ಪತ್ರಿಕೆಯಲ್ಲಿ ವರದಿಯಾದ, ಮೈಸೂರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ವೀರಣ್ಣಗೌಡರ ಅಭಿಪ್ರಾಯ "ಕರ್ನಾಟಕ ಏಕೀಕರಣದ ಕೆಲಸ ಮುಗಿದ ಹಾಗೆಯೇ" ಎಂದು ಕೊಂಡವರ ವಿಚಾರವನ್ನೆ ಬುಡ ಮೇಲು ಮಾಡುವಂತಿದೆ. ಅವರು ಎರಡು ಕನ್ನಡ ರಾಜ್ಯಗಳು ಇರಬೇಕೆನ್ನುತ್ತಾರೆ- ಆದರೆ ಮೈಸೂರಿಗೆ ಕರಾವಳಿ ತೀರದ ದಕ್ಷಿಣ ಕನ್ನಡವೂ ಸೇರಬೇಕೆಂದು ಇಚ್ಛಿಸುತ್ತಾರೆ. ಈಗಿರುವಂತೆ ಮೈಸೂರಿಗೆ ಕರಾವಳಿಯ ಅಭಾವ ಮನಸ್ಸನ್ನು ಕೊರೆಯುತ್ತಿದೆ. ಅದು ತೀರಿದರೆ ಸಾಕು ಎಂಬಂತೆ ಮೈಸೂರು ಕಾಂಗ್ರೆಸ್ಸಿನ ಈ ಪರಿಷ್ಕಾರ ಹೇಳಿಕೆ ಇದೆ!

ಆಂಧ್ರರಂಥ ಮಲತಾಯಿ ಮಕ್ಕಳೋ, ದತ್ತಾಪಹಾರಕ್ಕೆಯೇ ಹೊಂಚಿಕುಳಿತಿರುವರು. ತಮ್ಮ ಬಾಯಿ ಮೇಲು ಮಾಡಿಕೊಂಡು ಆಂಧ್ರ ಬಂಧುಗಳು ಈಗಾಗಲೇ ಬಳ್ಳಾರಿ ಜಿಲ್ಲೆಯ ಮೂರು ಕನ್ನಡದ ತಾಲೂಕುಗಳನ್ನು ತಮ್ಮದಾಗಿ ಮಾಡಿಕೊಂಡಿರುವರು. ವಿಜಯವಾಡಾದಂಥ ಪ್ರಶಸ್ತವಾದ ಬೇರೆ ಪಟ್ಟಣವಿದ್ದರೂ ಅದನ್ನು ಬಿಟ್ಟು ಹೈದರಾಬಾದು ಗಡಿಗೆ ಒತ್ತಿಕೊಂಡಿರುವ ಕರ್ನೂಲಿನಲ್ಲಿ ತಾತ್ಕಾಲಿಕ ರಾಜಧಾನಿಯನ್ನು ಕಟ್ಟಿಕೊಂಡು ರಾಯಚೂರು ಪ್ರದೇಶವನ್ನೂ ಆಂಧ್ರಕ್ಕೆ ಈಗ ಸೇರಿ ಹೋದಂತಿರುವ ಅನಂತಪುರ ಹಾಗೂ ಬಳ್ಳಾರಿ ಜಿಲ್ಲೆಯ ಕನ್ನಡ ಪ್ರದೇಶವನ್ನೂ ಆಂಧ್ರೀಕರಿಸಲು ಅವರು ಉದ್ಯುಕ್ತರಾಗಿರುವರು.

ಇದೆಲ್ಲ ಕನ್ನಡಮ್ಮನಿಗೆ ಸರಿಗಾಣುತ್ತದೆಯೇ? ಕನ್ನಡದ ಮಕ್ಕಳಲ್ಲಿ ಯಾರಾದರೂ ಇದನ್ನು ತಪ್ಪೆಂದು ಬಲವಾಗಿ ಖಂಡಿಸಿದ್ದುಂಟೆ? ಆಂಧ್ರದಂಥ ಒಂದು ಭಾಷಾ ರಾಜ್ಯದ ರಚನೆಯಾಗುವಾಗಲೇ ಕನ್ನಡದ ವಿಸ್ತೀರ್ಣ ಸಾಕಷ್ಟು ತಗ್ಗಿಕೊಂಡಿತು. ಇನ್ನು ಮಹಾರಾಷ್ಟ್ರ, ಕೇರಳಗಳು ರೂಪುಗೊಂಡಾಗ ಕನ್ನಡದ ನೆಲ ಇನ್ನಷ್ಟು ಕರಗಿ ಹೋಗುತ್ತದೆ. ಇದು ಚಂದವಲ್ಲ ಎನ್ನುವ ಅಭಿಪ್ರಾಯವಿದ್ದರೂ—ಅದನ್ನು ತಡೆಗಟ್ಟುವ ಉದ್ದೇಶದಿಂದ ಗಡಿ ಪ್ರದೇಶದಲ್ಲಿ ಬಲವಾದ ಪ್ರಚಾರ ಕಾರ್ಯ ನಡೆದುದು ಕಾಣುತ್ತಿಲ್ಲ. ಈ ರಾಜಕೀಯ ಬೇನೆಯಿಂದ ವೈಮನಸಗಳು ನುಜ್ಜುಗುಜ್ಜಾಗಿರುವಾಗ ದೀಪೋತ್ಸವದ ಅನುಭವ ಎಷ್ಟುಮಾತ್ರಕ್ಕೂ ಸಿಹಿಯಾಗಿರಲಾರದು.

ಏಕೀಕರಣ ಸಾಲದು

ಒಂದೊಮ್ಮೆಗೆ ಈ ರಾಜಕೀಯದ ನೋವು ದೂರಾಗುವುದೆನ್ನೋಣ – ಆಗ ನಮ್ಮ ದೀಪೋತ್ಸವ ಸುಖದ ಹೊನಲು ತರಬಲ್ಲುದೆ? ಈ ಪ್ರಶ್ನೆಯು ಮಹತ್ವದ್ದು. ಏಕೆಂದರೆ ಕರ್ನಾಟಕದ ಏಕೀಕರಣವಾದ ದಿನವಂದೇ ಕನ್ನಡಿಗರ ನಿಜವಾದ ದೀಪೋತ್ಸವ ಎಂಬ ಸಾಮಾನ್ಯ ಪ್ರತಿ ಕ್ರಿಯೆಯೇ ವಾಸ್ತವದಲ್ಲಿ ಉತ್ತರವಾಗಲಾರದು. ರಾಜಕೀಯವಾಗಿ ಕನ್ನಡದ ನೆಲವೆಲ್ಲ ಒಮ್ಮಟ್ಟಿಗೆ ಸೇರುವುದು ಪ್ರಾರಂಭಿಕವಾದ ಹೆಜ್ಜೆಯೇ ಹೊರತು ಅದೇ ಸಿದ್ಧಿಯಲ್ಲ- ಏಕೀಕರಣ ಸಾಧಿಸಿದ ವರ್ಷ ದೀಪಾವಳಿಯು ನಿಜಸುಖಾನುಭವವನ್ನು ನಮಗೆ ತಂದುಕೊಟ್ಟರೂ ಆ ಸುಖ ಮುಂದಿನ ದೀಪಾವಳಿಯ ವರೆಗೆ ಬಾಳುವಂತದೆಯೋ ಎಂಬುದು ಸಂದೇಹ. ಏಕೀಕರಣದಿಂದಲೇ ದುಃಖ ಪರಿಹಾರವಾಗದಾಗ ನಿಜವಾದ ದೀಪಾವಳಿಗೆ ಮತ್ತೂ ಕಾಲಾವಧಿಯನ್ನು ಅನಿವಾರ್ಯ ಹಾಕಿಕೊಳ್ಳಬೇಕಾಗುತ್ತದೆ.

ಒಂದು ದಿನದ ಸಂತೋಷ ಒಂದು ವರ್ಷದ ಸಂತೋಷವಾಗಬೇಕಾದರೆ, ಎಂಥ ಪ್ರಯತ್ನ ನಡೆಯಬೇಕೆಂಬುದರ ಕಲ್ಪನೆಯನ್ನು ಕನ್ನಡಿಗರೆಲ್ಲರೂ ಕಣ್ಣ ಮುಂದಿಟ್ಟುಕೊಳ್ಳುವುದು ಸದ್ಯ ಅಗತ್ಯ. ರಾಜಕೀಯವಾಗಿಯೂ ಭಾಷೆ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದಲೂ ಏಕತ್ರ ಕಲೆತಿರುವ ಭಾರತದ ಬೇರೆ ಬೇರೆ ಭಾಷಾ ಘಟಕಗಳು ಬೇಡ, ಕನ್ನಡಿಗರ ಹೆಮ್ಮೆಯ ರಾಜ್ಯ ಮೈಸೂರನ್ನೇ ತೆಗೆದುಕೊಳ್ಳೋಣ- ಏನು ಸೌಭಾಗ್ಯವನ್ನು ಅನುಭವಿಸುತ್ತದೆ? ಅಲ್ಲಿಯ ಬಡತನ ತೊಲಗಿದೆಯೆ? ಜನರ ಜೀವನ ಮಟ್ಟ ಸುಧಾರಿಸಿದೆಯೆ? ಅವರ ಅನುಕೂಲತೆಗಳೂ ಸೌಕರ್ಯಗಳೂ ಹೆಚ್ಚಿಕೊಂಡಿವೆಯೆ: —ಇಲ್ಲ. ನಮ್ಮ ಈಗಿನ ಸ್ಥಿತಿಯನ್ನೆ ಭಾಷಾ ದೃಷ್ಟಿಯಿಂದ—ಸಾಂಸ್ಕೃತಿಕ ದೃಷ್ಟಿಯಿಂದ ಏಕತ್ರವಿರುವ ಜನರಂತೆ ಪರಿಸ್ಥಿತಿಯೂ ಹೆಚ್ಚುಕಡಿಮೆ ತೋರುತ್ತದೆ. ಈ ಸಂಗತಿ

(೧೦ನೇ ಪುಟ ನೋಡಿರಿ)

ಎಲ್ಲಾ ಕಡೆಗಳಲ್ಲಿಯೂ ದೊರಕುತ್ತದೆ.

Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕದೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತದ ಜನಗಣತಿಯ ಕೆಲವು ವಿವರಗಳು

ಸಂತಾನ ಸಂಯಮನ ಸಾಧಿಸಲೇ ಬೇಕೆಂಬ ಸೂಚನೆ

ಭಾರತದಲ್ಲಿ ಜನಗಣತಿಯನ್ನು ಎರಡು ವರ್ಷ ಪೂರ್ವದಲ್ಲಿ (೧೯೫೧) ನಡೆಸಿದಾಗ, ಕೆಲವು ವಿಶಿಷ್ಟ ಮಾಹಿತಿಗಳನ್ನು ಅದು ಒಳಗೊಳ್ಳುವಂತೆ ಹಿಂದಿನ ಪದ್ಧತಿಯಲ್ಲಿ ಪರಿವರ್ತನೆಗಳನ್ನು ಮಾಡಿದ್ದರು. ಜಾತಿಮತಗಳ ಕುರಿತಾದ ಮಾಹಿತಿಯನ್ನು ಕಲೆಹಾಕುವುದು ನಿಲ್ಲಿಸಿ, ಸಾಮಾಜಿಕ ಜೀವನದಲ್ಲಿ ನಾಗರಿಕನ ಸ್ಥಾನಮಾನಗಳನ್ನು ಕುರಿತಾಗಿ ಕೆಲವು ಅಮೂಲ್ಯ ವಿವರಗಳನ್ನು ಸಂಗ್ರಹಿಸುವುದಕ್ಕೆ ಮಹತ್ವವನ್ನು ಕೊಟ್ಟರು. ಇದರಿಂದ ಭಾರತದಲ್ಲಿ ದೀರ್ಘಾವಧಿ ಯೋಜನೆಗಳ ರೂಪರೇಷೆಯನ್ನು ಹಾಕಿಕೊಳ್ಳುವಾಗ ತೆಗೆದುಕೊಳ್ಳಬೇಕಾದ ಜಾಗರೂಕತೆಗಳ ಮುನ್ಸೂಚನೆ ದೊರಕುವಂತಾಗಿರುತ್ತದೆ. ಕನಿಷ್ಠ ಪಕ್ಷ ಇನ್ನು ಮುಂದಿನ ೩೦ ವರ್ಷಗಳಲ್ಲಿ ತಮ್ಮ ಜೀವನದ ಗತಿವಿಧಿಯನ್ನು ಕಂಡುಕೊಳ್ಳುವುದು ನಾಗರಿಕರಿಗೆ ಸಾಧ್ಯವೆನಿಸಿದರೆ ಸಂಶೋಧನಾಲಯಗಳು ಜನಗಣತಿ ನಡೆಸಿದ ಆರು ಲಕ್ಷ ಅಧಿಕಾರಿಗಳು ಕಲೆಹಾಕಿದ ಮಾಹಿತಿಯನ್ನು ಇನ್ನಷ್ಟು ಚೆನ್ನಾಗಿ ಉಪಯೋಗಿಸಿಕೊಳ್ಳಬಲ್ಲವು.

ಭಾರತದ ಒಟ್ಟು ಜನಸಂಖ್ಯೆ ೩೫೬೯ ಲಕ್ಷ. ಇದರಲ್ಲಿ ೨೯೫೦ ಲಕ್ಷ ಜನರು ೫೫೮೦೮೯ ಹಳ್ಳಿಗಳಲ್ಲಿಯೂ ೬೧೯ ಲಕ್ಷ ಜನರು ೩೦೧೮ ಪಟ್ಟಣಗಳಲ್ಲಿಯೂ ವಾಸ ಮಾಡುವರು. ಪಟ್ಟಣಗಳಲ್ಲಿ ಒಂದು ಮನೆಗೆ ಆರು ಮಂದಿಯಂತೆ ಹಾಗೂ ಹಳ್ಳಿಯಲ್ಲಿ ಎರಡು ಮನೆಗಳಿಗೆ ಹನ್ನೊಂದರಂತೆ ಜನರ ವಾಸವಿದೆ. ಹಳ್ಳಿಯ ಒಂದು ನೂರು ಕುಟುಂಬಗಳಲ್ಲಿ ೨೫೩ ಪುರುಷರೂ ೨೪೯ ಸ್ತ್ರೀಯರೂ ಇದ್ದರೆ, ಪಟ್ಟಣದ ಒಂದು ನೂರು ಕುಟುಂಬಗಳಲ್ಲಿ ೨೪೮ ಪುರುಷರೂ ೨೨೩ ಸ್ತ್ರೀಯರೂ ಇರುವರು. ಮೂವರಿಗಿಂತ ಕಡಿಮೆ ಜನರಿರುವವುಗಳು ಸಣ್ಣ ಕುಟುಂಬ, ಆರು ಜನರಿದ್ದರೆ ಸಾಧಾರಣ ಕುಟುಂಬ, ಒಂಭತ್ತಿದ್ದರೆ ದೊಡ್ಡ ಕುಟುಂಬ ಮತ್ತು ಹತ್ತನ್ನು ಮೀರಿದ್ದರೆ ಅತಿ ದೊಡ್ಡ ಕುಟುಂಬವೆಂದು ಲೆಕ್ಕಕ್ಕೆ ಹಿಡಿದಲ್ಲಿ ಹಳ್ಳಿಗಳಲ್ಲಿ ನೂರಕ್ಕೆ ೩೩ ಚಿಕ್ಕ, ೪೪ ಸಾಧಾರಣ, ೧೭ ದೊಡ್ಡ ಮತ್ತು ೬ ಅತಿ ದೊಡ್ಡ ಕುಟುಂಬಗಳೂ ಪಟ್ಟಣಗಳಲ್ಲಿ ನೂರಕ್ಕೆ ೩೮ ಚಿಕ್ಕ, ೪೧ ಸಾಧಾರಣ, ೧೬ ದೊಡ್ಡ ಮತ್ತು ೫ ಅತಿ ದೊಡ್ಡ ಕುಟುಂಬಗಳೂ ಇರುತ್ತವೆ. ಇದನ್ನು ನೋಡಿದರೆ ಹಳ್ಳಿಗಳಲ್ಲಿ ದೊಡ್ಡ ಕುಟುಂಬಗಳು ನಿಧಾನವಾಗಿ ಒಡೆಯುತ್ತಾ ಹೋಗಿ ಸಣ್ಣ ಕುಟುಂಬಗಳಾಗಿ ಪರಿವರ್ತನೆಹೊಂದುತ್ತಿರುವುದು ಸ್ಪಷ್ಟವಾಗುತ್ತದೆ.

೦೦ ೦೦ ೦೦

ಭಾರತದಲ್ಲಿ ಗಂಡಸರೂ ಹೆಂಗಸರೂ ಸಮಪ್ರಮಾಣದಲ್ಲಿ ಇಲ್ಲವೆಂದು ಈ ಜನಗಣತಿ ಸ್ಪಷ್ಟವಾಗಿ ಹೇಳುತ್ತದೆ. ಸರಾಸರಿ ೧೦೦೦ ಗಂಡಸರಿಗೆ ೯೪೭ ಹೆಂಗಸರು ಇದ್ದರೂ, ಭಾರತದ ಎಲ್ಲ ಕಡೆ ಈ ಪ್ರಮಾಣ ಒಂದೇಯಾಗಿಲ್ಲ. ವಾಯುವ್ಯ ಭಾರತದಲ್ಲಿ ಇದು ಬಹಳ ಕಡಿಮೆ ಅಂದರೆ ಸಾವಿರ ಗಂಡಸರಿಗೆ ೮೬೩ ಹೆಂಗಸರು. ಇದ್ದರೆ ಉತ್ತರ ಭಾರತದಲ್ಲಿ ೯೫೦, ಪಶ್ಚಿಮ ಭಾರತದಲ್ಲಿ ೯೩೮, ಪೂರ್ವ ಭಾರತದಲ್ಲಿ ೯೪೫, ಮಧ್ಯ ಭಾರತದಲ್ಲಿ ೯೬೩ ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚು, ಅಂದರೆ ೯೯೯ ಹೆಂಗಸರಿರುವರು. ಗಂಡಸರಲ್ಲಿ ಅರೆವಾಸಿಗೆ ಇನ್ನೂ ಮದುವೆಯಾಗಿಲ್ಲ. ಹೆಂಗಸರಲ್ಲಿ ಐದರಲ್ಲಿ ಇಬ್ಬರು ಅವಿವಾಹಿತರು.

ಪ್ರತಿ ೧೦೦೦ ಜನ ಸ್ವಂತ ಸಾಗುವಳಿದಾರರಿಗೆ ೪೦೨ ಭೂಮಿ ಇಲ್ಲದ ಕೃಷಿಕರು ಇರುವರು. ರಾಜ್ಯದಿಂದ ರಾಜ್ಯಕ್ಕೆ ಈ ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಉತ್ತರ ಪ್ರದೇಶದಲ್ಲಿ ಭೂಮಿ ಇಲ್ಲದ ಕೃಷಿಕರ ಪ್ರಮಾಣ ಅತ್ಯಲ್ಪ (೧೬೧)ವಿದ್ದರೆ, ತಿರುಕೊಚ್ಚಿಯಲ್ಲಿ ಅತಿ ಹೆಚ್ಚು (೭೨೨)ಇದೆ. ಬೇರೆ ರಾಜ್ಯಗಳಲ್ಲಿ ಕ್ರಮಾನುಗತವಾಗಿ ಮೈಸೂರು (೧ ೦) ಅಸ್ಸಾಮು (೨೩೫) ಒರಿಸಾ (೨೬೧) ಮುಂಬಯಿ (೩೮೪) ಮಧ್ಯ ಭಾರತ (೩೯೭) ಮಧ್ಯ ಪ್ರದೇಶ (೪೦೭) ಹೈದರಾಬಾದು (೫೦೭) ಬಿಹಾರ (೫೧೦) ರಾಜಸ್ಥಾನ (೬೪೪) ಪಶ್ಚಿಮ ಬಂಗಾಲ (೬೦೯) ಮತ್ತು ಮದ್ರಾಸು (೭೪೧)— ಹೀಗೆ ಆ ಪ್ರಮಾಣವಿರುತ್ತದೆ.

೦೦ ೦೦ ೦೦

ಭಾರತದಲ್ಲಿ ೨೯೬೦ ಲಕ್ಷ ಜನಕ್ಕಿಂತಲೂ ಹೆಚ್ಚು ಏನನ್ನೂ ಸಂಪಾದಿಸುವುದಿಲ್ಲ. ೧೦೪೦ ಲಕ್ಷ ಮಂದಿ ಸ್ವಾವಲಂಬಿಗಳು (ಇವರಲ್ಲಿ ೮ರಲ್ಲಿ ಒಂದಾಳು ಹೆಂಗಸರು) ಉಳಿದವರ ಹೊಟ್ಟೆಯನ್ನು ಹೊರೆಯಬೇಕಾಗಿದೆ. ೩೪೦ ಲಕ್ಷ ಜನರು ಅಲ್ಪಸ್ವಲ್ಪ ಸಂಪಾದಿಸಿದರೂ ಜೀವನಕ್ಕೋಸ್ಕರ ಅವರು ಬೇರೆಯವರನ್ನು ಕೆಲಮಟ್ಟಿಗಾದರೂ ಅವಲಂಬಿಸಿರುವರು. ದಕ್ಷಿಣ ಭಾರತದಲ್ಲಿ ನೂರರಲ್ಲಿ ೨೬ ಮಂದಿ ಮಾತ್ರ ಸ್ವಾವಲಂಬಿಗಳಾಗಿರುತ್ತಾರೆ. ಇಷ್ಟು ಕಡಿಮೆ ಪ್ರಮಾಣ ಭಾರತದಲ್ಲಿ ಬೇರೆಡೆ ಇಲ್ಲ. ಅದೇ ಕಾಲಕ್ಕೆ ಪ್ರತಿ ಶತ ೬೯ ಮಂದಿ ಪರಾವಲಂಬಿಗಳು ದಕ್ಷಿಣ ಭಾರತದಲ್ಲಿರುವರು. ಹೀಗೆ ದಕ್ಷಿಣ ಭಾರತದಲ್ಲಿ ಪರಿಸ್ಥಿತಿ ತೀರ ನಿಕೃಷ್ಟವಾಗಿರುತ್ತದೆ. ದಕ್ಷಿಣ ಭಾರತದಲ್ಲಿ ಸ್ವಾವಲಂಬಿಗಳಾದ ಸ್ತ್ರೀಯರ ಪ್ರಮಾಣ ಅತ್ಯಲ್ಪ ಅಂದರೆ ೧೭ ಶೇಕಡಾ ಇರುತ್ತದೆ. ಈ ಪ್ರಮಾಣ ಪೂರ್ವ ಭಾರತದಲ್ಲಿ ಪ್ರತಿ ಶತ ೨೦, ಉತ್ತರ ಭಾರತದಲ್ಲಿ ೨೭, ವಾಯುವ್ಯ ಭಾರತದಲ್ಲಿ ೩೪, ಪಶ್ಚಿಮ ಭಾರತದಲ್ಲಿ ೩೭ ಮತ್ತು ಮಧ್ಯ ಭಾರತದಲ್ಲಿ ೪೧ ಹೀಗಿದೆ. ಹೆಚ್ಚಾಗಿ ಹೆಂಗಸರು ಕೃಷಿಯಲ್ಲಿ ಗಂಡಸರೊಡನೆ ಸಹಕರಿಸಿ ದುಡಿಯುವರು. ಆಯಾ ಪ್ರದೇಶದಲ್ಲಿ ಈ ಬಗೆಯ ಸಹಕಾರಕ್ಕೆ ಕೃಷಿಯಲ್ಲಿ ಇರುವ ಅನುಕೂಲತೆಯನ್ನು ದುಡಿಯುವ ಹೆಂಗಸರ ಪ್ರಮಾಣ ಅವಲಂಬಿಸಿದೆ.

ಜಗತ್ತಿನಲ್ಲಿ ಯುರೋಪು ಬಹಳ ಜನದಟ್ಟಣೆಯುಳ್ಳ ಪ್ರದೇಶವೆಂದು ಹೆಸರಾಗಿದೆ. ಆದರೆ ಭಾರತದಲ್ಲಿ ಜನಸಾಂದ್ರತೆ ಅಲ್ಲಿಗಿಂತಲೂ ತುಂಬ ಹೆಚ್ಚಿರುತ್ತದೆ. ಸಾಮಾನ್ಯ ಯುರೋಪಿಯನ್ನರು ಎಕ್ರೆಯಲ್ಲಿ ೩೦ ಸೆಂಟ್ಸುಗಳನ್ನು ಮಾತ್ರ ಬೇಸಾಯಕ್ಕೆ ಉಪಯೋಗಿಸಿದ್ದರೆ, ಭಾರತದಲ್ಲಿ ಮಣ್ಣು ಅಷ್ಟು ಫಲವತ್ತಾಗಿಲ್ಲದಿದ್ದರೂ ನೀರಿನ ಆಶ್ರಯ ಇಲ್ಲದಿದ್ದರೂ ಎಕ್ರೆಯಲ್ಲಿ ೬೩ ಸೆಂಟ್ಸುಗಳನ್ನು ಸಾಗುವಳಿಗೆ ತಂದಿರುವರು. ಆದರೆ ಉತ್ಪಾದನೆಯು ಯುರೋಪಿಗಿಂತ ಕಡಿಮೆ ಇದೆ. ಅದೇ ಕಾಲಕ್ಕೆ ಭೂಮಿಯ ಮೇಲಿನ ಜನದಟ್ಟಣೆ ವಿಪರೀತವಿದೆ. ಹೀಗಾಗಿ ನಮ್ಮಲ್ಲಿ ದಾರಿದ್ರ್ಯ ನೆಲೆಗೊಂಡಿದೆ. ಭಾರತದಲ್ಲಿರುವ ಜನಸಂಖ್ಯೆಯು ಅಮೇರಿಕಾ ಮತ್ತು ರಶಿಯಾಗಳೆರಡನ್ನು ಕೂಡಿಸಿದುದಕ್ಕಿಂತಲೂ ಹೆಚ್ಚು. ಆದರೆ ಆ ಎರಡು ದೇಶಗಳ ವಿಸ್ತಾರವು ಭಾರತದ ಭೂಭಾಗದ ಹತ್ತು ಪಾಲಿನಷ್ಟಿದೆ. ಜಗತ್ತಿನಲ್ಲಿ ತಲಾ ಒಂದರ [illegible] ಸೆಂಟ್ಸುಗಳಷ್ಟು ಭೂಮಿ ಇದ್ದರೆ, ಭಾರತದಲ್ಲಿ [illegible] ಸೆಂಟ್ಸು ಮಾತ್ರವಿದೆ. ಈ ಭೂಮಿಯಲ್ಲಿ ಕೃಷಿಯೋಗ್ಯವಾದ ಭೂಮಿಯು ಜಗತ್ತಿನಲ್ಲಿ ತಲಾ [illegible] ಸೆಂಟ್ಸುಗಳಿದ್ದರೆ ಭಾರತದಲ್ಲಿರುವುದು [illegible] ಸೆಂಟ್ಸು ಮಾತ್ರ.

ಈ ಜನಗಣತಿಯಿಂದ ವ್ಯಕ್ತವಾಗುವ ಮಹತ್ವದ ಸಂಗತಿಯೊಂದಿದೆ— ಭಾರತದಲ್ಲಿ ಜನಸಂಖ್ಯೆಯು ರಭಸದಿಂದ ಬೆಳೆಯುತ್ತಿದೆಯೆಂದೂ ನಮ್ಮ ಯಾವ ಔದ್ಯೋಗಿಕ ಪ್ರಗತಿ ಮತ್ತು ಅಭಿವೃದ್ಧಿ ಯೋಜನೆಗಳೂ ಹೆಚ್ಚುತ್ತಿರುವ ಜನಸಂಖ್ಯೆಗೆ ಅನ್ನ ಒದಗಿಸಿ ಕೊಡಲಾರವೆಂದೂ ಇದರಿಂದ ತಿಳಿದುಕೊಳ್ಳಬಹುದು. ೧೯೨೧ನೇ ಇಸವಿಗೆ ಮುಂಚೆ ಇದ್ದ ಪರಿಸ್ಥಿತಿಯು ಆ ಬಳಿಕ ಒಮ್ಮೆಲೇ ಪರಿವರ್ತನೆಹೊಂದಿತು. ಅದಕ್ಕೆ ಮೊದಲು ಭಾರತವು ಅನ್ನ ಬಟ್ಟೆಗಳ ಮಟ್ಟಿಗೆ ಸ್ವಾವಲಂಬಿಯಾಗಿದ್ದರೆ, ಆ ಬಳಿಕ ಅವುಗಳ ಕೊರತೆ ಹೆಚ್ಚುತ್ತಾ ಹೋಯಿತು. ಪ್ರಜಾ ಜನನ ಪ್ರಮಾಣವೇ ಕೃಷಿಯ ಉತ್ಪಾದನಾ ಪ್ರ

[೯ನೇ ಪುಟ ನೋಡಿರಿ]

ಸೇವಿಂಗ್ಸ್ ಬೇಂಕ್ ಲೆಖ್ಖ ತೆರೆಯುವ ಉಪಯುಕ್ತತೆ

ಬೇಂಕಿನಲ್ಲಿ ಸೇವಿಂಗ್ಸ್ ಲೆಖ್ಖ ತೆರೆಯಲ್ಪಟ್ಟಲ್ಲಿ ನಮ್ಮಲ್ಲಿರುವ ಬ್ಯಾಂಕಿಂಗ್ ವ್ಯವಹಾರದ ಅಭ್ಯಾಸಕ್ಕೆ ಆಸ್ಪದವೀಯುವುದಲ್ಲದೆ, ಅನಾಯಾಸವಾಗಿ ನಿಮ್ಮ ತಿಳುವಳಿಕೆಗೆ ಬಾರದೇನೇ ಖರ್ಚಾಗಿಹೋಗುವ ಚಿಕ್ಕ ಮೊಬಲಗುಗಳನ್ನೇ ಉಳಿಸಲ್ಪಡುವವು. ನಿಮ್ಮ ಬೇಂಕಿನಲ್ಲಿ ಸೇವಿಂಗ್ಸ್ ಖಾತೆಯೊಂದನ್ನು ಪ್ರಾರಂಭಿಸಿ ಕ್ರಮವಾಗಿ ಹಣವನ್ನು ಹಾಕುತ್ತಾ ಬಂದಲ್ಲಿ ಅದು ದೊಡ್ಡ ಮೊತ್ತವಾಗಿ ನೀವು ಬೇಕಾಗಿ ಅಪೇಕ್ಷಿಸುವ, ನಿಮ್ಮ ಕುಟುಂಬಕ್ಕೆ ಬೇಕಾದ ಮನೆಸಾಮಾನುಗಳನ್ನು ಕೊಂಡುಕೊಳ್ಳಲಿಕ್ಕಾಗಲೀ, ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಲೀ, ಇಲ್ಲವೆ ಇನ್ನಾವುದಾದರೂ ಸದುಪಯೋಗ ಕಾರ್ಯಗಳಿಗಾಗಲಿ ಒದಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯಿರಿ.

THE CANARA INDUSTRIAL &
BANKING SYNDICATE LTD.,

Estd: 1925 H O UDIPI, S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಚೇರಿ ಉಡುಪಿ ದ ಭಾರತ

UDIPI MUNICIPALITY.

Sealed tenders will be received by the Commissioner, Udipi Municipality upto 4 p. m. on 23-11-1953 for the following works.

Name of work	Estimate	Earnest money deposit.
1. Reconstruction of Culvert at the end of Mosque Road	Rs 1,380/-	Rs 70/-
2 Forming road L1 E1 in Central Ward Town Planning Scheme area	Rs 1,500/-	Rs 75/-
3 Forming road L2 L2 in Central Ward Town Planning Scheme area	Rs 1,960/-	Rs 100/-
4 Forming road E3 E3 in Central Ward Town Planning Scheme area	Rs [illegible]	Rs 35/

Particulars of tender, schedule of quantities specifications etc can be obtained from the Municipal Office during office hours on working days.

Municipal Office, Udipi,
Dated 9-11-1953

K. GOPALA MENON,
Commissioner
Udipi Municipality, Udipi

ಧರ್ಮಾರ್ಥ--ಸುಕ್ಕಟೆ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N. U.)
Bhandari Street,
BOMBAY—3

ಬಹಿರಂಗ ಏಲಂ

ಮೊಟ್ಟಾಂ ಕಥೋಲಿಕ್ ಎಸೋಸಿಯೇಶನ್ ಮತ್ತು ಶೇರು ಹೋಲ್ಡರರು ಒಟ್ಟುಕೂಡಿ ನಡೆಸುವ, ಪಾಲು ಗುತ್ತಿಯಲ್ಲಿರುವ ಪೆಟ್ರೋಲ್ ಮೆಶಿನ್ 10 H. P. ಮತ್ತು ಪಂಪ್ ಸೆಟ್ (ಪೈಪ್ ಸಮೇತ) ಇದೇ ತಾ 22-11-53 ನೇ ಆದಿತ್ಯವಾರ ಹಗಲು 10 ಗಂಟೆಗೆ ಮೊಟ್ಟಾಂ ಇಗರ್ಜಿ ಕಂಪೌಂಡಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಂಗೆ ನಿಲ್ಲುವವರು ಅವಶ್ಯ ಕಂಡಲ್ಲಿ ಸದರಿ ಇಗರ್ಜಿ ಕಂಪೌಂಡಿನಲ್ಲಿ ಇಂಜಿನನ್ನು ಮೊದಲಾಗಿ ಪರೀಕ್ಷಿಸಿಕೊಳ್ಳಬಹುದು.

ಕಾರ್ಯದರ್ಶಿ,
ಮೊಟ್ಟಾಂ ಕಥೋಲಿಕ್ ಎಸೋಸಿಯೇಶನ್
ಮೊಟ್ಟಾಂ, ದ. ಕ. ತಾ. 5-11-53.

"ನೆಹರೂ ಜಿಂದಾಬಾದ್!"

ಪ್ರಧಾನಿ ನೆಹರೂಗೆ ೧೪ನೇ ದಿನಾಂಕ ೬೭ ವರ್ಷ ವಯಸ್ಸು ತುಂಬಿತು. ಅವರ ಹುಟ್ಟು ಹಬ್ಬವನ್ನು ಅಖಿಲ ಭಾರತದಲ್ಲಿ ವಿಜೃಂಭಣೆಯಿಂದ ಆಚರಿಸಿದರು. ದೇಶ ವಿದೇಶಗಳ ಮಿತ್ರವೃಂದ ಹಾಗೂ ಹಿತೈಷಿಗಳಿಂದ ಶ್ರೀ ನೆಹರೂರವರಿಗೆ ಶುಭಾಶಯದ ಅಸಂಖ್ಯ ಪತ್ರಗಳು ಬಂದವು. ಜವಾಹರಲಾಲರಿಗೆ ಶುಭ ಕೋರಿದವರಲ್ಲಿ ರಶಿಯಾದ ಪ್ರಧಾನಿ ಮೆಲೆಂಕೋವರೂ ಒಬ್ಬರು. ಸಂಸತ್ ಸದಸ್ಯರು, ಕೇಂದ್ರ ಮಂತ್ರಿಗಳು, ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರು ಮುಂತಾದವರು ನೆಹರೂರನ್ನು ಅವರ ಸ್ವಗೃಹದಲ್ಲಿ ಭೇಟಿಯಾಗಿ ಅಭಿನಂದನೆಗಳನ್ನು ತಿಳಿಸಿದರು. ಎಲ್ಲ ರಾಜ್ಯಗಳ ಗವರ್ನರರು, ಮಂತ್ರಿಗಳು ಮುಂತಾದವರೂ ಶುಭ ಸಂದೇಶ ಕಳಿಸಿದ್ದರು. ನೆಹರೂರವರನ್ನು ಕಾಣುವ ಆತುರದಿಂದ ಅಂದು ನೆರೆದವರಲ್ಲಿ ಮಕ್ಕಳ ಉತ್ಸಾಹವನ್ನೆ ಎತ್ತಿ ಹೇಳ ಬೇಕಾಗುವುದು ಮಕ್ಕಳ ಪಾಲಿಗೆ ಪ್ರಧಾನಿ ನೆಹರೂರವರು "ನೆಹರೂ ಚಾಚಾ" ಆಗುತ್ತಾರೆ! ನೆಹರೂ ಮಾಮನೊಡನೆ ಸಲಿಗೆಯಿಂದ ವರ್ತಿಸಲು ಮಕ್ಕಳಿಗಿದೊಂದು ಅತ್ಯಪೂರ್ವವಾದ ಅವಸರ. ಮಕ್ಕಳ ಮನೋಭಾವನೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲ ನೆಹರೂ ತಮ್ಮ ಹೆಚ್ಚಿನ ಸಮಯವನ್ನು ಆ ದಿನ ಮಕ್ಕಳ ಮಧ್ಯದಲ್ಲಿಯೆ ಕಳೆದರು. "ನೆಹರೂ ಜಿಂದಾಬಾದ್" ಎನ್ನುತಿದ್ದ ಚಿಕ್ಕ ಮಗುವೊಂದನ್ನು ಪ್ರಧಾನಿಯವರು ಪ್ರೀತಿಯಿಂದ ಎತ್ತಿಕೊಂಡು ಆಲಂಗಿಸಲು ಉಳಿದ ಮಕ್ಕಳು ಅವರ ಮೇಲೆ ಪುಷ್ಪವೃಷ್ಟಿಗರೆದರು. ಸುಮಾರು ೬೦೦೦೦ ವಿದ್ಯಾರ್ಥಿಗಳಿಗೂ ಹೆಚ್ಚು ಜನರು ದಿಲ್ಲಿಯ ನೇಶನಲ್ ಸ್ಟೇಡಿಯಂದಲ್ಲಿ ನೆಹರೂ ಜನ್ಮ ದಿನಾಚರಣೆಗೋಸ್ಕರ ನೆರೆದಿದ್ದರು ಸ್ವತಃ ನೆಹರೂ ಇಲ್ಲಿ ಉಪಸ್ಥಿತರಿದ್ದು ಮಕ್ಕಳ ಚಟುವಟಿಕೆಗಳನ್ನು ಆಸ್ಥೆಯಿಂದ ನಿರೀಕ್ಷಿಸಿದರು. ಜಲಜನಕದಿಂದ ತುಂಬಿದ ೬೭ ಫುಗ್ಗಗಳನ್ನು ನೆಹರೂರವರು ಗಾಳಿಯಲ್ಲಿ ತೇಲ ಬಿಡುವುದರೊಂದಿಗೆ ಇಲ್ಲಿಯ ಕಾರ್ಯಕ್ರಮ ಪ್ರಾರಂಭವಾಯಿತು. ಅದೇ ಕ್ಷಣಕ್ಕೆ ಬಾಲಕ ಬಾಲಕಿಯರೆಲ್ಲ ಬಣ್ಣ ಬಣ್ಣದ ಫುಗ್ಗಗಳನ್ನು ಹಾರಿಸಿ ಸಂತೋಷಪಟ್ಟರು.

ಎಳೆಯರಿಗೆ ಹಿತೋಪದೇಶ

ಬಾಲಕರು ಪ್ರದರ್ಶಿಸಿದ ಶಾರೀರಕ ವ್ಯಾಯಾಮ ಮತ್ತು ಜನಪದ ನೃತ್ಯಗಳನ್ನು ನೋಡಿದ ಬಳಿಕ ನೆಹರೂರವರು ಚಿಕ್ಕದೊಂದು ಭಾಷಣಮಾಡಿ ಎಳೆಯರಿಗೆ ಕೆಲವು ಹಿತೋಪದೇಶ ನೀಡಿದರು. ವಿದ್ಯಾರ್ಥಿಗಳು ಆಟ ಹಾಗೂ ಕೆಲಸಗಳನ್ನು ಹೊಂದಿಸಿಕೊಂಡು ಸಾಗಬೇಕೆಂದೂ ಕಷ್ಟದ ಕೆಲಸ ಮಾಡುವ ಪ್ರಸಂಗ ಬಂದಾಗ ಮುಖ ದೊಡ್ಡದಾಗಿ ಕುಳಿತುಕೊಳ್ಳಕೂಡದೆಂದೂ ಅವರು ಹೇಳಿದರು "ನೀವು ಈ ಧೋರಣೆಯನ್ನು ಅನುಸರಿಸಿದರೆ ಸುಖಿಗಳಾಗಿ ಬಾಳುವಿರಿ. ಅಲ್ಲದೆ, ಎಂಥ ಕಷ್ಟದ ಕೆಲಸಗಳೂ ನಿಮಗೆ ಸುಖವಾಗಿ ಕಾಣುವುವು. ನಿಮ್ಮಂಥ ವಿದ್ಯಾರ್ಥಿಗಳು ಸುಖಿಗಳಾಗಿ ನಿಷ್ಠಾವಂತ ಚಟುವಟಿಕೆಗಳಿಂದ ಕೂಡಿದವರಾಗಿರುವುದನ್ನು ಕಂಡು ನನ್ನಲ್ಲಿ ಹೊಸ ಆಶೆ ಹುಟ್ಟಿಕೊಂಡಿದೆ. ನಿಮ್ಮ ಮುಗ್ಧ ಮುಖದಲ್ಲಿಯೇ ನಾನು ನಾಳೆಯ ಭಾರತವನ್ನು ಕಾಣುತಿದ್ದೇನೆ" ಎಂದು ನೆಹರೂ ನುಡಿದರು. ಬೆಳೆದ ವಿದ್ಯಾರ್ಥಿಗಳು ಸಹ ತಮ್ಮ ಕುಟುಂಬಕ್ಕೂ ರಾಷ್ಟ್ರಕ್ಕೂ ಉತ್ತಮ ಸೇವೆಯನ್ನು ಸಲ್ಲಿಸಬೇಕೆಂದು ಅವರು ಅಭಿಪ್ರಾಯಪಟ್ಟರು.

ಶೈಕ್ಷಣಿಕ ಸಮಸ್ಯೆ

ನಮಗೆ ತಿಳಿದಂತೆ ವಿದ್ಯಾರ್ಥಿ ದೆಸೆಯಲ್ಲಿ ಮಕ್ಕಳು ಸುಖಿಗಳೇ ಇರುವರು. ಆದರೆ ಈ ಸುಖ ಅವರು ವಿದ್ಯಾನಂತರದ ಮೇಲೆ ಉಳಿಯುವುದಿಲ್ಲ. ವಿದ್ಯೆ ಕಲಿತ ಬಳಿಕ, ಅವರು ಜೀವನರಂಗದಲ್ಲಿ ಪ್ರವೇಶಿಸಿದ ಕ್ಷಣ ದಾರಿ ಕಾಣದೆ ಮೂಕರಾಗಿ, ನಿಷ್ಕ್ರಿಯರಾಗಿ ಅವರು ಕುಳಿತು ಬಿಡುವರು. ಪಡೆದ ಶಿಕ್ಷಣದಿಂದ ಅವರ ಹೊಟ್ಟೆಯ ಪ್ರಶ್ನೆ ಬಗೆಹರಿಯುವುದಿಲ್ಲ. ನಮ್ಮಲ್ಲಿ ವಿದ್ಯಾವಂತರ ಪ್ರಮಾಣವೇ ಅತ್ಯಲ್ಪ. ಅದರಲ್ಲೂ ಉಚ್ಚ ಶಿಕ್ಷಣ ಪಡೆದವರು ಬಹಳ ಕಡಿಮೆ. ಮೌಲಾನಾ ಆಜಾದರು ಕೇಂದ್ರ ಶೈಕ್ಷಣಿಕ ಸಲಹಾ ಮಂಡಳದ ಸಭೆಯನ್ನು ಉದ್ಘಾಟಿಸುತ್ತಾ ಮೊನ್ನೆ ಮಾತನಾಡುವಾಗ ಭಾರತದ ೩೭ ಕೋಟಿ ಜನರಲ್ಲಿ ಕೇವಲ ಮೂರುವರೆ ಲಕ್ಷ ಮಂದಿಗೆ ವಿಶ್ವವಿದ್ಯಾಲಯದ ಶಿಕ್ಷಣ ದೊರೆಯುತ್ತಿದೆ. ಇಷ್ಟು ಸ್ವಲ್ಪ ಜನಕ್ಕೆ ಉಚ್ಚ ಶಿಕ್ಷಣ ದೊರೆತರೂ ನಿರುದ್ಯೋಗಿಗಳಾಗಿರುವವರಲ್ಲಿ ಈ ಸುಶಿಕ್ಷಿತರೇ ಹೆಚ್ಚಾಗಿರುವುದು ಆಶ್ಚರ್ಯದ ಮಾತು. ಉಚ್ಚ ಶಿಕ್ಷಣ ಪಡೆದವರಿರಲಿ, ಸಾಮಾನ್ಯ ವಿದ್ಯಾಭ್ಯಾಸವನ್ನು ಹೊಂದುವವರೇ ಇರಲಿ—ಅವರು ಸಮಾಜಕ್ಕೆ ಭಾರವಾಗದ ರೀತಿ, ಶಿಕ್ಷಣ ಕ್ರಮದಲ್ಲಿ ಯೋಗ್ಯ ಸುಧಾರಣೆಯನ್ನು ಕೈಗೊಳ್ಳುವ ಅಗತ್ಯವುಂಟು. ನಮ್ಮ ಎಲ್ಲ ತಜ್ಞರೂ ಇದೇ ಅಭಿಪ್ರಾಯವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಮಾತುಗಳಲ್ಲಿ ಹೇಳಿದ್ದರೂ ಈ ಅಭಿಪ್ರಾಯವು ಕಾರ್ಯರೂಪದಲ್ಲಿ ಇಳಿಯುವಂತೆ ತಕ್ಕ ಕ್ರಮಗಳು ಕೈಗೊಳ್ಳಲ್ಪಟ್ಟಿಲ್ಲ ಇನ್ನೂ ಹಳೆಯ ಪದ್ಧತಿಯ ಶಿಕ್ಷಣವನ್ನೆ ವಿದ್ಯಾರ್ಥಿಗಳು ಪಡೆಯುತ್ತಿರುವುದು ಶೋಚನೀಯ.

ಈಗಿರುವುದು ವಿಧಾಯಕ

ರಾಷ್ಟ್ರಕ್ಕೆ ಅತ್ಯಮೂಲ್ಯ ಸೇವೆಯನ್ನು ಸಲ್ಲಿಸಲು

ಅಲ್ಲಿ ಇಲ್ಲಿ ಪ್ರಾಯೋಗಿಕರೂಪದಲ್ಲಿ ಹೊಸ ಪದ್ಧತಿಗಳನ್ನು ಅನುಸರಿಸುತಿದ್ದರೂ ಅಖಿಲಭಾರತಕ್ಕೆ ಅನ್ವಯವಾಗುವ, ಸರ್ವರಿಗೂ ಯೋಗ್ಯ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳಬಲ್ಲ ಶಿಕ್ಷಣ ಪದ್ಧತಿಯನ್ನು ಕಂಡುಹಿಡಿಯಲಾಗಿಲ್ಲ.

ವಿದ್ಯಾಭ್ಯಾಸದ ಉದ್ದೇಶ

ಅಸಾಮದಲ್ಲಿ ಕಳೆದ ವಾರ ಅಖಿಲಭಾರತ ಮೂಲ ಶಿಕ್ಷಣ ಪರಿಷತ್ತು ಸೇರಿತು. ಕಾಕಾ ಸಾಹೇಬ ಕಾಲೇಲಕರರು ಇಲ್ಲಿ ಸಭಾಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಪದ್ಧತಿಯನ್ನು ಬದಲಿಸಬೇಕನ್ನುವವರು ಕೇವಲ ಮಾತಿನ ಸಹಾನುಭೂತಿ ತೋರಿಸುವುದರಿಂದ ಕೆಲಸವಾಗದು. ಶಿಕ್ಷಣ ಕ್ರಮದಲ್ಲಿ ಸುಧಾರಣೆಯನ್ನು ಅಪೇಕ್ಷಿಸುವವರಿಗೆ ಗಾಂಧಿಜಿಯವರು ಮೂಲ ಶಿಕ್ಷಣದ ಹೊಸ ಪದ್ಧತಿಯನ್ನು ತೋರಿಸಿಕೊಟ್ಟಿರುವರು. ಈ ಕ್ರಮವನ್ನು ಅನುಸರಿಸುವುದರಿಂದಲೇ ಹಳ್ಳಿಯ ಅಭಿವೃದ್ಧಿ ಕಾರ್ಯಗಳಲ್ಲಿ ಮಕ್ಕಳು ಆಸ್ಥೆಯನ್ನು ವಹಿಸುವಂತೆ ಮಾಡುವುದು ಸಾಧ್ಯ. ಈ ಮಕ್ಕಳೇ ನಾಳೆಯ ಪ್ರಜೆಗಳೂ ಆಗಿರುವುದರಿಂದ ದೇಶದ ಸೇವೆ ಮಾಡಲಾಗುವಂತೆ ಅವರ ಮನಸ್ಸನ್ನು ಮೂಲ ಶಿಕ್ಷಣ ಪದ್ಧತಿ ರೂಪಿಸುತ್ತದೆ ಎಂದರು. ಮಕ್ಕಳ ಭವಿಷ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ಪ್ರದರ್ಶಿಸುವ ಪ್ರಧಾನಿ ನೆಹರೂರವರು ಈ ಸಮ್ಮೇಳನಕ್ಕೆ ಒಂದು ಸಂದೇಶವನ್ನು ಕಳುಹಿಸಿ "ಪ್ರತಿಯೊಬ್ಬನೂ ಭಾರತದಲ್ಲಿರುವ ಶಿಕ್ಷಣ ಪದ್ಧತಿಯನ್ನು ಟೀಕಿಸುವುದು ಕಂಡು ಬರುತ್ತದೆ. ನಿಜ ಹೇಳಬೇಕೆಂದರೆ ಸದ್ಯದ ಶಿಕ್ಷಣವು ಹಾಗೆ ಕರೆದುಕೊಳ್ಳಲು ಅರ್ಹವೇ ಎಂಬ ಸಂದೇಹ ಜನಿಸುತ್ತದೆ. ನಮ್ಮ ವಿಶ್ವವಿದ್ಯಾಲಯಗಳು ಕ್ರಿಯಾಸಮಿತಿ, ನೂರಾರು ತರದ ಬೇಡಿಕೆಗಳು, ಅನ್ನ ಸತ್ಯಾಗ್ರಹ ಮತ್ತು ಪುಂಡುತನಗಳಿಂದ ಕೂಡಿದ ರಣಾಂಗಣಗಳಾಗಿ ತೋರುತ್ತವೆ. ಔದ್ಯೋಗಿಕ ಘರ್ಷಣೆಯ ವಾತಾವರಣವನ್ನೆ ನಾವು ಶೈಕ್ಷಣಿಕ ಸಂಸ್ಥೆಗಳಲ್ಲಿಯೂ ಕಾಣುತಿದ್ದೇವೆ. ಉದ್ಯೋಗದಲ್ಲಿ ಘರ್ಷಣೆಗೆ ಅವಕಾಶ ಕೊಡುವುದು ಅನಿಷ್ಟಪ್ರದವೆಂದು ನಾವು ಸ್ಪಷ್ಟವಾಗಿ ತಿಳಿದಿರುತ್ತಾ ಶೈಕ್ಷಣಿಕ ಸಂಸ್ಥೆಗಳಲ್ಲೂ ಅದರ ಮನೋಭಾವನೆಗೆ ಆಸ್ಪದ ಕೊಡುತ್ತಿರುವುದು ಆಶ್ಚರ್ಯಕರ. ಇದು ನಮ್ಮ ಯುವ ಜನಾಂಗದ ಯಥೋಚಿತ ಬೆಳವಣಿಗೆಗೆ ವಿಘಾತುಕವಾಗಿರುತ್ತದೆ. ಸರಕಾರವು ಇದನ್ನು ಪ್ರತಿಬಂಧಿಸಲು ಉಪಾಯ ಯೋಚಿಸಬಲ್ಲುದು. ಆದರೆ ಈ ಪ್ರಶ್ನೆ ಅಷ್ಟರಿಂದಲೇ ಮುಗಿಯುವಂಥದಲ್ಲ — ವ್ಯಾಪಕವಾದ, ಆಳವಾದ ಕ್ಷೇತ್ರವನ್ನದು ಆವರಿಸಿದೆ. ವಿದ್ಯಾರ್ಥಿಗಳು ಜ್ಞಾನಾರ್ಜನೆ ಮತ್ತು ಶೀಲಸಂವರ್ಧನೆಗೆ ಪ್ರಾಧಾನ್ಯಕೊಡುವಂತೆ, ಮತ್ತು ಭಾರತದ ಮಹಿಮೆ ಬೆಳಗಿಸಲು ಪ್ರತಿಯೊಬ್ಬನೂ ಪ್ರಯತ್ನಿಸುವಂತೆ ಶಿಕ್ಷಣ ಪದ್ಧತಿಯನ್ನು ಪುನರ್ಘಟಿಸಬೇಕು. ಮೂಲ ಶಿಕ್ಷಣ ಪದ್ಧತಿ ಬಾಲ್ಯಾವಸ್ಥೆಯಲ್ಲಿಯೇ ಮಕ್ಕಳ ಬುದ್ಧಿ ಮತ್ತು ಚಾರಿತ್ರ್ಯವನ್ನು ಒಳ್ಳೆಯದರ ಕಡೆಗೆ ಒಲವುಳ್ಳವನ್ನಾಗಿ ಮಾಡುತ್ತದೆ" ಎಂದರು.

ಆದಿವಾಸಿಗಳ ಏಳಿಗೆ

ಶಿಕ್ಷಣ ಪದ್ಧತಿಯಷ್ಟೇ ಪ್ರಾಮುಖ್ಯವಾದ ಇನ್ನೊಂದು ಸಮಸ್ಯೆಯೂ ಭಾರತದ ಮುಂದಿರುತ್ತದೆ; ಆದಿವಾಸಿಗಳ ಏಳಿಗೆಯೇ ಅದು. ಬಿಹಾರದಲ್ಲಿ ಈ ವಿಷಯವನ್ನು ಚರ್ಚಿಸಲು ಸಭೆಯೊಂದು ಸೇರಿದಾಗ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು "ಜನ ಸೇವಕರು ವಿನಯದಿಂದ ವರ್ತಿಸಬೇಕು ಹೊರತು ತಾವೇ ದೊಡ್ಡವರೆಂಬ ಹಾಗೆ ನಡೆಯಕೂಡದು' ಎಂದರು. ಆದಿವಾಸಿಗಳು ಪ್ರತ್ಯೇಕ ಭಾಷೆ, ಸಂಸ್ಕೃತಿ ಮತ್ತು ಪದ್ಧತಿಗಳನ್ನು ಅನುಸರಿಸುತಿದ್ದರೂ ಅವರೂ ಭಾರತ ನಿವಾಸಿಗಳೇ ಆಗಿರುವರೆಂಬುದನ್ನು ಮರೆಯ ಬಾರದು. ನಮ್ಮ ಘಟನೆಯು ಭಾರತದ ನಾಗರಿಕರಲ್ಲಿ ಯಾವುದೇ ಭೇದಭಾವವನ್ನು ಕಲ್ಪಿಸಿರದಿದ್ದರೂ ತೀರಾ ಹಿಂದುಳಿದವರೆನಿಸಿಕೊಂಡ ಆದಿವಾಸಿಗಳ ಅಭಿವೃದ್ಧಿಗೋಸ್ಕರ ಕೆಲವು ವಿಶಿಷ್ಟ ಸೌಲಭ್ಯಗಳನ್ನು ಒದಗಿಸಿಕೊಡಲು ಸರಕಾರ ನಿರ್ಧರಿಸಿರುತ್ತದೆ. ಆದರೆ ಹಿಂದುಳಿದವರು ಮುಂಬರಬೇಕೆನ್ನುವ ಪ್ರಾಮಾಣಿಕವಾದ ಇಚ್ಛೆಯಿಂದ ದುಡಿಯುವ ಕಾರ್ಯಕರ್ತರು ಇದ್ದಾರೆಯೆ? ಸರಕಾರದವರು ಹಣವನ್ನು ವೆಚ್ಚ ಮಾಡಬಹುದು. ಆದರೆ ಆ ಹಣದ ಸದುಪಯೋಗವಾಗುವಂತೆ ಕೆಲಸ ಮಾಡಬಲ್ಲ ರಚನಾತ್ಮಕ ಕಾರ್ಯಕರ್ತರು ಈಗ ದೊರಕುತ್ತಾರೆಯೆ? ಈ ವಿಷಯದಲ್ಲಿ ಸಂದೇಹವೇ ತೋರುತ್ತದೆ. ಪರಿಶಿಷ್ಟ ವರ್ಗಗಳ ಕಮಿಶನರಾದ ಶ್ರೀ ಕಾಂತನವರು ಗಾಂಧೀಯುಗದ ವಿಧಾಯಕ ಕಾರ್ಯಕರ್ತರು ಈಗ ಆಡಳಿತ ಯಂತ್ರದಲ್ಲಿ ಸೇರಿಕೊಂಡೋ ಬೇರೆ ಉದ್ಯೋಗಗಳನ್ನು ಅವಲಂಬಿಸಿಯೋ - ಮಾಯವಾಗುತ್ತಿರುವರೆಂದು ದೂರಿಕೊಂಡಿದ್ದಾರೆ. ವಿದೇಶೀ ಮಿಶ

ಕೆ. ಆರ್. ಕೆ. ಶೇಟ್,
ಜಯಮಂಡ್—ಮಾರ್ಟ—ಮಂಗಳೂರು.
ಇವರು
ಮಹಾಜನರಿಗೆ—ತಮ್ಮ ಹಾರ್ದಿಕ ಸುಸ್ವಾಗತವನ್ನು ಈ ಮೂಲಕ ಕೊಡುತ್ತಾರಲ್ಲದೆ ಈ ವರೆಗೂ—ಕೊಟ್ಟ ಇನ್ನುಮುಂದೆಯೂ ಕೊಡುವ ಸಹಾನುಭೂತಿಗೆ ತುಂಬಾ ಕೃತಜ್ಞರಾಗಿರುತ್ತಾರೆ.
ಕೆ. ಕೆ. ಆರ್. ಶೇಟ್.
ಪ್ರೊಪ್ರೈಟರ್.

70 ವರುಷಗಳಿಂದ ಜಗಜ್ಜನಿತವಾದುದ
ಮಲೇರಿಯಾ, ಇನ್‌ಫ್ಲುಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಆಗ್ ಮಿಕ್ಸ್‌ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು;-
ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತುಗೀಜ್ ಸ್ಟ್ರೀಟ್,
Tele. Add: "CAWASHABAD" ದಾದರ್, ಬೊಂಬಾಯಿ, 28

ಕಾರ್ಯಕರ್ತರ ಕೊರತೆ

ಇಂದಿರುವಷ್ಟು ಅವಕಾಶ ಹಿಂದೆ ಇರಲಿಲ್ಲ

ನರಿಗಳು ಲುಶಾಯಿ ಮತ್ತು ಖಾಸಿ ಗುಡ್ಡಗಳಲ್ಲಿ ನಾಗಾ ಪ್ರದೇಶದಲ್ಲಿ ಮಧ್ಯ ಭಾರತ, ಬಿಹಾರ ಮುಂತಾದೆಡೆಯ ಅರಣ್ಯಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಆಸ್ಪತ್ರೆಗಳನ್ನು ತೆರೆದು ನೀಡುವ ಸೇವೆಯ ಶತಾಂಶದಷ್ಟನ್ನು ನೀಡಲು ಭಾರತೀಯ ನಾಗರಿಕರು ಮುಂಬರದಿರುವುದು ಶೋಚನೀಯ ಸಮಾಜ ಸೇವೆಗೆ ಇಂದು ಎಂದಿಗಿಂತಲೂ ಅಧಿಕ ಅವಕಾಶವಿದೆ ಎಂಬುದನ್ನು ಮರೆಯಬಾರದು.

ಸಂಘಟಿತ ಸೇವೆ

ಆದಿವಾಸಿಗಳ ಏಳಿಗೆಗಾಗಿಯಷ್ಟೇ ಅಲ್ಲ ಭಾರತದ ಸಾರ್ವಾಂಗಿಕ ಪ್ರಗತಿಯ ಧ್ಯೇಯದಿಂದ ಕೈಕೊಂಡ ಪ್ರತಿಯೊಂದೂ ಅಭಿವೃದ್ಧಿ ಯೋಜನೆ ಕಾರ್ಯರೂಪಕ್ಕಿಳಿಯಲು ವಿಧಾಯಕ ಕಾರ್ಯಕರ್ತರು ಸಹಸ್ರಾರು ಸಂಖ್ಯೆಯಲ್ಲಿ ಬೇಕಾಗಿರುವರು. ಪಂಚವಾರ್ಷಿಕ ಯೋಜನೆಯಲ್ಲಿ ಸಾರ್ವಜನಿಕ ಸಹಕಾರವನ್ನು ಸುಸಂಬದ್ಧವಾಗಿ ಒದಗಿಸಿಕೊಳ್ಳಲು ಉದ್ದೇಶಿಸಿ ರಚಿಸಿದ ಭಾರತ ಸೇವಕ ಸಮಾಜದಂಥ ಸಂಘಟನೆಗಳೂ ಸಾಮಾಜಿಕ ಚಟುವಟಿಕೆಗಳಲ್ಲಿ ಆಸ್ಥೆಯುಳ್ಳ ವಿದ್ಯಾರ್ಥಿ ವೃಂದ ಹಾಗೂ ಯುವ ಜನಾಂಗಕ್ಕೆ ಉತ್ತಮ ಅವಕಾಶವನ್ನು ಒದಗಿಸಿಕೊಡುತ್ತದೆ. ಲಕ್ನೋ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಮುಂಚಾಟಿಕೆಯಲ್ಲಿ ಸಮಯ ಕಳೆದರೆಂದ ಮಾತ್ರಕ್ಕೆ ಭಾರತದ ಎಲ್ಲ ಶೈಕ್ಷಣಿಕ ಕ್ಷೇತ್ರಗಳಲ್ಲೂ ವಿಧ್ವಂಸಕ ಕೃತ್ಯಗಳೇ ನಡೆಯುತ್ತಿವೆಯೆಂದು ಹೇಳಲಾಗದು-ಈಗ ತಾನೆ ಪ್ರಕಟಗೊಂಡಿರುವ ಜನಹಿತ ಯೋಜನೆಗಳ ಅಭಿವೃದ್ಧಿಯ ವರದಿಯಲ್ಲಿ ಸರಕಾರೀ ಹಾಗೂ ಸರಕಾರೇತರ ವರ್ಗಗಳಿಂದ ಅಪಾರ ಸಾರ್ವಜನಿಕ ಸಹಕಾರವು ಸಂಘಟಿಸಲ್ಪಟ್ಟ ಉಲ್ಲೇಖವಿರುತ್ತದೆ. ಅವರಲ್ಲೂ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಂದ ಸಹಸ್ರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಜನಹಿತದ ಯೋಜನೆಗಳಾಗುವಲ್ಲಿಗೆ ಹೋಗಿ, ಅಲ್ಲಿ ಶಾರೀರಕ ಶ್ರಮವನ್ನು ವಹಿಸುವುದರ ಮೂಲಕ ಮಾರ್ಗಗಳನ್ನು ಕಾಲುವೆಗಳನ್ನು ಬಾವಿಗಳನ್ನು ರಚಿಸುವುದು ಶ್ಲಾಘನೀಯವೇ ನಿಜ. ಇಂಥ ಅಭಿವೃದ್ಧಿ ಪ್ರಯತ್ನಗಳಲ್ಲಿ ನೇಶನಲ್ ಕಡೆಟ್ ಕೋರದವರೂ ಭಾಗವಹಿಸಿರುವುದು ಅಭಿಮಾನದ ವಿಷಯ.

ಸಮಾಧಾನಕರ ಸಹಕಾರ

ಇದು ವರೆಗೆ ಕೈಗೂಡಿದ ಪ್ರಗತಿಯ ಸಿಂಹಾವಲೋಕನ ಮಾಡುತ್ತಾ ಪಂಚವಾರ್ಷಿಕ ; ಯೋಜನೆಯ ಅವಧಿಯಲ್ಲಿ ಅರೆವಾಸಿ ಮುಗಿದಿರುವ ಈ ಕ್ಷಣದಲ್ಲಿ, ಜನಹಿತದ ಯೋಜನೆಯಿಂದ ಅಪೇಕ್ಷಿಸಿರುವ ಸೇವೆಯಲ್ಲೂ ಅರ್ಧಾಂಶ ಕೈಗೂಡಿರುವುದನ್ನು ವರದಿ ತಿಳಿಸಿವೆ. ೭೫೦ ಲಕ್ಷ ಜನಸಂಖ್ಯೆಯುಳ್ಳ ೧೨೦೦೦೦ ಹಳ್ಳಿಗಳನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆ ಮುಟ್ಟಬೇಕೆಂದು ಯೋಜನೆಯಲ್ಲಿ ಹೇಳಿದ್ದು ಇದುವರೆಗೆ ೩೦೦ ಲಕ್ಷ ಜನವಸತಿಯುಳ್ಳ ೪೬೦೦೦ ಹಳ್ಳಿಗಳಲ್ಲಿ ಚಟುವಟಿಕೆಗಳು ಹಬ್ಬಿರುತ್ತವೆ. ಜನಹಿತದ ಯೋಜನೆಗಳಲ್ಲಿ ತೋರಿಬಂದಷ್ಟು ಸಾರ್ವಜನಿಕ ಸಹಕಾರ ಮತ್ತು ಉತ್ಸಾಹವನ್ನು ಬೇರೆ ಯಾವುದೇ ರಂಗದಲ್ಲಿ ಕಾಣಲಿಲ್ಲವೆಂದು ವರದಿ ಅಭಿಮಾನದಿಂದ ಹೇಳಿದೆ. ಭಾರತೀಯರ ಸಹಕಾರದ ಪ್ರಶಂಸೆ ಎಲ್ಲಿಯವರೆಗೆ ಮುಟ್ಟಿದೆಯೆಂದರೆ ಕಚ್ಚಾ ರಸ್ತೆಗಳನ್ನು ಹಳ್ಳಿಗರು ಸ್ವಂತ ಪ್ರಯತ್ನದಿಂದ ಕಟ್ಟಿದಾಗ ಅವುಗಳ ಪಕ್ಕದಲ್ಲಿ ಸರಕಾರೀ ವೆಚ್ಚದಿಂದ ತಕ್ಕ ಸಮಯದಲ್ಲಿ ಕಲ್ಲು ಕಟ್ಟಿಸಲು ಆಗದೆ, ಅವು ಮಳೆಯಿಂದ ಕೊಚ್ಚಿ ಹೋದ ನಿದರ್ಶನಗಳೂ ಇವೆಯಂತೆ. ಸರಕಾರದ ಕಡೆಯಿಂದ ಇಂಥ ತೊಂದರೆಗಳು ಉಂಟಾಗದಂತೆ ಯೋಗ್ಯ ವ್ಯವಸ್ಥೆ ಮಾಡಿಕೊಳ್ಳುವುದು ಅಗತ್ಯ. ಈ ಯೋಜನೆ ಪೂರ್ತಿಯಾಗುವುದಕ್ಕೆ ೮೪೦೦೦ ತಜ್ಞರೂ ಮೂರು ಲಕ್ಷಕ್ಕೂ ಮಿಕ್ಕಿ ವಿಧಾಯಕ ಕಾರ್ಯಕರ್ತರೂ ಬೇಕಾಗಿರುವರು. ಇಷ್ಟರ ಮಟ್ಟಿಗೆ ನಿರುದ್ಯೋಗ ಹೋಗುವುದಲ್ಲದೆ ಇದು ವರೆಗೆ ಅರೆ ಉದ್ಯೋಗದಿಂದ ಇದ್ದವರು ಸುಧಾರಿತ ವಾತಾವರಣದ ಪ್ರಯೋಜನವನ್ನು ಪಡೆದು ಪೂರ್ಣೋದ್ಯೋಗಿಗಳಾಗುವುದಕ್ಕೂ, ಏನೂ ಉದ್ಯೋಗವಿಲ್ಲದವರು ಏನಾದರೂ ಉದ್ಯೋಗ ಪಡೆಯುವುದಕ್ಕೂ ಜನಹಿತದ ಯೋಜನೆಗಳು ನೆರವಾಗುತ್ತವೆ.

ಬಟ್ಟೆಯ ಉಪಯೋಗದಲ್ಲಿ ಹೆಚ್ಚಳ

ವಿಧಾಯಕ ಕಾರ್ಯಕರ್ತರು ಗಮನಿಸಿದರೆ ದೇಶದ ಮುಂದಿರುವ ಇತರ ಅನೇಕ ಸಮಸ್ಯೆಗಳನ್ನು ಚೆನ್ನಾದ ರೀತಿಯಲ್ಲಿ ಪರಿಹರಿಸಲು ಸಾಧ್ಯವುಂಟು. ಕೈಮಗ್ಗದ ಬಟ್ಟೆಯನ್ನು ಜನಪ್ರಿಯಗೊಳಿಸುವುದು ಮತ್ತು ಗಿರಣಿಗಳ ಬಟ್ಟೆಯೊಂದಿಗೆ ಅದು ಹೂಡಬೇಕಾಗಿ ಬಂದಿರುವ ಸ್ಪರ್ಧೆಯಿಂದ ರಕ್ಷಿಸುವುದು ರಚನಾತ್ಮಕ ಕಾರ್ಯಕರ್ತರ ಸಾಮರ್ಥ್ಯದ ಹೊರಗಿನ ಮಾತಲ್ಲ. ಉತ್ಸಾಹ ಮತ್ತು ಲವಲವಿಕೆಯಿಂದ ರಚನಾತ್ಮಕ ಕೆಲಸಗಳಲ್ಲಿ ಭಾಗವಹಿಸುವ ಶಾಲಾ ಕಾಲೇಜುಗಳ ತರುಣ ತರುಣಿಯರು ತಮ್ಮ ಉಡುಪು ತೊಡುಪುಗಳಿಗಾಗಿ ಕೈಮಗ್ಗದ ಬಟ್ಟೆಗಳನ್ನೆ ಉಪಯೋಗಿಸಲು ನೋಡಿದರೆ, ಈ ಸಮಸ್ಯೆಯ ಪರಿಹಾರಕ್ಕೆ ಸಮಯವೇ ಉಳಿಯದು. ಅಷ್ಟು ತ್ವರಿತದಲ್ಲಿ ಸಮಸ್ಯೆ ದೂರಾಗುವುದು ನಿಶ್ಚಯ. ಕೇಂದ್ರದ ವಾಣಿಜ್ಯ ಮಂತ್ರಿ ಕೃಷ್ಣಮಾಚಾರಿಯವರು ಮುಂಬಯಿಯಲ್ಲಿ ಮಾತನಾಡುವಾಗ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಕೈಮಗ್ಗದ ಉದ್ದಿಮೆಗೆ ಇರುವ ಸ್ಥಾನಮಾನವನ್ನು ಕಾನುಂಗೊ ಸಮಿತಿಗೆ ಒಪ್ಪಿಸಿಕೊಡಲಾಗಿದೆಯೆಂದೂ ಸರಕಾರ ಈ ದಿಸೆಯಲ್ಲಿ ತೆಗೆದುಕೊಳ್ಳುವ ಕಾರ್ಯಕ್ರಮ ಈ ಸಮಿತಿಯ ಸಿಫಾರಸುಗಳನ್ನು ಹೊಂದಿಕೊಂಡಿದೆಯೆಂದೂ ಹೇಳಿದರು. ಈಚೆಗೆ ಕೈಮಗ್ಗದ ಬಟ್ಟೆಗಳ ಮಾರಾಟವು ಹೆಚ್ಚಿಕೊಂಡಿರುವುದೆಂದು ಮಂತ್ರಿಗಳು ವಿವರಿಸಿದರು. ಕಾನುಂಗೋ ಸಮಿತಿಯ ಹೇಳಿಕೆಯಂತೆ ಕೈಮಗ್ಗಗಳಿಂದ ವರ್ಷಂಪ್ರತಿ ೧೫೦ ಕೋಟಿ ಗಜ ಬಟ್ಟೆ ತಯಾರಾಗುತ್ತದೆ. ಅದೇ ಸಮಯ ಗಿರಣಿಗಳು ೪೮೦ ಕೋಟಿ ಗಜ ಬಟ್ಟೆಯನ್ನು ಉತ್ಪಾದಿಸುತ್ತವೆ. ನಾವು ಇಷ್ಟು ಬಟ್ಟೆಯನ್ನು ಉಪಯೋಗಿಸಿಕೊಳ್ಳುವಂತಿದೆಯೆ ಎಂಬುದೀಗ ಇನ್ನೊಂದು ಪ್ರಶ್ನೆ. ನಮ್ಮ ಮಂತ್ರಿಗಳು ನಮ್ಮ ಬಟ್ಟೆಯ ಮಾರಾಟ ಹೆಚ್ಚುತ್ತಾ ನಡೆದಿದೆ ಎಂದು ನುಡಿದಿರುವರು. ಉತ್ತರ ಪ್ರದೇಶದಲ್ಲಿ ೬೮೦೦ ಬೇಲುಗಳಷ್ಟಿದ್ದ ನೀರೆಯ ಮಾರಾಟ ಈಗ ೧೪೦೦೦ ಬೇಲುಗಳಿಗೆ ಏರಿದೆ. ಬಂಗಾಳದಲ್ಲಿ ಈ ಪ್ರಮಾಣದಲ್ಲಿ ೪೬೦೦ ಬೇಲುಗಳಿಂದ ೮೦೦೦ ಬೇಲುಗಳಿಗೆ ಏರಿದೆ. ದಕ್ಷಿಣ ಭಾರತದಲ್ಲಿ ಮಾತ್ರ ಉಪಯೋಗ ಅಷ್ಟಾಗಿ ಹೆಚ್ಚಿಕೊಂಡಂತಿಲ್ಲ. ನಮ್ಮ ಕ್ರಯಶಕ್ತಿ ಕಡಿಮೆಯಿರುವುದು ಬಟ್ಟೆಯ ಉಪಯೋಗ ಬಹಳವಾಗಿ ಹೆಚ್ಚಿಕೊಳ್ಳದಿರುವುದಕ್ಕೆ ಕಾರಣವಾಗಬಹುದು. ಈ ಕಾರಣದಿಂದಲೇ ಪ್ರಾಯಶಃ ನಮ್ಮ ಗಿರಣಿ ಬಟ್ಟೆಗಳು ವಿದೇಶಗಳ ಪೇಟೆಯತ್ತ ನೋಡುತ್ತವೆ. ಆದರೆ ಅಲ್ಲಿ ಬ್ರಿಟನು ಹಾಗೂ ಜಪಾನುಗಳ ಸ್ಪರ್ಧೆ ಇರುವುದರಿಂದ ಹಿಂದೇಟು ತಿನ್ನುವುದು ಅನಿವಾರ್ಯವೆನಿಸಿದೆ. ಸರಕಾರ ಈಚೆಗೆ ಅಬಕಾರಿ ಸುಂಕದಲ್ಲಿ ವಿನಾಯತಿ ತೋರಿಸಿದ್ದರೂ ಪರಿಸ್ಥಿತಿ ಹೆಚ್ಚು ಊರ್ಜಿತಗೊಂಡಿರುವುದಿಲ್ಲ.

ಲೋಕ ಸಭೆಯ ಅಧಿವೇಶನ.

ಲೋಕ ಸಭೆಯ ಅಧಿವೇಶನ ಈ ಸೋಮವಾರ ದಿನ ಸೇರಿದೆ. ಮಹತ್ವದ ಅನೇಕ ಮಸೂದೆಗಳು ಈ ಅಧಿವೇಶನದ ಮುಂದಿವೆ. ಇವುಗಳಲ್ಲಿ ಕೆಲವು ಹಿಂದಿನ ಅಧಿವೇಶನದಲ್ಲಿಯೇ ಮಂಡಿಸಲ್ಪಡಬೇಕಾಗಿದ್ದವುಗಳು ಅಥವಾ ಚರ್ಚೆಗೆ ಅವಕಾಶವಿಲ್ಲದೆ ಮುಂದೂಡಲ್ಪಟ್ಟವುಗಳಾದರೆ, ಇನ್ನು ಕೆಲವು ಹೊಸ ಮಸೂದೆಗಳು ಖಾಸಗಿ ಮಸೂದೆಗಳಲ್ಲಿಯೂ ಕೆಲವು ಮುಖ್ಯವಾದ ವಿಷಯಗಳನ್ನು ಪ್ರಸ್ತಾಪಿಸುತ್ತವೆ.

PLACE YOUR LIFE ASSURANCE WITH A COMPNAY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives at whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಬೇಗನೆ ಪ್ರಕಟವಾಗಲಿರುವುದು— ನಿಮ್ಮ ಪ್ರತಿಗಳನ್ನು ಕಾದಿರಿಸಿರಿ

ದಿ| ಕಿಲ್ಲೆಯವರ ಮೂರು ಗ್ರಂಥಗಳು

1. ಪ್ರಾಚೀನ ತುಳುನಾಡ ಇತಿಹಾಸ ಬೆಲೆ. ರೂ. ೨ ೮ ೦
2 ಭಾರತದ ಕರ್ಣ (ಗದ್ಯ) ಬೆಲೆ. ರೂ. ೦ ೪ ೦
4. ಮುರಲಿ (ಪದ್ಯ) ಬೆಲೆ. ರೂ. ೦ ೪ ೦

ಡಿಸೆಂಬರ ೨ನೇ ತಾರೀಕಿಗೆ ಈ ಪುಸ್ತಕಗಳು ಪ್ರಕಟವಾಗಲಿದ್ದು, ಮುಂಗಡವಾಗಿ ರೂ. 3—8—0 ಕಳುಹಿಸುವವರಿಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಮೂರೂ ಪುಸ್ತಕಗಳನ್ನು ಕಳುಹಿಸಲಾಗುವುದು. ತ್ವರೆ ಮಾಡಿರಿ.

A. T. Mohan Rai,
Valancia, Kankanady,
MANGALORE 2

ತಾ. 19-11-53ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಪ್ರಕೃತಿಯ ಪ್ರಕೋಪ, ಭೂಕಂಪ–ಕ್ರೂರ ಕಾಡು ಪ್ರಾಣಿಗಳಿಂದ ಕೂಡಿದ ಸರ್ಕಸ್ ಇವುಗಳಿಂದೊಡಗೂಡಿದ ರೋಮಾಂಚಕಾರಿ ಚಿತ್ರ.
ಬಿಗ್ ಕೇಜ್
ಇದರೊಂದಿಗೆ ಲೋರೆಲ್ ಮತ್ತು ಹಾರ್ಡಿ ನಟಿಸಿದ ಹಾಸ್ಯಮಯ ಚಿತ್ರ.
" ಚಮ್ಸ್ ಎಟ್ ಒಕ್ಸ್‌ಫೋರ್ಡ್ "
ಬರುವ ಚಿತ್ರಗಳು:— ಪರ್‌ವಾಯಿಸ್, ಅನಾರ್ಕಲಿ, ಪೆಟ್ರಿತಾಯ್.

ಸೀತಾನದಿ ಜಾನುವಾರು ಜಾತ್ರೆ

ದ. ಕ. ಜಿಲ್ಲೆಯ ರೈತರ ಅನುಕೂಲತೆಯ ಬಗ್ಗೆ ಹೆಬ್ರಿ ಸೀತಾನದಿ ಮಂಗಳೂರು ರಸ್ತೆಯು ಆಗುಂಬೆ ರಸ್ತೆಗೆ ಕೂಡುವಲ್ಲಿ ಅಂದರೆ ಸೋಮೇಶ್ವರ ಘಾಟಿಯ ಬುಡದಿಂದ 3 ಮೈಲು ಕೆಳಗೆ ಸೀತಾನದಿಯ ಬಳಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ಈ ವರುಷ ತಾ 16—12—53ರಿಂದ 27—12—53 (ಎರಡೂ ದಿನ್ನ ಕೂಡಿ) ವರೆಗೆ ಜರಗುವುದು.

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರೆಯುವಂತೆ ಎಲ್ಲಾ ಏರ್ಪಾಡುಗಳನ್ನು ಕ್ರಮವಂತೆ ಮಾಡಲಾಗುವುದು. ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ 2 ಫರ್ಲಾಂಗುಗಳೊಳಗಿದ್ದು ಹತ್ತಿರವಿರುವ ಸುರಕ್ಷಿತ (ರಿಸರ್ವ್) ಕಾಡಿನಲ್ಲಿ ತುಂಬಾ ಹುಲ್ಲುಗಾವಲು ಇದೆ. ಜಾತ್ರೆಗೆ ಬರುವ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಯೋಗ್ಯ ಇನಾಮುಗಳನ್ನು ಕೊಡುವ ಏರ್ಪಾಡು ಮಾಡಲಾಗಿದೆ.

ಮೈಸೂರು, ದಕ್ಷಿಣ ಕನ್ನಡ, ವ ಇತರ ಎಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸ ಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ.

ಬಿ. ಕೃಷ್ಣ.
ಲೈವ್‌ಸ್ಟಾಕ್ ಡಿವಿಜನಲ್ ಆಫೀಸರ್,
ಕುಂದಾಪುರ.

ಕುಂದಾಪುರ ತಾ 11-11-53

ನವಯುಗ ವಾರಪತ್ರಿಕೆಗೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ.
ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೊಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.
ವಿಶೇಷ ಮಾಹಿತಿಗೆ,
ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಹಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.
THE CANARA BANKING CORPORATION LTD.,
Estd: 1906] [H. O: UDIPI (S. India.)

ನ ವ ಯು ಗ

ಉಡುಪಿ, ಗುರುವಾರ ೧೯-೧೧-'೫೩

ಪ್ರಜಾ ಜನನ ನಿಯಂತ್ರಣ

ಅಕ್ಕಿ ತಿನ್ನುವವರಿಗೆ ಗೋಧಿ ತಿನ್ನುವವರಿಗಿಂತ ಮಕ್ಕಳು ಹೆಚ್ಚೆಂದು ಈಚೆಗೆ ಮದ್ರಾಸಿನ ಗವರ್ನರ ಶ್ರೀಮಾನ್ ಶ್ರೀ ಪ್ರಕಾಶರು ಒಂದು ಭಾಷಣದಲ್ಲಿ ಹೇಳಿದರು. ಈ ಮಾತು ನಿಜವೆಂದು ಅಂಕೆ ಸಂಖ್ಯೆಗಳೇ ತೋರಿಸಿ ಕೊಡುತ್ತವೆ. ಜಗತ್ತಿನಲ್ಲಿಯೇ ಆಗ್ನೇಯ ಏಶಿಯಾದಷ್ಟು ಜನದಟ್ಟಣೆಯ ಪ್ರದೇಶ ಬೇರೊಂದಿಲ್ಲ; ಮತ್ತು ಇಲ್ಲಿಯಷ್ಟು ದಾರಿದ್ರ್ಯವನ್ನನುಭವಿಸುತ್ತಿರುವ ಪ್ರದೇಶ ಜಗತ್ತಿನಲ್ಲಿಯೇ ಬೇರೊಂದಿಲ್ಲ. ದಿನ ದಿನಕ್ಕೂ ಹೆಚ್ಚುತ್ತಿರುವ ಜನಸಂಖ್ಯೆಯೊಂದಿಗೆ ಈ ಪ್ರದೇಶದಲ್ಲಿ ದಿನದಿನಕ್ಕೂ ದಾರಿದ್ರ್ಯವೂ ತನ್ನ ತಾಂಡವ ಲೀಲೆ ತೋರಿಸುತ್ತಿದೆ. ಭಾರತವೂ ಇದಕ್ಕೆ ಅಪವಾದವಾಗಿಲ್ಲ – ೧೯೫೧ನೇ ವರ್ಷದ ಜನಗಣನೆಯನ್ನು ನಡೆಸಿದ ಅಧಿಕಾರಿಗಳಾದ ಶ್ರೀ ಗೋಪಾಲ ಸ್ವಾಮಿಯವರು ಈಚೆಗೆ ವ್ಯಕ್ತಗೊಳಿಸಿದ ಅಭಿಪ್ರಾಯವನ್ನು ಮತ್ತು ಭಾರತದ ಜನಗಣನೆಯ ಕೆಲವು ವಿವರಗಳನ್ನು ಗಮನಿಸಿದವರಿಗೆ ನಮ್ಮಲ್ಲಿ ಪ್ರಜಾಜನನ ಪ್ರಮಾಣವು ದೊಡ್ಡ ಸಮಸ್ಯೆಯಾಗಿಯೇ ಕಂಡುಬರುತ್ತದೆ. ರಶಿಯಾ ಮುಂತಾದ ದೇಶಗಳಲ್ಲಿ ಮಕ್ಕಳು ಹೆಚ್ಚು ಹೆಚ್ಚಾಗಿ ಹುಟ್ಟಬೇಕೆಂದು ಕಾಯಿದೆ ಮೂಲಕ ಪ್ರಯತ್ನಿಸುತ್ತಲೂ ಪ್ರಜಾಜನನ ಪ್ರಮಾಣ ಹೆಚ್ಚುವುದಕ್ಕೆ ಪ್ರೋತ್ಸಾಹ ಕೊಡುತ್ತಲೂ ಇರುವಾಗ—ಭಾರತದಂಥ ದೇಶದಲ್ಲಿ ಪ್ರಜಾಜನನ ಪ್ರಮಾಣವನ್ನು ಸ್ವೇಚ್ಛೆಯಿಂದಾಗಲೀ ಅಗತ್ಯ ಬಿದ್ದರೆ ಕಾಯಿದೆಯಿಂದಲೇ ಆಗಲಿ ನಿಯಂತ್ರಿಸಬೇಕಾಗಿದೆ ಎಂಬ ಅಭಿಪ್ರಾಯ ಕಂಡುಬರುವುದು ವಿಚಿತ್ರವಾಗಿ ತೋರೀತು. ಭಾರತವು ಮಕ್ಕಳಿಲ್ಲದವರಿಗೆ ಸ್ವರ್ಗವೂ ದೊರೆಯುವುದಿಲ್ಲವೆಂಬ ಸಿದ್ಧಾಂತದಲ್ಲಿ ನಂಬಿಕೆಯನ್ನು ಇಟ್ಟಿರುವ ದೇಶ—ಅದೇ ಜನಾಂಗ ಈಗ ಸಂತತಿಸಂಯಮನ ಮಾಡಲೇಬೇಕಾದ ಒತ್ತಾಯಕ್ಕೆ ಕಟ್ಟು ಬಿದ್ದಿರುವುದನ್ನು ಕಂಡು ಕಾಲಾಯ ತಸ್ಮೈನಮಃ ಎಂದೆನ್ನಬೇಕಾಗುತ್ತದೆ. ಆದರೆ ಈ ಸಮಸ್ಯೆಯನ್ನು ವ್ಯವಹಾರಿಕದೃಷ್ಟಿಯಿಂದ ಮತ್ತು ರಾಷ್ಟ್ರ ಕಲ್ಯಾಣದ ದೃಷ್ಟಿಯಿಂದ ನಾವು ನೋಡಬೇಕೆಂಬುದು ಸ್ಪಷ್ಟವಿದೆ

ಭಾರತದ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗಿದೆಯೆಂದೂ ಇನ್ನು ಮುಂದೆ ಸಹ ಪ್ರತಿ ಹತ್ತು ವರ್ಷಗಳಿಗೆ ಐದು ಕೋಟಿಯಷ್ಟು ನಮ್ಮ ಪ್ರಜಾಜನನ ಪ್ರಮಾಣ ಹೆಚ್ಚಿಕೊಳ್ಳುವುದೆಂದೂ ಜನಗಣನೆಯ ವರದಿ ಉಲ್ಲೇಖಿಸುತ್ತದೆ. ಅದೇ ಸಮಯ ಉತ್ಪಾದನವು ಹೆಚ್ಚಿಕೊಳ್ಳುವುದಿಲ್ಲ ಎಂಬುದೇ ನಮಗಿರುವ ಆತಂಕ. ವಿಜ್ಞಾನ ಕೂಡ ನಮಗೆ ಈ ವಿಷಯದಲ್ಲಿ ಅಪೇಕ್ಷಿತ ಸಹಾಯವನ್ನುಂಟುಮಾಡಲಾರದೆಂದು ಜನಗಣನಾಧಿಕಾರಿಯ ಅಭಿಪ್ರಾಯ. ಆದರೂ ನಾವು ಪ್ರಯತ್ನ ಪಟ್ಟು ಉತ್ಪಾದನೆಯನ್ನು ಹೆಚ್ಚಿಸಿಕೊಂಡರೆ, ಸುಮಾರು ೪೫ ಕೋಟಿ ಜನಕ್ಕೆ ಭಾರತವು ಆಶ್ರಯ ನೀಡಬಹುದೆಂದು ಅವರು ಹೇಳಿರುವರು. ಇನ್ನು ಹದಿನೈದೇ ವರ್ಷಗಳಲ್ಲಿ ನಮ್ಮ ಜನಸಂಖ್ಯೆ ಈ ಪರಮಾವಧಿ ಮಿತಿಯನ್ನು ಮುಟ್ಟುತ್ತದೆ. ಆ ಬಳಿಕ ನಾವು ಏನು ಮಾಡುವುದು ಸಾಧ್ಯ? ಉತ್ಪಾದನೆಯನ್ನು ಹೆಚ್ಚಿಸಿ ೧೫ ವರ್ಷ ಕಾಲ ನಾವು ಗಂಡಾಂತರವನ್ನು ದೂರೀಕರಿಸಿದ ಮಾತ್ರಕ್ಕೆ ಪ್ರಯೋಜನ ದೊರೆಯದೆಂದ ಮೇಲೆ ನಮಗೆ ಉಳಿದಿರುವ ಏಕ ಮಾತ್ರ ಉಪಾಯ ಸಂತಾನ ಸಂಯಮನ. ಜನಗಣನಾಧಿಕಾರಿಯು ಮೂರು ಮಕ್ಕಳಿಗಿಂತ ಹೆಚ್ಚು ಹೆರುವುದು ತಪ್ಪಲೇ ಬೇಕೆಂಬ ಕಠೋರ ನಿರ್ಣಯಕ್ಕೆ ಬಂದಿರುವುದನ್ನು ಹಾಸ್ಯಾಸ್ಪದವಾಗಿ ನಾವು ಗ್ರಹಿಸಕೂಡದು. ಇದು ಗಂಭೀರ ಎಚ್ಚರಿಕೆಯಾಗಿದ್ದು, ಅದರ ಮಹತ್ವವನ್ನು ನಾಗರಿಕರೆಲ್ಲರೂ ತಿಳಿದುಕೊಳ್ಳುವುದು ಅಗತ್ಯ. ಸಂತಾನ ಸಂಯಮನಕ್ಕೆ ವಿಜ್ಞಾನವು ಅನೇಕ ಕೃತ್ರಿಮ ಸಾಧನಗಳನ್ನು ಬಳಕೆಯಲ್ಲಿ ತಂದಿದೆ—ಭಾರತದಲ್ಲಿ ಅವು ಸಾಕಷ್ಟು ಪ್ರಚಾರಕ್ಕೆ ಬಂದಿಲ್ಲ. ಆದರೆ ಭಾರತವು ಕೃತ್ರಿಮ ಸಾಧನಗಳಿಗಿಂತಲೂ ಹೆಚ್ಚು ಅಮೂಲ್ಯವಾದ ಸಂಶೋಧನೆಯೊಂದನ್ನು ಜಗತ್ತಿಗೆ ಎಂದೋ ನೀಡಿದೆ-ಅದುವೇ ಸಂಯಮನದ ಸಿದ್ಧಾಂತ. ಇದನ್ನು ನಿಜವಾದ ಅರ್ಥದಲ್ಲಿ ಅನುಸರಿಸಿ ನಡೆಯಬೇಕೆಂದು ಮಹಾತ್ಮಾ ಗಾಂಧೀಜಿಯವರೂ ಅಭಿಪ್ರಾಯಪಟ್ಟಿದ್ದರು. ಭಾರತೀಯರು ನಾಳೆಯ ಚಿಂತೆ!ನಾಳೆಎಂದು ಈ ದಿನ ನಿಷ್ಕ್ರಿಯರಾಗಿ ಕುಳಿತಿರುವ ಪರಿಸ್ಥಿತಿ ಈಗಿಲ್ಲವೆಂದು ಚೆನ್ನಾಗಿ ತಿಳಿದುಕೊಳ್ಳಬೇಕು; ಮತ್ತು ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸುತಿದ್ದಂತೆಯೇ ಪ್ರಜಾಜನನ ಪ್ರಮಾಣವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೂ ನೋಡಬೇಕು. ಇದರಲ್ಲಿ ಧರ್ಮಾಧರ್ಮದ ಪ್ರಶ್ನೆಗಿಂತಲೂ ಮಾನವೀಯ ಭಾವನೆಗೆ ಪ್ರಾಧಾನ್ಯ ಸಲ್ಲುವುದು ಕ್ರಮಪ್ರಾಪ್ತ. ಹೊಟ್ಟೆಗಿಲ್ಲದೆ, ಬಟ್ಟೆಯಿಲ್ಲದೆ, ವಿದ್ಯೆಯಿಲ್ಲದೆ, ಮನೆ ಇಲ್ಲದೆ ತಿರುಗಬೇಕಾಗಿ ಬರುವ ಮಕ್ಕಳನ್ನು ಕಟ್ಟಿಕೊಂಡು ಯಾವ ತಾಯಿ ತಂದೆಯರೂ ಸುಖಿಗಳಾಗರು. ಎರಡು ಮೂರು ಮಕ್ಕಳಾದರೂ ಸಾಕು—ಅವರು ತಿಂದುಂಡು ಸುಖದಿಂದ ಸಲಿಯುವುದನ್ನು ಕಾಣುವುದೇ ಹೆತ್ತವರ ನಿಜವಾದ ಅಪೇಕ್ಷೆ.

ಅಮೇರಿಕದೊಡನೆ ಮಿಲಿಟರಿ ಒಡಂಬಡಿಕೆ

ಪಾಕಿಸ್ತಾನ ಸರಕಾರದ ಆತುರ ಪ್ರದರ್ಶನ

ಈ ವಾರ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಹೆಸರು ಗಳಿಸಿದ ರಾಷ್ಟ್ರವೆಂದರೆ ಪಾಕಿಸ್ತಾನ: ಭಾರತದ ನೆರೆಯಲ್ಲಿರುವ ಈ ದೇಶ ಇತ್ತ ಅಲ್ಪ ಸಂಖ್ಯಾಕರನ್ನು ಅಸಂತುಷ್ಟಗೊಳಿಸುವಂಥ ಕಲಮುಗಳನ್ನು ತನ್ನ ರಾಜ್ಯಾಂಗ ಘಟನೆಯಲ್ಲಿ ಸ್ವೀಕರಿಸುತಿದ್ದಂತೆಯೇ ಅತ್ತ ಭಾರತ ಹಾಗೂ ಇತರ ದಕ್ಷಿಣ ಏಶಿಯಾದ ರಾಷ್ಟ್ರಗಳಿಗೆ ತೀವ್ರ ಅಸಮಾಧಾನವನ್ನು ಮಾತ್ರವಲ್ಲ ಅಪಾಯವನ್ನೂ ಉಂಟುಮಾಡಬಲ್ಲ ಕೆಲಸವೊಂದಕ್ಕೆ ಕೈ ಹಾಕಿದೆ. ಅದು ಅಮೇರಿಕಾ ಹಾಗೂ ತುರ್ಕಿಗಳೊಂದಿಗೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳುವ ತವಣಿಕೆಯಲ್ಲಿದೆ. ಅಮೇರಿಕೆಯ ಮತ್ತು ಸ್ವತಃ ಪಾಕಿಸ್ತಾನದ ಪತ್ರಿಕೆಗಳಲ್ಲಿ ಇದರದೇ ಸುದ್ದಿ ತುಂಬಿರುತ್ತದೆ. ಕಳೆದ ವಾರವೇ ಅಮೇರಿಕಾದ ನ್ಯೂಯಾರ್ಕ ಟ್ಯಾಮ್ಸ ಪತ್ರವು ಇಂಥದೊಂದು ಒಪ್ಪಂದವನ್ನು ಮಾಡಿಕೊಳ್ಳುವುದು ಸಂಭಾವ್ಯವೆಂದೂ ಪಾಕಿಸ್ತಾನೀ ಗವರ್ನರ ಜನರಲ್ಲರಾದ ಗುಲಾಂ ಮಹಮ್ಮದರು ಅಮೇರಿಕಕ್ಕೆ ಭೇಟಿಕೊಟ್ಟಾಗ ಇದೇ ವಿಷಯದಲ್ಲಿ ಮಾತುಕತೆಗಳಾದಾವೆಂದೂ ಬರೆದಿದ್ದಿತು ಪಾಕಿಸ್ತಾನದ ಗವರ್ನರ ಜನರಲ್ಲರು ಈಗ ಅಮೇರಿಕದಲ್ಲಿರುವರು ಮತ್ತು ಅಧ್ಯಕ್ಷ ಐಸೆನ ಹೋವರರನ್ನೂ ವಿದೇಶಾಂಗ ಸಚಿವ ಡಲ್ಲೇಸರನ್ನೂ ಅವರು ಕಂಡು ಮಾತನಾಡಿರುವರು. ಅಮೇರಿಕದ ಪತ್ರಿಕೆಗಳು ಈ ಪರಿಸ್ಪರ ಭೇಟಿಯ ಕುರಿತು ಹಲವು ಊಹಾ ಪೋಹಗಳ ಸ್ವಾರಸ್ಯವಾದ ಸುದ್ದಿಯನ್ನು ಪ್ರಕಟಿಸುತಿದ್ದರೂ ಅವುಗಳೆಲ್ಲ ಅಮೆರಿಕಾ-ಪಾಕಿಸ್ತಾನ ಮಿಲಿಟರಿ ಒಪ್ಪಂದದ ವಿಷಯಕ್ಕೆಯೇ ಸಂಬಂಧಿಸಿವೆ. ನ್ಯೂಯಾರ್ಕ ಟೈಮ್ಸುವು ಕಳೆದವಾರ ಪ್ರಸಿದ್ಧಿಸಿದ ಬರೆಹವನ್ನು ಸ್ವತಃ ಪಾಕಿಸ್ತಾನ ಸರಕಾರವೇ ಪತ್ರಿಕಾ ಪ್ರಕಟಣೆಯ ರೂಪದಲ್ಲಿ ಕರಾಚಿಯಲ್ಲಿ ಪುನಃ ಪ್ರಸಿದ್ಧಿಸಿರುವುದನ್ನು ನೋಡಿದರೆ ಈ ವಿಷಯದಲ್ಲಿ ಪಾಕಿಸ್ತಾನಕ್ಕೆ ತೀವ್ರ ಆಸ್ಥೆ ಇರುವ ಸಂಗತಿ ಸ್ಪಷ್ಟವಾಗುತ್ತದೆ. ಆದರೂ ಅಮೇರಿಕಾದಲ್ಲಿ ಈ ಸುದ್ದಿಯನ್ನು ಉಭಯ ಸರಕಾರೀ ವಲಯಗಳಿಂದಲೂ ನಿರಾಕರಿಸಲಾಗುತ್ತಿರುವುದು ಆಶ್ಚರ್ಯ. ಅಧ್ಯಕ್ಷ ಐಸೆನ ಹೋವರರೊಡನೆಯಾಗಲೀ ಡಲ್ಲೇಸರ ಕೂಡೆಯೇ ಆಗಲೀ ಗುಲಾಂ ಮಹಮ್ಮದರು ಮಿಲಟರಿ ಒಪ್ಪಂದದ ಕುರಿತು ಚರ್ಚೆಯನ್ನೆ ನಡೆಸಿಲ್ಲವೆಂಬ ಪ್ರಕಟಣೆಗಳನ್ನು ಆಯಾ ಸರಕಾರೀ ವಕ್ತಾರರು ಹೊರಡಿಸುತ್ತಿರುವರು.

ಗಂಡಾಂತರದ ಭಯ

ಹೀಗಿದ್ದರೂ ನಾವಿದನ್ನು ನಂಬುವಂತಿಲ್ಲ. ಪಾಕಿಸ್ತಾನದ ಸುದ್ದಿಯಲ್ಲಿ ಕೈಹಾಕುವುದು ನಮಗೆ ಬೇಕಿಲ್ಲದಿದ್ದರೂ ಅದರ ಚಟುವಟಿಕೆಗಳನ್ನು ಗಮನಿಸದಿರುವುದು ಭಾರತಕ್ಕೆ ಚಂದವಲ್ಲ. ಏಕೆಂದರೆ ಪಾಕಿಸ್ತಾನದಲ್ಲಿ ಏನೇ ಆದರೂ ಅದರ ಬಿಸಿಯು ಭಾರತಕ್ಕೆ ತಗಲಿಯೇ ತೀರುತ್ತದೆ. ಆದರಲ್ಲೂ ಮಿಲಟರಿ ಒಪ್ಪಂದದಂಥ ಮಹತ್ವದ ಸಂಗತಿಯಲ್ಲಿ ಭಾರತವು ಎಷ್ಟು ಜಾಗರೂಕತೆಯಿಂದ ಘಟನೆಗಳನ್ನು ನಿರೀಕ್ಷಿಸುತಿದ್ದರೂ ಕಡಿಮೆಯೇ ಸೈ. ಇಂಥದೊಂದು ಒಪ್ಪಂದವಾದ ಪಕ್ಷದಲ್ಲಿ ಪಾಕಿಸ್ತಾನವು ಸೈನ್ಯ ಬಲವನ್ನು ಅಪರಿಮಿತವಾಗಿ ಹೆಚ್ಚಿಸಬಹುದು. ಈಗಾಗಲೇ ಎರಡೂವರೆ ಲಕ್ಷ ಸೈನಿಕರ ಪಡೆಯನ್ನು ಸಿದ್ಧಗೊಳಿಸಲು ಯೋಜನೆಗಳು ನಡೆದಿರುತ್ತವೆ. ಸೈನ್ಯ ಬಲವನ್ನು ಹೆಚ್ಚಿಸುವುದರ ಜೊತೆಗೆ ವಿದೇಶಗಳ ಸೈನ್ಯವು ಶಾಶ್ವತವಾಗಿ ಪಾಕಿಸ್ತಾನದ ಭೂ ಭಾಗದಲ್ಲಿ ನೆಲೆಯೂರುವಂತೆ ಈ ಒಪ್ಪಂದವು ಅವಕಾಶ ನೀಡುವುದು! ಅಮೇರಿಕಾದ ನೆಲ, ಜಲ ಹಾಗೂ ವಾಯು ದಳಗಳು ಪಾಕಿಸ್ತಾನದಲ್ಲಿ ಬೇರೂರುವುದರಿಂದ ಭಾರತದ ಸಂರಕ್ಷಣೆಯನ್ನು ಮಾಡಿಕೊಳ್ಳುವುದು ದೊಡ್ಡ ಜವಾಬ್ದಾರಿಯಾಗಿ ಪರಿಣಮಿಸುತ್ತದೆ. ಮಹಾರಾಷ್ಟ್ರಗಳಲ್ಲಿ ಯುದ್ಧ ಮುಂತಾದ ಜಾಗತಿಕ ಬೆಂಕಿ ಹತ್ತಿಕೊಂಡು ಉರಿಯ ತೊಡಗಿದಾಗ ಪಾಕಿಸ್ತಾನವೇ ರಣರಂಗವಾಗಿ ಪರಿಣಮಿಸಬಹುದು. ಆಗ ನೆರೆಯ ಭಾರತಕ್ಕೆ ಇದರ ಝಳ ಹತ್ತುವುದಿಲ್ಲೆಂದು ಹೇಳಲು ಸಾಧ್ಯವಿದೆಯೆ? ಅಮೇರಿಕನ್ ವರ್ತುಲಗಳ ಅಭಿಪ್ರಾಯದಂತೆ ರಶಿಯಾದ ಮೇಲೆ ಬಹಳ ಹತ್ತಿರದಿಂದ ಕಣ್ಣಿಡುವ ಹವಣಿಕೆಯಿಂದಲೇ ಪಾಕಿಸ್ತಾನದೊಡನೆ ಮಿಲಿಟರಿ ಒಪ್ಪಂದ ನಡೆಸಲು ಅಮೇರಿಕಾ ಆತುರಗೊಂಡಿದೆ ಪಶ್ಚಿಮ ಪಾಕಿಸ್ತಾನೀ ಪ್ರದೇಶದಿಂದ ಉರಾಲದ ದಕ್ಷಿಣ ಭಾಗದಲ್ಲಿರುವ ರಶಿಯಾದ ಔದ್ಯಮಿಕ ಕೇಂದ್ರಗಳ ಮೇಲೆ ಬಹಳ ಸುಲಭದಲ್ಲಿಯೇ ದಾಳಿಮಾಡಬಹುದು. ಅಲ್ಲದೆ ಯಾವಾಗಲೂ ಅಸಂತುಷ್ಟವಾಗಿರುವ ಮಧ್ಯ ಏಶಿಯಾದ ರಾಷ್ಟ್ರಗಳನ್ನು ಪಾಕಿಸ್ತಾ

In the Court of the Subordinate Judge, S. K.

A. S. 311/1953.

Between:-

M. Sheshappa ... ... Appellant.

and

Kochappa Rai & others ... Respondents.

Respondents:-

2) Santhappa Rai—S/o Talthamane Thimmappa Rai.

4) Kamala } Children of
5) Bhavani } Laxmi Hegsu.

7) Balakrishna S/o Muthamma.

8) Seetharama Rai—S/o Parameshwari.

Respondents 2—4—7—8 reside at "20" D. Mori Road, Mahim, Bombay, 5th Respondent reside in Pushpalaya Estate of Tannimani village, North Coorg.

Please take notice that the above appeal filed on the decision in R. E. A. 227/53 in R. E. P. 223/53 on the file of District Munsif of Puttur, stands posted to 24-11-53 for your appearance. In default you will be declared exparte and the appeal will be decided accordingly.

Sd/ K. S. Hegde,
Advocate.

Mangalore, 16—11—53.

ನದಲ್ಲಿರುವ ತನ್ನ ಸೈನ್ಯಬಲದಿಂದ ಅಮೇರಿಕಾ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. ಆಗತ್ಯದ ಪ್ರಸಂಗಗಳಲ್ಲಿ ಆಗ್ನೇಯ ಏಶಿಯಾಕ್ಕೂ ಪಾಕಿಸ್ತಾನೀ ಪ್ರದೇಶದಲ್ಲಿಟ್ಟ ಸೈನ್ಯವನ್ನು ಕಳುಹಿಸಿ ರಣರಂಗದ ಕಾರ್ಯಾಚರಣೆಯಲ್ಲಿ ಪ್ರವೃತ್ತವಾಗಬಹುದು.

ನೆಹರೂರ ಹೇಳಿಕೆ

ಅಮೇರಿಕಕ್ಕೆ ಪಾಕಿಸ್ತಾನವನ್ನು ಆಶ್ರಯಿಸದಿದ್ದರೆ, ತನ್ನ ಕುಹಕತನವನ್ನು ನಡೆಸುವುದು ಸಾಧ್ಯವೇ ಇಲ್ಲ. ಭಾರತವನ್ನು ತನ್ನ ವರ್ಚಸ್ಸಿನ ಮುಷ್ಟಿಯೊಳಗೆ ಬಿಗಿಯಾಗಿ ಹಿಡಿದುಕೊಳ್ಳುವ ಇಚ್ಛೆ ಅನಕ್ಕಿದ್ದರೂ ಭಾರತವು ನೈತಿಕ ತತ್ವಗಳಿಗೆ ಅನುಸಾರವಾಗಿ ತನ್ನ ಧೋರಣೆಯನ್ನು ಗೌರವಯುತ ರೀತಿಯಲ್ಲಿ ರೂಪಿಸುತ್ತಿರುವುದರಿಂದ ಮತ್ತು ಈ ನೈತಿಕ ತತ್ವಗಳಿಂದ ಪರಾವೃತ್ತವಾಗುವುದಕ್ಕೆ ಅದು ಸರ್ವಥಾ ಇಷ್ಟಪಡುವುದಿಲ್ಲವಾದುದರಿಂದ ಅಮೇರಿಕಾ ನಿರಾಸೆಗೊಂಡಿದೆ. ಆಗ್ನೇಯ ಮತ್ತು ಮಧ್ಯಪೂರ್ವ ಏಶಿಯಾದಲ್ಲಿ ಭಾರತದ ವಿಶಾಲ ಭೂಭಾಗದ ಸ್ಥಾನ ಮಹತ್ವವನ್ನದು ಚೆನ್ನಾಗಿ ತಿಳಿದಿದ್ದರೂ ತನ್ನ ಪ್ರಭಾವ ಮತ್ತು ದುರಾಗ್ರಹಗಳಿಗೆ ಭಾರತವು ಒಪ್ಪುವಂತಿಲ್ಲವೆಂಬುದನ್ನೂ ಅದು ಮನಗಂಡಿದೆ. ಎಂತಲೇ ಪಾಕಿಸ್ತಾನವನ್ನದು ಪುಸಲಾಯಿಸುತ್ತಿದೆ. ಹಿಂದೊಮ್ಮೆ ಮಧ್ಯಪೂರ್ವ ಏಶಿಯಾದ ರಾಷ್ಟ್ರಗಳೆಲ್ಲ ಒಟ್ಟಿಗೆ ಮಿಲಿಟರಿ ಒಪ್ಪಂದವೊಂದನ್ನು ಮಾಡಿಕೊಂಡು ಸಂಯುಕ್ತ ಸಂರಕ್ಷಣಾ ವ್ಯವಸ್ಥೆಯನ್ನು ಏರ್ಪಡಿಸುವ ಮಾತುಕತೆ ನಡೆದಿದ್ದರೂ ಈ ಜಿಪ್ತದ ಔದಾಸೀನ್ಯವೇ ಈ ವಿಚಾರವು ನಡೆಯದಂತೆ ಕಿಲ್ಲು ಹಾಕಿತು. ಯುರೋಪಿನ ಭೂಭಾಗಕ್ಕೆ ಸಮೀಪದ ತುರ್ಕಿಯೊಂದಿಗೆ ಅಮೇರಿಕಾ ಈಗಾಗಲೇ ಮಿಲಿಟರಿ ಒಪ್ಪಂದವನ್ನು ಮಾಡಿಕೊಂಡಿದೆ. ಆದರೆ ಅರಬ ದೇಶಗಳ ಮೇಲೆ ಭದ್ರ ಮುಷ್ಟಿಯ ಹಿಡಿತವುಳಿಯಬೇಕಾದರೆ ಅವುಗಳನ್ನು ಮಿಲಿಟರಿ ಒಪ್ಪಂದದ ಇಕ್ಕಳದಲ್ಲಿ ಸಿಕ್ಕಿಸುವುದೇ ಪ್ರಶಸ್ತವೆಂದು ಅಮೇರಿಕಕ್ಕೆ ತೋರಿದೆ. ಅತ್ತ ತುರ್ಕಿ. ಇತ್ತ ಪಾಕಿಸ್ತಾನಗಳು ಅಮೇರಿಕಾದ ಸೈನ್ಯ ಠಾಣ್ಯಗಳಾಗಿ ಪರಿವರ್ತನೆ ಹೊಂದಿದರೆ, ಅವುಗಳ ನಡುವಿನ ಎಣ್ಣೆ ಗನಿಯಿಂದ ಸಂಪತ್ಸಮೃದ್ಧವಾದ ಅರಬ ದೇಶಗಳು ಮುಸುಕಡಿ ಕುಳಿತುಕೊಳ್ಳಬೇಕಾಗುವುದು. ಅಮೇರಿಕಕ್ಕಾಗಲೀ ಪಾಕಿಸ್ತಾನಕ್ಕಾಗಲೀ ತಮಗೆ ಉಚಿತ ಕಂಡಂತೆ ಧೋರಣೆಗಳನ್ನು ರೂಪಿಸುವ, ಒಪ್ಪಂದ ಮಾಡಿಕೊಳ್ಳುವ ಹಕ್ಕುಗಳು ಇರುತ್ತವೆ, ನಿಜ. ನೆಹರೂರವರು ಹೇಳಿದಂತೆ "ಪಾಕಿಸ್ತಾನವು ತನ್ನ ನೆಲದ ಮೇಲೆ ವಿದೇಶೀ ಸೈನ್ಯವನ್ನು ಸಂಭ್ರಮದಿಂದ ಸ್ವಾಗತಿಸಬಹುದು. ತನ್ನ ಸ್ವಾತಂತ್ರ್ಯವನ್ನು ಅದು ಮಾರಿಕೊಳ್ಳಲೂ ಬಹುದು. ಇಂಥ ವಿಷಯಗಳಲ್ಲಿ ಭಾರತವು ಯಾವುದೇ ತರದ ಹಸ್ತಕ್ಷೇಪ ಮಾಡುವಂತಿಲ್ಲ. ಆದರೆ ಇದರ ಪರಿಣಾಮಗಳ ಕುರಿತಾಗಿಯೇ ನಾವು ಆಸ್ಥೆಯನ್ನು ವಹಿಸಬೇಕಾಗಿದೆ." ಸ್ಪಷ್ಟವಾಗಿ ಯಾವುದೇ ಸಂಗತಿ ಬಹಿರಂಗವಾಗಿಲ್ಲದಿದ್ದರೂ ತಿಳಿದ ಸಂಗತಿಗಳು ನಿಜವೆಂಬುದರಲ್ಲಿ ನಮಗೇನೂ ಸಂದೇಹ ಬೇಡ. ಇದು ಹೀಗೆಯೇ ಮುಂದುವರಿದರೆ, ದಕ್ಷಿಣ ಏಶಿಯಾ ಮತ್ತು ಅದಕ್ಕಿಂತಲೂ ಹೆಚ್ಚು ಭಾರತಕ್ಕೆ ಇದರ ಪರಿಣಾಮವು ಗಂಡಾಂತರವನ್ನುಂಟುಮಾಡುವುದು ಖಂಡಿತ. ನೆಹರೂರವರು ಪಾಕಿಸ್ತಾನದ ಈ ಚಟುವಟಿಕೆಯಿಂದ ವಿಸ್ಮಯಗೊಂಡಂತೆ ಕಾಣುತ್ತದೆ; ಮತ್ತು ಪಾಕಿಸ್ತಾನವಾಗಲೀ ಅಮೇರಿಕಾವಾಗಲೀ ಈ ವಿಷಯದಲ್ಲಿ ಅವರ ಎಚ್ಚರಿಕೆಯ ಮಾತಾವುದನ್ನೂ ಕಿವಿಯಲ್ಲಿ ಹಾಕಿಕೊಳ್ಳಲಿಕ್ಕಿಲ್ಲ.

ಇಬನ್ ಸೌದರ ನಿಧನ

ಮಧ್ಯಪೂರ್ವ ಏಶಿಯಾದಲ್ಲಿ ಒಳ್ಳೆಯ ಗೌರವದ ಸ್ಥಾನವನ್ನು ಪಡೆದಿದ್ದ ಸೌದಿ ಅರೇಬಿಯಾದ ಅಧಿಪತಿ ಇಬನ್ ಸೌದರು ಕಳೆದ ವಾರ ನಿಧನ ಹೊಂದಿದರು. ಈ ದೊರೆ ಸ್ವಂತ ಸಾಮರ್ಥ್ಯದಿಂದಲೇ ಹೊಸ ರಾಜ್ಯವನ್ನು ಕಟ್ಟಿಕೊಂಡದ್ದಲ್ಲದೆ, ಯಾರದೇ ಅಂಕೆಗೆ ಒಳಪಡದೆ ಸ್ವಾಭಿಮಾನವನ್ನು ರಕ್ಷಿಸಿಕೊಂಡು ಬಂದವನು. ಸೌದಿ ಅರೇಬಿಯಾದಲ್ಲಿ ರಶೀದ್ ವಂಶದ ಆಡಳಿತೆಯನ್ನು ಕೊನೆಗಾಣಿಸಿದವನು ಈತ. ಅದೇ ಕಾಲದಲ್ಲಿ ತುರ್ಕಿಯ ಒಟ್ಟೋಮಾನ ಸಾಮ್ರಾಜ್ಯ ಕುಸಿದು ಬಿದ್ದಾಗ, ತನ್ನ ಶೌರ್ಯದಿಂದ ಕತ್ತರಿಸಿದ ಪ್ರದೇಶಗಳನ್ನು ಸೌದಿ ಅರೇಬಿಯಾಕ್ಕೆ ಇಬನ್‌ಸೌದ ಸೇರಿಕೊಂಡನು. ಇಂಥ ಪ್ರಯತ್ನದಲ್ಲಿ ಬ್ರಿಟಿಷರೊಡನೆ ಕೈಗೆ ಕೈ ಹತ್ತುವಂತಾದಾಗ ಅವರನ್ನು ಒಪ್ಪಂದದಿಂದ ಇವನು ಒಲಿಸಿಕೊಂಡನು. ಅಂದಿನಿಂದ ಐವತ್ತು ವರ್ಷಗಳಿಗೂ ದೀರ್ಘವಾದ ಕಾಲ ಇವನು ಯಾರ ನಿಯಂತ್ರಣಕ್ಕೂ ಒಳಗಾಗದೆ ತನ್ನ ಪ್ರಜೆಗಳ ಹಿತರಕ್ಷಣೆಯಲ್ಲಿ ಉದ್ಯುಕ್ತನಾದನು. ಯುದ್ಧಕಾಲದಲ್ಲಿ ಕೂಡ ತಟಸ್ಥನಾಗಿದ್ದುಕೊಂಡು ವರ್ಚಸ್ಸು ಬೆಳೆಸಿಕೊಂಡ ವ್ಯಕ್ತಿತ್ವ ತೀರಿ ಹೋದ ಇಬನ್ ಸೌದ ದೊರೆಯ ಅಲಂಕಾರ. ಸೌದಿ ಅರೇಬಿಯಾದಲ್ಲಿಯೇ ಮುಸಲ್ಮಾನರ ಪ್ರಸಿದ್ಧ ಮಕ್ಕಾ ಕ್ಷೇತ್ರವಿದೆ. ಇಲ್ಲಿಗೆ ಬರುವ ಯಾತ್ರಿಕರು ಸುರಿಯುತಿದ್ದ ಹಣವೇ ಸೌದಿ ಅರೇಬಿಯಾದ ಮುಖ್ಯ ಆದಾಯವಾಗಿದ್ದ ಕಾಲವಿತ್ತು. ಆದರೆ ಇಲ್ಲಿ ಅತ್ಯಮೂಲ್ಯವಾದ ಖನಿಜ ಸಂಪತ್ತು, ಅಂದರೆ ಎಣ್ಣೆ, ಇರುವುದನ್ನು ಕಂಡುಹಿಡಿದ ಬಳಿಕ ಸೌದಿ ಅರೇಬಿಯಾದ ಆರ್ಥಿಕ ಸ್ಥಿತಿ ಬಹಳ ಸುಧಾರಿಸಿದೆ. ಜೊತೆಗೆ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಸ್ಥಾನಮಾನವೂ ಹೆಚ್ಚಿಕೊಂಡಿದೆ. ಈ ಸಂಪತ್ತು ಕೈಗೆ ಬಂದ ಬಳಿಕ ಇಬನ ಸೌದ ದೊರೆ ರೈಲು ಹಾಕುವುದು, ನೀರು ಪೂರೈಸುವುದು, ವಿದ್ಯುಚ್ಛಕ್ತಿ ಒದಗಿಸುವುದು, ಶಾಲೆ ತೆರೆಯುವುದು ಮುಂತಾದ ಲೋಕೋಪಯೋಗಿ ಕೆಲಸಗಳಲ್ಲಿ ಮನಸ್ಸು ಹಾಕಿದನು. ವೃದ್ಧಾಪ್ಯದಲ್ಲಿ ಈ ದೊರೆ ಮೊನ್ನೆ ತೀರಿಕೊಂಡ ಬಳಿಕ, ಅವನ ಹಿರೇ ಮಗನು ಅಧಿಕಾರಕ್ಕೆ ಬಂದಿರುವನು. ತಂದೆಯ ವ್ಯಕ್ತಿತ್ವದ ಪ್ರತಿಷ್ಠೆ ಇವನಲ್ಲಿಲ್ಲದಿದ್ದರೂ ಶಾಂತವಾದ ರೀತಿಯಲ್ಲಿ ಆಡಳಿತ ಸೂತ್ರವನ್ನು ನಿರ್ವಹಿಸುವನೆಂದು ಆಶಿಸಬಹುದು. ಮುಖ್ಯವಾಗಿ ಸೌದಿ ಅರೇಬಿಯಾದ ಸ್ವಾತಂತ್ರ್ಯವನ್ನು ದಕ್ಷತೆಯಿಂದ ಕಾಯ್ದುಕೊಳ್ಳುವುದು ಈ ಉತ್ತರಾಧಿಕಾರಿಯ ಕರ್ತವ್ಯ.

ಮುಸಾದಿಕರ ವಿಚಾರಣೆ

ಮಧ್ಯೆವಿ ಮುಸಾದಿಕರು ದಂಡಿನ ನ್ಯಾಯಾಲಯದ ಮುಂದೆ ಕೊಟ್ಟ ಹೇಳಿಕೆಗಳೆಲ್ಲ ಅರಣ್ಯ ರೋದನವಾಗಿ ಪರಿಣಮಿಸಿವೆ. ಅವರು ಕೋರ್ಟಿನಲ್ಲಿ ವರ್ತಿಸುವಾಗ ಬಹಳ ವಿಕಾರಗೊಂಡವರಂತೆ ತೋರಿದರು. ಆ ಮಟ್ಟಿಗೆ ಅವರ ಅಧಿಕಾರ ಕಾಲದಲ್ಲಿ ಸೈನ್ಯಗಳ ಮುಖ್ಯಸ್ಥರಾಗಿದ್ದ ಬ್ರಿಗೇಡಿಯರ್ ರಿಯಾಹಿಯವರು ತುಸುವಾದರೂ ಶಾಂತ ರೀತಿಯಿಂದ ನಡೆದುಕೊಂಡರು. ಮುಸಾದಿಕರು ಶಹಾರಿಗೆ ನನ್ನ ಸರಕಾರವನ್ನು ತಳ್ಳಿ ಹಾಕುವ ಅಧಿಕಾರವೇ ಇಲ್ಲ. ದಂಡಿನ ನ್ಯಾಯಾಲಯಕ್ಕೆ ನನ್ನನ್ನು ವಿಚಾರಿಸುವ ಅಧಿಕಾರವಿಲ್ಲ" ಎಂದು ಮುಂತಾಗಿ ವಾದಿಸಿದರು. ಅವರ ಹೇಳಿಕೆಯನ್ನು ಕೇಳಿಕೊಂಡ ದಂಡಿನ ನ್ಯಾಯಾಲಯವು ತನಗೇ ವಿಚಾರಣೆ ನಡೆಸಲು ಅಧಿಕಾರವಿದೆಯೋ ಹೇಗೆಂಬ ಕಾನೂನಿನ ಅಂಶವನ್ನು ತೀರ್ಮಾನಿಸಬೇಕಾಗಿತ್ತು. ಇರಾಣದ ಕಾಯಿದೆಯಂತೆ ಮಜಲೀಸದ ಒಪ್ಪಿಗೆ ಪಡೆದ ವರಿಷ್ಠ ನ್ಯಾಯಾಲಯಕ್ಕೆ ಮಾತ್ರ ಪ್ರಧಾನ ಮಂತ್ರಿಯ ವಿಚಾರಣೆ ನಡೆಸಲು ಅಧಿಕಾರವುಂಟು. ಮುಸಾದಿಕರನ್ನು ದಂಡಿನ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಿರುವುದು ಈ ದೃಷ್ಟಿಯಿಂದ ತಪ್ಪಾಗಿ ತೋರುತ್ತದೆ. ಆದರೆ ಸರಕಾರೀ ವಕೀಲರು ಶಹಾರ ಆಜ್ಞೆ ಮೀರಿದವರೆಂಬುದಕ್ಕಿಂತಲೂ ಕ್ರಿಮಿನಲ್ ಅಪರಾಧವನ್ನು ಮಾಡಿದವರೆಂದು ಮುಸಾದಿಕರ ಮೇಲೆ ಆರೋಪ ಹೊರಿಸಿರುವರು. ದಂಡಿನ ನ್ಯಾಯಾಲಯವು ಈ ವಾದವನ್ನು ಎತ್ತಿಹಿಡಿದು ಮುಸಾದಿಕರನ್ನು ರಹಾರು ಪ್ರಧಾನಿ ಪಟ್ಟದಿಂದ ಕಿತ್ತೊಗೆದುದು ನ್ಯಾಯವಿದ್ದರೂ ರಾಜಕೀಯ ತಪ್ಪಿಗಾಗಿ — ಕ್ರಿಮಿನಲ್ ಅಪರಾಧಕ್ಕೋಸ್ಕರ ಅವರ ವಿಚಾರಣೆ ನಡೆಯುತ್ತಿದೆಯೆಂದೂ ತನ್ನ ಅಧಿಕಾರವನ್ನು ಸಮರ್ಥಿಸಿದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ನಂಬ್ರ 229/53.

ವಾದಿ ಶ್ರೀ M. N. ಚಲುಟಾ-ರಿಸೀವರ್.

ಪ್ರತಿವಾದಿರು. 1. ಮಹಾಲಿಂಗ ಮಣಿಯಾಣಿ 2. ಕುಂಞಕಂಣ ಮಣಿಯಾಣಿ, ಯೇಣಿಯರವ್ಪು ಟಿಳ್ಳ ಮಣಿಯಾಣಿ ಅಳಿಯಂದಿರು- ಕಾಸರಗೋಡು ತಾಲ್ಲೂಕು ಅದೂರು ಗ್ರಾಮದ ಮುಂಚಿ ಪವವು ಎಂಬಲ್ಲಿರುವವರು- ಸದ್ರಿ ಪ್ರತಿವಾದಿರಿಗೆ—

ಪ್ರತಿವಾದಿರು ಹಾಲಿ ಮೃತಪಟ್ಟ ಸರ್ತಕೋಡಿ ಚನ್ನಪ್ಪನವರಿಗೆ ಕಳೆದ ತಾರೀಕು 9-8-1950 ರಲ್ಲು ರೂಪಾಯಿ 175ಕ್ಕೆ ಬರೆ ಕೊಟ್ಟ ದಿಮಾಂಡ್ ನೋಟಿನ ಅಸ್ಲು ಬಡ್ಡಿ ವಸೂಲಿಯ ಬಗ್ಗೆ ದ. ಕ. ಸಬ್ ಕೋರ್ಟು ಕ್ರಮ ನಂಬ್ರ 336/1951ರಲ್ಲಿ ರಿಸೀವರನಾಗಿ ನೇಮಿಸಲ್ಪಟ್ಟ ವಾದಿಯು ಪ್ರತಿವಾದಿರ ಮೇಲೆ ಸದ್ರಿ ನೋಟಿನ ಅಸ್ಲು ಬಡ್ಡಿ ರುಪಾಯಿ 103—14—0ರ ವಸೂಲಿಗೆ ಮೇಲಿನ ದಾವೆ ಹಾಡಿರುವದ್ರಿಂದ ಸದ್ರಿ ದಾವೆಯಲ್ಲಿ ಪ್ರತಿವಾದಿರು ಉಪಸ್ಥಿತರಿರುವಂತೆ ಬರುವ ತಾರೀಕು 15-11-53ನೇ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ಉಪಸ್ಥಿತರಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷ ವಿಚಾರಣೆಯಿಂದ ದಾವೆ ಮುಕ್ತಾಯಗೊಳಿಸಲ್ಪಡುವದೆಂದು ಕೋರ್ಟು ಹುಕ್ಕುಂ ಪ್ರಕಾರ ಈ ಪ್ರಕಟಣೆ ಪ್ರಕಟಿಸಲಾಗಿದೆ.

H. Sanjiva Shetty
Advocate for Plaintiff

ಪುತ್ತೂರು, ತಾ. 16—11—1953.

ಉಡುಪಿ

ಡಿ| ಮುನ್ಸಿಫರಿಗೆ ವಿದಾಯ ಸತ್ಕಾರಗಳು — ಉಡುಪಿಯ ಡಿ| ಮುನ್ಸಿಫ್ ಜನಾಬ್ ಅಬ್ದುರ್ ರಹೀಂ ಅನ್ಸಾರ್ ಅವರಿಗೆ ಕಣ್ಣಾನೂರಿಗೆ ವರ್ಗವಾದುದರಿಂದ ಅವರಿಗೆ ತಾ. 14ರಲ್ಲು ಬಾರ್ ಎಸೋಸಿಯೇಶನಿನವರು ಚಹಾ ಸತ್ಕಾರವಿತ್ತು ಗೌರವಿಸಿದರು. ತಾ. 15ರಲ್ಲು ಆಫೀಸರ್ಸ್ ಕ್ಲಬ್ಬಿನವರು ಸಂಜೆ ಉಪಾಹಾರ ಮತ್ತು ರಾತ್ರಿಯಲ್ಲಿ ದಿನ್ನರ್ ಪಾರ್ಟಿಯನ್ನಿತ್ತರು. ಶ್ರೀ ಕೆ. ಕೃಷ್ಣಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಜಿ. ಸಿ. ರೇಗೊ, ಶೇಕ್ ಉಮ್ಮರ್, ರಾಜನ್, ಎಮ್. ಡಿ. ಕಾಮತ್, ನಾಗಪ್ಪ ಕೆಮ್ತೂರು, ಮೋಹನ ಶೆಟ್ಟಿ, ಪಿ. ವಿ. ಆಚಾರ್ ಮೊದಲಾದವರು ಮುಖ್ಯ ಅತಿಥಿಯ ಗುಣಗಾನ ಮಾಡಿದರು. ಶ್ರೀ ಬಿ. ವಿಶ್ವನಾಥಶೈಗಳು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಸ್ಪೋರ್ಟ್ಸ್ ಕ್ಲಬ್ಬಿನಲ್ಲಿ ತಾ. 15 ರಲ್ಲು ಬೆಳಿಗ್ಗೆ ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಕ್ಲಬ್ಬಿನವರು ಡಿ| ಮುನ್ಸಿಫರಿಗೆ ಉಪಾಹಾರವಿತ್ತು ಗೌರವಿಸಿದರು. ಶ್ರೀಗಳಾದ ಪಿ. ವಿ. ಆಚಾರ್, ಟಿ. ಎ. ಪೈ, ಎನ್. ವೆಂಕಟಗಿರಿ ರಾವ್, ಮುದ್ದಣ್ಣ ಸೆಟ್ಟರು, ಕ್ಲಬ್ಬಿನ ಕೆಪ್ಟನ್‌ರಾಗಿದ್ದುಕೊಂಡು ಮಾನ್ಯ ಅತಿಥಿಯು ಸಲ್ಲಿಸಿದ ಸೇವೆಗಳನ್ನೆತ್ತಿ ಮಾತನಾಡಿದರು. ಶ್ರೀ ಬಿ. ಪಿ. ಪೈ, ಕಾರ್ಯದರ್ಶಿ ವಂದಿಸಿದರು.

ಸಹಕಾರಿ ಯೂನಿಯನ್ ಮಹಾಸಭೆಯು ಇದೇ ತಾ 10ರಲ್ಲು ಯೂನಿಯನ್ ಅಧ್ಯಕ್ಷ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಪಿ. ವಿ. ಆಚಾರ್ಯರು ಗತವರ್ಷದ ವರದಿ ವಾಚನ ಮಾಡಿದರು. ದ. ಕ. ಜಿಲ್ಲಾ ಕೋಆಪರೇಟಿವ್ ಸೆಂಟ್ರಲ್ ಬೇಂಕಿನ ಡೈರೆಕ್ಟರ ಮಂಡಳಿಗೆ ಈ ಯೂನಿಯನ್ ಪ್ರತಿನಿಧಿಯಾಗಿ ಶ್ರೀ ಕೆ. ಜೆ. ಬಲ್ಲಾಳರು ಸರ್ವಾನುಮತದಿಂದ ಆರಿಸಲ್ಪಟ್ಟರು.

ಎಯಿಡೆಡ್ ಶಾಲಾ ಮೆನೇಜರರ ಸಂಘದ ಮಹಾ ಸಭೆಯು— ಇದೇ ತಾ 16ರಲ್ಲು ಬೋರ್ಡ್ ಹಾ| ಎ| ಶಾಲೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ಪ್ರಾಥಮಿಕ ವಿದ್ಯಾ ಯೋಜನೆ ಕುರಿತು ವಿಚಾರ ವಿನಿಮಯ ನಡೆಯಿತು. ತಜ್ಞರ ಸಮಿತಿ ವರದಿ ಪ್ರಕಟವಾದ ನಂತರ ಈ ಸಂಘದ ಅಭಿಪ್ರಾಯಗಳನ್ನು ಕೊಡಬಹುದೆಂದಾಯಿತು. ಶ್ರೀ ಕೆ. ಗಣಪಯ್ಯ ಸೆಟ್ಟರು ಸಭಾ ಕಾರ್ಯಕಲಾಪಗಳಲ್ಲಿ ಹುರುಪಿನಿಂದ ಭಾಗವಹಿಸಿದ್ದರು.

ಮುನ್ಸಿಪಲ್ ಕೌನ್ಸಿಲು ಸಭೆಯು— ತಾ 11ರಲ್ಲು ಚೇರ್ಮನ್ ಶ್ರೀ ಯು. ಎಸ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಧಾನಿ ನೆಹರೂರವರಿಗೆ ಅವರ ಜನ್ಮ ದಿನದ ಶ್ರೇಯ ಪ್ರಾರ್ಥನೆಯಾಯಿತು. ಅಜ್ಜರಕಾಡು ವಾರ್ಡಿನ ಟೌನ್ ಪ್ಲಾನಿಂಗ್ ಕಾರ್ಯವನ್ನು ಮುಂದಿನ ಮಾರ್ಚ ತಿಂಗಳಲ್ಲಿ ಪರಿಶೀಲಿಸಲು ಬಾಕಿಯುಳಿಯಿತು. ಶಾಲೆಗಳಿಗೆಲ್ಲಾ ಗೋಡೆ ಗಡಿಯಾರವನ್ನು ಒದಗಿಸಬೇಕೆಂದಾಯಿತು.

ಧ್ವಜ ದಿನಾಚರಣೆ— ಡಿಸಂಬರ ತಿಂಗಳ ತಾ. 7ರಂದು ಧ್ವಜ ದಿನಾಚರಣೆ ನಡೆಸಬೇಕಾಗಿ ಉಡುಪಿ ತಾಲೂಕು ಸೋಲ್ಜರ್ಸ್ ಕಮಿಟಿಯ ಸಭೆಯಲ್ಲಿ ತೀರ್ಮಾನವಾಗಿದೆ.

ಶ್ರೀ ಮುಕಾಂಬಿಕಾ ಭಜನ ಮಂದಿರ— ಉಡುಪಿ ಪೋಲೀಸ್ ಲೈನಿನಲ್ಲಿ ಪೋಲೀಸ್ ಬಂಧುಗಳು ಸ್ಥಾಪಿಸಿದ ಶ್ರೀ ಶ್ರೀ ಮೂಕಾಂಬಿಕಾ ಭಜನ ಮಂದಿರದ ರಂಗು ಸ್ಥಾಪನೆಯನ್ನು ತಾ 12ರಲ್ಲಿ ಸುಮುಹೂರ್ತದ ಸರ್ಕಲ್ ಇನ್. ವೆಂಕಟೇಶ ನಾಯ್ಕರು ನೆರವೇರಿಸಿದರು.

ಸಾರ್ವಜನಿಕ ಸಭೆ— ಸ್ಥಳೀಯ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಇದೇ ತಾ. 18ರಲ್ಲು ಸಂಜೆ ಶ್ರೀ ಕೆ. ದಾಸ ಸೇರಿಗಾರರ ಅಧ್ಯಕ್ಷತೆಯಲ್ಲಿ ಸೇರುವ ಸಾರ್ವಜನಿಕ ಸಭೆಯಲ್ಲಿ ಶ್ರೀ ಎ. ಕೆ. ಕೆಲ್ಲಪ್ಪನ್, ಎಮ್. ಪಿ. ಯವರು ಇಂದಿನ ರಾಜಕೀಯ ಪರಿಸ್ಥಿತಿ ಕುರಿತು ಭಾಷಣವಿತ್ತರು.

ಮಂಗಳೂರು

ಮಂಗಳೂರಲ್ಲಿ ರಾಜಾಜಿಯವರ ಕಾರ್ಯಕ್ರಮ—ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ರಾಜಾಜಿಯವರು ಇದೇ ತಾ 22 ರಲ್ಲು ಸಂಜೆ ಮಂಗಳೂರಿಗೆ ಬರುವರು. ಅಂದು ಸಂಜೆ ಕೇಂದ್ರ ಮೈದಾನಿನಲ್ಲಿ ಸಾರ್ವಜನಿಕ ಭಾಷಣ ಮಾಡುವರು. ಮರುದಿನ ಬೆಳಗ್ಗೆ 7. 40ಕ್ಕೆ ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಭಾಷಣ. ಬಳಿಕ ನಗರ ಸಭೆಯ ಭಿನ್ನವತ್ತಳೆ, ಹೆಂಗಸರಿಗೆ ಉಪನ್ಯಾಸ, ವಣಿಜ ಸಂಘಕ್ಕೆ ಭೇಟಿ, ಕಾಂಗ್ರೆಸ್ ಕಾರ್ಯಕರ್ತರಿಗೆ ಹಿತ ವಚನ—ಇತ್ಯಾದಿ ಕಾರ್ಯಕ್ರಮ ಮುಗಿಸಿಕೊಂಡು ಅದೇ ದಿನ ಸಂಜೆ ಬೆಂಗಳೂರಿಗೆ ಹೋಗುವರು.

ಹುಜೂರ್ ಟ್ರೆಜರಿ ಪ್ರಕರಣ—ಮಂಗಳೂರ್ ಹುಜೂರ್ ಖಜಾನೆಯಿಂದ ರೂಪಾಯಿ ಮೂರು ಲಕ್ಷ ಮೋಸ ಮಾಡಿದ ಪ್ರಕರಣದಲ್ಲಿ ಪೋಲೀಸರು ಶ್ರೀ ಡೇವಿಡ್ ರೋಬರ್ಟ್ಸ್, ಶ್ರೀಮತಿ ಶಾಂತಿ ರೋಬರ್ಟ್ಸ್, ಅನ್ವರ್ ಹುಸೇನ್, ಶ್ರೀಗಳಾದ ವಿಕ್ಟರ್ ಸಾಲ್ದಾನ, ಜಿ. ಎಚ್. ಮುತ್ತು, ಬೆನಿದಿಕ್ಟ್ ಪೆರಿ, ಆರ್. ಡಿ. ಜತ್ತನ್ನ, ಸುಂದರ ಸೋನ್ಸ್, ಎಮ್. ಎನ್. ಧರ್ಮನ್, ಇಮಾನ್ವೆಲ್ ಸಾಲಿನ್ಸ್, ಮಹಮ್ಮದ್ ಹಾರೂನ್ ಮೊದಲಾದವರ ಮೇಲೆ ಇದೇ ತಾ 11ರಲ್ಲು ಆರೋಪದ "ಚಾರ್ಜಶೀಟು" ಹಾಕಿದ್ದಾರೆ. ಈ ಪ್ರಕರಣದ ಆರೋಪಿಗಳಲ್ಲ ಒಬ್ಬರಾದ ಶ್ರೀ ಇಮಾನ್ವೆಲ್ ಸಾಲಿನ್ಸರನ್ನು ಕೊಚ್ಚಿ ಬಂದರದಲ್ಲಿ ಬಂಧಿಸಿ ಮಂಗಳೂರಿಗೆ ತಂದಿರುತ್ತಾರೆ. ಅವರನ್ನು ಜಾಮೀನು ಮೇಲೆ ಬಿಡಲಾಗಿದೆ.

ರಾಜಕೀಯ ಸಂತ್ರಸ್ತರಿಗೆ ಸರಕಾರದಿಂದ—ದೊರೆತಿರುವ ಭೂಮಿಯನ್ನು ಹತ್ತು ವರ್ಷಗಳ ತನಕ ಪರಾಧೀನ ಮಾಡಬಾರದೆಂದು ಆಜ್ಞೆಯಿದ್ದರೂ ಅಂಥಾ ಭೂಮಿಯನ್ನು ಭೂಧಾನಕ್ಕೆ ಕೊಡುವುದಾದರೆ ಮದ್ರಾಸು ಸರಕಾರದವರು ಭೂಮಿಯನ್ನು ನಿರಾತಂಕವಾಗಿ ದಾನ ಮಾಡಲು ಈಗಲೇ ಅನುಮತಿ ಕೊಟ್ಟಿರುತ್ತಾರೆಂದೂ ಆದಕಾರಣ ಭೂಧಾನ ಕೊಡಲಪೇಕ್ಷಿಸುವವರು ಬೇಗನೇ ತಿಳಿಸಬೇಕೆಂದೂ ದ. ಕ. ಜಿಲ್ಲಾ ಭೂಧಾನ ಸಮಿತಿಯವರು ಜಿಲ್ಲಾ ರಾಜಕೀಯ ಸಂತ್ರಸ್ತರಿಗೂ ತಿಳಿಸುತ್ತಾರೆ.

ದ. ಕ. ಜಿಲ್ಲೆಯಲ್ಲಿ ಎಂಡೋಮೆಂಟ್ಸ್ ಮಂತ್ರಿಗಳ ಕಾರ್ಯಕ್ರಮ—ರಿಲೀಜಿಯಸ್ ಎಂಡೋಮೆಂಟ್ಸ್ ಮತ್ತು ರಿಜಿಸ್ಟ್ರೇಶನ್ ಇಲಾಖೆಯ ಮಾನ್ಯ ಮಂತ್ರಿಗಳಾದ ಶ್ರೀ ಕೆ. ವೆಂಕಟಸ್ವಾಮಿ ನಾಯುಡು. ಅವರು ಇದೇ ತಾ 25ನೆ ಬುಧವಾರ ಮಧ್ಯಾಹ್ನ ಮಂಗಳೂರಿಗೆ ಬಂದು ಅಂದೇ ಸಾಯಂಕಾಲ 4 ಗಂಟೆಗೆ ಉಡುಪಿಗೆ ಬರುವರು. 4-15ಕ್ಕೆ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜುಗಳಿಗೆ ಭೇಟಿ. 5-30 ಶ್ರೀ ಕೃಷ್ಣ ಮಠ ಸಂದರ್ಶನ. ಸಂಜೆ 6-30ಕ್ಕೆ ಸಾರ್ವಜನಿಕ ಸಭೆಯಲ್ಲಿ ಭಾಷಣ. ಮರುದಿನ ತಾ 26ರಲ್ಲು ಬೆಳಗ್ಗೆ 7 ಗಂಟೆಗೆ ಉಡುಪಿಯಿಂದ ಹೊರಟು ಶ್ರೀ ಪಾಜಕ ಕ್ಷೇತ್ರ, ಎಲ್ಲೂರು, ಕಟೀಲು. ಕಾರ್ಕಳ ದೇವಸ್ಥಾನಗಳನ್ನು ಸಂದರ್ಶಿಸಿ ಮಧ್ಯಾಹ್ನ 12 ತಾಸಿಗೆ ಮಂಗಳೂರಿಗೆ ಪುನರಾಗಮನ. ಸಂಜೆ 4 ತಾಸಿಗೆ ಅನಾಥಾಲಯ ಉದ್ಘಾಟನೆ ಮತ್ತು ಮಂಗಳೂರು ದೇವಸ್ಥಾನಗಳ ಸಂದರ್ಶನ. ತಾ 27ರಲ್ಲು ಬೆಳಗ್ಗೆ ಮದ್ರಾಸಿಗೆ ಪ್ರಯಾಣ.

ಹಿಂದ್ ಕಿಸಾನ್ ಪಂಚಾಯತ—ಇದೇ ತಾ 22 ಮತ್ತು 23ರಲ್ಲು ಮಂಗಳೂರಲ್ಲಿ ಮೊಕ್ಕಾಂ ಮಾಡಲಿರುವ ಮದ್ರಾಸಿನ ಮುಖ್ಯಮಂತ್ರಿ ಮಾನ್ಯ ಸಿ. ರಾಜಗೋಪಾಲಾಚಾರ್ಯರಿಗೆ ದಕ್ಷಿಣಕನ್ನಡ ಜಿಲ್ಲೆಯ ಚಾಲಗೇಣಿ ರೈತರ ಪರವಾಗಿ ಒಕ್ಕಲು ಹಿತ ಮಸೂದೆಯನ್ನು ಕೂಡಲೇ ಜ್ಯಾರಿಗೆ ತರಬೇಕೆಂದು ವಿನಂತಿಸುವ ಮನವಿ ಅರ್ಪಿಸಲಾಗುವುದು. ಆದುದರಿಂದ ತಾ 23ನೆ ಸೋಮವಾರ ಕಾರ್ನಾಡ ಸದಾಶಿವ ರಾವ್ ರಸ್ತೆಯಲ್ಲಿರುವ ಪ್ರಜಾ ಸೋಶಲಿಸ್ಟ್ ಪಾರ್ಟಿ ಆಫೀಸಿನಿಂದ ಜಿಲ್ಲೆಯ ಎಲ್ಲಾ ಕಡೆಗಳಿಂದಲೂ ಬರುವ ರೈತರು ಒಟ್ಟಾಗಿ ಸೇರಿ ಜಾಥಾ ಮೂಲಕ ಮಾನ್ಯ ರಾಜಾಜಿಯವರನ್ನು ನೋಡಿ ಮನವಿ ಒಪ್ಪಿಸಬೇಕಾಗಿದೆ. ಜಿಲ್ಲೆಯ ರೈತ ಬಂಧುಗಳೆಲ್ಲರೂ ಆ ದಿನ ಬಂದು ಅಂದಿನ ಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ಹಿಂದ್ ಕಿಸಾನ್ ಪಂಚಾಯತ್ ಕಡೆಯಿಂದ ಡಾ| ಸಂಜೀವನಾಥರ ವಿನಂತಿಯಿದೆ.

ಭಾಷಣ—ಬೆಂಗಳೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಯತೀಶ್ವರಾನಂದಜೀಯವರು ತಾ 17ರಲ್ಲು ಸಂಜೆ ಶ್ರೀ ರಾಮಕೃಷ್ಣಾಶ್ರಮದಲ್ಲಿ 'ಆತ್ಮ ಸಮ್ಮಿಲನ' ಎಂಬ ಕುರಿತು ವಿಚಾರ ಪ್ರಚೋದಕ ಉಪನ್ಯಾಸವಿತ್ತರು. ಶ್ರೀ ಆದಿದೇವಾನಂದರು ವಂದನೆಗಳನ್ನು ಅರ್ಪಿಸಿದರು.

ನಿಡ್ಡೋಡಿ—ಸ್ಥಳೀಯ ಶ್ರೀ ಸತ್ಯನಾರಾಯಣ ಸಾ| ಎ| ಶಾಲಾ ಆಡಳಿತದಾರರಾಗಿದ್ದ ದಿ| ನಿಡ್ಡೋಡಿ ಭಾವ ನಾರಾಯಣ ಸೆಟ್ಟರ ಸ್ಮಾರಕ ದಿನಾಚರಣೆ ಮತ್ತು ನಿಡ್ಡೋಡಿ ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿಯ ವರ್ಧಂತಿಯು ಇದೇ ತಾ 11ರಲ್ಲು ಡಾ| ಟಿ. ಎಸ್. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. "ರಾಜಸೂಯಾಧ್ವರ" ಎಂಬ ಯಕ್ಷಗಾನ ಕಾಲಕ್ಷೇಪವು ಯಶಸ್ವಿಯಾಗಿ ಜರಗಿತು.

ಮೂಲ್ಕಿ—ಮೂಲ್ಕಿ ಸಹಕಾರಿ ಹಾಲು ಸರಬರಾಯಿ ಸಂಘದ ಉದ್ಘಾಟನೆಯನ್ನು ಇದೇ ತಾ 1ರಲ್ಲು ಸ್ಥಳೀಯ ಸರಕಾರೀ ಹೈಸ್ಕೂಲಿನ ಹೆಡ್ಮಾಸ್ಟರ್ ಶ್ರೀ ಕೆ. ವಿಠಲ ಶೆಣೈಯವರು ನೆರವೇರಿಸಿದರು. ಡಾ| ರಾಯಪ್ಪ ಕಾಮತ್, ಶ್ರೀಗಳಾದ ಬಿ. ಭೋಜರಾವ್, ಎಮ್. ಆರ್ ಪೂಂಜ, ಕೆ. ಕೇಶವ ಕಿಣಿ, ಎ. ಪಿ. ಪೂವಯ್ಯ ಮೊದಲಾದವರು ಮಾತನಾಡಿದರು. ಶ್ರೀ ಎನ್. ಟಿ. ಸುವರ್ಣನವರು ಧನ್ಯವಾದಗಳನ್ನರ್ಪಿಸಿದರು.

ಕುಂದಾಪುರ—ಸ್ಥಳೀಯ ಮೇಜರ್ ಪಂಚಾಯತ ಬೋರ್ಡಿಗೆ ಸೇರಿದ ವಡೇರ ಹೋಬಳಿ ಗ್ರಾಮದ 'ವಡೇರ ಹೋಬಳಿ—ಕೋಗಿ' ಹೊಸ ರಸ್ತೆಯ ಕೆಲಸದ ಪ್ರಾರಂಭೋತ್ಸವವು ಇದೇ ತಾ 8ರಲ್ಲು ಬೋರ್ಡಿನ ಉಪಾಧ್ಯಕ್ಷ ಶ್ರೀ ಎನ್. ಎಸ್. ಪರಮೇಶ್ವರಯ್ಯನವರಿಂದ ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಬೋರ್ಡಿನ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಜಗನ್ನಾಥ ಶೆಟ್ಟಿ ಮತ್ತಿತರ ಊರ ಮಹಿನೀಯರು ಆಗಮಿಸಿದ್ದರು. ರಸ್ತೆ ಹಾದು ಹೋಗುವ ಸ್ಥಳವನ್ನು ಸ್ಥಳವಂದಿಗರು ಪಂಚಾಯತ ಬೋರ್ಡಿಗೆ ಉದಾರ ಬುದ್ಧಿಯಿಂದ ಬಿಟ್ಟುಕೊಡಲು ಸಮ್ಮತಿಯನ್ನಿತ್ತಿರುವರು. ರಸ್ತೆ ನಿರ್ಮಾಣ ಕೆಲಸವನ್ನು ಶೀಘ್ರ ಮಾಡಿಸುವುದಾಗಿ ಬೋರ್ಡಿನ ಆಶ್ವಾಸನೆ ಕೂಡಾ ದೊರೆತಿರುವುದು.

ಹೊಸಪೇಟೆ—ತಾ 3-12-53ನೆ ಗುರುವಾರ ದಿನ ಇತಿಹಾಸ ಪ್ರಸಿದ್ಧ ಕರ್ನಾಟಕದ ಗಂಡು ಮೆಟ್ಟಿನ್ನಾಡ ಹಂಪೆಯ ಕನ್ನಡ ರಾಜ್ಯ ರಕ್ಷಾಮಣಿ ಶ್ರೀ ವಿರೂಪಾಕ್ಷ ಸ್ವಾಮಿಯ ಸನ್ನಿಧಿಯಲ್ಲಿ ಅಖಂಡ ಕರ್ನಾಟಕದ ರಾಜ್ಯ ನಿರ್ಮಾಣದ ಪರಿಷತ್ತಿನ ದ್ವಿತೀಯ ಮಹಾಧಿವೇಶನವು ಜರಗಲಿರುವುದು. ಪರಿಷತ್ತಿಗೆ ಸಲಹೆ ಸೂಚನೆಗಳನ್ನಾಗಲೀ, ಪತ್ರವ್ಯವಹಾರವನ್ನಾಗಲೀ ಧನ ಸಹಾಯವನ್ನಾಗಲೀ ಮಾಡುವವರು 'ಕಾರ್ಯದರ್ಶಿ, ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಸ್ವಾಗತ, ಕಚೇರಿ, ಆಗಳಿ ಕಂಪೌಂಡು, ಹೊಸಪೇಟೆ'ಗೆ ಕಳುಹಿಸಬಹುದು.

ಉಡುಪಿ ಮೆಡಿಕಲ್ ಕಾಲೇಜು ಸ್ಥಾಪಕರಿಗೆ ಮದ್ರಾಸಿನಲ್ಲಿ ಸತ್ಕಾರ.

ಮದ್ರಾಸಿನ ವರಹುವಾಕಂ ನಿಲಯದಲ್ಲಿ ಶ್ರೀ ಕೆ. ಸೀತಾರಾಮರಾಯರು ತಾ 11ರಲ್ಲಿ ಉಡುಪಿ ಮೆಡಿಕಲ್ ಕಾಲೇಜಿನ ಜನ್ಮದಾತರನ್ನು ಗೌರವಿಸಲು ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಡಾ. ಟಿ. ಎಮ್. ಎ. ಪೈಗಳನ್ನು ಪ್ರಶಂಶಿಸಿ ಹಲವರು ಮಾತನಾಡಿದರು. ಆರ್ಥಿಕ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ, ಡಾ. ಯು. ಕೃಷ್ಣರಾವ್, ಮಜೂರ ಮಂತ್ರಿ, ಎಂಡೋಮೆಂಟ್ಸ್ ಮಂತ್ರಿ ಶ್ರೀ. ಕೆ. ವೆಂಕಟಸ್ವಾಮಿ ನಾಯುಡು, ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ, ನ್ಯಾಯಮೂರ್ತಿ ಶ್ರೀ ಪಿ. ಚಂದ್ರ ರೆಡ್ಡಿ, ಡಾ. ಆರ್. ಎಮ್. ಅಲಗಪ್ಪ ಚೆಟ್ಟಿಯಾರ್ ಮೊದಲಾದ ಪ್ರಮುಖರು ಉಪಸ್ಥಿತರಿದ್ದರು.

ಉಪಾಹಾರವಾದ ಬಳಿಕ ಶ್ರೀ ಕೆ. ಸೀತಾರಾಮರಾಯರು ಮಾನ್ಯ ಅತಿಥಿ ಡಾ. ಪೈಗಳನ್ನೂ ಇತರ ಆಮಂತ್ರಿತರನ್ನೂ ಸ್ವಾಗತಿಸಿ ಡಾ. ಪೈಗಳು ವಿದ್ಯೆ ಮತ್ತು ಸಮಾಜ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗಳನ್ನೆತ್ತಿ ಮಾತನಾಡಿದರು. ಸರಕಾರಕ್ಕೇನೇ ಕಷ್ಟಸಾಧ್ಯವಾದ ಮೆಡಿಕಲ್ ಕಾಲೇಜು ಸ್ಥಾಪನಾ ಕೆಲಸವನ್ನು ಡಾ. ಪೈಗಳು ಉಡುಪಿಯಲ್ಲಿ ಮಾಡಿತೋರಿಸಿದುದು ಎತ್ತಿ ಹೇಳತಕ್ಕದಾಗಿದೆ ಎಂದು ಡಾ. ಯು. ಕೃಷ್ಣರಾಯರು ಹೇಳಿದರು.

ನ್ಯಾಯ ಕಾರ್ಯಕ್ಕೆ ಬೆಂಬಲ—ಡಾ| ಪೈಗಳು ಮೆಡಿಕಲ್ ಕಾಲೇಜು ಸ್ಥಾಪನೆ ಕಾರ್ಯದಲ್ಲಿ ತಾನು ಅನುಭವಿಸಿದ ಕಷ್ಟಪರಂಪರೆಗಳನ್ನು ವಿವರಿಸಿ, ನ್ಯಾಯವಾದ ಕಾರ್ಯವನ್ನು ಎಡೆಬಿಡದೆ ಮುಂದೊತ್ತಿದರೆ ಖಂಡಿತವಾಗಿಯೂ ಬೆಂಬಲ ಸಿಕ್ಕಿಯೇ ಸಿಕ್ಕುವುದೆಂದರು. ಕಸ್ತೂರ್ಬಾ ಮೆಡಿಕಲ್ ಕಾಲೇಜು ಕರ್ನಾಟಕ ವಿದ್ಯಾಪೀಠಕ್ಕೆ ಸಂಯೋಜಿಸಲ್ಪಟ್ಟರೂ ಮದ್ರಾಸು ಸರಕಾರವು ತನ್ನ ಅಂಕಿತದಲ್ಲಿರುವ ಮಂಗಳೂರು ಮತ್ತು ಉಡುಪಿ ಸರಕಾರಿ ಆಸ್ಪತ್ರೆಗಳನ್ನು ಕಾಲೇಜು ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಮೀಸಲಿಟ್ಟಿರುವುದು. ಈ ಕಾಲೇಜಿನಲ್ಲಿ ಹಿಂದೂಸ್ಥಾನದ ಎಲ್ಲೆಡೆಗಳಿಂದಲೂ ಬಂದ ವಿದ್ಯಾರ್ಥಿಗಳಿರುವರು. ಸರಕಾರವು ಬೆಂಬಲವಿತ್ತರೆ, ಉತ್ಸಾಹಿ ಜನ ಮುಂದೆ ಬಂದರೆ ಮದ್ರಾಸು ಸ್ಟೇಟಿನಲ್ಲಿ ಇನ್ನೊಂದು ಇಂತಹ ಮೆಡಿಕಲ್ ಕಾಲೇಜುಗಳ ತೆರೆಯಲು ಶಕ್ಯವಿದೆ ಎಂದು ಸೂಚಿಸಿದರು. ವಿದ್ಯಾ ಯೋಜನೆಗಾಗಿ ಸರಕಾರವು ಸಾರ್ವಜನಿಕ ಸಾಲವನ್ನು ಹೊರಡಿಸಿದರೆ ಖಂಡಿತವಾಗಿಯೂ ಅಪೇಕ್ಷಿಸಿದುದಕ್ಕಿಂತ ಜಾಸ್ತಿ ಹಣ ಸಾರ್ವಜನಿಕರು ಕೊಡಲು ಮುಂದೆ ಬರುವರು ಎಂಬುದರಲ್ಲಿ ಎಳ್ಳಷ್ಟು ಸಂಶಯವಿಲ್ಲವೆಂದು ಡಾ| ಪೈಗಳು ಸ್ಪಷ್ಟ ಹೇಳಿದರು. ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ, ಅವರು ಮಾತನಾಡುತ್ತಾ, ಉಡುಪಿಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸುವ ಯೋಜನೆ ಬರೆ ಹುಚ್ಚುತನದ್ದೆಂದು ತಾನು ಭಾವಿಸಿದ್ದೆ. ಆದರೆ ತಾನು ಸ್ವತಹ ಉಡುಪಿಗೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಪರಿಶೀಲಿಸಿದಾಗ ಯೋಜನೆಯು ಯಶಸ್ವಿಯಾಗುವುದರಲ್ಲಿ ಏನೂ ಸಂಶಯವಿಲ್ಲವೆಂದು ತನಗೆ ಖಚಿತವಾಯಿತೆಂದು ಹೇಳಿದರು. ಡಾ| ಅಲಗಪ್ಪ ಚೆಟ್ಟಿಯಾರರ ಕಡೆಗೆ ದೃಷ್ಟಿ ಬೀರುತ್ತಾ 'ಡಾ| ಅಲಗಪ್ಪ ಚೆಟ್ಟಿಯಾರರಿಗೆ ಕೂಡಾ ಮೆಡಿಕಲ್ ಕಾಲೇಜು ತೆರೆಯುವ ಯೋಜನೆ ಹೊಳೆಯುತ್ತಿದ್ದುದು ಬೇಸರವೆನಿಸುತ್ತದೆ. ಆದರೆ ಡಾ| ಪೈಗಳ ಭಾಷಣವನ್ನು ಕೇಳಿ ಅವರೂ ಕೂಡಾ ಮೆಡಿಕಲ್ ಕಾಲೇಜು ತೆರೆಯುವ ಕುರಿತು ಆಲೋಚನಾಪರವಶರಾಗಿರಲೂ ಬಹುದೆಂದು ತನಗೆನಿಸುತ್ತದೆ ಎಂದರು. (ನಗು) ಮುಂದುವರಿಯುತ್ತಾ ಈ ಮೆಡಿಕಲ್ ಕಾಲೇಜನ್ನು ಮದ್ರಾಸು ರಾಜ್ಯದಲ್ಲಿಯೇ ಇರಗೊಡಿಸಬೇಕೆಂದು ಮಂತ್ರಿಗಳು ಡಾ| ಪೈಗಳಿಗೆ ಉಪದೇಶವಿತ್ತರು. ಆದರೆ ದ. ಕ. ಜಿಲ್ಲೆಯಲ್ಲಿ ಮದ್ರಾಸು ಸಂಪರ್ಕವನ್ನು ದೂರೀಕರಿಸುವ ಚಳವಳಿ ಹೊರಟಿರುವುದು. ದ. ಕ. ಜಿಲ್ಲೆಯನ್ನು ಬಿಟ್ಟುಕೊಡುವುದೆಂದರೆ ಬೇಸರದ ಸಂಗತಿಯಾದರೂ ದ. ಕ. ಜಿಲ್ಲೆಯು ಇತರರ ಸಂಪರ್ಕದಿಂದ ಇನ್ನೂ ಉನ್ನತಿಯನ್ನು ಪಡೆಯುವುದಾದರೆ ಮದ್ರಾಸು ಎಳ್ಳಷ್ಟು ಮಾತ್ರಕ್ಕೂ ಅಡ್ಡಗಾಲು ಹಾಕುವುದಿಲ್ಲ. ಮದ್ರಾಸು ರಾಜ್ಯದಲ್ಲಿರುವತನಕ ನಿಮ್ಮನ್ನೂ ಸಹೋದರರೆಂದೇ ಭಾವಿಸುವೆವು. ಕೊನೆಯದಾಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ತನ್ನ ಬೆಂಬಲವಿದೆಯಾಗಿ ಡಾ. ಪೈಗಳಿಗೆ ಶ್ರೀ ಸುಬ್ರಹ್ಮಣ್ಯಂನವರು ಆಶ್ವಾಸನೆ ಕೊಟ್ಟರು. ಈ ಸಮಾರಂಭವನ್ನು ಏರ್ಪಡಿಸಿದ ಶ್ರೀ ಕೆ. ಸೀತಾರಾಮರಾಯರಿಗೂ ಮಂತ್ರಿಗಳು ವಂದನೆಗಳನ್ನರ್ಪಿಸಿದರು.

—'ಮದ್ರಾಸ್ ಮೈಲ್' ಪತ್ರಿಕೆಯಿಂದ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

Original suit No. 577/1953

ರಾಮಚಂದ್ರ ಕೆದ್ಲಾಯ — ವಾದಿ

ಮತ್ತು

ಯು ಸುಬ್ರಾಯ ಭಟ್ಟ — ಪ್ರತಿವಾದಿ

ಇವರೊಳಗೆ.

ಯು. ಸುಬ್ರಾಯ ಭಟ್ಟ, ತಮ್ಮಣ್ಣ ಯಾನೆ ಕೃಷ್ಣ ಭಟ್ಟರ ಮಗ, ಗವರ್ನಮೆಂಟ್ ಪ್ರೆಸ್ಸ್ ಆಫೀಸ್ ಕೆಂಟೀನ್, ಹೈದರಾಬಾದ್, ಡೆಕ್ಕನ್. ಪ್ರತಿವಾದಿ.

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಪ್ರತಿವಾದಿಯು ವಾದಿಗೆ ತಾ 20.11.1950 ರಲ್ಲು ರೂ. 1200ಕ್ಕೆ ರಿಜಿಸ್ಟ್ರಿ ನಿತಿ ಬರೆಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜಿನ ಬಾಬ್ತು ಎರಡು ವರ್ಷಗಳ ಬಡ್ಡಿ ಹಣದ ಬಗ್ಗೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು 30—11—1953ಕ್ಕೆ ಇಡೋಣಾಗಿಯದೆ. ಸದ್ರಿ, ವ್ಯಾಜ್ಯದಲ್ಲಿ ಪ್ರತಿವಾದಿಯು ಉಜಾಹರಣೆಗೆ ಇದ್ದರೆ ಸದ್ರಿ ತನಟಿ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ವ್ಯಾಜ್ಯವನ್ನು ಪ್ರತಿವಾದಿಯ ಗೈರ ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

K. Varadaraya Pai

Advocate for plaintiff.

ಉಡುಪಿ ತಾ 16-11-1953

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೪ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚಾಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ತಮ್ಮ ಜಾಹೀರಾತುಗಳಿಗೆ ಚಿತ್ತಾಕರ್ಷಕವಾದ ಚಿತ್ರಗಳಿರುವ

ಓರಿಯಂಟಲ್ ಕೆಲೆಂಡರು

ಅತಿ ಯೋಗ್ಯ ಸಾಧನ!

250 ತರದ ಚಿತ್ರಗಳು!

ಬೇಕಾದವರು ಕೆಳಗಿನವರೊಡನೆ ವಿಚಾರಿಸಬಹುದು.

ಶೇಕ್ ಸುಲೇಮಾನ್,

ಕಲ್ಯಾಣಪುರ, ದ. ಕ.

(೨ನೇ ಪುಟದಿಂದ)

ಮಾಣಕ್ಕಿಂತ ವೇಗವಾಯಿತು. ೧೯೪೦-೫೦ನೇ ಅವಧಿಯಲ್ಲಿ ಪ್ರತಿ ೧೦೦೦ಕ್ಕೆ ೪೦ ಹೊಸ ಶಿಶುಗಳು ವರ್ಷ ವರ್ಷವೂ ಹುಟ್ಟಿಕೊಂಡವು. ಅದೇ ಕಾಲಕ್ಕೆ ಮರಣ ಪ್ರಮಾಣ ಪ್ರತಿ ೧೦೦೦ಕ್ಕೆ ೨೭ ಇದ್ದಿತು. ಅಂದರೆ ಪ್ರತಿ ೧೦೦೦ಕ್ಕೆ ಪ್ರತಿ ವರ್ಷಕ್ಕೆ ೧೩ ಶಿಶುಗಳು ಹೆಚ್ಚಿಕೊಳ್ಳುತ್ತಿದ್ದವು. ಪ್ರಜಾ ಜನನ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಹಳ್ಳಿ ಮತ್ತು ಪಟ್ಟಣವಾಸಗಳಾಗಲೀ ಸಾಮಾಜಿಕ ಜೀವನದಲ್ಲಿರುವ ಅಂತಸ್ತು ಮತ್ತು ವೈಷಮ್ಯಗಳಾಗಲೀ ಏನೊಂದೂ ಪ್ರಭಾವ ಮಾಡಲಿಲ್ಲ. ಪ್ರಥಮ ಪ್ರಸವದ ದಿನವನ್ನು ಆದಷ್ಟು ಮುಂದೂಡುವುದು ಸಾಧ್ಯವಿದ್ದರೂ ಅದೂ ಆಚರಣೆಯಲ್ಲಿಲ್ಲ. ಪ್ರತಿ ಸಾವಿರಕ್ಕೆ ಹುಟ್ಟುವ ೪೦ ಶಿಶು ಜನನಗಳಲ್ಲಿ ೮ ಪ್ರಥಮ ಶಿಶು ಪ್ರಸವ, ೧೭ ಪ್ರಥಮ ಯಾ ದ್ವಿತೀಯ ಶಿಶು ಪ್ರಸವ ೨೩ ಪ್ರಥಮ, ದ್ವಿತೀಯ ಯಾ ತೃತೀಯ ಶಿಶು ಪ್ರಸವವಾಗಿರುತ್ತದೆ. ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಹಡುವ ವಿವೇಕಹೀನ ಮಾತೃತ್ವಕ್ಕೆ ತಡೆ ಹಾಕುವುದು ಅತ್ಯಾವಶ್ಯಕ

೩೭ ಕೋಟಿಯಿರುವ ನಮ್ಮ ಜನಸಂಖ್ಯೆ ಮೊದಲಿನ ಪ್ರಮಾಣದಲ್ಲೆ ಅನ್ನು ದೊರೆತರೆ; ೧೯೬೧ರಲ್ಲಿ ೪೧ ಕೋಟಿ, ೧೯೭೧ರಲ್ಲಿ ೪೭ ಕೋಟಿ, ಮತ್ತು ೧೯೮೧ರಲ್ಲಿ ೫೩ ಕೋಟಿಯಾದೀತು. ಅಂದರೆ ಪಂಚವಾರ್ಷಿಕ ಯೋಜನೆ ಅಪೇಕ್ಷಿಸುವುದಕ್ಕಿಂತಲೂ ಹೆಚ್ಚು ತ್ವರಿತದಲ್ಲಿ ಆಹಾರದ ಉತ್ಪಾದನೆಯನ್ನು ನಾವು ಹೆಚ್ಚಿಸಲೇ ಬೇಕಾಗುವುದು. ೭೦೦ ಲಕ್ಷ ಟನ್ನುಗಳನ್ನು—೯೪೦ ಲಕ್ಷ ಟನ್ನುಗಳಾಗುವಂತೆ ಆಹಾರದಉತ್ಪಾದನೆಯನ್ನು ಹೆಚ್ಚಿಸಲು ಪಂಚ ವಾರ್ಷಿಕ ಯೋಜನೆಯನ್ನು ಅಳವಡಿಸುವುದೂ ಸಾವಿರಕ್ಕೆ ೪೦ರಷ್ಟಿರುವ ಶಿಶು ಜನನ ಪ್ರಮಾಣವು ೨೫ಕ್ಕೆ ಇಳಿಸುವುದೂ ಇವೆರಡು ಭಾರತದ ಮುಂದಿರುವ ಮಾರ್ಗಗಳು. ಇವೆರಡು ಸಂಗತಿಗಳನ್ನು ನಮ್ಮ ಜನ ಸಂಖ್ಯೆ ೪೫ ಕೋಟಿಯಾಗುವುದರೊಳಗೆ—ಅಂದರೆ ಇನ್ನು ೧೫ ವರ್ಷಗಳಲ್ಲಿ—ಸಾಧಿಸಿದರೆ, ಭಾರತವು ಸುಖಿಯಾದೀತು ಅನ್ಯಥಾ ಮೊದಲಿನಂತೆ ಪಿಡುಗುಗಳು, ಬರಗಾಲ ಮುಂತಾದ ನೈಸರ್ಗಿಕ ವಿಪತ್ತುಗಳೇ ಭಾರತದ ಜನಸಂಖ್ಯೆಯನ್ನು ಸ್ಥಿಮಿತದಲ್ಲಿಡಬೇಕಾಗುವುದು. ವಿಜ್ಞಾನ ಹೆಚ್ಚೆಂದರೆ ಈಗಿನದರ ಒಂದು ಮೂರಾಂಶ ಮಾತ್ರ ಉತ್ಪಾದನೆ ಹೆಚ್ಚಿಸೀತು. ಉತ್ಪಾದನೆ ಹೆಚ್ಚಿಸಲು ವೈಜ್ಞಾನಿಕ ಸಂಶೋಧನೆಗಳನ್ನು ಅನುಸರಿಸುವುದಕ್ಕೆ ನಮಗೆ ಆತಂಕವಿಲ್ಲದಿದ್ದರೆ, ಜನನ ಪ್ರಮಾಣವನ್ನು ನಿಯಂತ್ರಿಸುವುದಕ್ಕೋಸ್ಕರ ಅದನ್ನೇಕೆ ಆಶ್ರಯಿಸಬಾರದೆಂಬುದೇ ಈಗಿನ ಪ್ರಶ್ನೆ.

ಕಾಸರಗೋಡಿನಲ್ಲಿ ದ. ಕ. ಜಿಲ್ಲಾ ಶಿಕ್ಷಣ ಸಮ್ಮೇಳನ—ದಕ್ಷಿಣ ಕನ್ನಡ ಜಿಲ್ಲಾ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಜಿಲ್ಲಾ ಶಿಕ್ಷಣ ಸಮ್ಮೇಳನವು ಕಾಸರಗೋಡಿನಲ್ಲಿ ಇದೇ ತಾ ೭ರಲ್ಲು ಕಾಸರಗೋಡಿನ ತೆಂಗಿನ ಸಂಶೋಧನಾ ಕೇಂದ್ರದ ಡ್ಯಾರೆಕ್ಟ'ರ ಶ್ರೀ ಸಿ. ಎಮ್. ಜೋನ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿಯ ಅಧ್ಯಕ್ಷ ಕೆಪ್ಟನ್ ಕೆ. ಎ. ಶೆಟ್ಟಿಯವರು ಸ್ವಾಗತ ಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ಕೆ. ಎನ್. ಕೊಳ್ಳೆಬೈಲರು ಸಮ್ಮೇಳನಕ್ಕೆ ಬಂದ ಶುಭ ಸಂದೇಶಗಳನ್ನು ಓದಿದರು. ಆ ದಿನ ಬೆಳಿಗ್ಗೆ ಶ್ರೀ ಯು. ಕೇಶವ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಪ್ರತಿನಿಧಿಗಳ ಸಭೆಯಲ್ಲಿ ಪಾಸಾದ ನಿರ್ಣಯಗಳನ್ನು ಗಿಲ್ಡಿನ ಪ್ರಧಾನ ಕಾರ್ಯದರ್ಶಿ ಶ್ರೀ ಯು. ಶ್ರೀನಿವಾಸ ಕಿಣಿಯವರು ಸಮ್ಮೇಳನದ ಅವಗಾಹನೆಗೆ ತಂದರು. ನಂತರ ಉಳ್ಳಾಲ ಅನಂದಾಶ್ರಮ ಹ್ಯಾಸ್ಕೂಲಿನ ಹೆಡ್ಮಾಸ್ತರ್ ಶ್ರೀ ಕೆ. ರಾಮರಾಯರು "ಬದಲಾಗುತ್ತಿರುವ ಜಗತ್ತಿನಲ್ಲಿ ಶಿಕ್ಷಣದ ನವೀನ ದೃಷ್ಟಿ" ಎಂಬ ವಿಷಯದಲ್ಲಿ ಪತ್ರವೊಂದನ್ನು ಓದಿದರು. ಶ್ರೀ ಯು. ಶ್ರೀನಿವಾಸ ಕಿಣಿಯರು ಈ ನಾಲ್ಕು ತಿಂಗಳುಗಳಲ್ಲಿ ಹೊಸ ಪ್ರಾಥಮಿಕ ಶಿಕ್ಷಣದಲ್ಲಿ ಆದ ಪ್ರಗತಿಯ ಕುರಿತಾಗಿ ಗಿಲ್ಡಿಗೆ ಬಂದ ಎರಡು ನೂರು ವರದಿಗಳ ಆಧಾರದಿಂದ ಒಂದು ವರದಿಯನ್ನೊಪ್ಪಿಸಿದರು. ಸುಧಾರಿತ ರೀತಿಯಿಂದ ಪ್ರಯೋಜನಕ್ಕಿಂತ ಅಪ್ರಯೋಜನವೇ ಹೆಚ್ಚೆಂದು ವರದಿಯಲ್ಲಿ ಸೂಚಿಸಲಾಗಿತ್ತು. ಈ ಕುರಿತು ಶ್ರೀಗಳಾದ ಎಚ್. ಜಿ. ಪಂದೆ, ಸಿ. ಇ. ಸುಮಿತ್ರ, ಬಿ. ವೆಂಕಟರಾವ್, ಎನ್. ಅಬ್ದುಲ್ಲಾ ಮೊದಲಾದವರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂಗ್ಲೀಷು ತನ್ನಿಂದ ತಾನೇ ಈ ದೇಶದಿಂದ ಹೊರಟು ಹೋಗುವುದೆಂದೂ ಅಧ್ಯಾಪಕರು ತಮ್ಮ ವರ್ತನೆಯಿಂದ ಮಾರ್ಗದರ್ಶನ ಮಾಡಬೇಕೆಂದೂ, ಶಿಕ್ಷಣದಲ್ಲಿ ಸುಧಾರಣೆ ತರುವಾಗ ಕ್ಷೇತ್ರದಲ್ಲಿರುವವರನ್ನು ಕೇಳುವುದು ಅಗತ್ಯವೆಂದು ತಿಳಿಸಿದರಲ್ಲದೆ ಭಾರತದ ಭವಿಷ್ಯಕ್ಕೆ ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕೆಂದರು. ಶ್ರೀ ಯು. ಶ್ರೀನಿವಾಸ ಕಿಣಿಯರು ಧನ್ಯವಾದಗಳನ್ನರ್ಪಿಸಿದರು.

ಪಾಸಾದ ಪ್ರಾಮುಖ್ಯ ನಿರ್ಣಯಗಳು: 1951ನೆ ಫೆಬ್ರುವರಿ ತಿಂಗಳಾಂತ್ಯ ದೊಳಗೆ ಅಧ್ಯಾಪಕರ ಕೇಳಿಕೆ ದಿನವೊಂದನ್ನು ತಕ್ಕ ಕಾರ್ಯಕ್ರಮದೊಂದಿಗೆ ಆಚರಿಸಿ ಸಮ್ಮೇಳನದಲ್ಲಿ ಪಾಸಾದ ಠರಾವುಗಳನ್ನು ಹೆಚ್ಚು ಪ್ರಚಾರಗೊಳಿಸಬೇಕೆಂದು ಟೀಚರ್ಸ್ ಗಿಲ್ಡನ್ನು ಕೇಳಿಕೊಳ್ಳುವುದು, ೩೭ನೇ ಪ್ರಾಂತಿಕ ಶಿಕ್ಷಣ ಸಮ್ಮೇಳನದಲ್ಲಿ ಸಂಬಳ ರಜೆ ಮುಂತಾದವುಗಳ ಕುರಿತು ಮಂಜೂರು ಮಾಡಿದ ಠರಾವುಗಳನ್ನೇ ಸಮರ್ಥಿಸುವುದು, ಉಪಾಧ್ಯಾಯ ನಿವೃತ್ತರಾಗುವ ಪ್ರಾಯವನ್ನು 60ಕ್ಕೇರಿಸುವುದು, ದ. ಕ. ಜಿಲ್ಲೆಯ ಕೆಲವು ಖಾಸಗೀ ಹ್ಯಾಸ್ಕೂಲಿನವರು ಇನ್ನೂ ಸರಕಾರಿ ವೇತನ ಮತ್ತು ರಜಾ ನಿಯಮಗಳನ್ನು ಜಾರಿಗೆ ತರದಿರುವುದರಿಂದ ಅಂತಹ ಶಾಲಾ ಆಡಳಿತದವರೊಡನೆ ಗಿಲ್ಡಿನವರು ಮಾತುಕತೆ ನಡೆಸಿ ಅದು ಸಿಗುವಂತೆ ಮಾಡಬೇಕೆಂದು ಅವರನ್ನು ಕೇಳಿಕೊಳ್ಳುವುದು, ದ. ಕ. ಜಿಲ್ಲಾ ಬೋರ್ಡಿನ ಪ್ರೆಸಿಡೆಂಟ್ ಆ ಸೀಸವರು ಕೇಂದ್ರ ಸಭಾ ದಿನವನ್ನು ಶಾಲಾ ದಿನವೆಂದು ಪರಿಗಣಿಸ ಬೇಕಾಗಿಯೂ ಬೋರ್ಡಿನ ಕೈಕೆಳಗೆ ಪಂಡಿತರಾಗುವ ಯೋಗ್ಯತೆಯುಳ್ಳವರು ಇದ್ದರೆ ಅಂಥವರಿಗೆ ಪಂಡಿತ ಸ್ಥಾನ ನೀಡಬೇಕೆಂದೂ ಅವರನ್ನು ಕೇಳಿಕೊಳ್ಳುವುದು, ಉಪಾಧ್ಯಾಯಿನಿಯರ ಹೆರಿಗೆ ರಜೆಯನ್ನು ಎರಡು ತಿಂಗಳಿಂದ ಮೂರು ತಿಂಗಳಿಗೆ ಏರಿಸಬೇಕೆಂದು ಕೇಳಿಕೊಳ್ಳುವುದು, ಉಪಾಧ್ಯಾಯ ಶಿಕ್ಷಣ ಕ್ಷೇತ್ರದಲ್ಲಿ ಉಪಾಧ್ಯಾಯ ಹಾಜರಿಯ ನಿಯಮವನ್ನು ತಕ್ಕ ಸವಲತ್ತುಗಳೊಂದಿಗೆ ಜಾರಿಗೆ ತರಬೇಕೆಂದು ಕೇಳಿಕೊಳ್ಳುವುದು. ರಾತ್ರಿ ಕಾಸರಗೋಡು ಕಲಾವೃಂದದವರಿಂದ ವಿನೋದಾವಳಿಗಳಿದ್ದುವು.

ಶಾಂತಿಯುತ ಕ್ರಾಂತಿ

("ಸುನೋ ಸುನೋ ಓ ದುನಿಯಾವಾಲೆ" ಎಂಬಂತೆ)

ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು.
ಆರರಲ್ಲೊಂದು ಭಾಗದ ಭೂಮಿಯ ತ್ಯಾಗಿ ವಿನೋಬಾ ಕೇಳಿಹರೂ
ಭಾರತ ನಾಡಿನ ಭಾಗ್ಯವಿಧಾತ ಎರಡನೆ ಗಾಂಧಿಯೆ ಆಗಿಹರೂ
ಭಾರತ ಭಾಸ್ಕರ ಬಾಪೂ ನಂತರ ದೇಶದ ಜನಕನೆ ಆಗಿಹರೂ
ತನುಮನ ಅರ್ಪಿಸಿ ದೀನರ ಪ್ರಗತಿಗೆ ಭೂಮಿದಾನವ ಬೇಡಿಹರೂ ||
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು

ಕರುಣಾರಸವನು ಸಂದಿಸಬೇಡಿ ತೋರಿರಿ ದಯೆಯನು ಬಾಂಧವರೇ
ದೇಶದ ಸ್ತಂಭವು ರೈತನೇ ಅಲ್ಲವೆ? ತೋರಿರಿ ಕರುಣೆಯ ಭಾಂಧವರೇ
ನಾಡಿನ ರೈತನ ಜೀವನಗೊಡವೆಯು ಚಿಂತೆಯು ಬೇಡವೆ? ಬಾಂಧವರೇ
ರೈತನ ಹಸಿವಿನ ಗೋಳಿನ ಬಾಳಿನ ಯೋಚನೆ ಬೇಡವೆ? ಬಾಂಧವರೇ
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು

ಪ್ರಕೃತಿಯ ಸ್ವತ್ತದು ನಿಮಗೇ ಸೇರಿದೆ ರೈತನ ಕೇಳುವರಾರಿಹರೂ
ನಾಡಿನ ಭಾಗ್ಯವು ನಿಮಗೇ ಹೊಂದಿದೆ ಬಡವನ ಕೇಳುವರಾರಿಹರೂ
ಸಂಸ್ಕೃತಿ ಹೀನನ ಭಾಗ್ಯ ವಿಹೀನನ ದೀನನ ಕೇಳುವರಾರಿಹರೂ
ಈಪರಿ ಭೇದವ ಮಾಡಿರಿ ಎಂದು ಭಾರತ ಮಾತೆಯು ಸಾರಿದಳೆ||
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು

ಕ್ರಾಂತಿಯ ಜ್ವಾಲೆಯು ಹರಡುವ ಮೊದಲೇ ಜಾಗ್ರತರಾಗಿರಿ ಬಾಂಧವರೇ
ಅಗಣಿತ ಕಿಡಿಗಳು ಸಂಘಟಿಸಿದಲಿ ಧಗ ಧಗ ಭಾರತ ಉರಿದೀತೂ
ಶಾಂತಿಯ ನಾಡಿದು ಆರ್ಯಾವರ್ತವು ಭೀಕರ ಜ್ವಾಲೆಗೆ ಸಿಲುಕೀತೂ
ನಂತರ ಎಲ್ಲವು ನಿಮಗೇ ಹಾನಿಯು ಯೋಚಿಸಿ ನೋಡಿರಿ ಬಾಂಧವರೇ
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು
ರಷ್ಯಾ ಕ್ರಾಂತಿಯು ನಡೆಯಲು ಬೇಕೆ? ಫ್ರಾನ್ಸಿನ ಘಟನೆಯು ಬರಬೇಕೆ?
ಭಾರತ ನಾಡಿನ ಕ್ರಾಂತಿಯು ಬೇಡೆ? ಭೂಪಾಲಕರೇ ಯೋಚಿಸಿರಿ
ಭೀಕರ ಕ್ರಾಂತಿಯು ನಡೆಯಲು ಬೇಕೆ? ಅದಕೂ ನಿಮ್ಮದು ಸಮ್ಮತಿಯೇ?
ಹಿಂದೂದೇಶವು ರಕ್ತದ ನಾಡದು ಎಂದರೆ ನಿಮಗದು ಸಮ್ಮತಿಯೇ?
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು

ಆರ್ಯರು ರಚಿಸಿದ ವೇದದ ಪ್ರತಿಭೆಯು ಉದಿಸಿದೆ ನಮ್ಮಾ ಭಾರತದೀ
ಭಗವಾನ್ ಕೃಷ್ಣನು ಸಾರಿದ ಗೀತೆಯು ಹರಡಿದೆ ನಮ್ಮಾ ಭಾರತದೀ
ಮಾನ್ಯ ಮಹಾಋಷಿ ಮನುವಿನ ಶಾಸ್ತ್ರವು ಜನಿಸಿದೆ ನಮ್ಮಾ ಭಾರತದೀ
ಗೀತಾಮೃತದಾ ತತ್ವದ ಬೆಳಕದು ಬೆಳಗಿದೆ ನಮ್ಮಾ ಭಾರತದೀ
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು

ಶ್ರೇಷ್ಠ ಹಂಸ ವಿವೇಕಾನಂದರು ಉದಿಸಿದ ನಾಡಿದು ಭಾರತವೂ
ಕಬೀರದಾಸನು ಅರವಿಂದ್ಯೋಗಿಗಳು ಜನಿಸಿದ ನಾಡಿದು ಭಾರತವೂ
ಭಗವಾನ್ ಬುದ್ಧನು ಗಾಂಧಿ ಮಹಾತ್ಮರು ಬೆಳಗಿದ ನಾಡಿದು ಭಾರತವೂ
ಇಂಥ ದೇಶದಿ ಸ್ವಾರ್ಥವು ಏಕೆ? ಕರುಣಿಸಿ ದಯೆಯನು ಬಾಂಧವರೇ
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು
ಹೊರಗಿನ ಕ್ರಾಂತಿಯು ಏನೇ ಇರಲಿ ಭಾರತ ಶಾಂತಿಯು ಬಿಡದಿರಲೀ
ಆರ್ಯಾವರ್ತದ ಬಂಧುಗಳೆಲ್ಲರ ಶಾಂತಿಯ ಧ್ವಜವನು ಹಾರಿಸಲೀ
ಕೀರ್ತಿಯ ಧ್ವಜವಿದು ಹಾರುತಲಿರಲಿ ಶಾಶ್ವತ ಚಲಿಸಲಿ ಭಾರತವೀ
ಧರ್ಮವು ಹರಿಯಲಿ ಸತ್ಯವು ಬೆಳಗಲಿ ಭಾರತ ನೆಮ್ಮದಿ ಜೀವಿಸಲೀ
ಕೇಳಿರಿ ಕೇಳಿರಿ ನಾಡಿನ ಜನರೇ ಪೂಜ್ಯ ವಿನೋಬಾ ವಾಣಿಯನು

—ಕೆ. ರಾಮಯ್ಯ ಕುಡುಮಲ್ಲಿಗೆ.

In The Court of The District Munsiff of Mangalore

R. E. P. 13/1953.
R. E. A. 451/53.

Between.—
Sri Venkatramana Temple Moolky by its trustees Petitioner.
and
Doojakke and 2 others.
—Respondents.

To
3rd Respondent Guddappa Shetty, Brother of Doojakke, residing at Manchi Village, Mangalore Taluk.

Whereas the abovenamed Execution Petitioner has applied for sale of the immoveable properties belonging to you, and fully described in the sale Proclamation, you are hereby informed that the 15th day of December 1953 has been fixed for settling the terms of the proclamation of sale and the petitioner has also filed R. E. A. 451/53 for granting permission to him to bid and set off

(By Order of Court)

M. Venkatraya Kamath.
Advocate for Petitioner.
Mangalore, 16-11-1953.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಕನ್ನಡಿಗರಿಗೆ ದೀಪೋತ್ಸವದ ಸಂಭ್ರಮ

(೨ನೇ ಪುಟದಿಂದ)

ಯನ್ನು ಗಮನಿಸಿಯೇ-ಕೇಂದ್ರದ ಗೃಹ ಮಂತ್ರಿ ಡಾ. ಕೈಲಾಸನಾಥ ಕಟಜೂರವರು ಭಾಷಾ ಪ್ರಾಂತ ರಚನೆಯಿಂದಲೇ ಆಯಾ ಭಾಷಾನುಯಾಯಿಗಳ ಶ್ರೇಯಸ್ಸು ಲಭಿಸಲಾರದೆಂದು ಕಂಠೋಕ್ತವಾಗಿ ಸಾರಿದರು.

ತುಂಬು ಸಂತೋಷದ, ವರ್ಷವಿಡೀ ನವ್ಯ ಸ್ಫೂರ್ತಿಯನ್ನೂ ಉಕ್ಕೇರುವ ಚೈತನ್ಯವನ್ನೂ ಕನ್ನಡಿಗರ ಧಮನಿಯಲ್ಲಿ ಹರಿಸಬಲ್ಲ ದೀಪಾವಳಿ ಬರಬೇಕಾದರೆ, ಅದಕ್ಕೋಸ್ಕರ ಮಾಡತಕ್ಕ ಪ್ರಯತ್ನ ಮತ್ತು ಕೈಗೊಳ್ಳಬೇಕಾದ ಯೋಜನೆಯ ಪ್ರಮಾಣ ರಾಜಕೀಯದ ಮಿತಿಯನ್ನು ಮೀರಿ ನಿಂತಿದೆ ಮತ್ತು ಆರ್ಥಿಕೋನ್ನತಿಯೇ ಅದರ ಜೆಂಗೋಲಾಗಿರುತ್ತದೆ.

ಆರ್ಥಿಕೋನ್ನತಿಯೇ ಆದರ್ಶ

ಭಾರತದ ರಾಜಕೀಯ ಸ್ವಾತಂತ್ರ್ಯವೊಂದರಿಂದಲೇ ನಮ್ಮ ತೊಂದರೆ ತಾಪತ್ರಯಗಳು ದೂರಗೊಳ್ಳದಿರುವಂತೆ, ಕರ್ನಾಟಕದ ಏಕೀಕರಣ ಮಾತ್ರದಿಂದಲೇ ಕನ್ನಡಿಗರ ಸೌಭಾಗ್ಯದ ಮಹಾದ್ವಾರ ತೆರೆಯುವುದೆಂಬ ಕಲ್ಪನೆಯೂ ಸುಳ್ಳು. ಇಲ್ಲಿಯ ಆರ್ಥಿಕ ಕ್ಷೇತ್ರದಲ್ಲಿ ಇದುವರೆಗಾದ ಪ್ರಯತ್ನದ ನೂರು ಪಾಲು-ಸಾವಿರ ಪಾಲು ಪ್ರಯತ್ನ ನಡೆಯುವ ಅವಶ್ಯಕತೆ ಈಗಿನ ಸ್ಥಿತಿಯಲ್ಲಿ ಕಂಡು ಬರುತ್ತದೆ. ಹರಿದು ಹಂಚಿದ್ದರೂ ಕೂಡ ನಮಗೆ ಕನ್ನಡಿಗರ ಆವಶ್ಯಕತೆಯ ದೊಡ್ಡ ಪಟ್ಟಿ ಗೋಚರಿಸುತ್ತಿರುವಾಗ – ಒಂದಾಗಿ ಸೇರಿದ ಮೇಲೆ ಈ ಬೇಕುಗಳು ಮತ್ತಷ್ಟು ಹೆಚ್ಚಿಕೊಳ್ಳುವುದು ನಿಶ್ಚಯ.

ಈಗಿರುವಂತೆ ಸ್ಥೂಲ ರೀತಿಯಲ್ಲಿ ಕರ್ನಾಟಕ ಏಕೀಕರಣವಾದೊಡನೆಯೇ ನಾವು ಗಮನಿಸಬೇಕಾದ ಕೆಲವು ಸಂಗತಿಗಳನ್ನು ಪ್ರಸ್ತಾಪಿಸಿದರೆ—ಈ ಲೇಖನದ ಉದ್ದೇಶ ಮುಗಿಯಿತು. ಮುಖ್ಯವಾಗಿ ನಮಗೆ ರೈಲ್ವೆ, ಬಂದರು ಮತ್ತು ನೀರಾವರಿಯ ಅನುಕೂಲತೆಗಳು ಆಗಬೇಕು. ಪ್ರಥಮ ಪ್ರಾಶಸ್ತ್ಯವನ್ನು ನೀರಾವರಿಗೆ ಕೊಡುವುದು ಕ್ರಮಪ್ರಾಪ್ತವಾಗಿರುತ್ತದೆ. ಕನ್ನಡದ ನೆಲತುಂಬ ಫಲವತ್ತಾಗಿದ್ದರೂ ಸಹ ಉತ್ತರ ಕರ್ನಾಟಕದಲ್ಲಿ ಬರಗಾಲ ವರ್ಷ ವರ್ಷವೂ ತಲೆದೋರುತ್ತದೆ. ಘಟಪ್ರಭಾ ನದಿಗೆ ಅಣೆಕಟ್ಟು ನಿರ್ಮಾಣ ಹೊಂದುತಿದ್ದರೂ ಉತ್ತರಕರ್ನಾಟಕದ ಪ್ರಾದೇಶಿಕ ಆವಶ್ಯಕತೆಗೆ ಅದು ಸಾಕಾಗದು. ಹಾಗೆಯೇ ತುಂಗಭದ್ರೆಯ ಆಣೆಕಟ್ಟು ಕೂಡ ಸುಮಾರು ನೂರು ವರ್ಷಗಳ ಹಿಂದೆ ಸರ್ ಆರ್ಥರ್ ಕಾಟನ್ನರು ಅಪೇಕ್ಷಿಸಿದ್ದಷ್ಟು ದೊಡ್ಡ ಜಲಾಶಯವನ್ನು ನಿರ್ಮಿಸಿರುವುದಿಲ್ಲ, ಕೃಷ್ಣ ಘಟಪ್ರಭೆ, ಮಲಪ್ರಭೆಗಳು ಹೈದರಾಬಾದು ರಾಜ್ಯಕ್ಕೆ ತಾಗಿ ಕೊಂಡಿರುವ ವಿಶಾಲವಾದ ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಹಸಿರುಕಂಗೊಳಿಸುವಂತೆ ಮಾಡಬಹುದಾಗಿದ್ದರೂ ಸದ್ಯ ಇತ್ತ ಗಮನ ಕೊಟ್ಟಿಲ್ಲ. ಏಕೀಕರಣದ ಬಳಿಕ ಇದನ್ನು ಅಗತ್ಯವಾಗಿ ಲಕ್ಷಿಸಿಬೇಕಾಗುವುದು ಹಾಗೆಯೇ ಮೈಸೂರಿನಲ್ಲಿ ಕೂಡ ನೀರಾವರಿಯ ಅನುಕೂಲತೆ ವಿಶಾಲಗೊಳ್ಳಬೇಕು.

ಕೇಂದ್ರ ಸರಕಾರದ ಪಂಚ ವಾರ್ಷಿಕ ಯೋಜನೆ ನಮಗೆ ಕೆಲವು ಜನಪದ ಅಭಿವೃದ್ಧಿ ಕೇಂದ್ರಗಳನ್ನು ಮಾತ್ರ ಕರುಣಿಸಿ, ಬೇರೆ ಸಂಗತಿಗಳಲ್ಲಿ ಕೈಕಟ್ಟಿ ಕುಳಿತಿರುತ್ತದೆ. ಕನ್ನಡಿಗರು ತಮ್ಮ ಅಗತ್ಯಕ್ಕೆ ತಕ್ಕದಾದ ಮತ್ತು ದೇಶದ ಏಳಿಗೆಗೆ ಅನುಕೂಲವಾದ ನೀರಾವರಿ ಯೋಜನೆಗಳ ಮೇಲೆ ಜೋರುಕೊಡಲೇ ಬೇಕು. ನೀರಾವರಿಗೋಸ್ಕರ ಆಣೆಕಟ್ಟಗಳಲ್ಲದೆ, ಸಾಧ್ಯವಿದ್ದೆಡೆಯಲ್ಲಿ ಸರಕು ಸಾಗಾಟಕ್ಕೆ ಅನುಕೂಲವಾದ ಕಾಲುವೆಗಳ ರಚನೆಯ ಕುರಿತೂ ಮನಸ್ಸು ಹಾಕಬೇಕು. ಕಾರವಾರದಿಂದ ಭಟ್ಕಳದವರೆಗೂ ಕುಂದಾಪುರದಿಂದ ಮಂಗಳೂರಿನವರೆಗೂ ಬಹಳ ಸುಲಭದಲ್ಲಿಯೂ ಸ್ವಲ್ಪಮಾತ್ರ ಪ್ರಯತ್ನದಿಂದಲೂ ಭಟ್ಕಳ ಮತ್ತು ಕುಂದಾಪುರಗಳನ್ನು ಜೋಡಿಸಿ ಒಟ್ಟಿಗೆ ಕಾರವಾರದಿಂದ ಮಂಗಳೂರಿನವರೆಗೆ ಜಲಮಾರ್ಗವನ್ನು ನಿರ್ಮಿಸಲು ಸಾಧ್ಯವಿದೆ ತಜ್ಞರ ಲೆಕ್ಕದಂತೆ. ಈ ಜಲಮಾರ್ಗ ರಚನೆಗೆ ಇಷ್ಟು ಉಪ್ಪ ರೈಲ್ವೆ ಮಾರ್ಗ ಹಾಕಲು ತಗಲುವ ಖರ್ಚಿನ ಅರ್ಧಾಂಶವೇ ಸಾಕಾಗುವುದು.

ಮುಂದಿನ ಯೋಜನೆಗಳು

ಈ ಜಲಮಾರ್ಗಗಳು ಒಂದೆಡೆ ನೀರಾವರಿಗೂ ಇನ್ನೊಂದೆಡೆ ಸರಕು ಸಾಗಾಟಕ್ಕೂ ನೆರವಾಗುತ್ತಿವೆ. ತಿರುಕೊಚ್ಚಿಯಲ್ಲೂ ಕೃಷ್ಣ ಮತ್ತು ಗೋದಾವರೀ ಮುಖಜ ಭೂಮಿಯಲ್ಲೂ, ಇವುಗಳ ಉಪಯುಕ್ತತೆ ಸ್ಪಷ್ಟವಾಗಿ ದೃಗ್ಗೋಚರವಾಗುತ್ತಿದೆ. ಆದರೆ ಕರ್ನಾಟಕದ ರೈಲ್ವೆಯ ಆವಶ್ಯಕತೆಯನ್ನು ಇಂದು ಹಿಂದೂಡಬಾರದು. ಕನ್ನಡದ ಸಂಪತ್ಸಮೃದ್ಧಿ ಪ್ರದೇಶಗಳನ್ನು ಸುಸಂಬದ್ಧವಾಗಿ ಜೋಡಿಸಬಲ್ಲಂತೆ ರೈಲ್ವೆಯ ಮಾರ್ಗಗಳನ್ನು ಹೊಸತಾಗಿ ಹಾಕುವ ತೀರಾ ಅಗತ್ಯವಿದೆ.

ಈ ವಿಷಯದಲ್ಲೂ ಉತ್ತರಕರ್ನಾಟಕಕ್ಕೆ ಪ್ರಾಶಸ್ತ್ಯ ಸಲ್ಲಬೇಕು. ಹುಬ್ಬಳ್ಳಿ ಅಥವಾ ಗದಗಕ್ಕೆ ಈಶಾನ್ಯಕ್ಕಿರುವ ವಿಸ್ತಾರವಾದ ಹತ್ತಿ ಬೆಳೆಯುವ ಬಿಜಾಪುರದ ಭೂಮಿ ಒಂದುಸೇರುವಂತೆ ಹಾಗೂ ಮೈಸೂರಿನ ಮಲೆನಾಡು ಪ್ರದೇಶ ಪಶ್ಚಿಮದ ಕರಾವಳಿಯಲ್ಲಿರುವ ಉತ್ತಮ ರೇವುಗಳೊಡನೆ ಜೋಡಣೆ ಸಾಧಿಸುವಂತೆ ರೈಲ್ವೆ ಲ್ಯಾನುಗಳನ್ನು ಕೂಡಲೇ ಹಾಕಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲೂ ರೈಲ್ವೆ ದಾರಿಯ ಅಗತ್ಯ ಬಹಳವಿದೆ. ಅಲ್ಲಿಯ ಮಲೆನಾಡಿನ ಉಪಯೋಗವನ್ನು ಸಂಪೂರ್ಣ ಪಡೆಯುವುದಕ್ಕೆ ರೈಲುದಾರಿಯನ್ನು ಹಾಕುವುದೂ ಮೋಟಾರು ದಾರಿಯ ಸಾರಿಗೆ ಸರಾಗವಾಗುವಂತೆ ಇನ್ನೂ ಅಚ್ಚುಕಟ್ಟಾದ ವ್ಯವಸ್ಥೆಯನ್ನು ಏರ್ಪಡಿಸುವುದೂ ಅತ್ಯಾವಶ್ಯಕ. ಕಾರವಾರವು ನೈಸರ್ಗಿಕ ಬಂದರವಾಗಿಯೂ ರೂಪಿಸಬಹುದಾದ ಅನುಕೂಲತೆ ಪಡೆದಿದೆ. ಬಹುಶಃ ಉತ್ತರ ಕರ್ನಾಟಕ ಪ್ರದೇಶಕ್ಕೆ ಕಾರವಾರವೂ ಮೈಸೂರನ್ನೊಳಗೊಂಡ ದಕ್ಷಿಣ ಕರ್ನಾಟಕಕ್ಕೆ ಮಲ್ಪೆಯೂ ಯೋಗ್ಯ ಬಂದರಗಳಾಗಬಲ್ಲವು. ಆದಕಾರಣ, ಉತ್ತರಕನ್ನಡ ಜಿಲ್ಲೆಯನ್ನು ಇದುವರೆಗೆ ಅಲಕ್ಷಿಸುತ್ತಾ ಬಂದಂತೆ ಏಕೀಕರಣವಾದಬಳಿಕವೂ ವರ್ತಿಸುವುದು ಅಶಕ್ಯ.

ಕನ್ನಡದ ಸರಕುಗಳು ಹೊರಗಿನ ಅಥವಾ ಗಡಿ ಭಾಗದ ಶಹರುಗಳನ್ನೆ ನಿರ್ಯಾತಾನುಕೂಲತೆಗೋಸ್ಕರ ಆಶ್ರಯಿಸುವ ಈಗಿನ ಕಷ್ಟ ತೊಲಗಬೇಕು. ಉತ್ತರ ಕರ್ನಾಟಕ ಅಮೂಲ್ಯವಾದ ಖನಿಜ ಸಂಪತ್ತನ್ನೂ ಗಳಿಸಿರುತ್ತದೆ. ನೀರಾವರಿಯ ಅನುಕೂಲತೆ ದೊರೆತರೆ ಮತ್ತು ಆಧುನಿಕ ಶಕ್ತಿ ಸ್ರೋತವಾದ ವಿದ್ಯುತ್ತಿನ ಸೌಕರ್ಯವುಂಟಾದರೆ, ಕೋಲಾರದ ಚಿನ್ನದ ಗನಿಯ ಹತ್ತು ಪಾಲು ಏಕೆ ನೂರುಪಾಲು ಸಂಪತ್ತನ್ನು ನಾವು ಇಲ್ಲಿಂದ ಪಡೆಯಬಲ್ಲೆವು.

ಮೈಸೂರು ತನ್ನೆಲ್ಲ ನಿರ್ಯಾತಕ್ಕೂ ಮದ್ರಾಸನ್ನು ಈಗ ಆಶ್ರಯಿಸುತ್ತಿದೆ-ಇದು ತಪ್ಪಿ ಮಲ್ಪೆಯನ್ನೂ ಮಂಗಳರನ್ನೂ ಅದು ಆಶ್ರಯಿಸಿದರೆ ಚಂದ. ನೈಸರ್ಗಿಕ ಅನುಕೂಲತೆಯ ದೃಷ್ಟಿಯಿಂದ ಮಲ್ಪೆಯೇ ಪ್ರಬುದ್ಧ ಬಂದರವಾಗಲು ಯೋಗ್ಯವಿರುವುದಾಗಿ ತಜ್ಞರ ಸಮಿತಿ ಈಗಾಗಲೇ ಸಿದ್ಧಾಂತ ಮಾಡಿದೆ. ಹಾಸನ ಮಂಗಳೂರು ರೈಲ್ವೆ, ಮಂಗಳೂರು ಉಡುಪಿ ರೈಲ್ವೆ ಉಡುಪಿ ಭದ್ರಾವತಿ ರೈಲ್ವೆ, ಜೋಗದ ವಿದ್ಯುಚ್ಛಕ್ತಿಯ ವಿಸ್ತೃತ ಪೂರೈಕೆ ಕನ್ನಡದ ಸರಕುಗಳು ವ್ಯಾಪಾರ ಕನ್ನಡಿಗರ ಕೈಯಲ್ಲೆ ಉಳಿಯಬಲ್ಲುದು; ಕನ್ನಡಮ್ಮನ ಸಂಪತ್ತಿಗೂ ಅವಳೇ ಅವಳ ಮಕ್ಕಳೇ ಅಧಿಕಾರಿಯಾಗಿ ಉಳಿವರು

ಮಲ್ಪೆಯನ್ನು ಮೂರೂವರೆ ಕೋಟಿ ರೂಪಾಯಿಯೊಳಗೆ ಪ್ರಬುದ್ಧ ಬಂದರವಾಗಿ ಮಾಡಬಹುದೆಂದು ತಜ್ಞರ ಸಮಿತಿ ಹೇಳಿದೆ-ಮಾತ್ರವಲ್ಲ ಸುಮಾರು ಒಂದು ಕೋಟಿ ರೂಪಾಯಿ ಖರ್ಚಿನಲ್ಲಿ ಮಲ್ಪೆಯ ಬಂದರವನ್ನು ಈಗಿನದಕ್ಕಿಂತ ತುಂಬ ಊರ್ಜಿತವಾಗಿಡಲು ಸಾಧ್ಯವೆಂದೂ ತಜ್ಞರು ತೀರ್ಮಾನಿಸಿರುವರು. ಬಾಗಿಲು ಕೋಟೆಯ ಸಿಮೆಂಟು ಕಾರ್ಖಾನೆಗಾಗಿ ಜನರೇ ೫೦ ಲಕ್ಷ ರೂಪಾಯಿ ಕೂಡಿಸಿರುವಾಗ, ಮೈಸೂರು ಸರಕಾರ ತಾನೇ ಭಂಡವಾಳವನ್ನೆ ಒದಗಿಸಿ ಜೋಗದ ವಿದ್ಯುಚ್ಛಕ್ತಿ, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಂಥದನ್ನು ಸ್ಥಾಪಿಸಿರುವಾಗ ಮಲ್ಪೆಯನ್ನು ಪ್ರಬುದ್ಧ ಬಂದರವಾಗಿ ರಚಿಸುವುದು ದೊಡ್ಡ ಮಾತಾಗಲಾರದು. ಅದರಲ್ಲೂ ಡಾ. ಮಾಧವ ಪೈಯಂಥ ದಕ್ಷಿಣ ಕನ್ನಡ ಜಿಲ್ಲೆಯ ಮೇಧಾವಿಗಳು ಜನತೆಯ ಕೈಯಿಂದಲೇ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಂಥ ಕನಸನ್ನು ನನಸಾಗಿಸುವ ಸಾಹಸ ಮಾಡಿ ತೋರಿರುವರೆಂದಮೇಲೆ – ಕನ್ನಡದ ಬೇರೆ ಮೇಧಾವಿಗಳೂ ಒಟ್ಟಿಗೆ ಸಹಕರಿಸಿ, ಜನತೆಯ ಕೈಯಿಂದಲೇ ಆರ್ಥಿಕಾಭಿವೃದ್ಧಿಯ ಪ್ರಯತ್ನ ನಡೆಯುವಂತೆ ನೋಡಿಕೊಳ್ಳುವುದು ಅಸಾಧ್ಯವೇನಲ್ಲ.

ಇಂಥ ಪ್ರೇರಣೆ ಮತ್ತು ಕಾರ್ಯೋತ್ಸಾಹಗಳು ಕನ್ನಡಿಗರ ಧಮನಿಯಲ್ಲಿ ಸದಾ ತುಂಬಿ ತುಳುಕಿ ಹರಿಯುವುದೆಂದು ನಾವು ಆಶಿಸುತ್ತೇವೆ. ಆಗ ಕನ್ನಡ ಪ್ರದೇಶದ ಸಾರ್ವಾಂಗಿಕ ಏಳಿಗೆಯಾಗುವುದಕ್ಕೆ ಕಾರಣವಾಗುವ ನೂರಾರು ಕೈಗಾರಿಕೆಗಳು (ಉದಾ; ಮಲ್ಪೆಯ ಮತ್ಸ್ಯ ವ್ಯವಸಾಯ) ತಲೆಎತ್ತಿಕೊಂಡು ಭಾರತದಲ್ಲಿ ಪ್ರಾಮುಖ್ಯವಾದ ಆರ್ಥಿಕ ಘಟಕವಾಗಿ ಸಂಯುಕ್ತ ಕರ್ನಾಟಕ ಪರಿಣಮಿಸುವುದು ನಿಜ. ಕನ್ನಡಿಗರು ಹೇಗೆ ದೀಪೋತ್ಸವವನ್ನು ಉಲ್ಲಸಿತ ಹೃದಯದಿಂದ ಆಚರಿಸುವ ದಿನವನ್ನು ನಿಕಟ ಭವಿಷ್ಯದಲ್ಲಿಯೇ ಇದಿರಗೊಂಡೇವೆಂಬ ಆತ್ಮ ವಿಶ್ವಾಸದ ಜ್ಯೋತಿ ನಮ್ಮೆಲ್ಲರ ಹೃದಯವನ್ನು ಬೆಳಗಿಸಲಿ!

— ಕಾರ್ತಿಕೇಯ.

ಉಡುಪಿ ಡಿ. ಮು. ಕೋರ್ಟಿನಲ್ಲಿ

S. C. No. 568/1953.

ಕುಪ್ಪಂಣ ತಂತ್ರಿ ಕೂಡಾ —ವಾದಿರು.

ಮತ್ತು

ವಾದಿರಾಜ ಉಪಾಧ್ಯಾಯ, ಪುಟ್ಟಂಣ ಉಪಾಧ್ಯಾಯರ ಮಗ, ಉಡುಪಿ ಕಸಬಾ ಪಡುಪೇಟೆಯಲ್ಲಿರುವವ --ಪ್ರತಿವಾದಿ.

ಯಿವರೊಳಗೆ—

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದ್ರೆ:—

ಪ್ರತಿವಾದಿಯು ಆತನ ಕುಟುಂಬಾರ್ಥವಾದ ಗರ್ಜಿನ ಉದ್ದಿಶ್ಯ ವಾದಿಯಿಂದ ತಾ. 5-10-47ರಲ್ಲು ಡಿಮಾಂಡ್ ನೋಟು ಬರೆಕೊಟ್ಟು ಪಡದ ಸಾಲದ ಬಾಬ್ತು ವಾದಿರಿಗೆ ಪ್ರತಿವಾದಿಯಿಂದ ಬರತಕ್ಕ ರೂಪಾಯಿ 297-3-3ಕ್ಕೆ ವಾದಿರು ಪ್ರತಿವಾದಿ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ 24—11—53ಕ್ಕೆ ಇಟ್ಟಿರುತ್ತದೆ. ಅದುಪರಿಂದ ಪ್ರತಿವಾದಿಗೆ ಸದ್ರಿ ವ್ಯಾಜ್ಯದಲ್ಲಿ ಉಜಾರದಣೆ ಕೊಟ್ಟು ವ್ಯವಹರಿಸುವುದಿದ್ದಲ್ಲಿ ಸದ್ರಿ ತಾ 24—11—53ನೇ ದಿವಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಜ್ವಾಬು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಪ್ರತಿವಾದಿಯ ಗೈರು ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೈಸಲು ಮಾಡಲ್ಪಡುವುದು.

P. V. Acharya.

Vakil for Plaintiffs.

ಉಡುಪಿ ತಾ 9-11-1953

‘ಗೋಪಾಲ ಭೇಷಜಾಶ್ರಮ” ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದವು ಧುರಧ್ರವರಸಾಯನ.



ಹೆಚ್ಚಿನ ಮಾಹಿತಿಗೆ— ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.

ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಸ್ವೀಕಾರ–ವಿಮರ್ಶೆ

ಅಂತರಗಂಗೆ—

(ಆಸ್ಟ್ರಿಯದ ವಿಶ್ವಸಾಹಿತಿ ಸ್ಟೀಫಾನ ಜ್ವೈಗ್ ಅವರ ಕತೆಗಳು) ಅನುವಾದಕರು: ಬಸವರಾಜ" ಪ್ರಕಾಶಕರು: ಭಾರತೀ ಪ್ರಕಾಶನ ಮಂದಿರ, ಮುಂಬಾಯಿ ೨೫. ಬೆಲೆ: ರೂ. ೧—೮—೦.

ಸರ್ವೋತ್ತಮ ಸಣ್ಣ ಕತೆಗಳನ್ನು ಪ್ರಕಟಿಸುತ್ತಿರುವ ಮುಂಬಯಿಯ "ಭಾರತೀ" ಮಾಸಪತ್ರಿಕೆಯೇ ಕನ್ನಡದಲ್ಲಿ ಸರ್ವ ಪ್ರಥಮವಾಗಿ ಪಾಶ್ಚಾತ್ಯ ದೇಶಗಳ ವಿಶ್ವಖ್ಯಾತಿಯ ಸಾಹಿತಿಗಳ ಕತೆಗಳನ್ನು ಪ್ರಕಟಿಸಿದ ಗೌರವವುಳ್ಳದ್ದು. ಆಸ್ಟ್ರಿಯದ ಸಾಹಿತಿ ಸ್ಟೀಫಾನ ಜ್ವೈಗ್ಗರ ಸಾಹಿತ್ಯದ ರಸದೌತಣವನ್ನು ಅದು ಕನ್ನಡಿಗರಿಗೆ ಮೊದಲಾಗಿ ಮಾಡಿಕೊಡುತ್ತಿರುವುದು ಶ್ಲಾಘನೀಯ. ಈ ಕಥಾ ಸಂಕಲನದ ಕುರಿತು ಎರಡು ಮಾತು ಹೇಳುವುದಕ್ಕೆ ಮೊದಲು ಶ್ರೀಮಾನ್ ಕೃಷ್ಣಕುಮಾರ ಕಲ್ಲೂರ ಅವರು ಜ್ವೈಗ್ಗರ ಜೀವನ ಪರಿಚಯವನ್ನು ಮಾಡಿಕೊಡುತ್ತಾ "ಹಿನ್ನುಡಿ"ಯಲ್ಲಿ ಹೇಳಿದ ಹಲವು ಸಂಗತಿಗಳನ್ನು ಪ್ರಸ್ತಾಪಿಸುವುದೊಳಿತು. "ಪ್ರಪಂಚದ ಸಾಹಿತ್ಯಗಳಲ್ಲೆಲ್ಲ ಬಹಳ ಪ್ರಾಚೀನವೂ ವಿಶಾಲವೂ ಆದ ಸಾಹಿತ್ಯ ಕನ್ನಡ್ದು ಎಂದು ಹೆಮ್ಮೆಪಡುವ ಕನ್ನಡಿಗರು ಆಧುನಿಕ ವಿಶ್ವ ಸಾಹಿತ್ಯಕ್ಕೆ ಎರವಾಗಿರುವುದು ಅಪಮಾನಿಯೂ ತೀರ ಕನಿಕರದ ಮಾತು" ಎಂಬ ಅವರ ಉದ್ಗಾರವನ್ನು ನಾವೂ ಅನುಮೋದಿಸಬೇಕಾಗುತ್ತದೆ. ವಿಶ್ವಸಾಹಿತಿ ರವೀಂದ್ರರ ಸಾಹಿತ್ಯವನ್ನೇ—ಅವರು ಭಾರತೀಯರಾದರೂ ಗುರುವರ್ಯರೆಂದು ಇರುವಾಗಲೂ—ಇನ್ನೂ ಕನ್ನಡದಲ್ಲಿ ಇಳಿಸಿದ್ದಿಲ್ಲವೆಂದ ಮೇಲೆ—ಈ ಕನಿಕರದ ಯಥಾರ್ಥತೆ ಮನದಟ್ಟಾಗುವುದು. ಕನ್ನಡ ಸಾಹಿತ್ಯದ ಬೆಳವಣಿಗೆ ವಿಶ್ವಸಾಹಿತ್ಯದ ಪರಿಚಯವು ಬಹಳ ಅಗತ್ಯವಾಗಿರುತ್ತದೆ. ಪ್ರಸಿದ್ಧ ಸಾಹಿತಿಗಳ ಕೃತಿಯನ್ನು ಅನುವಾದಮಾಡಿ ಕನ್ನಡಿಗರಿಗೆ ಓದಲು ನೀಡುವುದು ನಮಗೀಗ ಅನುಭವಿಸುತ್ತಿರುವ ಕೊರತೆಯೊಂದನ್ನು ದೂರೀಕರಿಸುವ ಮಾರ್ಗ. ಸ್ಟೀಫಾನ್ ಜ್ವೈಗ್ನ ಪ್ರಾರಂಭದಲ್ಲಿ ಬೇರ್ಬೇರೆ ವಿವಿಧ ಭಾಷೆಗಳ ಶ್ರೇಷ್ಠ ಸಾಹಿತ್ಯದ ಅನುವಾದ ಕಾರ್ಯವನ್ನೇ ಕೈಗೊಂಡಿದ್ದನ್ನು ನೆನೆಸಿದರೆ "ಅಂತರ ಗಂಗೆ" ಯಂಥ ಪ್ರಕಟಣೆಗಳನ್ನು ಸ್ವಾಗತಿಸುವುದಕ್ಕೆ ಪ್ರೇರಣೆಯಾಗಬೇಕು. ಅವರ ಜ್ವೈಗ್ಗನಿಗೆ ಕೀರ್ತಿ ತಂದುಕೊಟ್ಟದ್ದು "ಜೆರೆಮಿಯಾ" ಎಂಬ ನಾಟಕ. ಇದರಲ್ಲಿ ಮಹಾ ಯುದ್ಧದ ಹತ್ಯಾಕಾಂಡದ ಬಗ್ಗೆ ತೀವ್ರ ಹೇಯ ಹಾಗೂ ಜುಗುಪ್ಸಾ ಭಾವನೆ ಕವಿಯ ಮನಸಿನಲ್ಲಿ ತುಂಬಿ ಕೊಂಡದ್ದೂ ಅದು ಶಾಂತಿಯ ಬಾವುಟವನ್ನು ಹಿಡಿದು ನಡೆದುದೂ ವ್ಯಕ್ತವಾಗುತ್ತದೆ. ಜ್ವೈಗ್ಗನು ಚರಿತ್ರಕಾರನು, ಕಾದಂಬರಿಕಾರನು; ಮುಖ್ಯತಃ ಕತೆಗಾರ

ನು. "ಜಾಗತಿಕ ದೃಷ್ಟಿ ಜಾಗತಿಕ ಶಾಂತಿ ಇವೇ ಅವರ ಜೀವನದ ಹಾಸುಹೊಕ್ಕು." ಯುದ್ಧಗಳ ಬಗೆಗಿರುವ ಅವರ ತಾತ್ಸಾರ ಹಾಗೂ ಜಗತ್ತು ಒಂದೆನ್ನುವ ಅವರ ಮನೋಭಾವ "ಅವಳ ಗಂಡ" ಎಂಬ ಕೊನೆಯ ಕತೆಯಲ್ಲಿ ಸಮಂಜಸವಾಗಿ ಚಿತ್ರಿಸಲ್ಪಟ್ಟಿದೆ. ಸಾಮಾನ್ಯ ವ್ಯಕ್ತಿಯ ಪಾಲಿಗೆ ಯುದ್ಧ ಹಾಗೂ ತತ್ಪರಿಣಾಮವಾದ ಛೇದ—ಬಂಧನಗಳು ಎಷ್ಟು ಅಸಹ್ಯ ಮತ್ತು ಯಾತನೆ—ವ್ಯಕ್ತಿಗಳು, ದೇಶ—ದೇಶಗಳೇ ಎಷ್ಟು ಅನ್ಯಾಯ ಮಾಡಿದೆ ಎಂಬುದನ್ನು ಇಲ್ಲಿ ನೋಡುತ್ತೇವೆ. ಜ್ವೈಗ್ನು ಈ ಉದ್ದೇಶದಿಂದಲೇ ಪ್ರಾಣವನ್ನು ನೀಗಿದನು. ಆ ವರೆಗೆ ಅವರ ಕತೆಗಳಲ್ಲಿ—ಕೃತಿಗಳಲ್ಲಿ ಎಷ್ಟು ಕಾಣುವ ಗುಣಗಳೆಂದರೆ—ಸಾರಾಸಾರ ವಿಚಾರ, ಜಾಣ್ಮೆ, ಸುಖ, ದುಃಖ; ಧೀರಕವಾದ ದೃಷ್ಟಿ—ಒಳನೋಟ; ಹಾಗೂ ವಿವೇಕ ಪೂರ್ವಕವಾದ ಸಹೃದಯತೆ" ಜ್ವೈಗ್ಗರ ಬರಹಗಳ ಒಳಹೊಕ್ಕಿರುವ ಈ ಗುಣ ವಿಶೇಷಗಳೆಲ್ಲವನ್ನೂ ಈ ಸಂಗ್ರಹದ "ಅಪರಿಚಿತ ಪ್ರೇಯಸಿ" ಎಂಬ ಕತೆಯಲ್ಲಿ ಕಾಣಬಲ್ಲೆವು. ಗಂಡಿನ ಸ್ವಭಾವದಲ್ಲಿ ಇಂಥ ಒಂದು ಹೆಣ್ಣು ಜೀವದ ಬಾಳ ಮನದ ಬೇಗುದಿಯ ಒಂದೊಂದೇ ಪದರನ್ನು ಬಿಚ್ಚಿತೋರಿಸಿದ್ದು ಕೇಳುವಾಗ ಜ್ವೈಗ್ಗರ ಕಥನ ಕಲೆಯ ಪೂರ್ಣದರ್ಶನವಾಗುತ್ತದೆ. ಜ್ವೈಗ್ಗರ ಸಾಹಿತ್ಯ ಅಂತಃಕರಣದ ಸೂಕ್ಷ್ಮವಾದ ಭಾವನಾ ವಿಲಾಸಗಳನ್ನು ಕುರಿತು ಮಾರ್ಮಿಕವಾಗಿ ವಿಶ್ಲೇಷಿಸುತ್ತದೆ. ಅವರ ಕತೆಯ ಅಂತರಂಗವೇ ಇದೆಂದರೂ ಸಲ್ಲುತ್ತದೆ. "ಕಂಬನಿಯ ಕಣ್ಣು" ಮತ್ತು "ಪಶ್ಚಾತ್ತಾಪ" ಎಂಬೆರಡು ಕತೆಗಳು ಇದಕ್ಕೆ ಜೋಗ್ಯ ನಿದರ್ಶನ. ಅವರಂತೆ ವ್ಯಕ್ತಿತ್ವದ ವಿಶ್ಲೇಷಣೆ ಮತ್ತು ನಿರೂಪಣೆಯೂ ಜ್ವೈಗ್ಗರ ಅಭಿಲಾಷೆ ಹಾಗೂ ಅಭಿರುಚಿಗಳಾಗಿರುತ್ತವೆ. "ಅದೃಶ್ಯ ಚಿತ್ರ ಸಂಗ್ರಹ" ಹಾಗೂ "ಕತೆಯ ಕೊನೆ" ಇವೆರಡೂ ವ್ಯಕ್ತಿಯ ಒಳಹುರುಳ ಅಭಿರುಚಿ—ವಿಲಾಸಗಳ ಮೇಲೆ ಬೆಳಕು ಚೆಲ್ಲುವಂತಿವೆ. ಇಲ್ಲಿಯ ಕತೆಗಳಲ್ಲಿ ಜ್ವೈಗ್ಗರು ಕಥನ ಕಲೆಯಲ್ಲಿ, ಸಾಹಿತ್ಯ ಸೃಷ್ಟಿಯಲ್ಲಿ ಸಾಧಿಸಿರುವ ಅತ್ಯಪೂರ್ವ ಸಿದ್ಧಿಯನ್ನು ನೋಡಿ ಓದುಗರಿಗೆ ಸಂತೋಷ ಉಕ್ಕೇರುತ್ತದೆ. ಈ ಸಂತೋಷವನ್ನು ಇಮ್ಮಡಿ ಹೆಚ್ಚಿಸುವಂತೆ, ಶ್ರೀಮಾನ ಬಸವರಾಜರು ಸುಲಭವೂ ಸರಳವೂ ಲಲಿತವೂ ಸುಂದರವೂ ಆದ ಶೈಲಿಯಲ್ಲಿ ಈ ಕತೆಗಳನ್ನು ಕನ್ನಡಕ್ಕೆ ಅನುವಾದಿಸಿರುವರು. ಮುಂಬಯಿಯಲ್ಲಿ ನೆಲಸಿದ ಹೊರನಾಡ ಕನ್ನಡಿಗರು ಕೈಗೊಂಡ ಇಂಥ ಪ್ರಯತ್ನವನ್ನು ಕನ್ನಡ ನಾಡಿನ ಬೇರೆ ಪ್ರಕಾಶಕರೂ ಅನುಕರಿಸಿದಲ್ಲಿ, ಕನ್ನಡದ ದೊಡ್ಡ ಕೊರತೆಯೊಂದು ದೂರಾಗುವುದು. ಅಂಥ ಸ್ಫೂರ್ತಿಯನ್ನು ಕೊಟ್ಟುದಕ್ಕೆ ಭಾರತೀ ಪ್ರಕಾಶನ ಮಂದಿರಕ್ಕೆ ನಾವು ಕೃತಜ್ಞರು.

ತಾ. 21—10—53ರಲ್ಲಿ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರ್‌ನಲ್ಲಿ ದ. ಕ. ಜಿಲ್ಲಾ ಗೌಡರ ಸಮಾಜದ ಸಮ್ಮೇಳನವು ಜರಗಿದಾಗ ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಅವರು ಉದ್ಘಾಟನಾ ಭಾಷಣ ಮಾಡುತ್ತಿರುವುದನ್ನೂ ಅಧ್ಯಕ್ಷ ಶ್ರೀ. ಬಿ. ಮೋಹನಪ್ಪ ಬಂಗೇರಾಯರು ಕುಳಿತಿರುವುದನ್ನೂ ಇಲ್ಲಿ ನೋಡಬಹುದು.

THE MAHARASHTRA APEX BANK, LTD.

(Incorporated in India. Liability of Shareholders Limited.)

"Ramanjaneya Building", UDIPI, S. Kanara.

* * * * * * *

NOTICE

NOTICE is hereby given that an Extra-ordinary General Meeting of the shareholders of the Bank will be held at the Registered Office of the Bank at "Ramanjaneya Building", Udipi, on Monday the 23rd November, 1953 at 4 p. m. for the purpose of considering and if thought fit passing the following resolutions as Special Resolutions:

"Resolved that the assets and liabilities of the Bank be transferred to The Canara Industrial & Banking Syndicate, Ltd., Udipi, in terms of the agreement, the draft of which is attached hereto and that the Board of Directors be authorised to execute the agreement between this bank and the Syndicate.

Resolved that the Board of Directors be empowered to carry out the terms of the agreement by executing and accepting the necessary deeds, documents, conveyances, transfers etc., in full *compliance with the Articles of Association of the Bank."*

The presence of all the shareholders of the Bank at the said meeting is earnestly solicited. If, however, a shareholder is unable to attend the meeting in person, he may appoint a shareholder of the Bank as his proxy by sending the proxy form duly stamped with revenue stamp of the value of two annas and duly signed and attested, so as to reach the Registered Office of the Bank by 4 p. m. of the 20th November, 1953.

(By Order of the Board,)

"Ramanjaneya Building,"
UDIPI,
Dated: 22nd October, 1953.

K. Panduranga Pai,
Chairman.

DRAFT OF THE AGREEMENT TO BE ENTERED INTO BY AND BETWEEN THE CANARA INDUSTRIAL & BANKING SYNDICATE, LTD., AND THE MAHARASHTRA APEX BANK, LTD.

AGREEMENT made and executed this the..................day of November, 1953 between the Canara Industrial & Banking Syndicate Ltd., incorporated under the Indian Companies Act, with its registered Head Office at Udipi, South Kanara District, hereinafter called the Syndicate, of the one PART and the Maharashtra Apex Bank Ltd., a public limited liability Banking Company, registered under the Indian Companies Act and having its registered Head Office at Udipi, South Kanara District hereinafter called the Apex Bank of the OTHER PART.

WHEREAS it is deemed expedient to transfer the business undertaking of the Apex Bank unto the Syndicate, in order to render better banking service as ... hereinafter appearing.

NOW these presents witness and it is hereby agreed by and between the Syndicate and the Apex Bank as follows

That the Syndicate shall take over from the Apex Bank all its liabilities to its depositors and creditors and accept the assets of the Apex Bank of an equal value.

That the Apex Bank shall transfer and make over to the Syndicate and the Syndicate shall take over from the Apex Bank all the liabilities and obligations of the Apex Bank to its depositors and creditors on the same terms on which the Apex Bank holds the said various accounts and the Syndicate shall on and after such transfer pay and discharge the various moneys due to depositors and creditors of the Apex Bank as shown by their respective accounts with the Apex Bank.

In consideration of the premises the Apex Bank shall deliver, assign and transfer to the Syndicate such of the assets of the Apex Bank of a value equal to the amounts of the total liability to be taken over by the Syndicate as may be mutually agreed upon between the Apex Bank and the Syndicate. Valuation of assets is to be done at the market value of the securities for the Investments on G. P. Notes held by the Apex Bank, and with regard to the immoveable properties at the book value and with regard to the other assets, necessary to make up the amount to be certified to be good by the Auditor of the Apex Bank.

The Apex Bank shall execute such transfers, endorsements or documents as may be necessary in favour of the Syndicate in respect of such assets, as may be necessary to completely and effectually vest such assets in the Syndicate

The transfer of such liabilities and making over of the assets will be completed as on the close of the business of the Apex Bank on 30th November 1953.

On and after the 1st day of December, 1953 the Apex Bank shall not carry on any banking business except to the extent necessary for the realisation of its residuary and other assets and convert the same into cash.

That the Managing Directors respectively of the two Banks shall decide upon all the necessary details, drafts of conveyances, transfers and endorsements and all other incidental matters for effectually carrying out the terms of this agreement.

IN WITNESS WHEREOF the common seals of the Canara Industrial & Banking Syndicate Ltd., and the Maharashtra Apex Bank, Ltd., have been hereunto affixed this the.......................... day and year first herein-above written.

ವಾರದ ಒಳಿತು ಕೆಡುಕುಗಳು

ತಾ. ೧೯—೧೧—೫೩ರಿಂದ ತಾ. ೨೫—೧೧—೫೩ರ ವರೆಗೆ.

ಮೇಷ: ನಿರಾಶೆಯ ಕಾಲವು ದೂರವಾಯಿತು. ಸದ್ಯ ನಿಮ್ಮ ಒಂದೊಂದೇ ಆಶಾಕಾಂಕ್ಷೆಗಳು ಕಾರ್ಯರೂಪಕ್ಕೆ ಬರಲಿವೆ. ಕಷ್ಟಸಾಧ್ಯವಾದ ಕಾರ್ಯವು ಕೂಡ ನಿಮ್ಮ ಸಾಹಸದಿಂದಾಗಿ ಫಲಕಾರಿಯಾಗಲಿದೆ. ವಿದ್ಯಾರ್ಥಿಗಳಿಗೂ ಶ್ರಮಜೀವಿಗಳಿಗೂ ಕಾಲವು ಅನುಕೂಲವಾಗಿ ಪರಿವರ್ತಿಸಲಿದೆ. ಮಕ್ಕಳ ಆರೋಗ್ಯದತ್ತ ಸ್ವಲ್ಪ ನಿಗಾ ಕೊಡಿರಿ. ಸನ್ಮಿತ್ರ ಬಂಧುಜನರ ಆಶ್ರಯಬಲದಿಂದಾಗಿ ತಾ. 19, 20, 23, 24 ಈ ದಿನಗಳಲ್ಲಿ ವಿಜಯ ಲಾಭ ಸುಖಗಳನ್ನು ಪಡೆವಿರಿ.

ವೃಷಭ:— ನಿಮ್ಮ ನಿತ್ಯಜೀವನದಲ್ಲಿ ಕೊಂಚ ಬಿಕ್ಕಟ್ಟು ಕಾಣಿಸಲಿದೆ. ಮಾಡಿದ ಕೆಲಸಕ್ಕೆ ತಕ್ಕ ಫಲ ಕಾಣಿಸದು. ಕೆಲವೊಮ್ಮೆ ಹಿಂದು ಮುಂದಿನ ದೂರಾಲೋಚನೆ ಮಾಡದೆ ದುಡುಕಿ ವ್ಯರ್ಥನಷ್ಟಕ್ಕೊಳಗಾಗುವ ಸಂಭವವೂ ಇದೆ. ವ್ಯಾಪಾರದಲ್ಲಿ ವಿಶೇಷತಃ ಜಾಗ್ರತೆ ವಹಿಸಬೇಕಾಗಿದೆ. ಗೃಹಕೃತ್ಯ ವಿಚಾರದಲ್ಲೇನ ಕೊರತೆಯೂ ಇಲ್ಲದ್ದರಿಂದ ನಿಶ್ಚಿಂತೆಯಾಗಿರಬಹುದು. ಭೃತ್ಯಜನತೆಗೀ ಕಾಲವು ಉತ್ತಮವೆಂದೇ ಹೇಳಬೇಕು. ತಾ. 21, 22, 25 ಇಷ್ಟು ದರಲ್ಲಿ ಉತ್ತಮ.

ಮಿಥುನ: ಕೃಷ್ಣಪಕ್ಷದ ಚಂದ್ರನಂತೆ ನಿಮ್ಮ ಅದೃಷ್ಟವಿಂದು ಹ್ರಾಸವಾಗುತ್ತಾ ಬರುತ್ತಲಿದೆ. ಖರ್ಚು ಅತಿಯಾಗಿ ಆದಾಯವು ಅಲ್ಪವಾಗುವುದರಿಂದ ನಿತ್ಯಜೀವನದ ಸಲುವಾಗಿ ಹೆರವರ ಕೂಡೆ ಸಾಲ ಕಡ ಮಾಡಬೇಕಾಗಿ ಬರುವದು. ಸತಿಪತಿಗಳಲ್ಲೂ ತಂದೆ ಮಕ್ಕಳಲ್ಲೂ ಪರಸ್ಪರ ಮನಸ್ತಾಪ ಕಲಹಗಳಿಗೆಡೆಯುಂಟಾದೀತು. ಕುಜನರ ಸಹವಾಸದಿಂದಾಗಿ ಮಾನಹಾನಿ ಅರ್ಥಕ್ಷಯಗಳಿಗೆ ಗುರಿಯಾದೀರಿ. ತಾ. 19, 20, 23, 24 ಇದ್ದು ದರಲ್ಲಿ ಕ್ಷೇಮಕಾರಿಗಳು.

ಕರ್ಕಟಿ:— ಬಹುಮಟ್ಟಿಗೆ ನಿಮ್ಮ ಅನಿಷ್ಟಗಳು ದೂರವಾಗಲಿವೆ. ಇಷ್ಟಜನರ ಮತ್ತು ಮಹಾತ್ಮರ ಸಹಾಯದಿಂದಾಗಿ ನೀವು ಕೈಗೊಂಡ ಕಾರ್ಯಗಳು ಸಕಾಲದಲ್ಲಿ ನಿರ್ವಿಘ್ನದಿಂದ ಕೊನೆಮುಟ್ಟುವವು. ನಿಮ್ಮ ಭಾಗಕ್ಕೆ ಅಸಾಧ್ಯವೆಂಬ ಕಾರ್ಯವಾವುದೂ ಇರಲಾರದು. ಆದರೆ ನಿಸರ್ಗತಃ ಚಂಚಲವಾದ ಮನಸ್ಸು ದುರ್ಮಾರ್ಗದತ್ತ ನಿಮ್ಮನ್ನು ಸೆಳೆಯಲಿದೆ. ಪ್ರವಾಸಕ್ಕೀ ಕಾಲವು ಚೆನ್ನಾಗಿರುವುದಿಲ್ಲವು. ವಾರಾದಿಯ 4 ದಿನಗಳಲ್ಲಿ ನಿಮ್ಮ ಬಯಕೆಯು ಈಡೇರಲಿದೆ.

ಸಿಂಹ:— ಕಾಲವು ಗತಿಸಿದಂತೆ ನಿಮ್ಮ ಪರಿಸ್ಥಿತಿಯಲ್ಲೂ ಸ್ವಲ್ಪ ಬದಲಾವಣೆಗಳು ಕಾಣಿಸುತ್ತಿವೆ. ಹಿಂದಿನ ಸ್ಥಾನಮಾನಗಳಿಂದ ನಿಮಗೆ ಲಭಿಸಲಾರವು. ಧನಾಗಮವೂ ಮುಂಚಿನಂತೆ ಕಾಣಿಸದು ಆದರೆ ಹಣದ ಮುಗ್ಗಟ್ಟಿಗವಕಾಶವಿಲ್ಲವು. ರಾಜಕೀಯ ರಂಗದಲ್ಲಿ ನಿರೀಕ್ಷಿಸಿದಂತೆ ಫಲ ಲಭಿಸಲಾರದು. ಆದರೂ ಶತ್ರುಜನರ ಕಾಟದಿಂದ ಮುಕ್ತರಾಗುವಿರಿ. ಆರೋಗ್ಯವು ತೃಪ್ತಿಕರವಾಗಿರುವುದು. ತಾ. 21 ರಿಂದ 24ರ ವರೆಗಿನ ದಿನಗಳು ಅನುಕೂಲ.

ಕನ್ಯಾ:— ಅಲ್ಪ ಪರಿಶ್ರಮದಿಂದ ಅಧಿಕ ಫಲ ಲಾಭವನ್ನು ಹೊಂದುವಿರಿ. ಅರ್ಥಸ್ಥಾನದಲ್ಲಿ ಶನೈಶ್ಚರನಿದ್ದರೂ ನಿಮ್ಮ ಧನಾಗಮಕ್ಕೆ ತೊಡಕುಂಟಾಗದು. ಭೃತ್ಯವರ್ಗದವರಿಂದಾಗಿ ನಿಮ್ಮ ಸಂಪದ್ಭಾಗವು ವೃದ್ಧಿ ಹೊಂದಲಿದೆ. ಶತ್ರುಗಳ ಕಾಟವು ಎಂದಿನಂತೆಯೇ ಇರುವದು. ಆರೋಗ್ಯದತ್ತ ಸ್ವಲ್ಪ ಗಮನಿಸಿರಿ. ವಾಹನಾದಿಗಳಲ್ಲಿ ಪ್ರಯಾಣದಲ್ಲಿ ಆಕಸ್ಮಿಕ ಅಪಘಾತಾದಿಗಳು ಸಂಭವಿಸ್ಯಾವು. ಕೊಂಚ ಜಾಗರೂಕರಾಗಿರಿ. ವಾರಾಂತ್ಯದ 3 ದಿನಗಳು ವಾಂಛಿತಾರ್ಥ ಪ್ರದಗಳಿವೆ.

ತುಲಾ:— ಪ್ರತಿಯೊಂದು ಭಾಗದಲ್ಲೂ ದಿನೇ ದಿನೇ ಬಿಕ್ಕಟ್ಟು ಹೆಚ್ಚಲಿದೆ. ನೆನೆದ ಕಾರ್ಯವೊಂದೂ ಸಿದ್ಧಿಸದು. ಧನಪತಿಯಾದ ಅಂಗಾರಕನು ವ್ಯಯದಲ್ಲಿ ನಿಂತ ಕಾರಣ ಆದಾಯವು ಕಡಿಮೆಯಾಗುತ್ತಾ ಬರುವುದಲ್ಲದೆ ಖರ್ಚು ಹೆಚ್ಚುತ್ತಾ ಹೋಗಲಿದೆ. ಆಹಾರದೋಷದಿಂದಾಗಿ ಆರೋಗ್ಯವೂ ಕೆಡಲಿದೆ. ವಿಷ ಅಗ್ನಿ ಇವುಗಳ ಭಯಕ್ಕವಕಾಶವಿದೆ. ವಿನಾ ಕಾರಣ ವಾಕ್ಕಲಹ ಆಪ್ತೇಷ್ಟ ವರ್ಗದವರ ವಿಯೋಗ ಇವುಗಳಿಂದಾಗಿ ಮನಸ್ಸಿಗೆ ನೆಮ್ಮದಿಯಿರದು. ಆಪ್ತ ಮಿತ್ರರಲ್ಲಿ ಮನಸ್ತಾಪವುಂಟಾದೀತು. ಆದರೂ ತಾ 19, 20, 25 ಈ ದಿನಗಳಲ್ಲಿ ಕಾರ್ಯಲಾಭ ಶತ್ರುಜಯ ಸುಖಗಳುಂಟಾಗುವವು.

ವೃಶ್ಚಿಕ:— ಸದ್ಯ ನಿಮ್ಮ ತಾಪತ್ರಯಗಳು ಕೆಲಮಟ್ಟಿಗೆ ದೂರವಾಗಲಿವೆ. ಹಿಡಿದ ಕಾರ್ಯದಲ್ಲಿ ವಿಜಯವು ಕೀರ್ತಿಯೂ ಲಭಿಸುವದು. ಒಳ್ಳೇ ಮಾತುಗಳಿಂದಾಗಿ ಜನಪ್ರಿಯರಾಗುವಿರಿ. ಹಲವಾರು ತೆರದಿಂದ ಧನವು ಕೈಸೇರಲಿದೆ. ಹೆಚ್ಚೇಕೆ ನಷ್ಟವಾದ ವಸ್ತು ಒಡವೆಗಳೂ ಧನವೂ ಪುನಃ ಕೈಸೇರೀತು. ಆದರೂ ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಅನರ್ಥಗಳು ನಿಮ್ಮ ಮನೋ ನೆಮ್ಮದಿಗೆ ಭಂಗಕಾರಿಗಳಾಗಿವೆ. ವಾರಾದಿಯ 4 ದಿನಗಳಲ್ಲಿ ನಿಮ್ಮ ವಾಂಛಿತಾರ್ಥಗಳು ಈಡೇರುವವು.

ಧನು:— ಪರಿಸ್ಥಿತಿಯು ಮುಂಚಿನಂತೆ ನಿಲ್ಲಲಾರದು. ಖರ್ಚಿನ ಭಾಗದಲ್ಲಿ ಹತೋಟಿಯನ್ನಿಡಿರಿ. ದೈವ ದೇವರು ಗುರುಹಿರಿಯರು ಧರ್ಮ ಕರ್ಮ ಮೊದಲಾದವುಗಳಲ್ಲಿ ವಿಶ್ವಾಸಾದರವುಳ್ಳ ಜನತೆಗೆ ಹೆಚ್ಚಿನ ಹಾನಿ ಸಂಭವಿಸದು. ಪಶುಭೃತ್ಯಾದಿಗಳಿಂದ ಕೂಡಿದ ಗೃಹಪರಿವಾರದಲ್ಲಿ ಏನೂ ಕುಂದು ಕೊರತೆಗಳು ಕಾಣಿಸವು. ಮುಂಗೋಪದ್ದೆಸೆಯಿಂದಾಗಿ ಕೆಲವೊಮ್ಮೆ ವಾಕ್ಕಲಹಕ್ಕೆ ಸಿಲುಕಲಿರುವಿರಿ. ತಾ 21ರಿಂದ 24ರ ವರೆಗಿನ ದಿನಗಳು ಸಾಕಷ್ಟು ಉತ್ತಮವಿರುವವು.

ಮಕರ:— ದುರ್ದಿನಗಳು ದೂರ ಸರಿಯುತ್ತಲಿವೆ. ನಿಮ್ಮ ಸಂಕಲ್ಪಗಳನ್ನು ಕಾರ್ಯರೂಪಕ್ಕೆ ತರಲು ಕಾಲವೀಗ ಸನ್ನಿಹಿತವಾಗಿದೆ. ಯಾವ ಕಾರ್ಯದಲ್ಲೂ ನಷ್ಟವುಂಟಾಗದು. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ಪ್ರಯತ್ನಕ್ಕಿಂತ ಅಧಿಕವಾದ ಫಲವನ್ನು ಪಡೆವಿರಿ. ಆದರೆ ಉಷ್ಣ ಪಿತ್ಥ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಸ್ವಲ್ಪ ಧಕ್ಕೆ ತಗಲೀತು. ದೇಹದಲ್ಲಿ ದೌರ್ಬಲ್ಯವು ಕೂಡ ಹೆಚ್ಚಲಿದೆ. ವಾರಾಂತ್ಯದ 3 ದಿನಗಳು ದೈವಾನುಗ್ರಹವು ಚೆನ್ನಾಗಿರುವ ನಿಮಿತ್ತ ಸಕಲ ಕಾರ್ಯಗಳಲ್ಲೂ ವಿಜಯ ಲಾಭವನ್ನು ಪಡೆಯುವಿರಿ.

ಕುಂಭ:— ಪರಿಸ್ಥಿತಿಯು ಕ್ಷಣೇ ಕ್ಷಣೇ ಬಿಕ್ಕಟ್ಟಿನತ್ತ ಸರಿಯುತ್ತದೆ. ಈಗಿಂದೀಗಲೇ ಮುಂಜಾಗರೂಕತೆ ವಹಿಸಿದರಾಯಿತು. ಇಲ್ಲದಲ್ಲಿ ಕಷ್ಟ ನಷ್ಟ ಅಪವಾದಗಳಿಗೆ 'ಸಿಲುಕಿ ಪಶ್ಚಾತ್ತಾಪಕ್ಕೆ ಗುರಿಯಾದೀರಿ.' ಶತ್ರುವೃಂದವು ಪ್ರತೀಕಾರ ನಿರ್ವಹಿಸಲು ಕಾಲ ನಿರೀಕ್ಷಿಸುತ್ತಿರುವುದು. ವಿದ್ಯಾಕೀರ್ತಿಗಳಿಗೆ ಹಾನಿತಟ್ಟುವ ಸಂಭವವಿದೆ. ಶ್ರಮಜೀವಿಗಳಿಗೂ ವೈದ್ಯ ವ್ಯಾಪಾರಿಗಳಿಗೂ ಪರಿಶ್ರಮಕ್ಕೆ ತಕ್ಕ ಫಲ ಲಭಿಸೀತು. ತಾ. 19, 20, 25 ಈ 3 ದಿನಗಳು ಉಳಿದ ದಿನಗಳಿಗಿಂತ ಲೇಸು.

ಮೀನ:— ದೈನಂದಿನದ ವ್ಯವಹಾರಗಳು ಎಂದಿನಂತೆಯೇ ಇರುವವು. ಹಿಡಿದ ಕಾರ್ಯಕ್ಕೆ ನಾನಾತರದಿಂದ ವಿಘ್ನಗಳುಉಪಸ್ಥಿತವಾಗಲಿವೆ. ಅರ್ಧಾಂಗಿಯು ಕೂಡೆ ನಿತ್ಯ ಕಲಹವಾಗುವದು. ಅನಿರೀಕ್ಷಿತವಾಗಿ ಧನ ಸಿಗುವ ಯೋಗವಿದೆ. ಆಪ್ತೇಷ್ಟ ಜನರ ವಿಯೋಗ ದುಃಖಕ್ಕೆ ಗುರಿಯಾಗುವಿರಿ. ವಾರದಲ್ಲಿನ ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆಯಬೇಕಾಗಿ ಬರುವದು. ವಾತ ಪ್ರಕೋಪದಿಂದ ಅಂಗಾಂಗಗಳಲ್ಲಿ ನೋವು ಕಂಡೀತು. ತಾ. 21, 22, ಈ 2 ದಿನಗಳು ಇತರ ದಿನಗಳಿಗಿಂತ ಉತ್ತಮವಿದೆ.

(೧ನೇ ಪುಟದಿಂದ)

ವ್ಯಕ್ತಿ ತನ್ನ ಜವಾಬ್ದಾರಿ ತಿಳಿದುಕೊಂಡು ನಡೆದರೆ,ಸಮಷ್ಟಿಯ ಹಿತ ತನ್ನಿಂದತಾನೇ ಕೈಗೂಡುತ್ತದೆ. ಭಾರತಕ್ಕೆ ಈ ಪದ್ಧತಿ ಹೊಸತೆಂಬುದು, ಮತ್ತು ಪ್ರಜಾಪ್ರಭುತ್ವ ಪದ್ಧತಿ ರೂಢವಾಗಲು ಕಾಲಾವಧಿ ಬೇಕೆನ್ನುವುದು ಮಾತ್ರ ಭಾರತಕ್ಕೆ ಆತಂಕಪ್ರಾಯವಾದೀತು. ಇದನ್ನು ನಿವಾರಿಸುವುದೇ ನಮ್ಮ ಧ್ಯೇಯವಾಗಬೇಕು. ಈಗಿಂದಲೇ ನಾಳೆಯ ಯೋಜನೆ ಮಾಡಬೇಕೆನ್ನುವುದು ಈ ದೃಷ್ಟಿಯಿಂದ. ನಾವೇ ನೆಹರೂ ಏಕಾಗಕೂಡದು? ಎಂಬ ಛಲ ಮತ್ತು ಜನಿತವಾದ ಕಾರ್ಯೋತ್ಸಾಹ ಹಾಗೂ ಪ್ರಯತ್ನಶೀಲತೆಗಳು ನಮ್ಮ ವ್ಯಕ್ತಿತ್ವವನ್ನು ದೃಢವಾಗಿಸುವುದು ನಿಶ್ಚಯ. ಉತ್ತಮ ವ್ಯಕ್ತಿತ್ವವೇ ಪ್ರಗತಿ ಮತ್ತು ಉತ್ಕರ್ಷದ ಮೂಲಾಧಾರ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F DS.(N.J.)
CALCUTTA. 40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಜುಮ್ಲಾ ವಹಿವಾಟು .... ,, **60,50,000**

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ.ಎ.ಬಿ.ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಗರ್ಭ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

WANTED

District Development Officers on Rs. 250/-. Plus Rs 150/- car allowance. Apply with testimonials to:
Indian Dominion Airways Limited, 6 3, Madan Street
CALCUTTA.

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment

ನವಯುಗ

Vol.33 No 13 26-11-1953 ವರ್ಷ ೩೩ ವಾರ ೧೩

ಅತೃಪ್ತಿಯೇ ಅನ್ವೇಷಣೆಗೆ ಪ್ರೇರಕವೆಂದು ಆಂಗ್ಲನಾಣ್ನುಡಿ ಹೇಳುತ್ತದೆ ನಮ್ಮ ದೇಶದಲ್ಲಿ ಈಗ ಪ್ರಬಲವಾಗಿರುವ ಭಾಷಾ ಘಟಕಗಳ ನಿರ್ಮಾಣವಾಗಬೇಕೆನ್ನುವ ಬೇಡಿಕೆಯು ಮೂಲದಲ್ಲಿರುವುದಾದರೂ ಒಂದು ಬಗೆಯ ಅತೃಪ್ತ ಮನೋಭಾವನೇ ನಿಜ ಮದ್ರಾಸಿನಲ್ಲಿಯಾಗಲೀ ಮುಂಬಯಿ-ಹೈದರಾಬಾದುಗಳಲ್ಲಾಗಲೀ ಕನ್ನಡಿಗರು ಅಲ್ಪಸಂಖ್ಯಾಕರೆಂಬ ಕಾರಣದಿಂದ ಜನಿತವಾದ ಅಸಮಾಧಾನ ಭಾವನೆಯೇ ವೈವಿಧ್ಯಗಳನ್ನೊಳಗೊಂಡ ಸಂಯುಕ್ತ ಕರ್ನಾಟಕವೆಂಬ ಧ್ವನಿಯನ್ನು ಹೊರಡಿಸಿದೆ ಇದರಂತೆ ಏಕ ಭಾಷೆ ಮತ್ತು ಸಮಾನ ಸಂಸ್ಕೃತಿಯ ಮೋಹವೂ ರಾಜಕೀಯರಂಗದಲ್ಲಿ ಪ್ರಬಲ ಪರಿವರ್ತನೆಯನ್ನು ಉತ್ಪಾದಿಸುತ್ತದೆ ಆಂಧ್ರರು ಮದ್ರಾಸಿನಿಂದ ಬೇರೆಯಾಗಿ ಹೋದುದು ಇದಕ್ಕೊಂದು ನಿದರ್ಶನ ಹಾಗೆಂದು ಹೀಗೆ ಬೇರೆಯಾದೊಡನೆಯೇ ಅವರು ಸುಮ್ಮನಾಗಿ ಉಳಿಯುವರೆಂದು ಹೇಳಲು ಬರುವುದಿಲ್ಲ ಸ್ವಯಂ ಉದ್ಧಾರದ ಪೂರ್ಣ ಅವಕಾಶ ದೊರೆಯುವುದಕ್ಕೋಸ್ಕರ ಪ್ರತ್ಯೇಕ ರಾಜ್ಯ ನಿರ್ಮಾಣದ ಬೇಡಿಕೆಯನ್ನು ಮುಂದಿಟ್ಟ ಆಂಧ್ರರು ಈಗ ವಿಶಾಲಾಂಧ್ರದ ರಚನೆಯಾಗದೆ ವಿರಮಿಸಲ್ಲವೆಂದು ಬೊಬ್ಬೆ ಹೊಡೆಯುತ್ತಿರುವುದನ್ನು ಕಾಣುತ್ತೇವೆ "ಕರ್ನೂಲಿನಿಂದ ಹೈದರಾಬಾದಿಗೆ" ಎಂದವರು ಘೋಷಣೆ ಹೊರಡಿಸುತ್ತಿರುವುದನ್ನು ಕೇಳಿದರೆ, ಆಂಧ್ರರ ಮನದ ಅಭಿಲಾಷೆ ಇನ್ನೂ ಪೂರ್ತಿಯಾಗಿ ನೆರವೇರಲಿಲ್ಲವೆಂದು ವ್ಯಕ್ತವಾಗುತ್ತದೆ

ಬಹು ಸಂಖ್ಯೆಯ ಆಂಧ್ರರು ಪ್ರತ್ಯೇಕ ರಾಜ್ಯದ ಅನುಕೂಲತೆಯನ್ನು ಪಡೆದುಕೊಂಡಾಗ ತಮಗಿರುವ ಈ ಸೌಲಭ್ಯ ಮತ್ತು ಸೌಕರ್ಯಗಳನ್ನು ಬೇರೆ ರಾಜ್ಯದಲ್ಲಿ ಅಲ್ಪ ಸಂಖ್ಯಾಕರಾಗಿ ನರಳುತ್ತಿರುವ ಸ್ವಭಾಷಾ ಬಂಧುಗಳಿಗೆ ಒದಗಿಸಿ ಕೊಡಲೇಬೇಕೆಂಬ ಸಹಾನುಭೂತಿಯ ಮನೋಭಾವ ಸ್ವಾಭಾವಿಕವಾಗಿಯೇ ಮೂಡುತ್ತದೆ ಒಂದು ರೀತಿಯಲ್ಲಿ ಈ ಸಹಾನುಭೂತಿ, ಈ ಕನಿಕರ ಈ ಬೇಡಿಕೆಗಳಲ್ಲಿ ರಾಜಕೀಯ ತಂತ್ರಗಳಾಗಿರುತ್ತವೆ

ರಾಜಾಜಿಯವರು ಬಡತನ ಮತ್ತು ರೋಗಗಳೇ ಮಾನವ ಜನತೆಯ ಶತ್ರುವೆಂದೂ ಈ ಕೊಳಚೆ ನೀರು ಸದಾಕಾಲ ಇರುವಂತೆ ನೋಡಿಕೊಳ್ಳುವುದೇ ಕಮ್ಯೂನಿಸ್ಟರ ನಿಜೋದ್ದೇಶವೆಂದೂ ಹೇಳಿದುದಿದೆ ಕಮ್ಯೂನಿಸ್ಟರು ಬಡವರ ಉದ್ಧಾರ, ಅಸಮಾನತೆಯ ನಿರ್ಮೂಲನ ಮುಂತಾದ ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತಿದ್ದರೂ ತಮರ ಕೃತ್ಯಗಳು ಸಮಾಜದಲ್ಲಿ ಕೊಳಚೆ ಸದಾ ಕಾಲ ನೆಲೆಗೊಳ್ಳುವ ತಂತ್ರವನ್ನೇ ವ್ಯಕ್ತಗೊಳಿಸುತ್ತವೆಂದು ರಾಜಾಜಿಯವರ ಅಭಿಪ್ರಾಯ ಬಡತನ ಮತ್ತು ರೋಗಗಳು ಯಾವಾಗಲೂ ಇರುವಂತೆ ನೋಡಿಕೊಳ್ಳುವುದರಿಂದಲೇ ಜನರು ಅವುಗಳ ನಿವಾರಣೆಯಾಗಬೇಕೆಂದು ಚಳವಳ ಹೂಡುವರು ಕಮ್ಯೂನಿಸ್ಟರ ತಂತ್ರ ಭಾಷಾ ಘಟಕಗಳ ಕುರಿತು ಉದ್ಭವಿಸಿದ ಮಾತು ಹೇಳುವುದಾದರೆ "ವಿಶಾಲಾಂಧ್ರ" ಹೊಂದುತ್ತಿಲ್ಲವೆನ್ನಲು ನೋಡುತ್ತಿದೆಯೇ ಎಂದು ಬೆದರಿಕೆಯಾಗುತ್ತದೆ ಈ ರೀತಿ ಸುಂತಾದವರ ಸುಗ್ಗಿ ನಾವೆಲ್ಲ ಎಂದೇ ಎಂದು ಹೇಳುವ ಭಾರತೀಯರು ಪಂಚವಾರ್ಷಿಕ ಯೋಜನೆಯ ಪ್ರಶ್ನೆ ಬಂದಾಗ, ಕರ್ನಾಟಕ ದುರ್ಲಕ್ಷಿಸಲ್ಪಟ್ಟಿದೆ ಎಂದು ... ಆಗ ಒಂದು ಭಾರತವನ್ನು ಕಣ್ಮುಂದಿಟ್ಟುಕೊಂಡು ಅದರ ಅಸ್ತಿತ್ವ ... ಯನ್ನು ತಿಳಿಯುವ ಸಮಗ್ರದೃಷ್ಟಿ ... ಗಿರುವುದಿಲ್ಲ ತನ್ನನ್ನು ತಾಯಿ ಚೆನ್ನಾಗಿ

... ಮುಂತಾದ ದೊಡ್ಡ ಘೋಷಣೆಗಳನ್ನು ಹೊರಡಿಸುವವರೂ ತಮ್ಮ ಬಂಧುಗಳ ಕಷ್ಟ ವಿಮೋಚನೆಯ ಸದುದ್ದೇಶವನ್ನೇ ಧ್ಯೇಯವ ಗಟ್ಟಿಕೊಂಡವರಂತೆ ತೋರಿಸಿ ರಾಜಕೀಯ ಲಾಭಗಳನ್ನು ಪಡೆಯುವುದಕ್ಕೆ ಮನಸ್ಸು ಮಾಡುವುದುಂಟು ಭಾಷಾ ಘಟಕಗಳ ನಿರ್ಮಾಣ ಚಳವಳವು ಭಾರತದಲ್ಲಿ ಬಹುಜನರ ಬೆಂಬಲವನ್ನು ಪಡೆಯುತ್ತಿರುವ ಈ ಕಾಲದಲ್ಲಿ ರಾಷ್ಟ್ರೀಯ ಮನೋವೃತ್ತಿಯು ನಿಜವಾದ ನಾಗರಿಕತೆ, ರಾಜ್ಯತ್ವಕ್ಕೆಯ ಈ ಆಭಾಸವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುವ ಅಗತ್ಯವಿದೆಯೆಂದು ಆಲ್ಫ್ರೆಡ್ ಕೆಂಕಮಸ್ ಎಂಬ ಮಹನೀಯರು ಎಚ್ಚರವನ್ನು ಕೊಟ್ಟಿರುವರು

ನಮ್ಮ ಪ್ರಗತಿಯನ್ನು ಕೈಗೂಡಿಸುವುದಕ್ಕೆ ವಿವಿಧ ಪ್ರದೇಶಗಳೆಲ್ಲ ಒಂದೇ ಘಟಕವಾಗಿ ರೂಪುಗೊಳ್ಳುವುದು ಒಳ್ಳೆಯ ದೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ ಆದರೆ ಭಾರತದಂಥ ವಿಶಾಲವಾದ ಒಂದೇ ಭೂಖಂಡದಲ್ಲಿ ರಾಷ್ಟ್ರೀಯ ಪ್ರವೃತ್ತಿಯನ್ನು ಉಸಿರುಗಟ್ಟಿಸುವ ಅಥವಾ ಪ್ರತ್ಯೇಕ ... ನೆನಪು ... ನೊಡಿಕೊಳ್ಳುವುದಿಲ್ಲವೆಂದು ತೀರದು ಕೊಂಡ ಮಗುವು ಅತ್ತು ಕರೆದು ತಾಯಿಯನ್ನು ಆಕರ್ಷಿಸುವಂತೆ, ನಾವಾದರೂ ಭಾಷಾ ಘಟಕಗಳೇ ಸಾವ ... ಏಳಿಗೆಯ ರಾಜಮಾರ್ಗವೆಂದು ಸಾರುತ್ತೇವೆ ಈ ತೃಪ್ತಿ ಎಲ್ಲಿಯವರೆಗೆ ಬೆಳೆಯುತ್ತದೆಂದರೆ —ಅದು ಎಂದೆಂದಿಗೂ ಶಮನವಾಗದ ಮಟ್ಟವನ್ನು ಮುಟ್ಟುತ್ತದೆ

ಉದಾಹರಣೆಗೆ ಈಗ ತಾನೆ ಪ್ರತ್ಯೇಕವಾದ ಆಂಧ್ರ ರಾಜ್ಯವು ಮದ್ರಾಸಿನಲ್ಲಿ ಕೋಟಿ ಮುನಿಸಿಪಾಲಿಟಿಗಳನ್ನು ... ನೆಯಾಗುತ್ತದೆ ... ತನ್ನ ಉತ್ಪಾದನೆ ... ಮುನಿಸಿಪಾಲಿಟಿಗಳನ್ನು ಕಡಿಮೆ ... ಈ ... ಯೆಂದ ... ಗಳ ... ಮುಂದಿಟ್ಟುಕೊಂಡು ಬೇರೆ ಭಾಷಾ ಘಟಕಗಳಿಗಿಂತ ತನ್ನ ಕಡೆಗೆಯೇ ಹೆಚ್ಚಿನ ಅಧಿಕ ... ಪಡೆದುಕೊಳ್ಳಲು ... ಪ್ರತಿವಾದದಲ್ಲಿ ... ಈ ಕೆಂಡ ...

ಕಳ್ಳಪೇಟೆಯ ಅದ್ಭುತಗಳು! ಅಕಲ್ಪಿತ ಘಟನೆಗಳು!!

ಶವಗಳ ಸಾಗಾಟ

ಕಳ್ಳಪೇಟೆಯ ಮಾಯೆಯನ್ನು ಬಿರಗುಗೊಳಿಸುವ ರೀತಿಯಲ್ಲಿ ಚಿತ್ರಿಸುವ ವಿಚಿತ್ರ ಕಾದಂಬರಿ.

ಬರೆದವರು.— ಸುಬ್ರಾವ ಕೃಷ್ಣ ಬೆಂಗಳೂರು, ಕಾರವಾರ, ಶಿರ್ಸಿ

ಬ್ಲಾಕ್ ಮಾರ್ಕೆಟ್ ವಾಲಾರ ವಿಸ್ಮಯ, ವಿಚಿತ್ರ ಕೃತಿಗಳನ್ನು ಈ ಕೃತಿಯಲ್ಲಿ ಮನಗಾಣುವಿರಿ.

ಓದಲೇ ಬೇಕಾದ, ಓದಿ ಸೋಜಿಗಗೊಳ್ಳಲೇ ಬೇಕಾದ ನವೀನ ಕಾದಂಬರಿ.

ಬೆಲೆ 0—12—0

ವಿವರವಾದ ಕೆಟಲಾಗಿಗೆ ಬರೆಯಿರಿ | [ನವಭಾರತ ಪುಸ್ತಕ ಭಂಡಾರ, ಉಡುಪಿ

ರತೆಗಳು ದೊರೆಯಾಗುವುದಕ್ಕೆ ಭಾಷಾ ಘಟಕದ ಸೀಮೆಯನ್ನು ಅದಷ್ಟು ವಿಸ್ತರಿಸಿ, ಬೇರೆ ಭಾಷಾವಾದಿಗಳ ವಶದಲ್ಲಿರುವೆಂದು ಹೇಳಿಕೊಳ್ಳುತ್ತಿರುವ ಪ್ರದೇಶಗಳನ್ನು ಒಳಗೆ ಹಾಕುವುದೇ ಯೋಗ್ಯ ಉಪಾಯ ವೆನಿಸುತ್ತದೆ ಆಗ ಆಂಧ್ರರು ಗಡಿ ರೇಖೆಯನ್ನು ನಿರ್ಣಯಿಸಿದ ಬಳಿಕ ಮುಂದೆ ಬಳ್ಳಾರಿ ನಗರ ಆಂಧ್ರಕ್ಕೆ ಅತ್ಯಂತ ಆವಶ್ಯಕ ... ಚಿನ್ನದ ಗಣಿಯಿರುವ ಕೋಲಾರ ಪ್ರದೇಶವೂ ಆಂಧ್ರಕ್ಕೆ ಸೇರಬೇಕು ಅತ್ಯಂತ ... ಮನವಿಗಳನ್ನು ಅರ್ಪಿಸಿದರೆ ಆಶ್ಚರ್ಯವಿಲ್ಲ. ಅಕ್ಕಿ ಮುಂತಾದ ಜೀವನಾವಶ್ಯಕ ವಸ್ತುಗಳ ಕೊರತೆ ತೀವ್ರವಾಗಿರುವ ಮಲಬಾರಿನ ಕೇರಳೀಯರು ಐಕ್ಯ ಕೇರಳವಾಗಬೇಕಾದರೆ ಸಮೃದ್ಧವಾದ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರದ ಗೋಕರ್ಣದವರೆಗೂ ಕೇರಳ ರಾಜ್ಯ ವಿಸ್ತರಿಸಲ್ಪಡುವುದು ಅತ್ಯಂತ ಆವಶ್ಯಕವೆಂದು ಮರಳಿ ಶಂಖ ಧ್ವನಿಯನ್ನು ಮೊಳಗಿಸುವುದು ಸಂಭವನೀಯ

ಭಾರತ ಸರಕಾರವು ಇನ್ನೊಂದೆರಡು ವಾರಗಳಲ್ಲಿಯೇ ನೇಮಿಸಲಿರುವ ಉಚ್ಚಾಧಿಕಾರ ಸಂಪನ್ನ ಆಯೋಗವು ಈ ಗಡಿಯ ವಿವಾದಗಳನ್ನು ಪರಿಶೀಲಿಸಿ ನಿರ್ಣಯಿಸುವಾಗ ಭಾರತದ ರಾಷ್ಟ್ರೀಯ ಐಕ್ಯವನ್ನು ... ಮೂಲೆಗುಂಪಾಗಿಸುವ ... ದನ್ನು ... ನೇರವಾಗಿ ... ಕನ್ನಡ ... ತೆಲುಗು, ತಮಿಳು ಜನಗಳೆಲ್ಲರ ... ಕೆಳ್ಳುವ ಸಂಭವವು ಸ್ಪಷ್ಟವಾಗಿಯೇ ಇದೆ ಗಡಿ ನಿರ್ಣಯವು ನ್ಯಾಯ ನ್ಯಾಯವಾದ ... ಮಾರ್ಗವನ್ನು ... ಎಂದು ಅಪೇಕ್ಷಿಸುವ ಈ ಚಳವಳಿಗಾರರು ನಿಜವಾಗಿ ರಾಜಕೀಯದ ದಾಳಿ ... ತಳೆದಿರುವ ... ಅನುಭವದಿಂದ ನಾವು ಕಲಿಯಬಹುದಾದ ಪಾಠ ಅಲ್ಲಿ ... ಪ್ರಯೋಜನವನ್ನು ಗಿಟ್ಟಿಸುವ ... ಆಯಕಟ್ಟಿನ ಸ್ಥಳಗಳು ... ಗಡಿ ... ಬೇರೆ ರಾಜ್ಯ ಘಟಕಗಳಲ್ಲಿ ಅನಿವಾರ್ಯವಾಗಿ ಉಳಿಯಬೇಕಾಗಿ ಬಂದ ಭಾಷಾ ಅಲ್ಪಸಂಖ್ಯಾಕರ ಪ್ರಮಾಣವನ್ನು ಸಾಕಷ್ಟು ಇಳಿಸಿ ... ಜಗಳಗಳು ಬೇರೆಯೇ ರಾಜಕೀಯ ಕಾರಣಗಳಿಗಾಗಿ ಅಲ್ಲಿ ಹುಟ್ಟಿಕೊಂ

[ಹಿಂದೆ ಪುಟ ನೋಡಿರಿ]

ಭಾರತದ ಪೂರ್ವಗಡಿ ವಲಯದ ಕಾಡು ಜನಾಂಗ

ಕ್ರೌರ್ಯ ಶೌರ್ಯಗಳಲ್ಲಿಯೇ ಅತ್ಯಧಿಕ ಆಸಕ್ತಿ

ನಮ್ಮ ದೇಶದ ಈಶಾನ್ಯ ಗಡಿಯಲ್ಲಿ ತ…ಮ್ಮ ಕ್ರೌರ್ಯ ಹಾಗೂ ಶೌರ್ಯಗಳಿಂದ …ಸಿದ್ಧಿಹೊಂದಿದ ಭಯಂಕರ ಪ್ರತಾಪೀ …ಡು ಜನಾಂಗಗಳು ನೆಲಸುತ್ತವೆ. ಅ…ಮುನ ಕಣಿವೆಯ ದಟ್ಟವಾದ ಗೊಂಡಾ…ಣ್ಯಗಳಲ್ಲಿ ಈ ಶತ್ರು ಭಯಂಕರ ಮನು…ರು ಯಾರದೇ ಅಂಕೆ ಅಥವಾ ನಿಯಂ…ಣವನ್ನೊಪ್ಪದೆ ಪೌರುಷದ ಜೀವನ ನ…ಸುತ್ತಿರುವುದು ಕಂಡುಬರುತ್ತದೆ. ಭೂ…ನದ ಪೂರ್ವ ಪ್ರದೇಶಕ್ಕೆ ತಾಗಿರುವ …ಮಾರು ೪೫೦ ಮೈಲು ಉದ್ದ ಹಾಗೂ …೦ ಮೈಲು ಅಗಲ ವಿಸ್ತೀರ್ಣದ ನೆಲದ…ರುವ ಈ ಭಾರತೀಯರು ಇನ್ನೂ ಆಧು…ಕ ನಾಗರಿಕತೆಯ ಸೋಂಕಿಗೆ ಒಳಗಾಗಿ…ವುದಿಲ್ಲ. ಅಕಾ, ಡಫ್ಲಾ. ಮಿರಿ. ಅಬೋ… ಮಿಸ್ಮಿ ಮುಂತಾದ ಹೆಸರುಗಳಿಂದ ಈ…ಡು ಜನಾಂಗಗಳು ಹೆಸರಾಗಿರುವರು. …ವರಲ್ಲಿ ಅಬೋರ ಜನಾಂಗದವರೇ ಪ್ರ…ಸಿಗಳು; ಪೌರುಷ ಪ್ರದರ್ಶನ ಮತ್ತು …ರ್ಯ ಕೃತ್ಯಗಳಿಗೆ ಹೆಸರು …ಂದಿದವರು. ಲಖಿಂಪುರ ಜಿಲ್ಲೆ… ಉತ್ತರಕ್ಕೆ ಪಶ್ಚಿಮದಲ್ಲಿ ಸಿಯೋ… ನದಿ ಮತ್ತು ಪೂರ್ವದಲ್ಲಿ ದಿಹಾಂಗ …ಬ ಪ್ರಾದೇಶಿಕ ಹೆಸರಿನಿಂದ ಹರಿಯು… ಬ್ರಹ್ಮಪುತ್ರಾ ನದಿಯ ನಡುವೆ ಹಬ್ಬಿ… ಗುಡ್ಡಕಾಡು ಪ್ರದೇಶದಲ್ಲಿಯೇ ಇವರ …ಸ. ಈ ಎಲ್ಲ ಕಾಡು ಜನಾಂಗಗಳ…ಡು ಉತ್ತರದಲ್ಲಿ ಟಿಬೇಟನ್ನೂ ಪೂರ್ವ…ನೆಯಲ್ಲಿ ಟಿಬೇಟು ಬರ್ಮಾವನ್ನೂ …ಟ್ಟುತ್ತವೆ. ಹೀಗಾಗಿ ಭಾರತ ಸರಕಾ…ಕ್ಕೆ ಈ ಪ್ರದೇಶದ ಚಟುವಟಿಕೆಯನ್ನು …ದಾ ಕಣ್ಣಿಗೆ ಎಣ್ಣೆಹಚ್ಚಿಕೊಂಡು ನಿರೀ…ಸುತ್ತಿರುವುದು ಅಗತ್ಯವಾಗಿ ಪರಿಣಮಿ…ದೆ.

ಬ್ರಿಟಿಷರ ಪ್ರತಾಪ

ಅಸಾಮು ಭಾರತದಲ್ಲಿಯೇ ಅತಿ ಹೆಚ್ಚು …ಳೆಬೀಳುವ ಪ್ರದೇಶ. ಇಲ್ಲಿಯ ಗೊಂಡಾ…ಣ್ಯಗಳು ಆಫ್ರಿಕದ ಉಷ್ಣ ವಲಯದ ಕಾ…ನಲ್ಲೂ ದೊರೆಯಲಿಕ್ಕಿಲ್ಲ. ಸುಮಾರು …ರಡು ಸಾವಿರ ಚದರ ಮೈಲುಗಳಷ್ಟು …ಸ್ತಾರವಾದ ಗುಡ್ಡ ಬೆಟ್ಟ ಪ್ರದೇಶಗಳಲ್ಲಿ …ಬೋರರು ನೆಲೆಗೊಂಡಿದ್ದರೂ ಅವರ …ನಸಂಖ್ಯೆ ದಿನದಿನಕ್ಕೂ ಕ್ಷೀಣವಾಗು…ತ್ತ ನಡೆದಿದೆ. ೧೮೮೧ರಿಂದ ೧೯೫೧ನೆ …ಸವಿಗಾಗುವಾಗ ಅಬೋರರ ಜನಸಂಖ್ಯೆ …೭೭,೪೬೭ ರಿಂದ ೧೦,೭೬೫ಕ್ಕೆ ಇಳಿದಿರುತ್ತ…ದೆ. ಇಷ್ಟು ಕಡಿಮೆ ಜನ ಸಂಖ್ಯೆಗೆ ಕಾರ…ಣವೇನೆಂಬುದು ಸ್ಪಷ್ಟವಾಗಿಲ್ಲ—ಪ್ರಾಯ…ಃ ಗುಹ್ಯ ರೋಗಗಳು ಈ ವೀರ ಪುತ್ರ…ನ್ನು ಬಲಿತೆಗೆದುಕೊಳ್ಳುತ್ತಿವೆಯೋ ಏ…ನೋ! ಇವರಲ್ಲಿ ಸ್ತ್ರೀಯರು ಪುರುಷ ಪ್ರ…ಮಾಣಕ್ಕಿಂತ ಬಹಳ ಕಡಿಮೆ ಇದ್ದಾರೆ— …ಪ್ರತಿ ಸಾವಿರ ಗಂಡಸಿಗೆ ೬೪೫ ಮಾತ್ರ …ಹೆಂಗಸರು! ಹಿಂದೆ ಅಸಾಮುದಲ್ಲಿ ಅ…ಹೋಮ ಸಾಮ್ರಾಜ್ಯವು ಮೆರೆಯುತಿದ್ದಾ… ಹಿಮಾಲಯದ ತಪ್ಪಲಲ್ಲಿ ಗುಡ್ಡಬೆಟ್ಟ…ಳ ಮೇಲೆ ನದೀ ಕಣಿವೆಯ ನಡುವೆ ವಾ…ಸುವ ಈ ಕಾಡು ಜನಾಂಗದವರ ಮೇಲೆ …ಕಟ ಸಂಪರ್ಕವನ್ನು ಆ ಅರಸರು ಇಟ್ಟು…ಕೊಂಡಿದ್ದರು. ಬ್ರಿಟಿಷ ಸಾಮ್ರಾಜ್ಯವು …ಭಾರತದಲ್ಲಿ ವಿಸ್ತರಿಸಿದಂತೆಲ್ಲ ಈ ಗುಡ್ಡಗಾಡು ಪ್ರದೇಶದ ಮೇಲೂ ಅವರ ದಾಳಿ ನಡೆಯಿತು. ೧೮೪೭ನೇ ಇಸವಿಯಲ್ಲಿ ಸರ್ವಪ್ರಥಮವಾಗಿ ಬ್ರಿಟಿಷ ದಳವೊಂದು ಈ ಭೂಭಾಗವನ್ನು ಪ್ರವೇಶಿಸಿ, ಅಬೋರರ ಮೇಲೆ ದಾಳಿ ನಡೆಸಿತು; ಕೆಲವು ಹಳ್ಳಿಗಳನ್ನೂ ಸುಟ್ಟು ಹಾಕಿತು. ೧೮೫೮ರಲ್ಲಿ ಮಿನ್ಯೊಂಗ ಅಬೋರರು ದಂಗೆ ಎದ್ದು ಬ್ರಿಟಿಷರನ್ನು ಅಟ್ಟುತ್ತಾ ಅಟ್ಟುತ್ತಾ ದಿಬ್ರೂಗಡದ ವರೆಗೆ ಬಂದರು. ಆಗ ಬ್ರಿಟಿಷರು ಮಿಲಿಟರಿ ಪಡೆಯನ್ನು ಕಳಿಸಿ ದಿಹಾಂಗ ಕಣಿವೆಯಲ್ಲಿ ೩೦ ಮೈಲುಗಳಷ್ಟು ದೂರ ಅಬೋರರನ್ನು ಹಿಮ್ಮೆಟ್ಟಿಸಿದರು. ಮುಂದೆ ಸುಮಾರು ಅರ್ಧ ಶತಮಾನದ ವರೆಗೂ ಘರ್ಷಣೆ ನಡೆಯುತ್ತಲೇ ಇದ್ದು, ೧೯೧೧ರಲ್ಲಿ ಕೇಪ್ಟನ್ ಮೇಕ್ಸವೆಲ್ಲರು ಅಬೋರರನ್ನು ಪಾದಾಕ್ರಾಂತ ಮಾಡುವುದರಲ್ಲಿ ಸಾಮಾನ್ಯ ಯಶಸ್ಸು ಗಳಿಸಿದರು. ಅಬೋರ ಪ್ರದೇಶಗಳನ್ನು ಸುತ್ತುಗಟ್ಟಿ ದಿಗ್ಬಂಧನಕ್ಕೆ ಒಳಪಡಿಸಿದರು. ಅಷ್ಟರಲ್ಲಿಯೇ ಇಬ್ಬರು ಮಿಶನರಿಗಳ ಕೊಲೆಯನ್ನು ಅಬೋರರು ಮಾಡಲು ೧೯೧೩ರಲ್ಲಿ ಬ್ರಿಟಿಷರ ದಾಳಿ ಪ್ರಬಲವಾಯಿತು. ಬ್ರಿಟಿಷ ಸೈನ್ಯಗಳು ಮುನ್ನುಗ್ಗಿ ಅಬೋರರನ್ನು ಬಗ್ಗುಬಡೆಯುತ್ತಾ ಸಾಗಿದವು, ಮತ್ತು ಆ ಪ್ರದೇಶದ ಭೌಗೋಲಿಕ ಸ್ಥಿತಿಗತಿಗಳ ಸಿಂಹಾವಲೋಕನ ಕಾರ್ಯವನ್ನೂ ಅದೇ ಸಮಯ ಮಾಡಲಾಯಿತು.

ಯುದ್ಧ ಪ್ರಿಯರು

ಅಲ್ಲಿಂದ ಮುಂದೆ ಅಬೋರ ಜನಾಂಗಗಳು ಹಿಂಸಾಚಾರಗಳಲ್ಲಿ ಅಪರೂಪವಾಗಿಯೇ ಪ್ರವೃತ್ತರಾಗುತ್ತಿದ್ದರು. ಸ್ವಾಭಾವಿಕವಾಗಿಯೇ ಯುದ್ಧಪ್ರಿಯರಾದ ಈ ಜನರು ಶಾಂತಿಯುತ ಜೀವನ ನಡೆಸುವುದು ಅಪವಾದವೇ ಸೈ. ಇವರಿಗೆ ಒಂದಾಗಿ ಬದುಕುವುದೆಂದರೇನೇ ಹಿಡಿಸುವುದಿಲ್ಲ. ಒಂದು ಪಂಗಡ ಇನ್ನೊಂದರ ಮೇಲೆ, ಒಂದು ಹಳ್ಳಿಯವರು ಇನ್ನೊಂದು ಹಳ್ಳಿಯ ಮೇಲೆ ದಾಳಿಯನ್ನು ಮಾಡುತ್ತಾ ಹೋರಾಡಿ ಮಡಿಯುವುದರಲ್ಲಿ ಇವರಿಗೆ ಆನಂದ. ಇಂಥ ಯುದ್ಧದ ಗಳಿಗೆಯಲ್ಲಿ ಎಂಥ ಮೋಸ ಹಾಗೂ ವಂಚನೆಗೂ ಇವರು ಹೇಸುವುದಿಲ್ಲ. ಆದರೆ ಶಾಂತಿಯ ದಿನಗಳಲ್ಲಿ ಇವರಷ್ಟು ಪ್ರಾಮಾಣಿಕತೆಯನ್ನು ಬೇರೆಲ್ಲಿಯೂ ನಾವು ಕಾಣಲಾರೆವು— ಬಡತನದಿಂದ ಬಳಲುತಿದ್ದರೂ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಇವರು ಕೊಲೆ-ಸುಲಿಗೆಗಳಿಗೆ ಕೈಹಾಕುವುದಿಲ್ಲ. ನಮ್ಮನ್ನು ಪ್ರೀತಿಯಿಂದ ಅಬೋರ ಸಹೋದರನೊಬ್ಬ ಕರೆದ ಪಕ್ಷದಲ್ಲಿ ಯಾವುದೇ ಅಂಜಿಕೆ ಇಲ್ಲದೆ ನಾವು ಅವನ ಆದರಾತಿಥ್ಯಗಳನ್ನು ಸ್ವೀಕರಿಸಬಹುದು. ಆದರೆ ಯುದ್ಧ ಕಾಲದಲ್ಲಿ ಯಾವುದೇ ಸೌಹಾರ್ದ ಭಾವನೆಗೆ ಆಸ್ಪದವಿಲ್ಲ— ನೆರೆಯ ಹಳ್ಳಿ ಅಥವಾ ಪಂಗಡದೊಡನೆ ಯಾವುದೇ ಮಾತಿನಿಂದ ಅಸಂತೋಷ ಹುಟ್ಟಿಕೊಂಡರೆ, ಅಸಂತುಷ್ಟ ನಾಯಕನು ತನ್ನ ಅನುಯಾಯಿಗಳ ಸಭೆ ಸೇರಿಸುವನು. ಅವಿವಾಹಿತ ತರುಣರು ನೆಲಸುವ ಜಾಗವೇ ಅವರ ಸಭಾ ಭವನ. ಅಲ್ಲಿ ತಾವು ಯುದ್ಧವನ್ನು ಹೂಡ ಬೇಕಾಗಿರುವ ಪ್ರಸಂಗವನ್ನು ವಿಸ್ತಾರವಾಗಿ ನಾಯಕನು ವಿವರಿಸುವುದು ಸಂಪ್ರದಾಯ. ನಾಯಕನ ಮನೋಭಾವವನ್ನು ಅಂಗೀಕರಿಸುವುದಕ್ಕೆ ಗುಂಪಿಗೆ ಇಷ್ಟವಿಲ್ಲದಿದ್ದರೆ ಅವರು ಬೊಬ್ಬೆ ಹಾಕಿ, ಅವನ ಬಾಯಿ ಮುಚ್ಚಿಸುತ್ತಾರೆ—ಒಮ್ಮೆ ಯುದ್ಧ ಹೂಡುವುದು ನಿಶ್ಚಯವಾದರೆ, ಆದರ ಏರ್ಪಾಡಿನೊಂದಿಗೆ ಶಕುನ ನೋಡಿ ಮುಹೂರ್ತ ನಿರ್ಣಯಿಸುವ ಕಾರ್ಯಕ್ರಮವೂ ಜರಗುತ್ತದೆ. ಒಂದು ಬುಟ್ಟಿಗೆ ತುಸು ದೂರದಲ್ಲಿ ಕೋಳಿಯ ತಲೆ ಕತ್ತರಿಸಿ ಹಾಕುವರು- ಆಗ ತಲೆ ಇಲ್ಲದ ಕೋಳಿಯ ಭಾಗ ಕುಣಿಯುತ್ತಾ ಕುಣಿಯುತ್ತಾ ಬಂದು ಬುಟ್ಟಿಯೊಳಕ್ಕೆ ಬಿದ್ದರೆ, ಹೂಡಲಿರುವ ಯುದ್ಧದಲ್ಲಿ ಜಯ ಕಟ್ಟಿಟ್ಟದ್ದೆಂದು ಸಿದ್ಧಾಂತ. ಅಪ್ಪಿತಪ್ಪಿ ಹೀಗೆ ಶುಭ ಶಕುನ ಘಟಿಸದಿದ್ದ ಪಕ್ಷದಲ್ಲೂ ಜೋಯಿಸರು ಹೇಗಾದರೂ ಮಾಡಿ ಒಳ್ಳೆಯ ಫಲವುಂಟು ಮಾಡುವ ಮುಹೂರ್ತ ಹೇಳುವರು. ಯುದ್ಧವಂತೂ ಆಗಲೇಬೇಕಲ್ಲ?

ಪಟುಭಟರ ಆಯುಧ

ಆದರೆ ಒಮ್ಮೊಮ್ಮೆ ಯುದ್ಧ ಬೇಡವೆಂದು ತೋರುತ್ತದೆ— ಇಕ್ಕಡೆಯವರಿಗೂ ಬೇಸರ ಬರಬಹುದು; ಅಥವಾ ಒಂದು ಪಕ್ಷಕ್ಕೆ ಸಂಧಾನವಾದರೆ ಒಳಿತೆಂದು ತೋರೀತು. ಅಂಥ ಪ್ರಸಂಗಗಳಲ್ಲಿ ಹಳ್ಳಿಯ ಹೊರವಲಯದಲ್ಲಿರುವ ದೊಡ್ಡ ಮರವೊಂದು ಮರದ ಕೆಳಗೆ ಉಭಯ ಪಕ್ಷದ ನಾಯಕರೂ ಒಬ್ಬರಿನ್ನೊಬ್ಬರಿಗೆ ಎದುರಾಗಿ ಮರದ ಇಕ್ಕಡೆ ನಿಲ್ಲುವರು. ತುಸು ಹೊತ್ತಿನಲ್ಲಿಯೇ ಮಾತುಗುಳಿಯಾದ ಇವರು ಸಹಜವಾಗಿಯೇ ಮಾತನಾಡುವರು. ಇವರಲ್ಲಿಯೇ ಯಾರಾದರೊಬ್ಬನು ಉಭಯ ಪಕ್ಷದವರೂ ಸ್ನೇಹದಿಂದ ಇರಬೇಕೆಂದೂ ಇದಕ್ಕೆ ಸಾಕ್ಷಿಯಾಗಿ ಸಹ ಭೋಜನ ಮಾಡಬೇಕೆಂದೂ ಸೂಚಿಸುವನು. ಈ ಔತಣವೆಂದರೆ ಜಾನುವಾರುಗಳನ್ನು ಕಡಿದು ಬೆಂಕಿಯಿಂದ ಸುಟ್ಟ ಮಾಂಸ—ಅದರೊಂದಿಗೆ ಮೂಗಿನ ತುದಿಯ ವರೆಗೆ ಹುಳಿ ಹೆಂಡ. ಉದರ ಪೂಜೆಯ ಈ ಸಂಭ್ರಮದಲ್ಲಿ ಅನಂತ ಕಾಲದ ವರೆಗೂ ಈ ಸ್ನೇಹ ಉಳಿಯಲೆಂದು ಪರಸ್ಪರರು ಹಾರೈಸಿದರೂ—ಆ ಹಾರೈಕೆ ಹುಸಿ ಹೋಗಬಾರದೆಂದೇನು ನಿಯಮವಿಲ್ಲ. ಯೋಗ್ಯ ಕಾರಣ ದೊರೆತರೆ ಮರುದಿನವೇ ಯುದ್ಧದ ಕಿಡಿ ಹೊತ್ತಿಕೊಳ್ಳಬಹುದು. ಆಗ ಈ ಅಬೋರರು ಬೆತ್ತದ ಹಗ್ಗವೇ ಹೆದೆಯಾಗುಳ್ಳ ಉದ್ದವಾದ ಬಿದಿರಿನ ಬಿಲ್ಲನ್ನೂ ೧೫೦ ಗಜದಷ್ಟು ದೂರ ಸಳೆದು ಬಿಡಬಲ್ಲ ಹಗುರವಿದ್ದರೂ ನೊಣಚಾದ ಬಿದಿರಿನ ಬಾಣಗಳನ್ನೂ ಉಪಯೋಗಿಸಿ ಹೋರಾಡುವರು. ಸಾಮಾನ್ಯವಾಗಿ ವಿಷಪೂರಿತ ಬಾಣ ಪ್ರಯೋಗದಲ್ಲಿಯೇ ಇವರಿಗೆ ಆಸಕ್ತಿ. ದಟ್ಟವಾದ ಅರ

[೧೦ನೇ ಪುಟ ನೋಡಿರಿ]

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ಚುರುಕಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಭಾರತದ ಸಹಾನುಭೂತಿ ಯಾಚಿಸುವ ಡಾ| ಜಗನ

ಅಂತಾರಾಷ್ಟ್ರೀಯ ಸುದ್ದಿ ಸಮಾಚಾರಗಳಲ್ಲಿ ಈಚೆಗೆ ಬ್ರಿಟಿಷಗಿಯಾನದ ರಾಜಕಾರಣ ಪ್ರಾಮುಖ್ಯ ಸ್ಥಾನವನ್ನು ಪಡೆದಿರುತ್ತದೆ. ಮೊನ್ನೆ ಮೊನ್ನೆ ಅಲ್ಲಿ ಅರೆ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಯನ್ನು ಬ್ರಿಟಿಷರು ಸ್ಥಾಪಿಸಿದ್ದರು. ಆದರೆ ಈ ಸರಕಾರದ ಹೊಣೆಯನ್ನು ಹೊತ್ತ ಜನತಾ ಪ್ರಾಗತಿಕ ಪಕ್ಷವು ಕಮ್ಯೂನಿಸ್ಟ ಒಲವುಳ್ಳದ್ದೆಂದು ಹೇಳಿ ಈಗ ಅಲ್ಲಿಯ ರಾಜ್ಯಾಂಗ ಘಟನೆಯನ್ನೇ ಬ್ರಿಟಿಷ ಸರಕಾರ ರದ್ದುಗೊಳಿಸಿದೆ. ಇದು ಅನ್ಯಾಯವೆಂದು ಲಂಡನ್ನಿನ ವರೆಗೆ ಬಂದು ಪ್ರತಿಭಟಿಸಿದ ಪದಚ್ಯುತ ಮುಖ್ಯ ಮಂತ್ರಿ ಡಾ| ಚೇದಿ ಜಗನ್ನರಿಗೆ ಏನೇನೂ ಯಶಸ್ಸು ದೊರೆಯಲಿಲ್ಲ. ಬ್ರಿಟಿಷ ಕೂಲಿಕಾರ ಪಕ್ಷದ ಸಹಾನುಭೂತಿಯಾದರೂ ತಮಗೆ ದೊರೆಯಬಹುದೆಂದು ಇಟ್ಟುಕೊಂಡಿದ್ದ ಆಶೆಯು ವಿಫಲವಾದುದಕ್ಕೆ ಜಗನ್ನರು ಬೇಸರ ವ್ಯಕ್ತಗೊಳಿಸಿರುವರು. ವಸಾಹತುಗಳೆಂದರೆ ಟೋರಿ ಹಾಗೂ ಕೂಲಿಕಾರ ಪಕ್ಷಗಳಲ್ಲಿ ಯಾವದೇ ವ್ಯತ್ಯಾಸ ಭಾವನೆಯನ್ನು ಕಾಣಲಾರೆವೆಂದು ಜಗನ್ನರು ಮನಗಂಡಿದ್ದಾರೆ. ಆದರೂ ತಮಗೆ ಅನ್ಯಾಯವಾಗಿದೆಯೆಂದು ಲೋಕಕ್ಕೆ ತಿಳಿಸುವುದು ಅವರ ಇಚ್ಛೆ. ವಸಾಹತುಗಳ ಜನರು ಸ್ವಾಯತ್ತಾಧಿಕಾರವನ್ನು ಪಡೆದು ಸ್ವತಂತ್ರರಾಗಬೇಕೆಂಬ ಸಹಾನುಭೂತಿಪರ ಧೋರಣವನ್ನು ಇಟ್ಟುಕೊಂಡಿರುವ ಭಾರತದ ನೆಹರೂ ಸರಕಾರ ತಮಗೇನಾದರೂ ಸಹಾಯ ಮಾಡೀತೋ ಎಂದು ಆತುರದಿಂದ ಜಗನ್ನರು ದಿನಾಂಕ ೬ನೇ ಶುಕ್ರವಾರದಿನ ಲಂಡನ್ನಿನಿಂದ ಮುಂಬಯಿಗಾಗಿ ಹೊಸದೆಹಲಿಗೆ ಆಗಮಿಸಿದರು. "ನಮಗೆ ಯಾವ ರೀತಿಯ ಸಹಾಯವನ್ನು ಕೊಡಬಹುದೆಂಬ ಸಂಗತಿ ಭಾರತ ಸರಕಾರವನ್ನೇ ಹೊಂದಿಕೊಂಡಿದೆ—ನಮಗೆ ಸರ್ವ ಸಹಾನುಭೂತಿಯನ್ನು ತೋರಿಸುವುದಲ್ಲದೆ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ಈ ಪ್ರಶ್ನೆಯನ್ನು ಭಾರತವು ಎತ್ತುವುದೆಂದು ನಾವು ತಿಳಿದುಕೊಂಡಿದ್ದೇವೆ" ಎಂಬುದಾಗಿ ಡಾ. ಚೇದಿ ಜಗನ್ನರು ಸುದ್ದಿಗಾರರಿಗೆ ತಮ್ಮ ಭಾರತ ಸಂದರ್ಶನದ ಕುರಿತು ಹೇಳಿದರು.

ಡಾ|| ಚೇದಿ ಜಗನ

ಬ್ರಿಟಿಷ ಗಿಯಾನದ ರಾಜಕಾರಣದಲ್ಲಿ ಭಾರತಕ್ಕೆ ಆಸ್ಥೆ ಇರುವುದಕ್ಕೆ ವಿಶೇಷವಾದ ಕಾರಣವೂ ಇಂದಿದೆ.

ಬ್ರಿಟಿಷ್ ಗಿಯಾನಾದ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿ

ಬ್ರಿಟಿಷಗಿಯಾನದ ಜನರಲ್ಲಿ ನೂರಕ್ಕೆ ೪೭ ಮಂದಿ ಭಾರತೀಯ ವಲಸೆಗಾರರು. ಜನತಾ ಪ್ರಾಗತಿಕ ಪಕ್ಷದ ಮುಂದಾಳಾಗಿರುವ ಡಾ. ಚೇದಿ ಜಗನ್ನರು ಸಹ ಭಾರತೀಯ ತಂದೆಯ ಮಗ. ಸುಮಾರು ೩೫ ವರ್ಷಗಳಿಗೆ ಹಿಂದೆ ಬ್ರಿಟಿಷ ಗಿಯಾನದ ಒಂದು ಕಬ್ಬಿನ ತೋಟದಲ್ಲಿ ಚೇದಿ ಜಗನ್ನರು ಜನ್ಮ ತಾಳಿದರು. ಇತರರಿಗಿಂತ ಇವರ ತಂದೆಯ ಸ್ಥಿತಿ ತುಸು ಹೆಚ್ಚು ಅನುಕೂಲವಾಗಿತ್ತಾದ ಕಾರಣ ಚೇದಿ ಜಗನ್ನರಿಗೆ ಕಾಲೇಜ ಶಿಕ್ಷಣವನ್ನು ಹೆತ್ತವರು ಕೊಡಿಸಿದರು. ಕಬ್ಬಿನ ತೋಟದ ಜನಗಳಲ್ಲಿ ಸರ್ವ ಪ್ರಥಮವಾಗಿ ಕಾಲೇಜದ ಮೆಟ್ಟಲು ಹತ್ತಿದ ಗೌರವ ಡಾ. ಚೇದಿ ಜಗನ್ನರಿಗೆ ಸಲ್ಲಬೇಕು. ಮುಂದೆ ಜಗನ್ನರು ತಿಂಗಳಿಗೆ ೩೮ ಶಿಲಿಂಗು ವೇತನ ದೊರೆಯುವ ಅಧ್ಯಾಪಕರಾಗಿದ್ದರು. ಅವರಿಗೆ ದಂತ ವೈದ್ಯವನ್ನು ಕಲಿಯುವ ಅಪೇಕ್ಷೆಯಾಗಿ ಸಂಯುಕ್ತ ರಾಜ್ಯ ಅಮೇರಿಕದ ನ್ಯೂಯಾರ್ಕ ಮತ್ತು ಚಿಕಾಗೋ ನಗರಗಳನ್ನು ಸೇರಿದರು. ಇಲ್ಲಿಯೇ ಅವರಿಗೆ ಜೆನೆಟಳ ಪರಿಚಯವಾಗಿ, ಅದು ಪ್ರೇಮ ವಿವಾಹದಲ್ಲಿ ಪರ್ಯವಸಾನ ಹೊಂದಿತು. ಈ ಹೆಂಡತಿಯೇ ಜಗನರನ್ನು ಬ್ರಿಟಿಷಗಿಯಾನದ ರಾಜಕೀಯದಲ್ಲಿ ಪ್ರವೇಶಿಸುವಂತೆ ಪ್ರೇರಿಪಿಸಿದಳು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಅಭ್ಯಸಿಸಿದ್ದ ಚೇದಿ ಜಗನ್ನರಿಗೆ ಬ್ರಿಟಿಷಗಿಯಾನದ ತೋಟಗಳಲ್ಲಿ ಕೆಲಸ ಮಾಡುವ ಕೂಲಿಗಳ ನಿಕೃಷ್ಟಾವಸ್ಥೆಯನ್ನು ಸುಧಾರಿಸುವ ಹಂಬಲ ಮೂಡಿತು. ಪತ್ನಿಯ ಪ್ರೋತ್ಸಾಹ ಮತ್ತು ಸಹಕಾರದಿಂದ ಅವರು ಕೂಲಿಕಾರರ ಮತ್ತು ರಾಜಕೀಯ ಆಂದೋಲನವನ್ನು ನಡೆಸಿದರು. ಮೊದಲಿಗೆ ಕೆಲವೇ ಮಂದಿ ಸಹಾಯಕರ ಪಡೆದು ರಾಜಕೀಯ ವ್ಯವಹಾರ ಸಮಿತಿಯೊಂದನ್ನು ರಚಿಸಿಕೊಂಡರು. ಅದೇ ಈಗ ಜನತಾ ಪ್ರಾಗತಿಕ ಪಕ್ಷವೆಂದು ಪ್ರಸಿದ್ಧಿ ಹೊಂದಿದೆ. ಜೆನೆಟ ಜಗನ್ನಳೇ ಅದರ ಮಹಾಕಾರ್ಯದರ್ಶಿ. ಈ ಪ್ರಥಮ ಶ್ರೇಣಿಯ ಕಾರ್ಯಕರ್ತೆ. ಬ್ರಿಟಿಷರು ರಾಜ್ಯಾಂಗ ಘಟನೆಯನ್ನು ರಚಿಸಲು ತಾವಾಗಿ ನೀಡಿ ಸಾರ್ವತ್ರಿಕ ಚುನಾವಣೆಗಳನ್ನು ಈ ವರ್ಷದ ಪ್ರಾರಂಭದಲ್ಲಿ ನಡೆಸಿದಾಗ—ಜಗನ್ನರ ಜನತಾ ಪ್ರಾಗತಿಕ ಪಕ್ಷ ಬಹುಮತದಿಂದ ಗೆದ್ದು ಬಂದಿತು. ಜನತೆಯ ಬೆಂಬಲವನ್ನು ಪಡೆದೇ ತೀವ್ರ ಧೃಢ ಸಂಕಲ್ಪದಿಂದ ಚುನಾವಣೆಯ ಕಾಲದಲ್ಲಿ ಜಗನ್ನ ದಂಪತಿಗಳು ಸಕ್ಕರೆ ಕಾರಖಾನೆ ಕೆಲಸಗಾರರ ಮನೆಮನೆಯನ್ನೂ ತಿರುಗಿದರು.

ಬ್ರಿಟಿಷರ ಕುಟಿಲ ತಂತ್ರ

ಬ್ರಿಟಿಷ ಗಿಯಾನಾವಿರುವುದು "ಪಾತಾಳ ಲೋಕ"ವೆಂದು ಕರೆಯಬಹುದಾದ ದಕ್ಷಿಣ ಅಮೇರಿಕಾದ ಈಶಾನ್ಯದಲ್ಲಿ. ಉಷ್ಣ ವಲಯದ ಭಯಂಕರ ಕಾಡುಗಳ ನಡುವಿಂದ ಪ್ರವಹಿಸುವ ಅಮೆಜಾನ ಮತ್ತು ಒರಿನೋಕೋ ನದಿಗಳ ನಡುವೆ ಗಿಯಾನಾ ಪ್ರದೇಶವಿದೆ. ಬ್ರಿಟಿಷ ಗಿಯಾನಕ್ಕೆ ೫೦೦ ಮೈಲು ಉದ್ದದ ಕರಾವಳಿ ಇದ್ದು ಜಾರ್ಜ ಟಾವು ಅದರ ರಾಜಧಾನಿ. ಇಲ್ಲಿ ೧೫೦ ವರ್ಷಗಳಿಂದ ಬ್ರಿಟಿಷ ಶಾಸನ ನಡೆಯುತ್ತಿದೆ. ವಸಾಹತು ಪ್ರದೇಶಗಳ ಎಲ್ಲಾ ಲಾಭವನ್ನೂ ತಮ್ಮ ಒಳ್ಳೆಯದಕ್ಕೆ ಮಾತ್ರ ಉಪಯೋಗಿಸಿಕೊಳ್ಳುವ ಬ್ರಿಟಿಷ ನೀತಿಯೇ ಇಲ್ಲಿಯೂ ನಡೆದಿದೆ. ಕಾರಣ, ಸಮೃದ್ಧ ಸಂಪತ್ತನ್ನು ಪಡೆದಿದ್ದರೂ ಈ ದೇಶ ಬಡತನದ ಭೂಮಿಯಾಗಿಯೇ ಉಳಿದೆ. ಇಲ್ಲಿರುವುದು ಕಬ್ಬಿನ ತೋಟಗಳು ಸಕ್ಕರೆಯ ಕಾರಖಾನೆಯಲ್ಲಿ ೪೦೦೦೦೦ ಜನರು ಕೆಲಸ ಮಾಡುತಿದ್ದರೂ ಸಕ್ಕರೆಯ ಸ್ವಾದವನ್ನು ಅವರು ಸವಿದವರಲ್ಲ. ವಾರಕ್ಕೆ ಸಿಗುವ ಎರಡು ಪೌಂಡು ಕೂಲಿಯಲ್ಲಿ ಅವರ ಜೀವನಸಾಗಬೇಕು. ಇಲ್ಲಿಯ ನೈಸರ್ಗಿಕ ಸಂಪತ್ತುಗಳಲ್ಲಿ ಉತ್ತಮೋತ್ತಮ ಮೊಪುಗಳು ದೊರೆಯುವ ಅರಣ್ಯ ಹಾಗೂ ಜಲವಿದ್ಯುತ್ತನ್ನು ಉಪಯೋಗಿಸಬಲ್ಲ ಪ್ರಪಾತಗಳು ಮುಖ್ಯ. ಜಾಗತಿಕ ಬೇಂಕಿನಿಂದ ಸಾಲಪಡೆದುಕೊಂಡು ಈ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸುವ ನ್ಯಾಯಪೂರ್ಣ ಮಾರ್ಗವನ್ನು ಬಿಟ್ಟುಗೊಟ್ಟು ಬ್ರಿಟಿಷರು ಸೈನ್ಯಬಲದಿಂದ ಜನರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಇಲ್ಲಿ ಹವಣಿಸಿರುವರು. ಈ ಸೈನ್ಯವನ್ನು ಅಮೇರಿಕದ ತಿಳಿವಳಿಕೆಯಿಂದಲೇ ಬ್ರಿಟಿಷ ಗಿಯಾನಕ್ಕೆ ಕಳಿಸಲಾಗಿದೆ. ಅಮೇರಿಕಾ ಮತ್ತು ಕೆನಡಾಗಳಿಗೆ ಬ್ರಿಟಿಷ ಗಿಯಾನದ ಬಾಕ್ಸೈಟು ಅದುರಗಳ ಅಗತ್ಯವುಂಟು. ಅಲ್ಯುಮಿನಿಯಂ ತಯಾರಿಸುವ ಅಮೇರಿಕನ್ ಹಾಗೂ ಕೆನಾಡಿಯನ್ ಕಂಪೆನಿಗಳಿಗೆ ಬಾಕ್ಸೈಟ ಅದುರಿನ ಪೂರೈಕೆಯಲ್ಲಿ ವ್ಯತ್ಯಯ ಬರಬಾರದೆಂಬುದೇ ಬ್ರಿಟಿಷರ ಧೋರಣೆ. ಜನತೆಯ ಹಿತದೃಷ್ಟಿಯಿಂದ ಜಗನ್ನರ ಸರಕಾರ ಕೆಲಸಮಾಡಿತೆಂದೇ, ಅವರ ಪದಚ್ಯುತಿಗೆ ಮತ್ತು ಜನತಾ ಪ್ರಾಗತಿಕ ಪಕ್ಷದ ಮೇಲೆ ಬ್ರಿಟಿಷರು ಕಿಡಿಕಾರುತ್ತಿರುವದಕ್ಕೆ ಕಾರಣ. ಆಫ್ರಿಕನ ಹಾಗೂ ಭಾರತೀಯರನ್ನು ಸಂಘಟಿಸಿ ಸ್ವಯಂ ಉದ್ಧಾರಕ್ಕೆ ಸ್ವಕರ ಭುಜಕ್ಕೆ ಭುಜಕೊಟ್ಟು ಶ್ರಮಿಸಲು ಈ ಪಕ್ಷ ಕರೆಕೊಟ್ಟುದರಿಂದ ಬ್ರಿಟಿಷರು ಇದು ಕಮ್ಯೂನಿಸ್ಟ ಚಟುವಟಿಕೆಯೆಂದು ಆಕ್ಷೇಪಿಸಿದರು.

ಭಾರತೀಯ ವಲಸೆಗಾರರು

ಇದರ ನ್ಯಾಯಾನ್ಯಾಯ ವಿಮರ್ಶೆಯನ್ನು ಮಾಡುವುದು ನಮ್ಮ ಕೆಲಸವಲ್ಲ. ಆದರೆ ಬ್ರಿಟಿಷಗಿಯಾನದಲ್ಲಿ ಭಾರತೀಯ ವಲಸೆಗಾರರೂ ಇರುವರೆಂಬುದರಿಂದ, ನಾವು ತುಸು ಸಹಾನುಭೂತಿ ದೃಷ್ಟಿಕೋನವನ್ನು ತಳೆಯಲೇಬೇಕು. ಆ ಪಾತಾಳ ಲೋಕಕ್ಕೆ ಭಾರತೀಯ ವಂಶಸ್ಥರು ಹೋದುದೇಕೆ? ಅಶೋಕನ ಕಾಲದಲ್ಲಿ ಧರ್ಮ ಸಂದೇಶವನ್ನು ಬೀರುತ್ತಾ ಭಾರತೀಯರು ದಿಗ್ದೇಶಗಳ ಪರ್ಯಟನ ಕೈಗೊಂಡಿದ್ದರು. ಆ ಧನ್ಯಕಾಲ ಮುಗಿದು, ಭಾರತೀಯರು ಅನ್ಯಾನ್ಯಗತಿಕರಾಗಿ ಪರಿ

(೧೦ನೇ ಪುಟ ನೋಡಿರಿ)

ಸೇವಿಂಗ್ಸ್ ಬೇಂಕ್ ಲೆಖ್ಖ ತೆರೆಯುವ ಉಪಯುಕ್ತತೆ

ಬೇಂಕಿನಲ್ಲಿ ಸೇವಿಂಗ್ಸ್ ಲೆಖ್ಖ ತೆರೆಯಲ್ಪಟ್ಟಲ್ಲಿ ನಿಮ್ಮಲ್ಲಿಯ ಬ್ಯಾಂಕಿಂಗ್ ವ್ಯವಹಾರದ ಅಭ್ಯಾಸಕ್ಕೆ ಅನ್ವಯವಾಗುವುದಲ್ಲದೆ, ಅನಾಯಾಸವಾಗಿ ನಿಮ್ಮ ಹಲವು ವೇಳೆಗಳ ಬಾರದೇನೇ ಖರ್ಚಾಗಿಹೋಗುವ ಚಿಕ್ಕ ಚಿಕ್ಕ ಖರ್ಚುಗಳೆಷ್ಟೋ ಕಡಿಮೆಯಾಗುವವು. ನಿಮ್ಮ ಬೇಂಕಿನಲ್ಲಿ ಸೇವಿಂಗ್ಸ್ ಖಾತೆಯೊಂದನ್ನು ಪ್ರಾರಂಭಿಸಿ ಕ್ರಮವಾಗಿ ಹಣವನ್ನು ಪಾವತಿ ಮಾಡುತ್ತ ಬಂದಲ್ಲಿ ಅದು ದೊಡ್ಡ ಮೊತ್ತವಾಗಿ ನೀವು ಹೆಚ್ಚಾಗಿ ಅಪೇಕ್ಷಿಸುವ, ನಿಮ್ಮ ಕುಟುಂಬಕ್ಕೆ ಬೇಕಾದ ಮನೆಮಾರುಗಳನ್ನು ಕೊಂಡುಕೊಳ್ಳಲಿಕ್ಕಾಗಲೀ ನಿಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಲೀ, ಇಲ್ಲವೆ ಇನ್ನಾವುದಾದರೂ ಸದುಪಯೋಗ ಕಾರ್ಯಗಳಿಗಾಗಲಿ ಒದಗುವುದು.

ಇಂದೇ ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆಯಿರಿ

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ಅಪ್ರತಿಮ ಭಾಷಣಗಾರರಾಗಿ, ಭಾಷಾಂತರಕಾರರಾಗಿ, ಅಸಾಧಾರಣ ಯಕ್ಷಗಾನ ಕಲೋಪಾಸಕರಾಗಿ, ಅಗ್ರಗಣ್ಯ ದೇಶಸೇವಕರಾಗಿ, ದೀನ ದಲಿತ ಹರಿಜನ ಸೇವಕರಾಗಿ, ಉತ್ಕೃಷ್ಟ ಸಾಮಾಜಿಕ ಕೆಲಸಗಾರರಾಗಿ ವಿವಿಧ ಕ್ಷೇತ್ರಗಳಲ್ಲಿ ಹಲವು ವಿಧದಲ್ಲಿ ಜನತೆಯ ಮೇಲೆ ತನ್ನ ವ್ಯಕ್ತಿತ್ವದ ಅಚ್ಚೊತ್ತಿ ನಡುವಯಸ್ಸಿನಲ್ಲೇ ಮೃತ್ಯುವಿಗೆ ತುತ್ತಾದ ಶ್ರೀ. ಎಸ್. ಎಸ್. ಕಿಲ್ಲೆಯವರ ಸ್ಮಾರಕವಾಗಿ ದ. ಕ. ಜಿಲ್ಲಾ ಕಿಲ್ಲೆ ಸ್ಮಾರಕ ಸಮಿತಿ, ಮಂಗಳೂರು ಇವರಿಂದ ಸಚಿತ್ರವಾಗಿ ಪ್ರಕಟಿಸಲ್ಪಟ್ಟ

ಕಿಲ್ಲೆ ಸ್ಮಾರಕ ಗ್ರಂಥವನ್ನು

ಕೊಂಡುಕೊಂಡು ಸ್ಮಾರಕ ಕಾರ್ಯಗಳಿಗೆ ನೆರವಾಗಿರಿ.

ಸಂಗ್ರಾಹಕರು: ಶ್ರೀಗಳಾದ ಎಚ್. ಆರ್. ಮಲ್ಯ ಮತ್ತು ಕೆ. ಕೆ. ಶೆಟ್ಟಿ, ಮಂಗಳೂರು.

ದೊಡ್ಡ ಆಕಾರದ 160 ಪುಟಗಳು. ಬೆಲೆ ರೂ. 1-0-0 ಮಾತ್ರ.

ಕಿಲ್ಲೆಯವರ ನಾನಾ ಕಾರ್ಯಕ್ಷೇತ್ರದ ವಿವರಣೆಗಳಿವೆ.

ಪ್ರತಿಗಳು ಸಿಗುವ ಸ್ಥಳ ನವಯುಗ ಪ್ರೆಸ್, ಉಡುಪಿ.

ರೂ. 1-4-0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟ್ ಮೂಲಕ ಕಳಿಸಬಹುದು.

ಋತುಸ್ರಾವ ನಿಂತಿತೆ

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು, ಪತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3/- ಸ್ಪೆಶ್ಯಲ್ ರೂ. 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚು ಪ್ರತ್ಯೇಕ]

Mrs. P. DEVEE, F.I.S.(N.J.)
CALCUTTA. 40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.

ಲೋಕಸಭೆಯ ಚಳಿಗಾಲದ ಅಧಿವೇಶನ

ತಿರುಕೊಚ್ಚಿಯ ಚುನಾವಣೆಯಲ್ಲಿ ಗೆದ್ದುಬರಲು ಕಾಂಗ್ರೆಸದ ಸನ್ನಾಹ

ಲೋಕಸಭೆಯ ಚಳಿಗಾಲದ ಅಧಿವೇಶನವು ಕಳೆದ ಸೋಮವಾರ (ದಿನಾಂಕ ೧೬) ದಿಂದ ಜರಗುತ್ತಿವೆ. ಬಹಳ ಸಮಯದ ಅಸ್ವಸ್ಥ್ಯದಿಂದ ಚೇತರಿಸಿಕೊಂಡ ಬಳಿಕ ಲೋಕ ಸಭೆಯ ಅಧ್ಯಕ್ಷರಾದ ಶ್ರೀ ಮಾವಳಣಕರರು ಈ ಅಧಿವೇಶನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೋಸ್ಕರ ಆಸನ ಸ್ವೀಕರಿಸಿದಾಗ, ಕರತಾಡನದ ಮೂಲಕ ಸದಸ್ಯರು ಹರ್ಷ ವ್ಯಕ್ತಪಡಿಸಿದರು. ಇದಕ್ಕೆ ಮುಂಚೆ ಪ್ರಧಾನಿ ನೆಹರೂರವರು ವಾಡಿಕೆಯಂತೆ ಎಲ್ಲ ಸದಸ್ಯರ ಕೈ ಕುಲುಕಿ ಕುಶಲವನ್ನು ವಿಚಾರಿಸಿದರು.

ಚರ್ಚೆಗೆ ಬಂದ ಮಸೂದೆಗಳು

ವಾಡಿಕೆಯ ಪ್ರಶ್ನೋತ್ತರಗಳು ಮುಗಿದೊಡನೆಯೇ ಸಭೆಯು ಪುನರ್ನಿವೇಶನ ಹಣಕಾಸಿನ ಆಡಳಿತೆಯ ತಿದ್ದುಪಡಿ ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡಿತು. ಇದು ಎರಡು ವಾರಗಳ ಪೂರ್ವದಲ್ಲಿ ಹೊರಡಿಸಿದ್ದ ಸುಗ್ರೀವಾಜ್ಞೆಯ ಸ್ಥಾನದಲ್ಲಿ ಬಂದಿರುತ್ತದೆ. ಈ ತಿದ್ದುಪಡಿ ಮಸೂದೆಯನ್ನು ಮಂಡಿಸಿದ ಮಂತ್ರಿ ಶ್ರೀ ಅರುಣಚಂದ್ರ ಗುಹಾರವರು ನಿರಾಶ್ರಿತರಿಗೆ ಸಾಲಕೊಡುವುದಕ್ಕೆ ಅಗತ್ಯವೆನಿಸಿದಷ್ಟು ಹಣವನ್ನು ಒದಗಿಸುವ ಅಧ್ಯಾಸನವನ್ನು ಕೊಟ್ಟರು. ಈ ಮಸೂದೆಯು ಸ್ವೀಕಾರದ ಬಳಿಕ ತೆಂಗಿನ ನಾರಿನ ವಿಧೇಯಕವು ಸಭೆಯ ಮುಂದೆ ಬಂತು. ದಕ್ಷಿಣ ಭಾರತದಲ್ಲಿ, ಮುಖ್ಯತಃ ತಿರುಕೊಚ್ಚಿಯಲ್ಲಿ ತೆಂಗಿನ ನಾರಿನ ಉದ್ಯೋಗವು ಉಚ್ಛ್ರಾಯಾವಸ್ಥೆಯಲ್ಲಿದೆ. ಈ ಮಹತ್ವದ ಉದ್ದಿಮೆಯನ್ನು ಕೇಂದ್ರದ ನಿಯಂತ್ರಣಕ್ಕೆ ಒಳಪಡಿಸಿ, ತೆಂಗಿನ ನಾರು ಮತ್ತು ಅದರ ಉತ್ಪಾದನೆ ಮತ್ತು ನಿರ್ಯಾತದ ಮೇಲೆ ಸುಂಕ ಹೇರುವ ಅವಕಾಶವನ್ನು ಒದಗಿಸಿಕೊಳ್ಳುವುದು ಈ ಮಸೂದೆಯ ಉದ್ದೇಶ. ಇತರ ಉದ್ದಿಮೆಗಳಿಗೆ ರಚಿಸಲಾದ ಮಂಡಳಿಗಳ ರೀತಿಯಲ್ಲಿಯೇ ತೆಂಗಿನ ನಾರಿನ ನಿಯಂತ್ರಣ, ಗುಣ ಸುಧಾರಣೆ, ನಿರ್ಯಾತ ವ್ಯಾಪಾರದಲ್ಲಿ ಕಂಡು ಬರುವ ಅನಿಷ್ಟಗಳ ನಿವಾರಣೆ, ನಿರ್ಯಾತದ ಮೇಲಿನ ಅವಲಂಬನ ತಗ್ಗುವಂತೆ ಆಂತರಿಕಪೇಟೆಯ ವಿಸ್ತರಣೆ ಮುಂತಾದುವುಗಳನ್ನು ಗಮನಿಸಲು ಒಂದು ಮಂಡಳಿಯು ಸ್ಥಾಪಿಸಲ್ಪಡುತ್ತದೆ. ಈ ಮಸೂದೆಯೂ ಅಂಗೀಕರಿಸಲ್ಪಟ್ಟ ಬಳಿಕ ರಾಜ್ಯ ಪರಿಷತ್ತಿನಲ್ಲಿ ಈಗಾಗಲೇ ಸ್ವೀಕಾರಗೊಂಡಿರುವ ಐತಿಹಾಸಿಕ ಮಹತ್ವದ ಅವಶೇಷಗಳ ರಕ್ಷಣಾ ಮಸೂದೆಯನ್ನು ಲೋಕ ಸಭೆ ಚರ್ಚೆಗೆ ತೆಗೆದುಕೊಂಡು ಅದಕ್ಕೆ ಒಪ್ಪಿಗೆಯನ್ನು ನೀಡಿತು.

ನಿಲುವಳಿ ಸೂಚನೆ

ಯಾವಾಗಲೂ ಲೋಕಸಭೆಯ ಅಧಿವೇಶನ ತೊಡಗುವಾಗ ಅನೇಕ ನಿಲುವಳಿ ಸೂಚನೆಗಳು ಮಂಡಿಸಲ್ಪಡುತ್ತಿದ್ದವು ಆದರೆ ಈ ಸಲ ಅಂಥದೇನೂ ಸಂಭವಿಸಲಿಲ್ಲ. ಕೇವಲ ಒಂದು ನಿಲುವಳಿ ಸೂಚನೆಯನ್ನು ಅಕಾಲಿ ದಳದ ಸದಸ್ಯ ಸರ್ದಾರ ಅಜಿತ ಸಿಂಗರು ಮಂಡಿಸಲೆತ್ನಿಸಿದರೂ ಅಧ್ಯಕ್ಷರು ತಮ್ಮ ಕೋಣೆಯಲ್ಲಿಯೇ ಅದನ್ನು ನಿಯಮ ಬಾಹ್ಯ ಮಾಡಿರುವುದಾಗಿ ಹೇಳಿ ಪೀಡೆ ನಿವಾರಿಸಿದ್ದರು. ಸಭೆಯಲ್ಲಿ ಮರಳಿ ಈ ನಿಲುವಳಿ ಸೂಚನೆಯನ್ನೆತ್ತುವ ಪ್ರಯತ್ನ ನಡೆದಾಗ ಅಧ್ಯಕ್ಷರು ತಾವು ಮೊದಲೇ ನಿರ್ಣಯ ಕೊಟ್ಟಿರುವುದನ್ನು ನೆನಪಿಗೆ ತಂದುಕೊಟ್ಟು ಸದಸ್ಯರ ಬಾಯಿ ಮುಚ್ಚಿಸಿದರು. ಮೂರು ದಿನಗಳ ಬಳಿಕ ಕಮ್ಯೂನಿಸ್ಟ ಧುರೀಣ ಶ್ರೀ ಹಿರೇನ ಮುಖರ್ಜಿಯವರು ಶ್ರೀ ಎ. ಕೆ ಗೋಪಾಲನ್ನರಿಂದ ಬಂದ ತಂತಿ ಸಂದೇಶದ ಆಧಾರದ ಮೇಲೆ ಇನ್ನೊಂದು ನಿಲುವಳಿ ಸೂಚನೆ ಮಂಡಿಸಿದರು. ತಿರುಕೊಚ್ಚಿಯಲ್ಲಿ ಕಾಂಗ್ರೆಸ್ಸೇತರ ಚುನಾವಣಾ ಪ್ರಚಾರ ಸಭೆಯೊಂದು ನಡೆದಾಗ ಅಲ್ಲಿ ಪೋಲೀಸರು ಅಡ್ಡಬಂದು ಅನವಶ್ಯಕವಾದ ಬಲತ್ಕಾರವನ್ನೂ ಶಕ್ತಿಪ್ರದರ್ಶನವನ್ನೂ ಮಾಡಲಾಯಿತೆಂದು ಇದರಲ್ಲಿ ಹೇಳಿದ್ದಿತು. ಸಭಾಧ್ಯಕ್ಷರು ಸಾಮಾನ್ಯವಾಗಿ ಈ ನಿಲುವಳಿ ಸೂಚನೆಯು ರಾಜ್ಯ ಸರಕಾರದ ಅಧಿಕಾರಕ್ಕೆ ಒಳಪಟ್ಟ ವಿಷಯವೊಂದನ್ನು ಪ್ರಸ್ತಾಪಿಸುತ್ತದೆಯೆಂದು ಹೇಳಿ ನಿರಾಕರಿಸಲು ಬರುತಿದ್ದರೂ ತಿರುಕೊಚ್ಚಿ ರಾಜ್ಯದಲ್ಲಿ ಶಾಸನ ಸಭೆಯು ಕೆಲಸ ಮಾಡುತ್ತಿಲ್ಲವಾದುದರಿಂದ ಈ ವಿಷಯದಲ್ಲಿ ಕೇಂದ್ರ ಸರಕಾರದ ವಿಚಾರವನ್ನು ತಿಳಿಯುವುದು ತಮ್ಮ ಆಪೇಕ್ಷೆ ಎಂದರು. ಪ್ರಧಾನಿ ನೆಹರೂರವರು ನಿಲುವಳಿ ಸೂಚನೆಯಲ್ಲಿ ಹೇಳಿದ ಸಭೆಯು ಚುನಾವಣಾ ಪ್ರಚಾರ ಸಭೆಯಾಗಿರಲಿಕ್ಕಿಲ್ಲ—ಏಕೆಂದರೆ ತಿರುಕೊಚ್ಚಿಯಲ್ಲಿ ಚುನಾವಣೆಗಳು ಎಂದು ಜರಗಬೇಕೆಂಬ ಕುರಿತು ಇನ್ನೂ ನಿರ್ಧಾರ ಮಾಡಿರುವುದಿಲ್ಲ. ಆದುದರಿಂದ ಇಷ್ಟು ಬೇಗನೇ ಚುನಾವಣಾ ಪ್ರಚಾರ ಕಾರ್ಯಕ್ಕೋಸ್ಕರ ಅಲ್ಲಿ ಸಭೆ ಜರಗಿದೆಯೆಂದು ಹೇಳುವುದು ಸರಿಯಾಗದು. ಪ್ರಾಯಶಃ ತಿರುಕೊಚ್ಚಿಯಲ್ಲಿ ಈಗ ಪ್ರಬಲವಾಗಿರುವ ವಿದ್ಯಾರ್ಥಿಗಳ ಕಿರುಕುಳವೇ ಅದಾಗಿರಬೇಕು ಎಂದು ಹೇಳಿ, ಬೇಗನೇ ಈ ಘಟನೆಯ ವಿವರಗಳನ್ನು ಸಭೆಗೆ ಒದಗಿಸುವ ಆಶ್ವಾಸನೆ ನೀಡಿದರು.

ತಿರುಕೊಚ್ಚಿಯಲ್ಲಿ

ತಿರುಕೊಚ್ಚಿಯಲ್ಲಿ ಹೊಸ ಚುನಾವಣೆಗಳು ಎಂದು ನಡೆಯುವುವೆಂದು ತಿಳಿಯದಾದರೂ ಅಲ್ಲಿ ಚುನಾವಣೆಯ ಬಿಸಿ ದಿನದಿನಕ್ಕೂ ಏರುತ್ತಿರುವುದೆಂದು ವಾರ್ತೆಗಳು ತಿಳಿಸುತ್ತವೆ. ಕಾಂಗ್ರೆಸ ಪಕ್ಷವು ಚುನಾವಣೆಯಲ್ಲಿ ಸಂಪೂರ್ಣ ಯಶಸ್ಸನ್ನು ಪಡೆಯುವ ದೃಢ ನಿರ್ಧಾರವನ್ನು ಕೈಗೊಂಡು ಒತ್ತರದಿಂದ ತನ್ನ ಕಾರ್ಯಕ್ರಮಗಳನ್ನು ಸಿದ್ಧಗೊಳಿಸುತ್ತಿದೆ. ಚುನಾವಣಾ ಹೋರಾಟವನ್ನು ಗೆದ್ದೇ ತೀರಬೇಕೆಂಬ ಅಭಿಲಾಷೆಯಿಂದ ಕಾಂಗ್ರೆಸದ ಅತಿರಥ ಮಹಾರಥರನ್ನೆಲ್ಲ ತಿರುಕೊಚ್ಚಿಗೆ ಆಮಂತ್ರಿಸಿ, ಚುನಾವಣಾ ಪ್ರಚಾರ ಭಾಷಣಗಳನ್ನು ಮಾಡಿಸುವ ಸರ್ವ ಸನ್ನಾಹಗಳಾಗುತ್ತಿವೆ. ಮುಂಬಯಿಯಲ್ಲಿ ಕಳೆದ ಮಹಾಚುನಾವಣಾ ಕಾಲದಲ್ಲಿ ಕಮ್ಯೂನಿಸ್ಟ ಹಾಗೂ ಪ್ರಜಾ ಸಮಾಜವಾದಿಗಳ ಸೊಕ್ಕನ್ನು ಮುರಿದು ಕಾಂಗ್ರೆಸ್ಸಿಗೆ ಪ್ರಚಂಡ ವಿಜಯವನ್ನು ಸಂಪಾದಿಸಿ ಕೊಟ್ಟ ಶ್ರೀ ಎಸ್. ಕೆ. ಪಾಟೀಲರ ಕೊರಳಿಗೆ ತಿರುಕೊಚ್ಚಿಯ ಕಾಂಗ್ರೆಸ್ ಚುನಾವಣಾ ಹೋರಾಟದ ನೊಗವನ್ನು ಕಟ್ಟಿರುವರು. ಚುನಾವಣ ಪ್ರಚಾರ ಭಾಷಣಗಳ ಮೂಲಕ ಕಾಂಗ್ರೆಸ್ಸದ ವರ್ಚಸ್ಸನ್ನು ಹೆಚ್ಚಿಸುವುದರಲ್ಲಿ ಶ್ರೀ. ಪಾಟೀಲರದು ಎತ್ತಿದ ಕೈಯಾಗಿರುತ್ತದೆ. ಇವರ ಪ್ರಯತ್ನಗಳಿಗೆ ಪೂರಕವಾಗಿ ರಾಜಗೋಪಾಲಾಚಾರಿ, ಕಟಜೂ, ನೆಹರೂ ಮುಂತಾದ ಪ್ರಭೃತಿಗಳೂ ಕೆಲವು ಕಾಲ ತಿರುಕೊಚ್ಚಿಯಲ್ಲಿ ಕಾಂಗ್ರೆಸದ ಹುರಿಯಾಳುಗಳಿಗೆ ಬೆಂಬಲ ಕೋರುತ್ತಾ ಪ್ರಚಾರ ಭಾಷಣ ನಡೆಸಲಿರುವರು. ಹುರಿಯಾಳುಗಳನ್ನು ಆರಿಸುವಾಗ ಕಾಂಗ್ರೆಸ್ ಪಕ್ಷವು ಈ ಸಲ ಬಹಳ ಜಾಗರೂಕತೆಯಿಂದ ವರ್ತಿಸುತ್ತಿದೆ—ಪ್ರತಿಯೊಂದು ಮತದಾರ ಕ್ಷೇತ್ರಗಳಲ್ಲೂ ಅಧಿಕ ಮತವನ್ನು ಸಂಪಾದಿಸಿ ಜಯಿಸಬಲ್ಲ ಜನಪ್ರಿಯ ಕಾಂಗ್ರೆಸ್ ಹುರಿಯಾಳನ್ನೆ ಚುನಾವಣೆಯ ರಣಾಂಗಣಕ್ಕೆ ಇಳಿಸಬೇಕೆಂಬ ಮಹದಭಿಲಾಷೆಯನ್ನು ಕಾಂಗ್ರೆಸು ಇಟ್ಟುಕೊಂಡಿದೆ. ತಿರುಕೊಚ್ಚಿಯಲ್ಲದೆ ಪೆಪ್ಸು ರಾಜ್ಯದಲ್ಲಿಯೂ ಬೇಗನೇ ಚುನಾವಣೆಗಳು ನಡೆಯಲಿದ್ದು, ಆ ರಾಜ್ಯದಲ್ಲೂ ಕಾಂಗ್ರೆಸ್ಸಿಗೆ ಜನಬೆಂಬಲ ದೊರೆಯುವಂತೆ ಪಯತ್ನಗಳಾಗುತ್ತಿವೆ. ಹಿಂದು-ಶೀಕ ಭೇದ ಭಾವನೆಯು ತೊಲಗಿ ಸೌಹಾರ್ದವುಂಟಾಗುವಂತೆ ನೋಡಿಕೊಳ್ಳುವುದೇ ಇಲ್ಲಿಯ ಈಗಿನ ಕೆಲಸ. ರಾಷ್ಟ್ರಾಧ್ಯಕ್ಷರ ಇಷ್ಟು ಕಾಲದ ಆಡಳಿತವು ಪ್ರಜೆಗಳಿಗೆ ತುಸುವಾದರೂ ಸಮಾಧಾನ ಕೊಟ್ಟಿರುವುದರಿಂದ, ಕಾಂಗ್ರೆಸದ ಕಡೆಗೆ ಅದರ ಒಲವು ಸ್ವಾಭಾವಿಕವಾಗಿಯೇ ಹೆಚ್ಚಿಕೊಂಡಿದೆ ಎಂದು ಹೇಳಲು ಅಡ್ಡಿಯಿಲ್ಲ.

ತಿಬೇಟನೊಡನೆ ಸಂಬಂಧ

ಲೋಕಸಭೆಯ ಪ್ರಶ್ನೋತ್ತರ ಕಾಲದಲ್ಲಿ ಮಹತ್ವದ ಕೆಲವು ಸಂಗತಿಗಳು ತಿಳಿದು ಬಂದವು. ಅವುಗಳಲ್ಲಿ ಭಾರತದ ಉತ್ತರಕ್ಕೆ ಹಿಮಾಲಯದಾಚೆ ಇರುವ ತಿಬೇಟದೊಡನೆ ಸಂಬಂಧವನ್ನು ನಿರ್ಧರಿಸಲು ಪೇಕಿಂಗದಲ್ಲಿ ಚೀನೀ ಸರಕಾರದೊಡನೆ ಮಾತುಕತೆಯಾಗುವುದೆಂದು ಹೇಳಿದುದು ಮಹತ್ವಪೂರ್ಣವಾಗಿರುತ್ತದೆ. ಈ ಪರಿಸ್ತಿನ ಬಗ್ಗೆ ಸಮಾಲೋಚನೆಗಳನ್ನು ಮಾಡಲು ಚೀನಾದಲ್ಲಿರುವ ಭಾರತೀಯ ರಾಯಭಾರಿ ಹಾಗೂ ಸಿಕ್ಕಿಮದಲ್ಲಿರುವ ನಮ್ಮ ಪ್ರತಿನಿಧಿಗಳನ್ನು ಹೊಸದೆಹಲಿಗೆ ಕರೆಸಲಾಗಿದೆ ಉಭಯ ಸರಕಾರಗಳ ನಡುವೆ ಸೌಹಾರ್ದಯುತ ಮಾತುಕತೆಗಳು ನಡೆದು ಲಾಭದಾಯಕ ಪರಿಣಾಮವಾಗುವುದೆಂದು ನೆಹರೂ ಆಶಿಸಿರುವರು. ತಿಬೇ

ಕೆ. ಆರ್. ಕೆ. ಶೇಟ್,

ಡಯಮಂಡ್—ಮಾರ್ಟ—ಮಂಗಳೂರು.

ಇವರು

ಮಹಾಜನರಿಗೆ—ತಮ್ಮ ಹಾರ್ದಿಕ ಸುಸ್ವಾಗತವನ್ನು ಈ ಮೂಲಕ ಕೊಡುತ್ತಾರಲ್ಲದೆ ಈ ವರೆಗೂ—ಕೊಟ್ಟ ಇನ್ನುಮುಂದೆಯೂ ಕೊಡುವ ಸಹಾನುಭೂತಿಗೆ ತುಂಬಾ ಕೃತಜ್ಞರಾಗಿರುತ್ತಾರೆ.

ಕೆ. ಕೆ. ಆರ್. ಶೇಟ್.
ಪ್ರೊಪ್ರೈಟರ್.

ಬೇಗನೆ ಪ್ರಕಟವಾಗಲಿರುವುದು—ನಿಮ್ಮ ಪ್ರತಿಗಳನ್ನು ಕಾದಿರಿಸಿರಿ

ಡಿ! ಕಿಲ್ಲೆಯವರ ಮೂರು ಗ್ರಂಥಗಳು

1. ಪ್ರಾಚೀನ ತುಳುನಾಡ ಇತಿಹಾಸ	ಬೆಲೆ ರೂ. ೨	೮	೦
2. ಭಾರತದ ಕರ್ಣ (ಗದ್ಯ)	ಬೆಲೆ. ರೂ. ೦	೪	೦
4. ಮುರಲಿ (ಪದ್ಯ)	ಬೆಲೆ. ರೂ. ೦	೪	೦

ದಶಂಬರ 5ನೇ ತಾರೀಕಿಗೆ ಈ ಪುಸ್ತಕಗಳು ಪ್ರಕಟವಾಗಲಿದ್ದು, ಮುಂಗಡವಾಗಿ ರೂ. 3—8—0 ಕಳುಹಿಸುವವರಿಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಮೂರೂ ಪುಸ್ತಕಗಳನ್ನು ಕಳುಹಿಸಲಾಗುವುದು, ತ್ವರೆ ಮಾಡಿರಿ.

A. T. Mohan Rai,
Valancia, Kankanady,
MANGALORE 2

ಶ್ರೇಷ್ಠ ದರ್ಜೆ ಗಡಿಯಾರ

ಪ್ರತಿಯೊಂದು 5 ವರ್ಷ ಗ್ಯಾರಂಟಿ. ಪ್ರತಿ ಆರ್ಡರ್ ಜೊತೆಗೂ ಒಂದು ಫೌಂಟನ್ ಪೆನ್ನು ಒಂದು ಸಿಗರೇಟ್ ಲೈಟರ್ ಉಚಿತ!

ನಂ. 132(ಸೈಜ್ 7 3 4")
5 ಜೂ. ರೋಲ್ಡ್ ಗೋಲ್ಡ್ ರೂ. 30.
15 ಜೂ. ರೋಲ್ಡ್ ಗೋಲ್ಡ್ ರೂ. 40.



(ಹೆಂಗಸರಿಗೆ ಮತ್ತು ಗಂಡಸರಿಗೆ)
ನಂಬ್ರ 131 (ಸೈಜ್ 6 3/4")
ಫ್ಲಾಟ್ಸ್ ಕ್ರೋಮ. ಕೇಸ್ ರೂ. 20
,, ,, 5 ಜೂ. ರೋಲ್ಡ್ ಗೋಲ್ಡ್ ರೂ. 38
15 ಜೂಯಲ್ಸ್ ರೋಲ್ಡ್ ಗೋಲ್ಡ್ ರೂ. 35



ಅಲಾರಾಂ ಗಡಿಯಾರ
ಇಂಗ್ಲೀಷ್ ರೂ. 18
ಯು. ಎಸ್. ಎ. ರೂ. 19
ರೇಡಿಯಂ ಡೈಯಲ್ ರೂ. 2 ಪ್ರತ್ಯೇಕ

ಪಾಕೆಟ್ ವಾಚ್ ರೂ. 10 ಉತ್ತಮ ರೂ. 12
ಇಂಗ್ಲಿಷಿನಲ್ಲಿ ವ್ಯವಹರಿಸಿ. ಅಂಚೆವೆಚ್ಚ ಬೇರೆ ಆದರೆ 3 ಗಡಿಯಾರದ ಆರ್ಡರಿಗೆ ಉಚಿತ.

Calcutta Watch Co. Sec 268
Post Box No. 12203, CALCUTTA-5

ಕೆಲಸದ ಅವಕಾಶ ಅಧಿಕಗೊಳಿಸುವ ಬಗೆ

ಆಂಧ್ರದಲ್ಲಿ ಪ್ರಜಾ ಸೋಶಲಿಸ್ಟ ಪಕ್ಷದ ಸದಸ್ಯರಲ್ಲಿ ಭಿನ್ನಾಭಿಪ್ರಾಯ

ಟಿನೊಡನೆ ನಮಗೆ ವ್ಯಾಪಾರೀ ಸಂಬಂಧವಿದೆ—ಯಾತ್ರಾ ಸ್ಥಳಗಳ ವಿಷಯದಲ್ಲೂ ಪೂಜ್ಯ ಭಾವನೆ ಇದೆ. ಇವುಗಳು ಕೆಡದೆ ಬಹುಕಾಲ ಬಾಳುವಂತೆ ಮಾತುಕತೆಗಳನ್ನು ನಡೆಸುವುದು ಹಿತವಾಗಿರುತ್ತದೆ. ತಿಬೇಟದ ಜನರು ಬೌದ್ಧ ಧರ್ಮೀಯರು--ಅವರೊಡನೆ ಬುದ್ಧ ಭಗವಾನನ ಕಾಲದಿಂದಲೂ ಭಾರತಕ್ಕೆ ನಿಕಟ ಸಂಬಂಧವಿರುತ್ತದೆ. ಬ್ರಿಟಿಷರು ಭಾರತವನ್ನು ಬಿಟ್ಟು ಹೋದಮೇಲೆ ತಿಬೇಟದಮೇಲಿನ ಅಧಿಕಾರ ಚೀನೀ ಸರಕಾರಕ್ಕೆ ಹಸ್ತಾಂತರವಾಗುವುದನ್ನು ಭಾರತ ಪ್ರತಿಭಟಿಸಲಿಲ್ಲ. ನಮಗೆ ಸಾಮ್ರಾಜ್ಯ ಕಟ್ಟುವ ಆಶೆ ಇಲ್ಲವೆಂಬುದೇ ಇದರ ಕಾರಣ. ಅದೇನಿದ್ದರೂ ತಿಬೇಟಿನೊಡನೆ ನಮ್ಮ ಸಂಬಂಧ ಚಿರಸ್ಥಾಯಿಯಾಗುವಂತೆ ಈ ಪರಿಷತ್ತು ಮಾಡಲೆಂಬುದೇ ನಮ್ಮ ಅಪೇಕ್ಷೆ.

ಈಶಾನ್ಯ ಗಡಿಯ ಭದ್ರತೆ

ಪ್ರಧಾನ ಮಂತ್ರಿ ನೆಹರೂರವರು ಭಾರತದ ಈಶಾನ್ಯ ಗಡಿವಲಯದಲ್ಲಿ ಈಚೆಗೆ ಭಾರತೀಯ ಸೈನಿಕ ಪಡೆಯ ಹಾಗೂ ಬೇರೆ ೩೦ ಮಂದಿಯ ಕೊಲೆಯಾದ ಪ್ರಕರಣದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ, ಈ ಕಾಡು ಜನಾಂಗಗಳ ಕುರಿತು ಸಹಾನುಭೂತಿಪರ ಧೋರಣೆಯನ್ನು ಅನುಸರಿಸುವ ಅಗತ್ಯವಿದೆಯೆಂದು ಅಭಿಪ್ರಾಯಪಟ್ಟರು. ಈ ಆಯಕಟ್ಟಿನ ಪ್ರದೇಶದಲ್ಲಿ ಶಾಂತಿಯನ್ನೂ ಭದ್ರತೆಯನ್ನೂ ಕಾಯ್ದುಕೊಳ್ಳುವುದು ನಮ್ಮ ಪ್ರಥಮ ಕರ್ತವ್ಯವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅದಕ್ಕೆ ಪ್ರಯತ್ನವನ್ನು ಮಾಡಬೇಕಾಗುವುದು. ಈ ಜನರನ್ನು ಮಣಿಸುವುದೊಂದೇ ಇಚ್ಛೆಯಾಗಿದ್ದರೆ ಅವರ ಹಳ್ಳಿಗಳ ಮೇಲೆ ಬಾಂಬುದಾಳಿ ನಡೆಸಬಹುದು. ಆದರೆ ಹಾಗೆ ಮಾಡುವುದು ಸರಿಯಲ್ಲ--ಗಡಿವಲಯದ ಭಯಂಕರ ಮೂಲನಿವಾಸಿಗಳು ದಂಗೆ ಎದ್ದಿರುವರು ಹಾಗೂ ಸುಲಿಗೆ ಮಾಡಿರುವರೆಂದೇ ತಿಳಿದು ಅವರನ್ನು ಶಿಕ್ಷಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳುವುದು ಸರಕಾರದ ಇಚ್ಛೆಯಾಗಿರುತ್ತದೆ. ಸೆರೆ ಹಿಡಿದ ಭಾರತೀಯ ಸೈನಿಕರು ಹಾಗೂ ಅವರ ಜೊತೆಗಾರರನ್ನು ನಿರ್ದಿಷ್ಟ ಅವಧಿಯಲ್ಲಿ ಬಿಡುಗಡೆ ಮಾಡಬೇಕೆಂದು ಆ ಕಾಡು ಜನರಿಗೆ ತಿಳಿಸಲಾಗಿದೆ. ಈ ಎಚ್ಚರಿಕೆಯನ್ನು ಮನ್ನಿಸಿ ಶರಣಾಗತರಾಗದಿದ್ದ ಪಕ್ಷದಲ್ಲಿ ನಮ್ಮ ಸೈನ್ಯ ಪಡೆಯು ಆ ಹಳ್ಳಿಗಳನ್ನು ಪ್ರವೇಶಿಸುತ್ತದೆ. ಈ ಪ್ರದೇಶದಲ್ಲಿ ನೆಲಸುವ ಜನರಿಗೆ ಸೈನ್ಯಪಡೆ ಏಕಾಗಿ ಬರುತ್ತಿದೆಯೆಂಬುದನ್ನು ತಿಳಿಯಪಡಿಸುವುದು ದೊಡ್ಡ ಸಮಸ್ಯೆ. ಇಷ್ಟೇ ಮಹತ್ವದ ಇನ್ನೊಂದು ಪ್ರಶ್ನೆ ಸಂಪರ್ಕದ ಅನುಕೂಲತೆಯನ್ನು ಏರ್ಪಡಿಸುವುದು. ತಮ್ಮ ಮೇಲಾಗುವ ಹಠಾತ್ ದಾಳಿಯನ್ನು ಪ್ರತಿಭಟಿಸುವ ಉದ್ದೇಶದಿಂದ ಮಹಿಳೆಯರನ್ನೂ ಮಕ್ಕಳನ್ನೂ ಒಳಪ್ರದೇಶದ ಅರಣ್ಯಗಳಿಗೆ ಕಳಿಸಿಕೊಟ್ಟು, ಗಂಡಾಳುಗಳೆಲ್ಲಾ ಒಟ್ಟಾಗುತ್ತಿರುವರೆಂದು ವೈಮಾನಿಕ ನಿರೀಕ್ಷಣೆಗಳು ತಿಳಿಸುತ್ತವೆ. ಆದರೆ ನಮ್ಮ ಸೈನಿಕರು ಪ್ರಬಲ ಪ್ರತಿಭಟನೆಯನ್ನು ಇದಿರಿಸಬೇಕಾಗಿ ಬರುತ್ತದೆ. ನಮ್ಮ ಸೈನ್ಯ ತನ್ನ ಕರ್ತವ್ಯದಲ್ಲಿ ಯಶಸ್ವಿಯಾಗುವುದೆಂದು ಹೇಳುವುದು ಅನಗತ್ಯ. ಕಾರಣ ಈ ಘಟನೆಯನ್ನು ಭಾವೋದ್ವೇಗಕ್ಕೆ ಒಳಗಾದವರಂತೆ ನೋಡುವುದೂ ಬೇಡ.

ನಿರುದ್ಯೋಗದ ಸಮಸ್ಯೆ

ನಮಗೆ ನಿಜವಾಗಿ ಚಿಂತೆ ಹುಟ್ಟಿಸುವ ಸಂಗತಿ ಇದ್ದರೆ—ಅದು ನಿರುದ್ಯೋಗದ ಪ್ರಶ್ನೆ. ಇದನ್ನು ಪದೇಪದೇ ಹೇಳುತ್ತಾ ಬಂದಿದ್ದೇವೆ. ಈ ವಾರವೂ ಮರಳಿ ಇದನ್ನು ಪ್ರಸ್ತಾಪಿಸುವುದಕ್ಕೆ ಲೋಕ ಸಭೆಯಲ್ಲಿ ಈ ಕುರಿತು ನಡೆದ ಚರ್ಚೆ ಹಾಗೂ ಪ್ರಶ್ನೋತ್ತರಗಳು ಕಾರಣ. ಯೋಜನಾ ಮಂತ್ರಿ ಶ್ರೀ ನಂದಾರವರು ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ ನಗರ ಹಾಗೂ ಹಳ್ಳಿಗಳಲ್ಲಿ ನಿರುದ್ಯೋಗ ಎಷ್ಟರ ಮಟ್ಟಿಗೆ ಹಬ್ಬಿದೆಯೆಂದೂ ಅದನ್ನು ನಿವಾರಿಸುವ ದೃಷ್ಟಿಯಿಂದ ಗುಡಿ ಕೈಗಾರಿಕೆ ಮತ್ತು ಸಣ್ಣ ಮಟ್ಟಿನ ಉದ್ದಿಮೆಗಳನ್ನು ಹೇಗೆ ಬೆಳೆಸಬಹುದೆಂದೂ ರಾಜ್ಯ ಸರಕಾರಗಳು ನೀಡಿದ ಸಲಹೆಗಳು ಪರಾಮರ್ಶೆಯಲ್ಲಿವೆ ಎಂದು ತಿಳಿಸಿದರು. ಪಂಚವಾರ್ಷಿಕ ಯೋಜನೆಯನ್ನು ನಿರುದ್ಯೋಗ ನಿರ್ಮೂಲನಕ್ಕೆ ಸಹಕಾರಿಯಾಗುವಂತೆ ವಿಸ್ತರಿಸುವುದಕ್ಕೆ ಈಚೆಗೆ ನಿರ್ಧಾರ ಮಾಡಿದ್ದು ೧೭೦-೧೭೫ ಕೋಟಿ ರೂಪಾಯಿಗಳ ವೆಚ್ಚ ಬರುವ ಯೋಜನೆಗಳನ್ನು ಇದರಲ್ಲಿ ಸೇರಿಸಲು ನಿರ್ಧಾರವಾಗಿರುತ್ತದೆ. ಉದ್ಯೋಗಗಳನ್ನು ಹೆಚ್ಚಿಸುವುದರಿಂದ ನಿರುದ್ಯೋಗ ನಿರ್ಮೂಲವಾಗುತ್ತದ್ದರೂ, ಉತ್ಪಾದಿತ ಸರಕುಗಳನ್ನು ಜನರೆಲ್ಲರೂ ಉಪಯೋಗಿಸಲಾಗುವಂತೆ ಕ್ರಯ ಶಕ್ತಿಯನ್ನು ಹೆಚ್ಚಿಸುವುದೂ ಒಂದು ದೊಡ್ಡ ಸಮಸ್ಯೆ. ಸರಕುಗಳು ಹೆಚ್ಚಿಕೊಂಡು ಉತ್ಪಾದನೆ ಕೊಳೆಯುತ್ತಲೇ ಇದ್ದರೆ, ಕಾರ್ಖಾನೆಗಳನ್ನು ಮುಚ್ಚಿಬಿಡುವ ಪ್ರಸಂಗ ಬಂದೊದಗುತ್ತದೆ. ಕಳೆದ ಅಧಿವೇಶನದಲ್ಲಿ ಶ್ರೀ ಗೋಪಾಲನ್ನರು ಮಂಡಿಸಿದ್ದ ನಿರುದ್ಯೋಗ ಸಮಸ್ಯೆಯ ಗೊತ್ತುವಳಿಯ ಚರ್ಚೆಯನ್ನು ಶನಿವಾರದಿನ ಮುಂದುವರಿಸಿದಾಗ, ಅರ್ಥಸಚಿವ ದೇಶಮುಖರು ದೇಶದ ಪ್ರಕೃತ ಆರ್ಥಿಕ ವಿದ್ಯಮಾನಗಳನ್ನು ವಿಮರ್ಶಿಸಿ, ನಾವು ಭಯಾತುರದಿಂದ ಕಂಗೆಡುವಂಥ ವಿಶೇಷ ಪರಿಸ್ಥಿತಿ ಈಗಿರುವುದಿಲ್ಲವೆಂಬ ಆಶ್ವಾಸನೆಯನ್ನು ನೀಡಿದರು. ಅತಿ ಪ್ರಸರಣದ ಭಯವು ದೂರಗೊಂಡಿದೆ. ಸರಕುಗಳ ಬೆಲೆಯು ಕಡಿಮೆಯಾಗುತ್ತಾ ನಡೆದಿದೆ. ಜೀವನ ವೆಚ್ಚದ ಮಟ್ಟವು ತೃಪ್ತಿಕರವಾಗಿ ಇಳಿಮುಖವಾಗುತ್ತಿದೆ. ಆದುದರಿಂದ ಜನರ ಬೇಡಿಕೆಗಳು ಹೆಚ್ಚುತ್ತಿವೆಯೋ ಮತ್ತು ಈ ಬೇಡಿಕೆಯನ್ನು ಪೂರೈಸುವ ರೀತಿಯಲ್ಲಿ ಉತ್ಪಾದನಾ ಮಟ್ಟ ಏರಿದೆಯೋ ಎಂಬುದು ಮುಖ್ಯ ಪ್ರಶ್ನೆಯೆಂದೂ ಈ ದೃಷ್ಟಿಯಲ್ಲಿ ವಿಚಾರಿಸಿದರೆ, ಸರಕಾರದ ಯೋಜನೆಗಳು ಉದ್ಯೋಗಾವಕಾಶವನ್ನು ನೀಡಿದಷ್ಟು ಹೆಚ್ಚು ಖಾಸಗಿ ಕ್ಷೇತ್ರದಲ್ಲಿ ಪ್ರಗತಿ ಕಂಡು ಬಂದಿಲ್ಲವೆಂದೂ ದೇಶಮುಖರು ಅಭಿಪ್ರಾಯಪಟ್ಟರು. ನಮಗೆ ಉದ್ಯೋಗ ಹೆಚ್ಚಿಸುವುದು ಅಗತ್ಯವಿದೆ. ಇದಕ್ಕೋಸ್ಕರ ಭಂಡವಾಳದ ವಿನಿಯೋಗ ಪ್ರಮಾಣವೂ ಹೆಚ್ಚುವುದವಶ್ಯ. ದೀರ್ಘಾವಧಿಯ ಪರಿಹಾರಕ್ಕೆ ಇದೊಂದೇ ದಾರಿ. ಈ ಕೂಡಲೇ ಏನಾದರೂ ಮಾಡುವುದಿದ್ದರೆ, ಅದು ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿ ಉದ್ಯೋಗಾವಕಾಶವನ್ನು ಹೆಚ್ಚಿಸುವುದೇ ಎನ್ನಬಹುದು.

ನೆರವಿನ ಹೊಸ ಯೋಜನೆ

ನಿರುದ್ಯೋಗದಿಂದ ಪೀಡಿತರಾದ ಮಧ್ಯಮ ವರ್ಗದವರಿಗೆ ಮುಖ್ಯವಾಗಿ ಮಹಿಳೆಯರಿಗೆ - ನೆರವು ನೀಡಲು ಕೆಲವು ವಿಶಿಷ್ಟ ಪ್ರಯೋಗಗಳನ್ನು ನಡೆಸಲು ಸರಕಾರವು ಇಷ್ಟಪಟ್ಟಿದೆ. ಭಾರತದ ಸಾಮಾಜಿಕ ಕಲ್ಯಾಣ ಮಂಡಳಿ ಈ ವಿಷಯದಲ್ಲಿ ಆಸಕ್ತಿಯನ್ನು ವಹಿಸಿದ್ದು, ಹೊಸ ದೆಹಲಿಯಲ್ಲಿ ೬೦ರಿಂದ ೨೫೦ ರೂಪಾಯಿ ಮಾಸಿಕ ಆದಾಯವಿರುವ ಮಧ್ಯಮ ವರ್ಗದ ೧೦೦೦ ಕುಟುಂಬಗಳಿಗೆ ಈ ಯೋಜನೆಯು ಪ್ರಯೋಜನ ಸಿಕ್ಕುವಂತೆ ಮಾಡಿದೆ. ಈ ಗುರುವಾರ ದಿನ (ತಾ. ೨೬) ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ಈ ಯೋಜನೆಯಲ್ಲಿ ಮೊದಲನೇದನ್ನು ಉದ್ಘಾಟಿಸುವರೆಂದು ತಿಳಿದಿದೆ. ಒಂದು ಬೆಂಕಿ ಪೆಟ್ಟಿಗೆಯ ಕಾರ್ಖಾನೆ ಎನ್ನು ಈ ಕುಟುಂಬಗಳ ಸಹಕಾರದಿಂದ ನಡೆಸುವುದು ಮತ್ತು ಇಲ್ಲಿ ಉತ್ಪಾದಿತವಾದ ಬೆಂಕಿಪೆಟ್ಟಿಗೆಗಳ ಮಾರಾಟದ ಯೋಗ್ಯವ್ಯವಸ್ಥೆಯನ್ನು ಮಾಡುವುದು ಮಂಡಳಿಯ ಯೋಜನೆ. ಇದರ ಎಲ್ಲ ಸಿದ್ಧತೆಗಳೂ ಮುಗಿದಿದ್ದು ಸಹಕಾರೀ ತತ್ವಕ್ಕೆ ಇಲ್ಲಿ ಮಹತ್ವವು ಕೊಡಲ್ಪಟ್ಟಿದೆ ಈ ಯೋಜನೆಯಿಂದ ನಿಜಕ್ಕೂ ಪ್ರಯೋಜನ ದೊರೆಯುವುದೆಂದು ತಿಳಿದು ಸುಮಾರು ಎರಡು ಸಾವಿರ ಕುಟುಂಬಗಳು ತಮಗೆ ಇದರ ಲಾಭ ದೊರೆಯಬೇಕೆಂದು ಮುಂದಾಗಿರುತ್ತವೆ. ಸಾರ್ವಜನಿಕ ಸಹಕಾರವು ಇದೇ ರೀತಿ ದೊರೆತರೆ, ಬೇರೆ ಬೇರೆ ರಾಜ್ಯಗಳಲ್ಲಿಯೂ ಈ ಯೋಜನೆಯನ್ನು ವಿಸ್ತರಿಸುವುದಕ್ಕೆ ಬರುತ್ತದೆ. ಆರ್ಥಿಕ ಉನ್ನತಿಯನ್ನೆ ಈ ಯೋಜನೆ ಧ್ಯೇಯವಾಗಿಟ್ಟುಕೊಂಡರೂ ಸಹಕಾರೀ ಪದ್ಧತಿಯ ಮಹತ್ವದ ಪ್ರಚಾರ, ಮಹಿಳಾ ಕಲ್ಯಾಣ, ಮಕ್ಕಳ ಯೋಗಕ್ಷೇಮ ಮುಂತಾದ ಉಪಯುಕ್ತ ಕಾರ್ಯಗಳಲ್ಲೂ ಈ ಗೃಹಿಣಿಯರು ಪ್ರವೃತ್ತರಾಗವಂತೆ ಮಾಡಿ ಕುಟುಂಬ ಸೌಖ್ಯವನ್ನು ಹೆಚ್ಚಿಸಲು ಮಂಡಳಿ ಬಯಸಿದೆ.

ಆಂಧ್ರರಾಜ್ಯದ ಪರಿಸ್ಥಿತಿ

ಆಂಧ್ರದಲ್ಲಿ ದಿನಾಂಕ ೨೫ನೇ ಸೋಮವಾರ ಶಾಸನ ಸಭೆಯ ಅಧಿವೇಶನ ಸೇರಿದೆ. ತಾತ್ಕಾಲಿಕ ಅಧ್ಯಕ್ಷರೆಂದು ನೇಮಿಸಲ್ಪಟ್ಟ ಶ್ರೀ ನರಸಿಂಹರಾಯರು ಸದಸ್ಯರನ್ನು ಸ್ವಾಗತಿಸಿ, ಅವರಿಂದ ಪ್ರತಿಜ್ಞಾವಚನವನ್ನು ಮಾಡಿಸಿದರು. ಆಂಧ್ರದ ೧೯೦ ಸದಸ್ಯರಲ್ಲಿ ೧೮೫ ಮಂದಿ ಈ ಅಧಿವೇಶನಕ್ಕೆ ಬಂದಿದ್ದರು. ಎಲ್ಲ ಕಾರ್ಯಕಲಾಪಗಳೂ ತೆಲುಗು ಭಾಷೆಯಲ್ಲಿಯೇ ನಡೆದವು. ಪ್ರಜಾ ಸೋಶಲಿಸ್ಟ ಪಕ್ಷದ ಕಾರ್ಯದರ್ಶಿ ಶ್ರೀ ಪಿ. ವಿ. ಜಿ. ರಾಜೂರವರು ಮಾತ್ರ ಇಂಗ್ಲಿಷಿನಲ್ಲಿ ಮಾತನಾಡಿದರು. ಅಧಿವೇಶನದ ಮೊದಲನೇ ದಿನ ಅಧ್ಯಕ್ಷರ ಆಯ್ಕೆಯ ಕಾರ್ಯಕ್ರಮವಿದ್ದು ಅದರಲ್ಲಿ ಕಿಸಾನ ಮಜದೂರ ಪ್ರಜಾ ಪಕ್ಷದ ಶ್ರೀ ಎನ್. ವೆಂಕಟರಾಮಯ್ಯನವರು ಸ್ವತಂತ್ರ ಪ್ರತಿಸ್ಪರ್ಧಿ ಶ್ರೀ ಕೃಷ್ಣರಾಯರನ್ನು ಸೋಲಿಸಿ, ಜಯಗಳಿಸಿದರು. ಪ್ರಕಾಶಮ್ ಮಂತ್ರಿಮಂಡಳ ಪಡೆದ ಮೊದಲನೇ ಜಯವಿದು. ಆದರೆ ಇಷ್ಟರಿಂದ ಅವರ ಸರಕಾರ ಎಲ್ಲ ಕೇದುಗಳನ್ನು ಜಯಿಸಿತೆಂದು ಭಾವಿಸಲಾಗದು. ರಾಜ ಪ್ರಮುಖರ ಭಾಷಣಕ್ಕೆ ಉಪಕಾರ ಸ್ಮರಣೆ ಮಾಡುವ ಗೊತ್ತುವಳಿಗೆ ತಿದ್ದುಗಡಿ ರೂಪದಲ್ಲಿಯಾಗಲೀ ಅಥವಾ ಬೇರೆಯೇ ನಿರ್ಣಯದ ಮೂಲಕವಾಗಿ ಆಗಲೀ ರಾಜಧಾನಿಯ ಪ್ರಶ್ನೆಯನ್ನು ಎತ್ತಲು ಕಮ್ಯೂನಿಸ್ಟ ಪಕ್ಷದ ಸದಸ್ಯರು ನಿರ್ಧರಿಸಿರುವರು. ಈ ವಿಷಯದಲ್ಲಿ ಕೃಷಿಕರ ಲೋಕಪಕ್ಷಕ್ಕೂ ಕಾಂಗ್ರೆಸ ಪಕ್ಷಕ್ಕೂ ತೀವ್ರ ಭಿನ್ನಾಭಿಪ್ರಾಯವುಂಟು. ಸಂಜೀವ ರೆಡ್ಡಿಯವರು ಕರ್ನೂಲಿನಲ್ಲಿಯೇ ರಾಜಧಾನಿ ಇರಬೇಕೆಂದು ಹೇಳಿರುವುದು ಮಂತ್ರಿಮಂಡಳದ ಕೃಷಿಕ ಲೋಕಪಕ್ಷದ ಸದಸ್ಯರಾದ ಶ್ರೀ ಲಚ್ಚಣ್ಣನವರ ಮನಸ್ಸಿಗೆ ಬಂದಿಲ್ಲ. ಇದಲ್ಲದೆ ಆಂಧ್ರದ ಪ್ರಜಾ ಸಮಾಜವಾದೀ ಪಕ್ಷದಲ್ಲೂ ಪ್ರಬಲ ಬಿಕ್ಕಟ್ಟು ತಲೆದೋರಿದೆ. ವಿಶ್ವನಾಥನ್ನರು ಒಂದೇ ಮಂತ್ರಿಮಂಡಳದಿಂದ ಹೊರಬೀಳಬೇಕು ಅಥವಾ ಪ್ರಜಾ ಸಮಾಜವಾದೀ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಎರವಾಗಬೇಕು ಎಂಬ ಹಿಂದಿನ ಅಭಿಪ್ರಾಯವನ್ನು ಶ್ರೀ ರಾಜು ಮುಂತಾದ ಪ್ರಜಾ ಸಮಾಜವಾದೀ ಧುರೀಣರು ಪುನರುಚ್ಚರಿಸಿರುವರು. ಇದು ಪ್ರಕಾಶಮರ ಚಿಂತೆಯನ್ನು ಹೆಚ್ಚಿಸಿರುವುದು ನ್ಯಾಯ.

ಕಾವ್ರಾಡಿ— ಇಲ್ಲಿಯ ಜನಪ್ರಿಯರೂ, ಬಡವರ ಸ್ನೇಹಿತರೂ ಆದ, ಕಾವ್ರಾಡಿ ವೆಂಕಪ್ಪ ಶೆಟ್ಟರು ತಮ್ಮ 67ನೇ ವಯಸ್ಸಿನಲ್ಲಿ ತಾ. 11-11-1957ರಂದು ದಿವಂಗತರಾದುದು ವಿಷಾದಕರ.

ನಡೆಯುವ ಚಿತ್ರ- ಪೌರಾಣಿಕ ಚಿತ್ರ

ಇಂದ್ರಾಸನ್ [ಹಿಂದಿ]

ರಂಜನಾ, ಪ್ರೇಮ್ ಅದೀಬ್. ಬಾಬುರಾಜ, ದುರ್ಗಾ ಖೋಟೆ, ಶಾರದಾ, ಸುಂದರ್ ಜೋಶಿ.

ಬರುವ ಚಿತ್ರಗಳು ಅನಾರ್‌ಕಲಿ, ಲಂಕಾದಹನ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ)
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಆರ್ಥಿಕ ಕ್ಷೇತ್ರದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.
ವಿಶೇಷ ಮಾಹಿತಿಗೆ,
ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 39 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.
THE CANARA BANKING CORPORATOIN LTD.,
Estd. 1906] [H. O· UDIPI (S. India)

ನ ವ ಯು ಗ

ಉಡುಪಿ, ಗುರುವಾರ ೨೩-೧೧-'೫೦

ರೈತರಿಗೆ ಸಂರಕ್ಷಣೆ

ಮದ್ರಾಸಿನ ಮುಖ್ಯ ಮಂತ್ರಿ ಮಾನ್ಯ ಶ್ರೀ ರಾಜಗೋಪಾಲಾಚಾರಿಯವರು ಈ ವಾರ ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಚಾರ ಕಾರ್ಯಕ್ರಮವನ್ನು ಇಟ್ಟುಕೊಂಡಾಗ-ಅವರಿಗೆ ಅರ್ಪಿಸಿದ ಬಿನ್ನವತ್ತಳೆಗಳಲ್ಲಿ ಒಕ್ಕಲುಗಳ ಹಕ್ಕು ಬಾಧ್ಯತೆಯನ್ನು ಮನ್ನಿಸುವ ಕುರಿತು ಸರಕಾರವು ಬೇಗನೇ ಒಂದು ಮಸೂದೆಯನ್ನು ತರುವ ಅಗತ್ಯವನ್ನು ಪ್ರಸ್ತಾಪಿಸಿದ್ದರು ರಾಜಾಜಿಯವರು ಸಹ ಈ ವಿಷಯದ ಮಹತ್ವವನ್ನು ಮನಗಂಡವರಂತೆ ಮಾತನಾಡಿರುವರು. ಮಂಗಳೂರಿನಲ್ಲಿ ಅವರು ನಮ್ಮ ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲ ಒಮ್ಮತದಿಂದ ಒಂದು ಮಸೂದೆಯಾಗಬೇಕಾದ ಆವಶ್ಯಕತೆಯನ್ನು ಬಿಂಬಿಸಿರುವುದಾಗಿ ಹೇಳಿದರು ಆದರೂ "ನಿಮ್ಮಲ್ಲಿ ಐಕಮತ್ಯವಿಲ್ಲದಿದ್ದರೆ ರೈತಹಿತ ಮಸೂದೆ ಬರುವುದಕ್ಕೆ ಇನ್ನೂ ಕಲ ಸಮಯ ಬೇಕಾದೀತು" ಎಂದು ನುಡಿದರು. ರಾಜಾಜಿಯವರು ಧನಿ ಮತ್ತು ಒಕ್ಕಲುಗಳಲ್ಲಿ ತಂತಮ್ಮ ಹಕ್ಕು ಬಾಧ್ಯತೆಗಳ ಕುರಿತು ಪರಸ್ಪರ ಸಮ್ಮತವಾದ ಒಡಂಬಡಿಕೆಯಾಗಬೇಕೆಂದು ಅಭಿಪ್ರಾಯವುಳ್ಳವರಾಗಿ ಕಂಡುಬರುತ್ತದೆ. ಉಭಯ ಸಮ್ಮತವಾದ ಮಸೂದೆಯೊಂದನ್ನು ಜ್ಯಾರಿಗೆ ತರುವುದು ತುಂಬ ಶ್ರೇಯಸ್ಕರವೆಂಬುದರಲ್ಲಿ ಪ್ರತಿವಾತಿಲ್ಲ. ಹಾಗೆಂದು ಹೀಗೆ ಒಮ್ಮತಕ್ಕೆ ಬರುವುದು ಒಕ್ಕಲು ಮತ್ತು ಧನಿಗಳಿಗೆ ಸಾಧ್ಯವೇ ಎಂಬ ಕುರಿತು ವಿಚಾರಿಸಬೇಕಾಗುತ್ತದೆ ರೈತರು ನಮ್ಮಲ್ಲಿ ಯೋಗ್ಯ ಸಂಘಟನೆಯನ್ನು ಹೊಂದಿಲ್ಲ, ಅವರಲ್ಲಿ ಶಿಕ್ಷಣ ಮತ್ತು ಕಾಯಿದೆ ಜ್ಞಾನ ಪಡೆದವರು ವಿರಳ, ಜಮೀನುದಾರ ವರ್ಗದಲ್ಲಿ ಒಳ್ಳೆಯ ಸ್ಥಿತಿವಂತರೂ ವಿದ್ಯಾವಂತರೂ ಇರುವಂಥ ಕಾರಣ-ಸರಕಾರದ ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸುವುದರಲ್ಲಿ ಅವರು ಹೆಚ್ಚು ಯಶಸ್ವಿಯಾಗುವುದು ನಿಶ್ಚಯ ಮೂಕ ರೈತರು ತಮ್ಮ ಕಷ್ಟ ನಷ್ಟಗಳಿಂದ ಪರಿತಪಿಸಬೇಕಾಗುತ್ತದೆಯೇ ಹೊರತು, ತಮ್ಮ ಪಕ್ಷದ ಪ್ರತಿಪಾದನೆಯನ್ನು ಸಮರ್ಥ ರೀತಿಯಲ್ಲಿ ಮಾಡಿಕೊಳ್ಳಲಾರದ ಪರಿಸ್ಥಿತಿಯಲ್ಲಿರುವರು ಶಾಸನಸಭಾ ಸದಸ್ಯರು ತಂತಮ್ಮ ಮತದಾರ ಕ್ಷೇತ್ರದಲ್ಲಿ ಸಂಚರಿಸಿ, ಈ ಒಕ್ಕಲು ಮಕ್ಕಳ ಅಭಿಪ್ರಾಯವನ್ನು ತಿಳಿದುಕೊಂಡು ಅದನ್ನು ಸರಕಾರದ ಮುಂದಿಡುವುದೊಂದೇ ಈಗ ವ್ಯವಹಾರಿಕವೆಂದು ತೋರುವ ಮಾರ್ಗ. ಇದನ್ನು ಅವರು ಮಾಡಿರುವರೆಂದು ರಾಜಾಜಿಯವರೇ ಒಪ್ಪಿಕೊಂಡಿರುವರು ಧನಿ—ಒಕ್ಕಲುಗಳ ನಡುವೆ ಒಮ್ಮತ ಎಷ್ಟರ ಮಟ್ಟಿಗಿರಬೇಕೆನ್ನುವುದು ಸರಕಾರದಲ್ಲಿರುವ ಧುರೀಣರು ಶಾಸನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಬೇಕಾಗಿರುವ ಪ್ರಶ್ನೆ. ಹಿಂದಿನ ರೀತಿ ನೀತಿಗಳೇ ಈಗಿನ ಕಾಲದಲ್ಲಿ ಚ್ಯುತಿ ಇಲ್ಲದೆ ನಡೆದು ಕೊಂಡು ಬರುವಂತಿಲ್ಲ—ಮತ್ತು ಕಾಲಸ್ಥಿತಿಗೆ ಹೊಂದಿಕೊಂಡು ಜನಹಿತವೇ ಉದ್ದೇಶವಾಗಿರುವ ಕಾಯಿದೆಗಳ ರಚನೆಯಾಗುವುದು ಅವಶ್ಯ ಎಂಬುದನ್ನು ದೃಷ್ಟಿಯಲ್ಲಿಟ್ಟು ಕೊಂಡರೆ ಭೂಮಿಯನ್ನು ಉತ್ತುಬಿತ್ತಿ ಬೆಳೆ ಬೆಳೆಯಿಸುವ ಒಕ್ಕಲು ಮಕ್ಕಳ ಪಕ್ಷಪಾತಿಯಾದ ಮಸೂದೆಯೇ ಜ್ಯಾರಿಗೆ ಬರಬೇಕಾಗುತ್ತದೆ ಇದು ಧನಿಗಳಿಗೆ ಅನ್ಯಾಯ ಮಾಡಬೇಕೆಂದಲ್ಲ—ಈಗ ಒಕ್ಕಲುಗಳಿಗೆ ಆಗುವ ಅನ್ಯಾಯವನ್ನು ಇಲ್ಲವಂತೆ ಮಾಡುವುದೇ ಈ ಮಸೂದೆಯ ಧ್ಯೇಯವಾಗಬೇಕು. ಸಮಗ್ರ ಮದ್ರಾಸು ರಾಜ್ಯದಲ್ಲಿ ಒಕ್ಕಲುಹಿತ ಮಸೂದೆಯ ಕುರಿತು ಮೇಲಿಂದ ಮೇಲೆ ಬೇಡಿಕೆಗಳು ಬರುತ್ತಿರುವಾಗ ಮತ್ತು ನಮ್ಮ ರಾಜ್ಯ ಘಟನೆಯೂ ಯೋಜನಾ ಆಯೋಗವೂ ಈ ದಿಸೆಯಲ್ಲಿ ಪ್ರಯತ್ನಗಳಾಗಬೇಕೆಂದು ನಿರ್ದೇಶಿಸುತ್ತಿರುವಾಗ ಇನ್ನೂ ಮೀನ ಮೇಷ ಎಣಿಸುವುದರಲ್ಲಿ ಪುರುಷಾರ್ಥವಿಲ್ಲ. ಎಲ್ಲ ಸಂಗತಿಗಳನ್ನು ಕೂಲಂಕಷವಾಗಿ ಪರೀಶೀಲಿಸಿ, ನಿಧಾನವಾಗಿ ಕಾಯಿದೆಯೊಂದನ್ನು ಮಾಡುವುದು ರಾಜಾಜಿಯವರ ಇಷ್ಟವಾಗಿರಬಹುದು—ಆದರೆ ಮುಂದಿನ ಚುನಾವಣೆಗೆ ಮೂರು ದಿನ ಮುಂಚೆ ಒಕ್ಕಲುಹಿತ ಮಸೂದೆಯ ಕರಡೊಂದನ್ನು ಸೃಷ್ಟಿಸಿ, ಚುನಾವಣಾ ಗಾಳಿಯಲ್ಲಿ ಅದರ ಪರಿಮಳವನ್ನು ಬಡ ರೈತನ ಮೂಗಿಗೆ ಮುಟ್ಟಿಸುವ ಹವಣಿಕೆ ರಾಜಾಜಿ ಸರಕಾರದ ನೀತಿಯಾಗಬಾರದೆಂದು ಜನರ ಪ್ರಾಮಾಣಿಕ ಅಭಿಪ್ರಾಯ. ಒಕ್ಕಲುಹಿತ ಮಸೂದೆಗೆ ಇನ್ನೂ ಕಾಯಬೇಕೆಂಬುದು ಯಾವ ತೃಪ್ತಿಯನ್ನೂ ಸಮಾಧಾನವನ್ನೂ ಕೊಡದು. ಬೇಗನೇ ಮಸೂದೆ ಸಿದ್ಧವಾಗುತ್ತದೆಂದು ಬೇರೆ ಬೇರೆ ಮಂತ್ರಿಗಳು ಹೇಳುವ ಮಾತಾದರೂ ರೈತರಿಗೆ ಸಂತೋಷ ತಂದಿಲ್ಲ—ಈ "ಬೇಗನೇ" ಬರುವ ಒಕ್ಕಲುಹಿತ ಮಸೂದೆ ಎಂದು ಬಂದೀತೋ ಎಂದು ಎಲ್ಲ ಒಕ್ಕಲು ಮಕ್ಕಳೂ ಕಾತರರಾಗಿದ್ದಾರೆಂದೂ ಆದ ಕಾರಣ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ಕೈಗೊಳ್ಳಲ್ಪಡಬೇಕೆಂದೂ ನಮ್ಮ ಶಾಸನಸಭಾ ಸದಸ್ಯರು ಈ ವಿಷಯದಲ್ಲಿ ಆಸಕ್ತಿಯಿಂದ ದುಡಿಯಬೇಕೆಂದೂ ವಿನಂತಿಸುತ್ತೇವೆ

ನೆಹರೂ ಲಿಯಾಕತ ಒಡಂಬಡಿಕೆಯ ಭಂಗ

ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳಿಗೆ ಪಾಕಿಸ್ತಾನದಲ್ಲಿ ಪೆಟ್ಟು

ಪಾಕಿಸ್ತಾನವು ಇಸ್ಲಾಂ ಪ್ರಜಾರಾಜ್ಯವಾಗಬೇಕೆಂದು ಮುಂತಾಗಿ ಅಲ್ಲಿಯ ಘಟನಾ ಸಮಿತಿ ಈಚೆಗೆ ಮಾಡಿದ ನಿರ್ಣಯದ ಕುರಿತು ಪ್ರಧಾನಿ ನೆಹರೂರವರು ಕಳೆದವಾರ ಪತ್ರಿಕಾ ಪರಿಷತ್ತಿನಲ್ಲಿ ವಿಷಾದವನ್ನು ಸೂಚಿಸಿ, ಅಲ್ಲಿಯ ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಯ ಕುರಿತು ವಿವಂಚನೆಯನ್ನು ವ್ಯಕ್ತಪಡಿಸಿದ್ದರು. ಪಾಕಿಸ್ತಾನ ಸರಕಾರವು ಸ್ವೀಕರಿಸಲಿರುವ ಘಟನೆಯ ಹಿನ್ನೆಲೆಯಲ್ಲಿರುವ ಧೋರಣೆಯನ್ನು ಅರಿದು ಮಾನವರಾದ ತಮಗೆ ವ್ಯಸನವಾಗುತ್ತದೆಂದು ನೆಹರೂರವರು ಪತ್ರಿಕಾ ಪರಿಷತ್ತಿನಲ್ಲಿ ಹೇಳಿದ್ದರು ಮಧ್ಯಯುಗದ ವಿಚಾರದ ಪರಿಣಾಮವೇ ಇದೆಂದೂ ಪ್ರಜಾ ಪ್ರಭುತ್ವ ಪದ್ಧತಿಯ ತತ್ವಕ್ಕೆ ಪೂರಾ ವಿರುದ್ಧವಾದುದೆಂದೂ ನೆಹರೂ ಅಭಿಪ್ರಾಯಪಟ್ಟರು. ಈ ಘಟನೆ ಪಾಕಿಸ್ತಾನದ ಅಲ್ಪಸಂಖ್ಯಾಕರ ಮೇಲೆ ಯಾವ ತರದ ಪರಿಣಾಮವನ್ನುಂಟುಮಾಡಬಹುದೋ ಎಂಬ ಕುರಿತು ನೆಹರೂರವರು ತಮ್ಮ ವಿಶೇಷವಾದ ಆತುರವನ್ನು ಪ್ರದರ್ಶಿಸಿದ್ದರು. ಪ್ರಾಯಶಃ ಇದರ ಪರಿಣಾಮವು ಭಾರತದ ಜನತೆಯಮೇಲೆಯೂ ಕೆಲ ಪ್ರಮಾಣದಲ್ಲಿ ಆದೀತೆಂದೂ ಅದನ್ನು ನಿರೀಕ್ಷಿಸಬೇಕಾಗಿ ಬಂದಿದೆಯೆಂದೂ ನೆಹರೂ ಧ್ವನಿಸಿದ್ದರು "ಪಾಕಿಸ್ತಾನ ಸರಕಾರದ ನಿರ್ಣಯಗಳಿಂದ ವಿಶೇಷ ಹಕ್ಕು ಬಾಧ್ಯತೆಗಳುಳ್ಳವರು ಮತ್ತು ಕಡಿಮೆ ಹಕ್ಕು ಬಾಧ್ಯತೆಗಳುಳ್ಳವರು ಎಂಬ ಎರಡು ವರ್ಗಗಳು ನಾಗರಿಕರಲ್ಲಿ ಉತ್ಪನ್ನವಾಗುವುವು ಇದರಿಂದ ಬಹು ಸಂಖ್ಯಾಕರಲ್ಲಿಯೂ ಅಲ್ಪ ಸಂಖ್ಯಾಕರಲ್ಲಿಯೂ ಉಂಟಾಗಬಹುದಾದ ಶ್ರೇಷ್ಠ ಮತ್ತು ಕನಿಷ್ಠ ಭಾವನೆಯು ಪ್ರಜಾಪ್ರಭುತ್ವಕ್ಕೆ ಹೇಳಿಸಿದುದಲ್ಲ. ಎಲ್ಲ ವರ್ಗಗಳಲ್ಲಿಯೂ ಒಂದೇ ಬಗೆಯ ಸಂಘಟಿತ ಭಾವನೆಗೂ ಇದು ಅವಕಾಶ ನೀಡುವುದಿಲ್ಲ" ಎಂದು ನೆಹರೂ ನುಡಿದರು.

ನಿಜವಾದ ಟೀಕೆ

ನೆಹರೂರವರ ಟೀಕೆಯನ್ನು ಪಾಕಿಸ್ತಾನದ ಪತ್ರಿಕೆಗಳೂ ರಾಜಕಾರಣಿಗಳೂ ತೆಗಳಿ, ಇಸ್ಲಾಂದ ಪವಿತ್ರ ತತ್ವಕ್ಕೆಯೇ ನೆಹರೂ ಅಪಮಾನ ಮಾಡಿರುವರೆಂದು ಹೇಳಿದ್ದರೂ ಇದು ಕೇವಲ ಪ್ರಚಾರ ತಂತ್ರವೆಂದು ಪ್ರತ್ಯೇಕ ಹೇಳುವುದು ಅನಗತ್ಯ ಪಾಕಿಸ್ತಾನದ ಗವರ್ನರ ಜನರಲ್ಲರಾದ ಗುಲಾಂ ಮಹಮ್ಮದರು ಲಂಡನಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ನೆಹರೂರವರು ಪಾಕಿಸ್ತಾನದ ಘಟನೆಯಲ್ಲಿ ಇಸ್ಲಾಂ ಪ್ರಜಾರಾಜ್ಯವಾಗಬೇಕೆಂದು ಹೇಳಿದ ಸಂಗತಿ ಮಧ್ಯ ಯುಗದ್ದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದದ್ದೂ ಎಂದು ಅಭಿಪ್ರಾಯಪಟ್ಟುದು ವಿಷಾದಕರವೆಂದು ನುಡಿದರು. ಇಸ್ಲಾಂದಷ್ಟು ಪ್ರಜಾಸತ್ತಾತ್ಮಕವಾದ ಧರ್ಮ ಬೇರೊಂದಿಲ್ಲವೆಂದು ಪಾಕಿಸ್ತಾನೀ ಗವರ್ನರ ಜನರಲ್ಲರು ಹೇಳಿದರು. ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳ ವಿಷಯದಲ್ಲಿ ನೆಹರೂರ ಅಭಿಪ್ರಾಯ ಸರಿಯಲ್ಲವೆಂದು ಹೇಳಿ ಮೂಲ ತತ್ವಗಳ ಸಮಿತಿಯು ಪಾಕಿಸ್ತಾನದ ಘಟನಾ ಸಮಿತಿಗೆ ಒಪ್ಪಿಸಿದ ವರದಿಯಲ್ಲಿ ಮುಸ್ಲಿಮೇತರರಿಗೂ ಮುಸ್ಲಿಮರಷ್ಟೇ ಹಕ್ಕುಗಳನ್ನೂ ಸಂರಕ್ಷಣೆಯನ್ನೂ ಕೊಟ್ಟಿರುತ್ತದೆ ಎಂಬ ಸಂಗತಿಯನ್ನು ಗುಲಾಂ ಮಹಮ್ಮದರು ಪ್ರಕಟ ಪಡಿಸಿದರು. ಪಾಕಿಸ್ತಾನದ ವರಿಷ್ಠ ಸ್ಥಾನಕ್ಕೆ ಮಾತ್ರ ಮುಸ್ಲಿಮನೇ ಇರಬೇಕೆನ್ನುವುದೊಂದು ಭೇದವಾಗಿ ಕಂಡರೂ ಇದು ಅನೇಕ ಹಳೆಯ ಪ್ರಜಾ ಸತ್ತಾತ್ಮಕ ರಾಷ್ಟ್ರಗಳಲ್ಲಿ ರೂಢವಾಗಿರುವ ಬಹು ಸಂಖ್ಯಾಕ ಜನರು ಅನುಸರಿಸುವ ಧರ್ಮದವನೇ ರಾಜ್ಯದ ವರಿಷ್ಠನಾಗಬೇಕೆಂಬ ತತ್ವಕ್ಕೆ ಅನುಗುಣವಾಗಿರುತ್ತ" ಎಂದು ಅವರು ಘಟನೆಯ ಈ ಕಲಮನ್ನು ಸಮರ್ಥಿಸಿದರು. ಪಾಕಿಸ್ತಾನೀ ಗವರ್ನರರ ಹೇಳಿಕೆ ನೆಹರೂರ ಅಭಿಪ್ರಾಯವನ್ನೆ ಸ್ಪಷ್ಟವಾಗಿ ನಿರೂಪಿಸುತ್ತದಲ್ಲವೆ? ಅಲ್ಪಸಂಖ್ಯಾಕರಿಗೆ ಸಮಾನಾವಕಾಶ ಕೊಡಲಾಗಿಲ್ಲವೆಂದೂ "ಹಳೆಯ" ಪ್ರಜಾ ಪ್ರಭುತ್ವ ಪದ್ಧತಿಯ ಅನುಕರಣ ಮಾಡಲಾಗಿದೆಯೆಂದೂ ಅವರು ಹೇಳಿ ತಮ್ಮ ತಪ್ಪನ್ನು ತಾವೇ ಆಡಿಕೊಂಡಿರುವರು! "ಮೆಂಚೆಸ್ಟರ ಗಾರ್ಡಿಯನ್" ಪತ್ರಿಕೆಯು ನೆಹರೂರ ಟೀಕೆಯು ಸತ್ಯವೆಂದು ಅಭಿಪ್ರಾಯಪಟ್ಟಿದೆ. "ಪಾಕಿಸ್ತಾನೀ ಘಟನಾ ಸಮಿತಿಯು ಕಳೆದ ತಿಂಗಳು ಕೆಲವು ನಿರ್ಣಯಗಳನ್ನು ಸ್ವೀಕರಿಸಿದ್ದು ಅವು ಬುದ್ಧಿಗೊಪ್ಪುವಂತಿಲ್ಲ. ಪಾಕಿಸ್ತಾನದ ಭಾವೀ ಶಾಸನ ಸಭೆಗಳು ಕುರಾಣದ ತತ್ವಕ್ಕೆ ವಿರುದ್ಧ ವರ್ತಿಸತಕ್ಕದ್ದಲ್ಲವೆಂಬ ನಿರ್ಣಯವು ಗಂಭೀರವಾಗಿರುತ್ತದೆ . ತನಗೆ ಸರಿದೋರಿದ ಘಟನೆಯನ್ನು ಸಿದ್ಧಪಡಿಸಲು ಪಾಕಿಸ್ತಾನಕ್ಕೆ ಇರುವ ಅಧಿಕಾರವನ್ನು ಯಾರೂ ಪ್ರಶ್ನಿಸುವಂತಿಲ್ಲ ಆದರೆ ಅವರು ಇಸ್ಲಾಂ ಕಾಯಿದೆ ಅನುಸರಿಸುವುದರಿಂದ ಮುಸಲ್ಮಾನರ ಹಾಗೂ ಇತರರ ನಡುವೆ ಭಿನ್ನಾಭಿಪ್ರಾಯ ಬೆಳೆಯುವ ಸಂಭವವಿದೆ ಇಂಥ ಘಟನೆಯಿಂದ ಅವಕಾಶವಿದ್ದವರದೊಂದು ಇಲ್ಲದವರದೊಂದು ಎಂಬ ಎರಡು ಪ್ರಜಾ ವರ್ಗಗಳು ಉತ್ಪನ್ನವಾಗಬಹುದೆಂದು ನೆಹರೂರವರು ಟೀಕಿಸಿರುವರು. ಇದು ಪಾಕಿಸ್ತಾನಕ್ಕೆ ಒಪ್ಪಿಗೆಯಾಗದಿದ್ದರೂ ಅದು ಸತ್ಯವಲ್ಲವೇ?' ಎಂದು ಪತ್ರಿಕೆ ಪ್ರಶ್ನಿಸಿದೆ.

ಒಪ್ಪಂದದ ಮುಖ್ಯಾಂಶ

ಪಾಕಿಸ್ತಾನ ಸರಕಾರವು ನೆಹರೂರವರ ಟೀಕೆಯನ್ನು ಗಂಭೀರವಾಗಿ ಪ್ರತಿಭಟಿಸಿ ಪತ್ರ ಬರೆದಿದೆಯೆಂದು ತಿಳಿಯುತ್ತದೆ ಈ ನಿಷೇಧ ಪತ್ರದ ಬಗ್ಗೆ ಅಧಿಕೃತವಾದ ಪ್ರತಿಕ್ರಿಯೆಗಳೇನೆಂಬುದು ಇನ್ನು ವ್ಯಕ್ತಗೊಳ್ಳಬೇಕಷ್ಟೆ' ಆದರೆ, ಭಾರತದ ರಾಜಕಾರಣಿಗಳು ಪಾಕಿಸ್ತಾನ ಘಟನಾ ಸಮಿತಿಯ ನಿರ್ಣಯವು ಉಭಯ ರಾಷ್ಟ್ರಗಳ ನಡುವೆ ಈಗಲೂ ಊರ್ಜಿತವಿರುವ ನೆಹರೂ ಲಿಯಾಕತ ಒಡಂಬಡಿಕೆಯನ್ನು ಭಂಗಿಸುತ್ತದೆಯೆಂದು ಸ್ಪಷ್ಟ ನಿರ್ಣಯಕ್ಕೆ ಬಂದಿರುವರು ೧೯೫೦ನೇ ಎಪ್ರಿಲು ತಿಂಗಳಲ್ಲಿ ಆಗಿನ ಪಾಕಿಸ್ತಾನೀ ಪ್ರಧಾನಿ ಲಿಯಾಕತ ಅಲಿಖಾನ ಹಾಗೂ ಭಾರತದ ಪ್ರಧಾನಿ ನೆಹರೂರವರೊಳಗೆ ನಡೆದ ಒಡಂಬಡಿಕೆಯಲ್ಲಿ ಅಲ್ಪ ಸಂ

ಖ್ಯಾಕರ ಕುರಿತು ಈ ಕೆಳಗಿನಂತೆ ಉಲ್ಲೇಖವಿದೆ "ಭಾರತ ಮತ್ತು ಪಾಕಿಸ್ತಾನಗಳಲ್ಲಿ ಇರುವ ಅಲ್ಪ ಸಂಖ್ಯಾಕರಿಗೆ ಸಂಪೂರ್ಣ ಸಮಾನತೆ, ಜಾತಿ ಸಂಭವನ್ನೆಣಿಸದೆ ಸಮಾನ ನಾಗರಿಕತೆಯ ಹಕ್ಕು ಬಾಧ್ಯತೆ, ಜೀವನ, ಸಂಸ್ಕೃತಿ, ಮತ್ತು ವೈಯಕ್ತಿಕ ಮರ್ಯಾದೆಯ ಬಗ್ಗೆ ಸಂಪೂರ್ಣ ಸಂರಕ್ಷಣೆ ಇವನ್ನು ಉಭಯ ಸರಕಾರಗಳೂ ಕೊಡಬೇಕು. ಆಯಾ ದೇಶಗಳಲ್ಲಿ ಸಂಚಾರ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ಭಾಷಣ ಸ್ವಾತಂತ್ರ್ಯಗಳನ್ನು ಕೊಡಲಾಗುವುದು. ರಾಜಕೀಯ ಇಲ್ಲವೆ ಇತರ ಅಧಿಕಾರ ಸ್ಥಾನವನ್ನು ಆಕ್ರಮಿಸಲು, ದೇಶದ ನಾಗರಿಕ ಮತ್ತು ಸೈನಿಕ ಶಾಖೆಗಳಲ್ಲಿ ಕೆಲಸಮಾಡಲು ಅಲ್ಪ ಸಂಖ್ಯಾಕರಿಗೂ ಬಹು ಸಂಖ್ಯಾಕರಿಗೂ ಸಮಾನ ಅವಕಾಶವಿರುತ್ತದೆ. ಈ ಹಕ್ಕು ಬಾಧ್ಯತೆಗಳು ಮೂಲ ಭೂತವಾದವುಗಳೆಂದು ಎರಡೂ ಸರಕಾರಗಳು ಸಾರುತ್ತವೆಯಲ್ಲದೆ, ಪರಿಣಾಮಕಾರಕ ರೀತಿಯಲ್ಲಿ ಇವನ್ನು ಜ್ಯಾರಿಗೆ ತರುತ್ತವೆ." ಹೀಗೆ ಯಾವುದೇ ಬಗೆಯ ಭೇದಭಾವವಿಲ್ಲದೆ ಪ್ರಜಾ ಪ್ರಭುತ್ವದ ಹಕ್ಕು ಬಾಧ್ಯತೆಗಳನ್ನು ತಂತಮ್ಮ ಪ್ರಜೆಗಳಿಗೆ ನೀಡುವುದು ಉಭಯ ಸರಕಾರಗಳ ಧೋರಣವಾಗಿರುವುದಾಗಿ ಒಪ್ಪಿಕೊಂಡ ಬಳಿಕ, ಈಗ ಪಾಕಿಸ್ತಾನವು ಅಲ್ಪಸಂಖ್ಯಾಕರನ್ನು ನಡೆಸಿಕೊಳ್ಳುತ್ತಿರುವ ರೀತಿನೀತಿಗಳು ಭಾರತ ಸರಕಾರಕ್ಕೆ ಸ್ವಾಭಾವಿಕವಾಗಿಯೇ ಚಿಂತೆಯನ್ನು ಹುಟ್ಟಿಸಿವೆ. ನೆಹರೂ—ಲಿಯಾಕತ ಒಡಂಬಡಿಕೆಯ ಮೇಲಿನ ಅಂಶಗಳೆಲ್ಲವನ್ನೂ ಪಾಕಿಸ್ತಾನ ಘಟನಾ ಸಮಿತಿಯ ನಿರ್ಣಯಗಳು ಭಂಗಿಸುತ್ತಿವೆಯೆಂದು ಹೊಸ ದಿಲ್ಲಿಯ ಖಚಿತ ಅಭಿಪ್ರಾಯ. ಮುಸಲ್ಮಾನೇತರರಿಗೆ ಪರಿಸ್ಥಿತಿ ಸ್ವಾಸಕ್ಕೇರಲು ಹಕ್ಕಿರುವುದಿಲ್ಲ ಸಂಯುಕ್ತ ಮತಗಟ್ಟೆಗಳಿರಬೇಕೆಂಬ ಅಲ್ಪಸಂಖ್ಯಾಕರ ಬಿನ್ನಹವನ್ನು ಮೂಲೆಗೊತ್ತಿದಂತೆ ಒಂದೇ ಮತದಾರಯಾದಿಯಿರಬೇಕೆಂಬ ಸೂಚನೆಯೂ ಕಸದ ಬುಟ್ಟಿಗೆ ಬಿದ್ದಿದೆ. ಧಾರ್ಮಿಕ ಕಾರ್ಯಗಳಲ್ಲಿ ಸರಕಾರ ಹಸ್ತಕ್ಷೇಪ ಮಾಡತಕ್ಕದ್ದಲ್ಲವೆಂಬ ಬೇಡಿಕೆಯನ್ನು ಮನ್ನಿಸುವ ಬದಲು ಪಾಕಿಸ್ತಾನದ ಎಲ್ಲ ನಾಗರಿಕರಿಗೂ ಇಸ್ಲಾಂ ಧರ್ಮದ ತತ್ವಗಳ ಪ್ರಚಾರ ಮಾಡಲು ಸರಕಾರೀ ಸಂಸ್ಥೆಯೊಂದನ್ನು ಸಂಘಟಿಸಲು ನಿರ್ಣಯ ಸ್ವೀಕಾರಗೊಂಡಿದೆ! ಇಸ್ಲಾಂ ಪ್ರಜಾ ರಾಜ್ಯವೆಂಬ ಹೆಸರಿನಿಂದಲೇ ಅಲ್ಲಿ ನೆಲಸುವ ೧೫೦ ಲಕ್ಷ ಜನ ಮುಸ್ಲಿಮೇತರರಿಗೆ ಅನ್ಯಾಯವಾಗಿರುತ್ತದೆ. ಇಂಥವರಲ್ಲಿ ಹಣಕಾಸು, ವಿಮೆ, ಬೇಂಕಿಂಗ್ ಮುಂತಾದ ವಿಷಯಗಳಲ್ಲಿ ಇನ್ನು ೨೫ ವರ್ಷಗಳ ವರೆಗೆ ಇಸ್ಲಾಂ ತತ್ವಗಳು ಮನ್ನಿಸಲ್ಪಡಲಾಗದೆಂದು ಹೇಳಿರುವುದನ್ನು ಗಮನಿಸಿದರೆ, ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳನ್ನು ಮುರಿಯುವುದೊಂದೇ ಪಾಕಿಸ್ತಾನದ ಧ್ಯೇಯವೆಂದು ಹೇಳಬೇಕಾಗುವುದು.



ಮಿಲಿಟರಿ ಒಡಂಬಡಿಕೆ

ಅಮೇರಿಕದೊಡನೆ ಪಾಕಿಸ್ತಾನವು ಮಿಲಿಟರಿ ಒಡಂಬಡಿಕೆಯನ್ನು ಮಾಡಿಕೊಳ್ಳುವ ಸುದ್ದಿಯನ್ನು ಪ್ರಸ್ತಾಪಿಸುತ್ತಾ ನೆಹರೂರವರು ಇದರ ಪರಿಣಾಮವು ಆಗ್ನೇಯ ಏಶಿಯಾದಲ್ಲಿ ದೀರ್ಘಕ್ಕೆ ಹೋದೀತೆಂದೂ ಭಾರತದ ಧೋರಣೆಯ ಮೇಲೂ ಇದು ಅನಿಷ್ಟ ಪರಿಣಾಮವನ್ನು ಉಂಟುಮಾಡಬಹುದೆಂದೂ ಹೇಳಿದ್ದರು. ಭಾರತ ಸರಕಾರದ ರಾಯಭಾರಿಗಳಾಗಿರುವ ಶ್ರೀ. ಮೆಹತಾರವರು ನ್ಯೂಯಾರ್ಕ ನಗರದಲ್ಲಿ ಅಮೇರಿಕದ ರಾಜ್ಯ ಖಾತೆಯ ಕಾರ್ಯದರ್ಶಿ ಡೆಲ್ಲೇಸರನ್ನು ಕಂಡು ಈ ವಿಷಯದಲ್ಲಿ ಮಾತುಕತೆಯಾಡಿದರೆಂದೂ, ಪರಿಣಾಮವಾಗಿ ಅಮೇರಿಕೆಯು ಪಾಕಿಸ್ತಾನದೊಡನೆ ಒಡಂಬಡಿಕೆ ಮಾಡಿಕೊಳ್ಳುವುದಾದಲ್ಲಿ ಭಾರತಕ್ಕೆ ಮುಂಚಾಗಿ ಅದನ್ನು ತಿಳಿಸುವ ಆಶ್ವಾಸನೆ ದೊರೆಯಿತೆಂದೂ ವರದಿಗಳು ತಿಳಿಸಿವೆ. ಇಂಥ ಒಡಂಬಡಿಕೆಯ ಪರಿಣಾಮದ ಭೀಕರತೆಯನ್ನು ನೆಹರೂರವರು ಖಂಡ ತುಂಡ ಮಾತುಗಳಲ್ಲಿ ಹೇಳಿರುವುದರಿಂದ ಅಮೇರಿಕಾ ಮತ್ತು ಪಾಕಿಸ್ತಾನಗಳೆರಡೂ ಬೆಚ್ಚಿಬಿದ್ದಂತೆ ತೋರುತ್ತದೆ. ಭಾರತದ ಈ ಪ್ರತಿಕ್ರಿಯೆಯಿಂದ ಗೊಂದಲಕ್ಕೆ ಬಿದ್ದವರಂತೆ ಡಲ್ಲೇಸರು "ಮಿಲಿಟರಿ ಒಡಂಬಡಿಕೆಯ ಮಾತು ಬಂದಿಲ್ಲ"ವೆಂದು ಹೇಳಿದ್ದರೂ "ಇದರಿಂದ ಮುಂದಕ್ಕೆ ಎಂದಿಗೇ ಆದರೂ ಮಿಲಿಟರಿ ಒಡಂಬಡಿಕೆಯಾಗದೆಂಬ ಅಭಿಪ್ರಾಯವಲ್ಲ" ಎಂದು ಕುಂಟು ಪಂಕ್ತಿಯನ್ನು ಸೇರಿಸಲು ಮರೆಯಲಿಲ್ಲ. ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಸಹಾಯವನ್ನು ನೀಡಿದ ಪಕ್ಷದಲ್ಲಿ ಇದಕ್ಕೆ ಪ್ರತಿಫಲವೆಂದು ಅಮೇರಿಕೆಗೆ ಪಾಕಿಸ್ತಾನದಲ್ಲಿ ಸೈನಿಕ ಠಾಣ್ಯವನ್ನು ಕೊಡಲಾಗುವುದೆಂದು ಹೇಳಲ್ಪಟ್ಟಿದೆ. ಸಂಯುಕ್ತರಾಷ್ಟ್ರ ಸಂಘದಲ್ಲಿರುವ ಪಾಕಿಸ್ತಾನೀ ರಾಯಭಾರಿಯೇ ಈ ಬಗೆಯ ಒಡಂಬಡಿಕೆಯ ಕುರಿತು ಮಾತುಕತೆ ನಡೆದಿರುವುದೆಂದು ಹೇಳಿರುವನು; ಮತ್ತು ಡಲ್ಲೇಸರು ಸಹ "ಆ ಶಸ್ತ್ರಾಸ್ತ್ರಗಳನ್ನು ಸ್ವತಂತ್ರ ರಾಷ್ಟ್ರಗಳ ಸಂರಕ್ಷಣೆಗೋಸ್ಕರವೇ ಉಪಯೋಗಿಸಬೇಕು ಹೊರತು ನೆರೆ ರಾಷ್ಟ್ರದೊಡನೆ ದಾಳಿ ನಡೆಸುವುದಕ್ಕೆ ಅಲ್ಲ" ಎಂಬುದಾಗಿ ಒಂದು ಸ್ಪಷ್ಟೀಕರಣವನ್ನೂ ಕೊಟ್ಟಿರುವರು. ಆದರೆ ಒಂದು ಸಲ ಮಿಲಿಟರಿ ಒಡಂಬಡಿಕೆ, ಅಥವಾ ಅದರದೇ ಪರ್ಯಾಯ ರೂಪವಾದ ಶಸ್ತ್ರಾಸ್ತ್ರಗಳ ಪೂರೈಕೆಯಾದ ಪಕ್ಷದಲ್ಲಿ ಪಾಕಿಸ್ತಾನದ ಧೋರಣದಲ್ಲಿ ಮೂಲ ಭೂತವ್ಯತ್ಯಾಸವಾಗಿಯೇ ತೀರುತ್ತದೆ. ಪಾಕಿಸ್ತಾನವು ಉಗ್ರ ನೀತಿಯನ್ನು ಅನುಸರಿಸಬಹುದು- ಆಗ ಅದರ ಕೈಹಿಡಿದು ನಿಲ್ಲಿಸುವವರು ಯಾರು? ಅಮೇರಿಕಕ್ಕೆ ಅಂಥ ಇಚ್ಛೆ ಇರಲಿಕ್ಕಿಲ್ಲ- ಇದ್ದರೂ ಅದರ ಪ್ರಯತ್ನಗಳಿಗೆ ಯಶ ದೊರೆಯದು. ಅಧ್ಯಕ್ಷ ಐಸೆನ ಹೋವರರು ನೆರೆ ರಾಷ್ಟ್ರಕ್ಕೆ ಆಕ್ರಮಣಾತ್ಮಕವಾದ ನೀತಿಯನ್ನು ತಾವು ಅನುಸರಿಸುವುದಿಲ್ಲವೆಂದು ಹೇಳಿದ್ದರೂ ಈ ವಿಷಯದಲ್ಲಿ ನಾವು ಮೂಕಪ್ರೇಕ್ಷಕರಾಗಿ ಕುಳಿತುಕೊಳ್ಳಲಾರೆವು.

ಉಡುಪಿ

ಉಡುಪಿಯಲ್ಲಿ ಸ್ವಾಮಿ ಯತೀಶ್ವರಾನಂದಜೀಯವರು

ಹಿಂದೆ ಯುರೋಪು, ಅಮೇರಿಕಾ ಮುಂತಾದೆಡೆ ವೇದಾಂತದ ಪ್ರಚಾರಕರಾಗಿದ್ದು ಮತ್ತು ಸದ್ಯ ಬೆಂಗಳೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ಯತೀಶ್ವರಾನಂದಜೀಯವರನ್ನು ದಿನಾಂಕ ೧೭ ರಂದು ಶ್ರೀಯುತ ಟಿ. ರಘುನಾಥ ಪೈಗಳು ಮಂಗಳೂರಿನಿಂದ ಉಡುಪಿಗೆ ಕರೆದುಕೊಂಡು ಬಂದರು. ಅಂದು ಸ್ವಾಮೀಜಿಯವರು ಮುಕುಂದ ನಿವಾಸದಲ್ಲಿ "ವ್ಯಕ್ತಿತ್ವದ ಸಮನ್ವಯ"ವನ್ನು ಕುರಿತು ವಿದ್ವತ್ಪೂರ್ಣ ಉಪನ್ಯಾಸವನ್ನು ಕೊಟ್ಟರು. ಮರುದಿನ ಸಂಜೆ ಕೆನರಾ ಮ್ಯೂಚುವಲಿನಲ್ಲಿ ಅವರು ಶ್ರೀ ರಾಮಕೃಷ್ಣ ಪರಮ ಹಂಸರ ಭಾವಚಿತ್ರದ ಅನಾವರಣ ಮಾಡುತ್ತಾ, ಅರ್ವಾಚೀನ ಕಾಲದ ಈ ದೇವಮಾನವರು ಬೋಧಿಸಿದ ತತ್ವಗಳ ಸ್ವಾರಸ್ಯವನ್ನು ವರ್ಣಿಸಿದರು. ದಿನಾಂಕ ೧೯ರಂದು ಸ್ವಾಮೀಜಿಯವರು ಮಹಾತ್ಮಾ ಗಾಂಧೀ ಸ್ಮಾರಕ ಕಾಲೇಜಿಗೆ ತೆರಳಿ, ವಿದ್ಯಾರ್ಥಿ ವೃಂದವನ್ನು ಉದ್ದೇಶಿಸಿ "ಸ್ವಾಮಿ ವಿವೇಕಾನಂದರ ಶಿಕ್ಷಣ ಧ್ಯೇಯ"ವೆಂಬ ವಿಷಯದ ಮೇಲೆ ಮನನೀಯ ಭಾಷಣ ಮಾಡಿದರು. ಅಲ್ಲಿಂದ ಸ್ವಾಮೀಜಿಯವರು ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿ, ವಿದ್ಯಾರ್ಥಿಗಳಿಗೆ ಸಂದರ್ಭೋಚಿತವಾದ ನಾಲ್ಕು ಹಿತನುಡಿಗಳನ್ನಾಡಿದರು. ಅದೇ ದಿನ ಸಂಜೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪರ್ಯಾಯ ಶ್ರೀ ಪೇಜಾವರ ಮಠಾಧೀಶರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಸ್ವಾಮಿ ಯತೀಶ್ವರಾನಂದರು "ಜಪ ಮತ್ತು ಧ್ಯಾನ"ವನ್ನು ವಿಷಯವಾಗಿಟ್ಟುಕೊಂಡು ಉದ್ಬೋಧಕ ಭಾಷಣ ಮಾಡಿದರು. ಉಡುಪಿಯ ಲಕ್ಷ ದೀಪೋತ್ಸವದ ಈ ಸಂದರ್ಭದಲ್ಲಿ ಎಲ್ಲರ ಹೃದಯದಲ್ಲೂ ಆಧ್ಯಾತ್ಮ ಜ್ಯೋತಿಯನ್ನು ಬೆಳಗಿಸುವ ಮಹೋನ್ನತ ಕಾರ್ಯದಲ್ಲಿ ಸ್ವಾಮಿ ಯತೀಶ್ವರಾನಂದ ಜೀಯವರು ಪ್ರವೃತ್ತರಾದುದಕ್ಕೆ ಪರ್ಯಾಯ ಸ್ವಾಮೀಜಿಯವರು ಸಂತೋಷವನ್ನು ವ್ಯಕ್ತಗೊಳಿಸಿ, ಆಭಾರ ಸೂಚಿಸಿದರು. ಸ್ವಾಮಿ ಯತೀಶ್ವರಾನಂದಜೀಯವರೊಟ್ಟಿಗೆ ರಾಮಕೃಷ್ಣ ಆಶ್ರಮದ ಮಂಗಳೂರು ಶಾಖೆಯ ಮುಖ್ಯಸ್ಥರಾದ ಸ್ವಾಮಿ ಆದಿದೇವಾನಂದರು ಸಹ ಇದ್ದರು. ಮತ್ತು ಇವರೀರ್ವರೂ ಶ್ರೀ ರಘುನಾಥ ಪೈಗಳ ಅತಿಥಿಗಳಾಗಿದ್ದರು.

ನೆಹರೂ ಜನ್ಮದಿನೋತ್ಸವ — ತಾರೀಕು 14ರಂದ ನೆಹರೂಗಳ ಜನ್ಮದಿನೋತ್ಸವವನ್ನು ಉಡುಪಿಯಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಶ್ರೀ ಕೃಷ್ಣ ದೇವಸ್ಥಾನದಲ್ಲಿ ಪೇಜಾವರ ಶ್ರೀಪಾದಂಗಳವರು ಪೂಜೆಯನ್ನು ನೆರವೇರಿಸಿ ಪಂಡಿತ ನೆಹರೂರವರ ದೀರ್ಘಾಯುರಾರೋಗ್ಯಕ್ಕಾಗಿ ಪ್ರಾರ್ಥಿಸಿದರು. ಸ್ಥಳೀಯ ವೆಂಕಟರಮಣ ದೇವಸ್ಥಾನದಲ್ಲೂ ಇಗರ್ಜಿ ಮತ್ತು ಮಸೀದಿಯಲ್ಲೂ ನೆಹರೂಗಳನ್ನು ಹರಸಲು ಸ್ಪೆಶಲ್ ಕಾರ್ಯ ಕ್ರಮಗಳನ್ನು ನಡೆಯಿಸಲಾಗಿತ್ತು. ರಾತ್ರಿ ಮುಕುಂದ ನಿವಾಸದಲ್ಲಿ ಯುತ್ ಕಾಂಗ್ರೆಸಿನವರ ವತಿಯಲ್ಲಿ ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ, ಭಜನೆಯ ಕಾರ್ಯ ಕ್ರಮವಾದ ಬಳಿಕ ಅಧ್ಯಕ್ಷರೂ ಮತ್ತು ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ಗಳೂ ಪಂಡಿತ ನೆಹರೂಗಳ ಜೀವನದ ಪರಿಚಯಾತ್ಮಕ ಭಾಷಣ ಮಾಡಿ ಅವರ ಶ್ರೇಯೋಭಿವೃದ್ಧಿಯನ್ನು ಕೋರಿದರು.

ಮಹಿಳಾ ಸಮಾಜದ ಕಾರ್ಯ ಸಮಿತಿ— ಈಚೆಗೆ ಉಡುಪಿಯಲ್ಲಿ ಜನ್ಮತಾಳಿದ ಮಹಿಳಾ ಸಮಾಜದ ಕಾರ್ಯನಿರ್ವಾಹಕ ಸಮಿತಿಗೆ ಶ್ರೀಮತಿ ಪ್ರೇಮಾ ಎ. ಪೈ (ಅಧ್ಯಕ್ಷೆ). ಶ್ರೀಮತಿ ಆರ್. ಭವಾನಿ ಮತ್ತು ಶ್ರೀಮತಿ ಇಂದುಮತಿ [illegible] (ಉಪಾಧ್ಯಕ್ಷೆಯರು) ಶ್ರೀಮತಿ ಕೆ. ಕಣ್ಣನ್ (ಪ್ರಧಾನ ಕಾರ್ಯದರ್ಶಿನಿ). ಶ್ರೀಮತಿ ಅನುಸೂಯಾ ಶೆಟ್ಟಿ ಮತ್ತು ಕು. [illegible] ಬಾಯಿ (ಜತೆ ಕಾರ್ಯದರ್ಶಿಯರು) ಲೀಲಾ ಮತ್ತು ಕು. ಲೊಬೊ (ಆಫೀಸು ಸಂಚಾಲಕ ಕಾರ್ಯದರ್ಶಿಯರು) ಶ್ರೀಮತಿ ಲಕ್ಷ್ಮಿ ಪೈ, ಮತ್ತು ಶ್ರೀಮತಿ ಟಿ. ಫೆರ್ನಾಂಡಿಸ್ (ಕೋಶಾಧಿಕಾರಿಣಿಯರು) ಆಗಿ ಚುನಾಯಿತರಾಗಿದ್ದಾರೆ.

ವಿಹಾರಾರ್ಥವಾಗಿ—ಬೋರ್ಡ್ ಹೈಸ್ಕೂಲಿನ ||| ಫಾರ್ಮ್ ವಿದ್ಯಾರ್ಥಿಗಳು ತಾ 19 ರಲ್ಲಿ ಅಧ್ಯಾಪಕ ಶ್ರೀ ಎಂ. ಬಸವ ಶೆಟ್ಟಿ ನೇತೃತ್ವದಲ್ಲಿ ಮೂಡುಬಿದ್ರಿಗೆ ತೆರಳಿ ಅಲ್ಲಿಯ ಪ್ರೇಕ್ಷಣೀಯ ಬಸದಿ ವಗೈರೆಗಳನ್ನು ನೋಡಿ ಕೊಂಡು ಬಂದಿರುತ್ತಾರೆ.

ರಾಷ್ಟ್ರಭಾಷಾ ಶಿಕ್ಷಣ ಶಿಬಿರ— ಎಂಬ ಹೆಸರಿನಿಂದ ಕಳೆದ ಐದಾರು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಹಿಂದೀ ಪ್ರಚಾರ ಸಂಸ್ಥೆಯಿಂದ ಈ ಬಾರಿ ಬೇರೆ ಬೇರೆ ಹಿಂದೀ ಪರೀಕ್ಷೆಗಳಿಗೆ ಕುಳಿತ ೨೨ ಮಂದಿಯಲ್ಲಿ ೨೦ ಜನರು ತೇರ್ಗಡೆಯಾಗಿರುವರೆಂದೂ ಅವರಲ್ಲಿ ೯ ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರೆಂದೂ ತಿಳಿದು ಬರುತ್ತದೆ.

ಭಾಷಣ— ಉಡುಪಿ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಇಕೊನೋಮಿಕ್ಸ್ ಎಸೋಸಿಯೇಶನಿನ ಆಶ್ರಯದಲ್ಲಿ ಇದೇ ತಾ 23ರಲ್ಲು ಮಿ| ಹೆನ್ರಿ ಇ. ನ್ಯಾಲ್ಸ್ ಎಂಬವರು "ಅಮೇರಿಕಾದ ಟೆಕ್ನಿಕಲ್ ಕೋಪರೇಶನ್" ಮತ್ತು "ಅಮೇರಿಕಾದಲ್ಲಿ ಹೆಂಗುಸರ ಜವಾಬ್ದಾರಿಗಳು" ಎಂಬೀ ವಿಷಯಗಳನ್ನೆತ್ತಿ ಅನುಕ್ರಮವಾಗಿ ಭಾಷಣಗಳನ್ನಿತ್ತರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಅತಿಥಿಗಳನ್ನು ಸ್ವಾಗತಿಸಿ, ಪರಿಚಯಮಾತುಗಳನ್ನಾಡಿದರು

ಶ್ರೀ ಕೆ. ಎಸ್. ಐತಾಳರ ಶೋಚನೀಯ ನಿಧನ—ಶ್ರೀ ಶೀರೂರು ಮಠದ ಏಜಂಟ್ ಶ್ರೀ ಕೆ. ಎಸ್. ಐತಾಳರು ಇದೇ ತಾ 19ರಂದು ಬೆಳಿಗ್ಗೆ ಸ್ಮೃತಿಯಿಲ್ಲದ ಅವಸ್ಥೆಯಲ್ಲಿ ಸರಕಾರೀ ಆಸ್ಪತ್ರೆಗೆ ಔಷಧೋಪಚಾರಕ್ಕಾಗಿ ತರಲ್ಪಟ್ಟರು. ತಾ 21ರಂದು ಸಂಜೆ ಆಸ್ಪತ್ರೆಯಲ್ಲಿಯೇ ಪರಲೋಕವಾಸಿಗಳಾದರು. ಮರುದಿನ ಬೆಳಿಗ್ಗೆ ಮೃತ ಶರೀರದ ಪೋಸ್ಟ್ ಮಾರ್ಟಮ್ ನಡೆಸಲಾಯಿತು. ಶ್ರೀ ಐತಾಳರ ಶೋಚನೀಯಾವಸ್ಥೆಯ ಕಾರಣವೇನೆಂದು ತಿಳಿದು ಬರುವುದಿಲ್ಲ.

ಲಕ್ಷದೀಪ ಸಾಹಿತ್ಯೋತ್ಸವವು— ಸ್ಥಳೀಯ ಕಲಾವೃಂದದಲ್ಲಿ ತಾ 20ರಲ್ಲಿ ಸಂಸ್ಕೃತ ಕಾಲೇಜಿನಲ್ಲಿ ಬೆಂಗಳೂರಿನ ಶಾಸನ ಸಭಾ ಸದಸ್ಯರಾದ ಶ್ರೀ ಎಮ್. ಪಿ. ಎಲ್. ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಎಮ್. ಜಿ. ಎಮ್. ಕಾಲೇಜಿನ ಪ್ರಾಧ್ಯಾಪಕರುಗಳಾದ ಶ್ರೀಯುತರು ಎಚ್. ಕೆ. ರಾಮಚಂದ್ರ ಮೂರ್ತಿ ಮತ್ತು ಕೆ. ಬಿ. ರಾಮಕೃಷ್ಣ ರಾಯರು ಅನುಕ್ರಮವಾಗಿ ಕವಿತಾ ವಾಚನ ಮತ್ತು ಭಾಷಣಗಳನ್ನು ಮಾಡಿದರು.

ಕಾಲಿದಾಸ ಜಯಂತಿ—ಇದೇ ತಾ 21ರಲ್ಲು ಸಂಜೆ ಸಂಸ್ಕೃತ ಕಾಲೇಜಿನಲ್ಲಿ ಪರ್ಯಾಯ ಶ್ರೀ ಪೇಜಾವರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಶ್ರೀನಿವಾಸ ಭಟ್ ಮತ್ತು ಎ. ಸೀತಾರಾಮಾಚಾರ್ಯರು ಅನುಕ್ರಮವಾಗಿ ಕಾಲಿದಾಸನ ಶೃಂಗಾರ ವಿಮರ್ಶೆ ಮತ್ತು ಕಾಲಿದಾಸನ ಧಾರ್ಮಿಕ ಸಂಪತ್ತು ವಿಷಯಗಳನ್ನೆತ್ತಿ ಉಪನ್ಯಾಸನಿತ್ತರು. ಶ್ರೀ ಎಮ್. ಪಿ. ಎಲ್. ಶಾಸ್ತ್ರಿಗಳು ಕಾಲಿದಾಸ ಮತ್ತು ಭಾರತ ಸಂಸ್ಕೃತಿ ಕುರಿತು ಮಾತನಾಡಿದರು. ರಾತ್ರಿ ಸಂಸ್ಕೃತ ಮತ್ತು ಕನ್ನಡ ನಾಟಕಾಭಿನಯಗಳಿದ್ದವು.

ವಾಗ್ವರ್ಧಿನಿ ಸಭೆ— ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ವಾಗ್ವರ್ಧಿನೀ ಸಭೆಯು ಶ್ರೀ ಶಂಕರನಾರಾಯಣಾಚಾರ್ ಬಿ.ಎ.ಎಲ್.ಟಿ. ಯವರ ಅಧ್ಯಕ್ಷತೆಯಲ್ಲಿ ತಾ ೧೭ರಂದು ಜರಗಿತು. ಪ್ರಮುಖ ಅಭಿನಯ ಗೀತೆ ಶ್ರೀ ಮನೋರಮಾದೇವಿಯ ಹಾಡು, ರತ್ನಾಕರನ ಕಥೆ ವಿಶೇಷ ಮನೋರಂಜನೆಯನ್ನುಂಟುಮಾಡಿತು. ಶ್ರೀ ಶ್ರೀನಿವಾಸ ಅಡಿಗ [illegible].

ಕೆ. ಪಿ. ಸಿ. ಸಿ. ಯ ಕಾರ್ಯದರ್ಶಿಗಳಾಗಿ ಶ್ರೀ ಟಿ. ಎ. ಪೈ, ಎಂ.ಎಲ್.ಎ. ರವರು ಚುನಾಯಿತರಾಗಿರುವರೆಂದು ತಿಳಿದು ಬರುತ್ತದೆ.

ದಿ| ಟಿಳ್ಳಿಯವರ ಭಾವಚಿತ್ರ ಅನಾವರಣ ನಮ್ಮ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ತಾ ೨೩ರಲ್ಲಿ ಶ್ರೀ ರಾಜಾಜಿಯವರು ನೆರವೇರಿಸಿದರು. ವಿವರವನ್ನು ಮುಂದಿನ ವಾರ ಕೊಡಲಾಗುವುದು.

ಮುಖ್ಯ ಮಂತ್ರಿಗಳನ್ನು ಸ್ವಾಗತಿಸಲು ದ. ಕ. ಜಿಲ್ಲೆಯ ಎಲ್ಲೆಡೆಗಳಿಂದಲೂ ಜನರು ಕಿಕ್ಕಿರಿದು, ಮಾರ್ಗದ ಎರಡು ಬದಿಗಳಲ್ಲೂ ನೆರೆದಿದ್ದರು. ಶ್ರೀ ಎ. ಬಿ. ಶೆಟ್ಟಿ ಮತ್ತು ಶ್ರೀ ಕುಟ್ಟಿ ಕೃಷ್ಣನ್ ನಾಯರ್‌ರೊಡನೆ ಶ್ರೀ ಸಿ. ರಾಜಗೋಪಾಲಾಚಾರ್ಯರು, ಕಾಸರಗೋಡಿನಿಂದ ಬಂದವರೇ ತಾ ೨೨ರಂದು ಸಂಜೆಗೆ ಕೇಂದ್ರ ಮೈದಾನಿನಲ್ಲಿ ಸುಮಾರು ೨೫ ಸಾವಿರ ಜನರು ಮುಖ್ಯ ಮಂತ್ರಿಗಳನ್ನು ಕಾಣುವ ಆತುರದಲ್ಲಿ—ಅವರ ಭಾಷಣವನ್ನು ಕೇಳುವ ಆಸಕ್ತಿಯಲ್ಲಿ ನೆರೆದಿದ್ದರು.

ಜಿಲ್ಲಾ ಕಲೆಕ್ಟರರಾದ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರು ಪುರ ಪ್ರಮುಖರನ್ನೂ, ಅಧಿಕಾರಿಗಳನ್ನೂ ಮುಖ್ಯ ಮಂತ್ರಿಗಳಿಗೆ ಪರಿಚಯ ಮಾಡಿಕೊಟ್ಟರು. ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಫ್. ಎಕ್ಸ್. ಡಿ ಸಿಂಟೋರವರು ಮಹಾವರು ಮಂತ್ರಿಗಳಿಗೂ ಸ್ವಾಗತವನ್ನು ಬಯಸಿದರು.

ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ತನ್ನ ಮುಖ್ಯ ಮಂತ್ರಿ ಪದವಿಯು ಹೂವಿನ ಹಾಸಿಗೆಯಲ್ಲವೆಂಬುವನ್ನು ಒಳ್ಳೆಯ ಜಾಣ್ಮೆಯಿಂದಲೂ, ಸರಸವಾಗಿಯೂ ವಿವರಿಸಿದರು. ತನ್ನಂತಹ ಮುದುಕನಿಗೆ ಈ ಮುಖ್ಯ ಮಂತ್ರಿತ್ವದ ಗುರುತರವಾದ ಕಾರ್ಯವನ್ನು ಸಾಗಿಸಿಕೊಂಡು ಹೋಗಲು ಕಷ್ಟವಾಗುವುದೆಂದು ಅವರು ತಿಳಿಸುತ್ತಾ, ಈ ಪದವಿಯು ಗ್ರಾಮದ ಪಟೇಲನಿಗೆ ಸರಿಹೋಗುವುದೆಂದರು. ಗ್ರಾಮದ ಪಟೇಲನು ಎಲ್ಲಾ ಗ್ರಾಮಸ್ಥರೊಡನೆಯೂ ವೈಯುಕ್ತಿಕವಾಗಿಯೇ ತಾನು ಮುಖ್ಯ ಮಂತ್ರಿಯಾಗಿ ಎಲ್ಲ ಸಂಸ್ಥಾನದ ಎಲ್ಲಾ ಗ್ರಾಮಗಳೊಡನೆಯೂ ಅವುಗಳ ಆಗುಹೋಗುಗಳನ್ನು ಗಮನಿಸಿಕೊಂಡು ತೃಪ್ತಿಪಡಿಸಬೇಕಾಗಿದೆ.

ಮದ್ರಾಸು ಪ್ರಾಂತದ ಎಲ್ಲಾ ಗ್ರಾಮಗಳ ಜನರೂ ಇಂದು ತಮ್ಮದೇ ಆದೊಂದೊಂದು ಪಂಚ ವಾರ್ಷಿಕ ಯೋಜನೆಯನ್ನು ಮುಂದಿಟ್ಟುಕೊಂಡು ತಮ್ಮ ಬೇಡಿಕೆಯನ್ನು ನೀಗಿಸಿಕೊಡಬೇಕೆಂದು ಹಲವು ಕೇಳಿಕೆಗಳ ಮನವಿಗಳನ್ನು ಸರಕಾರದ ಮುಂದೆ ಇಡುತ್ತಿದ್ದಾರೆ. ಆದರೆ ಸರಕಾರದ ಧನ ಬಲದ ವಾಸ್ತವಿಕತೆ ನಮ್ಮ ಜನರಿಗೆ ಸರಿಯಾಗಿ ತಿಳಿದಿಲ್ಲವೆಂದು ಶ್ರೀ ರಾಜಾಜಿ ಹೇಳುತ್ತಾ, ಅಧಿಕ ಸಂಪತ್ತುಳ್ಳ ಪ್ರಪಂಚದ ದೊಡ್ಡ ರಾಷ್ಟ್ರಗಳಾದ ಅಮೇರಿಕಾ ಮತ್ತು ರಷ್ಯವನ್ನು ಕೊಳ್ಳೆ ಹೊಡೆಯಲು ತಾನು ಪ್ರಧಾನ ಮಂತ್ರಿ ನೆಹರೂರವರಿಗೆ ಸದ್ಯದಲ್ಲೇ ತಿಳಿಸುವೆನಾಗಿ ಹೇಳುವಾಗ ಸಭೆಗೆ ಸಭೆಯೇ ಗೊಳ್ಳೆಂದು ನಕ್ಕಿತು.

ನಮ್ಮಲ್ಲಿ ರಾಜಕೀಯ ಜ್ಞಾನವು ಹೆಚ್ಚಾಗಿದೆ. ಎಲ್ಲರೂ ರಾಜಕೀಯ ಪರಿಣತರೇ ಆಗಿರುವುದರಿಂದ ಪ್ರತಿಯೊಂದು ವಿಷಯಗಳಿಗೂ ಪಕ್ಷದ ಪ್ರತಿಪಾದನೆಯನ್ನು ನಡೆಸಲು ನಾವು ಮುಂದಾಗಿರುವುದರಿಂದ ದೇಶದ ಪ್ರಗತಿ ಸಾಧನೆಯಾಗಲಾರದು, ಎಂದು ರಾಜಾಜಿ ಹೇಳಿದರು.

ದ. ಕ. ಜಿಲ್ಲೆಯ ಬುದ್ಧಿವಂತರಾದ ನೀವು ಆರಿಸಿ ಕಳುಹಿಸಿ ಕೊಟ್ಟ ಎಲ್ಲ ಪ್ರತಿನಿಧಿಗಳೂ ಇದೀಗ ಒಮ್ಮತದಿಂದ ಒಕ್ಕಲು ಹಿತ ಮಸೂದೆ ಈ ಜಿಲ್ಲೆಗೆ ಬರಬೇಕಾಗಿದೆಯೆಂದು ತನ್ನೊಡನೆ ಹೇಳಿದ್ದಾರೆಂದೂ, ಎಂತಲೇ ರೈತ ಹಿತ ಕಾನೂನನ್ನು ಆದಷ್ಟು ಬೇಗನೇ ಈ ಜಿಲ್ಲೆಗನ್ವಯಿಸುವಂತೆ ಜ್ಯಾರಿಗೆ ತರುವೆನೆಂದೂ ಶ್ರೀ ರಾಜಾಜಿ ಹೇಳಿದರು. ಆದರೆ, ರೈತರೂ, ಧನಿಗಳೂ ಒಮ್ಮತದಲ್ಲಿರಬೇಕೆಂದೂ, ರೈತನ ಹಕ್ಕುಗಳಿಗೆ ಧನಿಗಳು ಭದ್ರತೆ ಕೊಡಬೇಕೆಂದೂ ಅವರು ಹೇಳಿದರು. ಈ ವಿಷಯದಲ್ಲಿ ಒಮ್ಮತದ ನಿರ್ಣಯ ಬೇಕೇ ಹೊರತು ಜಗಳ ಮಾಡುವಲ್ಲಿ ಖಂಡಿತವಾಗಿಯೂ ರೈತ ಹಿತ ಕಾನೂನು ಸದ್ಯ ಈ ಜಿಲ್ಲೆಗೆ ಬರುವಂತಿಲ್ಲವೆಂದರು.

ನಾವೀಗ ಪಡೆಯುತ್ತಿರುವ ವಿದ್ಯೆಯು ನಮಗೆ ಸಂತೋಷವನ್ನು ಒದಗಿಸುವುದಿಲ್ಲ. ಈ ನವ ವಿದ್ಯೆಯ ಗೊಂದಲದಿಂದಾಗಿ ನಾವು ನಮ್ಮ ಸಾದಾ-ಸರಳ ಜೀವನವನ್ನು ಮರೆಯುವಂತಾಗಿದೆ; ಇದು ತಪ್ಪು. ನಾವು ಸಾಮಾನ್ಯ ಪ್ರಜೆಯಂತೆ ಬಾಳಲು ಕಲಿಯಬೇಕು ಎಂದು ಶ್ರೀ. ರಾಜಾಜಿ ಹೇಳಿದರು.

ದ. ಕ. ಜಿಲ್ಲೆ ನವನಾಗರಿಕತೆಯಲ್ಲಿ ಇಡಿ

ಮಂಗಳೂರಲ್ಲಿ ಪ್ರಧಾನಿ ರಾಜಗೋಪಾಲಾಚಾರ್ಯರು

ಬಿಡುವಿಲ್ಲದ ವಿವಿಧ ಕಾರ್ಯ ಕಲಾಪಗಳು

ಯ ದಕ್ಷಿಣ ಭಾರತದಲ್ಲೇ ಮುಂದರಿದ ಜಿಲ್ಲೆ. ವಿದ್ಯಾಕ್ಷೇತ್ರದಲ್ಲೂ ಹಾಗೆಯೇ. ಹಾಗಿರುತ್ತ ಈ ಜಿಲ್ಲೆಯ ಜನರು ಇಷ್ಟೊಂದು ಹರ್ಷಾತುರರಾಗಿ ತನ್ನನ್ನು ಸ್ವಾಗತಿಸುತ್ತಿರುವುದು ನನಗೆ ಅತೀವ ಆನಂದವನ್ನೊದಗಿಸಿದುದರಿಂದ ದ. ಕ. ಜಿಲ್ಲೆಯ ಸೌಕರ್ಯ ಮತ್ತು ಇಲ್ಲಿಯ ಜನರ ವಿದ್ಯಾ ಬುದ್ಧಿಯನ್ನು ಪ್ರಶಂಸಿಸಿ ಹೇಳಿದರು.

ಕೆಲವರು ಮದ್ಯಪಾನ ನಿಷೇಧ ಕಾನೂನನ್ನು ಕಿತ್ತೊಗೆಯಬೇಕೆಂದು ಹೇಳುತ್ತಾರೆ. ಹಾಗೆ ಮಾಡಿದರೆ, ಸರಕಾರ ಬಡವರ ಗೋರಿಯನ್ನು ತಾನೇ ಸ್ವತಃ ಕಟ್ಟಿದಂತಾಗುವುದು. ಮದ್ಯವು ಒಂದು ವಿಷ. ಕೌಟುಂಬಿಕ ಜೀವನದಲ್ಲೇ ವಿರಸವನ್ನುಂಟು ಮಾಡುವ ಈ ವಿಷವನ್ನು ನಾವು ಪ್ರೋತ್ಸಾಹಿಸಬಾರದು. ಆದುದರಿಂದ ಮದ್ಯಪಾನ ನಿಷೇಧ ಕಾನೂನನ್ನೇ ಎಲ್ಲರೂ ಬೆಂಬಲಿಸಬೇಕೆಂದು ಶ್ರೀ ರಾಜಾಜಿ ವಿನಂತಿಸಿಕೊಂಡರು.

ಪ್ರಯತ್ನವೇ ಮುಖ್ಯ. ಪ್ರಯತ್ನವಿಲ್ಲದಿದ್ದರೆ ಕೈಗಾರಿಕೋನ್ನತಿಯನ್ನು ಸಾಧಿಸುತ್ತೇವೆನ್ನುವುದು ಶುದ್ಧ ಸುಳ್ಳು; ಹಾಗೆಯೇ ಕೃಷಿ. ಕೃಷಿಯ ಅಭಿವೃದ್ಧಿಯಾದರೆ ಮಿಕ್ಕುಳಿದವುಗಳನ್ನು ಸುಲಭದಲ್ಲಿ ಅಭಿವೃದ್ಧಿಗೆ ತರಿಸಲು ಸಾಧ್ಯವಾಗುವುದು. ಇದಕ್ಕೆ ಮುಖ್ಯವಾಗಿ ಹೃದಯ ಪರಿವರ್ತನೆ ಮತ್ತು ಶುದ್ಧ ಮಾನವೀಯತೆ ಬೇಕು. ಏನಾ: ಕಮ್ಯುನಿಸ್ಟರು ಹೇಳುವಂತೆ ಎಲ್ಲವನ್ನೂ ಆಜ್ಞೆಯಿಂದಲೇ ನಡೆಸಬೇಕೆನ್ನುವುದು ಸಾಧ್ಯವಾಗುವ ಮಾತಲ್ಲ. ಕಮ್ಯುನಿಷ್ಟರನ್ನು ತಾನು ನಂಬುವುದಿಲ್ಲವೆಂದೂ, ಅವರ ಮಾತಿನಲ್ಲಿ ತನಗೆ ವಿಶ್ವಾಸವಿಲ್ಲವೆಂದೂ ಶ್ರೀ ರಾಜಾಜಿ ಹೇಳುತ್ತಾ ಎಲ್ಲರೂ ಪರಸ್ಪರ ಸಹಕಾರ ಬುದ್ಧಿಯಿಂದಲೇ ನಡೆಯುವುದಾದರೆ ದೇಶದ ಅಭಿವೃದ್ಧಿ ಖಂಡಿತ ಸಾಧ್ಯವಾಗುವುದೆಂದು ಹೇಳಿದರು.

ನಂತರ ಶ್ರೀ ರಾಜಾಜಿಯವರು ದ. ಕ. ಜಿಲ್ಲೆಯ ಜನ ಪ್ರತಿನಿಧಿಗಳ ಮೇಧಾಶಕ್ತಿ ಮತ್ತು ದಕ್ಷತೆ, ಕಾರ್ಯ ಕ್ಷಮತೆಯನ್ನು ಪ್ರಶಂಸಿಸುತ್ತಾ ಇಲ್ಲಿಂದ ಮದ್ರಾಸಿಗೆ ಆರಿಸಿ ಹೋದ ಎಲ್ಲರೂ ತನಗೆ ಒಳ್ಳೆಯ ತೃಪ್ತಿಯನ್ನಿತ್ತಿದ್ದಾರೆಂದು ಹೇಳಿದರು. ಅವರಲ್ಲೂ ದಕ್ಷತೆ, ಪ್ರಮಾಣಿಕತೆ. ವಿಶ್ವಾಸ ಯೋಗ್ಯತೆಯುಳ್ಳ ಶ್ರೀ ಎ. ಬಿ. ಶೆಟ್ಟರಂತಹ ಮಂತ್ರಿಗಳನ್ನೂ ದೊರಕಿಸಿ ಕೊಟ್ಟುದಕ್ಕಾಗಿ ಶ್ರೀ ರಾಜಾಜಿ ದ. ಕ. ಜಿಲ್ಲೆಯ ಜನರನ್ನು ತುಂಬಾ ಕೊಂಡಾಡಿದರು. ಶ್ರೀ ರಾಜಾಜಿ, ಶ್ರೀ ಎ. ಬಿ. ಶೆಟ್ಟರ ಕಾರ್ಯ ಕ್ಷಮತೆಯನ್ನು ಪ್ರಶಂಸಿಸುತ್ತಾ ಅವರು ಘನವಾದ ಒಂದು "ಬಂಡೆಯಂತಿದ್ದಾರೆ" ಎಂದರು. ತಾನು ಯಾರನ್ನು ಹೊಗಳುವುದಿಲ್ಲವೆಂದೇ ಹೆಚ್ಚಿನ ತನ್ನ ಮಿತ್ರರ ಆರೋಪ ಉಂಟೆಂದು ಹೇಳುತ್ತಾ, ಇದೀಗ ಶ್ರೀ ಎ. ಬಿ. ಶೆಟ್ಟರನ್ನು ಹೊಗಳುವುದು ವ್ಯಸ್ತತೆಯಾದ ಮಾತುಗಳಿಂದಲೇ ಎಂದು ಶ್ರೀ ರಾಜಾಜಿ ನೆರೆದ ಜನಸ್ತೋಮಕ್ಕೆ ತಿಳಿಸಿದರು.

ನಗರ ಸಭೆಯಲ್ಲಿ ರಾಜಾಜಿಯವರು

ಇದೇ ತಾ. ೨೩ರಲ್ಲಿ ಪೂರ್ವಾಹ್ನ ಮಾನ್ಯ ರಾಜಾಜಿಯವರು ಮಂಗಳೂರು ನಗರ ಸಭೆಗೆ ಶ್ರೀಗಳಾದ ಎ. ಬಿ. ಸೆಟ್ಟಿ ಮತ್ತು ಕುಟ್ಟಿ ಕೃಷ್ಣನ್ ನಾಯರರೊಂದಿಗೆ ಆಗಮಿಸಿದಾಗ ನಗರ ಸಭಾಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಅವರೆಲ್ಲರನ್ನೂ ಸ್ವಾಗತಿಸಿದರು. ನಂತರ ಶ್ರೀ ಅಡಿಗರು ಮುಖ್ಯ ಮಂತ್ರಿಗಳಿಗೆ ಮಾನ ಪತ್ರವನ್ನೂ ಅರ್ಪಿಸಿದರು. ನಗರಕ್ಕೆ ಆದಷ್ಟು ಬೇಗನೆ ನಳ್ಳಿ ನೀರಿನ ವ್ಯವಸ್ಥೆ, ಕೇಂದ್ರ ಆಸ್ಪತ್ರೆಯ ವಿಸ್ತರಣೆ, ತಾಲೂಕು ಬೋರ್ಡುಗಳನ್ನು ಪುನರ್ಘಟಿಸಿ ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡುವಂತಿದ್ದರೆ ಜಿಲ್ಲಾ ಬೋರ್ಡಿನ ಆಫೀಸು ಕಟ್ಟಡವನ್ನೂ ನಗರ ಸಭೆಯ ಉಪಯೋಗಾರ್ಥವಾಗಿ ಸಿಕ್ಕುವಂತಾಗಬೇಕು ಎಂಬಿತ್ಯಾದಿ ವಿಷಯಗಳು ಮಾನಪತ್ರದಲ್ಲಿ ಹೇಳಲಾಗಿತ್ತು. ನೀವು ಕೇಳಿದ ನಳ್ಳಿನೀರಿನ ಸಮಸ್ಯೆಯು 1895 ರಷ್ಟು ಹಳೆಯದು. ಆದರೆ ಸರಕಾರವು ಅದನ್ನು ಅಲಕ್ಷಿಸದೆ ಸಾಧ್ಯವಿದ್ದಷ್ಟು ಹಣವನ್ನು ಆ ಕಾರ್ಯಕ್ಕೆ ವಿನಿಯೋಗಿಸಿಯದೆ.

ಹೆದ್ದಾರಿಗಳನ್ನು ಅಭಿವೃದ್ಧಿಗೊಳಿಸುವುದೇ ಸರಕಾರದ ಧೋರಣೆಯಾಗಿರುವುದು. ಆದರೆ ಹೆದ್ದಾರಿಗಳ ಬದಲು ಬೀದಿಗಳ ದುರಸ್ತಿಗೆ ಪ್ರಥಮ ಸ್ಥಾನವೀಯಬೇಕೆಂಬುದು ನನ್ನ ವೈಯುಕ್ತಿಕ ಅಭಿಪ್ರಾಯವಾಗಿರುತ್ತದೆ. ಆಸ್ಪತ್ರೆಗಳ ವಿಸ್ತರಣಕ್ಕೆ ತುಂಬಾ ಹಣ ಬೇಕಾಗಿರುವುದರಿಂದ ಜನರು ರೋಗ ಬಾರದಂತೆ ತಡೆಯಲು ಯತ್ನಿಸಬೇಕಾಗಿದೆ. ಹೆಚ್ಚಿನ ಸೌಕರ್ಯಗಳು ಬೇಕಾದಲ್ಲಿ ಜನತೆ ಹಣ ಕೊಡಲು ತಯಾರಿರಬೇಕಾಗಿದೆ. ಜಿಲ್ಲಾ ಬೋರ್ಡಿನ ಕಟ್ಟಡವನ್ನು ಅಪೇಕ್ಷಿಸುವ ಬದಲು ನಿಮ್ಮ ಕಟ್ಟಡದಲ್ಲೆ ಇದ್ದುಕೊಂಡು ಸಂತೋಷಚಿತ್ತರಾಗುವುದು ಹಿತಕರವೆಂದರು

ಕೆನರಾ ವಣಿಕ ಸಂಘದಲ್ಲಿ— ಮಾನ್ಯ ರಾಜಾಜಿಯವರು ಕೆನರಾ ವಣಿಕ ಸಂಘಕ್ಕೆ ಚಿತ್ತೈಸಿದಾಗ ಸಂಘದ ಅಧ್ಯಕ್ಷ ಶ್ರೀ ಎ. ಉಮಾನಾಥ ರಾಯರು ಸ್ವಾಗತಿಸಿ ಮಾನಪತ್ರವನ್ನರ್ಪಿಸಿದರು. ಏಕಮುಖ ಮಾರಾಟ ಕರದ ಆವಶ್ಯಕತೆ, ಪಾವಂಜೆ, ಮೂಲ್ಕಿ, ಉದ್ಯಾವರ ಹೊಳೆಗಳಿಗೆ ಸೇತುವೆ ಇತ್ಯಾದಿ ಮಾನಪತ್ರದಲ್ಲಿ ಸೂಚಿಸಲಾಗಿದ್ದವು.

ರಾಜಾಜಿಯವರು ಮಾನಪತ್ರಕ್ಕೆ ಉತ್ತರವೀಯುತ್ತಾ "ಏಕಮುಖ ಮಾರಾಟಕರ ಸುಧಾರಣೆ ಹೇಗಾಗಬೇಕೆಂದು ವಣಿಕ ಸಂಘವು ಸೂಚನೆಗಳನ್ನು ನೀಡಿದಲ್ಲಿ ಪರ್ಯಾಲೋಚಿಸಲಾಗುವುದೆಂದರು. ಉಡುಪಿಯ ಮೆಡಿಕಲ್ ಕಾಲೇಜು ದೇಶಾಭಿಮಾನದ ಒಂದು ಪ್ರತೀಕ. ಆದರೆ ಮೆಡಿಕಲ್ ಪ್ರಾರಂಭಿಸಬೇಕಿದ್ದರೆ ಪ್ರಥಮತ ಅಲ್ಲಿ ಮೆಡಿಕಲ್ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲು ಸಾಧ್ಯವಾಗುವ ರೀತಿಯ ಆಸ್ಪತ್ರೆಯ ಆವಶ್ಯಕತೆಯಿತ್ತು. ಈ ಆವಶ್ಯಕತೆ ಪೂರೈಸಲಾದ ಬಳಿಕ ಕಾಲೇಜು ಸ್ಥಾಪನೆಯಾಗಬೇಕಾಗಿತ್ತು. ಮಂಗಳೂರಲ್ಲಿ ಕೂಡಾ ಒಂದು ಮೆಡಿಕಲ್ ಕಾಲೇಜಿನ ಆವಶ್ಯಕತೆಯಿದೆ, ಅಂತೂ ಉಡುಪಿಯಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಯಾಯಿತು ಸದ್ಯ ಅದಕ್ಕೆ ಹೇಗೆ ಸಹಕಾರವೀಯಬೇಕೆಂಬುದನ್ನಷ್ಟೆ ವಿಚಾರಿಸಬೇಕಾಗಿದೆ.

ರಾಷ್ಟ್ರದ ರಾಜಕಾರಣದ ಸೂತ್ರ ಚಾಲನೆ ಇಂದು ವ್ಯಾಪಾರೋದ್ಯಮದಲ್ಲಿರುವವರ ಕೈಯಲ್ಲಿ ಇರುವುದಿಲ್ಲ. ವ್ಯಾಪಾರಿಗಳು ರಾಜಕೀಯ ಕ್ಷೇತ್ರದಿಂದ ದೂರವಿರುವರು, ಕೆಲವು ಸಮಯ ಬೊಂಬಾಯಿ—ಕಲ್ಕತ್ತಾಗಳಲ್ಲಿಯ ವ್ಯಾಪಾರೋದ್ಯಮಿಗಳಲ್ಲಿ ರಾಜಕೀಯ ಸೂತ್ರಚಾಲನೆಯಿತ್ತು. ಆದರೆ ಇಂದು ಪ್ರಜಾ ರಾಜ್ಯದಲ್ಲಿ ಸಾಮಾನ್ಯ ಜನತೆಯಿಂದಲೇ ರಾಜ್ಯಾಡಳಿತ ನಡೆಯುತ್ತಿದೆ ಎಂದರು.

ಮಹಿಳಾ ಸಭೆಯಲ್ಲಿ— ರಾಜಾಜಿಯವರು ಮಹಿಳಾ ಸಭೆಗೆ ಚಿತ್ತೈಸಿದಾಗ ಶ್ರೀಮತಿ ಶಾಂಭವಿ. ಆರ್. ಪೂಂಜರು ಸುಸ್ವಾಗತವನ್ನು ಬಯಸಿದರು. "ಮಹಿಳೆಯರು ಮಾಡುವ ಸಮಾಜ ಸೇವಾ ಕಾರ್ಯಗಳು ಸರಕಾರದ ಅಭಿವೃದ್ಧಿಗೆ ತುಂಬಾ ಸಹಕಾರಿಯಾಗುತ್ತವೆ ಎಂಬುದನ್ನು ಸರಕಾರವು ಕಂಡಿರುವುದು. ಮಹಿಳೆಯರು ಮಾಡುವ ಸಮಾಜ ಕಾರ್ಯವು ಮಹತ್ವವಿದ್ದಾಗ್ಗ್ಯೂ ಸಾಕಷ್ಟು ಧನ ಸಹಾಯ ನೀಡಲು ಸರಕಾರಕ್ಕೆ ಹಣದ ಕೊರತೆಯಿದೆ. ಇದನ್ನು ಗಮನಿಸಿ ಮಹಿಳೆಯರು ಸೇವಾ ವೃತ್ತಿಯಿಂದ ಆತ್ಮ ಸಂತೋಷದಿಂದ ಸಮಾಜ ಸೇವಾ ನಿರತರಾಗಬೇಕು ಅದರಿಂದಲೇ ಮಹದಾನಂದ ಉಂಟಾಗುವುದು ಎಂದು ಮಂಜಾಗಿ ಹೇಳಿದರು. ಅನಂತರ ಪ್ರಚಂಡ ವಿದ್ಯಾರ್ಥಿ ಸಭೆಯಲ್ಲೂ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲೂ ಭಾಷಣವಿತ್ತರು.

ಗುರುಪುರದಲ್ಲಿ - ರೋಸಾ ಮಿಸ್ತಿಕಾ ಬುನಾದಿ ತರಬೇತಿ ಶಾಲೆಯಲ್ಲಿ ಮಾನಪತ್ರ ಸ್ವೀಕರಿಸಿ ಅದಕ್ಕೆ ಕನ್ನಡದಲ್ಲಿಯೇ ಉತ್ತರ ಕೊಟ್ಟು ಬಜ್ಪೆಯತ್ತ ಕಡೆ ಹೋದರು.

ಮಂಗಳೂರಿನಿಂದ ನಿರ್ಗಮನ — ಮುಖ್ಯ ಮಂತ್ರಿ ಮಾನ್ಯ ಸಿ. ರಾಜಗೋಪಾಲಾಚಾರಿಯವರು ತಾ. 23ರಂದು ಸಂಜೆ ಬಜ್ಪೆಯಿಂದ ವಿಮಾನ ಮೂಲಕ ಬೆಂಗಳೂರಿಗೆ ಹಿಂತೆರಳಿದರು. ವಿಮಾನ ನಿಲ್ದಾಣದಲ್ಲಿ ರಿಜರ್ವ್ ಪೋಲೀಸ್ ದಳದವರು ಗೌರವ ರಕ್ಷೆ ಸಲ್ಲಿಸಿದರು. ಕಾಯಿದೆ ಕಾನೂನು ಮಂತ್ರಿ ಶ್ರೀ ಕುಟ್ಟಿ ಕೃಷ್ಣ ನಾಯರ್, ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟಿ, ಶ್ರೀ ಕೆ. ಎಸ್. ಹೆಗ್ಡೆ, ಎಮ್. ಪಿ. ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರ್, ಜಿಲ್ಲಾ ಕಲೆಕ್ಟರ್ ಮೊದಲಾದವರು ವಿಮಾನ ನಿಲ್ದಾಣದಲ್ಲಿ ಮುಖ್ಯ ಮಂತ್ರಿಗಳಿಗೆ ಸುಖ ಪ್ರಯಾಣವನ್ನು ಬಯಸಲು ವಿಮಾನನಿಲ್ದಾಣಕ್ಕೆ ಬಂದಿದ್ದರು.

ಕಾಸರಗೋಡಿನಲ್ಲಿ ಶ್ರೀ ರಾಜಾಜಿ.

ತಾ ೨೨ರಂದು ಮಧ್ಯಾಹ್ನ ಕಾಸರಗೋಡಿನ ತಾಲೂಕು ಆಫೀಸಿನ ವಠಾರದಲ್ಲಿ ಶ್ರೀ ರಾಜಾಜಿಯವರು ನೆರೆದ ಸಾವಿರಾರು ಜನರೆದುರು ಉದ್ಬೋಧಕವಾದ ಭಾಷಣವನ್ನು ಮಾಡಿದರು.

ಬೇರೆ ಬೇರೆ ಭಾಷೆಗಳನ್ನಾಡುವವರು, ಜತೆಯಾಗಿ ಬಾಳಲು ಸಾಧ್ಯವಿದೆಯೆಂಬುದನ್ನು ತೋರಿಸಿ ಕೊಡುವುದು ಒಳ್ಳೆಯದು. ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ, ನೃತ್ಯ ಇವುಗಳಿಗಾಗಿ ನಾವು ಒಂದೇಯಾಗಿ ತಮಿಳು, ಮಲೆಯಾಳ ಮತ್ತು ಕನ್ನಡಿಗರೆಲ್ಲಾ ಒಂದಾಗಿ ಬಾಳೋಣ. ಭಾಷೆ ಸಾಹಿತ್ಯಗಳನ್ನು ಬಹು ಭಾಷಾ ಪ್ರಾಂತ್ಯದಲ್ಲಿದ್ದು ಕೊಂಡೂ ಏಳಿಗೆ ಆಸಂದಿಸ ಬಹುದು. ಬಹು ಭಾಷಾ ಪ್ರಾಂತದಲ್ಲಿ ಸರಕಾರವನ್ನು ನಡೆಸಲು ಕಷ್ಟವಾಗುವುದಿಲ್ಲ, ಎಂದು ರಾಜಾಜಿ ಸಭೆಯನ್ನುದ್ದೇಶಿಸಿ ಯಾವಾಗಲೂ ನಾವು ಬೇರೆ ಹೋಗುತ್ತೇವೆಂದು ದಯವಿಟ್ಟು ಹೇಳಬೇಡಿ ಎಂದರು.

ಜ್ಞಾನ ಭಂಡಾರಗಳೆನಿಸಿರುವ ರಾಮಾಯಣ ಮಹಾ ಭಾರತಗಳನ್ನು ಮಕ್ಕಳು ಅಭ್ಯಾಸಿಸಬೇಕು ಎಂದು ರಾಜಾಜಿ ತಿಳಿಸಿದರು.

ಮೊದಲು ಶ್ರೀ ಎಂ. ಎಸ್. ಮೊಗ್ರಾಲ್ ಎಂ. ಎಲ್. ಎ. ಗಳವರು ಶ್ರೀ ಸಿ. ರಾಜಗೋಪಾಲಾಚಾರ್ಯರೊಡನೆ ಆಗಮಿಸಿದ ಶ್ರೀ ಎ. ಬಿ. ಸೆಟ್ಟಿ ಮತ್ತು ಶ್ರೀ ಕುಟ್ಟಿ ಕೃಷ್ಣನ್ ನಾಯರ್‌ರನ್ನು ತನ್ನ ಮತದಾನ ಕ್ಷೇತ್ರದ ಪರವಾಗಿಯೂ ಶ್ರೀ ಎಂ. ಉಮೇಶ ರಾಯರು ಕಾಂಗ್ರೆಸಿನವರ ಪರವಾಗಿಯೂ ಸ್ವಾಗತಿಸಿ ಮಾತನಾಡಿದರು. ಕಾಸರಗೋಡಿನ ಪಂಚಾಯತ್ ಬೋರ್ಡಿನ ಪರವಾಗಿ ಶ್ರೀ ಸಿತ್ತೆ ಲಕ್ಷ್ಮಣ ರಾಯರು ರಾಜಾಜಿಗೊಂದು ಮಾನ ಪತ್ರವನ್ನರ್ಪಿಸಿದರು.

ಮದ್ರಾಸು ಯೂನಿವರ್ಸಿಟಿಯ ಪಾರಿತೋಷ— ಮಂಗಳೂರಿನ ವಿಜಯಾ ಬೇಂಕಿನ ಸುಪರಿಂಟೆಂಡೆಂಟರಾದ ಶ್ರೀ ಪಿ. ಜಯರಾಮ ಸೆಟ್ಟಿ, ಎಮ್. ಎ. ಬಿ. ಎಲ್., ಸಿ. ಎ. ಐ. ಐ. ಬಿ., ಅವರು ಕನ್ನಡದಲ್ಲಿ ಬರೆದ "ವಾಣಿಜ್ಯ ಶಾಸ್ತ್ರದ ಮೂಲತತ್ವಗಳು" ಎಂಬ ಪುಸ್ತಕಕ್ಕೆ ಮದ್ರಾಸು ಯೂನಿವರ್ಸಿಟಿಯವರು ರೂಪಾಯಿ 750/- ಬಹುಮಾನ ಕೊಡಲ್ಪಟ್ಟಿರುವುದೆಂದು ತಿಳಿಸಲು ಸಂತೋಷಪಡುತ್ತೇವೆ. ಆಧುನಿಕ ವಿಷಯಗಳನ್ನೆತ್ತಿ ದೇಶ ಭಾಷೆಗಳಲ್ಲಿ ಬರೆಯುವ ಅಭ್ಯಾಸವನ್ನು ಪ್ರೋತ್ಸಾಹಿಸುವ ಯೋಜನೆಗನುಸಾರವಾಗಿ ಈ ಪಾರಿತೋಷವು ಯೂನಿವರ್ಸಿಟಿಯಿಂದ ಕೊಡಲಾಗಿದೆ.

ಮುಂಬಯಿ ದೇವಾಡಿಗ ಸುಧಾರಕ ಸಂಘದ ವಾರ್ಷಿಕೋತ್ಸವವು ಸರದಾರ್ ಮನಮೋಹನ ಸಿಂಗ್ ಬೇದಿ (ಅಧ್ಯಕ್ಷ ಪ'ವಾರ್ಡ್ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ) ಅವರ ಅಧ್ಯಕ್ಷತೆಯಲ್ಲಿ ತಾ. 29-11-53ನೇ ಮಧ್ಯಾಹ್ನ 2-30 ಸರ್ ಕವಾಸ್ಜಿ ಜಹಾಂಗೀರ್ ಹೋಲಿನಲ್ಲಿ ಜರಗಲಿದೆ.

ಪಿ'ವಾರ್ಡ್ ಡಿಸ್ಟ್ರಿಕ್ಟ್ ಕಾಂಗ್ರೆಸ್ ಸೇವಾದಳದ ಪರವಾಗಿ ತಾ. 14-11-53ರಲ್ಲಿ ಪಂ। ಜವಾಹರಲಾಲರ ಜನ್ಮ ದಿನವನ್ನು ಬಾಲಕರ ದಿನವಾಗಿ ಮುಂಬಾಯಿ ಸರಕಾರದ ಉಪಮಂತ್ರಿ ಶ್ರೀ ಬಿ. ಡಿ. ಜಟ್ಟಿಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಮಂಗಳೂರು

ಸ್ಕಾಟುರ್ಯ್ಯಾಲಿ— ಇದೇ ತಾ 19ರಲ್ಲು ಸಂಜೆ ಕೆನರಾ ಹ್ಯಾಸ್ಕೂಲಿನಲ್ಲಿ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಿಗ್ಗೆ ಪಶ್ಚಿಮ ವಿಭಾಗದ ಮತ್ತು ಕೊಯಂಬತ್ತೂರು ವಿಭಾಗದ ಕಮಿಶನರರ ಸಮ್ಮೇಳನವು ಜರಗಿದ್ದಲ್ಲದೆ ರಾತ್ರಿ ಭೋಜನ ಕೂಟ ಕೂಡಾ ನಡೆಯಿತು. ಈ ಕೂಟದಲ್ಲಿ ಶ್ರೀಗಳಾದ ವಿ. ಎಸ್. ರತ್ನ ಸಭಾಪತಿ, ಜೆ. ಸೋಮಶೇಖರ ರಾವ್, ಎಸ್. ನರಸಪ್ಪಯ್ಯ, ಬಿ. ವೈಕುಂಠ ಬಾಳಿಗ ಮತ್ತು ಟಿ. ಆರ್. ಸುಂದರಂ ಪಿಳ್ಳೆಯವರ ಭಾಷಣಗಳಾದುವು. ಜಿಲ್ಲೆಯ ಸ್ಕಾಟು ಚಳಕ್ಕೆ ಸರ್ವರೂ ಸಹಾಯನಿತ್ತು ಸ್ಕಾಟು ಚಳವಳಿಯನ್ನು ಬಲಪಡಿಸಬೇಕೆಂಬುದೇ ಅವರೆಲ್ಲರ ಭಾಷಣಗಳ ಮುಖ್ಯಾಂಶ.

ಸ್ಥಾಪಕರ ದಿನಾಚರಣೆ— ಕೆನರಾ ಹ್ಯಾಸ್ಕೂಲಿನ ಸ್ಥಾಪಕರ ದಿನಾಚರಣೆಯು ತಾ 19ರಲ್ಲು ಭುವನೇಂದ್ರ ಸಭಾ ಭವನದಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ದೇವದಾಸ ನಾಯ್ಕರ ಸ್ವಾಗತ ಮಾತುಗಳಾದ ಬಳಿಕ, ಈ ಶಾಲಾ ಸ್ಥಾಪಕರಾದ ಶ್ರೀ ಎ. ಸುಬ್ರಾಯ ಪೈಗಳ ಜೀವನ ಹಾಗೂ ಚಟುವಟಿಕೆಗಳ ಕುರಿತು ಅಧ್ಯಕ್ಷರು ಮಾತನಾಡಿದರು. ಈ ಶಾಲೆಯು ಆದರ್ಶವಾಗಿದ್ದು ರಾಷ್ಟ್ರೀಯ ಮನೋಭಾವದ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುತ್ತಿರುವುದು ಅಭಿನಂದನೀಯವೆಂದರು.

ರೇಡಿಯೋ ಭಾಷಣ—ಅಖಿಲ ಭಾರತ ರೇಡಿಯೋವಿನ ದಿಲ್ಲಿ ಕೇಂದ್ರದಿಂದ ತಾ. 2-12-53ನೇ ರಾತ್ರಿ 9-15ಕ್ಕೆ ಡಾ। ಸಿ. ಚಂದ್ರಶೇಖರನ್ ಅವರು ಸಂತಾನ ಸಂಯಮನದ ಕುರಿತು ಭಾಷಣ ಮಾಡಲಿರುವರು.

ವಿದ್ಯಾರ್ಥಿ ಸಂಘದ ಉದ್ಘಾಟನೆ- ಕರ್ನಾಟಕ ಪಾಲಿಟೆಕ್ನಿಕ್ ಕಲಾ ಶಾಲೆಯ ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ತಾ 18ರಲ್ಲು ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಸ್. ಕೃಷ್ಣಸ್ವಾಮಿ ರಾಯರು ವಹಿಸಿದ್ದರು. ವಿದ್ಯಾರ್ಥಿ ಹಾಗೂ ಅಧ್ಯಾಪಕರೊಳಗಿನ ಸೌಹಾರ್ದ ಪೂರ್ಣ ಸಂಬಂಧಕ್ಕಾಗಿ ಶ್ರೀ ಹೆಗ್ಡೆಯವರು ಸಂತೋಷ ವ್ಯಕ್ತಪಡಿಸಿ, ನವಭಾರತ ನಿರ್ಮಾಣ ಕಾರ್ಯದಲ್ಲಿ ಇಂಜಿನಿಯರರ ಜವಾಬ್ದಾರಿಯನ್ನು ವಿವರಿಸಿದರು.

ಕರ್ನಾಟಕ ಮಹಿಳಾ ಪರಿಷತ್ತು- ಇದರ ಹತ್ತನೇ ಅಧಿವೇಶನವು ಇದೇ ತಾ 28 ಮತ್ತು 29 ರಂದು ಮಂಗಳೂರು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠ ಶಾಲೆಯಲ್ಲಿ ಡಾ। ಸಾವಿತ್ರಿ ಬ್ಯಾ ನಾಗಣ್ಣ ಗೌಡ, ಎಂ. ಬಿ. ಬಿ. ಎಸ್. ಹೊಸಪೇಟೆ ಅವರ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀಮತಿ ಉಮಾ ಬಾಯಿ ಕುಂದಾಪುರ, ಹುಬ್ಬಳ್ಳಿ ಅವರು ಪರಿಷತ್ತಿನ ಮತ್ತು ಪ್ರದರ್ಶನದ ಉದ್ಘಾಟನೆ ಮಾಡಲಿದ್ದಾರೆ.

ಜಾನುವಾರು ಪ್ರದರ್ಶನೆ—ಪೊಂಮು ತಾಲೂಕು ಕಚೇರಿ ವಠಾರದಲ್ಲಿ ತಾ 14ರಂದು ಶ್ರೀ. ಬಿ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರದರ್ಶನ ಸಮಿತಿ ಅಧ್ಯಕ್ಷ ಶ್ರೀ. ಪಿ. ಆರ್. ಪೂಂಜರು ಪ್ರಾರಂಭ ಭಾಷಣಮಾಡಿ ಇಂತಹ ಪ್ರದರ್ಶನಗಳ ಪ್ರಯೋಜನ ವಿವರಿಸಿದರು. ಜಿಲ್ಲಾ ಪಶುವೈದ್ಯ ಶ್ರೀ. ನೀಲಕಂಠ ಅಯ್ಯರವರು ಜಾನುವಾರುಸಂಪತ್ತಿನ ಕುರಿತು ಭಾಷಣಮಾಡಿದರು. ಬಹುಮಾನವಿತರಣೆಯಾದ ಮೇಲೆ ಡಾ। ಎಂ. ಎಸ್. ಎ. ಶರ್ಮರು ಮಾತನಾಡಿದರು. ಅಧ್ಯಕ್ಷರಭಾಷಣ, ಶ್ರೀ. ಎಂ. ಕೆ. ದೇವರಾಜರ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ನೆಹರೂ ವರ್ಧಂತಿಯು- ಬೆಸೆಂಟ್ ಹೈಸ್ಕೂಲಲ್ಲಿ ತಾ. 14ರಲ್ಲಿ ಶ್ರೀ. ಬೆಳ್ಳಿ ಭವಾನಿರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಎಂ. ಜಲಜಾಕ್ಷಿ, ಶ್ರೀ. ಪಿ. ಕೆ. ನಾರಾಯಣ, ಕು। ನಳಿನಿ ಇವರು ಭಾಷಣವಿತ್ತರು.

ಸೆಬ್ಯಾವಿಹಾರ— ಎಂಬ ಬೆಸೆಂಟ್ ಹೈಸ್ಕೂಲಿನ ವಿದ್ಯಾರ್ಥಿ ಭವನದ ವರ್ಧಂತಿಯೂ ಥಿಯೊಸಾಫಿಕ ಸೊಸೈಟಿಯ ಸ್ಥಾಪನಾ ದಿನಾಚರಣೆಯೂ ತಾ. 17ರಲ್ಲಿ ಶ್ರೀ. ಕೆ. ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಅನಂತರಾವ್, ಶ್ರೀಮತಿ ಕೆ. ಮೀರಾಬಾಯಿ ಮತ್ತು ಅಧ್ಯಕ್ಷರ ಭಾಷಣ, ಭವನ ನಿವಾಸಿಗಳ ವಿವಿಧ ವಿನೋದಾವಳಿಗಳಾದುವು.

ಗವರ್ನಮೆಂಟ್ ಕಾಲೇಜಿನ ಬಹುಮಾನ ವಿತರಣಾ ದಿನವು ತಾ 21ರಲ್ಲಿ ಉಡುಪಿಯ ಶ್ರೀ. ಟಿ. ಎ. ಪೈ, ಎಂ. ಎಲ್. ಎ, ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ. ಕೆ. ವಸಂತ ಪೈಗಳ ಸ್ವಾಗತ ಭಾಷಣವಾದೊಡನೆ ಅಧ್ಯಕ್ಷರು ಬಹುಮಾನ ವಿತರಣೆ ಮಾಡಿ ತಮ್ಮ ಭಾಷಣದಲ್ಲಿ ರಾಜಕೀಯ ರಂಗದಲ್ಲೂ "ಸ್ಪೋರ್ಟ್ಸ್ ಮ್ಯಾನ್ ಸ್ಪಿರಿಟ್" ಅವಶ್ಯವೆಂದೂ ಅದರಿಂದ ಹಲವು ಸಮಸ್ಯೆಗಳು ಬಗೆಹರಿಸಲ್ಪಡಬಹುದೆಂದೂ ಹೇಳಿ ನಮ್ಮ ನಾಡಿನ ಎಷ್ಟೋ ಆಟಗಳನ್ನು ಪುನರುಜ್ಜೀವಿಸಬೇಕೆಂದರು. ವಂದನಾರ್ಪಣೆ ವಿವಿಧ ವಿನೋದಾವಳಿಗಳಿಂದ ಸಭಾಂತ್ಯಗೊಂಡಿತು.

ವಿದ್ಯಾರ್ಥಿ ಯೂನಿಯನಿನ ಉದ್ಘಾಟನೆ—ಯು ತಾ 12ರಲ್ಲು ಶ್ರೀ. ಬಿ. ರಾಘವ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಚ್. ಸುಂದರ ರಾಯರು ಉದ್ಘಾಟನಾ ಭಾಷಣ ಮಾಡಿದರು.

ಡಾ। ಕೆ. ಬಾಳಪ್ಪ ಶೆಟ್ಟರು—ಸಪತ್ನೀಕರಾಗಿ ಕೆಲವು ತಿಂಗಳುಗಳ ಹಿಂದೆ ಯುರೋಪು ಪ್ರವಾಸವನ್ನು ಕೈಗೊಂಡಿದ್ದರಷ್ಟೆ! ಅವರು ಇದೇ ತಾ 17ರಲ್ಲಿ ಸುಖವಾಗಿ ಮಂಗಳೂರಿಗೆ ಹಿಂದೆ ಬಂದಿರುವರು. ಅವರು ಇಂಗ್ಲೆಂಡಿನ ಕೆಲವು ಆಸ್ಪತ್ರೆಗಳನ್ನು ಸಂದರ್ಶಿಸಿದುದಲ್ಲದೆ ವಿಯೆನ್ನದಲ್ಲಿ ರೇಡಿಯೋಲಜಿ ಮತ್ತು ಇಲೆಕ್ಟ್ರೋ ಕಾರ್ಡಿಯೊಗ್ರಾಫಿಯಲ್ಲಿ ಪೋಸ್ಟ್ ಗ್ರಾಜ್ಯುವೇಟ್ ಕೋರ್ಸನ್ನು ಪಡೆದರು. ಪ್ಯಾರಿಸಿನಲ್ಲಿ ನಡೆದ ರೋಟರಿ ಸಭೆ, ಇಂಗ್ಲೆಂಡಿನಲ್ಲಿ ನಡೆದ ಪಟ್ಟಾಭಿಷೇಕ ಮಹೋತ್ಸವ, ಕೋಪನ್ ಹ್ಯಾಗನಿನಲ್ಲಿ ಜರಗಿದ ರೇಡಿಯೋಲಜಿ ಕಾಂಗ್ರೆಸ್‌ಗೆ ಕೂಡ ಹೋಗಿದ್ದರು.

ಶ್ರೀಧರ್ಮಸ್ಥಳ - ದೀಪೋತ್ಸವ ಜಾತ್ರೆಯು ತಾ. 1—12—53ರಿಂದ 5-12-53ರ ವರೆಗೆ ಜರಗುವುದು. ಎಂದಿನಂತೆ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳೂ ನಡೆಯಲಿಕ್ಕಿರುವವು. ಸಭೆಯಲ್ಲಿ, ಸಭೆಗೆಂದು ಆಹ್ವಾನಿಸಲ್ಪಟ್ಟ ಮಹನೀಯರಿಗೆ ಮಾತ್ರ ಮಾತಾಡಲು ಅವಕಾಶ ದೊರೆಯುವುದು. ಸಭೆಯಲ್ಲಿ ಮಾತಾಡಬಹುದಾದ ವಿಷಯಗಳು-1. ಜೀವಿಯ ಹುಟ್ಟು-ಸಾವು. 2. ಧರ್ಮವೂ ಮಾನವತೆಯೂ. (ಸಾಹಿತ್ಯ) 1. ಸಂಸ್ಕೃತಿ ಎಂದರೇನು? 2. ಕನ್ನಡ ಸಾಹಿತ್ಯ ಎತ್ತ ಸಾಗುತದೆ? 3. ಕನ್ನಡ ಸಾಹಿತ್ಯವೂ ಶಿಲ್ಪ ಕಲೆಯೂ?

ಕಾರ್ಕಳ— ಬೋರ್ಡು ಹೈಸ್ಕೂಲಿನ ವರ್ಧಂತಿಯೂ ಬಹುಮಾನ ವಿತರಣಾ ಸಮಾರಂಭವೂ ತಾ. 29—11—53ರಂದು ಶ್ರೀ. ಬಿ. ವೈಕುಂಠಬಾಳಿಗ, ಎಂ.ಎಲ್.ಎ. ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ವಂಡಾರು ಇಲ್ಲಿ ವರ್ಷಂಪ್ರತಿ ನಡೆಯತಕ್ಕ ಕಂಬಳವು ತಾ. 9—12—53ನೇ ಬುಧವಾರ ಜರಗಲಿರುವುದೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪರ್ಕಳ— ಶ್ರೀ ಹಿರಿಶೆಟ್ಟಿ ಸದಾಶಿವ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿದ ಪಂಚಾಯತ ಬೋರ್ಡಿನ ಸಭೆಯಲ್ಲಿ ಮನೆತೆರಿಗೆ ವಸೂಲಿಗಳ ಕುರಿತು ಚರ್ಚೆ ನಡೆಯಿತು.

ವರ್ಮಾಡಿ ಕಂಬಳವು ಇದೇ ತಾ. 26ನೇ ಗುರುವಾರ ಜರಗಿತು ಎಂದು ಸಂಬಂಧ ಪಟ್ಟವರು ತಿಳಿಸುತ್ತಾರೆ.

ಉದ್ಯಾವರ ಕಡವಿನಲ್ಲಿ—ಇತ್ತೀಚಿಗೆ ಮಂಗಳೂರು ಪತ್ರಿಕೆಯೊಂದರಲ್ಲಿ ಶ್ರೀ. ಕೆ. ಕೆ. ಪಿ. ಪುಮಾಳ ಎಂಬವರು, ಉದ್ಯಾವರ ಕಡವಿನಲ್ಲಿ ಅಧಿಕ ಹಣ ವಸೂಲು ಮಾಡುತ್ತಾರೆಂದು, ಬಲವಾಗಿ ಆಕ್ಷೇಪಿಸಿ, ಜಿಲ್ಲಾ ಕಲೆಕ್ಟರ್ ಮತ್ತಿತರ ಅಧಿಕಾರಿಗಳಿಗೆ ಅರ್ಜಿ ಮಾಡಿದ್ದಾರೆಂದು ಪ್ರಕಟವಾದುದನ್ನು ನೋಡಿ ಆಶ್ಚರ್ಯವಾಯ್ತು. ಎಷ್ಟೋ ಗಸ್ತು ಇಟ್ಟವರ ಕಣ್ಣಿಗಾದರೂ ಅದ್ದವಾಗದ ರೀತಿಯಲ್ಲಿ ದೊಡ್ಡ ಅಕ್ಷರಗಳಲ್ಲಿ ಶೆಡ್ಯೂಲು ದರಗಳ ಬೋರ್ಡು ಉದ್ಯಾವರ ಕಡವು ಆಫೀಸಿನ ಮುಂಭಾಗದ ಗೋಡೆಯಲ್ಲಿದೆ. ಅವು ಸರಕಾರವೇ ನಿರ್ಧರಿಸಿರುವ ದರಗಳು IInd class ಕಡವುಗಳಾಗಿರುವ ಪಾವಂಜೆ, ಮೂಲ್ಕಿಗಳಲ್ಲಿ ಪ್ರಯಾಣಿಕನೊಬ್ಬನಿಗೆ ಮೂರು ಪಾವಾಣಗಳಂತೆಯೂ, I class ಕಡವುಗಳಾಗಿರುವ ಉದ್ಯಾವರ, ಕಲ್ಯಾಣಪುರ, ಮಾಬುಕಳ ಗಂಗೊಳ್ಳಿಗಳಲ್ಲಿ ಒಬ್ಬನಿಗೊಂದಾಣೆಯಂತೆಯೂ ದರ ನಿಶ್ಚಯಿಸಿದೆ. ಈ ನಿಶ್ಚಿತ ದರಕ್ಕೆ ಮಿಕ್ಕಿ ಉದ್ಯಾವರ ಕಡವಿನ ಬಾಬ್ತು ಯಾರಿಂದಲೂ ಎಂದೂ ಹಣ ವಸೂಲು ಮಾಡಿದಿಲ್ಲ, ಎಂದು ಉದ್ಯಾವರ ಕಡವು ಕಂಟ್ರಾಕ್ಟರು ಬರೆಯುತ್ತಾರೆ.

ಮುಲ್ಕಿ— ಅಮೇರಿಕದ ಕೆಥೊಲಿಕ್ ಸಂಘದಿಂದ ಬಂದ ಹಾಲಿನ ಹುಡಿಯನ್ನು ಮುಲ್ಕಿಗೆ ಬಂದುದರಲ್ಲಿ, ಕೋ-ಓಪರೇಟಿವ್ ಸ್ಟೋರ್ಸಿನವರು ಸುಮಾರು 450 ಮನೆಗಳಿಗೆ ಜಾತಿಮತ ಭೇದವಿಲ್ಲದೆ ಧರ್ಮಾರ್ಥ ಕೊಟ್ಟಿರುವರು. ತಾ. 13—11—1953ರಿಂದ ಕಾರ್ನಾಡಿನ ಬಿ. ಇ. ಯಂ ಶಾಲಾ ಮಕ್ಕಳಿಗೆ ಹಾಲು ತಯಾರಿಸಿ ಹಂಚಲಾಯ್ತು. ಇದೇ ರೀತಿ 7 ದಿವಸಗಳ ವರೆಗೆ ಕೊಡಲಾಗುವುದು. ಹೀಗೆ ಚಿತ್ರಾಪು, ಕೆಕ್ಕ ಮತ್ತು ಮುಲ್ಕಿ [illegible] ಶಾಲೆಗಳಿಗಲ್ಲದೆ ಮುಲ್ಕಿ ಗವರ್ನ್‌ಮೆಂಟ್ ಹ್ಯಾಸ್ಕೂಲಿನ ಸೋಶಿಯಲ್ ಸರ್ವಿಸ್ ಲೀಗ್‌ನವರಿಗೂ ಕೊಡಲಾಗುವುದು.

ಮುಲ್ಕಿ ಮತ್ತು ಪರಿಸರದ ಗ್ರಾಮಗಳಿಂದ 30 ಮಂದಿ ಗ್ರಾಮಸ್ಥರು ತಾ. 20-11-53ರಲ್ಲು ಕೈಲಾ ಪಶು ಕೇಂದ್ರವನ್ನು ಸಂದರ್ಶಿಸಿದರು. ರೂರಲ್ ವೆಲ್‌ಫೇರ್ ಆಫೀಸರರಾದ ಶ್ರೀ. ಕೆ. ಎಂ. ಬಾಬು ಶೆಟ್ಟಿ ಜತೆಯಲ್ಲಿ ಬಂದಿದ್ದರು. ಜಿಲ್ಲಾ ಕಲೆಕ್ಟರವರು ಪ್ರಯಾಣದ ಖರ್ಚಿನ ಬಗ್ಗೆ ರೂ 100/-ರ ಧನ ಸಹಾಯವಿತ್ತಿದ್ದರು. ಕೈಲಾ ಪಶು ಕೇಂದ್ರದ ಸುಪರಿಂಟೆಂಡೆಂಟ್ ಶ್ರೀ. ಬೆಂಜಮಿನ್‌ರವರು ಗ್ರಾಮಸ್ಥರಿಗೆ ಕ್ಷೇತ್ರವನ್ನು ತೋರಿಸಿ ಹುಲ್ಲಿನ, ಸೈಲೇಜ್ ಕ್ರಮದಿಂದ ಹಸುರು ಹುಲ್ಲನ್ನು ದಾಸ್ತಾನು ಮಾಡುವುದು. ಕೋಳಿ ಸಾಕಣಿಕೆ, ಒಳ್ಳೆ ಜಾನುವಾರುಗಳ ಲಕ್ಷಣ, ಹಾಲು ಹೆಚ್ಚಿಸುವರೇ ಕ್ರಮ ಪ್ರಕಾರದ ಆಹಾರದ ಅಗತ್ಯ ಒಳ್ಳೇ ಬೀಜದ ಹೋರಿಯ ಅಗತ್ಯ ಮತ್ತು ದನ ಯಾ ಎಮ್ಮೆಗಳಿಗೆ ಕೃತಕ ರೀತಿಯಲ್ಲಿ ಗರ್ಭಧಾರಣೆಗಳ ಕುರಿತು ಗ್ರಾಮಸ್ಥರಿಗೆ ಮನದಟ್ಟಾಗುವ ರೀತಿಯಲ್ಲಿ ವಿವರಿಸಿದರು. ಹೋದ ಗ್ರಾಮಸ್ಥರು ಹೀಗೆ ಸಂದರ್ಶಿಸಿದುದರಿಂದ ತುಂಬಾ ಪ್ರಯೋಜನ ಸಿಕ್ಕಿದುದೆಂದು ಅಭಿಪ್ರಾಯಪಟ್ಟಿರುವರು. ಬಪ್ಪನಾಡಿನವರೂ ಕಡಯೂ ಮೆ ಪಟೇಲರಾದ ಶ್ರೀ ಜಗನ್ನಾಥ ಶೆಟ್ಟಿಯವರು ಊಟದ ಏರ್ಪಾಟು ಮಾಡಿದ್ದರು.

ದಿ ಕಥೋಲಿಕ್ ಬ್ಯಾಂಕ್ ಲಿಮಿಟೆಡ್ ಕುಂದಾಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು, ನಮ್ಮ ಬ್ಯಾಂಕಿನಲ್ಲಿ ಚಿನ್ನದ ನಗಗಳ ಅಡವಿನ ಮೇಲೆ ಪಡೆದ ಸಾಲವನ್ನು ಕ್ಲಪ್ತ ವ್ಯಾದೆಗೆ ಪಾವತಿ ಮಾಡದೆ ಬಾಕಿ ಮಾಡಿಕೊಂಡಿರುವುದರಿಂದ, ಸದ್ರಿಯವರ ನಗಗಳನ್ನು ಇದೇ ದಶಂಬ್ರ ತಿಂಗಳ ತಾರೀಕು 2ನೇ ಬುಧವಾರ ಮಧ್ಯಾಹ್ನ ಗಂಟೆ 2ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೇಲಂ ಮಾಡಲಾಗುವುದು.

ಸಾಲದ ನಂಬ್ರ ಮತ್ತು ಸಾಲ ಪಡೆದ ತಾರೀಕು.	ಅಡವಿಟ್ಟವರ ಹೆಸರು ಮತ್ತು ವಿಳಾಸ	ತಾ. 30-9-53ರ ತನಕ ಬಡ್ಡಿ ಕೂಡಿ ಸಾಲದಲ್ಲಿ ಬಾಕಿಯಿರುವ ಮೊಬಲಗು.
27/714 3-8-'51.	ಕೆ. ರಾಮಕೃಷ್ಣ, ತಿಮ್ಮಪ್ಪ ಸೇರೆಗಾರ್‍ರ ಮಗ, ರೂ. ಆ. ಪೈ. ಡಿಸ್ಟ್ರಿಕ್ಟ್ ಕ್ಲಾರ್ಕ್ ತಾಲೂಕ್ ಆಫೀಸು ಕುಂದಾಪುರ.	80 0 0
27/804 22-8-'51.	ಮಸೂರ್ ಬಾವಿ, ಸುಬ್ಬು ಬಾವಿ ಮಗ, ಸಾವಿರಕೇರಿ, ಕುಂದಾಪುರ.	13 12 0
27/865 4-9-51.	ಸಂಜೀವ ಶೆಟ್ಟಿ, ಮಾಲಿಂಗ ಶೆಟ್ರ ಮೊಮ್ಮಗ ಬೆಳ್ವಾಲ ಗ್ರಾಮ, ಶಂಕರನಾರಾಯಣ, P. O.	40 1 0
27/987 26-9-51.	ಮತ್ತೇಸ್ ಸೋಜ, ಜೂಜಿ ಸೋಜ ಮಗ, ಚಿಕ್ಕನ ಸಾಲುಕಳು, ಕುಂದಾಪುರ.	16 14 0
27/1049 13-10-51.	M. ರತ್ನಾಕರ ರಾವ್, ಟೀಚರ್, ನಾಗಳ್ಳಿ.	[illegible]
27/1223 30-10-51.	H. ಮಹಾಬಲ ಶೆಟ್ಟಿ, ಸುಬ್ಬಣ್ಣ ಶೆಟ್ರ ಅಳಿಯ ಕಂಟ್ರಾಕ್ಟರ್, ಹಾಲಾಡಿ, ಹಾಲಾಡಿ P. O.	837 11 0
28/178 16-2-'52.	B. ಹಸನ್ ಸಾಹೇಬ್, ಅಬ್ದುಲ್ ರೈಮನ್ ಸಾಹೇಬರ ಮಗ, ಕ್ಲೋತ್ ಮರ್ಚಂಟ್ ಕಂಡ್ಲೂರು.	26 6 0
28/265 5-3-'52	ಶ್ರೀಧರ ಸೇಟ್, ವಾಮನ್ ಸೇಟ್ರ ಮಗ ಹಾಟ್ ರಿಕೇರಿ, ಕುಂದಾಪುರ.	29 5 0
28/331 29-3-'52	ನಾಗ್ಯ ಶೆಟ್ಟಿ, ಮಂಜ್ಯಶೆಟ್ರ ಅಳಿಯ, ಹಳನಾಡು, ಮುಡಿಕೊಡು, ಕ್ರೋಡಾಡಿ P. O.	36 8 0
28/431 26-4-'52	ಜೆಟ್ಟಿ ಹಸನ್ ಸಾಹೇಬ್, ಅಬ್ದುಲ್ ರೆಹ್ಮಾನ್ ಸಾಹೇಬರ ಮಗ, ಕ್ಲೋತ ಮರ್ಚಂಟ್, ಕಂಡ್ಲೂರು.	41 15 0
28/445 29-4-'52	ಮಂಜ್ಯ ಶೆಟ್ಟಿ, ಪರಂಣ ಶೆಟ್ರ ಅಳಿಯ, ಕೆರಾಡಿ ಗ್ರಾಮ, ಹಾಲಾಡಿ ಮನೆ, ಕೊಲ್ಲೂರು P. O.	24 10 0
28/552 22-5-'52	ನಾರಾಯಣ- ಶೇರಿ ಮಗ, ಬಿಜಾಡಿ ಗ್ರಾಮ, ಕೋಟೇಶ್ವರ.	58 10 0
28/630 7-6-'52	ಚಂದ್ರಶೇಖರ ಹೆಗ್ಡೆ, ಗೋಪಾಲ ಹೆಗ್ಡೆರ ಅಳಿಯ, ಮೂಡುಬೈಲೂರು, ಚಕ್ರನಾಡ್ಯಾಣ.	18 12 0
29/82 1-2-'52	ಶೀನಪ್ಪ ಶೆಟ್ಟಿ, ಸುಬ್ಬಯ್ಯ ಶೆಟ್ರ ಅಳಿಯ, ದೇನಾಪುರ ಗ್ರಾಮ, ಗುಡ್ಡೆ ಅಂಗಡಿ, ಕುಂದಾಪುರ.	49 4 0
28/1215 30-10-'52	ಬ್ಯಾಬಾ ಸದ್ದಾರ್ ಸಾಹೇಬ, ಜಮಾಲುದ್ದಿನ್ ಸಾಹೇಬ್ರ ಮಗ, ಬೀಡಿ ವ್ಯಾಪಾರಿ ಕುಂದಾಪುರ.	31 3 0

Office of the Catholic Bank, Ltd.
Coondapoor 21—11—1953.

I. MENEZES.
Agent.

ಭಾರತದ ಪೂರ್ವಗಡಿ ವಲಯದ ಕಾಡು ಜನಾಂಗ

(೨ನೇ ಪುಟದಿಂದ)

ಣ್ಯದಲ್ಲಿ ಗಿಡಮೂಲಿಕೆಗಳ ಕೆಲವು ಜಾತಿಗಳೇ ಈ ವಿಷವನ್ನು ಒದಗಿಸಿ ಕೊಡುತ್ತವೆ. ಅಬೋರರು ಖಡ್ಗವನ್ನು ಝಳಪಿಸುವುದರಲ್ಲೂ ಗಟ್ಟಿಗರು ಈ ಖಡ್ಗ ಎರಡೂ ಕಾಲು ಅಡಿಯಷ್ಟು ಉದ್ದವಿದೆ ಅದರ ಒಂದು ಅಲಗು ಹರಿತವಾಗಿದೆ; ತುದಿ ಮೊಂಡಾಗಿದೆ. ಮರದ ಹಿಡಿತದಲ್ಲಿ ಸುಂದರವಾದ ಕೆತ್ತನೆ ಕೆಲಸವನ್ನು ಕಾಣುತ್ತೇವೆ. ದಿಹಾಂಗ ಕಣಿವೆಯ ಕೆಲವು ಹಳ್ಳಿಗಳು ಈ ಖಡ್ಗವನ್ನು ತಯಾರಿಸುವುದಕ್ಕೆ ತುಂಬ ಪ್ರಸಿದ್ಧಹೊಂದಿವೆ. ಖಡ್ಗದ ಪೆಟ್ಟಿನಿಂದ ಉಳಿಸಿಕೊಳ್ಳಲು ತಲೆಗೆ ಬಲವಾದ ಬೆತ್ತದ ಟೋಪಿಯನ್ನು ಧರಿಸುವುದು ವಾಡಿಕೆ ಅದಲ್ಲದೆ ಆಯುಧಾಕಾರದ ಗುರಾಣಿಗಳೂ ಕಬ್ಬಿಣದ ಮೊನೆಯುಳ್ಳ ಉದ್ದವಾದ ಈಟಿಗಳೂ ಅಬೋರರ ಆಯುಧಗಳಾಗುತ್ತವೆ. ಈಚೆಗೆ ಕೋವಿಯ ಉಪಯೋಗಕ್ಕೂ ಅವರ ಮನಸ್ಸು ಹೋಗಿದೆ.

ಕಾರ್ಮಿಕ ಕೌಶಲ

ಅಬೋರರನ್ನು ಯುದ್ಧಪ್ರಿಯರೆಂದು ಹೇಳಿದ ಮಾತ್ರಕ್ಕೆ ಅವರಿಗೆ ಬೇರಾವುದರಲ್ಲೂ ಆಸಕ್ತಿಯಿಲ್ಲವೆಂದು ಹೇಳಲಾಗದು. ಅವರು ಚೆನ್ನಾಗಿ ಕೆಲಸವನ್ನೂ ಮಾಡಬಲ್ಲರು. ಈಶಾನ್ಯ ಗಡಿವಲಯದಲ್ಲಿ ಅವರು ಇದ್ದುಕೊಂದು ಟಿಬೇಟಿನೊಡನೆ ವ್ಯಾಪಾರ ಮತ್ತು ಅಲ್ಪಸ್ವಲ್ಪ ಕೃಷಿಯಲ್ಲಿ ಕೈಹಾಕಿ ನಾಗರಿಕ ಜೀವನ ನಡೆಸುವುದನ್ನು ನಾವು ಕಾಣಬಹುದು. ಆದರೂ ಇವರ ಹೆಚ್ಚು ದೂರ ಪ್ರಯಾಣ ಮಾಡುವ ಜನಗಳಲ್ಲ ತಿರುಗಾಡುವುದು ಇರಲಿ, ನೆರೆಯ ಹಳ್ಳಿಗೆ ಹೋಗುವುದೊಂದರೂ ಅಬೋರರಿಗೆ ಒಗ್ಗುವುದಿಲ್ಲ. ಆದರಲ್ಲಿ ಪಾಸಿ ಅಬೋರರು ಸ್ವಲ್ಪವಾದರೂ ವಾಸಿ. ಅಸಾಮಿನ ಕಣಿವೆಯೊಳಕ್ಕೆ ಅವರು ವ್ಯಾಪಾರೋದ್ದೇಶದಿಂದ ಆಗಾಗ್ಗೆ ಬಂದು ಹೋಗುತ್ತಾರೆ. ಹೊರಗಿನ ಜನರನ್ನು ಸ್ವಾಗತಿಸುವ ಇಚ್ಛೆಯೂ ಅಬೋರರಿಗೆ ಇಲ್ಲ—ಹೊರಗಿನಿಂದ ಬಂದವರು ರೋಗಗಳ ಭೂತವನ್ನು ತರುವರೆಂಬ ನಂಬಿಕೆಯೇ ಈ ಅನಾಸ್ಥೆಯ ಮೂಲ. ತಮ್ಮಷ್ಟಕ್ಕೆ ತಾವಿದ್ದುಕೊಂಡು ಕೆಲಸಮಾಡುವುದೇ ಇವರ ಅಪೇಕ್ಷೆ ಅಂಥದರಲ್ಲೂ ಘನವಾದ ಅರಣ್ಯವನ್ನು ಭೇದಿಸಿಕೊಂಡು ವೇಗದಿಂದ ಪ್ರವಹಿಸುವ ನದಿಗಳನ್ನು ಅವರು ದಾಟುವ ಪ್ರಮೇಯ ಬರುತ್ತದೆ. ಅವುಗಳನ್ನು ದಾಟುವುದಕೋಸ್ಕರ ಕುಶಲರಾದ ಅಬೋರರು ಬೆತ್ತದ ಸೇತುವೆಗಳನ್ನು ರಚಿಸಿರುವರು. ದಿಹಾಂಗ ಹಾಗೂ ಅದರ ಅನೇಕ ಉಪ ನದಿಗಳಿಗೆ ಅವು ಇಕ್ಕಟ್ಟಾಗಿ ಹರಿಯುವ ಸ್ಥಾನ ನೋಡಿ ಈ ಸೇತುವೆಗಳ ನಿರ್ಮಾಣವಾಗಿದೆ - ಸೇತುವೆಯಿಂದ ಯಾರು ಯಾರಿಗೆ ಪ್ರಯೋಜನವಾಗುತ್ತದೆಯೋ ಅವರೆಲ್ಲ ಒಟ್ಟಾಗಿ ಸೇರಿ ಅದನ್ನು ನಿರ್ಮಿಸುವುದು ಕ್ರಮ. ಈ ಸೇತುವೆ ಕೆಲವು ಸಂದರ್ಭಗಳಲ್ಲಿ ೮೦೦ ಅಡಿ ಮತ್ತು ಆಗಲವಿದೆ. ಹತ್ತು ವರ್ಷಗಳ ಮೇಲೆ ಹಳೆಯ ಸೇತುವೆಯ ಬದಲು ಹೊಸ ಸೇತುವೆಯಾಗುತ್ತದೆ. ಈ ನಡುವೆ ಹಳ್ಳಿಗಳಲ್ಲಿ ಯುದ್ಧದ ಕೋಲಾಹಲ ನಡೆದರೂ ಸೇತುವೆ ಉರುಳಿಸುವುದಿಲ್ಲ. ಹೆಚ್ಚೆಂದರೆ ಆ ಸೇತುವೆಯ ನಡುವಿಗೊಂದು ಹಗ್ಗ ಬಿಗಿದು ಜೋರಾಗಿ ಅಲುಗಾಡಿಸುತ್ತಾ ಇಡಿಯ ಹಳ್ಳಿಯ ಜನರು ದಾಳಿ ಇಡದಂತೆ ನೋಡಲಾಗುವುದು. ಅಬೋರ ಹೆಂಗಸರು ನೇಯಿಗೆ ಕೆಲಸದಲ್ಲಿ ನಿಷ್ಣಾತರಾಗಿದ್ದು—ಅಂದ ಚಂದದ ಬಣ್ಣ ಬಣ್ಣದ ವಸ್ತ್ರಗಳನ್ನು ಆಕರ್ಷಕವಾಗಿ ತಯಾರಿಸುವರು. ಅಬೋರ ಹಳ್ಳಿಯನ್ನು ನೋಡುವಾಗ—ಅದು ರಮ್ಯವಾಗಿ ಕಂಗೊಳಿಸುತ್ತದೆ. ಬಿದಿರನ್ನೊಂದಕ್ಕೊಂದು ಜೋಡಿಸಿ ನಳವಾಗಿ ಮಾಡಿ ದೂರದ ತೊರೆಯಿಂದ ಊರಿಗೆ ನೀರೊದಗಿಸುವಷ್ಟು ಇವರ ನಾಗರಿಕತೆ ಮುಂದರಿದಿರುತ್ತದೆ. ಆದರೂ ಏಕೋ ಏನೋ—ಆಗೊಮ್ಮೆ ಈಗೊಮ್ಮೆ ಭಾರತದ ಈಶಾನ್ಯ ಗಡಿಯಲ್ಲಿ ಇವರು ಕಿರುಕುಳ ಕೊಡುವರು. ಮೊನ್ನೆ ಮೊನ್ನೆ ಈ ಕಾಡು ಜನಾಂಗಗಳಿಗೆ ಉಪ್ಪು ಇತ್ಯಾದಿ ಜೀವನೋಪಯೋಗಿ ವಸ್ತುಗಳನ್ನು ಕೊಡುವುದಕ್ಕೆಂದು ಹೋದ ಭಾರತ ಸರಕಾರದ ಅಧಿಕಾರಿಗಳ ಗುಂಪಿಗೆಗುಂಪನ್ನೆ ನಾಶಗೊಳಿಸುವ ದಾಷ್ಟ್ಯವನ್ನು ಈ ಕಾಡು ಜನಾಂಗದವರು ತೋರಿಸಿದರು. ಅವರನ್ನು ಮಣಿಸುವುದಕ್ಕೆ ಸರಕಾರ ತಕ್ಕ ಯೋಜನೆ ಕೈಕೊಂಡಿದೆ. ಅದರ ಜೊತೆಗೆ ಹಿಂಸೆಯ ನೀತಿಯನ್ನು ಬಿಟ್ಟುಕೊಟ್ಟು ಶಾಂತಿ ಪ್ರಿಯ ನಾಗರಿಕರಾಗುವಂತೆ ಶಿಕ್ಷಣವನ್ನು ಈ ಜನಾಂಗಕ್ಕೆ ಕೂಡಿಸುವುದು ಅಗತ್ಯ. ಶ್ರೀ ರಾಮಕೃಷ್ಣ ಮಿಶನಿನಂಥ ಸಂಸ್ಥೆಗಳನ್ನು ಈ ಕೆಲಸಕ್ಕೆ ಪ್ರೋತ್ಸಾಹಿಸಿದರೆ ಆದೀತೆಂದು ತೋರುತ್ತದೆ.

(೪ನೇ ಪುಟದಿಂದ)

ಣಮಿಸಿದ ಕಳೆದ ಶತಮಾನದಲ್ಲಿ ಹೊಟ್ಟೆಗೆ ಸ್ವಲ್ಪ ಹಿಟ್ಟು ದೊರೆತರೆ ಸಾಕು, ಎಲ್ಲಿಗೆಂದರೆ ಅಲ್ಲಿ ಹೋಗಲು ಭಾರತೀಯರು ಮುಂದಾದರು. ಸಿಂಹಳ, ಮಲಯ, ದಕ್ಷಿಣ ಹಾಗೂ ಪೂರ್ವ ಆಫ್ರಿಕಾಗಳಂತೆ ಬ್ರಿಟಿಷ ಗಿಯಾನವೂ ಅವರನ್ನು ಕೂಲಿಗಳಾಗಿ ಬರಮಾಡಿಕೊಂಡಿತು. ೧೯೩೮ರಲ್ಲಿ ೪೧೧ ಭಾರತೀಯ ಕೂಲಿಕಾರರು ಮೊದಲಿಗೆ ಕಲ್ಕತ್ತೆಯಿಂದ ಬ್ರಿಟಿಷ ಗಿಯಾನಕ್ಕೆ ಹೊರಟರು. ಹಡಗದಲ್ಲಿ ಅವರು ರೋಗಪೀಡಿತರಾಗಿ ಕಷ್ಟಪಟ್ಟರು. ೧೮ ಮಂದಿ ಮೃತ್ಯುವನ್ನಪ್ಪಿದರು. ೫ ವರ್ಷಕಾಲ ದುಡಿಯುವ ಕರಾರಿನ ಮೇಲೆ ಅವರು ಪ್ರಯಾಣ ಕೈಕೊಂಡಿದ್ದರು. ಅವರಿಗೆ ಸುಳ್ಳು ಸೊಟ್ಟ ಹೇಳಿ ಪಾತಾಳ ಲೋಕದ ಆಕರ್ಷಣೆಯನ್ನು ಹುಟ್ಟಿಸಿದ್ದರು—ಆದರೆ ಅಲ್ಲಿ ದೊರೆತ ಸಂಬಳ ಹಾಗೂ ತಮ್ಮನ್ನು ನಡೆಸಿಕೊಂಡ ಅಮಾನುಷ ರೀತಿ ನೀತಿಗಳಿಂದ ಭಾರತೀಯರು ನೊಂದರು. ತೋಟಗಳ ಒಡೆಯರು ಕರಾರಿನಂತೆ ಐದು ವರ್ಷಗಳ ಬಳಿಕ ಭಾರತಕ್ಕೆ ಇವರನ್ನು ಮರಳಿಸದಿರಲು, ವಲಸೆ ಬಂದವರು ಇಲ್ಲಿಯೇ ಅನಿವಾರ್ಯವಾಗಿ ಉಳಿದುಕೊಂಡರು. ಗೊಂಡಾರಣ್ಯಗಳನ್ನು ಕಡಿದು, ಅಲ್ಲಿ ಕೃಷಿ ಮಾಡಿದರು. ಭತ್ತದ ಪೈರನ್ನು ಬೆಳೆಸಿದರು ಕ್ರಮೇಣ ಭಾರತೀಯರು ಕೃಷಿಯಲ್ಲಿ ಉನ್ನತಿ ಹೊಂದಿದರು. ಕೆಲವರು ಕೋಟ್ಯಾಧೀಶರೂ ಹಲವು ಶ್ರೀಮಂತರೂ ಇವರಲ್ಲಿ ಕಾಣಿಸಿಕೊಂಡರು. ಹಾಗೆಂದು ಈಗಲೂ ಪ್ರತಿಶತ ೭೦ ಭಾರತೀಯರ ಸ್ಥಿತಿ ಶೋಚನೀಯವಿದೆ. ಇವರ ಮಾಸಿಕ ಉತ್ಪನ್ನ ೪೦ ರೂಪಾಯಿಗಳನ್ನು ಮೀರುವುದಿಲ್ಲ. ಭಾರತೀಯ ವಂಶಸ್ಥರಾಗಿದ್ದರೂ ಇವರ ರೀತಿ ನೀತಿಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಒಡೆದು ಕಾಣುತ್ತದೆ. ಜಾನ, ಪೀಟರ ಮುಂತಾದ ಹೆಸರುಗಳು ಹೆಚ್ಚುತ್ತಿವೆಯಲ್ಲದೆ, ವೇಷಭೂಷಣಗಳೂ ಪಾಶ್ಚಾತ್ಯ ಮಾದರಿಯಲ್ಲಿವೆ. ಭಾರತೀಯ ಸಂಪ್ರದಾಯಗಳು ಇಲ್ಲಿ ಮೂಲಕ್ಕೆ ವಿರೋಧವೆನಿಸುವಷ್ಟು ಪರಿವರ್ತನೆ ಹೊಂದಿದೆ ಸಾಮಾಜಿಕ ಜೀವನದಲ್ಲಿ ಇವರು ಆಫ್ರೀಕನರೊಂದಿಗೆ ಕೂಡಿ ನಡೆದುಕೊಳ್ಳುತ್ತಾರೆ. ಈಚೆಗೆ ರಾಜಕೀಯ ಸುಧಾರಣೆಗಳಿಂದಾಗಿ ಹಿಂದಿನ ಕೂಲಿಗಳ ಮೊಮ್ಮಕ್ಕಳು ಗವರ್ನರರ ಕಾರ್ಯಕಾರಿ ಮಂಡಳದ ಸದಸ್ಯ ಸ್ಥಾನವನ್ನೂ ಏರುವಂತಾಯಿತು-ಆದರೇನು? ಈಗ ಉಂಟಾದ ರಾಜಕೀಯ ಬಿಕ್ಕಟ್ಟು ಪ್ರಶ್ನಾರ್ಹ ಪರಿಸ್ಥಿತಿಯನ್ನೇ ನಿರ್ಮಿಸಿದೆ.

WANTED

A travelling Agent for South Kanara District on a monthly salary of Rs. 100 - plus a commission of 10%. Security of Rs. 100 - essential For further details please apply to:

M. A. PREMDAS,
Camp: Royal Mahal Udipi.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಖಾತ್ರಿ ಚಿನ್ನದ ನೆಕ್‌ಲೇಸ್. ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.



ಪುಸ್ತಕ—ವಿಮರ್ಶೆ

ಕನ್ನಡ ನುಡಿ ಬೋಧನೆ ಲೇಖಕರು ಶ್ರೀ ಬಿ ವಿ ರಮಣ, ಎಂ ಎ , ಎಲ್. ಟಿ ಕನ್ನಡ ಶಿಕ್ಷಕರು ಬಿ ಟಿ ಕಾಲೇಜ್, ಮಂಗಳೂರು ಪ್ರಕಾಶಕರು ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ರಥಬೀದಿ, ಮಂಗಳೂರು ಡೆಮ್ಮಿ ೧/೮ ಆಕಾರದ 328 + 6 ಪುಟಗಳು ಬೆಲೆ ಮೂರು ರೂಪಾಯಿ

ಮದರಾಸು ಸರಕಾರವು ಸೆಕೆಂಡರಿ ಪುತ್ತು ಪಂತ್ರ ತರಬೇತಿ ಶಾಲೆಗಳಿಗಾಗಿಯೂ, ಯೂನಿವರ್ಸಿಟಿಯ ಬಿ ಟಿ ಕಾಲೇಜುಗಳಿಗಾಗಿಯೂ ತಯಾರಿಸಿದ ನೂತನ ಪಟ್ಟಿಯನ್ನು ಅನುಸರಿಸಿ ಕನ್ನಡ ಭಾಷೆಯನ್ನು ಕಲಿಸುವ ಉಪಾಧ್ಯಾಯರ ಉಪಯೋಗಾರ್ಥವಾಗಿ ಈ ಪುಸ್ತಕವನ್ನು ಲೇಖಕರು ಬರೆದಿರುತ್ತಾರೆ ಲೇಖಕರಾದ ಶ್ರೀ ಬಿ ರಮಣರು ಹಲವು ವರ್ಷಗಳಿಂದ ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡಿಯೂ, ಉಪಾಧ್ಯಾಯರಿಗೆ ತರಬೇತಿ ಶಿಕ್ಷಣ ಕೊಡುವ ಅಧ್ಯಾಪಕರಾಗಿಯೂ ವಿಪುಲ ಅನುಭವ ಹೊಂದಿರುವುದರ ಒತ್ತಿಗೆ ಕನ್ನಡ ಸಾಹಿತ್ಯದಲ್ಲಿಯೂ ಆಳವಾದ ಜ್ಞಾನವನ್ನು ಪಡೆದವರಾಗಿದ್ದು ಇಂತಹ ಉಪಯುಕ್ತವಾದ ಪುಸ್ತಕವೊಂದನ್ನು ಅಧಿಕಾರಯುತರಾಗಿ ಬರೆಯಲು ಸಮರ್ಥರೆಂದು ಇರುವರೆಂದ ಮೇಲೆ ಪುಸ್ತಕದ ಯೋಗ್ಯತೆಯ ಕುರಿತು ವಿಶೇಷ ಹೇಳಬೇಕಾದ ಅವಶ್ಯಕತೆಯೇ ಇರುವುದಿಲ್ಲ ಕನ್ನಡ ಭಾಷೆಯಲ್ಲಿ ಇದುವರೆಗೆ ಇಂತಹ ವಿಷಯದ ಕುರಿತು ಬರೆದ ಯೋಗ್ಯ ಪುಸ್ತಕವೊಂದು ಇಲ್ಲದೆ ಇದ್ದು, ಈ ಕೊರತೆಯನ್ನು ಇಂದಿನ ಪುಸ್ತಕವು ಹೋಗಲಾಡಿಸಿದೆಯೆಂದು ಧೈರ್ಯವಾಗಿ ನಾವು ಹೇಳಬಹುದು

ಈ ಪುಸ್ತಕದಲ್ಲಿ ಕನ್ನಡ ಭಾಷೆಯನ್ನು ಕಲಿಸುವ ಬೇರೆ ಬೇರೆ ವಿಧಾನಗಳ ಕುರಿತು 68 ಪ್ರಕರಣಗಳನ್ನು ಕೊಡಲಾಗಿದೆ ಶಾಲೆಯಲ್ಲಿ ಬರುವ ಪುಸ್ತಕ, ಅದರ ಬೆಳವಣಿಗೆಯ ವಿಷಯ, ಪಠ್ಯ ಪುಸ್ತಕಗಳ ಆಯ್ಕೆ, ಬಾಯ್ದೆರೆ ಓದು, ಮೌನ ಓದು, ಶಬ್ದ ಭಂಡಾರ ಗಳಿಸುವ ವಿಧಗಳು, ಗದ್ಯ ಪದ್ಯ ಬೋಧನೆ, ಸಣ್ಣ ಕತೆ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ಜನಪದ ಸಾಹಿತ್ಯ, ಹಾಸ್ಯ ಸಾಹಿತ್ಯ, ನಟನ ಸಾಹಿತ್ಯಗಳ ಶಿಕ್ಷಣ, ವ್ಯಾಕರಣ ಬೋಧನೆ, ಸಂಕ್ಷೇಪೀಕರಣ, ಪರೀಕ್ಷೆಗಳು, ಪರೀಕ್ಷೆಯ ವಿಧಾನ ಮೊದಲಾಗಿ ಉಪಾಧ್ಯಾಯರಿಗೆ ಉಪಯುಕ್ತ ರೀತಿಯಿಂದ ವಿಷಯಗಳನ್ನು ವಿಭಾಗಿಸಲಾಗಿದೆ ಪ್ರಾದೇಶಿಕ ಭಾಷೆಯಿಂದ ತೊಡಗಿ ಹೈಸ್ಕೂಲುವರೆಗಿನ ಕನ್ನಡ ಶಿಕ್ಷಣ ಕ್ರಮವು ಇದರಲ್ಲಿ ಅಡಕವಾಗಿದ್ದು ಈ ಗ್ರಂಥವು ಸೆಕೆಂಡರಿ ಗ್ರೇಡ್, ಸೆಕೆಂಡರಿ ಗ್ರೇಡ್, ಪಂಡಿತ ತರಬೇತಿ ಹಾಗೂ ಬಿ ಟಿ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ

ಇಂಗ್ಲೀಷು, ಗಣಿತ, ಚರಿತ್ರೆ, ಭೂಗೋಳ, ವಿಜ್ಞಾನ ಮೊದಲಾದ ವಿಷಯಗಳಲ್ಲಿ ಬೋಧನೆಯ ರೀತಿಯನ್ನು ಉಪಾಧ್ಯಾಯರು ಸಮರ್ಪಕವಾದ ರೀತಿಯನ್ನು ಅನುಸರಿಸುತ್ತಿರಲು, ಕನ್ನಡ ಭಾಷೆಯನ್ನು ಕಲಿಸುವ ಅಧ್ಯಾಪಕರು ಮಾತ್ರ, ಇಂದು ಕನ್ನಡ ಭಾಷೆ ವಿಶೇಷ ಮಹತ್ವ ಬಂದಿರುವಾಗಲಾದರೂ ಹಿಂದಿನ ರೀತಿಯಲ್ಲಿ ಕಲಿಸುತ್ತಿರುವುದೂ, ಅದು ಸರಿಯಾದ ರೀತಿಯಾಗಿಲ್ಲವೆಂದು ಟೀಕೆಗೆ ಒಳಗಾಗುತ್ತಿರುವುದು ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರಿಗೂ ಕಂಡು ಬರುತ್ತದೆ ಇದುವರೆಗೆ ಕನ್ನಡ ಕಲಿಸುವಿಕೆಗೆ ತರಬೇತಿಯೂ, ತರಬೇತಿಯ ವಿಧಾನದ ರೀತಿ ನೀತಿ ತಿಳಿಸುವ ಪುಸ್ತಕಗಳೂ ಇಲ್ಲದೆ ಇದ್ದುದೇ ಇದಕ್ಕೆ ಕಾರಣವಾಗಿದ್ದು, ಇಂದು ಸರಕಾರವು ತರಬೇತಿಯನ್ನು ಕಡ್ಡಾಯ ಮಾಡಿರುವಾಗ ಸರಕಾರದ ಪಟ್ಟಿಯಂತೆ ಪುಸ್ತಕವನ್ನು ಬರೆದು ಕೊಡುವ ಸಂದರ್ಭದಲ್ಲಿ ಶ್ರೀ ಬಿ ವಿ ರಮಣರು ವಹಿಸಿ ಬಹು ಶ್ರಮದಿಂದ ಈ ಪುಸ್ತಕ ಬರೆದಿದ್ದು, ಮಂಗಳೂರು ಟ್ರೇಡಿಂಗ್ ಎಸೋಸಿಯೇಶನವರು ಇಂತಹ ಗ್ರಂಥವನ್ನು ಪ್ರಕಟಿಸಲು ಮುಂದಾದುದು ಅಭಿನಂದನೀಯವಾಗಿದೆ ಲೇಖಕರ ಹಾಗೂ ಪ್ರಕಾಶಕರ ಈ ಉಪಯುಕ್ತ ಸಾಹಸ ಕಾರ್ಯವನ್ನು ಕನ್ನಡಿಗರು ಮೆಚ್ಚಿ ಅವರಿಗೆ ಸಕ್ರಿಯ ಪ್ರೋತ್ಸಾಹ ಕೊಟ್ಟಲ್ಲಿ ಮುಂದೆ ಇಂತಹ ಗ್ರಂಥಗಳು ಪ್ರಕಟವಾಗಿ ಕನ್ನಡ ಸಾಹಿತ್ಯ ಭಂಡಾರದ ಬೆಳವಣಿಗೆಗೆ ವಿಶೇಷ ನೆರವಾಗುವುದು

ಈ ಸಂದರ್ಭದಲ್ಲಿ ಈ ಗ್ರಂಥವನ್ನು ಅಚ್ಚುಕಟ್ಟಾಗಿ ಸುಂದರವಾಗಿ ಹಾಗೂ ಅಲ್ಪ ಬೆಲೆಯಲ್ಲಿ ಸ್ವಚ್ಛವಾಗಿ ಅಚ್ಚು ಮಾಡಿ ಪ್ರಕಟಿಸಿದ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನವರು ಅಭಿನಂದನೆಗೆ ಪಾತ್ರರಾಗಿದ್ದಾರೆ ಇಂತಹ ಪುಸ್ತಕಕ್ಕೆ ಕನ್ನಡಿಗರು ಪ್ರೋತ್ಸಾಹ ಕೊಡುವುದು ಜವಾಬ್ದಾರಿ ಎಂದು ನಾವು ವಿಶೇಷವಾಗಿ ಹೇಳಬೇಕು —ಕಯ್ಯಾರ

ಯುಗ ಪ್ರವರ್ತಕರು-ಆಚಾರ್ಯ ವಿನೋಬಾ ಭಾವೆ

[ಲೇಖಕ, ಉ ಮೋಹನ್ ದಾಸ್, ಉಡುಪಿ]

ಆಚಾರ್ಯ ವಿನೋಬಾ ಭಾವೆಯವರಿಂದು ಒಂದು ದೀಕ್ಷೆ ಬದ್ಧರಾಗಿದ್ದಾರೆ ಒಂದು ಕೋಟಿ ಭೂಮಿರಹಿತ ಜನರಿಗೆ 1957ರೊಳಗೆ ಐದು ಕೋಟಿ ಭೂಮಿಯನ್ನು ಒದಗಿಸಿಕೊಡುವುದಕ್ಕಾಗಿ ಇತ್ತೀಚಿನ ಎರಡೂವರೆ ವರ್ಷಗಳಿಂದ ಸತತ ದುಡಿಯುತ್ತಿದ್ದಾರೆ, ಅವರ ಈ ಕಾರ್ಯ ಸಾಧಕ ತನದ ತಪಸ್ಸು ಇಡೀ ಜಗತ್ತನ್ನೇ ಅಲ್ಲಿ ನಮ್ಮ ಪ್ರಪಂಚವನ್ನೇ ಎಚ್ಚರಗೊಳಿಸಿದೆಯೆಂದರೆ, ದಿನವೂ ವಿನೋಬಾರವರನ್ನು ನೋಡಲೆಂದು, ಅವರ ಕಾರ್ಯ ಸಾಧನೆಯ ವೈಖರಿಯನ್ನು ಪರೀಕ್ಷಿಸುತ್ತಿರುವ ದೇಶ-ವಿದೇಶಗಳ ಪತ್ರಿಕೋದ್ಯಮಿಗಳು, ರಾಜಕಾರಣಿಗಳು ಮತ್ತು ವಿದ್ಯಾರ್ಥಿಗಳೇ ಸಾಕ್ಷಿ

ಯುಗ ಪ್ರವರ್ತಕರು ಎಂದಾದರೊಮ್ಮೆ ಅತ್ತಿಲ್ಲಬ್ಬರು ಇತ್ತಿಲ್ಲಬ್ಬರು ಹುಟ್ಟುತ್ತಾರೆ ಅವರು ಎಲ್ಲರಂತೆ ಹುಟ್ಟಿ ಸಾಯುವುದಿಲ್ಲ ನಾಲ್ಕು ಜನರಿಗೆ ಉಪಕಾರವಾಗಿ ಬಾಳಿ ನಾಲ್ಕು ಜನರಿಂದ ಒಳ್ಳೆಯವನು ಎನಿಸಿ ಬದುಕನ್ನು ಬಿಟ್ಟು ಕೊಡುತ್ತಾರೆ ತಮ್ಮ ಬಲದಿಂದ ಹಿಡಿದು ಮನುಷ್ಯನವರೆಗಿನ ಸಮುದಾಯವನ್ನೆಲ್ಲಾ ಜನರಿಗೆ ಸಮಾಜಕೆ ಮತ್ತು ಪ್ರಪಂಚ ಪೂರ್ಣ ಅಭಿವೃದ್ಧಿಗಾಗಿಯೇ ಸದುಪಯೋಗ ಪಡಿಸುವುದು, ಇಲ್ಲಿರುವವರಿಗೆ ಸಾಧ್ಯವಾಗುವ ಮಾರ್ಗ

ಇತ್ತೀಚಿನ ಶತಮಾನದಲ್ಲಿ ಅಂಥಾ ಇಬ್ಬರು ಮಹಾ ಪುರುಷರು ಯುಗಪ್ರವರ್ತಕರನ್ನು ನಮ್ಮ ದೇಶದಲ್ಲಿ ಜನ್ಮತಾಳಿ ಬಾಳಿದ್ದಾರೆ ಅವರಲ್ಲೊಬ್ಬರು ಆಗಲೇ ಇದ್ದರು, ಅವರು ಪೂಜ್ಯ ಮಹಾತ್ಮ ಗಾಂಧೀಜಿಯವರು ಇನ್ನೊಬ್ಬರು ವಿನೋಬಾ ಭಾವೆಯವರು, ಗಾಂಧಿ ನಮ್ಮೊಂದಿಗೆ ಈಗ ಇಲ್ಲದಿದ್ದರೂ ಕೊಡಿಸಿದ್ದಾರೆ ಇನ್ನೂ ಬಿಟ್ಟಿದ್ದರು ಇಲ್ಲದಿದ್ದರೆ ಅವರನ್ನು ಅಂಥಾ ಪಂಕ್ತಿಗೆ ಸೇರಿದ ಕಾರ್ಯ ಪ್ರವರ್ತಕರೆಂದಾಗಿಯೇ ಇದ್ದಾರೆ, ಆ ಪೂರು ಮುಂದೆ ಆಡೋಣ

ಪಂಚ ಭೌತಿಕವಾದ ಈ ಸೃಷ್ಟಿಯ ಗಾಳಿ ನೀರು, ಬೆಳಕು, ಭೂಮಿ, ಆಕಾಶ ಇವುಗಳಿಂದಾವೃತವಾಗಿದೆ, ಎಂತಲೇ ವಿನೋಬಾಜೀ ಒಂದು ಸಿದ್ಧಾಂತಕ್ಕೆ ಬಂದಿದ್ದಾರೆ ಭೂಮಿಯು ಒಂದು ಪಂಚ ಭೌತಿಕದಲ್ಲೊಂದಾಗಿ ಕೊಂಡಿದೆ ಈ ಪಂಚ ಭೌತಿಕದ ಮೇಲೆ ಮನುಷ್ಯನಿಗೆ ಅಧಿಕಾರ ಸ್ಥಾಪನೆ ಮಾಡಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಕೇವಲ ಪ್ರಕೃತಿಯ ಭೂಮಿಯನ್ನು ತನ್ನ ಸ್ವಂತವೆಂದು ಅಧಿಕಾರದಿಂದಯಲ್ಲಿ ಕೇಂದ್ರೀಕರಿಸುವುದು ತಪ್ಪು ಎಂದು ವಿನೋಬಾ ಭಾವೆ ಹೇಳುತ್ತಾರೆ ಇದರಿಂದಲೇ ಜಗತ್ತಿನಲ್ಲಿ ಭೂಮಿಯ ಮೇಲೆ ಪ್ರತಿಯೊಬ್ಬನ ಸಮಾನವಾದ ಹಕ್ಕು ಪ್ರಕಾರವಾದ ಅಧಿಕಾರವಿರುವುದು ನ್ಯಾಯ ಸಮ್ಮತವಾದುದಾಗಿದೆ ವಿನೋಬಾಜೀಯವರ ಭೂದಾನ ಯಾತ್ರಾ ಚಳುವಳಿಯು ಇದೇ ಆಧಾರದ ಮೇಲೆ ನಿಂತಿದೆ

ಭೂಮಿಯನ್ನು ಅವರು ಜಮೀನ್ದಾರರಿಂದ ಒತ್ತಾಯದಿಂದ ಕೇಳುವುದಿಲ್ಲ ಮನಸ್ಸು ಪರಿವರ್ತನೆಗೊಳಿಸಿ ಭೂಮಿಯನ್ನು ದಾನವಾಗಿ, ತನ್ನ ಪ್ರೀತಿಯ ದಾನ ಕೇಳುತ್ತಾರೆ

ಪಾದಚಾರಿಯಾಗಿ

ವಿನೋಬಾ ಭಾವೆಯವರು ಎಲ್ಲಿಗೆ ಹೋಗಬೇಕಾದರೂ, ಅಲ್ಲೆಲ್ಲಾ ಪಾದಚಾರಿಯಾಗಿಯೇ ಹೋಗುತ್ತಿದ್ದಾರೆ ಸುಮಾರು ೬೦ ವರ್ಷ ವಯಸ್ಸಿನವರಾಗಿದ್ದರೂ ದಿನವೂ ನಡೆಯುತ್ತಿದ್ದಾರೆ ಕ್ಷೀಣ ಕಾಯದ ಈ ವ್ಯಕ್ತಿ ಹಗಲಿರುಳೆನ್ನದೆ ನಾಡ ಸುತ್ತುವುದು ಅವರ ಹಿಂಬಾಲಕರಿಗೆ ಶಿಕ್ಷೆಯೆನ್ನಿಸುವುದಿಲ್ಲ ಅವರು ವಿನೋಬಾರವರು ನಡೆದ ಹೆಜ್ಜೆಯ ಗುರುತನ್ನು ಅನುಸರಿಸುತ್ತಾರೆ ಆದರೆ ಇದರಿಂದ ಸ್ವಲ್ಪವೂ ಬೇಸರ ಇಲ್ಲ ಇದೊಂದು ಉತ್ತಮ ವಿಹಾರವಾಗಿದೆ ಎಂದು ಹೇಳುತ್ತಾರೆ

ರಕ್ತರಹಿತ ಕ್ರಾಂತಿ

ವಿನೋಬಾಜೀಯವರ ಈ ರಕ್ತರಹಿತ ಕ್ರಾಂತಿ ಕಮ್ಯೂನಿಸ್ಟರು ಮೊದಲಾದ ಕ್ರಾಂತಿಕಾರಿಗಳ ಪರಿವರ್ತನೆ ಇಲ್ಲ ಕಾರಣ ತೆಲಂಗಾಣದಲ್ಲಿ ಕೊಲ್ಲುವಂತಹ ಜನರ ಮನೆಗಳು, ವೈರಿ, ಹೊಲಗಳನ್ನು ಹಾಳು ಮಾಡಿ ಜನರ ರಕ್ತವನ್ನು ಹರಿಸಿ ಭೂದಾನ ಕ್ರಾಂತಿಯನ್ನು ಬಯಸುವವರು ಈ ಕಮ್ಯೂನಿಸ್ಟರು ಮಾಡಿದ್ದರು ಹಿಂಸಾಚಾರದ ಮೇಲೆ ಬೆಳ್ಳಿ ನಂಬಿಕೆ ಇಲ್ಲದೆ ಇದ್ದರೂ, ವಿನೋಬಾಜೀಯವರ ಈ ರಕ್ತರಹಿತ ಕ್ರಾಂತಿಯ ಮೇಲೆ ಸಮಾಧಾನ ಹುಟ್ಟುವುದಾದರೂ ಹೇಗೆ?

ಗಾಂಧೀಜೀ ತತ್ವ

ವಿನೋಬಾಜೀಯವರು ಗಾಂಧೀಜಿ ತತ್ವದ ದೀಪ್ತಿಯನ್ನು ಬೆಳಗಿಸಲು ವಾದದ ಮೇಲೆ ನಡೆಸಿಕೊಂಡು ಹೋಗುತ್ತಿದ್ದಾರೆ ಭೂಮಿಯೊಂದು ಗಿರಿಶಿಖರ ನಿಧಿಯಂತೆ ಉಳಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವುದನ್ನು ಗಾಂಧೀಜಿಯವರ ಶಿಷ್ಯರು ಸಾರುತ್ತಿದ್ದಾರೆ ಎಂಬುದು ವಿನೋಬಾವರೆಯವರ ದೃಢ ನಿರ್ಧಾರ ಇದ್ದ ಹಾಗೆಯೇ ಜವಾಹರಲಾಲರಂತಹ ನಾಯಕರು ಬೆಂಬಲಿಸುತ್ತಾರೆ

ಸಂಪತ್ತು ದಾನ

ವಿನೋಬಾರವರು ಇದೀಗ ಇನ್ನೊಂದು ಯೋಜನೆಯನ್ನು ಕೈಗೊಂಡಿದ್ದಾರೆ ಅದು ಯಾವುದೆಂದರೆ ಸಂಪತ್ತು ದಾನ ಚಳುವಳಿಯನ್ನು ಪ್ರಮುಖವಾಗಿ ಕೈಗೊಂಡಿದ್ದಾರೆ ಈ ದಾನ ಚಳುವಳಿಯಿಂದ ನಿರ್ಗತಿಕರಿಗೆ ಭೂಮಿ ಕೊಡಲು ಅನುಕೂಲವಾದವರು, ಹಣವನ್ನು ದಾನ ಕೊಟ್ಟರೆ ಅದರಿಂದ ನಿರ್ಗತಿಕರಿಗೆ ಬಡತನದಿಂದ ಬಳಲುವ ಬಡಕೃಷಿಕರಿಗೆ ಸಾಧ್ಯವಾದಷ್ಟು ಭೂಮಿಯನ್ನು ಕ್ರಯಕ್ಕೆ ಪಡೆಯಬಹುದು ದಾನವಾದುದನ್ನು ಪೂರ್ಣವಾಗಿ ಅಹಿಂಸಾ ತತ್ವದ ಮೇಲೆಯೇ ಗಾಂಧೀಜಿಯವರ ಆದರ್ಶ ಕಾರ್ಯಕ್ರಮಗಳನ್ನು ಅನುಸರಿಸಿಯೇ ವಿನೋಬಾರವರು ಇಂದು ತಮ್ಮ ಭೂದಾನ ಯಾತ್ರಾ ಚಳುವಳಿಯನ್ನು ಸಾಗಿಸುತ್ತಿದ್ದಾರೆ

ಗಾಂಧೀಜಿಯವರ ಹಾದಿಯನ್ನೇ ಹಿಡಿದು ಕಾಲ ಉರುಳುತ್ತಿದ್ದರೂ ಇನ್ನೂ ನಮ್ಮ ಜನರು ಅವರ ಪದವನ್ನು ಪಡೆಯಬೇಕು ಅದು ನಮ್ಮ ಪಾಲಿಗೆ ಪರಮಸಿದ್ಧಿ ಎಂಬ ಅಭಿಪ್ರಾಯ ಸಾಧನೆಯಿಂದ ಬರಬೇಕಾಗಿದೆ

ಸ್ವಾತಂತ್ರ್ಯದ ಹೋರಾಟದಲ್ಲಿ ಎಲ್ಲರ ಜೊತೆಗೆ ನಡೆದು, ಗಾಂಧೀಜಿಯವರ ತತ್ವಗಳನ್ನು ಎಲ್ಲರೂ ಅಳವಡಿಸಿಕೊಂಡಂತೆ ಅನುಯಾಯಿಗಳೆನಿಸಿಕೊಂಡರು ನ್ಯಾಯ ನಮ್ಮ ಕಾಮಧೇನುವಾಗಿ ಸ್ವಾತಂತ್ರ್ಯ ಪಡೆಯಲು ನಿಂತು ಹೋರಾಡಿದರೆ, ಜೀವನ ಭೂಮಿಗಳನ್ನು ಉಪಹಾರವಾಗಿ ಕಾಣುವ ಆಚಾರ್ಯ ವಿನೋಬಾರವರ ಈ ಚಳುವಳಿಯ ಗಾಳಿ ಮಂತ್ರವನ್ನು ಎಲ್ಲರೂ ಒಪ್ಪಿಕೊಂಡು ನಂಬಿಕೆಯಿಂದ ಸ್ವಾಗತಿಸುತ್ತಿದ್ದಾರೆ.

ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಈ ಚಳುವಳಿಯ ದಾಸನೆ ಕಾಣುತ್ತಿದೆ. ಈ ಜಿಲ್ಲೆಗೆ ಸಹ ಬಂದಿರುವಂತೆ ಮಹತ್ವದ ವಿನೋಬಾರವರ ಭೂದಾನ ಚಳುವಳಿಯನ್ನು ಯಶಸ್ವಿಯಾಗಿಸಲು ಸಾಧ್ಯವಾದಷ್ಟು ಈ ಗಾಂಧೀ ತತ್ವದ ಸೇವಕರು ಸಹಕರಿಸುವರೆಂದು ನಾವು ಹಾರೈಸುತ್ತೇವೆ ಎನ್ನುತ್ತೇವೆ.

[ಆಕಾಶವಾಣಿ ಸಂಸ್ಥೆಯ ಪತ್ರಿಕೆಯಿಂದ]

ಧರ್ಮಾರ್ಥ—ಮುಕ್ತಿ

ಒಂದು ಸಾವಿರ ಕಾಪಿಗಳ ಪುಸ್ತಕಗಳನ್ನು ಧರ್ಮಾರ್ಥ ಹಂಚುತ್ತಿದ್ದೇವೆ ಬೇಕಾದವರು ಬರೆದು ಪಡೆಯಬಹುದು

Diamond Commercial Chambers (N. U.)
Bhandari Street,
BOMBAY—3

ಉಪಾಧ್ಯಾಯರು ಬೇಕಾಗಿದ್ದಾರೆ

ಆದಷ್ಟು ಬೇಗ ಎಸ್ಎಸ್ಎಲ್‌ಸಿ ಟ್ರೇನ್ಡ್ ಶಿಕ್ಷಕರು, ಹಿಂದಿ ಬಲ್ಲವರು ಶಾಲೆಗೆ ಬೇಕಾಗಿದ್ದಾರೆ ಅರ್ಜಿ ಸಲ್ಲಿಸಬೇಕು ವೇತನ ಮಾತಾಡಿ ಕೊಡಲಾಗುವುದು ಉಪಾಧ್ಯಾಯರು ಬೇಕಾಗಿದ್ದಾರೆ ಬರೆಯಿರಿ

ಎ ಬಿ ಶೆಟ್ಟಿ
ಮ್ಯಾನೇಜರ್

ಹಿಂದೂ ಎ ಹಿ ಪ್ರಾಥಮಿಕ ಶಾಲೆ, ಬಜಪೆ.

ಶಾಲೆಯ ಪ್ರತಿ ಒಂದನ್ನು ಲಗತ್ತಿಸಿ ಕಳುಹಿಸಬೇಕು.

'ಗೋಪಾಲ ಭೇಷಜಾಶ್ರಮ' ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು—ಆಯುರ್ವೇದ ಭೂಷಣ ಯಂ ಸಿ ಶಾಸ್ತ್ರೀ.

ಇತರ ನವಜೀವಾಮೃತ ಎಂಬ ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ಬೇರ ಮತ್ತು ಪ್ರಕೃತಿದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಿದ ಶ್ರೇಷ್ಠತಮ ಪೌಷ್ಟಿಕವಾದ ಮಧುರವಾದ ರಸಾಯನ

ಹೆಚ್ಚಿನ ಮಾಹಿತಿಗೆ— ಡಾ॥ ಯಂ ಸಿ ಶಾಸ್ತ್ರೀ, ಎಲ್ ಐ ಎಂ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಶಾಖೆ ತೆರೆದವರು—ಡಾ॥ ವಿ ಕೆ ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ವಾರದ ಒಳಿತು ಕೆಡುಕುಗಳು

ತಾ. ೨೬—೧೧—೫೩ರಿಂದ ತಾ. ೨—೧೨—೫೩ರ ವರೆಗೆ.

ಮೇಷ—ನಿಮ್ಮ ಧನ ಸ್ಥಾನಕ್ಕೆ ಭಾಗ್ಯಪತಿಗಳಾದ ಸುರಗುರುಗಳ ಪ್ರವೇಶವಾಗಿರುವುದು. ಮಾತ್ರವಲ್ಲ 6ನೇ ಉಪಚಯ ಸ್ಥಾನದಲ್ಲಿ ನಿಂತ ಅಂಗಾರಕನೂ ಕೂಡಾ ಅನುಕೂಲನಾಗಿರುವುದರಿಂದ ನಿಮ್ಮ ಎಲ್ಲಾ ಋಣದ ತಾಪತ್ರಯಗಳೂ ಇಂದು ಮಾಯವಾಗುವವು. ನಿಮ್ಮ ಸಕಲ ಕಾರ್ಯಕಲಾಪಗಳೂ ನಿರ್ವಿಘ್ನದಿಂದ ನೆರವೇರುವವು, ಗೃಹ ತಾಪತ್ರಯಗಳು ನಾಮಾವಶೇಷವಾಗಲಿವೆ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಕಾಣಿಸುವದು. ವಿಜಾತಿಯವರೊಡನೆ ವಾಕ್ಕಲಹವಾಗುವ ಸಂಭವವಿದೆ. ವಾರಾಂತ್ಯದ 3 ದಿನಗಳು ಉತ್ತಮವಿವೆ.

ವೃಷಭ—ದೈವವು ದುರ್ಬಲವಿರುವ ಕಾರಣ ನಿಮ್ಮ ಪೌರುಷಕ್ಕೆ ತಕ್ಕ ಫಲ ಕಾಣಿಸದು. ಹೆಂಡತಿ ಮಕ್ಕಳ ಆರೋಗ್ಯ ಕೆಡಲಿದೆ. ಮನೋಧೈರ್ಯವು ಲುಪ್ತವಾಗಿದ್ದ ಕಾರಣ ಯಾವ ಕಾರ್ಯವನ್ನೂ ಮುಂದುವರಿಸಲು ಹೆದರುವಿರಿ. ರಾಜಕೀಯ ಕ್ಷೇತ್ರದಲ್ಲಿ ಪರಾಭವ ವ್ಯಾಪಾರದಲ್ಲಿ ನಷ್ಟ ಕಾಣಿಸೀತು. ನೌಕರಿ ಜನರಿಗೂ ಸೇವಕ ವರ್ಗಕ್ಕೂ ಈ ವಾರವು ತೃಪ್ತಿಕರವಾದ ಫಲವನ್ನು ನೀಡಲಿದೆ. ಶತ್ರುಜನರಿಂದ ಅಪಾಯ ಕಾಣಿಸದು. ತಾ. 26, 2 ಈ 2 ದಿನಗಳು ಉಳಿದ ದಿನಗಳಿಗಿಂತ ಲೇಸು.

ಮಿಥುನ—ಮಡಿಮೆಯ ದ್ವಿಗುಣವಾಗಿ ಖರ್ಚುಗಳು ಪ್ರಾಪ್ತವಾಗುವವು. ತನ್ನಿಮಿತ್ತ ಸಾಲಕಡಗಳನ್ನು ಮಾಡುವಿರಿ. ಆದರೆ ಆದರಲ್ಲೂ ತೃಪ್ತಿಯೇನೆಂದರೆ ನಿಮ್ಮ ಖರ್ಚಿನಲ್ಲಿ ಬಹ್ವಂಶವು ಮಂಗಲ ಕಾರ್ಯಗಳಿಗೂ ಸತ್ಕರ್ಮಗಳಿಗೂ ವ್ಯಯವಾಗುವದು. ಪರ್ಯಟನದಲ್ಲಿ ಹಲವಾರು ತೆರದ ವಿಘ್ನವಿದ್ರೋಹಗಳೂ ಕೃಪಾನಿಷ್ಟಗಳೂ ಪ್ರಾಪ್ತವಾಗುವವು. ಗೃಹ ತಾಪತ್ರಯಗಳ ದೆಸೆಯಿಂದಾಗಿ ಒಮ್ಮೊಮ್ಮೆ ಸನ್ಯಾಸಿಯ ಜೀವನವೇ ಲೇಸೆನಿಸಿತು. ತಾ. 28, 29 ಈ 2 ದಿನಗಳು ಸ್ವಲ್ಪ ಸುಖ ನೆಮ್ಮದಿದಾಯಿಗಳಾಗಿವೆ.

ಕರ್ಕಟಿ—ಸದ್ಯ ನೀವು ವಿಪತ್ಪರಂಪರೆಗಳಿಂದ ಪಾರಾದಿರೆನ್ನಬಹುದು. ನಿಮ್ಮ ಭಾಗ್ಯಪನಾದ ಬೃಹಸ್ಪತಿ ಯೀಗ ಲಾಭಸ್ಥಾನಕ್ಕೆ ಪ್ರವೇಶಿಸಿದ್ದರಿಂದ ನಿಮ್ಮ ಆರ್ಥಿಕ ಭಾಗವು ಬಹ್ವಂಶ ಸುಧಾರಿಸಲಿದೆ. ನಿರುದ್ಯೋಗಿಗಳೂ ಕೂಡ ಈ ಕಾಲದಲ್ಲಿ ಒಳ್ಳೆಯ ಉದ್ಯಮ ಪ್ರವೃತ್ತರಾಗುವರು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಆದರೆ ಮನಸ್ಸು ಅತೀವ ಚಪಲವಾಗಿದ್ದು ಅನ್ಯಾಯದ ಕಡೆ ನಿಮ್ಮನ್ನು ಸೆಳೆಯಲಿದೆ. ಜಾಗರೂಕರಾಗಿರಿ. ತಾ. 26, 30, 1 ಈ ದಿನಗಳು ಶ್ರೇಯೋದಾಯಿಗಳಾಗಿವೆ.

ಸಿಂಹ—ಇಂದಿನ ನಿಮ್ಮ ಭವಿತವ್ಯವು ಅಷ್ಟೊಂದು ತೃಪ್ತಿಕರವಾಗಿಲ್ಲವು. ಆದರೂ ವಿಕ್ರಮಸ್ಥಾನದಲ್ಲಿ ಶನಿಯು ಉಚ್ಚನಾಗಿದ್ದ ಕಾರಣ ನೀಚ ಜನರ ಬೆಂಬಲದಿಂದಾಗಿ ದುಃಸಾಧ್ಯವಾದ ಕಾರ್ಯಗಳನ್ನು ಸಾಧಿಸುವಿರಿ. ತೃಪ್ತಿಕರವಾದ ಫಲಾಪ್ತಿಯೂ ಆಗಲಿದೆ. ನೌಕರಿ ಜನರಿಗೆ ಮೇಲಧಿಕಾರಿಗಳಿಂದ ಪೀಡೆ ಸಂಭವಿಸೀತು. ಪಿತ್ತೋಷ್ಣ ಪ್ರಕೋಪದಿಂದ ಆರೋಗ್ಯಕ್ಕೆ ಹಾನಿಯಿದೆ. ಹಿಂದಿನಂತೆ ಇಂದು ಸ್ಥಾನಮಾನಗಳು ಲಭಿಸಲಾರವು. ತಾ. 28, 29, 2 ಈ ದಿನಗಳಲ್ಲಿ ಕೊಂಚ ಪ್ರಗತಿ ಕಾಣಿಸೀತು.

ಕನ್ಯಾ—ಹಲವು ಕಾಲದಿಂದ ನಿಮ್ಮ ಭವಿಷ್ಯವು ಇಷ್ಟೊಂದು ಸುಧಾರಿಸಿಲ್ಲವು. ಈ ವಾರದಲ್ಲಿ ನೀವು ಹಿಂದಿನ ಸಾಲಕಡಗಳಿಂದ ಮುಕ್ತರಾಗಿ ಕೈಯಲ್ಲೂ ಸ್ವಲ್ಪ ಧನ ಸಂಗ್ರಹಿಸಿಟ್ಟುಕೊಳ್ಳುವಿರಿ. ನೌಕರಿ ಜನರು ವಿದ್ಯಾರ್ಥಿಗಳು ಲೇಖಕರು ವ್ಯಾಪಾರಿಗಳೂ ಕೂಡ ತಂತಮ್ಮ ಇಷ್ಟಾರ್ಥಗಳನ್ನು ಅನಾಯಾಸದಿಂದ ಪಡೆವರು. ಶ್ರಮಜೀವೀ ವರ್ಗಕ್ಕೆ ಈ ಕಾಲವು ಸ್ವಲ್ಪ ಕಷ್ಟವಾಗಿ ಪರಿಣಮಿಸೀತು. ತಾ. 26, 27, 30 ಮತ್ತು 1 ಈ ದಿನಗಳಲ್ಲಿ ಸುಖಭೋಗಲಾಭ ವಿಜಯಗಳಿವೆ.

ತುಲಾ—ಗ್ರಹಮಾನವು ತೀರ ಕೆಟ್ಟಿರುವದು. ಏತನ್ನಿಮಿತ್ತ ನೀವು ಮಾಡಿದ ಪ್ರಯತ್ನಗಳು ನೀರಲ್ಲಿ ಹೋಮದೋಪಾದಿಯಲ್ಲಿ ವ್ಯರ್ಥವಾದಾವು ಗುರುಹಿರಿಯರ ಆಗ್ರಹಕ್ಕೆ ಗುರಿಯಾದ ನಿಮಗೆ ದೇಶಾಲಸ್ಯ ಪ್ರವಾಸದಲ್ಲಿ ಕಳ್ಳಕಾಕರ ಭಯ ಕಷ್ಟನಷ್ಟಗಳುಂಟಾದಾವು. ಆತ್ಮವಿಶ್ವಾಸದಿಂದ ವಂಚಿತರಾದ ನೀವು ಆಪ್ತಮಿತ್ರ ಜನರೊಡನೆ ಕಲಹ ಮಾಡುವಿರಿ. ವ್ಯರ್ಥ ಖರ್ಚುಗಳು ಬಹುಮುಖದಿಂದ ಪ್ರಾಪ್ತವಾಗಲಿದೆ. ತಾ 30, 1 ಹೊರತಾದ ದಿನಗಳು ಹೆಚ್ಚು ಅನಿಷ್ಟಕಾರಿಗಳಾಗಲಾರವು.

ವೃಶ್ಚಿಕ ನಿಮ್ಮ ಭವಿಷ್ಯವಿಂದು ಮುಂಚಿಗಿಂತ ಎಷ್ಟೋ ಸುಧಾರಿಸಲಿದೆ. ಪ್ರತಿಯೊಂದು ಕಾರ್ಯಗಳೂ ನೀವೆಣಿಸಿದಂತೆ ಸಿದ್ಧಿಸುವವು. ಆರೋಗ್ಯ, ಭಾಗ್ಯಗಳೂ ಕೂಡ ಉತ್ತಮವಾಗಿರುವವು. ಜನತೆಯ ಮಾನಾದರಗಳಿಗೆ ಪಾತ್ರರಾಗುವಿರಿ. ಗೃಹಸುಖ ಭೋಗಗಳು ಚೆನ್ನಾಗಿರುವವು. ಆದರೆ ವ್ಯಯಗತನಾದ ಶನಿಯು ಆಕಸ್ಮಿಕ ಅನರ್ಥಗಳನ್ನು ತಂದೊಡ್ಡಲಿರುವನು. ಅನಿರೀಕ್ಷಿತ ಪ್ರವಾಸವೂ ಗಂಟುಬೀಳಲಿದೆ. ತಾ. 28, 29, 30, 1 ಈ ದಿನಗಳಲ್ಲಿ ನಿಮ್ಮ ಬಯಕೆಯು ಸಿದ್ಧಿಸಲಿದೆ.

ಧನು - ಹಿಂದಿನ ಸ್ಥಾನಮಾನ ಗೌರವಾದರಗಳು ನಿಮಗಿಂದು ಲಭಿಸಲೊಲ್ಲವು. ಆದರೂ ಕಾಲಯಾಪನೆಯು ಕಷ್ಟವೆನಿಸದು. ಸ್ತ್ರೀಧನಾಪ್ತಿಯ ಯೋಗವಿದೆ. ಸನ್ಮಿತ್ರ ಬಂಧುಗಳ ನೆರವು ಸದಾ ಇರುವ ಕಾರಣ ಯಾವ ಕಾರ್ಯದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಲಾರಿರಿ. ಆದರೆ ಆರೋಗ್ಯಕ್ಕೆ ಸ್ವಲ್ಪ ಹಾನಿಯಿದೆ ಮನೋ ರೋಗವು ಕೂಡ ಮುಂಚಿಗಿಂತ ಅಧಿಕವಾದೀತು ಸತ್ಕರ್ಮ ಸದಾಚಾರ ಸಂಪನ್ನರಾದ ಸಜ್ಜನರಿಗೆ ವಾರಾಂತ್ಯದ 3 ದಿನಗಳಲ್ಲಿ ಇಷ್ಟಾರ್ಥವು ಲಭಿಸುವದು.

ಮಕರ—ದೈವವು ನಿಮ್ಮ ಮೇಲೆ ಅನುಗ್ರಹ ದೃಷ್ಟಿಯನ್ನು ಬೀರಿರುವುದು. ಆದ ಕಾರಣ ಸೀಮೀಕಾಲದಲ್ಲಿ ಏನೇ ಮಾಡಿದರೂ ಅದು ಸತ್ಫಲದಾಯಿಯಾಗಿ ಪರಿಣಮಿಸುವದು. ನಿಮ್ಮ ಪರಿಶ್ರಮಕ್ಕಿಂತ ದ್ವಿಗುಣವಾದ ಫಲವನ್ನು ಪಡೆವಿರಿ, ಗೃಹಪರಿವಾರಗಳಲ್ಲಿ ಯಾವೊಂದೂ ಚ್ಯುತಿ ನ್ಯೂನತೆಗಳು ಕಂಡುಬರಲಾರವು. ಪಿತ್ತ ದೋಷವು ಆಗಾಗ ಕಾಣಿಸೀತು. ರಾಜಕೀಯ ಕ್ಷೇತ್ರದಲ್ಲೂ ಸಾಮಾಜಿಕ ಕಾರ್ಯಗಳಲ್ಲೂ ಕೀರ್ತಿ ಭಾಗಿಗಳಾಗುವಿರಿ, ವಾರದ ಆದ್ಯಂತ ದಿನಗಳಲ್ಲಿ ನಿಮ್ಮ ಸಂಕಲ್ಪವು ನಿರ್ವಿಘ್ನದಿಂದ ಸಿದ್ಧಿಸುವದು.

ಕುಂಭ—ಕಾಲವು ಅತೀವ ಕಠಿಣ ಸ್ಥಿತಿಗೆ ಬಂದಿರುವದು. ಯಾವ ಕಾರ್ಯವನ್ನೆಸಗಲಿ ಕಷ್ಟ ನಷ್ಟಗಳೇ ಹೆಚ್ಚುವವು. ಜನತೆಯೊಡನೆ ನಿಷ್ಠುರ ಕಲಹಗಳೂ ಬಂಧು ವರ್ಗದವರೊಡನೆ ಮನಸ್ತಾಪವೂ ಶತ್ರು ಜನರಿಂದ ಆಗಾಗ ಪೀಡೆಯೂ ಸಂಭವಿಸಲಿದೆ. ಬಹುಮುಖದ ಖರ್ಚುಗಳಿಂದಾಗಿ ಸಿಕ್ಕಸಿಕ್ಕವರೊಡನೆ ಸಾಲವೆತ್ತಬೇಕಾಗುವದು. ಆಪ್ತೇಷ್ಟರೂ ಬಂಧುವರ್ಗದವರೂ ಕೂಡ ಸದ್ಯ ನಿಮ್ಮನ್ನು ಕಣ್ಣೆತ್ತಿ ಸಹಾ ನೋಡಲಾರರು. ವಾರಾದಿಯ 4 ದಿನಗಳಲ್ಲಿ ಮೇಲ್ಕಂಡ ಅನಿಷ್ಟಗಳು ಹೆಚ್ಚಾಗಿ ಕಾಣಿಸಲಾರವು.

ಮೀನ— ಸಂಸಾರದ ತಾಪತ್ರಯವು ದಿನೇ ದಿನೇ ಹೆಚ್ಚಲಿದೆ. ಹಣದ ಲೇವಾದೇವಿ ನಿಮಿತ್ತ ಕಲಹವುಂಟಾಗುವದು. ಹೆಂಡತಿ ಮಕ್ಕಳ ದೇಹಾಲಸ್ಯ ನಿಮಿತ್ತ ಹೆಚ್ಚಿನ ಹಣವನ್ನು ಡಾಕ್ಟರರ ಪೆಟ್ಟಿಗೆಗೆ ತುಂಬಿಸಬೇಕಾದೀತು. ಆಪ್ತ ಜನರ ವಿರಹ ದುಃಖಕ್ಕೀಡಾಗುವಿರಿ. ರಾಜಕೀಯ ರಂಗಗಳಲ್ಲಿ ಇದಿರಾಳುಗಳಿಂದ ಪರಾಭವವುಂಟಾಗಲಿದೆ. ವ್ಯಾಪಾರೀ ಜನರಿಗೂ ನೌಕರಿ ವರ್ಗಕ್ಕೂ ಕಾಲವು ಅಷ್ಟೊಂದು ಕಷ್ಟವೆನಿಸದು. ವಾರದ ಆದ್ಯಂತ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಿರುವುದರಿಂದ ಜಾಗರೂಕರಾಗಿರಿ.

(೧ನೇ ಪುಟದಿಂದ)

ದವು. ಪಶ್ಚಿಮ ಜರ್ಮನಿಯ ಮುಖ್ಯಮಂತ್ರಿ ಡಾ. ಆಡೆನಾರರಿಗೆ ರಶಿಯಾದ ವಶದಲ್ಲಿರುವ ಪೂರ್ವ ಜರ್ಮನಿ "ಅವಿಮೋಚಿತ" ಜರ್ಮನ್ ಘಟಕವಾಗಿ ಪರಿಣಮಿಸಿರುವುದನ್ನು ನಾವು ಗಮನಿಸಬಹುದು.

ಭಾರತೀಯರಲ್ಲಿ ತೀವ್ರ ಭಿನ್ನಾಭಿಪ್ರಾಯವನ್ನು ಹುಟ್ಟಿಸಿ, ಒಬ್ಬರಿನ್ನೊಬ್ಬರಲ್ಲಿ ಅಸಹನೆ ಹಾಗೂ ಅಸಂತೋಷವನ್ನು ಹುಟ್ಟಿಸುವುದಕ್ಕೆ ಭಾಷಾ ಘಟಕಗಳ ನಿರ್ಮಾಣ ಬೇಡಿಕೆ ಸಾಕಷ್ಟು ಬಲವಾದಕಾರಣವಾದೀತೋ ಎಂಬ ಹೆದರಿಕೆ ಪ್ರಧಾನಿ ನೆಹರೂರಿಗೆ ಆಗುತ್ತಿರುವುದನ್ನು ಬುಡವಿಲ್ಲದ ಸಂದೇಹವೆಂದು ದುರ್ಲಕ್ಷಿಸುವುದು ಸರಿಯಲ್ಲ. ಆಂಧ್ರ ಮಸೂದೆಯ ಚರ್ಚೆಯ ಕಾಲಕ್ಕೆ ಸಂಸತ್ತಿನ ಮಾನ್ಯ ಸದಸ್ಯರೊಬ್ಬರು"ಭಾರತದ ರಾಷ್ಟ್ರಸಂಘ"ವೆಂದು ಉದ್ಗರಿಸಿದ್ದರು-ಇದು ನಿಜವಾಗಿ ಪರಿಣಮಿಸಲೂ ಬಹುದು. ರಾಷ್ಟ್ರ ಸಂಘವು ಜಾಗತಿಕ ಸಮಸ್ಯೆಗಳ ಚರ್ಚಾಕೂಟವಾದಂತೆ ವಿವಿಧ ಭಾಷಾವಾದಿಗಳ ಕಲಹ ಭೂಮಿಯಾಗಿ ಭಾರತ ಮಾರ್ಪಾಟು ಹೊಂದುವುದೋ ಏನೋ, ಯಾರು ಬಲ್ಲರು? ದರ ಸಮಿತಿಯು ರಾಷ್ಟ್ರೀಯ ಹಾಗೂ ಉಪರಾಷ್ಟ್ರೀಯ ಭಾವನೆಗಳು ಒಂದನ್ನೊಂದು ನುಂಗಿ ನೀರು ಕುಡಿಯಲು ಹವಣಿಸಿ ಬೆಳೆಯುತ್ತವೆ ಎಂದು ಹೇಳಿದ್ದಿತು. ಆ ಮಾತು ನಿಜವಲ್ಲವೆಂಬುದನ್ನು ತೋರಿಸಿ ಕೊಡುವುದು ಭಾಷಾ ಘಟಕಗಳ ಬೇಡಿಕೆಯನ್ನು ಮುಂದಿಟ್ಟಿರುವ ಚಳವಳಿಗಾರರ ಭಾರತೀಯ ನಾಗರಿಕ ಕರ್ತವ್ಯವು ಮಹೋನ್ನತ ಹೊಣೆಗಾರಿಕೆಯಾಗಿರುತ್ತದೆ. ರಾಷ್ಟ್ರೀಯ ಮತ್ತು ಉಪರಾಷ್ಟ್ರೀಯ ಭಾವನೆಗಳಲ್ಲಿ ಪರಸ್ಪರ ವೈಷಮ್ಯಕ್ಕೆ ಆಸ್ಪದವಿರದಂತೆ ನೋಡಿಕೊಳ್ಳುವುದೇ ನಮ್ಮ ಇಂದಿನ ಕರ್ತವ್ಯ.



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

Our Bombay Stockists:-

1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

ದಿ ವಿಜಯಾ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಜುಮ್ಲಾ ವಹಿವಾಟು .... ,, **60,50,000**

ಕಾಯಂ ಠೇವಣಾತಿಗಳು ! ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ.
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಬಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚ ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 | Licence No. 31 | Licensed to Post without Prepayment

ನವಯುಗ

Vol. 33 No. 14 | 3-12-1953

ದಕ್ಷಿಣ ಭಾರತದಲ್ಲಿ ಸದ್ಯ ಇಬ್ಬರು ಹಣ್ಣು ಮುದುಕರು ರಾಜಕಾರಣ ಪಟುಗಳೆಂದು ಪ್ರಸಿದ್ಧಿ ಪಡೆದಿರುವರು—ಆಂಧ್ರಕೇಸರಿ ಪ್ರಕಾಶಂ ಹಾಗೂ ಚಕ್ರವರ್ತಿ ರಾಜಗೋಪಾಲಾಚಾರಿಯವರೇ ಈ ಮಹನೀಯರು. ಪ್ರಕಾಶಮರು ದಕ್ಷಿಣ ಭಾರತದಲ್ಲಿ ರಾಜಕೀಯ ಬಿರುಗಾಳಿ ಬೀಸುವುದಕ್ಕೆ ಈಚೆಗೆ ಕಾರಣರಾದರು. ಆದರೆ ಆಂಧ್ರದಲ್ಲಿ ಸ್ಥಿರವಾದೊಂದು ಸರಕಾರವನ್ನು ಕಾಂಗ್ರೆಸ ಹಾಗೂ ಇತರ ಪಕ್ಷಗಳ ನೆರವಿನಿಂದ ಸ್ಥಾಪಿಸಲು ಅವರು ಯತ್ನಿಸಿ, ಆಂಧ್ರ ಜನಕ್ಕೆ ಉಪಕಾರವಾಗುವಂತೆ ಮಾಡಿದರು. ಪ್ರಕಾಶಮರು ಅಧಿಕಾರದ ವ್ಯಾಮೋಹಕ್ಕೆ ಒಳಪಟ್ಟು ಅಂತರ್ಲಾಗ ಹಾಕಿದವರೆಂದು ದೂರುವವರುಂಟು. ಈ ದೋಷವನ್ನು ನಾವು ಯಾರೂ ರಾಜಾಜಿಯ ಮೇಲೆ ಹೊರಿಸುವಂತಿಲ್ಲ. ಭಾರತದ ಕೇಂದ್ರ ನಗರದಿಂದ ಮದರಾಸಿಗೆ ಮರಳಿ ರಾಜಕೀಯದ ಗುಲ್ಲು ಗೊಂದಲಗಳೇ ಬೇಡವೆಂದು ಸುಮ್ಮನುಳಿದ ಗಳಿಗೆಯಲ್ಲಿ ರಾಜಾಜಿಯನ್ನು ಇನ್ನೊಮ್ಮೆ ರಾಜಕೀಯ ರಂಗಕ್ಕೆ ಎಳೆದು ತಂದುದು ಅಕೃತ್ರಿಮ ದೇಶಪ್ರೇಮ—ರಾಷ್ಟ್ರ ಕಲ್ಯಾಣದ ಸದಿಚ್ಛೆಯಿಂದಲೇ. ರಾಜಾಜಿಯವರು ಮದ್ರಾಸದಲ್ಲಿ ಕಾಂಗ್ರೆಸ ಪಕ್ಷವು ಪ್ರಬಲವಾಗಿದ್ದಾಗ್ಯೂ ಶಾಸನ ಸಭೆಯಲ್ಲಿ ಬಹುಮತ ಪಡೆಯದ ಕಾರಣದಿಂದ ಹೊಯ್ದಾಡುತ್ತಿದ್ದುದನ್ನು ಕಂಡು ಆಡಳಿತದ ನಾಯಕತನವನ್ನು ವಹಿಸಲು ಒಪ್ಪಿದರು. ಹೀಗೆ ಒಪ್ಪಿದರೆಂದ ಮಾತ್ರಕ್ಕೆ ಅದು ಸುಲಭದ ಕೆಲಸವಾಗಿತ್ತೆಂದು ತಿಳಿಯುವುದು ತಪ್ಪು. ಕಾಂಗ್ರೆಸ ಸದಸ್ಯರ ಒತ್ತಾಯ ಹಾಗೂ ವಿನಂತಿಗಳಿಗೆ ಜಯ ದೊರೆಯಿತೆಂದು ಹೇಳುವುದಕ್ಕಿಂತ— ಪ್ರಜಾಪ್ರಭುತ್ವದ ತತ್ವಕ್ಕೆ ನಿಷ್ಠರೂ ರಾಷ್ಟ್ರನಿಷ್ಠರೂ ಆದ ನೆಹರೂರ ಗೆಳೆತನದ ಆದೇಶವನ್ನು ಮೀರಲಾರದೆಯೇ ರಾಜಾಜಿ ಮದರಾಸು ಸರಕಾರದ ಅಗ್ರ ಸ್ಥಾನವನ್ನು ವಹಿಸಿಕೊಳ್ಳಲು ಒಡಂಬಟ್ಟರೆನ್ನುವುದು ಹೆಚ್ಚು ತರ್ಕಶುದ್ಧವಾದ ನಿಲುವು.

ಒಮ್ಮೆ ಮುಖ್ಯ ಮಂತ್ರಿಯಾಗಿ, ಕಾಂಗ್ರೆಸ್ ಮಂತ್ರಿ ಮಂಡಳವನ್ನು ರಚಿಸಿದ ಬಳಿಕ ರಾಜಗೋಪಾಲಾಚಾರಿಯವರು ಸರಕಾರದ ಆಡಳಿತ ಯಂತ್ರದ ಮೇಲೆ ಬಲವಾದ ಕಣ್ಣಿಟ್ಟರು. ಅವರ ಸ್ವಭಾವವೇ ಅದು. ಯಾರ ಹಂಗು ಬಿನ್ನಹಗಳೂ ಇಲ್ಲದ ಮನೋಭಾವ ರಾಜಾಜಿಯವರದಾದುದರಿಂದ, ಆಡಳಿತ ಯಂತ್ರದಲ್ಲಿ ಯಾವುದೇ ಬಗೆಯ ಮರೆ, ಮೋಸ, ಕಸಬು, ವಂಚನೆಗಳು ಉಳಿಯದಂತೆ, ನೋಡುವುದಕ್ಕೆ ರಾಜಾಜಿ ಹಿಂಜರಿಯುವುದಿಲ್ಲ. ಒಂದೊಂದರೆ ವರ್ಷಗಳಿಗಿಂ ಹಿಂದೆ, ಅವರು ಮದ್ರಾಸು ಶಾಸನ ಸಭಾ ಕಾಂಗ್ರೆಸ ಪಕ್ಷದ ಮುಖಂಡತ್ವ ವಹಿಸಿದ ಗಳಿಗೆಯಲ್ಲಿ ಕಾಂಗ್ರೆಸಿಗರನ್ನು ಉದ್ದೇಶಿಸಿ ಮಾತನಾಡುತ್ತಾ "ಜನತೆಗೆ ಈಗ ಏನು ಬೇಕೆನ್ನುವುದು ನನಗೆ ಗೊತ್ತಿದೆ. ನನ್ನ ಅನುಭವದಿಂದ ಹೇಳುವುದಾದರೆ ಜನರಿಗೆ ಹೊಸ ಮತ್ತು ಹೊಳೆಸಿನ ಘೋಷಣೆ ಬೇಕಾಗಿರುವುದಿಲ್ಲ. ನಿಮ್ಮ ಬುದ್ಧಿಕೌಶಲವೂ ಅವರಿಗೆ ಬೇಡ. ಅವರಿಗೆ ಬೇಕಾದುದು ಉತ್ತಮ ಆಡಳಿತ. ಸರಕಾರೀ ಕಛೇರಿಗಳಲ್ಲಿಯ ಕೆಲಸ ಸುಸೂತ್ರವಾಗಿ ನಡೆದು, ತಳ್ಳಿಹಾಕುವಿಕೆ, ದಾಕ್ಷಿಣ್ಯದ ಜಯವಿಲ್ಲದಂತಾಗಬೇಕು" ಎಂ

ದೆಹಲಿಯಲ್ಲಿ ಈ ವಾರ (ದಿನಾಂಕ ೫ ಮತ್ತು ೬) ಸೇರುವ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಯು ಇದನ್ನು ಚರ್ಚಿಸುವುದು ನಿಶ್ಚಯ. ತಮಿಳುನಾಡು ಕಾಂಗ್ರೆಸಿನ ಅಧ್ಯಕ್ಷ ಶ್ರೀ ಕಾಮರಾಜ ನಾಡರರು ಹೊಸದೆಹಲಿಯ ಈ ಸಭೆಗೆ ಹೋಗಲಿರುವರಲ್ಲದೆ ಸ್ವತಃ ರಾಜಗೋಪಾಲಾಚಾರಿಯವರು ಈ ಸಭೆಯಲ್ಲಿ ಉಪಸ್ಥಿತರಿದ್ದು, ಮದ್ರಾಸಿನ ರಾಜಕೀಯ ಕ್ಷೇತ್ರದಲ್ಲಿ ವಿದ್ಯಮಾನವಿರುವ ಪರಿಸ್ಥಿತಿಯ ಕುರಿತು ತಮ್ಮ ಅಭಿಪ್ರಾಯವನ್ನು ಹೊರಗೆಡಹುವರೆಂದು ತಿಳಿಯುತ್ತದೆ.

ರಾಜಾಜಿಯವರ ರಾಜೀನಾಮೆ

ದು ಅಭಿಪ್ರಾಯಪಟ್ಟರು. ಈ ಅಭಿಪ್ರಾಯ ಸರಕಾರೀ ಯಂತ್ರದ ನಿತ್ಯ ವ್ಯವಹಾರದಲ್ಲಿ ವ್ಯಕ್ತಗೊಳ್ಳುವಂತೆ ಸ್ವಚ್ಛ ನಿಯಮದ ನಿಯಂತ್ರಣವಿಟ್ಟುಕೊಳ್ಳಲು ರಾಜಾಜಿ ನೋಡಿದರು.

ಮದ್ರಾಸು ಶಾಸನಸಭೆಯ ಕಾಂಗ್ರೆಸ ಸದಸ್ಯರಲ್ಲಿ ಸದ್ಯ ಎರಡು ಒಳಪಂಗಡಗಳು ತಲೆ ಎತ್ತಿಕೊಂಡಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಮದ್ರಾಸಿನಲ್ಲಿ ಕಮ್ಯೂನಿಸ್ಟರ ಪ್ರಾಬಲ್ಯವಿದ್ದ ಕಾಲಕ್ಕೆ ಒಳಜಗಳದಿಂದ ಹಾಗೂ ಯಾವುದೇ ವಿರೋಧವನ್ನೂ ಬದಿಗೊತ್ತಿಯೂ ಲಕ್ಷಿಸದೆ ಸರಕಾರದ ಶಕಟವನ್ನು ಮುನ್ನಡೆಸಿ ಒಳ್ಳೆ ಮಹಾರಥರೆಂದು ರಾಜಾಜಿ ಬೀಗಿದರು. ಈಗ ಅವರ ಧುರೀಣತ್ವ ಅನಾವಶ್ಯಕವೆಂಬ ಅಭಿಪ್ರಾಯಪಡುವ ಸದಸ್ಯರು ಈಚೆಗೆ ರಾಜಾಜಿಯ ವಿರುದ್ಧ ನೆಹರೂ ವರೆಗೆ ದೂರು ಹೊಂದೊಯ್ಯುವಲ್ಲಿದ ಕೆಲಸದಲ್ಲಿ ಪ್ರವೃತ್ತರಾದರು. ಮದ್ರಾಸಿನ ಶಾಸನ ಸಭೆ ಇದೇ ಡಿಸೆಂಬರ ಹತ್ತರಂದು ಅಧಿವೇಶನದಲ್ಲಿ ಸೇರಲಿದೆ. ಆಗ ರಾಜಾಜಿಯ ಧುರೀಣತ್ವದ ಮೇಲೆ ಅತೃಪ್ತಿ ಸೂಚಿಸಿದ ವರ್ಗಗಳು ರಾಜಾಜಿ ಸರಕಾರವನ್ನು ಬುಡಮೇಲು ಮಾಡಹೊರಡುವವರೆಂದು ಎಲ್ಲರ ನಿರೀಕ್ಷೆ. ರಾಜಾಜಿಯ ವಿರೋಧಿ ಗುಂಪು ೯೦ ಸದಸ್ಯರನ್ನು ಪಡೆದುಕೊಂಡಿದೆಯೆಂದು ವದಂತಿ ಇರುವುದರಿಂದ ರಾಜಾಜಿಯು ಮೇಲೆ ಅವಿಶ್ವಾಸದ ಠರಾವು ಮಂಡಿಸಲ್ಪಟ್ಟರೆ ಅದು ಸ್ವೀಕಾರವಾದರೂ ಆದೀತು. ಇದು ಕಾಂಗ್ರೆಸ್ ಪಕ್ಷದ ಶಿಸ್ತು ಮತ್ತು ಒಗ್ಗಟ್ಟಿಗೆ ಸಂಬಂಧಿಸಿದ ಪ್ರಶ್ನೆಯಾಗುವುದರಿಂದ ಹೊಸ

ಇನ್ನು ಹತ್ತು ಹನ್ನೆರಡು ದಿನಗಳಲ್ಲಿ ಇದೆಲ್ಲವೂ ಇತ್ಯರ್ಥವಾಗಲಿಕ್ಕೆ ಇದೆಯಾಗಿ— ನಾವು ರಾಜಾಜಿಯ ರಾಜಕೀಯವನ್ನು ವಿಮರ್ಶಾತ್ಮಕವಾದ ದೃಷ್ಟಿಯಿಂದ ನೋಡಿ, ಸಾಧಕ ಬಾಧಕಾಂಶಗಳನ್ನು ಈಗಲೇ ಗ್ರಹಿಸಿಕೊಳ್ಳುವುದು ಲೇಸು. ಮೊದಲೇ ಸೂಚಿಸಿದಂತೆ ರಾಜಾಜಿಯ ಆಡಳಿತಕಾಲದಲ್ಲಿ ಯಾವುದೇ ಶಾಸನಸಭಾ ಸದಸ್ಯನಿಗೂ ಸ್ಥಳೀಯ ಸರಕಾರೀ ಅಧಿಕಾರಿಗಳ ಮೇಲೆ ವರ್ಚಸ್ಸನ್ನು ಬೀರುವುದಕ್ಕೆ ಅವಕಾಶ ದೊರೆತಿಲ್ಲ. ನ್ಯಾಯಾಂಗವು ಕಾರ್ಯಾಂಗದಿಂದ ಪ್ರತ್ಯೇಕಿಸಲ್ಪಟ್ಟಾಗ ಇಂಟಾಗುವ ಉತ್ತಮ ಪರಿಣಾಮವನ್ನೇ ರಾಜಾಜಿಯವರು ಶಾಸನಾಂಗದಿಂದ ಕಾರ್ಯಾಂಗಕ್ಕಾಗುವ ತೊಂದರೆ ಮತ್ತು ಕಿರುಕುಳಗಳನ್ನು ನಿವಾರಿಸುವುದರ ಮೂಲಕ ಉಂಟುಮಾಡಿರುವರು. ಹಿಂದಿನ ಮದ್ರಾಸು ಮಂತ್ರಿಮಂಡಳಗಳು ಹೀಗೆ ಬಿಗುಮಾನದಿಂದ ವರ್ತಿಸಿರಲಿಲ್ಲ, ಮತ್ತು ಹಾಗಾದುದರಿಂದಲೇ ಸ್ಥಳೀಯ ಸರಕಾರೀ ಅಧಿಕಾರಿಗಳು ಶಾಸನಸಭಾ ಸದಸ್ಯರ ಬೆರಳ ತುದಿಯ ಮೇಲೆ ಕುಣಿಯುವಂತಹ ಭೀಕರ ಪರಿಸ್ಥಿತಿಯು ಜನನವಾಯಿತು. ತಮ್ಮ ವೈಯಕ್ತಿಕ ಹಾಗೂ ಸ್ವಾರ್ಥಪ್ರೇರಿತ ಆಶೆ ಆಕಾಂಕ್ಷೆಗಳನ್ನು ಈಡೇರಿಸುವುದಕ್ಕೆ ಆಡಳಿತ ಯಂತ್ರದಲ್ಲಿ ಆಸ್ಪದವಿಲ್ಲೆಂಬುದೇ ರಾಜಾಜಿಯನ್ನು ವಿರೋಧಿಸುವ ಶಾಸನಸಭಾ ಸದಸ್ಯರ ಅತೃಪ್ತಿಯ ಮೂಲ. ರಾಜಾಜಿ ಇಂಥ ಅನಧಿಕಾರ ಪ್ರವೇಶಕ್ಕೆ ಸ್ವಲ್ಪವೂ ಎಡೆಗೊಡುತ್ತಿರಲಿಲ್ಲವಾದುದರಿಂದಲೇ ಆಡಳಿತ ಯಂತ್ರದಲ್ಲಿ ಕಾರ್ಯಕ್ಷಮತೆ ಸಾಧಿಸಲ್ಪಟ್ಟಿದೆ ಎನ್ನುವುದೂ ಸತ್ಯ.

ನೈತಿಕ ಮಟ್ಟವನ್ನು ಉನ್ನತವಾಗಿಟ್ಟುಕೊಳ್ಳುವುದರ ಆವಶ್ಯಕತೆಯನ್ನೂ ಮಹತ್ವವನ್ನೂ ರಾಜಾಜಿಯವರಷ್ಟು ಹೆಚ್ಚಾಗಿ ತಿಳಿದುಕೊಂಡವರು ಕಡಿಮೆ. ಹಿಂದಿನ ಮಂತ್ರಿಮಂಡಳಗಳ ಸದಸ್ಯರಲ್ಲಿಯೇ ಕೆಲವರ ಮೇಲೆ ಭಯಂಕರವಾದ ಆರೋಪಗಳು ಹೊರಿಸಲ್ಪಟ್ಟಿದ್ದವು. ಆದರೆ ರಾಜಾಜಿಯ ನಾಯಕತನದ ವಿರೋಧಿಗಳಾದ ಶಾಸನಸಭಾಸದಸ್ಯರು ಲಂಚಗುಳಿತನ ಮುಂತಾದ ಯಾವುದೇ ಕಳಂಕವನ್ನು ರಾಜಾಜಿಯ ಮೇಲಾಗಲೀ ಅವರ ಮಂತ್ರಿ ಮಂಡಳದ ಸದಸ್ಯರ ವಿಷಯದಲ್ಲಾಗಲೀ ಮಾಡಿರುವುದಿಲ್ಲವೆಂಬುದನ್ನು ಗಮನಿಸುವುದೊಳಿತು. ರಾಜಾಜಿಯ ಧೋರಣೆಯ ವಿಷಯದಲ್ಲೇ ಈ ಸದಸ್ಯರಿಗೆ ಅಸಮಾಧಾನ— ತಮ್ಮನ್ನು ರಾಜಾಜಿ ಕೇಳುವುದಿಲ್ಲ, ತಮ್ಮ ಸಲಹೆ ಸೂಚನೆಗಳನ್ನು ಒಯ್ಯುವುದಿಲ್ಲ ಅದವಾ ಲಕ್ಷಿಸುವುದಿಲ್ಲವೆಂಬುದೇ ಅವರ ದೂರಿನ ತಿರುಳು. ಈ ದೃಷ್ಟಿಯಿಂದ ರಾಜಾಜಿ ಪ್ರಜಾಪ್ರಭುತ್ವ ತತ್ವವನ್ನು ವಿರೋಧಿಸುವವರೇ ಆಗಿನಿಂತು ಸರ್ವಾಧಿಕಾರಿಯಾಗಿಯೇ ವರ್ತಿಸುವರೆಂದು ಈ ಆಕ್ಷೇಪಕರ ಅಭಿಪ್ರಾಯ. ರಾಜಾಜಿಯನ್ನು ಒಲಿಸಬಹುದೆಂದು, ಅವರನ್ನು ತಮ್ಮ ಇಚ್ಛೆಯಂತೆ ಕುಣಿಸಬಹುದೆಂದು ಇವರಿಗಿದ್ದ ಭ್ರಮೆಗೆ ಒಡೆವಿಲ್ಲದಂತೆ ಆಗಿರುತ್ತದೆ. ಪರಿಣಾಮವಾಗಿ 'ರಾಜಾಜಿಗೆ ಮುದಿ ಭ್ರಾಂತಿ ಹಿಡಿದಿದೆ" ಎನ್ನುವವರೆಗೂ ಅತೃಪ್ತರ ನಾಲಿಗೆ ಚಾಚುತ್ತವೆ. ಆದರೆ ರಾಜಾಜಿ ಜನತಾ ಸೇವೆ ಮಾಡಿದ ಆ ಸುದೀರ್ಘ ... ಪರಿಶೀಲಿಸಿದರೆ, ಅವರು ಜೀವನವನ್ನು ಒಂದು ವಿಶಿಷ್ಟ ದೃಷ್ಟಿಯಿಂದ ನೋಡಿ ಅದರ ಮೌಲ್ಯ ಮಾಪನಮಾಡಿರುವರೆಂದೂ ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾದ ತತ್ವವೊಂದನ್ನು ಅವರು ಕಂಡುಕೊಂಡಿರುವರೆಂದೂ ಅದರ ವಿರುದ್ಧ ಲೋಕದ ಜನವೇನು ಆಕ್ಷೇಪವೆತ್ತಿದರೂ ಅವರದಕ್ಕೆ ಕಿವಿಗೊಡುವುದಿಲ್ಲೆಂದೂ ಸ್ಪಷ್ಟಗೊಳ್ಳುತ್ತದೆ.

ಇದರ ಫಲಿತಾಂಶವೇ ಅವರಲ್ಲಿ ತುಂಬಿರುವ ಅಹಂಕಾರವೆಂದು ನಮಗೆ ತೋರಬಹುದು—ಮಹಾ ವ್ಯಕ್ತಿಗಳಲ್ಲಿ ಸಹಜವಾಗಿಯೇ ಇಂಥ ಅಹಂಕಾರ ಜನಿಸುತ್ತದೆ. ಮತ್ತು ಇದರ ಬಲದಿಂದಲೇ ಜನರು ಅವರನ್ನು ಗೌರವದಿಂದ ಕಂಡು ಆದರಿಸುವರೆಂದು ಹೇಳಬಹುದು. ಈ ಅಹಂಕಾರ ಸಾತ್ವಿಕವಾಗಿರಬೇಕೆಂಬುದೇ ಒಂದು ನಿಯಮ ಮತ್ತು ರಾಜಾಜಿ ಇದಕ್ಕೆ ಎಂದೂ ಅಪವಾದವಾಗಿರುವುದಿಲ್ಲ. ಅವರ ಕರ್ತೃತ್ವ

[ಮುಂದೆ ಪುಟ ನಾಲ್ಕರಿಂ]

ಬೇಸಾಯದ ಹಿಡುವಳಿಯ ಪರಮಾವಧಿ ಮಿತಿ ನಿರ್ಣಯ

ಧೋರಣೆ ಹೊಯ್ದಾಡುವಾಗ ಅವಸರದ ಕಾಯಿದೇ ಕ್ರಮ ಅನಿಷ್ಟ ಪರಿಣಾಮವನ್ನೆ ತಂದೀತು

ಪ್ರಧಾನಿ ನೆಹರೂರವರು ಈಚೆಗೆ ಪತ್ರಿಕಾ ಗೋಷ್ಠಿಯೊಂದರಲ್ಲಿ ಮಾತನಾಡುವಾಗ ಭೂಸುಧಾರಣೆಯ ಕುರಿತು, ಅದರಲ್ಲೂ ಸಾಮಾನ್ಯ ಹಿಡುವಳಿಯ ಪರಮಾವಧಿ ಮಿತಿಯ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂಬುದನ್ನು ವಿವರಿಸಿದರು. ಯೋಜನಾ ಆಯೋಗದವರು ಹಿಡುವಳಿಯ ಪರಮಾವಧಿ ಮಿತಿಯನ್ನು ನಿರ್ಣಯಿಸುವುದರಲ್ಲಿ ಹಾಕಿಕೊಟ್ಟ ತತ್ವಗಳಲ್ಲಿ ಪರಿವರ್ತನೆಯಾಗುವುದಿಲ್ಲೆಂದೂ ಸಾಧ್ಯವಿದ್ದಲ್ಲೆಲ್ಲ ಮಿತಿಯನ್ನು ನಿರ್ಮಿಸಿ ಹೆಚ್ಚಿನ ಭೂಮಿಯನ್ನು ಹಂಚಿ ಕೊಡುವುದೇ ತಮ್ಮ ಸಾಮಾನ್ಯ ಧೋರಣೆಯೆಂದೂ ಅವರು ಹೇಳಿದರು. ಇದನ್ನು ಜ್ಯಾರಿಗೆ ತರುವ ಕೆಲಸವನ್ನು ಆಯಾ ರಾಜ್ಯ ಸರಕಾರಗಳ ವಶಕ್ಕೆ ಬಿಟ್ಟುಕೊಟ್ಟಿರುವುದಾಗಿಯೂ ನೆಹರೂರವರು ತಿಳಿಸಿದರು. ಆದರೆ ಅವರೇ ಮತ್ತೊಂದು ಕ್ಷಣದಲ್ಲಿ ಪಂಜಾಬೀ ನಿರಾಶ್ರಿತನೊಬ್ಬನು ತನ್ನ ೬೦ ಎಕ್ರೆ ವಿಸ್ತೀರ್ಣದ ಹೊಲದಲ್ಲಿ ಪ್ರತಿ ಎಕರೆಗೆ ೪೦ ಮಣದಷ್ಟು ಗೋಧಿಯನ್ನು ಬೆಳೆಸಿರುವನೆಂದೂ, ಅದು ತುಂಬ ಚಲೋದಾದ ಕೆಲಸವಾಗಿರುತ್ತದೆಂದೂ ಹೇಳಿ, ಭೂಮಿಯ ಪರಮಾವಧಿ ಮಿತಿಯ ನಿರ್ಣಯವು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಆತಂಕವಾಗ ಬಾರದೆಂದೂ ಅಧಿಕ ಉತ್ಪಾದನೆಗೆ ಪ್ರೋತ್ಸಾಹ ಕೊಡುವುದೇ ತಮ್ಮ ಧ್ಯೇಯವಾಗಿರುತ್ತದೆಂದೂ ನೆಹರೂರವರು ನುಡಿದರು.

ಡಾ. ದೇಶಮುಖರ ಹೇಳಿಕೆ

ಈ ಅಭಿಪ್ರಾಯಗಳು ನಮ್ಮನ್ನು ಎಲ್ಲಿಗೆ ಒಯ್ದು ಮುಟ್ಟಿಸುತ್ತವೆಯೆಂದು ಹೇಳುವುದು ಕಷ್ಟ. ಉತ್ಪಾದನೆಯನ್ನು ಹೆಚ್ಚಿಸ ಬೇಕು—ಅದೇ ಕಾಲಕ್ಕೆ ಹಿಡುವಳಿಯ ಪರಮಾವಧಿ ಮಿತಿಯನ್ನೂ ನಿರ್ಣಯಿಸಬೇಕು ಎಂಬುದೇ ಸರಕಾರದ ಧೋರಣೆವೆಂದು ತಿಳಿದರೂ, ಇವೆರಡು ಅಂಶಗಳಲ್ಲಿ ನಾವು ಏಕಸೂತ್ರತೆಯನ್ನು ಕಾಣುವುದಿಲ್ಲ. ಅದರ ಮೇಲೆ ಸಹಕಾರೀ ತತ್ವದ ಮೇಲೆ ಹೊಲ ನಾಗುವಳಿಯಾಗಬೇಕೆಂದೂ ಸಾಧ್ಯವಿದ್ದರೆ ಯಾಂತ್ರೀಕರಣವನ್ನು ಸಹ ಸಾಧಿಸಬೇಕೆಂದೂ ಹೇಳುವ ಜನರ ಮಾತಿಗೆ ಕಿವಿಗೊಟ್ಟರೆ ನಮ್ಮಲ್ಲಿ ಹಿಡುವಳಿಯ ಪರಮಾವಧಿ ಮಿತಿಯನ್ನು ನಿರ್ಮಿಸಲು ಯತ್ನಿಸುವುದು ವ್ಯರ್ಥದ ಕೆಲಸವೆಂದೇ ತೋರುತ್ತದೆ. ಪ್ರಧಾನಿಗಳು ರಾಜ್ಯ ಸರಕಾರಗಳ ವಶಕ್ಕೆ ಈ ವಿಷಯದಲ್ಲಿ ತಕ್ಕ ಕ್ರಮಗಳನ್ನು ಜ್ಯಾರಿಗೆ ತರುವ ಕೆಲಸವನ್ನು ಬಿಟ್ಟುಕೊಡಲಾಗಿದೆಯೆಂದು ಹೇಳಿದರೂ, ರಾಜ್ಯ ಸರಕಾರಗಳು ಮನಬಂದಂತೆ ವರ್ತಿಸಲು ಕೇಂದ್ರ ಬಿಡುವುದಿಲ್ಲ, ಘಟನೆಯಂತೆ ಭೂಸುಧಾರಣಾ ವಿಷಯವು ರಾಜ್ಯ ಸರಕಾರಗಳ ಪಾಲಿಗೆ ಬಂದಿದ್ದರೂ ಯೋಜನಾ ಆಯೋಗವೂ ರಾಷ್ಟ್ರೀಯ ಅಭಿವೃದ್ಧಿ ಮಂಡಳವೂ ಕೇಂದ್ರ ಸರಕಾರವೂ ಒಟ್ಟಗೇರಿ—ಸಾಮಾನ್ಯ ತತ್ವವೊಂದನ್ನು ಹೊಂದಿಕೊಂಡೇ ಭಾರತದಲ್ಲೆಲ್ಲ ಭೂಸುಧಾರಣಾ ಕಾಯಿದೆಗಳಾಗಬೇಕೆಂದು ಅಭಿಪ್ರಾಯಕ್ಕೆ ಬಂದಿವೆ. ಭೂಸುಧಾರಣಾ ಕಾಯಿದೆಗಳಲ್ಲಿ ಸಾಮಾನ್ಯ ಹಿಡುವಳಿಯ ಪರಮಾವಧಿ ಪ್ರಮಾಣವನ್ನು ಗೊತ್ತುಪಡಿಸುವುದು ದೊಡ್ಡ ಸಮಸ್ಯೆಯಾಗಿ ಬಿಟ್ಟಿದೆ. ಕೇಂದ್ರದ ಕೃಷಿ ಮಂತ್ರಿ ಡಾ. ಪಂಜಾಬರಾವ ದೇಶಮುಖರು ಕೆಲ ಸಮಯದ ಹಿಂದೆ ಈ ವಿಷಯದಲ್ಲಿ ಅವಸರದ ನಿರ್ಣಯಗಳು ಅನಿಷ್ಟಪ್ರದವೆಂದೂ ಬಹಳ ಜಾಗರೂಕತೆಯಿಂದ ನಾವು ಈ ವಿಷಯದಲ್ಲಿ ಮುನ್ನಡಿ ಇಡುವುದು ಅಗತ್ಯವೆಂದೂ ಹೇಳಿದ್ದರು. ಪ್ರಾಯಶಃ ಇವರ ಅಭಿಪ್ರಾಯ ಹಾಗೂ ಒತ್ತಾಯದ ಬಲದಿಂದಲೇ ಇರಬಹುದು—ದಿಲ್ಲಿಯ ರಾಜ್ಯ ಸರಕಾರವು ಭೂಸುಧಾರಣಾ ಕಾಯಿದೆ ಮಾಡಲು ನೋಡಿದಾಗ, ಅದರಲ್ಲಿದ್ದ ಪರಮಾವಧಿ ಮಿತಿ ನಿರ್ಧಾರದ ಅಂಶಗಳು ವಿರೋಧೀ ಪಕ್ಷದ ಆಕ್ಷೇಪವನ್ನೂ ಗಮನಿಸದೆ ಹಿಂದೆಗೆದುಕೊಳ್ಳಲ್ಪಟ್ಟವು. ಹೈದರಾಬಾದು ರಾಜ್ಯದಲ್ಲಿ ಸರಕಾರದ ಕಡೆಯಿಂದ ತರಲಾದ ಒಕ್ಕಲುತನ ಕಾಯಿದೆಯಲ್ಲಿ ಇದೇ ವಿಷಯದ ಮೇಲೆ ಕಾಂಗ್ರೆಸ್ ಪಕ್ಷದ ಸದಸ್ಯರು ಪರಸ್ಪರ ಭಿನ್ನಾಭಿಪ್ರಾಯಕ್ಕೆ ಬಂದಿರುವುದನ್ನೂ ನಾವು ಗಮನಿಸುವುದೊಳಿತು.

ಹೊಯ್ದಾಡುವ ಅಭಿಪ್ರಾಯ

ಭಾರತದಲ್ಲಿ ಎಲ್ಲ ಕಡೆ ಒಂದೇ ಬಗೆಯ ಭೂಸುಧಾರಣಾ ಕಾಯಿದೆಯನ್ನು ಜ್ಯಾರಿಗೆ ತರುವಂತೆ ಇದೆಯೆ ಎಂಬುದನ್ನೂ ನಾವು ವಿಚಾರಿಸಬೇಕಾಗುತ್ತದೆ. ಪ್ರಧಾನಿ ನೆಹರೂರವರು ಈ ವಿಷಯದಲ್ಲಿ ಅಭಿಪ್ರಾಯ ವ್ಯಕ್ತಗೊಳಿಸುತ್ತಾ, ಹೀಗೆ ಆಗಲಾರದೆಂದೂ ಪ್ರತಿಯೊಂದೂ ರಾಜ್ಯದಲ್ಲಿ ಹಿಡುವಳಿಯ ಪರಮಾವಧಿ ಮಿತಿ ಹಾಗೂ ಅದಕ್ಕೆ ಸಂಬಂಧಿಸಿದ ಕಾಯಿದೆಗಳನ್ನು ಜ್ಯಾರಿಗೆ ತರುವ ರೀತಿ -- ಇವುಗಳಲ್ಲಿ ವ್ಯತ್ಯಾಸ ಅನಿವಾರ್ಯವೆಂದೂ ಹೇಳಿದರು. ಈ ಮಾತು ಸಂಪೂರ್ಣ ನಿಜ. ಭಾರತವಿರಲಿ—ಮದ್ರಾಸದಂಥ ಒಂದು ರಾಜ್ಯದೊಳಗೆಯೇ ಒಂದೇ ಬಗೆಯ ಭೂಸುಧಾರಣಾ ಕಾಯಿದೆಯನ್ನು ಜ್ಯಾರಿಗೆ ತರಲಾಗುವುದು ಸಂಶಯಾಸ್ಪದ. ತಂಜಾವೂರಿನ ಒಕ್ಕಲುಹಿತ ಮಸೂದೆ ದಕ್ಷಿಣ ಕನ್ನಡದ ಪರಿಸ್ಥಿತಿಗೆ ಒಗ್ಗುವುದಿಲ್ಲ. ಮಲಬಾರಿನ ಭೂ ಸಮಸ್ಯೆಯ ರೂಪ ಚೆಂಗಲ್ಪೇಟೆ ಜಿಲ್ಲೆಯದಕ್ಕಿಂತ ತೀರಾ ಬೇರೆಯಾಗಿರುತ್ತದೆ. ಹೀಗೆ ಆಯಾ ಪ್ರದೇಶದ ಮತ್ತು ವಿಶಿಷ್ಟ ಪರಿಸ್ಥಿತಿಗಳ ಕಲ್ಪನೆಯನ್ನು ಮಾಡಿಕೊಂಡೇ ನಾವು ಭೂಸುಧಾರಣಾ ಕಾಯಿದೆಗಳನ್ನು ಜ್ಯಾರಿಗೆ ತರಬೇಕಾದ ಪ್ರಮೇಯವನ್ನು ಕಾಣುತ್ತೇವೆ. ಇವಕ್ಕೂ ಹೆಚ್ಚಿನ ಇನ್ನೊಂದು ಆತಂಕವೆಂದರೆ ಭೂಸುಧಾರಣಾ ಕಾಯಿದೆಗಳನ್ನು ಮಾಡುವುದಕ್ಕೂ ಸಾಮಾನ್ಯ ಹಿಡುವಳಿಯ ಪರಮಾವಧಿ ಮಿತಿಯನ್ನು ನಿರ್ಣಯಿಸುವುದಕ್ಕೂ ನಮ್ಮಲ್ಲಿ ಸಾಕಷ್ಟು ಮಾಹಿತಿಗಳ ಸಂಗ್ರಹವಿರುತ್ತದೆಯೆ ? ನೆಹರೂರವರು ಈ ವಿಷಯದಲ್ಲಿ ನಾವು ಭಾಗ್ಯಹೀನರೆಂದು ನುಡಿದರು. ಕೃಷಿ ಸಂಬಂಧದ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಸರಕಾರ ಉದ್ದೇಶಿಸಿದೆಯೆಂದವರು ಪ್ರಕಟಪಡಿಸಿದರು- ಆದರೆ ಅದೇ ಕಾಲಕ್ಕೆ, ಹಿಡುವಳಿಯ ಪರಮಾವಧಿ ಮಿತಿಯ ನಿರ್ಣಯ ಈ ಮಾಹಿತಿಗಳ ಸಂಗ್ರಹವನ್ನು ಕಾಯಲಾರದೆಂದೂ ಹೇಳಿದರು. ಅಂದರೆ—ಆ ಮಾಹಿತಿಗಳು ಮುಂದೆ ಯಾವುದೇ ಚಿತ್ರವನ್ನು ಕೊಡಲಿ, ಪರಮಾವಧಿ ಮಿತಿ ನಿರ್ಣಯದ ಕೆಲಸವು ಈಗಲೇ ನೆರವೇರುತ್ತದೆ! ಇದು ಕೃಷಿ ಮಂತ್ರಿಗಳ ಹೇಳಿಕೆಗೆ ವಿರುದ್ಧವಿರುತ್ತದೆ— ಮತ್ತು ಇವಕ್ಕೋಸ್ಕರವೇ, ನೆಹರೂರವರು ಭೂಸುಧಾರಣಾ ವಿಷಯದಲ್ಲಿ ಸ್ಪಷ್ಟ, ನಿರ್ದಿಷ್ಟ ಹಾಗೂ ದೃಢವಾದ ಧೋರಣೆಯನ್ನು ವಹಿಸುವ ಬದಲು ಹೊಯ್ದಾಡುತ್ತಿರುವ ಮನೋಭಾವವನ್ನೆ ವ್ಯಕ್ತಗೊಳಿಸುವರೆಂದು ಪತ್ರಿಕೆಗಳೂ ಮಹನೀಯರೂ ಟೀಕಿಸಿರುವರು.

[೧೧ನೇ ಪುಟ ನೋಡಿರಿ.]

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 46/53.

ಜಿ. ಅನಂತ ನಾರಾಯಣ ರಾವ್, ಪದ್ಮನಾಭಯ್ಯನವರ ಮಗ, ಉಡುಪಿ ತಾಲ್ಲೂಕು ಮಟ್ಟು ಗ್ರಾಮದಲ್ಲಿರುವವ— ಅರ್ಜಿದಾರ.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರನ ತಂದೆ ತಾ. 5-11-50ಲ್ಲು ಮೃತಪಟ್ಟು M. ಪದ್ಮನಾಭಯ್ಯಗೆ ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಯಿಂದ್ರ ಏಜನ್ಸಿ ಬಾಬ್ತು ಸಿಕ್ಕತಕ್ಕ ಕಮಿಶನ್ ಐವೇಜು ರೂ. 150/-ನ್ನು ವಸೂಲು ಪಡಿಯುವರೆ ಅರ್ಜಿದಾರನೇ ಸಂಪೂರ್ಣ ಹಕ್ಕುದಾರನೆಂತಲೂ ಅದನ್ನು ವಸೂಲುಪಡಿಯುವರೆ ಅರ್ಜಿದಾರನ ಹೆಸರಿಗೆ ಸಕ್ಸೆಶ್ಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಕೇಳಿ ಮಾಡಿಕೊಂಡ ಮೇಲ್ಕಂಡ ಅರ್ಜಿಯನ್ನು ತಾರೀಕು 15-12-53ಕ್ಕೆ ಯಿಟ್ಟಿರುತ್ತದೆ. ಆಕ್ಷೇಪ ಹೇಳಲುಳ್ಳವರು ಸದ್ರಿ ತಾ. 15-12-53ನೇ ದಿವ್ಸ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. V. Acharya
Vakil for Petitioner.

ಉಡುಪಿ: ತಾ. 26-11-53.

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31-12-1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3-8-0
ಸಣ್ಣ ಬಾಟ್ಲಿಗೆ ರೂ. 2-0-0

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಮದ್ರಾಸಿನ ಪರಿಷ್ಕೃತ ಶಿಕ್ಷಣ ಪದ್ಧತಿಯ ಪ್ರಶಂಸೆ

ನಿರ್ದೇಶಕ ತತ್ವವನ್ನು ಪಾಲಿಸಲು ಅತ್ಯಂತ ವ್ಯವಹಾರ್ಯ ಮಾರ್ಗ

ನಮ್ಮ ಮದ್ರಾಸು ಸರಕಾರವು ೧೯೫೩ನೇ ಶಾಲಾ ವರ್ಷದಿಂದ ನಗರಸಭಾ ವಲಯದ ಹೊರಗಿನ ಎಲ್ಲ ಪ್ರಾಥಮಿಕ ಶಾಲೆಗಳಿಗೆ ಪರಿಷ್ಕೃತ ಶಿಕ್ಷಣ ಪದ್ಧತಿಯನ್ನು ಅನ್ವಯಿಸಿದಾಗ—ಅದು ರಾಷ್ಟ್ರದ ಮೇಲೆ ಕಾಲಾಂತರದಲ್ಲಿ ಮಾಡುವ ಸತ್ಪರಿಣಾಮದ ಮಹತ್ವವನ್ನು ಮನಗಂಡವರೂ ಪ್ರಶಂಸಿಸಿದವರೂ ವಿರಳ. ರಾಜಾಜಿಯವರ ಸರಕಾರದ ಮೇಲೆ ಶಾಸನ ಸಭೆಯ ಒಳಗೂ ಹೊರಗಿನ ಶೈಕ್ಷಣಿಕ ಕ್ಷೇತ್ರದಲ್ಲೂ ಸುರಿದ ಟೀಕಾವರ್ಷ ಎಂಥ ಧೈರ್ಯವನ್ನೂ ಹೆಪ್ಪುಗಟ್ಟಿಸುವಂತೆ ಇದ್ದಿತು. ಅಂಥ ಗಳಿಗೆಯಲ್ಲೂ ರಾಜಾಜಿ ದೃಢನಿಶ್ಚಯದಿಂದ ಈ ಶಿಕ್ಷಣ ಪದ್ಧತಿಗೆ ಅಂಟಿಕೊಂಡರು—ಶಾಸನ ಸಭೆಯಲ್ಲಿ ಎರಡು ಬಹುಮತಗಳಿಂದ ರಾಜಾಜಿಯ ಸರಕಾರಕ್ಕೆ ಈ ವಿಷಯದ ಸರಕಾರೇತರ ಗೊತ್ತುವಳಿಯು ಸೋಲು ತಂದಾಗ ಕೂಡ—ಮುಖ್ಯ ಮಂತ್ರಿಗಳು ಕಂಗೆಡಲಿಲ್ಲ. ಶಿಕ್ಷಣ ತಜ್ಞರ ಸಮಿತಿಯೊಂದಕ್ಕೆ ಈ ವಿಷಯವನ್ನು ಒಪ್ಪಿಸಿಕೊಟ್ಟು, ಅವರ ಪರಾಂಬರಿಕೆಗೆ ಇದನ್ನು ಬಿಟ್ಟು ಸಾಧಕ ಬಾಧಕಾಂಶಗಳ ತುಲನೆ ಮಾಡುವ ನ್ಯಾಯವಾದ ಮಾರ್ಗವನ್ನು ರಾಜಾಜಿ ಅನುಸರಿಸಿದರು. ಈ ಸಮಿತಿಯಲ್ಲಿ ಪ್ರೊ. ಆರ್. ವಿ. ಪರುಳೇಕರ (ಅಧ್ಯಕ್ಷ), ಡಾ. ಬಿ. ಬಿ. ದೇ, ಪ್ರೊ. ಎಂ. ಮುಜೀಬ ಮತ್ತು ಶ್ರೀ ಎಸ್. ಗೋವಿಂದರಾಜುಲು ನಾಯ್ಡು (ಸದಸ್ಯ-ಕಾರ್ಯದರ್ಶಿ)- ಇವರು ಕೆಲಸಮಾಡಿ, ಇದೀಗ ತಮ್ಮ ಅಭಿಪ್ರಾಯ ಹಾಗೂ ಶಿಫಾರಸುಗಳನ್ನೊಳಗೊಂಡ ವಿಸ್ತೃತವಾದ ವರದಿಯನ್ನು ಸರಕಾರಕ್ಕೆ ಒಪ್ಪಿಸಿರುವರು

ಯೋಜನೆಯ ಪ್ರಶಂಸೆ

"ನಮ್ಮ ಅಭಿಪ್ರಾಯದಂತೆ ಮದ್ರಾಸು ಸರಕಾರದ ಪ್ರಾಥಮಿಕ ಶಿಕ್ಷಣದ ಪರಿಷ್ಕೃತ ಯೋಜನೆಯು ಅತ್ಯುತ್ತಮವಾಗಿದ್ದು ಭಾರತದ ರಾಜ್ಯಾಂಗ ಘಟನೆಯ ನಿರ್ದೇಶಕ ತತ್ವವನ್ನು ಆಚರಣೆಯಲ್ಲಿ ತರಲು ಇಚ್ಛಿಸುವ ಉಳಿದ ರಾಜ್ಯ ಸರಕಾರಗಳು ಬೇಗನೇ ಆಗಲಿ, ತಡವಾಗಿಯೇ ಆಗಲಿ ಇದನ್ನು ಅನುಸರಿಸಬೇಕಾಗುವುದು" ಎಂದು ಪರುಳೇಕರ ಸಮಿತಿಯು ತನ್ನ ವರದಿಯಲ್ಲಿ ಹೇಳಿರುತ್ತದೆ. "ವಿದ್ಯಾರ್ಥಿಗಳ ಸಂಖ್ಯೆಯನ್ನು ಇಮ್ಮಡಿಗೊಳಿಸುವುದು ಈ ಯೋಜನೆಯ ಮುಖ್ಯೋದ್ದೇಶ ಆದರೆ, ಅದೊಂದೇ ಗುರಿಯಾಗಿರುವುದಿಲ್ಲ. ಶಾಲೆಯ ಹೊರಗೆ ಬಾಲಕರು ಏನು ಮಾಡುವರು ಎಂಬುದಕ್ಕೆ ಸಹ ಅಷ್ಟೇ ಮಹತ್ವ ಕೊಡಲ್ಪಟ್ಟಿದೆ. ಬಾಲಕರ ಶಾಲೇತರ ಚಟುವಟಿಕೆಗಳು ಶಿಕ್ಷಣದ ಮುಖ್ಯಾಂಗವಾಗಿರುವುವೆಂದು ಈ ಯೋಜನೆ ಪರಿಗಣಿಸಿದೆ. ಪಠ್ಯ ಪುಸ್ತಕಗಳ ಶಿಕ್ಷಣವನ್ನು ಮಾತ್ರ ಕೊಡದೆ, ವಿದ್ಯಾರ್ಥಿಗಳಿಗೆ ತಮ್ಮ ಜನಾಂಗದ ಜನಜೀವನದಲ್ಲಿ ಆಸ್ಥೆ ಹುಟ್ಟಿಸಲೂ, ಭಾಗವಹಿಸಲೂ, ಕರ್ತೃತ್ವ ಶಕ್ತಿಯನ್ನು ಬೆಳೆಸಿಕೊಳ್ಳಲೂ ಉತ್ತಮ ಅವಕಾಶ ನೀಡುವುದಕ್ಕೆ ಈ ಯೋಜನೆ ಪ್ರಯತ್ನಿಸುತ್ತಿದೆ" ಎಂದು ಸಮಿತಿಯು ಪ್ರಶಂಸಿಸಿದೆ.

"ಈ ಯೋಜನೆಯ ಮೂರು ವೈಶಿಷ್ಟ್ಯಗಳಾದ ಮೂರು ತಾಸಿನ ಶಾಲೆ, ಹೆಚ್ಚು ವಿದ್ಯಾರ್ಥಿಗಳ ಭರತಿ ಮತ್ತು ಶಾಲೇತರ ಚಟುವಟಿಕೆಗಳನ್ನು ನಮ್ಮ ಸೂಚನೆಗಳೊಂದಿಗೆ ಹೊಂದಿಸಿದ ಪಕ್ಷದಲ್ಲಿ ಸುಧಾರಿತ ಯೋಜನೆಯು ಚೆನ್ನಾಗುವುದಲ್ಲದೆ- ನಮ್ಮ ರಾಜ್ಯಾಂಗ ಘಟನೆಯ ನಿರ್ದೇಶಕ ತತ್ವದ ಪಾಲನಾ ಸಮಸ್ಯೆಗೆ ವ್ಯವಹಾರಿಕವಾದ ಪರಿಹಾರ ಮಾರ್ಗವನ್ನು ಸೂಚಿಸುತ್ತದೆ" ಎಂದು ಸಮಿತಿ ಅಭಿಪ್ರಾಯಪಟ್ಟಿರುತ್ತದೆ.

ಶಾಲಾ ಸಮಯವನ್ನು ಐದು ತಾಸಿನಿಂದ ಮೂರಕ್ಕೆ ಇಳಿಸಿದಾಗ್ಯೂ ಪಠ್ಯ ಪುಸ್ತಕದ ಶಿಕ್ಷಣದಲ್ಲಿ ಕಡಿತವಾಗಿಲ್ಲವೆಂದು ಸರಕಾರ ಹೇಳುತ್ತದೆ. ಮೊದಲು ವಾರಕ್ಕೆ ಪಠ್ಯ ಪುಸ್ತಕಗಳ ಶಿಕ್ಷಣಕ್ಕೆ ೪೦ ನಿಮಿಷದ ೨೧ ಪಿರೇಡುಗಳು ಮೀಸಲಿದ್ದವು. ಈಗಲೂ ಅಷ್ಟೇ ಅವಧಿಯನ್ನು ನೀಡಲಾಗಿರುವುದು. ಹಿಂದೆ ದಿನಕ್ಕೆ ಎರಡು ತಾಸುಗಳಷ್ಟು ಸಮಯವನ್ನು ಶಾರೀರಿಕ ವ್ಯಾಯಾಮ, ಕೈಕೆಲಸ ಮುಂತಾದುವಕ್ಕೆ ಕೊಡುತ್ತಿದ್ದರು. ಈಗ ಶಾಲೆಯ ಹೊರಗೆ ಅದಕ್ಕೆ ಅವಕಾಶ ನೀಡಲ್ಪಟ್ಟಿದೆ. ಆದುದರಿಂದ ಸರಕಾರದ ಹೇಳಿಕ ಸಮರ್ಪಕವಾದುದೆಂದು ಸಮಿತಿ ನಿರ್ಧರಿಸಿದೆ ಆದರೂ ಹಿಂದೆ ವಾರಕ್ಕೆ ೫ ಪಿರೇಡುಗಳನ್ನು ಐಚ್ಛಿಕ ವಿಷಯಗಳಿಗೆ (ಇಂಗ್ಲೀಷು ಹೊರತು ಬೇರೆ ಭಾಷೆ ಕಲಿಯುವುದು, ಕಸೂತಿ, ಶಿಸ್ತು ಇತ್ಯಾದಿ) ಕೊಡುತ್ತಿದ್ದಂತೆ, ಮುಂದಾದರೂ ಎರಡು-ಮೂರು ಪಿರೇಡುಗಳನ್ನು ನೀಡಬೇಕೆಂದು ಸಮಿತಿ ಸಲಹೆ ಮಾಡಿದೆ ಮತ್ತು ತದನುಗುಣವಾಗಿ ವಾರಕ್ಕೆ ಇರುವ ೨೪ ಪಿರೇಡುಗಳನ್ನು ವ್ಯವಸ್ಥಿತವಾಗಿ ಹಂಚಿರುತ್ತದೆ ೧ ಮತ್ತು ೨ನೇ ತರಗತಿ ಹಾಗೂ ೩, ೪ ಮತ್ತು ೫ನೇ ತರಗತಿಗಳನ್ನು ಒಂದು ಗುಂಪಾಗಿ ಸಮಿತಿ ತೆಗೆದುಕೊಂಡಿದೆ

ಶ್ರಮದ ಪ್ರಶ್ನೆ ದೊಡ್ಡದಲ್ಲ

ಈಗಿನ ಪದ್ಧತಿಯಂತೆ ಮಕ್ಕಳಿಗೆ ಪಾಠ ಕಲಿಯುವಾಗ ಮಾನಸಿಕ ಶ್ರಮ ಕಾಣಿಸಿಕೊಳ್ಳುತ್ತದೆಂದೂ ಹಿಂದೆಯಾದರೆ ಆಟ, ಕೈಕೆಲಸ ಮುಂತಾದವುಗಳು ಪಾಠದ ನಡುವೆ ಬರುತ್ತಿದ್ದುದರಿಂದ ಲಘು ಮನಸ್ಕರಾಗಿ ಕಲಿಯಲು ಹುಡುಗರಿಗೆ ಸಾಧ್ಯವಾಗುತ್ತಿತ್ತೆಂದೂ ಯೋಜನೆಯ ಆಕ್ಷೇಪಕರು ಮುಂದಿಡುವ ವಾದದಲ್ಲಿ ಹುರುಳಿಲ್ಲದಿಲ್ಲ. ಹಾಗೆಂದು ಆಧುನಿಕ ಶಿಕ್ಷಣ ಪದ್ಧತಿಯ ರಹಸ್ಯವನ್ನರಿತು ಬೋಧನಾ ಕ್ರಮವನ್ನು ಸಮಂಜಸವಾಗಿ ಅಳವಡಿಸಿಕೊಂಡರೆ ಈ ತಕರಾರಿಗೆ ಅವಕಾಶವಿರುವುದಿಲ್ಲ. ಮಾನಸಿಕ ಶ್ರಮ-ಕೊಡುವ ಪಾಠವನ್ನು ಸಹ ಮನೋರಂಜಕವಾಗಿ ಮಾಡಲು ಸಾಧ್ಯವಿದೆ ಎಂದು ಸಮಿತಿ ಹೇಳಿದೆ.

ಅಧ್ಯಾಪಕರ ಶ್ರಮದ ಕಡೆಗೂ ನಮ್ಮ ಲಕ್ಷ್ಯ ಸೆಳೆಯಲ್ಪಟ್ಟಿದೆ. ಹಿಂದೆ ಐದು ತಾಸುಗಳ ಅವಧಿಯಲ್ಲಿ ಕಲಿಸುತ್ತಿದ್ದುದನ್ನೆಲ್ಲ ಈಗ ಮೂರೇ ತಾಸುಗಳಲ್ಲಿ ಕಲಿಸಬೇಕಾಗಿ ಬಂದಿದೆಯೆಂದೂ ಒಂದೇ ಪಾಠವನ್ನು ದಿನಕ್ಕೆ ಎರಡು ಬಾರಿ ಹೇಳಬೇಕಾಗುವುದೆಂದೂ ಹಿಂದೆ ದಿನಕ್ಕೆ ಐದು ತಾಸಿನಂತೆ ವಾರಕ್ಕೆ ಐದೂವರೆ ದಿನ ದುಡಿಯುವ ಬದಲು ಈಗ ದಿನಕ್ಕೆ ಆರು ತಾಸಿನಂತೆ ವಾರದ ಆರು ದಿನ ಕೆಲಸ ಮಾಡಬೇಕಾಗಿ ಬಂದಿದೆಯೆಂದೂ ದೂರು ಕೇಳುತ್ತೇವೆ. ನಾವು ಮೊದಲಿನೆರಡಕ್ಕೆ ಮಹತ್ವಕೊಡುವುದಿಲ್ಲ. ಅಭ್ಯಾಸ ಬಲದಿಂದ ಈ ಶ್ರಮ ಕ್ರಮೇಣ ಗೋಚರಿಸದೆ ಹೋಗುತ್ತದೆ. ಆದರೆ ವಾರಕ್ಕೆ ಎಂಟೂವರೆ ತಾಸುಗಳಷ್ಟು ಹೆಚ್ಚು ಕೆಲಸ ಮಾಡಬೇಕಾಗಿ ಬಂದಿರುವುದೆಂಬ ಸಂಗತಿಯನ್ನು ಮಾತ್ರ ಗಂಭೀರವಾಗಿ ವಿಚಾರಿಸುವುದೊಳಿತು. ಶಾಲಾ ವರ್ಷವು ೨೨೦ ದಿನಗಳಿಗೆಯೇ ಮಿತವಾಗಿಡತಕ್ಕದ್ದೆಂಬುದನ್ನು ಈ ಸಂದರ್ಭದಲ್ಲಿ ತೋರಿಸಲಾಗುತ್ತಿದ್ದು ತತ್ಪರಿಣಾಮವಾಗಿ ಅಧ್ಯಾಪಕನು ವಾರದಲ್ಲಿ೬ದಿನಕೆಲಸಮಾಡಿದರೂ ವರ್ಷದಲ್ಲಿ ಇಡಿಯಾದ ದೀರ್ಘರಜೆ ಮೊದಲಿಗಿಂತ ಹೆಚ್ಚುತ್ತದೆ. ಇದು ಅವನ ಶ್ರಮಕ್ಕೆ ಒಂದುರೀತಿಯ ಪ್ರತಿಫಲವಾಗಿರುತ್ತದೆ. ಯಾವ್ವದೇ ಒಳ್ಳೆಯ ಉಪಾಧ್ಯಾಯನು ತನ್ನ ಕೆಲಸಕ್ಕೆ ಸಮಯದ ಮಿತಿ ಹೇಳಲಾರನು. ಆದರೂ ಅವನ ದುಡಿಮೆಗೆ ಯೋಗ್ಯ ಸಂಭಾವನೆ ಕೊಡುವುದು ಕರ್ತವ್ಯವಾಗಿರುತ್ತದೆಂಬುದರಲ್ಲಿ ಪ್ರತಿಮಾತಿಲ್ಲ.

ಶಿಕ್ಷಣದ ಉದ್ದೇಶ ಮಹತ್ವ

ಹೀಗೆ ಸಮಿತಿಯು ಹೇಳಿ— ಭಾರತದಲ್ಲಿ ಪ್ರಚಲಿತವಿರುವ ಶಿಕ್ಷಣ ಪದ್ಧತಿಯನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರಿಶೀಲಿಸುತ್ತಾ ಮದ್ರಾಸಿನಲ್ಲಿ ಸಹ ಬ್ರಿಟಿಷರ ಕಾಲದಲ್ಲಿ ಹೇರಿದ ಪದ್ಧತಿಯೇ ಈಗಲೂ ಅನುಸರಿಸಲ್ಪಡುತ್ತಿದೆಯೆಂದು ನುಡಿದಿದೆ. ಬ್ರಿಟಿಷ ಪದ್ಧತಿಯ ಶಾಲೆಗಳು ಪ್ರತಿಯೊಂದು ಮಗುವಿಗೂ ಕಡ್ಡಾಯದ ಶಿಕ್ಷಣವಾಗಬೇಕೆಂಬ ಹಾಗೂ ಪ್ರಜಾಪ್ರಭುತ್ವದ ಜವಾಬ್ದಾರಿಯನ್ನರಿತ ನಾಗರಿಕ ಪ್ರಜೆಗಳು ಅವರಾಗಬೇಕೆಂಬ ತತ್ವಕ್ಕೆ ಮಹತ್ವ ಕೊಡಲಿಲ್ಲ. ಈ ಬದಲಾವಣೆಯನ್ನು ಉದ್ದೇಶಪೂರ್ವಕ ಸಾಧಿಸುವಾಗ ಶಿಕ್ಷಣವನ್ನು ಕಲೆಯಾಗಿಯೂ ವಿಜ್ಞಾನವಾಗಿಯೂ ತೆಗೆದುಕೊಳ್ಳಬೇಕಾಗುತ್ತದೆ ನಮ್ಮ ಮಕ್ಕಳೂ ಸಮಾಜವೂ ಎಲ್ಲ ಪ್ರಾಮಾಣಿಕವಾದ ಕೆಲಸಗಳೂ ಗೌರವಯುತವಾದುವೆಂದು ತಿಳಿಯಬೇಕು. ಶಾಲಾ ಕೇಂದ್ರವು ಸಮಾಜದ ಅಖಂಡ ಅವಿಭಾಜ್ಯ ಅಂಗವಾಗಬೇಕು. ಇದು ಕೈಗೂಡುವುದಕ್ಕೆ ಪಠ್ಯಪುಸ್ತಕದ ಶಿಕ್ಷಣಕ್ಕೆ ಕೊಡುವ ಅವಾಸ್ತವ ಮಹತ್ವ ತಗ್ಗಿ ಜನಜೀವನಕ್ಕೂ ಸಮಾಜಕ್ಕೂ ಸಂಬಂಧವಿಲ್ಲದ ಮಾಹಿತಿಗಳನ್ನು ತಲೆಯಲ್ಲಿ ತುಂಬಿಸಿಕೊಳ್ಳುವ ಹವ್ಯಾಸ ನಿಲ್ಲಬೇಕು. ಶಾಲಾ ಕೋಣೆಯೊಳಗೆ ಪಠ್ಯಪುಸ್ತಕಗಳ ಪಠಣಕ್ಕೋಸ್ಕರ ಕೊಡುವ ಸಮಯವನ್ನು ಕಡಿಮೆ ಮಾಡಿ, ತಾವು ನೆಲಸುವ ಸಮಾಜದ ಅವಿಭಾಜ್ಯ ಅಂಗವಾಗಿ ಮಕ್ಕಳು ಬೆಳೆಯುವಂತೆ ನೋಡಬೇಕು. ಇಂದು ಪುಸ್ತಕೀಯ ಶಿಕ್ಷಣಕ್ಕಿಂತ ಕ್ರಿಯಾತ್ಮಕ ಶಿಕ್ಷಣದ ಕಡೆಗೆಯೇ ಜಗತ್ತಿನ ಒಲವು ತಿರುಗುತ್ತದೆಯಲ್ಲವೆ?

ಮೂಲ ಶಿಕ್ಷಣದ ನೆನಪು ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿಯೇ ನಮಗುಂಟಾಗುತ್ತದೆ. ನಮ್ಮ ೫ ತಾಸುಗಳ ಪುಸ್ತಕ ವಿದ್ಯೆಯು ಅತ್ಯಗತ್ಯವೆಂಬ ಪೂರ್ವಗ್ರಹದೂಷಿತ ಅಭಿಪ್ರಾಯವನ್ನು ಬಾಧ ಸಹಿತ ತೆಗೆದು ಹಾಕದ ಹೊರತು ಹೆತ್ತವರನ್ನು ಮೂಲ ಶಿಕ್ಷಣದ ಸಂಸ್ಥೆಗಳಿಗೆ ಮಕ್ಕಳನ್ನು ಕಳುಹಿಸುವಂತೆ ಮಾಡಲು ಸಾಧ್ಯವಿಲ್ಲ. ಈ ಸುಧಾರಿತ ಶಿಕ್ಷಣ ಯೋಜನೆಯು ಪಠ್ಯ ಪುಸ್ತಕಗಳ ಶಿಕ್ಷಣದಲ್ಲಿ ಕೊರತೆಮಾಡಿಲ್ಲವೆಂಬುದನ್ನು ಜನಸಾಧಾರಣರು ಮನಗಂಡ ಪಕ್ಷದಲ್ಲಿ, ಇದನ್ನು ಅವರು ಅಡ್ಡಿ ಇಲ್ಲದೆ ಒಪ್ಪಿಕೊಳ್ಳುವುದು ನಿಶ್ಚಯ. ಬಹಳ ಹಿಂದಿನ ಕಾಲದಿಂದ ನಡೆದು ಬಂದ ಸಂಪ್ರದಾಯಗಳನ್ನು ಪರಿವರ್ತಿಸುವುದು ಕಷ್ಟದ ಕೆಲಸ— ಹಳೆಯದರ ಸ್ಥಾನದಲ್ಲಿ ಹೊಸ ಸುಧಾರಣೆಯೊಂದನ್ನು ತಂದು ಮಾನವ ಕಲ್ಯಾಣ ಮಾಡುವುದಕ್ಕೆ ಧೈರ್ಯ, ಸಾಹಸ ಹಾಗೂ ಮುನ್ನೋಟಗಳು ಬೇಕಾಗುತ್ತವೆ.

ಮದ್ರಾಸಿನಲ್ಲಿ ಶಾಲಾ ಕೋಣೆಗಳೊಳಗೆ ಮಕ್ಕಳಿಗೆ ನೀಡುವ ಶಿಕ್ಷಣದ ಅವಧಿಯನ್ನು ತಗ್ಗಿಸಿದ್ದರಿಂದ, ಮಕ್ಕಳ ಆರೋಗ್ಯಕ್ಕೆ ಒಳ್ಳೆಯದಾಗುವುದೆಂದು ನಮಗೆನಿಸುತ್ತದೆ ಮಾನಸಿಕವಾಗಿಯೂ ದೈಹಿಕ

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ ನೀವು ಉಳಿಸಿಕೊಳ್ಳುವ ಅಂಶವೇ ಅತೀ ಮಹತ್ವದ್ದು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನಲ್ಲಿ ಸಹಸ್ರಾರು ಮಂದಿ ಸೇವಿಂಗ್ಸ್ ಲೆಖ್ಖ ತೆರೆದು ತಾವು ಉಳಿಸುವ ಹಣವನ್ನು ವ್ಯಾಪಾರ........ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲು ...ಮದ್ವೇಕೆ, ಅನಿರೀಕ್ಷಿತ ಘಟನೆಗಳಿಗಾಗಿ ಮೀಸಲಿಡುತ್ತಾರೆ. ಹಲ್ಲಿರುವಾಗಲೆ ಕಡಲೆ ತಿನ್ನು ಎಂಬಂತೆ ನೀವು ಸಂಪಾದನೆ ಮಾಡುವ ಈ ಸಮಯವೇ ಹಣ ಉಳಿಸುವ ಪರ್ವಕಾಲವಾಗಿದೆ. ಪ್ರತಿ ತಿಂಗಳ ನಿಮ್ಮ ಸಂಬಳದಲ್ಲಿ ಶೇಕಡಾ 10%ದಷ್ಟನ್ನು ಸೇವಿಂಗ್ಸ್ ಲೆಖ್ಖದಲ್ಲಿರಿಸಿ ನಿಮ್ಮ ಆರ್ಥಿಕ ಅಭಿವೃದ್ಧಿ ಹಾಗೂ ಭಾವೀ ಭದ್ರತೆಯನ್ನು ಕಾಪಾಡಿಕೊಳ್ಳಲು ಮುಂದಾಗಿರಿ.

ವ್ಯವಹಾರ ವಹಿವಾಟು ರೂ. 5,00,00,000

THE CANARA INDUSTRIAL & BANKING SYNDICATE LTD.,

Estd: 1925 H. O: UDIPI, S. India.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

ಪರುಳೇಕರ ಸಮಿತಿಯ ವರದಿಯ ವಿವರ

ಸರಕಾರದ ಹೊಸ ಯೋಜನೆಗೆ ಬೆಂಬಲ

ವಾಗಿಯೂ ಶಾಲಾ ಕೋಣೆಯೊಳಗೆ ಮಗುವು ಪಡುವ ಪೀಡೆ ಕಳೆದು ಹೊರಗಿನ ಸ್ವಚ್ಛ ವಾತಾವರಣದಲ್ಲಿ ಬಾಳುವುದಕ್ಕೆ ಹೊಸ ಯೋಜನೆ ಅವಕಾಶ ನೀಡಿರುತ್ತದೆ

ಘಟನೆಯ ಆದೇಶ

ಪರುಳೇಕರ ಸಮಿತಿಯು ತಾತ್ವಿಕವಾಗಿ ಈಗಿನ ಮೂರು ತಾಸುಗಳ ಶಾಲೆಗಳಿಂದ ಈಗಿನ ಇಮ್ಮಡಿಯಷ್ಟು ಮಕ್ಕಳು ವಿದ್ಯಾಭ್ಯಾಸ ಪಡೆಯಬಹುದೆಂದು ತೋರಿದರೂ, ವಾಸ್ತವದಲ್ಲಿ ಈ ಪರಿಣಾಮವು ಒಡನೆಯೇ ಲಭ್ಯವಾಗದೆಂದು ಅಭಿಪ್ರಾಯಪಟ್ಟಿದೆ. ನಮ್ಮ ಘಟನೆಯಲ್ಲಿ, (೧೯೫೦ನೇ ಇಸವಿಯಿಂದ) ಹತ್ತು ವರ್ಷಗಳೊಳಗಾಗಿ ೧೪ ವರ್ಷ ವಯಸ್ಸಿನೊಳಗಿನ ಎಲ್ಲ ಶಾಲಾ ಪ್ರಾಯದ ಮಕ್ಕಳಿಗೂ ಶಿಕ್ಷಣ ಕೊಡಬೇಕೆಂದು ಹೇಳಲ್ಪಟ್ಟಿದೆ. ಇದನ್ನು ಕಾರ್ಯಗತಗೊಳಿಸಲು ದೇಶದಲ್ಲಿ ಆತುರ ಕಂಡುಬಂದರೂ ಆರ್ಥಿಕ ಕಾರಣಗಳಿಂದ ಪ್ರಗತಿ ನಿಧಾನವಾಗಿ ಸಾಗುತ್ತಿದೆ.

ಖೇರ ಸಮಿತಿಯು ರಾಜ್ಯ ಸರಕಾರಗಳು ತಮ್ಮ ಆದಾಯವಲ್ಲಿ ಹೆಚ್ಚೆಂದರೆ ಪ್ರತಿ ಶತ ೨೦ ವೆಚ್ಚಮಾಡಬಹುದೆಂದು ಸೂಚಿಸಿದ್ದು, ಮದ್ರಾಸು ಸರಕಾರ ಈಗಲೇ ಆ ಪರಮಾವಧಿ ಮಿತಿಯನ್ನು ಮುಟ್ಟಿದೆ. ಆದ ಕಾರಣ ಮದ್ರಾಸು ಸರಕಾರವು ತನ್ನ ಹಣಕಾಸಿನ ಅನುಕೂಲತೆಯ ಅಳವಿನೊಳಗೆಯೇ ಅತ್ಯಧಿಕ ಮಕ್ಕಳಿಗೆ ಶಿಕ್ಷಣ ದೊರೆಯುವಂಥ ಪದ್ಧತಿಯೊಂದನ್ನು ಕಂಡು ಹಿಡಿಯಲು ಮನಸ್ಸು ಮಾಡಿತು. ವರಸೆ ಕ್ರಮವೆಂದು ಬೇರೆ ರಾಜ್ಯಗಳು ಕರೆಯುವ ಶಿಕ್ಷಣ ಪದ್ಧತಿಯನ್ನು ಇದು ಹೋಲುತ್ತಿದ್ದರೂ ಮದ್ರಾಸು ಸರಕಾರ ತನ್ನ ಪರಿಷ್ಕೃತ ಪದ್ಧತಿಯನ್ನು ಹಾಗೆ ಸಂಬೋಧಿಸಲು ಇಷ್ಟಪಟ್ಟಿಲ್ಲ. ಮಕ್ಕಳ ಶಾಲೇತರ ಚಟುವಟಿಕೆಯ ಮೇಲೆಯೂ ಸರಕಾರ ಮಹತ್ವವನ್ನು ಕೊಟ್ಟಿರುವುದು "ವರಸೆ ಕ್ರಮ" ಅನುಸರಿಸುವ ಪದ್ಧತಿಗಿಂತ ಈ ಕ್ರಮವನ್ನು ಬೇರೆಯಾಗಿ ಮಾಡುತ್ತದೆ. ಮೂಲ ಶಿಕ್ಷಣದ ಶಾಲೆಗಳನ್ನು ಈ ಪದ್ಧತಿ ಪೂರ್ತಿ ಹೋಲುವುದಿಲ್ಲ. ಇವೆರಡರ ನಡುವೆ ಮದ್ರಾಸದ ಶಿಕ್ಷಣ ಪದ್ಧತಿ ಇರುತ್ತದೆ. ಘಟನೆಯ ನಿರ್ದೇಶಕ ತತ್ವವನ್ನು ಶಿಕ್ಷಣಕ್ಕೆ ಅನ್ಯಾಯವಾಗದಂತೆ ವ್ಯಾವಹಾರಿಕ ರೀತಿಯಿಂದ ಪರಿಪಾಲಿಸುವ ಬಗೆಯನ್ನು ಈ ಪದ್ಧತಿ ತೋರಿಸುತ್ತದೆ.

೧೯೫೧ರಲ್ಲಿ ಲೆಕ್ಕ ಹಾಕಿದಂತೆ ಶಾಲಾ ಪ್ರಾಯದ ಮಕ್ಕಳಲ್ಲಿ ಸರಾಸರಿ ನೂರಕ್ಕೆ ೪೦ ಮಾತ್ರ ಶಾಲೆಗೆ ಹೋಗುತ್ತಿದ್ದರು. (ಹುಡುಗರ ಪ್ರಮಾಣ ನೂರಕ್ಕೆ ೫೦ ಹಾಗೂ ಹುಡುಗಿಯರು ನೂರಕ್ಕೆ ೩೦). ೧೯೪೭ರಿಂದ ೧೯೫೭ರ ವರೆಗೆ ಶಾಲೆಗೆ ಹೋಗುವ ಮಕ್ಕಳ ಪ್ರಮಾಣ ಹೆಚ್ಚಿದ ಬಗೆ ನೋಡಿದರೆ ತೀರಾ ನಿರಾಶೆಯಾಗುತ್ತದೆ. ೩೦ ಲಕ್ಷದಿಂದ ೩೮ ಲಕ್ಷಕ್ಕೆ ಈ ಸಂಖ್ಯೆ ಏರಿತೆಂದರೆ, ಪ್ರತಿವರ್ಷ ೧೬೦೦೦ ಮಕ್ಕಳು ಮಾತ್ರ ಹೊಸತಾಗಿ ಶಾಲೆಗೆ ಸೇರುವರೆಂದಾಯಿತು. ಪ್ರಾಥಮಿಕ ಶಾಲೆಗಳಲ್ಲಿ ಕಲಿಯಲು ಯೋಗ್ಯವಾದ ೬ರಿಂದ ೧೧ ವರ್ಷ ಪ್ರಾಯದ ಮಕ್ಕಳು ೫೯ ಲಕ್ಷ ಇದ್ದರೂ ಈಗ ಶಾಲೆಗೆ ಹೋಗುವವರು ೨೬ ಲಕ್ಷ ಮಾತ್ರ. ಇನ್ನು ೩೩ ಲಕ್ಷ ಮಕ್ಕಳನ್ನಾದರೂ ಮುಂದಿನ ನಾಲ್ಕು ವರ್ಷಗಳಲ್ಲಿ ಶಾಲೆಗೆ ಬರುವಂತೆ ಯೋಗ್ಯ ಕ್ರಮ ಕೈಗೊಳ್ಳುವುದು ಅಗತ್ಯ. ಇವರಲ್ಲಿ ೨೮ ಲಕ್ಷದಷ್ಟು ಹಳ್ಳಿಗಳಿಂದಲೇ ಸೇರಬೇಕು. ಮಕ್ಕಳನ್ನು ಹೆಚ್ಚಾಗಿ ಸೇರಿಸಿಕೊಳ್ಳಲು ತೀವ್ರ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವಾಗ ಹಿಂದೆ ವಿವಿಧ ಕಾರಣಗಳಿಂದ ಅರ್ಧದಲ್ಲಿಯೇ ಶಾಲೆಬಿಟ್ಟ ಮಕ್ಕಳನ್ನೂ ೧೧ರಿಂದ ೧೪ ವರ್ಷ ಪ್ರಾಯದ ಮಕ್ಕಳನ್ನೂ ಗಮನಕ್ಕೆ ತೆಗೆದುಕೊಳ್ಳುವುದು ಒಳ್ಳೇದು.

ಭರತಿಯ ಪ್ರಮಾಣ ಏರಬೇಕು

ಶಾಲೆಗೆ ಮಕ್ಕಳನ್ನು ಬರಮಾಡಿಸುವುದು ಸುಲಭದ ಕೆಲಸವಲ್ಲವೆಂದೂ ಒಬ್ಬನ ತಾಳ್ಮೆ ಮತ್ತು ಸಹನೆಯ ಪರೀಕ್ಷೆಯೇ ಅದೆಂದೂ ಹೇಳಬಹುದು. ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜ್ಯಾರಿಗೆ ತಂದ ಕ್ಷೇತ್ರದಲ್ಲಿಯೂ ಪ್ರತಿಶತ ೪೦ ಮಕ್ಕಳು ಮಾತ್ರ ಶಾಲೆಗೆ ಬಂದರು. ಹಳ್ಳಿಯ ಹೆತ್ತವರ ನಿರಕ್ಷರತೆ ಮತ್ತು ಮಕ್ಕಳು ತಮ್ಮ ಸಂಗಡವೇ ಇದ್ದು ತಮ್ಮೊಂದಿಗೆ ದುಡಿಯಬೇಕೆಂಬ ಅವರ ಮನೋಭಾವ ಮಕ್ಕಳನ್ನು ಶಾಲೆಗೆ ಹೋಗದಂತೆ ತಡೆಯುತ್ತದೆ. ಮಕ್ಕಳು ದಿನದ ಒಂದು ಹೊತ್ತು ಮಾತ್ರ ಶಾಲೆಗೆ ಹೋದರೆ ಸಾಕೆಂದೂ ಉಳಿದ ಅರ್ಧ ದಿನ ಮನೆಕೆಲಸದಲ್ಲಿ ನೆರವಾಗಲು ಅಡ್ಡಿಯಿಲ್ಲವೆಂದೂ ಹೇಳಿದರೆ, ಹೆತ್ತವರು ಮಕ್ಕಳ ಶಿಕ್ಷಣಕ್ಕೆ ಆತಂಕವನ್ನು ಒಡ್ಡಲಿಕ್ಕಿಲ್ಲ. ಎಲ್ಲ ಅನುಕೂಲತೆಗಳು ಇದ್ದರೂ ಬಡತನ ಹಾಗೂ ಇತರ ಆರ್ಥಿಕ ಕಾರಣಗಳಿಂದ ಸುಮಾರು ಆರೆವಾಸಿಯಷ್ಟು ಶಾಲಾ ಪ್ರಾಯದ ಹುಡುಗರು ಮನೆಯಲ್ಲಿ ಕುಳಿತುಕೊಳ್ಳುವರೆಂದು ತಜ್ಞರ ಅಭಿಪ್ರಾಯ.

ಈ ಮೂರು ತಾಸುಗಳ ಶಿಕ್ಷಣ ಹೆತ್ತವರ ಅನುಕೂಲಕ್ಕೆ ಸರಿಯಾಗಿ ಕೊಡಲ್ಪಡುವುದು ಯೋಗ್ಯ. ಒಂದು ವೇಳೆ ಮೂರು ತಾಸುಗಳ ಸಮಯವನ್ನು ಮಕ್ಕಳಿಗೆ ಶಾಲೆಯಲ್ಲಿ ಕಳೆಯಲಾಗದಿದ್ದರೆ, ಈ ಅವಧಿಯನ್ನು ತಗ್ಗಿಸುವುದಕ್ಕೂ ಹಿಂಜರಿಯಬಾರದು. ಶಿಕ್ಷಣ ವಿಷಯದಲ್ಲಿ ಆಸಕ್ತಿ ಹುಟ್ಟುವುದೇ ಶಿಕ್ಷಣದ ಒಂದು ಸತ್ಪರಿಣಾಮವಾಗಿ ತೆಗೆದುಕೊಳ್ಳಬೇಕು. ಅನಿವಾರ್ಯವಾಗಿ ನಿರ್ವಹಿಸಬೇಕಾಗಿ ಬರುವ ಮನೆಗೆಲಸ ಮಗುವಿನ ಶಿಕ್ಷಣಕ್ಕೆ ಆತಂಕವಾಗದಂತೆ, ಶಿಕ್ಷಣ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕೆಂದು ಈಚೆಗೆ ಧರ್ಮಾರ್ಥ ಹಾಗೂ ಕಡ್ಡಾಯ ಶಿಕ್ಷಣದ ಪ್ರಾದೇಶಿಕ ಸಮಿತಿ ಅಭಿಪ್ರಾಯಪಟ್ಟಿದೆ.

ಕಾನೂನಿಗಿಂತಲೂ ಒತ್ತಾಯ ಮತ್ತು ಪ್ರೇರಣೆಗಳಿಂದ ಹೆಚ್ಚು ಹೆಚ್ಚು ಮಕ್ಕಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕು. ಮೂರು ನಾಲ್ಕು ವರ್ಷಗಳಲ್ಲಿ ಸೇಕಡಾ ೭೦ ಹುಡುಗರಾದರೂ ಹೆಚ್ಚು ಸೇರದಿದ್ದ ಪಕ್ಷದಲ್ಲಿ ಆಗ ಕಾನೂನಿನ ಪ್ರಯೋಗದ ಆವಶ್ಯಕತೆಯನ್ನು ವಿಚಾರಿಸಬಹುದು. ಮಕ್ಕಳು ಹೆಚ್ಚಾಗಿ ಶಾಲೆ ಸೇರುವಂತೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಪರುಳೇಕರ ಸಮಿತಿ ಸೂಚಿಸಿರುತ್ತದೆ. ಅದರಂತೆ ಎಲ್ಲ ಪತ್ರಿಕೆಗಳು ರೇಡಿಯೋ ಹಾಗೂ ಭಾಷಣ ವೇದಿಕೆಗಳು ಹಾಗೂ ಧುರೀಣರ ವರ್ಚಸ್ಸನ್ನು ಇದಕ್ಕೆ ಉಪಯೋಗಿಸಬೇಕು; ಅಧ್ಯಾಪಕರು ಹೆತ್ತವರ ಮನವೊಲಿಸಬೇಕು; ಹೆತ್ತವರು ಬಡವರಾಗಿದ್ದರೆ ಅವರ ಮಕ್ಕಳಿಗೆ ಅಂಗಿ, ಸ್ಲೇಟು, ಪುಸ್ತಕಗಳನ್ನು ಹಳ್ಳಿಯ ಸ್ಥಿತಿವಂತರು ಕೊಟ್ಟು ಹೆತ್ತವರ ಮನದಮುಗುಡ ಕಳೆಯಬಹುದು. ಈ ನಾನಾ ವಿಧದ ಕಾರ್ಯಕ್ರಮಗಳಿಂದ ಶಾಲೆಗೆಹೋಗುವ ಮಕ್ಕಳ ಸಂಖ್ಯೆ ಬೇಗನೇ ಸಾಕಷ್ಟು ಪ್ರಗತಿ ತೋರಿಸಿದರೆ, ಈ ಯೋಜನೆಯು ಸಾರ್ಥಕವಾಗುತ್ತದೆ, ಮತ್ತು ಟೀಕಾಕಾರರ ಆಕ್ಷೇಪಕ್ಕೆ ಅದೇ ಉತ್ತರವಾಗಬಲ್ಲದು.

ಪಟ್ಟಣಕ್ಕೂ ವಿಸ್ತರಣೆ

ಮಕ್ಕಳ ಸಂಖ್ಯಾಪ್ರಮಾಣ ಹೆಚ್ಚಿಕೊಂಡರೆ, ಕೆಲಸ ಮುಗಿಯಿತೆಂದು ಭಾವಿಸುವಂತಿಲ್ಲ. ಒಂದನೇ ತರಗತಿಗೆ ಸೇರಿದ ಮಕ್ಕಳು ೫ನೇ ತರಗತಿಯವರೆಗೂ ಶಾಲೆಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದೂ ನಮ್ಮ ಧ್ಯೇಯವಾಗಬೇಕು. ಒಂದನೇ, ಎರಡನೇ ತಪ್ಪಿದರೆ ಮೂರನೇ ತರಗತಿಯಲ್ಲಿಯೇ ವಿದ್ಯಾಭ್ಯಾಸ ಮುಗಿಸಿಬಿಡುವ ಮಕ್ಕಳು ಯುನೆಸ್ಕೋರ ವರದಿಯಂತೆ ಭಾರತದಲ್ಲಿ ೫೦ ಪ್ರತಿ ಶತದಷ್ಟು ಇದ್ದಾರೆ. ಇವರಲ್ಲಿ ೬೦ ಪ್ರತಿಶತ ಮಕ್ಕಳು ಕೇವಲ ಆರ್ಥಿಕ ಕಾರಣಗಳಿಗಾಗಿಯೇ ಶಾಲೆಯನ್ನು ಬಿಟ್ಟು ಮನೆಯಲ್ಲಿ ಉಳಿಯುವರಂತೆ. ಯುನೆಸ್ಕೋದ ವರದಿಯಲ್ಲಿ "ಹೆಚ್ಚು ವ್ಯವಹಾರ್ಯವಾದ, ಬಹುಶಃ ಸುಧಾರಿತ ಕ್ರಮದ ಅರ್ಧಹೊತ್ತಿನ ಶಿಕ್ಷಣ ಪದ್ಧತಿಯೊಂದನ್ನು ಅನುಸರಿಸುವುದೇ ಯೋಗ್ಯ ಕ್ರಮ-ಬಾಲಕರ ದುಡಿಮೆಯನ್ನೂ ಕಣ್ಣಮುಂದಿಟ್ಟುಕೊಂಡು ಇಂಥವರಿಗೂ ಶಿಕ್ಷಣ ಸೌಲಭ್ಯ ದೊರಕುವಂತೆ ಶಾಲಾ ದಿನದ ಸಮಯವನ್ನೂ ವರ್ಷದಲ್ಲಿ ಶಿಕ್ಷಣ ನೀಡುವ ತಿಂಗಳುಗಳನ್ನು ನಿರ್ದಿಷ್ಟಪಡಿಸುವುದು ಯೋಗ್ಯ" ವೆಂದು ಹೇಳಿದೆ. ಹೀಗಿದ್ದರೆ, ಮದ್ರಾಸು ಸರಕಾರದ ಸುಧಾರಿತ ಯೋಜನೆ ಶಿಕ್ಷಣದಲ್ಲಿ ವ್ಯರ್ಥ ಹಾಳಾಗಿ ಹೋಗುವ ಅಂಶವನ್ನೂ ಗಣನೀಯವಾಗಿ ತಗ್ಗಿಸುತ್ತದೆ.

ಸರಕಾರದವರು ಮುಂದಿನ ವರ್ಷದಿಂದ (ಜೂನ್, ೧೯೬೦) ಈ ಯೋಜನೆಯನ್ನು ನಗರಸಭಾ ವಲಯಗಳಿಗೂ ವಿಸ್ತರಿಸುವರೆಂದು ತಿಳಿದಿದೆ. ಹೀಗಿದ್ದರೆ, ಆ ಪ್ರದೇಶಗಳಲ್ಲಿ ವಿದ್ಯಮಾನವಿರುವ ವಿಶೇಷ ಪರಿಸ್ಥಿತಿಯನ್ನು ಈಗಿಂದಲೇ ಗಮನಿಸುವುದು ಒಳಿತು. ಹಳ್ಳಿಯಲ್ಲಿ ಶಾಲೆಗೆ ಹೋಗದೆ ಉಳಿದಿರುವ ಮಕ್ಕಳ ಪ್ರಮಾಣಕ್ಕಿಂತ ಪೇಟೆಯದು ಕಡಿಮೆ ಇರುತ್ತದೆ. ಈಗ ಹಳ್ಳಿಯಲ್ಲಿ ಒಬ್ಬ ಅಧ್ಯಾಪಕನಿಗೆ ೨೦ ಹುಡುಗರು ಇದ್ದರೆ ಸಾಕೆಂದು ಕಾನೂನು ಹೇಳುತ್ತದೆ. ಆದರೆ ಮಕ್ಕಳ ಸಂಖ್ಯೆ ಹೆಚ್ಚಿಸುವುದೇ ಸುಧಾರಿತ ಯೋಜನೆಯ ಗುರಿಯಾಗಿರುವುದರಿಂದ ಪ್ರತಿ ಉಪಾಧ್ಯಾಯನಿಗೆ ಎರಡೂ ಹೊತ್ತನ್ನು ಒಟ್ಟಿಗೆ ೩೦ ಹುಡುಗರು ೧೯೬೦ನೇ ಜೂನು ತಿಂಗಳೊಳಗೆ ಸಿಗಬೇಕೆಂದೂ ಈ ಪ್ರಮಾಣ ಮುಂದಿನ ಎರಡು ವರ್ಷಗಳಲ್ಲಿ ಕ್ರಮವಾಗಿ ೪೦ ಮತ್ತು ೫೦ಕ್ಕೆ ಏರಬೇಕೆಂದೂ ವಿಧಿಸಬೇಕೆಂದು ಸಮಿತಿ ಸೂಚಿಸಿರುವುದರಿಂದ ಸ್ವಾಭಾವಿಕವಾಗಿಯೇ ಪೇಟೆಯಲ್ಲಿ ಅಧ್ಯಾಪಕರು ಹೆಚ್ಚಾಗಿ ಉಳಿಯುವರು. ನಗರಗಳಲ್ಲಿ ಕೃಷಿ ಸಂಬಂಧದ ಚಟುವಟಿಕೆಗಳಿಗೆ ಅವಕಾಶವಿಲ್ಲ; ಮತ್ತು ಕೈಗಾರಿಕೆ ಮುಂತಾದವುಗಳು ನಡೆಯುವ ಪದ್ಧತಿ ಹಳ್ಳಿಯ ರೀತಿಗಿಂತ ಭಿನ್ನವಾಗಿರುತ್ತದೆ. ಆದುದರಿಂದ ಶಾಲೇತರ ಚಟುವಟಿಕೆಗಳ ಕುರಿತು ಯೋಗ್ಯ ಕಾರ್ಯಕ್ರಮವನ್ನು ರೂಪಿಸುವುದು ದೊಡ್ಡ ಕೆಲಸವಾಗುತ್ತದೆ.

ಶಾಲೇತರ ಚಟುವಟಿಕೆ

ಶಾಲೇತರ ಚಟುವಟಿಕೆಗಳಿಗೆ ಈ ಯೋಜನೆಯಲ್ಲಿ ಕೊಡಲಾದ ವಿಶಿಷ್ಟ ಮಹತ್ವವನ್ನೆ ಬೇರೆ ರಾಜ್ಯಗಳಲ್ಲಿರುವ ವರಸೆ ಕ್ರಮಕ್ಕಿಂತ ಇದನ್ನು ಪ್ರತ್ಯೇಕ ಮಾಡಿರುತ್ತದೆಯಷ್ಟೆ! ಇದು ಸರಕಾರದ ಹೊಣೆಗಾರಿಕೆಯನ್ನೂ ಬಹಳ ಹೆಚ್ಚಿರುತ್ತದೆ. ಈ ಈ ಯೋಜನೆ ತಂದವರ ಅಭಿಪ್ರಾಯಗಳು ಶಾಲೇತರ ಚಟುವಟಿಕೆಯ ಸಂದರ್ಭದಲ್ಲಿ ಹೀಗಿವೆ—

(೧) ಪದ್ಯ ಪುಸ್ತಕಗಳ ಶಿಕ್ಷಣಕ್ಕಿಂತ ಶಾಲೇತರ ಚಟುವಟಿಕೆಯು ಬೇರೆಯಾಗಿರುವುದಿಲ್ಲ....ಅದು ಮಗುವಿನ ದೈಹಿಕ, ಮಾನಸಿಕ, ಬೌದ್ಧಿಕ ಹಾಗೂ ನೈತಿಕ ಅಭಿವೃದ್ಧಿಯು ಕೈಗೂಡುವಂತೆ ಇರಬೇಕು

(೨) ಶಾಲೆಯಲ್ಲಿ ಪಠ್ಯ ಪುಸ್ತಕಗಳ ಪ್ರಾಶಸ್ತ್ಯ ಇರುವುದರಿಂದ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಗೆ ಶಾಲೆಯ ಹೊರಗೆಯೇ ಅಧಿಕ ಅವಕಾಶ ದೊರೆಯಬೇಕು.

(೩) ಮಗುವು ಸಮಾಜದ ಉತ್ಪಾದಕ ವಾತಾವರಣದೊಂದಿಗೆ ಸಂಪರ್ಕ ಬೆಳೆಸಿ ಅದರಲ್ಲಿ ಆಸಕ್ತಿ ತೋರಿಸಿ ಕಲಿಯುವುದರಿಂದ ದೈಹಿಕ ಪರಿಶ್ರಮದ ಕುರಿತು ಮಹತ್ವ ಮೂಡುತ್ತದೆ.

[೪ನೇ ಪುಟ ನೋಡಿರಿ]

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಬೆನಗಲ್ ನರಸಿಂಗರಾಯರ ನಿಧನ

ಭಾರತಕ್ಕೆ ಅಂತಾರಾಷ್ಟ್ರೀಯ ಖ್ಯಾತಿಗಳಿಸಿಕೊಟ್ಟ ದಕ್ಷಿಣ ಕನ್ನಡದ ಸುಪುತ್ರ

ಪಾಕಿಸ್ತಾನವು ಕಾಶ್ಮೀರದಲ್ಲಿ ಆಕ್ರಮಣ ...ಗಿ ಸೈನ್ಯ ಪ್ರವೇಶ ಮಾಡುವುದಕ್ಕೆ ಪ್ರ...ತಿಸಿದಾಗ ಭಾರತವು ಈ ತಂಟೆಯನ್ನು ...ಂಯುಕ್ತ ರಾಷ್ಟ್ರ ಸಂಘಕ್ಕೆ ಒಪ್ಪಿಸಿತು. ...ಲ್ಲಿ ಭಾರತದ ನಿಲುಮೆಯನ್ನು ಸ್ಪಷ್ಟೀಕ...ಸಲು ನಮ್ಮ ಜಿಲ್ಲೆಯ ಸುಪ್ರಸಿದ್ಧ ರಾ...: ಕಾರಣಿ ಸರ್ ಬೆನೆಗಲ್ ನರಸಿಂಗ ...ಾಯರನ್ನು ಭಾರತ ಸರಕಾರ ಕಳುಹಿಸಿ...ು. ಹೀಗೆ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ...ತ್ಯಂತ ಹೆಚ್ಚು ಪ್ರಕಾಶಕ್ಕೆ ಬಂದು ಜಾ...ತಿಕ ರಾಜ ಕಾರಣದ ಮೇಲೆ ತಮ್ಮ ...ಪಾರ ಪ್ರಭಾವವನ್ನು ಬೀರಿ, ವರ್ಚಸ್ಸ...ನ್ನು ಸ್ಥಿರವಾಗಿ ಸ್ಥಾಪಿಸಿದ ನರಸಿಂಗ ರಾ...ಯರು ಇದೇ ನವೆಂಬರ ದಿನಾಂಕ ೩೦...ಂದು ಪ್ರಾತಃಕಾಲ ೭-೧೫ಕ್ಕೆ ಜ್ಯೂರಿಚ್ ...ನಗರದಲ್ಲಿ ನಿಧನ ಹೊಂದಿದರೆಂದು ತಿಳಿಸ...ು ತುಂಬ ವಿಷಾದಿಸುತ್ತೇವೆ. ನರಸಿಂಗ ...ರಾಯರು ದಕ್ಷರಾದ ಆಡಳಿತಗಾರರೆಂದೂ ಪ್ರಥಮ ದರ್ಜೆಯ ಕಾಯಿದೆ ತಜ್ಞರೆಂದೂ ಶ್ರೇಷ್ಠ ರಾಜಕಾರಣಿಯೆಂದೂ ಖ್ಯಾತಿ ...ಗಳಿಸಿದ್ದರು. ಇವರು ನಮ್ಮ ರಾಜ್ಯಾಂಗ ...ಘಟನೆಯನ್ನು ಸಿದ್ಧಪಡಿಸುವುದರಲ್ಲಿ ಪ್ರ...ಮುಖ ಪಾತ್ರವನ್ನು ವಹಿಸಿದ್ದರು. ಜಮ್ಮು ಕಾಶ್ಮೀರದಲ್ಲಿ ೧೯೪೪-೪೫ನೇ ಅವಧಿಯ...ಲ್ಲಿ ಪ್ರಧಾನಾಮಾತ್ಯರಾಗಿ ಕೆಲಸಮಾಡಿದ್ದ...ರು. ಬರ್ಮಾದ ಘಟನೆಯ ರಚನಾಕಾಲ...ಕ್ಕೆ ನರಸಿಂಗರಾಯರು ಸರಕಾರದ ಸಲಹೆ...ಗಾರರಾಗಿದ್ದರು ಭಾರತ ಸ್ವತಂತ್ರವಾದ ...ಬಳಿಕ ಅದಕ್ಕೆ ಅಂತಾರಾಷ್ಟ್ರೀಯ ಖ್ಯಾತಿಯನ್ನೂ ಸ್ಥಾನಮಾನವನ್ನೂ ಗಳಿಸಿಕೊಟ್ಟವರಲ್ಲಿ ನರಸಿಂಗರಾಯರ ಹೆಸರು ಚಿರಸ್ಮರಣೀಯವಾಗಿರುತ್ತದೆ. ತಮ್ಮ ವ್ಯಕ್ತಿತ್ವದ ವರ್ಚಸ್ಸಿನಿಂದ ಜಾಗತಿಕ ಮುತ್ಸದ್ದಿಗಳನ್ನು ಬೆರಗುಗೊಳಿಸಿದ ನರಸಿಂಗರಾಯರು ಕಳೆದ ವರ್ಷ ಹೇಗ ನಗರದಲ್ಲಿ...ರುವ ಅಂತಾರಾಷ್ಟ್ರೀಯ ನ್ಯಾಯ ಸ್ಥಾನದ ನ್ಯಾಯಾಧೀಶರಾಗಿ ಆಯ್ಕೆ ಹೊಂದಿದರು. ಈ ಹುದ್ದೆಯಲ್ಲಿರುವಾಗಲೇ ಅವರ ಮೃತ್ಯು ಸಂಭವಿಸಿತು.

ಸಂತಾಪ ಸೂಚನೆ

ಭಾರತವು ತನ್ನ ಸುಪುತ್ರನೊಬ್ಬನನ್ನು ಕಳೆದು ಕೊಂಡಿತು. ನರಸಿಂಗರಾಯರು ಕೆಲ ಸಮಯದಿಂದೀಚೆಗೆ ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದರು. ಅವಸಾನ ಕಾಲದಲ್ಲಿ ನಮ್ಮ ಜಿಲ್ಲೆಯ ದಕ್ಷಿಣ ವಿಭಾಗದಿಂದ ಪಾರ್ಲಿಮೆಂಟಿಗೆ ಆಯ್ಕೆ ಹೊಂದಿರುವ ಶ್ರೀ ಬೆನೆಗಲ್ ಶಿವರಾಯರೂ ಭಾರತದ ರಿಜರ್ವ ಬ್ಯಾಂಕಿನ ಗವರ್ನರರಾದ ಶ್ರೀ ಬೆನಗಲ್ ರಾಮರಾಯರೂ ನರಸಿಂಗರಾಯರ ಬಳಿ ಇದ್ದರು. ಈ ಇಬ್ಬರು ಸಹೋದರರೂ ತಮ್ಮ ಅಣ್ಣನ ಶವ ದಹನ ಕ್ರಿಯೆಯನ್ನು ಸಿಲ್‌ಫೆಲ್ಡ್ ಸ್ಮಶಾನದಲ್ಲಿ ನೆರವೇರಿಸಿ ಚಿತಾ ಭಸ್ಮವನ್ನು ಭಾರತಕ್ಕೆ ತರುವರು. ಭಾರತದ ಆದ್ಯಂತ ನರಸಿಂಗರಾಯರ ಬಗ್ಗೆ ಶೋಕಪ್ರದರ್ಶಿಸಲ್ಪಟ್ಟಿದೆ. ಲೋಕ ಸಭೆಯಲ್ಲಿ ಸಭಾನಾಯಕ ಪ್ರಧಾನಿ ನೆಹರೂರವರೂ ಅಧ್ಯಕ್ಷರೂ ಈ ವಿಷಯವನ್ನು ಪ್ರಸ್ತಾಪಿಸಿ ಎರಡು ನಿಮಿಷಗಳ ಮೌನ ಪ್ರಾರ್ಥನೆಯ ಮೂಲಕ ಗೌರವ ಸಲ್ಲಿಸಿದರು. ರಾಜ್ಯ ಪರಿಷತ್ತಿನಲ್ಲಿ ಉಪರಾಷ್ಟ್ರಾಧ್ಯಕ್ಷ ಡಾ| ರಾಧಾಕೃಷ್ಣನ್ನರು ಸಂತಾಪವನ್ನು ಸೂಚಿಸಿದರು. ಜಾಗತಿಕ ಮುತ್ಸದ್ದಿಗಳೆಲ್ಲರೂ ನರಸಿಂಗರಾಯರ ವ್ಯಕ್ತಿತ್ವವನ್ನು ಕೊಂಡಾಡಿಯೂ ಅವರ ಮೇಧಾವಿತನವನ್ನು ಪ್ರಶಂಸಿಸಿಯೂ ದುಃಖ ಸಂದೇಶವನ್ನು ನೀಡಿರುವರು. ನಮ್ಮ ಜಿಲ್ಲೆಯ ಪ್ರಖ್ಯಾತ ವ್ಯಕ್ತಿಯೊಂದು ಕಣ್ಮರೆಯಾಗಿರುವುದಕ್ಕೆ ನಮಗೂ ವ್ಯಸನವಾಗುತ್ತದೆ. ಪರಮಾತ್ಮನು ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನೊದಗಿಸಲೆಂಬ ಪ್ರಾರ್ಥನೆಯೊಂದಿಗೆ ನಮ್ಮ ಜನ ನರಸಿಂಗ ರಾಯರಂತೆ ತೇಜಸ್ವಿಯಾದ ಬಾಳ್ವೆಯನ್ನು ನಡೆಸಲೆಂದೂ ಕೋರುತ್ತೇವೆ.

ಆಂಧ್ರ ರಾಜಧಾನಿಯ ಪ್ರಶ್ನೆ

ಪ್ರಕಾಶಮರು ಆಂಧ್ರದಲ್ಲಿ ರಚಿಸಿದ ಮಂತ್ರಿಮಂಡಳಕ್ಕೆ ಎಷ್ಟರ ಮಟ್ಟಿನ ಬೆಂಬಲವಿರುವುದೆಂದು ಸ್ಪಷ್ಟಗೊಳ್ಳದೆ, ಅಲ್ಲಿಯ ಪರಿಸ್ಥಿತಿಯ ಕುರಿತು ಚಿಂತೆ ಹೋಗುವುದು ಸಾಧ್ಯವಿಲ್ಲ. ಗವರ್ನರರ ಭಾಷಣಕ್ಕೆ ಮುಂಚೆ ಸಭಾಧ್ಯಕ್ಷರ ಆಯ್ಕೆ ನಡೆದಾಗ ಸರಕಾರದ ಬೆಂಬಲವಿದ್ದ ಸದಸ್ಯರು ಜಯಶೀಲರಾದರು; ಆದರೆ ಬೆನ್ನಿಗೆ ಉಪಾಧ್ಯಕ್ಷರ ಚುನಾವಣೆ ನಡೆದಾಗ ಪರಿಸ್ಥಿತಿ ಕೂಡಲೇ ಬದಲಾಯಿಸಿ ಕಮ್ಯೂನಿಸ್ಟ ಹಾಗೂ ಪ್ರಜಾ ಸೋಶಲಿಸ್ಟರ ಬೆಂಬಲವಿದ್ದ ಶ್ರೀ ಸೂರ್ಯಚಂದ್ರರಾಯರು ಕಾಂಗ್ರೆಸ ಪ್ರತಿಸ್ಪರ್ಧಿಯನ್ನು ಸೋಲಿಸಿದರು. ಗವರ್ನರರ ಭಾಷಣದ ಮೇಲೆ ಚರ್ಚೆ ನಡೆದ ಕಾಲಕ್ಕೆ ಆಂಧ್ರದ ರಾಜಧಾನಿಯನ್ನು ಕರ್ನೂಲಿನಿಂದ ಗುಂಟೂರ, ವಿಜಯವಾಡಾ, ವಿಶಾಖಪಟ್ಟಣ ಇವುಗಳಲ್ಲಿ ಒಂದಕ್ಕೆ ಒಯ್ಯಬೇಕೆಂಬ ತಿದ್ದುಪಡಿಯು ಮಂಡಿಸಲ್ಪಟ್ಟಿತು. ಈ ವಿಷಯದಲ್ಲಿ ಯಾವ ಪಕ್ಷವೂ ಸರಕಾರದ ಸೂಚನೆಯಂತೆ ನಡೆಯುವ ಅಂದಾಜು ತೋರಲಿಲ್ಲ. ಪ್ರಕಾಶಮರು ಗುಟ್ಟಿನಲ್ಲಿ ಎಲ್ಲ ಪಕ್ಷಗಳ ಧುರೀಣರನ್ನು ಕರೆದು ಮಾತನಾಡಿ ಕೊನೆಗೆ ಈ ವಿಷಯದ ಚರ್ಚೆಗೆ ಸೋಮವಾರ ದಿನ ಪ್ರತ್ಯೇಕ ಅವಕಾಶನೀಡಲಾಗುವುದೆಂದು ನುಡಿದುದರಿಂದ ತಿದ್ದುಪಡಿಗಳು ಹಿಂದೆಗೆಯಲ್ಪಟ್ಟು, ಗವರ್ನರರಿಗೆ ಆಭಾರ ಸೂಚಿಸುವ ಠರಾವು ಅಂಗೀಕರಿಸಲ್ಪಟ್ಟಿತು. ಸೋಮವಾರ ಸರಕಾರೇತರ ಗೊತ್ತುವಳಿಯನ್ನು ಕಾಂಗ್ರೆಸ ಪಕ್ಷದ ಶ್ರೀ ಎಲ್. ಲಕ್ಷ್ಮಣದಾಸನವರು ಮಂಡಿಸಿ ಆಂಧ್ರದ ತಾತ್ಕಾಲಿಕ ರಾಜಧಾನಿಯನ್ನು ೧೯೫೬ನೇ ಅಕ್ಟೋಬರ ೧ನೇ ತಾರೀಕಿನವರೆಗೆ ಕರ್ನೂಲಿನಲ್ಲಿಯೇ ಇರಗೊಳಿಸಿ, ಆ ಬಳಿಕ ವಿಶಾಖಪಟ್ಟಣಕ್ಕೆ ಸ್ಥಳಾಂತರಿಸಬೇಕೆಂದು ಸೂಚಿಸಿದರು. ಇದರ ಮೇಲೆ ಚರ್ಚೆ ನಡೆದು ಅವಧಿಯನ್ನು ೧೯೫೬ನೇ ಇಸವಿ ಏಪ್ರಿಲನವರೆಗೆ ಕಡಿಮೆಮಾಡುವುದಕ್ಕೆ ಸಭೆ ಸಮ್ಮತಿಸಿತು. ಇನ್ನುಮುಂದೆ ರಾಜಧಾನಿಯ ಪ್ರಶ್ನೆಯನ್ನು ಆಗಿಂದಾಗ್ಗೆ ಎತ್ತಿ ಗೊಂದಲಮಾಡಬಾರದೆಂದು ಪ್ರಕಾಶಮರು ಸದಸ್ಯರನ್ನು ವಿನಂತಿಸಿದರು. ಹೀಗೆ ಆಂಧ್ರ ದೇಶದಲ್ಲಿ ಶಾಂತಿ ನೆಲೆಗೊಂಡಂತೆ ತೋರಿದೆ. ಅದು ಕ್ಷಣಿಕ ಶಾಂತಿಯಾಗದಿರಲೆಂಬುದೇ ನಮ್ಮ ಹಾರೈಕೆ.

ರಾಜ್ಯ ಪುನರ್ಘಟನೆಯ ಆಯೋಗ

ಪ್ರಕಾಶಮರು ಈ ಅವಧಿಯೊಳಗೆ ಭಾರತ ಸರಕಾರ ನೇಮಿಸಲಿರುವ ರಾಜ್ಯಗಳ ಪುನರ್ಘಟನೆಯ ಆಯೋಗ ವಿಶಾಲಾಂಧ್ರದ ರಚನೆಗೆ ಅನುಕೂಲವಾದ ವಾತಾವರಣವನ್ನುಂಟು ಮಾಡಿಯೇ ತೀರುವುದೆಂದು ಭಾವಿಸಿರುವಂತೆ ನಮಗನ್ನಿಸುತ್ತದೆ. ವಿಶಾಲಾಂಧ್ರದ ರಚನೆಯಾದರೆ ಆಗ ಹೈದರಾಬಾದು ನಗರವೇ ಆಂಧ್ರದ ಸ್ವಾಭಾವಿಕ ರಾಜಧಾನಿಯಾಗುತ್ತದೆ. ರಾಜ್ಯಗಳ ಪುನರ್ಘಟನೆಯ ಆಯೋಗವು ನವೆಂಬರ ತಿಂಗಳಲ್ಲಿಯೇ ರಚಿಸಲ್ಪಡುವುದೆಂದು ನಿರೀಕ್ಷೆ ಇದ್ದರೂ ಇದರಲ್ಲಿ ಕೆಲಸ ಮಾಡಲು ಯೋಗ್ಯ ಜನರು ಯಾರೆಂಬ ಹುಡುಕಾಟ ಇನ್ನೂ ಮುಗಿದಿಲ್ಲವಾಗಿ, ತುಸು ವಿಳಂಬ ಅನಿವಾರ್ಯವಾಗಿ ಘಟಿಸಿದೆ. ಹೀಗಿದ್ದರೂ ಈ ವರ್ಷಾಂತ್ಯದೊಳಗೆ ಆಯೋಗ ನೇಮಿಸಲ್ಪಡುವುದೆಂದೂ ಇದು ಭಾಷೆಯೊಂದನ್ನೇ ಅಲ್ಲ, ರಾಜ್ಯಗಳ ಪುನರ್ಘಟನೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನೂ ಪರಿಶೀಲಿಸುವುದೆಂದೂ ಪ್ರಧಾನ ಮಂತ್ರಿ ನೆಹರೂ ಹಾಗೂ ಉಪಗೃಹ ಮಂತ್ರಿ ಶ್ರೀ ದಾತಾರರ ಹೇಳಿಕೆಗಳಿಂದ ವ್ಯಕ್ತವಾಗುತ್ತದೆ. ಆಯೋಗದ ವರದಿಯನ್ನು ಸರಕಾರವೂ ಪಾರ್ಲಿಮೆಂಟೂ ಪರಿಶೀಲಿಸಿದ ಬಳಿಕ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದೆಂದು ತಿಳಿದಿದೆ.

ಕೈಮಗ್ಗ ಮತ್ತು ಖಾದಿಗೆ ಪ್ರೋತ್ಸಾಹ

ಪಾರ್ಲಿಮೆಂಟಿನ ಉಭಯ ಸಭೆಗಳೂ ಈಗ ಅಧಿವೇಶನದಲ್ಲಿ ಸೇರಿ, ವಿವಿಧ ಮಸೂದೆಗಳ ಪರಿಶೀಲನೆ ನಡೆಸುತ್ತಿವೆ. ಇವುಗಳಲ್ಲಿ ನಿರ್ದಿಷ್ಟ ಮಿತಿಗಿಂತ ಹೆಚ್ಚು ಪ್ರಮಾಣದಲ್ಲಿ ಗಿರಣಿಗಳು ಸೀರೆ ಧೋತರಗಳನ್ನು ಉತ್ಪಾದಿಸಿದರೆ, ಅವುಗಳ ಮೇಲೆ ಅಧಿಕ ಅಬಕಾರಿ ಸುಂಕವನ್ನು ಹೇರುವ ಮಸೂದೆ ಮುಖ್ಯವಾದದ್ದು. ಕೈಮಗ್ಗಗಳಿಗೆ ಇದರಿಂದ ಪ್ರಯೋಜನವಾಗುತ್ತದೆಂದು ಸರಕಾರ ಹೇಳಿದ್ದು ಮಸೂದೆ ಸ್ವೀಕರಿಸಲ್ಪಟ್ಟಿದೆ. ಆದರೆ, ಕೈಮಗ್ಗಗಳಿಗೆ ಇದರಿಂದ ಉಪಕಾರವಾಗುವ ಬದಲು ಗಿರಣಿಗಳ ಸ್ಪರ್ಧೆ ಈಗಿನದಕ್ಕಿಂತ ಹೆಚ್ಚಿಕೊಳ್ಳಲಾರದೇ ಎಂಬ ಅಂಶದ ಕಡೆಗೂ ನಾವು ಗಮನ ಕೊಡಬೇಕಾಗುತ್ತದೆ. ಉತ್ತರ ಭಾರತದ ಕೆಲವು ರಾಜ್ಯ ಸರಕಾರಗಳ ಸೂಚನೆಯಂತೆ ಈ ವಿಧೇಯಕವಾಯಿತೆಂದು ತಿಳಿಯುತ್ತದೆ ಅದೇನೇ ಇರಲಿ-ಕೈಮಗ್ಗದ ನೇಕಾರರ ಪ್ರಯೋಜನವಾಗುವಂತೆ ಸರಕಾರ ನಾನಾ ಬಗೆಯಲ್ಲಿ ಪ್ರಯತ್ನಿಸಬೇಕೆಂಬುವದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಈ ದೃಷ್ಟಿಯಿಂದ ವಿಚಾರಿಸಿದರೆ ಭಾರತ ಸರಕಾರದವರು ೧೯೫೪ನೇ ಇಸವಿಯಲ್ಲಿ ಟಪ್ಪಾಲು ಮತ್ತು ಅಂಚೆ ಇಲಾಖೆಯ ನೌಕರರಿಗೆಲ್ಲ ಖಾದಿಯ ಸಮವಸ್ತ್ರವನ್ನು ನೀಡಲಾಗುವುದೆಂದು ನಿರ್ಧರಿಸಿರುವುದು ಸ್ತುತ್ಯ ಹಾಗೂ ಅನುಕರಣೀಯವಾಗಿರುತ್ತದೆ. ಇದರಿಂದ ನೂರಕ್ಕೆ ಹನ್ನೆರಡರಷ್ಟು ವೆಚ್ಚ ಹೆಚ್ಚಾಗುವುದೆಂದು ಲೆಕ್ಕ ಹಾಕಿದ್ದರೂ—ಬಡ ನೇಕಾರರ ಗೋಳು ಕೆಲ ಮಟ್ಟಿಗೆ ನಿವಾರಣೆ ಹೊಂದುವ ತೃಪ್ತಿ ನಮಗೆ ದೊರೆಯುತ್ತದೆ. ಭಾರತದ ಎಲ್ಲ ನಾಗರಿಕರೂ ಖಾದಿಯನ್ನು ಧರಿಸಿ ಸ್ವದೇಶೀ ಮನೋಭಾವನೆಗೆ ಮೂರ್ತಸ್ವರೂಪಕೊಡಬೇಕಾದುದು ಅಗತ್ಯವೆಂದು ಈ ಸಂದರ್ಭದಲ್ಲಿ ಮರಳಿ ಸೂಚಿಸುತ್ತೇವೆ.

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ದರಗತಿಯ
—ವಸತಿ ಮತ್ತು ಭೋಜನಗೃಹ—
ಸ್ವಸ್ತಿಕ್ ಲೋಜ್
ವಳನೀರು ರಸ್ತೆ, ಮಂಗಳೂರು.
❖ ಗಾಳಿ-ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
❖ ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
❖ ವಾಸಾಮಾರಿಗಳಿಗೆ ಪರಿಶ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

70 ವರುಷಗಳಿಂದ ಜಗತ್ಪ್ರಸಿದ್ಧವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಆಗ್ ಮಿಕ್ಸ್ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು:-
ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತುಗೀಜ್ ಸ್ಟ್ರೀಟ್,
Tele. Add: "CAWASHABAD" ದಾದರ್, ಬೊಂಬಾಯಿ, 28

ಭಾರತದ ಗುರುಕುಲ
(ಯಕ್ಷಗಾನ)
ಬೆಲೆ: ೧ ॥ ೧
ಮದರಾಸು ಸರಕಾರದಿಂದ
ಸಂಭಾವನೆ ಪಡೆದ ಗ್ರಂಥ.
ಪಾಂಡವ ಭೀಮ ವಿಜಯ 0—8—0
ಲಕ್ಷ್ಮಣ ಪಗಡೆ 0—6—0
ಧರ್ಮೇಶ ದಿಗ್ವಿಜಯ 0—8—0
ವಾಲಿ ಸುಗ್ರೀವ 0—8—0
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATOIN LTD.,

Estd: 1906] [H. O: UDIPI (S. India.)

ನವಯುಗ

ಉಡುಪಿ, ಗುರುವಾರ ೩-೧೨-'೫೩

ಪ್ರಾಥಮಿಕ ವಿದ್ಯಾಭ್ಯಾಸದ ಹೊಸ ಕ್ರಮ

ಮದ್ರಾಸು ಸರಕಾರವು ಈ ಶಾಲಾ ವರ್ಷದಿಂದ ನಗರ ಸಭಾವಲಯ ಹಾಗೂ ಮೂಲ ಶಿಕ್ಷಣ ಕೇಂದ್ರಗಳ ಹೊರಗಿನ ಪ್ರಾಥಮಿಕ ಶಾಲೆಗಳಲ್ಲಿ ಜ್ಯಾರಿಗೆ ತಂದ ಪರಿಷ್ಕೃತ ಶಿಕ್ಷಣ ಪದ್ಧತಿಯು ಒಳ್ಳೆಯ ಧ್ಯೇಯಾದರ್ಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡಿದೆಯೆಂದೂ — ಆದರೂ ಕೆಲವು ವ್ಯವಹಾರಿಕವಾದ ತೊಂದರೆ ಹಾಗೂ ಸಂದೇಹಗಳಿಗೆ ನಿವಾರಣೆ ಆಗತ್ಯವೆಂದೂ ತೋರಿದ್ದಿವು. ಈಗ ತಾನೆ ತನ್ನ ವರದಿಯನ್ನು ಒಪ್ಪಿಸಿರುವ ಪರುಳೇಕರ ಸಮಿತಿಯು ಈ ವಿಷಯದಲ್ಲಿ ಕೆಲವು ಅಮೂಲ್ಯ ಸಲಹೆಗಳನ್ನೂ ಸೂಚನೆಗಳನ್ನೂ ಕೊಟ್ಟಿರುತ್ತದೆ. ಮದ್ರಾಸು ಸರಕಾರದ ನೂತನ ಉಪಕ್ರಮದ ಉದ್ದೇಶವನ್ನು ಅದು ಮುಕ್ತ ಕಂಠದಿಂದ ಹೊಗಳಿರುವುದು ಈ ಪದ್ಧತಿಯು ಶಿಕ್ಷಣದ ಮಹತ್ವವನ್ನೇ ಅಳಿಸಿಬಿಡುವುದೆಂದು ಅಭಿಪ್ರಾಯ ವ್ಯಕ್ತಗೊಳಿಸಿದವರ ತಿಳಿಗೇಡಿತನವನ್ನು ಎತ್ತಿ ತೋರಿಸುತ್ತದೆ. ಅದೇ ಕಾಲಕ್ಕೆ ತನ್ನ ಸಿಫಾರಸುಗಳೊಂದಿಗೆ ಈ ಪದ್ಧತಿಯನ್ನು ಹೊಂದಿಸಿಕೊಂಡು ಹೋಗದಿದ್ದರೆ, ವ್ಯಾವಹಾರಿಕವಾದ ತೊಡಕು ತೊಂದರೆಗಳು ನಿವಾರಣೆಯಾಗಲಾರವೆಂದೂ ಸಮಿತಿ ಅಭಿಪ್ರಾಯಪಟ್ಟಿದೆ. ಸಮಿತಿಯು ಈ ಪದ್ಧತಿಯ ಶೈಕ್ಷಣಿಕ ಮಹತ್ವವನ್ನೂ ರಾಜ್ಯಸರಕಾರವು ವಿದ್ಯಾಭ್ಯಾಸದ ವಿಷಯದಲ್ಲಿ ಘಟನಾತ್ಮಕವಾಗಿ ನಿರ್ವಹಿಸಬೇಕಾದ ಪಾತ್ರವನ್ನೂ ಒಟ್ಟಿಗೆ ಪರಿಶೀಲಿಸಿರುವುದನ್ನು ನಾವು ಗಮನಿಸಬೇಕು. ಸಮಿತಿಯವರು ರಾಜ್ಯಾಂಗ ಘಟನೆಯ ನಿರ್ದೇಶಕ ತತ್ವವನ್ನು ಆಚರಣೆಯಲ್ಲಿ ತರುವುದಕ್ಕೆ ಮದ್ರಾಸು ಸರಕಾರದ ಈ ಕ್ರಮ ಅತ್ಯಂತ ವ್ಯವಹಾರ್ಯವಾದ ಮಾರ್ಗವೆಂದು ಹೇಳಿರುವುದೂ ಇಂದಲ್ಲ, ನಾಳೆಯಾದರೂ ಭಾರತದ ಎಲ್ಲ ರಾಜ್ಯ ಸರಕಾರಗಳೂ ಇಂಥದೊಂದು ರೀತಿಯನ್ನು ಅನುಸರಲೇ ಬೇಕಾಗಿ ಬರುವುದೆಂದು ಭವಿಷ್ಯ ನುಡಿದಿರುವುದೂ ರಾಜಾಜಿಯವರು ಆತ್ಮವಿಶ್ವಾಸದ ಬಲದಿಂದ ಮುಂದಿಟ್ಟ ಹೆಜ್ಜೆಗೆ ತಕ್ಕುದಾದ ಪ್ರಶಂಸೆ. ಮಾತ್ರವಲ್ಲ ಡಾ. ಝುಕೀರ ಹುಸೇನ, ಶ್ರೀಮನ್ನಾರಾಯಣ ಅಗ್ರವಾಲಾರಂಥ ಶಿಕ್ಷಣ ತಜ್ಞರು ಈ ಪದ್ಧತಿಯು ಪಠ್ಯಪುಸ್ತಕದ ವಿದ್ಯಾಭ್ಯಾಸ ಹಾಗೂ ಮೂಲಶಿಕ್ಷಣ ಪದ್ಧತಿಗಳ ನಡುವೆ ಅಂತರ ಕಡಿಮೆಮಾಡುವ ಮಧ್ಯವರ್ತಿ ಯೋಜನೆಯಾಗಿರುತ್ತದೆಂದು ಹೇಳಿದ ಮಾತನ್ನು ಸಮಿತಿಯೂ ಒಪ್ಪಿದಂತಿದೆ. ಪ್ರಜಾ ಸಮಾಜವಾದೀ ಪಕ್ಷದ ಧುರೀಣ ಆಚಾರ್ಯ ಕೃಪಲಾನಿಯವರೂ ಈ ಪದ್ಧತಿಯಲ್ಲಿ ಒಳಿತನ್ನು ಕಂಡಿರುವರು. ಆದ ಕಾರಣ ನಾವು ಈ ಪದ್ಧತಿಯ ಶೈಕ್ಷಣಿಕ ಮಹತ್ವದ ಕುರಿತು ಇನ್ನೂ ಇನ್ನೂ ಸಂದೇಹ ವ್ಯಕ್ತಪಡಿಸುವುದು ಅನಗತ್ಯ. ಸಮಿತಿ ಸೂಚಿಸಿದ ಸಿಫಾರಸುಗಳನ್ನು ಮಾತ್ರ ನಾವು ತೂಗಿ ನೋಡುವುದು ಯೋಗ್ಯ. ಸುಧಾರಿತ ಪದ್ಧತಿಯು ಹೆಚ್ಚು ಮಕ್ಕಳಿಗೆ ವಿದ್ಯಾಭ್ಯಾಸದ ಸೌಲಭ್ಯವನ್ನು ಒದಗಿಸಬೇಕೆಂಬ ಘನವಾದ ಉದ್ದೇಶವಿಟ್ಟುಕೊಂಡಿದ್ದರೂ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಏರಿದಂತೆ ಕಾಣುವುದಿಲ್ಲ. ಈ ಸಂಗತಿಯಲ್ಲಿ ಹೆತ್ತವರನ್ನು ಜಾಗೃತಗೊಳಿಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದೂ ಸುಧಾರಿತ ಶಿಕ್ಷಣ ಪದ್ಧತಿ ಜ್ಯಾರಿಗೆ ಬಂದ ಪ್ರಥಮ ವರ್ಷವೇ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಕೈಗೂಡಬೇಕೆಂದೂ ತತ್ಪ್ರಯುಕ್ತ ವರ್ಷದ ನಡುವೆಯೆ ಯಾವಾಗ ಬೇಕೆಂದರಾಗ ಮಕ್ಕಳನ್ನು ಭರತಿ ಮಾಡಿಕೊಳ್ಳಲಾಗುವಂತೆ ದಾಖಲಾತಿಯ ನಿಯಮಗಳನ್ನು ಸಡಲಿಸಬೇಕೆಂದೂ ಸಮಿತಿಯ ಅಭಿಪ್ರಾಯ. ಈಗ ಪ್ರಚಲಿತವಿರುವ ಪಾಠಪಟ್ಟಿಯಲ್ಲಿ ಸುಧಾರಣೆಯಾಗಬೇಕೆಂದೂ ಅಧ್ಯಾಪಕರು ಒಂದೇ ದಿನ ಒಂದೇ ಪಾಠವನ್ನು ಎರಡೆರಡು ಸಲ ಹೇಳಿಕೊಡುವ ಶ್ರಮ ತಪ್ಪಿಸುವುದಕ್ಕೋಸ್ಕರ ಮುಂಜಾನೆ ಕ್ಲಿಷ್ಟ ಪಾಠಗಳನ್ನೂ ಮಧ್ಯಾಹ್ನ ಸುಲಭ ಪಾಠಗಳನ್ನೂ ಹೇಳಿಕೊಡಬಹುದೆಂದೂ ಸಮಿತಿ ಸಲಹೆ ಮಾಡಿದೆ. ಹುಡುಗರು ಒಂದೊಂದು ದಿನ ಒಂದೊಂದು ಹೊತ್ತು ಬರುವ ಈಗಿನ ಕ್ರಮದ ಬದಲು ಒಂದೊಂದು ವಾರ ಒಂದೊಂದು ಹೊತ್ತು ಬರುವಂತೆ ಮಾಡಿದರೆ ಗೊಂದಲಕ್ಕಿರುವ ಅವಕಾಶ ದೂರಾಗುವುದೆಂದು ಸಮಿತಿ ಸೂಚಿಸಿದೆ. ಇವೆಲ್ಲ ಸುಲಭದಲ್ಲಿ ನೆರವೇರಿಸಲಾಗುವ ಸೂಚನೆಗಳು; ಮತ್ತು ಸರಕಾರ ಇವನ್ನು ಮಾನ್ಯ ಮಾಡಲು ಯಾವ ಆತಂಕವೂ ಕಾಣುವುದಿಲ್ಲ. ಆದರೆ ಸಮಿತಿ ಮಾಡಿದ ಬೇರೆ ಕೆಲವು ಸೂಚನೆಗಳನ್ನು ಸರಕಾರ ಆರ್ಥಿಕ ಕಾರಣಗಳಿಂದ ಜ್ಯಾರಿಗೆ ತಾರದೆ ಹೋಗುವ ಭಯವಿದೆ. ಉದಾಹರಣೆಗೆ ಅಧ್ಯಾಪಕರ ಹೆಚ್ಚಿನ ಶ್ರಮಕ್ಕೆ ಯೋಗ್ಯ ಭಡ್ತಿ ದೊರೆಯಬೇಕೆಂದೂ ಈಗಿನ ನಿಷ್ಪ್ರಯೋಜಕ ಗ್ರಾಮಸಮಿತಿಗಳ ಸ್ಥಾನದಲ್ಲಿ ಸಂಬಳದಾರಿ ನೌಕರರನ್ನು ನೇಮಿಸಿ ಅವರಿಗೆ ಮಕ್ಕಳ ಶಾಲೇತರ ಚಟುವಟಿಕೆಯ ಹೊಣೆ ಒಪ್ಪಿಸಬೇಕೆಂದೂ ಹಳ್ಳಿಯ ಕಸಬುದಾರರು ಮಕ್ಕಳಿಗೆ ನೀಡುವ ಶಿಕ್ಷಣದ ಬಗ್ಗೆ ಯೋಗ್ಯ ಮಾಹಿತಿಯನ್ನು ಅವರಿಗೆ ಒದಗಿಸಿ, ಅವರ ಕೆಲಸಕ್ಕೆ ತಕ್ಕ ಪ್ರತಿಫಲ ಕೊಡಬೇಕೆಂದೂ ಸಮಿತಿ ಹೇಳಿರುವುದು ಸ್ತುತ್ಯವಾದರೂ — ಸರಕಾರ ಇವನ್ನು ಕಾರ್ಯರೂಪಕ್ಕಿಳಿಸುವುದು ಸಂಶಯ. ಸಮಿತಿಯೇ ಹೇಳಿದಂತೆ ಮದ್ರಾಸು ರಾಜ್ಯವು ಶಿಕ್ಷಣ ವಿಷಯದಲ್ಲಿ ಮಾಡುವ ವೆಚ್ಚ ಈಗಾಗಲೇ ಪರಮಾವಧಿ ಮಿತಿಯನ್ನು ಮುಟ್ಟಿರುತ್ತದೆ. ಇನ್ನೂ ಹೆಚ್ಚು ಹಣವನ್ನು ಅದು ಒದಗಿಸುವ ಪರಿಸ್ಥಿತಿ ಇರುವುದಿಲ್ಲ. ಆದರೆ ಅಧ್ಯಾಪಕರಲ್ಲಿಯೂ ಹೆತ್ತವರಲ್ಲಿಯೂ ಉತ್ಸಾಹವನ್ನೂ ಸ್ಫೂರ್ತಿಯನ್ನೂ ಸಹಕಾರ ಮನೋಭಾವವನ್ನೂ ಹುಟ್ಟಿಸದೆ ಈ ಪದ್ಧತಿಯು ಪ್ರಯೋಜನಕ್ಕೆ ಬರುವುದೂ ಅಸಾಧ್ಯ. ಆದಕಾರಣ ಡಿಪ್ಯುಟಿ ಇನಸ್ಪೆಕ್ಟರರು ಈ ಪದ್ಧತಿಯನ್ನು ಜನಪ್ರಿಯಗೊಳಿಸುವಂತೆ ಅಧ್ಯಾಪಕರನ್ನು ಪ್ರೇರಿಸಬೇಕು-ಶಿಕ್ಷಕರ ಮಾಸಿಕ ಕೇಂದ್ರದ ಸಭೆಯನ್ನು ಇದಕ್ಕೆ ಉಪಯೋಗಿಸಿಕೊಳ್ಳಬೇಕು. ಶಿಕ್ಷಕ ವರ್ಗದವರಾದರೂ ಕೆಲಸ ಹೆಚ್ಚುವುದೆಂಬ ಚಿಂತೆಯನ್ನು ಕಟ್ಟಿಕೊಳ್ಳದೆ ಮುಂದಿನ ಜನಾಂಗದ ಉಜ್ವಲ ಭವಿಷ್ಯಕ್ಕೆ ತನ್ನ ತ್ಯಾಗದಿಂದ ನೆರವು ದೊರೆಯುವುದೆಂಬ ಅಭಿಮಾನದಿಂದ ಈ ಪದ್ಧತಿಯನ್ನು ಯಶಸ್ವಿಗೊಳಿಸಲು ಸರ್ವವಿಧದಿಂದ ಪ್ರಯತ್ನಿಸತಕ್ಕದ್ದು ಕರ್ತವ್ಯ. ಜೀವನದಲ್ಲಿ ಉತ್ತಮ ಆದರ್ಶಗಳ ಸ್ಥಾನ ಮಾನವೇನೆಂಬುದನ್ನು ನಾವು ಪ್ರಖ್ಯಾತ ಪುರುಷರ ಚರಿತ್ರೆಯಿಂದ ತಿಳಿದುಕೊಂಡಿದ್ದೇವೆ. ಆರ್ಥಿಕ ಪ್ರತಿಫಲವೊಂದೇ ಬಾಳ್ವೆಯ ಜೀವಾಳವಲ್ಲವೆಂದೂ ಮನಗಂಡಿದ್ದೇವೆ. ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಜನಪ್ರಿಯಗೊಳಿಸುವ ಆಗತ್ಯ ಕಂಡುಬಂದ ಈ ಗಳಿಗೆಯಲ್ಲಿ ನಾವೀ ಸಂಗತಿಯನ್ನು ಮರೆಯಕೂಡದು. ಸರಕಾರ ಸಹ — ತನ್ನ ಕೈಯಿಂದ ಶಕ್ಯವಿದ್ದಷ್ಟು ಹೆಚ್ಚು ಬಗೆಯಿಂದ ಪ್ರೋತ್ಸಾಹ ಕೊಟ್ಟು ತಾನು ಜ್ಯಾರಿಗೆ ತಂದ ಶಿಕ್ಷಣ ಪದ್ಧತಿ ಯಶಸ್ಸು ಹೊಂದುವಂತೆಯೂ ಉಳಿದ ರಾಜ್ಯ ಸರಕಾರಗಳಿಗೆ ಅತ್ಯುತ್ತಮ ಮಾದರಿಯಾಗುವಂತೆಯೂ ನೋಡಿಕೊಳ್ಳಬೇಕು. ಸಾರ್ವಜನಿಕ ಸಹಕಾರವೂ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ದೊರೆಯುವಂತೆ ರಚನಾತ್ಮಕ ಕಾರ್ಯಕರ್ತರನ್ನೊಳಗೊಂಡು ಎಲ್ಲ ನಾಗರಿಕರು ದುಡಿಯಬೇಕು. ಉತ್ತಮ ಪರಿಣಾಮದ ಸ್ಪಷ್ಟ ಕಲ್ಪನೆ ಇದ್ದರೂ ವ್ಯಾವಹಾರಿಕ ಮಾರ್ಗದ ತೊಡಕುಗಳನ್ನು ನಿವಾರಿಸಲಾರದೆ ಹೋದೆವೆಂಬ ಕಾರಣಕ್ಕಾಗಿ ನಾವು ಧ್ಯೇಯ ಸಾಧನೆಯಲ್ಲಿ ಹಿಂಮುಳಿಯಲಾಗದು.

ಡೆಲ್ಲಿಯಲ್ಲಿ ಅಮೇರಿಕದ ಉಪಾಧ್ಯಕ್ಷ ನಿಕ್ಸನ್ನರು
ಪ್ರಧಾನಮಂತ್ರಿ ನೆಹರೂರೊಡನೆ ಭೇಟಿಯ ಕಾರ್ಯಕ್ರಮ

ಅಮೇರಿಕೆಯ ಉಪಾಧ್ಯಕ್ಷರಾದ ರಿಚಾರ್ಡ್ ಎಂ. ನಿಕ್ಸನ್ನರು ಈಗ ಭಾರತಕ್ಕೆ ಆಗಮಿಸಿ ಪ್ರಧಾನಮಂತ್ರಿ ನೆಹರೂರೊಡನೆ ಗಂಭೀರ ಸಮಾಲೋಚನೆಗಳಲ್ಲಿ ಮಗ್ನರಾಗಿದ್ದಾರೆ. ನಿಕ್ಸನ್ನರು ಭಾರತಕ್ಕೆ ಭೇಟಿಕೊಡುವುದೇಕೆ ಎಂಬ ಕುರಿತು ನಾನಾ ಬಗೆಯ ಊಹಾಪೋಹೆಗಳು ಎದ್ದಿದ್ದರೂ ಅವುಗಳ ತಾತ್ಪರ್ಯ ಮಾತ್ರ ಒಂದೇ ಯಾಗಿರುತ್ತದೆ—ಅಧ್ಯಕ್ಷ ಐಸೆನಹೋವರರಿಂದ ಭಾರತೀಯರಿಗೆ ಅಮೇರಿಕನ್ನರ ಪ್ರೀತಿ ಮತ್ತು ಸದಿಚ್ಛೆಗಳ ಸಂದೇಶವನ್ನು ತಂದಿರುವೆನೆಂದು ನಿಕ್ಸನ್ನರು ಪತ್ರಿಕಾಗೋಷ್ಠಿಯಲ್ಲೂ ಭಾಷಣಗಳಲ್ಲೂ ಹೇಳುತಿದ್ದರೂ ಅವರ ಆಗಮನದ ನಿಜೋದ್ದೇಶ ಬೇರೆಯೇ ಆಗಿರುತ್ತದೆಂದು ರಾಜಕಾರಣಿಗಳ ಪ್ರಾಮಾಣಿಕವಾದ ಅಭಿಪ್ರಾಯ. ನೆಹರೂರೊಡನೆ ನಿಕ್ಸನ್ನರು ನಡೆಸಿದ ಮಾತುಕತೆಗಳ ವಿವರ ಇನ್ನೂ ತಿಳಿದಿಲ್ಲವಾದರೂ ಪಾಕಿಸ್ತಾನದೊಡನೆ ಅಮೇರಿಕವು ಮಿಲಿಟರಿ ಒಡಂಬಡಿಕೆಯ ಪ್ರಸ್ತಾಪ ಮಾಡುತಿದ್ದುದೇ ಚರ್ಚೆಯ ವಿಷಯವಾಗಿರಬಹುದೆಂಬ ಎಲ್ಲರ ತರ್ಕ. ನೆಹರೂರವರು ಈ ಒಡಂಬಡಿಕೆಯ ಸೂಚನೆ ತಂದ ಗಳಿಗೆಯಿಂದ ಖಂಡ ತುಂಡ ಮಾತುಗಳಲ್ಲಿ ಭಾರತದ ನಿಲುವೆಯನ್ನು ಅವಕಾಶ ಸಿಕ್ಕಿದ ಹಾಗೆಲ್ಲ ಸ್ಪಷ್ಟಗೊಳಿಸುತ್ತಾ ಬಂದಿರುವರು. ಪಾಕಿಸ್ತಾನದಲ್ಲಿ ಮಿಲಿಟರಿ ಬಲವನ್ನು ಯಾವುದೇ ಕಾರಣದಿಂದ ಹೆಚ್ಚಾಗಲು ಬಿಡುವುದಕ್ಕೆ ಭಾರತ ಸುತರಾಂ ಇಷ್ಟಪಡುವುದಿಲ್ಲ—ಅಂಥ ಪ್ರಯತ್ನಗಳನ್ನು ಭಾರತ ಸರಕಾರ ಕಣ್ಣು ಮುಚ್ಚಿ ಕೈಕಟ್ಟಿ ನೋಡುತ್ತಾ ಕುಳಿತುಕೊಳ್ಳುವುದೂ ಆಗದ ಮಾತು. ಐಸೆನಹೋವರರು ನೆರೆರಾಷ್ಟ್ರಕ್ಕೆ (ಅರ್ಥಾತ್ ಭಾರತಕ್ಕೆ) ಅಸಂತೋಷ ಹುಟ್ಟಿಸುವ ಕೆಲಸವನ್ನು ಅಮೇರಿಕೆ ಮಾಡುವುದಿಲ್ಲೆಂದು ಹೇಳಿದರು. ಕಾರಣ— ನೆಹರೂರ ಸಂತೋಷ ಸಂಪಾದಿಸುವುದಕ್ಕೋಸ್ಕರ ತಮ್ಮ ಪ್ರತಿನಿಧಿಯಾಗಿ ನಿಕ್ಸನ್ನರನ್ನು ಕಳಿಸಿಕೊಟ್ಟಿರುವರೆಂದು ನಾವು ನಂಬಲು ಅಡ್ಡಿ ಇರುವುದಿಲ್ಲ.

ನೆಹರೂರ ಹೇಳಿಕೆ

ನಿಕ್ಸನ್ನರು ಭಾರತಕ್ಕೆ ಆಗಮಿಸಿದ ಗಳಿಗೆಯಲ್ಲಿಯೇ ಪಾರ್ಲಿಮೆಂಟು ಅಧಿವೇಶನದಲ್ಲಿ ಅಲ್ಪಾವಧಿ ಪ್ರಶ್ನೆಯೊಂದಕ್ಕೆ ನೆಹರೂರವರು ಉತ್ತರ ಕೊಡುತ್ತಾ ಪಾಕಿಸ್ತಾನದಲ್ಲಿ ಮಿಲಿಟರಿ ಠಾಣ್ಯಗಳನ್ನು ಪ್ರಸ್ಥಾಪಿಸುವ ಬಗ್ಗೆ ಅಮೇರಿಕಾದೊಡನೆ ಮಾತುಕತೆಗಳು ನಡೆದಿರುವುದೆಂಬ ಸಂಗತಿಯ ಕುರಿತು ಬೆಳಕು ಬೀರಿದರು. ಅಮೇರಿಕದ ಅಧ್ಯಕ್ಷರೂ ವಿದೇಶಾಂಗಸಚಿವರೂ ಪಾಕಿಸ್ತಾನದ ಗವರ್ನರಜನರಲ್ಲರೂ ನೀಡಿದ ಹೇಳಿಕೆಗಳು ಪರಸ್ಪರ ವಿರೋಧವಾಗಿರುತ್ತವೆಂಬ ಸಂಗತಿಯನ್ನು ನೆಹರೂ ಸ್ಪಷ್ಟೀಕರಿಸಿದರಲ್ಲದೆ—ಇವನ್ನು ಜವಾಬ್ದಾರಿಯನ್ನರಿತ ಪತ್ರಿಕೆಗಳು ಸಾಧಾರ ಪೂರ್ವಕ ಪ್ರಕಟಿಸಿದ ಲೇಖನಗಳೊಡನೆ ತುಲನೆ ಮಾಡಿದ ಪಕ್ಷದಲ್ಲಿ ಪಾಕಿಸ್ತಾನಕ್ಕೆ ಅಮೇರಿಕೆಯ ಸೈನಿಕ ಸಹಾಯ ದೊರೆಯಬೇಕೆಂಬ ಕುರಿತು ಮಾತುಕತೆಗಳು ನಡೆದದ್ದು ನಿಜವೆಂದು ವ್ಯಕ್ತಗೊಳ್ಳುವುದಾಗಿ ನೆಹರೂ ಸಾರಿದರು. ಭಾರತವು ಈ ಘಟನೆಗಳನ್ನೆಲ್ಲ ಜಾಗರೂಕತೆಯಿಂದ ಪರಿಶೀಲಿಸುತ್ತಿದೆಯೆಂದೂ ಅವಶ್ಯವೆನಿಸಿದ ಕ್ರಮಗಳನ್ನು ಸಕಾಲದಲ್ಲಿಯೇ ಕೈಗೊಳ್ಳಲಾಗುವುದೆಂದೂ ನೆಹರೂ ಭರವಸೆಕೊಟ್ಟರು. ಸಂಸತ್ತಿನ ಸದಸ್ಯರು ವಿಷಯಪಟ್ಟಿಯಲ್ಲಿ ಭಾರತದ ವಿದೇಶ ಧೋರಣೆಯ ಕುರಿತು

ಚರ್ಚೆ ನಡೆಸಬೇಕೆಂದು ಈಗ ಬಹಳ ಆಗ್ರಹಪಟ್ಟಿರುವರು.. ಮತ್ತು ನೆಹರೂರವರು ಒಲ್ಲದ ಮನಸ್ಸಿನಿಂದ ಇದಕ್ಕೆ ಒಪ್ಪಿಕೊಂಡಿರುವರೆಂಬ ಸುದ್ದಿ. ಪ್ರಧಾನ ಮಂತ್ರಿಗಳು ವಿದೇಶ ಧೋರಣದ ಕುರಿತು ಚರ್ಚೆಗೆಳೆಸುವಾಗ ಅನಿವಾರ್ಯವಾಗಿ ಪಾಕಿಸ್ತಾನಕ್ಕೂ ಅಮೇರಿಕೆಗೂ ಸೈನಿಕ ಸಹಾಯದ ಕುರಿತಾಗುವ ಮಾತುಕತೆಗಳನ್ನು ಪ್ರಸ್ತಾಪಿಸಬೇಕಾಗುವುದು. ಪರಿಸ್ಥಿತಿ ಇನ್ನೂ ನಾಜೂಕಾಗಿರುವಾಗ ಸಂಸತ್ತಿನಲ್ಲಿ ನಡೆಯುವ ಈ ಚರ್ಚೆ ದ್ವೇಷವನ್ನು ಹೆಚ್ಚಿಸಬಹುದೆಂದು ನೆಹರೂ ಸಂಶಯಗೊಂಡಂತೆ ತೋರುತಿದ್ದಿತು. ಆದರೆ ಮೌನವಾಗಿ ಕುಳಿತಷ್ಟೂ ಭಾರತಕ್ಕೆ ಅಪಾಯ ಹೆಚ್ಚುವುದು ನಿಶ್ಚಯವಾದುದರಿಂದ -- ಸರಕಾರದ ನಿಲುಮೆಯನ್ನು ಬಹಿರಂಗಗೊಳಿಸಿ ಸಂಸತ್ತಿನ ಸದಸ್ಯರ ಮೂಲಕ ಭಾರತದ ಜನತೆಯ ಬೆಂಬಲವನ್ನು ಪ್ರಧಾನ ಮಂತ್ರಿಗಳು ಗಳಿಸುವುದು ಅತ್ಯಂತ ಯೋಗ್ಯವಾಗಿರುತ್ತದೆ.

ಚೇದಿ ಜಗನ್‌ರ ವಿನಂತಿ

ಬ್ರಿಟಿಷ ಗಿಯಾನಾದಲ್ಲಿರುವ ಉತ್ಕಟ ಪರಿಸ್ಥಿತಿಯನ್ನು ಭಾರತದ ಜನತೆಗೆ ವಿವರಿಸಿ ಹೇಳಿ ಸಹಾನುಭೂತಿಯನ್ನೂ ಸಹಾಯವನ್ನೂ ಯಾಚಿಸಲು ಬಂದ ಅಲ್ಲಿಯ ಪದಚ್ಯುತ ಪ್ರಧಾನಿ ಡಾ. ಜಗನ್ನರೂ ಅವರ ಸರಕಾರದಲ್ಲಿ ಮಂತ್ರಿಗಳಾಗಿದ್ದ ಬರ್ನ್ಹ್ಯಾಮರೂ ಸಂಸತ್ತಿನ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿ ತಮ್ಮ ಸರಕಾರ ಹಾಗೂ ಜನತಾ ಪ್ರಗತಿ ಪಕ್ಷದ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಬ್ರಿಟಿಷರಿಂದ ತಮ್ಮ ದೇಶದ ನಿವಾಸಿಗಳ ಹಿತಕ್ಕೆ ಆಗುತ್ತಿರುವ ತೊಂದರೆಗಳನ್ನು ಅವರು ವಿವರಿಸಿ, ವಸಾಹತು ಪ್ರದೇಶಗಳು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯಬೇಕೆಂಬ ಉತ್ತಮಾದರ್ಶವನ್ನಿಟ್ಟುಕೊಂಡಿರುವ ಭಾರತ ತಮಗೆ ಸಹಾಯ ಮಾಡಬೇಕೆಂದು ಅವರು ವಿನಂತಿಸಿದರು. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತ ಈ ಪ್ರಶ್ನೆಯನ್ನು ಎತ್ತಬೇಕು. ಅಥವಾ ರಾಜಕೀಯ ಮಟ್ಟದಲ್ಲಿ ಬ್ರಿಟಿಷ ಸರಕಾರದ ಮೇಲೆ ತನ್ನ ನೈತಿಕ ವರ್ಚಸ್ಸನ್ನು ಬೀರಿ ಬ್ರಿಟಿಷ ಗಿಯಾನಿಗಳಿಗೆ ನ್ಯಾಯ ದೊರಕುವಂತೆ ಮಾಡಬೇಕು ಎಂಬುದವರ ಅಪೇಕ್ಷೆ. ಆದರೆ ಭಾರತ ಸರಕಾರ ಈ ಹೊಣೆಗಾರಿಕೆಯನ್ನು ಹೊರಲು ಹಗಲು ಕೊಡುವುದು ಸಾಧ್ಯವೇ? ನೆಹರೂರವರು ರಾಜ್ಯ ಪರಿಷತ್ತಿನಲ್ಲಿ ಈ ಕುರಿತು ಕೇಳಲಾದ ಪ್ರಶ್ನೆಯೊಂದನ್ನು ಉತ್ತರಿಸುತ್ತ ಪರಿಸ್ಥಿತಿಯ ಒತ್ತಡಬಾರದ ಹೊರತು ಭಾರತ ಸರಕಾರ ಯಾವ ಕ್ರಮವನ್ನೂ ಕೈಗೊಳ್ಳುವುದಿಲ್ಲವೆಂದು ತಿಳಿಸಿದರು. ಬ್ರಿಟಿಷ ಗಿಯಾನಿಗಳು ಸ್ವತಃ ಮಾಡಬೇಕಾಗಿರುವ ಕೆಲಸಗಳು ಇರುತ್ತ, ಭಾರತ ಸರಕಾರ ಈ ವಿಷಯದಲ್ಲಿ ಅನಾವಶ್ಯಕ ಹಸ್ತಕ್ಷೇಪ ಮಾಡುವುದು ಸಮಂಜಸವಾಗಲಾರದು. ಡಾ. ಜಗನ್ನರು ಈಗ ಭಾರತದಿಂದ ಧನ ಸಹಾಯವನ್ನೂ ತಮ್ಮ ಪಕ್ಷದ ಧುರೀಣರ ಪರವಾಗಿ ವಾದಿಸಲು ವಕೀಲರ ನೆರವನ್ನೂ ಕೇಳುತಿದ್ದಾರೆ. ಅವರು ಬ್ರಿಟಿಷ ಗಿಯಾನಕ್ಕೆ ಮರಳಿದರೆ ಅಲ್ಲಿ ಜೈಲಿನಲ್ಲಿ ಕೊಳೆಯಬೇಕಾಗುವುದೆಂದು ಮನಗಂಡು ಹೊರಗಿನಿಂದಲೇ ತಮ್ಮ ದೇಶಕ್ಕೆ ಯೋಗ್ಯ ಸಹಾಯವನ್ನು ದೊರಕಿಸಲು ಹವಣಿಸಿರುವರು.

ರಶಿಯಾದ ಅನುಕೂಲ ಮಾತು

ರಶಿಯಾವು ನಾಲ್ಕು ಮಹಾರಾಷ್ಟ್ರಗಳ ವಿದೇಶಾಂಗ ಸಚಿವರ ಪರಿಷತ್ತು ಸೇರುವುದಕ್ಕೆ ತನ್ನ ಸಮ್ಮತಿಯನ್ನು ಸೂಚಿಸಿದೆ. ಬರ್ಲಿನ ನಗರವನ್ನು ಅದು ಯೋಗ್ಯ ಸ್ಥಳವೆಂದು ಹೇಳಿದೆಯಲ್ಲದೆ ಜನವರಿ ಅಥವಾ ಫೆಬ್ರುವರಿ ಆದಿಯಲ್ಲಿ ಪರಿಷತ್ತು ಜರಗುವ ನಿರೀಕ್ಷೆಯೂ ಇದೆ. ಈ ಸಲ ರಶಿಯಾ ತನ್ನ ಹಿಂದಿನ ಕರಾರುಗಳಾವುದನ್ನೂ ಮುಂದಿಟ್ಟಿರುವುದಿಲ್ಲವೆಂಬುದು ಮಹತ್ವದ ಸಂಗತಿ. ಆದರೆ ದೂರಪ್ರಾಚ್ಯದ ಸಮಸ್ಯೆಗಳ ಕುರಿತಲ್ಲಿ ಜರ್ಮನಿಯ ಪ್ರಶ್ನೆಗೇ ರಶಿಯಾ ಪ್ರಾಧಾನ್ಯ ಕೊಟ್ಟಂತೆ ಕಾಣುತ್ತದೆ. ಬೆರ್ಮುಡಾದಲ್ಲಿ ಈಗ ತಾನೇ ಸೇರುವ ತ್ರಿರಾಷ್ಟ್ರದ ವರಿಷ್ಠರ ಪರಿಷತ್ತಿನಲ್ಲಿ ರಶಿಯಾ ನಾಲ್ಕು ಮಹಾರಾಷ್ಟ್ರಗಳ ಪರಿಷತ್ತಿಗೆ ತನ್ನ ಒಪ್ಪಿಗೆ ಸೂಚಿಸಿರುವುದರ ಕುರಿತು ವಿಚಾರ ವಿನಿಮಯವಾಗುವುದು ಖಂಡಿತ. ರಶಿಯಾದ ಒಪ್ಪಿಗೆಯು ಬ್ರಿಟನ್ನಿಗೆ ಸಂತೋಷವನ್ನು ತಂದಿದೆ; ಆದರೆ ಅಮೇರಿಕಾ ಇನ್ನೂ ಇದನ್ನೊಂದು ಗತ್ತುಗಾರಿಕೆಯಾಗಿ ತಿಳಿದಿರುತ್ತದೆ. ನಾಲ್ಕು ಮಹಾರಾಷ್ಟ್ರಗಳ ಪರಿಷತ್ತು ಒಳ್ಳೆಯ ಪರಿಣಾಮವನ್ನುಂಟು ಮಾಡಲಿಕ್ಕಿಲ್ಲವೆಂದು ಸಾಮಾನ್ಯ ಅಭಿಪ್ರಾಯವಾಗಿದ್ದರೂ ರಶಿಯಾದ ಒಪ್ಪಿಗೆಯನ್ನೇ ಒಂದು ಶುಭ ಸೂಚನೆಯಾಗಿ ನಾವು ತೆಗೆದುಕೊಳ್ಳುವುದು ವಿಹಿತ. ಶ್ರೀ ಕೃಷ್ಣ ಮೆನೊನ್ನರು ರಾಜಕೀಯ ಸಮಿತಿಯಲ್ಲಿ ರಶಿಯಾದ ಒಪ್ಪಿಗೆಯನ್ನು ಆದರದಿಂದ ಸ್ವಾಗತಿಸಿ ಇದರಿಂದ ಮುಂದೆ ಒಳ್ಳೆಯದಾಗಲೆಂದು ಹಾರೈಸಿರುವರು.

ಉಡುಪಿ

ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಶಾಖಾ ಮಂತ್ರಿ — ಮಾನ್ಯ ಶ್ರೀ ಕೆ. ವೆಂಕಟಸ್ವಾಮಿ ನಾಯುಡುರವರು ಕಳೆದ ತಾ 25ರಂದು ಸಂಜೆ ಮಂಗಳೂರಿನಿಂದ ಉಡುಪಿಗೆ ಬರುವಾಗ್ಗೆ ದಾರಿಯಲ್ಲಿ ಹಿರಿಯಡಕ ದೇವಸ್ಥಾನವನ್ನು ಸಂದರ್ಶಿಸಿ ಅಲ್ಲಿಯ ಪಂಚಾಯತ ಬೋರ್ಡಿನ ಮಾನಪತ್ರವನ್ನು ಸ್ವೀಕರಿಸಿದರು. ಬಳಿಕ ಮಣಿಪಾಲಕ್ಕೆ ಬಂದ. ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸುವಾಗ ಡಾ। ಟಿ. ಮಾಧವ ಪೈ ಕೆಪ್ಪನ್ ಮಂಗೇಶ ರಾವ್ ಮೊದಲಾದವರು ಸ್ವಾಗತವಿತ್ತು ಕಾಲೇಜಿನ ಪರಿಚಯವನ್ನು ಮಾಡಿಕೊಟ್ಟರು. ಅಲ್ಲಿಂದ ಮಂತ್ರಿಗಳು ಎಮ್. ಜಿ. ಎಮ್. ಕಾಲೇಜಿಗೆ ಭೇಟಿಯಿತ್ತಾಗ, ಪ್ರಿನ್ಸಿಪಾಲ್ ಎಚ್. ಸುಂದರ ರಾವ್, ಶ್ರೀ ಕೆ. ಪದ್ಮನಾಭ ಪೈ ಮೊದಲಾದವರು ಸ್ವಾಗತೀಕರಿಸಿದರು. ನಂತರ ಕಾಲೇಜು ಯೂನಿಯನ್ನಿನ ಸಭೆಯಲ್ಲಿ ಮಾನ್ಯ ಮಂತ್ರಿಗಳು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ, ದಕ್ಷಿಣಕನ್ನಡ ಜಿಲ್ಲೆಯ ಜನರು ಮೇಧಾವಿಗಳು, ಹಿಡಿದ ಕೆಲಸವನ್ನು ಸತತ ಪ್ರಯತ್ನಿಸಿ ಸಾಧಿಸುವವರು ಎಂದು ಮುಂತಾಗಿ ಹೇಳಿದರು. ಗಾಂಧೀಜಿಯವರ ಹೆಸರಿನಿಂದ ಸ್ಥಾಪಿತವಾದ ಈ ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅವರ ಆದರ್ಶ ತತ್ವಗಳನ್ನು ಪಾಲಿಸಿ ಯೋಗ್ಯ ಭಾರತೀಯರಾಗಬೇಕೆಂದು ಆಶಿಸಿದರು. ಯೂನಿಯನ್ ಅಧ್ಯಕ್ಷ ಶ್ರೀ ರಾಮಮೋಹನ ಹೆಗ್ಡೆಯವರು ಮಂತ್ರಿಗಳಿಗೆ ಹೂಮಾಲೆಯನ್ನರ್ಪಿಸಿದರು. ಕಾರ್ಯದರ್ಶಿ ಶ್ರೀ ರಘುರಾಮ. ಎನ್. ಪೈಗಳು ಧನ್ಯವಾದಗಳನ್ನಿತ್ತರು. ನಂತರ ಮಂತ್ರಿಗಳು ಉಡುಪಿಯ ಸಂಸ್ಕೃತ ಕಾಲೇಜನ್ನು ಸಂದರ್ಶಿಸಿದಾಗ ಪ್ರಿನ್ಸಿಪಾಲ್ ಕೌಲಗಿ ಶೇಷಾಚಾರ್ಯ, ಡಾ। ಪಿ. ಜಿ. ಆಚಾರ್ ಮೊದಲಾದವರು ಸ್ವಾಗತಗಿತ್ತರು. ಎಂಡೋಮೆಂಟ್ ಕಾನೂನು ಇಂತಹ ಪಾಠಶಾಲೆಗಳಿಗೆ ಧರ್ಮ ಸಂಸ್ಥೆಗಳಿಂದ ಧನ ಸಹಾಯ ನೀಡುವುದರಲ್ಲಿ ಸಹಕರಿಸುತ್ತಿದೆಯಾಗಿ ಮಂತ್ರಿಗಳು ಹೇಳಿದರು. ಅನಂತರ ಮಂತ್ರಿಗಳು ರಥಬೀದಿಗೆ ಬಂದು ಶ್ರೀ ಅನಂತೇಶ್ವರ ದೇವಾಲಯವನ್ನೂ ಶ್ರೀಕೃಷ್ಣ ಮಠವನ್ನೂ ಸಂದರ್ಶಿಸಿದರು.

ಸಾರ್ವಜನಿಕ ಸಭೆ — ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಮಂತ್ರಿಗಳನ್ನು ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಸ್ವಾಗತಿಸಿ ಹೂಮಾಲೆಯನ್ನರ್ಪಿಸಿದರು. ಮಂತ್ರಿಗಳು ತಮ್ಮ ಪೂರ್ವಪೀಠಿಕಾ ಭಾಷಣದಲ್ಲಿ ಶ್ರೀ ಟಿ. ಎ. ಪೈಗಳು ಧುರೀಣರಾಗುವ ಯೋಗ್ಯತೆಯುಳ್ಳವರೆಂದರು. ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಶಾಖೆಯ ಉದ್ದೇಶಗಳನ್ನು ವಿವರಿಸುತ್ತಾ ಧರ್ಮ ಸಂಸ್ಥೆಗಳು ಗತ ವೈಭವದಿಂದ ಯೋಗ್ಯ ರೀತಿಯಲ್ಲಿ ನಡೆದು ಬರಬೇಕೆಂಬ ಮಹತ್ವಾಕಾಂಕ್ಷೆಯಿಂದಲೇ ಈ ಕಾನೂನು ಮಾಡಲಾಗಿದೆ ಎಂದರು. ಈ ಧರ್ಮ ಸಂಸ್ಥೆಗಳ ಉಳಿತಾಯದ ಹಣದಿಂದ ಅನಾಥಾಲಯಗಳನ್ನೂ ಸ್ಥಾಪಿಸಿ ಅನಾಥ ಬಾಲಕರ ರಕ್ಷಣೆ ಮಾಡುವ ಹೊಣೆಯನ್ನು ಎಂಡೋಮೆಂಟ್ ಶಾಖೆಯು ವಹಿಸಿರುವುದೆಂದರು. ರಾಜ್ಯ ಸರಕಾರಕ್ಕೆ ಜನರ ಬೆಂಬಲವನ್ನು ಅಪೇಕ್ಷಿಸಿ ಭಾಷಣ ಕೊನೆಗೊಳಿಸಿದರು. ಶ್ರೀ ಎ ಜಿ. ಅಲ್ಸೆಯವರು ಮಂತ್ರಿಗಳ ಭಾಷಣವನ್ನು ಕನ್ನಡಿಸಿದರು. ಶ್ರೀ ಆರ್. ಆರ್. ಕುಂಜೂರರು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲು ಸಭೆಯು — ಕಳೆದ ತಾ 28ರಲ್ಲು ಸಂಜೆ ಚೇರ್ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ಪಾಂಡುರಂಗ ಶೆಣೈಯವರ ಪ್ರಶ್ನೆಗಳಿಗೆ ಉತ್ತರ ಕೊಡಲಾಯಿತು. ಬಳಿಕ ಸರಕಾರಿ ಆರ್ಡರುಗಳು ರಿಕಾರ್ಡು ಮಾಡಲಾಯಿತು. ಮುನಿಸಿಪಲ್ [illegible] ಹೊಟೆಲನ್ನು ಮುನಿಸಿಪಲ್ ಲ್ಯಾಬ್ರರಿ ಕಟ್ಟಡದಲ್ಲಿ ಇನ್ನೆರಡು ವರುಷ ಇರಗೊಡುವಂತೆ ರೆವಿನ್ಯೂ ಬೋರ್ಡಿನ ಒಪ್ಪಿಗೆ ಪಡೆಯಬೇಕೆಂದಾಯಿತು. ಮುನಿಸಿಪಲ್ ತೆಂಕಣ ಹಾ। ಎ। ಶಾಲಾ ಕಟ್ಟಡವನ್ನು ಬಾಡಿಗೆಗೆ ಕೊಡಲು ಸಾಧ್ಯವಿಲ್ಲವೆಂದು ಮಡುಗಿಯದ ಶಾಲಾ ಇನ್ಸ್ಪೆಕ್ಟರ್ಸ್ಸರವರಿಗೆ ತಿಳಿಸಲಾಯಿತು.

ಉಪಹಾರ ಸಮಾರಂಭ — ಉಡುಪಿಯ ಸಾಹುಕಾರ್ ಮಿ। ಎಚ್. ಜಿ. ಆಂದ್ರಾದೆಯವರು ಕಳೆದ ತಾ 25ರಲ್ಲು ಮಂಗಳೂರಲ್ಲಿ ಕುಮಾರಿ ಕ್ಲೊತಿಲ್ಡಾಳನ್ನು ವಿವಾಹವಾದುದರ ಸಂತೋಷ ಸೂಚನಾರ್ಥವಾಗಿ ತಾ 29ರಲ್ಲು ಪೂರ್ವಾಹ್ನ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಉಪಹಾರ ಕೂಟವೊಂದನ್ನೇರ್ಪಡಿಸಿದ್ದರು. ಊರ ಪ್ರಮುಖರನೇಕರು ಈ ಸಮಾರಂಭಕ್ಕೆ ಆಮಂತ್ರಿಸಲ್ಪಟ್ಟಿದ್ದರು.

ಡಾ। ಟಿ. ಎಮ್. ಎ. ಪೈಗಳಿಗೆ ಹೈದರಾಬಾದಿನಲ್ಲಿ ಸತ್ಕಾರ ಕೂಟಗಳು

ಡಾ। ಟಿ. ಮಾಧವ ಪೈಗಳು ತಾ. 13ರಂದು ಮದ್ರಾಸಿನಿಂದ ಹೈದರಾಬಾದಿಗೆ ವಿಮಾನ ಮೂಲಕ ಆಗಮಿಸಿದಾಗ ಅವರನ್ನು ವಿಮಾನ ನಿಲ್ದಾಣದಲ್ಲಿ ಪುರಪ್ರಮುಖ ಗೆಳೆಯರನೇಕರು ಸ್ವಾಗತಿಸಿದರು. ಆ ದಿನ ಮಧ್ಯಾಹ್ನ ಡಾ। ಪೈಗಳು ಅಲ್ಲಿಯ ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ಸಂದರ್ಶಿಸಿದರಲ್ಲದೆ ಉಸ್ಮಾನಿಯಾ ಆಸ್ಪತ್ರೆಗೂ ಭೇಟಿ ಕೊಟ್ಟರು. ಮಧ್ಯಾಹ್ನ ಡಾ। ಪೈಗಳಿಗೆ ಮುನಿಸಿಪಲ್ ಕೌನ್ಸಿಲರ್ ಮಿ। ಮಹಮ್ಮದ್ ಸಿದ್ದಿಕಿಯವರು ಸತ್ಕಾರ ಕೂಟವನ್ನೇರ್ಪಡಿಸಿ ಗೌರವಿಸಿದರು. ಸಂಜೆ ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಸ್ಪೆಶಲ್ ಸಬ್ ಕಮಿಟಿ ಸದಸ್ಯರು ಡಾ। ಪೈಗಳಿಗೆ ಚಹಾ ಸತ್ಕಾರವನ್ನಿತ್ತರು. ಬಳಿಕ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಸಿಕಂದರಾಬಾದ್ ಶಾಖೆಯ ಏಜಂಟರು ಡಾ। ಪೈಗಳ ಗೌರವಾರ್ಥವಾಗಿ ಉಪಹಾರ ಸಮಾರಂಭವನ್ನೇರ್ಪಡಿಸಿದರು. ಹೈದರಾಬಾದ್ ಸರಕಾರದ ಆರ್ಥಿಕ ಮಂತ್ರಿ ಡಾ। ಜಿ. ಎಸ್. ಮೇಲುಕೋಟೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಡಾ। ಪೈಗಳು ಬೇಂಕಿಂಗ್ ಮಹತ್ವ, ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಚರಿತ್ರೆ ಮೊದಲಾದುವುಗಳ ಕುರಿತು ಭಾಷಣವಿತ್ತರು. ಶ್ರೀ ವಿ. ಎಸ್. ಪಕ್ಕಳರು ಧನ್ಯವಾದಗಳನ್ನರ್ಪಿಸಿದರು. ಆ ದಿನ ರಾತ್ರಿ ತಾಜಮಹಾಲ್ ಹೊಟೆಲ್ ಒಡೆಯರು ಡಾ। ಪೈಗಳಿಗೆ ಭೋಜನ ಕೂಟವನ್ನೇರ್ಪಡಿಸಿ ಗೌರವಿಸಿದರು. ಈ ಎಲ್ಲಾ ಸಮಾರಂಭಗಳಲ್ಲೂ ಊರ ಪ್ರಮುಖರನೇಕರು ಭಾಗವಹಿಸಿದ್ದರು.

ದ. ಕ. ಜಿಲ್ಲೆಗೆ ಭಾರತೀಯ ನೃತ್ಯ ಕಲಾವಿದರ ಆಗಮನ — ದ. ಕ. ಜಿಲ್ಲೆಯಲ್ಲಿ ಜನ್ಮವೆತ್ತಿ ಬೊಂಬಾಯಿಯಲ್ಲಿ ನೃತ್ಯಕಲೆಯನ್ನು ಅಭ್ಯಸಮಾಡಿ, ಭಾರತೀಯ ಕಲಾ ಮಂಡಳಿಯನ್ನು ಸ್ಥಾಪಿಸಿರುವ ಅಖಿಲ ಭಾರತ ಕೀರ್ತಿಯ ನಾಟ್ಯಾಚಾರ್ಯ ಶ್ರೀ ಕೆ. ಕೆ. ಶೆಟ್ಟರು ಸಹಿತ ನೃತ್ಯ, ನೃತ್ಯಕಿಯರನ್ನು ಕೂಡಿಕೊಂಡು ಸದ್ಯವೇ ದಕ್ಷಿಣಕನ್ನಡ ಜಿಲ್ಲೆಗೆ ಬರುವವರಿದ್ದಾರೆ. ಶ್ರೀ ಉದಯ ಶಂಕರರ ಶಿಷ್ಯರಾದ ಶ್ರೀ ಶೆಟ್ಟರಿಗೆ ದ. ಕ. ಜಿಲ್ಲೆಯ ಮಹಾಜನರು ಯೋಗ್ಯ ಪ್ರೋತ್ಸಾಹವನ್ನೀಯುವರೆಂದು ನಿರೀಕ್ಷಿಸಲಾಗಿದೆ.

NAVAYUGA
Popular Kannada Weekly.
Founder:—
Sri A. B. SHETTY.
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ.
ಸ್ಥಾಪಕರು.- ಶ್ರೀ. ಎ. ಬಿ. ಶೆಟ್ಟಿ,
ಮದ್ರಾಸಿನ ಆರೋಗ್ಯಮಂತ್ರಿ.
ವಾ. ಚಂದಾ: ರೂ. 5-12-0
ಬಿಡಿಪ್ರತಿ: 0- 2-0

ಪರಿಪನದಲ್ಲಿ ಮೇಲು ಕೀಳುಯಾರೆಂದು ಕೇಳಿದರೆ ಪಾರ್ವತಿ ಏನು ಹೇಳಿಯಾಳು?
ಪಾರ್ವತಿಯ ಮಾತುಕೇಳಿ ಮರದ ಮೇಲಿನ ಗಿಳಿಯೊಂದು ನಕ್ಕರೆ ಅದರ ಗತಿಯೇನಾದೀತು?
—೦— ಇದೇ ನೀತಿಯ ಮುಕ್ತಿ ಮಾರ್ಗದ ಚಿತ್ರ —೦—
ತಾರೀಕು 2-12-1953ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಶುಕ್-ರಂಭಾ
ಅಂಜಲಿದೇವಿ, ಭರತ್ ಭೂಷಣ್, ನಿರುಪಾರ್ರೊ ಮೊದಲಾದವರು.
ಬರುವ ಚಿತ್ರ:- ತಮ್ಮ ನಿರೀಕ್ಷಣೆಯ "ಪತಿತಾ"

WANTED

A secondary Grade trained teacher for employment in the Shri Durga Parameshwari Higher. Ele. school. Apply to the correspondent of the school before 15 12-53 and a copy to the Dy. Inspector of schools. Udipi South Range.

Correspondent,
D. P. Hr. Ele. school, Bontakal.
Post: Shirva, S. K.
Station: Bantkal. Date 2 12 53

ಕರ್ನಾಟಕ ಪ್ರಾಂತೀಯ ಮಹಿಳಾ ಪರಿಷತ್ತು

ಹತ್ತನೆಯ ಅಧಿವೇಶನವು ಕಳೆದ ತಾ 28ರಲ್ಲು ಸಂಜೆ ಮಂಗಳೂರು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠ ಶಾಲೆಯಲ್ಲಿ ಶ್ರೀಮತಿ ಡಾ। ಸಾವಿತ್ರಿ ಬಾಯಿ ನಾಗಣ್ಣ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಶಾಂತೇರಿ ಜೆ. ಪ್ರಭುಗಳು ಅಧ್ಯಕ್ಷೆಯ ಪರಿಚಯ ಮಾಡಿದರು. ಸ್ವಾಗತ ಸಮಿತಿಯ ಅಧ್ಯಕ್ಷೆ ಶ್ರೀಮತಿ ಲೀಲಾ ಬಾಯಿ ಏಕಾಂಬರ ರಾಯರು ಸ್ವಾಗತ ಭಾಷಣ ಮಾಡುತ್ತಾ ಸ್ತ್ರೀಯರ ಹಲವಾರು ಸಮಸ್ಯೆಗಳನ್ನು ಈ ಅಧಿವೇಶನದಲ್ಲಿ ಆಲೋಚಿಸಬೇಕಾಗಿದೆ ಎಂದರು. ಸ್ವಾಗತ ಸಮಿತಿ ಕಾರ್ಯದರ್ಶಿ ಶ್ರೀಮತಿ ಉಮಾ ವಿ. ಕಾಮತರು ಹಲವಾರು ಮಂದಿ ಸ್ತ್ರೀಪುರುಷರಿಂದ ಬಂದ ಸಂದೇಶಗಳನ್ನು ಓದಿದರು. ಶ್ರೀಮತಿ ಉಮಾ ಬಾಯಿ ಕುಂದಾಪುರ, ಅವರು ಪರಿಷತ್ತನ್ನು ಉದ್ಘಾಟಿಸುತ್ತಾ ಮಹಿಳಾ ಸಮಾಜಗಳು ಅಧಿಕ ಸಂಖ್ಯೆಯಲ್ಲಿ ಸ್ಥಾಪಿಸುವಂತಾಗಬೇಕೆಂದು ತಿಳಿಸಿದರು. ಸ್ವತಂತ್ರ ಭಾರತದಲ್ಲಿ ಮುಂದಿನ ಜನಾಂಗವಾದ ಮಕ್ಕಳನ್ನು ರಾಷ್ಟ್ರದ ಆಡಳಿತೆಯ ಜವಾಬ್ದಾರಿ ವಹಿಸಲು ನಾವು ತಯಾರು ಮಾಡಬೇಕು ಎಂದು ಮೊದಲಾಗಿ ಹೇಳಿದರು.

ಡಾ। ಶ್ರೀಮತಿ ಸಾವಿತ್ರಿ ಬಾಯಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಹಿಳೆಯರು ಮಿತವ್ಯಯವನ್ನು ಚೆನ್ನಾಗಿ ಅಭ್ಯಾಸಿಸಬೇಕೆಂದು ಸೂಚನೆಯಿತ್ತರು. ಹೊಸರಾಜ್ಯಘಟನೆಯ ರೂಢಿಯಲ್ಲಿ ಬಂದಂದಿನಿಂದ ಕರ್ನಾಟಕ ಮಹಿಳಾ ಸಮ್ಮೇಳನ ಜರಗಿದುದು ಇದೀಗ ಪ್ರಥಮ ಸಲ. ಸಮಾಜದಲ್ಲಿ ಸ್ತ್ರೀಯರ ಸ್ಥಾನ ಮಹತ್ವದ್ದಾಗಿದೆ. ಸಮಾಜವನ್ನು ರೂಪಿಸುವ ಜವಾಬ್ದಾರಿ ಹೆಚ್ಚಿನಂಶ ಮಹಿಳೆಯರ ಮೇಲಿದೆ. ಆದುದರಿಂದ ಸ್ತ್ರೀಯರು ತಮ್ಮ ಕಾರ್ಯಕ್ಷೇತ್ರವನ್ನು ಮನೆಯಿಂದ ಹೊರಗೂ ವಿಸ್ತರಿಸಬೇಕಾಗಿದೆ. ಮಹಿಳಾ ಸಂಘಗಳು ಪ್ರತಿ ಜಿಲ್ಲೆ, ತಾಲೂಕು, ಹಳ್ಳಿಗಳಲ್ಲಿ ತೆರೆಯುವಂತಾಗಬೇಕು. ಸ್ತ್ರೀ ಸಮಾಜದಲ್ಲಿ ಮಧ್ಯಮ ವರ್ಗದವರ ಸ್ಥಿತಿಗತಿ ಹೃದಯ ದ್ರಾವಕವಾಗಿದೆ. ಇವರ ಸ್ಥಿತಿಗತಿಗಳು ಸುಧಾರಿಸ ಬೇಕಾಗಿವೆ. ಮಹಿಳೆಯರು ತಮ್ಮ ಅನುನಿತ್ಯದ ಜೀವನದಲ್ಲಿ ಮಿತವ್ಯಯವನ್ನು ಅಭ್ಯಾಸ ಮಾಡಬೇಕು. ದೇವದಾಸಿ ಪದ್ಧತಿ, ವೇಶ್ಯಾ ಪದ್ಧತಿ, ಇವು ಪರಂಪರೆಯಿಂದ ಜೀವ ಹಿಡಿದುಕೊಂಡು ಬಂದ ಪದ್ಧತಿಗಳು. ಈಗಿನ ಕಾಲದಲ್ಲಿ ಅವುಗಳಿಗೆ ಆಸ್ಪದವಿಲ್ಲ. ಇವುಗಳನ್ನು ಹೋಗಲಾಡಿಸದೆ ಸಮಾಜವು ಉನ್ನತಿಯನ್ನು ಪಡೆಯಲಾರದು. ಸಾಹಿತ್ಯ ಕ್ಷೇತ್ರ, ಶಿಕ್ಷಣ ರಂಗಗಳಲ್ಲಿಯೂ ಮಹಿಳೆಯರು ವಹಿಸಬೇಕಾದ ಜವಾಬ್ದಾರಿ ಮಹತ್ವದ್ದಿದೆ. ಸ್ವತಂತ್ರ ಭಾರತದ ಸ್ಥಾನಮಾನವಿಂದು ಜಗತ್ತಿನಲ್ಲಿ ಎತ್ತಿ ತೋರುತ್ತಿದೆ. ಇದನ್ನು ಕಾಯ್ದುಕೊಂಡು ಹೋಗಲು ಮಹಿಳೆಯರು ಕೂಡಾ ತಮ್ಮ ಪಾಲಿನ ಸೇವೆಗಳನ್ನು ಸಲ್ಲಿಸಬೇಕಾಗಿದೆ ಎಂದೂ ಹೇಳಿದರು.

[೪ನೇ ಪುಟದಿಂದ]

(೪) ಅಂಥ ಕಾರ್ಯಕ್ರಮಗಳು ಆಸಕ್ತಿಯ ನಿರೀಕ್ಷಣೆಯಿಂದ ಉತ್ಸಾಹದಿಂದ ಭಾಗವಹಿಸುವಂತೆ ಮಗುವಿಗೆ ಉತ್ತೇಜನ ಕೊಡುವುವು; ಮತ್ತು ಕೃಷಿ, ತೋಟಗಾರಿಕೆ, ಕೈಕೆಲಸ, ಆರೋಗ್ಯ, ಆಟ, ವಿನೋದ ಮತ್ತು ಸಾಂಸ್ಕೃತಿಕ ವಿಷಯಗಳಜ್ಞಾನ ಮಾಡಿಕೊಡುವುವು; ಮತ್ತು

(೫) ಈ ರೀತಿ ಮಗುವಿಗೂ ಸಮಾಜಕ್ಕೂ ಶಾಲೆಗೂ ಸಮಾಜಕ್ಕೂ ಅತ್ಯುತ್ತಮ ಸಂಬಂಧ ಏರ್ಪಡುವುದು.

ಈ ಉದ್ದೇಶಗಳು ಉತ್ತಮವಾಗಿವೆ ಎಂದು ಸಮಿತಿ ಹೇಳಿರುತ್ತದೆ—ಆದರೆ ಅವು ಈಡೇರುವ ಬಗೆಯ ಮೇಲೆಯೇ ಉದ್ದೇಶದ ಸಾರ್ಥಕತೆ ನೆಲಸಿದೆಯೆಂದೂ ಸಮಿತಿ ಹೇಳಿದೆ. ಈ ವಿಷಯದಲ್ಲಿ ಸರಕಾರ ಮಾಡಬೇಕಾದ ಕೆಲಸಗಳು ಅಪೂರ್ಣವಾಗಿರುತ್ತವೆಯೆಂದು ಸಮಿತಿ ತೀರ್ಮಾನಿಸಿದೆ. ಉತ್ಪಾದಕ ವಸ್ತುಗಳಲ್ಲಿ ಮಕ್ಕಳು ಸಹ ಕಲಿಸುವ ಬಗ್ಗೆಯೂ ಸುವ್ಯವಸ್ಥಿತವಾದ ಕಾರ್ಯಕ್ರಮವನ್ನು ರೂಪಿಸುವ ಕುರಿತಾಗಿಯೂ ಹಳ್ಳಿಯ ಕೈಗಾರಿಕೆಗಳಲ್ಲಿ ನಿರತರಾದವರ ಸೇವೆಯನ್ನು ಒದಗಿಸಿಕೊಳ್ಳುವ ಸಂಗತಿಯಲ್ಲೂ ಸಮಿತಿ ಸಲಹೆಗಳನ್ನೂ ಸೂಚನೆಗಳನ್ನೂ ಮಾಡಿರುತ್ತದೆ. ಮಕ್ಕಳು ಉತ್ಪಾದಕ ಕೆಲಸಗಳಲ್ಲಿ ಪ್ರವೃತ್ತರಾಗುವುದರ ಮಹತ್ವವನ್ನು ಸಮಿತಿ ಮೆಚ್ಚಿಕೊಂಡಿರುವುದಲ್ಲದೆ, ಹಳ್ಳಿಯ ಕೈಗಾರಿಕೆಗಳಲ್ಲಿಯೂ ಮಕ್ಕಳು ಆಸಕ್ತರಾದರೆ ಗ್ರಾಮೋದ್ಯೋಗಗಳು ಮರಳಿ ಉಚ್ಛ್ರಾಯಾವಸ್ಥೆಯನ್ನು ಮುಟ್ಟಬಹುದೆಂದು ವಿಶ್ವಾಸ ಹುಟ್ಟಿಸಿದೆ. ಇವೆಲ್ಲ ಧ್ಯೇಯಗಳ ಪೂರ್ತಿಗಾಗಿ ಸಮಿತಿ ಅತ್ಯುತ್ತಮ ಶಿಫಾರಸುಗಳನ್ನು ಮಾಡಿರುತ್ತದೆ.

ಕೊನೆಯಲ್ಲಿ "ಇದೊಂದು ಒಳ್ಳೆಯ ಕಾರ್ಯಕ್ರಮ. ವರಸೆಕ್ರಮಕ್ಕಿಂತಲೂ ಹೆಚ್ಚು ಯೋಗ್ಯವಾದದ್ದು. ಆದರೆ ಹೆಚ್ಚು ಜಾಗರೂಕತೆಯಿಂದ ಇಲ್ಲಿ ನಡೆಯಬೇಕಾಗಿರುತ್ತದೆ. ನಮ್ಮ ಉದ್ದೇಶಗಳು ಎಷ್ಟು ಘನವಾಗಿದ್ದರೂ ಚೊಕ್ಕ ರೀತಿಯಲ್ಲಿ ಕೆಲಸ ನಿರ್ವಹಿಸದಿದ್ದರೆ ಅವು ನಿಷ್ಪ್ರಯೋಜಕವಾಗುತ್ತವೆ. ತನ್ನ ಮಕ್ಕಳಿಗೆ ಶಿಕ್ಷಣ ಒದಗಿಸುವ ಕುರಿತು ಆಸಕ್ತಿಯನ್ನು ಸಮಾಜವೇ ವಹಿಸುವಂತೆ ಮಾಡುವುದು ಚಂದ — ಹಾಗೆಂದು ಅದಕ್ಕೆ ತಕ್ಕುದಾದ ಪರಿಸ್ಥಿತಿಯ ನಿರ್ಮಾಣ ಮಾಡಬೇಕಾದುದೂ ಅಗತ್ಯ" ಎಂದು ಸಮಿತಿ ಹೇಳಿದೆ.

ಗ್ರಾಮಾಂತರಗಳಲ್ಲಿ ಎಂಡೋಮೆಂಟ್ ಮಂತ್ರಿಗಳು

ಕುರುಕಾಲು— ಕಳೆದ ತಾ 20ರಲ್ಲು ಬೆಳಗ್ಗೆ ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಶಾಖೆಯ ಮಾನ್ಯ ಮಂತ್ರಿ ಶ್ರೀ ಕೆ. ವೆಂಕಟಸ್ವಾಮಿ ನಾಯುಡುರವರು ಪತ್ನೀ ಪುತ್ರಿಯರನ್ನು ಕೂಡಿಕೊಂಡು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಮೊದಲಾದವರೊಂದಿಗೆ ಕುಂಜಾರುಗಿರಿ ದೇವಸ್ಥಾನಕ್ಕೆ ಆಗಮಿಸಿದಾಗ ಅಥಮಾರು ಮಠದ ಶ್ರೀ ಶ್ರೀಪತಿ ರಾವ್, ಶ್ರೀ ಅಣ್ಣಾಜಿ ಬಲ್ಲಾಳರು ಸ್ವಾಗತವಿತ್ತು ಪುಷ್ಪಾಹಾರಗಳನ್ನರ್ಪಿಸಿದರು. ಶ್ರೀ ದೇವರ ದರ್ಶನವಾದ ಬಳಿಕ ಕುರುಕಾಲು ಪಂಚಾಯತ ಬೋರ್ಡಿನ ಕಡೆಯಿಂದ ಮಾನ ಪತ್ರವೊಂದು ಒಪ್ಪಿಸಲಾಯಿತು. ಬಳಿಕ ಮಂತ್ರಿಗಳು ಪಾಜಕಾಕ್ಷೇತ್ರಕ್ಕೆ ಹೋಗುವಾಗ ದಾರಿಯಲ್ಲಿ ಕುಂಜಾರು ಗಿರಿಜಾ ಡಾ। ಎ। ಶಾಲೆಯನ್ನೂ ಮತ್ತಿತರ ಗ್ರಾಮಾಭ್ಯುದಯ ಸಂಗತಿಗಳನ್ನೂ ಅನುಭವ ಮಾಡಿಕೊಂಡರು. ಶಾಲಾ ಮೆನೇಜರ್ ಶ್ರೀ ಕೆ. ಗಣಪಯ್ಯ ಸೆಟ್ಟರು ಮಂತ್ರಿಗಳಿಗೆ ಪುಷ್ಪಾಹಾರವನ್ನಿತ್ತರು. ಪಾಜಕಾಕ್ಷೇತ್ರದಲ್ಲಿ ಕಾಣೂರು ಮಠದ ಜನರಲ್ ಏಜಂಟ್ ಶ್ರೀ ಬಿ. ಅನಂತಕೃಷ್ಣಾಚಾರ್ಯರು ಮಂತ್ರಿಗಳನ್ನು ಸ್ವಾಗತಿಸಿ ಸ್ಥಳ ಮಹಾತ್ಮೆಯನ್ನು ವಿವರಿಸಿದರಲ್ಲದೆ ದೇವರ ದರ್ಶನ ಮಾಡಿಸಿ ಲಘು ಉಪಹಾರವನ್ನಿತ್ತು ಗೌರವಿಸಿದರು.

ಎಲ್ಲೂರು ದೇವಸ್ಥಾನದಲ್ಲಿ— ಮಂತ್ರಿಗಳು ಪಾಜಕ ಕ್ಷೇತ್ರದಿಂದ ಎಲ್ಲೂರಿಗೆ ಆಗಮಿಸಿದಾಗ ದೇವಸ್ಥಾನ ಮೊಕ್ತೇಸರ ಶ್ರೀ ಕೆ. ಕೆ. ಮೂರ್ತಿ, ಶ್ರೀ ಅಚ್ಚಣ್ಣ ಸೆಟ್ಟಿ, ಪಂಚಾಯತ ಬೋರ್ಡು ಪ್ರೆಸಿಡೆಂಟ್ ಮೊದಲಾದವರು ಸ್ವಾಗತವಿತ್ತರು. ಶ್ರೀ ಸೆಟ್ಟರು ಪಂಚಾಯತ ಬೋರ್ಡಿನ ಕಡೆಯಿಂದ ಮಾನ ಪತ್ರವನ್ನರ್ಪಿಸಿದರು. ಮಂತ್ರಿಗಳು, ತಮ್ಮ ಭಾಷಣದಲ್ಲಿ ರಾಜಕೀಯ ಮತ್ತು ಧರ್ಮಗಳು, ಸಮನ್ವಯವಾಗಿರುವುದು ಸಂತೋಷಕರವೆಂದೂ, ಮಾನ ಪತ್ರದಲ್ಲಿ ಹೇಳಲಾದ ವಿಷಯಗಳಿಗೆ ತಮ್ಮ ಗಮನ ಹರಿಯುವುದಾಗಿಯೂ ತಿಳಿಸಿದರು. ಶ್ರೀ ಆರ್. ಆರ್. ಕುಂಜೂರರು ಧನ್ಯವಾದಗಳನ್ನರ್ಪಿಸಿದರು.

ಅಥಮಾರಿನಲ್ಲಿ — ಅಲ್ಲಿಯ ಬೋರ್ಡು ಹ್ಯಾಸ್ಕೂಲನ್ನು ಮಂತ್ರಿಗಳು ಸಂದರ್ಶಿಸಿದರು. ಅಥಮಾರು ಮಠದ ಸ್ವಾಮಿಗಳವರು ವಿದ್ಯಾಕ್ಷೇತ್ರದಲ್ಲಿ ಮಾಡುತ್ತಿರುವ ಸೇವೆಯು ಅಭಿನಂದನೀಯವೆಂದು ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದರು. ಶ್ರೀ ಟಿ. ಎ. ಪೈಗಳು ವಂದನೆಗಳನ್ನರ್ಪಿಸಿದರು.

ಕಟೀಲು ದೇವಸ್ಥಾನದಲ್ಲಿ — ಮಾನ್ಯ ಮಂತ್ರಿಗಳು ಮಧ್ಯಾಹ್ನ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಸಂದರ್ಶನವಿತ್ತಾಗ ಅವರಿಗೆ ವಾದ್ಯಘೋಷಗಳಿಂದ ಕೂಡಿದ ಸ್ವಾಗತವೀಯಲಾಯಿತು. ಶ್ರೀದೇವರ ದರ್ಶನವಾದ ಬಳಿಕ ಸೇರಿದ ಸಾರ್ವಜನಿಕ ಸಭೆಯಲ್ಲಿ ಡಾ। ಎಸ್. ಚಂಪಾ, ಅವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಟಿ. ಎ. ಪೈಗಳು ದೇವಸ್ಥಾನಗಳ ಕರ್ತವ್ಯಗಳನ್ನು ವಿವರಿಸಿ ಮಾತನಾಡಿದರು. ಮಂತ್ರಿಗಳ ಭಾಷಣವಾದ ನಂತರ ವಕೀಲ್ ಶ್ರೀ ಸಂಜೀವ ರಾಯರು ಧನ್ಯವಾದಗಳನ್ನರ್ಪಿಸಿದರು.

ನಿಡ್ಡೋಡಿ— ಸ್ಥಳೀಯ ಬಾಪೂಜಿ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ. 27ರಲ್ಲು "ಭೀಷ್ಮಾರ್ಜುನರ ಕಾಳಗ" ಎಂಬ ಪ್ರಸಂಗದ ಯಕ್ಷಗಾನ ಕಾಲಕ್ಷೇಪ ನಡೆಯಿತು.

ಪೆರ್ಕಾಳ— ಸ್ಥಳೀಯ ಬ್ರಾಂಚ್ ಪೋಸ್ಟಾಫೀಸನ್ನು ಸಬ್ ಆಫೀಸನ್ನಾಗಿ ಮಾರ್ಪಡಿಸುವ ಸಮಾರಂಭವು ಈಚೆಗೆ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಉದಿಯಾವರ ಕಡವಿನ — ಕುರಿತ ನವಯುಗದ ತಾ 26–11–53ರ ಸಂಚಿಕೆಯಲ್ಲಿ ಉದಿಯಾವರ ಕಡವು ಕಂಟ್ರಾಕ್ಟರರು ಬರೆದ ಲೇಖನವನ್ನು ಓದಿ ನೋಡಿದೆ. ಗಡ್ಡ ಇರುವ ಸ್ಥಾನವು ಕಣ್ಣಿನ ಹತ್ತಿರ ಅಲ್ಲವೆಂಬ ಸಂಗ್ತಿಯು ಕಂಟ್ರಾಕ್ಟರರ ತಲೆಗೆ ಹೊಕ್ಕದೆ ಇರುವುದು ಆಶ್ಚರ್ಯ. ಗಡ್ಡ ಇಟ್ಟ ಕಾರಣದಿಂದ ಅವರ ಶೆಡ್ಯೂಲ್ ದರಗಳ ಬೋರ್ಡು ನನ್ನ ಕಣ್ಣಿಗೆ ಅಡ್ಡವಾಗಿರಲಿಲ್ಲ. ಈ ಕುರಿತು ನನ್ನನ್ನು ಅಪಹಾಸ್ಯ ಮಾಡಿ ಬರೆದ ಅವರ ಲೇಖನವು ಕೆಳಗಿನ ಮಟ್ಟದ್ದು. ಅವರ ಶೆಡ್ಯೂಲ್ ದರಗಳ ಬೋರ್ಡನ್ನು ನೋಡಿಯೇ ನಾನು ಆರು ಪಾವಣೆ ಕೊಡಲಿಕ್ಕೆ ಚರ್ಚೆ ಮಾಡಿದ್ದು. ಆದರೂ ನನ್ನಿಂದ ಬಲಾತ್ಕಾರವಾಗಿ ಐದು ಪಾವಣೆ ಪ್ರಕಾರ ಕಂಟ್ರಾಕ್ಟರು ವಸೂಲ್ ಮಾಡಿರುತ್ತಾರೆ. ಒಂದು ಆಣೆ ಇದ್ದರೂ ಉದಿಯಾವರದ ಕಡವಿನ ಕಂಟ್ರಾಕ್ಟರರು ಪ್ರಯಾಣಿಕರಿಂದ ಒಂದೊಕಾಲು ಆಣೆ ಪ್ರಕಾರ ವಸೂಲು ಮಾಡುತ್ತಿರುವುದು ಎಲ್ಲಾ ಪ್ರಯಾಣಿಕರಿಗೂ ತಿಳಿದ ಸಂಗತಿಯಾಗಿದೆ. ಈ ಸಂಗತಿಯನ್ನು ಉಡುಪಿಯಲ್ಲಿರುವ ಹೈವೇಸ್ ಅಸಿಸ್ಟಾಂಟ್ ಇಂಜೀನಿಯರ ಅವಗಾಹನೆಗೆ ತಂದು ಇಂಥಾ ಸುಲಿಗೆಯನ್ನು ನಿಲ್ಲಿಸುವುದು ಪ್ರಯಾಣಿಕರ ಕರ್ತವ್ಯವಾಗಿರುತ್ತದೆ.

ಕೆ. ಕೆ. ಪಿ. ರಾಮ ಪೊತುವಾಳ್.

ಕಾರ್ಕಳ, 30—11—53.

ಪುತ್ತೂರು— ಸಹಕಾರ ಚಳುವಳಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದ ಹಾಗೂ ಸುಬ್ರಹ್ಮಣ್ಯ ದೇವಸ್ಥಾನದ ಟ್ರಸ್ಟಿಗಳಲ್ಲೊಬ್ಬರಾಗಿದ್ದ ವಕೀಲ್ ಶ್ರೀ ಎನ್. ಪಿ. ಕೊಳತ್ತಾಯರು ಕಳೆದ ತಾ. 20ರಂದು ಅಕಾಲ ನಿಧನಗೊಂಡುದು ವಿಷಾದಕರವಿದೆ. ಮೃತರು ಪುತ್ತೂರು ಪಂಚ್ಯಾತ್ ಬೋರ್ಡಿನ ಮೆಂಬರರೂ ಆಗಿದ್ದರು.

ದಿ ವಿಜಯ ಬೇಂಕ್ ಲಿಮಿಟೆಡ್, ಉಡುಪಿ. (ದ. ಕ.)

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮನುಷ್ಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ತ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು–ವ–ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗವನ್ನು ಇದೇ ದಶಂಬರ ತಿಂಗಳ ತಾರೀಕು 12ನೇ ಶನಿವಾರ ಅಪರಾಹ್ನ ಗಂಟೆ 3–0ಕ್ಕೆ–ಯಾ–ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಲೋನ್ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿಸಮೇತ 30–9–53ರ ವರೆಗೆ ರೂ. ಅ. ಪೈ.
187/51	ಯು. ಪಿ. ನಾರಾಯಣ. ಪೋಸ್ಟ್ ಮೇನ್, ಉಡ್ಪಿ ಪೋಸ್ಟ್ ಆಫೀಸು ಉಡುಪಿ.	120 1 0
302/51	ಲೋಕು ಶೇರಿಗಾರ. ಸೋಮಯ ಸೇರಿಗಾರರ ಅಳಿಯ ಅಲೆವೂರು, ಪೋಸ್ಟ್ ಅಲೆವೂರು.	22 8 0
100/52	ಟಿ. ವಿಶ್ವನಾಥ ಸೇರ್ವೆಗಾರ. ಕೆ. ವೆಂಕಪ್ಪ ಸೇರ್ವೆಗಾರರ ಮಗ, ತೋನ್ಸೆ ಈಸ್ಟ್ ಪೋಸ್ಟ್ ಕಲ್ಯಾಣಪುರ.	171 4 0
121/52	ಎಚ್. ವೆಂಕಟೇಶ ನಾಯ್ಕ. ಪ್ರೊಪ್ರೈಟರ್ ಸುಖನಿವಾಸ ಉಡುಪಿ.	115 0 0
130/52	ಎಚ್. ನಾರಾಯಣ ಪೈ. ಎಚ್. ರಾಮಚಂದ್ರ ಪೈಗಳ ಮಗ C/o ಸುಖನಿವಾಸ, ಉಡುಪಿ.	86 4 0
139/52	ಕೆ. ಮಹಾಬಲ ಶೆಟ್ಟಿ. ದಾಸು ಶೆಟ್ರ ಅಳಿಯ ಎಡ್ಮೇರು ದೊಡ್ಡ ಮನೆ, ಪೋಸ್ಟ್ ಮೂಡು ಬೆಳ್ಳೆ.	123 6 0
159/52	ಸಯ್ಯದ್ ಅಲಿ ಸಾಹೇಬ್. ಸಯ್ಯದ್ ಮಾಸೀಮ್ ಸಾಹೇಬರ ಮಗ, 76 ಬಡಗಬೆಟ್ಟು, ಪೋಸ್ಟ್ ಉಡ್ಪಿ.	31 10 0
184/52	—Do—	26 6 0
187/52	ಸದಾನಂದ ಶೆಣೈ. ವಾಸುದೇವ ಶೆಣೈಯವರ ಮಗ, C/o ಸುಖನಿವಾಸ, ಉಡ್ಪಿ.	102 0 0
204/52	ಕೆ. ಶಂಕರ ಹೆಗ್ಡೆ. ಅತ್ರಾಡಿ ವೆಂಕ್ಟಯ್ಯ ಹೆಗ್ಡೆಯರ ಮಗ, ಪರೀಕ ಅತ್ರಾಡಿ ಗ್ರಾಮ, ಪೋಸ್ಟ್ ಪರ್ಕಳ.	56 6 0
221/52	ಎಚ್. ಬಾಲಕೃಷ್ಣ ನಾಯಕ್. ಎಚ್. ರಾಮಚಂದ್ರ ನಾಯಕರ ಮಗ, C/o 'Woodlands' ಉಡುಪಿ.	74 10 0
255/52	ಮಹಾಬಲ ಸೆಟ್ಟಿ. ಜೋಗಪ್ಪ ಸೆಟ್ರ ಮಗ, ಕೋಡಿ ಮನೆ, ಕೆಂಚಾರು ಗ್ರಾಮ, ಪೋಸ್ಟ್ ಬೈಲೂರು.	1140 2 0
295/52	A. A. ಅಬ್ದುಲ್ಲಾ. ಅಬ್ದುಲ್ ಖಾದರರ ಮಗ, ಮರ್ಚಂಟ್, ಸಂತೆಕಟ್ಟೆ ಉಡುಪಿ.	173 5 0
301/52	—Do—	377 13 0

Office of the Vijaya Bank Ltd, ಉಡುಪಿ Udipi. | B. S. S. Hegde, Agent.

ಮಂಗಳೂರು

ತಿರುಪತಿ ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ— ತಿರುಪತಿ ದೇವಸ್ಥಾನದ ಆಡಳಿತೆ ಮಂಡಳಿಯವರ ಸುಧ್ದ ಶಾಖೆಯೊಂದು ಮಂಗಳೂರು ರಥಬೀದಿಯಲ್ಲಿರುವ ವೆಂಕಟ್ರಮಣ ದೇವಸ್ಥಾನದಲ್ಲಿ ಇದೇ ತಾ 26ರಲ್ಲು ಮದ್ರಾಸು ಮಂತ್ರಿ ಶ್ರೀ ವೆಂಕಟಸ್ವಾಮಿ ನಾಯುಡುರಿಂದ ತೆರೆಯಲ್ಪಟ್ಟಿದೆ.

ಅನಾಥಾಶ್ರಮದ ಉದ್ಘಾಟನೆ— ದ. ಕ. ಜಿಲ್ಲೆಯ ಮಠ ದೇವಸ್ಥಾನಗಳ ಕಡೆಯಿಂದ ನಡೆಸುವ ಅನಾಥಾಶ್ರಮದ ಉದ್ಘಾಟನೆಯನ್ನು ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಶಾಖೆಯ ಮಂತ್ರಿ ಮಾನ್ಯ ಶ್ರೀ ವೆಂಕಟಸ್ವಾಮಿ ನಾಯುಡುರವರು ತಾ 26ರಲ್ಲು ನೆರವೇರಿಸುತ್ತಾ, ಅನಾಥ ಬಾಲಕರನ್ನು ರಕ್ಷಿಸುವುದು ನಮ್ಮ ಕರ್ತವ್ಯವೆಂದೂ ಹಿಂದುಗಳು ತಮ್ಮ ಪರಂಪರೆಯನ್ನು ಉಳಿಸಿಕೊಂಡರೆ ಮಾತ್ರ ಅವರ ಏಳಿಗೆಯಾದೀತೆಂದೂ ತಿಳಿಸಿದರು. ಅದೇ ದಿವಸ ಬಿ. ಇ. ಎಮ್. ಹೈಸ್ಕೂಲಿನಲ್ಲಿ ಜರಗಿದ ಸ್ಕೌಟು ರ್‍ಯಾಲಿಯಲ್ಲೂ ಭಾಗವಹಿಸಿದರು. ರಾತ್ರಿ ಕದ್ರಿ ದೇವಸ್ಥಾನಕ್ಕೂ ಭೇಟಿಯಿತ್ತರು.

ಶ್ರೀ ಬೆನಗಲ್ ಶಿವರಾಯರು— ಕೇಂದ್ರ ಪಾರ್ಲಿಮೆಂಟಿನ ಮೆಂಬರರಾದ ಶ್ರೀ ಬಿ. ಶಿವರಾಯರು ತಮ್ಮ ಆರೋಗ್ಯ ಸರಿಯಿಲ್ಲದೆ ಸ್ವಿಜರ್ಲೇಂಡಿನ ಜ್ಯೂರಿಕ್ಕಿನಲ್ಲಿರುವರು. ಇದರಿಂದಾಗಿ ಜಿಲ್ಲೆಗೆ ಬರಲು ಆಗಲಿಲ್ಲವೆಂದೂ ತಾವು ಸೌಖ್ಯವಾದೊಡನೆ ಈ ಭಾಗಕ್ಕೆ ಬರಲಿರುವರೆಂದೂ ತಿಳಿದು ಬರುತ್ತದೆ.

ಭಾಷಣ— ಅಖಿಲಭಾರತ ಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಪಂಡಿತ ದೀನದಯಾಳ ಉಪಾಧ್ಯಾಯರು ತಾ 29ರಲ್ಲು ಮಂಗಳೂರಿಗೆ ಬಂದು ಅದೇ ದಿನ ಸಂಜೆ ಕೇಂದ್ರ ಮೈದಾನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣವಿತ್ತರು. ಡಾ| ಮುಖರ್ಜಿಯವರ ಸ್ಮಾರಕಕ್ಕೆ ಸಹಾಯ ನೀಡಬೇಕೆಂದೂ ಕೇಳಿಕೊಂಡರು.

ಶ್ರೀ ಕೆ. ಸುಂದರ ಸೆಟ್ಟರಿಗೆ ಪಾರಿತೋಷ— ಮದ್ರಾಸು ಸಂಸ್ಥಾನದ ಭತ್ತ ಬೆಳೆಸುವ ಸ್ಪರ್ಧೆಯಲ್ಲಿ ದ. ಕ. ಜಿಲ್ಲೆಯ ಕುತ್ತೆತ್ತೂರು ಸೂರಿಂಜೆಬೈಲು ಗುತ್ತು ಕೆ. ಸುಂದರ ಸೆಟ್ಟರಿಗೆ 1952–53ರ ಪ್ರಾದೇಶಿಕ ಬಹುಮಾನ ದೊರೆತಿದೆ. ಈ ಬಹುಮಾನ ರೂಪಾಯಿ 200 ಮತ್ತು ರೂ 50 ಬೆಲೆ ಬಾಳುವ ಚಿನ್ನದ ಪದಕವನ್ನು ತಾ 20ರಲ್ಲು ಎಂಡೋಮೆಂಟ್ ಮಂತ್ರಿಗಳ ಹಸ್ತದಿಂದ ಕೊಡಿಸಲಾಯಿತು. ಶ್ರೀ ಸೆಟ್ಟರು ಎಕ್ರೆಗೆ 7920 ಪೌಂಡು ಭತ್ತ ಬೆಳೆಸಿದ್ದರು. ನಮ್ಮ ಜಿಲ್ಲೆಗೆ ಇದೇ ಪ್ರಥಮ ಪಾರಿತೋಷ.

'ದೀರ್ಘಾಯು'— ಎಂಬ ಕನ್ನಡ ತ್ರೈಮಾಸಿಕವೊಂದು ವೈದ್ಯಗುರು ಎಂ. ಆರ್. ಭಟ್ಟರ ಸಂಪಾದಕತ್ವದಲ್ಲಿ ಸಧ್ಯವೇ ಹೊರಡುವುದೆಂದು ತಿಳಿದು ಬರುತ್ತದೆ.

ಆರೋಗ್ಯ ದಿನಾಚರಣೆ— ಸಮಾರಂಭವು ಕಳೆದ ತಾ 25ರಲ್ಲಿ ಕೆನರಾ ಹೈಸ್ಕೂಲಿನ ಉರ್ವ ಶಾಖೆಯಲ್ಲಿ ಶ್ರೀ. ಯು. ಕೇಶವ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು.

ಗಣಪತಿ ಹೈಸ್ಕೂಲಿನಲ್ಲಿ ಕಳೆದ ತಾ 23ರಲ್ಲಿ ಆರೋಗ್ಯ ದಿನಾಚರಣಾ ಸಮಿತಿಯ ಆಶ್ರಯದಲ್ಲಿ ಆರೋಗ್ಯ ದಿನವು ಶ್ರೀ. ಎಚ್. ಪಾಂಡುರಂಗ ರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಆರೋಗ್ಯ ಪಾಲನೆಯ ಕುರಿತು ಡಾ| ಕೆ. ನಾಗಪ್ಪ ಆಳ್ವರು ಬೋಧಪ್ರದ ಭಾಷಣವಿತ್ತರು ಆರೋಗ್ಯ ಪ್ರದರ್ಶನವನ್ನು ಶ್ರೀ. ಕೆ. ದತ್ತಾತ್ರೇಯ ರಾಯರು ತೆರೆದರು.

ಕಿಲ್ಲೆಯವರ ಭಾವಚಿತ್ರ ಅನಾವರಣ— ಬಾವಟೆ ಗುಡ್ಡೆಯಲ್ಲಿ ಜರಗಿದ ಕಾರ್ಯಕರ್ತರ ಸಭೆಯಲ್ಲಿ ಪ್ರಧಾನಿ ಶ್ರೀ ಸಿ. ರಾಜಗೋಪಾಲಾಚಾರ್ಯರು ದಿವಂಗತ ಎಸ್. ಎಸ್. ಕಿಲ್ಲೆಯವರ ಭಾವಚಿತ್ರದ ಅನಾವರಣ ಮಾಡಿದರು. "ಕಿಲ್ಲೆಯವರ ನಿಧನದಿಂದ ನನಗೆ ತುಂಬಾ ನಷ್ಟವಾಯಿತು. ಅವರು ಚಿಕ್ಕಂದಿನಿಂದಲೇ ಕಾಂಗ್ರೆಸ್ ಸೇವಕರಿದ್ದರು. ಅವರ ಪ್ರಭಾವವು ಜನರಲ್ಲಿ ಪರಿಣಾಮಕಾರಿಯಾಗಿತ್ತು. ಕಾಂಗ್ರೆಸ್ ಕಾರ್ಯಕರ್ತರು ಅವರಂತೆಯೇ ನಿಸ್ವಾರ್ಥ ಸೇವಕರಾಗಬೇಕು" ಎಂದು ಹೇಳಿದರು. ಅದಕ್ಕೆ ಮೊದಲು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಎಸ್. ಡಿ. ಪಿಂಟೋರವರು ರಾಜಾಜಿಯವರನ್ನು ಸ್ವಾಗತಿಸಿ ಒಪ್ಪಿಸಿದ ಮನವಿಗೆ ಉತ್ತರವಿತ್ತರು. "ನಿಮ್ಮ ಕೇಳಿಕೆಗಳು ಸರಕಾರಕ್ಕೆ ಸೂಚನೆಗಳಾಗಿವೆ. ವಕ್ಕಲು ಹಿತ ಮಸೂದೆಯು ಬರುವಂತೆ ನಿಮ್ಮ ಪ್ರತಿನಿಧಿಗಳು ಒತ್ತಾಯಿಸುತ್ತಾರೆ. ನಿಮ್ಮ ಶ್ರೀ. ಎ. ಬಿ. ಶೆಟ್ಟರಂತೂ ನನಗೆ ಆಗಾಗ್ಗೆ ಹಿತ ಹೇಳುತ್ತಿದ್ದಾರೆ. ಅವರ ಸೂಚನೆಯಂತೆಯೇ ಇಲ್ಲಿನ ಕೆಲಸಗಾರರು. ಯಾವ ಕೆಲಸವಾದರೂ ಬಾಕಿ ಉಳಿದಿದ್ದರೆ ಅದು ನನ್ನಿಂದಾಗಿದೆಯೆಂದು ತಿಳಿದು ಕೊಳ್ಳಿರಿ" ಎಂದರು. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕ ಮನವಿಗಳು— ಕಮ್ಯೂನಿಸ್ಟ್ ಪಕ್ಷ, ಜಿಲ್ಲಾ ಹಿಂದ್ ಕಿಸಾನ್ ಪಂಚಾಯತ್, ಜಿಲ್ಲಾ ಕೈಮಗ್ಗ ಕೆಲಸಗಾರರ ಸಂಘ, ಶೆಡ್ಯೂಲ್ಡ್ ಕ್ಲಾಸ್ ಸಂಘ, ಕೈಮಗ್ಗ ಮಾಲಿಕ ಸಂಘ, ಗೋರಕ್ಷಣಾ ಸಂಘ, ಮಂಜು ಮಾಲಕರ ಸಂಘ, ಮೆಡಿಕಲ್ ಸಂಘ ಮೊದಲಾದವುಗಳು ರಾಜಾಜಿಗೆ ಮನವಿಗಳನ್ನು ಒಪ್ಪಿಸಿದವು.

ಕುಂಬಳೆ— ಮಾಜಿ ಜಿಲ್ಲಾ ಬೋರ್ಡು ಸದಸ್ಯರೂ ತತ್ವಜ್ಞಾನಿಗಳೂ ಆದ ಶ್ರೀ ಕರಿಯಪ್ಪ ಭಂಡಾರಿಗಳು ಕಳೆದ ತಾ 22ರಲ್ಲು ಬಳ್ಳಂಪಾಡಿ ಮನೆಯಲ್ಲಿ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ.

ಮಂಜೇಶ್ವರ— ಮಂಜೇಶ್ವರ ಸರ್ಕಲ್ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳಾದ ಶ್ರೀ ಬಿ. ಮಾಧವ ಪೈಗಳು ತಾನು ಕಣ್ಣೂರು ಗ್ರಾಮದ ಸಿದ್ಧಿ ಬೈಲು ಸ್ಥಳದಲ್ಲಿ ರಾಜಕೀಯ ಸಂತ್ರಸ್ತನಾಗಿ ಪಡೆದ ಪತ್ತು ಎಕ್ರೆ ಜಮೀನಿನಲ್ಲಿ ಐದು ಎಕ್ರೆಯನ್ನು ಭೂದಾನ ಯಜ್ಞಕ್ಕೆ ದಾನ ಮಾಡಿರುವರು.

ಶಿರ್ವ— ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ 23ರಲ್ಲು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ ಮಂಚಕಲ್ಲು ಪಡುಪೇಟೆಯ ಕಾಪು ರಸ್ತೆ ಕೂಡುವಲ್ಲಿ ಒಂದು ಸಾರ್ವಜನಿಕ ಬಾವಿ, ಶಿರ್ವ ಕಲ್ಲುಬೆಟ್ಟು ಮತ್ತು ಮಟ್ಟಾರು ತೋಡುಗಳಿಗೆ ಕಾಲು ಸಂಕ ಹಾಕಿಸುವ ನಿರ್ಣಯಗಳಾದುವು.

ಗುರುಪುರ— "ರೋಜಾಮಿಸ್ತಿಕಾ" ಬುನಾದಿ ತರಬೇತಿ ಶಾಲೆಯ ಪ್ರೌಢ ವರ್ಗದ ಕಿರಿಯ ತರಗತಿಯ ವಿದ್ಯಾರ್ಥಿನಿ ಅಧ್ಯಾಪಕಿಯರು ಬಜಪೆ ವಿಮಾನ ನಿಲ್ದಾಣದ ಪ್ರವಾಸವನ್ನೂ, ಪ್ರಾಥಮಿಕ ವರ್ಗದ ಹಿರಿಯ ತರಗತಿಯ ವಿದ್ಯಾರ್ಥಿನಿ ಅಧ್ಯಾಪಕಿಯರು ಕಲ್ಲಿಕೋಟೆಯ ಪ್ರವಾಸವನ್ನೂ ಕಳೆದ ತಾ 24ರಲ್ಲು ಕೈಕೊಂಡರು.

ಕಾರ್ಕಳ— ಸ್ಥಳೀಯ ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ 29–11–1953ರಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪೂರ್ವಾಹ್ನ ಹಳೇ ವಿದ್ಯಾರ್ಥಿಗಳಿಗೆ ಪಂದ್ಯಾಟಗಳೂ ಹಿಂದಿನ ದಿನ ಶಾಲಾ ಮಕ್ಕಳಿಗೂ ಪ್ರತ್ಯ ಪ್ರತ್ಯೇಕವಾಗಿಯೂ ಇದ್ದುವು. ಅಂದಿನ ಅಧ್ಯಕ್ಷತೆಯನ್ನು ಮಂಗಳೂರಿನ ಶ್ರೀ. ಬಿ. ವೈಕುಂಠ ಬಾಳಿಗರು ವಹಿಸಿದ್ದರು. ಜನಸಮೂಹವು 7000 ಕ್ಕೂ ಮಿಕ್ಕಿತ್ತು. ಪ್ರಾರ್ಥನೆ ಆದ ಬಳಿಕ ಮುಖ್ಯೋಪಾಧ್ಯಾಯ ಶ್ರೀ. ಬಿ. ಶಾಮರಾಯ ಶೆಟ್ಟಿ. B. A. L. T. ಯವರು ಕಳೆದ 7 ವರ್ಷಗಳ ವರದಿಯನ್ನೋದಿದರು. ಹಳೆ ವಿದ್ಯಾರ್ಥಿ ಜನಾಬ್. ಎ. ಯಸ್. ಕುರ್ಷೀದ್ ಹಸನ್‌ರವರು ಸ್ತುತಿ ಪಾಠವನ್ನು ಮಾಡಿದರು. ಶ್ರೀ ಯಂ. ಅಣ್ಣಪ್ಪ B. A. L. T. ಯವರು ಸಂದೇಶಗಳನ್ನು ಓದಿದರು. ಅನಂತರ ವಿಚಾರ ಪೂರಿತ ಅಮೋಘವಾದ ಭಾಷಣದ ಮೊದಲು ಬಹುಮಾನ ವಿತರಣ ಆಗಿ ಹಿಂದಿಯಲ್ಲಿ ''ಸತೋಪರನ ಸೇವು" (ಮುಂಬಯಿ ಗೃಹಸ್ಥ, ಪಂಜೆಬೈಲು ಸಂಕ್ರಯ್ಯ, ಬುನಾದಿ ಭಾಷಣ, ಕೋಲಾಟ, ವಾದನ ಮುಂತಾದ ಪ್ರದರ್ಶನಗಳೂ) 'ಭೋಜ ಕಾಳಿದಾಸ' ಎಂಬ ಕನ್ನಡ ನಾಟಕದ ಒಂದು ದೃಶ್ಯವೂ, ವಾಲ್ಮೀಕಿ ಆಶ್ರಮದ ಸೀತೆ ಎಂಬ ಸಂಗೀತ ನಾಟಕ (ಹೆಣ್ಮಕ್ಕಳಿಂದ) "ಸಂಯುಕ್ತೆಯ ಸ್ವಯಂವರ" ಎಂಬ ಯಕ್ಷಗಾನ ಬಯಲಾಟವೂ ರಂಗಭೂಮಿಯಲ್ಲಿ ಅಭಿನಯಿಸಲ್ಪಟ್ಟವು ಶ್ರೀ ಮಾಂಟಾಡಿ ಗೋವಿಂದಾಚಾರರು ವಂದನೆಗಳನ್ನು ಅರ್ಪಿಸಿದರು.

ತತ್ಸಂಬಂಧ ಮುಖ್ಯಾಧ್ಯಾಪಕರಾದ ಶ್ರೀ ಬಿ. ಶಾಮರಾಯ ಶೆಟ್ರು ಸಂದೇಶಗಳನ್ನು ಕಳುಹಿಸಿದ ಶ್ರೀ ಎ. ಬಿ. ಶೆಟ್ರಂಥ ಹಿರಿಯ ಮಹನೀಯರಿಗೂ ದಾನಿಗಳಿಗೂ ಸಹಾಯವನ್ನು ಸಲ್ಲಿಸಿದ ಎಲ್ಲರಿಗೂ ಈ ಮೂಲಕ ತನ್ನ ಸಮಿತಿಯ ಪರವಾಗಿಯೂ ಮತ್ತು ವೈಯಕ್ತಿಕವಾಗಿಯೂ ಆಭಾರ ಮನ್ನಣೆಗಳನ್ನು ಅರ್ಪಿಸುತ್ತಾರೆ

ಎಲ್ಲ ಕನ್ನಡಿಗರಲ್ಲಿ ಬಿನ್ನಹ.

ನಾಳಿನ ಡಿಸೆಂಬರ ೨೬, ೨೭, ೨೮ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟೆಯಲ್ಲಿ ನಡೆಯಲಿರುವ ೩೫ನೇ ಕನ್ನಡ ಸಾಹಿತ್ಯ ಸಮ್ಮೇಲನದ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಅಖಿಲ ಕರ್ನಾಟಕದ ಸಾಹಿತಿಗಳು ಕಲಾವಿದರು ಮತ್ತು ಸಾಹಿತ್ಯಾಭಿಮಾನಿಗಳೂ ಪ್ರತಿನಿಧಿಗಳಾಗಿ ಬಂದು ಸಹಕರಿಸಬೇಕೆಂದು ಈ ಮೂಲಕ ಸ್ವಾಗತ ಸಮಿತಿ ಬೇಡುತ್ತದೆ. ಪ್ರತಿನಿಧಿ ಶುಲ್ಕವು ರೂ ೩–೦–೦ ಇರುತ್ತದೆ. ಊಟ ವಸತಿಗಳ ಎಲ್ಲಾ ವ್ಯವಸ್ಥೆ ಮಾಡಲಾಗುವುದು. ಆ ಬಗ್ಗೆ ನಿಶ್ಚಿತ ಪಡೆಯುವ ಹಣವನ್ನು ಪ್ರತ್ಯೇಕವಾಗಿ ಕೊಡಬೇಕಾಗುವದು. ಇಲ್ಲಿಗೆ ಬರಲಿಕ್ಕೆ ಇರುವ ಮಾರ್ಗ ವ ವಾಹನ ಸೌಕರ್ಯಗಳ ವಿವರಗಳನ್ನು ಮುಂದೆ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವದು. ಅಲ್ಲದೆ, ಉ. ಕ. ಜಿಲ್ಲೆಯ ವೈಶಿಷ್ಟ್ಯ, ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳು ಮುಂ. ವಿವರಗಳನ್ನು ಕೊಡುವ ಒಂದು ಕೈಪೊತ್ತಿಗೆಯೂ ಸಧ್ಯದಲ್ಲಿಯೇ ಪ್ರಕಾಶವಾಗಲಿದೆ. ಪ್ರತಿನಿಧಿಗಳಾಗಿ ಬರಲಿಚ್ಛಿಸುವವರು ಈ ಕೆಳಗಿನವರಿಗೆ ಕೂಡಲೇ ತಮ್ಮ ಶುಲ್ಕದ ಹಣಸಹಿತ ಬರೆದುಕೊಳ್ಳಬೇಕಾಗಿ ವಿನಂತಿ.

ಗೌರವ ಕಾರ್ಯದರ್ಶಿಗಳು,
೩೫ನೇ ಕ. ಸಾ. ಸ. ಸ್ವಾಗತ ಸಮಿತಿ
ಕೆನರಾ ಕಾಲೇಜು, ಕುಮಟಾ [ಉ. ಕ.]

WANTED

A Secondary Grade Trained Teacher for the St. John's Hr. Ele. School, Mudabettu on a pay of Rs. 37/- plus D. A. Rs. 19/- P. M. The post is temporary up to 31-5-1954. A copy of the application is to be sent to the Dy. Inspector of Schools, Udipi south Range

Manager,

St. John's Hr. Ele. School. Mudabettu. Shankerpur P. O. S. K.

॥ ಕರಿಷ್ಯೇ ಮಹೀಮಾಂ ನಿರ್ಜರಾಮರಣಾಂ ॥

ಆಯುರ್ವೈದ್ಯಾಶ್ರಮ

[ಸ್ಥಾಪನೆ: 1933]

ಆಬಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಹ್ಯ ರೋಗಗಳು, ನಪುಂಸಕತೆ, ಬಂಜೆತನ, ಚರ್ಮವ್ಯಾಧಿಗಳು, ಮುಂತಾದವುಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ. ಪ್ರಬಲವಾದ ವಾತರೋಗಗಳನ್ನು ಕದ್ರಿ ಗುಡ್ಡೆಯ ಮೇಲೆ (ವೈದ್ಯಾಶ್ರಮದ ಹತ್ತಿರ)

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—o ಶುಶ್ರೂಷಾಲಯದಲ್ಲಿ o—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು. ಅತ್ಯಂತ ಅಮೋಘ ಪ್ರಯೋಗಗಳನ್ನು ಪಾದರಸ ಲಿಂಗಗಳ ಮೂಲಕ ಕೈಕೊಳ್ಳುವುದು. ಪತ್ರ ವ್ಯವಹಾರ ಮಾಡಿ ವಿವರ ತಿಳಿಯುವದು.

ಕದ್ರಿ, ಮಂಗಳೂರು. } ಪ್ರಧಾನ ವೈದ್ಯರು: ಎಂ. ಎಸ್. ಭಿಡೆ, ಆಯುರ್ವೇದ ಭಿಷಕ್.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಪಡುಬಿದ್ರಿ ಕಂಬಳ

ಪ್ರಿಯ ಮಹಾಶಯರೇ, ಪಡುಬಿದ್ರಿ ತಾ 30-11-53.

ವರ್ಷಂಪ್ರತಿ ಜರಗತಕ್ಕ ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ಇದೇ ಬರುವ ತಾರೀಕು 14-12 ನೇ ಚಂದ್ರವಾರ ದಿವಸ ಜರಗಿಸಬೇಕಾಗಿಯೂ ಹೆಚ್ಚಿನ ಜತೆ ಓಟದ ಕೋಣಗಳನ್ನು ಬರಮಾಡಿಸಬೇಕಾಗಿಯೂ ನಿಶ್ಚೈಸಿದ್ದೇವೆ. ಮಹಾಜನರ ಉತ್ತೇಜನದ ಸಲುವಾಗಿ ಏಳುಕೋಲು ನೀರಾನಿಗೆ ನೀರುಹಾರಿಸಿ ಹಲಗೆಯಲ್ಲಿ ಪ್ರಥಮ ಬಂದ ಕೋಣಗಳಿಗೂ, ಹಗ್ಗದಲ್ಲಿ ಪ್ರಥಮ ಬಂದು ಜಯಶೀಲವಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನು ಬಹುಮಾನ ಕೊಡುವುದಾಗಿಯೂ ಆಲೋಚಿಸಿದ್ದೇವೆ. ಆದ ಪ್ರಯುಕ್ತ ಮಹಾಶಯರೆಲ್ಲರೂ ತಮ್ಮ ಇಷ್ಟ ಬಂಧುಮಿತ್ರರ ಓಟದ ಕೋಣಗಳ ಸಮೇತ ದಯಮಾಡಿ ಬಂದು ನಮ್ಮ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಅಪೇಕ್ಷಿಸುವ,

ತಮ್ಮ ಆಗಮನಾಭಿಲಾಷಿ,

ಬೋಳ ಮಂಜಯ್ಯ ಶೆಟ್ಟಿ.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ರಾಜಾಜಿಯ ರಾಜಕೀಯ

[೧ನೇ ಪುಟದಿಂದ]

ಶಕ್ತಿ, ಕಾರ್ಯೋತ್ಸಾಹ ಹಾಗೂ ದೃಢ ಸಂಕಲ್ಪಗಳ ಮೂಲದಲ್ಲಿ ಈ ಆತ್ಮವಿಶ್ವಾಸವಿರುತ್ತದೆ ಆದುದರಿಂದಲೇ ಅವರು ಕಮ್ಯೂನಿಸ್ಟರು ತನ್ನ ಸಂಖ್ಯೆ ಒಂದನೇ ಶತ್ರುಗಳೆಂದು ಅವರ ಮುಂದೆಯೇ ಬಹಿರಂಗವಾಗಿ ಹೇಳಲು ಹಿಂಜರಿಯುವುದಿಲ್ಲ. ತನಗೆ ಪ್ರಿಯವಾದುದೆಂತಲೇ ಪಾನ ನಿರೋಧದ ವಿರುದ್ಧ ಏನು ತಕರಾರು ಬಂದರೂ ಅದನ್ನು ಗಣಿಸುವುದಿಲ್ಲ. ತನ್ನ ಕೆಲಸ ಹಾಗೂ ಕಾರ್ಯಕ್ರಮಗಳು ಪರಿಣಾಮದಲ್ಲಿ ಒಳ್ಳೆಯದನ್ನುಂಟು ಮಾಡಿಯೇ ತೀರುವುವೆಂದು ಸ್ಪಷ್ಟವಾಗಿ ಗ್ರಹಿಸಿರುವ ರಾಜಾಜಿ–ಈಗಿನ ವಿರೋಧ ಹಾಗೂ ಪ್ರತಿಭಟನೆಗಳೆಲ್ಲ ಕ್ಷಣಿಕವೆಂದೇ ತಿಳಿದು ವರ್ತಿಸುವರು. ವಿದ್ಯಾಭ್ಯಾಸ ಪದ್ಧತಿಯಲ್ಲಿ ಕ್ರಾಂತಿಕಾರ ಪ್ರಯೋಗಕ್ಕೆ ಮನಸ್ಸು ಹಾಕಿದ ಅವರಿಗೆ ಬೆಂಬಲ ನೀಡುವುದು ಇದೇ ಅಚಲ ವಿಶ್ವಾಸ. ಹಿಂದಿನ ಕೆಟ್ಟ ಪರಂಪರೆಗಳ ಅನರ್ಥವನ್ನು ಕಂಡೂ ಮೂಕರಾಗಿ ಸಹಿಸುವವರು ಅವರಲ್ಲ—ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ನೀಡುವ ಮತ್ತು ಆಹಾರಾಭಾವವಿದೆಯೆಂದು ನಿಯಂತ್ರಣಗಳನ್ನು ಹೇರುವ ಪದ್ಧತಿಯನ್ನು ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ತೆಗೆದು ಹಾಕಿದುದು ಇದಕ್ಕೆ ಭವ್ಯ ನಿದರ್ಶನ. ಇಂಥ ಸಾಹಸಕ್ಕೆ ಎದೆಗಾರಿಕೆ ಬೇಕು; ಅದಕ್ಕೂ ಹೆಚ್ಚು ಮುನ್ನೋಟ ಬೇಕು; ಒಳ್ಳೆಯ ಪರಿಣಾಮವನ್ನೇ ಧ್ಯೇಯವಾಗಿಟ್ಟುಕೊಳ್ಳುವ ಮನಸ್ಸೂ ಬೇಕು. ರಾಜಾಜಿಯ ರಾಜಕೀಯದಲ್ಲಿ ಮಾತ್ರ ನಾವು ಇಂಥ ಸದ್ಗುಣಗಳ ರಾಶಿಯನ್ನು ಕಾಣಬಲ್ಲೆವು.

ಸುಪ್ರಸಿದ್ಧ ತತ್ವಜ್ಞಾನಿ ಬರ್ಟ್ರಂಡ ರಸೆಲ್ಲರು ಒಬ್ಬರಿನ್ನೊಬ್ಬರ ಮುಖಕ್ಕೆ ಕೆಸರು ಚೆಲ್ಲಿಕೊಳ್ಳುವುದಕ್ಕೆಯೇ ರಾಜಕೀಯ ವಿಜ್ಞಾನವೆಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದುಂಟು—ರಾಜಕೀಯದಲ್ಲಿ ಧುಮುಕಿದ ವ್ಯಕ್ತಿ ಒಳ್ಳೆಯದಕ್ಕೆಯೇ ಆಗಲಿ ಕೆಟ್ಟದಕ್ಕೆಯೇ ಆಗಲಿ, ಮನಸ್ಸಿದ್ದೇ ಆಗಲೀ ಅನಿಚ್ಛೆಯಿಂದಲೇ ಆಗಲಿ—ತನ್ನ ಪಕ್ಷವನ್ನು ಎತ್ತಿ ಕಟ್ಟಬೇಕು, ಮತ್ತು ಪರನಿಂದೆಯಲ್ಲಿ ಪ್ರವೃತ್ತನಾಗಬೇಕು ಎಂಬುದು ನಿಯಮವಾಗಿಬಿಟ್ಟಿದೆ. ಸತ್ಯವಾದ ನಡವಳಿಕೆಯ ಒರೆಗಲ್ಲಿಗೆ ಹಚ್ಚಿದರೆ ರಾಜಕೀಯವು ಹೊಲಸು ವಿಜ್ಞಾನವೇ ನಿಜ–ಅಲ್ಲಿ ರಾಜಾಜಿಯಂಥ ಸರಳ ಬುದ್ಧಿಯ ರಾಜಕಾರಣ ಪಟುಗಳಿಗೂ ಚಾಣಕ್ಯನೆಂಬ ಬಿರುದು ಅಯಾಚಿತವಾಗಿ ಅನಾಯಾಸವಾಗಿ ದೊರೆಯುತ್ತದೆ! ವಾಸ್ತವದಲ್ಲಿ ರಾಜಾಜಿಯ ರಾಜನೀತಿ ಶುಕ್ರನೀತಿಯೇ ಹೌದೆಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಜನರ ಕೊರತೆ ನಮ್ಮ ಜನರ ಬುದ್ಧಿ ಮಾಂದ್ಯದ ಕಡೆಗೆ ಬೊಟ್ಟು ಮಾಡಿ ತೋರಿಸುತ್ತದೆ. ಈ ಅದೂರದರ್ಶಿ ರಾಜಕಾರಣಿಗಳೇ ರಾಜಾಜಿಯಂಥ ಮಹಾ ಮೇಧಾವಿಯನ್ನೂ ಕಾರ್ಯಕುಶಲರನ್ನೂ ಉರುಳಿಸಿ ಬಿಡಲು ನೋಡುವರು ಹೊರತು, ತಿಳುವಳಿಕೆ ಇದ್ದವರಿಗೆ ರಾಜಾಜಿಯ ಧೋರಣೆಯಲ್ಲಿ ಅಪ್ರಿಯವಾದುದು ಯಾವುದೂ ಕಾಣಿಸುವುದಿಲ್ಲ. ರಾಜಾಜಿ ಮೊನ್ನೆ ನಮ್ಮ ಜಿಲ್ಲೆಗೆ ಆಗಮಿಸಿದಾಗ ನಮ್ಮನ್ನೆಲ್ಲ ಬಹಳ ಬುದ್ಧಿವಂತರೆಂದು ಪ್ರಶಂಸಿಸಿದರು. ಮತ್ತು ನಮ್ಮ ಜಿಲ್ಲೆಯ ಶಾಸನಸಭಾ ಸದಸ್ಯರು ತನ್ನ ನಿಷ್ಠಾವಂತ ಅನುಯಾಯಿಗಳಾಗಿ ತನ್ನನ್ನು ಬೆಂಬಲಿಸುತ್ತಿರುವರೆಂದು ಹೇಳಿದರು. ರಾಜಾಜಿ ನಾಯಕನಾಗಿರುವುದು ನಮಗೊಂದು ಭೂಷಣವೇ ಹೊರತು ನಮ್ಮ ಅವಹೇಳನವಲ್ಲ-ಅನುಭವಿಗಳೂ ಮೇಧಾವಿಗಳೂ ಆದ ರಾಜಾಜಿಯ ಹಿರಿತನದ ನೆರಳಲ್ಲಿ ನಾವು ವಿನಯದಿಂದ ಆಶ್ರಯಪಡೆದು ಕಲಿತುಕೊಳ್ಳಬೇಕಾದ ಅತ್ಯಮೂಲ್ಯ ವಿಚಾರಗಳು ಬಹಳಷ್ಟಿರುತ್ತವೆ. ಅವೆಲ್ಲವನ್ನೂ ನಮ್ಮ ಶಾಸನಸಭಾ ಸದಸ್ಯರು ಗ್ರಹಿಸಿಕೊಂಡು – ಭಾವೀ ಜನನಾಯಕರಾಗುವ ಯೋಗ್ಯತೆ ಪಡೆಯಲು ಯತ್ನಿಸಲಿ! ಮತ್ತು “ರಾಜಾಜಿ ನಮಗೆ ಬೇಕು” ಎನ್ನುವ ಜನರ ಮನೋಭಿಲಾಷೆಯನ್ನು ಮನಗಂಡು ಶಾಸನಸಭೆಯಲ್ಲಿ ತದನುಗುಣವಾಗಿ ವರ್ತಿಸಲಿ!

—ಕಾರ್ತಿಕೇಯ.

ಬೇಗನೆ ಪ್ರಕಟವಾಗಲಿರುವುದು— ನಿಮ್ಮ ಪ್ರತಿಗಳನ್ನು ಕಾದಿರಿಸಿರಿ

ದಿ| ಕಿಲ್ಲೆಯವರ ಮೂರು ಗ್ರಂಥಗಳು

1. ಪ್ರಾಚೀನ ತುಳುನಾಡ ಇತಿಹಾಸ	ಬೆಲೆ. ರೂ. ೨	೮ ೦
2. ಭಾರತದ ಕರ್ಣ (ಗದ್ಯ)	ಬೆಲೆ. ರೂ. ೦	೪ ೦
4. ಮುರಲಿ (ಪದ)	ಬೆಲೆ. ರೂ. ೦	೪ ೦

ದಶಂಬರ ೮ನೇ ತಾರೀಕಿಗೆ ಈ ಪುಸ್ತಕಗಳು ಪ್ರಕಟವಾಗಲಿದ್ದು, ಮುಂಗಡವಾಗಿ ರೂ. 3—8—0 ಕಳುಹಿಸುವವರಿಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಮೂರೂ ಪುಸ್ತಕಗಳನ್ನು ಕಳುಹಿಸಲಾಗುವುದು. ತ್ವರೆ ಮಾಡಿರಿ.

A. T. Mohan Rai,
Valancia, Kankanady,
MANGALORE 2

ದಿ ವಿಜಯ ಬೇಂಕ್ ಲಿಮಿಟೆಡ್, ಬೈಂದೂರು. (ದ. ಕ.)

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬಾಬ್ತಿಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗವನ್ನು ಇದೇ ದಶಂಬರ ತಿಂಗಳ ತಾರೀಕು 11ನೇ ಶುಕ್ರವಾರ ಅಪರಾಹ್ನ ಗಂಟೆ 2-0ಕ್ಕೆ-ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು. ರೂ.	ಅ.	ಪೈ.
292/51	ಶ್ರೀ M. ವಾಸುದೇವ ಸೇರುಗಾರ. ಕೃಷ್ಣಪ್ಪ ಸೇರುಗಾರರ ಮಗ, ಹೋಟೆಲು ವ್ಯಾಪಾರಿ, ಬೈಂದೂರು.	[illegible]	13	0
378/51	ಶ್ರೀ ಯಡ್ತಂಟೆ ಕೃಷ್ಣ ಬಿಲ್ಲವ. ದುರ್ಗಿ ಹೆಂಗಸಿನ ಮಗ, ಹೇರೂರು ಗ್ರಾಮ. P. O. ಕಿರಿಮಂಜೇಶ್ವರ.	87	3	0
506/51	ಜ. ಮದಿಕಲ್ ಮಹಮ್ಮದ್ ಸಾಬ್‌ಜಾನ್ ಸಾಹೇಬ್. ಯಿಸುಬ್ ಸಾಹೇಬರ ಮಗ, ಉಪ್ಪುಂದ.	51	5	0
601/51	—Do—	183	12	0
711/51	,, ಬಸ್ರೂರು ಕಾದಿರ್ ಸಾಹೇಬ್. ಮಹಮ್ಮದ್ ಸಾಹೇಬರ ಮಗ, ಗೋಳಿ ಹೊಳೆಗ್ರಾಮ, ಯೇಳಜಿತುಪೋಸ್ಟು.	28	8	0
742/51	ಶ್ರೀ ಹೊನ್ನಯ್ಯನ ಮಂಜುನಾಥ ಸೇರುಗಾರ. ಅಣ್ಣಪ್ಪ ಸೇರುಗಾರರ ಮಗ, ಪಡುವರಿ.	10	4	0
1113/51	ಶ್ರೀ ಮುಗ್ಗಿಬೆಟ್ಟು ಕೃಷ್ಣಪ್ಪ ಸೆಟ್ಟಿ. ಮಂಜಯ್ಯ ಸೆಟ್ಟರ ಅಳಿಯ, ಉಪ್ಪುಂದ,	34	2	0
135/52	ಶ್ರೀ ಕೂರ್ಸಿ ನಾಗ್ಯೆ ಸೆಟ್ಟಿ. ವೆಂಕಪ್ಪ ಸೆಟ್ಟರ ಅಳಿಯ, ಕಾಲ್ತೋಡು ಗ್ರಾಮ, ಕಾಲ್ತೋಡು.	124	8	0
292/52	ಶ್ರೀ ಅಣ್ಣಪ್ಪ ಸೆಟ್ಟಿ. ಸೂರ ಸೆಟ್ಟರ ಅಳಿಯ, ಮಾದ್ಯೆ ಸೆಟ್ಟರ ಮನೆ, ಉಪ್ಪುಂದ.	160	2	0
303/52	ಮಿ. ಅಂತೋನಿ ಲುದ್ರಿಕ್. ಜೋನಿ ಲುದ್ರಿಕರ ಮಗ ನರಿಕಂಬ, ಉಪ್ಪುಂದ.	16	6	0
155/53	ಶ್ರೀ ಕೆಂಚ್ಚೈನ ಮಂಜಪ್ಪ ಸೇರುಗಾರ. ಸುಬ್ಬಯ್ಯ ಸೇರುಗಾರರ ಮಗ, ಪಡುವರಿ.	41	14	0
382/52	ಶ್ರೀ ಬಾಬ್ಲ್ಯೋಳಿ ಗೋವಿಂದ ಸೆಟ್ಟಿ. ಚಿಕ್ಕಯ್ಯ ಸೆಟ್ಟರ ಅಳಿಯ, ಕಂಬದಕೋಣೆ ಪೋಸ್ಟು.	113	10	0
518/52	ಜ. ಮೂದ್ಲಾ ಅಲ್ಲಿ ಸಾಹೇಬ್, ಉಮ್ಮರ್ ಸಾಹೇಬರ ಮಗ ಪಡಲಿನ ಕೋಡಿ, ಶಿರೂರು.	32	5	0
611/52	ಶ್ರೀ ವೆಂಕಟ್ರಮಣ ಸೇರುಗಾರ. ಪೇಟೆ ಸಣ್ಣಯ್ಯ ಸೇರುಗಾರರ ಮಗ, ಮಯ್ಯಾಡಿ.	113	13	0
319/53	ಶ್ರೀ ಸೋಳನ ಮರ್ಗ. ಅಳಿವೆ ಕೋಡಿದಾರನ ಮಗ. ತಾರಾಪತಿ, ಪಡುವರಿ.	21	10	0

ಬೈಂದೂರು; 27-11-1953.

ಎಚ್. ರಾಜೀವ ಸೆಟ್ಟಿ,
ಏಜಂಟ್.

ಸ್ವೀಕಾರ—ವಿಮರ್ಶೆ

ದೀಪದಾನ—

ಸಂಪಾದಕರು: ಪ್ರೊ. ಬಿ. ಆರ್. ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಮತ್ತು ಪ್ರೊ. ಸಿ. ಎಂ. ಕುಲಕರ್ಣಿ. ಪ್ರಕಾಶಕರು: ದೀಪದಾನ ಪ್ರಕಾಶನ, ಧಾರವಾಡ

ಕನ್ನಡದಲ್ಲಿಯೇ ಅಪೂರ್ವವಾದ ಮಾದರಿ ದೀಪದಾನ ಪ್ರಕಾಶನವೆಂದು ತೋರುತ್ತದೆ. ಕಳೆದ ವರ್ಷ ಈ ನೂತನ ಸಾಹಸವನ್ನು ಮಾಡಲಾಯಿತು. ಒಂದು ವರ್ಷದ ವರೆಗೂ ಓದಿಸಲು ಬರುವಂತಹ ನಾನಾ ಅಭಿರುಚಿಯ ಪ್ರೌಢ ಹಾಗೂ ಲಘು ಬರೆಹಗಳನ್ನು ದೀಪದಾನದ ಈ ಎರಡನೆಯ ವಾರ್ಷಿಕ ಸಂಪುಟದಲ್ಲೂ ಕೊಡಲಾಗಿರುವುದು. ಹರಿದಾಸ ಭಟ್ಟರ “ಕ್ರೋಚೆ–ನೀತಿ ಮತ್ತು ರಾಜನೀತಿ” ಕೆ. ಟಿ. ಪಾಂಡುರಂಗಿಯವರ “ವಿಜಯಾಂಬಿಕೆ” ವ್ಯಾಕರಣದ ಬಲ್ಲಾಳರ “ಕನ್ನಡದ ಸಣ್ಣ ಕತೆಗಳ ಗತಿ ಮತ್ತು ಪ್ರಗತಿ” ಬಿ. ಆರ್. ಕುಲಕರ್ಣಿಯವರ ‘ಕನ್ನಡ ಮರಾಠಿ ಸಂತ ಸಾಹಿತ್ಯಗಳಲ್ಲಿ ಸಾಮ್ಯ” ಇವು ಒಳ್ಳೆಯ ಬರೆಹಗಳು. ಬಿ. ಎಚ್. ಶ್ರೀಧರರು ಬರೆದ “ವ್ಯಂಗ್ಯ ಲೇಖನ—ವ್ಯಂಗ್ಯ ಕವಿತೆ” ವಿಡಂಬನೆಯ ಸ್ವಾರಸ್ಯವಾದ ಮಾದರಿಯಾದರೆ, ಆಲೂರು ವೆಂಕಟರಾಯರು “ಆಂಧ್ರ ವಿಶೀಕರಣವೂ ಕರ್ನಾಟಕ ಏಕೀಕರಣವೂ” ಎಂಬ ಕಲ್ಪನೆಯ ಉಗಮ-ಮೂಲ ಸ್ವರೂಪಗಳ ಕುರಿತು ತಿಳಿಸಿದ ವಿಚಾರಗಳು ಐತಿಹಾಸಿಕ ಮಹತ್ವದಿಂದ ಕೂಡಿವೆ. ‘ಕಾವ್ಯ ಕುಂಜ” ವೆಂಬ ವಿಭಾಗದಲ್ಲಿ ಇಂದಿನ ನವ್ಯ ಕಾವ್ಯದ ಪರಿಚಯ ಮತ್ತು ಗತಿ–ರೀತಿಯನ್ನು ವ್ಯಕ್ತಗೊಳಿಸುವ ಕವನಗಳನ್ನು ಕಾಣುತ್ತೇವೆ. ಸಾಮಾನ್ಯವಾಗಿ ದೀಪಾವಳಿ ಸಂಚಿಕೆಗಳಲ್ಲಿ ಬರುವ ವರ್ಷ ಭವಿಷ್ಯವನ್ನು ಕೊಡುವುದರ ಜೊತೆಗೆ, ಬಿ. ವಿ. ರಮಣರಿಂದ “ಜ್ಯೋತಿಷ ಶಾಸ್ತ್ರ ಮತ್ತು ಆಧುನಿಕ ಭಾವನೆಗಳು” ಎಂಬ ವಿಷಯದ ಮೇಲೆ ಚರ್ಚೋ ಬರೆಹವನ್ನು ಪಡೆದು ಪ್ರಕಟಿಸಿರುವರು. ಆದರೆ ಸಂಚಿಕೆಯ ವೈಶಿಷ್ಟ್ಯವೆಂದರೆ, “ಮುಗಿಯದ ಕತೆ” ಎಂಬ ವಿ. ಎಂ. ಇನಾಂದಾರರ ಸೊಗಸಾದ ಸಂಪೂರ್ಣ ಕಾದಂಬರಿ; ಮತ್ತು “ನಮ್ಮ ಕೌಟುಂಬಿಕ ಸಮಸ್ಯೆಗಳು” ಎಂಬ ತಲೆಬರೆಹದ ಕೆಳಗೆ ಪ್ರಕಟಗೊಂಡಿರುವ ಐದು ವಿಚಾರಪರ ಲೇಖನಗಳು ಎಂದರೆ ತಪ್ಪಾಗದು. ಕೌಟುಂಬಿಕ ಸಮಸ್ಯೆಗಳ ವಿಷಯದಲ್ಲಿ ನೆಗಳೂರ ರಂಗನಾಥರದನ್ನು ಬಿಟ್ಟರೆ, ಉಳಿದ ನಾಲ್ಕು ಲೇಖನಗಳನ್ನು ಮಹಿಳೆಯರೇ (ಶ್ರೀಮತಿಗಳಾದ ಸುಶೀಲಾ ಕೊಪ್ಪರ, ಸರೋಜಿನಿ ಮಹಿಷಿ, ಶಾಂತಾದೇವಿ ಮಾಳವಾಡ, ಇಂದಿರಾ ತೆಲಂಗ) ಬರೆದಿರುವರು. ಆಕರ್ಷಕವಾದ ತ್ರಿವರ್ಣ ಮುಖಪೃಷ್ಠದಿಂದ ಸಂಚಿಕೆ ಪ್ರಕಟವಾಗಿರುತ್ತದೆ–ಆದರೇಕೋ ಕನ್ನಡದಲ್ಲಿ ನಾಟಕ ಹಾಗೂ ಚಿತ್ರೋದ್ಯಮದ ಬಗ್ಗೆ ಉತ್ತಮ ಬರೆಹಗಳನ್ನು ಪ್ರಕಟಿಸಿಲ್ಲದಿರುವುದೊಂದು ಕೊರತೆಯಾಗಿ ತೋರುತ್ತದೆ; ಅದರಂತೆ ಭಾರತದ ಔದ್ಯಮಿಕ ಪ್ರಗತಿಯ ಕುರಿತು ಸಿ. ಮೂರ್ತಿಯವರದೊಂದು ಲೇಖನ ಪ್ರಕಟವಾಗಿದ್ದರೂ, ಅದು ಬಹಳ ಸಪ್ಪೆಯಾಗಿಯೇ ಕಾಣುತ್ತದೆ. ಈ ದೋಷಗಳನ್ನು ಮನಸ್ಸಿಗೆ ತಾರದೆ,—ದೀಪದಾನ ಪ್ರಕಾಶನ ಲಲಿತವಾದ ಸಂಪುಟವನ್ನು ಕನ್ನಡಿಗರಿಗೆ ಕೊಟ್ಟಿರುವುದಕ್ಕೆ ಅಭಿನಂದಿಸುವುದೇ ನಮ್ಮ ಕರ್ತವ್ಯ.

ಬೇಸಾಯದ ಹಿಡುವಳಿಯ ಪರಮಾವಧಿ ಮಿತಿ ನಿರ್ಣಯ

[೨ನೇ ಪುಟದಿಂದ]

ಪ್ರಧಾನಿಗಳ ಹೇಳಿಕೆಯನ್ನೂ ಅವರ ಟೀಕಾಕಾರರ ಆಕ್ಷೇಪವನ್ನೂ ತೂಗಿ ನೋಡಿ ಸರಿಯಾದ ತಿಳುವಳಿಕೆಯೊಂದಕ್ಕೆ ನಾವೀಗ ಬರುವುದು ಅಪೇಕ್ಷಣೀಯ.

ಈಗಿನ ಹಿಡುವಳಿಗಳು

ಈ ಸಂದರ್ಭದಲ್ಲಿ ತಂಜಾವೂರು ಜಿಲ್ಲಾ ಕೃಷಿಕರ ಸಮ್ಮೇಳನವೊಂದು ಕುಂಭಕೋಣದಲ್ಲಿ ನವೆಂಬರ ೧೫ ರಂದು ಸೇರಿದಾಗ, ಅಧ್ಯಕ್ಷಸ್ಥಾನದಲ್ಲಿದ್ದ ಶ್ರೀ ಸಿ. ಆರ. ಶ್ರೀನಿವಾಸನ್ನರು ವಿವರಿಸಿದ ಕೆಲವು ಅಂಶಗಳ ಮಹತ್ವವನ್ನು ಅರಿಯುವುದೊಳಿತು. ಶ್ರೀನಿವಾಸನ್ನರು "ಸ್ವದೇಶಮಿತ್ರನ್" ಎಂಬ ಪ್ರಖ್ಯಾತ ಪತ್ರಿಕೆಯ ಸಂಪಾದಕರು ಮಾತ್ರವಲ್ಲ, ಭಾರತದ ರಿಜರ್ವ ಬೇಂಕಿನ ಕೇಂದ್ರ ಆಡಳಿತ ಮಂಡಳದ ಡೈರೆಕ್ಟರರಲ್ಲಿಯೂ ಒಬ್ಬರು. ಅವರ ಮಾತುಗಳಲ್ಲಿ ತೂಕವಿದೆ; ಮತ್ತು ಅವಸರದ ನಿರ್ಣಯ ಮಾಡುವವರಿಗೆ ಗಂಭೀರ ಎಚ್ಚರಿಕೆಯೂ ಇದೆ. ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಪ್ರಾಧಾನ್ಯ ಕೊಡಲ್ಪಟ್ಟಿದೆಯೆಂದು ಎಲ್ಲರಿಗೂ ತಿಳಿದ ವಿಷಯ. ಆದರೆ ಇಲ್ಲಿ ಅಲ್ಪಾವಧಿಯಲ್ಲಿಯೇ ಫಲವನ್ನು ನೀಡಬಲ್ಲ ಉದ್ಯಮಗಳ ಕಡೆಗೆ ಲಕ್ಷ್ಯ ಪೂರೈಸುವ ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮಗಳ ಬದಲು ದೀರ್ಘಾವಧಿಯ ಪ್ರಯೋಜನವನ್ನುಂಟುಮಾಡಬಲ್ಲ ಯೋಜನೆಗಳಿಗೆಯೇ ಪ್ರಾಶಸ್ತ್ಯಕೊಟ್ಟುದು ಸರಿಯಾದ ರೀತಿಯಲ್ಲವೆಂದು ಅವರು ಟೀಕಿಸಿದರು. ಹಿರಾಕುಡವು ಎಲ್ಲಿದೆಯೆಂದೂ ತಿಳಿಯದ ಸಾಮಾನ್ಯ ಒಕ್ಕಲಿಗನಲ್ಲಿ ಭವ್ಯ ಭಾರತದ ನಿರ್ಮಾಣಕ್ಕೋಸ್ಕರ ಅಧಿಕ ಆಹಾರ ಬೆಳೆಯಬೇಕೆಂಬ ಲವಲವಿಕೆಯನ್ನು ಅಲ್ಲಿಯ ಚಿತ್ರದ ಬಣ್ಣನೆಯಿಂದ ಹುಟ್ಟಿಸಲೆತ್ನಿಸುವುದು ವ್ಯರ್ಥವೆಂದು ಅವರ ಅಭಿಪ್ರಾಯ. ಈ ಕೊರತೆಗಳನ್ನು ಮನಗಂಡೋ ಏನೋ ಜನಹಿತ ಸರಕಾರವೆಂಬುದನ್ನು ಸಾರ್ಥಕಗೊಳಿಸಲು "ದೊಡ್ಡ ನೀರಾವರಿ ಯೋಜನೆಗಳು, ಯಾಂತ್ರಿಕ ಕೃಷಿ, ಗೊಬ್ಬರದ ಕಾರ್ಖಾನೆ, ವಿದ್ಯುಚ್ಛಕ್ತಿಯ ಉತ್ಪಾದನೆಗಳ ಹಿನ್ನೆಲೆಯಲ್ಲಿ ರೈತವಾರೀ ಪ್ರದೇಶಗಳ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದವರಿಗೆ ಸಿಡಿಲು ಬಡೆದಂತೆ ಆಶ್ಚರ್ಯವನ್ನು ಹುಟ್ಟಿಸುವ ಸಾಮಾನ್ಯ ಹಿಡುವಳಿಯ ಪರಮಾವಧಿ ಮಿತಿ ನಿರ್ಣಯದ ಸೂಚನೆಯೂ ಬಂದಿರುತ್ತದೆ." ಸರಕಾರದೊಡನೆ ಸಾಕಷ್ಟು ವಿವರವಾದ ಮಾಹಿತಿ ಇರದಿದ್ದರೂ, ಈಗಿರುವ ದಾಖಲೆಗಳನ್ನೆ ಅಭ್ಯಸಿಸಿದರೆ, ಹಿಡುವಳಿಯ ಪರಮಾವಧಿ ಮಿತಿ ನಿರ್ಣಯಿಸುವ ಪ್ರಶ್ನೆಯೇ ಬರುವುದಿಲ್ಲ. ಶ್ರೀನಿವಾಸನ್ನರು ತೋರಿಸಿ ಕೊಟ್ಟಂತೆ "ಮದ್ರಾಸು ರಾಜ್ಯದಲ್ಲಿ ೧೫ ಎಕ್ರೆಗಿಂತಲೂ ಕಡಿಮೆ ವಿಸ್ತೀರ್ಣದ ಪಟ್ಟಿಗಳು ಕೃಷಿಗೆ ಒಳಪಟ್ಟ ಪ್ರದೇಶದ ೭೫ % ಆಗಿರುತ್ತವೆ. ಇದರಲ್ಲಿ ಸಹ ೪೦ % ಪಟ್ಟಿಗಳು ೫ ಎಕ್ರೆಗಿಂತಲೂ ಕಡಿಮೆ ವಿಸ್ತೀರ್ಣದ ಹಿಡುವಳಿಗಳಾಗಿರುತ್ತವೆ. ೧೫ ಎಕ್ರೆಗಿಂತ ಕಡಿಮೆ ವಿಸ್ತೀರ್ಣದ ಪಟ್ಟಿಗಳು ಹಾಗೆ ಕೃಷಿಗೊಳಪಟ್ಟ ಭೂಮಿಯ ೮೫ % ದಷ್ಟು ಹೆಚ್ಚಿರುತ್ತವೆ". ಸಂಗತಿ ಹೀಗಿರುವುದರಿಂದ ಹಿಡುವಳಿಯ ಪರಮಾವಧಿ ಮಿತಿಯನ್ನು ನಿರ್ಣಯಿಸಿ ಭೂಮಿ ಇಲ್ಲದ ಕೃಷಿ ಮಜೂರರಿಗೆ, ಜಮಿನು ಒದಗಿಸಿಕೊಟ್ಟು ಸಾಗುವಳಿಗೆ ನೆರವಾಗುತ್ತೇವೆಂಬ ಸರಕಾರದ ಆಶೆ ಹಾಗೂ ಸೂಚನೆ ವಾಸ್ತವದಲ್ಲಿ ಏನು ಒಳ್ಳೆಯ ಪರಿಣಾಮವನ್ನು ಉಂಟು ಮಾಡೀತೋ, ಹೇಳಲಾರೆವು.

ಕಾಯಿದೇ ಕ್ರಮ ಅನಗತ್ಯ

ಆರ್ಥಿಕ ದೃಷ್ಟಿಯಲ್ಲಿ ಈಗಿನ ಹಿಡುವಳಿಗಳು ಎಷ್ಟು ಮಾತ್ರಕ್ಕೂ ಲಾಭದಾಯಕವಾಗಿಲ್ಲವೆಂದು ತಜ್ಞರು ನಿರ್ಣಯಿಸಿರುವಾಗ ಎಲ್ಲೊ ಅಪರೂಪವಾಗಿ ಗೋಚರಿಸಬಹುದಾದ ವಿಶಾಲವಾದ ಹಿಡುವಳಿಗಳನ್ನು ಒಂದು ಮಿತಿಯೊಳಪಡಿಸುವುದು ಅಷ್ಟು ಅಗತ್ಯದ ಕೆಲಸವಲ್ಲ. ಪಂಜಾಬೀ ನಿರಾಶ್ರಿತನು ಎಕ್ರೆಗೆ ೪೦ ಮಣದಷ್ಟು ಗೋಧಿಯ ಫಸಲು ತೆಗೆದ ೬೦ ಎಕ್ರೆಯಷ್ಟು ವಿಶಾಲವಾದ ಹಿಡುವಳಿ ಬೇರೆಲ್ಲಿಯಾದರೂ ಇದ್ದರೆ, ಅದನ್ನು ಸಹಕಾರೀ ಪದ್ಧತಿಯಲ್ಲಿ ಕೃಷಿ ಮಾಡುವುದು, ಯಾಂತ್ರೀಕರಣದ ಪ್ರಯೋಜನವನ್ನು ವಿವರಿಸುವುದು ಮುಂತಾದವುಗಳಿಗೆ ಮೀಸಲಿಡುವಂತೆ ಸರಕಾರ ಉತ್ತೇಜಿಸಬಹುದು. ಒಂದು ವೇಳೆ ಪರಮಾವಧಿ ಮಿತಿಯು ನಿರ್ಣಯಿಸಲ್ಪಟ್ಟರೂ, ಜಮೀನುದಾರರಿಂದ ಭೂಮಿಯನ್ನು ಸರಕಾರ ವಶಪಡಿಸಿಕೊಳ್ಳಬೇಕಾದರೆ ಪರಿಹಾರ ಧನವನ್ನು ಕೊಡಬೇಕೆಂದು ಘಟನೆಯಲ್ಲಿ ಹೇಳಿರುತ್ತದೆ – ಹಾಗೆ ಪರಿಹಾರ ಕೊಡಲಾಗುವಷ್ಟು ಧನ ಡವಾಳ ಸರಕಾರದೊಡನೆ ಇದೆಯೆ? ಪಂಚವಾರ್ಷಿಕ ಯೋಜನೆಗೆಯೇ ಹಣವಿಲ್ಲದೆ ಕೊರತೆ ಧನ ವಿನಿಯೋಗ ಪದ್ಧತಿಯನ್ನೂ ವಿದೇಶಗಳ ನೆರವನ್ನೂ ಕೋರುತ್ತಿರುವ ಭಾರತ ಸರಕಾರ, ಜಮೀನುದಾರರಿಗೆ ಪರಿಹಾರ ಧನವನ್ನು ಕೊಡುವ ಪರಿಸ್ಥಿತಿಯಲ್ಲಿ ಈಗಿರುವುದಿಲ್ಲೆಂಬುದು ಸ್ಪಷ್ಟ. ಆದಕಾರಣ–ವ್ಯರ್ಥವಾಗಿ ಕಾಯಿದೆ ಗೊಂದಲಗಳಲ್ಲಿ ಬೀಳುವ ಬದಲು, ಧನಿ ಮತ್ತು ಒಕ್ಕಲುಗಳ ನಡುವೆ ಸೌಹಾರ್ದ ಸಂಬಂಧವಿರುವಂತೆ ನೋಡಿಕೊಂಡು ಬಡ ಬೇಸಾಯಗಾರರ ಪಕ್ಷಪಾತಿಯಾದ "ಒಕ್ಕಲುಹಿತ ಮಸೂದೆ"ಯಂಥ ಸೌಮ್ಯ ಕಾಯಿದೆ ಕ್ರಮಗಳನ್ನೆ ಜ್ಯಾರಿಗೆ ತಂದು ತೃಪ್ತಿಕರ ವಾತಾವರಣವನ್ನುಂಟುಮಾಡುವುದು ಶ್ರೇಯಸ್ಕರ ಒಕ್ಕಲಿಗರಿಗೆ "ಭೂಮಿಯ ಹಸಿವೆ" ಇದೆಯೆಂಬ ರಾಜಕಾರಣಿಗಳ ಅಭಿಪ್ರಾಯ ಸಂಪೂರ್ಣ ನಿಜವಲ್ಲ—ಅವರಿಗೆ ತಮ್ಮ ಬೇಸಾಯದ ಭೂಮಿಯ ಭದ್ರತೆ ಬೇಕು; ಮತ್ತು ಕೆಲವು ಹಕ್ಕುಬಾಧ್ಯತೆಗಳು ಬೇಕೆಂಬುದು ಮಾತ್ರ ಸತ್ಯ. ಭೂಮಿಯ ಹಸಿವು ಕೃಷಿ ಮಜೂರರಿಗೆ ಇದೆ ಎನ್ನುವವರುಂಟು – ಅಂಥವರಿಗೆ ಕೃಷಿ ಯೋಗ್ಯವಾದ ಬೀಳು ಭೂಮಿಯಲ್ಲಿ ಅವಕಾಶಮಾಡಿಕೊಡಬಹುದು. ಮದ್ರಾಸು ರಾಜ್ಯದಲ್ಲಿಯೇ ೭೦ ಲಕ್ಷ ಎಕ್ರೆ ಭೂಮಿ ಹೀಗೆ ಸಾಗಾಗದೆ ಉಳಿದಿದೆ.

ಕುಮಟಾದಲ್ಲಿ ಜರಗಲಿರುವ ಮೂವತ್ತಾರನೆಯ

ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಸಮಿತಿಯ ಬಿನ್ನಹ.

ಇದೇ ಬರುವ ಡಿಸೆಂಬರ ೨೭, ೨೮, ೨೯ನೇ ದಿನಾಂಕಗಳಲ್ಲಿ ಸಂಮೇಲನವನ್ನು ಜರುಗಿಸಬೇಕೆಂದು ನಿಶ್ಚಯಿಸಲಾಗಿದೆ. ಪ್ರೊ. ವಿ. ಸೀತಾರಾಮಯ್ಯ, M. A. ಸೆಂಟ್ರಲ್ ಕಾಲೇಜು, ಬೆಂಗಳೂರು, ಇವರು ಸಮ್ಮೇಲನದ ಅಧ್ಯಕ್ಷರಾಗಲಿದ್ದಾರೆ. ಅದರ ಅಂಗವಾಗಿ ನಡೆಯಲಿರುವ ಗೋಷ್ಠಿಗಳಿಗೆ ಈ ಕೆಳಗಿನ ಮಹನೀಯರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ.

(೧) ಪತ್ರಿಕಾ ಗೋಷ್ಠಿ:—
ಶ್ರೀ॥ ವಿ. ಬಿ. ನಾಯಕ, M. A. LL. B. ಸಹ ಸಂಪಾದಕರು, "ಸಂಯುಕ್ತ ಕರ್ನಾಟಕ" ಹುಬ್ಬಳ್ಳಿ.

(೨) ವಿಜ್ಞಾನ ಗೋಷ್ಠಿ:—
ಶ್ರೀ॥ ಪ. ರಮಾನಂದ, M. SC ಪ್ರಿನ್ಸಿಪಾಲ್ ವೀರಶೈವ ಕಾಲೇಜು ಬಳ್ಳಾರಿ

(೩) ಯಕ್ಷನಾಟಕ ಗೋಷ್ಠಿ:—
ಶ್ರೀ॥ ಕೆ. ಪಿ. ವೆಂಕಪ್ಪ ಶೆಟ್ಟಿ, ಮಾಜಿ, (ದ. ಕ.)

ಮನರಂಜನೆ:—

ಸಂಮೇಲನದ ಕಾಲಕ್ಕೆ ನಾಟಕ, ಯಕ್ಷಗಾನ, ನೃತ್ಯ, ಸಂಗೀತ ಮತ್ತು ವಾದನ ಮೊದಲಾದ ಮನೋರಂಜನ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಚ್ಛಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ತಮ್ಮ ವೈಶಿಷ್ಟ್ಯ, ಖರ್ಚು ಕಲಾರರುಗಳ ಸಮೇತ ಈ ಕೆಳಗಿನ ವಿಳಾಸಕ್ಕೆ ತಾ. ೫–೧೨–೧೯೫೪ ರೊಳಗಾಗಿ ತಿಳಿಸಬೇಕು.

ಯಕ್ಷಗಾನದ ಬಗ್ಗೆ
ಶ್ರೀ॥ ಜಿ. ಎಸ್. ಸಭಾಹಿತ, ವಕೀಲರು ಹೊನ್ನಾವರ.

ಇತರ ಮನೋರಂಜನೆ ಕಾರ್ಯಕ್ರಮಗಳಿಗೆ
೧) ಶ್ರೀ॥ ಶ್ರೀಧರ ಬಾಳಗಿ, ಕುಮಟಾ.
೨) ಶ್ರೀ॥ ಜಿ. ಪಿ. ನಾಯ್ಕ, B. SC. ಸಲ್ಲೀಕೇರಿ, ಕುಮಟಾ.

ಕಲಾ ಪ್ರದರ್ಶನ:—

ಸಮ್ಮೇಲನದ ಅಂಗವಾಗಿ ಕಲಾ ಪ್ರದರ್ಶನ ಮತ್ತು ಗ್ರಂಥ ಪ್ರದರ್ಶನಗಳು ಜರುಗಲಿವೆ. ಆ ಕುರಿತು ತಮ್ಮ ಕುಶಲ ಕಲಾಕೃತಿಗಳನ್ನೂ ಗ್ರಂಥ ಇತ್ಯಾದಿಗಳನ್ನೂ ಕಳಿಸಲಿಚ್ಛಿಸುವವರು ತಾ. ೫–೧೨–೫೪ ರೊಳಗಾಗಿ ಈ ಕೆಳಗಿನವರಿಗೆ ಬರೆದುಕೊಳ್ಳಬೇಕಾಗಿ ವಿನಂತಿ.

ಶ್ರೀ॥ ಎಸ್. ವಿ. ಜಯವಂತ, ಕುಮಟಾ [ಕಲಾ ಪ್ರದರ್ಶನದ ಬಗ್ಗೆ]
ಪ್ರೊ. ಬಿ. ಎಚ್. ಶ್ರೀಧರ, ಎಂ. ಎ. ಕೆನರಾ ಕಾಲೇಜ, ಕುಮಟಾ. [ಗ್ರಂಥ ಪ್ರದರ್ಶನದ ಬಗ್ಗೆ]

ಗಂಧದ ಮತ್ತು ದಂತದ ಕೆಲಸ, ರಂಗದಲ್ಲಿಯ ಚಿತ್ರ ಕಲಾಕೃತಿಗಳು, ಚಿತ್ತದ ಮತ್ತು ಕತ್ತದ ಕುಶಲ ಕಲೆಗಳು, ನೆಯ್ಗೆ–ಕಸೂತಿಯ ಕೆಲಸಗಳು, ಪ್ರಾಚೀನ ವೈಶಿಷ್ಟ್ಯಗಳು ಇವುಗಳನ್ನು ಪ್ರದರ್ಶಿಸಲಾಗುವದು. ಇದಲ್ಲದೆ, ಈ ವರ್ಷ ಹೊಸದಾಗಿ ಪ್ರಕಟವಾದ ಗ್ರಂಥಗಳು ಮತ್ತು ವಿಶೇಷವಾಗಿ ಉ. ಕ. ಜಿಲ್ಹೆಯ ಲೇಖಕರ ಎಲ್ಲ ಗ್ರಂಥಗಳು ಪತ್ರಿಕೆ ವ ಉಳಿದು ಬಂದಿರುವ ತಾಡೋಲೆಯ ಪ್ರತಿಗಳನ್ನೂ ಪ್ರದರ್ಶಿಸಲಾಗುವದು. ಉತ್ತಮವೆಂದು ತೀರ್ಮಾನವಾದ ಕಲಾಕೃತಿಗಳಿಗೆ ಪಾರಿತೋಷಕ ಅಥವಾ ಪ್ರಶಂಸಾಪತ್ರ ಕೊಡಲಾಗುವದು.

ಪ್ರಬಂಧಗಳು:—

ಸಂಮೇಲನದ ವಿದ್ವದ್ಗೋಷ್ಠಿಯಲ್ಲಿಯೂ ಇತರ ಗೋಷ್ಠಿಯಲ್ಲಿಯೂ ಭಾಗವಹಿಸಲಿಚ್ಛಿಸುವವರು ೧೦–೧೫ ನಿಮಿಷಕ್ಕೆ ಓದಿ ಮುಗಿಸಲಾಗುವಂತೆ ಸಾಹಿತ್ಯ ಮತ್ತು ಸಂಶೋಧ ವಿಷಯಗಳ ಕುರಿತು ಭಾಷಣ–ಪ್ರಬಂಧಗಳನ್ನು ಬರೆದು ೫–೧೨–೫೪ ರೊಳಗಾಗಿ ಇತರ ವಿವರಗಳೊಡನೆ ಪ್ರೊ. ಎಲ್. ಟಿ. ಶರ್ಮಾ, ಎಂ. ಎ, ಕೆನರಾ ಕಾಲೇಜು, ಕುಮಟಾ, ಇವರಿಗೆ ಕಳಿಸಬೇಕು.

ಇವೆಲ್ಲವುಗಳ ಕುರಿತು ಯುಕ್ತ ಕ್ರಮ ಕೈಕೊಳ್ಳಲು ಸ್ವಾಗತ ಸಮಿತಿಗೂ ಪರಿಷತ್ತಿಗೂ ಅಧಿಕಾರವಿರುತ್ತದೆ.

ಗೌ. ಕಾರ್ಯದರ್ಶಿಗಳು,
೩೬ನೇ ಕ. ಸಾ. ಸ. ಸ್ವಾಗತ ಸಮಿತಿ, ಕುಮಟಾ.

ಕುಮಟಾ, ೨೪–೧೧–೧೯೫೪.

‘ಗೋಪಾಲ ಭೇಷಜಾಶ್ರಮ” ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:–ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾರಸಾಯನ
ಬಾಣಂತಿಯರ ಸಲುವಾಗಿಯೇ ವೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಧುರಂಧರರಸಾಯನ.



ಹೆಚ್ಚಿನ ಸಮಾಚಾರಕ್ಕೆ— ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಶಾಖೆಯವರು:— ಡಾ॥ ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಧರ್ಮಾರ್ಥ—ಮುಕ್ತಟಿ
ಒಂದು ಸಾವಿರ ಕಾಪ್ಪೀರಿ ಚಾಲುಗಳನ್ನು ಧರ್ಮಾರ್ಥ ಕೊಡುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly.

ವಾರದ ಒಳಿತು ಕೆಡುಕುಗಳು

ತಾ. ೩—೧೨—೫೩ರಿಂದ ತಾ. ೯—೧೨—೫೩ರ ವರೆಗೆ.

ಮೇಷ:—ಇಂದಿನ ನಿಮ್ಮ ಕಾರ್ಯಕಲಾಪಗಳು ಹಿಂದಿನಂತೆ ಹುರುಪಿನಿಂದ ಸಾಗಲಾರವು. ಆದರೂ ಪರಿಣಾಮವು ಉತ್ತಮವಾಗಿಯೇ ಇರುವದು. ವಿದ್ಯೋಪಜೀವಿ ಜನತೆಗೆ ಈ ಕಾಲವು ಉತ್ತಮವಿದೆ. ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷಿಸಿದ ಫಲ ಪ್ರಾಪ್ತಿಯಾಗುವದು. ಶ್ರಮಜೀವಿಗಳಿಗೆ ದಿನಂಹಾಪ ನೆಂಪು ಪಸ್ತರವಾಗಲಿದೆ. ಸಾಂಸಾರಿಕ ತಾಪತ್ರಯಗಳೊಂದೊಂದಾಗಿ ಕಾಣಿಸುವವು. ವಾರಾದಿಯ 2 ದಿನಗಳಲ್ಲಿ ನಿಮ್ಮ ಮನೋರಥಗಳು ಸಿದ್ಧಿಸಲಿರುವವು.

ವೃಷಭ:—"ದೈವಂ ನಿಹತ್ಯ ಕುರು ಪೌರುಷ ಮಾತ್ಮ ಶಕ್ತ್ಯಾ" ಎಂಬ ಶಾಸ್ತ್ರೋಕ್ತಿಯಂತೆ ಅದೃಷ್ಟ ಹಣೆಬರಹವೆಂದು ಉದಾಸೀನರಾಗಿ ಕುಳಿತುಕೊಳ್ಳದೆ ಧೈರ್ಯದಿಂದ ಕಾರ್ಯ ರಂಗದಲ್ಲಿ ಮುನ್ನುಗ್ಗುವವರಿಗೆ ಈ ಕಾಲವು ಅತೀವ ಅನುಕೂಲವಿದೆ. ನಿರೀಕ್ಷಿಸಿದ್ದಕ್ಕಿಂತಲೂ ಅಧಿಕವಾದ ಫಲಪ್ರಾಪ್ತಿಯಾಗುವದು. ದೇಹಾಲಸ್ಯ ಗೃಹತಾಪತ್ರಯಗಳು ಕೊಂಚ ಬಾಧಿಸುವವಾದರೂ ವಾರಾದಿಯ 4 ದಿನಗಳು ಚೆನ್ನಾಗಿರುವವು.

ಮಿಥುನ:—ಆಯಕ್ಕಿಂತ ದ್ವಿಗುಣ ವ್ಯಯವು ನಿಮಗಿಂದು ಪ್ರಾಪ್ತವಾಗುವುದರಿಂದ ಹಣದ ಬಿಕ್ಕಟ್ಟು ವಿಶೇಷವಾಗಿ ಕಾಣಿಸಲಿದೆ. ಆಧಿವ್ಯಾಧಿಗಳಿಂದ ಸದಾ ಪೀಡಿತರಾದ ನಿಮಗೆ ಹೆಚ್ಚಿನ ಕಾಲವನ್ನು ಪರ್ಯಟನದಲ್ಲಿ ಕಳೆಯಬೇಕಾಗಿ ಬರುವದು. ಆಪ್ತ ಜನರ ವಿರಹ ದುಃಖವು ಕಾಣಿಸುವದು. ವೈದ್ಯ ಮತ್ತು ನೌಕರಿ ವರ್ಗದವರಿಗೆ ಶ್ರಮಕ್ಕೆ ತಕ್ಕ ಫಲ ಲಭಿಸಲಿದೆ. ಬಂಧುಜನರ ನೆರವು ವಾರಾಂತ್ಯದ 3 ದಿನಗಳಲ್ಲಿ ಲಭಿಸುವುದರಿಂದ ನಿಮ್ಮ ಕೆಲವೊಂದು ತಾಪತ್ರಯಗಳು ಅಗ ಕಡಿಮೆಯಾಗಲಿವೆ.

ಕರ್ಕಟ:—ವಿರೋಧಿ ವರ್ಗದವರ ಪೀಡೆಯು ಅಸಹನೀಯವಾಗುವುದರಿಂದ ನಿಮ್ಮ ಧೈರ್ಯ ಸ್ಥೈರ್ಯಗಳು ಮಾಯವಾಗುವವು. ಹೊಸತಾಗಿ ಯಾವ ಕಾರ್ಯದಲ್ಲೂ ಪ್ರವೃತ್ತರಾಗಲಾರಿರಿ. ಸಾಂಸಾರಿಕ ತಾಪತ್ರಯಗಳಿಂದಾಗಿ ಮನಸ್ಸಿಗೆ ಸ್ವಲ್ಪವೂ ನೆಮ್ಮದಿಯಿರಲಾರದು. ಆದರೂ ನಿಮ್ಮ ಭಾಗ್ಯಪತಿಯಿಂದು ಲಾಭಕ್ಕೆ ಬಂದಿರುವುದರಿಂದ ಹಣದ ಮುಗ್ಗಟ್ಟು ದೂರವಾಗುವದು. ಹಿಡಿದ ಕಾರ್ಯವು ಕೊನೆ ಹೊಂದೀತು. ವಾರಾಂತ್ಯದ 3 ದಿನಗಳು ಅನುಕೂಲವಿವೆ.

ಸಿಂಹ:—ನಿಮ್ಮ ಭವಿತವ್ಯವಿಂದು ಉತ್ತಮವಿರುವದು, ಎಂತಹ ಕಾರ್ಯವಿರಲಿ ಅನಾಯಾಸದಿಂದ ಅಚಿರದಲ್ಲಿ ಕೊನೆಗೊಂಡುವದು. ನಿಮ್ಮ ಪ್ರಯತ್ನಕ್ಕೆ ದ್ವಿಗುಣಿತ ಫಲಕಾಣಸುವದು. ಗೃಹತಾಪತ್ರಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ಬಂಧುಗಳ ಮತ್ತು ಸೇವಕ ವರ್ಗದವರಿಂದ ಹೆಚ್ಚಿನ ಸೌಕರ್ಯಗಳು ಲಭಿಸಲಿವೆ. ರಾಜಕೀಯ ರಂಗದಲ್ಲಿ ವಿಜಯವು ಕಟ್ಟಿಟ್ಟ ಗಂಟೆನಂತಿರುವದು. ವಾರಾದಿಯ 2 ದಿನಗಳು ಅತೀವ ಪ್ರಶಸ್ತವಿವೆ.

ಕನ್ಯಾ:—ನಿಮ್ಮ ಪ್ರಯತ್ನವು ಎಂದೂ ವಿಫಲವಾಗದು. ನೆನೆದಂತೆ ಕಾರ್ಯವು ಸಿದ್ಧಿಸುವದು. ನಿರೀಕ್ಷಿಸಿದಂತೆ ಫಲವು ಲಭಿಸುವದಾದರೂ ಆಕಸ್ಮಿಕ ಪ್ರಾಪ್ತವಾಗತಕ್ಕ ಪರ್ಯಟನ ದೇಹಾಲಸ್ಯ ಇತ್ಯಾದಿಗಳಿಂದ ಖರ್ಚುವೆಚ್ಚಗಳು ಹೆಚ್ಚಿಕೆಯಾಗಲೂ ಬರಿದಾಗಿಯೇ ಇರುವದು. ಸರಕಾರಿ ಅಧಿಕಾರಿ ಜನರಿಂದ ಪೀಡೆಯುಂಟಾದೀತು. ಶ್ರಮಜೀವಿಗಳಿಗೀ ವಾರವು ಹಿತಕರವಲ್ಲ. ತಾ. 5, 6, ಇದ್ದುದರಲ್ಲಿ ಪ್ರಶಸ್ತವಿವೆ.

ತುಲಾ:—ಇಂದು ಮರು ಬಿಕ್ಕಟ್ಟಿನ ಕಾಲವು ಪ್ರಾಪ್ತವಾಗುವದು. ವಿರೋಧಿಗಳ ಚಟುವಟಿಕೆಯಿಂದಾಗಿ ನಿಮ್ಮ ಕಾರ್ಯಗಳಿಗೆ ನಾನಾತರದ ವಿಘ್ನಗಳುಪಸ್ಥಿತವಾಗಲಿವೆ. ವಿಷಾಗ್ನಿಗಳಿಂದಾಗಿ ಪೀಡೆಯುಂಟಾದೀತು. ಮನಸ್ಸು ಅತೀವ ಚಂಚಲವಾಗುವದು. ಆಪ್ತಜನರೊಡನೆ ಮನಸ್ತಾಪ ಉಂಟಾಗಲಿದೆ. ಕಫ ಪ್ರಕೋಪದಿಂದಾಗಿ ಆರೋಗ್ಯವೂ ಕೆಡುವದು. ಆದರೂ ಹಣದ ವಿಚಾರದಲ್ಲಿ ಹೆಚ್ಚಿನ ತಗಾದೆಯುಂಟಾಗದು. ತಾ. 3, 4, 7, 8, 9 ಈ ದಿನಗಳು ಇತರ ದಿನಗಳಿಗಿಂತ ಉತ್ತಮವೆನಿಸುವವು.

ವೃಶ್ಚಿಕ:—ಜನ್ಮಗತನಾದ ರವಿಯೂ ವ್ಯಯ ಸ್ಥಾನದಲ್ಲಿ ಕುಜ ಶನಿಗಳೂ ನಿಮಗಿಂದು ಹೆಚ್ಚಿನ ಪೀಡೆಯನ್ನೀಯಲಿರುವರು. ನಿಮ್ಮ ಇಂದಿನ ಖರ್ಚನ್ನು ಪರಿಶೀಲಿಸುವಾಗ ನಿಮ್ಮ ಉತ್ಪತ್ತಿಯು ಅತ್ಯಲ್ಪವಾಗಿ ಕಾಣಿಸುವದು. ಆ ಕಾರಣ ಸಿಕ್ಕ ಸಿಕ್ಕವರೊಡನೆ ಸಾಲ ಕಡ ಮಾಡುವ ಪ್ರಸಂಗ ಬರುವದು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಶೋಕಾನರ್ಥಗಳು ನಿಮ್ಮನ್ನು ಇತಿ ಕರ್ತವ್ಯತಾ ಮೂಢರನ್ನಾಗಿ ಮಾಡಲಿವೆ, ಆದರೂ ಗುರ್ವನುಗ್ರಹದಿಂದ ತಾ. 5, 6, ಈ ದಿನಗಳನ್ನು ಸುಖವಾಗಿ ಕಳೆವಿರಿ.

ಧನು:—ದೈವವು ನಿಮಗೆ ಸಾಕಷ್ಟು ಅನುಕೂಲವಾಗಿಲ್ಲವಾದರೂ ನೀವಿಂದು ಪರರ ಹಂಗಿಗೆ ಸಿಲುಕದೆ ಆತ್ಮ ಪೌರುಷದಿಂದಲೇ ಮಹತ್ತಾದ ಕಾರ್ಯವನ್ನು ಸಾಧಿಸಲು ಶಕ್ತರಿರುವಿರಿ. ಸನ್ಮಿತ್ರರ ಮತ್ತು ಸೋದರ ವರ್ಗದವರ ನೆರವಿನಿಂದಾಗಿ ನಿಮ್ಮ ತಾಪತ್ರಯಗಳು ದೂರವಾಗುವವು. ವಿದ್ಯೋಪಜೀವಿಗಳಿಗೀ ಕಾಲವು ಅಷ್ಟೊಂದು ಉತ್ತಮವಾಗಿಲ್ಲವಾದರೂ ಇತರ ಜನಸ್ತೋಮಕ್ಕೆ ಬಹಳ ಉತ್ತಮವಿದೆ. ನಿರೀಕ್ಷಿಸಿದುದಕ್ಕಿಂತ ಅಧಿಕ ಫಲಪ್ರಾಪ್ತಿಯಾಗುವದರಲ್ಲಿ ಸಂಶಯವಿಲ್ಲ. ತಾ. 5, 6, ಮಾತ್ರ ಉತ್ತಮವಾಗಿಲ್ಲ.

ಮಕರ:—ಇಂದು ನಿಮ್ಮ ಮನದಾಸೆಯು ಸಿದ್ಧಿಸಲಿದೆ. ಸುರ ಗುರುವು ನಿಮ್ಮ ರಾಶಿಯನ್ನೂ ನಿಮ್ಮ ಲಾಭ ಸ್ಥಾನವನ್ನೂ ನೋಡುತ್ತಿರುವ ಕಾರಣ ಮತ್ತು ಲಾಭದಲ್ಲಿ ಗ್ರಹತ್ರಯರ ಸಮ್ಮಿಲನವಾಗುವುದರಿಂದ ನಿಮಗೀ ವಾರವು ಅತ್ಯಂತ ಸುಖದಾಯಿಯಾಗಿ ಪರಿಣಮಿಸುವದು, ನಿಮ್ಮ ಬಯಕೆಯಂತೆ ಸಕಲವೂ ಸಿದ್ಧಿಸುವವು. ಹಣದ ಬಿಕ್ಕಟ್ಟಿನಿಂದ ಮುಕ್ತರಾಗಿ ಸಾಕಷ್ಟು ಅವರ್ಧನವನ್ನು ಸಂಗ್ರಹಿಸುವಿರಿ. ವಾರಾದಿಯ 4 ದಿನಗಳಲ್ಲಿ ನಿಮ್ಮ ಮನೋರಥಗಳು ಸಿದ್ಧಿಸಲಿವೆ.

ಕುಂಭ:—ಕಳೆದ ವಾರಕ್ಕಿಂತ ಈ ವಾರವು. ಸ್ವಲ್ಪ ಉತ್ತಮವಾಗುವದು ನಿಮಗೆ. ಪರಿಶ್ರಮಕ್ಕೆ ತಕ್ಕ ಫಲ ಲಭಿಸುವದಾದರೂ ವಿಶೇಷವಾದ ಖರ್ಚುಗಳಿಂದಾಗಿ ಹಣದ ತಗಾದೆಯುಂಟಾದೀತು. ಬಂಧು ವರ್ಗದವರೊಡನೆ ಮನಸ್ತಾಪವುಂಟಾಗಲಿದೆ. ಮಿತ ಭಾಷಿಗಳಿಗೂ ಕೂಡ ಈ ವಾರದಲ್ಲಿ ವಾಕ್ಕಲಹವುಂಟಾದೀತು. ನೀನಿಂದು ಶತ್ರು ಪೀಡೆಯಿಂದ ಮುಕ್ತರಾಗುವಿರಿ. ವಾತ ಪಿತ್ಥಪ್ರಕೋಪದಿಂದಾಗಿ ಆರೋಗ್ಯ ಕೆಡಲಿದೆ. ವಾರಾಂತ್ಯದ 3 ದಿನಗಳು ಹೆಚ್ಚಿನ ಇಷ್ಟಾರ್ಥಗಳನ್ನು ನೆರವೇರಿಸುವವು.

ಮೀನ:—ದಿನಗಳೆದಂತೆ ಕಷ್ಟ ಪರಂಪರೆಗಳು ನಿಮ್ಮನ್ನು ಆವರಿಸುತ್ತಲಿವೆ. ಧನಭಾಗ್ಯ ಲಾಭ ಪತಿಗಳು ಅಷ್ಟಮಗತರಾಗಿರುವುದರಿಂದ ಇಂದು ನಿಮ್ಮ ಭಾಗ್ಯಸ್ಥಾನವು ತೀರ ಹೀನ ಸ್ಥಿತಿಗೆ ಬರಲಿದೆ. ನಿತ್ಯದ ಖರ್ಚು ವೆಚ್ಚಗಳಿಗಾಗಿ ಹೆರವರ ಮುಖ ನೋಡಬೇಕಾಗಿ ಬರುವುದು. ಚರ್ಮರೋಗವು ಬಲವಾಗಿ ಪೀಡಿಸಲಿದೆ. ಶತ್ರುಗಳು ಕೂಡ ಪ್ರತೀಕಾರಾಸಕ್ತರಾಗುವರು. ವಿಜಾತೀಯವರೊಡನೆ ಕಲಹವಾಗಲಿದೆ. ವಾರಾದಿಯ 4 ದಿನಗಳಂತೂ ವಿಶೇಷ ಅನಿಷ್ಟಕರಗಳಿವೆ.

ಓದಿ ತೊಡಗಿದರೆ ಪೂರ್ತಿ ಓದದೆ ಕೆಳಗಿಡಲಾಗದ, ವಿನೋದದೊಡನೆ ವಿಚಾರವನ್ನೂ ಕೆರಳಿಸುವ, ವಿವಿಧ ಕನ್ನಡ ಲೇಖಕರ ಓದಲೇ ಬೇಕಾದ ಕೆಲವು ಪುಸ್ತಕಗಳು.

ಅಂತರಂಗದ ಕತೆಗಳು ರೂ. 1 4 0
ಸೃಷ್ಟಿಯ ವಿವಿಧ ವೈಚಿತ್ರ್ಯಗಳನ್ನು ಚಿತ್ರಿಸುವ, ಕಥಾಸಂಗ್ರಹ.

ಪಂಚಕಜ್ಜಾಯ ರೂ. 1 8 0
ಚೆಲುವಿನ ಐದು ನೀಳ್ಗತೆಗಳ ಸಂಗ್ರಹ.

ಅನಿಲ ರೂ. 2 0 0
ಸಾಹಿತ್ಯದ ಸರ್ವವಿಧದ ಸಂಗ್ರಹ.

ಹೆಂಗುಸರ ಕತೆಗಳು ರೂ. 2 0 0
ಸ್ತ್ರೀಯರ ಚಿತ್ತವೃತ್ತಿಯನ್ನು ಚಿತ್ರಿಸುವ ಸ್ತ್ರೀಯರಿಂದಲೇ ಬರೆಯಲ್ಪಟ್ಟ ನೂತನ ಕತೆಗಳ ಸಂಗ್ರಹ.

ನಗೆನೋಟಗಳು ರೂ. 1 4 0
ವಿನೋದ ಚಿತ್ರಗಳ ಸಂಗ್ರಹ.

ಬಾಳಿನ ಬೆಡಗು ರೂ. 1 4 0
ಬಾಳಿನಬೆಡಗನ್ನು ಚೆನ್ನಾಗಿ ಬಣ್ಣಿಸುವ ನೂತನ ಕಾದಂಬರಿ.

ಧನದ ಬಿಂದಿಗೆ ಮತ್ತಿತರ ನಾಟಕಗಳು
ವಿವಿಧ ಲೇಖಕರ ಉತ್ತಮ ಏಕಾಂಕ ನಾಟಕಗಳು. ರೂ. 1 8 0

ಸುಲಭದಲ್ಲಿ ಇಂಗ್ಲಿಷ್ ರೂ. 1 8 0

ಮನೆ ಮದ್ದು ರೂ. 2 8 0

ಗೀತೆಯ ಕೈಗನ್ನಡಿ ರೂ. 0 12 0

ವಿವರವಾದ ಕೆಟಲಾಗಿಗೆ ಬರೆಯಿರಿ. ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಕಮಿಷನ್ ಇದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಂಬಯಿ ಏಜಂಟರು:- ಸ್ಟೂಡೆಂಟ್ಸ್ ಬುಕ್ ಡಿಪೊ, 6 E. ಪಿತಾ ಸ್ಟ್ರೀಟ್, ಫೋರ್ಟ್, ಮುಂಬೈ.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಶೇತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಜುಮ್ಲಾ ಠಹಿವಾಟು ...., „ **60,50,000**

ಕಾಯಂ ಠೇವಣಾತಿಗಳು ! ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಲಿಯ ಅಧ್ಯಕ್ಷರು.

THE VIJAYA BANK, Limited.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — **ರೂ. ೫—೮—೦** .... **ಪೋಸ್ಟು ಖರ್ಚು ರೂ. ೦—೧೪—೦**

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 23 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹಡಚಿಪ್ಪ ಋತುಸ್ರಾವವಾಗುವುದು, ಪತ್ತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶಲ್ ರೂ. 5/- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, P.O.B.(S-J.)
CALCUTTA. 40

ಸ್ಟಾಕಿಸ್ಟರು: ಮಹಾಕಂಪೆನಿ, ಮಂಗಳೂರು.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 Licence No. 31
Licensed to Post without Prepayment

ನವಯುಗ

Vol.33. No 15 10-12-1953

ಶಾಸನಾಂಗದ ಕಾರ್ಯಭಾರ

ಮದ್ರಾಸು ಶಾಸನಸಭೆಯ ಕಾರ್ಯದರ್ಶಿ ಶ್ರೀಮಾನ್ ಆರ್. ವಿ. ಕೃಷ್ಣ ಅಯ್ಯರರು ಕಳೆದ ಮುವತ್ತು ವರ್ಷಗಳಿಂದ ಶಾಸನಾಂಗದ ಕಾರ್ಯಭಾರದ ಕುರಿತು ಜ್ಞಾನವನ್ನು ಪಡೆದ ವ್ಯಕ್ತಿ. ಅವರು ಈಚೆಗೆ "ಸ್ವತಂತ್ರ ಶಾಸನಾಂಗಗಳ ಕಲ್ಪನೆ" ಎಂಬ ತಮ್ಮದೊಂದು ಭಾಷಣ ಮಾಲೆಯಲ್ಲಿ ಆಧುನಿಕ ಶಾಸನಾಂಗದ ಕಾರ್ಯಭಾರದ ಬಗೆಗೆ ವಿವರವಾದ ಮಾಹಿತಿಗಳನ್ನು ಒದಗಿಸಿಕೊಟ್ಟಿದ್ದಾರೆ. ಅವರೆನ್ನುವಂತೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಶಾಸನಾಂಗಕ್ಕೆ ಬಹಳ ಮಹತ್ವವೂ ಪ್ರಾಮುಖ್ಯತೆಯೂ ಸಲ್ಲುತ್ತದೆ. ರಾಜ್ಯದ ಪ್ರಜೆಗಳ ಮೇಲೆ ಅಧಿಕಾರ ನಡೆಸುವುದಕ್ಕೂ ಅವರ ಯೋಗಕ್ಷೇಮದ ಹಿತಚಿಂತನೆಮಾಡುವುದಕ್ಕೂ ಸರಕಾರಕ್ಕೆ ಯೋಗ್ಯ ಮಾರ್ಗ ದರ್ಶನ ಮಾಡುವುದು ಅದರಚಟುವಟಿಕೆಯ ಮೇಲೆ ನಿಯಂತ್ರಣವಿಡುವುದು ಶಾಸನಾಂಗದ ಕರ್ತವ್ಯವಾಗಿ ಪರಿಣಮಿಸಿರುತ್ತದೆ. ಶಾಸನಾಂಗಕ್ಕೆ ಆಧುನಿಕ ಕಾಲದಲ್ಲಿ ಸಲ್ಲುವ ಅಗ್ರಸ್ಥಾನ ಪ್ರಾಚೀನ ಪರಂಪರೆಯಿಂದ ಬಂದ ಮರ್ಯಾದೆಯಲ್ಲ. ಹಿಂದಿನಕಾಲದ ರಾಜ ಮಹಾರಾಜರು ಅಥವಾ ಸರಕಾರಗಳು ಅಧಿಕಾರ ನಡೆಸುತಿದ್ದಾಗ ಅವರಿಗೆ ಮಾರ್ಗದರ್ಶನ ಮಾಡಲು ಈಗಿನಂತೆ ಶಾಸನಾಂಗಗಳು ಇದ್ದಿರಲಿಲ್ಲ ಮನುಷ್ಯನು ಈಗ ಶಾಸನಾಂಗಗಳ ಮೂಲಕ ತಾನೇ ಕಾನೂನನ್ನು ಮಾಡಿಕೊಳ್ಳಲು ಹವಣಿಸಿರುವನು-ಆದರೆ ಹಿಂದಿನ ಕಾಲದಲ್ಲಿ ಈ ಕಲ್ಪನೆಯೇ ಇದ್ದಂತೆ ತೋರುವುದಿಲ್ಲ.

ಗ್ರೀಕ ತತ್ವಜ್ಞಾನಿಗಳಲ್ಲಿ ಅರಿಸ್ಟಾಟಲನ ಹೆಸರು ಚಿರಸ್ಮರಣೀಯವಾದದ್ದು. ಆ ಮಹಾನುಭಾವನು ಚೆನ್ನಾಗಿ ಕಾರ್ಯನಿರ್ವಹಿಸುವ ರಾಜ್ಯದಲ್ಲಿನ ಅಧಿಕಾರಾಂಗಗಳ ಉಲ್ಲೇಖವಮಾಡುವಾಗ ಶಾಸನಾಂಗವೊಂದಿದೆ ಎಂದು ಹೇಳುವುದೇ ಇಲ್ಲ. ನಮ್ಮ ಪ್ರಾಚೀನ ಗ್ರಂಥ ರಾಶಿಯನ್ನು ತಿರುವಿಹಾಕಿದರೂ ಕಾನೂನು ಕಾಯಿದೆಗಳನ್ನು "ರಚಿಸಬಲ್ಲ" ಶಾಸನಾಂಗವೊಂದಿದ್ದಿತೆಂದು ಕಾಣುವುದಿಲ್ಲ. ಮನುಷ್ಯನ ಸಂಸ್ಕೃತಿಗೆ ಕಾನೂನನ್ನು ತಾನೇ ರಚಿಸಿಕೊಳ್ಳಬಲ್ಲೆನೆಂದು ತೋರಿದುದು ಈಚೆಗೆ ಎಂಬ ಸಂಗತಿ ಇದರಿಂದ ವ್ಯಕ್ತಗೊಳ್ಳುತ್ತದೆ.

ಹಾಗಾದರೆ ಹಿಂದಿನ ಕಾಲದಲ್ಲಿ ಜನರ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳಲು ಸರಕಾರಕ್ಕೆ ಸಾಧ್ಯವಾಯಿತಾದರೂ ಹೇಗೆ? ಕಾನೂನು ಕಾಯಿದೆಗಳು — ವಿಧಿವಿಧಾನಗಳು ಇಲ್ಲದೆ ಸರಕಾರ ಗುರುತರವಾದ ಹೊಣೆಗಾರಿಕೆಯನ್ನು ನಿರ್ವಹಿಸುವುದೆಂತು? ಇದಕ್ಕೆ ನಮಗೆ ದೊರೆಯುವ ಉತ್ತರ ತೀರ ಸಾಮಾನ್ಯವಾದ ಮಾತು- ಧರ್ಮಮೂಲವಾದ ಆಚರಣೆಯೇ ಎಲ್ಲ ಕಾಯಿದೆ ಕಾನೂನು, ವಿಧಿವಿಧಾನವೂ ಆಗಿದ್ದಿತು. ಯಾವ ಸರಕಾರವಾಗಲೀ ಅರಸನಾಗಲೀ ಮೂಲಭೂತವಾದ ಧರ್ಮಾಚರಣೆಯನ್ನು ಉಲ್ಲಂಘಿಸುತ್ತಿದ್ದಿಲ್ಲ — ಮತ್ತು ಅದನ್ನು ಯಾರೂ ಉಲ್ಲಂಘಿಸಿ ನಡೆಯದಂತೆ ನೋಡಿಕೊಳ್ಳುವುದನ್ನೆ ಕರ್ತವ್ಯವಾಗಿ ಅರಸನೂ ಸರಕಾರವೂ ತಿಳಿದುಕೊಂಡಿದ್ದರು. ಈ ಧರ್ಮಾಚರಣೆ ಸನಾತನವಾದದ್ದು.-ದೇವರೇ ಅದರ ಮೂಲ-- ಅದರ ಸ್ವರೂಪವೇ ದೈವಿಕ ಅದ ಕಾರಣ, ಮನುಷ್ಯ ಆ ಧರ್ಮದ ಧಾರಾಪ್ರವಾಹವನ್ನು ತನಗೆ ಬೇಕೆನಿಸಿದಂತೆ ತಿರುಗಿಸಲೂ ಸಾಧ್ಯವೆಂದು ತಿಳಿಯುವ ಪ್ರಮೇಯ ವಿರಲಿಲ್ಲ.

ನಮ್ಮ ಜೀವನದಲ್ಲಿ ಧರ್ಮಾಚರಣೆಯ ವರ್ಚಸ್ಸು ಇಂದಿಗೂ ಕಡಿಮೆಯಾಗಿಲ್ಲ-ನೈತಿಕ ತತ್ವಗಳನ್ನು ಮನ್ನಿಸದಯಾವದೇ ಕಾನೂನುಕಾಯಿದೆಗಳನ್ನು ಈಗಿನ ಶಾಸನಾಂಗವಮಾಡಲು ಸಾಧ್ಯವೇ ಇಲ್ಲ ಕಾನೂನು ಕಾಯಿದೆಗಳನ್ನು ಜನರು ಮನ್ನಿಸಬೇಕಾದರೆ ಅದು ಬಹುಜನರ ಹಿತಮಾಡಬೇಕಾದುದಷ್ಟೇ ಅಲ್ಲ, ಮನುಷ್ಯನ ನರನಾಡಿಯಲ್ಲಿ ಸನಾತನವಾಗಿ ಹರಿದುಬಂದ ಧರ್ಮಾಚರಣೆಯ ಕಲ್ಪನೆಯನ್ನೂ ಅದು ಗೌರವಿಸಬೇಕಾಗುವುದು. ಜನಕ್ಕೆ ನ್ಯಾಯವಾದವಾಗಬೇಕು; ಅವರ ನೈತಿಕ ಭಾವನೆಗೆ ಯೋಗ್ಯ ರಕ್ಷಣೆ ಹಾಗೂ ಪೋಷಣೆ ದೊರೆಯಬೇಕು. ಕಾರಣ ಆಧುನಿಕ ಶಾಸನಾಂಗ ತಾನು ಮಾಡುತ್ತೇನೆನ್ನುವ ಯಾವದೇ ಕಾಯಿದೆ — ಕಾನೂನು — ಹಿಂದಿನಿಂದ ಇಂದಿನ ವರೆಗೆ ಅನೂಚಾನವಾಗಿ ನಡೆದುಕೊಂಡುಬಂದ ನಾಗರಿಕತೆಯ ಸಂಪ್ರದಾಯವನ್ನು ಗಮನಿಸಲೇಬೇಕಾಗುತ್ತದೆ. ಜನಕ್ಕೆ ಇದು ಸಲ್ಲದ ಕಾಯಿದೆ, ಒಲ್ಲದ ಕ್ರಮ ಎಂಬ ಭಾವನೆ ಯುಂಟಾದರೆ, ಅಲ್ಲಿ ವಿದ್ರೋಹದ ಅಗ್ನಿ ಕಿಡಿಯುಗುಳುತ್ತದೆ; ಮತ್ತು ಯಾವ ಸೈನ್ಯ ಹಾಗೂ ಸರಕಾರವೂ ಜನರನ್ನು ವಿಧೇಯರಾಗಿ ಮಾಡಿಕೊಳ್ಳಲಾರದು.

ನಮ್ಮ ಪ್ರಜಾಪ್ರಭುತ್ವದಲ್ಲಿ "ಸಾರ್ವಜನಿಕ ಮತ"ದ ಕುರಿತು ಬಹಳ ಮಾತು ಕೇಳುತ್ತೇವೆ- ಶಾಸನಾಂಗ ಬಹುಜನರ ಮತವನ್ನೆ ಬಿಂಬಿಸುವುದೆಂಬ ಕಲ್ಪನೆ ನಮ್ಮದು. ಆದರೆ ನಮ್ಮ ಮುಖ್ಯ ದೋಷವೆಂದರೆ ಬಹುಜನರ ಹಿತ ಮಾಡುತ್ತೇವೆ ಎನ್ನುವ, ಸಾರ್ವಜನಿಕ ಅಭಿಪ್ರಾಯವನ್ನು ಸರಿಯಾಗಿ ಪ್ರತಿಪಾದಿಸುತ್ತೇವೆ ಎನ್ನುವ ಯಾವುದೇ ಪಂಗಡವಾಗಲೀ ವ್ಯಕ್ತಿಯಾಗಲೀ ನಿಜಾರ್ಥದಲ್ಲಿ ಹಾಗೆ ಮಾಡುವುದಿಲ್ಲ. ಅವರು ಮುಚ್ಚಿಕೊಂಡ ದೃಷ್ಟಿಯೊಂದಿದೆ, ಅವರಿಗೆ ಪ್ರಿಯಾವಹವಾದ ಕೆಲವು ವಿಶಿಷ್ಟ -ತ್ವಗಳು ಇವೆ. ಮೇಲಾಗಿ-ಇವೇ ಸಾರ್ವಜನಿಕರ ಸಾಮಾನ್ಯಾಭಿಪ್ರಾಯವೆಂಬ ತಪ್ಪು ಕಲ್ಪನೆ ಆ ವ್ಯಕ್ತಿಗಳಲ್ಲಿಯೂ ಪಕ್ಷಗಳಲ್ಲಿಯೂ ಇದೆ. ತಮ್ಮ ಇಷ್ಟಾರ್ಥಗಳು ಸಿದ್ಧಿಸಿದರೆಯೇ ಸಾರ್ವಜನಿಕ ಮತಕ್ಕೆ ಮನ್ನಣೆ ದೊರೆಯಿತೆಂದೂ ಅನ್ಯಥಾ ಬಹುಜನರ ಹಿತ ದುರ್ಲಕ್ಷಿಸಲ್ಪಟ್ಟಿತೆಂದೂ ಇವರೆಲ್ಲ ತಿಳಿದುಕೊಳ್ಳುವರು. ಈ ಗೊಂದಲದಲ್ಲಿ ಪರಸ್ಪರ ನಡೆಯುವ ತೀವ್ರ ಸ್ಪರ್ಧೆ, ಒಬ್ಬರಿನ್ನೊಬ್ಬರ ಮೇಲೆ ಮಾಡುವ ಆರೋಪ - ಪ್ರತ್ಯಾರೋಪಗಳು ಜನಹಿತದ ನಿಜವಾದ ತಿಳಿವಳಿಕೆಯ ಕಲ್ಪನೆಗೆ ತಂತಮ್ಮ ಪಕ್ಷ ಸಂಗಡಗಳ ಬಣ್ಣವನ್ನು ಕೂಡಿಸಿ, ಅಂದ ಹಾಗೂ ರುಚಿ ಎರಡನ್ನೂ ಕೆಡಿಸುತ್ತವೆ. ಅರ್ಥಾತ್ ಕಾಯಿದೆ ಕ್ರಮದ ನಿಜವಾದ ಯೋಗ್ಯತೆಯ ಮೌಲ್ಯ ಮಾಪನವಾಗುವ ಬದಲು, ತಮ್ಮ ಪಕ್ಷಕ್ಕೆ ಒಪ್ಪಿಗೆಯಾದ ತತ್ವಗಳ ತಕ್ಕಡಿಯಲ್ಲಿಯೇ ಅವುಗಳನ್ನು ತೂಗಿ ನೋಡಿ ಅಭಿಪ್ರಾಯ ವ್ಯಕ್ತಗೊಳಿಸಲಾಗುತ್ತದೆ.

ಶಾಸನಾಂಗಕ್ಕೆ ಸ್ವಾತಂತ್ರ್ಯವಿರಬೇಕು. ಅದರ ಕಾರ್ಯಭಾರದಲ್ಲಿ ಯಾರದೇ ಹಸ್ತಕ್ಷೇಪ ನಡೆಯಬಾರದು, ತನ್ನ ಕೆಲಸ ನಿರ್ವಹಿಸುವಲ್ಲಿ ಅದಕ್ಕೆ ಆತಂಕಗಳಾಗಕೂಡದು ಎಂದೆಲ್ಲ ನಿಯಮಗಳಿಂದ ಇಂದಿನ ದಿನ ಶಾಸನಾಂಗ ಅತ್ಯುನ್ನತ ಸ್ಥಾನಮಾನವನ್ನು ಪಡೆಯಲು ಹವಣಿಸಿದೆ. ಆದರೆ ನಿಜವಾಗಿ ಶಾಸನಾಂಗಕ್ಕೆ ಅಷ್ಟು ಸ್ವಾತಂತ್ರ್ಯವಿರುತ್ತದೆಯೇ? ಕಾಯಿದೆ ಕಾನೂನುಗಳನ್ನು ಅದು ಮಾಡುತ್ತದೆ ಸರಕಾರದ ಮೇಲೆ ಅದಕ್ಕೆ ನಿಯಂತ್ರಣವಿದೆ — ಎಂಬುದೇನೋ ನಿಜ. ಹಾಗೆಂದ ರಾಜ್ಯದ ಗವರ್ನರ ಅಥವಾ ರಾಷ್ಟ್ರದ ಅಧ್ಯಕ್ಷನು ಕರೆದಾಗ ಮಾತ್ರ ಶಾಸನಾಂಗ ಅಧಿವೇಶನದಲ್ಲಿ ಸೇರುತ್ತದೆ; ಅವನ ಯೋಗ್ಯ ಕಾರಣ ಕೊಟ್ಟು ವಿಸರ್ಜಿಸಿದಾಗ ಶಾಸನಾಂಗ ಅ[illegible]ದಲ್ಲಿ ಉಳಿಯುವುದಿಲ್ಲ — ಎಂಬುದನ್ನು ಗಮನಿಸಿ. [illegible] ಸ್ವಾತಂತ್ರ್ಯ ಹೆಸರಿಗೆ ಮಾತ್ರವಲ್ಲವೆ ಎಂಬ ಸಂಶಯವುಂಟಾಗುವುದು ಸ್ವಾಭಾವಿಕ ಇದೇ ದಿಸೆಯಲ್ಲಿ ಇನ್ನಷ್ಟು ವಿಚಾರ ಮಾಡಿದರೆ — ಶಾಸನಾಂಗದ ಕಾರ್ಯಭಾರಕ್ಕೆ ಮೂಲಪ್ರೇರಣೆಯೊದಗುವುದೇ ಸರಕಾರದ ಚಟುವಟಿಕೆಯಿಂದ ಎಂಬುದೂ ಮನವರಿಕೆಯಾಗುತ್ತದೆ. ಶಾಸನ ಸಭೆಗೆ ಚುನಾಯಿತರಾದವರಲ್ಲಿಯೇ ಕೆಲವು ಜನ ಮಂತ್ರಿಗಳಾಗಿ ಬಂದು ಸರಕಾರ ರಚಿಸಿಕೊಂಡು ಕಾರ್ಯಾಂಗದ ನೌಕರರ ಸಹಾಯದಿಂದ ರಚಿಸಿದ ಕಾಯಿದೇ ಕ್ರಮಗಳಿಗೆ ಒಪ್ಪಿಗೆ ನೀಡಬೇಕೆಂದು ಶಾಸನಾಂಗವನ್ನು ಕೇಳುವುದು ಸಂಪ್ರದಾಯ. ಸರಕಾರದ ಮಂತ್ರಿಗಳು ಶಾಸನಾಂಗಕ್ಕೂ ಕಾರ್ಯಾಂಗಕ್ಕೂ ಸಂಬಂಧ ಜೋಡಿಸುವ ಗೊಣಸುಗಳಂತಿದ್ದು, ಅವರ ತಲೆಯಲ್ಲಿ ಹೊಳೆದ ಕಲ್ಪನೆಯೇ ಕಾಯಿದೆ [illegible]ನಾಗುತ್ತದಲ್ಲದೆ, ಶಾಸನಾಂಗದ ಒಟ್ಟು

[ಇಂನೇ ಪುಟ ನೋಡಿರಿ]

ವೇತನ ದೊರೆಯುವ ಪ್ರತಿ ದಿವಸದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ ನೀವು ಉಳಿಸಿಕೊಳ್ಳುವ ಅಂಶವೇ ಅತೀ ಮಹತ್ವದ್ದು. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನಲ್ಲಿ ಸಹಸ್ರಾರು ಮಂದಿ ಸೇವಿಂಗ್ಸ್ ಲೆಖ್ಖ ತೆರೆದು ತಾವು ಉಳಿಸುವ ಹಣವನ್ನು ವೃದ್ಧಾಪ್ಯ........ಅಪೇಕ್ಷಿತ ವಸ್ತುಗಳನ್ನು ಕೊಂಡುಕೊಳ್ಳಲು......ಹೆಚ್ಚೇಕೆ, ಅನಿರೀಕ್ಷಿತ ಘಟನೆಗಳಿಗಾಗಿ ಕೂಡಿಸಿಡುತ್ತಾರೆ. ಹಲ್ಲಿರುವಾಗಲೆ ಕಡಲೆ ಎಂಬಂತೆ ನೀವು ಸಂಪಾದನೆ ಮಾಡುವ ಈ ಸಮಯವೇ ಹಣ ಉಳಿಸುವ ಪರ್ವಕಾಲವಾಗಿದೆ. ಪ್ರತಿ ತಿಂಗಳ ನಿಮ್ಮ ಸಂಬಳದಲ್ಲಿ ಸೇಕಡಾ 10%ರಷ್ಟನ್ನು ಸೇವಿಂಗ್ಸ್ ಲೆಖ್ಖದಲ್ಲಿರಿಸಿ ನಿಮ್ಮ ಆರ್ಥಿಕ ಅಭಿವೃದ್ಧಿ ಹಾಗೂ ಭಾವೀ ಭದ್ರತೆಯನ್ನು ಕಾಪಾಡಿಕೊಳ್ಳಲು ಮುಂದಾಗಿರಿ.

ವ್ಯವಹಾರ ವಹಿವಾಟು ರೂ. 5,00,00,000

THE CANARA INDUSTRIAL & BANKING SYNDICATE LTD.,
H O: UDIPI, S. India.
Estd: 1925

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ. ದ. ಭಾರತ.

NAVAYUGA WEEKLY UDIPI

ಆಂಧ್ರ ರಾಜ್ಯದ ವಿಪುಲ ನೈಸರ್ಗಿಕ ಸಂಪತ್ತು

ಬಂಡವಾಳದ ಕೊರತೆಯೊಂದೇ ಚಿಂತೆಯ ವಿಷಯ

ಹೊಸತಾಗಿ ಆಂಧ್ರ ರಾಜ್ಯವು ಅಕ್ಟೋಬರ ೧ನೇ ದಿನಾಂಕ ಉದಯವಾಗಿರುವುದಷ್ಟೆ! ಆ ರಾಜ್ಯದ ವಿಷಯದಲ್ಲಿ ಹೆಚ್ಚು ಹೆಚ್ಚು ಮಾಹಿತಿಯನ್ನು ಸಂಗ್ರಹಿಸುವುದು ಸಂಶೋಧಕರ ಪ್ರಯತ್ನವಾದರೆ, ಅದನ್ನು ತಿಳಿದುಕೊಂಡು ಇತರ ರಾಜ್ಯಗಳ ಪಂಕ್ತಿಯೊಂದಿಗೆ ತೂಗಿನೋಡಲು ನಮಗೆಲ್ಲರಿಗೂ ಆತುರ. ಆಂಧ್ರ ರಾಜ್ಯ ಭೂಪಟದ ಮೇಲೆ ಒಂದು ತ್ರಿಕೋಣಾಕಾರದಲ್ಲಿ ಹ್ಯಾಪಿಸಿರುತ್ತದೆ. ವಿಸ್ತೀರ್ಣದಲ್ಲಿ ಆಂಧ್ರ ರಾಜ್ಯ ಪಶ್ಚಿಮ ಬಂಗಾಳ ಅಥವಾ ಪೂರ್ವ ಪಂಜಾಬದ ಎರಡರಷ್ಟು. ಇದು ೨೦೫ ಲಕ್ಷ ಜನ ಸಂಖ್ಯೆಯನ್ನು ಪಡೆದಿದೆ. ಜನ ವಸತಿ ಬಹಳ ದಟ್ಟವಾಗಿದ್ದು ಪ್ರತಿ ಚದರ ಮೈಲಿಗೆ ಒಂದು ಸಾವಿರ ಜನರು ಫಲವತ್ತಾದ ಬಯಲು ಪ್ರದೇಶದಲ್ಲಿದ್ದಾರೆಂದು ಲೆಕ್ಕ ಹಾಕಿರುವರು. ಸುಮಾರು ೬೦೦ ಮೈಲು ಉದ್ದದ, ಬಂಗಾಳ ಕೊಲ್ಲಿಯನ್ನು ಚುಂಬಿಸುವ ಉತ್ತಮ ರೇವುಗಳುಳ್ಳ ಕರಾವಳಿಯನ್ನು ಆಂಧ್ರ ರಾಜ್ಯ ಪಡೆದಿದೆ ಈ ಬಂದರುಗಳನ್ನು ಅಭಿವೃದ್ಧಿ ಪಡಿಸಿದರೆ, ಆಂಧ್ರದ ವ್ಯಾಪಾರ ವಹಿವಾಟು ಉನ್ನತ ಸ್ಥಿತಿಗೆ ಬರುವುದರಲ್ಲಿ ಸಂದೇಹ ವಿಲ್ಲ.

ಸಮೃದ್ಧ ಕೃಷಿ

ಆಂಧ್ರದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದದ್ದು - ಅಲ್ಲ, ಅಲ್ಲಿ ಎದ್ದು ತೋರುವಂಥದ್ದು - ಅಲ್ಲಿಯ ಸಮೃದ್ಧ ಕೃಷಿ ಮತ್ತು ಅದಕ್ಕೆ ಅನುಕೂಲವಾದ ಅಪಾರ ಜಲರಾಶಿ. ಈ ಪ್ರದೇಶದಲ್ಲಿ ಮಳೆಯು ಪಶ್ಚಿಮ ಕರಾವಳಿಯಷ್ಟು ಹೆಚ್ಚಾಗಿ ಬೀಳುವುದಿಲ್ಲ. ೩೫ರಿಂದ ೪೦ ಅಂಗುಲಗಳಷ್ಟು ಕಡಿಮೆ ಮಳೆ ಬರುತ್ತದೆ. ಆದರೂ ಇಲ್ಲಿ ನದಿಯ ನೀರನ್ನು ಕೃಷಿಗೆ ಧಾರಾಳವಾಗಿ ಉಪಯೋಗಿಸುತ್ತಿರುವುದರಿಂದ ಸಮೃದ್ಧ ಕೃಷಿಗೆ ಅವಕಾಶ ದೊರೆತಿದೆ. ವಿಶಾಲವಾದ ಬಯಲು ಭೂಮಿಯೂ ಅವುಗಳನಡುವೆ ವರ್ಷದ ಹನ್ನೆರಡೂ ತಿಂಗಳು ನೀರು ತುಂಬಿ ಹರಿಯುವ ನದಿಗಳೂ ಇದ್ದರೆ ನೀರಾವರಿಯನ್ನು ಅಭಿವೃದ್ಧಿಗೊಳಿಸಲು ಯಥೇಷ್ಟವಾಯಿತು. ಎಷ್ಟು ಮೈಲು ಉದ್ದವಾದರೂ ಸರಿಯೇ-ಸಮತಟ್ಟಾದ ನೆಲದಲ್ಲಿ ಕಾಲುವೆ ತೋಡಲು ಅಡ್ಡಿಯಿಲ್ಲ. ಇಲ್ಲಿ ಹರಿಯುವ ನದಿಗಳೆಂಥವು? ಕೃಷ್ಣ ಮತ್ತು ಗೋದಾವರಿಗಳೆಂದರೆ ಮಹಾ ನದಿಗಳೇ ನಿಜ. ಇವಲ್ಲದೆ ಮೂರು ಸಾಧಾರಣ ನದಿಗಳೂ ೨೮ ಸಣ್ಣ ನದಿಗಳೂ ಮತ್ತೆ ಹಲವು ಶಾಖೋಪಶಾಖೆಯ ನೀರಿನ ಧಾರೆಗಳೂ ಆಂಧ್ರ ರಾಜ್ಯವನ್ನು ತೋಯಿಸಿ, ಬಂಗಾಳಕೊಲ್ಲಿಯನ್ನು ಹೋಗಿ ಸೇರುತ್ತವೆ. ಇವುಗಳು ವರ್ಷಕ್ಕೆ ೧೫ ಕೋಟಿ ಎಕ್ರೆ ಅಡಿಯಷ್ಟು ನೀರನ್ನು ಸಮುದ್ರಕ್ಕೆ ಒಯ್ಯುತ್ತವೆಂದು ತಜ್ಞರ ಅಭಿಪ್ರಾಯ— ಆದರೆ ಈಗ ಈ ಜಲರಾಶಿಯಲ್ಲಿ ನೀರಾವರಿಗೋಸ್ಕರ ಎರಡು ಕೋಟಿ ಎಕ್ರೆ ಅಡಿಯಷ್ಟು ಮಾತ್ರ ಉಪಯೋಗಿಸುವರು. ಉಳಿದ ನೀರಿನಲ್ಲಿ ೮ ಕೋಟಿ ಎಕ್ರೆ ಚದರ ಅಡಿಯಷ್ಟನ್ನು ನೀರಾವರಿಗೂ ವಿದ್ಯುಚ್ಛಕ್ತಿಯ ಉತ್ಪಾದನೆಗೂ ಸ್ವಲ್ಪ ಮಾತ್ರ ವೆಚ್ಚದಿಂದ ಉಪಯೋಗಿಸಿಕೊಳ್ಳಲು ಸಾಧ್ಯವುಂಟು. ಕೃಷ್ಣೆಯ ಮೇಲೆ ಮೂರು ಅಣೆಕಟ್ಟುಗಳನ್ನು ಕಟ್ಟುವ ವಿಚಾರ ಪರಿಶೀಲನೆಯಲ್ಲಿದೆ; ಇನ್ನು ಹಲವಾರು ಚಿಕ್ಕ ನೀರಾವರಿ ಯೋಜನೆಗಳೂ ವಿಚಾರಾಧೀನವಾಗಿವೆ. ತುಂಗಭದ್ರೆಯ ದಕ್ಷಿಣ ಕಾಲುವೆಯ ರಚನೆಯಾಗಬೇಕೆಂಬ ಒತ್ತಾಯವೂ ಬಲವಾಗಿದೆ. ಈ ಯೋಜನೆಗಳೆಲ್ಲ ಪ್ರಾಯಶಃ ಇನ್ನು ಹತ್ತು ವರ್ಷಗಳೊಳಗೆ ಕೈಗೂಡುತ್ತವೆ.

ವರುಣನ ವರದಾನ

ಕೈಗಾರಿಕೆಯನ್ನು ಬೆಳೆಸಲು ಅತ್ಯುತ್ತಮ ಅವಕಾಶ ಹಾಗೂ ನೈಸರ್ಗಿಕ ಸಂಪತ್ತು ಇದ್ದರೂ ಆಂಧ್ರ ರಾಜ್ಯ ಇನ್ನೂ ಕೃಷಿ ಪ್ರಧಾನವಾಗಿಯೇ ಉಳಿದಿದೆ. ನಾಲ್ಕರಲ್ಲಿ ಮೂರು ಜನ ತೆಲುಗರು ಕೃಷೀವಲರಾಗಿದ್ದಾರೆ. ೧೯೫೦-೫೧ನೇ ಸಾಲಿನಲ್ಲಿ ಆಂಧ್ರದಲ್ಲಿ ೧೫೫ ಲಕ್ಷ ಎಕ್ರೆ ಭೂಮಿಯನ್ನು ಬಿತ್ತಿ ಸಾಗುವಳಿ ಮಾಡಿದ್ದರು ಅದೇ ಕಾಲಕ್ಕೆ ಉಳಿದ ಮದ್ರಾಸು ರಾಜ್ಯದಲ್ಲಿ ಕೃಷಿಗೆ ಒಳಗಾದ ಭೂಮಿ ೧೪೮ ಲಕ್ಷ ಎಕ್ರೆ ಮಾತ್ರ. ಹೀಗೆ ಕೃಷಿಗೆ ಒಳಗಾದ ಒಟ್ಟು ಭೂಮಿಯಲ್ಲಿ ಮಾತ್ರವಲ್ಲ ಅರಣ್ಯ ಸಂಪತ್ತಿನಲ್ಲಿಯೂ ಆಂಧ್ರ ಮದ್ರಾಸಿಗಿಂತ ಭಾಗ್ಯಶಾಲಿಯಾಗಿರುತ್ತದೆ—ನೂರಕ್ಕೆ ೨೦ ಎಕ್ರೆಯಷ್ಟು ಅರಣ್ಯವನ್ನು ಆಂಧ್ರ ಪಡೆದಿದೆ. ಮದ್ರಾಸು ರಾಜ್ಯದಲ್ಲಿ ಈ ಪ್ರಮಾಣ ನೂರಕ್ಕೆ ೧೬ ಮಾತ್ರ. ೨೦ ಲಕ್ಷ ಎಕ್ರೆ ಭೂಮಿಯಲ್ಲಿ ಆಂಧ್ರ ರಾಜ್ಯದ ಕೃಷಿಕರು ಒಂದಕ್ಕಿಂತ ಹೆಚ್ಚು ಬೆಳೆ ತೆಗೆಯುತ್ತಾರೆ. ಈ ವಿಷಯದಲ್ಲಿ ಮದ್ರಾಸು ಮುಂದರಿದಿದೆ. ಇಲ್ಲಿ ೫೫ ಲಕ್ಷ ಎಕ್ರೆಭೂಮಿ ಒಂದಕ್ಕಿಂತ ಹೆಚ್ಚು ಫಸಲು ಕೊಡುತ್ತದೆ ಬೇಸಾಯಕ್ಕೆ ಒಳಗಾದ ಒಟ್ಟು ಭೂಮಿ ಮದ್ರಾಸಿನಲ್ಲಿ ಆಂಧ್ರಕ್ಕಿಂತ ೫ ಲಕ್ಷ ಎಕ್ರೆಯಷ್ಟು ಹೆಚ್ಚಾಗಿದೆ. ಆದರೆ ಮೊದಲೇ ಸೂಚಿಸಿದಂತೆ, ನೀರಾವರಿಯ ಅನುಕೂಲತೆ ಮದ್ರಾಸಿಗಿಂತ ಆಂಧ್ರಕ್ಕೆಯೇ ಅಧಿಕವಿರುವುದರಿಂದ, ಆಂಧ್ರ ಬಹು ಬೇಗನೇ ಅಭಿವೃದ್ಧಿಗೆ ಬರುವುದು ಅಸಾಧ್ಯವೇನಲ್ಲ ಕೃಷಿ ಮಾಡಿದ ಭೂಮಿಯಲ್ಲಿ ನೂರಕ್ಕೆ ೬೦ ಆಹಾರ ಧಾನ್ಯಗಳಿಗೆ ಮೀಸಲು ಎಣ್ಣೆ ಕಾಳುಗಳನ್ನು ನೂರಕ್ಕೆ ೧೫ ಜಮೀನಿನಲ್ಲಿ ಬೆಳೆದರೆ, ಹತ್ತಿಗ್ಲೋಸರ ನೂರಕ್ಕೆ ೪ ಎಕ್ರೆ ಜಮೀನು ಉಪಯೋಗಿಸಲ್ಪಡುತ್ತದೆ. ಆಂಧ್ರದಲ್ಲಿ ಹೊಗೆಸೊಪ್ಪು ರೊಕ್ಕದ ಪೈರು ಪ್ರತಿನೂರು ಎಕ್ರೆಗೆ ಎರಡು ಎಕ್ರೆಯಷ್ಟು ಹೊಗೆಸೊಪ್ಪಿನ ಬೆಳೆಯಾಗಿರುತ್ತದೆ. ಮದ್ರಾಸು ರಾಜ್ಯ ರೊಕ್ಕದ ಪೈರೆಂದು ಚಹಾ, ಕಾಫಿ, ಕರಿಮೆಣಸು, ಮತ್ತು ಹತ್ತಿಯನ್ನು ಬೆಳೆಸುತ್ತದೆ. ಮದ್ರಾಸಿನಲ್ಲಿ ಅಕ್ಕಿ, ರಾಗಿ, ಬಾರ್ಲಿ, ಬಾಜ್ರಾ ಮುಂತಾದ ಆಹಾರದ ಬೆಳೆಗೆಯೇ ಮಹತ್ವ ಕೊಡಲ್ಪಡುತ್ತದೆ. ಆಂಧ್ರದಲ್ಲಿ ಕೂಡ ಜೋಳ, ಗೋಧಿ, ಕಡಲೆ ಮತ್ತಿತರ ಧಾನ್ಯಗಳನ್ನು ಬೆಳೆದರೂ ಎಣ್ಣೆಕಾಳುಗಳಿಗೆ ಆಂಧ್ರ ಪ್ರಖ್ಯಾತವಾಗಿರುತ್ತದೆ. ನೆಲಗಡಲೆ, ಸಾಸಿವೆ, ಅಗಸೆ ಹಾಗೂ ಔಡಲದ ಬೀಜಗಳು ಆಂಧ್ರದ ಮುಖ್ಯ ನಿರ್ಯಾತ ವಸ್ತು. ಕಬ್ಬಿನ ಬೆಳೆಗೂ ಆಂಧ್ರ ಹೆಸರುಗೊಂಡಿದೆ. ಈ ಬೆಳೆಗೆ ಒಳಗಾದ ಜಮೀನು ಮದ್ರಾಸಿನಷ್ಟೆ ಇದ್ದರೂ ಆಂಧ್ರದಲ್ಲಿ ಪ್ರತಿ ಎಕರೆಗೆ ಮೂರು ಟನ್ನುಗಳಷ್ಟು ಸಕ್ಕರೆಯನ್ನು ಅದು ಉತ್ಪಾದಿಸುತ್ತದೆ. ಭಾರತದಲ್ಲಿ ಹತ್ತು ಎಕ್ರೆಗೆ ೧೩ ಟನ್ನುಗಳಷ್ಟು ಮಾತ್ರ ಸಕ್ಕರೆಯ ಸರಾಸರಿ ಉತ್ಪಾದನಾ ಪ್ರಮಾಣವಿರುವುದರಿಂದ ಸಕ್ಕರೆಯ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕೆಂದು ತೋರಿದರೆ ಆಶ್ಚರ್ಯವಿಲ್ಲ! ಮುಂದಿನ ಐದು ವರ್ಷಗಳಲ್ಲಿ ಭತ್ತ ಬೆಳೆಯುವ ೫೦೦೦೦ ಎಕ್ರೆ ಜಮೀನಿನಲ್ಲಿ ಕಬ್ಬು ಬೆಳೆದರಾಗದೆ ಎಂದು ಕೆಲವರಿಗೆ ತೋರಿದೆ. ಇದರಿಂದ ಒಂದೂವರೆ ಲಕ್ಷ ಟನ್ನು ಸಕ್ಕರೆ ಉತ್ಪಾದನೆಗೊಂಡು, ಈಗಿರುವ ಒಂಭತ್ತು ಸಕ್ಕರೆ ಕಾರ್ಖಾನೆಗಳ ಸಂಖ್ಯೆ ನಿಶ್ಚಯವಾಗಿಯೂ ವೃದ್ಧಿಯಾಗುವುದು. ಆದರೆ ಭಾರತದಲ್ಲಿ ಅಕ್ಕಿಯ ಕೊರತೆಯನ್ನು ಅನುಭವಿಸುವ ರಾಜ್ಯಗಳಿಗೆ ಅನ್ನ ಒದಗಿಸುವ ಕಣಜವಾದ ಆಂಧ್ರದಲ್ಲಿ ರೊಕ್ಕದ ಪೈರಿಗೆ ಭಾರತ ಸರಕಾರ ಅಷ್ಟು ಪ್ರೋತ್ಸಾಹ ಕೊಡಲಿಕ್ಕಿಲ್ಲ.

ಬಂಡವಾಳದ ಅಭಾವ

ಹೀಗೆ ಉದ್ದಿಮೆಗಳ ಅಭಿವೃದ್ಧಿಗೆ ಅಪ್ರತ್ಯಕ್ಷ ಪ್ರತಿಕೂಲ ಪರಿಸ್ಥಿತಿ ಕಂಡರೆ, ಪ್ರತ್ಯಕ್ಷ ತೊಡಕು ತೊಂದರೆಗಳು ಬೇರೆಯೇ ಇವೆ. ಔದ್ಯೋಗಿಕ ದೃಷ್ಟಿಯಲ್ಲಿ ಮದ್ರಾಸವು ಬಟ್ಟೆಯ ಗಿರಣಿ, ಸಕ್ಕರೆ, ಸಿಮೆಂಟು, ರಾಸಾಯನಿಕ ದ್ರವ್ಯ, ಸಾಬೂನು ಮುಂತಾದವುಗಳನ್ನು ಬೆಳೆಸಿಕೊಂಡಿದೆ. ಆಂಧ್ರದ ರಾಯಲ ಸೀಮೆಯಲ್ಲಿ ಖನಿಜ ಸಂಪತ್ತು ಹೇರಳವಾಗಿದ್ದರೂ ಅದನ್ನು ಬಳಸುವುದಕ್ಕೆ ಅಗ್ಗವಾದ ವಿದ್ಯುಚ್ಛಕ್ತಿಯ ಪೂರೈಕೆ ಅತ್ಯಗತ್ಯ. ಮುಚುಕುಂದ ಯೋಜನೆಯಿಂದ ಹಾಗೂ ಇತರ ಸ್ರೋತಗಳಿಂದ ಈಗ ೬೦೦೦೦ ಕಿಲೋವಾಟಿನಷ್ಟು ಕಡಿಮೆ ವಿದ್ಯುತ್ತನ್ನು ಆಂಧ್ರ ಪಡೆದಿರುವುದರಿಂದ ಔದ್ಯಮಿಕಪ್ರಗತಿ ಕುಂಠಿತವಾಗಿದೆ ತುಂಗಭದ್ರೆಯ ಯೋಜನೆಯು ಪೂರ್ತಿಗೊಂಡರೆ ಈ ಪ್ರಮಾಣ ೩ ಲಕ್ಷ ಕಿಲೋವಾಟುಗಳಿಗೆ ಮುಟ್ಟಿ, ಪರಿಣಾಮವಾಗಿ ಅತ್ತ ವಿಶಾಖ ಪಟ್ಟಣ ಹಾಗೂ ಗೋದಾವರಿ ಹಾಗೂ ಇತ್ತ ರಾಯಲ ಸೀಮೆಯ ಕಬ್ಬಿಣ, ತಾಮ್ರ, ಚಿನ್ನ, ಕಲ್ಲಿದ್ದಲು, ಸುಣ್ಣದ ಕಲ್ಲು, ಗಂಧಕ, ಅಭ್ರಕ, ಮ್ಯಾಂಗನೀಸ್ ಸೀಸ ಕ್ರೋಮೈಟ, ಬಾಕ್ಸೈಟ, ಪೈರೈಟ, ಗ್ರ್ಯಾಫೈಟಗಳ ಸಮುಚಿತ ಉಪಯೋಗ ಮಾಡಿಕೊಳ್ಳಬಹುದು ಆದರೆ ಕೃಷಿಯ ಅಭಿವೃದ್ಧಿಗಾಗಲೀ, ಔದ್ಯೋಗಿಕ ಪ್ರಗತಿಗಾಗಲೀ ಆಂಧ್ರಕ್ಕೆ ಬಂಡವಾಳದ ಅಭಾವ ದೊಡ್ಡ ಸಮಸ್ಯೆಯಾಗಿ ಕಂಡುಬರುತ್ತದೆ ಇಲ್ಲಿ ಎರಡು ಶೆಡ್ಯೂಲ್ಡ ಬೇಂಕುಗಳು; ಮತ್ತು ಐದು ನಾನ್ ಶೆಡ್ಯೂಲ್ಡ ಬೇಂಕು

(೧೧ನೇ ಪುಟ ನೋಡಿರಿ)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸೈನಿಕ ಒಪ್ಪಂದ ಮಾಡಿಕೊಳ್ಳುವ ಅನಿಷ್ಟಪ್ರದ ವ್ಯಾಮೋಹ

ಪಾಕ ಸರಕಾರದ ಮೇಲೆ ಅಮೇರಿಕ ಬೀಸಿದ ಬಲೆ

ಹಸಿದ ಭಾರತ ಅಮೇರಿಕದ ಗೋಧಿ ತಿಂದು ತೃಪ್ತಿ ಹೊಂದಿತು – ಈಗ ನೆರೆಯ ಪಾಕಿಸ್ತಾನವನ್ನು ಸೈನ್ಯದಾಹ ಪೀಡಿಸುತ್ತಿದೆ. ಅಮೇರಿಕ ತುಂಬಿದ ಔದಾರ್ಯದಿಂದ ಈ ತೃಷೆಯನ್ನು ಹಿಂಗಿಸಲು ಮುಂಬಾಗಿರುತ್ತದೆ. ಭಾರತಕ್ಕೆ ಕೊಟ್ಟ ಗೋಧಿಗೆ ಯಾವುದೇ ಪ್ರತಿಫಲ ಬಯಸದ ಅಮೇರಿಕಾ ಪಾಕಿಸ್ತಾನಕ್ಕೆ ನೀಡಬೇಕೆಂದಿರುವ ಸೈನಿಕ ಸಹಾಯಕ್ಕೆ ಪ್ರತಿಯಾಗಿ ಮಿಲಿಟರಿ ರಾಣ್ಯಗಳನ್ನೂ ಬೇಡುವುದಿಲ್ಲ. ನಮ್ಮಂತೆ ಪಾಕಿಸ್ತಾನವೂ ಅಮೇರಿಕದ ಔದಾರ್ಯ ತನ್ನ ಸಾರ್ವಭೌಮಾಧಿಕಾರದ ಮೇಲೆ ವರ್ಚಸ್ಸನ್ನು ಬೀರಲು ಬಿಡುವುದಿಲ್ಲ.

ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಮೊನ್ನೆ ಮಾಸಾರಂಭದ ಪ್ರಸಾರ ಭಾಷಣ ಮಾಡುವಾಗ ಹೇಳಿದ ಅಂಶಗಳು ಮೇಲಿನ ನಿರ್ಣಯವನ್ನು ಧ್ವನಿಸುತ್ತವೆ. "ಅಮೇರಿಕದ ಸೈನಿಕ ರಾಣ್ಯವನ್ನು ಪಾಕಿಸ್ತಾನದಲ್ಲಿ ಸ್ಥಾಪಿಸಲು ಬಿಡುವುದಿಲ್ಲ" ಎಂದು ಅವರು ಖಂಡತುಂಡವಾಗಿ ಸಾರಿದರು. ಭಲೆ— ಈಯೊಂದು ವಿಷಯದಲ್ಲಾದರೂ ಪಾಕಿಸ್ತಾನ ತನ್ನ ಆದರ್ಶವನ್ನೆ ಅನುಸರಿಸಿದುದನ್ನು ಭಾರತ ಮೆಚ್ಚಿಕೊಳ್ಳಲಿ!

ಬಾಯ್ಮಾತಿನ ಆಶ್ವಾಸನೆ

ಆದರೆ ಇದರಿಂದ ಅಮೇರಿಕೆಯೊಡನೆ ಪಾಕಿಸ್ತಾನವು ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವುದಿಲ್ಲವೆಂದು ನಾವು ಭಾವಿಸಬಹುದೊ? ಹಾಗೆ ಅಭಿಪ್ರಾಯಪಡುವುದು ಮೂರ್ಖತನ—ಮಹಮ್ಮದಾಲಿಯವರು ಸಾರ್ವಭೌಮಾಧಿಕಾರದ ವಿಷಯವನ್ನು ಪ್ರಸ್ತಾಪಿಸುವಾಗ ಮತ್ತು ಸೈನಿಕ ರಾಣ್ಯಕ್ಕೆ ಅವಕಾಶ ಕೊಡುವುದಿಲ್ಲೆಂದು ತಿಳಿಸಿದಾಗ – ಮುಕ್ಕಟೆಯಾಗಿ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನಕ್ಕೆ ಪೂರೈಸಲು ಅಮೇರಿಕಾ ಇಚ್ಛಿಸಿದರೆ ಅದನ್ನು ಸ್ವೀಕರಿಸುವುದಿಲ್ಲವೆಂದೇನೂ ಹೇಳಿಲ್ಲ.

ಸಮೃದ್ಧವಾದ ಅಮೇರಿಕಾದ ಕಾರ್ಖಾನೆಗಳಲ್ಲಿ ಹೇರಳವಾಗಿ ಉತ್ಪಾದನೆ ಹೊಂದುವ ಯುದ್ಧೋಪಕರಣಗಳ ಉಗ್ರಾಣವಾಗಿ ಪಾಕಿಸ್ತಾನ ಮಾರ್ಪಡುವ ಹಾಗೂ ಅಮೇರಿಕೆಯ ಯುದ್ಧ ವಿಶಾರದರು ಪಾಕಿಸ್ತಾನಕ್ಕೆ ಬೇಕುಬೇಕೆನಿಸಿದ ಸಲಹೆ ಸಹಾಯಗಳನ್ನು ಕೊಡುವ ವಿಷಯದಲ್ಲಿ ಹೊರಗಿನವರದೇನ ಮಾತೂ ನಡೆಯಲಾರದು. ತನಗೆ ಸಂತೋಷ ಕಂಡಂತೆ ನೆರವು ನೀಡಲು ಅಮೇರಿಕಾ ಸ್ವತಂತ್ರವಿದ್ದಂತೆ ಸಾರ್ವಭೌಮ ರಾಷ್ಟ್ರವಾದ ಪಾಕಿಸ್ತಾನಕ್ಕೆ ಅವನ್ನೆಲ್ಲ ಸ್ವೀಕರಿಸುವ ಹಕ್ಕು ಇದ್ದೇ ಇದೆ.

ನೆರೆಯ ರಾಷ್ಟ್ರ ಪಾಕಿಸ್ತಾನದಲ್ಲಿ ಸೈನ್ಯ ಬಲ ಹೆಚ್ಚಿ ಕೊಂಡರೆ ಅಪಾಯವಿಲ್ಲವೆ? ಎಂದು ಭಾರತ ಚಿಂತಿಸಬಾರದೆಂದು ಅವರ ಯೋಗ ಕ್ಷೇಮದ ಬಗ್ಗೆ ಸದಿಚ್ಛೆಯುಳ್ಳ ಪಾಕ ಹಾಗೂ ಅಮೇರಿಕಾದ ಮಿತ್ರರ ಅಭಿಪ್ರಾಯ, ಸ್ವತಂತ್ರ ರಾಷ್ಟ್ರದ ಆಕ್ರಮಣಕ್ಕೋಸ್ಕರ ಸೈನ್ಯ ಬಲವನ್ನು ಉಪಯೋಗಿಸುವುದಿಲ್ಲವೆಂದು ಅವರು ಆಶ್ವಾಸನೆ ಕೊಡುವುದಕ್ಕೆ ಹಿಂದುಳಿದಿಲ್ಲ.

ನಮಗೆ ಇದರಿಂದ ಸಮಾಧಾನವಾಗುವುದಿಲ್ಲವಾದರೆ, ಪಾಪ, ಅವರೇನು ಮಾಡಿಯಾರು?

ಪಾಕಿಸ್ತಾನದೊಡನೆ ಈಗ ಎರಡೂವರೆ ಲಕ್ಷದಷ್ಟು ಸೈನ್ಯವಿದೆ; ಮತ್ತು ಭಾರತದಲ್ಲಿ ನಾಲ್ಕು ಲಕ್ಷದಷ್ಟು ಸೈನ್ಯ ಬಲವಿದೆಯೆಂದು ತಜ್ಞರ ಲೆಕ್ಕ. ಅಮೇರಿಕೆಯ ಮುಕ್ಕಟೆ ಶಸ್ತ್ರಾಸ್ತ್ರದಿಂದ ಪಾಕಿಸ್ತಾನದ ಸೈನ್ಯ ಬಲವನ್ನು ಹತ್ತು ಲಕ್ಷಕ್ಕೆ ಏರಿಸಬೇಕೆಂಬುದೇ ಈಗ ನಡೆದ ಮಾತುಕತೆಗಳ ಉದ್ದೇಶ.

ಸೈನ್ಯ ಹೆಚ್ಚಿಸುವಲ್ಲಿ ಪಾಕಿಸ್ತಾನದ ಪ್ರಾಮಾಣಿಕತೆಯನ್ನು ನಂಬುವುದು ಕಷ್ಟವೆನಿಸಿದಂತೆ, ಭಾರತದ ದೂರ ದೃಷ್ಟಿಗೆ ಇನ್ನೊಂದು ಮಹಾ ಭಯವೂ ಗೋಚರಿಸುತ್ತಿದೆ. ಯುದ್ಧದ ಶೀತ ಗಾಳಿ ಹಿಮಾಲಯದ ಗೋಡೆಯನ್ನು ದಾಟಿ ಮೇಲಿಂದ ಬೀಸಿ ಬರುವುದೇ ಎಂದವರ ಅಂಜಿಕೆ.

ಕಾಶ್ಮೀರದ ಪ್ರಶ್ನೆ

ಸ್ವತಂತ್ರ ರಾಷ್ಟ್ರದ ಅಸ್ತಿತ್ವವನ್ನು ಮನ್ನಿಸುವ ಇಚ್ಛೆಯನ್ನು ಅಮೇರಿಕ ಹಾಗೂ ಪಾಕಿಸ್ತಾನಗಳೆರಡೂ ವ್ಯಕ್ತಪಡಿಸಿದ್ದರೂ - ಭಾರತ ಪಾಕಿಸ್ತಾನಗಳೊಳಗೆ ಇನ್ನೂ ವಿವಾದಾತ್ಮಕ ವಿಷಯವಾಗಿರುವ ಕಾಶ್ಮೀರದ ಪ್ರಶ್ನೆಯಲ್ಲಿ ಇದರ ಅನ್ವಯವೆಂತಾಗುವುದೋ ಗೊತ್ತಿಲ್ಲ. ಪಾಕಿಸ್ತಾನಿಗಳ ಪಾಲಿಗೆ ಕಾಶ್ಮೀರ ಮುಕ್ತಿಯ ಹೋರಾಟದ ರಂಗಭೂಮಿಯಾಗಿ ಈಗಲೂ ಪರಿಣಮಿಸಲು ಸಾಧ್ಯವುಂಟು. ಭಾರತದ ದಾಸ್ಯಕ್ಕೆ ಅನ್ಯಾಯವಾಗಿ ಕಾಶ್ಮೀರೀ ಪ್ರಜೆಗಳು ಬಿದ್ದರೆನ್ನುತ್ತಾ, ಪಾಕಿಸ್ತಾನ ಮರಳಿ ದಾಳಿ ಮಾಡಲು ಉಪಕ್ರಮಿಸುವುದು ಅಸಾಧ್ಯ ಕೋಟಿಯೊಳಗಿನ ಮಾತಲ್ಲ.

ಬ್ರಿಟಿಷರು ಜಿನ್ನರ ದ್ವಿರಾಷ್ಟ್ರ ತತ್ವವನ್ನು ಎತ್ತಿ ಹಿಡಿದರೂ ಅಮೇರಿಕನ್ನರು ಪಾಕಿಸ್ತಾನಕ್ಕೆ ಸಹಾನುಭೂತಿ ಪರವಾದ ಧೋರಣೆಯನ್ನೆ ಮೊದಲಿಂದಲೂ— ಅಂದರೆ ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಕಾಶ್ಮೀರದ ಪ್ರಶ್ನೆ ಬಂದ ಗಳಿಗೆಯಿಂದಲೂ - ಅನುಸರಿಸಿರುವುದೂ ದೊಡ್ಡದೊಂದು (ಕು) ತಂತ್ರ.

ಯಾರೋ ಒಬ್ಬರು ಹೇಳಿದಂತೆ "ಅಖಂಡ ಭಾರತದ ಬಹುಭಾಗ ಇಂದಿನ ಹಿಂದುಸ್ತಾನದಲ್ಲಿದೆ" ಆದರೆ ಅದರ ಜೀವನಾಡಿ ಪಾಕಿಸ್ತಾನ"ದಲ್ಲಿದೆ. ಈ ಜೀವನಾಡಿಗೋಸ್ಕರವೇ ಕಾಶ್ಮೀರ ಪ್ರಶ್ನೆಯಲ್ಲಿ ವಿದೇಶೀಗಳ ಕೈವಾಡಕ್ಕೆ ಆಸ್ಪದ ದೊರೆತಿದೆ. ಪಾಕಿಸ್ತಾನವೂ ಭಾರತವೂ ಕಾಶ್ಮೀರದ ಆ ಗುದ್ದಾಗಾದು ಪ್ರದೇಶಕ್ಕೋಸ್ಕರ ಹೊಯ್ದಾಡುವುದರಲ್ಲಿ ಘನವಾದ, ಸ್ವಾರ್ಥ ಪ್ರೇರಿತ ಉದ್ದೇಶವಿದೆ.

ಪಾಕಿಸ್ತಾನವನ್ನೊಮ್ಮೆ ಭೂತಾನದಲ್ಲಿ ನೋಡಿದರೆ ಭಾರತ ಸ್ವತಂತ್ರವಾಗಿದ್ದರೂ ಹೇಗೆ ಪಾಕಿಸ್ತಾನದ ಮೇಲೆ ಸಂರಕ್ಷಣಾ ದೃಷ್ಟಿಯಿಂದ ಅವಲಂಬಿತವಾಗಿರುವುದೆಂದು ಸ್ಪಷ್ಟವಾಗುತ್ತದೆ. ಅಖಂಡ ಭಾರತಕ್ಕೆ ಉತ್ತರದಲ್ಲಿ ಹಿಮಾಲಯದ ಪರ್ವತಶ್ರೇಣಿ, ಪಶ್ಚಿಮ ಹಾಗೂ ವಾಯುವ್ಯಗಳಲ್ಲಿ ಸುಲೇಮಾನ್, ಹಿಂದೂಕುಶ್ ಪರ್ವತಾವಳಿಗಳು ಸ್ವಾಭಾವಿಕವಾದ ಮೇರೆಯಾಗಿದ್ದವು. ಇವು ದುರ್ಗಮವಾಗಿದ್ದು ಕೆಲವೇ ಕಣಿವೆಗಳ ಮೂಲಕ ಮಾತ್ರ ಸೈನ್ಯಪ್ರವೇಶ ಸಾಧ್ಯವಿತ್ತು. ಈ ಕಣಿವೆಗಳ ರಕ್ಷಣೆ ಮಾಡಿದರೆ, ಭಾರತದ ಮೇಲೆ ಯಾವುದೇ ಧಾಳಿಯ ಭಯವಿರಲಿಲ್ಲ.

ಹೊರಗಿನ ದಾಳಿಯ ಭಯ

ಭಾರತದ ವಿಭಜನೆಯ ಬಳಿಕ ಈ ಭೂಖಂಡವನ್ನು ಯುದ್ಧದ ಧಾಳಿಯಿಂದ ರಕ್ಷಿಸುವ ದೊಡ್ಡ ಹೊಣಗಾರಿಕೆ ಪಾಕಿಸ್ತಾನಕ್ಕೆ ಸೇರಿರುತ್ತವೆ. ಹಿಂದುಸ್ತಾನವನ್ನು ಪಾಕಿಸ್ತಾನದಿಂದ ಬೇರ್ಪಡಿಸುವ ಯಾವುದೇ ಪ್ರಾಕೃತಿಕ ಮೇರೆ ಇರುವುದಿಲ್ಲವಾಗಿ, ಪಾಕಿಸ್ತಾನ ನಮ್ಮ ಮೇಲೆ ದಾಳಿ ನಡೆಸದಿದ್ದರೂ, ಪಾಕಿಸ್ತಾನದ ಮೇಲೆ ಆಗಬಹುದಾದ ದಾಳಿಯ ಪರಿಣಾಮಗಳಲ್ಲಿ ಪ್ರತಿಯೊಂದಕ್ಕೂ ಭಾರತ ಸಿದ್ಧವಾಗಿರುವುದವಶ್ಯ. ಪಾಕಿಸ್ತಾನದ ದೌರ್ಬಲ್ಯ ಯಾವ ರೀತಿಯದೇ ಇರಲಿ ಅದರ ಫಲವನ್ನು ಭಾರತವೂ ಸೇರಿ ಭೋಗಿಸಬೇಕಾಗುವುದು ದುರ್ದೈವ.

ಕಾಶ್ಮೀರಕ್ಕೆ ಸಾವಿರ ಮೈಲ ದೂರ ಭೂಮಿಯ ಬಳಿ ರಶಿಯಾದ ಮೇರೆ ಇರುತ್ತದೆ.. ಮತ್ತು ಇಲ್ಲಿರುವ ದಾರೋಗಿಲ್ ಕಣಿವೆ, ಟಿಬೇಟ ಈ ಸಂದಿನಲ್ಲಿರುವ ಕಿಲಿಕ್ ಕಣಿವೆ ಇವು ಅಷ್ಟು ದೊಡ್ಡವಲ್ಲದಿದ್ದರೂ ಚಳಿಗಾಲದಲ್ಲಿ ಕೂಡ ಚೆನ್ನಾಗಿ ಕೆಲಸ ಮಾಡಬಲ್ಲ ಪಟುಭಟರೆಂದೆನ್ನಿಸಿಕೊಂಡ ರಶಿಯಾದ ಸೈನಿಕರಿಗೆ ದುರ್ಗಮವಾದವುಗಳಲ್ಲ. ಖೈಬರ ಹಾಗೂ ಬೋಲಾನಗಳೆಂಬ ಸುಪ್ರಸಿದ್ಧ ಕಣಿವೆಗಳು ಕೈ ತಪ್ಪಿದ ಬಳಿಕ, ಮೇಲಿನೆರಡು ಸುಪ್ರಸಿದ್ಧ ಕಣಿವೆಗಳ ಮೇಲಾದರೂ ತನ್ನ ಸ್ವಾಮಿತ್ವ ಉಳಿಯಬೇಕೆಂಬುದು ಭಾರತದ ಕಾಶ್ಮೀರ ನೀತಿಯ ರಹಸ್ಯವಾದರೆ—ಸಲ್ಲದ ಬಲ್ಲದ ಹಗರಣ ಮಾಡಿಯಾದರೂ ಕೈತಪ್ಪಿದ ಈ ಕಣಿವೆಗಳನ್ನು ಗಿಟ್ಟಿಸಬೇಕೆಂಬುದು ಪಾಕಿಸ್ತಾನದ ಛಲ.

ಸೈನ್ಯ ಬಲವನ್ನು ಅನಾವಶ್ಯಕವಾಗಿ ಪಾಕಿಸ್ತಾನ ಹೆಚ್ಚಿಸಿಕೊಂಡರೆ, ಕಾಶ್ಮೀರದ ಮೇಲೆ ದಾಳಿ ಮಾಡಲು ಅದಕ್ಕೆ ಹುಮ್ಮಸ್ಸು ಉಂಟಾದೀತು. ಮತ್ತು ಆಗಲಿದನ್ನು ತಡೆಯಲು ಅಮೇರಿಕ ಪ್ರಯತ್ನಿಸಿದರೂ ಸಾಧ್ಯವಾಗಲಿಕ್ಕಿಲ್ಲ. ಸಿಂಗ್ಮನ್ರಿಹೀಯವರು ಕೊರಿಯದಲ್ಲಿ ತೋರಿಸಿದ ಚಪಲವೇ ಇದಕ್ಕೆ ಜೀವಂತ ಉದಾಹರಣೆ.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: K. K. R. SHET.

ಶಾಂತ ವಾತಾವರಣದಲ್ಲಿ ಆತ್ಯಾಧುನಿಕ ಮಾದರಿಯ ಮೇಲ್ತರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಪಳನೀರು ರಸ್ತೆ, ಮಂಗಳೂರು

ಗಾಳಿ-ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!

ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!

ಶಾಕಾಹಾರಿಗಳಿಗೆ ಸುಚಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ಉಡುಪಿ ಡಿ. ಮು. ಕೋರ್ಟು

O. S. No. 533/1953.

ನೋಸು ಸೆಟ್ಟಿ ವಾದಿ.

ಮತ್ತು

1. ಪದ್ಮನಾಭ ಆಚಾರ 2. ಗುರುರಾಜ ಆಚಾರ 3. ಶ್ರೀನಿವಾಸ ಆಚಾರ 4. ವ್ಯಾಸರಾಯ ಆಚಾರ್ 5. ಲಕ್ಷ್ಮೀನಾರಾಯಣ ಆಚಾರ ರಾಘವೇಂದ್ರ ಆಚಾರರ ಮಕ್ಕಳು. ಉಡುಪಿ ತಾಲೂಕು No 76ನೇ ಬಡಗುಬೆಟ್ಟು ಗ್ರಾಮದ ಬೈಲೂರು —ಪ್ರತಿವಾದಿರು

ಇವರೊಳಗೆ

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ.—

ಪ್ರತಿವಾದಿರ ಆಸ್ತಿ ಜವಾಬ್ದಾರಿಯಿಂದ ಬರತಕ್ಕ ಠಳದ ಖರ್ಚು ಸಮೇತ, ಸದ್ರಿ ದಗಳ ಕೊಡುವಿಕೆ ಅಸಲು ಬಡ್ಡಿಗೆ ವಾದಿಯು ದಾಕ್ಲು ಮಾಡಿದ—ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿರ ನೋಟೀಸು ಬಗ್ಗೆ ತಾ 22-12-1953 ಕ್ಕೆ ಇಟ್ಟಿದೆ.—ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಇದ್ರೆ ಆ ದಿವಸ 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ-ಜಾಹೀರು ಮಾಡಿಕೊಳ್ಳತಕ್ಕದ್ದು—ಎಂಬ ಸಂಗ್ತಿ ತಿಳಿಸೋಣಾಗಿಯದೆ.

N. V. Kamath

Advocate for Plaintiff.

ಉಡುಪಿ 4-12-53

ಮೈತ್ರಿಭಾವದ ಹಿನ್ನೆಲೆಯಲ್ಲಿರುವ ತಂತ್ರ

ರಶಿಯಾದ ಗಮನ ತಿರುಗಿಸುವ ಉಪಾಯ

ಮಹತ್ವದ ಪ್ರತಿಕ್ರಿಯೆ

ಕಾಶ್ಮೀರ ಪ್ರಶ್ನೆಯಲ್ಲಿ ಭಾರತಕ್ಕೆ ಸೋಲುಂಟಾದೀತು. ಅಥವಾ ಭಾರತದ ಸೀಮೆಯ ಮೇಲೆಯೇ ಪಾಕಿಸ್ತಾನದ ದಾಳಿಯಾದೀತು ಎನ್ನುವುದಕ್ಕಿಂತಲೂ ಮಹತ್ವದ ಪ್ರತಿಕ್ರಿಯೆ ಅನಿರೀಕ್ಷಿತವಾಗಿ ಅಲ್ಲಿದ್ದವರೂ ವಿಸ್ಮಯ ಹುಟ್ಟಿಸುವಂತೆ ಈಗ ಬಂದಿರುತ್ತದೆ. ಸೈನಿಕ ಒಪ್ಪಂದದ ಮಾತುಕತೆಗಳು ಅಮೇರಿಕಾ ಮತ್ತು ಪಾಕಿಸ್ತಾನದೊಡನೆ ನಡೆಯುತ್ತಿವೆ ಎಂಬ ವಾರ್ತೆ ಬಂದ ಪ್ರಥಮದಲ್ಲಿಯೇ ಪ್ರಧಾನಿ ನೆಹರೂರವರು ಪತ್ರಿಕಾ ಗೋಷ್ಠಿಯನ್ನು ಕರೆದು ಭಾರತದ ನಿಲುಮೆಯನ್ನು ನಿಃಸಂದಿಗ್ಧ ಮಾತುಗಳಲ್ಲಿ ವಿವರಿಸಿ ಹೇಳಿದರು. "ಇದರ ಪರಿಣಾಮ ದೀರ್ಘಕ್ಕೆ ಹೋದೀತು" ಎಂಬುದೊಂದೇ ಮಾತು ಸಾಕಷ್ಟು ಬಲವಾದ ಎಚ್ಚರಿಕೆಯಾಗಿದ್ದಿತು.

ಇದು ನಿಜವೆಂಬುದನ್ನು ಅಫಗಾನಿಸ್ತಾನ ಮತ್ತು ಸೋವಿಯೆಟ ರಶಿಯಾಗಳು ಪ್ರತ್ಯ ಪ್ರತ್ಯೇಕವಾಗಿ ಪಾಕಿಸ್ತಾನಕ್ಕೆ ಕಳಿಸಿದ ಪ್ರತಿಭಟನೆಯ ಮೇಲಿಂದ ಚೆನ್ನಾಗಿ ತಿಳಿಯಬಲ್ಲೆವು.

ಪಾಕಿಸ್ತಾನಕ್ಕೂ ಅಫಘಾನಿಸ್ತಾನಕ್ಕೂ ಇದ್ದ ಸಂಬಂಧ ಈಗ ಸೂರಾ ಕೆಟ್ಟಿದೆ. ಪಠಾಣಿಸ್ತಾನದ ಚಳವಳಿಯನ್ನು ನಡೆಸುತ್ತಿರುವ ವಾಯವ್ಯ ಸರಹದ್ದಿನ ಕೆಂಪಂಗಿಯ ಜನಗಳನ್ನು ಅಫಘಾನಿಸ್ತಾನ ಸರಕಾರ ಪ್ರೋತ್ಸಾಹಿಸುತ್ತಿದೆಯೆಂದು ಪಾಕಿಸ್ತಾನದ ಆರೋಪ. ಪಾಕಿಸ್ತಾನದ ಸೈನ್ಯದಲ್ಲಿ ಹೆಚ್ಚಿನಂಶ ವಾಯವ್ಯ ಸರಹದ್ದಿನ ಶಾಂತಿ ಹಾಗೂ ಭದ್ರತೆಗೋಸ್ಕರ ನಿಯುಕ್ತವಾಗಿದ್ದು ಅಫಘಾನಿಸ್ತಾನದ ಪ್ರೇರಣೆಯಿಂದಲೇ ಪಠಾಣಿಸ್ತಾನದ ಪುರಸ್ಕರ್ತರೂ ಚಳವಳಗಾರರೂ ಸೊಕ್ಕಿರುವರೆಂದು ಪಾಕಿಸ್ತಾನದ ತೀರ್ಮಾನವಾಗಿರುತ್ತದೆ.

ಅಫಘಾನಿಸ್ತಾನ ರಶಿಯಾದೊಡನೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದೆ; ಮತ್ತು ಪ್ರಾಯಃ ರಶಿಯಾದಿಂದಲೇ ಪಠಾಣೀ ಚಳುವಳಿಗಾರರಿಗೆ ಶಸ್ತ್ರಾಸ್ತ್ರಗಳ ಪೂರೈಕೆಯಾಗುತ್ತಿದ್ದಿರಬೇಕೆಂದು ಪಾಕಿಸ್ತಾನ—ಅದಕ್ಕೂ ಹೆಚ್ಚಾಗಿ ಅಮೇರಿಕಾ ದ ಊಹಿಸಿದೆ.

ಆದುದರಿಂದ ಪಾಕಿಸ್ತಾನದ ಮಿಲಿಟರಿ ಬಲವನ್ನು ಹೆಚ್ಚಿಸುವುದು ಅತ್ಯಂತ ಅಗತ್ಯದ ಮತ್ತು ಮಹತ್ವದ ಸಂಗತಿಯೆಂದು ಹೇಳುತ್ತಾ ಅಮೇರಿಕಾ ಪಾಕಿಸ್ತಾನದ ಬೆನ್ನು ಚಪ್ಪರಿಸಿ, ಸೋವಿಯೆಟ ರಶಿಯಾದ ಮೇಲೆ ಮಿಲಿಟರಿ ದಿಗ್ಬಂಧನವನ್ನು ಹೇರಲು ಹವಣಿಸಿದೆ. ಇದೇ ಮಧ್ಯಪೂರ್ವ ಸಂರಕ್ಷಣಾ ಯೋಜನೆ—ಮತ್ತು ಇದೇ ಪಾಕಿಸ್ತಾನದೊಡನೆ ಸೈನಿಕ ಒಪ್ಪಂದದ ತಿರುಳು

ರಶಿಯಾದ ಟೀಕೆ

"ಕಳೆದ ಕೆಲವು ವಾರಗಳಿಂದ ಪಾಕಿಸ್ತಾನದಲ್ಲಿ ನಡೆಯುವ ಘಟನೆಗಳು ವಾಶಿಂಗಟನ್ನಿನ ಹದ್ದುಗಣ್ಣು ಆ ದೇಶದ ಮೇಲೆ ಬಿದ್ದಿರುವುದನ್ನೂ ಸೋವಿಯೆಟ ರಶಿಯಾದ ಸುತ್ತಲೂ ಆಕ್ರಮಕವಾದ ಸೈನಿಕ ದಿಗ್ಬಂಧನವನ್ನು ಹೇರುವ ಅಮೇರಿಕೆಯ ಪ್ರಯತ್ನದಲ್ಲಿ ಪಾಕಿಸ್ತಾನವೂ ಒಂದು ಗೊಣಸಾಗಿ ಪರಿಣಮಿಸುವುದನ್ನೂ ಸ್ಪಷ್ಟವಾಗಿ ನಿರ್ದೇಶಿಸುತ್ತವೆ. ಅಮೇರಿಕದ ಪತ್ರಿಕೆಗಳೂ ರಾಜಕಾರಣಿಗಳೂ ಪಾಕಿಸ್ತಾನವು ಯುದ್ಧ ದೃಷ್ಟಿಯಲ್ಲಿ ಎಷ್ಟು ಮಹತ್ವದ ಆಯಕಟ್ಟಿನ ಸ್ಥಾನವನ್ನು ಪಡೆದಿರುತ್ತದೆಂದೂ ಸೋವಿಯೆಟ ಜನತೆಯ ಕೇಂದ್ರಗಳ ಮೇಲೆ ಧಾಳಿ ಮಾಡಲು ಅದು ಎಷ್ಟು ಹತ್ತಿರದ ಠಾಣ್ಯವಾಗುವುದೆಂದೂ ಪ್ರಸ್ತಾಪಿಸುವುದರಲ್ಲಿ ತಲ್ಲೀನಗೊಂಡುದು ವ್ಯಕ್ತವಾಗುತ್ತದೆ.

ಉದಾಹರಣೆಗೆ—ಅಮೇರಿಕದ ನ್ಯೂಸ್ ವೀಕ್ ಎಂಬ ಪತ್ರಿಕೆ ಖೈಬರ್ ಕಣಿವೆಯು ಈಚೆ ಬದಿಯಲ್ಲಿ ರಶಿಯಾದ ಶಕ್ತಿಗೆ ಎದುರಾಗಿ ಪಾಕಿಸ್ತಾನವಿರುತ್ತದೆಂದು ಉಲ್ಲೇಖಿಸಿ ಕರಾಚಿಯಲ್ಲಿ ನಾಗರಿಕ ಹಾಗೂ ಮಿಲಿಟರಿ ವಿಮಾನಗಳು ಇಳಿಯಲು ಅನುಕೂಲವಾದ ಎರಡು ನಿಲ್ದಾಣಗಳಿವೆಯೆಂದೂ ಪಾಕಿಸ್ತಾನವನ್ನು ಬೇಗನೇ ಅತ್ಯುತ್ತಮ ಸೈನ್ಯ ಠಾಣ್ಯವಾಗಿ ಮಾಡಬಹುದೆಂದೂ ಹೇಳಿರುತ್ತದೆ. ಪಾಕಿಸ್ತಾನದೊಡನೆ ಸೈನಿಕ ಒಪ್ಪಂದ ಮಾಡುವ ಅಮೇರಿಕಾದ ಸನ್ನಾಹದಲ್ಲಿ ಆಕ್ರಮಣ ಪ್ರವೃತ್ತಿ ಇರುವುದನ್ನು ಇದು ಎತ್ತಿ ತೋರಿಸುತ್ತದೆ. ಈಗಾಗಲೇ ಪಾಕಿಸ್ತಾನದ ವಿದೇಶ ಮಂತ್ರಿ, ಅಲ್ಲಿಯ ಮಹಾ ಸೇನಾಧಿಪತಿ, ಹಾಗೂ ಗವರ್ನರ ಜನರಲ್ಲರು ವಾಶಿಂಗಟನ್ನವನ್ನು ಸಂದರ್ಶಿಸಿರುವರು" -

ಹೀಗೆ ಮೊಸ್ಕೊ ರೇಡಿಯೋ ಪಾಕಿಸ್ತಾನವು ಅಮೇರಿಕೆಯೊಡನೆ ಸೈನಿಕ ಒಪ್ಪಂದ ಮಾಡಿಕೊಳ್ಳುವುದೆಂಬ ಸಂಗತಿಯ ಕುರಿತು ವಂದಿ ಮಾಡಿರುತ್ತದೆ. ಇಷ್ಟು ಮಾತ್ರವಲ್ಲ "ಪ್ರವ್ಡಾ ಎಂಬ ರಶಿಯಾದ ಕಮ್ಯೂನಿಸ್ಟ ಪಕ್ಷದ ಮುಖಪತ್ರಿಕೆ ಈ ಒಪ್ಪಂದದ ಸಂಗತಿಯನ್ನು ಅತ್ಯುಗ್ರ ಮಾತುಗಳಲ್ಲಿ ಟೀಕಿಸಿರುತ್ತವೆ. ಕೆಲವು ವೃತ್ತಾಗಳಿಗೆ ಅನುಸಾರವಾಗಿ, ಸುಪ್ರಸಿದ್ಧ ಖೈಬರ್ ಕಣಿವೆಯ ಒಂದು ಬಾಯಿಯ ಮೇಲೆ ರಶಿಯಾ ಸ್ಥಾಪಿಸಿದ ಪ್ರಭುತ್ವಕ್ಕೆ ವಿರುದ್ಧವಾಗಿ, ಪಾಕಿಸ್ತಾನವನ್ನು ಎತ್ತಿ ಕಟ್ಟಿ ಇನ್ನೊಂದು ಬಾಯಿಯಲ್ಲಿ ಕಾವಲು ಕುಳ್ಳಿರಿಸಿಕೊಳ್ಳುವುದು ಅಮೇರಿಕದ ಹೊಂಚು

ಇಬ್ಬರ ನ್ಯಾಯದಲ್ಲಿ

ಸೋವಿಯೆಟ ರಶಿಯಾ ಪಾಕಿಸ್ತಾನದಿಂದ ಈ ಎಲ್ಲ ವಿಷಯಗಳ ಕುರಿತು ಸಮರ್ಪಕ ವಿವರಣೆ ಅಪೇಕ್ಷಿಸಿರುವುದನ್ನು ಕಂಡರೆ, ಇದರ ಪರಿಣಾಮ ನೆಟ್ಟಗಾಗದೆಂದು ಹೊಳೆಯುತ್ತದೆ. ಪಾಕಿಸ್ತಾನ ನೀಡ ಬಹುದಾದ ವಿವರಣೆಯಿಂದ ತೃಪ್ತಿ ಹೊಂದದೆ, ರಶಿಯಾ ಪ್ರತಿಭಟನಾರ್ಥ ದಾಳಿ ಕೈಗೊಂಡರೆ, ಆಗ ಪಾಕಿಸ್ತಾನವನ್ನು ರಕ್ಷಿಸುವವರು ಯಾರು? ಮತ್ತು ಪಾಕಿಸ್ತಾನದಿಂದ ಓಡಿ ಬರುವ ನಿರಾಶ್ರಿತರನ್ನು 'ಭಾರತ ಏನು ಮಾಡಬೇಕು? ಈ ದಾಳಿಯ ಝಳದಿಂದ ಬೇಯುವುದಂತೂ ಸರಿಯೆ, ನಿಜವಾಗಿ ಯುದ್ಧದ ಉರಿ ನಾಲಿಗೆ ಭಾರತವನ್ನು ನೆಕ್ಕಿ ಮುಕ್ಕುವುದಿಲ್ಲೆಂಬ ಭರವಸೆ ಎಲ್ಲಿದೆ?

ಅಮೇರಿಕಾವು ರಶಿಯಾದ ಆಕ್ರಮಣವನ್ನು ತಡೆಯುತ್ತದೆಯೆ? ನಿಶ್ಚಯವಾಗಿಯೂ ಇಲ್ಲ-ಪಶ್ಚಿಮ ಯುರೋಪಿನ ಕಡೆಗೆ ಟಿಕಮಕನೆ ಕಣ್ಣು ಹಾಯಿಸುತ್ತಾ ಕುಳಿತಿರುವ ರಶಿಯಾದ ಹುಲಿ ಮಾಮನ ಬಾಯಿಗೆ ಪಾಕಿಸ್ತಾನದ ಪಶುವನ್ನು ಆಹುತಿ ಕೊಟ್ಟು, ತಾವು ನಿಶ್ಚಿಂತೆಯಿಂದಿರುವ ಬುದ್ಧಿ ಅಮೇರಿಕನ್ನರದು! ಈ ಗೊಂದಲದಲ್ಲಿ ಭಾರತದ ಗೋವು ಎಷ್ಟು ಗೋಳಾಡಿದರೂ ಅಮೇರಿಕೆಕ್ಕೆ ಚಿಂತೆ ಇಲ್ಲ— "ಭಾರತ ಪ್ರತಿಭಟಿಸುತ್ತಿದೆ, ಆದುದರಿಂದ ತನಗೇನೊ ಇದರಲ್ಲಿ ಲಾಭವಿದೆ" ಎಂಬ ಪಾಕಿಸ್ತಾನದ ಸಹಜ ಭ್ರಮೆ ಪರಿಣಾಮದಲ್ಲಿ ವಿವೇಕವನ್ನೆ ನಷ್ಟ ಮಾಡಿರುತ್ತದೆ. ಏಶಿಯನ್ನರ ಮೇಲೆ ಏಶಿಯನ್ನರನ್ನೆ ಎತ್ತಿ ಕಟ್ಟುವುದು ತಮ್ಮ ನೀತಿಯೆಂದು ಐಸೆನಹೋವರರು ಅಧ್ಯಕ್ಷ ಚುನಾವಣೆಗಳಿವಾಗ ಹೇಳಿದ್ದ ಮಾತನ್ನು ಇಲ್ಲಿ ನೆನಸಬೇಕು--ತಮ್ಮ ಸ್ವಾರ್ಥಕ್ಕೋಸ್ಕರ ರಶಿಯಾದ ಗಮನವನ್ನು ಹಿಮಾಲಯದ ಈಚೆಗಿನ ಭಾರತದ ಭೂಖಂಡಕ್ಕೆ ತಿರುಗಿಸುವುದೇ ಅಮೇರಿಕನ್ನರ ಔದಾರ್ಯದ ಹಿನ್ನೆಲೆಯೆಂದೂ ಪ್ರಾಣಘಾತಕವಾದ ಈ ಉರುಳನ್ನು ಪುಷ್ಪಮಾಲೆಯೆಂದು ತಪ್ಪು ತಿಳಿದು ಪಾಕಿಸ್ತಾನ ಸಂತೋಷದಿಂದ ಅದಕ್ಕೆ ಕುತ್ತಿಗೆ ನೀಡುತ್ತಿದೆಯೆಂದೂ ಹಾಗೆ ಮಾಡುವಾಗ ಮಾತ್ರ ಭಾರತದ ಕೊರಳು ಕೊಯ್ಯುತ್ತದೆಯೆಂದೂ ಸಂಕ್ಷೇಪದಲ್ಲಿ ತೀರ್ಮಾನಿಸಬಹುದು.

ಈ ಗಂಡಾಂತರವನ್ನು ಮುಂದಾಗಿ ಗ್ರಹಿಸಿ ಕೊಂಡ ನೆಹರೂ ಸರಕಾರ ತನ್ನ ರಾಷ್ಟ್ರದ ಸ್ವಾತಂತ್ರ್ಯ ಕಾಯ್ದುಕೊಳ್ಳುವುದಕ್ಕೂ ಸಂಭಾವ್ಯ ದಾಳಿಯಿಂದ ಸಂರಕ್ಷಣೆ ಪಡೆಯುವುದಕ್ಕೂ ಉದ್ದೇಶಿಸಿ ಮಿಲಿಟರಿ ಬಲವನ್ನು ಅನಿವಾರ್ಯವಾಗಿ ಹೆಚ್ಚಿಸಿ ಕೊಳ್ಳುವ ಪ್ರಮೇಯ ಉಂಟಾಗುವುದು ನಿಶ್ಚಯ. ಆಗ ಪುಕ್ಕಟೆಯಾಗಿ ಯಥೇಷ್ಟ ಶಸ್ತ್ರಗಳನ್ನು ನಿಮಗೂ ಪೂರೈಸುವೆನೆಂದು ಏಕರು ನೆಹರೂರ ಕಿವಿ ಊದಿಯಾರು, ಮತ್ತು ಈ ರೀತಿ ಇದು ವರೆಗೆ ಮಣಿಯದ ಏಶಿಯದ ಈ ಮಹಾ ಜೀವವನ್ನು ತಮ್ಮ ಬುಟ್ಟಿಗೆ ಹಾಕಿ ಕೊಳ್ಳಲು ನೋಡಿಯಾರು! ಭಾರತಕ್ಕೆ ಇದೊಂದು ದೊಡ್ಡ ಅಗ್ನಿ ಪರೀಕ್ಷೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 514/1953

ವಾದಿರು. ಉಡುಪಿ ಶ್ರೀಕೃಷ್ಣಾಪುರ ಮಠದ ಶ್ರೀಮದ್ವಿದ್ಯಾರತ್ನತೀರ್ಥ ಶ್ರೀಪಾದಂಗಳವರು.

ಪ್ರತಿವಾದಿ. ನಾರಾಯಣ ಶೇರಿಗಾರ.

ಕುಂದಾಪುರ ತಾಲ್ಲೂಕು ಹಂಗ್ಳೂರು ಗ್ರಾಮದಲ್ಲಿರುವ ಗೋಪನಾಡು ನರಸಿಂಹ ಶೇರಿಗಾರರ ಮಗ ನಾರಾಯಣ ಶೇರಿಗಾರನಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿರಿಗೆ ತಾ. 27-5-53 ರಲ್ಲಿ ಬರಕೊಟ್ಟ ಚಾಲನೇಣಿ ಸೋಡಚೀಟಿನಲ್ಲಿ ಕಾಣ್ಸಿದ ಗೇಣಿ ಬಾಕಿಯನ್ನು ಬರಮಾಡಿಕೊಳ್ಳುವರೆ ವಾದಿರು ಪ್ರತಿವಾದಿಯ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 15-12-53ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಮುಂದೆ ಹಗಲು 11 ಗಂಟೆಗೆ ಹಾಜರಾಗಿ ಪ್ಯಾರೀದು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwaraiah
Advocate for Plff.

Date 5-12-53 Coondapoor

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡನ್)

Kali Kamali Ayurved Pharmacy, RISHIKESH (Dehradun.)

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ಸಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಭಾರತದ ಗುರುಕುಲ

(ಯಕ್ಷಗಾನ)

ಬೆಲೆ: ॥ ೫ ॥

ಮದರಾಸು ಸರಕಾರದಿಂದ ಸಂಭಾವನೆ ಪಡೆದ ಗ್ರಂಥ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಜಾಜಿಯೇ ಧುರೀಣನಾಗಿರುವುದು ವಿಹಿತ

ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಖಚಿತ ಅಭಿಪ್ರಾಯ

ಎಲ್ಲರಿಗೂ ತಿಳಿದಿರುವಂತೆ ಮುಂದಿನ ಸೋಮವಾರ (ದಿನಾಂಕ ೧೪) ಮದ್ರಾಸು ಶಾಸನ ಸಭೆಯು ಅಧಿವೇಶನದಲ್ಲಿ ಸೇರುವುದಷ್ಟೆ! ಆಗ ರಾಜಾಜಿಯ ಮೇಲೆ ಅವಿಶ್ವಾಸದ ಗೊತ್ತುವಳಿಯನ್ನು ತರಲು ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಒಂದು ಗುಂಪು ಪ್ರಯತ್ನ ನಡೆಸುತ್ತಿದೆ. ಈ ಪ್ರಯತ್ನದ ಫಲವಾಗಿ ರಾಜಾಜಿಯ ನಾಯಕ ಪೀಠ ಉರುಳಿ ಹೋಗುವುದು ಈ ರಾಜ್ಯದ ಕ್ಷೇಮ ಚಿಂತನೆಯಿಂದ ಇಷ್ಟವಲ್ಲ ಮತ್ತು ಚಂದವೂ ಅಲ್ಲವೆಂಬ ಸಾಮಾನ್ಯಾಭಿಪ್ರಾಯಕ್ಕೆ ಜನತೆಯ ಬೆಂಬಲ ಅನೇಕ ಕಡೆಗಳಿಂದ ಕೇಳಿ ಬರುತ್ತಿದೆ. ತಮಿಳು ನಾಡಿನ ಹಲವಾರು ಕೇಂದ್ರಗಳಲ್ಲಿ ಸಾರ್ವಜನಿಕ ಸಭೆಗಳೂ ಸಂಸ್ಥೆಗಳೂ ರಾಜಾಜಿಯೇ ಮುಂದೆಯೂ ಧುರೀಣನಾಗಿರಬೇಕೆಂಬ ಅಭಿಪ್ರಾಯ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಿ, ರಾಜಾಜಿಯ ವಿರುದ್ಧ ನಡೆಯುವ ಚಟುವಟಿಕೆಗಳನ್ನು ಖಂಡಿಸಿವೆ.

ಮುಸ್ಲಿಮರ ಬೆಂಬಲ

ಮದ್ರಾಸು ನಗರದ ಮುಸ್ಲಿಮರು ಸಹ ದಿನಾಂಕ ೪ರಂದು ಸಭೆ ಸೇರಿ—ರಾಜಾಜಿಯವರು ಉತ್ತಮ ಮುತ್ಸದ್ದಿಗಳೂ ನುರಿತ ಆಡಳಿತಗಾರರೂ ಆಗಿರುವುದರಿಂದ ಅವರ ಧುರೀಣತ್ವದಲ್ಲಿ ಮದ್ರಾಸು ರಾಜ್ಯಕ್ಕೆ ಸುಖ ದೊರೆತಿದೆಯೆಂದೂ ರಾಜಾಜಿ ಸಲ್ಲಿಸಿದ ಸೇವೆ ಸಂಸ್ಮರಣೀಯವಾದುದೆಂದೂ ಹೇಳಿ ಅವರನ್ನು ಮುಖ್ಯ ಮಂತ್ರಿಪದದಿಂದ ಉರುಳಿಸುವ ಚಳವಳವನ್ನು ಕೂಡಲೇ ನಿಲ್ಲಿಸಬೇಕೆಂದು ಆಗ್ರಹ ಪಟ್ಟಿದೆ.

ಕಾಂಗ್ರೆಸ್ ಸದಸ್ಯರಿಗೆ ಬಿನ್ನಹ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇದೇ ೫ ಮತ್ತು ೬ನೇ ದಿನಾಂಕಗಳಲ್ಲಿ ಹೊಸ ದೆಹಲಿಯಲ್ಲಿ ಸಭೆ ಸೇರಿದಾಗ, ಇತರ ವಿಷಯಗಳೊಂದಿಗೆ ಮದ್ರಾಸದಲ್ಲಿ ಕಾಂಗ್ರೆಸ್ಸಿಗರು ಇತ್ತಂಡವಾಗಿರುವುದನ್ನೂ ಒಂದು ವರ್ಗ ರಾಜಾಜಿ ಬೇಡವೆಂದು ಹೇಳುತ್ತಿರುವುದನ್ನೂ ವಿಚಾರಿಸಿ, ಗಂಭೀರವಾದ ಮತ್ತು ಸಕಾಲಿಕವಾದ ಎಚ್ಚರಿಕೆಯನ್ನು ವಿನಂತಿಯ ಮೂಲಕ ಕೊಟ್ಟಿರುತ್ತದೆ. ಕಾಂಗ್ರೆಸದ ಅಧ್ಯಕ್ಷರಾದ ಶ್ರೀ ನೆಹರೂರವರು ಒಂದು ಹೇಳಿಕೆಯಲ್ಲಿ ಸುಮಾರು ಎರಡು ವರ್ಷಗಳಿಂದ ಮದ್ರಾಸದಲ್ಲಿ ಕಾಂಗ್ರೆಸ ಪಕ್ಷದ ನಾಯಕತ್ವ ವಹಿಸಿರುವ ರಾಜಾಜಿಯವರೇ ಮುಂದೆಯೂ ಮುಖ್ಯಮಂತ್ರಿಯಾಗಿರುವುದು ಆ ರಾಜ್ಯದ ಹಿತದೃಷ್ಟಿಯಿಂದ ಅಪೇಕ್ಷಣೀಯವೂ ಅಗತ್ಯವೂ ಆಗಿರುತ್ತದೆಂದು ಹೇಳಿ, ರಾಜಾಜಿಗೆ ಬೆಂಬಲ ಕೋರಿದ್ದಾರೆ.

ಅಯೋಗ್ಯ ಚಳವಳ

ಇನು ಕಾಂಗ್ರೆಸ ಪಾರ್ಲಿಮೆಂಟರಿ ಬೋರ್ಡಿನ ಅಭಿಪ್ರಾಯವೆಂದೂ ಕಾಂಗ್ರೆಸ್ ಪಕ್ಷವು ಶಿಸ್ತನ್ನು ಕಾಪಾಡಿಕೊಳ್ಳಬೇಕಲ್ಲದೆ ಪ್ರತ್ಯೇಕತಾ ಭಾವನೆಯನ್ನು ಪ್ರೋತ್ಸಾಹಿಸಕೂಡದೆಂದೂ ನೆಹರೂ ಹೇಳಿರುವರು. ಕಾಂಗ್ರೆಸ ಸಂಸ್ಥೆಯು ಒಂದು—ಅದರಲ್ಲಿ ಭಿನ್ನತೆಗೆ ಅವಕಾಶವಿರಕೂಡದು. ಶ್ರೀ ವರದ ರಾಜುಲು ನಾಯ್ಡುರವರು ಉಪಕ್ರಮಿಸಿದ ರಾಜಾಜಿ ವಿರೋಧ ಚಳವಳ ಶೀರಾ ಅಯೋಗ್ಯವಾದ ಹೆಜ್ಜೆ ಎಂದು ನೆಹರೂ ನುಡಿದರು.

ಅವಿಶ್ವಾಸದ ಪ್ರಶ್ನೆ ಇಲ್ಲ

ಭಿನ್ನಾಭಿಪ್ರಾಯಗಳು ಉಂಟಾದರೆ ಅದಕ್ಕೆ ನಿಯಮಾವಳಿಗೆ ಅನುಸಾರವಾಗಿಯೇ ಪರಿಹಾರ ಮಾರ್ಗ ಹುಡುಕಲು ನೋಡಬೇಕು. ವರದರಾಜುಲು ನಾಯ್ಡುರವರು ತಮಿಳುನಾಡು ಕಾಂಗ್ರೆಸದ ಅಧ್ಯಕ್ಷರ ಮೂಲಕ ರಾಜಾಜಿಯ ವಿರುದ್ಧ ಅವಿಶ್ವಾಸದ ಗೊತ್ತುವಳಿ ಮಂಡಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು ಬಯಸಿ ಪತ್ರ ಕಳಿಸಿರುವರೆಂದು ಪತ್ರಿಕೆಗಳಲ್ಲಿ ಓದಿ ನೋಡಿದ್ದರೂ—ಅಂಥ ಯಾವುದೇ ಕಾಗದ ಕೈ ಸೇರಿದಂತಿಲ್ಲ. ರಾಜಾಜಿಯ ವಿರುದ್ಧ ಅವಿಶ್ವಾಸ ಪ್ರದರ್ಶಿಸುವ ಪ್ರಶ್ನೆಯೇ ಇರುವುದಿಲ್ಲ. ಅವರು ಮದ್ರಾಸದಲ್ಲಿ ಕಾಂಗ್ರೆಸದಧುರೀಣತ್ವ ವಹಿಸಿ ಮುಂದಕ್ಕೂ ಮುಖ್ಯ ಮಂತ್ರಿಯಾಗಿ ಉಳಿಯುವುದು ಪಕ್ಷಕ್ಕೂ ಶಾಸನ ಸಭೆಗೂ ರಾಜ್ಯಕ್ಕೂ ರಾಷ್ಟ್ರಕ್ಕೂ ಹಿತಕರವಾದದ್ದು - ಎಂದು ನೆಹರೂ ಸ್ಪಷ್ಟ ಮಾತುಗಳಲ್ಲಿ ಒತ್ತಿ ಹೇಳಿರುವರು.

ರಾಜಾಜಿಯ ಮಾದರಿ

ದಿಲ್ಲಿ ವಿಶ್ವವಿದ್ಯಾಲಯದ ೩೧ನೇ ಪದವೀದಾನ ಸಮಾರಂಭದಲ್ಲಿ ಹಾಜರಿದ್ದು "ಡಾಕ್ಟರ್ ಆಫ ಸಿವಿಲ ಲಾಸ್" ಉಪಾಧಿಯನ್ನು ಸ್ವೀಕರಿಸುವುದಕ್ಕೋಸ್ಕರ ರಾಜಾಜಿ ಹೊಸ ದೆಹಲಿಗೆ ಪ್ರಯಾಣ ಬೆಳೆಸಿದ್ದರು. ಈ ಸಂದರ್ಭದಲ್ಲಿ ಅವರಿಗೆ ಸಮರ್ಪಿಸಲಾದ ಪ್ರಶಂಸಾತ್ಮಕ ಒಕ್ಕಣಿಕೆಯಲ್ಲಿ "ರಾಜಾಜಿಯವರಲ್ಲಿ ಮುತ್ಸದ್ದಿತನ ಆಡಳಿತ ಕೌಶಲ್ಯ ಹಾಗೂ ಸೇವಾ ಬುದ್ಧಿಗಳ ತ್ರಿವೇಣೀ ಸಂಗಮವಿದೆ" ಎಂದು ಹೇಳಲ್ಪಟ್ಟಿದೆ. ಪದವೀ ದಾನ ಮಾಡಿದ ಕುಲ ಗುರು ಡಾ| ರಾಧಾಕೃಷ್ಣನ್ನರು "ರಾಜಾಜಿ ಪ್ರತಿಭಾಸಂತ ಆಡಳಿತಗಾರರೂ ಕುಶಲ ರಾಜಕಾರಣಗಳೂ ಸಮತೋಲ ಬುದ್ಧಿಯುಳ್ಳವರೂ ಕುಶಾಗ್ರ ಮತಿಗಳೂ ಧೈರ್ಯಸಾಹಸವುಳ್ಳವರೂ ಆಗಿದ್ದು, ಇಂದಿನ ವಿವಂಚಿತ ಜಗತ್ತಿನಲ್ಲಿ ಈ ಅದ್ವಿತೀಯ ಗುಣಗಣಗಳನ್ನು ಪಡೆದ ರಾಜಾಜಿ ನವತರುಣರಿಗೊಂದು ಮಾದರಿ" ಎಂದರು.

ಯುವಕರಿಗೆ ಕರೆ

ರಾಧಾಕೃಷ್ಣನ್ನರು ನವತರುಣರನ್ನು ಉದ್ದೇಶಿಸಿ ಮಾತನಾಡುತ್ತಾ ಅನುಕೂಲವಾದ ಹುದ್ದೆಗಳನ್ನು ನೀಡುವ ಆಶ್ವಾಸನೆಯನ್ನು ನಿಮಗೆ ನಾನು ಕೊಡಲಾರೆನಾದರೂ ವಿಧಾಯಕ ರೀತಿಯ ಸೇವೆಯನ್ನು ಸಲ್ಲಿಸಲೂ ನಿರಾಡಂಬರದಿಂದ ಕೆಲಸಮಾಡಲೂ ಸಾಕಷ್ಟು ಅವಕಾಶವು ದೇಶದಲ್ಲಿರುತ್ತದೆಂದು ಮಾತ್ರ ಹೇಳಬಯಸುತ್ತೇನೆ. ಉಕ್ಕುವ ಉತ್ಸಾಹದಭಿಮಾನವನ್ನು ನಮ್ಮ ಯುವಕರು ತೋರ್ಪಡಿಸುವುದು ತೀರ ಶೋಚನೀಯ" ಎಂದರು. ಡಾ| ಕೈಲಾಸನಾಥ ಕಟಜೂರವರು ಲಕ್ನೋ ವಿಶ್ವವಿದ್ಯಾಲಯ ಕಾಯಿದೆ ಸಮಾಜದ ಉದ್ಘಾಟನೆ ಮಾಡುವಾಗಲೂ ಈ ಮಾತನ್ನೆ ಎತ್ತಿ ಹೇಳಿದರು. ವಿದ್ಯಾರ್ಥಿಗಳು ಶಿಸ್ತುಗೇಡಿಗಳಾಗಿ ಚಳುವಳಿಸುವುದನ್ನು ಅವರು ಖಂಡಿಸಿ, ವಿದ್ಯಾರ್ಜನೆ ಮಾಡಿ ದೇಶ ಸೇವೆಯಲ್ಲಿ ಪ್ರವೃತ್ತರಾಗುವುದನ್ನೆ ಕರ್ತವ್ಯವೆಂದು ತಿಳಿಯಬೇಕಾಗಿ ಉಪದೇಶಿಸಿದರು.

ರೈತರಿಗೆ ಸಂರಕ್ಷಣೆ

ಮದ್ರಾಸು ರಾಜ್ಯದಲ್ಲಿ ಗವರ್ನರರು ದಿನಾಂಕ ೫ರಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ, ಸಾಲದಲ್ಲಿ ಮುಳುಗಿದ ರೈತರಿಂದ ಸಾಲದ ಹಣ ವಾಪಸು ಪಡೆಯುವ ಉದ್ದೇಶದಿಂದ ಯಾರೇ ಆದರೂ ಇನ್ನು ಒಂದು ವರ್ಷದೊಳಗಿನ ಕಾಲದಲ್ಲಿ ದಾವೆ ಹೂಡಬಾರದೆಂದೂ ಹಿಂದೆ ಪಡೆದ ಡಿಕ್ರಿಯ ಅಮಲು ಬಜಾವಣೆ ನಡೆಸ ಕೂಡದೆಂದೂ ವಿಧಿಸಿರುವರು. ಕೆಲವು ವರ್ಷಗಳಿಂದ ಮಳೆಬಾರದೆ ಸಾಲದಲ್ಲಿ ಮುಳುಗಿದ ರೈತರ ಮೇಲೆ ಸಾಲ ವಾಪಸು ಪಡೆಯುವ ನೆವದಿಂದ ವ್ಯಾಜ್ಯ ಹೂಡಿ ಇನ್ನಷ್ಟು ಕಷ್ಟಕೊಡದಂತೆ ಮಾಡುವುದೂ ಈ ವರ್ಷ ಚೆನ್ನಾಗಿ ಮಳೆ ಬಂದಿರುವುದರಿಂದ ಬೆಳೆಯ ಪೂರ್ಣ ಲಾಭ ರೈತನಿಗೆ ಸಿಕ್ಕಿ ತನ್ಮೂಲಕ ಅಧಿಕ ಆಹಾರ ಬೆಳೆಯಲು ಪ್ರೋತ್ಸಾಹ ಕೊಡಬೇಕೆಂಬುದೂ ಈ ಆಜ್ಞೆಯ ಉದ್ದೇಶ.

ಸಮಾಜ ಕಲ್ಯಾಣ ಮಂಡಲ

ಭಾರತದ ಸಮಾಜ ಕಲ್ಯಾಣ ಮಂಡಳವು ಯೋಜನಾ ಆಯೋಗ ತನಗೆ ನೀಡಿದ ೪ ಕೋಟಿ ರೂಪಾಯಿಗಳಿಂದ ಅನೇಕ ಬಗೆಯ ಸಾಮಾಜಿಕ ಪುನರುತ್ಥಾನ ಚಟುವಟಿಕೆಗಳಿಗೆ ನೆರವು ನೀಡಲು ಉಪಕ್ರಮಿಸಿದ್ದು ಈ ವರ್ಷ ವೆಚ್ಚಮಾಡಬೇಕೆಂದಿರುವ ೫೫ ಲಕ್ಷ ರೂಪಾಯಿಗಳಲ್ಲಿ ೮೬೦೦೦೦ ರೂಪಾಯಿಗಳ ಸಹಾಯ ಧನವನ್ನು ಪ್ರಥಮ ಕಂತಾಗಿ ಕೊಟ್ಟಿರುತ್ತದೆ. ಹೆಂಗಸರ ಮತ್ತು ಮಕ್ಕಳ ಹಿತ, ಅಪರಾಧಿ ಹಾಗೂ ಅಂಗವಿಕಲ ಮಕ್ಕಳ ಯೋಗಕ್ಷೇಮ ಮತ್ತು ಇದೇ ಬಗೆಯಾಗಿ ಬೇರೆ ಬೇರೆ ರೀತಿಗಳಿಂದ ಸಾಮಾಜಿಕ ಕಲ್ಯಾಣ ಕಾರ್ಯದಲ್ಲಿ ಪ್ರವೃತ್ತವಾದ ಸಂಘ ಸಂಸ್ಥೆಗಳಿಗೆ ಈ ನೆರವು ದೊರೆತಿದೆ. ಇದನ್ನು ನೀಡುವಾಗ ಹಿಂದುಳಿದ ರಾಜ್ಯಗಳಲ್ಲಿ ವಿಶೇಷ ಚಟುವಟಿಕೆ ನಡೆಯುವಂತೆಯೂ ಸಮಸ್ಯೆಯನ್ನು ಯಶಸ್ವಿಯಾಗಿ ಬಿಡಿಸಲು ನೆರವಾಗುವಂತೆಯೂ ಜಾಗರೂಕತೆ ವಹಿಸಲ್ಪಟ್ಟಿದೆ.

ರಾಜ್ಯಾಂಗ ಘಟನೆಗೆ ತಿದ್ದುಪಡಿ

ಭಾರತದ ರಾಜ್ಯಾಂಗ ಘಟನೆಯಲ್ಲಿ ಆಸ್ತಿಗಳ ವಶೀಕರಣದ ಸಂಬಂಧದಲ್ಲಿ ಪರಿಹಾರ ಕೊಡುವ ಕಲಮಿಗೆ ತಿದ್ದುಪಡಿಯನ್ನು ಮಾಡಬೇಕೆಂದು ಗೊತ್ತುವಳಿ ತಂದ ಸತ್ಯೇಂದ್ರ ಚ್ಯಾಟರ್ಜಿಯವರಿಗೆ ಉತ್ತರ ಕೊಡುತ್ತಾ ಕಾಯಿದೆ ಮಂತ್ರಿ ಶ್ರೀ. ಬಿಸ್ವಾಸರು, ಸರಕಾರವು ಘಟನೆಯ ಯಾವ ಯಾವ ಕಲಮುಗಳಿಗೆ ತಿದ್ದುಪಡಿ ಅಗತ್ಯವೆಂಬುದನ್ನು ಪರಿಶೀಲಿಸುತ್ತಿದೆಯಾಗಿ ತಿಳಿಸಿದರು. ಆಸ್ತಿಯನ್ನು ಸರಕಾರ ವಶಪಡಿಸಿಕೊಳ್ಳುವಾಗ ಪರಿಹಾರ ನೀಡಬೇಕೆಂಬ ಮೂಲಭೂತ ತತ್ವವನ್ನು ಕಿತ್ತೊಗೆಯುವುದು ಪ್ರಶಸ್ತವಲ್ಲ - ನಮ್ಮ ಅನುಕೂಲತೆಗಾಗಿ ಪರಿಹಾರ ನೀಡುವ ಕ್ರಮ, ಅವಧಿ ಇತ್ಯಾದಿಗಳ ಕುರಿತು ಮಾತ್ರ ವಿಚಾರಿಸಬಹುದು ಎಂಬುದನ್ನು ಮಂತ್ರಿಗಳು ಧ್ವನಿಸಿದರು.

ವರಿಷ್ಠ ನ್ಯಾಯಾಲಯ

ಮುಂದಿನ ತಿಂಗಳ ೪ನೇ ದಿನಾಂಕದಿಂದ ನಿವೃತ್ತಿ ಹೊಂದುವ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಪತಂಜಲಿ ಶಾಸ್ತ್ರಿಯವರ ಸ್ಥಾನಕ್ಕೆ ಈಗ ವರಿಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿರುವ ಶ್ರೀ ಮೆಹರಚಂದ ಮಹಾಜನರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿರುವರು. ಮದ್ರಾಸು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ಟಿ. ಎಲ್. ವೆಂಕಟರಮಣ ಅಯ್ಯರರೂ ವರಿಷ್ಠ ನ್ಯಾಯಾಲಯದ ನ್ಯಾಯ ಮೂರ್ತಿಗಳಾಗಿ ನೇಮಕ ಹೊಂದಿರುವರು.

ಮಂತ್ರಿಗಳ ಸಂಬಳಕ್ಕೆ ಕತ್ತರಿ

ಆಂಧ್ರ ಶಾಸನ ಸಭೆಯು ಅನಿಶ್ಚಿತ ಅವಧಿಯ ವರೆಗೆ ಮುಂದುವರಿಯುವುದಕ್ಕೆ ತುಸು ಮುಂಚೆ ಮಂತ್ರಿಗಳಿಗೆ ಒಂದುಸಾವಿರ ರೂಪಾಯಿಗಳ ಮಾಸಿಕ ವೇತನ ಕೊಡಬೇಕೆಂಬ ಮಸೂದೆಯ ಮೇಲೆ ಚರ್ಚೆ ನಡೆದಾಗ ಶ್ರೀ ಗೋಪಾಲಕೃಷ್ಣಯ್ಯನೆಂಬವರು ಇದನ್ನು ೫೦೦ ರೂಪಾಯಿಗಳಿಗೆ ಇಳಿಸಬೇಕೆಂದು ತಿದ್ದುಪಡಿ ಮಂಡಿಸಿದರು. ಮತದಾನದ ಕಾಲಕ್ಕೆ ಒಂದು ಬಹುಮತದಿಂದ ತಿದ್ದುಪಡಿ ಪಾಸಾಯಿತು. ಸರಕಾರೀ ಪಕ್ಷದ ಸಮರ್ಥಕ ಸದಸ್ಯರಲ್ಲಿ ಕೆಲವರು ಮತದಾನದ ಕಾಲಕ್ಕೆ ಹಾಜರಿರದೆ ಹೊರಗೆ ತಿರುಗಲು ಹೋದುದೇ ಈ ಸೋಲಿಗೆ ಕಾರಣವಂತೆ. ಬಂದ ಮೇಲೆ ಪಾರ್ಲಿಮೆಂಟರಿ ಕಾರ್ಯದರ್ಶಿಗಳಿಗೆ ೬೦೦ ರೂಪಾಯಿಗಳ ಸಂಬಳ ಕೊಡಬೇಕೆನ್ನುವ ಮೂಲ ಸರಕಾರೀ ನಿರ್ಣಯವು ಇದ್ದದಿದ್ದಂತೆಯೇ ಪಾಸಾದಾಗ, ವಿರೋಧೀ ಗುಂಪಿನವರು ಇದು ಶುದ್ಧ ಅಸಂಬದ್ಧವೆಂದು ಉದ್ಗರಿಸಿದರು. ಅದಕ್ಕೆ ಸಂಜೀವ ರೆಡ್ಡಿಯವರು [illegible] ಕಾರ್ಯಕಲಾಪ ನಡೆಯುವ ರೀತಿಯನ್ನಿದು ತೋರಿಸುತ್ತದೆ ಎಂದರಂತೆ.

ಹೊಸದುರ್ಗ ಡಿ.ಮು. ಕೋರ್ಟಿನಲ್ಲಿ

O. S. No. 399 53.

ವಾಸುದ ಕಂಣನ್ ಕೂಡಾ ೮ ಜನರು
—ವಾದಿಯು.

ಮತ್ತು

ಗಣಪತಿ ಕೂಡಾ ೩ ಜನರು . ಪ್ರತಿವಾದಿಯು

೧ನೇ ಪ್ರತಿವಾದಿಯಾದ ಗಣಪತಿಗೆ ತಿಳಿಸುವದೇನೆಂದರೆ—

ಮೇಲ್ಕಂಡ ವ್ಯಾಜ್ಯವು ಇದೇ ತಾರೀಕು 23—12—53ರಲ್ಲೂ ತಮ್ಮಗೆ ಮುಟ್ಟಿದ ಕ್ಷವೆಂದು ಈ ಮೂಲಕ ತಿಳಿಸಲಾಗುತ್ತದೆ.

(Sd) E. R. Nambiar,
Vakil for Plaintiffs.

Hosdrug, 5-12-'53.

ಧರ್ಮಾರ್ಥ—ಮುಕ್ತಪಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N. U.)
Bhandari Street,
BOMBAY—3

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATOIN LTD.,

Estd: 1906] [H. O: UDIPI (S. India.)

ಬೆರ್ಮುಡಾದಲ್ಲಿ ತ್ರಿರಾಷ್ಟ್ರ ಪರಿಷತ್ತು

ಮಹಾ ಚತುಷ್ಟಯ ಸಮ್ಮೇಳನಕ್ಕೆ ಒಪ್ಪಿಗೆ

ಯುರೋಪು ಮತ್ತು ಅಮೇರಿಕಾ ಖಂಡಗಳ ನಡುವೆ ಎರಡು ಸಾವಿರ ಮೈಲು ಅಂತರ ಕಲ್ಪಿಸಿರುವ ಅಟ್ಲಾಂಟಿಕ ಮಹಾ ಸಾಗರದ ನಡುವೆ ಬೆರ್ಮುಡಾ ದ್ವೀಪವಿದೆ. ಇಲ್ಲಿಯ ಹ್ಯಾಮಿಂಲ್ಟನ ನಗರದ ಸಾಗರ ಮಧ್ಯದ ಕ್ಲಬ್ಬಿನಲ್ಲಿ ಬ್ರಿಟನ್, ಅಮೇರಿಕಾ ಮತ್ತು ಫ್ರಾನ್ಸದ ವರಿಷ್ಠರಾದ ಸರ್ ವಿನ್‌ಸ್ಟನ್ ಚರ್ಚಿಲ್ಲ, ಅಧ್ಯಕ್ಷ ಐಸೆನ ಹೋವರ ಮತ್ತು ಮಾನ್ಸರ್ ಲೇನಿಯಲರು ಒಂದು ಸಮ್ಮೇಳನದಲ್ಲಿ ಕೂಡಿದರು. ದಿನಾಂಕ ೪ರಂದು ಆರಂಭವಾದ ಈ ಪರಿಷತ್ತು ಜಾಗತಿಕ ಸಮಸ್ಯೆಗಳ ಸಿಂಹಾವಲೋಕನವನ್ನು ಮಾಡಿ ೮ನೇ ತಾರೀಕಿಗೆ ಮುಕ್ತಾಯಗೊಂಡಿತು. ಮೂರು ರಾಷ್ಟ್ರಗಳ ವರಿಷ್ಠರಿಗೆ ಸಮಾಲೋಚನೆಗಳಲ್ಲಿ ನೆರವಾಗಲು ಆಯಾ ದೇಶದ ವಿದೇಶಾಂಗ ಸಚಿವರೂ ಆರ್ಥಿಕ ಹಾಗೂ ಮಿಲಿಟರಿ ತಜ್ಞರೂ ಬೆರ್ಮುಡಾಕ್ಕೆ ತೆರಳಿದ್ದರು. ಮಾತುಕತೆಗಳ ನಡುವೆ ಫ್ರಾನ್ಸಿನ ಲೇನಿಯಲರಿಗೆ ಅಸ್ವಸ್ಥವುಂಟಾಗಲು, ಅವರ ಕಾರ್ಯಭಾರಕ್ಕೆ ಫ್ರಾನ್ಸದ ವಿದೇಶಾಂಗ ಸಚಿವ ಬಿಡಾಲ್ಟರೇ ಹೆಗಲು ಕೊಟ್ಟರು. ತ್ರಿರಾಷ್ಟ್ರಗಳ ಧುರೀಣರು ಸ್ಟಾಲಿನ್ನರ ನಿಧನಾ ನಂತರ ರಶಿಯಾ ಅನುಸರಿಸಿರುವ ಧೋರಣೆಯಲ್ಲಿ ಆಶಾದಾಯಕವಾದುದನ್ನೇನೂ ಕಾಣಲಿಲ್ಲ. ತಂತ್ರ ಮತ್ತು ಗತ್ತುಗಾರಿಕೆಯಲ್ಲಿ ಹೊಸತನ ಕಂಡುಬರುತ್ತಿದೆಯೆಂದಷ್ಟಕ್ಕೆ ಕಮ್ಯೂನಿಸಮ್ಮನ್ನು ಜಗತ್ತಿನಲ್ಲಿ ಪ್ರಸಾರ ಮಾಡುವ ರಶಿಯಾದ ಮೂಲಭೂತ ಉದ್ದೇಶವೂ ಬದಲ್ಗೊಂಡಿದೆ ಎಂದು ತಿಳಿಯಲು ಕಾರಣವಿಲ್ಲವೆಂದು ಈ ವರಿಷ್ಠರ ಅಭಿಪ್ರಾಯ.

ಮಹಾರಾಷ್ಟ್ರಗಳ ಸಮ್ಮೇಳನ

ಆದರೂ ಬ್ರಿಟನ್ನದ ಚರ್ಚಿಲ್ಲರು ರಶಿಯಾದೊಡನೆ ತುಸು ಮಿದುತನದಿಂದ ನಡೆದುಕೊಳ್ಳುವುದು ವಿಹಿತವೆಂದು ಹೇಳುತಿದ್ದಾರೆ -- ರಾಜಕೀಯವಾಗಿಯೂ ಆರ್ಥಿಕವಾಗಿಯೂ ರಶಿಯಾದೊಡನೆ ಸ್ನೇಹ ಸೌಹಾರ್ದದ ವರ್ತನೆಇಟ್ಟುಕೊಳ್ಳುವುದು ಶ್ರೇಯಸ್ಕರವೆಂದವರು ಪ್ರತಿಪಾದಿಸುತಿದ್ದಾರೆ. ಇದನ್ನು ಐಸೆನ ಹೋವರರು ಒಪ್ಪುವುದಿಲ್ಲ. ಜರ್ಮನಿಯ ವಿಷಯದಲ್ಲಿ ಬರ್ಲಿನಿನಲ್ಲಿ ನಾಲ್ಕು ಮಹಾರಾಷ್ಟ್ರಗಳ ಸಮ್ಮೇಳನ ಸೇರಬೇಕೆಂದು ರಶಿಯಾ ಅನುಕೂಲವಾದ ಮಾತನಾಡಿದಾಗಲೂ— ಯಾವುದೇ ಶರ್ತವನ್ನು ಮುಂದೊಡ್ಡದೆ ತನ್ನ ಪರಂಪರೆಯನ್ನು ಬಿಟ್ಟುಗೊಟ್ಟಾಗಲೂ— ಅಮೇರಿಕದ ಐಸೆನಹೋವರರಿಗಾಗಲೀ ಡಲ್ಲೇಸರಿಗಾಗಲೀ ರಶಿಯಾದ ಪ್ರಾಮಾಣಿಕತೆಯ ಮೇಲೆ ಇದ್ದ ಸಂದೇಹ ಅಳಿಯಲಿಲ್ಲ. ಏನೋ, ಇನ್ನೂ ಒಂದು ಪ್ರಯತ್ನ ನಡೆಯುವುದಾದರೆ ನಡೆಯಲಿ ಎಂಬ ರೀತಿಯಲ್ಲಿ ಅಮೇರಿಕಾ ಬ್ರಿಟನು ಮತ್ತು ಫ್ರಾನ್ಸುಗಳ ಆತುರಕ್ಕೆ ಮಣಿದು ಈ ಪರಿಷತ್ತಿಗೆ ಬೆರ್ಮುಡಾದಲ್ಲಿ ಒಪ್ಪಿಗೆ ವ್ಯಕ್ತಪಡಿಸಿತಲ್ಲದೆ— ಈ ಪರಿಷತ್ತು ಯಶಸ್ವಿಯಾಗುವುದೆಂಬ ಕುರಿತು ತಿಲಾಂಶ ಭರವಸೆಯನ್ನೂ ಅಮೇರಿಕಾ ಹೊಂದಿಲ್ಲ. ಮೊಸ್ಕೋದಲ್ಲಿರುವ ಫ್ರಾನ್ಸಿನ ರಾಯಭಾರಿಯು ಪಾಶ್ಚಾತ್ಯ ರಾಷ್ಟ್ರಗಳ ಸಮ್ಮತಿ ಸೂಚಕ ಪತ್ರವನ್ನು ರಶಿಯಾ ಸರಕಾರಕ್ಕೆ ಮುಟ್ಟಿಸಿದ್ದು— ಇಂಥದೊಂದು ಪರಿಷತ್ತು ಫ್ರಾನ್ಸಿನಲ್ಲಿ ಸದ್ಯದಲ್ಲಿಯೇ ಏರ್ಪಡಲಿರುವ ಹೊಸ ಸರಕಾರ ಅಸ್ತಿತ್ವಕ್ಕೆ ಬಂದಬಳಿಕ ಅಂದರೆ, ಫೆಬ್ರುವರಿ ತಿಂಗಳ ಆದಿಯಲ್ಲಿ ಸೇರುವುದೊಳಿತೆಂದು ಹೇಳಲ್ಪಟ್ಟಿದೆ. ಬೆರ್ಮುಡಾದ ಸಭೆಯಲ್ಲಿ ಯುರೋಪಿನ ಸಂರಕ್ಷಣಾ ವ್ಯೂಹದ ಕುರಿತಾಗಿಯೂ ಮಾತುಕತೆಗಳು ನಡೆದವು— ಫ್ರಾನ್ಸು ಈ ವ್ಯೂಹ ರಚನೆಗೆ ಅಧಿಕೃತವಾದ ಒಪ್ಪಿಗೆಯನ್ನು ಇನ್ನೂ ನೀಡಿಲ್ಲ— ಅಲ್ಲಿ ರಚಿಸಲ್ಪಡುವ ಹೊಸ ಸರಕಾರ ಈ ವಿಷಯಕ್ಕೆ ತನ್ನ ಒಪ್ಪಿಗೆ ಮುದ್ರೆಯನ್ನು ಒತ್ತುವುದಕ್ಕೆ ಮೊದಲೇ ಜರ್ಮನಿಯ ವಿಚಾರವನ್ನು ಕೆದಕಬೇಕೆಂಬ ಇರಾದೆಯಿಂದಲೇ ರಶಿಯಾ ಅನಿರೀಕ್ಷಿತವಾಗಿ ನಾಲ್ಕು ಮಹಾರಾಷ್ಟ್ರಗಳ ಪರಿಷತ್ತಿಗೆ ನಿಃಶರ್ತವಾಗಿ ಒಪ್ಪಿಕೊಂಡಿತೆಂದು ಭಾವಿಸಿದರೂ ತಪ್ಪಿಲ್ಲ.

ಯುದ್ಧ ಕೈದಿಗಳ ಪ್ರಶ್ನೆ

ನಾಲ್ಕು ಮಹಾರಾಷ್ಟ್ರಗಳ ಪರಿಷತ್ತು ಶುಭಶಕುನವೆಂದು ತೋರಿದರೂ ಇದರಿಂದ ಜಾಗತಿಕ ಸಮಸ್ಯೆಗಳ ಪರಿಹಾರವಾಗಿಯೇ ತೀರುವುದೆಂದು ನಾವಾರೂ ಕಲ್ಪಿಸಲಾರೆವು. ಕೊರಿಯಾದ ಪ್ರಶ್ನೆಯೇ ಇಂದು ಜಟಿಲ ತಮವಾದ ಸಮಸ್ಯೆಯಾಗಿದ್ದು— ಅದನ್ನು ಯಶಸ್ವಿಯಾಗಿ ಬಗೆಹರಿಸುವುದು ಅತ್ಯಗತ್ಯವಾಗಿರುತ್ತದೆ. ಈ ದಿಸೆಯಲ್ಲಿ ಮಾಡಿದ ಪ್ರಯತ್ನಗಳು ಏನೇನೂ ಫಲಕಾರಿಯಾಗಲಿಲ್ಲವೆಂಬುದೇ ದುಃಖದ ಸಂಗತಿ. ಉದಾಹರಣೆಗೆ, ತಟಸ್ಥ ರಾಷ್ಟ್ರಗಳ ನಿರೀಕ್ಷಕರ ಮಂಡಳದ ಕೆಲಸದಲ್ಲಿ ಸಾಕಷ್ಟು ಪ್ರಗತಿ ಕಂಡು ಬಂದಿಲ್ಲ. ಯುದ್ಧ ಕೈದಿಗಳಿಗೆ ವಿವರಣೆ ನೀಡುವ ಸದುದ್ದೇಶದಿಂದ ಈ ಮಂಡಳ ರೂಪುಗೊಂಡಿದ್ದರೂ — ವಿವರಣಾ ಕಾರ್ಯದ ಆತಂಕಗಳು ಈ ಕೆಲಸವನ್ನೆ ಸ್ಥಗಿತಗೊಳಿಸಿವೆ. ಉಭಯ ಪಕ್ಷದವರೂ ಸಂಧಿಯಲ್ಲಿ ಒಪ್ಪಿಕೊಂಡ ಈ ಮಹತ್ವದ ವಿಷಯ ಕಾರ್ಯಾನ್ವಿತವಾಗದಿರುವುದರಿಂದ, ಸಂಧಿಯೇ ಅಸಿಂಧುವಾಗುವುದಿಲ್ಲವೆ ಎಂಬ ಪ್ರಶ್ನೆ ಈಗ ಉದ್ಭೂತವಾಗಿರುತ್ತದೆ. ವಿವರಣೆಯನ್ನು ನಿರಾಕರಿಸುವ, ಅಥವಾ ಅದಕ್ಕೆ ಆತಂಕವೊಡ್ಡುವ ಕೈದಿಗಳು ಜನವರಿ ೨೩ನೇ ತಾರೀಕಿನ ಅವಧಿ ತೀರಿದ ಬಳಿಕ ತಾವು ನಿಃಶರ್ತವಾಗಿ ಬಿಡುಗಡೆ ಹೊಂದುವೆವೆಂಬ ಖಚಿತ ಅಭಿಪ್ರಾಯಕ್ಕೆ ಬಂದಂತೆ ತೋರುತ್ತದೆಯೆಂದು ಜನರಲ್ ತಿಮ್ಮಯ್ಯನವರ ಹೇಳಿಕೆ. ಆ ತಾ

ನ ವ ಯು ಗ

ಉಡುಪಿ, ಗುರುವಾರ ೧೦-೧೨-'೫೩

ದೇವನಾಗರಿ ಲಿಪಿಯ ಬಳಕೆ

ಲಕ್ನೋ ನಗರದಲ್ಲಿ ಈಚೆಗೆ ದೇವನಾಗರಿ ಲಿಪಿ ಸುಧಾರಣೆಯ ಪ್ರಶ್ನೆಯನ್ನು ಚರ್ಚಿಸುವ ಉದ್ದೇಶದಿಂದ ಒಂದು ಸಮ್ಮೇಳನ ನಡೆಯಿತು. ಈ ಸಮ್ಮೇಳನ ಅನೇಕ ದೃಷ್ಟಿಯಿಂದ ಮಹತ್ವವನ್ನು ಪಡೆದಿರುತ್ತದೆ. ಭಾರತವು ಸ್ವತಂತ್ರಗೊಂಡು ತನ್ನದೇ ರಾಜ್ಯಾಂಗ ಘಟನೆಯನ್ನು ನಿರ್ಮಿಸಿದ ಕಾಲಕ್ಕೆ ದೇವನಾಗರಿ ಲಿಪಿಯುಳ್ಳ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಿದೆವು. ಹಿಂದಿಯು ಭಾರತದಲ್ಲಿ ಅತ್ಯಧಿಕ ಪ್ರಚಾರದಲ್ಲಿರುವ ಔತ್ತರೇಯರ ಮಾತೃಭಾಷೆಯಾದರೂ ದಕ್ಷಿಣದಲ್ಲಿ ಹಿಂದಿಯನ್ನು ಜನ ತೆರೆದ ಮನಸ್ಸಿನಿಂದ ಇನ್ನೂ ಸ್ವಾಗತಿಸಿದಂತೆ ತೋರುವುದಿಲ್ಲ. ಹಿಂದೀಯನ್ನು ಜನಪ್ರಿಯಗೊಳಿಸುವಷ್ಟು ವಿಶೇಷ ಚಟುವಟಿಕೆಗಳೂ ನಡೆದಂತೆ ಕಾಣುವುದಿಲ್ಲ. ಘಟನೆಯಲ್ಲಿ ಇನ್ನು ೧೫ ವರ್ಷಗಳ ಒಳಗೆ ಎಲ್ಲ ಸರಕಾರೀ ಕಾಗದ ಪತ್ರಗಳೂ ವ್ಯವಹಾರವೂ ಹಿಂದೀ ಭಾಷೆಯಲ್ಲಿ ನಡೆಯುವಂತೆ ಮಾಡಬೇಕೆಂದು ಹೇಳಲ್ಪಟ್ಟಿದ್ದರೂ-ಅದನ್ನು ಕಾರ್ಯಾನ್ವಿತಗೊಳಿಸುವ ಕಡೆಗೆ ಸರಕಾರದ ಗಮನ ಇನ್ನೂ ಹರಿದಿಲ್ಲ. ಕೇಂದ್ರ ಸರಕಾರದ ವಿದ್ಯಾಂಗ ಈ ವಿಷಯದಲ್ಲಿ ಉಪೇಕ್ಷೆಯಿಂದಿರುವಷ್ಟೂ ಪ್ರಗತಿ ಕುಂಠಿತವಾಗುವುದೆಂದು ಹೇಳಲೇ ಬೇಕಾಗುವುದು. ಭಾರತದಲ್ಲಿ ಬೇರೆ ಬೇರೆ ಮಾತೃ ಭಾಷೆಯುಳ್ಳ ಜನರು ಇದ್ದು, ರಾಜ ಭಾಷೆಯ ನೆಪದಿಂದ ಹಿಂದೀಯು ತಮ್ಮ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಒತ್ತಾಯವನ್ನೂ ಬಲಾತ್ಕಾರವನ್ನೂ ಹೇರುತ್ತಿದೆಯೋ ಎಂಬ ಶಂಕೆ ಅವರೆಲ್ಲರನ್ನೂ ಬಾಧಿಸುತ್ತಿದೆ. ಏಕ ರಾಷ್ಟ್ರ ಮತ್ತು ಏಕ ಭಾಷೆಯ ವ್ಯಾಮೋಹದಲ್ಲಿ ವಿವಿಧ ಮಾತೃ ಭಾಷೆಯ ಜನರು ಬೆಳೆಸಿಕೊಂಡ ಪ್ರಾದೇಶಿಕ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳನ್ನು ಮೂಲೆ ಗುಂಪು ಮಾಡಲಾಗುತ್ತಿದೆಯೆಂಬ ಆರೋಪವನ್ನೂ ಈ ಸಂದರ್ಭದಲ್ಲಿ ಕೇಳುತ್ತೇವೆ. ಇಂಥದರಲ್ಲಿ ಭಾರತದ ಇತರ ಭಾಷೆಗಳ ಮಹತ್ವವನ್ನು ಕಡಿಮೆ ಮಾಡದೆ ಹಿಂದೀಯ ಪ್ರಸಾರವು ಹೆಚ್ಚಿಕೊಳ್ಳುವಂತೆ ಹೇಗೆ ಮಾಡಬಹುದೆಂಬ ಚಿಂತೆಯೇ ದೇವ ನಾಗರಿ ಲಿಪಿಯ ಸುಧಾರಣೋದ್ದೇಶವಾಗಿರುತ್ತದೆ. ದೇವನಾಗರಿ ಲಿಪಿಯ ಹಿಂದೀಯಲ್ಲಿ ಹಿದಾಂತ್ಯದ ಅಕ್ಷರಕ್ಕೆ ಅರ್ಧ ಉಚ್ಚಾರವಿರುತ್ತದೆ-ಬೇರೆ ಭಾಷೆಗಳಲ್ಲಿ ಕಂಡುಬರುವ ಕೆಲವು ಅಕ್ಷರಗಳೂ ಇರುವುದಿಲ್ಲ. ಇವೇ ಮುಂತಾದವುಗಳು ಲಿಪಿ ಸುಧಾರಣೆಯ ಮೋಹವುಳ್ಳವರು ಗಮನಿಸಬೇಕಾದ ಅಂಶ. ಅವರು ಇನ್ನೂ ಒಂದು ಮುಖ್ಯ ಸಂಗತಿಯನ್ನು ಕಣ್ಣಮುಂದಿಟ್ಟುಕೊಳ್ಳುವುದು ವಿಹಿತ — ಹಿಂದೀಯನ್ನು ರಾಷ್ಟ್ರಭಾಷೆಯಾಗಿ ನಾವು ಸ್ವೀಕರಿಸಿರುವುದರಿಂದ, ಅದು ಶೀಘ್ರಲಿಪಿ, ಟೈಪರೈಟರ, ಲಿನೋಟೈಪ ಮುಂತಾದ ವೈಜ್ಞಾನಿಕ ಪ್ರಗತಿಯ ಲಾಭವನ್ನೂ ಮಾಡಿಕೊಡಬೇಕಾದುದು ಅಗತ್ಯ. ಇಂಗ್ಲ ಭಾಷೆಯಷ್ಟು ಸುಲಭವಾಗಿಯಲ್ಲದಿದ್ದರೂ— ವೈಜ್ಞಾನಿಕ ಪ್ರಗತಿಯನ್ನು ಅಳವಡಿಸಿಕೊಳ್ಳಲಾರದಷ್ಟು ಹಿಂದೆ ದೇವನಾಗರಿ ಲಿಪಿ ಉಳಿಯುವುದು ಇಷ್ಟವಲ್ಲ. ದೇವ ನಾಗರಿ ಲಿಪಿಯು ಹಿಂದೀಯನ್ನು ಈಗ ಮಧ್ಯ ಪ್ರದೇಶ, ಉತ್ತರ ಪ್ರದೇಶ, ಬಿಹಾರ, ಪಂಜಾಬ ಮತ್ತು ರಾಜಸ್ಥಾನಗಳಲ್ಲಿ ಬಳಸಲಾಗುತ್ತಿದೆ. ಅಲ್ಲಿಯ ಜನತೆಗೆ ಈ ವೈಜ್ಞಾನಿಕ ಸೌಲಭ್ಯಗಳು ದೊರೆತಪಕ್ಷದಲ್ಲಿ ದೇವನಾಗರಿ ಲಿಪಿಯನ್ನು ಉಪಯೋಗಿಸುವ ಮರಾಠಿಯೇ ಮುಂತಾದ ಭಾಷೆಗಳೂ ಏಳಿಗೆ ಹೊಂದಲು ಎಡೆಯಿದೆ. ಈ ರೀತಿ ಇತರ ದೇಶ ಭಾಷೆಗಳಲ್ಲಿ ಲಭ್ಯವಿಲ್ಲದ ಅನುಕೂಲತೆಯು ದೇವನಾಗರಿ ಲಿಪಿಯುಳ್ಳ ಹಿಂದೀಯಲ್ಲಿ ಲಭ್ಯವಿದೆಯೆಂದಾದರೆ— ಕನ್ನಡವೇ ಮುಂತಾದ ಪ್ರಾದೇಶಿಕ ಭಾಷೆಗಳೂ ದೇವನಾಗರಿ ಲಿಪಿಯನ್ನು ಬಳಸಬೇಕೆಂದು ಕೇಳುವುದು ಕೆಲಮಟ್ಟಿಗಾದರೂ ಸರಿಯೆಂದು ತೋರೀತು. ಅದು ಬಿಟ್ಟು, ಈಗಲೇ ನೀವು ಕೂಡ ಲಿಪಿ ಸುಧಾರಣೆ ಮಾಡಿಕೊಂಡು, ದೇವನಾಗರಿಯನ್ನು ಅಂಗೀಕರಿಸಿರಿ— ಇದರಿಂದ ಪರಸ್ಪರ ಸಂಪರ್ಕವೂ ಸಾಹಿತ್ಯದ ಪರಿಚಯವೂ ಸುಲಭವಾಗುತ್ತದೆ ಎನ್ನುವ ವಾದ ಹುರುಳಿಲ್ಲದ್ದು; ಮತ್ತು ಭಯ ಭೀತಿಯನ್ನು ಹುಟ್ಟಿಸುವಂಥಾದ್ದು. ಲಿಪಿ ಸುಧಾರಣೆಯ ಮೋಹ ಹೀಗೆ ವಿಪಂಚನೆಗೆ ಎಡೆಕೊಡಬಾರದು. ನೆಹರೂರವರು ಈ ಸಮ್ಮೇಳನಕ್ಕೆ ನೀಡಿದ ಸಂದೇಶದಲ್ಲಿಯೂ ಡಾ. ರಾಧಾಕೃಷ್ಣನ್ನರ ಅಧ್ಯಕ್ಷ ಭಾಷಣದಲ್ಲಿಯೂ ಭಾಷೆಯ ಸಂಸ್ಕಾರ ಹಾಳಾಗದಂತೆ, ಒತ್ತಾಯವಿಲ್ಲದಂತೆ ಯೋಗ್ಯ ಕ್ರಮ ಕೈಗೊಳ್ಳಲ್ಪಡಬೇಕೆಂಬ ಸೂಚನೆ ಮಾಡಲ್ಪಟ್ಟಿದೆ. ದಿವಾಕರ ರಂಗರಾಯರು ಬೇರೆ ಸಂದರ್ಭದಲ್ಲಿ ಹೇಳಿದ ಮಾತೊಂದನ್ನೂ ಹಿಂದೀಯಲ್ಲಿ ಆಸ್ಥೆಯುಳ್ಳ ದೇವನಾಗರಿ ಲಿಪಿ ಸುಧಾರಣೆಗಾರರು ಸ್ಮರಿಸಬಹುದು -- ಇಂಗ್ಲೀಷಿನ ಬದಲು ಹಿಂದಿಯಲ್ಲೆ ಶುದ್ಧಿ ಸಂಗ್ರಹ ಹಾಗೂ ಪ್ರಸಾರ ಕಾರ್ಯ ಸಾಧ್ಯವಾದರೆ ದೇಶ ಭಾಷೆಗಳ ಪತ್ರಿಕೆಗಳಿಂದ ಅದಕ್ಕೆ ಪ್ರೋತ್ಸಾಹ ದೊರೆಯುವುದು ನಿಶ್ಚಯ ಎಂದರವರು. ಇಲ್ಲಿ ಕೂಡ ಹಿಂದೀ ಭಾಷೆ ಉಪಯೋಗಿಸುವ ದೇವ ನಾಗರಿ ಲಿಪಿಯು ಆಧುನಿಕ ವಿಜ್ಞಾನದ ಸಂಶೋಧನೆಗಳ ಲಾಭ ಪಡೆಯುವಂತೆ ಸುಧಾರಿಸಲ್ಪಡುವುದೇ ಹೆಚ್ಚು ಅಗತ್ಯದ ಸಂಗತಿಯೆಂಬ ಧ್ವನಿ ಕೇಳಿಸುತ್ತದೆ. ಸದ್ಯಕ್ಕೆ ಈ ಧ್ವನಿಗೆಯೇ ಪ್ರಾಧಾನ್ಯ ಸಲ್ಲಬೇಕಲ್ಲದೆ ಭಾರತದ ಪ್ರಾದೇಶಿಕ ಭಾಷೆಗಳೆಲ್ಲ ದೇವ ನಾಗರಿ ಲಿಪಿ ಉಪಯೋಗಿಸಲಿ ಎಂಬುದಕ್ಕಲ್ಲ.

ರೀಕೆಸನೊಳಗೆ ಕೊರಿಯಾದ ರಾಜಕೀಯ ಸಮಿತಿ ಸೇರಿ ಯುದ್ಧ ಕೈದಿಗಳ ಭವಿಷ್ಯ ನಿರ್ಧರಿಸಬೇಕೆಂದು ಒಪ್ಪಂದದಲ್ಲಿ ಹೇಳಲಾಗಿದ್ದರೂ ರಾಜಕೀಯ ಸಮಿತಿಯ ಸಭೆಸೇರುವ ಸೂಚನೆಯೇ ಕಾಣಿಸುವುದಿಲ್ಲವಾದುದರಿಂದ, ಹೇಗೂ ಸಂಧಿಗೆ ಭಂಗ ಒದಗಬಹುದು. ಈ ರೀತಿ ಪ್ರಮುಖವಾದ ಕರಾರುಗಳು ಭಂಗಹೊಂದಿದ ಪ್ರಸಂಗದಲ್ಲಿ ಯುದ್ಧ ಕೈದಿಗಳ ಯೋಗಕ್ಷೇಮ ನೋಡಿಕೊಳ್ಳುವ ಹೊಣೆ ಹೊತ್ತ ಭಾರತೀಯ ಪಡೆ ಮುಂದೇನು ಮಾಡಬೇಕೆಂಬುದೂ ವಿಚಾರಣೆಯ ಅಂಶವಾಗಿರುತ್ತದೆ.

ಭಾರತೀಯ ಪಡೆಯ ಭವಿಷ್ಯ

ಸ್ವಾಭಾವಿಕವಾಗಿಯೇ ಭಾರತ ಸರಕಾರಕ್ಕೂ ಭಾರತೀಯರೆಲ್ಲರಿಗೂ ಈ ವಿಷಯದಲ್ಲಿ ಕುತೂಹಲವೂ ಆತುರವೂ ಇದೆ. ಪ್ರಧಾನಿ ನೆಹರೂರವರು ಭಾರತೀಯ ಪಡೆ ಮುಂದೇನು ಮಾಡುವುದೆಂಬ ಕುರಿತು ಈಗಾಗಲೇ ಏನಾದರೂ ಹೇಳಲು ಇಚ್ಛಿಸುವುದಿಲ್ಲೆಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟರೂ—ಸಂಧಿಯಲ್ಲಿ ಒಪ್ಪಿಕೊಂಡ ಎರಡು ಮುಖ್ಯಾಂಶಗಳು ಕಾರ್ಯಾನ್ವಿತಗೊಳ್ಳದಿದ್ದ ಪಕ್ಷದಲ್ಲಿ, ಇತ್ತಂಡದವರೂ ಹೊಸ ಒಡಂಬಡಿಕೆ ಮಾಡಿಕೊಳ್ಳ ಬೇಕಾಗುತ್ತದೆಯೆಂದು ಸೂಚಿಸಿದರು. ಭಾರತೀಯ ಪಡೆಯನ್ನು ಅನಿರ್ದಿಷ್ಟ ಅವಧಿಯ ವರೆಗೆ ಕೊರಿಯದಲ್ಲಿಡುವುದು ನಮ್ಮ ಸರಕಾರದ ಇಚ್ಛೆಯಲ್ಲವೆಂದೂ ನೆಹರೂ ಹೇಳಿದರು. ಯುದ್ಧ ವಿರಾಮ ಒಪ್ಪಂದದಲ್ಲಿ ಹೇಳಿದ ಅವಧಿಯೊಳಗೆ ರಾಜಕೀಯ ಸಮಿತಿಯ ಕಾರ್ಯಕಲಾಪಗಳು ನಡೆಯದಿದ್ದರೆ, ಆಗ ಸಿಂಗ್ಮನ್ ರ್ಹೀಯವರು ಯುದ್ಧ ಮುಂದರಿಸುವ ಹುಮ್ಮಸ್ಸು ತೋರಬಹುದು. ಮತ್ತು ಭಾರತೀಯ ಪಡೆಯ ಮೇಲೆ ದಾಳಿಯಾದರೂ ಆದೀತು. ರಾಜಕೀಯ ಸಭೆ ಸೇರಿಸಬೇಕೆಂದು ಕಮ್ಯೂನಿಸ್ಟ ಹಾಗೂ ರಾಷ್ಟ್ರಸಂಘದ ಪ್ರತಿನಿಧಿಗಳು ನಡೆಸುತ್ತಿರುವ ಮಾತುಕತೆಗಳು ಎಲ್ಲಿಗೂ ಬಂದು ಮುಟ್ಟಿಲ್ಲ. ಹೊಸ ದಿಹಲಿಯಲ್ಲಿ ಈ ಸಮಿತಿ ಸಭೆ ಸೇರಬೇಕೆಂದೂ ರಶಿಯಾ ತಟಸ್ಥ ರಾಷ್ಟ್ರವಾಗಿ ಸಭೆಯಲ್ಲಿ ಹಾಜರಿರಬೇಕೆಂದೂ ಕಮ್ಯೂನಿಸ್ಟರು ಮಾಡಿದ ಮಹತ್ವದ ಸೂಚನೆ ರಾಷ್ಟ್ರಸಂಘದ ಪತಿಯಿಂದ ಅಮೇರಿಕಾ ನೇಮಿಸಿದ ಪ್ರತಿನಿಧಿ ಆರ್ಥರ ಡೀನರಿಂದ ತಿರಸ್ಕರಿಸಲ್ಪಟ್ಟಿದೆ. ಡೀನರು ಅದಕ್ಕೆ ಪ್ರತಿಯಾಗಿ—ಮತ್ತು ಕೊನೆಯದೆಂದು ಹೀಗೆ ಮುಂಚಾಮ ಮಾತುಕತೆಗಳು ಮುಕ್ತಾಯಗೊಂಡ ೬೮ ರಿಂದ ೪೫ ದಿನಗಳಲ್ಲಿ ಜಿನೇವಾದಲ್ಲಿ ರಾಜಕೀಯ ಸಮಿತಿ ಸಭೆ ಸೇರಬೇಕೆಂದು ಆನೇ ದಿನಾಂಕಸೂಚಿರಸಿದರೂ ಕಮ್ಯೂನಿಸ್ಟರು ಅದನ್ನು ಒಡನೆಯೇ ನಿರಾಕರಿಸಿದರು.

ಭಾರತವನ್ನು ನಂಬುವುದಿಲ್ಲ?

ಈ ನಡುವೆ ರಾಷ್ಟ್ರಸಂಘದಲ್ಲಿ ಭಾರತೀಯ ಪ್ರತಿನಿಧಿ ಶ್ರೀ ಕೃಷ್ಣ ಮೆನೊನ್ನರು ಫೆಬ್ರವರಿ ೯ ನೇ ದಿನಾಂಕ ರಾಷ್ಟ್ರಸಂಘದ ಅಧಿವೇಶನ ನಡೆಯಬೇಕೆಂದು ಗೊತ್ತುವಳಿಯೊಂದನ್ನು ತಂದರು. ಕೊರಿಯಾದ ಪ್ರಶ್ನೆಯನ್ನು ಪರಿಶೀಲನೆಗೆ ತೆಗೆದುಕೊಳ್ಳುವುದೇ ಹೀಗೆ ಅಧಿವೇಶನ ಕರೆಯುವ ಉದ್ದೇಶವೆಂದು ಅವರು ತಿಳಿಸಿದರು. ಹೀಗೆ ನಿರ್ದಿಷ್ಟ ದಿನವೊಂದರಲ್ಲಿ ಅಧಿವೇಶನ ಕರೆಯಲು ನಿರ್ಣಯಿಸಿದರೆ, ಕಮ್ಯೂನಿಸ್ಟರು ಆ ತಾರೀಕಿನ ವರೆಗೂ ವಿಳಂಬ ಸಾಧಿಸಲು ನೋಡಿಯಾರೆಂದು ಬ್ರಾಜಿಲವು ಆಕ್ಷೇಪಿಸಿದ್ದರಿಂದ—ಭಾರತ ಬ್ರಾಜೀಲಗಳೆರಡರ ಉದ್ದೇಶಗಳನ್ನೂ ಸಮನ್ವಯಗೊಳಿಸಿ ಹೊಸ ನಿರ್ಣಯ ಮಾಡಲ್ಪಟ್ಟಿದೆ: ಅದರಂತೆ ರಾಷ್ಟ್ರಸಂಘದ ಬಹುಮತ (ಅಂದರೆ ಮೂರರಲ್ಲಿ ಎರಡಾಂಶ) ಸದಸ್ಯರು ಅಪೇಕ್ಷಿಸಿದರೆ ಅಥವಾ ಮಹಾರಾಷ್ಟ್ರಗಳಲ್ಲಿ ಒಂದು ಇಚ್ಛೆಪಟ್ಟಲ್ಲಿ ರಾಷ್ಟ್ರಸಂಘದ ತುರ್ತಿನ ಅಧಿವೇಶನ ಕರೆಯಲು ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗೆ ಅಧಿಕಾರ ಕೊಡಲಾಯಿತು. ರಶಿಯಾದ ಪ್ರತಿನಿಧಿ ವಿಶಿಂಸ್ಕಿಯವರು "ಈ ಶರ್ತಗಳನ್ನು ಹೇರುವ ಬದಲು ನಾವೆಲ್ಲ ಒಮ್ಮತದಿಂದ ಆರಿಸಿರುವ ಅಧ್ಯಕ್ಷರಿಗೆ ಅಗತ್ಯ ಕಂಡಾಗ ಸಭೆ ಕರೆಸಲು ಏಕೆ ಬಿಡಬಾರದು!" ಪ್ರಶ್ನಿಸಿದರೂ—ಪ್ರಮುಖ ರಾಷ್ಟ್ರಗಳಾದ ಬ್ರಿಟನು, ಅಮೇರಿಕೆಗಳಿಗೆ ಇದು ಸರಿಕಾಣಲಿಲ್ಲ. ಆ ದೇಶದ ಪ್ರತಿನಿಧಿಗಳು ಭಾರತೀಯ ಪಡೆಗಳ ಕರ್ತವ್ಯ ದಕ್ಷತೆಯನ್ನು ಪ್ರಶಂಸಿಸಿ ಭಾಷಣ ಮಾಡಿದರೂ—ವಿಜಯಲಕ್ಷ್ಮಿಯವರಿಗೆ ಮನಸ್ಸು ಬಂದಾಗ ಅಧಿವೇಶನ ಸೇರಿಸಗೊಡುವುದು ಸರಿಯೆಂದು ಭಾವಿಸಲಿಲ್ಲ. ಇದರ ಕಾರಣ ಸ್ಪಷ್ಟವಿದೆ. ಶ್ರೀಮತಿ ವಿಜಯಲಕ್ಷ್ಮಿಯವರು ಭಾರತೀಯರು; ಅದಕ್ಕೂ ಹೆಚ್ಚಾಗಿ ಭಾರತದ ಪ್ರಧಾನಿ ನೆಹರೂರವರ ತಂಗಿ. ಕೊರಿಯಾದಲ್ಲಿ ಮಹತ್ವದ ಪಾತ್ರವಹಿಸಿದ ಭಾರತದ ಈ ಪ್ರತಿನಿಧಿಗೆಯೇ ಎಲ್ಲ ಹೊಣೆಯನ್ನು ಒಪ್ಪಿಸುವ ಪೂರ್ಣವಿಶ್ವಾಸ ಅಮೇರಿಕಕ್ಕೆ ಇಲ್ಲವೇ ಇಲ್ಲ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಸ್ಮಾಲ್ ಕಾಸ್ ನಂಬ್ರ. 696/1953

ಬಜೆ ಗಣಪತಿ ನಾಯಕ್ —ವಾದಿ.

ಮತ್ತು

ಕೆ. ಸದಾಶಿವ ಹೆಗ್ಡೆ —ಪ್ರತಿವಾದಿ.

ಇವರೊಳಗೆ—

ಪ್ರತಿವಾದಿ: ಕೆ. ಸದಾಶಿವ ಹೆಗ್ಡೆ ಕುಕ್ಕೆಹಳ್ಳಿ ಬೈಲುಬೀಡು ಸೂರಪ್ಪ ಹೆಗ್ಡೆರ ಅಳಿಯ ಶಾಲಾ ಮಾಸ್ತರ್ ಉಡ್ಪಿ ತಾಲ್ಲೂಕು ಕುಕ್ಕೆಹಳ್ಳಿ ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ ವಾದಿಗೆ ನೀವು ತಾರೀಕು 21-6-1951ರಲ್ಲಿ ಬರಕೊಟ್ಟಿರುವಂತಾ ಡಿಮಾಂಡ್ ನೋಟಿನ ಬಾಬ್ತು ಬಡ್ತಕ್ಕ ಅಸಲು ಬಡ್ಡಿ ಲೆಕ್ಕಾಚಾರಗಳಿಗೆ ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 21-12-1953ಕ್ಕೆ ನಿಮ್ಮ ಆಖೈರು ನೋಟೀಸು ಬಗ್ಗೆ ಇಟ್ಟಿರುವದ್ರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪ ವಗೈರೆ ಇದ್ದಲ್ಲಿ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರೆ ಹಾಜರಿಯಿಂದ ಸದ್ರಿ ವ್ಯಾಜ್ಯವನ್ನು ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಸದಾ ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಯ ಪಡ್ಸಿಯದೆ.

K. Varadaraya Pai

ವಾದಿ ಕಡೆ ವಕ್ಕೀಲರು.

ಮೊಕ್ಕಾಂ ಉಡುಪಿ ತಾರೀಕು 8-12-53



ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ. ಏಜಂಟರು, ಸ್ಪೆಶ್ಯಲ್ ಏಜಂಟರು, ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ವಿವರಕ್ಕೆ ಬರೆಯಿರಿ:

ಮೆನೇಜರ್.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

॥ ಶರೀರ್ಶ್ಚ ಮಹೀಮಿದಂ ನಿರ್ಜರಾಮರಣಾಂ ॥

ಆಯುರ್ವೈದ್ಯಾಶ್ರಮ

[ಸ್ಥಾಪನೆ: 1933]

ಆಬಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಹ್ಯ ರೋಗಗಳು, ನಪುಂಸಕತೆ, ಬಂಜೆತನ, ಚರ್ಮವ್ಯಾಧಿಗಳು, ಮೂಲವ್ಯಾಧಿಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ. ಪ್ರಬಲವಾದ ವಾತರೋಗಗಳನ್ನು ಕದ್ರಿ ಗುಡ್ಡೆಯ ಮೇಲೆ (ವೈದ್ಯಾಶ್ರಮದ ಪತ್ತಿರ)

—ಪ್ರಶಾಂತ ಪ್ರದೇಶದಲ್ಲಿ ಕಟ್ಟಿಸಿದ—

—o ಶುಶ್ರೂಷಾಲಯದಲ್ಲಿ o—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು. ಅತ್ಯಂತ ಆಮೋಘ ಪ್ರಯೋಗಗಳನ್ನು ನಾವಿವರ ದಿನಗಳ ಮೊದಲೇ ಕೈಕೊಳ್ಳುವೆವು. ಪತ್ರವ್ಯವಹಾರ ಮಾಡಿ ವಿವರ ತಿಳಿಯುವದು.

ಕದ್ರಿ, ಮಂಗಳೂರು. } ಪ್ರಧಾನ ವೈದ್ಯರು: ಎಂ. ಎಸ್. ಭಿಡೆ, ಆಯುರ್ವೇದ ಭಿಷಕ್.

ಉಡುಪಿ

ಮಹಾಸಭೆ— ಉಡುಪಿ ಆಫೀಸರ್ಸ್ ಕ್ಲಬ್ಬಿನ ಮಹಾಸಭೆಯು ಈಚೆಗ ಜರಗಿ ಕಾರ್ಯನಿರ್ವಾಹಕ ಮಂಡಳಿಗೆ ಕೆಪ್ಟನ್ ಎಸ್. ಮಂಗೇಶ ರಾವ್, ಅಧ್ಯಕ್ಷ; ಶ್ರೀ ಎಚ್. ಎಲ್. ಸಾಲಿಯಾನ್, ಮುನ್ಸಿಫ್, ಉಪಾಧ್ಯಕ್ಷ; ಶ್ರೀ ವಿಶ್ವನಾಥ ಪೈ, ಕಾರ್ಯದರ್ಶಿ; ಶ್ರೀ ಎಸ್. ಇ. ಪ್ರಿಚರ್ಡ್, ಜತೆಕಾರ್ಯದರ್ಶಿ. ಡಾ! ಬಿ. ಬಿ. ಸೆಟ್ಟಿ, ಕೋಶಾಧಿಕಾರಿ. ಶ್ರೀಗಳಾದ ಪಿ. ಬಿ. ಆಚಾರ್, ಕೆ. ಎಸ್. ಶ್ಯಾನುಭಾಗ, ಜಿ. ಮೈಕಲ್, ಎಮ್. ಸಿ. ರಾಮಕೃಷ್ಣನ್, ಪೀಟರ್ ಉಮ್ಮರ್, ಡಾ! ದಿಜೇಂದ್ರ ಸೆಟ್ಟಿ, ಇವರು ಸದಸ್ಯರಾಗಿ ಕಾರ್ಯಕಾರಿ ಮಂಡಳಿಗೆ ಆರಿಸಲ್ಪಟ್ಟರು.

ಎಮ್. ಜಿ. ಎಮ್. ಕಾಲೇಜಿನ ಹಳೆ ವಿದ್ಯಾರ್ಥಿಗಳ ಸಂಘ— ಸ್ಥಾಪನೆ ಸ್ಥಾಪಿಸುವರೆ ಇದೇ ತಾ 21ರಲ್ಲಿ ಸಂಜೆ 5 ಗಂಟೆಗೆ ಶ್ರೀ ರಾಮಕೃಷ್ಣ ಮೆಮೋರಿಯಲ್ ಹಾಲಿನಲ್ಲಿ ಸಭೆ ಜರಗಲಿರುವುದೆಂದೂ ಹಳೆ ವಿದ್ಯಾರ್ಥಿಗಳೆಲ್ಲರೂ ಹೆಚ್ಚು ಸಂಖ್ಯೆಯಿಂದ ಬರಬೇಕಾಗಿಯೂ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಅಪೇಕ್ಷಿಸುತ್ತಾರೆ.

ಭಾಷಣ— ಎಮ್. ಜಿ. ಎಮ್. ಕಾಲೇಜಿನಲ್ಲಿ ಇದೇ ತಾ 6ರಲ್ಲಿ ಸಂಜೆ ಪ್ರೊಫೆಸರ್ ಶ್ರೀ ಎಸ್. ಕಸ್ತೂರಿಯವರು ವಿದ್ಯಾರ್ಥಿ ಮತ್ತು ಅಧ್ಯಾಪಕರ ಸಭೆಯಲ್ಲಿ ಭಾಷಣವಿತ್ತರು.

ಮುದ್ದಣ ಮತ್ತು ಕಾಳಿದಾಸ ಜಯಂತಿ ಸಮಾರಂಭಗಳು— ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನ ಭಾಷಾ ಹಾಗೂ ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ 3ರಿಂದ 5ರ ತನಕ ಜರಗಿದವು.

ಪ್ರಥಮ ದಿವಸ ಮುದ್ದಣ ಜಯಂತಿಯು ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸ್ವಾಗತ ಭಾಷಣ ಮಾಡಿದರು. ಕಾಲೇಜು ವಿದ್ಯಾರ್ಥಿಗಳು ದಾನವಾಗಿ ಕೊಟ್ಟ ಮುದ್ದಣನ ತೈಲಚಿತ್ರವನ್ನು ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಅನಾವರಣ ಮಾಡಿದರು. ಎರಡನೆ ದಿವಸ ಕಾಳಿದಾಸ ಜಯಂತಿಯು ಶ್ರೀ ಕಾಲೂಗಿ ಶೇಷಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಗೋಪಾಲಕೃಷ್ಣ ಭಟ್ಟರು ಸ್ವಾಗತ ಭಾಷಣ ಮಾಡಿದರು. ಕುಂದಾಪುರ ಕಾಲೇಜಿನ ಪ್ರೊಫೆಸರ್ ಶ್ರೀ ಬಿ. ಎಚ್. ಶ್ರೀಧರನವರು ಕಾಳಿದಾಸರ ನಾಟಕಗಳನ್ನು ವಿವರಿಸಿ ಭಾಷಣಗೈದರು. ಕೊನೆಯ ದಿವಸದ ಸಭೆಯ ಅಧ್ಯಕ್ಷಸ್ಥಾನವನ್ನು ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ವಹಿಸಿದ್ದರು. ಶ್ರೀ ಪಿ. ಎಸ್. ಅಯ್ಯಂಗಾರರ ಸ್ವಾಗತ ಭಾಷಣ, ಶ್ರೀ ಕೆ. ಶಿವರಾಮ ಕಾರಂತರ ಉಪನ್ಯಾಸಗಳಾಗಿ ಶ್ರೀ ಮಂಜುನಾಥಯ್ಯನವರ ನಿರ್ದೇಶನದಲ್ಲಿ ನಾಟಕ, ಹಿಂದಿ ಪ್ರಹಸನ ಕಾರ್ಯಕ್ರಮಗಳಾಗಿ ಸಭಾಂತ್ಯವಾಯಿತು. ಮುದ್ದಣ ಜಯಂತಿ ಸಲುವಾಗಿ ಏರ್ಪಡಿಸಲಾದ ಪ್ರಬಂಧ ಮತ್ತು ಕಥಾ ಸ್ಪರ್ಧೆಗಳಲ್ಲಿ ಶ್ರೀಗಳಾದ ಜಗನ್ನಾಥ ಉಪಾಧ್ಯಾಯ, ಜಿ. ಸುಬ್ರಾಯ, ಎಮ್. ಆನಂದ್ ಉಡ್ಪಿಕರರು ಪ್ರಥಮ ಸ್ಥಾನಗಳನ್ನು ಪಡೆದಿರುವರು.

ಮಿಲ್ಕ್‌ಬಾರ್ ಪ್ರಾರಂಭ— ಸ್ಥಳೀಯ ಜಿಲ್ಲಾ ಹಾಲು ಸಹಕಾರಿ ಸಂಘದಲ್ಲಿ "ಮಿಲ್ಕ್‌ಬಾರ್" ವಿಭಾಗವನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಇದೇ ತಾ 7ರಲ್ಲಿ ಬೆಳಿಗ್ಗೆ ಉದ್ಘಾಟಿಸಿದರು. ಕಾರ್ಯದರ್ಶಿ ಶ್ರೀ ಎಮ್. ವಾಮನ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಉದ್ಘಾಟನೆ— ಅದಿಉಡುಪಿ ಹಾ! ಹಿ! ಶಾಲೆಯ ನೂತನ ಭವನದ ಉದ್ಘಾಟನೆಯು ತಾ 9ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ. ಕೆ. ಸಂಜೀವ ಭಟ್ಟರಿಂದ ಶ್ರೀ ಟಿ ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಮೂಡಬಿದಿರೆ— ಕವಿಭೂಷಣ ಶ್ರೀ ಕೆ. ಪಿ. ವೆಂಕಪ್ಪ ಸೆಟ್ಟರಿಂದ ಬರೆಯಲ್ಪಟ್ಟ "ಭರತೇಶ ದಿಗ್ವಿಜಯ" ಎಂಬ ಯಕ್ಷಗಾನ ಕಥಾ ಭಾಗವನ್ನು ಮಂಗಳೂರಿನ ಶ್ರೀ ಇರ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಭೆಯವರು ತಾ 1ರಲ್ಲಿ ಶ್ರೀ ಟಿ. ರಘುಚಂದ್ರ ಸೆಟ್ಟರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಿದರು. ಶ್ರೀಗಳಾದ ಸುಬ್ಬಯ್ಯ ಸೆಟ್ಟಿ, ನಾರಾಯಣ ಸೆಟ್ಟಿ ರಾಮಯ್ಯ ರೈಗಳವರು ತಂತಮ್ಮ ಪಾತ್ರವನ್ನು ಜತೋಪಾಗಿ ಅಭಿನಯಿಸಿದರು. ಶ್ರೀ ವೈಂದಪ್ಪ ರೈಗಳ ಹಾಡುಗಾರಿಯೂ ಸುಶ್ರಾವ್ಯ ಮನೋಹರವಾಗಿತ್ತು. ಶ್ರೀ ಕೆ. ಶಾಂತ ರೈ, ಶ್ರೀ ರಾಮಚಂದ್ರ ಶಾಸ್ತ್ರಿ ಮತ್ತು ಸಭಾಧ್ಯಕ್ಷರು ಜೈನ ಕಾವ್ಯದ ಸಂಪ್ರದಾಯಕ್ಕೂ ರಸಿಕತೆಗೂ—ನಾಟಕ ಧರ್ಮಕ್ಕೂ ಒಂದಿಷ್ಟು ಎಡರು ಆಕ್ಷೇಪಗಳುಂಟಾಗದಂತೆ ಈ ಕಥೆಯನ್ನು ಯಕ್ಷಗಾನ ರೂಪದಲ್ಲಿ ಬರೆದ ಶ್ರೀ ಕೆ. ಪಿ. ವೆಂಕಪ್ಪ ಸೆಟ್ಟರನ್ನೂ, ರಂಗಭೂಮಿಯಲ್ಲಿ ಪ್ರದರ್ಶಿಸಿದ ನಟ ವರ್ಗದವರನ್ನೂ ಅಭಿನಂದಿಸಿ ಮಾತನಾಡಿದರು.

ನಾಟಕ ಪ್ರದರ್ಶನ— ಕಳೆದ ತಾ 28ರಲ್ಲಿ ಮೂಡಬಿದಿರೆ ಸರಸ್ವತೀ ಸೇವಾ ಸಂಘದ ಸಹಾಯಾರ್ಥವಾಗಿ ಉಡುಪಿಯ ಶ್ರೀ ಎಸ್ಸೆಲ್ ಮತ್ತು ಗೆಳೆಯರು "ಬಹದ್ದೂರ ಗಂಡ" ಎಂಬ ನಾಟಕವನ್ನು ಉತ್ತಮ ರೀತಿಯಲ್ಲಿ ಅಭಿನಯಿಸಿದರು.

ಕುಂದಾಪುರದಲ್ಲಿ ಭೂದಾನ ಯಜ್ಞ ಶಿಬಿರ— ಸಂತ ವಿನೋಬಾರವರು ಪ್ರಾರಂಭಿಸಿರುವ ಭೂದಾನ ಯಜ್ಞದಲ್ಲಿ ತರುಣರು ಭಾಗವಹಿಸಲು ಅನುಕೂಲವಾಗುವಂತೆ ಯೋಗ್ಯ ತರಬೇತಿಯನ್ನೀಯಲು ಕುಂದಾಪುರದಲ್ಲಿ 1954ನೆ ಇಸವಿ ಜನವರಿ ತಿಂಗಳ ಉತ್ತರಾರ್ಧದಲ್ಲಿ ಒಂದು ವಾರದ ಭೂದಾನ ಯಜ್ಞದ ತರಬೇತಿ ಶಿಬಿರವು ತೆರೆಯಲಾಗುವುದು.

ಶಿಬಿರಕ್ಕೆ ಸೇರಬಿಚ್ಛಿಸುವ ಉಮೇದ್ವಾರರು ಈ ಕೆಳಗಿನ ಮಾಹಿತಿಯನ್ನೊಳಗೊಂಡ ಆವೇದನಾ ಪತ್ರಗಳನ್ನು ಇದೇ ಡಿಸೆಂಬರ ತಿಂಗಳಾಂತ್ಯದೊಳಗೆ ಶ್ರೀ ಪೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅಧ್ಯಕ್ಷ ಭೂದಾನ ಯಜ್ಞ ಸಮಿತಿ, ಕುಂದಾಪುರ—ಇವರಿಗೆ ಕಳುಹಿಸತಕ್ಕದ್ದು.

ಅರ್ಜಿಗಳು ಕಾಗದದ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿರಬೇಕು. ಅದರಲ್ಲಿ ಸೂಚಿಸಬೇಕಾದ ಮಾಹಿತಿಗಳು 1 ಉಮೇದ್ವಾರನ ಹೆಸರು, ವಯಸ್ಸು, ವಿಳಾಸ 2 ಈಗ ಮಾಡುತ್ತಿರುವ ಉದ್ಯೋಗ, 3 ಹಿಂದೆ ಮಾಡಿದ ಸಮಾಜ ಸೇವೆ, 4 ಮುಂದೆ ಸಮಾಜದ ಹಿತಕ್ಕಾಗಿ ಮಾಡಬೇಕೆಂದಿರುವ ಕಾರ್ಯದ ಯೋಜನೆ, 5 ಭೂದಾನ ಯಜ್ಞದಲ್ಲಿ ತಾವು ಯಾವ ರೀತಿಯಲ್ಲಿ ಭಾಗವಹಿಸಲು ಶಕ್ಯವಿದೆ. ಆ ಬಗ್ಗೆ ತಾವು ಏನು ಯೋಜನೆ ಮಾಡಿರುವಿರಿ ಎಂಬ ಬಗ್ಗೆ ಮಾಹಿತಿ, 6 ಬೇರೆ ಏನಾದರೂ ವಿಶೇಷ ಸಂಗತಿ ಇದ್ದರೆ 7 ಉಮೇದ್ವಾರನ ಸಹಿ ಮತ್ತು ತಾರೀಕು.

ಆವೇದನಾ ಪತ್ರಗಳು ಬಂದ ನಂತರ ಆರಿಸಲ್ಪಟ್ಟ ಉಮೇದ್ವಾರರಿಗೆ ಸೇರಬೇಕಾದ ಸ್ಥಳ ಮತ್ತು ಸಮಯ ತಿಳಿಸಲಾಗುವುದು. ಊಟ ಮತ್ತು ವಸತಿ ಉಚಿತ. ತರಬೇತಿಗೆ ಬಂದು ಹೋಗುವ ಪ್ರವಾಸ ಖರ್ಚನ್ನು ಉಮೇದ್ವಾರರೇ ವಹಿಸ ತಕ್ಕದ್ದು.

ಹೆಚ್ಚಿನ ಮಾಹಿತಿಯನ್ನಪೇಕ್ಷಿಸುವವರು ಶ್ರೀ ಪಿ. ನಾಗಯ್ಯ, ವಿನೋಬಾ ಸಹಯಾತ್ರಿ, ಸಂಚಾಲಕ ಭೂದಾನ ಯಜ್ಞ ಸಮಿತಿ, ಕುಂದಾಪುರ, ತೆಕ್ಕಟ್ಟೆ ಪೋಸ್ಟು [ದಕ್ಷಿಣ ಕನ್ನಡ] ಅವರಿಗೆ ಬರೆಯತಕ್ಕದ್ದು.

ಹಿರಿಯಡಕ— ಕಳೆದ ತಾ 25ರಲ್ಲಿ ಮದ್ರಾಸ್ಯ ಮಂತ್ರಿ ಶ್ರೀ ಕೆ. ವೆಂಕಟಸ್ವಾಮಿ ನಾಯ್ಡುರವರು ಹಿರಿಯಡಕ ದೇವಸ್ಥಾನವನ್ನು ಸಂದರ್ಶಿಸಿ ಶ್ರೀ ದೇವಸ್ಥಾನದ ಆಡಳಿತೆ ಮಂಡಳಿಯ ಪರವಾಗಿ ಅಡಳ್ತೆಮೋಕ್ತೇಸರ ಶ್ರೀ ಎ. ಜಗಂಜೀವ ಆಳ್ವರು ಕೊಟ್ಟ ಮಾನ ಪತ್ರವನ್ನು ಸ್ವೀಕರಿಸಿದರೆಂದೂ, ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ ಮಾನ ಪತ್ರವು ಪಂಚಾಯತ ಬೋರ್ಡಿನ ಪರವಾಗಿ ಅಲ್ಲವೆಂದೂ ಸಂಬಂಧ ಪಟ್ಟವರು ತಿಳಿಸುತ್ತಾರೆ.

ಕುಮಟಾದಲ್ಲಿ

ಡಾ! ಟಿ. ಎಮ್. ಎ. ಪೈಗಳು

ಕುಮಟಾದ ಕೆನರಾ ಕಾಲೇಜಿನ ಸ್ನೇಹ ಸಮ್ಮೇಲನವು ಕಳೆದ ತಾ. 27ರಲ್ಲಿ ಡಾ! ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಎಲ್. ಎಸ್. ಕಾಮತರು ಕಾಲೇಜಿನ ವರದಿಯನ್ನೋದಿದರು. ಶ್ರೀ ಪಿ. ಎಸ್. ಕಾಮತ್, ಎಮ್. ಎಲ್. ಎ. ಅವರು ದಿ! ಎಸ್. ಆರ್. ಹಳದೀಪುರ ಸ್ಮಾರಕ ಶಿಷ್ಯವೃತ್ತಿ ಪಡೆದವರನ್ನು ಅಭಿನಂದಿಸಿ ಮಾತನಾಡಿದರು. ಅಧ್ಯಕ್ಷರು ಭಾಷಣಮಾಡುತ್ತಾ ಕೆನರಾ ಜಿಲ್ಲೆಯು ಸಾಂಸ್ಕೃತಿಕವಾಗಿ ಒಂದೇ ಆಗಿದೆ. ಇಂತಹ ಕಾಲೇಜುಗಳ ಆವಶ್ಯಕತೆ ಇನ್ನೂ ಇದೆ. ವಿದ್ಯಾರ್ಥಿಗಳು ಗುರು ಹಿರಿಯರನ್ನು ಕಡೆಗಣಿಸಬಾರದು. ಇಂದಿನ ತರುಣ ತರುಣಿಯರಿಗೆ ಅವಕಾಶಗಳ ಅಭಾವವಿಲ್ಲ. ಆದರೆ ಯೋಗ್ಯ ಧ್ಯೇಯಗಳಿಲ್ಲದೇ ಏನನ್ನೂ ಸಾಧಿಸಲು ಶಕ್ಯವಿಲ್ಲ. ಭಾರತದ ಮಹತ್ವಕ್ಕೆ ಆದರ ಸನಾತನ ಸಂಸ್ಕೃತಿಯ ಮಹತ್ವವೇ ಕಾರಣವೆಂದರು.

ನಡಿಯುವ ಚಿತ್ರ "ಪತಿತಾ" (ಹಿಂದಿ)

ನಿರ್ದೇಶನ: ಅಮಿಯ ಚಕ್ರವರ್ತಿ. ತಯಾರಿಕೆ: ಬೋಂಬೆ ಟೋಕೀಸ್

ತಾರಾವತಿ: ದೇವ್ ಆನಂದ್, ಉಷಾಕಿರಣ್, ಆಗಾ, ಲಲಿತಾಪವರ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಬರುವ ಚಿತ್ರಗಳು: ಜಾತಕಸಲ, ವಿಠಲ ರಖುಮ್ಮಾ, ಮೊದಲಾದುವು

THE VIJAYA BANK, LTD., BRAHMAVAR.

ದಿ. ವಿಜಯಾ ಬೇಂಕ್ ಲಿಮಿಟೆಡ್ ಬ್ರಹ್ಮಾವರ,

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರುಗಳು ನಮ್ಮ ಶಾಖೆಯಿಂದ, ಚಿನ್ನಾಭರಣ ನಗಗಳ ಆಧಿಸ ಮೇಲೆ ಪಡೆದ ಸಾಲವನ್ನು ಮರು ಪಾವತಿ ಮಾಡುವರೆ ರಿಜಿಸ್ಟ್ರೀ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ವ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವದರಿಂದಲೂ, ಕೆಲವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇದೇ ಡಿಸಂಬರ ತಾರೀಕು 18ನೇ ಶುಕ್ರವಾರ ಅಪರಾಹ್ನ ಘಂಟೆ 4-ಕ್ಕೆ, ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು
5 52	ಸಂಜೀವ ಸೆಟ್ಟಿ, ಮುಲಿಂಗ ಸೆಟ್ರ ಅಳಿಯ, ಹೇರೂರು ಗ್ರಾಮ, P. O. ಬ್ರಹ್ಮಾವರ.	ರೂ. ಆ ಪೈ. 53 7 0
89/-	ಪಿ. ಶಿವರಾಮ ಸೆಟ್ಟಿ, ಮಂಜಯ್ಯ ಸೆಟ್ರ ಅಳಿಯ, ಪಡುಬೆಟ್ಟು ಗುಮ್ಮಗೋಡು ಗ್ರಾಮ, P.O. ಬ್ರಹ್ಮಾವರ	69 15 0
127/-	ಶೀನ ಸೆಟ್ಟಿ, ಅನಂತ ಸೆಟ್ರ ಅಳಿಯ, ಹೇರೂರು ದೊಡ್ಡಮನೆ, P.O. ಬ್ರಹ್ಮಾವರ,	87 13 0
162/-	ವಾಸು ದಾಸ, ರಂಗ ದಾಸರ ಮಗ, ವಾರಂಬಳ್ಳಿ ಗ್ರಾಮ, P.O. ಬ್ರಹ್ಮಾವರ.	78 12 0
208/-	ಮಹಾಬಲ ಸೆಟ್ಟಿ, ರಾಮಣ್ಣ ಸೆಟ್ರ ಅಳಿಯ, ಚೆಕಾರ್ಡಿ ಗ್ರಾಮ, P.O. ಪೇತ್ರಿ.	35 11 0
242/52	ಕಾಳ ನಾಯ್ರಿ, ವೆಂಕ್ಟಯ್ಯ ನಾಯ್ರಿಯ ಅಳಿಯ, ಪಟ್ಟೆಮನೆ ಚಾಂತಾರ್ ಗ್ರಾಮ, P.O. ಬ್ರಹ್ಮಾವರ.	26 14 0
245/52	ನಾರಾಯಣ ಸೆಟ್ಟಿ, ಅನಂತ ಸೆಟ್ರ ಅಳಿಯ, ಹಾರಾಡಿ ಗ್ರಾಮ, P.O. ಸಾಲಿಕೇರಿ.	102 15 0
272/-	ನಾರಾಯಣ ಸೆಟ್ಟಿ, ರಾಮಣ್ಣ ಸೆಟ್ರ ಅಳಿಯ, ಮೂಡೂರು ಚೆಕಾರ್ಡಿ ಗ್ರಾಮ, P.O. ಪೇತ್ರಿ.	52 8 0

Office of the Bank, Brahmavar.
Dated 5—12—53.

(Sd) ಬಿ. ಬಾಸ್ಕರ್ ಸೆಟ್ಟಿ.
ಏಜಂಟ್.

Coondapoor,
Date 5—12—1953

NOTICE.

In the Court of the District Munsif of Kundapur.

O. S. 445/1953
R. I. A. 1319/1953

Anjuman Islahul Muslameen Coondapoor— a fund of the Muslameen Ten of Coondapoor formed for the advancement of Muslim culture, education and religion represented by:

1) Khateeb Hassan Saheb
2) Sheik Hassan Saheb
3) K. Mahomed Ali
4) G. Mahomed Meera Saheb
5) M. K. Abbu Saliha

—*Plaintiff.*

Vs.

Abdul Khader Saheb, son of Gulam Moideen Saheb, Teacher, Byndoor —*Defendant.*

Take Notice that a suit has been filed by the above plaintiff for Rs. 890—12—0 an amount not returned by defendant to the plaintiff fund which the defendant had collected for the fund in Mercara and Madras. The amount claimed represents the net amount returnable to the fund with interest after deducting expenses as per the resolution of the fund.

The said suit is filed on behalf of The Anjuman Islahul Muslameen as described above— a fund of the Muslameen Ten of Coondapoor. The said fund in this suit is represented by the abovenamed persons as per the resolution of the fund. Notice is hereby given to the Muslameen Ten of Coondapoor whose fund it is that any one who has any objection may join as defendant and contest the suit. This notice is given to the Muslameen Ten of Coondapoor as per order of the Court in R. I. A. 1319/1953.

The suit is posted to 21-12-1953 at 11 a. m. Please take notice that all those who are interested as abovementioned and who wish to contest the suit may appear before the Court on 21—12—1953 either in person or through Pleader and get themselves admitted as defendants in suit.

By order of the Court.

Sd/ K. Raghunath Shenai, B.A.,
Pleader for Plaintiffs.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಪಕ್ಕೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ಗಾಬರಿ ದಾರು ಮುಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ. 5/- ಅತಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹಸ್ತಿರವಾಣೆ ಪ್ರತ್ಯೇಕ]

Mrs. P. DEVEE, F.DS.(N.J.)
CALCUTTA. 40

ಸ್ಟಾಕಿಸ್ಟರು: ದಯಾಕಂಪೆನಿ, ಮಂಗಳೂರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 57/53.

ಅರ್ಜಿದಾರರು: 1. ಜೋನ್‌ಬಾವಲು ಡಿಸೋಜ
2. ಜೇಮ್ಸ್ ಸಬಸ್ತಿಯನ್ ಡಿಸೋಜ. ಜಾಕೋಬ್ ಫೆಲಿಕ್ಸ್ ಡಿಸೋಜರ ಮಕ್ಕಳು. ಯಿವರ ಬಗ್ಗೆ ಯಿವರ ಜನರಲ್ ಫವರ ಆಫ್ ಎಟರ್ನಿದಾರಳು. ಲೂಸಿ ಡಿಸೋಜ ಬ್ಬಾ, ಬನ್ನಾಟ್ಯಂವು ಡಿಸೋಜರ ಮಗಳು ರಿಟಾಯರ್ಡ್ ಟೀಚರ್, ಕುಂದಾಪುರ ಕಸಬೆ.

ಎದ್ರಿದು:— ಯಿಲ್ಲ.

ಯಿತರ ಸಮಸ್ತರಿಗೆ ತಿಳಿಯಪಡಿಸುದ್ದು ಅರ್ಜಿದಾರರ ದೊಡ್ಡ ತಂದೆ ಅಂತೋನಿ ಸಿಲ್ವೆಸ್ಟರ್ ಡಿಸೋಜರು ತಾ. 3—12—51 ರಲ್ಲಿ ಮೃತಪಟ್ಟಿರುತ್ತಾರೆ. ಅವರು ಮೃತ ಪಡುವ ಮುಂಚೆ ತಾ 27—8—1943 ರಲ್ಲಿ, ಬರೆದಿಟ್ಟ ರಿಜಿಸ್ಟ್ರಿ ವೀಲುನಾಮೆ ಪ್ರಕಾರ ಅವರ ಮರಣದ ನಂತ್ರ ಮೃತರ ವಿಶಿಷ್ಠ ಸ್ತಿರಚರ ಸೊತ್ತುಗಳಿಗೆ ಅರ್ಜಿದಾರರು ಹಕ್ಕುದಾರರೆಂತಲೂ ಆ ಮೇರೆಗೆ ಮೃತನ ಬಾಬ್ತು ಕೆನರಾ ಬ್ಯಾಂಕ್ ಲಿಮಿಟೆಡ್ ಕುಂದಾಪುರ ಬ್ರ್ಯಾಂಚಿನಲ್ಲಿ V. S. R. 38/51. ನೇಗೆ ಬಸ ಆ್ಯವೇಜು ಮತ್ತು D. R. No. 12539 ರ ಮೇರೆಗೆ ತಾ. 7—12—52ರ ವರೇಗೆ ಬರತಕ್ಕ ಬಡ್ಡಿ ರೂಪಾಯ್ 393—5—9 ಮತ್ತು ಕುಂದಾಪುರ ಡಿ. ಮು. ಕೋರ್ಟ S. C. 217/49ನೇಗೆ ಬಸ ಡಿಕ್ರಿ ಆ್ಯವೇಜು ರೂಪಾಯ್ 45-0-0 ಕೂಡಾ ರೂಪಾಯ್ 438-5-9 ನ್ನು ವ್ಸಲು ಪಡೆಯುವರೇ ಅರ್ಜಿದಾರರು ತಮ್ಮ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಪ್ರಾರ್ಥಿಸಿ ಮಾಡಿದ ಸದ್ರಿ ಅರ್ಜಿ ತಾ. 15-12-53ಕ್ಕೆ ತನಿಖೆಗೆ ಯಿಟ್ಟಿದೆ. ಆ ಕುರಿತು ಆಕ್ಷೇಪ ಹೇಳತಕ್ಕವರು ಸದ್ರಿ ದಿವಸ ಬೆಳಿಗೆ ಗ.11ಕ್ಕೆ ಸದ್ರಿ ಕೋರ್ಟಿನಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

(sd) Y. Manjaya Shetty.
Advocate for Peter.

ತಾ. 6-12-53 ಮೊಕ್ಕಾಂ. ಕುಂದಾಪುರ,



ಮಂಗಳೂರು

ಕರ್ನಾಟಕ ಮಹಿಳಾ ಪರಿಷತ್ತಿನ ಗೊತ್ತುವಳಿಗಳು— ಮಂಗಳೂರಲ್ಲಿ ಕಳೆದ ತಾ. 28 ಮತ್ತು 29ರಲ್ಲು ಸೇರಿದ ಕರ್ನಾಟಕ ಮಹಿಳಾ ಪರಿಷತ್ತಿನಲ್ಲಿ, ಕುಟುಂಬ ನಿಯಂತ್ರಣ ಯೋಜನೆಗಳನ್ನು ಪ್ರಚಾರ ಮಾಡಬೇಕೆನ್ನುವ, ಭೂದಾನ ಯಜ್ಞಕ್ಕೆ ಪ್ರೋತ್ಸಾಹಪಡಿಸಬೇಕೆನ್ನುವ, ಮದ್ರಾಸಿನ ಪಾನನಿರೋಧ ಮಂತ್ರಿ ಶ್ರೀಮತಿ ಜ್ಯೋತಿ ವೆಂಕಟಾಚಲಂ, ಅವರನ್ನು ಅಭಿನಂದಿಸುವ ಅಂತೆಯೇ ಸಂಯುಕ್ತ ರಾಷ್ಟ್ರಗಳ ಸಂಘದ ಅಧ್ಯಕ್ಷೆಯರಾಗಿ ಆರಿಸಲ್ಪಟ್ಟ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಅಭಿನಂದಿಸುವ ಕೆಳಮಟ್ಟದ ಮತ್ತು ಮಧ್ಯಮ ವರ್ಗದವರ ಜೀವನ ಮಟ್ಟವನ್ನು ಸುಧಾರಿಸುವರೆ ಮಹಿಳೆಯರ ವಿವಿಧೋದ್ದೇಶ ಸಹಕಾರಿ ಸಂಘಗಳು ಸ್ಥಾಪನೆಯಾಗಬೇಕೆನ್ನುವ, ಮಹಿಳೆಯರಲ್ಲಿ ಉಳಿತಾಯ ಅಭಿರುಚಿಯನ್ನುಂಟು ಮಾಡಬೇಕೆನ್ನುವ ಮದ್ರಾಸಿನ ಹೊಸ ವಿದ್ಯಾ ಕ್ರಮವನ್ನು ಸಮರ್ಥಿಸುವ, 1954ನೇ ಅಕ್ಟೋಬರ ತಿಂಗಳೊಳಗೆ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ವಿನಂತಿಸುವ ಗೊತ್ತುವಳಿಗಳಾದವು. ನಿರ್ಣಯಗಳ ಸೂಚನೆ, ಅನುಮೋದನೆ ಚರ್ಚೆಗಳಲ್ಲಿ ಶ್ರೀಮತಿಯರು ಡಾ| ಸಾವಿತ್ರಿ ಬಾಯಿ ನಾಗಪ್ಪ ಗೌಡ, ಉಮಾ ಬಾಯಿ ಕುಂದಾಪುರ, ಲಕ್ಷ್ಮಿ ನಾರಾಯಣ, ರಾಧಾ ಶಾಸ್ತ್ರಿ, ಕಲ್ಯಾಣಿ ಡಿ. ಸೆಟ್ಟಿ, ಮೇರಿ ಬ್ರಿಟೋ, ಎಮ್. ಎಸ್. ಲೀಲಾ ಬಾಯಿ ಶಾಂತೇರಿ ಪ್ರಭು ಮೊದಲಾದವರು ಪ್ರಮುಖ ಭಾಗ ವಹಿಸಿದ್ದರು.

ಹ್ಯಾಸ್ಕೂಲು ವರ್ಧಂತಿ—ರೊಜಾರಿಯೋ ಹ್ಯಾಸ್ಕೂಲಿನ ವರ್ಧಂತಿ ಉತ್ಸವದ ದಿನಾಚರಣೆಯು ಕಳೆದ ತಾ 28ರಲ್ಲು ಮುನಿಸಿಪಲ್ ಕಮಿಶನರ್ ಶ್ರೀ ಎಲ್. ಸಿ. ರಿಚಾರ್ಡ್ಸ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ರೆ| ಫಾ| ಎಫ್. ಜೆ. ಎಮ್. ಪಿಂಟೋರವರು ವರದಿವಾಚನ ಮಾಡಿದರು. ಸಭಾಧ್ಯಕ್ಷರು ಪಾರಿತೋಷಕ ವಿತರಣೆ ಮಾಡಿ, ಮಂಗಳೂರಿನ ಅತೀ ಪ್ರಾಚೀನವಾದ ಈ ಶಾಲೆಯ ಶ್ರೇಯಸ್ಸನ್ನು ಬಯಸಿದರು.

ಭೂದಾನ—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ರೀ ಶಂಕರ ರಾವ್ ದೇವರಿಂದ ಸಂಗ್ರಹವಾದ 510 ಎಕ್ರೆಯಲ್ಲದೆ 99 ಎಕ್ರೆ ಭೂದಾನ ಸಂಗ್ರಹವಾಗಿದೆ.

ಚರ್ಚಾಕೂಟ— ಕೊಡಿಯಾಲ ಬೈಲಿನಲ್ಲಿರುವ ಜನತಾ ವಾಚನಾಲಯದಲ್ಲಿ ಇದೇ ತಾ 6ರಲ್ಲು ಶ್ರೀ ಕೆ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ "ಭಾರತದಲ್ಲಿ ಈಗಿನ ಪರಿಸ್ಥಿತಿಯಲ್ಲಿ ಸರ್ವಾಧಿಕಾರದ ಅವಶ್ಯಕತೆ ಇದೆಯೋ?" ಎಂಬ ವಿಷಯದಲ್ಲಿ ಚರ್ಚಾಕೂಟ ಸಭೆಯೊಂದು ಜರಗಿತು. ಶ್ರೀಗಳಾದ ಕೆ. ಗೋವಿಂದ ಪೈ, ಕೆ. ರಾಮ ಭಟ್, ಅಚ್ಯುತ ಪೈಗಳು ಸರ್ವಾಧಿಕಾರದ ಅವಶ್ಯಕತೆಯ ಪರವಾಗಿ ಮಾತನಾಡಿದರು. ಶ್ರೀಗಳಾದ ಪ್ರಭಾಕರ ಘಾಟೆ, ಎಚ್. ಮನಮೋಹನ ಕಾಮತ್ ಮತ್ತು ನಾರಾಯಣ ಕಾಮತರು ವಿರೋಧಿಸಿ ಮಾತನಾಡಿದರು. ಶ್ರೀ ರಾಮ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ದಸ್ತಗಿರಿ ಮಂಗಳೂರು ಫಿಶರೀಸ್ ಸಹಕಾರಿ ಸಂಘದ ಅಧ್ಯಕ್ಷರಾಗಿದ್ದು ತಲೆಮರೆಸಿ ಕೊಂಡಿದ್ದ ಶ್ರೀ ನಾರಾಯಣ ಪುತ್ರನ್ ಎಂಬವರನ್ನು ಬೊಂಬಾಯಿಯಲ್ಲಿ ಮಂಗಳೂರಿನ ನೋರ್ತ್ ಪೋಲೀಸ್ ಸ್ಟೇಶನಿನ ಹೆಡ್ ಕಾನ್ಸ್ಟೇಬಲ್ ಶ್ರೀ ರಾಮಚಂದ್ರ, ಕೊನ್ಸ್ಟೇಬಲ್ ಶ್ರೀ ಶೇಕ್ ಮ್ಹೊದಿನ್ ಮತ್ತು ಶ್ರೀ ಮುಮ್ಮುಂಜಾಯರವರು ಬೊಂಬಾಯಿ ಪೋಲೀಸರ ಸಹಾಯದಿಂದ ದಸ್ತಗಿರಿ ಮಾಡಿರುತ್ತಾರೆ. ದಸ್ತಗಿರಿಗೊಳಗಾದವರು ಸಂಘದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಸಾಧಾರಣ ರೂ. 12,150ರಷ್ಟು ದುರುಪಯೋಗ ಪಡಿಸಿದ್ದಾರೆಂದು ಹೇಳಲಾಗಿದೆ.

ವಿವಾಹ ಸಮಾರಂಭಗಳು—ಮಂಗಳೂರಿನ ಶ್ರೀ ಬಿ. ಗೋವಿಂದ ಕಿಣಿಯರ ಪುತ್ರ ಶ್ರೀ ಮುಕುಂದ ಕಿಣಿಯರು ದಿ| ಎಚ್. ಕೇಶವ ಪೈಗಳ ಪುತ್ರಿ ಸೌ| ವಿಮಲೆಯನ್ನು ಕಳೆದ ತಾ 27ರಲ್ಲೂ, ಶ್ರೀ ಬಿ. ಗೋವಿಂದ ಕಿಣಿಯವರ ಪುತ್ರಿ ಶ್ರೀಮತಿ ಸಾವಿತ್ರಿಯು ದಿ| ಎಚ್. ಕೇಶವ ಪೈಗಳ ಪುತ್ರ ಶ್ರೀ ರಘುನಾಥ ಪೈಗಳನ್ನು ಕಳೆದ ತಾ 30ರಲ್ಲೂ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

ದ. ಕ. ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ— ವಾರ್ಷಿಕ ಸಭೆಯು ಜಿಲ್ಲಾ ಬೋರ್ಡಿನ ಸಭಾ ಸದನದಲ್ಲಿ ಡಾ| ಎ ಎಸ್. ಕೊಯಿಲೋರವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯದರ್ಶಿ ಹಾಗೂ ಖಜಾಂಚಿ ಡಾ| ಎಂ ಉಮೇಶರಾಯರಿಂದ ಮಂಡಿಸಲ್ಪಟ್ಟ 1952—53ರ ಆಯವ್ಯಯ ಪಟ್ಟಿ ಮಂಜೂರಾದ ಮೇಲೆ ಬಾಕಿ ವರ್ಷಕ್ಕೆ ಡಾ| ಎಂ. ವಿ. ಶೆಟ್ಟಿ (ಅಧ್ಯಕ್ಷ) ಡಾ| ಯು. ಸುಂದರರಾವ್ ಪೈ, ಮತ್ತು ಡಾ| ಕೆ. ನಾಗಪ್ಪ ಆಳ್ವ (ಉಪಾಧ್ಯಕ್ಷರು) ಡಾ| ಬಿ. ಆರ್. ಹೆಗ್ಡೆ (ಕಾರ್ಯದರ್ಶಿ ಮತ್ತು ಖಜಾಂಚಿ) ಡಾ| ವಿ. ಆರ್. ಬರ್ಡೆ, (ಜತೆಕಾರ್ಯದರ್ಶಿ) ಡಾ| ಕೆ. ಎ. ಶೆಟ್ಟಿ, ಡಾ| ಎಸ್. ಎನ್. ಆರೀಕಲ್, ಡಾ| ಎಸ್. ಗೋಪಾಲ ಕೃಷ್ಣ ರಾವ್, ಡಾ| ಎ. ಎಫ್. ಕ್ಯಾಸ್ಟಲಿನೊ, ಡಾ| ಎಂ. ಉಮೇಶ ರಾವ್, ಡಾ| (ಮಿಸ್) ಎಲ್. ಕೊಲಾಸೊ, ಡಾ| ಯು. ಪಿ. ಮಲ್ಯ, ಡಾ| ಪಿ. ಎನ್. ರಾವ್, ಡಾ| ಡಬ್ಲ್ಯು. ಜೆ. ಪಿ. ರೇಗೊ, ಡಾ| ಕೆ. ಬಿ. ಶೆಟ್ಟಿ, ಮತ್ತು ಡಾ| ಕೆ. ಆರ್. ಕಿಣಿ ಇವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು. ಡಾ| ಕೆ. ಬಾಲಕೃಷ್ಣ ಶೆಟ್ಟರು ತನ್ನ ಯುರೋಪು ಪ್ರವಾಸದ ಮತ್ತು ಇತ್ತೀಚೆಗೆ ಕೊಪನ್ ಹೇಗನಲ್ಲಿ ಜರಗಿದ ಅಂತರಾಷ್ಟ್ರೀಯ ರೇಡಿಯೋಲೋಜಿಕಲ್ ಪರಿಷತ್ತಿನ ಕುರಿತು ಮಾತನಾಡಿದರು. ಡಾ| ಬಿ. ಆರ್. ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

೩೬ನೇ ಸಾಹಿತ್ಯ ಸಮ್ಮೇಲನ, ಕುಮಟಾ "ಎಲ್ಲಾ ಭಾಷೆಗಳೂ ಅಕ್ಕ ತಂಗಿಯರಂತೆ. ಆದುದರಿಂದ ಭಾಷಾ ಭೇದವಿಲ್ಲದ ಎಲ್ಲಾ ಪತ್ರಿಕಾ ಸಂಪಾದಕರೂ, ಪತ್ರಿಕೋದ್ಯಮಿಗಳೂ, ಲೇಖಕರೂ ಈ ಸಮ್ಮೇಲನದಲ್ಲಿ ಭಾಗವಹಿಸಿ ಸಹಕರಿಸಬೇಕು. ಇಂಥಾ ಒಂದು ಸಮ್ಮೇಲನವು ಜನಸಾಮಾನ್ಯಕ್ಕೆ ಸಂಬಂಧಪಟ್ಟ ವೇದಿಕೆಯಾಗಿರುವುದರಿಂದ ಎಲ್ಲರೂ ಒಟ್ಟಿಗೆ ಒಂದೇ ದಿಕ್ಕಿನಲ್ಲಿ ಕೂಡಿ ಒಮ್ಮತದ ನಿರ್ಣಯಕ್ಕೆ ಬರಲು ಅನುಕೂಲ ದೊರಕಿಸಿ ಕೊಡುವುದು"—ಎಂದು ಕುಮಟಾದಲ್ಲಿ ತಾ ೨೬, ೨೭ ಮತ್ತು ೨೮ರಂದು ಸೇರಲಿರುವ ೩೬ನೇ ಕನ್ನಡ ಸಾಹಿತ್ಯ ಸಮ್ಮೇಲನದ ಸ್ವಾಗತಾಧ್ಯಕ್ಷರೂ, ಕಾರವಾರದ ಡಿಸ್ಟ್ರಿಕ್ಟ್ ಪ್ಲೀಡರ್‌ರೂ ಆದ ಶ್ರೀ ಭವಾನಿ ಶಂಕರ ಮಾವಿನಕುರ್ವೆಯವರು ತಿಳಿಸುತ್ತಾರೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 525/1953.

ಶಂಭು ಭಟ್ಟ —ವಾದಿ.

ಇಗ್ನೇಶಿಯಸ್ ತಾವ್ರೊ ಸಹಾ ಪ್ರತಿವಾದಿಯು.

3ನೇ ಪ್ರತಿವಾದಿ:—ಸಿಲ್ವೆಸ್ಟರ್ ತಾವ್ರೊ. ಡ್ಯಾನ್ಯೇಲ್ ತಾವ್ರೊರ ಮಗ. ಕಾರ್ಕಳ ತಾಲ್ಲೂಕು ನಿಡ್ಡೋಡಿ ಗ್ರಾಮದ ಗುರಿಕೊಪ್ಲ ಮನೆ ಎಂಬಲ್ಲಿರುವವರು. ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದ್ರೆ.

ನಿಮ್ಮ ಸಹೋದರ ಇಗ್ನೇಶಿಯಸ್ ತಾವ್ರೊರ ಅವಿಭಕ್ತ 2/15ನೆ ಪಕ್ಕದ ಆಸ್ತಿಯನ್ನು ವಾದಿಯು ಕೋರ್ಟು ಏಲಂನಲ್ಲಿ ಪಡೆದು ಪಿಸಿ ಬಗ್ಗೆ ದಾಖಲು ಮಾಡಿದ ಸದ್ರಿ ದಾವೆಯು ಇದೇ ಬರುವ ತಾ 22-12-53ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನಿಮ್ಮ ಹಾಜರಾತಿ ಬಗ್ಗೆ ಇಡೋಣಾಗಿಯದೆ. ಆದ್ದರಿಂದ ಸದ್ರಿ ತಾ 22-12-53ರಲ್ಲು ಪೂರ್ವಾಹ್ನ ಗಂಟೆ 10ಕ್ಕೆ ನೀವು ಸ್ವತ ಯಾ ವಕೀಲರ ಮುಖಾಂತ್ರ ಹಾಜರಾಗಿ ನಿಮ್ಮ ಆಕ್ಷೇಪವಿದ್ದಲ್ಲಿ ನಿಮ್ಮ ಉದಾಹರಣೆಯನ್ನು ಜಾಹೀರು ಮಾಡಿಕೊಳ್ಳ ತಕ್ಕದ್ದು. ಯಿದ್ಕೆ ತಪ್ಪಿದಲ್ಲಿ ಕೋರ್ಟಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D Venkatesh Bhat
ವಾದಿ ಕಡೆ ವಕೀಲ್

ಕಾರ್ಕಳ 6—12—1953

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

Our Bombay Stockists:-
1) V N. Shenoy, Bombay 12.
2) N. R. Kamath, General Merchant, Dahanu Road, W. Rly.

THE VIJAYA BANK, LTD., COONDAPOOR.

ದಿ. ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ, ದ. ಕ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲುಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರ ನೋಟೀಸು ಕೊಟ್ಟಾಗ್ಯೂ ಅವರು ತಮ್ಮ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಅವರು ಈಡಿಟ್ಟ ನಗಗಳನ್ನು ಇದೇ ತಾ. 18—12—53ನೇ ಶುಕ್ರವಾರ ಹಗಲು ಘಂಟೆ 2ಕ್ಕೆ ಸರಿಯಾಗಿ ಅಥವಾ ನಮಗೆ ಯುಕ್ತಕಂಡ ಯಾವದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಹುಟ್ಟಿಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿಯಿಂದ ಬೇಂಕಿನ ಐವೇಜನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸಲಾಗಿಯದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮತ್ತು ಬಡ್ಡಿ (Balance)
572 60	ಎ. ಮಹಾಬಲ ಶೆಟ್ಟಿ, ರಂಗಯ್ಯ ಶೆಟ್ರ ಅಳಿಯ, ಅಂಪಾರು ಮೂರು ಭಾಗದಲ್ಲಿರುವವರು. P.O ಶಂಕರ ನಾರಾಯಣ.	.6 9 .
285/52	ಯಸ್. ಶೇಷಪ್ಪ ಹೆಗ್ಡೆ, ಮುತ್ತಯ ಹೆಗ್ಡೆಯರ ಮಗ, ಕಂಬಳಗದ್ದೆ ಮನೆ, ಮೊಳಹಳ್ಳಿ ಗ್ರಾಮ, P. O. ಮೊಳಹಳ್ಳಿ.	240 9
373/51	— Do —	36 7 0
540/52	ಪೌಲ್ ಡಿ'ಸೋಜ ಜೂಜೆ ಸೋಜರ ಮಗ, ಹಂಗ್ಳೂರಿನಲ್ಲಿರುವವರು ಕುಂದಾಪುರ ತಾಲೂಕು P.O. ಕುಂದಾಪುರ.	22 2 0
609/52	ಪರಮೇಶ್ವರ ಮರಕ್ಕಾಲ. ಸುಬ್ಬಿ ಹೆಂಗ್ಸಿನ ಮಗ ಕದ್ರಿಕಟ್ಟೆ, ಕೋಟ, P. O. ಕೋಟ ದ. ಕ.	45 4 0
401/51	ಕೆ. ಗೋವಿಂದ ಶೆಟ್ಟಿ. ಗಣಪಯ್ಯ ಶೆಟ್ರ ಅಳಿಯ ಅವರ್ಸೆ ಮನೆ, ಅಂಪಾರ್ ಗ್ರಾಮ P. O. ಶಂಕರನಾರಾಯಣ.	337 11 0
415/51	ಮಹಾಬಲ ಹೆಗ್ಡೆ ರಾಮಣ್ಣ ಶೆಟ್ರ ಅಳಿಯ, ಇಮ್ಮಾಡಿ ಮನೆ ಯಡಾಡಿ ಮತ್ಯಾಡಿ ಗ್ರಾಮ P. O. ಸಾಬರಕಟ್ಟೆ.	71 13 0
522/51	ಜಿ. ಶೀನಪ್ಪ ಶೆಟ್ಟಿ. ಸುಬ್ಬಯ ಶೆಟ್ರ ಅಳಿಯ ಗುಡ್ಡಮಾಡಿ ಹೊಸಮನೆ, ಕೇಶಾಪುರ ಗ್ರಾಮ, P. O. ಗಂಗೊಳ್ಳಿ	70 13 0
600/51	ಜೋಕ್. ಲಕ್ಷ್ಮೀ ವೆಂಕಟ್ರ ಮಗ, ಉಪಾಧ್ಯಾಯ ಬೋರ್ಡ್ ಎಲಿಮೆಂಟರಿ ಶಾಲೆ ಹರಿಂಜ, P. O. ಕಾರ್ಕಡ.	36 3 0
701/51	ಮಂಜಯ ಶೆಟ್ಟಿ. ಪಟೇಲ್ ನಾಗಮ್ಮ ಶೆಟ್ರ ಅಳಿಯ ಬೆಟ್ಟು ಬೆಳ್ವೆ ಗ್ರಾಮ, P. O. ಹಕ್ಲಾಡಿ. ದ. ಕ.	60 0 0
720/51	ಕಪ್ಪ ಮಹಾಬಲ ಶೆಟ್ಟಿ. ನಾಗಮ್ಮ ಶೆಟ್ಟಿಯರ ಮಗ, ಅಷ್ಟೆ ಆ ಮನೆ, ನಾಡ ಗ್ರಾಮ, P. O. ಗುಡ್ಡೆಯಂಗಡಿ.	13 7 0

ಕುಂದಾಪುರ: ತಾ 5—12—53

B. J. Bhandary, B. COM.
ಏಜಂಟ್.

ಉಡುಪಿ. ಡಿ. ಮು. ಕೋರ್ಟಿನಲ್ಲಿ

O. S 568/53.

ರಾಮಪ್ಪ ಸೆಟ್ಟಿ —ವಾದಿಯು.

ಮತ್ತು

ತೇಜಪ್ಪ ಸೆಟ್ಟಿ ಕೂಡ —ಪ್ರತಿವಾದಿಯು

ಇವರೊಳಗೆ

4. ರತಿ ಶೆಟ್ಟಿ 6. ಬಾಲಕೃಷ್ಣ ಸೆಟ್ಟಿ ಅಕ್ಕು ಸೆಟ್ಟಿದಿ ಮಕ್ಕಳು. ಉಡುಪಿ ತಾಲ್ಲೂಕು ಇನ್ನಂಜೆ ಗ್ರಾಮದಲ್ಲಿರುವವರು

ಮೇಲ್ಕಂಡ ಪ್ರತಿವಾದಿರಿಗೆ ತಿಳಿಯ ಪಡಿಸುವದೇನೆಂದರೆ—

1 ಮತ್ತು 2ನೇ ಪ್ರತಿವಾದಿಯ ದಾವಾ ಆಸ್ತಿಗಳಲ್ಲಿರುವ ಅವರ ಹಕ್ಕು ವಗೈರೆ ಸದ್ರಿ ಆಸ್ತಿಗಳ ರಕ್ಷ ವ ಹುಟ್ಟುವಳಿ ಸಮೇತ ದಾವಾ ಆಸ್ತಿಯನ್ನು ವಾದಿಗೆ ಬಿಟ್ಟು ಕೊಡಬೇಕಾಗಿ ವಾದಿಯು ಮಾಡಿದ ಮೋಕ ತಾ 18-12-53ಕ್ಕೆ ಮೇಲ್ಕಂಡ ಪ್ರತಿವಾದಿರ ನೋಟೀಸು ಬಗ್ಗೆ ಇಟ್ಟಿದೆ. ಸದ್ರಿ ಪ್ರತಿವಾದಿರು ತಮ್ಮ ಉದಾಹರಣೆ ಇದ್ದರೆ ಸದ್ರಿ ದಿವ್ಸ—ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು ಎಂಬುದು ಈ ಮೂಲಕ ತಿಳಿಸಲಾಗಿಯದೆ.

K. J. Ballal
Pleader for Plaintiff.

ಉಡುಪಿ ತಾ 5-12-53

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಯಾಂಜಿ ವ್ಯಾಪಾರಾಲಯ
ರಥಬೀದಿ ಉಡುಪಿ.

ಶಾಸನಾಂಗದ ಕಾರ್ಯಭಾರ

(೧ನೇ ಪುಟದಿಂದ)

ಇಚ್ಛೆಯೇ ಕಾನೂನಿನ ಮೂಲ ಪ್ರೇರಣೆಯಾಗುವುದು ಅಪರೂಪ

ಖಾಸಗಿಯಾಗಿ ಸದಸ್ಯರಿಗೆ ಗೊತ್ತುವಳಿಯನ್ನು ಮಂಡಿಸಲು ಅವಕಾಶ ನೀಡಲಾಗುತಿದ್ದರೂ ಈ ಗೊತ್ತುವಳಿಗಳ ವಿವರವಾದ ಚರ್ಚೆಗೆ ಸಾಕಷ್ಟು ಅವಕಾಶ ದೊರೆಯುವುದೂ ಅವು ಪಾಸಾಗುವುದೂ ದುರ್ಲಭ. ಆದುದರಿಂದ ಯಾವನಾದರೊಬ್ಬ ಬುದ್ಧಿವಂತನು ತನ್ನ ಸ್ವಂತ ಇಚ್ಛೆಯಿಂದ ಒಳ್ಳೆಯದೊಂದು ಕಾಯಿದೇ ಕ್ರಮವನ್ನು ಮಂತ್ರಿ ಮಂಡಳದ ಹೊರಗೆ ಉಳಿದು ಜ್ಯಾರಿಗೆ ತರುವುದು ಕಷ್ಟಸಾಧ್ಯ

ಇಷ್ಟರ ಮಟ್ಟಿಗೆ ಶಾಸನಾಂಗ ಮಂತ್ರಿಮಂಡಳಕ್ಕೆ ತನ್ನ ಸ್ವಾತಂತ್ರ್ಯ ಬಿಟ್ಟುಕೊಟ್ಟಿದೆಯೆಂದರೂ ತಪ್ಪಲ್ಲ ಇದಕ್ಕಿಂತಲೂ ಹೆಚ್ಚು ಸರಕಾರದ ಕಾರ್ಯಾಂಗದ ಮೇಲೆ ಶಾಸನಾಂಗದ ಅವಲಂಬನೆ ದಿನದಿನಕ್ಕೂ ಹೆಚ್ಚುತ್ತಿದೆ ಈಗಿನ ಪ್ರತಿಯೊಂದು ಕಾಯಿದೆಯೂ ಕಾನೂನಿನ ಸೂಕ್ಷ್ಮಪರಿಜ್ಞಾನವುಳ್ಳ ಪರಿಣತರ ಕೈವಾಡವಿಲ್ಲದೆ ರಚಿಸಲ್ಪಡಲು ಸಾಧ್ಯವಿಲ್ಲ ಶಾಸನಾಂಗದಲ್ಲಿ ಜನತೆಯನ್ನು ಪ್ರತಿ ನಿಧೀಕರಿಸುವ ಸದಸ್ಯರೆಲ್ಲರೂ ಪ್ರತಿ ಭಾವಂತರಲ್ಲ— ಆದ ಕಾರಣ, ಕಾರ್ಯಾಂಗದ ಅಧಿಕಾರಿಗಳು ಮಾಡಿದ ಕಾನೂನಿಗೆ, ಅವರು ರಚಿಸಿದ ನಿಯಮಾವಳಿಗೆ ತಮ್ಮ ಒಪ್ಪಿಗೆ ನೀಡುವ ಮೂಲಕ ತಮ್ಮ ಸರ್ವ ಭೌಮಾಧಿಕಾರವನ್ನು ಸ್ಥಾಪಿಸುವುದರಲ್ಲಿಯೇ ಅನಿವಾರ್ಯವಾಗಿ ತೃಪ್ತಿ ಕಾಣುವರು

ಪಕ್ಷ ಪಂಗಡಗಳು ಈಗಿನ ಶಾಸನಾಂಗದಲ್ಲಿ ತಡೆದಿರುವ ಪ್ರಾಬಲ್ಯ ಅವರ ಸ್ವಾತಂತ್ರ್ಯವನ್ನು ಇನ್ನಷ್ಟು ಕಡಿಮೆ ಮಾಡಿದೆ— ಯಾವದೇ ವಿಷಯದ ಮೇಲೆ ಸರ್ವಸಮ್ಮತ ನಿರ್ಣಯವಾಗುವುದಕ್ಕೆಯೇ ಎಡೆ ಇಲ್ಲದಂತೆ ಪರಸ್ಪರ ವಿರುದ್ಧವಾದ ತತ್ವಗಳನ್ನು ಮೆಚ್ಚುವ ಜನರು ಶಾಸನಾಂಗದಲ್ಲಿ ಸೇರಿಕೊಂಡಿರುವರು. ಇಂಥದರಲ್ಲಿ ಯಾವ ಪಕ್ಷಕ್ಕೂ ನಿಶ್ಚಿತ ಬಹುಮತವಿಲ್ಲದಿದ್ದರೆ ಸರಕಾರದ ಸೂತ್ರಧಾರನಾದ ಮುಖ್ಯ ಮಂತ್ರಿಯ ಧೋರಣ ಹೊಯ್ದಾಡುವುದು. ಎಲ್ಲರನ್ನೂ ಖುಷಿ ಮಾಡಲು ಅವನು ಹೋಗಿ, ಸರಕಾರದ ಪತನವನ್ನೆ ತಂದಾನು.

ಕಾರ್ಯಾಂಗದ ಮೇಲೆ ನೈತಿಕ ವರ್ಚಸ್ಸನ್ನು ಬೀರುವ, ಸ್ವಾರ್ಥ ಪ್ರೇರಿತ ಉದ್ದೇಶಗಳಿಗೋಸ್ಕರ ತಮ್ಮ ಪ್ರಭಾವವನ್ನು ಕಾರ್ಯಾಂಗದ ಮೇಲೆ ಉಪಯೋಗಿಸುವ ಶಾಸನ ಸಭಾ ಸದಸ್ಯರು ತನ್ಮೂಲಕ ಶಾಸನಾಂಗದ ಗೌರವಕ್ಕೂ ಸ್ವಾತಂತ್ರ್ಯಕ್ಕೂ ಕುಂದು ತರುವರು. ಶಾಸನಾಂಗಕ್ಕೆ ಕಾನೂನು ಕಾಯಿದೆ ರಚಿಸುವ ಅಧಿಕಾರವಲ್ಲದೆ, ವೆಚ್ಚವನ್ನು ಮಂಜೂರು ಮಾಡುವ ವೆಚ್ಚದ ಲೆಕ್ಕಪತ್ರಗಳನ್ನು ಪರಿಶೀಲಿಸುವ, ಆಡಳಿತದ ಧೋರಣವನ್ನು ರೂಪಿಸುವ ಕಾರ್ಯಭಾರವೂ ಬಿದ್ದಿದೆ. ಆದರೆ ಇಲ್ಲಿ ಎದ್ದು ತೋರುವ ಸ್ವಾತಂತ್ರ್ಯದ ಕಲ್ಪನೆಯೆಂದರೆ, ಇದಿರಾಳಿಯ ಟೀಕೆಯೊಂದೇ.

ಹೀಗೆ ಟೀಕಿಸುವುದಕ್ಕೂ ಹೊಗಳುವುದಕ್ಕೂ ಶಾಸನಾಂಗ ತನಗ ಅಧಿಕಾರ ವಿದೆಯೆಂದು ನಿಯಮಮಾಡಿದೆ. ತನಗಿರುವ ಹಕ್ಕು ಬಾಧ್ಯತೆಗಳು ಯಾವುವೆಂಬುದನ್ನು ನಿರ್ಣಯಿಸುವುದರಿಂದ ಹಿಡಿದು ಬಂಧನದಿಂದ ಸ್ವಾತಂತ್ರ್ಯ, ವಾಕಸ್ವಾತಂತ್ರ್ಯ ತನ್ನ ನಡೆವಳಿಕೆಯ ಕುರಿತು ಸ್ವಾತಂತ್ರ್ಯ, ಅನುಚಿತ ಟೀಕೆಗೋಸ್ಕರ ದಂಡಿಸುವ ಸ್ವಾತಂತ್ರ್ಯವನ್ನು ಶಾಸನಾಂಗ ಪಡೆದಿರುತ್ತದೆ. ಶಾಸನ ಸಭಾಸದಸ್ಯನಿಗೆ ಲಂಚದ ಆಮಿಷತೋರಿಸಿ ಅಥವಾ ಅವನಿಗೆ ಬೆದರಿಕೆ ಹಾಕಿ, ತನ್ನ ಉದ್ದೇಶದಂತೆ ಅವನು ನಡೆದುಕೊಳ್ಳಬೇಕೆಂದು ಯಾರಾದರೂ ಬಯಸಿದರೆ ಅದು ಶಾಸನಾಂಗದ ಸ್ವಾತಂತ್ರ್ಯಕ್ಕೆ ವ್ಯತಿರಿಕ್ತವಾಗುತ್ತದೆ. ಮತ್ತು ಅಂಥವನನ್ನು ದಂಡಿಸಲು ಶಾಸನಾಂಗ ಅಧಿಕಾರ ಪಡೆದಿದೆ ಇದರಂತೆ ಶಾಸನಾಂಗದ ಕಾರ್ಯ ಭಾರವನ್ನು ಪತ್ರಿಕೆಗಳಲ್ಲಿ ಪ್ರಕಟಿಸುವಾಗ ಕೂಡ ಅದರಲ್ಲಿ ಸುಳ್ಳು ಬೆರಸುವ, ಅದರ ಬಣ್ಣ ಗೆಡಿಸುವ ದೋಷವಿದ್ದರೆ ದಂಡನೆ ವಿಧಿಸಲು ಶಾಸನಾಂಗಕ್ಕೆ ಹಕ್ಕುಂಟು. ಅಗತ್ಯ ಕಂಡರೆ ಶಾಸನ ಸಭೆಯ ಕಾರ್ಯಕಲಾಪಗಳ ವರದಿಯಾಗುವುದನ್ನು ಅದು ನಿರ್ಬಂಧಿಸಲೂ ಬಹುದು.

ಚುನಾವಣೆಯ ಮೂಲಕ ಶಾಸನಾಂಗಗಳು ಅಸ್ತಿತ್ವಕ್ಕೆ ಬರುವ ಪರಿಪಾಠ ವಿಟ್ಟುಕೊಂಡುದರಿಂದ ಬುದ್ಧಿವಂತರಾದ ಎಷ್ಟೊ ಮಂದಿ ಶಾಸನಾಂಗದ ಹೊರಗೆ ಉಳಿಯುವುದುಂಟು. ಅಂಥವರ ನೆರವು ದೊರೆಯುತಿದ್ದರೆ, ಶಾಸನಾಂಗ ಜನಹಿತವನ್ನೂ ದೃಷ್ಟಿಯಲ್ಲಿಟ್ಟುಕೊಂಡು ರಾಷ್ಟ್ರಕಲ್ಯಾಣವನ್ನು ನಿಸ್ವಾರ್ಥದಲ್ಲಿ ಸಾಧಿಸುವುದು ಸಾಧ್ಯ. ಇದಕ್ಕೆ ಅವಕಾಶವಿಲ್ಲದಾಗ ಕೂಡ, ಜನರು ದಕ್ಷರಾದ ಸದಸ್ಯರನ್ನೆ ಮತದಾನದಲ್ಲಿ ಆರಿಸುವುದು ಮತ್ತು ಹೀಗೆ ಚುನಾಯಿತರಾದ ಸದಸ್ಯರು ತಮ್ಮಲ್ಲಿ ಉತ್ತಮ ಯೋಗ್ಯತೆಯವರೇ ಮಂತ್ರಿಮಂಡಳದಲ್ಲಿರುವಂತೆ ನೋಡಿಕೊಳ್ಳುವುದೂ ಸೊಗಸು

ನವಯುಗ ವಾರಪತ್ರಿಕೆಗೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

ಕ್ಷಯರೋಗದ ವಿರುದ್ಧ ಯುದ್ಧ ಹೂಡಲು ಒಂದುಗೂಡಿರಿ.

ಕ್ಷಯರೋಗ ಹರಡುವುದು ಹೇಗೆಂಬುದನ್ನು ಬಲ್ಲಿರಾ?

ರೋಗ ತಗಲಿದವರೊಡನೆ ಸಂಪರ್ಕ ಬೆಳೆಸುವುದರಿಂದ ಅದು ಹಬ್ಬುತ್ತದೆ. ರೋಗವು ಹಬ್ಬದಂತೆ ತಡೆದಲ್ಲಿ ಕ್ಷಯರೋಗದ ವಿರುದ್ಧವಾದ ಯುದ್ಧದಲ್ಲಿ ಅರ್ಧದಷ್ಟು ಗೆದ್ದಂತಾಗುವುದು

ಕ್ಷಯರೋಗದ ವಿರುದ್ಧ ಹೋರಾಡಲು ಅಗತ್ಯವಿರುವ ಕಾರ್ಯಗಳಿವು:—

1. ರೋಗ ಬಲಿತವರನ್ನು ಇಡುವರೆ ಪ್ರತ್ಯೇಕ ವಾರ್ಡುಗಳ ವ್ಯವಸ್ಥೆಯನ್ನು ಏರ್ಪಡಿಸುವುದು
2. ಬಡ ರೋಗಿಗಳಿಗೆ ಸಹಾಯ ನೀಡುವರೆ ಆರೈಕೆಯ ಸಮಿತಿಗಳನ್ನು ರಚಿಸುವುದು.
3. ಗುಣಹೊಂದಿದ ಕ್ಷಯರೋಗಿಗಳ ಆರೈಕೆ— ಪುನರ್ನಿವೇಶನೆ ಮತ್ತು ಗುಣಹೊಂದಿದವರಿಗೆ ಪ್ರತ್ಯೇಕ ವಸಾಹತು ಏರ್ಪಡಿಸುವುದು.
4. ಕ್ಷಯರೋಗ ಚಿಕಿತ್ಸಾ ಗೃಹಗಳನ್ನು ವ್ಯವಸ್ಥಾಪಿಸುವುದು.
5. ಚಿಕಿತ್ಸಾಗೃಹ, ಆಸ್ಪತ್ರೆ ಮತ್ತು ಕ್ಷಯಾಸ್ಪತ್ರೆ ಮೊದಲಾದುವುಗಳಿಗೆ ಎಕ್ಸ್-ರೇ ಮೊದಲಾದ ಆಧುನಿಕ ಸಲಕರಣೆಗಳನ್ನೂ ಪ್ರಯೋಗಶಾಲೆಗಳನ್ನೂ ಏರ್ಪಡಿಸುವ ಅವಕಾಶ ಕಲ್ಪಿಸುವುದು.
6. ಕ್ಷಯರೋಗವನ್ನು ಪ್ರತಿಬಂಧಿಸುವುದಕ್ಕೆ ಮಹತ್ವ ಕೊಟ್ಟು ಆರೋಗ್ಯಪಾಲನೆಯ ಶಿಕ್ಷಣ ಕೊಡುವುದು.

ಕ್ಷಯರೋಗದ ಮೊಹರುಗಳನ್ನು ಧಾರಾಳವಾಗಿ ಕೊಂಡುಕೊಳ್ಳುವುದರಿಂದ ಕ್ಷಯ

ರೋಗ ನಿವಾರಣಾಕಾರ್ಯದಲ್ಲಿ ಆರೋಗ್ಯ ಖಾತೆಗೆ ಸಹಾಯ ಮಾಡಿದಂತಾಗುವುದು.

ಮೊಹರುಗಳು ದೊರೆಯುವ ಸ್ಥಳ: ಗೌರವ ಕಾರ್ಯದರ್ಶಿ, ಮದ್ರಾಸು ಪ್ರಾಂತಿಕ ಕ್ಷಯರೋಗ ಸಂಘ, ಮುಖ್ಯ ಹೆಲ್ತ್ ಅಫೀಸರರ ಕಚೇರಿ, ರಿಪನ್ ಬಿಲ್ಡಿಂಗ್ಸ್, ಮದ್ರಾಸು-3 ಮತ್ತು ಪ್ರಾಂತದ ಇತರ ಏಜನ್ಸಿಗಳಲ್ಲಿ.

ಕ್ಷಯರೋಗ ಮೊಹರು ಮಾರಾಟದ ನಾಲ್ಕನೆ ಚಳವಳ.

(ಭಾರತ ಕ್ಷಯರೋಗ ಸಂಘ, ನವದೆಹಲಿ—ಇವರಿಂದ ಪ್ರಚರಿತವಾದುದು)

[೨ನೇ ಪುಟದಿಂದ]

ಇವೆ. ೬೦ ಲಕ್ಷರೂಪಾಯಿಗಳ ಕಾಯ್ದಿಟ್ಟ ನಿಧಿ ಹಾಗೂ ೫೪೦ ಲಕ್ಷ ರೂಪಾಯಿಗಳ ಠೇವಣಾತಿ ಇವುಗಳ ಬಲ. ಎರಡು ವಿಮಾ ಕಂಪೆನಿಗಳು ಇದ್ದರೂ ಅವುಗಳ ವ್ಯವಹಾರ ೧೧ ಕೋಟಿ ರೂಪಾಯಿಗಳಷ್ಟು ಕಡಿಮೆ ಇದೆ. ಈ ಬೇಂಕು ಮತ್ತು ವಿಮಾ ಕಂಪೆನಿಗಳಿಂದ ಏನು ದೊಡ್ಡ ಸಹಾಯವನ್ನು ನಿರೀಕ್ಷಿಸಬಹುದು? ಮೇಲಾಗಿ ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿಗಳ ಕೊರತೆಯುಳ್ಳ ಮುಂಗಡ ಪತ್ರವನ್ನೆ ಸರಕಾರ ಮಂಡಿಸುವ ಭಯ ಕಾಣಿಸಿರುವುದರಿಂದ ಕೇಂದ್ರ ಸರಕಾರದ ಮುಖ ನೋಡುವುದೇ ಸರಕಾರೀ ಧುರೀಣರ ಕೆಲಸವಾದೀತು! ಇಂಥದರಲ್ಲಿ ಜೀವ ಕೇಳುವುದು ಹೇಗೆ? ಪಾಲು ಭಂಡವಾಳದ ಸಂಸ್ಥೆಗಳ ಚಟುವಟಿಕೆ ಆಂಧ್ರದಲ್ಲಿ ವಿಕಾಸಗೊಳ್ಳದೆ ಹೋದರೆ ಮತ್ತು ಜನರಲ್ಲಿ ಉಳಿತಾಯದ ಪ್ರವೃತ್ತಿಗೆ ಚಾಲನೆ ದೊರೆಯದಿದ್ದರೆ, ಎಲ್ಲ ಸಂಪತ್ತು ಇದ್ದರೂ ಅದನ್ನು ಉಪಯೋಗಿಸಿಕೊಳ್ಳಬಾರದ ದುರ್ದೈವ ತೆಲುಗರ ಪಾಲಿನದಾದೀತು. ಹಾಗಾಗಲು ಬಿಡಬಾರದೆಂದು ಪ್ರತ್ಯೇಕ ಹೇಳಬೇಕೆ?

ನೋಟೀಸು

ಕಾರ್ಕಳ ತಾಲೂಕು ಕಲ್ಯ ಗ್ರಾಮದ ಕುಂಟಾಡಿ ಪಾರಬೆಟ್ಟು ಎಂಬಲ್ಲಿರುವ ತುಂಗು ಸೆಟ್ಟರ ಮಗಳು ಪದ್ದಕ್ಕೆ ಸೆಟ್ಟಿಳು ಈ ಮೂಲಕ ಸರ್ವ ಜನರಿಗೆ ತಿಳಿಸುವುದೇನೆಂದರೆ:

ನಮ್ಮ ಕುಂಟಾಡಿ ಪಾರಬೆಟ್ಟು ಅವಿಭಕ್ತ ಕುಟುಂಬದಲ್ಲಿ ನನ್ನ ತಾಯಿ ತುಂಗು ಸೆಟ್ಟಿಳು ಅತೀ ಹಿರಿಯಳಾಗಿದ್ದು ಕಾನೂನು ಮೇರೆಗೆ ಅವಳು ಕುಟುಂಬದ "ಮೆನೇಜರ್"ಳಾಗಿರುವುದಾದರೂ ನಮ್ಮ ಕುಟುಂಬದಲ್ಲಿ ಈ ಮೊದಲೇ ಆಗಿರುವ ಬಾಯಿವೆರೆ ಪಿಲೆವಾರಿ ಪ್ರಕಾರ ಕುಟುಂಬದ ಆಸ್ತಿಗಳು ಪ್ರತ್ಯಪ್ರತ್ಯೇಕ ಜೀವನದ ಬಗ್ಗೆ ಬೇರೆ ಕವರುಗಳ ಸ್ವಾಧೀನ ವ ಅನುಭೋಗದಲ್ಲಿರುತ್ತವೆ. ಹೀಗಾಗಿ ಸದ್ರಿ ತುಂಗು ಸೆಟ್ಟಿಳು ವಾಸ್ತವಿಕವಾಗಿ ಸದ್ರಿ ಕುಟುಂಬದ ಮೆನೇಜರಳಾಗಿರುವುದಿಲ್ಲ. ಕುಟುಂಬದ ಆಸ್ತಿಗಳ ಖಾತೆ ಅವಳ ಹೆಸರಲ್ಲಿ ಇರುವುದಾದರೂ ಅವಳು ಅವುಗಳ ಅಡಳ್ತೆದಾರಳಲ್ಲ ಅದು ವಿನಃ ಸದ್ರಿ ನನ್ನ ತಾಯಿ ತುಂಗು ಸೆಟ್ಟಿಳು ಸುಮಾರು 80 ವರ್ಷ ಪ್ರಾಯದಾಟಿರುವ ಹಣ್ಣು ಮುದುಕಿಯಾಗಿದ್ದು ಅವಳಿಗೆ ಕೆಪ್ಪನುಪ್ಪ ತಾಗಿ ಸುಮಾರು ಒಂದು ವರ್ಷವಾಯಿತು. ನನ್ನ ಸಹೋದರಿ ಮೀನು ಸೆಟ್ಟಿಳ ಮಗ ಸಂಜೀವ ಶೆಟ್ಟಿಯು ಅವಳನ್ನು ಕುಟುಂಬದ ಪಾರಬೆಟ್ಟು ಮನೆಯಿಂದ ತನ್ನ ತವರಿನ ವಾಸ್ತವ್ಯದ ಅದ್ಯಂಡೆ ಎಂಬಲ್ಲಿಗೆ ಕರೆದುಕೊಂಡು ಹೋಗಿರುತ್ತಿದ್ದು ಅಲ್ಲದೆ ಅವಳನ್ನು ಅಲ್ಲಿಯೇ ಅವನ ಒಟ್ಟಿಗೆ ಇರಿಸಿಕೊಂಡಿರುತ್ತಾನೆ ಮತ್ತು ಅವಳು ಪಟ್ಟಾದಾರಳೆಂಬ ಕಾರಣದಿಂದ ಕುಟುಂಬದ ಆಸ್ತಿಯಾಗಿರುವ ಅದ್ಯಂಡೆ ದರಖಾಸ್ತು ಎಂಬಲ್ಲಿರುವ ಕುಟುಂಬದ ಬಾಬ್ತು ರೂಪಾಯಿ 2000/- ಮೌಲ್ಯ ಎಣಿಸಬಹುದಾದ ಎಳೆಕರೆ ಭೂಮಿ ಹಾಡಿಯನ್ನು ಅವಳ ಕೈ ನೊಪರ ಹಾಕಿಸಿ, ಕ್ರಯ ಪಡಿಸಿ ಅಕ್ರಮ ಲಭ್ಯ ಪಡೆಯುವ ಇರಾದೆಯಿಂದ ಗಿರಾಕಿಗಳನ್ನು ಹುಡುಕುತಿದ್ದಾನಾಗಿ ನಾನು ತಿಳಿಯುತ್ತೇನೆ. ನಮ್ಮ ಕುಟುಂಬಕ್ಕೆ ಎಷ್ಟನ್ನಾದರೂ ಸಾಲವೂ ಇಲ್ಲ. ಸದ್ರಿ ಹಾಡಿಯ ಮರಗಳು ಕಡಿಯುವರೆ ಪಕ್ವವಾಗಿಯೂ ಇಲ್ಲ. ಅವುಗಳನ್ನು ವಿಕ್ರಯಿಸುವರೆ ನನ್ನ ತಾಯಿ ತುಂಗು ಸೆಟ್ಟಿಗೆ ಆವಶ್ಯಕತೆಯೂ ಇಲ್ಲ. ಅವಳಿಂದ ಸದ್ರಿ ಹಾಡಿ ವ ಯಾವದೇ ಆಸ್ತಿಯನ್ನಾದರೂ ಪರಾಧೀನಪಡಿಸಿ ಯಾರಾದರೂ ರಿಕಾರ್ಡು ಮಾಡಿಕೊಂಡರೆ ಅದು ನಮ್ಮ ಕುಟುಂಬದ ಮೇಲೆ ಬಾಧಿಸುವಂತಾದ್ದಲ್ಲ ಸಿಂಧುವಾಗ ತಕ್ಕದ್ದಲ್ಲ ಎಂಬದಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸಿರುತ್ತೇನೆ. ಅವಳಿಗೆ ರಿಜಿಸ್ಟ್ರಿ ನೋಟೀಸು ಸಹ ಕೊಟ್ಟಿರುತ್ತೇನೆ.

ಈ ಎಡದು ಗೆರೆಯ ಗುರ್ತು

ಪದ್ದಕ್ಕ ಶೆಟ್ಟಿರುಜು.

ದೀಪಾವಳಿಯ ಸಂಚಿಕೆಗಳು.

ಜೀವನಪ್ರಕಾಶ—

ಸಂಪಾದಿಕೆಯರು: ಶ್ರೀಮತಿ ಪ್ರೇಮಾ ಮಲಕೋಟ್ಕರ. ಪ್ರಕಾಶಕರು: ಪ್ರಭಾ ಡಿಸ್ಟ್ರಿಬ್ಯೂಟರ್ಸ. ಟಿಳಕವಾಡಿ, ಬೆಳಗಾಂವ.

ವಿಕಾಸ—

ಸಂಪಾದಕರು: ಎಸ್. ಕೆ. ದೇಶಪಾಂಡೆ. ಪ್ರಕಾಶಕರು: ವಿಕಾಸ ಪ್ರಕಾಶನ, ಹೆಬಸೂರ ಬಿಲ್ಡಿಂಗ್, ದೇಶಪಾಂಡೆ ನಗರ ಹುಬ್ಬಳ್ಳಿ.

ಕರ್ನಾಟಕ ವೈಭವ—

ಸಂಪಾದಕರು: ನರಸಿಂಹ ಹ. ನಾಯಕ್. ಪ್ರಕಾಶಕರು: ಕರ್ನಾಟಕ ವೈಭವ ಮುದ್ರಣಾಲಯ, ವಿಜಾಪುರ.

ಕನ್ನಡಿಗ—

ಸಂಪಾದಕರು: ಮೋದಿ ಮಟ್ಟೀಶ್ವರ. ಪ್ರಕಾಶಕರು: ವಿಶ್ವಭಾರತಿ ಪ್ರಕಟಣಾಲಯ, ಹುಬ್ಬಳ್ಳಿ.

ವೀಣಾ—

ಸಂಪಾದಕರು ಎಸ್. ಎಸ್. ರಾವ್. ಪ್ರಕಾಶಕರು: ವೀಣಾ ಪ್ರಕಟಣಾಲಯ ಶಿರ್ವ. ದ. ಕ.

ಚಿತ್ರವಾಣಿ—

ಸಂಪಾದಕರು ಕುಮಾರ್, ಮಂಗಳೂರ್ 3.

ಜೀವನ ಪ್ರಕಾಶನದಲ್ಲಿ ಮನೋರಂಜನೆಯ ಉದ್ದೇಶವುಳ್ಳ ಸೊಗಸಾದ ಬರೆಹಗಳ ಎಡೆಯಲ್ಲಿ ಆರ್ಚಕ ವೆಂಕಟೇಶರು ಬರೆದ 'ಕನ್ನಡ ರಂಗಭೂಮಿಯ ಇಂದಿನ ಸ್ಥಿತಿ" ಎಂಬ ಉತ್ತಮ ಲೇಖನವನ್ನು ಕಾಣುತ್ತೇವೆ. ಆರೋಗ್ಯ ವಿಭಾಗದಲ್ಲಿ ಇನ್‌ಫ್ಲುಯೆಂಜಾ, ಮಕ್ಕಳ ಆರೈಕೆ ಮತ್ತು ಕ್ಷಯರೋಗಗಳ ಕುರಿತು ಲೇಖನಗಳಿವೆ "ಕೃಷಿಕೃಷ್ಣ"ರು ಚಳಿಗಾಲದಲ್ಲಿಯ ತೋಟದ ಕುರಿತು ಮಾಹಿತಿ ಕೊಡುವ ಲೇಖನವನ್ನು ಒದಗಿಸಿದ್ದಾರೆ,

ವಿಕಾಸದಲ್ಲಿ ಎದ್ದು ಕಾಣುವುದು ಸಾಮಾಜಿಕ ಕರ್ತೃತ್ವ ಶಕ್ತಿಯ ಹೋಮ ಮಾಡುವ ಇಂದಿನ ಚಲಚ್ಚಿತ್ರಗಳ ಕುರಿತು ಪ್ರಖ್ಯಾತ ದಿಗ್ದರ್ಶಕ ಶ್ರೀ ದೇವಕೀಬೋಸರು ನೀಡಿದ ಎಚ್ಚರಿಕೆಯ ಲೇಖನ; ಇದು ಅನುವಾದಿತವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಸ್ವಾಭಿಕ ಬರೆಹಗಳಲ್ಲಿ ಬಿ. ಎಚ್. ಶ್ರೀಧರರ ಏಕಾಂಕ ರೂಪಕ "ಮಾಸ್ತರಿಕೆಯ ಯಜ್ಞ" ಚೆನ್ನಾಗಿದೆ. ಕೊನೆಯಲ್ಲಿ ವರ್ಷದ ರಾಶಿ ಭವಿಷ್ಯವು ಕೊಡಲ್ಪಟ್ಟಿದೆ.

ಕರ್ನಾಟಕ ವೈಭವದಲ್ಲಿ ಕುಲಕರಣಿ ನಾರಾಯಣರಾಯರ ಸಂದರ್ಶನದ ಕಾಲದಲ್ಲಿ ನಡೆದ ಚರ್ಚೆಯ ಮೇಲಿಂದ ರೂಪುಗೊಂಡ "ಮನೆಮನೆಗೆ ವಸ್ತು ಸಂಗ್ರಹಾಲಯ" ವೆಂಬ ಬರೆಹ ಒಳ್ಳೆಯದಿದೆ. ಅ. ಹ. ದೇಸಾಯರ "ಪೂರ್ವ ಪಶ್ಚಿಮ ಮಿಲನ" ವೆಂಬ ಲೇಖನವೂ ಚೆನ್ನಾಗಿದೆ. ಡಂಬಳ ಕಾಳಿಂಗ ದಾಸರು ನಮ್ಮ ನಾಡಿನ ಹಬ್ಬಗಳ ಹಿನ್ನೆಲೆಯ ಕುರಿತು ಅಭ್ಯಾಸ ಪೂರ್ಣ ಲೇಖ ಬರೆದಿದ್ದರೂ ಸಂಪಾದಕರು ಅದನ್ನು ಅಪೂರ್ಣವಾಗಿ ಪ್ರಕಟಿಸಿರುವುದರ ಔಚಿತ್ಯ ತಿಳಿಯುವದಿಲ್ಲ. ವರ್ಷ ಭವಿಷ್ಯ ಇದರಲ್ಲಿಯೂ ಕೊಡಲ್ಪಟ್ಟಿದೆ.

ಕನ್ನಡಿಗದಲ್ಲಿ ವಿಶ್ವಭಾರತಿ ಪ್ರಕಟಣಾಲಯದವರು ಏರ್ಪಡಿಸಿದ ಕನ್ನಡ ಸಣ್ಣ ಕತೆಗಳ ಸ್ಪರ್ಧೆಯಲ್ಲಿ ಜಯಗಳಿಸಿದ ಮೂರು ಕತೆಗಳೂ ಈ ಸ್ಪರ್ಧೆಯಲ್ಲಿ ಪರೀಕ್ಷಕರಾಗಿ ಕೆಲಸ ಮಾಡಿದ ವಿ. ಕೃ. ಗೋಕಾಕ, ಸ. ಸ. ಮಾಳವಾಡ, ಡಿ ಎಸ್. ಕರ್ಕಿ ಮತ್ತು ಪಾಟೀಲ ಪುಟ್ಟಪ್ಪರ ವಿಮರ್ಶಾತ್ಮಕ ವರದಿಯೂ ಪ್ರಕಟಗೊಂಡಿವೆ. ಬಹುಮಾನಿತ ಕತೆಗಳಲ್ಲಿ "ರಾಜ" ಎಂಬುದನ್ನು ಶ್ರೀಮತಿ ತ್ರಿವೇಣಿಯವರೂ, "ಗೌರಿಯ ಮದುವೆ"ಯನ್ನು ವೇಣುಕೇಸರಿ ಹಿರೇಮಠರೂ, "ಮುರಳಿಯ ಒಲವು" ಎಂಬುದನ್ನು ಕೆ. ಎಸ್. ಶೇಷಗಿರಿ ರಾಯರೂ ಬರೆದಿರುವರು.

ವೀಣಾ ದೀಪಾವಳಿ ಸಂಚಿಕೆಯು ವಿಶೇಷ ಲೇಖನಗಳಿಂದ ಹೆಚ್ಚು ಪುಟಗಳಿಂದ ಪ್ರಕಟಗೊಂಡಿದೆ. ಆದರೆ ಚಿತ್ರವಾಣಿಯ ಸಂಪಾದಕರು "ದೀಪಾವಳಿಯ ಸಂಚಿಕೆ" ಎಂಬ ಹೆಸರಿನ ಮರ್ಯಾದೆಗೆ ಹೋಲಿಸಿದ ಕೆಲಸ ಮಾಡಿಲ್ಲವೆಂದು ವಿಷಾದದಿಂದ ಸೂಚಿಸ ಬೇಕಾಗುವುದು.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **10,87,000**

ಜುಮ್ಲಾ ವಹಿವಾಟು .... ,, **60,50,000**

ಕಾಯಂ ಠೇವಣಾತಿಗಳು ! ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು.

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮ... ...ಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ ಸುಂದರರಾಮ ಶೆಟ್ಟಿ
ಬಿ. ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ

ಇವರ
ನವಜೀವಾಮೃ
ಎಂಬ
ಸೂತಿಕಾರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣೈಸಿ ತಯಾರಿಸಿದ ಉತ್ಪತ್ತಿನಿರೋಧಕವಾದ ಧುರಧ್ರುವರಸಾಯನ.



ಹೆಚ್ಚಿನ ಮಾಹಿತಿಗೆ-- ಡಾ! ಯಂ ಸಿ. ಶಾಸ್ತ್ರಿ, ಯಲ್. ಐ. ಎಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ| ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O.S. 529/53

ವಾದಿರು ಮಂಜ ಪೂಜಾರಿ ಕೂಡಾ
ಪ್ರತಿವಾದಿರು ಚಿಕ್ಕಿ ಪೂಜಾರ್ತಿ ಕೂಡಾ

4ನೇ ಪ್ರತಿವಾದಿ ಕೊರಗ, ಚಿಕ್ಕಿ ಪೂಜಾರ್ತಿ ಮಗ. 11ನೇ ಪ್ರತಿವಾದಿಳು ಸದಿಯಮ್ಮ ಹೆಂಗಸು. ವಾರಮಗಳು. ಕುಂದಾಪುರ ತಾಲ್ಲೂಕು ವಕ್ವಾಡಿ ಗ್ರಾಮದಲ್ಲಿರುವವರು.

ಇವರೀಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಮೇಲ್ಕಂಡ ವಾದಿರು ದಾವಾ ಆಸ್ತಿಗಳ ಸ್ವಾಧೀನತೆ, ಮಟ್ಟಳ್ಳಿ ವಗೈರೆ ವಿಸ್ತ್ರೃತಿಗಳ ಬಗ್ಗೆ ಜರಗಿಸಿದ ಮೇಲಣ ದಾವೆಯು ತಾ 11-12-1953 ಇಟ್ಟಿರುತ್ತದೆ. ಆ ಕುರಿತು ನಿಮ್ಮ ಉಭಾಪರಣೆ ಇದ್ದಲ್ಲಿ ಸದ್ರಿ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗದೆ ಇದ್ದಲ್ಲಿ ಸದ್ರಿ ದಾವೆಯು ನಿಮ್ಮ ಉಜುರ್ ಶಿವ್ಯಾ ತೀರ್ಮಾನಿಸಲ್ಪಡುತ್ತದೆಂಬ ಸಂಗ್ತಿಯನ್ನು ಈ ಮೂಲಕ ತಿಳಿಸೋಣಾಗಿರುವದೆ.

(By order of the Court)
(sd) A. N. Rao.
Advocate for Plaintiffs
Kundapur 1 12 53

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. 33 1953

ದುಕ್ಕ್ಯಾಬಾಯಿ— ಅರ್ಜಿದಾರಳು

1. ರಮಾನಾಥ ಮ್ಯನರ್ ಬಗ್ಗೆ ಗಾರ್ಡಿಯನ 1ನೇ ಎದ್ರಿ
2. ವಾಮನ ಪ್ರಭು.
3. ನರಸಿಂಹ ಪ್ರಭು.
4. ಶೇಸಪ್ಪ ಪ್ರಭು.
5. ದೇವೇಂದ್ರ ಪ್ರಭು. ಎದ್ರಿರು

ಸದ್ರಿ ಎದ್ರಿರಿಗೆ ವ ಬಿತರಸಮಸ್ತರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ಮಂಗಳೂರು ತಾಲ್ಲೂಕು ಅತಿಕಾರಬೆಟ್ಟು ಗ್ರಾಮದ ಮುಕ್ಕರ ಮನೆ ಬಾಗಿರತಿ ಹೆಂಗ್ಸಿನ ಮಗ ತಾ 13-6 1918ರಲ್ಲು ಮೃತಪಟ್ಟ ಶೀನ ಪ್ರಭುವಿಗೆ ಬರಬೇಕಾಗಿದ್ದ ಅರ್ಜಿಯಲ್ಲಿ ಕಾಣ್ಸದ ಸಾಲಗಳ ಅರೆವಾಸಿ ವಸೂಲು ಮಾಡುವರೆ ತಾನು ಹಕ್ಕುದಾರಳೆಂದು Indian succession Act ನ sec 372ರ ಮೇರೆಗೆ ಸದ್ರಿ ಸೊತ್ತುಗಳ ½ ಅಂಶದ ಮೈಲುಬಗ್ಗೆ ತಂನ ಹೆಸರಲ್ಲಿ ವಾರಿಸು ಸರ್ಟಿ ಫಿಕೇಟು ಅಪೇಕ್ಷಿಸಿ ಮೃತನ ವಿಧವೆ ಯಾಗಿರುವ ಅರ್ಜಿದಾರಳು ಅರ್ಜಿ ಕೊಟ್ಟಿರುವುದರಿಂದ ಸದ್ರಿ ಅರ್ಜಿಯ ಕುರಿತು ಆಕ್ಷೇಪಿಸುವವರು — 19 12-1953 ನೇ ಹಗಲು 11... ಮೇಲ್ಕಾಣ್ಸಿದ ಕೋರ್ಟಿನಮುಂದೆ ಹಾಜರಾಗಿ ಅವರವರಿಗೆ ಇರುವ ಆಕ್ಷೇಪಣೆಗಳನ್ನು ತಿಳಿಯಪಡಿಸಿ ರುಜು ಪಡಿಸಿ ಕೊಳ್ಳತಕ್ಕದ್ದು. ತಪ್ಪಿದರೆ. ಸದ್ರಿ ಅರ್ಜಿಯು ಅವರ ಉಜ್ರಾಶಿವ್ಯಾ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗುತ್ತದೆ—

K. M. Hegde
ಅರ್ಜಿದಾರಳ ವಕೀಲ್

ತಾ 2-12-53 ಕಾರ್ಕಳ—

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಜನಮತ

ವೇದಾಂತ ಮತ್ತು ವಿಜ್ಞಾನಗಳ ವಿಮರ್ಶೆ

ಉಡುಪಿಯ ಪ್ರತಿಕೆಯೊಂದರಲ್ಲಿ ನಿವೃತ್ತ ಜ್ಯೋತಿಷ ಪ್ರಾಧ್ಯಾಪಕ ಆಚಾರ್ಯರೊಬ್ಬರು ಪ್ರಕಟಿಸಿರುವ ವೇದಾಂತ ಮತ್ತು ವಿಜ್ಞಾನದ ಧರ್ಮದ ವಿಮರ್ಶೆಯು—

ಹಿಂದೂ ಧರ್ಮಕ್ಕೆ ಮುಖ್ಯವಾದ ವೇದಾಂತ ವಿಜ್ಞಾನಗಳೆಂಬ ಉತ್ತಮ ಶಬ್ದಗಳ ಮೇಲ್ಪಂಕ್ತಿಯನ್ನು ಓದಿ ನೋಡಿದರೆ "ತೋಟ ಶೃಂಗಾರ ಒಳಗೆ ಗೋಳಿಸೊಪ್ಪು" ಎಂಬ ಗಾದೆಯು ನೆನಪಾಗುತ್ತದೆ.

ಆಚಾರ್ಯರು ಈಗಿನ ಕಾಲದಲ್ಲಿ ಕಷ್ಟಕ್ಕೀಡಾಗಿರುವ ಹಿಂದೂ ಧರ್ಮ, ದೇವತಾ ಧರ್ಮಛತ್ರ, ಗೋಸಂರಕ್ಷಣೆ, ಪುರಾಣ, ಧರ್ಮಶಾಸ್ತ್ರ ಅಲ್ಲದೆ ಅನೇಕ ಲೋಕನ್ಯಾಯ, ಹಿಂದೂಕೋಡು, ಮದುವೆ ಬಿಲ್ಲು, ಮಕ್ಕಳ ವಿದ್ಯಾಭ್ಯಾಸ, ಮತದೇವಾಲಯಗಳ ವಿನಹ್ತು ಮುಂತಾದ ಕಷ್ಟ ವಿಚಾರಗಳನ್ನೆಲ್ಲಾ ಬಿಟ್ಟು ಬಿಟ್ಟು, ಕೇವಲ ಹೆಣ್ಣು ಹೆಂಗಸರು ತಿಂಗಳು ತಿಂಗಳು ಮುಟ್ಟಾದರೆ ಗೃಹಕೃತ್ಯಾದಿ ಎಲ್ಲಾ ಕಾರ್ಯಗಳನ್ನು ಮಾಡಿಕೊಂಡು ದುರಾಚಾರಿಗಳಾಗಿರುತ್ತಾರೆ ಎಂದು ಹೇಳುತ್ತಾ ಲೋಕದ ಎಲ್ಲಾ ಕುಟುಂಬ ಸ್ತ್ರೀಯರ ಮಾನಭಂಗಮಾಡುವ ಅಭಿಲಾಷೆಯನ್ನು ಬರೆದಿರುವರು.

ಯಾವ ಜಾತಿಯರ ಮನೆಯಲ್ಲಿ ನೋಡಿದರೂ ಹೆಂಗುಸರು ತಿಂಗಳಿಗೊಮ್ಮೆ ಮುಟ್ಟಾದರೆ 3–4 ದಿನಗಳ ವರೆಗೆ ತನ್ನ ಗಂಡ, ಮಕ್ಕಳುಮರಿಗಳು ಉಪವಾಸವಿದ್ದರೂ ಕೂಡಾ ಮನೆಯಲ್ಲಿ ಯಾವ ಕೆಲಸವನ್ನೂ ಮಾಡದೆ, (ಬಾವಿ ಕೂಡಾ ಮುಟ್ಟುವುದಿಲ್ಲ) ಸುಮ್ಮನೆ ಮನೆಯ ಮೂಲೆಯಲ್ಲಿ ಕೂತುಕೊಂಡಿರುವುದು ಸಾಮಾನ್ಯವಾಗಿ ಎಲ್ಲಾ ಮನುಷ್ಯಜಾತಿಯ ಚಿಕ್ಕ ಮಕ್ಕಳಿಗೂ ಕೂಡಾ ತಿಳಿದಿರುವ ವಿಷಯ ಇನ್ನೂ ಬಿಡಿಸಿ ಬರಿಯಬೇಕಾಗಿಲ್ಲ. ಪ್ರಾಯಶಃ ಇವರಲ್ಲಿ ಇಲ್ಲವ್ರೋ ಏನೋ?

ಮೊದಲು ಬ್ರಾಹ್ಮಣರಲ್ಲಿ ಹುಡುಗಿಯರಿಗೆ 8 ವರ್ಷಗಳಲ್ಲಿ ಮದುವೆಯಾಗುವುದು ಶಾಸ್ತ್ರವಂತೆ. ಈಗ ಉಡುಪಿಯಲ್ಲಿ ನೋಡಿದರೆ 16 ವರ್ಷ ಆದರೂ ಮದುವೆ ವರ್ತಮಾನವೇ ಇಲ್ಲ. ಹಾಗೆಂದ ಬಳಿಕ, ಈಗ ಎಲ್ಲಿ? ಯಾರಿಗೆ?–ಹೇಗೆ, ನೆ? ಈ ಆಚಾರಿಯರು ತಮ್ಮ ಕಾಲಬುಡದಲ್ಲಿ ದೊಡ್ಡ ಪಾದೆನಲ್ಲಿನಂತೆ ಇರುವ ಅನಾಚಾರಗಳ ಗಂಟನ್ನು ಕನ್ನಾರೆ ಕಂಡರೂ ಕಾಣದವರಂತೆ (ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ) ನಟಿಸಿಕೊಂಡು ಎಲ್ಲಾ ಹೆಂಗಸರು ದುರಾಚಾರಿಗಳೆಂತ ಬರಿಯುವದು ನ್ಯಾಯವೇ?

ಇವರ ಅನೇಕ ವೈದಿಕ ಧರ್ಮ ವಿರೋಧವಾದ ನ್ಯಾಯಗಳು ನಾಶವಾಗುವ ಕಾಲದಲ್ಲಿ ಈ ವೇದಾಂತ ವಿಜ್ಞಾನಿಗಳಾದ ಈ ಆಚಾರ್ಯರು ಪ್ರಪಂಚದಲ್ಲಿ ಇರಲಿಲ್ಲವೆ? ಯಾಕೆ? ಬಾಯಿ ಮುಚ್ಚಿಕೊಂಡಿದ್ದರು.? ನೋಡುವವರೇ ಗ್ರಹಿಸಲಿ.

51ನೇ ಕಲಿಶತದಲ್ಲಿ ಎಲ್ಲಾ ಹೆಂಗುಸರ ಮುಟ್ಟಾಗುವಿಕೆಯ ಅನಾಚಾರವು ಮಾತ್ರ ವೇದಾಂತ ಪುಸ್ತಕದಲ್ಲಿರುವುದೇ? ಇತರ ಉಪನಯನ–ಮದುವೆ; ಬಟಾಟೆ, ನೀರುಳ್ಳಿ ಇವುಗಳ ವಿಚಾರಗಳಿಲ್ಲವೇ?

ಇವರ ಪ್ರಾಧ್ಯಾಪಕವು, ಜೋತಿಷವು; ಇವರು ಹೇಳುವುದು ವೇದಾಂತ ವಿಜ್ಞಾನ; ಬರಿಯುವುದು ಹೆಂಗುಸರ ದೋಷ. ಇವರ ಉದ್ಯೋಗ–ನಿರುದ್ಯೋಗ. ವೇದಾಂತವೆಂದರೆ ಹೆಂಗುಸರ ಮುಟ್ಟು; ವಿಜ್ಞಾನವೆಂದರೆ ಪಟ್ಟಣಗರ ಮನೆಯ ಅಟ್ಟದ ಮೇಲಿರುವ ಪೈಪಿನ ನೀರು. ಇಷ್ಟನ್ನು ಇವರ ಲೇಖನದಿಂದ ತಿಳಿದಂತಾಯ್ತು. ಇದೇ "ವೇದಾಂತ ವಿಜ್ಞಾನ ಸುನಿಶ್ಚಿತಾರ್ಥ"!!

ಸಂಪಾದಕರು ಇಂಥಾ ಲೇಖನವನ್ನು ಪ್ರಕಟಿಸುವುದು ತುಂಬಾ ಶೋಚನೀಯ. ಇದಕ್ಕಿಂತ ರಾಮಾಯಣ ಭಾರತಾದಿ ಪುರಾಣ ಕಥೆಗಳನ್ನಾದರೂ ಬರೆದರೆ ಎಲ್ಲರಿಗೂ ಪುಣ್ಯ ಬರುತಿತ್ತು.

ಈ ರೀತಿಯ ಮಹಾ ವಿದ್ವಾಂಸರಿಗೆಲ್ಲಾ ಆಶ್ರಯದಾದಿಗಳನ್ನೀಯುವ ಉಡುಪಿ ಮಠಾಧಿಪ ಸಮ್ಮೇಳನಾಧಿಕಾರಿಗಳಾದ ಧರ್ಮ ಪೀಠಸ್ಥರಿಗೆಲ್ಲಾ ಈ ಪ್ರಸಂಗವು ಕೇಳಲು ಆನಂದವಾಗಿರುತ್ತದಲ್ಲೇ' ಅಗಲಿ–ನಿವೃತ್ತ ಶಬ್ದವು ಜ್ಯೋತಿಷಕ್ಕೋ; ಪ್ರಾಧ್ಯಾಪಕಕ್ಕೋ ತಿಳಿಯದು.

S. ರುಕ್ಮಿಣಿ ಬಾಯಿ B. A; B.o. L.
(Madras)

ವಾರದ ಒಳಿತು ಕೆಡುಕುಗಳು

ತಾ. ೧೦—೧೨—೫೩ರಿಂದ ತಾ. ೧೬—೧೨—೫೩ರ ವರೆಗೆ.

ಮೇಷ—ಇಂದು ನಿಮ್ಮ ಆರ್ಥಿಕ ವಿಭಾಗದಲ್ಲಿ ಬಹುಮಟ್ಟಿಗೆ ಸುಧಾರಣೆಯಾಗಲಿದೆ. ಮುಂಚಿನ ಹಣದ ಬಿಕ್ಕಟ್ಟು ಇಂದಿರಲಾರದು. ಆದರೆ ಸಂಸಾರದಲ್ಲಿ ಕಾಹಿಲೆ ಕಸಾಲೆಗಳು ಹೆಚ್ಚುವವು. ಅರ್ಧಾಂಗಿಯೊಡನೆ ನಿತ್ಯ ಕಲಹವಾದೀತು. ವ್ಯಾಪಾರಿಗಳಿಗೂ ನಿರ್ದ್ಯೋಗ ಜೀವಿಗಳಿಗೂ ದಿನಯಾಪನೆಯು ಸುಖಮಯವಾಗುವದು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ತಾ. 14, 15, ಬಿಟ್ಟು ಉಳಿದ ದಿನಗಳು ಉತ್ತಮವಿರುವವು.

ವೃಷಭ—ಪರರ ಹಂಗಿಗೆಬುವ ಕರ್ಣನಾನಲ್ಲ ಎಂಬಂತೆ ನೀವು ಪರರ ಅಪ್ರಿಯ ಸಹಕಾರಗಳಂ ಬಯಸದೆ ಕಾರ್ಯರಂಗದಲ್ಲಿ ಮುನ್ನುಗ್ಗುವಿರಿ. ಧೈರ್ಯಸ್ಥೈರ್ಯಗಳೂ ಸಾಕಷ್ಟಿವೆ. ಆದರೆ ದೈವವು ಸ್ವಲ್ಪ ಪ್ರತಿಕೂಲವಿರುವುದರಿಂದ ನಿಮ್ಮ ಪೌರುಷಕ್ಕೆ ತಕ್ಕ ಬೆಲೆ ಸಿಗಲಾರದು. ಎಂತಹ ಶತ್ರುಗಳಿಗೂ ನೀವು ಅಂಜಲಾರಿರಿ. ದಿನಯಾಪನೆಯೇನೋ ಸುಖವಾಗಿ ಸಾಗೀತು. ಆದರೆ ಜನನಿಂದೆ ನಿಷ್ಠುರ ಕಲಹಗಳು ಬೇರೆ ತಪ್ಪದಲ್ಲ. ಅಂತೂ ತಾ. 12, 13, 14, 15, ಈ ದಿನಗಳಲ್ಲಿ ವಿಜಯ ಲಾಭ ಸುಖಗಳನ್ನು ಕಾಣುವಿರಿ.

ಮಿಥುನ—ಇಂದಿನ ನಿಮ್ಮ ಅದೃಷ್ಟವು ಬಹಳ ದುರ್ಬಲವಾಗಿದೆ. ಆದ್ದರಿಂದ ನಿಮ್ಮ ಸಂಕಲ್ಪಗಳು ಕಾರ್ಯರೂಪಕ್ಕೆ ಬರದೇ ಉಳಿವವು. ಒಂದೆಡೆ ಗೃಹತ್ರಾಸತ್ರಯಗಳು, ಇಷ್ಟರೊಂದಿಗೆ ಶತ್ರುಜನರ ಕಾಟ, ಮಾತ್ರವಲ್ಲ ಹಣದ ಅಡಚಣೆ ಇವುಗಳಿಂದಾಗಿ ನಿಮ್ಮ ಮನಕ್ಕೆ ಸ್ವಲ್ಪವೂ ಶಾಂತಿಯಿರದು. ಅನಿರೀಕ್ಷಿತವಾಗಿ ಪ್ರಾಪ್ತವಾಗತಕ್ಕ ಪರ್ಯಟನದಿಂದಾಗಿ ಕಷ್ಟನಷ್ಟಗಳನ್ನು ಅನುಭವಿಸುವಿರಿ. ನಿರ್ದ್ಯೋಗ ಜೀವಿಗಳಿಗೆ ಹೆಚ್ಚಿನ ಕಷ್ಟ ಕಾಣದು. ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮವೆನಿಸುವವು.

ಕರ್ಕಟ—ಅಲ್ಪರ ಸಂಘಅಭಿಮಾನಭಂಗವೆಂಬಂತೆ ಕುಜನರ ಸಹವಾಸದಿಂದಾಗಿ ಸ್ಥಾನಮಾನಗಳನ್ನು ಕಳಕೊಳ್ಳುವದಲ್ಲದೆ ಜನನಿಂದೆಗೂ ಪಾತ್ರರಾಗುವಿರಿ. ಮನೆಯಲ್ಲಿ ತಂದೆ ಮಕ್ಕಳೊಳು ಗಂಡ ಹೆಂಡಿರೊಳು ನಿತ್ಯ ಕಲಹವಾದೀತು. ಚಂಚಲವಾದ ಮನಸ್ಸು ಕುಮಾರ್ಗದತ್ತ ನಿಮ್ಮನ್ನು ಸೆಳೆಯಲಿದೆ. ಆದರೆ ಸುರಗುರುಗಳು ಏಕಾದಶದಲ್ಲಿರುವುದರಿಂದ ನಿಮ್ಮ ಆರ್ಥಿಕ ಸ್ಥಾನಕ್ಕೆ ಧಕ್ಕೆ ತಗಲಲಾರದು. ತಾ. 10, 11, 16, ಈ ದಿನಗಳಲ್ಲಿ ನಿಮ್ಮ ಆಶಾಕಾಂಕ್ಷೆಗಳು ಈಡೇರಲಿವೆ.

ಸಿಂಹ—ಎಂತಹ ಮಹತ್ಕಾರ್ಯವೇ ಇರಲಿ ನಿಮಗಿಂದದು ತೃಣ ಸಮಾನವೆನಿಸುವದು. ನಿಮ್ಮ ಪ್ರತಿಯೊಂದು ಕಾರ್ಯಗಳು ನಿರ್ವಿಘ್ನದಿಂದ ನೆರವೇರುವವು. ನಿಮ್ಮ ನಿರೀಕ್ಷೆಗಿಂತಲೂ ಅಧಿಕವಾದ ಫಲವನ್ನು ಹೊಂದಲಿರುವಿರಿ. ನಷ್ಟವಾಗಿದ್ದ ವಸ್ತುವಡವೆಗಳೂ ಇಂದು ಪ್ರಾಪ್ತವಾಗುವವು. ಆದರೆ ಕೆಲವೊಮ್ಮೆ ಕೈಗೆ ಬಂದ ತುತ್ತು ಬಾಯಿಗಿಲ್ಲ ಎಂಬಂತಹ ಪರಿಸ್ಥಿತಿಯೊದಗಲಿದೆ. ಸೇವಕ ವರ್ಗದವರು ಸುಖದಿಂದ ಕಾಲಕಳೆವರು. ವಾರಾದಿಯ 4 ದಿನಗಳು ಅತೀವ ಉತ್ತಮವಾಗಿವೆ.

ಕನ್ಯಾ—ನಿಮ್ಮ ಧನಭಾಗ್ಯಸನಾಪರುಕ್ರಸು ಅನುಕೂಲವಾಗಿದ್ದು ಭಾಗ್ಯದಲ್ಲಿ ಸುಖಪತಿಗಳಾದ ಬೃಹಸ್ಪತ್ಯಾಚಾರ್ಯರಿರುವುದರಿಂದ ನಿಮಗೀವಾರದಲ್ಲಿ ಹಣದ ವಿಚಾರವಾಗಿ ಏನೊಂದೂ ಚಿಂತೆಯಿರದು. ಕಫ ಪಿತ್ತ ಪ್ರಕೋಪದಿಂದಾಗಿ ಆರೋಗ್ಯಕ್ಕೆ ಹಾನಿಯಿದೆ. ಗುರುಹಿರಿಯರ ಮತ್ತು ಸನ್ಮಿತ್ರರ ಸಹಕಾರವು ಚೆನ್ನಾಗಿರುವುದರಿಂದ ಹೆಚ್ಚಿನ ಕಾರ್ಯಗಳು ನಿಮ್ಮಂತೆಯೇ ಆಗಲಿವೆ. ತಾ. 12, 13, 14, 15, ಈ ದಿನಗಳಲ್ಲಿ ಸ್ಥಾನಮಾನ ಸುಖಜಯಗಳನ್ನು ಸಂಪಾದಿಸುವಿರಿ.

ತುಲಾ—ನಿಮ್ಮ ಜನ್ಮದಲ್ಲಿ ಶನ್ಯಂಗಾರಕರೂ ಅಷ್ಟಮದಲ್ಲಿ ಗುರುವೂ ಇರುವುದರಿಂದ ಆಕಸ್ಮಿಕ ಪ್ರವಾಸ ಅನಾರೋಗ್ಯ ಮತ್ತು ವಿತ್ತಕ್ಷಯಾದಿಗಳು ಸಂಭವಿಸಲಿವೆ. ಇದರಿಂದಾಗಿ ನಿಮ್ಮ ಚಿತ್ತವು ಅತೀವ ಚಂಚಲವಾಗುವದು. ಪ್ರತಿಯೊಂದು ಕಾರ್ಯದಲ್ಲೂ ಲಾಭಕ್ಕಿಂತ ವ್ಯಯವೇ ಅಧಿಕವಾಗುವದು. ಸಮಾಜದಲ್ಲಿ ಕೆಟ್ಟ ಮಾತುಗಳನ್ನು ಕೇಳುವಿರಿ. ಕೆಲವೊಮ್ಮೆ ಶತ್ರುಜನರಿಗೂ ತಲೆ ಬಾಗಬೇಕಾಗಿ ಬರುವದು. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಬಯಕೆಯು ಕೆಲವೊಂದು ನೆರವೇರೀತು.

ವೃಶ್ಚಿಕ—ಧನಪತಿಯಾದ ಗುರುವು ನೇರ ದೃಷ್ಟಿಯಿಂದ ನಿಮ್ಮನ್ನು ನೋಡುತ್ತಿರುವನು. ಆದಕಾರಣ ಇತರ ಗ್ರಹ ಬಲವು ನಿಮಗಿಲ್ಲವಾದರೂ ನೀವು ಅಸ್ಪೋಂದು ಚಿಂತಿಸಬೇಕಾಗಿಲ್ಲ. ನಿಮ್ಮ ಹೆಚ್ಚಿನ ಕಾರ್ಯಕಲಾಪಗಳು ಶತ್ರುಜನರ ಕಾಟದಿಂದಾಗಿ ಕೊನೆ ಹೊಂದಲಾರವು. ದೇಹದಾರೋಗ್ಯವೂ ಕೆಡಲಿದೆ. ಭೂವ್ಯವಹಾರ ಸಂಬಂಧ ನಷ್ಟ ಕಷ್ಟಗಳೊದಗುವವು. ಆದರೆ ಸಮಾಜದಲ್ಲಿ ನಿಮಗೆ ಸ್ಥಾನಮಾನಗಳು ಲಭಿಸಲಿವೆ. ಗುರುಹಿರಿಯರು ಮತ್ತು ಸನ್ಮಿತ್ರರ ಸಹಕಾರದಿಂದಾಗಿ ತಾ. 10, 11, 16, ಈ ದಿನಗಳನ್ನು ಸುಖದಿಂದ ಕಳೆವಿರಿ.

ಧನು—ನೀವು ಕೈಗೊಂಡ ಉದ್ಯಮದಲ್ಲಿ ಒಳ್ಳೆಯ ಗೋಲಾಭವಿದೆ. ನಿಮ್ಮ ಪ್ರಯತ್ನಕ್ಕಿಂತಲೂ ಹೆಚ್ಚಿನ ಫಲವನ್ನು ಅನಾಯಾಸದಿಂದ ಹೊಂದುವಿರಿ. ಹಲವಾರು ಮುಖದಿಂದ ಧನಾಗಮವಾಗುವುದರಿಂದ ಹಣದ ಬಿಕ್ಕಟ್ಟು ಕಾಣದು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಗುರುಜನರ ಅನುಗ್ರಹಕ್ಕೆ ಗುರಿಯಾದ ನಿಮ್ಮ ತನುಮನಗಳಿಗೆ ಸುಖ ಶಾಂತಿಯಿರದು. ತಾ. 12, 13, ಇದೀವಾರದಲ್ಲಿ ಉತ್ತಮ ದಿನಗಳಾಗಿವೆ.

ಮಕರ—ನಿಮ್ಮ ಪರಿಶ್ರಮಕ್ಕಿಂತಲೂ ಅಧಿಕವಾದ ಫಲಪ್ರಾಪ್ತಿಯು ನಿಮಗಾಗಲಿದೆ. ಜನತೆಯ ಬೆಂಬಲವು ಚೆನ್ನಾಗಿರುವುದರಿಂದ ಶತ್ರುವರ್ಗದವರು ನಿಮ್ಮ ಕಣ್ಣಿಗೆ ಕಾಣರು. ವಡುಭ್ರಾತ್ರಾದಿ ಗೃಹಪರಿವಾರಗಳಲ್ಲಿ ಏನೊಂದೂ ಕೊರತೆಯಿಲ್ಲದ ಕಾರಣ ಸುಖದಿಂದ ಕಾಲಕಳೆವಿರಿ. ಆದರೆ ನಿಮ್ಮ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ದಾರಿತಪ್ಪಿ ಹೋಗುವುದರಿಂದ ನಿಮ್ಮ ಕೀರ್ತಿಗೆ ಧಕ್ಕೆ ಬರಲಿದೆ. ತಾ. 10, 11, 14, 15, ಈ ದಿನಗಳಲ್ಲಿ ಭೋಗಲಾಭ ವಿಜಯಗಳನ್ನು ಹೊಂದುವಿರಿ.

ಕುಂಭ—ವಾತ ಪಿತ್ತ ದೋಷದಿಂದಾಗಿ ಆರೋಗ್ಯಕ್ಕೆ ಹಾನಿಯಿದೆ. ಕಷ್ಟಪಟ್ಟು ದುಡಿದರೂ ಇಷ್ಟಾರ್ಥವನ್ನು ಪಡೆವಿರಿ. ಮಾತುಮಾತಿಗೆ ಬೆಳೆದು ಕಲಹದಲ್ಲಿ ಪರ್ಯವಸಾನ ಹೊಂದೀತು. ಭೃತ್ಯವರ್ಗದವರಿಗೂ ವ್ಯಾಪಾರೀ ಜನತೆಗೂ ಕಷ್ಟ ನಷ್ಟಗಳಧಿಕವಾಗಲಿವೆ. ನೌಕರಿ ವರ್ಗದವರ ಕನಸು ನನಸಾಗಲಿದೆ. ಆಪ್ತಬಂಧುಗಳ ವಿರಹವೇದನೆಗೆ ಗುರಿಯಾದ ನಿಮಗೆ ತಾ. 12, 13, 16, ಈ ದಿನಗಳಲ್ಲಿ ಸಾಕಷ್ಟು ಫಲಪ್ರಾಪ್ತಿಯುಂಟಾಗಲಿದೆ.

ಮೀನ—ಕಷ್ಟ ಪರಂಪರೆಗಳು ನಿಮ್ಮನ್ನು ಬೆನ್ನಟ್ಟಿ ಬರಲಿವೆ. ಯಾವ ಕಾರ್ಯಕ್ಕೆ ಕೈಹಚ್ಚಿದರೂ ನಿರಾಶೆಯೇ ಕಣ್ಣ ಮುಂದೆ ಬಂದು ನಿಲ್ಲಲಿದೆ. ಹಣದ ಅಡಚಣೆಯಿಂದಾಗಿ ಮರ್ಯಾದೆಯುಳಿಸಿಕೊಳ್ಳುವದು ಕಷ್ಟವೆನಿಸುವದು. ಹಣದ ಲೇವಾದೇವಿ ನಿಮಿತ್ತ ಕಲಹವಾಗಲಿದೆ. ಶತ್ರುಜನರ ಪೀಡೆಯಿಂದಾಗಿ ಧನಮಾನಗಳಿಗೆ ಹಾನಿ ತಪ್ಪದು. ಕಜ್ಜಿ ಮುಳ್ಳು ಗಾಯ ಮುಂತಾದವುಗಳು ದೇಹದಲ್ಲಿ ಕಾಣಿಸಲಿವೆ. 10, 11, 14, 15, ಈ ದಿನಗಳಲ್ಲಿ ಹೆಚ್ಚಿನ ಅನಿಷ್ಟಗಳು ಕಾಣಿಸವು

ಲಕ್ಷಾಂತರ ಜನರು ಗುಣಹೊಂದಿದ್ದಾರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು, ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೫ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪ್ಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪ್ಪೋವಿನಲ್ಲಿ ಕೇಳಿರಿ.

ಖಾತ್ರಿ ಚಿನ್ನದ ನೆಕ್‌ಲೇಸ್. ತರೆಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರೆ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Edited, Printed & Published By K. H. Shetty at the Navayuga Press, Udipi, S. India

To Post without Prepayment.

ನವಯುಗ

Vol. 33, No 16 17-12-1953 ವರ್ಷ ೩೩ ವಾರ ೧೬

ಏಶಿಯಾದ ಜನವಾಣಿ

ಜಾಗತಿಕ ವರ್ತುಲದಲ್ಲಿ "ಎಚ್ಚೆತ್ತ ಏಶಿಯಾ" ಎಂಬ ಪದ ಪ್ರಯೋಗ ಈಗ ದಿನೇ ದಿನೇ ಹೆಚ್ಚುತ್ತಿರುವುದನ್ನು ನಾವು ಗಮನಿಸಿಲ್ಲವೆ? — ಏಶಿಯಾದ ಜನವಾಣಿಯು ಜಾಗತಿಕ ಆಗು ಹೋಗುಗಳ ಮೇಲೆ ತುಸು ನಿಧಾನವಾಗಿಯೇ ಆದರೂ ದೃಢವಾಗಿ ತನ್ನ ವರ್ಚಸ್ಸನ್ನು ಬೀರುತ್ತಿರುವುದನ್ನೂ ನಾವು ಕಂಡಿದ್ದೇವೆ. ಏಶಿಯಾವನ್ನು ಇಂದು ನೋಡುತ್ತಿರುವವರ ದೃಷ್ಟಿಗೆ ಏನೋ ಹೊಸದು ಕಾಣಿಸುತ್ತದೆ—ಐವತ್ತು ವರ್ಷಗಳ ಹಿಂದೆ, ಏಕೆ, ದ್ವಿತೀಯ ಮಹಾಯುದ್ಧ ಕಾಲದಲ್ಲಿ ಕಂಡ ಏಶಿಯಾ ಈಗ ತೋರುವುದಿಲ್ಲ ಗುರುತೇ ಹತ್ತಲಾರದಷ್ಟು ಏಶಿಯಾದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳಲ್ಲಿ ಪರಿವರ್ತನೆ ಕೈಗೂಡಿರುತ್ತದ

ಪ್ರಾಯಃ ಇದನ್ನು ಗಮನಿಸಿಯೇ ಇರಬೇಕು — ಲಂಡನ್ನಿನ ಹೆಸರಾಂತ "ದಿ ಟೈಮ್ಸ್" ಎಂಬ ಪತ್ರಿಕೆ ಈಚೆಗೊಂದು ಅಗ್ರಲೇಖವನ್ನು ಬರೆದು ಬೆಳೆಯುತ್ತಿರುವ ಈ "ಏಶಿಯಾನಿಸಂ" ಉಪೇಕ್ಷಣೀಯವಾಗಿ ಉಳಿದಿಲ್ಲವೆಂದೂ "ಶಾಂತಿ ಅಥವಾ ಯುದ್ಧ" ಎಂಬುದನ್ನು ನಿಷ್ಕರ್ಷಿಸುವಲ್ಲಿ ಮುಖ್ಯವಾಗಿ ಏಶಿಯಾದ ಜನವಾಣಿಗೆಯೇ ಮಹತ್ವ ಹಾಗೂ ಪ್ರಾಧಾನ್ಯ ಸಲ್ಲುತ್ತದೆಂದೂ ಹೇಳಿದೆ ದ್ವಿತೀಯ ಮಹಾಯುದ್ಧದ ಬಳಿಕ ಏಶಿಯಾದ ಅನೇಕ ರಾಷ್ಟ್ರಗಳು ಪುನರುತ್ಥಾನವನ್ನು ಹೊಂದಿ ಅಲ್ಲಿಯ ಕೋಟ್ಯಾಂತರ ನಾಗರಿಕರು ಒಂದು ನೂತನ ವಿಚಾರಧಾರೆಯ ಸೆಳವಿಗೆ ಸಿಲುಕಿಕೊಂಡುದು ಗೋಚರಿಸುತ್ತದೆ ಪಾಶ್ಚಿಮಾತ್ಯರು ಪ್ರತಿಪಾದಿಸುವ ಪ್ರಜಾಪ್ರಭುತ್ವ ಪದ್ಧತಿಗೂ ರಶಿಯಾ ಎತ್ತಿ ಕಟ್ಟಿದ ಕಮ್ಯೂನಿಸಮ್ಮಿಗೂ ನಡುವಿನ ಅಂತರವನ್ನು ಕಡಿಮೆಮಾಡಲು ಸಾಧ್ಯವೆಂದು ಈ ವಿಚಾರಧಾರೆ ನಿರ್ದೇಶಿಸುತ್ತದೆ—ಎಂಬುದಾಗಿ ಟೈಮ್ಸು ಪತ್ರಿಕೆ ಬರೆದಿದೆ.

ಕೆಲವು ದಿನಗಳ ಹಿಂದಿನ ಮಾತು— ಈಗಲೂ ಆ ಮಾತು ಅಮೇರಿಕಾದ ನೆಲದಲ್ಲಿ ಮಹತ್ವದ ಸದ್ದಿಯ ರೂಪದಲ್ಲಿದ್ದೀತು. ಅದೆಂದರೆ ಸಿನೇಟರ್ ಮೇಕಾರ್ಥಿಯ ಹೇಳಿಕೆ. ಅವರ ಅಭಿಪ್ರಾಯದಂತೆ ಏಶಿಯಾದ ಜನರಲ್ಲ ಒಂದೇ ವಿಚಾರ ಧಾರೆಯ ಸೆಳವಿಗೆ ಸಿಲುಕಿರುವರೆಂಬುದೇ ಸುಳ್ಳು! ಜಾಗತಿಕ ವರ್ತುಲದಲ್ಲಿ ಏಶಿಯಾದ ಮಾತಿಗೆ ಮಹತ್ವ ಕೊಡಬೇಕು ಅಲ್ಲಿಯ ಜನವಾಣಿಗೆ ಕಿವಿಗೊಡಬೇಕು ಎಂಬ ವಾದಕ್ಕೆ ಪುಷ್ಟಿದೊರೆತಂತೆಲ್ಲ ಮೇಕಾರ್ಥಿಯವರ ಗಂಟಲಸ್ವರದ ಭಾರವೂ ಹೆಚ್ಚಿಕೊಂಡಿತು— ಎಲ್ಲಿಯವರೆಗೆ ಅವರು ಮುಂದುವರಿದರೆಂದರೆ, ನೆಹರೂರ ಹೇಳಿಕೆ ಏಶಿಯಾದ ಮನೋಭಾವನೆಯನ್ನು ಬಿಂಬಿಸುತ್ತದೆನ್ನುವುದು ಶುದ್ಧ ತಪ್ಪು ಎಂದವರು ಸಾರಿದರು ನೆಹರೂ ಏನಾದರೂ ಮಾತಾಡಬಲ್ಲರಾದರೆ ಅದು ಕೇವಲ ಅವರು ನಾಯಕರಾಗಿರುವ ಭಾರತ ಸರಕಾರದ (ಜನತೆಯಲ್ಲ ನೆನಪಿರಲಿ) ಪರವಾಗಿ ಮಾತ್ರ. ಏಶಿಯಾದ ಜನವಾಣಿಯನ್ನು ನೆಹರೂರ ಮಾತುಗಳೆನ್ನುವುದು ಭ್ರಮೆಯೆಂದೇ ಮೇಕಾರ್ಥಿಯವರ ಅಭಿಪ್ರಾಯ

ಇದನ್ನು ಟೀಕಿಸಿ, ಖಂಡಿಸಿ ಅನಂತರ ಎಷ್ಟೋ ಹೇಳಿಕೆಗಳು ಪ್ರಕಟಗೊಂಡಿವೆ, ನಿಜ. ಆದರೂ ವಿದೇಶೀಯನೊಬ್ಬ ಹೀಗೆ ನಮ್ಮ ಕಡೆಗೆ ಏಶಿಯನ್ನರ ಕಡೆಗೆ ಬೊಟ್ಟು ಮಾಡಿ, ಅಲ್ಲಿ, ಏಕಾಭಿಪ್ರಾಯವಿಲ್ಲ, ಐಕ್ಯಮತ್ಯವಿಲ್ಲ, ಸುಸಂಬದ್ಧ ವಿಚಾರಪ್ರಣಾಳಿ ಇಲ್ಲ ಎನ್ನುವುದಕ್ಕೆ ಮೂಲದಲ್ಲಿ ನಮ್ಮಲ್ಲಿ ಏನೋ ದೋಷ ಹುದುಗಿರಲೇ ಬೇಕು ರಾಜಕೀಯ ಸ್ವತಂತ್ರ್ಯವನ್ನು ಪಡೆದಿರುವ ಭಾರತ, ಪಾಕಿಸ್ತಾನ, ಸಿಂಹಳ, ಬರ್ಮಾ, ಇಂಡೋನೇಶಿಯಾ ಮುಂತಾದ ರಾಷ್ಟ್ರಗಳು ತಮ್ಮ ಗೃಹ ಸಮಸ್ಯೆಗಳನ್ನು ಯಶಸ್ವಿಯಾಗಿ ಬಿಡಿಸುವುದರಲ್ಲಿ ಹಿಂದುಳಿದಿರುವುದರಿಂದಲೇ ಏಶಿಯನ್ನರು ಪರೋಪದೇಶ ಪಾಂಡಿತ್ಯ ಪಡೆದವರೆಂಬ ವ್ಯಂಗ್ಯಕ್ಕೆ ಬಲಿಯಾಗಿದ್ದಾರೆ ಏಶಿಯಾದ ರಾಷ್ಟ್ರಗಳು ಪಾಶ್ಚಾತ್ಯ ರಾಷ್ಟ್ರಗಳಿಗೆ ಪದೇ ಪದೇ ಒತ್ತಾಯದಿಂದ ಉಪದೇಶಿಸುವ ನೈತಿಕ ತತ್ವಗಳ ಮಹತ್ವವನ್ನು ತಮ್ಮ ತೊಂದರೆತಾಪತ್ರಯಗಳಿಗೆ ಅನ್ವಯಿಸಿ ಪಾಲಿಸುವುದರಲ್ಲಿ ತಪ್ಪಿವೆ — ಎಂಬುದಾಗಿ ಟೈಮ್ಸು ಪತ್ರಿಕೆ ಹೇಳಿದೆ

ಸ್ವಾತಂತ್ರ್ಯಗಳಿಸಿದ ಏಶಿಯಾದ ಹೊಸ ರಾಷ್ಟ್ರಗಳು ತಮ್ಮ ಸಮಸ್ಯೆಗಳನ್ನು ತಾವು ಉಪದೇಶಿಸುವ ನೈತಿಕ ತತ್ವಗಳ ಬಲದಿಂದಲೇ ಪರಿಹರಿಸಿಕೊಳ್ಳಲು ಅಸಮರ್ಥವಾದರ— ಈ ನೈತಿಕ ತತ್ವಗಳ ಒಳಿತು [illegible] ತ್ತದೆ [illegible] ಹತ್ವದ ಗೊತ್ತುವಳಿಯನ್ನು [illegible] ಅಲ್ಲಿಯ ನೆಲದಲ್ಲಿ ಶಾಂತಿ ನೆಲೆವೂರುವಂತೆ ನೋಡಿದ ಭಾರತಕ್ಕೆ ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಿಸುವುದು ಇದುವರೆಗೂ ಸಾಧ್ಯವಾಗಿಲ್ಲ ನಿರಾಶಿತ್ರರ ಪ್ರಶ್ನೆ [illegible] ಕಾಲುವೆನೀರಿನ ತಂಟೆಯೂ ಭಾರತ— ಪಾಕಿಸ್ತಾನ ಸಂಬಂಧವನ್ನು ಸಾಕಷ್ಟು ಹದಗೆಡಿಸಿದೆ ಈಚೆಗೆ ಮಹತ್ವದ ಸುದ್ದಿಯಾಗಿ ಪರಿಗಣಿಸಲ್ಪಟ್ಟ ಪಾಕ ಅಮೇರಿಕಾ ಮಿಲಿಟರಿ ಒಡಂಬಡಿಕೆ ಪರಿಸ್ಥಿತಿಯನ್ನು ಇನ್ನಷ್ಟು ನಾಜೂಕಾಗಿಮಾಡುವುದು ನಿಶ್ಚಯ ತಿಬೇಟನ್ನು ಮುತ್ತಿದ ಚೀನೀ ಸೈನ್ಯ ನೇಪಾಳ-ಲಢಾಕಗಳಲ್ಲಿ ಪ್ರವೇಶ ಪಡೆದಾವೇ ಎಂದು ಭಾರತ ಆತುರ ಪಟ್ಟಿದೆ ಸಿಂಹಳ ಹಾಗೂ ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯ ನೆಲಸಿಗಾರರ ವಿಷಯದಲ್ಲಿ ಭಾರತ ಸರಕಾರ ವಿಪಂಚನೆಯಿಂದ ಮುಕ್ತವಾಗಿಲ್ಲ ಅಹಿಂಸಾತ್ಮಕ ಸತ್ಯಾಗ್ರಹದ ಬಲದಿಂದ ಬ್ರಿಟಿಷರಂಥ ಪ್ರಬಲರನ್ನು ಭಾರತದಿಂದ ಓಡಿಸಿದೆವೆನ್ನುವ ನಾವು ಭಾರತದ ಕರಾವಳಿಯಲ್ಲಿ ವಿದೇಶೀಯರ ಕೈವಶವಿರುವ ವಸಾಹತುಗಳಿಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿಲ್ಲ [illegible] ಗಳು ಪರಿಹಾರಗೊಳ್ಳದೆ ಉಳಿದಿರುವಾಗ ಜಾಗತಿಕ ಸಂಗತಿಗಳ ಕುರಿತು ಕೊಡುವ ನೆಹರೂರ ಹೇಳಿಕೆಗೆ ವಿದೇಶದ ವಕ್ರ ದೃಷ್ಟಿಯ [illegible] ಪ್ರತಿಕ್ರಿಯೆಯೂ [illegible] ತ್ತದೆ

ಏಶಿಯಾದ ಬೇರೆ ರಾಷ್ಟ್ರಗಳಿಗೂ ಇಂತಹದೇ ನೂರಾರು ಸಮಸ್ಯೆಗಳಿವೆ—ಅವುಗಳನ್ನು ಬಿಡಿಸುವುದು ಹೇಗೋ ಎಂದು ಆ ರಾಷ್ಟ್ರಗಳೂ ಭಾರತದಂತೆ ಚಿಂತೆಗೀಡಾಗಿವೆ [illegible] ಆದರೆ ನಾವನಾನಾ [illegible] ಈ ರಾಷ್ಟ್ರಗಳು ಪರಿಹರಿಸುತ್ತವೆಂಬುದು ನಿರಾಶೆಯ [illegible] ಆಸ್ಪದ ಮಾಡಿಕೊಟ್ಟಿದೆ ಏಶಿಯಾದ ಸಮಸ್ಯೆ [illegible] ಏಶಿಯಾದ ಧ್ಯೇಯ. ಜೀವನ [illegible] ಸುಖ ಸಂತೋಷದಿಂದ ಬದುಕಬೇಕೆಂಬ ಹಂಬಲವನ್ನೇ ಇಲ್ಲಿಯ ಜನವಾಣಿ ಉದ್ಘೋಷಿಸುತ್ತದೆ ಕೊಲಂಬೋ ಯೋಜನೆಯಲ್ಲಿ ಏಶಿಯಾದ ಅನೇಕ ರಾಷ್ಟ್ರಗಳು ಉತ್ಸಾಹದಿಂದ ಭಾಗವಹಿಸಿರುವುದನ್ನೂ ಭಾರತದಂಥ ಮಹಾ ದೇಶ ಪಂಚವಾರ್ಷಿಕ ಯೋಜನೆಯಲ್ಲಿ ಪ್ರವೃತ್ತವಾಗಿರುವುದನ್ನೂ ಇದಕ್ಕೆ ನಿದರ್ಶನವಾಗಿ ತೋರಿಸಬಹುದು. ಏಶಿಯಾದ ರಾಜಕೀಯ ದೃಷ್ಟಿ ಎಲ್ಲಿ ಏಕಮುಖವಾಗಿರುವುದನ್ನು ಸಂಯುಕ್ತ ರಾಷ್ಟ್ರ ಸಂಘದಲ್ಲಿ [illegible]—ಏಶಿಯಾ ರಾಷ್ಟ್ರಗಳ ಗುಂಪು ನಿರ್ವಹಿಸುವ ಕಾರ್ಯಭಾಗದ [illegible] ತಿಳಿದುಕೊಳ್ಳಬಲ್ಲೆವು —[illegible] ವಾದಿತ್ವವನ್ನು [illegible] ವಾದಿತ್ವವನ್ನೂ ಖಂಡಿಸುವುದರಲ್ಲಿ [illegible], ಅನಾಚಾರಗಳನ್ನು [illegible] ಸುವುದರಲ್ಲಿ ಯುದ್ಧ ಪ್ರವೃತ್ತಿಯನ್ನು ತಡೆದು ನಿಲ್ಲಿಸಿ ಶಾಂತಿಯ ಉದ್ದೇಶವನ್ನೇ ಪ್ರತಿಪಾದಿಸುವುದರಲ್ಲಿ ಏಶಿಯಾದ ರಾಷ್ಟ್ರಗಳು ಪರಸ್ಪರ [illegible] ತೋರಿಸುವುದು ಗಮನೀಯವಾದ, ಮಹತ್ವಪೂರ್ಣ ಸಂಗತಿ

ಭಾರತೀಯ ರಾಜಕಾರಣಿಗಳೂ ಇತಿಹಾಸಕಾರರೂ ಆದ ಸರ್ದಾರ ಕೆ ಎಂ ಪಣಿಕ್ಕರರು ತಮ್ಮದೊಂದು ಪುಸ್ತಕದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಕುರಿತು ಏಶಿಯಾದ ಈಗಿನ ಮನೋಭಾವ [illegible] ಗೊಂಡ [illegible] ಪ್ರಸ್ತಾಪಿಸುತ್ತಾ ಹೇಳಿದ ಮಾತುಗಳು ಮನನೀಯವಾಗಿರುತ್ತವೆ — ಐರೋಪ್ಯ ನೃಪರ ಯುದ್ಧಗಳಾಗಿದ್ದವುಗಳು ಎರಡು ಮಹಾ ಯುದ್ಧಗಳಲ್ಲಿ ಪರಿಣಾತಗೊಂಡಾಗ ಏಶಿಯಾದಲ್ಲಿ ನರಬಲಿಯನ್ನು ನಡೆಸಿ ಆರ್ಥಿಕ ಶೋಷಣೆಯನ್ನೂ ನಡೆಸಿದಾಗ—ಯುದ್ಧದ ಕುರಿತು ತೀವ್ರ ಜಿಗುಪ್ಸೆಯ [illegible] ಸುಖ ಸಂತೋಷ ನೆಮ್ಮದಿಗಳ ಭಾವನೆಯೂ ಏಶಿಯಾದ ಜನರಲ್ಲಿ ಉದಿಸಿತು [illegible] 'ತಟಸ್ಥ ನೀತಿ' ಯ ಜನ್ಮ

(ಮುಂದೆ, ಪುಟ ನೋಡಿರಿ)

ವೇತನ ದೊರೆಯುವ ಪ್ರತಿ ದಿನದಲ್ಲೂ ಸೇವಿಂಗ್ಸ್ ಬೇಂಕ್ ಲೆಖ್ಖದಲ್ಲಿ ಹಣವಿಡಲು ಪ್ರಾರಂಭಿಸಿರಿ.

ನಿಮ್ಮ ಸಂಪಾದನೆಯಲ್ಲಿ [illegible] ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನಲ್ಲಿ [illegible] ಸೇವಿಂಗ್ಸ್ ಲೆಖ್ಖ ತೆರೆದು [illegible] ವಸ್ತುಗಳನ್ನು ಕೊಂಡುಕೊಳ್ಳಲು [illegible] ಪ್ರತಿ [illegible] ಸೇಕಡಾ 1 [illegible] ಸೇವಿಂಗ್ಸ್ ಲೆಖ್ಖದಲ್ಲಿ [illegible] ಭಾವೀ ಭದ್ರತೆಯನ್ನು ಕಾಪಾಡಿಕೊಳ್ಳಿರಿ [illegible]

ವ್ಯವಹಾರ ವಹಿವಾಟು ರೂ 5,00,00 000

THE CANARA INDUSTRIAL & BANKING SYNDICATE LTD.,

Estd: 1925 H O UDIPI, S India

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸ್ಥಾಪನೆ ೧೯೨೫ [illegible] ಉಡುಪಿ [illegible]

ಪ್ರಪಂಚದ ಪ್ರಾಚೀನ ಪ್ರಜಾರಾಜ್ಯ-ಎಂದೋರಾ

ಆಡಳಿತದ ಅಧಿಪತಿಗೆ ಮೂರು ಪವನುಗಳ ವಾರ್ಷಿಕ ವೇತನ!

ಯುರೋಪು ಖಂಡದಲ್ಲಿ ಫ್ರಾನ್ಸು ಮತ್ತು ಸ್ಪೈನು ದೇಶಗಳ ಸೀಮಾ ಪ್ರದೇಶದಲ್ಲಿ ಎಂದೋರಾ ಎಂಬ ಹೆಸರಿನ ಪ್ರಜಾರಾಜ್ಯವೊಂದಿದೆ-ಇದು ಪ್ರಪಂಚದಲ್ಲಿಯೇ ಅತಿ ಪ್ರಾಚೀನವೂ ಅತ್ಯಂತ ಸಣ್ಣದೂ ಆದ ಗಣರಾಜ್ಯವೆಂದು ಪ್ರತೀತಿ.

ಇಲ್ಲಿಯ ಜನಸಂಖ್ಯೆ ಐದೂವರೆ ಸಾವಿರದಷ್ಟಿದ್ದರೂ ಫ್ರಾನ್ಸಿನಂಥ ಮಹಾ ರಾಷ್ಟ್ರಗಳನ್ನು ನಡುಗಿಸುವುದಕ್ಕೆ ಈ ಪ್ರಜಾರಾಜ್ಯ ಹಿಂಜರಿಯುವುದಿಲ್ಲ. ಈಚೆಗೆ ಅದಕ್ಕೂ ಫ್ರಾನ್ಸಿಗೂ ನಡುವಿದ್ದ ರಾಜಕೀಯ ಸಂಬಂಧ ಕಡಿದುಹೋದುದೇ ಈ ಮಾತಿಗೊಂದು ನಿದರ್ಶನ. ಎಂದೋರಾದ ನಾಗರಿಕರಿಗೆ ಫ್ರಾನ್ಸಿನಲ್ಲಿ ದೊರೆಯುತಿದ್ದ ಸೌಲಭ್ಯಗಳನ್ನೆಲ್ಲ ಎಂದೋರಾದಲ್ಲಿರುವ ಫ್ರೆಂಚನಿವಾಸಿಗಳಿಗೂ ಕೊಡಿಸಬೇಕೆಂದು ಫ್ರಾನ್ಸು ಅಭಿಪ್ರಾಯಪಟ್ಟಿತು. ಆದರೆ ಎಂದೋರಾ ಸರಕಾರ ತನ್ನ ಶಾಸನಸಭೆಯ ಮುಂದೆ ಈ ಸೂಚನೆಯನ್ನು ಮಂಡಿಸುವುದಕ್ಕೂ ನಿರಾಕರಿಸಿತು. ಪರಿಣಾಮವಾಗಿ ರಾಜಕೀಯ ಸಂಬಂಧ ವಿಚ್ಛೇದಗೊಂಡಿತು.

ಪ್ರಭುತ್ವಕ್ಕೆ ಮನ್ನಣೆ

ಎಂದೋರಾ ಪ್ರಪಂಚದಲ್ಲಿಯೇ ಪ್ರಾಚೀನವಾದ ಮತ್ತು ಸಣ್ಣದಾದ ಪ್ರಜಾರಾಜ್ಯವೆಂದು ಹೇಳಿದೆ—ಕಾನೂನು ಕಾಯಿದೆಗಳನ್ನು ರಚಿಸಲು ಅಲ್ಲಿ ಚುನಾಯಿತ ಸಮಿತಿಯೊಂದಿದೆ. ಆಡಳಿತವನ್ನು ನಿಭಾಯಿಸಲು ಇಪ್ಪತ್ತನಾಲ್ಕು ಮಂದಿಯ ಮಂಡಳಿಯೊಂದಿದೆ. ಭಾರತವೇ ಮುಂತಾದ ಗಣರಾಜ್ಯಗಳಲ್ಲಿರುವಂತೆ ಎಂದೋರಾದಲ್ಲಿಯೂ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳು ಆಡಳಿತದ ವರಿಷ್ಠ ಸ್ಥಾನದಲ್ಲಿರುವರು

ಈ ರಾಜ್ಯದ ವಿಷಯದಲ್ಲಿ ಅನೇಕ ಮನೋರಂಜಕ ಸಂಗತಿಗಳನ್ನು ಕೇಳುತ್ತೇವೆ—ಅತಿ ಪ್ರಾಚೀನವಾದ ಈ ಪ್ರಜಾರಾಜ್ಯ ಹಿಂದಿನ ಕಾಲದ ಪರಂಪರೆಯಂತೆ ಸ್ಪೈನಿನ ರೋಮನ್ ಕೆಥೊಲಿಕ ಧರ್ಮಗುರುವನ್ನೂ ಫ್ರಾನ್ಸಿನ ರಾಷ್ಟ್ರಾಧ್ಯಕ್ಷನನ್ನೂ ಅಧಿಪತಿಯೆಂದು ಮನ್ನಿಸಿ ಗೌರವವನ್ನು ಅರ್ಪಿಸುತ್ತದೆ. ಇವರಿಬ್ಬರಿಗೂ ಎಂದೋರಾದ ಸರಕಾರ ಪ್ರತಿ ವರ್ಷ ಕಾಣಿಕೆ ನೀಡುವ ಕ್ರಮವುಂಟು. ಮತ್ತು ಶತಮಾನಗಳಿಂದ ನಡೆದು ಬಂದ ಈ ಪದ್ಧತಿಯಲ್ಲಿ ಏನೆಂದೂ ಸುಧಾರಣೆಯಾಗಿರುವುದಿಲ್ಲ. ಸ್ಪೈನಿನ ಧರ್ಮ ಗುರುವಿಗೆ ಎಂದೋರಾ ಸರಕಾರದಿಂದ ಪ್ರತಿ ವರ್ಷ ೧೨ ಹೇಟೆಗಳು, ಎರಡು ಚೆಂಬು ಹಾಲಿನ ಕೆನೆ ಮತ್ತು ಒಂದು ಕುರಿಯ ಮಾಂಸ ಸಲ್ಲುತ್ತದೆ. ಫ್ರಾನ್ಸಿನ ಅಧ್ಯಕ್ಷನ ಮರ್ಯಾದೆಯ ತೂಕ ಇನ್ನೂ ಕಮ್ಮಿ. ಪ್ರತಿ ವರ್ಷ ಒಂದು ನೂರು ಫ್ರಾಂಕುಗಳನ್ನು ಕೊಡುವುದು ರೂಢಿ. ಈಗಿನ ದಿನಮಾನದಲ್ಲಿ ಒಂದು ಫ್ರಾಂಕೆಂದರೆ ಒಂದು ಪಾವಾಣೆಯಷ್ಟು ಬೆಲೆ ಬಾಳುತ್ತದೆ!

ಸ್ಪೈನು ಮತ್ತು ಫ್ರಾನ್ಸಿನ ಸರಕಾರೀ ಲೆಕ್ಕದಂತೆ ಕಳೆದ ೭೦೦ ವರ್ಷಗಳಿಂದ ವರ್ಷಂಪ್ರತಿ ನಿಯಮಿತ ಕಾಲದಲ್ಲಿ ತಪ್ಪದೆ ಈ ಕಾಣಿಕೆಯನ್ನು ಎಂದೋರಾ ಸರಕಾರ ಸಲ್ಲಿಸುತ್ತಾ ಬಂದಿದೆ.

ಕಾನೂನು ಕಾಯಿದೆಗಳಿಲ್ಲ

ಪ್ರಾಚೀನವಾದ ಒಂದು ನಿಯಮದಂತೆ, ಯಾವುದೇ ರಾಜಾಜ್ಞೆಗೆ ಮೇಲೆ ಹೇಳಿದ ಸ್ಪೈನು ಹಾಗೂ ಫ್ರಾನ್ಸುಗಳ ಅಧಿಪತಿಗಳು ಸಂಯುಕ್ತ ಹಸ್ತಾಕ್ಷರ ಮಾಡದ ಹೊರತು ಅದು ಕಾನೂನಾಗಲಾರದು. ದುರ್ದೈವದಿಂದ ಇತಿಹಾಸದಲ್ಲಿ ಇಂದಿನವರೆಗೂ ಸ್ಪೈನು ಮತ್ತು ಫ್ರಾನ್ಸುಗಳ ಮನಸ್ಸು ಕೂಡಿಬಂದುದಿಲ್ಲ. ಈ ವಿರೋಧ ಭಾವನೆಯ ಪರಿಣಾಮವಾಗಿ, ಎಂದೋರಾದ ಯಾವುದೇ ರಾಜಾಜ್ಞೆಗೆ ಮೇಲಿನೀರ್ವರು ಮಹಾನುಭಾವರ ಸಂಯುಕ್ತ ಹಸ್ತಾಕ್ಷರ ಬಿದ್ದುದಿಲ್ಲ. ಅರ್ಥಾತ್ ಯಾವುದೇ ಕಾನೂನು ಜ್ಯಾರಿಗೆ ಬಂದುದೆಂದಿಲ್ಲ. ಆದುದರಿಂದ ಇಲ್ಲಿಯ ನಿವಾಸಿಗಳಿಗೆ ಪೋಲೀಸರು, ಕೋರ್ಟು, ವಕೀಲರು ಮುಂತಾದ ಕಾಯಿದೆ ಕಾನೂನಿನ ಅಂಗಗಳ ಗೊಂದಲವೇ ಇರುವುದಿಲ್ಲ

ಟೆಲಿವಿಜನ್ ಹಾಗೂ ತ್ರಿಗಾತ್ರ ಚಲಚ್ಚಿತ್ರಗಳ ಈ ಆಧುನಿಕ ಕಾಲದಲ್ಲೂ ಎಂದೋರಾ ನಿವಾಸಿಗಳಿಗೆ ಮೂಕ ಚಲಚ್ಚಿತ್ರದ ದರ್ಶನ ಲಾಭವೂ ಆಗಿಲ್ಲ. ಮನೋರಂಜನಾರ್ಥವಾಗಿ ಈ ದೇಶದಲ್ಲಿ ಥಿಯೇಟರು, ಸರ್ಕಸು, ನಾಟ್ಯಗೃಹ ಯಾವುದೂ ಇಲ್ಲ. ಇಲ್ಲಿ ಯಾವುದೇ ದೈನಿಕ, ಸಾಪ್ತಾಹಿಕ, ಮಾಸಿಕ, ತ್ರೈಮಾಸಿಕ ಪತ್ರಿಕೆ ಹೊರಡುವುದಿಲ್ಲ. ವಿದೇಶಗಳಲ್ಲಿ ಪ್ರಕಟವಾಗುವ ಪತ್ರಿಕೆಗಳ ಪ್ರವೇಶವೇ ಇಲ್ಲಿ ನಿಷಿದ್ಧ

ಈ ರಾಜ್ಯದ ವಿಸ್ತಾರ ೧೬೦ ಚದರ ಮೈಲುಗಳು ಮತ್ತು ಯಾರೇ ಆದರೂ ರಾಜ್ಯದ ಒಂದು ಮೂಲೆಯಿಂದ ಇನ್ನೊಂದು ಮೂಲೆಯನ್ನು ಹೆಚ್ಚೆಂದರೆ ಐದು ತಾಸುಗಳ ಕಾಲ್ನಡಿಗೆಯಿಂದ ಹೋಗಿ ಸೇರುವುದು ಸಾಧ್ಯ. ಇದೇ ಕಾರಣದಿಂದಲೋ ಏನೋ—ಇಲ್ಲಿ ಪ್ರಯಾಣ ಸಾಧನವಾಗಿ ಉಪಯೋಗಿಸಲ್ಪಡುವುದು ಕತ್ತೆಯೊಂದೇ. ಮೋಟಾರು ಮುಂತಾದವುಗಳ ಪ್ರಯೋಜನವನ್ನು ಇದಕ್ಕೋಸ್ಕರ ಎಂದೋರಾ ನಿವಾಸಿಗಳು ಪಡೆಯಲಿಚ್ಛಿಸುವುದಿಲ್ಲ.

ಹಿಂದಿನದೇ ನಿಯಮ

ಪ್ರಜಾಪ್ರಭುತ್ವವನ್ನು ಅನುಸರಿಸುವ ಈ ರಾಜ್ಯದ ಆಡಳಿತ ಬಹಳ ಸುಲಭ ಖರ್ಚಿನಲ್ಲಿ ನಡೆಯುತ್ತದೆ. ರಾಷ್ಟ್ರಪತಿಗೆ ವರ್ಷಕ್ಕೆ ಮೂರು ಪೌಂಡು (ಅಂದರೆ ೩೯ ರೂಪಾಯಿ) ವೇತನ ಕೊಡಲ್ಪಡುತ್ತದೆ. ರಾಜಧಾನಿಯಲ್ಲಿರುವುದೇ ೧೬೦ ಮನೆಗಳು. ಅವುಗಳಲ್ಲಿ ರಾಷ್ಟ್ರಪತಿ ಭವನಕ್ಕೆ ಮಾತ್ರ ಉಪ್ಪರಿಗೆ ಇದೆ.

ಆಡಳಿತ ಮಂಡಳದ ಸದಸ್ಯರಿಗೆ ರಾಷ್ಟ್ರಪತಿಯಷ್ಟೇ ವೇತನ ದೊರೆಯಲಾರದಷ್ಟೆ! ಆದರೂ ಅವರ ಮಾನ ಮರ್ಯಾದೆ ಗೌರವಗಳಿಗೆ ಕುಂದುಂಟಾಗ ಬಾರದೆಂದು ೧೫ ಶಿಲಿಂಗುಗಳ ವಾರ್ಷಿಕ ವೇತನ ದೊರೆಯುತ್ತದೆ— ಅಂದರೆ ತಿಂಗಳಿಗೆ ಹನ್ನೆರಡಾಣೆ!

ಇಂಥದೊಂದು ವಿಚಿತ್ರ ರಾಜ್ಯದ ಸ್ಥಾಪನೆಯ ದಿನ ಕ್ರಿಸ್ತಪೂರ್ವ ೭೦೦ ವರ್ಷಗಳಷ್ಟು ಹಿಂದೆ ಹೋಗುತ್ತದೆ. ಈ ದೀರ್ಘ ಅವಧಿಯಲ್ಲಿ ಜಗತ್ತಿನಲ್ಲಿ ಎಷ್ಟು ಪ್ರಜಾರಾಜ್ಯಗಳು ಸ್ಥಾಪನೆಗೊಂಡು ಮಣ್ಣು ಮುಕ್ಕಿದುವೋ ಭಗವಂತನೇ ಬಲ್ಲ—ಆದರೆ ಈ ಪ್ರಜಾ ರಾಜ್ಯವನ್ನು ಏನೊಂದೂ ಗಂಡಾಂತರ ಸ್ಪರ್ಶಿಸಿಲ್ಲ. ಈ ದೇಶದ ಹೆಚ್ಚಿನ ಕ್ರಮ ನಿಯಮಗಳೆಲ್ಲ ಸಾವಿರಾರು ವರ್ಷದ ಹಿಂದಿದ್ದಂತೆಯೇ ಅನೂಚಾನವಾಗಿ ನಡೆದು ಕೊಂಡು ಬಂದಿವೆ. ಉದಾಹರಣೆಗೋಸ್ಕರ ಪ್ರತಿಯೊಬ್ಬ ಮನುಷ್ಯನೂ ಬಂದೂಕು ಧಾರಿಯಾಗಿರುವುದು ಅನಿವಾರ್ಯವೆಂದು ರೂಢಿ. ಜನ ಇಲ್ಲಿ ಸಕ್ಕರೆ ತಿನ್ನುವುದಿಲ್ಲ ಏಕೆಂದರೆ ಸಕ್ಕರೆ ಇಲ್ಲಿ ದೊರೆಯುವುದಿಲ್ಲ. ಸಕ್ಕರೆಯ ಸ್ಥಾನವನ್ನು ಜೇನು ಪಡೆದಿದೆ. ಸರ್ವಾನ್ನವನ್ನೂ ಮಧುಮಯವಾಗಿಸುವುದರಲ್ಲಿ ಎಂದೋರಾ ನಿವಾಸಿಗಳಿಗೆ ತುಂಬ ತೃಪ್ತಿ.

ಇಲ್ಲಿಯ ವಿವಾಹ ಪದ್ಧತಿಯೂ ವಿಚಿತ್ರ—ವರ್ಷದಲ್ಲಿ ಒಂದೇ ಒಂದು ದಿನ (ಅದು ಜೂನ್ ೨೪) ಮಾತ್ರ ವಿವಾಹ ಜರಗಬಲ್ಲುದು. ಅಂದು ಇಗರ್ಜಿಯನ್ನು ಸೇರಿ ಒಂದು ಪೆಟ್ಟಿಗೆಯನ್ನು ನಡುಮಧ್ಯದಲ್ಲಿ ಕತ್ತರಿಸಿದ ಯಾವುದೇ ವ್ಯಕ್ತಿ ತನ್ನ ಪ್ರೇಯಸಿಯ ಕೈಹಿಡಿಯಲು ಅರ್ಹನೆನಿಸುತ್ತಾನೆ. ಜೂನಿನ ೨೪ನೇ ದಿನಾಂಕವನ್ನು ಬಿಟ್ಟರೆ ಬೇರೆ ದಿನ ಆದ ಯಾವುದೇ ಮದುವೆಗೆ ಮನ್ನಣೆಯಿಲ್ಲ.

ನಿಸರ್ಗದ ಚೆಲುವು

ಈ ದೇಶದ ಭೂಮಿ ಆಹಾರಧಾನ್ಯಗಳನ್ನು ಬೆಳೆಯಲು ಬಾರದಷ್ಟು ಬರ್ಬರವಾಗಿರುತ್ತದೆ. ಸಾಕಷ್ಟು ಉತ್ತರದಷ್ಟು ಭೂಮಿಯಲ್ಲಿರುವುದರಿಂದ ಗ್ರೀಷ್ಮ ಋತುವಿನಲ್ಲೂ ಇಲ್ಲಿಯ ಪರ್ವತಶಿಖರಗಳು ಹಿಮದಿಂದ ಕಂಗೊಳಿಸುತ್ತವೆ. ನಮ್ಮ ದೃಷ್ಟಿಯನ್ನು ಎತ್ತ ತಿರುಗಿಸಿದರೂ ಸರ್ಗದ ಹನ್ನೆರಡೂ

(೧೦ನೇ ಪುಟ ನೋಡಿರಿ.)

The Canara Mutual Assurance Co., LTD.

Estd: 1935.] [Head Office: UDIPI, S. India

ಸ್ಥಾಪಿತವಾದಂದಿನಿಂದಲೂ ಎಲ್ಲಾ ವರ್ಷಗಳಿಗೂ ಬೋನಸು ಹಂಚಿದ ಈ ಕಂಪೆನಿಯ ಮುಂದಿನ ವಿಮಾ ಗಣನೆಯು 31—12—1953ನೇ ತಾರೀಕಿಗೆ ನಡೆಯಲಿದೆ. ಆ ತಾರೀಕಿನಂದು ಜ್ಯಾರಿಯಲ್ಲಿರುವ ಕಂಪೆನಿಯ ಎಲ್ಲಾ ಬಾಧ್ಯಸ್ಥ ಪಾಲಿಸಿಗಳಿಗೆ ಒದಗಿ ಬಂದ ಉಳಿತಾಯವನ್ನು ಹಂಚಲಾಗುವುದು. ಕಂಪೆನಿಯ ಪಾಲಿಸಿಯನ್ನು ಇಂದೇ ಪಡೆದು ಈ ಉಳಿತಾಯದಲ್ಲಿ ಪಾಲುಗಾರರಾಗಲು ನಮ್ಮ ಎಲ್ಲಾ ಹಿತಚಿಂತಕರನ್ನು ಸ್ವಾಗತಿಸುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂ, ಲಿಮಿಟೆಡ್.

ಸ್ಥಾಪನೆ: ೧೯೩೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೪—0
ಸಣ್ಣ ಬಾಟ್ಲಿಗೆ ರೂ. ೨—0—0

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪



ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತವೆ.

Our Bombay Stockists:-
1) V. N. Shenoy, Bombay 12.
2) N. R. Kamath, General Merchant, Dahanu Road, W. Rly

ರೈತರ ಸಾಲಕ್ಕೆ ತಾತ್ಕಾಲಿಕ ಸಂರಕ್ಷಣೆ

ವಿವರ ಹಾಗೂ ಸಾಧಕ ಬಾಧಕಾಂಶಗಳು

ಮದ್ರಾಸು ರಾಜ್ಯದ ಗವರ್ನರರು ದಿನಾಂಕ ೫ರಂದು ತಮಗೆ ರಾಜ್ಯಾಂಗ ಘಟನೆ ನೀಡಿದ ಅಧಿಕಾರ ಬಲವನ್ನು ಉಪಯೋಗಿಸಿ ಸಾಲದಲ್ಲಿ ಮುಳುಗಿರುವ ರೈತರಿಗೆ ತಾತ್ಕಾಲಿಕ ಸಂರಕ್ಷಣೆಯನ್ನು ನೀಡುವ ಉದ್ದೇಶದಿಂದ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿರುವ ಸಂಗತಿ ಎಲ್ಲರಿಗೂ ವೇದ್ಯವಿದೆ. ಈ ಸುಗ್ರೀವಾಜ್ಞೆ ಒಂದು ವರ್ಷದ ಅವಧಿಯನ್ನು ಪಡೆದಿದೆ. ಮತ್ತು ಮಂತ್ರಿಗಳ ಹೇಳಿಕೆಯನ್ನು ನೋಡಿದರೆ, ಸರಕಾರದವರು ಬೇಗನೇ ಒಂದು ಮಸೂದೆಯನ್ನು ಈ ಸಂಬಂಧದಲ್ಲಿ ವಿಧ್ಯುಕ್ತವಾಗಿ ಶಾಸನ ಸಭೆಯ ಮುಂದೆ ಮಂಡಿಸುವರು. ಇದರಿಂದ ಈ ಸುಗ್ರೀವಾಜ್ಞೆಯಲ್ಲಿರುವ ಅಂಶವನ್ನೇ ಹೆಚ್ಚು ಸ್ಪಷ್ಟವಾಗಿಯೂ ವಿವರರಾಗಿಯೂ ಮುಂಬರಲಿರುವ ಈ ಮಸೂದೆ ಒಳಗೊಳ್ಳುವುದೆಂದು ನಾವೆಲ್ಲ ನಿರೀಕ್ಷಿಸಬಹುದು. ಆದಕಾರಣ ಸುಗ್ರೀವಾಜ್ಞೆಯ ಉದ್ದೇಶ ಹಾಗೂ ಅದರಿಂದಾಗುವ ಸಾಧಕ ಬಾಧಕ ಪರಿಣಾಮಗಳ ಕಲ್ಪನೆಯನ್ನು ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ ಶಾಸನ ಸಭೆಯಲ್ಲಿ ನಮ್ಮ ಪ್ರತಿನಿಧಿಗಳಾಗಿರುವವರು ಈ ವಿಷಯವನ್ನು ಗಮನಿಸುವುದೂ ಯೋಗ್ಯವಾಗಿರುತ್ತದೆ.

ಸುಗ್ರೀವಾಜ್ಞೆಯ ಉದ್ದೇಶ

ಸುಗ್ರೀವಾಜ್ಞೆಯು ಹೊರಟ ಒಂದು ವರ್ಷದ ಅವಧಿಯಲ್ಲಿ ರೈತರ ವಿರುದ್ಧ ಸಾಲವನ್ನು ವಾಪಾಸು ಪಡೆಯುವ ಉದ್ದೇಶದಿಂದ ಮಾಡಲ್ಪಟ್ಟ ಯಾವುದೇ ದಾವೆಯನ್ನು ಸಿವಿಲ್ ಕೋರ್ಟುಗಳು ಸ್ವೀಕರಿಸಲಾರವು; ಸಾಲ ವಸೂಲಿಗೆ ಡಿಕ್ರಿಯಾಗಿದ್ದ ಪಕ್ಷದಲ್ಲಿ ಅವನ್ನು ಜ್ಯಾರಿ ಮಾಡಕೂಡದು; ಕೋರ್ಟಿನಲ್ಲಿ ಈಗಾಗಲೇ ಇರುವ ಇಂಥ ದಾವೆಗಳ ವಿಚಾರಣೆಯನ್ನು ಮುಂದರಿಸದೆ, ಸ್ಥಗಿತಗೊಳಿಸಬೇಕು — ಎಂದು ಈ ಸುಗ್ರೀವಾಜ್ಞೆಯು ವಿಧಿಸುತ್ತದೆ. ಆದರೆ ಸಾಲ ಬಾಕಿಯ ವಸೂಲಿ ವಾಯಿದೆ ಹಾಗೂ ಡಿಕ್ರಿ ಅಮಲ್ದಾರಿಯ ವಾಯಿದೆಗೆ ಇದು ಬಾಧಕವನ್ನುಂಟು ಮಾಡುವುದಿಲ್ಲ.

ಇವನ್ನು ಜ್ಯಾರಿಗೆ ತರುವಲ್ಲಿ ಸರಕಾರದ ಉದ್ದೇಶವೇನು? ಸುಗ್ರೀವಾಜ್ಞೆಯಲ್ಲಿ ವಿವರಿಸಿದಂತೆ. ಕಳೆದ ಐದಾರು ವರ್ಷಗಳಿಂದ ರಾಜ್ಯದ ಅನೇಕ ಕಡೆಗಳಲ್ಲಿ ಅನಾವೃಷ್ಟಿಯ ಕಾರಣದಿಂದ ಬೆಳೆಗಳು ಹಾಳಾಗಿವೆ ಆದರೆ ದೇವರ ದಯೆಯಿಂದ ಈ ವರ್ಷ ಚೆನ್ನಾಗಿ ಮಳೆಬಂದಿರುವುದರಿಂದ ಫಸಲೂ ಉತ್ತಮವಾಗಿದೆ. ರೈತರಿಗೆ ಈಗ ತಮ್ಮ ಪರಿಶ್ರಮಕ್ಕೆ ತಕ್ಕ ಫಲ ದೊರೆತ ಸಂದರ್ಭದಲ್ಲಿ, ಅವರು ತಮ್ಮ ಉಳಿತಾಯವನ್ನು ಅಧಿಕ ಆಹಾರ ಉತ್ಪಾದನೆಗಾಗಿ ವಿನಿಯೋಗಿಸಿದರೆ, ಇದರಿಂದ ರೈತರಿಗೂ ರಾಜ್ಯಕ್ಕೂ ಕೂಡಿಯೇ ಲಾಭವಾಗುತ್ತದೆ. ಆದರೆ, ರೈತರ ಕೈಗೆ ಚೆನ್ನಾಗಿ ಬೆಳೆದೊರೆತುದನ್ನು ಕಂಡು ಸಾಲ ಕೊಟ್ಟ ಮಹನೀಯರು ಇದೇ ಸಂದರ್ಭವೆಂದು ತಿಳಿದು ಸಾಲ ವಸೂಲಿಗೆ ಪ್ರಯತ್ನಿಸಿದರೆ, ಆಗ ರೈತನ ಬಳಿಯಲ್ಲಿ ಏನೂ ಉಳಿಯುವುದಿಲ್ಲ. ಮಾತ್ರವಲ್ಲ ಈ ವ್ಯವಹರಣೆಗಳ ನಿಮಿತ್ತ ರೈತನು ಅಧಿಕ ಆಹಾರ ಬೆಳೆಯುವುದಿರಲಿ, ನಿತ್ಯದ ಬೇಸಾಯದ ಕೆಲಸವನ್ನು ಬಿಟ್ಟು ಕೋರ್ಟು ಕಚೇರಿಗಳನ್ನು ಅಲೆಯಬೇಕಾಗುವುದು. ಇದರಿಂದ ಉತ್ಪಾದನೆ ಕುಗ್ಗುವ ಭಯವಿದೆ — ರೈತರಲ್ಲಿ ಅಸಂತೋಷ ವ್ಯಾಪಿಸುವುದೂ ಸಂಭವನೀಯ. ಇವೆಲ್ಲ ಕೆಟ್ಟ ವಿಷಯಗಳಾದುದರಿಂದ ರೈತರಿಗೆ ತಾತ್ಕಾಲಿಕ ಸಂರಕ್ಷಣೆಯನ್ನು ಕೊಡಲು ಗವರ್ನರರು ಉದ್ಯುಕ್ತರಾದರು.

ಅರ್ಥ ವಿವರಣೆ

ರೈತರಿಗೆ ಮಾತ್ರ ಈ ಸುಗ್ರೀವಾಜ್ಞೆ ಅನ್ವಯಿಸುವುದರಿಂದ "ರೈತ" ನೆಂದರೆ ಯಾರೆಂದು ಸ್ಪಷ್ಟವಾಗಿ ನಿರ್ದೇಶಿಸುವ ಅಗತ್ಯ ಬೀಳುತ್ತದೆ (೧) ಕ್ರಮವಾಗಿ ಜತೆಗೂಡಿಯಾಗಲಿ ಒಬ್ಬಂಟಿಗನಾಗಿಯಾಗಲಿ ಸಾಗುವಳಿ ಮಾಡುತ್ತಿರುವವನು (೨) ಸಾಗುವಳಿಯ ಉತ್ಪಾದನೆಯಿಂದ ಜೀವನ ಸಾಗಿಸುವಾತ ಹಾಗೂ ಹಾಗೆ ಜೀವನ ನಿರ್ವಹಿಸಲು ಅಧಿಕಾರ ನಡೆಸುವವನು ಮತ್ತು (೩) ತನ್ನ ನಿಯಂತ್ರಣ ಹಾಗೂ ಮೇಲ್ವಿಚಾರಣೆಗಳಿಂದ ಸಂಬಳದಾಳುಗಳ ಮೂಲಕ ಸಾಗುವಳಿ ಮಾಡಿಸುವಾತನು ರೈತನೆಂದು ಈ ಆಜ್ಞೆ ಹೇಳಿದೆ. ಆದರೆ ಕಂಪೆನಿ ಹಾಗೂ ರಿಜಿಸ್ಟ್ರಿಯಾದ ಸಂಸ್ಥೆಗಳು ರೈತನೆಂದಾಗುವುದಿಲ್ಲವೆಂದು ಸ್ಪಷ್ಟವಾಗಿ ನಮೂದಿಸಲ್ಪಟ್ಟಿರುವುದರಿಂದ, ಅವುಗಳಿಗೆ ಈ ಸಂರಕ್ಷಣೆ ದೊರೆಯುವುದಿಲ್ಲ.

ರೈತನಂತೆ ಸಾಲವೆಂದರೆ ಏನೆಂಬುದನ್ನೂ ಚೊಕ್ಕ ಶಬ್ದಗಳಲ್ಲಿ ವಿವರಿಸುವುದು ಆವಶ್ಯಕ — ಹಣದ ರೂಪದಲ್ಲಿ ಅಥವಾ ವಸ್ತುವಿನ ರೂಪದಲ್ಲಿ ಸಲ್ಲಿಸಲ್ಪಡಬೇಕಾದುದನ್ನು ಸಾಲವೆಂದು ಈ ಆಜ್ಞೆಯು ಹೇಳಿದ್ದು, ಅದಕ್ಕೆ ಕೆಲವು ಅಪವಾದಗಳನ್ನೂ ಹೇಳಿ ಈ ಕೆಳಗಿನವುಗಳಿಗೆ ಸುಗ್ರೀವಾಜ್ಞೆ ಅನ್ವಯಿಸುವುದಿಲ್ಲವೆಂದು ವಿಧಿಸಿದೆ —

(೧) ಗೇಣಿ, (೨) ಹಣ ಸಂಬಂಧವಾದ ಕರಾರುಗಳನ್ನು ಬಿಟ್ಟು ಉಳಿದವುಗಳನ್ನೂ ಮುರಿದುದರಿಂದ ಉಂಟಾದ ನಷ್ಟ (೩) ನೀಡಿದ ಭರವಸೆಯನ್ನು ಮುರಿದುದರಿಂದ ಉಂಟಾದ ನಷ್ಟ (೪) ಕೋರ್ಟಿನ ಡಿಕ್ರಿಯಂತೆ ಜೀವನಾಂಶದ ರೂಪದಲ್ಲಿ ಸಲ್ಲಬೇಕಾದ ಹಣ (೫) ಸರಕಾರ ಅಥವಾ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಸಲುವ ಹಣ (೬) ಸಹಕಾರಿ ಸಂಘ, ಭೂಮಿ ಅಡವಿನ ಸಂಘ ಮೊದಲಾದವುಗಳಿಗೆ ಸಲುವ ಹಣ ಮತ್ತು (೭) ಕೃಷಿ ಮಜೂರರಿಗೆ ಸಲುವ ಸಂಬಳ.

ಇನ್ನೊಂದು ಮುಖ್ಯವಾದ ಅಂಶವೂ ಈ ಸುಗ್ರೀವಾಜ್ಞೆಯಲ್ಲಿದೆ — ಒಬ್ಬ ರೈತನೊಡನೆ ಜೇರಿ ಯಾರಾದರೊಬ್ಬ ರೈತನಲ್ಲದವನು ಸೇರಿಕೊಂಡು ಸಾಲತೆಗೆದಿದ್ದರೆ, ಅಂಥ ಸಾಲದ ಮೇಲೂ ಈ ಸುಗ್ರೀವಾಜ್ಞೆ ಅನ್ವಯಿಸುತ್ತದೆ. ಇದರಿಂದ ಇದು ಕೇವಲ ರೈತರ ಮಟ್ಟಿಗಲ್ಲದೆ — ಕೃಷೀವಲರಲ್ಲದ ಜನರ ಮೇಲೂ ಕೆಲ ಮಟ್ಟಿಗೆ ಅಧಿಕಾರ ಬೀರುತ್ತದೆ ಎಂದಾಯಿತು.

ಪ್ರಾಮಾಣಿಕತೆಯ ಪ್ರಶ್ನೆ

ಸರಕಾರದ ಉದ್ದೇಶದ ವಿಷಯದಲ್ಲಿ ನಮಗೆ ಸಮಾಧಾನವಿದೆ — ರೈತರು ಸಾಲ ಭಾರದಿಂದ ಜಗ್ಗಿರುವಾಗ, ಅಧಿಕ ಆಹಾರ ಬೆಳೆಸಿರಿ ಎಂಬ ಸಲ್ಲಾಪ ಹಾಡುವುದರಿಂದ ಸಾಕಷ್ಟು ಪ್ರಯೋಜನಲಭ್ಯವಾಗದು, ಅವರಿಗೆ ಮನಃ ಶಾಂತಿಯನ್ನೂ ಉತ್ಸಾಹವನ್ನೂ ನೀಡುವ ವಾತಾವರಣದ ನಿರ್ಮಾಣವಾಗಬೇಕು. ಒಂದು ವರ್ಷದ ಮಟ್ಟಿಗಾದರೂ ಸಾಲ ತೀರಿಸುವ ಚಿಂತೆಯಿಂದ ರೈತರನ್ನು ಮುಕ್ತಮಾಡಿದುದರಿಂದ ಬೇಸಾಯದ ಕೆಲಸವನ್ನು ಅವರು ಮನಮುಟ್ಟಿ ಮಾಡುವುದು ಸಾಧ್ಯ. ತಮಗೆ ದೊರೆತ ಈ ವಿಶೇಷ ಅನುಕೂಲತೆಯನ್ನು ಉತ್ಪಾದನೆ ಹೆಚ್ಚಿಸಲು ಉಪಯೋಗಿಸಿಕೊಂಡು, ಮುಂದಿನ ವರ್ಷದಲ್ಲಿ ಸುಲಭದಲ್ಲಿಯೇ ಸಾಲ ತೀರಿಸುವಂತೆ ಅವರು ಹಣವನ್ನು ಸಂಪಾದಿಸಲು ಈ ಸುಗ್ರೀವಾಜ್ಞೆ ಎಡೆಮಾಡಿಕೊಡುತ್ತದೆ.

ಇದು ಪ್ರಶ್ನೆಯ ಒಂದು ಮುಖ ಮಾತ್ರ. ಇನ್ನೊಂದು ಮುಖವೂ ಇದಕ್ಕುಂಟು: ಸಾಲವನ್ನು ಈ ವರ್ಷ ತೀರಿಸುವುದು ಅಗತ್ಯವಿಲ್ಲೆಂಬ ತೃಪ್ತಿಯ ಜೊತೆಗೆ ರೈತನಲ್ಲಿ ಅಧಿಕ ಆಹಾರ ಬೆಳೆಸಲು ಉತ್ಸಾಹವುಂಟಾಗುವುದೆಂದೂ ಅವನು ತನ್ನ ಕೈಯಲ್ಲಿ ಕೂಡಿದ ಹಣವನ್ನು ಇದಕ್ಕೋಸ್ಕರವೇ ಉಪಯೋಗಿಸುವನೆಂದೂ ಯಾವ ಭರವಸೆ ಇದೆ? ಅಧಿಕ ಆಹಾರದ ಉತ್ಪಾದನೆಗೆ ಉಪಯೋಗಿಸದೆ, ಅವನು ಹಣವನ್ನು ಇತರ ಕೆಲಸಗಳಿಗೆ ವಿನಿಯೋಗ ಮಾಡಿದರೆ, ಆಹಾರವೂ ಬೆಳೆಯುವುದಿಲ್ಲ. ಸಾಲವೂ ತೀರುವುದಿಲ್ಲ ಎಂಬ ಪರಿಸ್ಥಿತಿಯುಂಟಾಗುತ್ತದೆ. ಇದಲ್ಲದೆ, ಈ ವರ್ಷ ಚೆನ್ನಾದ ಬೆಳೆ ಬಂದಿತೆಂದ ಮಾತ್ರಕ್ಕೆ ಮುಂದಿನ ವರ್ಷವೂ ಇದೇ ರೀತಿ ಮಳೆ ಸ[illegible] ಉತ್ತಮ ಬೆಳೆ ಕೈಗೆ ಸಿಗುವುದೆಂದು ಹೇ[illegible]ಲ್ಲ ವ[illegible] ರೈತನು ಸಾಲ ತೀರಿಸದೆಯೇ ಉಳಿಯುವುದರಿಂದ, ಆ ಕಷ್ಟಕಾಲದಲ್ಲಿ ಅವನ ಚಿಂತೆ ಇನ್ನೂ ಹೆಚ್ಚಿಕೊಳ್ಳುವುದು.

ಅಧಿಕ ಉತ್ಪಾದನೆಗೋಸ್ಕರ ಕೈಯಲ್ಲಿದ್ದ ಹಣವನ್ನು ವಿನಿಯೋಗಿಸಬೇಕೆಂಬುದು ಈ ಸುಗ್ರೀವಾಜ್ಞೆಯ ಉದ್ದೇಶವೆಂಬುದು ನಿಜ. ಆದರೂ ಮನುಷ್ಯ ಸಹಜವಾದ ಬುದ್ಧಿಯಿಂದ ಕೆಲವರು ಕೈಯಲ್ಲಿದ್ದು ಸೇರಿದ ಗಳಿಗೆಯಲ್ಲೇ ಸಾಲವನ್ನು ತೀರಿಸಿ ಬಿಡೋಣವೆಂದು ಎಣಿಸಿದ್ದರೆ ಅ

ಮದ್ರಾಸಿನ ಜುಡಿಕೇಚರ್ ಹೈ ಕೋರ್ಟಿನಲ್ಲಿ

ಆರ್ಡಿನರಿ ಒರಿಜಿನಲ್ ಸಿವಿಲ್ ಜೂರಿಸ್‌ಡಿಕ್ಷನ್ ಒ. ಪಿ. ನಂಬ್ರ 292/1953.

1913ನೇ ಇಂಡಿಯನ್ ಕಂಪೆನೀಸ್ ಆಕ್ಟು

ಮತ್ತು

ಶ್ರೀ ಹೆಜಮಾಡಿ ಲಕ್ಷ್ಮೀನಾರಾಯಣ ಇಂಡಸ್ಟ್ರೀಸ್ ಲಿಮಿಟೆಡ್ ಈ ವಿಚಾರದಲ್ಲಿ

ಸುಬ್ಬ ಶೇ.. .... ಅರ್ಜಿದಾರ.

ಸದ್ರಿ ಅರ್ಜಿದಾರರು ಮಾಡಿದ ಅರ್ಜಿಯ ಕುರಿತು ಮದ್ರಾಸಿನ ಜುಡಿಕೇಚರ್ ಹೈ ಕೋರ್ಟಿನ ತಾ, 7—12—53ರ ಆರ್ಡರಿನಂತೆ ಇಂಡಿಯನ್ ಕಂಪೆನೀಸ್ ಆಕ್ಟಿನ ಶರ್ತಗಳಿಗನುಸಾರವಾಗಿ ಮೇಲ್ಕಂಡ ಕಂಪೆನಿಯನ್ನು ಬಂದು (wound up) ಮಾಡಬೇಕಾಗಿ ತೀರ್ಮಾನಿಸಲಾಗಿದೆ.

ಮದ್ರಾಸು: 7—12—1953.

ಕೆ. ವಿಠಲರಾವ್,
ಅರ್ಜಿದಾರರ ಪರ ಎಡ್ವೊಕೇಟ್.

UDIPI MUNICIPALITY

Sealed tenders will be received by the Commissioner, Udipi Municipality upto 4—0 p. m. on 18—12—1953 for the following works:—

NAME OF WORK.	ESTIMATE.	TENDER DEPOSIT.
1. Covering the drains of Temple square with R. C. Slabs.	Rs. 650/-	Rs. 35/-
2. Supply to 50 reinforced concrete dustbins	Rs. 2000,-	Rs. 100/-
3. Repairs at Thenkapete Drains.	Rs. 1630/-	Rs. 85/-
4. Patch repairs with bitumen premix carpet 2" thick along Old Post Office Road	Rs. 1620/-	Rs. 85/-

Particulars of tender, schedule of quantities, specifications etc. can be obtained from the Municipal Office, during Office hours on working days.

Municipal Office, Udipi, Dated 8—12—1953.

K. GOPALA MENON,
Commissioner, Udipi Municipality, Udipi.

ಶಿವರಾಮ ಕಾರಂತರ

ಕೆಲವು ಪುಸ್ತಕಗಳು

ಅಪೂರ್ವ ಪಶ್ಚಿಮ	4	0	0
ಬತ್ತದ ತೊರೆ	3	4	0
ಜಾರುವ ದಾರಿಯಲ್ಲಿ	4	0	0
ಔದಾರ್ಯದ ಉರುಳಲ್ಲಿ	6	0	0
ಮರಳಿ ಮಣ್ಣಿಗೆ	5	0	0
ಕಡುಗಿದ ಕರಿ	3	0	0
ಸನ್ಯಾಸಿಯ ಬದುಕು	2	8	0
ಸರಸಮ್ಮನ ಸಮಾಧಿ	1	8	0
ಕನ್ಯಾ ಬಲಿ	1	0	0
ದೇವದೂತರು	2	0	0
ಸಿರಿಗನ್ನಡ ಅರ್ಥಕೋಶ	4	0	0

ನವಭಾರತ ಪುಸ್ತಕ ಭಂಡಾರ, ಉಡುಪಿ.

ದರಲ್ಲಿ ಆಶ್ಚರ್ಯವಿಲ್ಲ—ಸುಗ್ರೀವಾಜ್ಞೆ, ಅಂಥವರ ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸುವಂತೆ ಪ್ರತಿಕ್ರಿಯೆ ಉಂಟುಮಾಡುವುದಿಲ್ಲವೆ? ಇದು ಅನೈತಿಕ ಪರಿಣಾಮವನ್ನುಂಟುಮಾಡುವುದರಿಂದ, ಅನಿಷ್ಟಪ್ರದವಲ್ಲವೆ? ರೈತನ ಪ್ರಾಮಾಣಿಕತೆಯನ್ನು ಈ ಸುಗ್ರೀವಾಜ್ಞೆಯ ಪರಿಣಾಮವಾಗಿ ನಾವೆಲ್ಲರೂ ಪ್ರಶ್ನಿಸುವಂತಾದರೆ ಕ್ಷೇಮವಿಲ್ಲ.

ಭೇದಭಾವನೆ

ಮಾನಸಿಕ ಪರಿಣಾಮಗಳ ಪರವಾಗಿಯೂ ವಿರುದ್ಧವಾಗಿಯೂ ಒಂದು ವಿಷಯವನ್ನು ಪ್ರತಿಪಾದಿಸುವುದು ಕಷ್ಟವಾಗಲಿಕ್ಕಿಲ್ಲ—ಆದ ಕಾರಣ ಮೇಲಿನದನ್ನು ಬಿಟ್ಟುಕೊಟ್ಟು, ವ್ಯಾವಹಾರಿಕವಾಗಿ ಸ್ಪಷ್ಟವಾಗಿ ಗೋಚರಿಸುವ ಸಾಧಕ ಬಾಧಕಾಂಶಗಳನ್ನು ವಿವೇಚಿಸೋಣ. ಸರಕಾರದವರ ಅಭಿಪ್ರಾಯದಲ್ಲಿ ಅನಾವೃಷ್ಟಿಯ ಕಾರಣದಿಂದ ರೈತರು ಸಾಲ ಪೀಡಿತರಾಗಿರುವರು. ಅಂದ ಮಾತ್ರಕ್ಕೆ ಇಡೀ ರಾಜ್ಯದ ಕೃಷಿಕರಿಗೆ ಈ ಸುಗ್ರೀವಾಜ್ಞೆಯನ್ನು ಅನ್ವಯಿಸಿರುವುದು ಸರಿಯೆ? ಮತ್ತು ಅದು ಅಷ್ಟು ಅಗತ್ಯ ಹಾಗೂ ಅನಿವಾರ್ಯವಾದುದೆ? ಇದೊಂದು ವಿಷಯ ಬಿಟ್ಟರೂ—ಸಾಲ ಪೀಡಿತ ರೈತರು ಸಹಕಾರಿ ಸಂಘ ಹಾಗೂ ಭೂಮಿ ಅಡವಿನ ಬೇಂಕುಗಳಿಂದ ಸಾಲ ಪಡೆದಿದ್ದರೆ, ಅದಕ್ಕೆ ಈ ಸಂರಕ್ಷಣೆ ಅನ್ವಯಿಸುವುದಿಲ್ಲ. ಇದೇಕೆ ಹೀಗೆ ಮಾಡಿದರು? ಸಾಮಾನ್ಯ ಸಾಹುಕಾರನೊಬ್ಬನಿಂದ ಹಣ ಪಡೆದುದಕ್ಕೆ ಸಂರಕ್ಷಣೆ ದೊರೆಯುವುದು ನ್ಯಾಯವೂ ಅಗತ್ಯವೂ ಆಗಿದ್ದಲ್ಲಿ ಸಂಘ ಸಂಸ್ಥೆಗಳಿಂದ ಪಡೆದ ಸಾಲಕ್ಕೂ ಈ ಸಂರಕ್ಷಣೆ ದೊರೆಯಬೇಡವೆ? ಆ ವಿಶಿಷ್ಟ ರೈತನು ಸಾಹುಕಾರನನ್ನು ಬಿಟ್ಟು ಬೇಂಕು ಹಾಗೂ ಸಹಕಾರ ಸಂಘಗಳನ್ನು ಆಶ್ರಯಿಸಿದುದಕ್ಕೆ ಇದು ಶಿಕ್ಷೆಯೆ?

ಈ ಆಕ್ಷೇಪಕ್ಕೆ ಸಮಾಧಾನ ನೀಡುತ್ತಾ ಶ್ರೀ ಸುಬ್ರಹ್ಮಣ್ಯಮರು-ಬೇಂಕು ಹಾಗೂ ಸಹಕಾರ ಸಂಘಗಳು ಸಾಲ ವಸೂಲಿಯ ವಿಷಯದಲ್ಲಿ ಸಾಹುಕಾರರಷ್ಟು ನಿರ್ದಯವಾಗಿ ವರ್ತಿಸುವುದಿಲ್ಲೆಂದು ಹೇಳಿದರು. ಸಾಹುಕಾರರ ಬಡ್ಡಿಯ ದರ ಹೆಚ್ಚು ಎಂದು ನಮಗೆ ತೋರೀತು—ಅವರು ತಮಗೆ ಖುಶಿಕಂಡಂತೆ ಸಾಲ ತೆಗೆದುಕೊಂಡವನನ್ನು ಕುಣಿಸಲೂ ಬಹುದು. ಹಾಗಿದ್ದ ಪಕ್ಷದಲ್ಲಿ ಈ ರೀತಿಯ ಕಷ್ಟವೂ ಬೇಡ, ಹೆಚ್ಚು ಬಡ್ಡಿಯ ಸಾಲವೂ ಬೇಡವೆಂದು, ಈಗಲೇ ಅದನ್ನು ತೀರಿಸಿಬಿಡಲು ರೈತ ಹವಣಿಸುವುದು ಸರಿಯಲ್ಲವೆ? ಒಂದು ವರ್ಷದ ಸಂರಕ್ಷಣೆ ಪಡೆದು, ಅಷ್ಟು ಬಡ್ಡಿಯನ್ನು ದಂಡತೆರುವುದು ಯಾಕೆ? ಸಹಕಾರೀ ಸಂಘಗಳಿಂದಲೇ ತಮಗೆ ಹೆಚ್ಚು ಸೌಲಭ್ಯ ದೊರೆಯುವುದೆಂಬ ಸಂಗತಿಯನ್ನು ಮನವರಿಕೆಮಾಡಿಸಿಕೊಡಲು ಸರಕಾರ ನೋಡುವ ಬಗೆ ಇದೇಯೆ?

ಹಳ್ಳಿಯ ಆರ್ಥಿಕ ವ್ಯವಸ್ಥೆ

ಇನ್ನೊಂದು ಅಭಿಪ್ರಾಯವನ್ನೂ ನಾವೀಗ ವಿಮರ್ಶಿಸೋಣ. ಸರಕಾರವು ರೈತರಿಗೆ ಕೊಡಲ್ಪಟ್ಟ ಸಾಲ ವಸೂಲಿಗೆ ನಿರ್ಬಂಧ ಹೇರುವಾಗ ಅದರ ವಾಸ್ತವಿಕ ಪರಿಣಾಮವೇನಾದೀತೆಂಬುದನ್ನು ಗಮನಿಸಿದಂತಿಲ್ಲ: ಉದಾಹರಣೆಗೆ ಕಷ್ಟ ಕಾಲದಲ್ಲಿ ಮಾಡಿದ ಸಹಾಯವನ್ನು ಮರಳಿ ಪಡೆಯಲು ಯತ್ನಿಸಬಾರದೆಂದು ಸಾಹುಕಾರನಿಗೆ ವಿಧಿಸಿದ್ದರಿಂದ, ಇನ್ನು ಮುಂದೆ ಅವನು ಯಾವ ರೈತನ ನೆರವಿಗೂ ಹೋಗಲು ಇಷ್ಟಪಡಲಾರ. ಹಳ್ಳಿಯಲ್ಲಿ ಕಳೆದ ದಶಕಕ್ಕಿಂತಲೂ ಈ ದಶಕದಲ್ಲಿ ಸಾಲ ಸೋಲ ಹೆಚ್ಚಿಕೊಂಡಿರುತ್ತದೆ - ಅಂದರೆ, ಸಾಲ ಮಾಡುವುದು ಹಳ್ಳಿಯ ರೈತನಿಗೆ ಅನಿವಾರ್ಯವಾಗಿ ಪರಿಣಮಿಸಿದೆ. ಇಂಥದರಲ್ಲಿ ಹಳ್ಳಿಯಲ್ಲಿ ಯಾವ ಬಗೆಯಿಂದಲೂ ಸಾಲವೇ ಸಿಗದ ವಾತಾವರಣವನ್ನು ಸುಗ್ರೀವಾಜ್ಞೆ ಕಲ್ಪಿಸುವ ಪಕ್ಷದಲ್ಲಿ ಗ್ರಾಮಾಂತರದ ಆರ್ಥಿಕ ವ್ಯವಸ್ಥೆಯೇ ಬುಡಮೇಲಾಗುವುದು. ರೈತನಿಗೆ ಸುಗ್ರೀವಾಜ್ಞೆಯಿಂದ ಉಂಟಾಗುವ ಹಿತಕ್ಕಿಂತಲೂ ಹಳ್ಳಿಯ ಆರ್ಥಿಕ ವ್ಯವಸ್ಥೆಯ ಮೇಲಾಗುವ ದುಷ್ಪರಿಣಾಮವೇ ಅತ್ಯಂತ ಮಹತ್ವದ್ದೆಂದು ಪರಿಗಣಿಸಲ್ಪಟ್ಟಿದೆ. "ರೈತ"ನೆಂಬ ಪದಕ್ಕೆ ಕೊಡಲ್ಪಟ್ಟ ವಿಶಾಲವಾದ ಅರ್ಥ ವಿವರಣೆಯ ಪರಿಣಾಮವಾಗಿ—ಈ ದುಷ್ಪರಿಣಾಮಕ್ಕೆ ಇತಿಮಿತಿಯೇ ಇಲ್ಲವೆನಿಸಿದೆ. ಒಂದು ತುಣುಕು ಭೂಮಿ ಇದ್ದ ಯಾರೇ ಆದರೂ ಈಗ ಈ ಸುಗ್ರೀವಾಜ್ಞೆಯ ಆಶ್ರಯವನ್ನು ನಿರಾತಂಕವಾಗಿ ಪಡೆಯಬಲ್ಲನು.

ಬೇಸಾಯದಲ್ಲಿ ನಿರತನಾದ ನಿಜವಾದ ಕೃಷಿಕನಂತೆ ದೊಡ್ಡ ಭೂಮಾಲಿಕನೂ ಈ ಸುಗ್ರೀವಾಜ್ಞೆಯ ಆಶ್ರಯವನ್ನು ಪಡೆಯುವನು. ಅವನ ಸಾಲ ಸೋಲಗಳಿಗೂ ರಕ್ಷಣೆ ದೊರೆತರೆ ಸಾಲಗಾರರು ತಮ್ಮ ವ್ಯವಹಾರವನ್ನು ಸಾಗಿಸುವುದೆಂತೋ ತಿಳಿಯದು. ಕೃಷಿಯನ್ನು ಗೌಣವಾಗಿಯೂ ವ್ಯಾಪಾರ ಮತ್ತಿತರ ಕಸಬನ್ನು ಮುಖ್ಯವಾಗಿಯೂ ಕೈಕೊಂಡಾತ ಕೃಷಿ ಸಂಬಂಧವಲ್ಲದ ವ್ಯವಹಾರಗಳಿಗೋಸ್ಕರ ಸಾಲ ತೆಗೆದಿದ್ದರೂ, ಒಂದು ತುಂಡು ಭೂಮಿ ಅವನ ಹೆಸರಿನಲ್ಲಿದೆ ಎಂಬ ಕಾರಣದಿಂದ ಸಾಲದಿಂದ ಸಂರಕ್ಷಣೆ ದೊರೆಯುತ್ತದೆ.

ಅನುಚಿತ ಪರಿಣಾಮ

ನಿಜವಾಗಿ ರೈತನಲ್ಲದವನೂ ರೈತನೆಂದು ಹೇಳಿ ತಾತ್ಕಾಲಿಕ ಸಾಲ ಪರಿಹಾರವನ್ನು ಪಡೆಯುವಂತಾದರೆ, ಅದು ಈ ಸುಗ್ರೀವಾಜ್ಞೆಯ ಉದ್ದೇಶಕ್ಕೆ ಸರಿಯಾಗಿಲ್ಲ. ಈ ವರ್ಷ ಹೀಗೆ ತಾನು ರೈತನೆಂದು ಕಾರಣ ತೋರಿಸಿ ರಕ್ಷಣೆ ಪಡೆದಾತ, ಮುಂದಿನ ವರ್ಷದಲ್ಲಿ ತಾನು ರೈತನೇ ಅಲ್ಲವೆಂದೂ ತನ್ನ ಉದ್ಯೋಗ ವ್ಯಾಪಾರ ಅಥವಾ ಇನ್ನೊಂದೋ ಎಂದೂ ಪ್ರತಿಪಾದಿಸಿ, ಇಷ್ಟರೊಳಗೆಯೇ ಸಾಲದ ಅವಧಿ ತೀರಿ ಹೋಗಿದೆಯೆಂದು ಹೇಳಿದರೆ - ಆಗ ಸಾಲ ಕೊಟ್ಟವನಿಗೆ ಟೊಪ್ಪಿಯೇ ಗತಿ!

ಇನ್ನೂ ಒಂದು ವಿಷಯ—ರೈತನಿಗೆ ಮಾತ್ರವಲ್ಲ ರೈತನಲ್ಲದ ಬೇರೆಯವರೊಂದಿಗೆ ಅವನೂ ಸೇರಿ ತೆಗೆದ ಯಾವ ಸಾಲದ ವಸೂಲಿಗೂ ಕ್ರಮ ತೆಗೆದುಕೊಳ್ಳಲಾಗದೆಂದು ಸುಗ್ರೀವಾಜ್ಞೆ ವಿಧಿಸಿದುದು ತೀರ ಅನುಚಿತ. ಸುಗ್ರೀವಾಜ್ಞೆಯು ಈ ರೀತಿಯಲ್ಲೂ ರೈತರನ್ನು ಬಿಟ್ಟು ಹೊರಗಿನವರ ವ್ಯವಹಾರದ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ

ರೈತರ ಸಾಲ ಪರಿಹಾರದ ಕಾನೂನೊಂದು ೧೯೩೭ನೇ ಇಸವಿಯಲ್ಲಿ ರಚಿಸಲ್ಪಟ್ಟಾಗ ಅದು ಇಷ್ಟು ವ್ಯಾಪ್ತಿಯನ್ನೊಳಗೊಂಡಿರಲಿಲ್ಲ - ಕೆಲವು ಇತಿಮಿತಿಗಳೊಳಗೆಯೇ ಅದು ಕೆಲಸ ಮಾಡಿತು. ಆದರೆ ಈ ಸುಗ್ರೀವಾಜ್ಞೆ ತನ್ನ ಕಕ್ಷೆಯನ್ನೂ ಉದ್ದೇಶವನ್ನೂ ಮೀರಿ, ಒಳಿತಿಗಿಂತಲೂ ಹೆಚ್ಚು ಕೆಡುಕುಂಟಾಗುವುದಕ್ಕೆ ಅವಕಾಶ ಕೊಟ್ಟಿದೆ. ಈ ವಿಷಯದಲ್ಲಿ ಮುಂದೆ ಮಸೂದೆ ಮಂಡಿಸುವವರೂ ಆ ಚರ್ಚೆಯಲ್ಲಿ ಭಾಗವಹಿಸುವವರೂ ಮೇಲಿನ ಅಂಶಗಳನ್ನು ಅಗತ್ಯ ಗಮನಿಸಬೇಕು.

ಸಾಲದಲ್ಲಿ ರೈತರು ಮುಳುಗಿರುವರೆಂಬುದು ಸುಳ್ಳಲ್ಲ—ಆದರೆ ಅದಕ್ಕೆ ಸಂರಕ್ಷಣೆ ಕೊಡುವಾಗ ಇಂಥ ಪ್ರಮಾದಗಳಿಗೆ ಎಡೆ ಕೊಡುವುದು ಸರ್ವಥಾ ಸರಿಯಲ್ಲ. ಅನಿಷ್ಟ ಪರಿಣಾಮವನ್ನು ಆಹ್ವಾನಿಸುವುದು ಯಾರಿಗೂ ಬೇಡದ ಕೆಲಸ.

ಭಾಷಾರಾಜ್ಯಗಳ ನಿರ್ಮಾಣ ಪ್ರಶ್ನೆ

ವಿರೋಧಿಸಲು ಶ್ರೀ ಎಸ್. ಕೆ. ಪಾಟೀಲರ ಉಪಕ್ರಮ

ಭಾಷಾವಾರ ಪ್ರಾಂತ ರಚನೆಯನ್ನು ರಚಿಸುವುದು ಅಗತ್ಯದ ವಿಷಯವೆಂದು ಹೇಳುವ ಜನಾಭಿಪ್ರಾಯವನ್ನು ಗಮನಿಸಿ ಭಾರತ ಸರಕಾರ ಉಚ್ಚಾಧಿಕಾರ ಸಂಪನ್ನ ಆಯೋಗವನ್ನು ನೇಮಿಸಲಿಕ್ಕೆ ಇರುವಾಗ – ಮುಂಬಯಿಯಲ್ಲಿ ಪಕ್ಷಾತೀತ ರಾಷ್ಟ್ರೀಯ ಐಕ್ಯದ ಸಂಸ್ಥೆಯೊಂದು ಮುಂಬಯಿ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ. ಎಸ್. ಕೆ. ಪಾಟೀಲರ ನೇತೃತ್ವದಲ್ಲಿ ಸಂಘಟಿಸಲ್ಪಟ್ಟಿದೆ. ಇದು ಭಾಷಾವಾರು ಪ್ರಾಂತ ರಚನೆಯ ನಿರ್ಮಾಣ ಪ್ರಶ್ನೆಯನ್ನು ಕನಿಷ್ಠ ೧೫ ವರ್ಷಗಳ ವರೆಗಾದರೂ ತೆಗೆದುಕೊಳ್ಳಕೂಡದೆಂದು ಚಳವಳಿಸುತ್ತದೆ.

ಭಾಷಾವಾರ ರಾಜ್ಯ ರಚನೆಯ ಪ್ರತಿಪಾದಕರು ರಾಷ್ಟ್ರದ ಪ್ರಗತಿಯಲ್ಲಿ ಆಸ್ಥೆ ಇಲ್ಲದವರೆಂದೂ ಅಂಥವರ ಕೈಗೆ ದೇಶದ ಭವಿತವ್ಯವನ್ನು ಒಪ್ಪಿಸಿ ಕೊಟ್ಟರೆ ಸರಿಯಾಗದೆಂದೂ ಶ್ರೀ. ಪಾಟೀಲರು ಹೇಳಿದರಾಗಿ ಕೇಳುತ್ತೇವೆ. ಭಾಷಾ ರಾಜ್ಯಗಳ ರಚನೆಗೆ ಇದು ಯೋಗ್ಯ ಕಾಲವಲ್ಲ ಪಾಕ—ಅಮೇರಿಕಾ ಮಿಲಿಟರಿ ಒಪ್ಪಂದದ ಪರಿಣಾಮಗಳನ್ನು ಎದುರಿಸಲೂ ಆರ್ಥಿಕ ಅಭಿವೃದ್ಧಿ ಸಾಧಿಸಿ ಆಡಳಿತ ಭದ್ರವಾಗಲೂ ಈಗ ಸರ್ವ ಶಕ್ತಿಯನ್ನು ಉಪಯೋಗಿಸುವುದು ಅಗತ್ಯವಿದೆಯಾಗಿ ಶ್ರೀ ಪಾಟೀಲರ ಅಭಿಪ್ರಾಯ.

ಕಾಂಗ್ರೆಸಾಧ್ಯಕ್ಷ ನೆಹರೂರವರು ಈಚೆಗೆ ಪ್ರದೇಶ ಕಾಂಗ್ರೆಸದ ಅಧ್ಯಕ್ಷರುಗಳಿಗೆ ಒಂದು ಪರಿಪತ್ರ ಕಳಿಸಿ ಕಾಂಗ್ರೆಸ ಸದಸ್ಯರು ಭಾಷಾವಾರ ರಾಜ್ಯ ನಿರ್ಮಾಣದ ಪ್ರಶ್ನೆಯನ್ನು ತೆಗೆದುಕೊಂಡು ಚಳುವಳಿ ನಡಿಸುವುದನ್ನು ಪ್ರೋತ್ಸಾಹಿಸಬಾರದೆಂದು ಹೇಳಿರುವುದೂ ಈಗ ಶ್ರೀ ಪಾಟೀಲರಂಥವರು ಕಾಂಗ್ರೆಸದಲ್ಲಿ ಇದ್ದುಕೊಂಡೇ ಪಕ್ಷಾತೀತ ರಾಷ್ಟ್ರೀಯ ಐಕ್ಯರಂಗವೊಂದನ್ನು ರಚಿಸಿ ಭಾಷಾ ರಾಜ್ಯಗಳ ನಿರ್ಮಾಣವನ್ನು ವಿರೋಧಿಸುವುದೂ ಅರ್ಥಪೂರ್ಣವಾಗಿರುತ್ತದೆಂದು-ಭಾಷಾ ರಾಜ್ಯಗಳ ಪ್ರತಿಪಾದಕರು ಈ ಹೊಸ ಉಪಕ್ರಮವನ್ನು ಟೀಕಿಸಿದ್ದಾರೆ.

ಮಹಿಳೆಯರ ಸೇವೆ

ಮಹಿಳೆಯರು ಭಾರತೀಯರ ಆಹಾರಾಭಿರುಚಿಯಲ್ಲಿ ಸಾಕಷ್ಟು ಬದಲಾವಣೆ ಸಾಧಿಸಿರುವುದನ್ನು ಮದ್ರಾಸಿನ ಗವರ್ನರರೂ ಶ್ರೀ ರಾಜಗೋಪಾಲಚಾರಿಯವರೂ ಪ್ರಶಂಸಿಸಿರುವರು. ಅಖಿಲ ಭಾರತ ಮಹಿಳೆಯರ ಆಹಾರ ಮಂಡಳದ ಸಭೆ ಮದ್ರಾಸಿನಲ್ಲಿ ಜರಗಿದಾಗ ಗವರ್ನರರು ಭಾಷಣ ಮಾಡುತ್ತಾ ದವಸ ಧಾನ್ಯಗಳನ್ನು ಬಿಟ್ಟು ಉಳಿದ ಆಹಾರದ್ರವ್ಯಗಳನ್ನೇ ಸಮ ತೂಕವಾಗಿ ಭುಂಜಿಸಲು ಅನುಕೂಲವಾಗುವಂತೆ ಮಹಿಳೆಯರು ನಡೆಸಿದ ಪ್ರಯತ್ನವನ್ನು ಶ್ಲಾಘಿಸಿದರು. ರುಚಿ ಕಟ್ಟಾದ, ಆರೋಗ್ಯಕ್ಕೆ ಹಿತಕರವಾದ ಮತ್ತು ಸಂ

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

70 ವರುಷಗಳಿಂದ ಜಗಜ್ಜನಿತವಾದುದು
ಮಲೇರಿಯಾ, ಇನ್‌ಫ್ಲೂಯೆಂಜಾ ಮತ್ತು ಇತರ ಜ್ವರಗಳಿಗೆ
ಬಾಟ್ಲಿವಾಲಾ ಅಗ್ ಮಿಕ್ಸ್ಚರ್
ಮತ್ತು ಮಾತ್ರೆಗಳು
ಎಲ್ಲಾ ಕೆಮಿಸ್ಟರಲ್ಲೂ ಕಿರಾಣಿ ಅಂಗಡಿಕಾರರಲ್ಲೂ ಮಾರಲ್ಪಡುತ್ತವೆ.
ಉತ್ಪಾದನಾಧಿಕಾರಿಗಳು:-
ಡಾ| ಎಚ್. ಎಲ್. ಬಾಟ್ಲಿವಾಲಾ ಸನ್ಸ್ & ಕೊ. ಲಿಮಿಟೆಡ್,
ಬಾಟ್ಲಿವಾಲಾ ಬಿಲ್ಡಿಂಗ್, ಪೋರ್ತುಗೀಸ್ ಸ್ಟ್ರೀಟ್,
Tele. Add: "CAWASHABAD" ದಾದರ್, ಬೊಂಬಾಯಿ, 28

ನಾಗಪುರದ ಬಳಿ ಭೀಕರ ವಿಮಾನ ಅಪಘಾತ

ಕೂಲಿಕಾರ ಧುರೀಣ ಹರಿಹರನಾಥರ ನಿಧನ

ತೋಷ ಪ್ರದವಾದ ಸವಿಯೂಟವನ್ನು ಒದಗಿಸುತ್ತಿದ್ದಂತೆಯೇ ಆಹಾರ ಧಾನ್ಯಗಳ ಕೊರತೆಯ ವಾತಾವರಣವನ್ನು ತಿಳಿಗೊಳಿಸಿರುವುದು ಹೆಂಗಸರ ಮಹಾ ಸೇನೆಯೊಂದವರ ಅಭಿಪ್ರಾಯ.

ನ್ಯಾಯ ಮೂರ್ತಿಗಳ ಉದ್ಗಾರ

ಮುಂಬಯಿ ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದೊಂದು ಖಟ್ಲೆಯ ಸಂಬಂಧದಲ್ಲಿ ನ್ಯಾಯ ಮೂರ್ತಿಗಳು ಗಂಭೀರವಾದ ಮತ್ತು ಮಹತ್ವದ ಅಭಿಪ್ರಾಯವೊಂದನ್ನು ವ್ಯಕ್ತಗೊಳಿಸಿರುವರು. ಧನಿಕರು ಬೇಕಾದ ಅಪರಾಧಗಳನ್ನು ಮಾಡಿ ತಮ್ಮ ಧನಬಲದಿಂದ ದಂಡವನ್ನು ತುಂಬಿ ಪಾರಾಗುವರೆಂಬ ಭಾವನೆಗೆ ಎಡೆಕೊಡುವುದು ನ್ಯಾಯವಲ್ಲವೆಂದೂ ಇದು ಆಡಳಿತದ ಪ್ರಾಮಾಣಿಕತೆಯ ಬಗ್ಗೆ ಜನರಲ್ಲಿರುವ ವಿಶ್ವಾಸಕ್ಕೆ ಅಪಾಯವನ್ನುಂಟು ಮಾಡುವುದೆಂದೂ ನ್ಯಾಯಮೂರ್ತಿಗಳು ನುಡಿದಿರುವುದು ಗಮನೀಯವಾಗಿರುತ್ತದೆ.

ಸಾವಿರ ರೂಪಾಯಿನೋಟುಗಳ ಬದಲಾವಣೆಯ ಪ್ರಕರಣದಲ್ಲಿ ರಾಮಕುಮಾರ ಶ್ರೀನಿವಾಸ ಮೊರಾರಕಾ ಮತ್ತು ಗೋಕುಲಚಂದ ದ್ವಾರಕಾ ದಾಸ ಮೊರಾರಕಾ ಎಂಬಿಬ್ಬರ ವಿರುದ್ಧ ನಡೆಸಿದ ಖಟ್ಲೆಯಲ್ಲಿ ಕೆಳಗಿನ ಕೋರ್ಟು ತಲಾ ೬೭ ಸಾವಿರ ರೂಪಾಯಿಗಳ ದಂಡ ವಿಧಿಸಿತು. ದಂಡ ಮಾತ್ರ ಸಾಲದೆಂದೂ ಅದರೊಂದಿಗೆ ೬ ತಿಂಗಳ ಕಾಲ ಸಾದಾ ಶಿಕ್ಷೆಯನ್ನು ಅವರು ಅನುಭವಿಸಬೇಕೆಂದೂ ವಿಧಿಸುವಾಗ ನ್ಯಾಯ ಮೂರ್ತಿಗಳು ಮೇಲಿನಂತೆ ಹೇಳಿದರು

ವಿಮಾನ ಅವಘಡ

ವಿಮಾನ ಅಪಘಾತಗಳ ವಾರ್ತೆ ಇಂದು ಪದೇ ಪದೇ ಕೇಳಿಬರುತ್ತಿದೆ—ಆಕಾಶಯಾನದ ಸುಖದ ಬೆನ್ನಿಗೆಯೇ ಭೀಕರ ಅಪಘಾತಗಳ ರೋಮಾಂಚಕ ವರದಿಯನ್ನೂ ಕೇಳುವ ದುರ್ದೈವ ನಮ್ಮದು.

ಮೊನ್ನೆ ಇಂಥ ಎರಡು ಅಪಘಾತಗಳ ವಾರ್ತೆ ಬಂತು. ಒಂದನೆಯದು, ಬೆಂಗಳೂರಿನಲ್ಲಿರುವ ಹಿಂದುಸ್ಥಾನ ವಿಮಾನ ಕಾರ್ಖಾನೆಯ ವಲಯದಲ್ಲಿಯೇ ದಿನಾಂಕ ೧೧ರಂದು ಘಟಿಸಿದ ದುರಂತ. ಮರುದಿನದ ಆಕಾಶಯಾನ ಸಂಬಂಧವಾದ ಸಮಾರಂಭವೊಂದರಲ್ಲಿ ಭಾಗವಹಿಸಲು ಅಭ್ಯಾಸ ನಡೆಸುತ್ತಿದ್ದಂತೆಯೇ ವಿಮಾನ ಅಪಘಾತಕ್ಕೆ ಒಳಗಾಯಿತು; ಮತ್ತು ಅದರಲ್ಲಿದ್ದ ಮುಖ್ಯ ಪರೀಕ್ಷಕ ವೈಮಾನಿಕರಾದ ಕೇಪ್ಟನ್ ಎಂ. ವಿ. ನಾಮ ಜೋಶಿಯವರು ಮೃತ್ಯು ವಶರಾದರು. ಹೀಗೆ ವೈಮಾನಿಕ ಕ್ಷೇತ್ರದಲ್ಲಿ ದಿವ್ಯ ಭವ್ಯ ಜೀವನ ನಡೆಸಿದ ನಾಮಜೋಶಿಯವರು ಕಣ್ಮರೆಯಾದರು. ಕಾರ್ಖಾನೆ ಅವರ ಕುರಿತು ಸಂತಾಪ ವ್ಯಕ್ತಗೊಳಿಸಿತಲ್ಲದೆ, ಮರುದಿನದ ಸಮಾರಂಭವನ್ನೂ ರದ್ದು ಮಾಡಿತು.

ಸೋನೆಗಾಂವದ ದುರಂತ

ದಿನಾಂಕ ೧೨ರಂದು ನಸುಕಿನ ಮೂರೂವರೆ ತಾಸಿನ ಸಮಯ ನಾಗಪುರದಿಂದ ಮದ್ರಾಸಿಗೆಂದು ಹೊರಟ ಭಾರತೀಯ ಆಕಾಶಯಾನವೊಂದು ಸೋನೆಗಾಂವ ನಿಲ್ದಾಣವನ್ನು ಬಿಟ್ಟ ಐದೇ ನಿಮಿಷದಲ್ಲಿ ಎರಡೂವರೆ ಮೈಲು ದೂರದಲ್ಲಿ ಹೊಲಗಳ ನಡುವೆ ಬಿದ್ದು, ಉರಿಯಿತು. ದೇಶದ ಬೇರೆ ಬೇರೆ ಭಾಗಗಳಿಂದ ೧೦ ಮಂದಿ ಪ್ರಯಾಣಿಕರನ್ನೂ ನಾಲ್ವರು ವೈಮಾನಿಕರನ್ನೂ ೧೯೭೪ ರಾತಲು ಟಪ್ಪಾಲನ್ನೂ ಹೊತ್ತು ಸಾಗಿದ್ದ ಈ ವಿಮಾನಕ್ಕೆ ಸಂಭವಿಸಿದ ಅಪಘಾತ, ರಾಷ್ಟ್ರೀಕೃತ ವಿಮಾನ ಸಾರಿಗೆಯ ದಾಖಲೆಯಲ್ಲಿ ಮೊದಲಿನದು.

ಹತ್ತೂ ಮಂದಿ ಪ್ರಯಾಣಿಕರು ಹಾಗು ಮೂವರು ವೈಮಾನಿಕರು ಅಲ್ಲಿಯೇ ಮೃತರಾದರು. ಮುಖ್ಯ ವೈಮಾನಿಕ ಕೇಪ್ಟನ್ ಕಾರ್ಟನರ ಮಾತ್ರ ಹೇಗೋ ವಿಮಾನದಿಂದ ದೂರ ಒಗಿಯಲ್ಪಟ್ಟು, ಬದುಕಿದರು. ಟಪ್ಪಾಲು ಸುಟ್ಟು ಭಸ್ಮವಾಯಿತು.

ಮೃತ್ಯು ವಶರಾದವರಲ್ಲಿ ಭಾರತ ಪಾರ್ಲಿಮೆಂಟಿನ ಸದಸ್ಯರೂ ರಾಷ್ಟ್ರೀಯ ಮಜೂರ ಸಂಘದ ಕಾರ್ಯದರ್ಶಿಗಳೂ ಆದ ಹರಿಹರನಾಥ ಶಾಸ್ತ್ರಿಗಳೂ ಒಬ್ಬರು. ಅವರು ಮುನ್ನ ದಿನ ಸಂಜೆ ದಿಲ್ಲಿಯಿಂದ ಕೊಚ್ಚಿಗೆ ಮಜೂರ ಪರಿಷತ್ತಿನಲ್ಲಿ ಭಾಗವಹಿಸಲು ತೆರಳಿದ್ದರು.

ವಿಧಿಯ ಲೀಲೆ

ಆಗ ಅವರ ಮಡದಿ ಕೊಚ್ಚಿಗೆ ತಲುಪಿದ ಕೂಡಲೇ ತಂತಿ ಕಳಿಸಿರೆಂದು ಹೇಳಿದ್ದಳಂತೆ—"ಅದೇಕೆ, ನಾನು ಕೊಚ್ಚಿಯನ್ನು ಸುರಕ್ಷಿತವಾಗಿ ಸೇರಿದ ಸುದ್ದಿ ನಿನಗೆ ಪತ್ರಿಕೆಗಳಿಂದ ತಿಳಿದೇ ತಿಳಿಯುತ್ತದೆ" ಎಂದವರು ಮಾರ್ನುಡಿದರಂತೆ! ಆದರೆ ದೈವ ದುರ್ವಿಲಾಸಕ್ಕೇನೆನ್ನೋಣ'

ಹರಿಹರನಾಥ ಶಾಸ್ತ್ರಿಗಳು ರೈಲ್ವೆಯ ಮೂಲಕ ಕೊಚ್ಚಿಗೆ ಹೋಗುವ ನಿಶ್ಚಯ ಮಾಡಿದ್ದರು. ಆದರೂ ಏನೋ ಏನೋ ವಿಮಾನ ಹಾರಾಟದಲ್ಲಿ ಅವರು ಉದ್ಯುಕ್ತರಾದರು. ದಿಲ್ಲಿಯನ್ನು ಬಿಡುವ ಮುಂಚೆ ಅವರು ತಮ್ಮ ಕಾಗದ ಪತ್ರಗಳ ಚೀಲವನ್ನು ಪಾರ್ಲಿಮೆಂಟಿನಲ್ಲಿಯೇ ಮರೆತು ಬಿಟ್ಟಿದ್ದರು. ಅವನ್ನು ಅವರ ಮನೆಗೆ ಕಳಿಸಲು ಫೋನು ಮಾಡಿದ ಗಳಿಗೆಯಲ್ಲಿಯೇ ನಿಧನದ ಶೋಚನೀಯ ವಾರ್ತೆ ಕೇಳಿ ಎಲ್ಲರೂ ದಿಗ್ಭ್ರಮೆಗೊಂಡರು.

ವಿಮಾನ ಹೊರಟೊಡನೆಯೇ ಹೊಯ್ದಾಡ ಹತ್ತಿತೆಂದೂ ಅದು ಕೆಳಗೆ ಬೀಳುವ ರಭಸದಲ್ಲಿ ಪೆಟ್ರೋಲ ಟಾಂಕಿ ಒಡೆದು ಬೆಂಕಿ ಹತ್ತಿ ಕೊಂಡಿತೆಂದೂ ಹೇಳಲ್ಪಟ್ಟಿದೆ ಆದರೆ ಕಾರಣಗಳು ಇನ್ನು ತಿಳಿಯಬೇಕಷ್ಟೆ.

ಅಪಘಾತಕ್ಕೆ ಈಡಾದ ವಿಮಾನವನ್ನು ಮುಟ್ಟುವುದು ಸುಲಭದಲ್ಲಿ ಸಾಧ್ಯವಾಗಲಿಲ್ಲ ನಡುವೆ ಹಳ್ಳ ಹಾಗೂ ಜೋಳದ ಹೊಲಗಳು ಅಡ್ಡನಾದವು. ೧೫ ೨೦ ನಿಮಿಷಗಳ ಬಳಿಕ ಆ ಸ್ಥಳವನ್ನು ಜನರು ಮುಟ್ಟಿದಾಗ ವಿಮಾನ ಉರಿಯುತಿದ್ದಿತು ಆದರೆ ಜ್ವಾಲೆಯ ತೀವ್ರತೆಯಿಂದ ಅದರಲ್ಲಿದ್ದ ಯಾರಿಗೂ ನೆರವು ಸಲ್ಲಿಸುವುದಾಗಲಿಲ್ಲ.

ಕಾರ್ಮಿಕ ಧುರೀಣ

ದಿವಂಗತ ಹರಿಹರನಾಥ ಶಾಸ್ತ್ರಿಯವರು ಕೂಲಿಕಾರ ಚಳವಳದಲ್ಲಿ ಅಗ್ರಗಣ್ಯ. ಕಾಂಗ್ರೆಸು ಸಂಸ್ಥೆಯ ಕೂಲಿಕಾರ ಚಟುವಟಿಕೆಗಳಿಗೆ ಇವರಿಂದ ಸ್ಫೂರ್ತಿಯೂ ಸಹಾಯವೂ ಸೇವೆಯೂ ದೊರೆತಿದೆ. ಶ್ರೀ ಶಾಸ್ತ್ರಿಯವರು ಜಯಪ್ರಕಾಶ ನಾರಾಯಣರ ಅನುಯಾಯಿಗಳಾಗಿದ್ದರೂ, ಜಯಪ್ರಕಾಶರು ಕಾಂಗ್ರೆಸ್ ಬಿಟ್ಟು ಹೋದಾಗ ಅವರನ್ನು ಹಿಂಬಾಲಿಸದೆ ಕಾಂಗ್ರೆಸದಲ್ಲಿಯೇ ಉಳಿದರು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕಾರ್ಮಿಕ ಕ್ಷೇತ್ರದಲ್ಲಿ ಅವರಷ್ಟು ಕೀರ್ತಿ ಪಡೆದವರೂ ಕೆಲಸ ಮಾಡಿದವರೂ ವಿರಳ. ರಾಜಕೀಯದಲ್ಲಿಯೂ ಅವರು ನುರಿತ ವ್ಯಕ್ತಿ ಲೋಕಸಭೆಯಲ್ಲಿ ಸ್ಪಷ್ಟವಾದಿಗಳೆಂದು ಅವರು ಕೀರ್ತಿ ಪಡೆದಿದ್ದರು.

ಇಂಥವರ ನಿಧನಕ್ಕೆ ಶೋಕ ಸೂಚಿಸಿ, ಲೋಕ ಸಭೆ ಎರಡು ನಿಮಿಷಗಳ ಮೌನವನ್ನು ಆಚರಿಸಿತು. ನೆಹರೂರ ಗೈರು ಹಾಜರಿಯಲ್ಲಿ ಸಭಾ ಧುರೀಣರ ಪರವಾಗಿ ಮೌಲಾನಾ ಆಜಾದರು, ದಿವಂಗತ ಹರಿಹರ ನಾಥರ ಗುಣಗಾನ ಮಾಡಿದರು. ನೆಹರೂರವರು ತಮ್ಮ ಪ್ರವಾಸ ಕಾಲದಲ್ಲಿ ಈ ಸುದ್ದಿ ಕೇಳಿ ಸಂತಾಪ ಸೂಚಿಸುತ್ತಾ "ಭವ್ಯ ಭಾರತವನ್ನು ಕಟ್ಟಲು ನಮ್ಮೊಡನೆ ಹೆಗಲುಕೊಟ್ಟು ಸಹಕರಿಸಿದ ಆಧಾರ ಸ್ತಂಭಗಳು ಒಂದೊಂದಾಗಿ ಕಳಚಿ ಬೀಳುತ್ತಿವೆ" ಎಂದು ಉದ್ಗರಿಸಿದರು

ಸೈನಿಕರ ಕರ್ತವ್ಯ

ನೆಹರೂರವರು ಕಳೆದ ಬಾರಿ ಬಂಗಾಳದಾಚೆ ಪ್ರವಾಸ ಕೈಗೊಂಡಿದ್ದರು-ಡೆಹರಾಡೂನಿನಲ್ಲಿರುವ ರಾಷ್ಟ್ರೀಯ ಸಂರಕ್ಷಣಾ ವಿದ್ಯಾಲಯದ ಸೈನ್ಯ ಶಿಕ್ಷಣ ವಿಭಾಗದಲ್ಲಿ ತರಬೇತಿ ಹೊಂದಿ ಉತ್ತೀರ್ಣರಾದ ಅಧಿಕಾರಿಗಳನ್ನು ಅವರು ಉದ್ದೇಶಿಸಿ ಮಾತನಾಡುತ್ತಾ ಭಾರತಕ್ಕೆ ಯಾವ ದೇಶದ ಮೇಲೂ ಆಕ್ರಮಣ ಮಾಡುವ ಇಚ್ಛೆ ಇಲ್ಲವೆಂದೂ ಆದರೆ ತನ್ನ ಮೇಲಾಗುವ ದಾಳಿಯನ್ನು ಅದು ಪ್ರತಿಭಟಿಸಿಯೇ ತೀರುವುದೆಂದೂ ಮರಳಿ ನುಡಿದರು ಹಿಮಾಲಯದ ಹಿನ್ನೆಲೆಯನ್ನು ಪಡೆದ ಡೆಹರಾಡೂನಿನಲ್ಲಿ ಶಿಕ್ಷಣ ಹೊಂದಿದ ಈ ಸೈನ್ಯಾಧಿಕಾರಿಗಳು ಹಿಮಾಲಯದಂತೆ ಅಜೇಯರಾಗಬೇಕೆಂದು ನೆಹರೂ ಹಾರೈಸಿದರು.

"ಭಾರತದಲ್ಲಿರುವ ೩೬ ಕೋಟಿ ಜನರಲ್ಲಿ ತಾವು ಶ್ರೇಷ್ಠರು ಇತರರು ಕನಿಷ್ಠರು ಎಂಬ ತಾರತಮ್ಯ ಭಾವನೆಗೆ ಅವಕಾಶವಿರಕೂಡದು. ಎಲ್ಲರೂ ಎಲ್ಲ ದೃಷ್ಟಿಯಲ್ಲೂ ಸಮಾನರಾಗಿರುವುದು ಶಕ್ಯವಿಲ್ಲವೆ ಇದ್ದರೂ, ಬುದ್ಧಿಶಕ್ತಿಯನ್ನು ವಿಕಾಸಗೊಳಿಸಲು, ಸಮಾನಾವಕಾಶ ಎಲ್ಲರಿಗೂ ಇರುತ್ತದೆ. ಆದುದರಿಂದ ಸೈನ್ಯಾಧಿಕಾರಿಗಳು ತಮ್ಮ ಕೈಕೆಳಗೆ ಕೆಲಸ ಮಾಡುವವರನ್ನು ಕೀಳು ದೃಷ್ಟಿಯಿಂದ ನೋಡಬಾರದು. ಭಾರತದ ನಾಗರಿಕರಿಗಿಂತ ತಾವು ಬೇರೆಯಾದವರೆಂಬ ಭಾವನೆಗೂ ಬಲಿಯಾಗಕೂಡದು" ಎಂದು ನೆಹರೂರವರು ಉಪದೇಶಿಸಿದರು

ಇಲ್ಲಿ ತರಬೇತಿ ಹೊಂದಿ ಉತ್ತೀರ್ಣರಾದ ೯೭ ಮಂದಿಯಲ್ಲಿ ೯೪ ಭಾರತೀಯರು; ಉಳಿದವರು ನೇಪಾಳಿಗಳು

ನೇಪಾಳದೊಡನೆ ಸಂಪರ್ಕ

ನೇಪಾಳದೊಡನೆ ಭಾರತದ ಸಂಪರ್ಕ ಹಿಂದಿನ ಕಾಲದಿಂದಲೂ ದೃಢವಾಗಿರುತ್ತದೆ- ಮತ್ತು ಸ್ನೇಹಮಯವೂ ಆಗಿರುತ್ತದೆ. ಉತ್ತರದಲ್ಲಿ ಮಹೋನ್ನತ ಹಿಮಾಲಯದ ರಕ್ಷಣೆ ಪಡೆದು ನಿಂತಿರುವ ನೇಪಾಳ, ತನ್ನ ಉಳಿದ ಗಡಿ ಪ್ರದೇಶಗಳಲ್ಲಿ ಭಾರತದ ರಕ್ಷಣೆ ಹೊಂದಿ ಭದ್ರವಾಗಿರುತ್ತದೆ. ಇಲ್ಲಿ ಸಾರಿಗೆ ಸಂಪರ್ಕಗಳ ಕೊರತೆ ಬಹಳವಾಗಿರುವುದರಿಂದ ಸೈನ್ಯ ಪ್ರವೇಶವೂ ದುರ್ಗಮವಾಗಿರುತ್ತದೆ.

ಈ ಕೊರತೆಗಳಿಂದ ನಾಗರಿಕ ವ್ಯವಹಾರವೂ ಬಹಳ ಆತಂಕವನ್ನು ಇದಿರಿಸುವುದು ಸ್ವಾಭಾವಿಕ—ಇದನ್ನು ಪರಿಹರಿಸುವ ಉದ್ದೇಶದಿಂದ ಭಾರತ ಸರಕಾರದ ನೆರವು ಪಡೆದು ಅಲ್ಲಿ ಹಲವು ಯೋಜನೆಗಳು ಕಾರ್ಯರೂಪದಲ್ಲಿ ಪರಿಣತಗೊಳ್ಳುತ್ತಿವೆ. ನೇಪಾಳ - ಭಾರತಗಳನ್ನು ಒಂದುಗೂಡಿಸುವ ಪಾನಕೋಟ ಥೈನ್ಸಿ ಮೋಟಾರು ಮಾರ್ಗ ಇತ್ತೀಚಿನ ಒಂದು ಪ್ರಯತ್ನ.

(ಆರನೇ ಪುಟ ನೋಡಿರಿ)

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ
—ವಸತಿ ಮತ್ತು ಭೋಜನಗೃಹ—
ಸ್ವಸ್ತಿಕ್ ಲೋಜ್
ಪಳನೀರು ರಸ್ತೆ, ಮಂಗಳೂರು.
❖ ಗಾಳಿ-ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ ಮತ್ತು ಡಬ್ಬಲ್ ಕೋಣೆಗಳು!
❖ ತೃಪ್ತಿಕರವಾದ ಸೇವೆ ಮತ್ತು ಸ್ನಾನಾನುಕೂಲತೆಗಳು!
❖ ಶಾಕಾಹಾರಿಗಳಿಗೆ ನುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ರೋಬರ್ಟ್ಸ್ ನೊವೆಲ್ಟಿ ಸ್ಟೋರ್ಸ್, ಉಡುಪಿ.
(ಹೆಂಗುಸರ ಸರಕಾರಿ ಟ್ರೈನಿಂಗ್ ಶಾಲೆಯ ಎದುರು)
ಅತ್ಯಾಧುನಿಕತೆಯಲ್ಲಿಯೇ ಅಪ್ಪಾ ಚರ್ಚಿತೆಯಲ್ಲವೆ?
ಬೊಂಬಾಯಿಯಿಂದ ನೇರಾ ತರಿಸಿದ ಮಾದರಿಯ ಅತ್ಯಾಧುನಿಕ ಚಪ್ಪಲಿ, ಸ್ವೇಟರು, ಪರಿಮಳ ದ್ರವ್ಯ, ರೆಡಿಮೇಡ ಬಟ್ಟೆಬರೆಗಳು, ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು ಇತ್ಯಾದಿ ಗೃಹಕೃತ್ಯಕ್ಕೆ ಬೇಕಾದ ದಿನ- ನಿತ್ಯ ಸಾಮಗ್ರಿಗಳು ಕಡಿಮೆ ಬೆಲೆಗೆ ದೊರೆಯುವ ನೂತನ ಅಂಗಡಿ.
ಉತ್ತಮ ಫೌಂಟನ್ ಪೆನ್ನುಗಳೂ, ಕ್ರಿಸ್‌ಮಸ್ ಕಾರ್ಡುಗಳೂ ಸಿಗುತ್ತವೆ.
ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ!
ಮ್ಯಾನೇಜರ್: ರೋಬರ್ಟ್ಸ್ ಫೆರ್ನಾಂಡಿಸ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 38 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATOIN LTD.,

Estd: 1906] [H. O: UDIPI (S. India.)

ನ ವ ಯು ಗ

ಉಡುಪಿ, ಗುರುವಾರ ೧೭-೧೨-'೫೩

ಕಳವಳದ ವಾತಾವರಣ

ಭಾರತೀಯರು ಏನೇನೂ ವಿಳಂಬವಿಲ್ಲದೆ ಗಮನಿಸಿ ಗುರುತಿಸಲೇ ಬೇಕಾದ ಗಂಡಾಂತರದ ನೆರಳೊಂದು ಈ ಉಪಖಂಡದ ಮೇಲೆ ಕವಿದಿರುತ್ತದೆ - ಅದೆಂದರೆ ಬಹಳ ದಿನಗಳಿಂದ ವಾರ್ತಾಲಾಪಗಳಲ್ಲಿ ಪ್ರಮುಖ ಸ್ಥಾನ ಪಡೆದ ಪಾಕ—ಅಮೇರಿಕಾ ಮಿಲಿಟರಿ ಒಡಂಬಡಿಕೆ ಹಾಗೂ ಪೋರ್ಚುಗೀಜ ವಸಾಹತುವಾದ ಗೋವೆಯಲ್ಲಿ ಬಂದಿಳಿದಿರುವ ಸೈನ್ಯ. ಗೋವೆಯಲ್ಲಿ ಹೊಸತಾಗಿ ಸೈನಿಕರೂ ಟ್ಯಾಂಕುಗಳೂ ಮತ್ತಿನ್ನಿತರ ಯುದ್ಧೋಪಕರಣಗಳೂ ಬಂದಿರುವುದು ನಿಜವೆಂದು ಅಧಿಕೃತವಾಗಿ ಸಾರಲ್ಪಟ್ಟಿದೆ. ಆದರೆ ಪಾಕಿಸ್ತಾನವು ಅಮೇರಿಕೆಯೊಡನೆ ಮಿಲಿಟರಿ ಒಡಂಬಡಿಕೆಯನ್ನು ಮಾಡಿಕೊಳ್ಳುವುದರ ಸತ್ಯಾಸತ್ಯತೆ ಇನ್ನೂ ತಿಳಿದು ಬಂದಿಲ್ಲ. ಹಾಗೆಂದು ಕಳೆದ ವಾರದ ಘಟನೆಗಳ ಕೂಲಂಕಷ ಪರಿಶೀಲನೆ ಮಾಡಿದ ಪಕ್ಷದಲ್ಲಿ ಪಾಕಿಸ್ತಾನ ಸರಕಾರ ಮಿಲಿಟರಿ ಒಡಂಬಡಿಕೆಯ ವಿಚಾರವನ್ನು ಮಾಡುತ್ತಿರುವುದೆಂಬ ಸಂಗತಿಗೆ ಅನೇಕ ವರ್ತುಲಗಳಿಂದ ಪುಷ್ಟಿ ದೊರೆತಿರುತ್ತದೆ. ಪಾಕಿಸ್ತಾನ ಹಾಗೂ ಅಮೇರಿಕಗಳ ಪತ್ರಿಕೆಗಳಲ್ಲಿ ಯಷ್ಟೇ ಅಲ್ಲ - ಲಂಡನ, ತುರ್ಕಿ, ಸಿಂಹಳ ಮುಂತಾದ ದೇಶಗಳಲ್ಲಿಯೂ ಈ ಒಡಂಬಡಿಕೆಯ ಕುರಿತು ತೀವ್ರ ಪ್ರತಿಕ್ರಿಯೆಯನ್ನೊಳಗೊಂಡ ಬರೆಹಗಳನ್ನು ಅಲ್ಲಿಯ ಪತ್ರಿಕೆಗಳು ಪ್ರಕಟಿಸಿರುತ್ತವೆ. ರಶಿಯಾ, ಚೀನಾ, ಅಫಘಾನಿಸ್ಥಾನ, ನೇಪಾಳ ಮುಂತಾದ ರಾಷ್ಟ್ರಗಳು ಪಾಕಿಸ್ತಾನ ಸರಕಾರಕ್ಕೆ ಎಚ್ಚರಿಕೆಯ ರಾಯಸವನ್ನು ಕಳಿಸಿರುವುದರ ಮೇಲಿಂದಲೂ ಹೊಸತಾದ ಬೆಳವಣಿಗೆ ಪಾಕಿಸ್ತಾನದಲ್ಲಿ ನಡೆಯುತ್ತಿರುವುದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. ಈ ಎಚ್ಚರಿಕೆಗಳನ್ನು ಪಾಕಿಸ್ತಾನ ಸರಕಾರ ತಿರಸ್ಕರಿಸುತ್ತದೆಂದು ಸುದ್ದಿ ಬಂದಿದ್ದರೂ— ಪಾಕಿಸ್ತಾನದ ವರಿಷ್ಠರು ತಾವು ಹಿಂದೆ ನಿರಾಕರಿಸಿದ ಸಂಗತಿಯನ್ನೆ ಈಗ ಸತ್ಯವೆಂದು ಸೂಚಿಸುತ್ತಿರುವುದು ಸುಳ್ಳಲ್ಲ. ಉದಾಹರಣೆಗಾಗಿ, ಪಾಕಿಸ್ತಾನದ ಪ್ರಧಾನ ಮಂತ್ರಿ ಜನಾಬ ಮಹಮ್ಮದ ಅಲಿಯವರು ಪಾಕಿಸ್ತಾನವು ಮಿಲಿಟರಿ ಬಲವನ್ನು ಹೆಚ್ಚಿಸಿಕೊಳ್ಳಲು ಬಯಸಿದರೆ, ಅದಕ್ಕೋಸ್ಕರ ಭಾರತ ಕಸಿವಿಸಿಪಡುವುದು ಬೇಡವೆಂದು ಹೇಳಿರುವರು. ಮೂವತ್ತೈದು ಕೋಟಿ ಜನಸಂಖ್ಯೆಯುಳ್ಳ ಭಾರತದ ಮೇಲೆ ಪಾಕಿಸ್ತಾನದ ಏಳು ಕೋಟಿ ಮುಸ್ಲಿಮರು ದಾಳಿ ನಡೆಸುವರೆಂಬ ಕಲ್ಪನೆಯೇ ಬುಡವಿಲ್ಲದುದೆಂದು ಅವರ ಅಭಿಪ್ರಾಯ. ಮೇಲಾಗಿ ಪಾಕಿಸ್ತಾನವು ಸೈನ್ಯ ಶಕ್ತಿಯ ದೃಷ್ಟಿಯಿಂದ ಭದ್ರವಾಗಿದ್ದರೆ, ಹೊರಗಿನವರ ದಾಳಿಯನ್ನು ಯಶಸ್ವಿಯಾಗಿ ಎದುರಿಸಲು ಅದಕ್ಕೆ ಶಕ್ಯವಾಗುತ್ತದೆ. ಪರ್ಯಾಯವಾಗಿ ಇದು ಭಾರತದ ಮೇಲಾಗುವ ಆಕ್ರಮಣವನ್ನು ತಡೆಯುತ್ತದೆ - ಹೀಗೆ ಭಾರತದ ಸಂರಕ್ಷಣಾ ಭಾರವನ್ನೆ ಪಾಕಿಸ್ತಾನ ಹೊತ್ತಿದೆಯೆಂಬ ರೀತಿಯಲ್ಲಿ ಮಹಮ್ಮದ ಅಲಿಯವರ ಜಂಭದ ಧೋರಣವಿರುತ್ತದೆ. ಆದರೆ ವಾಸ್ತವ ಸ್ಥಿತಿಯನ್ನು ಅವರು ತಿಳಿದಂತಿಲ್ಲ—ಈಗಿರುವಂತೆ ಸಮತೂಕದ ಸೈನ್ಯಬಲವನ್ನು ಇಟ್ಟುಕೊಂಡ ಪಕ್ಷದಲ್ಲಿ ಯಾರಿಗೂ ಏನೂ ಸಂಶಯಕ್ಕೆ ಎಡೆ ಇರುವುದಿಲ್ಲ. ತಮ್ಮ ದೇಶದ ಸಂರಕ್ಷಣೆಗೆ ಅಗತ್ಯವಿದ್ದುದಕ್ಕಿಂತಲೂ ಹೆಚ್ಚು ಶಸ್ತ್ರಾಸ್ತ್ರಗಳನ್ನು ಕೂಡಿ ಹಾಕಿಕೊಂಡು ಸೈನ್ಯ ವಿಸ್ತಾರ ಮಾಡುವುದು ಪರಾಕ್ರಮಣ ಪ್ರವೃತ್ತಿಯ ಚಿಹ್ನೆ ಎಂದು ಸಾಮಾನ್ಯವಾದ ಅಭಿಪ್ರಾಯವಿರುತ್ತದೆ. ತಮ್ಮ ಮೇಲೆಯೇ ಈ ಆಕ್ರಮಣವಾದೀತೆಂಬ ಭಯದಿಂದ ಹೆದರಿದ ರಶಿಯಾದಂಥರಾಷ್ಟ್ರಗಳು, ಈ ಉಪಕ್ರಮವನ್ನು ತಡೆಗಟ್ಟಲು ನಿಕಟ ಭವಿಷ್ಯದಲ್ಲಿಯೇ ಮುಂದಾಗಿ ದಾಳಿ ನಡೆಸಿದರೆ, ಆಗ ಪಾಕಿಸ್ತಾನದ ಕೆಚ್ಚಿಗೆ ಕಿಚ್ಚು ಹಚ್ಚಿಕೊಂಡೀತು; ಮತ್ತು ಭಾರತವೂ ಬಡವಾಗಬೇಕಾದೀತು. ಈ ಅನಿಷ್ಟ ಪರಿಣಾಮವನ್ನು ಆಹ್ವಾನಿಸಬಾರದೆಂದು ಭಾರತ ಸರಕಾರ ಇಷ್ಟರಲ್ಲಿಯೇ ಪಾಕಿಸ್ತಾನಕ್ಕೆ ಬುದ್ಧಿ ಹೇಳಿದೆಯೆಂದು ನಾವು ನಂಬುತ್ತೇವೆ. ಅಮೇರಿಕೆಯ ಉಪಾಧ್ಯಕ್ಷರಾದ ನಿಕ್ಸನ್ನರಾದರೂ ತಮ್ಮ ೫೦೦೦೦ ಮೈಲುಗಳಷ್ಟು ಸುದೀರ್ಘವಾದ ಆಗ್ನೇಯಾ ಏಶಿಯಾ ರಾಷ್ಟ್ರಗಳ ಸಂಚಾರದ ವರದಿಯನ್ನು ಅಧ್ಯಕ್ಷ ಐಸೆನಹೋವರರಿಗೆ ಒಪ್ಪಿಸುವಾಗ-ಪಾಕಿಸ್ತಾನದ ಆಯಕಟ್ಟಿನ ಸ್ಥಾನ ಮಹತ್ವವನ್ನು ವಿವರಿಸಿ, ಅದರ ಸೈನ್ಯ ಬಲವನ್ನು ಹೆಚ್ಚಿಸುವ ವಿಚಾರವನ್ನು ಪ್ರೋತ್ಸಾಹಿಸದೆ-ನೆಹರೂರವರೆಂದಂತೆ ಅಂಥ ಉಪಕ್ರಮ ಆಗ್ನೇಯ ಏಶಿಯಾದ ಮೇಲೆ ಮಾಡಬಹುದಾದ ದುರಂತ ಪರಿಣಾಮಗಳ ಕಲ್ಪನೆಯನ್ನೆ ಮಾಡಿಕೊಡಬೇಕೆಂದು ಸೂಚಿಸುತ್ತೇವೆ. ಸುದೈವದಿಂದ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನಾಗಲೀ ಅಥವಾ ಡಾಲರು ರೂಪದ ಸಹಾಯವನ್ನಾಗಲೀ ಒದಗಿಸಿ ಸೈನ್ಯ ಶಕ್ತಿಯನ್ನು ಹೆಚ್ಚಿಸಲು ನೆರವಾಗಬೇಕೆಂಬ ವಿಚಾರಕ್ಕೆ ಎಲ್ಲ ಅಮೇರಿಕನ್ನರೂ ಬಲಿಬಿದ್ದಿಲ್ಲ. "ವಾಶಿಂಗಟನ ಪೋಸ್ಟ" ಎಂಬ ಪತ್ರಿಕೆಯ ಅಭಿಪ್ರಾಯವನ್ನು ಇದಕ್ಕೆ ನಿದರ್ಶನವಾಗಿ ತೆಗೆದುಕೊಳ್ಳಬಹುದು-ಭಾರತ ಹಾಗೂ ಇತರ ನೆರೆರಾಷ್ಟ್ರಗಳಲ್ಲಿ ತೀವ್ರವಾದ ಪ್ರತಿಕ್ರಿಯೆಯನ್ನುಂಟುಮಾಡಿ ಕಳವಳದ ವಾತಾವರಣವನ್ನು ರಚಿಸಿದ ಮಿಲಿಟರಿ ಸಹಾಯದ ಸಂಗತಿಯನ್ನು ಬಿಟ್ಟುಕೊಡುವುದೇ ಸದ್ಯಕ್ಕೆ ಉಚಿತವೆಂದು ಅದು ಹೇಳಿದೆ. ಈ ಹಿತವಾದವನ್ನು ಅಮೇರಿಕದ ಸರಕಾರ ಕಿವಿಗೆ ಹಾಕಿಕೊಳ್ಳುವುದೋ ಹೇಗೆಂಬ ಕುರಿತು ಇನ್ನೂ ಸಂಶಯವಿದೆ—ಬಹುಶಃ ಆಕ್ಷೇಪಗಳಾವುದನ್ನೂ ಮನಸ್ಸಿಗೆ ತಂದುಕೊಳ್ಳದೆ ಸಹಾಯ ನೀಡಲು ಅಮೇರಿಕಾ ಮುಂದಾದೀತು. ಭಾರತ ಸರಕಾರ ಇದು ತೀರ ಸಂಭಾವ್ಯವೆಂದು ತಿಳಿದಿರುವ ಸಂಗತಿಗೆ ಪ್ರಧಾನ ಮಂತ್ರಿ ನೆಹರೂರ ಉದ್ಗಾರವೇ ಸಾಕ್ಷಿ— ಅವರು ಡೆಹರಾಡೂನ ಹಾಗೂ ಕಲ್ಕತ್ತೆಗಳಲ್ಲಿ ಈ ಮಾತುಕತೆಗಳ ವಿಷಯವನ್ನು ಪ್ರಸ್ತಾಪಿಸುತ್ತಾ ಭಾರತೀಯರು ಎಲ್ಲರೂ ಈಗ ಒಗ್ಗಟ್ಟಾಗಿರುವುದು ಅತ್ಯಗತ್ಯವೆಂದು ಹೇಳಿದರು. ಪ್ರಧಾನ ಮಂತ್ರಿಗಳು ಈ ರೀತಿ ಬಹಿರಂಗವಾಗಿ ಐಕ್ಯ ಸಂದೇಶವನ್ನು ಭಾರತೀಯ ಜನತೆಗೆ ಕೊಡಬೇಕಾದರೆ, ಅವರ ಬಳಿ ಸಾಕಷ್ಟು ಬಲವಾದ ಆಧಾರಗಳಿರುತ್ತವೆಂದೇ ತಿಳಿಯಬೇಕು. ಪಾಕಿಸ್ತಾನದ ಈ ಕುಹಕದೊಂದಿಗೆ ಇತ್ತ ಗೋವೆಯಲ್ಲಿನ ಚಟುವಟಿಕೆಗಳನ್ನೂ ನಿರೀಕ್ಷಿಸಿದರೆ, ಅಮೇರಿಕಾದ ಗತ್ತುಗಾರಿಕೆ ಏನೆಂಬುದನ್ನು ಊಹಿಸಲು ಕಷ್ಟವಾಗುವುದಿಲ್ಲ— ಉತ್ತರ ಅಟ್ಲಾಂಟಿಕ ಒಡಂಬಡಿಕೆಯು ಭಾರತದಲ್ಲಿರುವ ಫ್ರೆಂಚ ಹಾಗೂ ಪೋರ್ಚುಗೀಜ ವಸಾಹತುಗಳಿಗೆ ಅನ್ವಯಿಸುವುದಿಲ್ಲವೆಂದು ಸಂಸತ್ತಿನಲ್ಲಿ ಕೇಳಲಾದ ಪ್ರಶ್ನೆಗೆ ದೊರೆತ ಉತ್ತರ ಹೇಳುತ್ತದೆ. ಈ ವರ್ಷದ ಪ್ರಾರಂಭದಲ್ಲಿ ಫ್ರೆಂಚ್, ಪೋರ್ಚುಗೀಜ ಸರಕಾರಗಳ ವಸಾಹತು ಪ್ರದೇಶಗಳಲ್ಲಿಯೂ ಸೈನ್ಯ ಠಾಣ್ಯಗಳನ್ನು ಸ್ಥಾಪಿಸುವ ಸೂಚನೆಯೊಂದು ಬಂದಾಗ, ನೆಹರೂರವರು ಸಕಾಲಿಕ ಎಚ್ಚರಿಕೆಯನ್ನು ಕೊಟ್ಟರು. ಅಂಥ ಪ್ರಯತ್ನವನ್ನು ಭಾರತವು ಮೈತ್ರಿಗೆ ವಿರುದ್ಧವಾದ ಕ್ರಮವಾಗಿ ಗ್ರಹಿಸುವುದೆಂದವರು ಸ್ಪಷ್ಟವಾಗಿ ಸಾರಿದರು. ಇದರಿಂದ ಪಾಶ್ಚಾತ್ಯ ರಾಷ್ಟ್ರಗಳ ಪ್ರಯತ್ನ ಮೆಲು ನಡೆಯನ್ನವಲಂಬಿಸಿದರೂ-ಈಗ ಗೋವೆಯಲ್ಲಿ ಸೈನ್ಯ ಬಂದಿಳಿದಿರುವುದನ್ನು ನೋಡಿದರೆ, ಪುನ: ಪುನ: ಭಾರತವನ್ನು ಕೆಣಕುವ ದುರುದ್ದೇಶವೇ ಇದರಲ್ಲಿ ಅಡಕವಾಗಿದೆಯೆಂಬ ಭಾವನೆ ಉಂಟಾಗುತ್ತದೆ. ಈ ಸೈನ್ಯವು ಕೇವಲ ತರಬೇತಿಗೋಸ್ಕರ ಬಂದಿದೆಯೆಂದು ಕೆಲವರ ಅಭಿಪ್ರಾಯ. ಅಟ್ಲಾಂಟಿಕ ಒಡಂಬಡಿಕೆಯಂತೆ ನಾಲ್ಕು ಲಕ್ಷದಷ್ಟು ಸೈನಿಕರನ್ನು ಪೋರ್ಚುಗಾಲವು ಸಿದ್ಧಗೊಳಿಸಬೇಕಾಗಿದೆ— ಅವರೆ ತರಬೇತಿಗೆ ಬಂದ ಈ ನಿಗ್ರೋ ಸೈನಿಕರು ಭಾರತದಲ್ಲಿ ಭಯ ಭೀತ ವಾತಾವರಣಕ್ಕೆ ಆಸ್ಪದ ಕಲ್ಪಿಸುವರೆಂಬುದು ಸುಳ್ಳಲ್ಲ. ಲಿಸ್ಬನದ ಪೋರ್ಚುಗೀಜ ಸರಕಾರಕ್ಕೆ ಅಮೇರಿಕೆಯಿಂದಲೇ ನೆರವು ದೊರೆಯುತ್ತಿದೆ ಎಂಬ ಅಂಶವನ್ನು ಗಮನಿಸಿದರೆ—ಭಾರತದ ಕರಾವಳಿಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಕರಾಚಿಯಿಂದ ತೊಡಗಿ ದೀವ, ದಮಣ, ಗೋವಾ, ಪಾಂಡಿಚೆರಿ, ಚಿತ್ತಗಾಂಗಗಳ ವರೆಗೆ ಬೇಲಿ ಹಾಕಿ ಸಂರಕ್ಷಣವ್ಯೂಹ ಕಟ್ಟುವುದು ಅಮೇರಿಕೆಯ ಉದ್ದೇಶವೆಂದು ತರ್ಕಿಸಲು ಎಡೆಯಿದೆ. ಏಶಿಯಾದಲ್ಲಿ ಭಾರತವು ಪಡೆದ ವರ್ಚಸ್ಸು ಮತ್ತು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ನೈತಿಕ ತತ್ವಗಳನ್ನು ಎತ್ತಿಹಿಡಿಯುವ ಅದರ ಧರ್ಮಬುದ್ಧಿ ಇವನ್ನು ಕಂಡು ಅಮೇರಿಕ ಪೂರಾ ಹೆದರಿಕೊಂಡಿದೆ- ಸಾಮ್ರಾಜ್ಯವಾದಿ ಹಾಗೂ ಆರ್ಥಿಕ ಪ್ರಭುತ್ವದ ಧೋರಣಗಳಿಗೆ ಭಾರತದ ಸಹಾನುಭೂತಿ ಇಲ್ಲವೆಂದು ಖಚಿತಗೊಂಡುದರಿಂದ ಅಮೇರಿಕ ಈ ಕುಹಕತನಕ್ಕೆ ಕೈಯಿಕ್ಕಿದೆಯೆಂದು ತೋರುತ್ತದೆ. ಮಹಾರಾಷ್ಟ್ರಗಳನ್ನು ಎಷ್ಟು ಮಾತ್ರಕ್ಕೂ ನಂಬಬಾರದೆಂದು ಬರ್ಮಾದ ಪ್ರಧಾನಿ ನೂರವರು ಈಚೆಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದ ಮಾತು ಯಥಾರ್ಥವಾದುದೆಂದು ಇದರಿಂದ ಮನವರಿಕೆಯಾದೀತು. ಇಂಥ ಸಂದರ್ಭದಲ್ಲಿ ಭಾರತೀಯರು ಪ್ರಧಾನಿ ನೆಹರೂರ ಕೈಗಳನ್ನು ಸರ್ವರೀತಿಯಲ್ಲೂ ಬಲಗೊಳಿಸಲು, ಅವರ ನೈತಿಕ ತತ್ವಗಳನ್ನು ಮೆಚ್ಚಿಕೊಂಡು ಒಕ್ಕಟ್ಟಿನಿಂದ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗಬೇಕು. ಆರ್ಥಿಕ ಅಭಿವೃದ್ಧಿಯನ್ನು ಕೈಗೂಡಿಸುವ ನಮ್ಮ ಪ್ರಯತ್ನ ಅರ್ಧ ದಾರಿ ಸಾಗಿರುವಾಗಲೇ ಹೊರಗಿನ ಒತ್ತಡದಿಂದ ನಮ್ಮ ಗಮನ ಪರಾವೃತ್ತವಾಗುತ್ತಿರುವುದಕ್ಕೆ ವಿಷಾದವೆನಿಸುವುದೇನೋ ಸರಿ—ಆದರೆ, ಸ್ವಾತಂತ್ರ್ಯ ರಕ್ಷಣೆ ನಮ್ಮ ಆದ್ಯ ಕರ್ತವ್ಯವೆಂಬುದನ್ನು ಯಾವ ಸಂದರ್ಭದಲ್ಲೂ ಮರೆಯುವಂತಿಲ್ಲ

ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ಸಂಘ—ಈ ಸಂಘದ ವಾರ್ಷಿಕ ಮಹಾಸಭೆಯು ತಾ 27-12-1953ನೇ ಆದಿತ್ಯವಾರ ಸಂಜೆ ಘಂಟೆ 4ಕ್ಕೆ ಶ್ರೀ. ಬೆಳ್ಳಿಪಾಡಿ ದಾಸ ರೈಗಳ ಅಧ್ಯಕ್ಷತೆಯಲ್ಲಿ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದಾಗಿ ನಿಶ್ಚಯಿಸಿರುವುದರಿಂದ, ತಾವು ದಯವಿಟ್ಟು ಸಭೆಗೆ ಬರಬೇಕಾಗಿ ಪ್ರಾರ್ಥಿಸುತ್ತೇವೆ.

ಖಾನ್ ಬಹದೂರ್ ಕೆ. ಟಿ. ಆಳ್ವ, ಅಧ್ಯಕ್ಷ.
ಕೆ. ಸುಂದರರಾಮ ಶೆಟ್ಟಿ, ಕಾರ್ಯದರ್ಶಿ.

ADVERTISE IN
Navayuga Republic Day Special
AND GAIN LASTING VALUE
FOR YOUR INVESTMENT.
ತಾ. 26—1—1954ಕ್ಕೆ ಹೊರಡುವ
ನವಯುಗ ಪ್ರಜಾರಾಜ್ಯ ವಿಶೇಷಾಂಕವು
ಜಾಹೀರಾತಿಗೆ ಉತ್ತಮ ಸಾಧನವಾಗಿದೆ.

ಉತ್ಪಾದಕ ಕಾರ್ಯಗಳಿಗೆ ಅಣುಶಕ್ತಿ

ಐಸೆನಹಾವರರ ಆಶಾದಾಯಕ ಸೂಚನೆ

ಅಮೇರಿಕೆಯು ಪಾಕಿಸ್ತಾನದೊಡನೆ ಮಿಲಿಟರಿ ಒಡಂಬಡಿಕೆ ಅಥವಾ ಅದರದೇ ಪರ್ಯಾಯ ರೂಪವಾದ ಶಸ್ತ್ರಾಸ್ತ್ರಗಳ ಪೂರೈಕೆ, ಡಾಲರು ಸಹಾಯ ಮುಂತಾದವುಗಳಿಂದ ಭಾರತದ ವಾತಾವರಣದಲ್ಲಿ ತೀವ್ರ ಕಳವಳವನ್ನು ಉಂಟು ಮಾಡಿದ್ದರೂ—ಜಾಗತಿಕ ವಾತಾವರಣದಲ್ಲಿ ಕಳೆದ ವಾರ ಅಧ್ಯಕ್ಷ ಐಸೆನ ಹೋವರರು ಶಾಂತಿಗೆ ಪೋಷಕನಾದ ಮಹತ್ವದ ಸೂಚನೆಯೊಂದನ್ನು ಮಾಡಿದರು. ಬೆರ್ಮುಡಾ ಪರಿಷತ್ತಿನಲ್ಲಿ ಭಾಗವಹಿಸಿದ ಬೆನ್ನಿಗೆಯೇ ಅಧ್ಯಕ್ಷ ಐಸೆನ ಹೋವರರು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಅಧಿವೇಶನವನ್ನು ಉದ್ದೇಶಿಸಿ ಅಣು ಶಕ್ತಿಯ ನಿಯಂತ್ರಣದ ಸಮಸ್ಯೆಯ ಕುರಿತು ಭಾಷಣ ಮಾಡಿದರು ಐಸೆನ ಹೋವರರು ತಮ್ಮ ಸರಕಾರದ ಪರವಾಗಿ ಈ ಭಾಷಣ ಮಾಡಿದ್ದರೂ ಸಹ—ಅವರ ಭಾಷಣವನ್ನು ಅಮೇರಿಕಾ ಹಾಗೂ ಬ್ರಿಟನುಗಳ ಅಣುಶಕ್ತಿ ವಿಷಯದ ತಜ್ಞರು ಸಿದ್ಧಗೊಳಿಸಿದರೆಂದೂ ಬೆರ್ಮುಡಾದಲ್ಲಿ ಐಸೆನಹೋವರರು ತಮ್ಮ ಭಾಷಣದ ಕರಡನ್ನು ಚರ್ಚಿಲ್ಲರಿಗೂ ಲೇನಿಯೆಲರಿಗೂ ತೋರಿಸಿದ್ದರೆಂದೂ ಚರ್ಚಿಲ್ಲರು ಕರಡನ್ನು ಕೆಲಮಟ್ಟಿಗೆ ಸುಧಾರಿಸಿದರೆಂದೂ ಹೇಳಲ್ಪಟ್ಟಿರುವುದರಿಂದ—ಮೂರು ಮಹಾರಾಷ್ಟ್ರಗಳ ಸಂಯುಕ್ತ ಅಭಿಪ್ರಾಯವನ್ನೇ ಐಸೆನ ಹೋವರರು ಬಿಂಬಿಸಿದರೆಂದು ಹೇಳಿದರೆ ತಪ್ಪಾಗಲಾರದು.

ಆಶಾದಾಯಕ ಸೂಚನೆ

ಐಸೆನ ಹೋವರರ ಭಾಷಣದಲ್ಲಿ ಅಮೇರಿಕೆಯು ಇದುವರೆಗೆ ಇಡುತ್ತಿದ್ದ ಹೆಜ್ಜೆಯನ್ನು ಬಿಟ್ಟುಗೊಟ್ಟಂತ್ತೂ ಎಲ್ಲರಿಂದಲೂ ಪುರಸ್ಕರಿಸಲ್ಪಡಲು ಯೋಗ್ಯವಾದ ಸೂಚನೆ ಮಂಡಿಸಲ್ಪಟ್ಟಿದ್ದೂ ಗೋಚರಿಸುತ್ತದೆ. ಅಣುಶಕ್ತಿಯ ನಿಯಂತ್ರಣವನ್ನು ಮಾಡಬೇಕೆಂದು ಹೇಳುತ್ತಾ ಬಂದಿದ್ದ ಅಮೇರಿಕಾದ ಸರಕಾರ ಈಗ, ಅಣುಶಕ್ತಿಯನ್ನು ಶಾಂತಿ ಕಾಲದ ಉಪಯೋಗಗಳಿಗೆ ಹೇಗೆ ಬಳಸಬಹುದೆಂಬುದನ್ನು ಪರ್ಯಾಲೋಚಿಸುವುದಕ್ಕೆ ಪ್ರಾಧಾನ್ಯ ನೀಡಿದೆ. ಅಣುಶಕ್ತಿಯನ್ನು ಇದುವರೆಗೆ ಕೇವಲ ವಿಧ್ವಂಸಕ ಕೃತ್ಯಗಳಿಗೆ ಹೇಗೆ ಉಪಯೋಗಿಸಬಹುದೆಂದು ಪ್ರಯತ್ನಗಳು ನಡೆಯುತ್ತಿದ್ದವು. ಐಸೆನಹೋವರರು ಶಾಂತಿಯ ಉದ್ದೇಶಕ್ಕೋಸ್ಕರ ಅಣುಶಕ್ತಿಯ ಬಳಕೆಯಾಗಬೇಕೆಂಬುದನ್ನು ಸೂಚಿಸಿ, ತನ್ಮೂಲಕ ವಿದ್ಯುಚ್ಛಕ್ತಿ, ಕೃಷಿ, ವೈದ್ಯವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಅದ್ಭುತ ಅಭಿವೃದ್ಧಿಯನ್ನು ಸಾಧಿಸುವ ಕಡೆಗೆ ರಾಷ್ಟ್ರಗಳ ಗಮನವನ್ನು ಸೆಳೆದಿರುವರು. ಈ ಉದ್ದೇಶ ಸಾಧನೆಯೆಂತಾಗಬೇಕೆಂಬುದನ್ನು ವಿವರಿಸುತ್ತಾ ಐಸೆನ ಹೋವರರು ಅಣುಶಕ್ತಿಯ ಉತ್ಪಾದನೆಗೆ ಅಗತ್ಯವಿರುವ ಖನಿಜ ದ್ರವ್ಯಗಳನ್ನು ಪಡೆದ ರಾಷ್ಟ್ರಗಳು ತಮ್ಮ ನಿಕ್ಷೇಪದ ಒಂದಂಶವನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ನೀಡಬೇಕೆಂದೂ ಅಲ್ಲಿ ತಜ್ಞರೆಲ್ಲ ಒಟ್ಟಿಗೆ ಸೇರಿ ಉಚಿತ ಸಂಶೋಧನೆಗಳನ್ನು ತೊಡಗಬೇಕೆಂದೂ ಹೇಳಿರುವರು. ರಾಷ್ಟ್ರ ಸಂಘದ ಆಶ್ರಯದಲ್ಲಿ ಇಂಥ ಪ್ರಯೋಗಗಳಾಗಬೇಕೆಂಬ ತತ್ವವನ್ನು ಅವರು ಮನ್ನಿಸಿರುವುದರಿಂದ ಮತ್ತು ರಾಷ್ಟ್ರ ಸಂಘವೇ ಇಂಥ ಬೃಹತ್ ಸಮಸ್ಯೆಯ ಪರಿಹಾರಕ್ಕೆ ಯೋಗ್ಯ ಸಂಸ್ಥೆಯೆಂದು ವ್ಯಕ್ತಗೊಳಿಸಿರುವುದರಿಂದ — ರಾಷ್ಟ್ರ ರಾಷ್ಟ್ರಗಳಲ್ಲಿ ವೈಮನಸ್ಸು ಹಾಗೂ ಅಸಂತೋಷಗಳಿಗೆ ಎಡೆ ಇಲ್ಲದಂತಾಗಿರುತ್ತದೆ. ಇದು ಹೊಸತಾದ ಆಶಾದಾಯಕ ವಾತಾವರಣವನ್ನು ನಿರ್ಮಿಸಿರುವುದು ಸ್ವಾಭಾವಿಕ.

ರಶಿಯಾದ ಪ್ರತಿಕ್ರಿಯೆ

ರಶಿಯಾದ ಸಹಕಾರವನ್ನು ಅಧ್ಯಕ್ಷ ಐಸೆನ ಹೋವರರು ಯಾಚಿಸಿರುವರು—ಆದರೆ ರಶಿಯಾದ ಪ್ರತಿಕ್ರಿಯೆಯು ಇದುವರೆಗೆ ಸಮಾಧಾನಕರವಾಗಿ ಕಂಡು ಬಂದಿಲ್ಲ. ವಿಶಿಂಸ್ಕಿಯವರು ಅಣು ಶಸ್ತ್ರಾಸ್ತ್ರಗಳ ನಿಯಂತ್ರಣವನ್ನು ಪ್ರಸ್ತಾಪಿಸದೆ, ಕೇವಲ ಶಾಂತಿ ಕಾಲದ ಉಪಯೋಗಕ್ಕಾಗಿ ಅಣುಶಕ್ತಿಯನ್ನು ಬಳಸುವ ವಿಚಾರ ಮಾಡಿದರೆ, ಅಣುಶಕ್ತಿಯ ದುರುಪಯೋಗವಾಗುವುದನ್ನು ತಡೆಗಟ್ಟಿದಂತಾಗಲಿಲ್ಲವೆಂದು ಹೇಳಿರುವರು. ರಶಿಯಾದ ಸರಕಾರ ಐಸೆನ ಹೋವರರ ಭಾಷಣವನ್ನು ಇನ್ನೂ ಪರಿಶೀಲಿಸುತ್ತಿದೆಯಾಗಿ ವರದಿಗಳು ತಿಳಿಸುತ್ತವೆ ವಿದೇಶಾಂಗ ಸಚಿವ ಮೊಲೊಟೋವರು ಗಂಭೀರವಾಗಿ ಐಸೆನ ಹೋವರ ಸೂಚನೆಗಳನ್ನು ಗಮನಿಸುತ್ತಿರುವರೆಂದು ಪ್ರಕಟಗೊಂಡಿದ್ದರೂ ಅದರಲ್ಲಿ ಆಶೆಗೇನೂ ಎಡೆ ಇರಲಿಕ್ಕಿಲ್ಲವೆಂಬುದನ್ನು ರಶಿಯಾದ ಪತ್ರಿಕಾ ವರದಿಗಳಿಂದ ಊಹಿಸಬಹುದು. ಐಸೆನ ಹೋವರರ ಭಾಷಣದ ಬೆನ್ನಿಗೆಯೇ ರಶಿಯಾದಲ್ಲಿ ಚೋದ್ಯದ ಘಟನೆಯೊಂದು ನಡೆಯಿತು - ಪ್ರಾವ್ದಾವೊಂದನ್ನು ಬಿಟ್ಟರೆ ನಾಲ್ಕು ಪ್ರಸಿದ್ಧ ಪತ್ರಿಕೆಗಳು ಪ್ರಕಟವಾಗಲೇ ಇಲ್ಲ! ಐಸೆನ ಹೋವರರ ಭಾಷಣಕ್ಕೆ ರಶಿಯಾದಲ್ಲಿ ವ್ಯಾಪಕವಾದ ಪ್ರಚಾರ ದೊರೆಯಬಾರದೆಂಬ ಉದ್ದೇಶದಿಂದಲೇ ಹೀಗೆ ಮಾಡಿರಬೇಕೆಂದು ಎಲ್ಲರ ತರ್ಕ. ಆ ಬಳಿಕವೂ ರಶಿಯಾದ ಪತ್ರಿಕೆಗಳು ಐಕರ ಭಾಷಣದ ವರದಿಯನ್ನು ಚುಟುಕಿನಲ್ಲಿ ಮಾಡಿ, ಟೀಕಿಸಿರುತ್ತವೆ.

ಉಡುಪಿ

ಕೆ. ಪಿ. ಸಿ. ಸಿ. ಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು—ಇದೇ ತಾ 11ರಲ್ಲು ಸಂಜೆ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ರಥಬೀದಿಯಲ್ಲಿ ಸೇರಿದ ಸಭೆಯಲ್ಲಿ ರಾಜಕೀಯ ವಿಷಯಗಳ ಕುರಿತು ಭಾಷಣ ಮಾಡುತ್ತಾ, ಕಾಂಗ್ರೆಸ್ ಸರಕಾರವು ಸಾಧಿಸಿದ ಕಾರ್ಯಗಳನ್ನು ವಿವರಿಸಿದರಲ್ಲದೆ, ಕಾಂಗ್ರೆಸ್ ಸರಕಾರಕ್ಕೆ ಜನತೆಯು ಸಹಕಾರ ಬೆಂಬಲ ನೀಡಬೇಕಾಗಿ ಕೇಳಿಕೊಂಡರು. ಅಧ್ಯಕ್ಷ ಶ್ರೀ ಪೈಗಳು ಮಾತನಾಡುತ್ತಾ ಕಾಂಗ್ರೆಸ್ ಸಂಸ್ಥೆಗಳಲ್ಲಿ ಜಾತೀಯತೆ ಇರಕೂಡದೆಂದು ಸೂಚಿಸಿದರು. ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರ ನಿರ್ಮಾಣ, ಅದಕ್ಕೆ ಸಂಬಂಧಿಸಿದ ರೈಲ್ವೆಮಾರ್ಗ ಇತ್ಯಾದಿ ಕುರಿತು ಪಸ್ತಾಪಿಸಿ ಕೇಂದ್ರವು ತಜ್ಞರ ಸಮಿತಿ ರಿಪೋರ್ಟಿನಂತೆ ವರ್ತಿಸಲು ಕರ್ನಾಟಕದ ಪಾರ್ಲಿಮೆಂಟು ಸದಸ್ಯರು ಒತ್ತಾ ಕೊಡಬೇಕೆಂದರು. ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲು ಸಭೆಯು ತಾ 12ರಲ್ಲು ಸಂಜೆ ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶೋಫ್ಸ್ ಎಂಡ್ ಎಸ್ಟೆಬ್ಲಿಷ್‌ಮೆಂಟ್ ಕಾನೂನಿನಂತೆ ಯಾರು ಯಾ ಅದಕ್ಕೆ ಕಡಿಮೆ ನೌಕರರಿರುವ ಅಂಗಡಿಗಳನ್ನು ವಿರಹಿತ ಗೊಳಿಸುವುದು ಉತ್ತಮವೆಂದು ಸರಕಾರಕ್ಕೆ ತಿಳಿಸಲಾಯಿತು. ಜನವರಿ ತಿಂಗಳಲ್ಲಿ ಜರಗಲಿರುವ ಪರ್ಯಾಯ ಜಾತ್ರೆಯ ವೇಳೆ ನಗರವನ್ನು ವಿಶೇಷ ಶೋಕ್ಕೆ ಒದಗಿಸುವರೆ ರೂ 1901/-ಅಂದಾಜು ಹಣ ವಿನಿಯೋಗಮಾಡಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು. ನಗರದಲ್ಲಿ ಹೊಸತಾಗಿ ಇಲೆಕ್ಟ್ರಿಕ್ ದೀಪಗಳನ್ನು ಹಾಕುವ ಕುರಿತು ಚರ್ಚಿಸಲಾಯಿತು ಕೊನೆಗೆ ಲೈಟಿಂಗ್ ಕಮಿಟಿಯವರು ಸೂಚಿಸಿದ ಸಂಖ್ಯೆಗಿಂತ ನಾಲ್ಕು ಹೆಚ್ಚಾಗಿ ಒಟ್ಟು 80ರಷ್ಟು ದೀಪಗಳನ್ನು ಹಾಕುವುದೆಂದಾಯಿತು. ದೀಪಗಳನ್ನು ಹಾಕಿಸುವ ವಿಚಾರ ನಗರ ಸಭೆಯು ವಹಿಸುದಿಲ್ಲವಾಗಿಯೂ ಅಭಿಪ್ರಾಯ ಕೊಡಲಾಯಿ. ಶ್ರೀ. ಎಸ್. ಸೀತಾರಾಮ ಕಾಮತರ ಠರಾವುಗಳೆರಡು ಮುಂದರಿಸಲ್ಪಟ್ಟವು. ಒಂದು ಹಿಂದೆಗೆದು ಕೊಳ್ಳಲ್ಪಟ್ಟಿತು.

ಭಾಷಣ—ಸ್ಥಳೀಯ ಬೋರ್ಡು ಹೈಸ್ಕೂಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ತಾ 9ರಲ್ಲು ಸಂಜೆ ಪ್ರೊಫೆಸರ್ ಶ್ರೀ ನಾ. ಕಸ್ತೂರಿಯವರು "ಸ್ವತಂತ್ರ ಭಾರತದಲ್ಲಿ ವಿದ್ಯಾರ್ಥಿಗಳ ಕರ್ತವ್ಯ"ದ ಕುರಿತು ಭಾಷಣವಿತ್ತರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ರಾಮಕೃಷ್ಣ ನಾಯರು ಸಭಾಧ್ಯಕ್ಷತೆ ವಹಿಸಿದ್ದರು. [illegible] ಶೆಟ್ಟಿ, ವಿದ್ವಾನ್ ಅವರು ಭಾಷಣಗಾರರ ಪರಿಚಯವನ್ನು ಮಾಡಿದರು. ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಸ್ತ್ರೀಯರ ಸಹಕಾರಿ ಗುಡಿಕೈಗಾರಿಕೆ ಸಂಘದ ಮಹಾಸಭೆಯು—ಇದೇ ತಾ 7ರಲ್ಲು ಶ್ರೀಮತಿ ಎಲ್. ಎಮ್. ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷಕ್ಕೆ ಕಾರ್ಯನಿರ್ವಾಹಕ ಮಂಡಳಿಗೆ ಶ್ರೀಮತಿಯವರಾದ ಕೆ. ಕಣ್ಣನ್, ಎಲ್. ಎಮ್. ಫೆರ್ನಾಂಡೀಸ್, ರೋಸಿ ರೇಗೊ, ಲೀಲಾಮೋಹನದಾಸ ಪೈಕೊಟ್ಟಿಕ್ಕಾರ್, ಮತ್ತು ಪಿ. ಫೆರ್ನಾಂಡೀಸರು ಆರಿಸಲ್ಪಟ್ಟರು.

THE CATHOLIC BANK, LTD., UDIPI.

ದಿ. ಕೆಥೋಲಿಕ್ ಬೇಂಕ್ ಲಿಮಿಟೆಡ್, ಉಡುಪಿ.

ನಿಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡೆದುಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರೀ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರಿಗೆ ಯಾ ಸದ್ರಿಯವರ ವಾರೀಸು ದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಯವರು ಈಡಿಟ್ಟ ನಗಗಳನ್ನು 1953ನೆ ಇಸವಿ ಡಿಸೆಂಬರ ತಿಂಗಳ ತಾರೀಕು 26ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಯಾ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ವಠಾರದಲ್ಲಿ ಬಹಿರಂಗವಾಗಿ ನಿಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
28/240	ಡೇನಿಸ್ ಡಿಸೋಜ, ಪಾಲ್ ಡಿಸೋಜರ ಮಗ, ಶಿವಳ್ಳಿ, ಉಡುಪಿ P. O.	13 8 0
718	ಕೆ. ಪದ್ಮನಾಭ ಭಟ್ಟ, ಕೆ. ರಾಘವೇಂದ್ರ ಭಟ್ಟರ ಮಗ, ವ್ಯಾಪಾರಿ, ಬಡಗ ಪೇಟೆ, [illegible] P. O.	69 14 0
1128	ಸೋಮಪ್ಪ ಪೂಜಾರಿ, ಮುತ್ತ ಪೂಜಾರಿಯ ಅಳಿಯ, ಬಾರ್ಕೂರು ಮನೆ, ಉದ್ಯಾವರ. P. O.	31 12 0
1271	ಬಸ್ತಿಯಂ ಕುವಾಡ್ರೋಸ್, ಎಡ್ವರ್ಡ ಕುವಾಡ್ರೋಸರ ಮಗ, ಉದ್ಯಾವರ. P. O.	23 6 0
1304	ಕುಷ್ಟ ಪೂಜಾರಿ, ವೆಂಕ್ಟ ಪೂಜಾರಿಯ ಅಳಿಯ, ಕಡೆಕಾರು. P. O.	54 7 0
1352	ಗೋಪಾಲ ಶೇಟ್, ಪದ್ಮನಾಭ ಶೇಟರ ಮಗ, ಪುತ್ತೂರು, ಪುತ್ತೂರು P. O.	111 1 0
1627	ಬಿ. ಕಾಳು ಸ್ವಾರಿ, ಎಳ್ಳು ಸ್ವಾರಿಯ ಅಳಿಯ, ಬ್ರಹ್ಮಗಿರಿ. ಉಡುಪಿ P. O.	44 12 0
1675	ಶ್ರೀಮತಿ ಜಲಜಾಕ್ಷಿ, ಅನಂತಯ್ಯ ವಲಿನಯ್ಯರ ಹೆಂಡತಿ, ಪೆರಂಪಳ್ಳಿ	44 12 0
1696	ಜರೋಮ್ ಡಿಸೋಜ, ನಿಕೋಲಸ್ ಡಿಸೋಜರ ಮಗ, ಪಾಂಗಾಳ, ಶಂಕರಪುರ P. O.	82 4 0
29,197	ಬಿ. ಜಯರಾಮ ಹೆಗ್ಡೆ, ಭೋಜರಾಜ ಹೆಗ್ಡೆಯವರ ಅಳಿಯ, ಅಜ್ಜರಕಾಡು, ಉಡುಪಿ.	43 3 0
211	ಶಿವರಾಮ ಸೆಟ್ಟಿ, ಕಾಳಪ್ಪ ಸೆಟ್ಟಿಯ ಅಳಿಯ, ಕೆಮ್ಮಣ್ಣು, ವಡಮನೆ, ಕೊರಂಗ್ರಪಾಡಿ P. O.	48 11 0
393	ತಾರಾ ಮರಕಾಲ, ಶರಣಿ ಮರಕಾಲನ ಮಗ, ಕುತ್ಯಾರು, ಕಡೆಕಾರು P. O.	43 3 0
28,1748	ಶ್ರೀಮತಿ ಲೀನಾ ಡಿಸೋಜ, [illegible] ಡಿಸೋಜರ ಹೆಂಡತಿ, ಕಲ್ಯಾಣಪುರ, ಮಿಲ್ಪಿ P. O.	365 7 0
1296	ಗುಡ್ಡಪ್ಪ ಸೇರಿಗಾರ, ಶಾಮ್ಯ ಸೇರಿಗಾರನ ಮಗ, ಬೋಳಾರ ಗುಡ್ಡೆ, ಉದ್ಯಾವರ. P. O.	50 12 0

UDIPI
Date 15—12—53

V. J. ANDRADE.
Agent.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ತಾ 4-12-1953ರಂದು ಮೂಲ್ಕಿ ಸರ್ಕಲಿನ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಕೂಡಿ ಈ ಕೆಳಗಿನ ಸದಸ್ಯರಿಂದೊಡಗೂಡಿದ ಒಂದು ತಾತ್ಕಾಲಿಕ ಸಮಿತಿಯು ರಚಿಸಲ್ಪಟ್ಟಿತು. ಈ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರಾದ ಡಾ। ಯು. ಪಿ. ಮಲ್ಯರೂ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ. ಆರ್. ಕರ್ಕೇರರೂ ಭಾಗವಹಿಸಿದ್ದರು. ನೂತನವಾಗಿ ನೇಮಕಗೊಂಡ ಸಮಿತಿಯ ಸದಸ್ಯರು:—

ಶ್ರೀಗಳಾದ. ಡಾ। ರಾಯಪ್ಪ ಕಾಮತರು ಅಧ್ಯಕ್ಷರಾಗಿಯೂ, ಡಾ। ಎಸ್. ಚಂದರು ಉಪಾಧ್ಯಕ್ಷರಾಗಿಯೂ, ಎಸ್. ಟಿ. ಸುವರ್ಣ ಮತ್ತು ಬೋಳಾ ನಾರಾಯಣ ರಾಯರು ಜತೆ ಕಾರ್ಯದರ್ಶಿಗಳಾಗಿಯೂ, ಅಲ್ಲದೆ ಶ್ರೀ ಕೆ. ಜಯರಾಮ ಶೆಟ್ಟಿ, ಶ್ರೀ ಬೋಳ ಜನಾರ್ಧನ ಕಾಮತ್, ಶ್ರೀ ಕೆ. ಉಗ್ಗಪ್ಪ, ಶ್ರೀ ರುಕ್ಕಯ್ಯ ಪೂಜಾರಿ, ಶ್ರೀ ಯಂ. ಪಿ. ರಸ್ಕಿನ್, ಶ್ರೀ ಪಿ. ಸಂಜೀವ ಹೆಗ್ಡೆ, ಶ್ರೀ ಶಂಭುಮಲ್ಲಿ, ಶ್ರೀ ಬಂಗ್ಲೆಕಾರ್ ಪುಂಡಲೀಕ ಕಾಮತ್. ಶ್ರೀ. ಯಂ. ಆರ್. ಎಚ್. ಪೂಂಜ. ಶ್ರೀ ಕೆ. ಸಂಜೀವ ಶೆಟ್ಟಿ, ಮಿ। ಜಾನೆರ್ ರೆಬೆಲ್ಲೋ. ಮೊದಲಾದವರಿರುವರು. ಅಲ್ಲದೆ ಈ ಸಮಿತಿಗೆ ಇತರರನ್ನೂ ಸೇರಿಸಿಕೊಳ್ಳುವ ಅಧಿಕಾರವನ್ನು ಕೊಡಲಾಯಿತು.

ಇದೇ ತಾ 9-12-53ರಂದು ಪುತ್ತೂರು ಸರ್ಕಲಿನ, ಕಾಂಗ್ರೆಸ್ ಕಾರ್ಯಕರ್ತರ ಸಭೆಯು ಕೆ. ಪಿ. ಸಿ. ಸಿ. ಯ ಅಧ್ಯಕ್ಷರಾದ ಶ್ರೀ. ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಗೆ ಕೆ. ಪಿ. ಸಿ. ಸಿ ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಜಿ. ವಿ. ಹಳ್ಳಿಕೇರಿಯವರೂ, ಜಿ. ಕಾಂ. ಕಮಿಟಿಯ ಅಧ್ಯಕ್ಷ ಶ್ರೀ. ಎಫ್. ಎಕ್ಸ್. ಡಿ. ಪಿಂಟೋರವರೂ, ಕಾರ್ಯದರ್ಶಿ ಶ್ರೀ ಬಿ. ಆರ್. ಕರ್ಕೇರರೂ ಭಾಗವಹಿಸಿದ್ದರು. ಈ ಸಭೆಯಲ್ಲಿ ಈ ಕೆಳಗಿನ ಸದಸ್ಯರಿಂದೊಡಗೂಡಿದ ತಾತ್ಕಾಲಿಕ ಸಮಿತಿಯು ರಚಿಸಲ್ಪಟ್ಟಿತು:—

ಶ್ರೀಗಳಾದ ವೈ. ಸಂಜೀವ ಶೆಣೈ ಸಂಚಾಲಕರಾಗಿಯೂ, ಎ. ರೇಗೊ,. ಕೆ. ವಿ. ಶೆಣೈ, ವಿಠಲ ಬಾಳಿಗ, ಟಿ. ಬಾಬುರಾವ್, ವೆಂಕಟಸುಬ್ಬ ರಾವ್ ಬೆಳ್ಳಾರೆ, ಗೋವಿಂದ ಶಾನುಭೋಗ್, ರಾಮಣ್ಣ ಗೌಡ, ಇಟ್ಟಪ್ಪ ರೈ, ಬಿ. ವಿಠಲದಾಸ ಶೆಟ್ಟಿ, ಕೆ. ಅಣ್ಣಪ್ಪ ಭಂಡಾರಿ ಅಲ್ಲದೆ ಈ ಸಮಿತಿಗೆ ಇತರರನ್ನೂ ಸೇರಿಸಿ ಕೊಳ್ಳುವ ಅಧಿಕಾರವನ್ನೂ ಕೊಡಲಾಯಿತು.

ಕಾರ್ಕಳ— ದಿನಾಂಕ ೭ರಂದು ದ. ಭಾ. ಹಿಂದೀ ಪ್ರಚಾರ ಸಭಾ ಮದ್ರಾಸು ಇದರ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಂ. ಸತ್ಯನಾರಾಯಣ ಎಂ. ಎಲ್. ಸಿ. ಯವರು ಕರ್ನಾಟಕದ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಗಳಾದ ಶ್ರೀ ಎ. ಆರ್. ನಾವಡರೊಂದಿಗೆ ಸ್ಥಳೀಯ ರಾಷ್ಟ್ರಭಾಷಾ ಪ್ರಚಾರ ಸಂಘವನ್ನು ಸಂದರ್ಶಿಸಿದರು. ನಂತರ ಸಂಜೆಗೆ ಬೋರ್ಡ್ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ರಾಮರಾಯ ಶೆಟ್ಟರ ಘನ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀ ಸತ್ಯನಾರಾಯಣರು ಪೂಜ್ಯ ಗಾಂಧಿಜೀಯವರ ಭಾವಚಿತ್ರವನ್ನು ಅನಾವರಣ ಮಾಡಿದರು. ಶ್ರೀ ಎಸ್. ಎಸ್. ಎನ್. ಉಪಾಧ್ಯಾಯರು ಅತಿಥಿಗಳನ್ನು ಸ್ವಾಗತಿಸಿ ಸಭೆಗೆ ಪರಿಚಯಮಾಡಿ ಕೊಟ್ಟರು. ಶ್ರೀ ಎಂ. ಡಿ. ಅಧಿಕಾರಿಗಳು ಸತ್ಯನಾರಾಯಣರಿಗೆ ಶಾಲಾ ಹಿಂದಿ ಸಂಘದ ಪರವಾಗಿ ಒಂದು ಮಾನಪತ್ರವನ್ನರ್ಪಿಸಿದರು. ಅತಿಥಿಗಳಿಗೆ ಸಂಘದ ಕಾರ್ಯಕರ್ತರ ಪರಿಚಯವನ್ನು ಶ್ರೀ ಕೆ. ಶ್ರೀನಿವಾಸ ಶೆಣೈಯವರು ಮಾಡಿಕೊಟ್ಟ ಬಳಿಕ ಸತ್ಯನಾರಾಯಣರು ಹಿಂದೀ ಕಲಿಯುವುದರ ಮಹತ್ವವನ್ನೂ, ಹಿಂದೀ ಪ್ರಚಾರ ಕಾರ್ಯಕರ್ತರನ್ನೂ ಪ್ರಶಂಸಿಸಿ ಮಾತ್ನಾಡಿದರು, ಅಧ್ಯಕ್ಷ ಭಾಷಣದ ತರುವಾಯ ಶ್ರೀ ಎಚ್. ಆರ್. ಕಾಮತರು ಧನ್ಯವಾದಗಳನ್ನರ್ಪಿಸಿದರು.

ನಿಡ್ಡೋಡಿ—ಡಾ। ಕೆ. ಪ್ರಭಾಕರ ಹೆಗ್ಡೆ ಅವರ "ಲಕ್ಷ್ಮೀನಾರಾಯಣ ಕ್ಲಿನಿಕ್" ಎಂಬ ಆಸ್ಪತ್ರೆಯ ಉದ್ಘಾಟನೋತ್ಸವ ಇದೇ ತಾ 11ನೇ ಬೆಳಿಗ್ಗೆ ಯಥಾವಿಧಿಯಾಗಿ ಜರಗಿತು. ಅತಿಥಿ ಅಭ್ಯಾಗತರಿಗೆ ಉಪಹಾರ ಸತ್ಕಾರವೂ ನೆರವೇರಿತು.

ಕುಂಬಳೆ ಕಾಸರಗೋಡು ತಾಲೂಕು ಪಂಚಾಯತಬೋರ್ಡು ಅಧ್ಯಕ್ಷರುಗಳ ಯೂನಿಯನ್ ಅಧ್ಯಕ್ಷ ಸ್ಥಾನಕ್ಕೆ ಅಂಗಡಿಮೊಗರು ಪಂಚಾಯತ ಬೋರ್ಡು ಅಧ್ಯಕ್ಷ ಜನಾಬ್ ಅಹಮ್ಮದ್ ಆಲಿ ಶಿರೋಲ್‌ರವರು ಆರಿಸಲ್ಪಟ್ಟರು.

ದಕ್ಷಿಣ ಕನ್ನಡ ಜಿಲ್ಲಾ ದೇವಾಂಗ ಸಮಾಜ ಸೇವಾ ಸಂಘದ ವಾರ್ಷಿಕ ಮಹಾಸಭೆಯು ಇದೇ ದಶಂಬ್ರ ತಿಂಗಳ ತಾರೀಕು 27ರಲ್ಲು ರವಿವಾರ ಅಪರಾಹ್ನ ಗಂಟೆ 3.ಕ್ಕೆ ಕೂಡ್ಲು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಯಂ. ಕೆ. ರಾಮನವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ, ಜರಗಲಿರುವುದರಿಂದ ಸಮಾಜ ಬಾಂಧವರೆಲ್ಲರೂ ಚಿತ್ತೈಸಿ ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿ, ಶ್ರೀ. ಕೆ. ಅಯ್ಯಪ್ಪನ್ ಕುಂಬಳೆ, ಇವರು ವಿನಂತಿಸುತ್ತಾರೆ.

(೫ನೇ ಪುಟದಿಂದ)

ಭಾರತ-ನೇಪಾಳಗಳ ಇತಿಹಾಸದಲ್ಲಿಯೇ ಈ ಮೋಟಾರು ಮಾರ್ಗದ ರಚನೆ ಮೊದಲನೆಯದು. ಇದಕ್ಕೆ ತಗಲುವ ವೆಚ್ಚವನ್ನು ಭಾರತ ಸರಕಾರವೇ ಸಹಾಯ ದ್ರವ್ಯದ ರೂಪದಲ್ಲಿ ನೇಪಾಳಕ್ಕೆ ಕೊಟ್ಟಿದೆ. ಮತ್ತು ಭಾರತೀಯ ಸೈನಿಕರೇ ಈ ಮಾರ್ಗದ ರಚನೆಯಲ್ಲಿ ಹೆಚ್ಚಾಗಿ ಕೆಲಸ ಮಾಡಿದರು.

"ಇಷ್ಟರ ವರೆಗೆ ಇಕ್ಕಟ್ಟಾದ ಅಪಾಯಕಾರಿಯಾದ ಒಂಟಿಗುದುರೆಯ ಕಾಲು ದಾರಿಯೇ ನೇಪಾಳಕ್ಕೂ ಬಾಹ್ಯ ಜಗತ್ತಿಗೂ ಸಂಪರ್ಕವೇರ್ಪಡಿಸುವ ಏಕಮಾತ್ರ ಸಾಧನವಾಗಿದ್ದಿತು. ಆದರೆ ಈ ಮಾರ್ಗದ ನಿರ್ಮಾಣದಿಂದ ಸಂಪರ್ಕ ಸಂಬಂಧ ವ್ಯಾಪಕಗೊಳ್ಳುತ್ತದೆ—ವ್ಯಾಪಾರೀ ಹಿತ, ಆಯಕಟ್ಟಿನ ಸೈನಿಕ ಠಾಣ್ಯ, ಸಾಮಾಜಿಕ ಸಂಬಂಧ ಮುಂತಾದ ಅನೇಕ ದೃಷ್ಟಿಗಳಿಂದ ಈ ರಸ್ತೆ ನೇಪಾಳಕ್ಕೆ ಲಾಭತರುತ್ತದೆ" ಎಂದು ಅಲ್ಲಿಯ ಮುಖ್ಯ ಮಂತ್ರಿ ಶ್ರೀ. ಮಾತೃಕಾಪ್ರಸಾದ ಕೊಯ್ರಾಲರು ಹೇಳಿದರು.

ಪ್ರಧಾನ ಮಂತ್ರಿ ನೆಹರೂರವರು ತಮ್ಮ ಸಂದೇಶದಲ್ಲಿ ಉಭಯ ರಾಷ್ಟ್ರಗಳ ಸ್ನೇಹವನ್ನು ಹೆಚ್ಚಿಸುವುದಲ್ಲದೆ, ಪರಸ್ಪರ ಹಿತವನ್ನೂ ಸಾಧಿಸುವುದೆಂದು ಆಶೆ ವ್ಯಕ್ತಪಡಿಸಿದರು.

ಮದ್ರಾಸಿಗೆ ಅಕ್ಕಿಯ ಪೂರೈಕೆ

ಆಂಧ್ರರಾಜ್ಯ ಅಸ್ತಿತ್ವಕ್ಕೆ ಬಂದ ಮೇಲೆ ಉಳಿಕೆಯ ಮದ್ರಾಸು ರಾಜ್ಯಕ್ಕೆ ಆಹಾರದ ವಿಷಯದಲ್ಲಿ ಕೊರತೆಯುಂಟಾಗಿರುತ್ತದೆ. ನಿಯಂತ್ರಣವನ್ನು ಕಿತ್ತೊಗೆಯುವ ಕಾಲದಲ್ಲಿ ಮಾಡಿದ ಆರು ಪ್ರಾದೇಶಿಕ ವಿಭಾಗಗಳಲ್ಲಿ "ಭತ್ತದ ಕಣಜ" ವೆಂತಿದ್ದ ಪ್ರದೇಶ ಆಂಧ್ರಕ್ಕೆ ಸೇರಿ ಹೋಗಿರುವುದರಿಂದ, ಈಗ ಹೊಸ ವ್ಯವಸ್ಥೆ ಅಗತ್ಯದ್ದೆನಿಸಿದೆ.

ಕೇಂದ್ರದ ಆಹಾರ ಮಂತ್ರಿ ಕಿದ್ವಾಯಿಯವರು ಮದ್ರಾಸದಲ್ಲಿ ನಡೆಸಿದ ಸಮಾಲೋಚನೆಗಳ ಪರಿಣಾಮವಾಗಿ, ಈಗ ಮದ್ರಾಸು ರಾಜ್ಯಕ್ಕೆ ಅಕ್ಕಿಯ ನಿರಾತಂಕ ಪೂರೈಕೆಯಾಗುವಂತೆ ಉತ್ತಮವಾದ ಏರ್ಪಾಡು ಮಾಡಲ್ಪಟ್ಟಿದೆ. ಆಂಧ್ರರಾಜ್ಯವು ಮದ್ರಾಸು ಸರಕಾರಕ್ಕೆ ಒಂದು ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಕಳೆದ ವರ್ಷದ ಬೆಲೆಯಲ್ಲಿ ಕೊಡುತ್ತದೆ. ಇನ್ನೊಂದು ಲಕ್ಷ ಟನ್ನು ಅಕ್ಕಿಯನ್ನು ಆಂಧ್ರರಾಜ್ಯವು [illegible] ರಿಗೆ ತುಸು ಹೆಚ್ಚಿನ ದರದಲ್ಲಿ—ಆದರೆ ಕಳೆದ ವರ್ಷಕ್ಕಿಂತ ಕಡಿಮೆ ದರದಲ್ಲಿ— ಮಾರುತ್ತದೆ. ಹೀಗೆ ಬರುವ ಎರಡು ಲಕ್ಷ ಟನ್ನು ಅಕ್ಕಿಯಲ್ಲದೆ ಒಡಿಸಾ ರಾಜ್ಯದಿಂದಲೂ ಅರ್ಧ ಲಕ್ಷ ಟನ್ನು ಅಕ್ಕಿ ಮದ್ರಾಸು ಸರಕಾರಕ್ಕೆ ದೊರೆಯಲಿದೆ. ಮದ್ರಾಸಿಗೆ ಒಟ್ಟು ಬೇಕಾದ ಮೂರು ಲಕ್ಷ ಟನ್ನು ಅಕ್ಕಿಯಲ್ಲಿ ಹೀಗೆ ಎರಡೂವರೆ ಲಕ್ಷ ಟನ್ನು ದೊರೆಯುತ್ತದೆ. ಉಳಿದುದನ್ನು ಕೇಂದ್ರ ಸರಕಾರದ ಮೂಲಕ ಪಡೆಯಲು ಸಾಧ್ಯವಿದೆ.

ಇದರ ನಡುವೆ ಮದ್ರಾಸು ರಾಜ್ಯದಲ್ಲಿ ಈ ವರ್ಷ ಚೆನ್ನಾದ ಬೆಳೆ ಒಂದಿದೆಯೆಂದೂ ಜನವರಿಯಲ್ಲಿ ಕೊಯ್ಲು ಮುಗಿದ ಗಳಿಗೆಗೆ ರಾಜ್ಯದ ಆಹಾರ ಪರಿಸ್ಥಿತಿಯು ಊರ್ಜಿತಗೊಂಡಿದೆಯೆಂದು ತೋರಿದರೆ, ಆಗ ಮೇಲಿನಂತೆ ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳುವ ಪ್ರಮಾಣ ತಗ್ಗಿದರೂ ತಗ್ಗೀತೆಂದೂ ಆಶೆಯ ಮಾತು ಕೇಳಿ ಬರುತ್ತಿದೆ.

ಜನಮತ

ವೇದಾಂತ ಮತ್ತು ವಿಜ್ಞಾನ

ಈಗ್ಗೆ ಕೆಲದಿನಗಳ ಹಿಂದೆ ಆಚಾರ್ಯರೊಬ್ಬರು ಹೆಂಗಸರು ಮುಟ್ಟಾದ ಮೂರು ದಿನಗಳಲ್ಲೂ ಗೃಹಕೃತ್ಯಾದಿ ಕಾರ್ಯಗಳನ್ನು ಮಾಡಿಕೊಂಡು ದುರಾಚಾರಿಗಳಾಗಿರುತ್ತಾರೆ ಎಂದು ಬರೆದುದಕ್ಕೆ ಮದ್ರಾಸಿನ ರುಕ್ಮಿಣೀ ಬಾಯಿಯವರು ಸಿಟ್ಟಾಗಿ ನಿಮ್ಮ ಪತ್ರಿಕೆಯಲ್ಲಿ ಬರೆದ ಕೆಲವು ಮಾತುಗಳು ನನ್ನ ಕಣ್ಣಿಗೆ ಬಿದ್ದವು. ಮುಟ್ಟೆಂಬುದನ್ನು ಮೈಲಿಗೆ ಎಂದು ನಮ್ಮ ಸನಾತನಿಗಳು ತಿಳಿದಿದ್ದರೂ, ವಿಜ್ಞಾನವು ಬೆಳೆದ ಈಗಿನ ಕಾಲದಲ್ಲಿ ಕೆಲವರು ಮುಟ್ಟೆಂಬುದು ಕೇವಲ ಪ್ರಕೃತಿ ನಿಯಮ, ಆದ್ದರಿಂದ ಆ ಕಾಲದಲ್ಲಿ ಮನೆಗೆಲಸಗಳನ್ನು ಮಾಡುವುದು ನಿಷೇಧವಲ್ಲ ಎಂದು ತಿಳಿದಿದ್ದಾರೆ. ಹಾಗಾಗಿ ಅವರವರ ಮನಸ್ಸು, ಸಂಸ್ಕೃತಿಗಳಿಗನುಸಾರವಾಗಿ ಮುಟ್ಟಾದರೆ ಹೊರಗೆ ಕುಳಿತುಕೊಳ್ಳುವವರೂ, ಹೊರಗೆ ಕುಳಿತುಕೊಳ್ಳದಿರುವವರೂ ಸಮ ಪ್ರಮಾಣದಲ್ಲಿದ್ದಾರೆ. ಯಾರೋ ಒಬ್ಬರು ಮುಟ್ಟಾದರೆ ಮನೆಗೆಲಸಗಳನ್ನು ಮಾಡುವುದು ದುರಾಚಾರ ಎಂದು ಬರೆದರೆ ಯಾರೂ ಲಕ್ಷ್ಯ ಮಾಡುವುದಿಲ್ಲ. ಹಾಗಿರುತ್ತಾ ಯಾರೋ ಒಬ್ಬ ಆಚಾರ್ಯರ ಮಾತಿಗೆ ರುಕ್ಮಿಣಿ ಬಾಯಿಯವರಿಗೆ ಸಿಟ್ಟೇಕೆ?

ಅಲ್ಲದೆ ಶ್ರೀಮತಿಯವರು ಮನುಷ್ಯಜಾತಿಗೆ ಗೊತ್ತಿದ್ದ ಪ್ರಕಾರ ಹೆಂಗಸರಾದವರೆಲ್ಲರೂ ಮುಟ್ಟಾದರೆ ಬಾವಿ ಕೂಡಾ ಮುಟ್ಟದೆ ಬಹಳ ಮಡಿವಂತೆಯರಾಗಿರುತ್ತಾರೆಂದು ಹೆಗ್ಗಳಿಕೆ ಕೊಚ್ಚಿ ಕೊಂಡಿದ್ದಾರೆ. ಇದನ್ನು ಮಾತ್ರ ಖಂಡಿಸದೆ ನಿರ್ವಾಹವಿಲ್ಲ. ಎಲ್ಲರೂ ಹೀಗಿಲ್ಲ. ಹಿಂದಿನ ಕಾಲದ ಹೆಂಗಸರ ವಿಚಾರವೇ ಬೇರೆ. ಹಿಂದಿನ ಕಾಲದಲ್ಲಿ 7-9 ವರ್ಷ ಪ್ರಾಯದಲ್ಲೇ ಮದುವೆಯಾಗುತ್ತಿತ್ತು. ಮದುವೆಯಾದ ಮೇಲೆನೇ ಹುಡುಗಿಯರು ಋತುಮತಿಯರಾಗುತ್ತಿದ್ದರು. ಮುಟ್ಟಾದವರು ಮೈಲಿಗೆ ಎಂಬ ಅಭಿಪ್ರಾಯವಿತ್ತಲ್ಲದೆ ಮನೆಯ ಬಾಗಿಲುಗಳನ್ನೂ ಮುಟ್ಟುತ್ತಿರಲಿಲ್ಲ. ಒಂದು ವರ್ಷದ ಹಸುಳೆಯನ್ನೂ ಬತ್ತಲೆಯಾಗಿರುವಾಗಲೇ ಮುಟ್ಟುತ್ತಿದ್ದರಷ್ಟೆ. ಆದರೆ ಈಗಣ ಕಾಲದಲ್ಲಿ 20 ವರ್ಷವಾದರೂ ಮದುವೆಯಾಗುವುದಿಲ್ಲ. ಹುಡುಗಿಯರು ಬೇಗ ಋತುಮತಿಯರಾಗುತ್ತಾರೆ. ಅಲ್ಲದೆ ಹೆಚ್ಚಿನವರು ಶಾಲೆಗೂ ಹೋಗುತ್ತಾರೆ. ಶಾಲೆಗೆ ಹೋಗುವ ಹುಡುಗಿಯರು ಮುಟ್ಟಾದರೆ 3 ದಿನ ರಜೆ ತೆಗೆದುಕೊಳ್ಳುತ್ತಾರೆಯೋ? ಶಿಕ್ಷಕಿಯರಾಗಿ ಕೆಲಸಮಾಡುವವರು ಪ್ರತಿ ತಿಂಗಳೂ ಮುಟ್ಟಾದಾಗ 3 ದಿನ ರಜೆ ತೆಗೆದುಕೊಳ್ಳುತ್ತಾರೆಯೋ? ಶಾಲೆಗೆ ಹೋಗಿ ಮಕ್ಕಳನ್ನು ಮುಟ್ಟುವುದಿಲ್ಲವೇ? ರುಕ್ಮಿಣೀ ಬಾಯಿಯವರು ಉತ್ತರಕೊಡಲಿ. ಹೀಗಿರುತ್ತಾ ಈಗ್ಗೆ ಹೆಂಗಸರು ಮುಟ್ಟಾದಲ್ಲಿ 3 ದಿನವೂ ಕೆಲಸಗಳನ್ನು ಮಾಡಿಕೊಂಡು ದುರಾಚಾರಿಗಳು ಅಲ್ಲದಿದ್ದರೆ ರೂಢಿ ಮಾಡಿಕೊಂಡಿದ್ದಾರೆಂದು ಹೇಳಿದರೆ ತಪ್ಪಲ್ಲ. ಇದಕ್ಕೆ ಶ್ರೀಮತಿಯವರು ಸಿಟ್ಟಾದುದೇ ಆಶ್ಚರ್ಯ!

ತಮ್ಮ ಮನಸ್ಸಾಕ್ಷಿಗೆ ಅನುಸಾರವಾಗಿ ನಡೆಯುವಲ್ಲಿ ಯಾರೂ ಇತರರ ಅಭಿಪ್ರಾಯಗಳನ್ನು ಗಮನಿಸುವುದಿಲ್ಲ. ಶ್ರೀಮತಿಯವರು ಆಚಾರ್ಯರು ಹೆಂಗಸರನ್ನು ಅವಮಾನಿಸಿದ್ದಾರೆ ಎಂದು ತಪ್ಪಾಗಿ ತಿಳಿದುಕೊಂಡಿದ್ದಾರೆ. ಆ ತಪ್ಪು ಭಾವನೆ ಯಾರೋ ಇಡೀ ಸ್ತ್ರೀ ಸಮಾಜವನ್ನೆ ಸಮರ್ಥಿಸ ಹೊರಟಿದ್ದಾರೆ. ಅವರು ಕೇವಲ ಸ್ತ್ರೀಯರ ಒಂದು ವರ್ಗವನ್ನು ಮಾತ್ರ ಸಮರ್ಥಿಸಿ ಎಲ್ಲರೂ ಹಾಗಿಲ್ಲ ಎಂದು ಹೇಳುತಿದ್ದರೆ ನಾನದನ್ನು ಒಪ್ಪುತ್ತಿದ್ದೆನು. ಆದರೆ ಶ್ರೀಮತಿಯವರು ಎಲ್ಲಾ ಹೆಂಗಸರು ಸದಾಚಾರಿಗಳು ಎಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಖಂಡಿಸಬೇಕಾಯಿತು. ಇದಕ್ಕೆ ಶ್ರೀಮತಿಯವರೇನು ಸಮಾಧಾನ ಹೇಳುವರು?

P. Keshava Rao B. A.
(Mangalore)

ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ. ಏಜಂಟರು, ಸ್ಪೆಶಲ್ ಏಜಂಟರು, ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ವಿವರಕ್ಕೆ ಬರೆಯಿರಿ:

ಮೆನೇಜರ್.

ದಿ ನ್ಯೂ ಕರ್ನಾಟಕ ಪ್ರೊವಿಡೆಂಡ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಈಸ್ಟ್ ಇಂಡಿಯೂರವರ

"ಸಂಕ್ರಾಂತಿ"

ಡೈರೆಕ್ಷನ್: ಸಿ. ಪುಲ್ಲಯ್ಯ

ತಾರಾಗಣ: ಶಾಂತಕುಮಾರಿ, ಶ್ರೀ ರಂಜನಿ, ಹೇಮಾವತಿ, ವಿಜಯಲಕ್ಷ್ಮಿ, ನಾಗೇಶ್ವರ ರಾವ್,

20ಕ್ಕೆ ಬೆಳಿಗ್ಗೆ 10 ಗಂಟೆಗೆ;-ಟೇಲ್ಸ್ ಒಫ್ ಟು ಸಿಟೀಸ್

ಭಾರತೀಯ ಕಲಾ ಮಂಡಲ ಮತ್ತು ಸಂಗೀತ ಕೇಂದ್ರ, ಮುಂಬಯಿ.

ಪ್ರಖ್ಯಾತ ಉದಯ ಶಂಕರರ ಆಲ್ಮೋರಾ ಕಲಾಕೇಂದ್ರದಲ್ಲಿ ನೃತ್ಯ ಶಿಕ್ಷಣವನ್ನು ಹೊಂದಿ, 1945ರಲ್ಲಿ ಉದಯ ಶಂಕರರು ತಮ್ಮ ಮಂಡಳಿಯೊಂದಿಗೆ ಮುಂಬಯಿಗೆ ಬಂದಾಗ ಅವರೊಡನೆ ಸ್ವಲ್ಪ ಸಮಯ ನೃತ್ಯ ಪ್ರದರ್ಶನವಿತ್ತು ಬಳಿಕ ಮುಂಬಾಯಿಯಲ್ಲಿ ಸ್ವಂತ ನೃತ್ಯ ಕಲಾ ಶಾಲೆಯನ್ನು ಆರಂಭಿಸಿ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಶ್ರೀ. ಕೆ. ಕೆ. ಶೆಟ್ಟರು ಸುಮಾರು ಇಪ್ಪತ್ತು ನರ್ತಕ ನರ್ತಕಿಯರೊಂದಿಗೆ ಉತ್ತರ ಹಿಂದೂದೇಶದ ಪಟ್ಟಣಗಳಲ್ಲಿ ನೃತ್ಯಪ್ರದರ್ಶನಗಳನ್ನು ಪ್ರದರ್ಶಿಸಿ ಅನಂತರ ಮಂಗಳೂರಿಗೆ ಬರುವರೆಂದು ತಿಳಿದು ಬರುತ್ತದೆ. ಅವರ ಈ ನೃತ್ಯಕೂಟದಲ್ಲಿ ಚಲನಚಿತ್ರ ಖ್ಯಾತಿಯ ಕೆಲವು ನಟಿಯರೂ ಇರುವರೆನ್ನಲಾಗಿದೆ

ಮುಂಬಯಿಯ ನಾಟ್ಯರಂಗದಲ್ಲಿರುವ ಭಾರತ ಕಲಾಮಂಡಲದ ನಿರ್ದೇಶಕರೂ ಮತ್ತು ಸಂಚಾಲಕರೂ ಶಾಸ್ತ್ರೀಯ ಹಾಗೂ ಮೇಲ್ತರಗತಿಯ ನೃತ್ಯಗಾರರೂ ಆದ

ಶ್ರೀ ಕೆ. ಕೆ ಶೆಟ್ಟರು

(ಚಂದ್ರಕಾಂತ ...)

ಪ್ರಖ್ಯಾತ ಸಿನೇಮಾ ತಾರೆ ಚಿತ್ರಾಳು ಮೀರಾ ಬಾಯಿಯಾಗಿ ಮತ್ತು

ಪುಷ್ಪಾ ನಾಯಕಳ್, ಕೃಷ್ಣನಾಗಿ.

(... ಪುಷ್ಪಾ ...)



ಕೋಲಾಟ ನೃತ್ಯ

* * * * *

ಶ್ರೀ ಕೆ ಕೆ ಶೆಟ್ಟರು ತಮ್ಮ ಕಲಾ ಕೂಟದೊಂದಿಗೆ ಮಂಗಳೂರಲ್ಲೂ ಉಡುಪಿಯಲ್ಲೂ ಒಂದೆರಡು ನೃತ್ಯ ಪ್ರದರ್ಶನಗಳನ್ನು ಕೊಡುವರೆಂದು ಕಲಾಭಿಮಾನಿಗಳು ತಮ್ಮ ಪ್ರೋತ್ಸಾಹವನ್ನೀಯುವರೆಂದು ನಿರೀಕ್ಷಿಸಲಾಗಿದೆ

ಪುಷ್ಪಾ ನಾಯಕಳು

ಮಂಗಳೂರು

ಭಾಷಣ— ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಇದೇ ತಾ 10ರಲ್ಲು ಕೇಂದ್ರ ಮೈದಾನದಲ್ಲಿ ಭಾಷಣವೀಯುತ್ತಾ ಕಾಂಗ್ರೆಸಿಗೆ ಬೆಂಬಲ ನೀಡಬೇಕೆಂದು ಕೇಳಿಕೊಂಡರು ಪ್ರಾರಂಭದಲ್ಲಿ ಶ್ರೀ ಬಿ ಆರ್ ಕರ್ಕೇರರು ಸ್ವಾಗತ ಮಾತುಗಳನ್ನಾಡಿದರು. ಪ್ರಾಂತಿಕ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಗುಡ್ಲೆಪ್ಪ ಹಳ್ಳಿಕೇರಿಯವರೂ ಮಾತನಾಡುತ್ತಾ ರಾಷ್ಟ್ರ ಧುರೀಣರಿಗೆ ಬೆಂಬಲವೀಯಬೇಕೆಂದರು. ಕರ್ನಾಟಕಕ್ಕೆ ಸೇವೆ ಸಲ್ಲಿಸಿದ ದ ಕ ಜಿಲ್ಲೆಯ ದಿವಂಗತ ಎನ್ ಎಸ್ ಕಿಲ್ಲೆ ಮತ್ತು ಬೆನಗಲ್ ನರಸಿಂಗ ರಾಯರನ್ನೂ ಶ್ರೀ ನಿಜಲಿಂಗಪ್ಪನವರು ಸ್ಮರಿಸಿ ಮಾತನಾಡಿದರು ಶ್ರೀ ಎಫ್ ಎಕ್ಸ್ ಡಿ ಪಿಂಟೋರವರು ಧನ್ಯವಾದಗಳನ್ನರ್ಪಿಸಿದರು

ಸಂಜೆ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಶ್ರೀ ನಿಜಲಿಂಗಪ್ಪನವರೂ, ಗುಡ್ಲೆಪ್ಪ ಹಳ್ಳಿಕೇರಿಯವರೂ ಭಾಷಣ ಮಾಡಿದರು

ಬಿಕ್ಷುಕರಿಗೆ ವಸತಿ— ಈಚೆಗೆ ನಡೆದ ಮಂಗಳೂರು ನಗರ ಸಭೆಯಲ್ಲಿ ನೂರು ಮಂದಿ ಭಿಕ್ಷುಕರಿಗೆ ಆಶ್ರಯ ಕೊಡಬಲ್ಲ ಒಂದು ಭಿಕ್ಷುಕ ವಸತಿ ರಚನೆಯ ಯೋಜನೆಯನ್ನು ತಯಾರಿಸಲು ಕಮಿಶನರರಿಗೆ ಅಧಿಕಾರವೀಯಲಾಗಿದೆ

ವಾರ್ಷಿಕೋತ್ಸವ— ದ ಕ ಜಿಲ್ಲೆ ಗಿಲ್ಡಿನ ಕಾರ್ಯದರ್ಶಿ ಶ್ರೀ ಯು ಶ್ರೀನಿವಾಸ ಕಿಣಿಯವರು ಅಧ್ಯಾಪಕರ ವಿಚಾರವಾಗಿಯೂ ಹೊಸ ಪ್ರಾಥಮಿಕ ವಿದ್ಯಾ ಯೋಜನೆಯ ವಿಚಾರವಾಗಿಯೂ ಇದೇ ತಾ 6ರಲ್ಲಿ ಜರಗಿದ ಕದ್ರಿಯ ಬೋಧಕರ ಕೇಂದ್ರದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರು ಸಭಾಧ್ಯಕ್ಷತೆ ವಹಿಸಿದ್ದರು

ಸಂಗೀತ ಕಚೇರಿ— ಸೇಲಮಿನ ಕೊಳಲುವಾದನ ಕೋವಿದರಾದ ಶ್ರೀ ಆರ್. ಎಸ್ ರಂಗನಾಥ ಪಿಟೀಲುವಾದಕ ಶ್ರೀ ವಿಠಲ ಮತ್ತು ಮೃದಂಗವಾದಕ ಶ್ರೀ ಎನ್ ವಿ ಮೂರ್ತಿಯವರ ಸಂಗೀತ ಕಚೇರಿಯೊಂದು ಇದೇ ತಾ 8ರಲ್ಲಿ ರಾತ್ರಿ ವಿಸೆಂಟ್ ಮಂದಿರದಲ್ಲಿ ಜರಗಿತು ಸಂಗೀತವಾದ ಬಳಿಕ ಶ್ರೀ ಎನ್ ವಿ ಮೂರ್ತಿಯವರು ತಮ್ಮ ಚೀನಾ ಪ್ರವಾಸದ ಅನುಭವಗಳನ್ನು ವಿವರಿಸಿದರು ಕಳೆದ ಜುಲಾಯಿ ತಿಂಗಳಲ್ಲಿ ಶಾಂತಿ ಸಮಿತಿಯವರು ಚೀನಕ್ಕೆ ಕಳುಹಿಸಿದ ಭಾರತದ 23 ಮಂದಿ ಪ್ರಸಿದ್ಧ ಕಲಾವಿದರಲ್ಲಿ ಶ್ರೀ ಮೂರ್ತಿಯವರು ಒಬ್ಬರಾಗಿದ್ದರು

ಶ್ರೀ ಆನಂದ ನಂಬಿಯಾರರ ಭಾಷಣ ಇದೇ ತಾ 13ರಲ್ಲಿ ಸಂಜೆ ಮಂಗಳೂರಿನ ... ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ ಆನಂದ ನಂಬಿಯಾರ್, ಎಮ್ ಪಿ ಅವರು ಮಂಗಳೂರಿನ ದಕ್ಷಿಣ ರೈಲ್ವೆ ಕಾರ್ಮಿಕ ಸಂಘದ ಶಾಖೆಯ ಕಚೇರಿಯಲ್ಲಿ ರೈಲ್ವೆ ಕಾರ್ಯಕರನ್ನುದ್ದೇಶಿಸಿ ಭಾಷಣ ಮಾಡಿದರು. ರೈಲ್ವೆ ಕಾರ್ಮಿಕರೆಲ್ಲರೂ ತಮ್ಮ ಸಂಕಷ್ಟಗಳ ಪರಿಹಾರಕ್ಕಾಗಿ ಒಕ್ಕಟ್ಟಾಗಿ ಸಂಘವನ್ನು ಬಲಪಡಿಸಬೇಕೆಂದು ಕೇಳಿಕೊಂಡರು.

ವಿವಾಹ ಸಮಾರಂಭಗಳು— ಇದೇ 10ರಲ್ಲಿ ಪೂರ್ವಾಹ್ನ ಶ್ರೀ ಬಿ ವೈಕುಂಠ ಬಾಳಿಗ, ಎಮ್ ಎಲ್ ಎ ಅವರ ಪುತ್ರಿ ಕುಮಾರಿ ಪ್ರೇಮಾ ಬಾಯಿಯವರ ವಿವಾಹವು ಶ್ರೀ ಯು ದೇವದಾಸ ಆಚಾರ್ಯ (ಅಸಿಸ್ಟಂಟ್ ಎಕೌಂಟೆಂಟ್ ಜನರಲ್ ಪೋಸ್ಟ್ ಎಂಡ್ ಟೆಲಿಗ್ರಾಫ್, ಮದ್ರಾಸು) ಅವರೊಡನೆ ಕೆನರಾ ಹೈಸ್ಕೂಲಿನ ಮುಖಮಂಟಪ ಸಭಾಭವನದಲ್ಲಿ ಜರಗಿತು

ಡಾ| ಪಿ ಆರ್ ನಾಯಕ್, ಕನ್ಸಲ್ಟಿಂಗ್ ರೂಮ್ಸ್ ಮತ್ತು ನಾಯಕ್ ಸಿಯ ಶ್ರೀ ಪಾಂಗಾಳ ಸುಂದರ ನಾಯಕ್. ಬಿ ಎಸ್ ಸಿ. ಅವರು ಇದೇ ತಾ 10ರಲ್ಲಿ ಮಂಗಳೂರಿನ ಶ್ರೀ ರಂಗ ಭವನದಲ್ಲಿ ಶ್ರೀಮತಿ ಕುಸುಮ, ಬಿ ಎ. ಅವರನ್ನು ವಿವಾಹವಾದರು ನೂತನ ದಂಪತಿಗಳಿಗೆ ಶುಭಾಶಯಗಳು.

ದಿನಾಚರಣೆ— ಸರಕಾರಿ ರಥಬೀದಿ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ಮಾನವ ಹಕ್ಕುಗಳ ಘೋಷಣಾ ದಿನಾಚರಣೆಯು ಇದೇ ತಾ 11ರಲ್ಲಿ ಶ್ರೀ ಪಿ ಎಸ್ ... ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ... ರಾವ್, ... ರಂಗಸ್ವಾಮಿ, ... ಪದ್ಮನಾಭ ಕಾಮತ್ ಮತ್ತು ಶ್ರೀಮತಿ ಇಂದಿರಾರವರು ಕಾರ್ಯೋಚಿತ ಮಾತುಗಳನ್ನಾಡಿದರು.

ಶ್ರೀಮತಿ ಹೀರಾ ಶೆಟ್ಟಿಯವರು ಇದೇ— 17ನೇ ಸಂಜೆ 5 ಗಂಟೆಗೆ ... ಸಭಾ ಭವನದ ಆಶ್ರಯದಲ್ಲಿ ತಮ್ಮ ಯುರೋಪ್ ಪ್ರವಾಸದ ಅನುಭವದ ಕುರಿತು ಭಾಷಣ ಮಾಡುವರು

— — —

ಸಿದ್ದಾಪುರ ಕುಂದಾಪುರ ತಾಲೂಕಿನ ಸಿದ್ದಾಪುರದಲ್ಲಿ ಇದೇ ತಾ 9ರಲ್ಲಿ ಭೂದಾನ ಯಜ್ಞದ ಪ್ರಚಾರ ಸಭೆಯು ಶ್ರೀ ... ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀನಿವಾಸ ಟಿ ನರಸಿಂಹ ಶೆಟ್ಟಿ, ... ವಿನೋಬಾ ಸಹಯಾತ್ರಿ ... ಕುಂದಾಪುರ, ಮೊದಲಾದವರು ಮಾತನಾಡಿದರು ಸ್ಥಳೀಯ ಮಹನೀಯರು ಈ ಯಜ್ಞ ಕಾರ್ಯಕ್ಕೆ ಸಹಾಯ ನೀಡುವುದಾಗಿ ಉತ್ಸಾಹ ನೆಮಿಸಿದರು ಶ್ರೀ ವೆಂಕಪ್ಪ ... ಧನ್ಯವಾದಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

— — —

ಬೊಂಬಾಯಿ — ಬೊಂಬಾಯಿ ... ಟೂರ್ ... ಸ್ಟೂಡಿಯೋ ... ಶ್ರೀ ... ಅಧ್ಯಕ್ಷ ... ಸ್ಥಾಪಿತವಾದ ... ಮೈತ್ರಾ ... ಮುಂದಿರುವ ... ಗಳನೆಂಬುದನ್ನು ವಿವರಿಸಿದರು ಶ್ರೀ ... ರ ವಿದ್ಯಾರ್ಥಿಯವರು ಮಾತನಾಡುತ್ತಾ ಕನ್ನಡಿಗರು ಸಂಘಟಿತರಾಗಿ ... ಆವರ ಕತೆಯನ್ನು ಸೂಚಿಸಿ ... ಯಶಸ್ಸನ್ನು ಕೋರಿದರು ಬಳಿಕ ಸಂಗೀತ ನೃತ್ಯ, ನಾಟಕ ಮೊದಲಾದ ಜನಮನ ರಂಜನ ಕಾರ್ಯಕ್ರಮಗಳಾದುವು

ಶರೀರಂ ವ್ಯಾಧಿಮಂದಿರಂ, ... ।

——ಆಯುರ್ವೇದಾಶ್ರಮ——

[ಸ್ಥಾಪನೆ: 1933]

ಅಜೀರ್ಣತ್ವ, ಶ್ವೇತಪ್ರದರ ಮೊದಲಾದ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಪ್ತ ರೋಗಗಳು, ನಪುಂಸಕತೆ, ಬಂಜೆತನ, ... ಮೊದಲಾದವುಗಳಿಗೆ ... ಚಿಕಿತ್ಸೆ. ಪ್ರಯೋಜನ ಪಡೆದವರ ... (ವೈದ್ಯಾಶ್ರಮದ ಪತ್ರಿಕೆ)

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—ಶುಶ್ರೂಷಾಲಯದಲ್ಲಿ :

... ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡಲಾಗುವುದು. ಅತ್ಯಂತ ಅಮೋಘ ಪ್ರಯೋಗಗಳನ್ನು ... ಮೂಲಕ ಕೈಕೊಳ್ಳುವುದು ಪತ್ರ ವ್ಯವಹಾರ ಮಾಡಿ ವಿವರ ತಿಳಿಯುವುದು

ಕದ್ರಿ, ಮಂಗಳೂರು } ಪ್ರಧಾನ ವೈದ್ಯರು — ಎಂ. ಎನ್. ಭಿಡೆ, ಆಯುರ್ವೇದ ಭಿಷಕ್

ಪ್ರಪಂಚದ ಪ್ರಾಚೀನ ಪ್ರಜಾರಾಜ್ಯ—ಎಂಡೋರಾ

(೨ನೇ ಪುಟದಿಂದ)

ತಿಂಗಳು ವಸಂತ ಮಾಸದ ಮೋಹಕ ದೃಶ್ಯವನ್ನು ಕಾಣುತ್ತೇವೆ. ಭಾವ ಜೀವಿಯನ್ನು ಇಲ್ಲಿಯ ಪ್ರಕೃತಿ ಮಂತ್ರಮುಗ್ಧನಾಗಿ ಮಾಡುತ್ತದೆ.

ಆದರೂ ಎಂಡೋರಾ ನಿವಾಸಿಗಳು ಊಟ ಮಾಡುವುದು ಬೇಡವೆ? ಇಲ್ಲಿಯ ಶುಷ್ಕ ಪ್ರಕೃತಿಯೊಂದಿಗೆ ಹೋರಾಡಿ ಅನ್ನ ಸಂಪಾದಿಸುವುದಕ್ಕೆ ಸ್ತ್ರೀಯರು ಅವಿರತ ಶ್ರಮ ಕೈಗೊಳ್ಳುವರು. ಅವರ ಜೀವನ ಸಂಗ್ರಾಮ ಎಷ್ಟು ಘೋರವಾಗಿರುತ್ತದೆಂದರೆ, ತಮ್ಮ ಗೃಹಸ್ವಾಮಿಗಳನ್ನು ಸಂತೋಷದಲ್ಲಿಡಬೇಕೆಂಬ ಪ್ರಾಮಾಣಿಕ ಬಯಕೆಯಲ್ಲದಿರುತಿದ್ದರೆ, ಈ ಸ್ತ್ರೀಯರೆಲ್ಲ ಸೋತು ಬೆಂಡಾಗುತಿದ್ದರು. ಸ್ತ್ರೀಯ ಈ ಉಪಯುಕ್ತತೆಯ ಕಾರಣದಿಂದಲೇ ಪ್ರಾಯ: ಎಂಡೋರಾದ ಯುವಕ ಹೆಣ್ಣಿನ ಕಣ್ಣುಗಳ ಸೊಬಗಿಗೆ ಸೋಲದೆ .. ವ್ಯಕ್ತಿಯ ಕಾರ್ಯಕ್ಷಮತೆಯನ್ನೆ ಮೆಚ್ಚುತ್ತಾನೆ.

ಕಳ್ಳತನವೇ ವೃತ್ತಿ

ಪುರುಷರಿಗೆಂದೇ ಮೀಸಲಾದ ಕೆಲಸ ಕಳ್ಳತನ--ಇದನ್ನು ಕೇಳಿ ನಾವು ಯಾರೂ ಆಶ್ಚರ್ಯ ಪಡುವುದೂ ಗಾಬರಿಗೊಳಗಾಗುವುದೂ ಅನಗತ್ಯ. ಏಕೆಂದರೆ, ಎಂಡೋರಾದ ನಿವಾಸಿಗಳು ಸನಾತನ ವೃತ್ತಿಯಾಗಿಯೇ ಇದನ್ನು ಕೈಗೊಂಡಿರುವರು. ಕ್ರಿಸ್ತಶಕ ೮ನೇ ಶತಮಾನದಲ್ಲಿ ಎಂಡೋರಾದ ನಿವಾಸಿಗಳಿಗೆ ಕಳ್ಳತನ ಮಾಡಲು ಲೈಸನ್ಸನ್ನು ಸರಕಾರದವರೇ ನೀಡುತಿದ್ದರು. ಸೀಮಾ ಪ್ರದೇಶದಲ್ಲಿರುವ ಸೈನ್ಯದ ಕಣ್ಣು ತಪ್ಪಿಸಿ ದೂರದೂರದಿಂದ ಕಳ್ಳತನದಿಂದ ಸರಕನ್ನು ಹಾರಿಸಿಕೊಂಡು ಬಂದು ಫ್ರೆಂಚ ಹಾಗೂ ಸ್ಪೇನಿಶ್ ಧನಿಕರಿಗೆ ಮಾರುವುದು ಎಂಡೋರಾದ ಪುರುಷರ ಕಸಬು.

ಪ್ರಥಮ ಮಹಾ ಯುದ್ಧದ ಕಾಲದಲ್ಲಿ ಸೈನಿಕರ ಸರಂಜಾಮುಗಳನ್ನು ಹೊತ್ತುಕೊಳ್ಳಲು ಬೇಕಾಯಿತು. ಲಾಭ ಸಂಪಾದಿಸುವ ಈ ಅವಕಾಶವನ್ನು ಎಂಡೋರಾದ ನಿವಾಸಿಗಳು ಏಕೆ ಬಿಟ್ಟಾರು? ಅವರು ತಮ್ಮಲ್ಲಿಯೇ ಗುಂಪು ಕಟ್ಟಿಕೊಂಡು ಸ್ಪೈನಿಗೆ ರಹಸ್ಯವಾಗಿ ಹೋಗಿ ಅಲ್ಲಿಂದ ಕದ್ದುತಂದ ಹೇಸರಗತ್ತೆಗಳನ್ನು ಫ್ರಾನ್ಸಿನ ಸೈನಿಕ ಅಧಿಕಾರಿಗಳಕೈಗೆಒಪ್ಪಿಸುತಿದ್ದರು.

ಎರಡನೇ ಮಹಾ ಯುದ್ಧಕಾಲದಲ್ಲಿಂತೂ ಈ ಜನರು ಕಳ್ಳತನದಿಂದ ಎಷ್ಟು ಹಣಗಳಿಸಿದರೆಂದರೆ—ಏನೂ ಇಲ್ಲದ ಬಡ ಕೃಷಿಕನ ಕೈಯಲ್ಲೂ ಕಾಸು ಕುಣಿಯಿತು ಯುದ್ಧದಿಂದ ಓಡಿಬಂದ ಸೈನಿಕರಿಗೆ ಎಂಡೋರಾ ಒಂದು ಆಶ್ರಯ ಭೂಮಿಯಾಗಿ ಪರಿಣಮಿಸಿತು. ತಾವು ಹೀಗೆ ಕಣ್ಣು ತಪ್ಪಿಸಿಕೊಂಡು ಬಂದ ಸಮಾಚಾರವನ್ನು ಸೈನಿಕ ಅಧಿಕಾರಿಗಳ ಕಿವಿಗೆ ಮುಟ್ಟಿಸಬಾರದೆಂಬ ಉದ್ದೇಶದಿಂದ ಎಂಡೋರಾದ ನಿವಾಸಿಗಳ ಕೈಗೆ ತಮ್ಮಲ್ಲಿದ್ದ ಎಲ್ಲ ಹಣವನ್ನೂ ಈ ಸೈನಿಕರು ಒಪ್ಪಿಸುತಿದ್ದರು.

ಯುದ್ಧ ಮುಗಿದ ಬಳಿಕ ಇವರು ಇನ್ನೊಂದು ಲಾಭದಾಯಕವಾದ ಕಾರ್ಯಕ್ರಮದಲ್ಲಿ ಪ್ರವೃತ್ತರಾದರು ಅದು ಇಂದಿಗೂ ಅನೂಚಾನವಾಗಿ, ಅತ್ಯಂತ ಯಶಸ್ವಿಯಾಗಿ ನಡೆಯುತ್ತದೆ ಫ್ರಾನ್ಸಿನಲ್ಲಿ ಅಗ್ಗದರದಲ್ಲಿ ಮೋಟರುಗಳನ್ನು ಕೊಂಡು, ಎಂಡೋರಾದ ಗಡಿಯ ವರೆಗೆ ತರುವುದೂ ಅಲ್ಲಿಂದ ಸುಂಕದ ಅಧಿಕಾರಿಗಳ ಕಣ್ಣು ತಪ್ಪಿಸಿ ರಾತ್ರಿ ಹೊತ್ತಿನಲ್ಲಿ ಪರ್ವತ ಹಾಗೂ ಗುಡ್ಡ ಪ್ರದೇಶಗಳ ಎಡೆಯಿಂದ ಹೋಗುವ ಕೊರಕಲು ದಾರಿಯ ಮೂಲಕ ಈ ವಾಹನಗಳನ್ನು ಸ್ಪೈನಿಗೆ ಕೊಂಡ್ಯೊಹೋಗಿ ಒಂದಕ್ಕೆರಡು ಲಾಭಗಳಿಸುವುದೂ ಇವರ ಉದ್ಯೋಗ.

ಶಾಂತಿಯ ತವರು ಮನೆ

ಬೌದ್ಧಿಕ ವಿಕಾಸದ ಕಡೆಗೆ ಮಹತ್ವ ಕೊಡುವ ಮನಸ್ಸೇ ಎಂಡೋರಾದ ನಿವಾಸಿಗಳಿಗಿರುವುದಿಲ್ಲ. ಇಡೀ ರಾಜ್ಯದಲ್ಲಿ ಇರುವುದು ಒಂದೇ ಒಂದು ಶಾಲೆ—ಇಲ್ಲಿ ಮಕ್ಕಳ ೧೪ನೇ ವಯಸ್ಸಿನ ವರೆಗೆ ಶಿಕ್ಷಣ ದೊರೆಯುತ್ತದೆ. ಉಚ್ಚ ಶಿಕ್ಷಣಕ್ಕೆ ಸ್ಪೈನ್ ಮತ್ತು ಫ್ರಾನ್ಸುಗಳಿಗೆ ಹೋಗಬಹುದು: ಆದರೆ ಹಾಗೆ ಹೋದ ಎಂಡೋರಾ ನಿವಾಸಿಯೇ ಇಲ್ಲ. ಇದರ ಕಾರಣ ಸ್ಪಷ್ಟವಿದೆ— ಪುಸ್ತಕೀಯ ಜ್ಞಾನವನ್ನು ಹಿಡಿದುಕೊಂಡು ಎಂಡೋರಾದ ನೆಲದಲ್ಲಿ ಬದುಕುವುದೇ ಸಾಧ್ಯವಿಲ್ಲ. ಅಲ್ಲಿ ಕಾಯಕಷ್ಟ ಹಾಗೂ ಹಸ್ತ ಕೌಶಲದಿಂದಲೇ ಬದುಕು ಸಾಗುತ್ತದೆ.

ಕಳೆದ ಹದಿನೈದು ಶತಕಗಳಿಂದ ಎಂಡೋರಾದ ಭೂಮಿಯ ಮೇಲೆ ಯಾವುದೇ ವಿದೇಶೀ ಸೈನ್ಯ ಕಾಲಿಟ್ಟಿದಿಲ್ಲ. ಈ ಅವಧಿಯಲ್ಲಿ ಎಂಡೋರಾದ ಯಾವ ನಾಗರಿಕನೂ ಯುದ್ಧದ ನೆಪದಿಂದ ಮೃತ್ಯುವಶನಾದುದೂ ಗಾಯಗೊಂಡುದೂ ಇಲ್ಲ. ಎಂಡೋರಾದ ನಿವಾಸಿಗಳು ಶಾಂತಿ ಪ್ರಿಯರೆಂದು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಇವರು ಇತರ ರಾಷ್ಟ್ರಗಳ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಘರ್ಷದ ಕಡೆಗೆ ಗಮನ ಕೊಡುವುದಿಲ್ಲ—ಅವುಗಳ ಗೊಂದಲದಿಂದ ದೂರವಿದ್ದು ತಟಸ್ಥ ನೀತಿಯನ್ನು ಪಾಲಿಸುವುದರಲ್ಲಿಯೇ ಇವರಿಗೆ ಸಂತೋಷ.

ಈಚೆಗೆ, ಅಂದರೆ ೧೯೩೬ರಲ್ಲಿ ಸ್ಪೈನಿನಲ್ಲಿ ಗೃಹ ಯುದ್ಧವಾದಾಗ ಹಾಗೂ ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಎಂಡೋರಾದ ನಾಲ್ಕೂ ಸುತ್ತು ಗುಂಡಿನ ಮಳೆಯಾಯಿತಾದರೂ, ಎಂಡೋರಾದ ನೆಲದ ಮೇಲೆ ಒಂದೇ ಒಂದು ಗುಂಡಿ ನೇಟು ಬಿದ್ದುದಿಲ್ಲ. ರಕ್ತ ಪಿಪಾಸೆಯುಳ್ಳ ಸೈನಿಕರ ಕ್ರೂರ ಕೃತ್ಯದಿಂದ ಎಂಡೋರಾ ನಿವಾಸಿಗಳಿಗೆ ಕೆಡುಕು ಸಂಭವಿಸಲಿಲ್ಲ.

— ನವನೀತ.

ಸ್ವೀಕಾರ—ವಿಮರ್ಶೆ

ಆದರ್ಶದ ಆಡಂಬರ

ಬರೆದವರು: ಶ್ರೀಮತಿ ಟಿ. ಸುನಂದಮ್ಮ. ಪ್ರಕಾಶಕರು: ವಿಜಯ ಸಾಹಿತ್ಯ, ಬಸವನಗುಡಿ, ಬೆಂಗಳೂರು ೪. ಬೆಲೆ ಎಂಟಾಣೆ.

ವಿಡಂಬನೆಯೂ ಹಾಸ್ಯರಸವೂ ಪ್ರಧಾನವಾಗುಳ್ಳ "ಕೊರವಂಜಿ" ಮಾಸಪತ್ರಿಕೆಯ ಓದುಗರಿಗೆ ಶ್ರೀಮತಿ ಸುನಂದಮ್ಮನವರು ಚಿರಪರಿಚಿತರು. ಅವರ ಮೂರು ಏಕಾಂಕಗಳು ಈಗ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದ್ದು ಅವು ಅಲ್ಪಾವಧಿಯಲ್ಲಿ ಆಡಿ ತೋರಿಸಿ ನಕ್ಕು ನಗಿಸಲೂ ವಿಚಾರ ಪ್ರಚೋದನೆಯನ್ನುಂಟುಮಾಡಲೂ ಸಮರ್ಥವಾಗಿವೆ. "ಆದರ್ಶದ ಆಡಂಬರ" ಎಂಬ ಮೊದಲನೇ ಏಕಾಂಕ ಸಂಸಾರದಲ್ಲಿ ಮೂರು ಮಕ್ಕಳಿಗಿಂತ ಹೆಚ್ಚಾಗಿರಬಾರದು ಆನ್ನೋ ಸಭೆಗೆ ಕಿತ್ತೊಂಡು ತಿನ್ನೋಕೆ ಹತ್ತು ಮಕ್ಕಳಿರೋ ಆನಂದಾದೇವಿ ಪ್ರತಿನಿಧಿಯಾಗಿಕೊಂಡು, ಶಾಂತಮ್ಮನವರ ಆದರ್ಶ ಮಾತೃತ್ವವನ್ನು ಮೆಚ್ಚಿಕೊಂಡು, ಕೊನೆಗೆ ಇದೆಲ್ಲವೂ ತನ್ನ ಹಾಗೆಯೇ ಕೇವಲ ಆಡಂಬರವೆಂದು ಖಚಿತಗೊಂಡಾಗ "ಅಯ್ಯೋ" ಎಂದು ಚೀರಿ ನೆಲಕ್ಕೆ ಬೀಳುವ ಬಗೆಯನ್ನು ರಸವತ್ತಾಗಿ ನಿರೂಪಿಸುತ್ತದೆ. ಎರಡನೆಯ ಏಕಾಂಕ "ಊರ್ಗೊಂದ್ ಅಡ್ಗೇ ಮನೆ ಅಥವಾ ಸಾಮೂಹಿಕ ಪಾಕ ಶಾಲೆ" ಊರಿನ ಮಹಿಳಾಮಣಿಯರೆಲ್ಲ ತಮಗೆ ಪುರಸೊತ್ತಾಗಬೇಕೆಂದು "ಮೂಷಿಕ ಪಾಕಸಾಲೆಯೋ ಮಾಸಿಕ ಕಾಪೀಶಾಲೆಯೋ" ಏನೋ ಆದ ಸಾಮೂಹಿಕ ಪಾಕಶಾಲೆಯಲ್ಲಿ ಯಾವೋನೋ ಬೆಯ್ಸೋ ಅನ್ನವನ್ನ ತಿನ್ನೋಕೆ ಪ್ರಾರಂಭಿಸಿ ಕೊನೆಗೆ "ಸಾಕು ಈ ಸಾಮೂಹಿಕ ಪಾಕಶಾಲೆ ಸಹವಾಸ—ಗಂಡಂದ್ರು ಕೈಬಿಟ್ಹೋಗೋಗತಿ ಬಂದಿದೆ, ಮಕ್ಳು ಮನೆ ಬಿಟ್ಹೋಡ್ಹೋಗೋಗತಿ ಬಂದಿದೆ" ಅಂತ ಗೋಗರೆದುದನ್ನು ಮನೋರಂಜಕವಾಗಿ ವಿವರಿಸುತ್ತದೆ. ಕೊನೆಯ ಏಕಾಂಕ "ಧೂಪಾವಳಿ ಅಥವಾ ದೀಪಾವಳಿ"ಯಲ್ಲಿ ಮದಲ್ವರ್ಷ ಮಾವನವರಿಗೂ ಮನದನ್ನೆಗೂ "ಡಿಸ್ಸಪಾಯಿಂಟು" ಮಾಡೋದು ಹೇಗೆ ಎಂದುಕೊಂಡು ಬಂದ ಆಳಿಯ ಮಾವನ ಬುರುಡೆಯ ಪಕ್ಕದ ಪ್ರಭಾವದಿಂದ ಸೀನಲು ತೊಡಗಿ, ಮಾವ ಹಾಗೂ ಅತ್ತೆಯಿಂದ, ಕೊನೆಗೆ ಮನದನ್ನೆ ಲಲಿತಳಿಂದಲೂ ನಗಡಿಗೆ ಗುರಿಯಾದವನೆಂದು ಹೇಳಿಸಿಕೊಂಡು ರಸ ಕವಳದ ಬದಲು ಕಹಿ ಔಷಧ ಹಾಗೂ ಧೂಪದ ಹೊಗೆಯಲ್ಲಿಯೇ ದೀಪಾವಳಿ ಕಳೆದ ಸೊಗಸನ್ನು ವರ್ಣಿಸುತ್ತದೆ. ನಾಲ್ಕೈದೇ ಜನರಿಂದ ಚಿಕ್ಕ ಹಾಗೂ ಚೊಕ್ಕ ನಾಟಕವನ್ನಾಡಿಸಲಿಚ್ಛಿಸುವವರಿಗೆ ಇವು ತುಂಬ ಪ್ರಯೋಜನಕಾರಿಯಾದಾವು. ಸುನಂದಮ್ಮನವರಿಂದ ಇಂಥ ಇನ್ನೂ ಹತ್ತಾರು ಏಕಾಂಕಗಳನ್ನು ನಿರೀಕ್ಷಿಸುತ್ತೇವೆ.

ಜ್ಞಾನ ಜ್ಯೋತಿ—

ಗ್ರಂಥ ಕರ್ತರು: ಶ್ರೀ ನಾರಾಯಣ ದಾಸರು. ಪ್ರಕಾಶಕರು: ಜ್ಞಾನ ಜ್ಯೋತಿ ಪುಸ್ತಕಾಲಯ, ನಂ ೧೬೫೩, ೨ನೇ ಮೈನ್‌ರೋಡ್, ಬೆಂಗಳೂರು ೩; ಬೆಲೆ: ಎಂಟಾಣೆ.

ನೈತಿಕ ಹಾಗೂ ಆಧ್ಯಾತ್ಮಿಕ ತತ್ವಗಳು ಶಿಥಿಲಗೊಂಡು ಖಿಲವಾಗುತ್ತಿರುವ ಈ ದಿನಗಳಲ್ಲಿ ಭಾರತೀಯ ಸಂಸ್ಕೃತಿಯ ಜೀವಾಳವನ್ನು ಸಾಮಾನ್ಯ ಜನಕ್ಕೂ ತಿಳಿಸುವ ಪ್ರಯತ್ನ ಬಹಳವಾಗಿ ನಡೆಯಬೇಕು. ನಮ್ಮ ವೇದೋಪನಿಷತ್ತು ಭಗವದ್ಗೀತೆ ಮುಂತಾದ ಉದ್ಗ್ರಂಥಗಳ ತಿರುಳನ್ನು ಸಂಸ್ಕೃತ ಕಲಿತೇ ತಿಳಿದುಕೊಳ್ಳುವ ಕಷ್ಟ ತಪ್ಪುವುದು ಅಗತ್ಯ. ಈ ಪುಸ್ತಕದಲ್ಲಿ ಭಗವಂತನ ಅಸ್ತಿತ್ವವನ್ನು ಒಪ್ಪಿ ಅವನ ಮಹಿಮಾ ವರ್ಣನೆಗಳನ್ನು ಮಾಡುತ್ತಾ ಸತ್ಸಂಗಳನ್ನುಂಟುಮಾಡುವಂತೆ ಅವನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುವ ಭಗವದ್ಗೀತೆ ಉಪನಿಷತ್ತು ಇತ್ಯಾದಿಯ ಸಂಸ್ಕೃತ ಶ್ಲೋಕಗಳ ಸಾರವು ಸಂಗ್ರಹಿಸಿ ಕೊಡಲ್ಪಟ್ಟಿದೆ.

ಶ್ರೀ ರಾಮತೀರ್ಥ ಯೋಗಾಶ್ರಮ, ಮುಂಬಯಿ— ಇವರು ಕಳುಹಿಸಿರುವ ಸುಂದರವಾದ ಯೋಗಾಸನಗಳ ತೂಗು ಚಿತ್ರಪಟವನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ನಾನಾ ಆಸನಗಳ ಮಾದರಿಯ ಚಿತ್ರಗಳಿದ್ದು ಇದು ಆಸನಾಭ್ಯಾಸಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆನ್ನಬಹುದು. ಶ್ರೀ ರಾಮತೀರ್ಥ ಯೋಗಾಶ್ರಮದಲ್ಲಿ ಶ್ರೀ. ಉಮೇಶಚಂದ್ರಜಿಯವರ ನಿರ್ದೇಶಕತ್ವದಲ್ಲಿ ಯೋಗಾಸನಗಳ ಶಿಕ್ಷಣ-ಕ್ಲಾಸುಗಳೂ ನಡೆಸಲ್ಪಡುತ್ತಿರುವುದು ಅಭಿನಂದನೀಯ. ಈ ಚಿತ್ರಪಟದ ಬೆಲೆ ರೂ. 1—0—0 ಟಪ್ಪಾಲು ಖರ್ಚು 0—4—0.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ದೆಹರಾಡನ್)

Kali Kamali Ayurved Pharmacy, RISHIKESH (Dehradun.)

ದಿ ವಿಜಯ ಬೇಂಕ್ ಲಿಮಿಟೆಡ್, ಬೊಂಬಾಯಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸ್ಲು-ವ-ಬಡ್ತಿ, ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟಿರುವ ಚಿನ್ನಾಭರಣ ನಗವನ್ನು ಇದೇ ದಶಂಬರ ತಿಂಗಳ ತಾರೀಕು 26ನೇ ಶನಿವಾರ ಅಪರಾಹ್ನ ಗಂಟೆ 3-0ಕ್ಕೆ-ಯಾ-ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ, ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಲೋನ್ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
112/52	ರುಕ್ಮಯ ವಿ. ಶೆಟ್ಟಿ, ಹಿಂದೂಮಾತಾ ಹಿಂದೂ ವಿಶ್ರಾಂತಿ ಗೃಹ, ನ್ಯೂ ಚಾರ್ನಿ ರೋಡ್, ಬೊಂಬಾಯಿ 4.	101-0-0
115/52	ಶೇಶ ಸಿದ್ದು ಶೆಟ್ಟಿ, ಮನೋಹರ ಆರೋಗ್ಯ ಭವನ, ನೆಸ್ಬಿತ್ ರೋಡ್, ಬೊಂಬಾಯಿ-10.	371-0-0
132/52	ವೀರಪ್ಪ ಟಿ. ಶೆಟ್ಟಿ, ಬ್ರೋಡ್ವೇ ರೆಸ್ಟೋರೆಂಟ್, ಗಿರ್ಗಾಮ್, ಬೊಂಬಾಯಿ.	501-0-0
150/52	ವಿ. ಬಿ. ಮಂಜೇಶ್ವರ್, 36 A ಪಾರ್ವತಿ ಮೆನ್ಶನ್, ಲೆಮಿಂಗ್ಟನ್ ರೋಡ್, ಬೊಂಬಾಯಿ.	51-0-0

Bombay,
8—12—'53.

(Sd.) P. P. Lobo Prabhu,
M. A., C. A. I. I. B., A. C. C. S. (Lond),
Manager.

ಶ್ರೀ ಧರ್ಮಸ್ಥಳದಲ್ಲಿ ಸರ್ವಧರ್ಮ ಸಂಮೇಳನ ಅದರ ಅಂಗವಾಗಿ

ಸಾಹಿತ್ಯ ಕಲೋತ್ಸವ

ದಕ್ಷಿಣ ಕನ್ನಡದ ಪ್ರಸಿದ್ಧ ಧರ್ಮಕ್ಷೇತ್ರವಾದ ಶ್ರೀ ಧರ್ಮಸ್ಥಳದಲ್ಲಿ ಈ ವರ್ಷ ಸರ್ವಧರ್ಮ ಸಮ್ಮೇಳನವು ದಿನಾಂಕ ೪ರಂದೂ ಅದರ ಅಂಗವಾದ ಸಾಹಿತ್ಯಕಲೋತ್ಸವವು ದಿನಾಂಕ ೫ರಂದು ಜರಗಿತು. ಮೊದಲ ದಿನದ ಸಮಾರಂಭಕ್ಕೆ ಬಳ್ಳಾರಿಯ ಶ್ರೀ ಎಸ್. ಬಿ. ಚಿನ್ನಬಸವ ಸ್ವಾಮಿಯವರೂ ಎರಡನೇ ದಿನದ ಸಮಾರಂಭಕ್ಕೆ ಕನ್ನಡದ ಪ್ರಸಿದ್ಧ ಸಾಹಿತಿ ಶ್ರೀ ಅ. ನ. ಕೃಷ್ಣರಾಯರೂ ಅಧ್ಯಕ್ಷರಾಗಿದ್ದರು.

ಜೀವಿಯ ಹುಟ್ಟು ಸಾವು.

ಸರ್ವಧರ್ಮ ಸಮ್ಮೇಳನದಲ್ಲಿ ಜೀವಿಯ ಹುಟ್ಟು, ಸಾವು ಎಂಬ ವಿಚಾರವಾಗಿಯೂ ಮಾನವತೆಯ ಧರ್ಮವೆಂಬ ವಿಚಾರವಾಗಿಯೂ ಭಾಷಣಗಳಾದುವು. ಭಾಷಣಗಾರರ ಅಧ್ಯಕ್ಷರ ಮತ್ತಿತರರ ಮೆರವಣಿಗೆಯು ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರ ಬೀಡಿನಿಂದ ಹೊರಟು ಸಭಾಸ್ಥಳ ಸೇರಿದಾಗ ಅವರು ಎಲ್ಲರನ್ನೂ ಇದಿರ್ಗೊಂಡರು. ಶ್ರೀ ವರ್ಧಮಾನ ಹೆಗ್ಗಡೆಯವರಿಂದ ಪ್ರಾರ್ಥನೆಯಾದ ಮೇಲೆ ಶ್ರೀ. ಮಂಜಯ್ಯ ಹೆಗ್ಗಡೆಯವರು ಸ್ವಾಗತ ಭಾಷಣಮಾಡಿದರು. ಅನಂತರ ಸ್ವಾಗತ ಸಮಿತಿಯು ಅಧ್ಯಕ್ಷರಿಗಿತ್ತ ಮಾನ ಪತ್ರವನ್ನು ಶ್ರೀ. ಡಿ. ಪುಟ್ಟ ಸ್ವಾಮಿಯವರು ಓದಿದರು.

ತರುವಾಯ ಅಧ್ಯಕ್ಷರು ತಮ್ಮ ಮೊದಲ ಭಾಷಣದಲ್ಲಿ ಶ್ರೀ ಧರ್ಮಸ್ಥಳದ ದೇವರಿಗೂ ಧರ್ಮದೇವತೆಗಳಿಗೂ ತನ್ನ ಭಕ್ತಿಯನ್ನು ಹೇಳಿ ಹೆಗ್ಗಡೆಯವರಿಗೂ ತನ್ನ ಕೃತಜ್ಞತೆಯನ್ನು ತಿಳಿಸಿದರು. ಜೀವಿಯ ಹುಟ್ಟು ಸಾವಿನ ಕುರಿತು ಉಪನಿಷತ್ತಿನ ಋಷಿಗಳಿಂದ ಹಿಡಿದು ಅರವಿಂದರ ವರೆಗೂ ಚರ್ಚಿಸಿದ್ದಾರೆ. ವಿಜ್ಞಾನಿಗಳೂ ಆ ಕುರಿತು ಶೋಧನೆ ಮಾಡಿದ್ದಾರೆ. ಹುಟ್ಟು ಸಾವಿನ ಕುರಿತು ಮನುಷ್ಯ ಯೋಚಿಸದಿರಲಾರ. ಅವನು ಹೊರಗಿನ ತಿಳಿವಳಿಕೆಯೊಂದಿಗೆ ಒಳಗಿನ ತಿಳಿವನ್ನು ತಿಳಿಯಬೇಕೆಂದರು.

ಆ ಮೇಲೆ ಶ್ರೀ ಕೆ. ಎಸ್. ಧರಣೇಂದ್ರಯ್ಯನವರು ಜೈನ ಧರ್ಮದಲ್ಲಿ ಹುಟ್ಟು ಸಾವಿನ ವಿಚಾರವೆಂತಿದೆಯೆಂದು ಹೇಳುತ್ತ ಜೀವಿಗೆ ಕರ್ಮ ಬಂಧನವಿದೆ. ಶುದ್ಧೋಪಯೋಗದಿಂದ ಅವನು ಮುಕ್ತನಾಗುವನೆಂದರು. ಶ್ರೀ ನಾ. ಕಸ್ತೂರಿಯವರು ಬೌದ್ಧಧರ್ಮದಲ್ಲಿ ಈ ವಿಚಾರವೆಂತಿದೆ ಎಂದು ತಿಳಿಸುತ್ತ ಹುಟ್ಟಿದ ಜೀವಿಯು, ಆಶೆಗಳನ್ನು ತ್ಯಾಗ ಮಾರ್ಗದಿಂದ ತೊರೆದು, ನಿರ್ವಾಣ ಹೊಂದುವನೆಂದು ತಿಳಿಸಿದರು. ಬಳ್ಳಾರಿಯ ವಿದ್ವಾನ್ ಶ್ರೀ ಷಡಕ್ಷರಿ ಶಾಸ್ತ್ರಿಗಳು ಶಕ್ತಿ ವಿಶಿಷ್ಟಾದ್ವೈತ ದೃಷ್ಟಿಯಲ್ಲಿ ಹುಟ್ಟು ಸಾವನ್ನು ವಿವರಿಸಿದರು. ಶ್ರೀ ನೇಮಿಸಾಗರ ಸ್ವಾಮಿಜಿಯವರು ದೇವರಿಂದಲೆ ದೊಡ್ಡ ಜೀವಕಿಂದೂ ಪ್ರತಿಯೊಬ್ಬನು ತನ್ನೊಳಗಿರುವ ಬೆಳಕಿನಿಂದ ಬೆಳಕನ್ನು ಪಡೆದು ಸ್ವಪರನನ್ನು ಬೆಳಗಿಸಿಕೊಳ್ಳಬೇಕೆಂಬ ತನ್ನ ಸಂದೇಶವನ್ನು ಸಾರಿದರು. ಆ ಮೇಲೆ ಶ್ರೀ ವೀರಭದ್ರಯ್ಯನವರು ಕ್ರೈಸ್ತ ಧರ್ಮದ ರೀತಿಯನ್ನೂ ಮಾತನಾಡಿದರು. ರಾಮರಾಜ್ಯ ಪರಿಷತ್ತಿನ ಶ್ರೀ ಆತ್ಮಾನಂದ ಭಾರತಿಯವರ ಭಾಷಣವಾದ ಮೇಲೆ ಶ್ರೀ ಶಿವರಾಮ ಕಾರಂತರು ವಿಜ್ಞಾನಿಯ ದೃಷ್ಟಿಯಲ್ಲಿ ಹುಟ್ಟು ಸಾವು ಎಂತಹದೆಂಬುದನ್ನು ತಿಳಿಸಿದರು. ಏಕಕಣ ಜೀವಿಯನ್ನು ಮರಣವಿಲ್ಲವೆಂದೂ ಬಹಕಣ ಜೀವಿಗಳಾದ ಮಾನವನೇ ಮುಂತಾದ ಪ್ರಾಣಿಗಳಲ್ಲಿ ಒಂದೊಂದು ಜೀವಕಣವು ಒಮ್ಮೊಮ್ಮೆ ನಾಶವಾಗುವುದಲ್ಲದೆ ಒಮ್ಮೆಗೇ ನಾಶವಾಗುವುದಿಲ್ಲವೆಂದರು. ಜೀವಾಣುವು ಅನುಕೂಲ ವಾತಾವರಣದಲ್ಲಿ ಅನುಕೂಲ ಪವಾಹ ಮೂವದಲ್ಲಿ ನಾಶ ಹೊಂದದೆ ಇರುತ್ತದೆಂದು ತಿಳಿಸಿದರು.

ಬಳಿಕ ಶ್ರೀಯುತ ಅ. ನ. ಕೃಷ್ಣರಾಯರೂ ಶ್ರೀ ಕರೀಮ್ ಖಾನರು ಮಾನವತಾ ಧರ್ಮದ ಕುರಿತು ಮಾತನಾಡಿದರು. ಮೊದಲಿನವರು ಜೀವಿಯು ಅನಂತವಾದುದು, ನಾಶವಿಲ್ಲದ್ದೆಂದು. ಧರ್ಮ ಸಾರಿದೆ; ವಿಜ್ಞಾನವೂ ಆ ನಿತ್ಯದ ಕಡೆಗೇ ಸಾಗುತ್ತದೆ. ಮರಣವೆಂಬುದು ಮಾತ್ರವೊಂದು ಕ್ಷಣಿಕ ಕತ್ತಲೆಯೆಂದರು. ಮತ್ತಿನವರು ಕುರಾನಿನಲ್ಲಿ ಹೇಳಿದ ಕೆಲವು ಮಾತುಗಳನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಎಲ್ಲರ ಮಾತನ್ನು ಸಮನ್ವಯಗೊಳಿಸಿ ಭಗವಂತನು ರಸಮಯ, ಜ್ಯೋತಿರ್ಮಯ, ಜ್ಞಾನ್ಯಯ ಸ್ವರೂಪನೆಂದು ತಿಳಿಸಿದರು. ಧರ್ಮವೂ ವಿಜ್ಞಾನವೂ ಒಂದರಿಂದೊಂದು ಬೆಳಕು ಪಡೆಯಬೇಕೆಂದು ತಿಳಿಸಿದರಲ್ಲದೆ ಮಾನವನು ಅತಿಮಾನವನಾಗಿ ಪ್ರಗತಿ ಹೊಂದಬೇಕೆಂಬ ಅರವಿಂದರ ಯೋಗ ಸಂದೇಶವನ್ನು ತಿಳಿಸಿದರು.

ಈ ಭಾಷಣಗಳ ಮಧ್ಯೆ ಸಂಗೀತ ಗಮಕಗಳಾದುವು. ಶ್ರೀ ಜೋಳದರಾಶಿ ದೊಡ್ಡನಗೌಡರೂ, ಗಮಕಿ ರಾಘವೇಂದ್ರ ರಾಯರೂ ಕಾವ್ಯವಾಚನ ಮಾಡಿದರು. ಕುಮಾರ ವಿಜಯ ಎಂಬ ಜಾಟಕಿಯ ಭರತೇಶ ವೈಭವದಿಂದ ಕೆಲ ಭಾಗವನ್ನು ಓದಿ ಅರ್ಥ ಹೇಳಿದರು. ಶ್ರೀ ವಿ. ಎಸ್ ರಾಯರ ವೀಣಾವಾದನ ಮೊದಲಾದುವುಗಳಾದುವು. ಅನಂತರ ಹೆಗ್ಗಡೆಯವರ ಅಭಿನಂದನೆಯೊಂದಿಗೆ ಸಭೆಯು ಕೊನೆಗೊಂಡಿತು.

ಅಂದು ರಂಜನಾದ ರಾತ್ರಿಯ ಉತ್ಸವವಾಗುವ ಮೊದಲು ಮಂಗಳೂರಿನ ಶ್ರೀ ವಿಶ್ವನಾಥ ವ್ಯಾಯಾಮ ಶಾಲೆಯವರ ಕುಸ್ತಿಗಳೂ ಶ್ರೀ ಸರಸ್ವತಿ ಸಂಗೀತ ಶಾಲೆಯ ಶ್ರೀ ಚಂದಪ್ಪ, ಶ್ರೀ ಮುರಳೀಧರ ಮೊದಲಾದವರ ನರ್ತನಾದಿಗಳೂ ಆದುವು.

ನಮ್ಮ ಸಂಸ್ಕೃತಿಯು ಪ್ರಚಾರವಾಗಬೇಕು.

ಈ ಸರ್ವಧರ್ಮ ಸಮ್ಮೇಳನದ ಅಂಗವಾಗಿ ದಿನಾಂಕ ೫ರಂದು ಜರಗಿದ ಸಾಹಿತ್ಯಕಲೋತ್ಸವದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಎಂಬ ವಿಚಾರವಾಗಿಯೂ ಕರ್ನಾಟಕ ಏಕೀಕರಣದ ವಿಚಾರವಾಗಿಯೂ ಭಾಷಣಗಳಾದುವು. ಅಂದು ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರ ಸ್ವಾಗತ ಭಾಷಣವಾದ ಮೇಲೆ ಅಧ್ಯಕ್ಷರಿಗೊಪ್ಪಿಸುವ ಮಾನಪತ್ರವನ್ನು ಶ್ರೀ ಡಿ. ಪುಟ್ಟ ಸ್ವಾಮಿಯವರೋದಿದರು.

ಅಧ್ಯಕ್ಷರು ತನಗಿತ್ತ ಸ್ಥಾನಕ್ಕೆ ಶ್ರೀಮಾನ್ ಮಂಜಯ್ಯ ಹೆಗ್ಗಡೆಯವರನ್ನು ಅಭಿನಂದಿಸಿದರಲ್ಲದೆ ಧರ್ಮಸ್ಥಳದ ಸರ್ವಧರ್ಮ ಸಮ್ಮೇಳನಕ್ಕೆ ಬರತೊಡಗಿದ ಬಳಿಕ ತನ್ನಲ್ಲಿ ಇಲ್ಲಿನ ವಾತಾವರಣವು ಆಸ್ತಿಕತೆಯನ್ನುಂಟು ಮಾಡಿದೆಯೆಂಬುದನ್ನು ತಿಳಿಸಿದರು. ಸಂಸ್ಕೃತಿಯ ಕುರಿತು ಇಂದು ಸರಕಾರಿ ನೌಕರರೂ ಎಲ್ಲರೂ ಮಾತನಾಡುವವರೇ ಆಗಿದ್ದಾರೆ. ಹೊರ ದೇಶಗಳಿಗೆ ಹೋದವರು ಅಲ್ಲಿಯೂ ಇಲ್ಲಿಯೂ ಹೊರಗಿನ ಸಂಸ್ಕೃತಿಯನ್ನೇ ಹೊಗಳುತ್ತಾರೆ. ನಾವಿಂದು ನಮ್ಮ ದೇಶದಲ್ಲೂ ಹೊರಗೂ ಸಂಸ್ಕೃತಿಯ ಪ್ರಚಾರ ಮಾಡಬೇಕು. ಅಮೇರಿಕ ರಷ್ಯಗಳಿಂದಾಗುವ ಸಾಹಿತ್ಯ ದಾಳಿಯನ್ನು ನಿಲ್ಲಿಸಬೇಕು-ಎಂದು ಮುಂತಾಗಿ ಹೇಳಿದರು.

ಅನಂತರ ಶ್ರೀ ಕೆ. ಎಸ್. ಧರಣೇಂದ್ರಯ್ಯನವರು ಜೈನ ಸಾಹಿತ್ಯದಲ್ಲಿ ತೋರಿ ಬರುವ ಸಂಸ್ಕೃತಿಯನ್ನು ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ವಂಶ ಭಾರತದ ಒಂದು ಸನ್ನಿವೇಶದಲ್ಲಿ ಕರ್ಣ ಭೀಷ್ಮರ ಮಾತಿನಲ್ಲಿ ಮೂಡುಗಿದ ಸಂಸ್ಕೃತಿಯನ್ನು ತಿಳಿಸಿದರು. ಶ್ರೀ ಎಸ್. ಬಿ. ಚಿನ್ನಬಸವ ಸ್ವಾಮಿಯವರು ಅರವಿಂದರ ದೃಷ್ಟಿಯಲ್ಲಿ ಸಂಸ್ಕೃತಿಯೆಂಬ ವಿಚಾರವಾಗಿ ಮಾತನಾಡುತ್ತ ಕನ್ನಡಿಗರು ತಮ್ಮ ಪರಂಪರೆಯ ತಳಹದಿಯಲ್ಲೇ ತಮ್ಮ ಸಂಸ್ಕೃತಿಯ ಗೋಪುರ ಕಟ್ಟಬೇಕೆಂದು ಹೇಳಿದರು. ಶ್ರೀ ನಾ. ಕಸ್ತೂರಿಯವರು ಹಾಸ್ಯರಸವನ್ನು ವಿವರಿಸಿದರು. ಶ್ರೀ ವಿಶ್ವನಾಥ ಶಾಸ್ತ್ರಿಗಳು ಧರ್ಮದಲ್ಲಿರುವ ಸಂಸ್ಕೃತಿಯನ್ನು ತಿಳಿಸಿದರು. ಅನಂತರ ಶ್ರೀಯುತರು ಬಳ್ಳಾರಿಯ ಷಡಕ್ಷರಿ ಶಾಸ್ತ್ರಿಗಳೂ ಕೆ. ಬಿ. ಜಿನರಾಜ ಹೆಗ್ಗಡೆಯವರೂ ಕರ್ನಾಟಕ ಏಕೀಕರಣದ ವಿಚಾರವಾಗಿ ಮಾತನಾಡಿದರು. ಮಂಗಳೂರಿನ ಶ್ರೀ ಪಾಟಪ್ಪಾಡಿ ಗೋಪಾಲಕೃಷ್ಣ ಭಟ್ಟರು ವಿಶ್ವದ ನೈಚಿತ್ರವೆಂಬ ವಿಚಾರವಾಗಿ ಚಂದ್ರನೇ ಮುಂತಾದ ಆಕಾಶದಲ್ಲಿನ ನಕ್ಷತ್ರ, ಗ್ರಹದ ವಿಚಾರ ತಿಳಿಸಿದರು. ಅನಂತರ ಮಹಿಳಾ ಬೀಮರಾಯರು ಮುದ್ದಣಕವಿಯ ಕುರಿತು ಮಾತನಾಡಿದರು.

ಅಂದು ಶ್ರೀಮತಿ ವೆಂಕಟ ಲಕ್ಷ್ಮಮ್ಮನವರ ಸಂಗೀತವೂ, ಸೇಲಮಿನ ಕೆ. ಎಲ್. ರಂಗದಾಸರ ಕೊಳಲು ಗಾನವೂ, ಸೇಲಮಿನ ಶ್ರೀ ನಿಕಲ್ [ಪಿಟೀ] ಮತ್ತು ಇತಿಹಾಸ ಚಂದಕ್ಕೆ ಹೋಗಿ ಬಂದಿರುವ ಶ ... ಮೂರ್ತಿಯವರ ನೃತ್ಯರಂಗಪ್ರಸಾರದೊಡನೆ ಜರುಗಿತು. ಅಧ್ಯಕ್ಷರ ಉಪಸಂಹಾರವಾದ ಬಳಿಕ ಶ್ರೀ ಮಂಜಯ್ಯ ಹೆಗ್ಗಡೆಯವರೂ ಎಲ್ಲವರನ್ನೂ ಅಭಿನಂದಿಸಿದರಲ್ಲದೆ ಆದಷ್ಟು ಬೇಗನೆ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂದು ಹಾರೈಸಿದರು.

ಅಂದಿನ ಸಭಾರಂಭದಲ್ಲಿ ದಿವಂಗತ ಎಸ್. ಎಸ್. ಶಿಲ್ಲೆ ಮತ್ತು ಎಂ. ಆರ್. ಶ್ರೀನಿವಾಸ ಮೂರ್ತಿಯವರು ನಿಧನಕ್ಕೆ ದುಃಖ ಸೂಚಿಸಿ ಅವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಭಜನೆಯೊಡನೆ ಸಭೆಯು ಚದರಿತು.

—ಪಿ. ಕೆ. ನಾರಾಯಣ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 309 1942

R. I. A. No. 159/46

R. E. P. No. 157/1953

1. ವಾದಿಳು ವಿಶಾಲಕ್ಷ್ಮ ಸೆಡ್ತಿ ಚೀಂಕ್ರ ಗುತ್ತು ಸೇಸ ಸೆಟ್ರ ಸೊಸೆ ಪ ಗಿರಿಯಮ್ಮ ಸೆಡ್ತಿ ಮಗಳು ಉಡ್ಪಿ ತಾಲ್ಲೂ—ಸಂಡಿಕೂರು ಗ್ರಾಮದಲ್ಲಿರುವವಳು— 2. ವಾದಿಳಿಂದ ಡಿಕ್ರಿ ಹಕ್ಕು ಟ್ರಾನ್ಸ್ಫರದಾರಳು—ಲೀಲಿ ಹೆಂಗ್ಸು ಕಾಳಮ್ಮ ಹೆಂಗ್ಸಿನ ಮಗಳು ನ ಕುಷ್ಟ ಮೊಂಡನ್ನ ರವರ ಹೆಂಡತಿ ಸದರಿ ತಾಲ್ಲೂ ಸಡ್ಡಾಲು ಗ್ರಾಮದ ಕಾಡಿ ಪಟ್ನದಲ್ಲಿರುವವರು

—ಅರ್ಜದಾರಳು.

ಪ್ರತಿವಾದಿರು—1 ಗೋಪಾಲಕೃಷ್ಣಸೆಟ್ಟಿ ಅಬ್ಬಕ್ಕ ಸೆಡ್ತಿರ ಮಗ ಕಾರ್ಕಳ ತಾಲ್ಲೂ ಕಣಜಾರು ಗ್ರಾಮದ ಬೇಸಧ್ಯ—2. ಶೀತ ಸೆಡ್ತಿ. ಅಬ್ಬಕ್ಕ ಸೆಡ್ತಿರ ಮಗಳು ಉಡ್ಪಿ ತಾಲ್ಲೂ ಫಲ್ಮಾರು ಗ್ರಾಮ— 3. ಲಕ್ಷ್ಮಿ ಸೆಡ್ತಿ ಕಲ್ಯಾಣಿ ಸೆಡ್ತಿರ ಮಗಳು ಉಡ್ಪಿ ತಾಲ್ಲೂ ಶಿರ್ವ ಗ್ರಾಮ—4. ಕುಟ್ಟಿ, 5. ಜಲಜ. 6. ಶೇಕರ, ಕಲ್ಯಾಣಿ ಶೆಡ್ತಿ ಮಕ್ಕಳು--ಫಲ್ಮಾರು ಗ್ರಾಮಸ್ತರು.

ಯೆದ್ರಿರು—

ಸದರಿ ಅಮ್ಲುಜ್ಯಾರಿಯ 1-4-5 6ನೇ ಯೆದ್ರಿರೀಗೆ--

ಮೆಲ್ಕಂಡ ಎದ್ರಿಯು ಹಣಕ್ಕೆ ಜವಾಬದಾರಿ ಯಿರುವ ಆಸ್ತಿಯ ವಿಕ್ರಯದ ಬಗ್ಗೆ ಮೇಲ್ಕಂಡ ಎದ್ರಿಯು ಹಣಕ್ಕೆ 2ನೇ ಅರ್ಜದಾರಳು ಬರಕೊಂಡ ಯೇಲಮು ಯಿಸ್ತಿಹಾರನ್ನು ಮಂಜೂರು ಮಾಡುವರೆ ಮೇಲ್ಕಂಡ ಅಮ್ಲುಜ್ಯಾರಿಯು ಮತ್ತು ಅಸ್ತಿ ಯೇಲಮಿಗೆ ನಿಲ್ಲುವ ಕುರಿತು ತನಗೆ ಪರ್ಮಿಶನು ಕೊಡಬೇಕಾಗಿ ವಗೈರೆಸಂಗತಿ ಕ್ವಾಸ್ಟೆ ಬರಕೊಂಡ ಅರ್ಜಿಯು ಕೂಡಾ ಮೇಲ್ಕಂಡ ಕೋರ್ಟುಮುಂದೆ ತಾರೀಕು 7-1-1951ನೇ ಬೆಳಗ್ಯೆ 10 ಗಂಟೆಗೆ ತನ್ಕಿಗೆ ಇಟ್ಟಿರುವದರಿಂದ ಸದರಿ ವಿಷಯದಲ್ಲಿ ಆಕ್ಷೇಪಣೆಯು ಇರುವಲ್ಲಿ ನೀವು ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡ ಬಹುದಾಗಿಯೂ, ತಪ್ಪಿದರೆ ಸದರಿ ಅಮ್ಲುಜ್ಯಾರಿಯು ವ ಪರ್ಮಿಶನ್ ಅರ್ಜಿಯೂ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬದಾಗಿಯೂ ಈ ಮೂಲಕ ನಿಮಗೆ ತಿಳಿಯಪಡಿಸಲಾಗುತ್ತದೆ.

A. N. S. Achar

Advocate for Petitioners

Karkala 19—12—53

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜಮಾ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು ! ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ... ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,

ಬಿ. ಎ. ಬಿ. ಯಲ್., ವಕೀಲ್,

ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

‘ಗೋಪಾಲ ಭೇಷಜಾಶ್ರಮ” ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ಣಯಿಸಿ ತಯಾರಿಸಲ್ಪಟ್ಟ ಅಮೋಘವಾದವು ಧುರಂಧರ ಪರವಾಯನ.

ಇವರ ನವಜೀವಾತು ಎಂಬ ಸೂತಿಕಾರಸಾಯನ



ಹೆಚ್ಚಿನ ಮಾಹಿತಿಗೆ— ಡಾ! ಯಂ ಸಿ ಶಾಸ್ತ್ರೀ, ಯಲ್ ಐ. ಎಂ. ಕೊಡಿಯಾಲ್ಬೈಲ್ ಪೋಸ್ಟು. (ಮಂಗಳೂರು)

ಸಾಕ್ಷರು: ಡಾ| ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ವಾರದ ಒಳಿತು ಕೆಡುಕುಗಳು

ತಾ. ೧೭—೧೨—೫೩ರಿಂದ ತಾ. ೨೩—೧೨—೫೩ರ ವರೆಗೆ.

ಮೇಷ—ನಿಮ್ಮ ಅನುದಿನದ ಕಾರ್ಯಗಳಲ್ಲಿ ಯಾವ್ವೊಂದು ತರದ ವ್ಯತ್ಯಾಸಗಳು ಕಾಣಲಾರವು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಉದ್ಯೋಗ ವ್ಯಾಪಾರಗಳಲ್ಲಿ ಕೊಂಚ ಪ್ರಗತಿ ಕಾಣಲಿದೆ. ಆರ್ಥಿಕ ಭಾಗವು ಸಾಕಷ್ಟು ತೃಪ್ತಿಕರವಾಗಿದ್ದೀತು ಆದರೆ ರಾಜಕೀಯ ಕಾರ್ಯಗಳಲ್ಲಿ ವಿಪಕ್ಷೀಯರಿಂದ ಪರಾಜಯ ಹೊಂದುವಿರಿ. ನೀಚ ಜನರೊಡನೆ ಕಲಹವಾದೀತು. ಆತ್ಮೀಯರ ವಿರಹವುಂಟಾಗಲಿದೆ. ತಾ. 17, 20, 21, ಈ ದಿನಗಳಲ್ಲಿ ಭೋಗಲಾಭಗಳು ಪ್ರಾಪ್ತವಾಗಲಿವೆ.

ವೃಷಭ—ದೈವವು ಸಾಕಷ್ಟು ಬಲಶಾಲಿಯಾಗಿಲ್ಲವಾದರೂ ಸ್ವಂತ ಪರಾಕ್ರಮದಿಂದ ನೀವು ಎಂತಹ ವಿಘ್ನಗಳೇ ಪ್ರಾಪ್ತವಾದರೂ ಹಿಡಿದ ಕಾರ್ಯವನ್ನು ಸಾಧಿಸದೆ ಬಿಡಲಾರಿರಿ. ಸ್ತ್ರೀಜನರಿಂದಾಗಿ ನಷ್ಟ ಅನಿಷ್ಟ ಅಪವಾದಗಳುಂಟಾದಾವು. ಪಿತ್ತ ದೋಷದಿಂದಾಗಿ ದೇಹದಲ್ಲಿ ಅನಾರೋಗ್ಯವು ಕಾಣಿಸೀತು. ನೌಕರಿ ವರ್ಗದವರಿಗೂ ವ್ಯಾಪಾರೀ ಜನತೆಗೂ ಕೊಂಚ ನಷ್ಟ ಕಷ್ಟಗಳು ಪ್ರಾಪ್ತವಾಗುವ ಸಂಭವವಿದೆ ಆದರೂ ದಿನಯಾಪನೆಗೆ ಯಾವ್ವೊಂದು ತರದ ತೊಂದರೆಗಳೂ ಉಂಟಾಗದೆ ಸುಖದಿಂದ ಕಳೆವಿರಿ. ತಾ 18, 19, 22, 23, ಈ ದಿನಗಳು ಸುಖಲಾಭಕಾರಿಗಳಾಗಿವೆ.

ಮಿಥುನ—ದಿನಗಳೆದಂತೆ ಪರಿಸ್ಥಿತಿಯು ಕೆಡುತ್ತಾ ಬರಲಿದೆ. ಇಂದಿನ ನಿಮ್ಮ ಪ್ರಯತ್ನಗಳು ವ್ಯಥಾ ನಿಮ್ಮ ಪರಿಶ್ರಮಕ್ಕೆ ಕಾರಣಗಳಾದಾವೇ ಹೊರತು ಏನೊಂದೂ ಫಲ ಲಭಿಸಲಾರದು. ಆಕಸ್ಮಿಕವಾಗಿ ಪ್ರಾಪ್ತವಾಗತಕ್ಕ ಪರ್ಯಟನದಿಂದಾಗಿ ಹೆಚ್ಚಿನ ನಷ್ಟ ಕಷ್ಟಗಳಿಗೆ ಗುರಿಯಾಗುವಿರಿ. ಗೃಹತಾಪತ್ರಯಗಳು ಮೇಲಿಂದ ಮೇಲೆ ಬಾಧಿಸುವುದರಿಂದ ದಿನಯಾಪನೆಯು ಕಷ್ಟವಾಗುವದು ಬಂಧುವರ್ಗದವರ ಸಹಕಾರದಿಂದಾಗಿ ತಾ. 17, 20, 21, ಸ್ವಲ್ಪ ಉತ್ತಮವಾಗಿ ಕಾಣಿಸಲಿದೆ.

ಕರ್ಕಾಟ—ಇಂದಿನ ನಿಮ್ಮ ಆರ್ಥಿಕ ಭಾಗವು ಮುಂಚಿಗಿಂತ ಸುಧಾರಿಸಲಿದೆ. ಹೆಚ್ಚಿನ ನಿಮ್ಮ ಬಯಕೆಗಳು ಕಾರ್ಯರೂಪಕ್ಕೆ ಬರುವವು. ಆದರೆ ಪಂಡಿತ ಮಕ್ಕಳ ದೇಹಾಲಸ್ಯದಿಂದಾಗಿ ಹೆಚ್ಚಿನ ಹಣವು ವ್ಯಯವಾದೀತು. ದುರ್ಜನರ ಮೈತ್ರಿಯು ನಿಮ್ಮನ್ನು ಕಷ್ಟನಷ್ಟಗಳಿಗೆ ಗುರಿ ಪಡಿಸೀತು. ಆದರೂ ದೈವ ಬಲುಮೆಯು ಚೆನ್ನಾಗಿರುವುದರಿಂದ ಹಣದ ಅಡಚಣೆ ಕಾಣಿಸದು. ವ್ಯಾಪಾರದಲ್ಲಿ ಕೊಂಚ ನಷ್ಟವುಂಟಾದೀತು. ತಾ. 20, 21, ಬಿಟ್ಟು ಉಳಿದ ದಿನಗಳು ಪ್ರಶಸ್ತವಿವೆ.

ಸಿಂಹ—ದೈವವೂ ಆತ್ಮ ಪೌರುಷವೂ ಚೆನ್ನಾಗಿರುವುದರಿಂದ ಈ ವಾರದಲ್ಲಿ ನೀವು ಹಲವಾರು ಮಹತ್ಕಾರ್ಯಗಳನ್ನು ಸಾಧಿಸುವಿರಿ. ಜನತೆಯ ಬೆಂಬಲ ಬಂಧುಮಿತ್ರರ ಸಹಕಾರವನ್ನು ಪಡೆದ ನಿಮಗೆ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ವಿಜಯವು ಕಟ್ಟಿಟ್ಟ ಗಂಟಿನಂತಿರುವುದು ನಿರೀಕ್ಷಿಸಿದುದಕ್ಕಿಂತಲೂ ಅಧಿಕವಾದ ಫಲ ಲಭಿಸಲಿದೆ. ಯಾವ್ವೊಂದು ತೆರನಾದ ತಾಪತ್ರಯಗಳನ್ನು ಕಾಣಲಾರದಾದರೂ ಪಿತ್ತ ದೋಷದಿಂದ ಆರೋಗ್ಯ ಕೆಡಲಿದೆ. ವಾರಾದಿಯ 5 ದಿನಗಳು ಅತೀವ ಪ್ರಶಸ್ತವಾಗಿವೆ.

ಕನ್ಯಾ—ಬೃಹಸ್ಪತ್ಯಾಚಾರ್ಯರು ನಿಮ್ಮ ಭಾಗ್ಯಸ್ಥಾನದಲ್ಲಿದ್ದರೂ ಧನಸ್ಥಾನಗತರಾದ ಶನ್ಯಂಗಾರಕರಿಂದಾಗಿ ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈಬರಿದಾದೀತು. ಶತ್ರುವರ್ಗದವರಿಂದ ವಿತ್ತ ಮಾನಗಳಿಗೆ ಹಾನಿ ಸಂಭವಿಸುವದು. ಸರಕಾರಿ ಅಧಿಕಾರಿಗಳ ಪೀಡೆಗೊಳಗಾದೀರಿ. ಉಷ್ಣಪಿತ್ತ ದೋಷದಿಂದಾಗಿ ಆರೋಗ್ಯವೂ ಕೆಟ್ಟಿಗಿರದು. ಆದರೂ ಎಷ್ಟೇ ಅಪಾಯಗಳು ಬಂದರೂ ಉಪಾಯದಿಂದ ಪಾರು ಮಾಡುವ ಶಕ್ತಿಯುಕ್ತರಾದ ನಿಮಗೆ ವಾರಾಂತ್ಯದ 1 ದಿನಗಳು ಅನುಕೂಲವಾಗಿವೆ

ತುಲಾ—ಸುಖಕಷ್ಟ ಲಾಭನಷ್ಟಗಳು ನಿಮಗೀವಾರದಲ್ಲಿ ಸರಿತೂಕದಲ್ಲಿರುವವು. ನಿಮ್ಮ ಪರಿಶ್ರಮಕ್ಕೆ ತಕ್ಕುದಾದ ಫಲವು ಲಭಿಸಿಯೇ ತೀರುವುದು. ಆದರೆ ಬಂಧು ವರ್ಗದವರಿಂದ ಕೆಲವು ಆಪ್ತಜನರ ವಿರಹಗಳಿಗೆ ಗುರಿಯಾದೀರಿ. ವಾತ ಪಿತ್ತ ಪ್ರಕೋಪದಿಂದಾಗಿ ಹೆಚ್ಚಿನ ಆಯಾಸಕ್ಕೆ ಗುರಿಯಾಗುವಿರಿ. ಯಾತ್ರವಲ್ಲಿ ವಿಶೇಷತ ಧನ ವ್ಯಯವಾದೀತು ಪ್ರವಾಸವು ಅನಿಷ್ಟಕಾರಿಯಾಗಿ ಪರಿಣಮಿಸಲಿದೆ. ನೌಕರಿ ವ್ಯಾಪಾರಾದಿಗಳಲ್ಲಿ ಫಲವು ಉತ್ತಮವಾಗಿರುವ ಕಾರಣ ದಿನಯಾಪನೆಯು ಕಷ್ಟವಾಗದು. ತಾ. 17, 22, 23, ಅನುಕೂಲ.

ವೃಶ್ಚಿಕ—ವ್ಯಯಸ್ಥಾನಗತರಾದ ಶನ್ಯಂಗಾರಕರು ನಿಮಗೆ ಹಲವಾರು ತೆರನಾದ ನಷ್ಟ ಕಷ್ಟಗಳನ್ನು ಕೊಡಲಿರುವರು. ಅನಿರೀಕ್ಷಿತ ವಿಪತ್ತು ಶೋಕ ದುಃಖಗಳು ಪ್ರಾಪ್ತವಾದಾವು. ವ್ಯರ್ಥ ಖರ್ಚುಗಳು ಸಂಭವಿಸಲಿವೆ. ಮಾನಸಿಕ ಧೈರ್ಯ ಸ್ಥೈರ್ಯಗಳು ಲೋಪವಾಗುವವು. ಆತ್ಮೀಯರಲ್ಲೂ ಅವಿಶ್ವಾಸವುಂಟಾಗುವ ಸಂಭವವಿದೆ. ಆದರೆ ಧನಪತಿಯಾದ ಗುರುವು ಕೇಂದ್ರದಲ್ಲಿದ್ದು ನಿಮ್ಮ ರಾಶಿಯನ್ನು ನೇರ ದೃಷ್ಟಿಯಿಂದ ಕಾಣುತ್ತಿರುವ ಕಾರಣ ಹೆಚ್ಚಿನ ನಿಮ್ಮ ಕಷ್ಟಗಳು ಉಷ್ಣರಶ್ಮಿಯ ಕಿರಣ ಸ್ಪರ್ಶಿಸಿದ ಹಿಮಗಡ್ಡೆಗಳಂತೆ ಮಾಯವಾಗುವವು. ವಾರಾದಿಯ 3 ದಿನಗಳು ಲಾಭವಿಜಯ ನೆಮ್ಮದಿಕಾರಿಗಳಾಗಿವೆ.

ಧನು—ನಿಮ್ಮ ರಾಶಿಯಲ್ಲಿಂದು ರವಿಯೂ ರೋಗಸ್ಥಾನದಲ್ಲಿ ಗುರುವೂ ನಿಂತ ಕಾರಣ ಕಫ ಪಿತ್ತ ದೋಷದಿಂದಾಗಿ ಆರೋಗ್ಯ ಕೆಡುವ ಸಂಭವವಿದೆ. ಹೆಚ್ಚಿನ ನಿಮ್ಮ ಕಾರ್ಯಗಳಿಗೆ ಆತ್ಮೀಯರಿಂದಲೇ ವಿಘ್ನಗಳೊದಗಲಿವೆ. ಆದರೂ ಸನ್ಮಿತ್ರರ ಬಲಯುತರಾದ ನೀವು ಆತ್ಮ ಪೌರುಷದಿಂದ ಕಾರ್ಯ ಸಾಧಿಸುವಿರಿ. ಹಣದ ಅಡಚಣೆಯೆಂಬುದು ನಿಮ್ಮ ಸಮೀಪ ಬರಲೊಲ್ಲದು. ಭೃತ್ಯ ಜನರಿಂದಾಗಿ ಮತ್ತು ಭೂಸಂಬಂಧವಾದ ಧನಾಗಮವಾಗಲಿದೆ. ತಾ. 18ರಿಂದ 21ರ ವರೆಗಿನ ದಿನಗಳು ಅನುಕೂಲವಿವೆ.

ಮಕರ—ನಿಸರ್ಗತಃ ಶುಭಗ್ರಹರೆಲ್ಲರೂ ನಿಮಗಿಂದು ಶುಭಕಾರಿಗಳಾಗಿಯೇ ಇರುವುದರಿಂದ ಹೆಚ್ಚಿನ ನಿಮ್ಮ ಅಭಿಲಾಕಾಂಕ್ಷೆಗಳು ಈಡೇರಲಿವೆ. ಬಂಧುಗಳೂ ಮಿತ್ರರೂ ಶಕ್ತಿಮೀರಿ ಸಹಾಯ ಮಾಡಲಿರುವರು. ವಿದ್ಯೋಪಜೀವಿಗಳಿಗೆ ಈ ವಾರವು ಬಹಳ ಪ್ರಶಸ್ತವಿರುವುದು. ವ್ಯಾಪಾರದಲ್ಲೂ ಉತ್ತಮ ಫಲಪ್ರಾಪ್ತಿಯಿದೆ. ನಿಮ್ಮ ಮನೋವಾಕ್ಕರ್ಮಗಳಲ್ಲಿ ಪರಸ್ಪರ ಸಂಬಂಧವಿಲ್ಲದ ಕಾರಣ ಜನತೆಯ ತೆಗಳಿಕೆಗೆ ಗುರಿಯಾದೀರಿ. ತಾ. 17, 22, 23, ಈ ದಿನಗಳಲ್ಲಿ ನಿಮ್ಮ ಅಭೀಷ್ಟವು ಸಿದ್ಧಿಸುವದು.

ಕುಂಭ—ಕಷ್ಟಕಾಲವಿನ್ನೂ ದೂರವಾಗಿಲ್ಲವು. ವಿಶೇಷತಃ ಆರ್ಥಿಕ ಬಿಕ್ಕಟ್ಟಿನಿಂದಾಗಿ ಮರ್ಯಾದೆ ಉಳಿಸಿಕೊಳ್ಳುವದೂ ಕಷ್ಟವೆನಿಸೀತು. ಬಂಧುಗಳೂ ಮಿತ್ರರೂ ನಿಮ್ಮ ವಿರೋಧಿಸ್ಥಾನದಲ್ಲಿ ನಿಲ್ಲಲಿರುವರು. ನಿಷ್ಕಾರಣವಾಗಿ ವಾಕ್ಕಲಹವಾಗಲಿದೆ. ತನು ಪೀಡೆ ಮನೋರೋಗಗಳಿಂದ ವಿಶೇಷ ಚಿಂತಾಕುಲರಾದ ನಿಮಗೆ ಆಕಸ್ಮಿಕ ಪ್ರವಾಸ ಆಪ್ತ ಜನರ ವಿಯೋಗವುಂಟಾಗಲಿದೆ. ನಿಮ್ಮ ಶ್ರಮವು ಸಫಲವಾಗುವದಾದರೂ ವಿಪರೀತ ಖರ್ಚುಗಳು ಪ್ರಾಪ್ತವಾಗುವುದರಿಂದ ದಿನಯಾಪನೆಯು ಕಷ್ಟವೆನಿಸುವುದು. ತಾ. 17, 22, 23, ಇವುದರಲ್ಲಿ ಉತ್ತಮ.

ಮೀನ—ಪ್ರಬಲರಾದ ಶತ್ರುಗಳು ನಿಮ್ಮನ್ನು ನಾನಾ ರೀತಿಯಿಂದ ಪೀಡಿಸಲಿರುವರು. ಆದ ಕಾರಣದಿಂದಾಗಿ ನೀವು ಕೈಗೊಂಡ ಹಲವಾರು ಕಾರ್ಯಗಳು ಅರ್ಧದಲ್ಲೇ ನಿಂತುಹೋಗಲಿವೆ. ಸ್ಥಾನವನಗಳಿಗೆ ಹಾನಿಸಂಭವಿಸುವದು. ಚರ್ಮರೋಗಗಳೂ ಹುಣ್ಣು ಗಾಯಗಳೂ ಕಾಣಿಸಿಕೊಳ್ಳುವವು. ಪತ್ನೀಪುತ್ರರ ವಿರಹ ದುಃಖಕ್ಕವಕಾಶವಿದೆ. ಆದರೆ ಸನ್ಮಿತ್ರರ ಬೆಂಬಲವು ನಿಮಗೀಕಾಲದಲ್ಲಿ ಪ್ರಾಪ್ತವಾಗುವ ಕಾರಣ ತಾ. 18, 19, ಈ 2 ದಿನಗಳಲ್ಲಿ ಗೃಹಸುಖ ಧನಲಾಭ ವಿಜಯಗಳನ್ನು ಕಾಣಲಿರುವಿರಿ

[೧ನೇ ಪುಟದಿಂದ]

ಕ್ಕೆ ಕಾರಣವಾಯಿತು. ಯುದ್ಧದ ಸಿದ್ಧತೆಗೂ ಅದನ್ನು ಕಾರ್ಯಗತ ಗೊಳಿಸುವುದಕ್ಕೂ ವ್ಯಯವಾಗುವ ಶಕ್ತಿ ಸ್ರೋತಗಳನ್ನೆಲ್ಲ ಒಂದು ಗೂಡಿಸಿ, ಮಾನವತೆಯ ಸುಖ ಕಲ್ಯಾಣಗಳಿಗೆ ಶ್ರಮಿಸಬೇಕೆಂಬ ಮತ್ತು ಅದರಿಂದಲೇ ಹಿತವುಂಟೆಂಬ ತಿಳಿವಿನ ಬೆಳಕು ಆಗಲೇ ಮೂಡಿತು.

ನವ ಸಂದೇಶದ ಈ ದೀವಟಿಗೆಯನ್ನು ಏಶಿಯಾದ ಮೂಲೆ ಮೂಲೆಗೂ ಕೊಂಡು ಹೋಗಿ ಬೆಳಕು ತುಂಬುವಲ್ಲಿ ರಾಜಕಾರಣಿಗಳು ಮಾತ್ರವಲ್ಲ. ಸಾಂಸ್ಕೃತಿಕ ಸಾಹಿತ್ಯಿಕ ಚಟುವಟಿಕೆಯಲ್ಲಿ ತಲ್ಲೀನರಾದ ಜನರ ಗುಂಪೂ ಪ್ರಯತ್ನ ಶೀಲವಾಗಿರುತ್ತದೆ. ಏಶಿಯನ್ನರ ಸಂಸ್ಕೃತಿಯಲ್ಲಿ ಜನ ಜೀವನದಲ್ಲಿ ಕಂಡು ಬರುವ ಸಾಮ್ಯ ಮತ್ತು ಏಕಸೂತ್ರತೆಗಳು ಅವರೆಲ್ಲರನ್ನೂ ಸಹೋದರ ಭಾವದಲ್ಲಿ ಜೋಡಿಸಿರುತ್ತವೆ ಶತಮಾನಗಳಿಂದ ರೂಢವಾಗಿದ್ದ ನಂಬಿಕೆಗಳೂ ನಿಯಮಗಳೂ ನಿಧಾನವಾಗಿಯೇ ಆದರೂ ಪರಿವರ್ತನೆ ಹೊಂದುತ್ತಿರುವುದೂ ಅವನ್ನು ತೆರೆದ ಕೈಗಳಿಂದ ಜನ ಸ್ವಾಗತಿಸುವುದೂ ತೋರುತ್ತದೆ. ಪಾಶ್ಚಾತ್ಯ ಸಂಸ್ಕೃತಿಗಿಂತ ಭಿನ್ನವಾದ, ಅವರ ಮನೋಭಾವಕ್ಕೆ ವ್ಯತಿರಿಕ್ತವಾದ, ಯುದ್ಧದ ಗುಲ್ಲಿಗಿಂತ ಶಾಂತಿ ಸಂದೇಶವನ್ನೇ ಮೆಚ್ಚಿಕೊಳ್ಳುವ ಏಶಿಯಾದ ಜನವಾಣಿಯೇ ಯುಗವಾಣಿಯಾಗಿ ಮೊಳಗುತ್ತಿದೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವದು, ಹತೋಟಿಗೆ ಬರುವುದು. ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು. ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3/-; ಸ್ಪೆಶ್ಯಲ್ ರೂ 5/- ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಖರ್ಚು ಬೇರೆ ಪ್ರತ್ಯೇಕ]

Mrs. P. DEVEE, F.P.S.(N.J.)
CALCUTTA. 10
ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್. ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 65

ಲಕ್ಷಾಂತರ ಜನರು ಗುಣಹೊಂದಿದ್ದಾರೆ

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೮ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚಾಕ, ಬೆಂಗಳೂರು ಸಿಟಿ.
ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ಗರ್ಭ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಪಾಲನ್ನಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಧರ್ಮಾರ್ಥ—ಮುಕ್ತಟೆ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3

Edited, Printed & Published By K. H. Shetty at the Navayuga Press, Udipi, S. India

Regd. No. M. 3618

Licence No 31
Licensed to Post without Prepayment.

ನವಯುಗ

Vol.33. No 17 24-12-1953 ವರ್ಷ ೩೩ ವಾರ ೧೭

ಇನ್ನೊತ್ತಿಗೆ ಬಹಳ ಅಗ್ಗವಾದ ವಸ್ತುವೊಂದಿದ್ದರೆ ಅದು “ಸೇವೆ”. ಈ ಸೇವೆಯೆಂಬ ಮಾತಿನಲ್ಲಿ ಎಷ್ಟೋ ಭಾವಗಳು ಅದನ್ನು ಆಡುವವರ ಹಾಗೂ ಮಾಡುವವರ ಮನಸ್ಸಿಗನುಸಾರ ನಮಗೆ ಹೊಳೆಯಬಹುದು. ಮಾನವತೆಯ ಕಲ್ಯಾಣ ಮಾಡಬೇಕೆನ್ನುವ ಉತ್ಕಟಾಭಿಲಾಷೆ ಕೆಲವರ ಸೇವಾ ಜೀವನದ ಮೂಲದಲ್ಲಿದ್ದರೆ—ಸಹೋದರರ ದೈನ್ಯವನ್ನು ಕುರಿತಾದ ಕರುಣೆಯೇ ಅವರ ಸೇವೆ ಮಾಡಿ ನೆರವಾಗುವುದಕ್ಕೆ ಕೆಲವರಿಗೆ ಪ್ರೇರಣೆ ಕೊಟ್ಟಿದ್ದೀತು. ಸಮಾಜದ ಕುಂದು ಕೊರತೆಗಳನ್ನು ಪರಿಹರಿಸಿ ಸುಖ ಶಾಂತಿಗಳನ್ನು ಅದರಲ್ಲಿ ನೆಲೆಗೊಳಿಸಲು ಕೆಲವು ಸುಧಾರಕರು ಅನುಸರಿಸುವ ವಿಧಾನವೇ-ಸೇವೆಯಾದಂತೆ – ಕೀರ್ತಿಕಾಮಿಗಳಾದ ಕೆಲವು ಮಹನೀಯರು ಉಳ್ಳವರೆಂಬ, ಶಕ್ತರೆಂಬ ಹೆಮ್ಮೆಯಿಂದ ಇಲ್ಲದವರಿಗೂ ಅಶಕ್ತರಿಗೂ ಒದಗಿಸುವ ಅನುಕೂಲತೆ, ನೀಡುವ ಸಹಾಯ ಇದೂ ಮಹಾ ಸೇವೆಯಾಗುತ್ತದೆ.

ಜನತೆಯ ಸೇವೆ- ಸಮಾಜದ ಸೇವೆ ಮಾಡಬೇಕೆನ್ನುವ ಆದರ್ಶ ಅತ್ಯುತ್ತಮವಾದುದೆಂದು ಪ್ರಾಜ್ಞರ ಅಭಿಪ್ರಾಯ. ಆದರೆ ಈ ಸೇವೆಯ ಹಿಂದಿರುವ ಕಲುಷಿತ ಮನೋಭಾವ ಆದರ್ಶವನ್ನು ಕೆಲಮಟ್ಟಿಗೆ ಮುಸುಕು ಮಾಡುತ್ತದೆ. ಕೀರ್ತಿಕಾಮಿಗಳು ಪೂರ್ಣಯ್ಯನ ಛತ್ರದಂಥದೊಂದು ಅನ್ನಪೂರ್ಣಾ ಮಂದಿರವನ್ನು ತೆರೆದರೂ- ಜನ ಅದನ್ನು ತಿರಸ್ಕಾರದಿಂದ ನೋಡುತ್ತಾರೆ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಜೈಲಿಗೆ ಹೋದವರೆಂಬ ಕಾರಣದಿಂದ ಹತ್ತು ಎಕ್ರೆ ಭೂಮಿಗೋಸ್ಕರ ಈಗ ಕೈಚಾಚಿದ ದೇಶಭಕ್ತರನ್ನು ಜನ ಗೇಲಿ ಮಾಡಿ, ಹಂಗಿಸುತ್ತಾರೆ – ಅದೇ ಸಾತ್ವಿಕ ಬುದ್ಧಿಯ ವಿನೋಬಾಜೀ ಜನತಾ ಜನಾರ್ದನನ ಹೆಸರಿನಲ್ಲಿ ಭೂಮಿ ದಾನ ಕೇಳುವಾಗ ಸಾವಿರಾರು ಎಕ್ರೆಯನ್ನು ಅಭಿಮಾನದಿಂದ ಒಪ್ಪಿಸಿಕೊಡುವುದಕ್ಕೆ ಜನ ಮುಂದಾಗುತ್ತಾರೆ. ಸೇವೆಯ ಬೆಲೆ ಸೇವಕನ ವ್ಯಕ್ತಿತ್ವದ ಮಟ್ಟವನ್ನೇ, ಅವನ ಮನೋಭಾವವನ್ನೇ ಹೊಂದಿಕೊಂಡಿದೆಯೆಂದು ಇದರಿಂದ ಮನವರಿಕೆಯಾಗುತ್ತದೆ.

ಪುರಾತನ ಕಾಲದಲ್ಲಿ ಸೇವೆಯೆಂದರೆ- ಮುಖ್ಯವಾಗಿ ಭಿಕ್ಷೆಯೇ. “ಹಸಿದು ಬಂದವರಿಗನ್ನವನ್ನಿಕ್ಕುವುದು” ಮಹಾ ಸೇವೆ. ಸಂಸ್ಕಾರ ಹೊಂದಿದ ಮನುಷ್ಯ ದೇವರ ಸೃಷ್ಟಿಯ ಮೇಲೆ ತನ್ನ ಹಕ್ಕುಂಟೆಂದು ಸಾಧಿಸಿ, ಬಲ ಪ್ರದರ್ಶನಕ್ಕೆ ತೊಡಗಿದ ನಾಗರಿಕತೆಯ ಕಾಲದಿಂದ—ಸೇವೆಯ ಆದರ್ಶ ಅನೇಕ ಮಹಾನುಭಾವರ ಬಾಳ್ವೆಯ ಧ್ಯೇಯವಾಗಿ ಪರಿಣಮಿಸಿತು. ಸಮಾಜದಲ್ಲಿ ಉಳ್ಳವರು ಇಲ್ಲದವರನ್ನು ನಿಕೃಷ್ಟವಾಗಿ ಕಡೆಗಣಿಸುವುದು ತಪ್ಪಬೇಕೆಂದೂ ಮನುಷ್ಯ ಮನುಷ್ಯನನ್ನು ಕಿತ್ತು ತಿನ್ನುವ ಗಂಡಾಂತರಕ್ಕೆ ಅವಕಾಶವಿರಕೂಡದೆಂದೂ ಋಷಿ, ಧರ್ಮ ಗುರುಗಳೂ ನೀತಿ ಶಾಸ್ತ್ರ ಪಾರಂಗತರೂ ಜನಸೇವೆ ಮಾಡುವುದು ಇಹಪರಗಳ ಸುಖ ಸಾಧನವೆಂದು ಸಾರಿದರು. ಪರದ ಕಲ್ಪನೆ ಧರ್ಮದ ಕಕ್ಷೆಯಲ್ಲಿ ಬಂದರೂ—ಇಹಲೋಕದ ಸುಖ ನೆಮ್ಮದಿಗಳಿಗೆ ಈ ಸೇವೆಯಿಂದ ಸಾಕಷ್ಟು ಸಹಾಯ ಸಂದಿತೆಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕುರುಡರು, ಕುಂಟರು, ಅನಾಥರು, ರೋಗಿಗಳು ಮುಂತಾದವರಿಗೆ ಅನ್ನ ವಸ್ತ್ರವನ್ನು ಕೊಟ್ಟು ಕಾಪಾಡುವ ಕ್ರಮ, ನಿಜವಾಗಿಯೂ ಮಾನವತೆಯ ಮೇಲಿನ ಕರುಣೆಯ ನಿದರ್ಶನ.

ಇದಕ್ಕೂ ಹೆಚ್ಚಿನ ವ್ಯಾಪ್ತಿಯನ್ನು ಸೇವೆ ಕ್ರಮೇಣ ಪಡೆಯಿತು-ನೈತಿಕ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ, ವೈಜ್ಞಾನಿಕ, ಸಾಂಸ್ಕೃತಿಕ ಮುಂತಾದ ಅನೇಕ ಮುಖಗಳಲ್ಲಿ ಸೇವೆಯ ಭಾವನೆ ಈಗ ವಿಸ್ತಾರಗೊಂಡಿದೆ. ಧರ್ಮ ಹಾಗೂ ಅರ್ಥ ಮೂಲವಾದ ಕಾರಣಗಳಿಗಿಂತಲೂ ಸಮಾಜದ ಸ್ವಾಸ್ಥ್ಯ ಹಾಗೂ ನೆಮ್ಮದಿಗಳು ಇಂದಿನ ಸೇವಾ ಕಾರ್ಯಗಳಿಗೆ ಸ್ಫೂರ್ತಿಯನ್ನು ಒದಗಿಸುತ್ತವೆ. ಹಸಿದು ಬಂದವರಿಗೆ ಅನ್ನವನ್ನು ನೀಡಿದ ಮಾತ್ರಕ್ಕೆ ತನ್ನ ಕರ್ತವ್ಯ ತೀರಿತೆಂದು ಇಂದಿನ ಸಮಾಜ ವಿಜ್ಞಾನದ ವಿದ್ಯಾರ್ಥಿ ತಿಳಿಯುವುದಿಲ್ಲ – ಇಷ್ಟು ಮಾಡಿದ್ದರಿಂದಲೇ ಮಾನವತೆಯ ಶುಭ ಸಾಧನೆಯಾಯಿತೆಂದು ಅವನು ಎಣಿಸುವುದಿಲ್ಲ. ಸೇವೆ ಇಷ್ಟು ಸುಲಭದಲ್ಲಿ ಮುಗಿಯಿತೆಂಬುದನ್ನೇ ಅವನು ಒಪ್ಪಲಾರ—ಈ ಪ್ರಶ್ನೆಯಲ್ಲಿ ಹೊರಗೆ ತೋರುವ ಸಂಗತಿಗಿಂತಲೂ ಒಳಗಿನ ಅಂಶ ಮಹತ್ವವಾದುದೆಂದು ಅವನು ಗ್ರಹಿಸಿ, ಪ್ರಶ್ನೆಯನ್ನು ಬಗೆಬಗೆಯಾಗಿ ವಿಶ್ಲೇಷಿಸುವುದಕ್ಕೆ ನೋಡುವನು. ಹೊರಗಿನ ಹುಣ್ಣಿಗೆ ಲೇಪ ಹಚ್ಚುವ ಬದಲು, ರಕ್ತಶುದ್ಧಿಯ ಕಡೆಯೇ ಅವನ ಗಮನ ಹೋಗುವುದು.

ಹಿಂದಿನ ಮತ್ತು ಇಂದಿನ ಸೇವಾ ಭಾವನೆಗಳಲ್ಲಿ ಮುಖ್ಯವಾಗಿ ತೋರುವ ವ್ಯತ್ಯಾಸ ಇದೇ. ನಾವು ನೀಡುವ ಸೇವೆಯ ಪರಿಣಾಮ ಕ್ಷಣಿಕವಾಗಕೂಡದು, ಶಾಶ್ವತವಾಗಿರಬೇಕೆಂಬುದು ಇಂದಿನವರ ಆಸೆ. ಹೊತ್ತಿನ ಹೊಟ್ಟೆಯ ಹಸಿವನ್ನು ದೂರೀಕರಿಸಿದ ಮಾತ್ರಕ್ಕೆ ಹಸಿದವನ ಬದುಕಿನಲ್ಲಿ ಚಿರಸ್ಥಾಯಿಯಾದ ತೃಪ್ತಿಯನ್ನೂ ಸಂತೋಷವನ್ನೂ ತಂದುಕೊಟ್ಟಂತೆ? ಇಲ್ಲ— ಅದರಂತೆಯೇ ಸಶಕ್ತರಿಗೂ ದುಡಿದುಣ್ಣಬಲ್ಲವರಿಗೂ ನಾವು ಉದಾರ ದಾನ ನೀಡಲು ಮುಂದಾದರೆ ಅವಲಂಬಿತರ ಪ್ರಮಾಣವೇ ಹೆಚ್ಚಿಕೊಂಡು ಸಮಾಜ ದಾರಿದ್ರ್ಯವನ್ನನುಭವಿಸುವುದಿಲ್ಲವೆ? ನಮ್ಮ ಸೇವೆಯ ಮನೋಭಾವ ಇಲ್ಲಿ ಅನಪೇಕ್ಷಿತವಾದ, ವಿಪರೀತವಾದ ಪರಿಣಾಮವನ್ನುಂಟು ಮಾಡುತ್ತದೆ. ಇದು ಸರಿಯೆ? ಔಚಿತ್ಯದ ವಿಚಾರ ಮಾಡದೆ ಬೇಡಿ ಬಂದವರಿಗೆ ಕೊಡುವುದು ಹಿಂದಿನ ಕಾಲದ ಸೇವೆಯ ವೈಶಿಷ್ಟ್ಯ- ಇಂದಿನ ಸೇವೆ ಅನುಚಿತವಾದ ಕರುಣೆಗೆ ಉತ್ತೇಜನ ಕೊಡುವುದಿಲ್ಲವೆಂಬುದಕ್ಕೆ ರಶಿಯಾ ಕಟುವಾದ ಉದಾಹರಣೆ. ರಶಿಯಾದಂತೆ ಇತರೆಡೆಯಲ್ಲೂ ಸೇವೆಯ ಭಾವನೆ ಪರಿವರ್ತನೆಗೊಳ್ಳುತ್ತಿರುವುದಕ್ಕೆ—ಹಿಂದಿನಂತೆ ಈಗ ಕಾಲ ಉಳಿದಿಲ್ಲವೆಂಬುದಕ್ಕೆ, ಭಾರತದಲ್ಲಿ ಭಿಕ್ಷುಕರ ಸಮಸ್ಯೆಯ ಕುರಿತು ಗಂಭೀರವಾಗಿ ವಿಚಾರ ಮಾಡುತ್ತಿರುವುದೇ ನಿದರ್ಶನ

ಸಮಾಜದ ಸುಖನೆಮ್ಮದಿಗಳಿಗೆ ವ್ಯಕ್ತಿಯ ದುಃಖ ತಾಪಗಳಿಂದ ಭಂಗವೊದಗುವುದೆಂದು ತೋರಿದ ಗಳಿಗೆಯಿಂದ—ನೊಂದ ಜೀವಕ್ಕೆ ಭರವಸೆ ಕೊಡುವ ರೀತಿ ಸೇವೆ ಮಾಡಲು ಉಳಿದವರು ಮುಂದಾದರು. ಒಬ್ಬಳು ವಿಧವೆ, ಒಬ್ಬಳು ಮದುವೆಯಾಗದ ತಾಯಿ, ಒಬ್ಬಳು ವೇಶ್ಯೆ, ಒಂದು ಅಪರಾಧಿ ಮಗು, ಒಬ್ಬ ಕೊಲೆಗಡುಕ, ಒಬ್ಬ ಕುಂಟ, ಕಲಹ ಮಗ್ನರಾದ ದಂಪತಿಗಳು, ಕಷ್ಟದಲ್ಲಿ ಸಿಕ್ಕಿದ ಕುಟುಂಬ, ಗಿರಣಿಯೊಡೆಯನೊಡನೆ ಮನಸ್ತಾಪ ಹಚ್ಚಿಕೊಂಡ ಕೂಲಿಕಾರ – ಇವರು ಕೇವಲ ಧರ್ಮಮೂಲವಾದ ಅಥವಾ ಅರ್ಥಮೂಲವಾದ ಪ್ರಶ್ನೆಯೊಂದನ್ನೆ ಸಮಾಜದ ಮುಂದಿಟ್ಟು ಶಾಂತಿಭಂಗ ಮಾಡುವುದಿಲ್ಲ. ಅವರಿಗೆ ಜೀವನಕ್ಕೆ ಹಣ ಕೊಟ್ಟರೆ, ಸತ್ತ ಬಳಿಕ ಸ್ವರ್ಗ ಸುಖದ ಆಶ್ವಾಸನೆ ಕೊಟ್ಟರೆ – ಸಮಸ್ಯೆ ತೀರುವುದಿಲ್ಲ. ಇಂದಿನ ಸಮಾಜ ಸೇವಕರ ಸ್ಥಾನದಲ್ಲಿ ವೈದ್ಯರು, ಮನೋವಿಜ್ಞಾನಿಗಳು, ಇಂಜಿನಿಯರರು, [illegible] ಲಾವಿದರು ಮುಂತಾದ ಎಲ್ಲವರ್ಗವೂ ಬರುತ್ತದೆ. ಈ ಕಲಹಗಳಿಗೆ ಕಾರಣವೇನು? ಈ ಅಶಾಂತಿಗೆ ಕಾರಣವೇನು? ಸಮಾಜದ ಅಧಃಪತನಕ್ಕೆ ಕಾರಣವೇನು? ಮನುಷ್ಯನ ವಿಕೃತ ಮನಸ್ಸಿಗೆ ಕಾರಣವೇನು'- ಎಂದು ಸಮಾಲೋಚನೆ ನಡೆಸಿ, ಪರಿಹಾರದ ಮಾರ್ಗ ಹುಡುಕುವುದಕ್ಕೆ ಪ್ರಯತ್ನಪಡುವವರು ವ್ಯಕ್ತಿಗೆ ಮಾತ್ರವೇ ಅಲ್ಲ— ಇಂದಿನ ಸಮಾಜದಲ್ಲಿ ಒಂದು ಗುಂಪಿಗೂ ಇನ್ನೊಂದಕ್ಕೂ ಕೂಡಿಬರದ ಸನ್ನಿವೇಶಗಳಿರುತ್ತವೆ. ಕೂಲಿಕಾರ ವರ್ಗ ಗಿರಣಿಯೊಡೆಯರೊಡನೆ ಮನಸ್ತಾಪ ಕಟ್ಟಿಕೊಳ್ಳುತ್ತದೆ, ಹರಿಜನರು ದೇವಾಲಯ ಪ್ರವೇಶಿಸುವುದನ್ನು ಸನಾತನಿಗಳು ಪ್ರತಿಭಟಿಸುತ್ತಾರೆ. ಹೆಂಗಸರು ಮುಂಬರಬೇಕು, ಮಕ್ಕಳು ಮುಂಬರಬೇಕು, ಮುದುಕರು ಸುಖಿಗಳಾಗಬೇಕು ಎಂದು ಮುಂತಾಗಿಯೂ ಪ್ರತ್ಯೇಕ ಆಂದೋಲನ ನಡೆಯುತ್ತದೆ. ಪರಸ್ಪರ ವಿರುದ್ಧವಾದ ಆಶೆ –ಆಕಾಂಕ್ಷೆಗಳನ್ನು

(೧೦ ನೇ ಪುಟ ನೋಡಿರಿ)

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ನೂತನ ವರ್ಷದ ಶುಭಾಶಯಗಳು!

ನಾವು ನಮ್ಮ ಸಕಲ ಆಶ್ರಯದಾತರಿಗೆ, ಮಿತ್ರರಿಗೆ ಮತ್ತು ಗ್ರಾಹಕರಿಗೆ ಅವರು ನಮಗಿತ್ತ ಸರ್ವ ಪ್ರೋತ್ಸಾಹ ಸಹಕಾರಗಳಿಗಾಗಿ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಅಲ್ಲದೆ ಮುಂದೆಯೂ ಅವರ ನಿರಂತರ ಆದರಣೆ, ನಾವು ಸರ್ವ ವಿಧದಲ್ಲೂ ಪಾತ್ರರಾಗುವಂತೆ ಪ್ರಯತ್ನಿಸುವೆವೆಂಬ ಭರವಸೆಯನ್ನೀಯುತ್ತೇವೆ. ಅವರೆಲ್ಲರಿಗೂ **ನೂತನ ವರ್ಷವು ಹರ್ಷ ಮತ್ತು ಪ್ರಗತಿದಾಯಕವಾಗಲಿ** ಎಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ

The Canara Industrial & Banking Syndicate LTD.,

Estd: 1925] [Head Office: UDIPI, S India.

ತಮಿಳು ನಾಡಿನ ಅಮರಾವತಿ ಯೋಜನೆ

ಕ್ಷಾಮ ನಿವಾರಣೆಗೋಸ್ಕರ ಕೊಯಮುತ್ತೂರು ಜಿಲ್ಲೆಯಲ್ಲಿ ಅಣೆಕಟ್ಟು

ಸರಕಾರದ ಕಡೆಯಿಂದ ಒಂದು ಕೆಲಸ ಮಾಡಿಸುವುದಾದಲ್ಲಿ ಅದಕ್ಕೆ ಒಂದೆರಡು ವರ್ಷಗಳ ಅವಧಿಯಷ್ಟೇ ಸಾಲದು – ಬಹುಶಃ ಒಂದೆರಡು ತಲೆಮಾರುಗಳಷ್ಟು ಕಾಲವನ್ನೆ ಅಂಥ ಯೋಜನೆ ಕಾರ್ಯ ರೂಪದಲ್ಲಿಳಿಯುವಷ್ಟು ಹೊತ್ತಿಗೆ ತೆಗೆದು ಕೊಂಡಿರುತ್ತದೆ. ತಮಿಳು ನಾಡಿನಲ್ಲಿ ಭೀಕರವಾದ ಕ್ಷಾಮ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವ ಕೊಯಮುತ್ತೂರು ಜಿಲ್ಲೆಯ ಧಾರಾಪುರಂ ಮತ್ತು ಪಲ್ಲಾಡಂ ತಾಲೂಕುಗಳಿಗೆ ಸುಭಿಕ್ಷೆ ನೀಡಲಿರುವ ಅಮರಾವತಿ ಯೋಜನೆಯ ಕತೆಯೂ ಇದೇ – ೧೯೦೧ನೇ ಇಸವಿಯಷ್ಟು ಹಿಂದೆ ವಿಚಾರಣೆಗೆ ತೆಗೆದುಕೊಂಡ ಈ ಯೋಜನೆ ಸರಕಾರದ ಮನ್ನಣೆಯನ್ನು ಮೊನ್ನೆ ತಾನೆ ಪಡೆಯಿತು. ಮದ್ರಾಸಿನ ಮುಖ್ಯ ಮಂತ್ರಿಯವರು ಇದರ ಉದ್ಘಾಟನೆ ಮಾಡುತ್ತಾ ಜನರ ಸಹಕಾರ ಸರಿಯಾಗಿ ದೊರೆತರೆ ಇನ್ನು ಮೂರು ವರ್ಷಗಳಲ್ಲಿಯೇ ಈ ಯೋಜನೆ ಮುಗಿದೀತೆಂದು ಹೇಳಿದರೂ–ಸಾಮಾನ್ಯವಾಗಿ ನಾಲ್ಕು ವರ್ಷಗಳಷ್ಟು ಸಮಯ ಕೆಲಸನಡೆಯಬೇಕಾದೀತೆಂದು ಇಂಜಿನಿಯರರ ಅಭಿಪ್ರಾಯ. ಈ ಹಾಗೂ ಇತರ ಯೋಜನೆಗಳ ಚರಿತ್ರೆಯನ್ನು ಅವಲೋಕಿಸಿದರೆ—ಪಶ್ಚಿಮ ಕರಾವಳಿಯಲ್ಲಿ ಮಲ್ಪೆಯೇ ಪ್ರಬುದ್ಧ ಬಂದರ ವಾಗಬೇಕೆನ್ನುವವರ ಚಳುವಳಿ ಮೂರ್ತ ಸ್ವರೂಪವನ್ನು ತಾಳಿ, ಒಂದರು ಅಸ್ತಿತ್ವಕ್ಕೆ ಬರಲು ಹತ್ತಿಪ್ಪತ್ತು ವರ್ಷಗಳಾದರೂ ಬೇಕು: ಈ ದೀರ್ಘ ಅವಧಿಯಲ್ಲಿ ಚಳುವಳಿ ನಿರಂತರ ಸಾಗುತ್ತಿರಲೂ ಬೇಕು.

ಪ್ರಾರಂಭದ ಪ್ರಯತ್ನ

ಕನ್ನಡ ಪ್ರದೇಶವಾದ ಕೊಡಗಿನಲ್ಲಿ ಹುಟ್ಟಿ ಮೈಸೂರಿನ ಮೂಲಕ ಹರಿದರೂ ತಮಿಳು ನಾಡಿಗೆಯೇ ಹೆಚ್ಚಿನ ಸಂಪತ್ತನ್ನು ತಂದುಕೊಟ್ಟ ಕಾವೇರಿಯ ಉಪನದಿಗಳಲ್ಲಿ ಅಮರಾವತಿಯೂ ಒಂದು. ತಿರುಕೊಚ್ಚಿಯ ಪಶ್ಚಿಮ ಘಟ್ಟ ಪ್ರದೇಶದ ಮುನ್ನಾರ ಎಂಬುದೇ ಅಮರಾವತಿಯ ಮೂಲ— ಅಲ್ಲಿಂದ ಹೊರಟ ಈ ನದಿ ಅನ್ನಾಮಲೆಯ ನಿಬಿಡ ಅರಣ್ಯವನ್ನೂ ಕೊಯಮುತ್ತೂರು ಜಿಲ್ಲೆಯ ಕಾಯ್ದಿಟ್ಟ ಅರಣ್ಯ ಪ್ರದೇಶವನ್ನೂ ದಾಟಿ ಉದುಮಲ ಪೇಟೆಯ ಕಲ್ಲಾಪುರಮದ ಬಳಿ ಬಯಲು ಭೂಮಿಯನ್ನು ಸೇರುತ್ತದೆ. ಒಟ್ಟಿನಲ್ಲಿ ಅಮರಾವತಿ ನದಿಯು ೩೩೦೦ ಚದರ ಮೈಲುಗಳಷ್ಟು ಪ್ರದೇಶವನ್ನು ಆವರಿಸಿ ಕಾವೇರಿಯನ್ನು ಹೋಗಿ ಸೇರುತ್ತದೆ. ಈಗ ಈ ನದಿಗೆ ಹಳ್ಳಿಗರು ಅಲ್ಲಲ್ಲಿ ಕಟ್ಟಿದ ೧೭ ಅಣೆಕಟ್ಟುಗಳೂ ಮತ್ತು ಎಂಟು ಸಣ್ಣ ಕಟ್ಟೆಗಳೂ ಇವೆ. ಹೀಗೆ ಶೇಖರಗೊಂಡ ನೀರನ್ನು ೨೫ ನೀರಾವರಿ ಕಾಲುವೆಗಳು ದೂರ ದೂರ ಪ್ರದೇಶಕ್ಕೆ ಒಯ್ಯುತ್ತಾ ೩೫೦೦೦ ಎಕ್ರೆ ಪ್ರದೇಶದಲ್ಲಿ ಎರಡು ಬೆಳೆಯನ್ನೂ ೬೬೦೦ ಎಕ್ರೆ ಪ್ರದೇಶದಲ್ಲಿ ಒಂದು ಬೆಳೆಯನ್ನೂ ೧೨೦೦ ಎಕ್ರೆ ಪ್ರದೇಶದಲ್ಲಿ ದುಪ್ಪ ಬೆಳೆಯನ್ನೂ ಬೆಳೆಯಲು ನೆರವಾಗಿವೆ.

ಅಮರಾವತಿ ಯೋಜನೆಯ ಪ್ರಾರಂಭಿಕ ಪರಿಶೀಲನೆ ೧೯೦೧ನೇ ಇಸವಿಯಷ್ಟು ಪೂರ್ವದಲ್ಲಿ ನಡೆಯಿತು. ಮರುವರ್ಷ ಇನ್ನೂ ವಿವರವಾದ ಪರಿಶೀಲನೆ ಮಾಡಲ್ಪಟ್ಟರೂ ಸಾಕಷ್ಟು ಮಾಹಿತಿಗಳು ದೊರೆಯಲಿಲ್ಲವೆಂಬ ಕಾರಣದಿಂದ ಪರಿಶೀಲನೆಯನ್ನು ಬಿಟ್ಟುಕೊಡಲಾಯಿತು. ಆದರೂ ತಜ್ಞರ ಕುತೂಹಲ ಕಡಿಮೆಯಾಗದೆ, ೧೯೨೫ನೇ ಇಸವಿಯಲ್ಲಿ, ಮೆಟ್ಟೂರು ಜಲಾಶಯವನ್ನು ಕಟ್ಟಿದ ಖ್ಯಾತಿಯುಳ್ಳ ಕರ್ನಲ್ ಎಲ್ಲಿಸರು ಅಮರಾವತಿ ನೀರ ಸಾಗರ ಯೋಜನೆಯನ್ನು ಸಿದ್ಧಗೊಳಿಸಿದರು. ಇದನ್ನು ಸರಕಾರ ಪರಿಶೀಲಿಸಿದ ಬಳಿಕ ೧೯೩೩ನೇ ಇಸವಿಯಲ್ಲಿ ಯೋಜನೆಯು ತುಂಬ ಖರ್ಚಿನ ಬಾಬಾಗುವುದೆಂಬ ಕಾರಣವನ್ನು ತೋರಿಸಿ, ತಿರಸ್ಕರಿಸಿತು. ಇದರಿಂದ ನಿರಾಶರಾಗದೆ ಅಮರಾವತಿ ರೈತ ಸಂಘದವರು ಇನ್ನಷ್ಟು ಒತ್ತಾಯವನ್ನು ಸರಕಾರದ ಮೇಲೆ ಹೇರಿದರು – ಫಲವಾಗಿ ೧೯೧೭ರಲ್ಲಿ ಇನ್ನೊಮ್ಮೆ ಪರಿಶೀಲನೆ ನಡೆಸಲು ಸರಕಾರ ಅಪ್ಪಣೆ ವಿಧಿಸಿತು. ಇದರ ಫಲವಾಗಿ ಮಾಡಲಾದ ಯೋಜನೆಯನ್ನೂ ದೊರಕುವ ಲಾಭ ಅತ್ಯಲ್ಪವೆಂಬ ಕಾರಣದಿಂದ ೧೯೪೧ನೇ ಇಸವಿಯಲ್ಲಿ ಸರಕಾರ ತ್ಯಜಿಸಿತು.

ಮಂತ್ರಿಗಳ ಆಸಕ್ತಿ

ಮರಳಿ ಈ ಯೋಜನೆಯ ಕುರಿತು ಒತ್ತಾಯ ಹೆಚ್ಚಿದ್ದೂ ಸರಕಾರದ ಗಮನ ಹರಿದುದೂ ಸುಮಾರು ೧೩ ವರ್ಷಗಳ ಕೆಳಗೆ ೧೯೩೬–೩೭ನೇ ಇಸವಿಯಲ್ಲಿ ಭೀಕರ ಬರಗಾಲವು ತಲೆದೋರಿದಾಗ. ಆದರಿಂದ ಪೀಡಿತರಾದ ಜನರಿಗೆ ಸಹಾಯ ಒದಗಿಸಲು ಸರಕಾರಕ್ಕೆ ೩೦ ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವೆಚ್ಚ ತಗಲಿತು. ಇದರಿಂದ ಸರಕಾರದ ಕಣ್ಣು ತೆರೆದಂತಾಗಿ ಅಮರಾವತಿ ನದಿಗೆ ಯೋಗ್ಯ ಸ್ಥಾನದಲ್ಲಿ ಒಂದು ಅಣೆಕಟ್ಟನ್ನು ಕಟ್ಟಿ ವಿಶಾಲವಾದ ನೀರ ಸಾಗರವನ್ನು ನಿರ್ಮಿಸಿ ಬೇಕು ಬೇಕೆನಿಸಿದಾಗ ನೀರಿನ ಪೂರೈಕೆ ಸರಾಗವಾಗಿ ಆಗುವಂತೆ ವ್ಯವಸ್ಥೆ ಮಾಡಿಸಬೇಕೆಂದು ಅದು ಸಂಕಲ್ಪಿಸಿತು.

೧೯೪೭ರಲ್ಲಿ ಆಗ ಮದ್ರಾಸ ಸರಕಾರದ ಲೋಕೋಪಯೋಗಿ ಖಾತೆಯ ಸಚಿವರಾಗಿದ್ದ ಶ್ರೀ ಭಕ್ತವತ್ಸಲಮರು ಮುಖ್ಯ ಇಂಜಿನಿಯರರೊಂದಿಗೆ ಈ ಪ್ರದೇಶದಲ್ಲಿ ಸುತ್ತಾಡಿ ಬಂದರು. ಆ ಬಳಿಕ ೧೯೪೭ರಲ್ಲಿ ಪರಿಶೀಲನೆಯೊಂದು ತೊಡಗಿ, ಮುಂದಿನ ವರ್ಷದ ಜುಲೈರಿಗೆ ಮುಕ್ತಾಯಗೊಂಡಿತು. ಇದಕ್ಕೆ ಅನುಸಾರ ಮಾಡಿದ ಯೋಜನೆಯಲ್ಲಿ ಒಟ್ಟು, ನೀರುಣ್ಣುವ ೭೫೦೦೦ ಎಕ್ರೆ ಪ್ರದೇಶದಲ್ಲಿ ಉದುಮಲಪೇಟೆ ತಾಲೂಕಿನಲ್ಲಿ ೧೦೭೭೦ ಎಕ್ರೆ ಹಾಗೂ ಧಾರಾಪುರಂ ತಾಲೂಕಿನಲ್ಲಿ ೪೨೯೦ ಎಕ್ರೆ ಭೂಮಿಗೆ ಪ್ರಯೋಜನ ದೊರೆಯಬೇಕೆಂದು ಇದ್ದಿತು. ಒಟ್ಟು ಕಾಲುವೆ ಸುಮಾರು ೫೩ ಮೈಲುಗಳಷ್ಟು ಉದ್ದವಾಗುವುದೆಂದು ಹೇಳಲ್ಪಟ್ಟಿತ್ತು.

ಆದರೆ, ಪೊನ್ನಪುರಂ, ಮತ್ತೂರು ಮತ್ತಿತರ ಹಳ್ಳಿಯ ರೈತರು ಮಂತ್ರಿಗಳನ್ನು ಕಂಡು ಎರಡೂ ತಾಲೂಕುಗಳಿಗೆ ಸಮವಾಗಿ ಲಾಭ ದೊರೆಯುವಂತೆ ಈ ಯೋಜನೆಯನ್ನು ಪರಿಷ್ಕರಿಸಲು ಕೇಳಿದರು. ಇದಕ್ಕೆ ಸರಕಾರ ಒಪ್ಪಿಕೊಂಡು. ಯೋಗ್ಯ ತಿದ್ದುಪಡಿಗಳನ್ನು ಯೋಜನೆಯಲ್ಲಿ ಮಾಡುವಂತೆ ತಿಳಿಲಾಯಿತು. ಪರಿಣಾಮವಾಗಿ ೧೯೫೩ನೇ ಫೆಬ್ರುವರಿಯಲ್ಲಿ ಸರಕಾರಕ್ಕೆ ಒಪ್ಪಿಸಿದ ಯೋಜನೆಯಲ್ಲಿ ಇನ್ನೂ ಐದು ಮೈಲುಗಳಷ್ಟು ದೀರ್ಘ ಕಾಲುವೆ ತೋಡಬೇಕೆಂದು ಹೇಳಿದೆ. ಈ ಯೋಜನೆಯನ್ನು ಇದೀಗ ಕೇಂದ್ರ ಸರಕಾರದ ಯೋಜನಾ ಆಯೋಗದವರು ಮನ್ನಿಸಿದ್ದು ಇದಕ್ಕೆ ತಗಲುವ ವೆಚ್ಚವನ್ನು ಸಾಲ ರೂಪದಲ್ಲಿ ಕೊಡಲು ಭರವಸೆ ನೀಡಿರುವರು. ಎಂತಲೇ ಮದ್ರಾಸು ಸರಕಾರ ಇದನ್ನೀಗ ಕೈಗೆತ್ತಿಗೆದುಕೊಂಡಿದೆ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಕೊಂಬು ಬಂಗಲೆಯ ಅರ್ಧ ಮೈಲು ದೂರದಲ್ಲಿ (ಕೊಯಮುತ್ತೂರು ನಗರದಿಂದ ೫೮ ಮೈಲು ಅಂತರದಲ್ಲಿ), ದೊಡ್ಡ ಜಲಾಶಯ ಕಟ್ಟಲ್ಪಡುವುದು. ಇದರಿಂದ ೩೨೪ ಚದರ ಮೈಲುಗಳಷ್ಟು ಪ್ರದೇಶ ನೀರುಣ್ಣುತ್ತದೆ. ಇದಕ್ಕೆ ತಗಲುವ ವೆಚ್ಚ ೨೭೩ ಲಕ್ಷ ರೂಪಾಯಿಗಳು. ಅಣೆಕಟ್ಟು ೩೨೧೫ ಅಡಿಗಳಷ್ಟು ಉದ್ದವಿದೆ-ಇದರಲ್ಲಿ ೨೪೭೫ ಅಡಿಗಳಷ್ಟು ಉದ್ದ ಮಣ್ಣಿನ ಗೋಡೆ ಇರುತ್ತದೆ. ಉಳಿದುದು ಶಿಲಾ ಬಂಧ.

ರೈತರಿಂದ ಪ್ರೋತ್ಸಾಹ

ಮೊದಲೇ ಸೂಚಿಸಿದಂತೆ ಈಗಾಗಲೇ ನೀರುಣ್ಣುವ ೩೨೦೦೦ ಎಕ್ರೆ ಪ್ರದೇಶಕ್ಕೆ ಏನೊಂದೂ ಹಾನಿ ತಾರದೆ, ಹೊಸತಾಗಿ ೧೫ ಸಾವಿರ ಎಕ್ರೆ ಜಮೀನಿಗೆ ನೀರುಣಿಸುವುದು ಈ ಯೋಜನೆಯ ಉದ್ದೇಶ. ಸಾಮಾನ್ಯವಾಗಿ ನೀರಸಾಗರ ಕಟ್ಟುವಾಗ ಫಲವತ್ತಾದ ಬಯಲು ದಂಡೆಯೆಲ್ಲ ಜಲಾಶಯದಲ್ಲಿ ಮುಳುಗಿ ಹೋಗಿ ಅಷ್ಟು ಮಟ್ಟಿಗೆ ಹಾನಿ ಸಂಭವಿಸುತ್ತದೆ. ಆದರೆ ಅಮರಾವತಿ ಯೋಜನೆ ಇದಕ್ಕೊಂದು ಅಪವಾದವಾಗಿರುತ್ತದೆ. ಈ ಯೋಜನೆಯಿಂದ ಒಟ್ಟಾರೆ ೫೩೦೫ ಟನ್ನು ಅಕ್ಕಿ ಮತ್ತು ೨೧೫೫ ಟನ್ನು ಉಪ್ಪ ಧಾನ್ಯಗಳು ಬೆಳೆದಾವೆಂದು ಅಂದಾಜು. ಹೊಸತಾಗಿ ನೀರುಣ್ಣುವ ೧೫೦೦೦ ಎಕ್ರೆ ಜಮೀನಿನಲ್ಲಿ ಅರೆವಾಸಿಯಷ್ಟು ಉಪ್ಪಧಾನ್ಯವೂ ಇನ್ನುಳಿದ ಅರ್ಧಾಂಶದಲ್ಲಿ ಹಸಿ ಬೆಳೆಯೂ ಬೆಳೆಯಲ್ಪಡುತ್ತದೆ.

ಸರಕಾರದೊಡನೆ ಒಂಡವಾಳ ಸಾಕಷ್ಟು ಇಲ್ಲದಿರುವುದರಿಂದ ಈ ನೀರ ಸಾಗರದಿಂದ ಮುಂದಕ್ಕೆ ದೊರೆಯುವ ಪ್ರಯೋಜನವನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿ ಎಕ್ರೆಗೆ ಎಂಬನೂರು ರೂಪಾಯಿಗಳಷ್ಟು ಅಭಿವೃದ್ಧಿ ತೆರಿಗೆಯನ್ನು ಕೊಡಲು ರೈತರೆಲ್ಲ ಒಪ್ಪರಾಗಬೇಕೆಂದು ಮುಖ್ಯ

[೭ನೇ ಪುಟ ನೋಡಿರಿ]

THE

Canara Mutual Assurance Co., Ltd.

Head Office UDIPI, S. INDIA.

ಶುಭಾಶಯಗಳು!

ನಾವು ನಮ್ಮೆಲ್ಲ ವಿಮಾದಾರರನ್ನೂ ಪ್ರೋತ್ಸಾಹಕರನ್ನೂ ಅವರ ನಿರಂತರವಾದ ಬೆಂಬಲಕ್ಕಾಗಿ ಅಭಿನಂದಿಸುತ್ತೇವೆ. ಅಲ್ಲದೆ, ಅವರ ಪ್ರೋತ್ಸಾಹಕ್ಕೆ ಪ್ರತಿಯೊಂದೂ ರೀತಿಯಲ್ಲಿ ಅರ್ಹರಾಗುವಂತೆ ಮುಂದಕ್ಕೂ ಪ್ರಯತ್ನಿಸುವೆನೆಂದು ಭರವಸೆಯನ್ನು ನೀಡುತ್ತೇವೆ. ನೂತನ ವರ್ಷವು ಸಕಲರಿಗೂ ಸುಖ ಸಂತೋಷ ಹಾಗೂ ಸಮೃದ್ಧಿಯನ್ನು ತರಲೆಂಬುದೇ ನಮ್ಮ ಹಾರೈಕೆ!

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಷಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿನಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೬—೬—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನರಳುವ ರೋಗಿಗಳಿಗೆ ನೆರವು

ವೈದ್ಯಕೀಯ ಕ್ಷೇತ್ರದಲ್ಲಿ ಮದ್ರಾಸು ರಾಜ್ಯದ ಮುನ್ನಡೆ

ಒಂದು ಸಂಸ್ಥೆ ಎರಡು ನೂರು ವರ್ಷಗಳಿಂದ ನಿರಂತರ ಜನಸೇವೆ ಮಾಡುತ್ತಾ ಬಂದಿರುವುದು ಯಾರಿಗೆ ಅಭಿಮಾನವನ್ನುಂಟು ಮಾಡಲಿಕ್ಕಿಲ್ಲ? ಅದರಲ್ಲೂ ಮಾನವನ ಭವರೋಗಗಳ ಉಪಶಮನ ಕಾರ್ಯದಲ್ಲಿ ಮಗ್ನವಾದ ಅಂಥ ಸಂಸ್ಥೆ ಸ್ವಾಭಾವಿಕವಾಗಿಯೇ ಎಲ್ಲರಪ್ರೀತಿಗೆ ಪಾತ್ರವಾಗುತ್ತದೆ. ಮದ್ರಾಸು ನಗರದಲ್ಲಿರುವ ಜನರಲ್ ಆಸ್ಪತ್ರೆಯೇ ಇದಕ್ಕೆ ಭವ್ಯವಾದ ನಿದರ್ಶನ. ನಿಜ ಹೇಳಬೇಕೆಂದರೆ ಈ ಆಸ್ಪತ್ರೆ ೧೬೬೪ನೇ ಇಸವಿಯಷ್ಟು ಹಿಂದೆ ಸ್ಥಾಪಿಸಲ್ಪಟ್ಟಿತು. ಈಸ್ಟ್ ಇಂಡಿಯಾ ಕಂಪೆನಿಯವರು ತಮ್ಮ ಸೈನಿಕರು ವ್ಯಾಧಿ ಪೀಡಿತರಾಗಿರುವುದನ್ನು ಕಂಡು ಅವರ ಚಿಕಿತ್ಸೆಗೋಸ್ಕರ ಒಂದು ಸಣ್ಣ ಆಸ್ಪತ್ರೆಯನ್ನು ತೆರೆದರು. ೧೬೯೦ ಮತ್ತು ೧೬೯೯ನೇ ಇಸವಿಗಳಲ್ಲಿ ಅದನ್ನು ಮರಳಿ ಕಟ್ಟಿದರು. ೧೬೯೮ ನೇ ಇಸವಿಯಲ್ಲಿ ಆಸ್ಪತ್ರೆಯನ್ನು ಬೇರೆಯೇ—ಅಂದರೆ ಈಗಿರುವ ಸ್ಥಳಕ್ಕೆ ಸಾಗಿಸಿದರು. ೧೮೫೯, ೧೮೬೪, ೧೮೮೪, ೧೮೯೪ ಮತ್ತು ೧೮೯೭ನೇ ಇಸವಿಗಳಲ್ಲಿ ಈ ಆಸ್ಪತ್ರೆಯನ್ನು ಇನ್ನಷ್ಟು ವಿಸ್ತರಿಸಲಾಯಿತು. ೧೯೨೮–೧೯೩೮ನೇ ಇಸವಿಗಳ ನಡುವೆ ಆಸ್ಪತ್ರೆಯನ್ನು ಪುನರ್ವ್ಯವಸ್ಥೆಗೊಳಿಸಿ, ಅಚ್ಚುಕಟ್ಟಿನಿಂದ ಅದು ಕೆಲಸಮಾಡುವಂತೆ ನೋಡಿದರು.

ಕಂಪೆನಿ ಸರಕಾರದ ಕರುಣೆ

ಹೀಗೆ ಕಂಪೆನಿ ಸರಕಾರದ ಕಡೆಯಿಂದ ಆಧುನಿಕ ವೈದ್ಯ ವಿಜ್ಞಾನದ ತಳಹದಿಯ ಮೇಲೆ ಕೆಲಸ ಮಾಡುವ ಆಸ್ಪತ್ರೆ ನಮ್ಮ ರಾಜ್ಯದಲ್ಲಿ ಪ್ರಥಮತಃ ಸ್ಥಾಪಿಸಲ್ಪಟ್ಟಿತು. ಕಂಪೆನಿಯವರು ತಮ್ಮ ಸೈನಿಕರ ಆರೋಗ್ಯ ಹಾಗೂ ಚಿಕಿತ್ಸೆಗಳಿಗೋಸ್ಕರ ತಮ್ಮವೇ ಡಾಕ್ಟರರನ್ನು ಕರೆಸಿಕೊಂಡರು. ಆಸ್ಪತ್ರೆಯ ಮೊದಲನೇಯ ಸರ್ಜನ ಹಾಗೂ ವೈದ್ಯರಾಗಿ ಫಿಲಿಪ್ ಬ್ರ್ಯಾಡ್‌ಫೋರ್ಡ ಎಂಬ ಮಹನೀಯರು ಕೆಲಸ ಮಾಡಿದರು. ಆ ಕಾಲದಲ್ಲಿ ತುಂಬ ಹೆಸರು ಪಡೆದ ಇನ್ನೊಬ್ಬ ಸರ್ಜನ ಡಾ. ಬಕ್ಲೆ. ಇವರ ಸ್ಮಾರಕವನ್ನು ಈಗಲೂ ಮದ್ರಾಸು ಮೆಡಿಕಲ್ ಕಾಲೇಜಿನ ಮುಂದುಗಡೆ ನೋಡುತ್ತೇವೆ.

ಈ ಸರ್ಜನರು ಇಂಗ್ಲಂಡಿನಿಂದ ಬರುವಾಗಲೇ ತಮಗೆ ಸಹಾಯ ಮಾಡುವುದಕ್ಕೆ ಜನರನ್ನೂ ತರುತಿದ್ದರು. ಇವರ ಸಂಖ್ಯೆ ಕೂಡ ಬಹಳ ಮಿತವಾಗಿದ್ದಿತು; ಸಂಬಳವೂ ಹಾಗೆಯೇ. ಆದರೆ ಆಸ್ಪತ್ರೆಯು ವಿಸ್ತಾರ ಹೊಂದಿದಂತೆಲ್ಲ ಸಹಾಯಕರ ಆವಶ್ಯಕತೆಯೂ ಹೆಚ್ಚಿಕೊಂಡಿತು. ಇಂಗ್ಲೆಂಡಿನಿಂದಲೇ ಸರ್ಜನರನ್ನು ಕರೆಸಿಕೊಂಡರೂ ಸಹಾಯಕರಾಗಿ ಕೆಲಸ ಮಾಡಲು ಭಾರತೀಯರನ್ನು ಸೇರಿಸಿಕೊಳ್ಳುವುದು ಪ್ರಾರಂಭವಾಯಿತು. ಕಳೆದ ಶತಮಾನದ ಆದಿಯಲ್ಲಿ ಎರಡು ಸಹಾಯಕ ವರ್ಗಗಳಿದ್ದವು. ಐರೋಪ್ಯರು ಹಾಗು ಆಂಗ್ಲೊ ಇಂಡಿಯನ್ನರದೊಂದು ವರ್ಗ–ಭಾರತೀಯರದು ಇನ್ನೊಂದು ವರ್ಗ. ಭಾರತೀಯರ ದರ್ಜೆ ಕೆಳಗೆಯೇ ಇದ್ದಿತು. ಇವರಿಗೆ ಕ್ರಮಬದ್ಧವಾದ ಸಂಬಳವಿಲ್ಲ-ವಿದ್ಯಾರ್ಥಿವೇತನದ ರೂಪದಲ್ಲಿ ಸ್ವಲ್ಪ ರೂಪಾಯಿ ಕೊಡುತಿದ್ದರು. ಇಲ್ಲಿಯೂ ಭಾರತೀಯರಿಗೆ ದೊರೆಯುತಿದ್ದ ವೇತನ ಐರೋಪ್ಯರಿಗಿಂತ ಕಡಮೆ. ಇವರಿಗೆ ಕ್ರಮಬದ್ಧವಾದ ಶಿಕ್ಷಣ ನೀಡುತ್ತಿರಲಿಲ್ಲ. ಮುಖ್ಯ ಸರ್ಜನರೊಂದಿಗೆ ಕೂಡಿ ಕೆಲಸ ಮಾಡುವಾಗ ಯಾರು ಸೂಕ್ಷ್ಮ ಬುದ್ಧಿಯವರೂ ಚುರುಕು ನಡತೆಯವರೂ ಆಗಿ ಕಂಡುಬಂದರೋ ಅವರಿಗೆ ಮುಂದೆ ಬರಲು ಅವಕಾಶ ಕೊಡುತಿದ್ದರು.

ಆಸ್ಪತ್ರೆಯ ಚಟುವಟಿಕೆ ನಿಧಾನವಾಗಿ ಸೈನಿಕರಿಂದ ನಾಗರಿಕರ ಯೋಗಕ್ಷೇಮದತ್ತ ವ್ಯಾಪಿಸಿದಾಗ—ವೈದ್ಯ ವಿಜ್ಞಾನದಲ್ಲಿ ಅಭಿರುಚಿಯುಳ್ಳವರಿಗೆ ಯೋಗ್ಯ ಶಿಕ್ಷಣ ಕೊಡುವ ಪದ್ಧತಿಯನ್ನೂ ತೊಡಗಿದರು. ಪ್ರಾಧ್ಯಾಪಕರು ನೇಮಕಗೊಂಡು ಅವರಿಂದ ಶಾಸ್ತ್ರೀಯ ಅಭ್ಯಾಸ ಕೊಡಲು ವ್ಯವಸ್ಥೆಯಾಯಿತು. ಹೀಗೆ ಅಸ್ತಿತ್ವಕ್ಕೆ ಬಂದ ಮದ್ರಾಸು ಮೆಡಿಕಲ್ ಕಾಲೇಜು ೧೮೫೭ನೇ ಇಸವಿಯಲ್ಲಿ ವಿಶ್ವವಿದ್ಯಾಲಯದ ಕಕ್ಷೆಗೆ ಒಳಪಟ್ಟಿತು.

ವೈದ್ಯಕೀಯ ಶಿಕ್ಷಣ

ಸರಕಾರದವರು ನಾಗರಿಕರಿಗೂ ಸೈನಿಕರಷ್ಟೆ ವೈದ್ಯ ವಿಜ್ಞಾನದ ಪ್ರಯೋಜನ ದೊರೆಯ ಬೇಕೆನ್ನುವ ಕುರಿತು ಆಸ್ಥೆ ತೋರಿಸಿ, ಕಾಲೇಜಿಗೆ ಸೇರಲು ನಾಗರಿಕ ವಿದ್ಯಾರ್ಥಿಗಳಿಗೂ ಅವಕಾಶಕೊಟ್ಟರು. ಆದರೆ ಇದಕ್ಕೆ ಪ್ರಾರಂಭದಲ್ಲಿ ದೊರೆತ ಪ್ರೋತ್ಸಾಹ ಅತ್ಯಲ್ಪ. ಕೆಲವು ಆಂಗ್ಲೋ ಇಂಡಿಯನ್ನರೂ ಬ್ರಾಹ್ಮಣೇತರ ಹಿಂದುಗಳೂ ಕಾಲೇಜುಸೇರಿದರೂ ೧೮೬೮ನೇ ಇಸವಿಯ ವರೆಗೂ ಹೆಣವನ್ನು ಸಿಗಿಯುವುದು ಮುಂತಾದ ಕೆಲಸಗಳ ಕುರಿತಾದ ಜುಗುಪ್ಸೆಯ ಕಾರಣದಿಂದ ಬ್ರಾಹ್ಮಣ ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜು ಸೇರುವುದಕ್ಕೆ ಹೇಸುತಿದ್ದರು. ಕೊನೆಗೊಮ್ಮೆ ವದಂತಿಯ ನಮಾರಂಭದ ಕಾಲದಲ್ಲಿ ಸುಶ್ರುತಸಂಹಿತೆಯಲ್ಲಿಯೂ ಶಸ್ತ್ರ ಚಿಕಿತ್ಸೆಯ ಉಲ್ಲೇಖವಿರುವುದನ್ನು ಎತ್ತಿ ಹೇಳಿ, ಪ್ರಾಚೀನ ಪರಂಪರೆಗೆ ಶಸ್ತ್ರ ಚಿಕಿತ್ಸೆ ವಿರುದ್ಧವಾಗಿಲ್ಲವೆಂದು ಪಿಚಿತಗೊಳಿಸಲು ಬ್ರಾಹ್ಮಣ ತರುಣರು ಒಬ್ಬೊಬ್ಬರಾಗಿಯೇ ಮೆಡಿಕಲ್ ಕಾಲೇಜನ್ನು ಸೇರಿದರು. ೧೮೭೫ನೇ ವರ್ಷದಲ್ಲಿ ಒಟ್ಟು ಹದಿನಾರು ಜನರಲ್ಲಿ ಮೂರಂಶ ಯುರೋಪಿಯನರೂ ಆಂಗ್ಲೊ ಇಂಡಿಯನರೂ ಆಗಿದ್ದರು. ಉಳಿದವರಲ್ಲಿ ಐದು ಬ್ರಾಹ್ಮಣರು, ೬೦ ಬ್ರಾಹ್ಮಣೇತರರು. ೩೬ ಭಾರತೀಯ ಕ್ರಿಸ್ತರು, ೨ ಪಾರಸೀಗಳು ಮತ್ತು ೩ ಮುಸಲ್ಮಾನರು ಇದ್ದರು.

ಈಗ ಮದ್ರಾಸಿನಲ್ಲಿ ಸರಕಾರದ ಡೆಯಿಂದ ಮದ್ರಾಸು ಮೆಡಿಕಲ್ ಕಾಲೇಜು ಹಾಗೂ ಸ್ಟೇನ್ಲಿ ಮೆಡಿಕಲ್ ಕಾಲೇಜು ಎಂಬ ಎರಡು ವೈದ್ಯಕೀಯ ಅಭ್ಯಾಸ ಕೇಂದ್ರಗಳು ನಡೆಸಲ್ಪಡುತ್ತವೆ. ಮದ್ರಾಸು ಸರಕಾರದವರು ಈಚೆಗೆ ಮಧುರೆಯಲ್ಲಿಯೂ ಒಂದು ಮೆಡಿಕಲ್ ಕಾಲೇಜನ್ನು ತೆರೆಯಲು ನಿರ್ಧರಿಸಿದ್ದು, ಅಲ್ಲಿ ಕಟ್ಟಡಗಳ ರಚನೆ ಭರದಿಂದ ನಡೆಯುತ್ತಿದೆ. ಖಾಸಗಿ ಕ್ಷೇತ್ರದಲ್ಲಿ ಅನುಕರಣೀಯವಾದ ಪ್ರಯತ್ನವೊಂದು ಉಡುಪಿಗೆ ಸಮೀಪದ ಮಣಿಪಾಲದಲ್ಲಿ ಈ ವರ್ಷ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿದೆ.

ಸರಕಾರ ನಡೆಸುವ ಈ ಕಾಲೇಜುಗಳಲ್ಲಿ ಉಚ್ಚ ಮಟ್ಟದ ವೈದ್ಯಕೀಯ ಶಿಕ್ಷಣದ ವ್ಯವಸ್ಥೆ ಇದೆಯಲ್ಲದೆ, ಸಂಶೋಧನೆಗಳನ್ನು ನಡೆಸಲು ಆಗತ್ಯವಿರುವ ಉಪಕರಣಗಳೂ ಬೇರೆ ಏರ್ಪಾಡುಗಳೂ ಇರುತ್ತವೆ. ಸಂಶೋಧಕರಿಗೆ ಅತ್ಯಂತ ಉಪಯುಕ್ತವಾದ ಆಧುನಿಕ ಸಲಕರಣೆಗಳು ಇಲ್ಲಿರುವುದರಿಂದ ಭಾರತದ ಮೂಲೆ ಮೂಲೆಯಿಂದಲೂ ತಜ್ಞರು ಇಲ್ಲಿಗೆ ಆಗಮಿಸುವುದು ಸಂಪ್ರದಾಯ.

'ಮದ್ರಾಸು ನಗರದಲ್ಲಿ ಸರಕಾರದ ಕಡೆಯಿಂದ ಎಂಟು ದೊಡ್ಡ ಹಾಗೂ ವಿವಿಧ ರೀತಿಯಲ್ಲಿ ಪ್ರಯೋಜನವನ್ನುಂಟುಮಾಡುವ ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟಿವೆ. ಜನರಲ್ ಆಸ್ಪತ್ರೆಯಲ್ಲಿರುವ ಬರ್ನಾರ್ಡ್ ಇನ್‌ಸ್ಟಿಟ್ಯೂಟ್ ಆಫ್ ರೇಡಿಯಾಲಜಿ ಎಂಬ ವಿಭಾಗವು ಕ್ಷಕಿರಣಗಳ ಉಪಯೋಗ ವಿಧಾನದಲ್ಲಿ ವಿಜ್ಞಾನ ಇದುವರೆಗೆ ಮಾಡಿದ ಪ್ರಗತಿಯ ಸಂಪೂರ್ಣ ಲಾಭವನ್ನು ಡಾಕ್ಟರುಗಳಿಗೂ ರೋಗಿಗಳಿಗೂ ನೀಡುತ್ತಿದೆ. ಗುಹ್ಯ ವ್ಯಾಧಿಗಳು, ಹೆರಿಗೆ ಸಂಬಂಧದ ಕಾಯಿಲೆಗಳು, ಕಣ್ಣು, ಚರ್ಮ ಮುಂತಾದುವಕ್ಕೆ ಬರುವ ರೋಗಗಳ, ಉಚ್ಛ್ವಾಸ ಮುಂತಾದ ಹಾನಿಕರ ಬೇನೆಗಳು—ಎಲ್ಲದಕ್ಕೂ ಉತ್ತಮ ಚಿಕಿತ್ಸೆಯ ಏರ್ಪಾಡನ್ನು ಮದ್ರಾಸು ನಗರದ ಈ ಆಸ್ಪತ್ರೆಗಳು ಒದಗಿಸುತ್ತವೆ.

ತರತರದ ಸಹಾಯ

ಇವಲ್ಲದೆ — ಸರಕಾರದ ಕಡೆಯಿಂದ ಪ್ರತಿಯೊಂದೂ ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾ ಆಸ್ಪತ್ರೆಯೊಂದು ಕೆಲಸಮಾಡುತ್ತಿದೆ. ಜಿಲ್ಲಾ ವೈದ್ಯಾಧಿಕಾರಿಯೊಬ್ಬರು ಕಾರ್ಯಾಂಗ ಹಾಗೂ ಆಡಳಿತದ ಮೇಲ್ವಿಚಾರಣೆಯನ್ನು ನಡೆಸುವರು. ತಾಲೂಕು ಹಾಗೂ ಹಳ್ಳಿಗಳಲ್ಲಿಯೂ ಆಸ್ಪತ್ರೆಗಳು ಇವೆ—ಸ್ಥಳೀಯ ಸಂಸ್ಥೆಗಳೂ ಸರಕಾರವೂ ಕೂಡಿಯೇ ನಡೆಸುವ ಆಸ್ಪತ್ರೆಗಳೂ ಇವೆ. ಭೋರ್ ಸಮಿತಿಯ ಶಿಫಾರಸಿನಂತೆ ಹಳ್ಳಿಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ತೆರೆಯಲು ಸರಕಾರ ಮಲಬಾರು ಕೊಯಮುತ್ತೂರು ಮತ್ತು ಉತ್ತರ ಆರ್ಕಾಟು ಜಿಲ್ಲೆಗಳಲ್ಲಿ ಪ್ರಯತ್ನಿಸಿವೆ. ಪಂಚವಾರ್ಷಿಕ ಯೋಜನೆಯಲ್ಲಿ ಹಳ್ಳಿಯ ಆರೋಗ್ಯ ಹಾಗೂ ವೈದ್ಯಕೀಯ ಸೌಲಭ್ಯಗಳ ಕಡೆಗೆ ವಿಶೇಷ ಗಮನ ಪೂರೈಸಬೇಕೆಂದು ಹೇಳಿದೆ. ಇದರನ್ವಯ ಪ್ರತಿಯೊಂದೂ ಜನಪದ ಅಭಿವೃದ್ಧಿ ವಲಯದಲ್ಲಿ ಆರೋಗ್ಯ ಕೇಂದ್ರಗಳು ತೆರೆಯಲ್ಪಟ್ಟು ಕೆಲಸ ಮಾಡುತ್ತಿವೆ.

ರೋಗ ಪರೀಕ್ಷೆ ಮಾಡುವುದಕ್ಕೆ ಹಾಗೂ ಉತ್ತಮ ವೈದ್ಯಕೀಯ ಸಹಾಯವನ್ನು ನೀಡುವುದಕ್ಕೆ ಉದ್ದೇಶಿಸಿ ಪ್ರತಿಯೊಂದೂ ಜಿಲ್ಲಾ ಆಸ್ಪತ್ರೆಯಲ್ಲಿ ಕ್ಷಕಿರಣದ ಸೌಲಭ್ಯ ಒದಗಿಸಲ್ಪಟ್ಟಿದೆ. ಕೆಲವು ತಾಲೂಕು ಕೇಂದ್ರಗಳಲ್ಲಿಯೂ ಕ್ಷಕಿರಣದ ಉಪಕರಣವಿದೆ. ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳ ಅಭ್ಯಾಸಕ್ಕೋಸ್ಕರ, ಮಂಗಳೂರಿನ ಆಸ್ಪತ್ರೆಗಳ ವಿಸ್ತರಣಾ ಕಾರ್ಯವೂ ಭರದಿಂದ ನಡೆಯುತ್ತಿದೆ.

ಭಾರತೀಯರನ್ನು ಬಹುವಾಗಿ ಪೀಡಿಸುವ ಕ್ಷಯ ರೋಗದ ನಿವಾರಣಾ ಕಾರ್ಯದಲ್ಲೂ ಸರಕಾರ ಪ್ರಯತ್ನಶೀಲವಾಗಿದೆ. ತಾಂಬರಮಿನಲ್ಲಿ ೪೫೦ ಹಾಸಿಗೆಗಳುಳ್ಳ ಆರೋಗ್ಯ ಧಾಮವೊಂದಿದೆ. ತಿರುಚಿರಪಳ್ಳಿಯ ಬಳಿ ಪೆರುಂದುರೈಯಲ್ಲಿ ಹಾಗೂ ತಂಜಾವೂರಿನ ಬಳಿ ಸೆಂಗಿಪಟ್ಟಿಯಲ್ಲಿಯೂ ಕ್ಷಯ ರೋಗದ ನಿವಾರಣೋದ್ದೇಶದಿಂದ ಆರೋಗ್ಯಧಾಮಗಳು ತೆರೆಯಲ್ಪಟ್ಟಿವೆ. ಈಚೆಗೆ ಮಂಗಳೂರಿನಲ್ಲಿಯೂ ಉತ್ತರ ಆರ್ಕಾಟಿನಲ್ಲಿಯೂ ಆರೋಗ್ಯಧಾಮಗಳು ಕಟ್ಟಲ್ಪಡುತ್ತಿವೆ. ಕ್ಷಯ ರೋಗ ಬಾರದಂತೆ ಬಿಸಿಜಿಮಾಲು ಹಾಕಿಸುವುದಕ್ಕೂ ಸರಕಾರ ವ್ಯವಸ್ಥೆಮಾಡಿದೆ.

ಕುಷ್ಠರೋಗ ನಿವಾರಣೆಗೆ ಚೆಂಗಲ್ಪೇಟೆಯ ಬಳಿ ತಿರುಮಣಿಯಲ್ಲಿ ಒಂದು ಆರೋಗ್ಯಧಾಮವಿದೆಯಲ್ಲದೆ ಮಕ್ಕಳಿಗೋಸ್ಕರ ಸೇಲಂ ಜಿಲ್ಲೆಯ ಎತ್ತಾಪುರದಲ್ಲಿ ಇನ್ನೊಂದು ಆರೋಗ್ಯಧಾಮವೂ ತೆರೆಯಲ್ಪಟ್ಟಿದೆ. ಇದರಂತೆ ಕಣ್ಣುಗಳ ಬೇಂಕು, ರಕ್ತದ ಬೇಂಕು ಮುಂತಾದವುಗಳ ವ್ಯವಸ್ಥೆಯೂ ಚೊಕ್ಕ ರೀತಿಯಲ್ಲಿ ನಡೆಯುತ್ತಿದೆ. ಗಿಂಡಿಯಲ್ಲಿರುವ ದಿ ಕಿಂಗ್ಸ್ ಇನ್‌ಸ್ಟಿಟ್ಯೂಟ್ ಎಂಬುದು ಭಾರತದಲ್ಲಿಯೇ ಹೆಸರುವಾಸಿಯಾದ ವೈದ್ಯಕೀಯ ವಿಜ್ಞಾನದ ಸಂಶೋಧನಾ ಕೇಂದ್ರ. ಇಲ್ಲಿ ಲಾಕು ಮುಂತಾದ ಔಷಧದ್ರವ್ಯಗಳೂ ತಯಾರಿಸಲ್ಪಡುತ್ತವೆ.

ಸರಕಾರದ ಪ್ರಯತ್ನದಷ್ಟೇ ಪ್ರಶಂಸನೀಯವಾದ ಕೆಲಸವನ್ನು ಕ್ರೈಸ್ತ ಮಿಶನರಿಗಳೂ ಈ ರಾಜ್ಯದಲ್ಲಿ ಮಾಡಿದ್ದಾರೆ. ಪ್ರತಿಯೊಂದು ಮುಖ್ಯ ಪಟ್ಟಣದಲ್ಲಿ ಕ್ರೈಸ್ತ ಮಿಶನರಿಗಳ ಮೇಲ್ವಿಚಾರದಲ್ಲಿ ಉತ್ತಮ ವೈದ್ಯಕೀಯ ಸಹಾಯವನ್ನು ಕೊಡುವ ಆಸ್ಪತ್ರೆಗಳನ್ನು ನಾವು ಕಾಣುತ್ತೇವೆ.

Visit
K. R. K. SHET DIAMOND MART
Opposite Government College, MANGALORE.
For all your requirements in Diamonds and Jewellery Lucky Birth Stones are also available.
Prop: K. K. R. SHET.

ಆಹಾರ ವಲಯಗಳ ಪುನರ್ಘಟನೆ

ನವಣೆಗೆ ಅನಿರ್ಬಂಧ ಸಾಗಾಟದ ಅವಕಾಶ

ನಿಯಂತ್ರಣವನ್ನು ಕಳೆದ ವರ್ಷ ಕಿತ್ತೊಗೆಯುವಾಗ, ಮದ್ರಾಸ್ ಸರಕಾರವು ರಾಜ್ಯವನ್ನು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿ, ಒಂದು ಪ್ರದೇಶದಿಂದ ಇನ್ನೊಂದಕ್ಕೆ ಆಹಾರ ಧಾನ್ಯಗಳ ಸಾಗಾಟವಾಗದಂತೆ ನಿರ್ಬಂಧವನ್ನು ಹೇರಿದ್ದಿತು. ಆದರೆ, ಆಂಧ್ರ ರಾಜ್ಯವು ಅಸ್ತಿತ್ವಕ್ಕೆ ಬಂದುದರಿಂದ ಆಹಾರ ವಿಷಯದಲ್ಲಿ ಉಳಿತಾಯದ ಜಿಲ್ಲೆಗಳಲ್ಲಿ ಹೆಚ್ಚಿನವು ಕೈಬಿಟ್ಟು ಹೋದವು. ಮದ್ರಾಸು ರಾಜ್ಯದ ಕೊರತೆಯನ್ನು ದೂರೀಕರಿಸುವುದಕ್ಕೋಸ್ಕರ ಆಂಧ್ರ ರಾಜ್ಯವು ಎರಡು ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಪೂರೈಸಲು ಒಪ್ಪಿಕೊಂಡಿದೆ ಆಹಾರ ವಿಷಯದಲ್ಲಿ ಮದ್ರಾಸು ರಾಜ್ಯ ಏರ್ಪಡಿಸಿದ್ದ ಪ್ರಾದೇಶಿಕ ವಿಭಾಗ ಪದ್ಧತಿಯೊಂದಿಗೆ ಸಹಕರಿಸಿಕೊಂಡು ಹೋಗಲು ಆದೀಗ ಇಷ್ಟಪಡುವುದಿಲ್ಲ. ಹೀಗಾದುದರಿಂದ, ಈಗಿನ ಮದ್ರಾಸು ರಾಜ್ಯದಲ್ಲಿ ಆಹಾರ ವಲಯಗಳನ್ನು ಪುನರ್ಘಟಿಸುವ ಅವಶ್ಯಕತೆಯುಂಟಾಯಿತು. ಸರಕಾರದವರು ರಾಜ್ಯದ ಹಾಗೂ ಭಾರತದ ಸಾಮಾನ್ಯ ಆಹಾರ ಪರಿಸ್ಥಿತಿ ತೃಪ್ತಿಕರವಿರುವುದನ್ನು ಗಮನಿಸಿ, ನವಣೆಯ ಮೇಲಿನ ಸಾಗಾಟದ ನಿರ್ಬಂಧವನ್ನು ಸಂಪೂರ್ಣ ಸಡಲಿಸಿರುವರು. ಈ ಧಾನ್ಯವನ್ನು ಇಡೀ ರಾಜ್ಯದಲ್ಲಿ ಎಲ್ಲಿ ಬೇಕೆಂದರಲ್ಲಿಗೆ ಕೊಂಡುಹೋಗಿ ಮಾರಾಟಮಾಡಬಹುದು. ಅಕ್ಕಿ ಮತ್ತು ಭತ್ತದ ಮಟ್ಟಿಗೆ ಇನ್ನೂ ಪ್ರಾದೇಶಿಕ ನಿರ್ಬಂಧವಿದೆ: ಪುನರ್ನಿರ್ಮಿತ, ನಿರ್ಧಾರದಂತೆ ಆಹಾರ ವಲಯಗಳು—

(೧) ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳನ್ನು ಬಿಟ್ಟುಳಿದ ರಾಜ್ಯದ ಎಲ್ಲ ಜಿಲ್ಲೆಗಳು ಒಟ್ಟಾಗಿ ಪೂರ್ವವಲಯ.

(೨) ಮಲಬಾರು, ದಕ್ಷಿಣಕನ್ನಡದ ಹೊಸದುರ್ಗ ಉಪತಾಲೂಕು ಮತ್ತು ಕಾಸರಗೋಡಿನ ಬೇರಿಯ ಮತ್ತು ಕೋಡತ್ ಗ್ರಾಮಗಳು ಸೇರಿ ಮೊದಲನೇ ಪಶ್ಚಿಮವಲಯ.

(೩) ದಕ್ಷಿಣ ಕನ್ನಡ ಜಿಲ್ಲೆಯ ಉಳಿದಂಶ ಎರಡನೇ ಪಶ್ಚಿಮವಲಯ.

ಮೊದಲನೇ ಪಶ್ಚಿಮವಲಯಕ್ಕೆ ಸೇರಿದ ಮಲಬಾರು ಮತ್ತು ಹೊಸದುರ್ಗ ಉಪತಾಲೂಕಿನ ಗ್ರಾಮಗಳು ಆಹಾರ ವಿಷಯದಲ್ಲಿ ತೀವ್ರ ಕೊರತೆಯನ್ನು ಅನುಭವಿಸುತ್ತಿವೆ. ರಾಜ್ಯಸರಕಾರದ ಸಂಗ್ರಹದಿಂದಲೇ ಇಲ್ಲಿ ದವಸಧಾನ್ಯದ ಪೂರೈಕೆಯಾಗಬೇಕಾಗುತ್ತದೆ.

ಮದ್ರಾಸಿನ ಮುಂಗಡ ಪತ್ರ

ಮದ್ರಾಸು ನಗರದಲ್ಲಿ ಈಗ ಶಾಸನ ಸಭೆಯ ಅಧಿವೇಶನ ನಡೆಯುತ್ತಿದೆ. ದಿನಾಂಕ ೧೪ರಂದು ಈ ಸಭೆ ಸೇರಿದಾಗ ಅರ್ಥ ಸಚಿವರಾದ ಶ್ರೀ ಸುಬ್ರಹ್ಮಣ್ಯಮರು ಈ ವರ್ಷದ ಉತ್ತರಾರ್ಧದ ಕುರಿತು ಷಾಣ್ಮಾಸಿಕ ಮುಂಗಡ ಪತ್ರವನ್ನು ಸಭೆಯ ಮುಂದೆ ಮಂಡಿಸಿದರು. ಆಂಧ್ರ ರಾಜ್ಯವನ್ನು ಪ್ರತ್ಯೇಕಿಸುವ ಕಾಲಕ್ಕೆ ಕೂಡಿಸಿದ ಅಂಕೆ ಸಂಖ್ಯೆಗಳು ಆಂಧ್ರವು ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ವಾರ್ಷಿಕ ಕೊರತೆಯನ್ನು ಅನುಭವಿಸುತ್ತಿದೆಯೆಂದು ಹೇಳಲ್ಪಟ್ಟಿತ್ತು—ಇದರನ್ವಯ ಮದ್ರಾಸಿಗೆ ೧೯೫೨ನೇ ಅಕ್ಟೋಬರದಿಂದ ೧೯೫೪ನೇ ಮಾರ್ಚಿ ಅಖೈರಿ ವರೆಗಿನ ಆರು ತಿಂಗಳ ಮಟ್ಟಿಗೆ ಒಂದು ಕೋಟಿ ರೂಪಾಯಿಗಳ ಉಳಿತಾಯವನ್ನು ಮುಂಗಡ ಪತ್ರದಲ್ಲಿ ನಿರೀಕ್ಷಿಸುವುದು ಸ್ವಾಭಾವಿಕ. ಆದರೆ ಅರ್ಥ ಸಚಿವರು ಮುಂದಿಟ್ಟ ಅಂದಾಜು ನಮ್ಮ ನಿರೀಕ್ಷೆಗಿಂತ ತೀರ ಕಡಿಮೆ ಇದೆ — ಈ ಷಾಣ್ಮಾಸಿಕ ಅವಧಿಯಲ್ಲಿ ೨೩೭೧ ಲಕ್ಷ ರೂಪಾಯಿಗಳ ಆಯವೂ ೨೩೪೮ ಲಕ್ಷ ರೂಪಾಯಿಗಳ ವ್ಯಯವೂ ಸಂಭವಿಸಿ, ಕೇವಲ ೨೩ ಲಕ್ಷ ರೂಪಾಯಿಗಳ ಉಳಿತಾಯವಾದೀತೆಂದು ಸುಬ್ರಹ್ಮಣ್ಯಮರು ಹೇಳಿರುವರು. ಅರ್ಥ ಸಚಿವರ ಭಾಷಣವನ್ನು ವಿಮರ್ಶಿಸಿದರೆ, ಅವರು ಕೆಲವು ಆದಾಯದ ಬಾಬುಗಳನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲವೆಂದು ವ್ಯಕ್ತವಾಗುತ್ತದೆ. ಕಡಿಮೆ ಉಳಿತಾಯ ತೋರುವುದಕ್ಕೆ ಇನ್ನೊಂದು ಕಾರಣ— ಮದ್ರಾಸು ರಾಜ್ಯ ಮತ್ತು ಆಂಧ್ರ ಹಾಗೂ ಮೈಸೂರು ರಾಜ್ಯಗಳೊಳಗೆ ಸಾಲ ಮತ್ತು ಮೂಲಗಳ ಹಂಚುವಿಕೆ ಇನ್ನೂ ಕೊನೆಯದಾಗಿ ಮುಗಿದಿಲ್ಲ. ವಿಭಜನೆಯ ಈ ಅಂಶ ಪೂರ್ಣಗೊಂಡಾಗ ಮದ್ರಾಸಿನ ಆರ್ಥಿಕ ಪರಿಸ್ಥಿತಿಯ ಸಮಗ್ರ ಚಿತ್ರವನ್ನು ಕೊಡಲು ಸಾಧ್ಯವಾದೀತು. ಬಜೆಟು ಭಾಷಣದಲ್ಲಿ ಅರ್ಥಸಚಿವರು ವ್ಯಯದ ಅಂಶವನ್ನು ಪ್ರಸ್ತಾಪಿಸುತ್ತಾ ಆಂಧ್ರ ರಾಜ್ಯ ಪ್ರತ್ಯೇಕವಾದ ನಂತರ ಮದ್ರಾಸು ರಾಜ್ಯಕ್ಕೆ ಪಂಚವಾರ್ಷಿಕ ಯೋಜನೆಯಂತೆ ೧೪೦ ಕೋಟಿ ರೂಪಾಯಿಗಳ ಬದಲು ೭೯ ಕೋಟಿ ರೂಪಾಯಿಗಳ ಯೋಜನೆ ಒಂದಿದೆಯೆಂದೂ, ಜನಸಂಖ್ಯೆಯ ಪ್ರಮಾಣಕ್ಕೆ ಅನುಸಾರವಾಗಿ ಇದು ಕಡಿಮೆ ಕಂಡುಬಂದುದರಿಂದ ಅಮರಾವತಿ ಮತ್ತು ಮೈಸ್ಟ್ರೈಯೋಜನೆಗಳನ್ನು ಕೈಗೊಳ್ಳುವಂತೆ ಯೋಜನಾ ಆಯೋಗದ ಮನವೊಲಿಸಿರುವುದಾಗಿಯೂ ಹೇಳಿದರು. ಇದಲ್ಲದೆ ನಡುತರಗತಿಯ ನೀರಾವರಿಯೋಜನೆಗಳನ್ನು ತೆಗೆದುಕೊಳ್ಳುವ ಇರಾದೆ ಸರಕಾರಕ್ಕಿದೆಯೆಂದೂ ಅವರು ನುಡಿದರು.

ಅಭಿವೃದ್ಧಿಗೋಸ್ಕರ ವ್ಯಯ

ಮುಂಗಡ ಪತ್ರದಲ್ಲಿ ೬೮೬ಲಕ್ಷ ರೂಪಾಯಿಗಳಷ್ಟು ದೊಡ್ಡ ಮೊತ್ತವನ್ನು ಬಂಡವಾಳ ವಿನಿಯೋಗದ ಕೆಲಸಗಳಿಗೋಸ್ಕರ ವ್ಯಯಿಸಲಾಗುವುದೆಂದು ಹೇಳಿದೆ. ಇದರಲ್ಲಿ ೨೫೬ ಲಕ್ಷ ರೂಪಾಯಿ ನೀರಾವರಿಗೆ, ೩೫೪ಲಕ್ಷ ರೂಪಾಯಿ ವಿದ್ಯುಚ್ಛಕ್ತಿಗೆ, ೫೨ಲಕ್ಷ ರೂಪಾಯಿ ಕಟ್ಟಡಗಳಿಗೆ, ೧೨ಲಕ್ಷ ರೂಪಾಯಿ ಔದ್ಯೋಗಿಕ ಅಭಿವೃದ್ಧಿಗೆ ಮತ್ತು ೧೧ ಲಕ್ಷ ರೂಪಾಯಿ ವಶಪಡಿಸಿಕೊಂಡ ಭೂಮಿಗೆ ಪರಿಹಾರ ನೀಡುವುದಕ್ಕೆ ವಿನಿಯೋಗಿಸಲಾಗಿದೆ. ಈ ವರ್ಷ ಮದ್ರಾಸು ಸರಕಾರ ಎತ್ತಿದ ೫ತ್ತುಕೋಟಿ ರೂಪಾಯಿಗಳ ಸಾಲದಲ್ಲಿ ಉಳಿಕೆಯ ಮದ್ರಾಸು ರಾಜ್ಯಕ್ಕೆ ೬೧೭ ಲಕ್ಷ ರೂಪಾಯಿಗಳಷ್ಟು ಪಾಲು ದೊರೆತುದರಿಂದ — ಬಂಡವಾಳ ವೆಚ್ಚವನ್ನು ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾಡುವುದು ಸಾಧ್ಯವಾಯಿತು. ಆದರೂ ಔದ್ಯೋಗಿಕ ಪ್ರಗತಿಗೆ ೧೨ಲಕ್ಷ ರೂಪಾಯಿಗಳಷ್ಟು ಕಡಿಮೆ ಮೊತ್ತವನ್ನು ತೆಗೆದಿಟ್ಟದ್ದೂ ಕಡಿಮೆಯಾಯಿತೆಂದೇ ತೋರುತ್ತದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ — ಅನೇಕ ರೀತಿಯ ಅಭಿವೃದ್ಧಿ ಕೆಲಸಗಳಿಗೆ ಹಣವನ್ನು ವೆಚ್ಚಮಾಡುವ ವಿವರಗಳು ಕಂಡುಬಂದರೂ, ತಮಿಳುನಾಡಿನ ಕಡೆಗೆ ಕೊಡಲಾದಷ್ಟು ಅಧಿಕ ಗಮನ ಪೂರೈಸಲ್ಪಟ್ಟಿಲ್ಲವೆಂಬುದು ಸ್ಪಷ್ಟ. ಯೋಜನೆಗಳನ್ನು ಆಯಾ ಪ್ರದೇಶದ ಹಿನ್ನೆಲೆ, ಅನುಕೂಲತೆ ಮುಂತಾದವುಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ರಚಿಸಲಾಗುವುದು ನಿಜ. ಉಡುಪಿಯ ಪ್ರತಿನಿಧಿ ಶ್ರೀ ಟಿ. ಅನಂತ ಪೈಗಳು ಮುಂಗಡಪತ್ರವನ್ನು ಟೀಕಿಸುತ್ತಾ ನಮ್ಮ ಜಿಲ್ಲೆಯ ಮೂರು ನದಿಗಳಿಗೆ ಸೇತುವೆ ಹಾಕಿಸುವ ಕಡೆಗೆ ಸರಕಾರ ಏನೇನೂ ಮಹತ್ವ ಕೊಟ್ಟಿಲ್ಲವೆಂದು ಆಕ್ಷೇಪಿಸಿದರು. ರಾಜ್ಯದ ಇತರೆಡೆಯಲ್ಲಿರುವ ಚೆಲುವಾದ ರಸ್ತೆಗಳೊಂದಿಗೆ ನಮ್ಮ ಮಾರ್ಗಗಳನ್ನು ಹೋಲಿಸುವಾಗ—ಸರಕಾರ ಈ ಜಿಲ್ಲೆಯನ್ನು ಕಡೆಗಣಿಸುತ್ತಿರುವುದು ಭಾಸವಾಗುವುದೆಂದು ಅವರು ಅಭಿಪ್ರಾಯಪಟ್ಟರು. ಸಾರಿಗೆ ಸೌಕರ್ಯಗಳು ಹೆಚ್ಚಿಕೊಂಡರೆ—ಸಾಮಾಜಿಕ ಚಟುವಟಿಕೆಗಳು ಬಲಿಯುತ್ತವೆಂದು ಅವರು ಹೇಳಿದ್ದಲ್ಲದೆ— ಸರಕಾರದ ತೆರಿಗೆ ಧೋರಣದ ಆಮೂಲಾಗ್ರ ಪುನರ್ವಿಮರ್ಶೆಯಾಗಬೇಕೆಂದೂ ಅವರು ಒತ್ತಾಯಿಸಿದರು. ಇದಕ್ಕೆ ಸರಕಾರದ ಕಡೆಯಿಂದ ಆಶಾಜನಕ ಉತ್ತರ ಈಗ ದೊರೆಯದಿದ್ದರೂ— ನಮ್ಮ ಜಿಲ್ಲೆಯ ಆವಶ್ಯಕತೆಯ ತಿಳುವಳಿಕೆಯನ್ನು ಪುನಃ ಮಾಡಿಸಿಕೊಟ್ಟಂತಾಯಿತು.

ಒಕ್ಕಲುಹಿತ ಮಸೂದೆ

ಪ್ರಶ್ನೋತ್ತರ ವೇಳೆಯಲ್ಲಿ ನಮ್ಮ ಜಿಲ್ಲೆಯ ಮೊಗ್ರಾಲ, ವೆಂಕಟರಮಣ ಗೌಡ ಮತ್ತು ನಾರಾಯಣ ನಂಬಿಯಾರ ಇವರಿಗೆ ಉತ್ತರ ನೀಡುತ್ತ ಕಂದಾಯ ಮಂತ್ರಿ ಶ್ರೀ ಮಾಣಿಕ್ಯವೇಲು ನಾಯಕ್ಕರರು ದಕ್ಷಿಣಕನ್ನಡ ಜಿಲ್ಲೆಗೆ ತಕ್ಕುದಾದ ಒಕ್ಕಲುಹಿತ ಮಸೂದೆಯೊಂದನ್ನು ತರಬೇಕೆಂದು ಶಾಸನಸಭಾ ಸದಸ್ಯರು, ಜಿಲ್ಲಾ ಕಾಂಗ್ರೆಸು ಮತ್ತು ಇತರರಿಂದ ಒತ್ತಾಯದ ಬೇಡಿಕೆಗಳು ಬಂದಿವೆಯೆಂದೂ ಸರಕಾರವು ತೀವ್ರವಾಗಿ ಈ ವಿಷಯವನ್ನು ಪರ್ಯಾಲೋಚಿಸುತ್ತಿದೆಯೆಂದೂ ತಿಳಿಸಿದರು. ಈ ನಡುವೆ ಒಕ್ಕಲೆಬ್ಬಿಸುವುದನ್ನು ತಡೆಯಲು ಮಧ್ಯಂತರದ ಶಾಸನ ಕ್ರಮವನ್ನೇನಾದರೂ ಸರಕಾರ ತೆಗೆದುಕೊಳ್ಳುವುದೇ ಎಂದು ಮಂಗಳೂರಿನ ಪಾಯಸರು ಪ್ರಶ್ನಿಸಿದ್ದಕ್ಕೆ ಮುಖ್ಯಮಂತ್ರಿ ರಾಜಾಜಿಯವರು "ಇದಕ್ಕೆ ನಾವು ಕೂಡಲೇ ಗಮನ ಕೊಡುತ್ತೇವೆ" ಎಂದರು. ಕೃಷಿಕರಿಗೆ ಸಂರಕ್ಷಣೆ ಕೊಡುವ ವಿಷಯವು ಅತ್ಯಂತ ಮಹತ್ವದ್ದೂ ಅಗತ್ಯದ್ದೂ ಆಗಿರುತ್ತದೆ ಈ ವಿಷಯವನ್ನು ಇನ್ನೂ ಇನ್ನೂ ಹಿಂದಕ್ಕೆ ಹಾಕುವುದು ಸರಿಯಲ್ಲ-ಕಾಂಗ್ರೆಸ ಪಕ್ಷದಲ್ಲಿ ಒಡಕು ಉಂಟಾಗಿದ್ದ ಹೈದರಾಬಾದಿನ ಶಾಸನಸಭೆಯಲ್ಲಿ ಕೂಡ, ಮೊನ್ನೆತಾನೆ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಜಮೀನು ಮಸೂದೆ ಸೋಲು ಹೊಂದಿದಾಗ—ನಮ್ಮ ಜಿಲ್ಲೆಯ ಶಾಸನ ಸಭಾ ಸದಸ್ಯರೆಲ್ಲ ಒಮ್ಮತದಿಂದ ಒತ್ತಾಯಿಸುತ್ತಿರುವ ಈ ಮಸೂದೆ ತರಲು ವಿಳಂಬಿಸುವುದು ಯೋಗ್ಯವಲ್ಲ. ಹೈದರಾಬಾದು

ಶಾಂತ ವಾತಾವರಣದಲ್ಲಿ ಅತ್ಯಾಧುನಿಕ ಮಾದರಿಯ ಮೇಲ್ತರಗತಿಯ

—ವಸತಿ ಮತ್ತು ಭೋಜನಗೃಹ—

ಸ್ವಸ್ತಿಕ್ ಲೋಜ್

ಫಳನೀರು ರಸ್ತೆ, ಮಂಗಳೂರು.

- ಗಾಳಿ-ಬೆಳಕುಗಳಿದ್ದು ಸುಸಜ್ಜಿತವಾದ ಸಿಂಗಲ್ ಮತ್ತು ಡಬ್ಬಲ್ ಕೋಣೆಗಳು!
- ತೃಪ್ತಿಕರವಾದ ಸೇವೆ ಮತ್ತು ಸರ್ವಾನುಕೂಲತೆಗಳು!
- ಶಾಕಾಹಾರಿಗಳಿಗೆ ನುರಿತ ಬ್ರಾಹ್ಮಣ ಅಡಿಗೆ ಭಟ್ಟರಿಂದಲೇ ಭೋಜನ ಮತ್ತು ಉಪಾಹಾರ ತಯಾರಿಕೆ! ದರ ಸುಲಭ! ಸಂದರ್ಶಿಸಿ ಸಮಾಧಾನ ಪಡೆಯಿರಿ!!

ಮುಖ್ಯ ಪ್ರಕಟಣೆ

"**ಆನಂದ ಸುಧ**" ನಮ್ಮ ಆನಂದ ಸುಧೆ ಸಮಸ್ತ ಜನಗಳಿಗೆ ಬಲವನ್ನು ಬುದ್ಧಿ ಪುಷ್ಟಿಯನ್ನು ಕಲಿಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔ. ಸೀಸೆ ೧ಕ್ಕೆ ರೂ. ೩—0—0.

"**ಸ್ತ್ರೀ ಸುಧ**" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"**ಬಾಲ ಸುಧ**" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:

ಶ್ರೀಸಾಧ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಜನತೆಯೊಡನೆ ಅತಿ ನಿಕಟ ಸಂಪರ್ಕ

ಕಾಂಗ್ರೆಸ ಕಾರ್ಯಕರ್ತರ ನಿತ್ಯ ಕರ್ತವ್ಯ

ಶಾಸನಸಭೆಯಲ್ಲಿ ಕುಟುಂಬಹಿಡುವಳಿಯ ಪರಿಮಿತಿಯನ್ನು ನಿರ್ಧರಿಸುವ ಕ್ರಮದ ಬಗ್ಗೆ ಕಾಂಗ್ರೆಸ ಪಕ್ಷದಲ್ಲಿಯೇ ಭಿನ್ನಾಭಿಪ್ರಾಯವಿದ್ದಿತು. ಮುಖ್ಯಮಂತ್ರಿಗಳು ಬೇಸಾಯದ ಖರ್ಚು ತೆಗೆದು ೮೦೦ ರೂಪಾಯಿಗಳ ವಾರ್ಷಿಕ ಉತ್ಪನ್ನವಾಗುವ ಭೂಮಿಯನ್ನು ಕುಟುಂಬ ಹಿಡುವಳಿಯಾಗಿ ಪರಿಗಣಿಸಬೇಕೆಂದು ಹೇಳಿದ್ದರೆ—ಅವರ ವಿರೋಧಕರು ಕಂದಾಯದ ಆಧಾರದ ಮೇಲೆ—ಭೂಮಿಯ ನಿರ್ದಿಷ್ಟಪ್ರಮಾಣವನ್ನು ಕುಟುಂಬ ಹಿಡುವಳಿಯಾಗಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆನ್ನುತಿದ್ದರು. ಆದರೆ ತುಸು ವಿಚಾರಿಸಿದ ಪಕ್ಷದಲ್ಲಿ—ಮುಖ್ಯಮಂತ್ರಿಗಳ ನಿಲುಮೆಯೇ ನಿಜವಾದುದೆಂದೂ ಅದನ್ನು ಯೋಜನಾ ಆಯೋಗ ಪುರಸ್ಕರಿಸಿರುವುದೇ ನ್ಯಾಯವೆಂದೂ ಮನವರಿಕೆಯಾಗುತ್ತದೆ ಭೂಮಿಯು ವೈಶಾಲ್ಯವನ್ನು ಹೊಂದಿಕೊಂಡಲ್ಲ-ಅದರ ಯೋಗ್ಯತೆಯನ್ನು ಅವಲಂಬಿಸಿಉತ್ಪಾದನೆಯಾಗುತ್ತದೆ—ಆದುದರಿಂದ ಉತ್ಪಾದನಾ ಪ್ರಮಾಣದ ಮಿತಿಯೇ ಕುಟುಂಬ ಹಿಡುವಳಿಯ ಮಾನದಂಡವಾಗಬೇಕೆಂಬ ತತ್ವದಲ್ಲಿ ತಿರುಳಿದೆ. ಯೋಜನಾ ಆಯೋಗದ ಮನ್ನಣೆಯು ಇದಕ್ಕೆ ದೊರೆತಿರುವುದರಿಂದ ಎಲ್ಲ ರಾಜ್ಯಗಳಿಗೂ ಇದು ಅನುಕರಣೀಯವಾದ ಸೂತ್ರವಾದೀತು.

ರಾಜಾಜಿಗೆ ವಿರೋಧ

ಹೈದರಾಬಾದಿನಲ್ಲಿ ಕಾಂಗ್ರೆಸದಲ್ಲಿಯೇ ಬಂಡೆದ್ದ ಸದಸ್ಯರು ಹೊಲ ನಾಗುವಳಿ ಕಾಯಿದೆಗೆ ತಿದ್ದುಪಡಿ ಮಂಡಿಸಿ, ಮುಖ್ಯಮಂತ್ರಿಗಳ ನಿಲುಮೆಯನ್ನು ಟೀಕಿಸಿದರೂ—ಕೊನೆಗೆ ಸರಕಾರದ ಸೂಚನೆಗೆಯೇ ತಮ್ಮ ಬೆಂಬಲವನ್ನು ವ್ಯಕ್ತಗೊಳಿಸಿ ಮತದಾನ ಮಾಡಿದರು. ಇದು ಪಕ್ಷದ ಶಿಸ್ತಿನ ದೃಷ್ಟಿಯಿಂದ ತುಸು ಸಮಾಧಾನಕರವಾದ ವಿಷಯವೆನಿಸಿದರೂ—ಸಂಪೂರ್ಣ ತೃಪ್ತಿಹೊಂದುವಂತಿಲ್ಲ. ಮದ್ರಾಸಿನಲ್ಲಿ ಕೂಡ, ಮುಂಗಡ ಪತ್ರದ ಚರ್ಚೆಯ ಕಾಲದಲ್ಲಿ ರಾಜಾಜಿಯವರನ್ನು ಟೀಕಿಸಲು ಕೆಲವು ಕಾಂಗ್ರೆಸ ಸದಸ್ಯರೇ ಮುಂದಾದರು. ರಾಜಾಜಿಯವರ ಮೇಲೆ ಅವೇ ಹಿಂದಿನ ಆರೋಪಗಳು ಮರಳಿ ಹೊರಿಸಲ್ಪಟ್ಟವು—ರಾಜಾಜಿ ಸರ್ವಾಧಿಕಾರಿಯಂತೆ ನಡೆದುಕೊಳ್ಳುತ್ತಾರೆ—ಜಿಲ್ಲಾ ಕಲೆಕ್ಟರರು ಮುಂತಾದವರನ್ನು ಶಾಸನ ಸಭಾ ಸದಸ್ಯರು ಭೇಟಿಯಾಗಬಾರದೆಂದು ಹೇಳುತ್ತಾರೆ ಎಂದು ಈ ಸದಸ್ಯರು ಟೀಕಿಸಿದರು. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ರಾಜಾಜಿಯೇ ಮದ್ರಾಸಿನಲ್ಲಿ ಕಾಂಗ್ರೆಸ್ ಪಕ್ಷದ ನಾಯಕನಾಗಿರಬೇಕೆಂದು ಅಪೇಕ್ಷೆ ಪಟ್ಟು ಎಲ್ಲ ಶಾಸನ ಸಭಾದಸ್ಯರೂ ರಾಜಾಜಿಯವರನ್ನು ಬೆಂಬಲಿಸಬೇಕೆಂದು ಕೇಳಿದ್ದರೂ ಅಸಂತೃಪ್ತ ಸದಸ್ಯರಿಗೆ ಇದು ಸಮಾಧಾನ ತಂದಿಲ್ಲ. ಡಾ. ವರದರಾಜುಲು ನಾಯುಡುರವರು ಪ್ರಜಾಪ್ರಭುತ್ವ ಪದ್ಧತಿಗೆ ಒಪ್ಪದ ರೀತಿಯಲ್ಲಿ ರಾಜಾಜಿ ವರ್ತಿಸುತ್ತಿರುವರೆಂಬ ತಮ್ಮ ಅಭಿಪ್ರಾಯವನ್ನು ಇನ್ನೂ ಬದಲಿಸಿಲ್ಲ ತಮಿಳುನಾಡು ಕಾಂಗ್ರೆಸಿನ ಅಧ್ಯಕ್ಷ ಕಾಮರಾಜ ನಾಡರರು ಬಹಿರಂಗವಾಗಿ ರಾಜಾಜಿಯ ವಿರೋಧಕರನ್ನು ಖಂಡಿಸಲು ಇನ್ನೂ ಮನಸ್ಸು ಮಾಡಿಲ್ಲ. ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯೊಂದು ಅಧಿವೇಶನದ ಕಾಲದಲ್ಲಿಯೇ ನಡೆದಾಗ ಕಾಮರಾಜ ನಾಡರರೂ ಹಾಜರಿದ್ದರು. ಅಲ್ಲಿ ನಾಯಕನ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯವಿದ್ದಂತೆ ಕಂಡುಬರಲಿಲ್ಲವೆಂದು ವರದಿಗಳು ತಿಳಿಸುತ್ತವೆ. ಸ್ವತಃ ರಾಜಾಜಿಯೇ ವಿಷಯದ ಕುರಿತು ಯಾರಿಗೂ ಚಿಂತೆ ಇಲ್ಲೆಂಬಂತೆ ಈ ಸಭೆ ಕೆಲಸ ಮಾಡಿತೆಂದು ತಿಳಿಸಿದರು. ಜಿಲ್ಲಾ ಬೋರ್ಡುಗಳ ಸ್ಥಾನದಲ್ಲಿ ತಾಲೂಕು ಬೋರ್ಡುಗಳ ಸ್ಥಾಪನೆ, ರೈತರ ಸಾಲಕ್ಕೆ ತಾತ್ಕಾಲಿಕ ಸಂರಕ್ಷಣೆ ಕೊಡುವ ಈಗಿನ ಸುಗ್ರೀವಾಜ್ಞೆಯ ಸ್ಥಾನದಲ್ಲಿ ಹೊಸ ಮಸೂದೆ ಇವಕ್ಕೆ ಶಾಸನ ಸಭಾ ಸದಸ್ಯರು ಸಮ್ಮತಿಸಿದರೆಂದೂ ತಿಳಿದಿದೆ.

ಪಾರ್ಲಿಮೆಂಟಿನ ಕಾರ್ಯಕಲಾಪ

ಹೊಸ ದೆಹಲಿಯಲ್ಲಿ ಪಾರ್ಲಿಮೆಂಟಿನ ಅಧಿವೇಶನವೂ ಈಗ ಜರಗುತ್ತಿದೆ. ನೆಹರೂರವರು ಬಂಗಾಲದಾಚೆ ಪ್ರವಾಸ ಕೈಗೊಂಡಿದ್ದ ಗಳಿಗೆಯಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ವಿಶೇಷ ಘಟನೆ ಸಂಭವಿಸಿತು. ರಾಜ್ಯ ಪರಿಷತ್ತಿನಲ್ಲಿ ವಿಶೇಷ ವಿವಾಹದ ಮಸೂದೆಯನ್ನು ಪಾರ್ಲಿಮೆಂಟಿನ ಎರಡೂ ಸಭೆಗಳ ಸಂಯುಕ್ತ ಪರಿಶೀಲಕ ಸಮಿತಿಗೆ ವಹಿಸಿಕೊಡಬೇಕೆನ್ನುವ ನಿರ್ಣಯವು ಅಂಗೀಕರಿಸಲ್ಪಟ್ಟಿದೆಯೆಂದೂ ಈಗ ಲೋಕ ಸಭೆಯೂ ಅದಕ್ಕೆ ಒಪ್ಪಿಗೆ ಸೂಚಿಸಬೇಕೆಂದೂ ಕಾಯಿದೆ ಮಂತ್ರಿ ಶ್ರೀ ಬಿಸ್ವಾಸರು ಕೇಳಿಕೊಂಡಾಗ—ಸದಸ್ಯರು ಏಕಕಂಠದಿಂದ ಹಕ್ಕು ಬಾಧ್ಯತೆಗಳ ಪ್ರಶ್ನೆಯನ್ನು ಮುಂದು ಮಾಡಿ, ಕಾಯಿದೆ ಮಂತ್ರಿಗಳ ಸೂಚನೆಗೆ ವಿರೋಧ ವ್ಯಕ್ತಪಡಿಸಿದರು. ಸಭೆಯ ಮುಂದೆ ಮಸೂದೆ ಇಲ್ಲದಿರುತ್ತ ಈ ವಿಷಯವನ್ನು ಪ್ರಸ್ತಾಪಿಸುವುದು ಹೇಗೆಂಬ ಸಂಗತಿಯಲ್ಲದೆ ರಾಜ್ಯ ಪರಿಷತ್ತು ಮತ್ತು ಲೋಕಸಭೆಯಲ್ಲಿ ಯಾವುದಕ್ಕೆ ಹೆಚ್ಚು ಪ್ರಾಧಾನ್ಯ ಸಲ್ಲತಕ್ಕದ್ದೆಂಬ ವಿಷಯದಲ್ಲೂ ಸದಸ್ಯರು ಆಗ ಹದಿಂದ ಮಾತನಾಡಿದರು. ಆಗ ಸಭೆಯ ಉಪ ಧುರೀಣರಾದ ಮೌಲಾನಾ ಆಜಾದರು ನೆಹರೂರವರು ಬರುವ ವರೆಗೆ ಈ ವಿಷಯದ ಚರ್ಚೆ ಮುಂದುವರಿಸುವಂತೆ ಕೇಳಿಕೊಂಡರು. ನೆಹರೂರವರು ಈ ವಿಷಯವನ್ನು ಪರ್ಯಾಲೋಚಿಸುತ್ತಾ, ಉಭಯ ಸಭೆಗಳೂ ಪರಸ್ಪರ ಸಹಕರಿಸಿ ನಡೆದುಕೊಳ್ಳುವ ಅವಶ್ಯಕತೆಯನ್ನು ಒತ್ತಿ ಹೇಳಿದರು ಈ ಕುರಿತು ಕಟ್ಟುನಿಟ್ಟಾದ ಸ್ಪಷ್ಟವಾದ ನಿಯಮಾವಳಿಗಳಿಲ್ಲದಿದ್ದರೂ ಲೋಕಸಭೆಯ ಅಧ್ಯಕ್ಷರೂ ರಾಜ್ಯ ಪರಿಷತ್ತಿನ ಸಭಾಪತಿಗಳೂ ಪರಸ್ಪರ ವಿಚಾರ ವಿನಿಮಯದಿಂದ ಅಂಥ ನಿಯಮ ಗೊತ್ತುಪಡಿಸುವುದು ಸಾಧ್ಯವೆಂದರು ಹೀಗೆ ನಡೆಸಿದ ಮಧ್ಯಸ್ಥಿಕೆ ಫಲಕಾರಿಯಾಯಿತು. ಅಸ್ಪೃಶ್ಯತೆಯನ್ನು ಅಪರಾಧವಾಗಿ ಪರಿಗಣಿಸಲಾಗುವುದೆಂದೂ, ಪತ್ರಿಕೋದ್ಯಮಿಗಳನ್ನು ಔದ್ಯೋಗಿಕ ಕಾಯಿದೆಯ ಕಕ್ಷೆಯಲ್ಲಿ ಬರುವಂತೆ ತಕ್ಕ ಕ್ರಮವನ್ನು ಕೈಗೊಳ್ಳುವುದಾಗಿಯೂ ಪತ್ರಿಕಾ ಕಾಯಿದೆಯ ಅವಧಿಯನ್ನು ಮುಂದಿನ ವರ್ಷದ ಅಖೈರವರೆಗೆ ವಿಸ್ತರಿಸಲು ಸುಗ್ರೀವಾಜ್ಞೆಯನ್ನು ಹೊರಡಿಸಲಾಗುವುದೆಂದೂ ಮಂತ್ರಿಗಳ ಹೇಳಿಕೆಗಳಿಂದ ತಿಳಿಯುತ್ತದೆ. ತಿರುಕೊಚ್ಚಿಯಲ್ಲಿಯೂ ಪೆಪ್ಸು ರಾಜ್ಯದಲ್ಲಿಯೂ ೧೯೫೪ನೇ ಮಾರ್ಚಿಯ ಮೊದಲೇ ಚುನಾವಣೆಗಳನ್ನು ನಡೆಸಲಾಗುವುದೆಂದೂ ಗೊತ್ತಾಗಿದೆ. ನಿರುದ್ಯೋಗ ನಿರ್ಮೂಲನದ ವಿಷಯದಲ್ಲಿ ಕಮ್ಯೂನಿಸ್ಟ ಸದಸ್ಯ ಶ್ರೀ. ಗೋಪಾಲನ್ನರು ಮಂಡಿಸಿದ್ದ ಗೊತ್ತುವಳಿಯ ಬದಲು ಅರ್ಥಸಚಿವ ದೇಶಮುಖರು ಮಂಡಿಸಿದ್ದ ಸೂಚನೆಗೆ ಸಭೆ ಬೆಂಬಲ ಕೊಟ್ಟಿತು. ಪಂಚವಾರ್ಷಿಕ ಯೋಜನೆಯನ್ನು ಯೋಗ್ಯ ರೀತಿಯಲ್ಲಿ ವಿಸ್ತರಿಸಬೇಕೆಂದು ದೇಶಮುಖರ ಗೊತ್ತುವಳಿ ಹೇಳುತ್ತದೆ

ನೆಹರೂರ ಉಪದೇಶ

ನೆಹರೂರವರು ಬಂಗಾಲದಾಚೆ ಪ್ರವಾಸ ಕೈಗೊಂಡಾಗ ಕಾಂಗ್ರೆಸ ಕಾರ್ಯಕರ್ತರನ್ನು ಉದ್ದೇಶಿಸಿ ಮಾಡಿದ ಭಾಷಣವು ತುಂಬ ಮಹತ್ವದಿಂದ ಕೂಡಿದೆ—ಜನತೆಯೊಡನೆ ಅತಿ ನಿಕಟ ಸಂಪರ್ಕವನ್ನು ಕಾಂಗ್ರೆಸ ಕಾರ್ಯಕರ್ತರು ಬೆಳೆಸಿಕೊಳ್ಳಬೇಕೆಂದು ನೆಹರೂರವರು ಕಾಂಗ್ರೆಸ ಅಧ್ಯಕ್ಷತ್ವದ ಅಧಿಕಾರದಿಂದ ಕೇಳಿಕೊಂಡರು. ದೇಶದಲ್ಲಿ ನಡೆಯುತ್ತಿರುವ ನಾನಾ ಮುಖದ ಪುನಾರಚನೆಯ ಕೆಲಸಗಳ ಪರಿಚಯವನ್ನು ಸ್ವತಃ ಮಾಡಿಕೊಳ್ಳುವುದೂ, ಜನತೆಗೆ ಅವುಗಳನ್ನು ವಿವರಿಸಿ ಹೇಳುವುದೂ ಕಾಂಗ್ರೆಸ ಕಾರ್ಯಕರ್ತನ ನಿತ್ಯ ಕೆಲಸವಾಗಬೇಕೆಂಬ ಅವರ ಮಾತಿನಲ್ಲಿ ತಥ್ಯಾಂಶವಿದೆ. ಹೀಗೆ ಮಾಡಿದರೆಯೇ ಅಧಿಕಾರ ಸ್ಥಾನದಲ್ಲಿರುವ ಕಾಂಗ್ರೆಸ ಸರಕಾರಗಳು ರಾಷ್ಟ್ರದ ಅಭಿವೃದ್ಧಿಗಾಗಿ ಏನು ಮಾಡಿವೆ—ಮಾಡುತ್ತಲಿವೆ ಎಂಬುದರ ಸ್ಪಷ್ಟವಾದ ಕಲ್ಪನೆಯು ಜನರಿಗಾಗುತ್ತದೆ; ಮತ್ತು ತತ್ಪರಿಣಾಮವಾಗಿ ಸರಕಾರದ ಮೇಲೆ ಭರವಸೆಯೂ ಕಾಂಗ್ರೆಸ ಸಂಸ್ಥೆಯ ವಿಷಯದಲ್ಲಿ ಆತ್ಮೀಯತಾ ಭಾವವೂ ಜನರಲ್ಲಿ ಉಂಟಾಗುತ್ತದೆ. ಆಗ ಮುಂದಿನ ಚುನಾವಣೆಯ ಕಾಲದಲ್ಲಿ ಕಾಂಗ್ರೆಸಿಗೇ ಮತ ಕೊಡುವುದರ ಔಚಿತ್ಯವೂ ಜನಸಾಧಾರಣರಿಗೆ ಮನವರಿಕೆಯಾಗುತ್ತದೆ ಆದಕಾರಣ ಕಾಂಗ್ರೆಸ ಕಾರ್ಯಕರ್ತರು ಪರಿಶ್ರಮ ವಹಿಸಿ ಈಗಿಂದಲೇ ದುಡಿಯುವುದೂ ಯೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದೂ ಅಗತ್ಯ. ನೆಹರೂರವರು ಪ್ರತಿ ನೂರು ಕುಟುಂಬಕ್ಕೆ ಒಬ್ಬನಾದರೂ ಕಾಂಗ್ರೆಸ ಕಾರ್ಯಕರ್ತರು ಸಂಪರ್ಕ ಸ್ಥಾಪಿಸಿಕೊಳ್ಳಬೇಕೆಂದು ಅಪೇಕ್ಷಿಸಿರುವರು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ತೋರಿಸಿದ ನಿಷ್ಠೆಯು ಕಾಂಗ್ರೆಸ ಕಾರ್ಯಕರ್ತರಲ್ಲಿ ಈಗ ಕುಗ್ಗಿದಂತೆ ಕಂಡುಬರುತ್ತದೆ—ರಾಷ್ಟ್ರೀಯ ಪುನರುತ್ಥಾನದ ಈ ದಿನಗಳಲ್ಲಿ ಇಂಥ ನಿಷ್ಕ್ರಿಯತೆ ಅಥವಾ ಔದಾಸೀನ್ಯ ಸಂಸ್ಥೆಯ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಮಾರಕವಾಗಿರುತ್ತದೆ. ಕಾಂಗ್ರೆಸ ಕಾರ್ಯಕರ್ತರು ಪುನಃ ಚಟುವಟಿಕೆಯಿಂದ ಕೆಲಸ ತೊಡಗುವ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿರುತ್ತದೆ

ಮುಂಬಯಿಯ ಸಾಹಸ

ಮುಂಬಯಿ ಸರಕಾರದ ಕಡೆಯಿಂದ ಕಳೆದ ವಾರ ಎರಡು ವಿಶೇಷ ಸಂಗತಿಗಳು ಜರಗಿವೆ—ಮೇಲ್ಮನೆಯನ್ನು ರದ್ದುಗೊಳಿಸಬೇಕೆಂದು ಅಲ್ಲಿಯ ಶಾಸನ ಸಭೆ ನಿರ್ಣಯಿಸಿದ್ದು ಮೊದಲನೆಯ ವಿಶೇಷವಾದರೆ, ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಮಹತ್ವದ ಬದಲಾವಣೆ ಮಾಡಬೇಕೆಂದು ಸರಕಾರ ಯೋಚಿಸಿರುವುದು ಎರಡನೆಯ ವಿಶೇಷ. ರಾಜ್ಯಗಳಲ್ಲಿ ಮೇಲ್ಮನೆ ಇರಬೇಕೋ ಬೇಡವೋ ಎಂಬ ವಿಷಯದಲ್ಲಿ ಶಿಫಾರಸು ಕೈಗೊಳ್ಳಲು ಆಯಾ ಶಾಸನ ಸಭೆಗಳಿಗೆ ರಾಜ್ಯ ಘಟನೆಯನ್ವಯ ಅಧಿಕಾರ ಪ್ರಾಪ್ತವಾಗಿದ್ದರೂ ಘಟನೆ ಉದ್ದೇಶ ಪೂರ್ವಕವಾಗಿ ಕೊಡಮಾಡಿದ ಮೇಲ್ಮನೆಯ ಸೌಲಭ್ಯವನ್ನು ನಿರಾಕರಿಸುವುದಕ್ಕೆ ಇನ್ನೂ ಕೆಲವು ಕಾಲ ಕಾಯುತಿದ್ದರೆ ಆಗುತಿತ್ತೆಂದು ತೋರುತ್ತದೆ ಪ್ರಾಥಮಿಕ ಶಿಕ್ಷಣ ಕ್ರಮದಲ್ಲಿ ಮಾಡಲಾದ ಯೋಜನೆಯು ಮದ್ರಾಸಿನಲ್ಲಿ ರಾಜಾಜಿಯವರು ಜಾರಿಗೆ ತಂದ ಸುಧಾರಿತ ಶಿಕ್ಷಣ ಪದ್ಧತಿಯ ಕೆಲವು ಅಂಶಗಳನ್ನು ಒಪ್ಪಿದಂತೆ ಭಾಸವಾಗುತ್ತದೆ. ಮುಖ್ಯವಾಗಿ ಮಕ್ಕಳ ಶೈಕ್ಷಣಿಕ

(೮ನೇ ಪುಟ ನೋಡಿರಿ)

ಜುಪಿಟರ್ ಜನರಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬ್ಯಾ.
ಸ್ಥಾಪನೆ: 1919
ಒಟ್ಟು ನಿಧಿ .... ರೂ. 33515973
1952ರ ಹೊಸ ಬಿಸಿನೆಸ್ಸು ,, 10640350
1952ರ ಅ್ಯಸ್ ಲಾಭ ,, 655010
ಮೈಸೂರು ಸ್ಟೇಟಿನ ಶಿವಮೊಗ್ಗಾ, ಹಾಸನ, ಕಡೂರು ಜಿಲ್ಲೆಗಳು, ಕೊಡಗು ಸ್ಟೇಟ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉತ್ತಮ ಪ್ರತಿನಿಧಿಗಳು ಬೇಕಾಗಿದ್ದಾರೆ.
ಯಸ್. ಎ. ಹೆಗ್ಡೆ,
ಏಜನ್ಸಿ ಸುಪರಿಂಟೆಂಡೆಂಟ್,
ಜುಪಿಟರ್ ಜನರಲ್, ಇನ್ಶ್ಯುರೆನ್ಸ್ ಕಂಪೆನಿ ಲಿಮಿಟೆಡ್, ಶಿರ್ಸಿ, ಪ. ಕ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಆರ್ಥಿಕ ಪಥದಲ್ಲಿ ನಿಮ್ಮ ಉನ್ನತಿಗೆ, "ಸೇವಿಂಗ್ಸ್ ಬ್ಯಾಂಕ್" ಇಲ್ಲವೆ "ಕ್ಯುಮುಲೇಟಿವ್ ಡಿಪೋಜಿಟ್" ಖಾತೆಯೊಂದನ್ನು ನಮ್ಮಲ್ಲಿ ಇಂದೇ ಬಂದು ತೆರೆಯಿರಿ.

ವಿಶೇಷ ಮಾಹಿತಿಗೆ,

ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ನಮ್ಮ 39 ಶಾಖೆಗಳ ಪೈಕಿ, ನಿಮಗೆ ಸಮೀಪವಿರುವ ಯಾವುದಾದರೊಂದು ಶಾಖೆಯಲ್ಲಿ ವಿಚಾರಿಸಿರಿ.

THE CANARA BANKING CORPORATOIN LTD.,

Estd:- 1906] [H. O: UDIPI (S. India.)

ನ ವ ಯು ಗ

ಉಡುಪಿ, ಗುರುವಾರ ೨೪-೧೨-'೫೩

ಕನ್ನಡ ಸಾಹಿತ್ಯ ಸಮ್ಮೇಳನ

ಉತ್ತರ ಕನ್ನಡ ಜಿಲ್ಲೆಯ ಕುಮಟೆಯಲ್ಲಿ ಇದೇ ೨೬, ೨೭ ಮತ್ತು ೨೮ನೇ ದಿನಾಂಕಗಳಲ್ಲಿ ಮೂವತ್ತೈದನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರಗಲಿರುವ ಸಂಗತಿ ಎಲ್ಲರಿಗೂ ಗೊತ್ತಿದೆ. ಈ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಕನ್ನಡದ ಖ್ಯಾತನಾಮ ಸಾಹಿತಿಗಳಲ್ಲಿ ಗಣನೀಯರಾದ ಶ್ರೀ ವಿ. ಸೀತಾರಾಮಯ್ಯನವರು ಆಯ್ಕೆ ಹೊಂದಿರುವರು. ಕನ್ನಡಿಗರಿಗೆ ಶ್ರೀಯುತರು "ವಿ. ಸೀ." ಎಂಬ ಚುಟುಕಾದ ಹೆಸರಿನಿಂದಲೇ ಚಿರಪರಿಚಿತರು. ಅವರ ಕಾವ್ಯಾಮೃತದ ರಸಾಸ್ವಾದನೆಯನ್ನು ಮಾಡಿಕೊಳ್ಳದವರು ವಿರಳ. ನುರಿತ ಅರ್ಥಶಾಸ್ತ್ರಿಯಾಗಿಯೂ ವಿ. ಸೀ.ಯವರು ಮಾಡಿದಿದ್ದು 'ಹಣ ಪ್ರಪಂಚ' ವೆಂಬ ಉದ್ಗ್ರಂಥ ಅವರ ಪರಿಶ್ರಮಕ್ಕೆ ಭವ್ಯ ಸ್ಮಾರಕ. ಸುಸಂಸ್ಕೃತರೂ ಸಹೃದಯರೂ ವಿನಯವಿದರೂ ಆದ ವಿ. ಸೀ.ಯವರ ವ್ಯಕ್ತಿತ್ವ ಸಾಹಿತ್ಯ ಸಮ್ಮೇಳನದ ವಾತಾವರಣದಲ್ಲಿ ಸೌಮ್ಯತೆಯನ್ನೂ ಗಾಂಭೀರ್ಯ ರಸಿಕತೆಯನ್ನೂ ಮೇಳೈಸಬಲ್ಲುದು. ಸಾಹಿತ್ಯ ಸಮ್ಮೇಳನದ ಅಂಗವಾಗಿ ಪತ್ರಿಕಾಗೋಷ್ಠಿ, ಯಕ್ಷಗಾನಗೋಷ್ಠಿ ಮತ್ತು ವಿಜ್ಞಾನ ಗೋಷ್ಠಿಗಳೂ ನಡೆಯಲಿವೆ. ಇವುಗಳ ಅಧ್ಯಕ್ಷತೆಗಳನ್ನೂ ಕ್ರಮವಾಗಿ ಶ್ರೀಗಳಾದ ವಿ. ಬಿ. ನಾಯಕ್, ಸಿ. ವೆಂಕಪ್ಪ ಶೆಟ್ಟಿ ಮತ್ತು ಪಡುಕೋಣೆ ರಮಾನಂದರಾಯರು ವಹಿಸುವರು. ಕನ್ನಡ ಪತ್ರಿಕಾ ಪ್ರಪಂಚದಲ್ಲಿಯೂ ಸಾಹಿತ್ಯದಲ್ಲಿಯೂ ನುರಿತ ಶ್ರೀ ನಾಯಕರು ಕನ್ನಡ ಪತ್ರಿಕೆಗಳ ಮುನ್ನಡೆಗೆ ಯೋಗ್ಯ ಮಾರ್ಗದರ್ಶನವನ್ನು ಮಾಡಬಲ್ಲ ಯೋಗ್ಯತೆ ಪಡೆದ ವ್ಯಕ್ತಿ. ನಮ್ಮ ದಕ್ಷಿಣ ಕನ್ನಡದ ಶಾಣಾಜೆಯ ಕವಿಭೂಷಣ ವೆಂಕಪ್ಪ ಶೆಟ್ಟರು ಎಪ್ಪತ್ತರ ಮುದುಕನಾದರೂ ರಸಿಕ ಶ್ರೇಷ್ಠರು. ದಿವಂಗತ ಕಿಲ್ಲೆಯವರಂಥ ಯಕ್ಷಗಾನ ಕಲಾವಿದರಿಗೂ ಗುರುಸ್ಥಾನದಲ್ಲಿರುವ ಮಹಾನುಭಾವ. ಮದ್ರಾಸು ಸರಕಾರದವರು "ಭಾರತದ ಗುರುಕುಲ" ಎಂಬ ಯಕ್ಷಗಾನ ಪ್ರಸಂಗಕ್ಕೆ ಬಹುಮಾನವನ್ನು ನೀಡಿ ಶ್ರೀ ವೆಂಕಪ್ಪ ಶೆಟ್ಟರನ್ನು ಗೌರವಿಸಿದೆ. ಯಕ್ಷಗಾನ ಕಲೆಯ ಜನಪ್ರಿಯತೆಯನ್ನು ಹೆಚ್ಚು ಹೆಚ್ಚಾಗಿ ಗಳಿಸುವುದಕ್ಕೆ ಶ್ರೀಯುತರಿಂದ ಆವಶ್ಯಕ ಸಲಹೆಗಳು ದೊರೆಯುವ ನಿರೀಕ್ಷೆ ಇದೆ. ವಿಜ್ಞಾನಗೋಷ್ಠಿಯ ಅಧ್ಯಕ್ಷ ಸ್ಥಾನವಹಿಸುವ ಪ್ರಿನ್ಸಿಪಾಲ ರಮಾನಂದರು ಕನ್ನಡದ ಕೆಲವೇ ಸಿದ್ಧಹಸ್ತ ಹಾಸ್ಯಲೇಖಕರಲ್ಲಿ ಒಬ್ಬರು. "ಹೂಬಾಣಗಳು" ಎಂಬ ಬರೆಹ ರಮಾನಂದರ ರಸಿಕತೆಯ ನಿದರ್ಶನ. ಸಹಜ ವಿದೂಷಕರಂತಿದ್ದಂತೆಯೇ—ವಿಜ್ಞಾನದಂಥ ಗಹನ ವಿಷಯದಲ್ಲಿ ಪಾಂಡಿತ್ಯ ಪಡೆದಿರುವುದು ಅವರ ಅಸಾಧಾರಣ ವ್ಯಕ್ತಿತ್ವಕ್ಕೆ ನಿದರ್ಶನ. ಇಂಥ ಮಹನೀಯರ ನೇತೃತ್ವದಲ್ಲಿ ಸಾಹಿತ್ಯ ಸಮ್ಮೇಳನ ಚೊಕ್ಕರೀತಿಯಲ್ಲಿ ತನ್ನ ಕಾರ್ಯಕ್ರಮಗಳನ್ನೂ ನೆರವೇರಿಸಿಕೊಂಡು ಹೋಗುವುದೆಂದು ಪ್ರತ್ಯೇಕ ಹೇಳುವುದು ಅನಗತ್ಯ. ಭಾರತ ಸರಕಾರದ ವಾಣಿಜ್ಯ ಖಾತೆಯ ಮಂತ್ರಿಗಳಾದ ಶ್ರೀ ದ. ಪ. ಕರಮರಕರರು ಸಮ್ಮೇಳನದ ಉದ್ಘಾಟನೆ ಮಾಡುವರು. ಮುಂಬಯಿಯ ಉಪಮಂತ್ರಿಗಳಾದ ಶ್ರೀ ಜತ್ತಿಯವರು ಕಲಾಪ್ರದರ್ಶನ ತೆರೆಯುವರು. ಇಂಥ ಸಮ್ಮೇಳನದಲ್ಲಿ ಕರ್ನಾಟಕದ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳು ಬಂದು ಸೇರುವರೆಂದೂ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಕಲ ವಿಧದಿಂದಲೂ ನೆರವಾಗುವರೆಂದೂ ಹಾರೈಸಿದರೆ ಸಾಲದು. ಸಾಹಿತ್ಯ ಸಮ್ಮೇಳನ ಒಂದು ಜಾತ್ರೆಯ ನೆನಪನ್ನು ಮಾತ್ರ ತಂದುಕೊಟ್ಟರೆ ಅದರಿಂದ ಯಾರಿಗೂ ವಿಶೇಷ ಪ್ರಯೋಜನ ದೊರೆಯಲಿಕ್ಕಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ವರ್ಷಕ್ಕೊಂದು ಉತ್ಸವ ಜರಗಿಸುವುದಷ್ಟೇ ತನ್ನ ಕರ್ತವ್ಯವೆಂದು ಭಾವಿಸುತ್ತಾ ಇನ್ನು ಮುಂದೆಯೂ ಕುಳಿತಿರುವುದು ಹಿತವಲ್ಲ. ಕನ್ನಡದ ಸಂಸ್ಕೃತಿ ಮತ್ತು ಸಾಹಿತ್ಯಗಳ ಪುನರುದ್ಧಾರ ಕಾರ್ಯದಲ್ಲಿ ಅದು ಅನೇಕ ಮುಖವಾದ ನೆಂವು ನೀಡುವ ಅಗತ್ಯವುಂಟು. ಮೈಸೂರು ಪ್ರಭುತ್ವದ ಆಶ್ರಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಪಡೆದಿರುತ್ತಾ, ಸ್ವಂತ ಕಟ್ಟಡ ಹಾಗೂ ಅಚ್ಚುಕೂಟದ ಅನುಕೂಲತೆ ಹೊಂದಿರುತ್ತಾ, ಕನ್ನಡದಲ್ಲಿ ಗಣನೀಯವಾದ ಏನೊಂದೂ ಕೆಲಸ ಮಾಡಿಲ್ಲವೆನ್ನುವುದು ಕನ್ನಡಿಗರಿಗೆ ಭೂಷಣವಲ್ಲ. ಈ ಸಾಹಿತ್ಯ ಸಮ್ಮೇಳನ ಇಂಥ ವಿಷಯಗಳಲ್ಲಿ ಇದುವರೆಗೆ ತೋರಲಾದ ಆಲಸ್ಯ ಪ್ರವೃತ್ತಿಯನ್ನು ಖಂಡಿಸಿ, ಕನ್ನಡಿಗರಿಗೆ ಸಾಹಿತ್ಯ ಪರಿಷತ್ತಿನ ಸಂಪೂರ್ಣ ಪ್ರಯೋಜನ ಲಭ್ಯವಾಗುವಂತೆ ಕ್ರಮಕೈಗೊಳ್ಳುವ ಕೆಲಸ ಮಾಡಬೇಕು. ಕರ್ನಾಟಕ ಏಕೀಕರಣದ ವಿಷಯದಲ್ಲೂ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಈ ಪರಿಷತ್ತು ಮಾಡಬೇಕಾದ ಕೆಲಸ ಬಹಳ ವಿಧವಾಗಿರುತ್ತದೆ—ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ಆಯೋಗ ನೇಮಕ ಹೊಂದಿರುವ ಈ ವಿಶಿಷ್ಟ ಗಳಿಗೆಯಲ್ಲಿ, ಏಕೀಕರಣದ ಪ್ರಶ್ನೆಯನ್ನು ಯಾವ ಕನ್ನಡಿಗನೂ ಉಪೇಕ್ಷಿಸುವಂತಿಲ್ಲ. ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಬಾಂಧವರೆಲ್ಲ ಈ ವಿಷಯದಲ್ಲಿ ಕನ್ನಡಿಗರ ಆಶೋತ್ತರಗಳನ್ನು ಖಚಿತ ಮಾತುಗಳಲ್ಲಿ ಸ್ಪಷ್ಟಗೊಳಿಸಬೇಕಲ್ಲದೆ—ಆಯೋಗದ ಮುಂದೆ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಸಾಹಿತ್ಯಿಕ ಮಹತ್ವದ ಪುರಾವೆಗಳನ್ನು ಮುಂಡಿಸಲು ತಕ್ಕ ವ್ಯವಸ್ಥೆ ಮಾಡಬೇಕು. ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಪರಿಷತ್ತುಗಳು ಚೊಕ್ಕವಾದ ರೀತಿಯಲ್ಲಿ ಕನ್ನಡಿಗರ ಪಕ್ಷವನ್ನು ಪ್ರತಿಪಾದನೆ ಮಾಡುವುದಕ್ಕೆ ಸಿಕ್ಕಿದ ಅವಕಾಶವನ್ನು ವ್ಯರ್ಥ ಹೋಗಗೊಡಬಾರದು. ಕನ್ನಡಿಗರ ಮುಂದೆ ಈ ಸೂಚನೆಯನ್ನು ನಮ್ರವಾಗಿ ಮುಂಡಿಸುತ್ತಿದ್ದಂತೆಯೇ— ಸಾಹಿತ್ಯ ಸಮ್ಮೇಳನಕ್ಕೆ ಶುಭವನ್ನೂ ನಾವು ಹಾರೈಸುತ್ತೇವೆ.

ರಶಿಯಾದ ಆಶಾದಾಯಕ ರಾಯಸ

ಅಣುಶಕ್ತಿಯ ಶಾಂತಿಕಾಲದ ಉಪಯೋಗದಲ್ಲಿ ಆಸ್ಥೆ

ಅಧ್ಯಕ್ಷ ಐಸೆನ ಹೋವರರು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಮುಂದೆ ಉತ್ಪಾದಕ ಕಾರ್ಯಗಳಿಗೋಸ್ಕರ ಅಣು ಶಕ್ತಿಯನ್ನು ಉಪಯೋಗಿಸುವುದೇ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿ ಮಾಡಿದ ಭಾಷಣಕ್ಕೆ ರಶಿಯಾದ ವಿದೇಶಾಂಗ ಸಚಿವ ಮೊಲೊಟೋವರವರು ಗಂಭೀರ ಗಮನವನ್ನು ಕೊಟ್ಟಿದರ ಪರಿಣಾಮವಾಗಿ ಇದೀಗ ರಶಿಯಾದ ರಾಯಸವೊಂದು ಬಂದಿರುವುದಾಗಿ ತಿಳಿಯುತ್ತದೆ. ಐಸೆನ ಹೋವರರು ಅಣು ಬಾಂಬುಗಳನ್ನು ಪ್ರತಿಬಂಧಿಸುವ ಕುರಿತು ಯಾವುದೇ ಮಾತನ್ನು ಹೇಳದಿರುವ ಕುರಿತು ರಶಿಯಾ ಸ್ಪಷ್ಟೀಕರಣವನ್ನು ಕೇಳಿದೆ. ಆದರೂ ಐಸೆನ ಹೋವರರು ಶಾಂತಿಕಾಲದ ಉಪಯೋಗಕ್ಕೆ ಅಣುಶಕ್ತಿಯನ್ನು ಬಳಸುವ ವಿಚಾರಕ್ಕೆ ಮಹತ್ವಕೊಟ್ಟುದನ್ನು ರಶಿಯಾ ಮೆಚ್ಚಿಕೊಂಡಿದೆ. ಐಕರು ಹೇಳಿದಂತೆ, ಅಣುಶಕ್ತಿಯನ್ನು ಉತ್ಪಾದಿಸಬಲ್ಲ ಖನಿಜ ದ್ರವ್ಯಗಳಿರುವ ರಾಷ್ಟ್ರಗಳು ತಮ್ಮ ನಿಕ್ಷೇಪದ ಒಂದಂಶವನ್ನು ರಾಷ್ಟ್ರ ಸಂಘಕ್ಕೆ ಒಪ್ಪಿಸಿಕೊಟ್ಟು ಪ್ರಯೋಗಗಳನ್ನು ನಡೆಸುವ ಬದಲು, ಶಾಂತಿ ಕಾಲದ ಉಪಯೋಗಕ್ಕಾಗಿಯೇ ಎಲ್ಲ ರಾಷ್ಟ್ರಗಳೂ ಅಣುಶಕ್ತಿಯನ್ನು ಉಪಯೋಗಿಸ ತಕ್ಕುದೆಂದು ರಶಿಯಾ ಸಲಹೆ ಮಾಡಿದೆ. ಈ ರಾಯಸವು ಆಶಾದಾಯಕ ವಿರುವುದಾಗಿ ಅಮೇರಿಕೆ ಹಾಗೂ ಬ್ರಿಟನಗಳಲ್ಲಿ ಅಭಿಪ್ರಾಯ ವ್ಯಕ್ತಗೊಂಡಿದೆ. ಇನ್ನು ಮುಂದಿನ ಹೆಜ್ಜೆಗಳನ್ನು ರಚನಾತ್ಮಕವಾಗಿ ಕಾರ್ಯಗತ ಮಾಡಲು ಪಂಚ ಮಹಾರಾಷ್ಟ್ರಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುವುದೂ ನಿಃಶಸ್ತ್ರೀಕರಣದ ವಿಷಯದಲ್ಲಿ ಯೋಗ್ಯ ಕ್ರಮ ತೆಗೆದುಕೊಳ್ಳುವುದೂ ವಿಹಿತವೆಂದು ರಶಿಯಾದ ಅಭಿಪ್ರಾಯ

ಗುಟ್ಟು ರಟ್ಟಾಗುವುದೇ ಕ್ಷೇಮ

ಅಣುಶಕ್ತಿಯ ರಹಸ್ಯವನ್ನು ಈಗ ಅಮೇರಿಕ, ಬ್ರಿಟನು, ಹಾಗೂ ರಶಿಯಾಗಳು ತಿಳಿದಿದ್ದರೂ ಈ ಮೂರು ರಾಷ್ಟ್ರಗಳು ಪ್ರತ್ಯಪ್ರತ್ಯೇಕವಾಗಿಯೇ ಅಣು ವಿಷಯಕ ಸಂಶೋಧನೆಗಳನ್ನು ನಡೆಸಿ ತಮ್ಮ ಪ್ರಯೋಗ ಫಲಗಳನ್ನು ಗುಟ್ಟಾಗಿ ಇಟ್ಟಿರುತ್ತವೆ. ಈ ವಿಷಯದಲ್ಲಿ ಇದುವರೆಗೆ ನಡೆಸಿದ ಪ್ರಯೋಗಗಳ ಫಲಿತಾಂಶವೆಲ್ಲವೂ ಎಲ್ಲ ರಾಷ್ಟ್ರಗಳ ಅಣುತಜ್ಞರಿಗೆ ತಿಳಿದ ಪಕ್ಷದಲ್ಲಿ—ಆಗ ಶಾಂತಿ ಕಾಲದ ಬಳಕೆಗೆ ಅಣುಶಕ್ತಿಯನ್ನು ಉತ್ಪಾದಿಸುವ ರೀತಿಯನ್ನು ಬಹಳ ಬೇಗನೇ ಕಂಡುಕೊಳ್ಳಲು ಸಾಧ್ಯ.

ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆ

ವಿಚಾರಿಸಲು ಆಯೋಗದ ನೇಮಕ

ಪ್ರಧಾನ ಮಂತ್ರಿ ನೆಹರೂರವರು ಲೋಕಸಭೆಯಲ್ಲಿ ದಿನಾಂಕ ೨೨ರಂದು ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸಲು ಈಗ ಒಡಿಸಾ ರಾಜ್ಯದ ಗವರ್ನರರಾಗಿರುವ ಫಜಲ ಅಲಿಯವರ ಅಧ್ಯಕ್ಷತೆಯಲ್ಲಿ ಒಂದು ಉಚ್ಚಾಧಿಕಾರ ಸಂಪನ್ನ ಆಯೋಗವನ್ನು ನೇಮಿಸುವುದಾಗಿ ಸಾರಿದರು. ರಾಜ್ಯ ಪರಿಷತ್ತಿನ ಸದಸ್ಯರಾದ ಪಂಡಿತ ಹೃದಯನಾಥ ಕುಂಜ್ರೂ ಮತ್ತು ಇಜಿಪ್ತದಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ ಕೆ. ಎಂ. ಪಣಿಕ್ಕರರು ಆಯೋಗದ ಉಳಿದ ಸದಸ್ಯರು.

ಸಾಂಸ್ಕೃತಿಕ, ನೈತಿಕ ಮತ್ತು ರಾಜಕೀಯ ಐಕ್ಯಕ್ಕೆ ಭಂಗವೊದಗದಂತೆಯೂ ಆರ್ಥಿಕ ಹಾಗೂ ಬೇರೆ ಸಂಗತಿಗಳು ಅಡಚಣೆಯಾಗದಂತೆಯೂ, ಭಾರತ ಒಕ್ಕೂಟದ ರಾಜ್ಯಗಳನ್ನು ಪುನರ್ಘಟಿಸುವುದು ಈ ಆಯೋಗದ ಕೆಲಸ. ಈ ವಿಷಯದಲ್ಲಿ ಅಗತ್ಯವಿರುವ ಎಲ್ಲ ಪುರಾವೆಗಳನ್ನು ಸಂಗ್ರಹಿಸುವುದಕ್ಕೆ ಮನವಿಗಳನ್ನು ಕೇಳಿಕೊಳ್ಳುವುದಕ್ಕೆ ಅದಕ್ಕೆ ಅಧಿಕಾರವಿರುತ್ತದೆ. ೧೯೫೫ನೇ ಇಸವಿಯ ಜೂನು ತಿಂಗಳೊಳಗೆ ಆಯೋಗ ವರದಿ ಒಪ್ಪಿಸಬೇಕೆಂದು ಹೇಳಲ್ಪಟ್ಟಿದೆ. ಈ ಪ್ರಶ್ನೆಯ ಕುರಿತು ವಿಚಾರಣೆ ನಡೆಸಿ, ಸಾಮಾನ್ಯ ಚಿತ್ರವನ್ನು ಮುಂದಾಗಿ ನೀಡಬೇಕೆಂದೂ ಸಾಕ್ಷ್ಯವಿವರಗಳನ್ನು ಹಿಂದಿನಿಂದ ಅಧ್ಯಯಿಸಬಹುದೆಂದೂ ಹೇಳಲ್ಪಟ್ಟಿದೆ. ಆಯೋಗವು ತನ್ನ ಕೆಲಸ ಮುಂದುವರಿದಂತೆಲ್ಲ ತಾತ್ಕಾಲಿಕ ವರದಿಗಳನ್ನೂ ಒಪ್ಪಿಸುತ್ತವೆ. ಈ ವಿಷಯದಲ್ಲಿ ಭಾಷೆಗೆ ಸಲ್ಲತಕ್ಕ ಪ್ರಾಮುಖ್ಯತೆಯೂ ಪ್ರಸ್ತಾಪಿಸಲ್ಪಟ್ಟಿದೆ.

ರಾಜ್ಯ ಪರಿಷತ್ತಿನಲ್ಲಿ ಗೃಹಮಂತ್ರಿ ಡಾ. ಕಟಜೂರವರು ಆಯೋಗದ ನೇಮಕವನ್ನು ಸಾರಿದರು.

ಮಾತ್ರವಲ್ಲದೆ ಬಹಳ ಜತನದಿಂದ ಇದುವರೆಗೆ ಮುಚ್ಚಿಕೊಂಡಿದ್ದ ಗುಟ್ಟಿನ ಮೇಲೆ— ಅಣುಶಕ್ತಿಯನ್ನು ವಿನಾಶ ಕಾರ್ಯಗಳಿಗೋಸ್ಕರ ಬಳಸುವ ಭಯವುಳಿಯಲಾರದು. ಎಲ್ಲರಿಗೂ ಅಣುಶಕ್ತಿಯ ರಹಸ್ಯ ತಿಳಿದ ಪಕ್ಷದಲ್ಲಿ ಅಜೇಯ ಅಸ್ತ್ರವೆಂಬ ಸ್ಥಾನಮಾನವನ್ನು ಅಣುಬಾಂಬೂ ಜಲಜನಕ ಬಾಂಬೂ ಕಳೆದುಕೊಳ್ಳುತ್ತವೆ. ಹೀಗಾಗುವುದನ್ನೆ ಶಾಂತಿಪ್ರಿಯವಾದ ಎಲ್ಲ ಸಣ್ಣ ರಾಷ್ಟ್ರಗಳೂ ಮೆಚ್ಚಿಕೊಳ್ಳುತ್ತವೆ. ಅಣುಶಕ್ತಿಯ ಶಾಂತಿಕಾಲದ ಉಪಯೋಗದ ಕುರಿತು ವಿಚಾರ ಮಾಡಲು ಅಮೇರಿಕಾದಲ್ಲಿ ಖಾಸಗಿ ಪರಿಷತ್ತುಗಳು ಶೀಘ್ರವೇ ಸೇರಲಿವೆಯೆಂದೂ ಭಾರತಕ್ಕೂ ಇವರಲ್ಲಿ ಭಾಗವಹಿಸಲು ಆಮಂತ್ರಣ ಕೊಡಲಾಗಿದೆಯೆಂದೂ ತಿಳಿಯುತ್ತೇನೆ. ಇತ್ತ ರಾಜಕೀಯ ಮಟ್ಟದಲ್ಲಿ ಅಣುಶಕ್ತಿಯ ರಹಸ್ಯವನ್ನು ಮಿತ್ರ ರಾಷ್ಟ್ರಗಳಿಗೆ ಕೆಲವು ಶರ್ತಗಳ ಮೇಲೆ ತಿಳಿಸಲು ಐಸೆನ ಹೋವರರು ಒಡಂಬಟ್ಟಿರುವರೆಂದೂ ಇದಕ್ಕೋಸ್ಕರ ಮೇಕ್ ಮೋಹನ ನಿಯಮಕ್ಕೆ ಯೋಗ್ಯ ತಿದ್ದುಪಡಿ ಮಾಡುವ ವಿಚಾರವಿದೆಯೆಂದೂ ಗೊತ್ತಾಗಿದೆ.

ಜರ್ಮನಿಯ ಭಯ

ಬರ್ಮುಡಾ ಪರಿಷತ್ತಿನಲ್ಲಿ ತ್ರಿರಾಷ್ಟ್ರಗಳು ತಮ್ಮ ಮುಂದಿರುವ ವಿವಿಧ ಪ್ರಶ್ನೆಗಳ ಸಂಬಂಧದಲ್ಲಿ ಒಮ್ಮತಕ್ಕೆ ಬಂದರೆಂದು ಸಾಮಾನ್ಯವಾದ ಅಭಿಪ್ರಾಯವಾಗಿದ್ದಿತು— ಆದರೆ ವಸ್ತುತಃ ಹಾಗಿಲ್ಲವೆಂದು ಈಗ ಕೇಳಲ್ಪಡುತ್ತದೆ. ಮುಖ್ಯವಾಗಿ ಫ್ರಾನ್ಸು ಅಮೇರಿಕದ ನಿಲುವನ್ನು ಒಪ್ಪಿಕೊಳ್ಳದಿರುವ ನಿದರ್ಶನವುಂಟು— ಜರ್ಮನಿಯ ಪುನಃ ಶಸ್ತ್ರೀಕರಣವನ್ನು ಫ್ರಾನ್ಸು ಸುತರಾಂ ಸಹಿಸುವುದಿಲ್ಲ. ಡಲ್ಲೇಸರು ಬಿಚ್ಚು ಮಾತಿನಲ್ಲಿ ಐರೋಪ್ಯ ಸಂರಕ್ಷಣಾ ವ್ಯೂಹಕ್ಕೆ ಮನ್ನಣೆ ಕೊಡುವಂತೆ ಫ್ರಾನ್ಸನ್ನು ಪುನಃ ಕೇಳಿಕೊಂಡಿದ್ದರೂ ಇದಕ್ಕೆ ಅನುಕೂಲವಾದ ಪ್ರತಿಕ್ರಿಯೆ ಬಂದಿಲ್ಲ. ಜರ್ಮನರ ಪ್ರಾಬಲ್ಯ ಪ್ರಬಲಗೊಂಡರೆ ತಮಗಾಗುವ ಗಂಡಾಂತರವನ್ನು ಫ್ರೆಂಚರು ಈಗಲೇ ಅರಿತುಕೊಂಡಿರುವರು. ಮಿತ್ರರಾಷ್ಟ್ರಗಳು ಅಧಾರ್ತ್ ಅಮೇರಿಕ- ತನ್ನ ಹಟವನ್ನು ಬಿಡದ ಪಕ್ಷದಲ್ಲಿ ಅವೇ ಹಿಂದಿನ ರಾಜಕೀಯ ಸಂಬಂಧಗಳನ್ನು ಹೊಸದಾಗಿ ಬೆಳೆಸಿಕೊಳ್ಳಬೇಕಾಗುವುದೆಂದು ಫ್ರಾನ್ಸಿನ ಹೇಳಿಕೆ ಇರುತ್ತದೆ. ರಶಿಯಾ ಹಾಗು ಪೂರ್ವ ಯುರೋಪದ ರಾಷ್ಟ್ರಗಳೊಡನೆ ಸಖ್ಯ ಬೆಳೆಸುವುದೇ ಅದೇ ಹಿಂದಿನ ಸಂಬಂಧವಾಗಿದ್ದೀತೆಂದು ಎಲ್ಲರ ತರ್ಕ. ಜರ್ಮನಿಯ ಪುನಃ ಶಸ್ತ್ರೀಕರಣವಾದರೂ ಚಿಂತಿಲ್ಲ— ಅಲ್ಲಿ ಅಮೇರಿಕದ ಸೈನ್ಯ ತಳವೂರಿಕೊಂಡಿರುವ ಪಕ್ಷದಲ್ಲಿ ಫ್ರಾನ್ಸಿನ ಭಯ ತುಸುವಾದರೂ ಕಡಿಮೆಯಾದೀತು

ಹೋಚಿಮಿನರೊಡನೆ ಸಂಧಾನ

ಕಳೆದ ಏಳು ವರ್ಷಗಳಿಂದ ಇಂಡೋಚೀನಾದಲ್ಲಿ ಹೋಚಿ ಮಿನ್ಹರೊಡನೆ ನಡೆಸುತ್ತಾ ಬಂದಿರುವ ಕದನವನ್ನು ಶಾಂತಿ ಸಂಧಾನದ ಮೂಲಕ ನಿಲ್ಲಿಸಲು ಫ್ರಾನ್ಸು ಪ್ರಯತ್ನಿಸುತ್ತಿರುವುದೇ - ಜರ್ಮನ ಪುನಃ ಶಸ್ತ್ರೀಕರಣದಿಂದ ಫ್ರಾನ್ಸು ದಿಗಿಲುಗೊಂಡಿರುವುದನ್ನು ಸಿದ್ಧಗೊಳಿಸುತ್ತದೆ. ಜರ್ಮನಿ ಸೈನ್ಯ ಬಲವನ್ನು ಪಡೆದು ಸಶಕ್ತವಾದರೆ ಆಗ ತನ್ನ ಪರಿಸ್ಥಿತಿ ಕರುಣಾಜನಕವಾಗಬಾರದೆಂದು ಬಯಸಿ, ಫ್ರಾನ್ಸು ಇಂಡೋ ಚೀನಾದಲ್ಲಿ ಹೋರಾಡುತ್ತಿರುವ ತನ್ನೆಲ್ಲ ಸೈನಿಕರನ್ನು ವಾಪಸು ಸ್ವದೇಶಕ್ಕೆ ಕರೆಸಿಕೊಳ್ಳಲು ಇಷ್ಟಪಡುತ್ತದೆ. ಆದರೆ ಅಮೇರಿಕ ಈ ವಿಚಾರವನ್ನೂ ಪುರಸ್ಕರಿಸುವುದಿಲ್ಲ— ಪೂರ್ವ, ಆಗ್ನೇಯ ಹಾಗೂ ದಕ್ಷಿಣ ಏಶಿಯಾದ ರಾಷ್ಟ್ರಗಳ ಪ್ರವಾಸ ಕೈಗೊಂಡು ಈಗಾಗಲೇ ಮರಳಿರುವ ಅಮೇರಿಕದ ಉಪಾಧ್ಯಕ್ಷ ನಿಕ್ಸನ್ನರು ಇಂಡೋ ಚೀನಾದಲ್ಲಿ ಫ್ರೆಂಚ ಸರಕಾರ ಹೋಚಿಮಿನ್ಹರೊಡನೆ ಸಂಧಾನ ನಡೆಸುವುದರಿಂದ ಮುಂದಕ್ಕೆ ಬಾಧಕ ಕಟ್ಟಿಟ್ಟದ್ದೆಂದು ತಿಳಿಸಿರುವರೆಂದು ವರದಿಗಳು ಹೇಳುತ್ತವೆ. ಫ್ರೆಂಚರಿಗೆ ಶಸ್ತ್ರಾಸ್ತ್ರಗಳನ್ನೆಲ್ಲ ಅಮೇರಿಕಾ ಪೂರೈಸುತ್ತಿರುವುದರಿಂದ ಈ ಸಂಧಾನ ಅಮೇರಿಕಾದ ಗೌರವಕ್ಕೆ ಕುಂದು ತರುತ್ತದೆ. ಮಾತ್ರವಲ್ಲ ಕಾಲಕ್ರಮೇಣ ಇಡೀ ಇಂಡೋಚೀನಾದಲ್ಲಿ ಕಮ್ಯೂನಿಸ್ಟರಾದ ಹೋಚಿಮಿನ್ಹರ ವರ್ಚಸ್ಸು ನೆಲೆಗೊಂಡೀತೆಂದೂ ನಿಕ್ಸನ್ನರ ಸಂದೇಹ. ಈ ಭಯಗಳೇನೇ ಇರಲಿ— ಏಶಿಯಾದ ಜನವಾಣಿ ಸ್ವಾತಂತ್ರ್ಯ ಹಾಗೂ ರಾಷ್ಟ್ರೀಯತಾ ಭಾವನೆಯ ಮುಂದೆ ಸಾಮ್ರಾಜ್ಯಶಾಹಿತ್ವ ತನ್ನ ಸೋಲನ್ನೊಪ್ಪಿಕೊಳ್ಳಬೇಕೆನ್ನುತ್ತದೆ.

ಮರಳಿ ಕದನವೇ?

ಕೊರಿಯಾದಲ್ಲಿ ಕೈದಿಗಳಿಗೆ ವಿವರಣೆ ಕೊಡುವ ಕೆಲಸ ಕೆಲವು ವಾರಗಳಿಂದ ನಿಲ್ಲಿಸಲ್ಪಟ್ಟಿದ್ದರೂ— ಕಳೆದ ವಾರ ಮರಳಿ ಈ ಕಾರ್ಯಕ್ರಮ ತೊಡಗಿತು. ಆದರೇನು ಪ್ರಯೋಜನ? ಯುದ್ಧ ವಿರಾಮ ಒಪ್ಪಂದದಲ್ಲಿ ವಿವರಣೆಗಾಗಿ ನಿರ್ಧರಿಸಲಾದ ಅವಧಿ ಇದೇ ೨೩ನೇ ದಿನಾಂಕಕ್ಕೆ ಮುಗಿಯಿತು. ಇದನ್ನು ವಿಸ್ತರಿಸಬೇಕೆಂದು ಕಮ್ಯೂನಿಸ್ಟರು ಮಾಡಿದ ಸೂಚನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಸೇನಾಧಿಪತ್ಯ ನಿರಾಕರಿಸಿದೆ. ಸ್ವದೇಶಕ್ಕೆ ಹೋಗಲು ಇಷ್ಟಪಡದ ಕೈದಿಗಳಿಗೆ ವಿವರಣೆಯನ್ನು ಕೊಡುವ ಕೆಲಸದಲ್ಲಿ ಅನಾವಶ್ಯಕವಾದ ವಿಘ್ನಗಳು ಬಂದುದರಿಂದ—ಒಪ್ಪಂದದ ಈ ಅಂಶ ತನ್ನ ಉದ್ದೇಶ ಸಾಧನೆಯಲ್ಲಿ ಸಂಪೂರ್ಣ ವಿಫಲಗೊಂಡಿರುವುದು ನಿಜ. ಒಪ್ಪಂದದಲ್ಲಿ ಹೇಳಿದಂತೆ ಮುಂದಿನ ಜನವರಿ ೨೨ನೇ ತಾರೀಕಿನೊಳಗೆ ಕೊರಿಯಾದ ರಾಜಕೀಯ ಸಮ್ಮೇಳನವು ಕೂಡಿ, ಈಗ ಭಾರತೀಯ ಸೈನಿಕರ ಯೋಗಕ್ಷೇಮದಲ್ಲಿರುವ ಯುದ್ಧಕೈದಿಗಳ ಭವಿಷ್ಯ ನಿರ್ಣಯಿಸದಿದ್ದರೆ ಆಗ ಎಲ್ಲ ಬಂದಿಗಳನ್ನೂ ಬಿಡುಗಡೆ ಮಾಡುವುದಾಗಿ ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷ ತಿಮ್ಮಯ್ಯನವರು ಸಾರಿದ್ದಾರೆ. ರಾಜಕೀಯ ಸಮ್ಮೇಳನ ಸೇರಿಸುವ ವಿಷಯದಲ್ಲಿ ನಡೆಯುತ್ತಿದ್ದ ಪೂರ್ವಭಾವಿ ಸಮಾಲೋಚನೆಗೆ ಅಮೇರಿಕದ ಪ್ರತಿನಿಧಿ ಬಹಿಷ್ಕಾರ ಹಾಕಿ, ಈಗ ವಾಶಿಂಗಟನ್ನಿಗೆ ಮರಳಿ ಹೋಗಿರುವರು. ರಶಿಯಾ ಯುದ್ಧಭಾಗಿ ರಾಷ್ಟ್ರವಾಗಿ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಬೇಕೋ ತಟಸ್ಥ ರಾಷ್ಟ್ರವಾಗಿಯೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದು—ಅದು ಬಗೆಹರಿಯುವ ಲಕ್ಷಣವಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಆಗ ರಾಜಕೀಯ ಸಮ್ಮೇಳನವೂ ಸೇರುವುದಿಲ್ಲ. ಪರಿಣಾಮದಲ್ಲಿ ಭಾರತೀಯ ಸೈನಿಕರು ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಿದಾಗ ಅವರ ಮೇಲೆ ಕಮ್ಯೂನಿಸ್ಟರು ಆಕ್ರಮಣ ಮಾಡುವರೆಂದೂ ಇದರಿಂದ ಕೊರಿಯಾದಲ್ಲಿ ಯುದ್ಧವು ಮರಳಿ ಕಿಡಿಕಾರುವುದೆಂದೂ ಡೀನರು ಅಧ್ಯಕ್ಷ ಐಸೆನ ಹೋವರರಿಗೆ ವರದಿ ಒಪ್ಪಿಸಿರುವರೆಂದು ತಿಳಿಯುತ್ತದೆ.

ನವಯುಗ
ಪ್ರಕಟಣೆ

ನಾವು ವರ್ಷಕ್ಕೊಂದು ಬಾರಿ ರಜೆ ಪಡೆವ ವಾಡಿಕೆಯಂತೆ ಬರುವ ವಾರದ (31—12—53) ಸಂಚಿಕೆಯನ್ನು ಪ್ರಕಟಿಸುವುದಿಲ್ಲ.

—ಮೆನೇಜರ್.

In the Court of the District Munsiff of Kundapur.

(O. S. No. 684 of 1952)

R. E. P. 590/53.

Petitioner: Nagamma Shedthi— *Plaintiff,*

against

Respt:- Kotari Koraga— *Defendant.*

To,

The Respondent, Kotari Koraga S/o Putti Hengsu, residing at Kotari adi of Beloor Village, Coondapur Taluk.

Whereas in the above named suit the petitioner—the decree-holder has applied for the sale of Mortgage right; You are hereby informed that the 6th day of January 1954 has been fixed for settling the terms of the proclamation of sale.

B. S. Shetty, B A., B. L.,
Vakil for Petitioner.

Coondapoor, 19-12-53.

ಶಿವಾನಂದ ಪ್ರಕೃತಿ ಚಿಕಿತ್ಸಾ ಸೆನಿಟೋರಿಯಮ್.

ಶಿವಾನಂದ ನಗರ, ಆನಂದ ಕುಟೀರ ಪೋಸ್ಟು, ಋಷಿಕೇಶ (ಹಿಮಾಲಯ) ಇವರ ಆಶ್ರಯದಲ್ಲಿ ಮುಂದಿನ ಜನವರಿ ತಿಂಗಳ ತಾ ೬ರಿಂದ ಆಸ್ತಮಾ ಇತ್ಯಾದಿ ಕಠಿನ ರೋಗಗಳ ಚಿಕಿತ್ಸಾ ಯಜ್ಞ ಪ್ರಾರಂಭವಾಗಲಿರುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ನವಯುಗ ಪ್ರಜಾರಾಜ್ಯ ವಿಶೇಷಾಂಕವು

ಪ್ರಸಿದ್ಧ ಲೇಖಕರನೇಕರ
ವಿವಿಧ ಬರೆಹಗಳಿಂದ
ಹಲವಾರು ಚಿತ್ರಗಳಿಂದ
ಕಣ್ಮನಾನಂದಕರವಾಗಿ
ತಾ. 26—1—1954ಕ್ಕೆ
ವಿಶೇಷ ರೀತಿಯಲ್ಲಿ ಪ್ರಕಟವಾಗುವುದು.
ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

25—12—53ರಿಂದ ಅಮೋಘ ಪ್ರಾರಂಭ

ರೋಬರ್ಟ್ ಟೈಲರ್
ನಟಿಸಿದ, ವರ್ಣರಂಜಿತ ಚಿತ್ರ

ಕೊ ವಾ ಡಿ ಸ್

QUO-VADIS

COLOUR BY TECHNICOLOUR

ಉಡುಪಿ

ವಾಲಶಾನದರ್ಶಂತಿ— [illegible] ಸಹಕಾರಿ ಜೂನಿಯರ ಟ್ರೈನಿಂಗ [illegible] ತಿ ಸಮಾರಂಭವು ಇದೇ ತಾ. 20 ರಲ್ಲಿ ಸಂಜೆ ಎಮ್. ಜಿ. ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ ಮಿಸ್ಟ್ರೆಸ್ ಶ್ರೀಮತಿ ಎಲ್. ಜೆ. ಭಂಡಾರಿಯವರು ವರದಿಯನ್ನೋದಿದರು. ಕುಮಾರಿಯರಾದ ಶೋಭಿನ ರಾವ್ ಮತ್ತು ಟಿ. ಪರಿಮಳಾ ಶೈಗರು ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ವಿವಿಧ ವಿನೋದಾವಳಿಗಳಾಗಿ ಸಮಾರಂಭವು ಕೊನೆಗೊಂಡಿತು.

ಸಂತರ್ಪಣೆ— ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಇದೇ ತಾ 19ರಲ್ಲಿ ತಮ್ಮ ವಾದಿರಾಜ ಮಠದಲ್ಲಿ ವಿಶೇಷ ರೀತಿಯಲ್ಲಿ ಅನ್ನ ಸಂತರ್ಪಣೆ ನಡೆಸಿದರು.

ಶ್ರೀ. ಟಿ. ರಮೇಶ ಶೈಗಳು— ಅಖಿಲ ಭಾರತ ಉತ್ಪಾದಕರ ಸಂಘದ ನಿಯೋಗ ಮಂಡಳಿಯ ಸದಸ್ಯರಾಗಿ ಜಪಾನಿಗೆ ಹೋಗಿ ೧ನೇ ತಾ ೧೬ರಲ್ಲಿ ಮಂಗಳೂರಿಗೆ ಬಂದು ಆ ನಂತರ ಉಡುಪಿಗೆ ಹಿಂತಿರುಗಿರುವರು. ಇದೇ ತಾ 17ರಲ್ಲಿ ಮಂಗಳೂರಿನ ರೋಟರಿ ಕ್ಲಬ್ಬಿನಲ್ಲಿ ಅವರು ತಮ್ಮ ವಿದೇಶ ಪ್ರವಾಸದ ಅನುಭವದ ಕುರಿತು ಭಾಷಣವಿತ್ತರು. ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ಸಿ. ಎಸ್. ಕುದ್ವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ [illegible] ರಕ್ಷಕರ ಕಾಮತರು ವರದಿಯನ್ನೋದಿದರು. ಶ್ರೀ ಪಿ. ಆರ್. ರಂಗನಾಥ ಪೂಂಜರು ಧನ್ಯವಾದಗಳನ್ನರ್ಪಿಸಿದರು.

ಇನ್ನಂಜೆ— ಇಲ್ಲಿಯ ಶ್ರೀ ವಿಶ್ವನೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ 19ರಲ್ಲು ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಶ್ರೀನಿವಾಸ ಮಿತ್ತಂತಾಯರು ಸ್ವಾಗತ ಮಾತುಗಳನ್ನಾಡಿದರು. ಮುಖ್ಯೋಪಾಧ್ಯಾಯ ಶ್ರೀ ಎ. ಶ್ಯಾಮರಾಯರು ವರದಿಯನ್ನೋದಿದರು. ಬಳಿಕ ಅಧ್ಯಕ್ಷ ಭಾಷಣ, ವಿನೋದಾವಳಿಗಳಾಗಿ ಸಮಾರಂಭ ಮುಕ್ತಾಯವಾಯಿತು.

ಕಾಪು— ಕಾಪು ಸರ್ಕಲಿನ ಪಂಚಾಯತ ಬೋರ್ಡು ಪ್ರೆಸಿಡೆಂಟರುಗಳ ಪರಿಷತ್ತು ಇದೇ ತಾ 20ರಲ್ಲಿ. ಕಾಪು ನಂದಿತೀರ್ಥ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಸ್. ಎ. ಹೆಗ್ಡೆ, ಪ್ರೆಸಿಡೆಂಟ್, ಶಿರ್ವ ಪಂಚಾಯತ ಬೋರ್ಡ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಪು ಫಿರ್ಕಾ ಪಂಚಾಯತ ಬೋರ್ಡ್ ಯೂನಿಯನ್ ಒಂದನ್ನು ಸ್ಥಾಪಿಸುವುದಾಗಿಯೂ ಆ ಬಗ್ಗೆ ಕ್ರಮ ನಿಬಂಧನೆಗಳನ್ನು ತಯಾರಿಸುವರೆ ಆರು ಜನರ ಸಬ್ ಕಮಿಟಿಯೊಂದು ರಚಿಸಲ್ಪಟ್ಟಿತು.

ಮೂಲ್ಕಿ— ಸ್ಥಳೀಯ ಸರಕಾರಿ ಹೈಸ್ಕೂಲಿನ ವಾರ್ಷಿಕೋತ್ಸವವು ಮುಂದಿನ ಜನವರಿ ತಿಂಗಳ ಕೊನೆಯಲ್ಲಿ ಜರಗಲಿದ್ದು ಆ ಬಗ್ಗೆ ಸಿದ್ಧತೆಗಳನ್ನು ಮಾಡಲು ವಾರ್ಷಿಕೋತ್ಸವ ಸಮಿತಿ ರಚನೆಯಾಗಿದೆ. ಈ ಶಾಲೆಯ ಹಳೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಧನಗಳಿಂದ ವಾರ್ಷಿಕೋತ್ಸವಕ್ಕೆ ನೆರವು ನೀಡಬೇಕಾಗಿ ಮುಖ್ಯೋಪಾಧ್ಯಾಯರ ಕೋರಿಕೆಯಿದೆ. ಸಹಾಯ ಧನವನ್ನು "ಕಾರ್ಯದರ್ಶಿ, ಶಾಲಾ ವಾರ್ಷಿಕೋತ್ಸವ ಸಮಿತಿ, ಗವರ್ನಮೆಂಟ್ ಹೈಸ್ಕೂಲ್, ಮೂಲ್ಕಿ ದ. ಕನ್ನಡ. ಈ ವಿಳಾಸಕ್ಕೆ ಕಳುಹಿಸ ಬಹುದು.

ಕಟಪಾಡಿ— ಸ್ಥಳೀಯ ಎಸ್. ವಿ. ಎಸ್. ಶಾಲೆಯಲ್ಲಿ ತಾ 16 ರಂದು ಗೀತಾ ಜಯಂತಿಯೋತ್ಸವವು ಶ್ರೀ ಕಾಸು ಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಗೋಪಾಲ ನಾರಾಯಣಾಚಾರ್ಯ, ಕೃಷ್ಣಾನಂದ ಹೆಗ್ಡೆ, ಅನಂತ ಪುರಾಣಿಕ ಮೊದಲಾದವರ ಭಾಷಣ ಗಳಾದ ಬಳಿಕ ಶ್ರೀ ಬಾಬು ಮತ್ತು ಪಾರ್ಟಿಯವರ ಸಂಗೀತ ಕಚೇರಿ ನಡೆಯಿತು.

ಸಾಂತೂರು— ಸಾಂತೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗುವ ಸಾರ್ವಜನಿಕರ ಉಪಯೋಗಾರ್ಥವಾಗಿ ಸಾಂತೂರು ಪಂಚಾಯತ ಬೋರ್ಡಿನಿಂದಲೂ ಗ್ರಾಮಸ್ಥರ ಸಹಾಯ ಧನದಿಂದಲೂ ಮಾಡಿಸಿದ ಹೊಸ ರಸ್ತೆಯ ಉದ್ಘಾಟನೆಯನ್ನು ಇದೇ ತಾ 12ರಲ್ಲು ಅದಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಸಾಂತೂರು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಎಸ್. ಸಂಜೀವ ಶೆಟ್ಟಿ, ಉಪಾಧ್ಯಕ್ಷ ಶ್ರೀ ಎಲ್ಲಪ್ಪ ಶೆಟ್ಟಿ, ಪಟೇಲ್ ಶ್ರೀ ಚಂದು ಶೆಟ್ಟಿ, ಶ್ಯಾನುಭಾಗ್ ಶ್ರೀ ಲಕ್ಷ್ಮೀ ನಾರಾಯಣ ರಾವ್, ಕಂಬಳ ಗುತ್ತು ಶ್ರೀ ಸುಂದರ ರಾವ್ ಮೊದಲಾದ ಅನೇಕರು ವಿಶೇಷತ ಹಾಜರಿದ್ದರು.

ಬಜ್ಪೆ— ಮಂಗಳೂರಿನ ಸರಕಾರಿ ತರಬೇತು ಕಾಲೇಜಿನ ಸೆಕೆಂಡರಿ ವಿಭಾಗದ ಪೌರ ಶಿಕ್ಷಣ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವನ್ನು ಇದೇ ತಾ 12ರಲ್ಲು ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ನೆರವೇರಿಸಿದರು. ಪ್ರಿನ್ಸಿಪಾಲ್ ಶ್ರೀ ರಾಘವ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಶಿಭಿರಾಧಿಪರು ಶ್ರೀ ಬಿ. ಪಿ. ರಮಣನವರು ಸಮಾಜದ ಹಾಗೂ ರಾಷ್ಟ್ರದ ಪ್ರಗತಿಪರ ಹಿತ ದೃಷ್ಟಿಯಿಂದ ರಚಿಸಲ್ಪಟ್ಟ ಈ ತರಬೇತಿನ ಪ್ರಾಮುಖ್ಯತೆಯನ್ನು ವಿವರಿಸಿದರು. ಶ್ರೀ ಹೆಗ್ಡೆಯವರು ಇಂತಹ ನಾಗರಿಕ ಶಿಕ್ಷಣ ತರಬೇತಿ ಶಿಬಿರಗಳ ಆವಶ್ಯಕತೆಯನ್ನೆತ್ತಿ ಮಾತನಾಡಿದರು. ನಂತರ ವಿವಿಧ ವಿನೋದಾವಳಿ ಕಾರ್ಯಕ್ರಮ ಜರಗಿತು.

ಮಣಿಪಾಲ- ಸ್ಥಳೀಯ ಪ್ರೌಢ ಶಾಲೆಯಲ್ಲಿ ಅವರಾಷ್ಟ್ರ, ಜಪಾನಿಗೆ ಪ್ರವಾಸಿಸಿದ ಶ್ರೀ ಟಿ. ರಮೇಶ ಪೈ ಮತ್ತು ಅವರ ಒಳಗ ಡವರನ್ನು ಸತ್ಕರಿಸುವ ಸಮಾರಂಭ ಜರಗಿತು. ಡಾ। ಟಿ. ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದರು. ಮುಖ್ಯೋಪಾಧ್ಯಾಯರ ಪ್ರಾಸ್ತಾವಿಕ ಭಾಷಣಾಂತರ ಶ್ರೀ ಟಿ. ರಮೇಶ ಪೈಗಳು ತಮ್ಮ ಪ್ರವಾಸದ ಅನುಭವಗಳನ್ನು ಜಪಾನಿನ ಜನಜೀವನ, ವಿದ್ಯಾಭ್ಯಾಸ, ಆರ್ಥಿಕ ಮತ್ತು ಕೈಗಾರಿಕೆಯ ಕ್ಷೇತ್ರದಲ್ಲಿ ಅವರ ಪ್ರಗತಿ, ಪ್ರಾಮಾಣಿಕತೆಗಳ ಕುರಿತು ಭಾಷಣವಿತ್ತರು. ಡಾ। ಟಿ. ಮಾಧವ ಪೈಗಳವರು ತಮ್ಮ ಕುಟುಂಬದವರ ಸುಪ್ರವಾಸದ ಸಂತೋಷಕ್ಕಾಗಿ ಸಭಿಕರಿಗೆ ಹಾಲಿನ ವಿತರಣೆ ಮಾಡಿಸಿದರು.

ಕುಂಬಳೆ— ಕಾಸರಗೋಡು ನೇಕಾರರ ಸಹಕಾರ ನಿರ್ಮಾಣ ಸಂಘದ ಶಾಖೆಯೊಂದನ್ನು ಇದೇ ತಾ 16ರಿಂದ ಇಲ್ಲಿಯ ಬಸ್ ನಿಲ್ದಾಣದ ಬಳಿಯಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲಾಗಿದೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ

ಇದೇ ತಾ 13ರಲ್ಲು ಶ್ರೀ ಎಸ್. ಎಸ್. ಡಿ. ಒಂಟೋಲರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಕಾರ್ಯದರ್ಶಿ ಶ್ರೀ ಬಿ ಆರ್. ಕರ್ಕೆರರು ಒಪ್ಪಿಸಿದ ಕಾಂಗ್ರೆಸ್ ಕಮಿಟಿ ಕಾರ್ಯಕಲಾಪಗಳ ವರದಿ ಮಂಜೂರಾಯಿತು. ಶ್ರೀಗಳಾದ ಬೆನಗಲ್ ನರಸಿಂಗ ರಾವ್, ಪರಿಪೂರ್ಣನಾಥ ಶಾಸ್ತ್ರಿ, ರಘುನಂದನಸರಣರ ನಿಧನಕ್ಕಾಗಿ ಸಂತಾಪ ಸೂಚಿಸುವ ಗೊತ್ತುವಳಿಯಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಛೇರಿಯಿಂದ ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಚಾರ ಮುಂದೊತ್ತುವರೆ ಇಬ್ಬರು ಪ್ರಚಾರಕರನ್ನು ಕೂಡಲೇ ನೇಮಿಸಬೇಕೆಂದಾಯಿತು. ಪ್ರಾಥಮಿಕ ಸದಸ್ಯರನ್ನೂ ಕ್ರಿಯಾಶೀಲ ಸದಸ್ಯರನ್ನೂ ಸೇರಿಸಲು ಮತ್ತು ಕಾಂಗ್ರೆಸ್ ಪ್ರಚಾರ ನಡೆಸಲು ಪ್ರತಿ ಸರ್ಕಲಿನಲ್ಲೂ ಒಬ್ಬೊಬ್ಬ ಪ್ರಚಾರಕರನ್ನು ನೇಮಿಸುವುದು ಆಗತ್ಯವೆಂದು ಸಭೆಯ ಅಭಿಪ್ರಾಯವಾಯಿತು.

ಈ ತನಕ ತಮ್ಮ ವಂತಿಗೆ ಬಾಕಿಮಾಡಿಕೊಂಡಿರುವ ಶಾಸನ ಸಭಾ ಸದಸ್ಯರೆಲ್ಲರೂ ಡಸಂಬರ ತಿಂಗಳ ವರೆಗಿನ ತಮ್ಮ ಬಾಕಿಯನ್ನು ಕೊಡಬೇಕೆಂದೂ, ಹೊಸವರುಷದಿಂದ ಪ್ರಾಂತಿಕ ಶಾಸನ ಸಭಾ ಸದಸ್ಯರು ತಿಂಗಳೊಂದರ ರೂ 15 ರಂತೆಯೂ ಕೇಂದ್ರದ ಸದಸ್ಯರೂ ಪ್ರಾಂತಿಕ ಮಂತ್ರಿಗಳೂ ರೂ 25-ರಂತೆಯೂ ವಂತಿಗೆ ತೆರಬೇಕೆಂದೂ ಈ ಕುರಿತು ಅಧ್ಯಕ್ಷರು ಅವರಿಗೆ ಪತ್ರ ಬರೆದು ತಿಳಿಸಬೇಕೆಂದೂ ನಿರ್ಣಯವಾಯಿತು. ಮುನಿಸಿಪಾಲಿಟಿಗಳ ಕಾಂಗ್ರೆಸ್ ಸದಸ್ಯರಿಂದ ತಿಂಗಳೊಂದರ ರೂ 3 ರಂತೆ ವಂತಿಗೆಯನ್ನು ಕಮಿಟಿಯ ಉಪಾಧ್ಯಕ್ಷ ಡಾ। ಯು. ಪಿ. ಮಲ್ಯರು ವಸೂಲು ಮಾಡಿ ಕೊಡಬೇಕೆಂದಾಯಿತು. ಕೆ. ಪಿ. ಸಿ. ಸಿ. ಯ ಸದಸ್ಯರು ತಿಂಗಳೊಂದರ ರೂ 2/ ರಂತೆಯೂ ಡಿ. ಸಿ. ಸಿ. ಸದಸ್ಯರು ತಿಂಗಳೊಂದರ ರೂ 1 -ರಂತೆಯೂ ವಂತಿಗೆ ಕೊಡತಕ್ಕದೆಂದೂ ನಿರ್ಣಯವಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆಯನ್ನು ತಾ 15—2—54ರೊಳಗೆ ನಡೆಸುವುದೆಂದಾಯಿತು. ಮಂತ್ರಿಗಳು ಜಿಲ್ಲಾ ಸಂಚಾರವನ್ನು ಕೈಕೊಳ್ಳುವಾಗ ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಂಡು ಕಾಂಗ್ರೆಸ್ ಕಾರ್ಯಕ್ರಮವನ್ನು ಏರ್ಪಡಿಸಬೇಕಾಗಿ ವಿನಂತಿಸಲಾಯಿತು. ಅಧ್ಯಕ್ಷ, ಉಪಾಧ್ಯಕ್ಷ, ಡಾ। ಯು. ಪಿ. ಮಲ್ಯ ಮತ್ತು ಪ್ರಧಾನ ಕಾರ್ಯದರ್ಶಿಗಳು ಕೂಡಿಕೊಂಡು ಮೂರು ಮಂದಿ ಸದಸ್ಯರುಳ್ಳ ಪರಿಶೀಲನಾ ಸಮಿತಿಯನ್ನು ನೇಮಿಸಬೇಕಾಗಿ ಗೊತ್ತುವಳಿಯಾಯಿತು.

ಕುಂದಾಪುರ— ಸ್ಥಳೀಯ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕಿನ ಸಾಧಾರಣ ಎರಡು ಲಕ್ಷ ರೂಪಾಯಿಗಳ ವಂಚನೆಯ ಕುರಿತು ಆದ ತಕ್ಷೀರು ವಿಚಾರಣೆಯು ಇದೇ ತಾ 6ರಿಂದ ಕೆಪ್ಟನ್ ಶ್ರೀನಿವಾಸನ್, ಸ್ಪೆಶಲ್ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಪ್ರಾರಂಭವಾಗಿದೆ. ಶ್ರೀ ಎ. ಮಾಧವ ಪೈಗಳ ವಿಚಾರಣೆ ಮುಗಿದು ಎರಡನೆ ಸಾಕ್ಷಿಗಾರರಾದ ಶ್ರೀ ವಿಶ್ವನಾಥ ನಾಯಕರ ವಿಚಾರಣೆ ನಡೆಯುತ್ತಲಿದೆ. ಸರಕಾರಕಡೆಯಿಂದ ಸ್ಪೆಶಲ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಕೆ. ನಾರಾಯಣ ರೈಗಳು ಸಿ. ಐ. ಡಿ. ಖಾತೆಯ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ಮತ್ತು ಸಬ್ ಇನ್ಸ್‌ಪೆಕ್ಟರ್ ಶ್ರೀ ಎಮ್. ಎಸ್. ಮಾನಿಪಾಡಿಯವರ ಕೂಡೆಯೂ ಆ ಪಾದಿವರ ಕಡೆಯಿಂದ ಕುಂದಾಪುರ ಬಾರಿನ ಶ್ರೀಗಳಾದ ಎಮ್. ಅಂತಯ್ಯ ಶೆಟ್ಟಿ, ನರಸಿಂಹ ಕಾಮತ್, ಕೆ. ಎಲ್. ಭಂಡಾರಿ, ಜಿ ಮಂಜುನಾಥ ನಾಯಕರು ವಕಾಲತ್ತು ನಡೆಸುತ್ತಿರುವರು.

ಕನ್ನಡ ಸಾಹಿತ್ಯ ಸಮ್ಮೇಳನ

೩೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಇದೇ ೧೯೫೩ನೆಯ ಡಿಸೆಂಬರ್ ತಿಂಗಳ ದಿನಾಂಕ ೨೬, ೨೭, ಮತ್ತು ೨೮ ಈ ಮೂರು ದಿನಗಳಲ್ಲೂ ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಟೌನ್ ಹೈಸ್ಕೂಲಿನ ಆವರಣದಲ್ಲಿ ನಡೆಯುತ್ತದೆ.

ಪ್ರಖ್ಯಾತ ಕವಿಗಳೂ ನಾಟಕಕಾರರೂ ವಾಗ್ಮಿಗಳೂ ಆದ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ. ಎ., ಅವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು. ಭಾರತ ಕೇಂದ್ರ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಡಿ. ಪಿ. ಕರಮರಕರ ಅವರು ಸಮ್ಮೇಳನವನ್ನು ಉದ್ಘಾಟಿಸುವರು. ಅದರಂತೆ ಸಮ್ಮೇಳನದ ಅಂಗವಾಗಿ ಜರಗಲಿರುವ "ಕಲಾ—ಪ್ರದರ್ಶನ"ವನ್ನು ಮುಂಬೈ ರಾಜ್ಯದ ಉಪ ಆರೋಗ್ಯ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಉದ್ಘಾಟಿಸಲಿರುವರು.

ಶ್ರೀಮಾನ್ ವೆಂಕಟೇಶ ಭೀಮರಾವ ನಾಯಕ, ಎಂ. ಎ., ಎಲ್. ಎಲ್. ಬಿ., ಅವರು ಸಾಹಿತ್ಯಗೋಷ್ಠಿಯ ಅಧ್ಯಕ್ಷತೆಯನ್ನೂ, ಶ್ರೀಮಾನ್ ಪಿ. ರಮಾನಂದ, ಎಮ್. ಎಸ್. ಸಿ., ಅವರು ವಿಜ್ಞಾನ ಗೋಷ್ಠಿಯ ಅಧ್ಯಕ್ಷತೆಯನ್ನೂ ಶ್ರೀಮಾನ್ ಕೆ. ವಿ. ವೆಂಕಪ್ಪ ಶೆಟ್ಟಿ, ಅವರು ಯಕ್ಷ-ನಾಟಕ ಗೋಷ್ಠಿಯ ಅಧ್ಯಕ್ಷತೆಯನ್ನೂ ವಹಿಸುವರು.

(ಏನೇ ಪುಟದಿಂದ)

ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೋಸ್ಕರ ಮಾತೃಭಾಷೆ ಗಣಿತ, ವಿಜ್ಞಾನ ಇತಿಹಾಸ ಹಾಗೂ ಪೌರ ನೀತಿಯ ಸಾಮಾನ್ಯ ಪರಿಚಯವನ್ನು ನಾಲ್ಕನೇ ತರಗತಿಯ ಒಳಗಿನವರಿಗೆ ಕೊಟ್ಟು, ಅವರ ಶಾಲೇತರ ಚಟುವಟಿಕೆಗಳ ಹೊಣೆಯನ್ನು ಹೆತ್ತವರ ಮೇಲೆ ಬಿಟ್ಟುಗೊಟ್ಟಂತೆನಿಸುತ್ತದೆ. ಐದರಿಂದ ಎಂಟನೇ ವರ್ಗಗಳಲ್ಲಿ ಕೈಗಾರಿಕೆ, ಗೃಹವಿಜ್ಞಾನ, ಕೃಷಿ ಮುಂತಾದುವುಗಳಲ್ಲಿ ಶಿಕ್ಷಣ ಕೊಡಲ್ಪಡುತ್ತದೆ ಈ ದ್ವಿತೀಯ ಅಂಶವನ್ನು ಹೊಸ ಸರಕಾರದ ಹೊಸ ಪದ್ಧತಿ ಮುಟ್ಟುವುದಿಲ್ಲ ಆದರೆ ನಾಲ್ಕನೇ ತರಗತಿ ವರೆಗಿನ ಮಕ್ಕಳ ಶಿಕ್ಷಣದ ವಿಷಯದಲ್ಲಿ ಎರಡೂ ಸರಕಾರಗಳು ಸಾಮಾನ್ಯವಾದ ತತ್ವವೊಂದಕ್ಕೆ ಅಂಟಿಕೊಂಡಂತೆ ಕಂಡುಬರುತ್ತದೆ.

'ವೀರಮಾತೆ'

ಸ್ತ್ರೀಯ ಹಾಗೂ ಮಕ್ಕಳ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ಸಂಪಾದಕಿಯರು-ಕುಂ. ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು ಬಿ. ಎಚ್. ಹೈಬತನಾಳ. ಬಿ. ಎ.

ವೀರಮಾತೆ ಕಾರ್ಯಾಲಯ, ಧಾರವಾಡ.

ವಾರ್ಷಿಕ ಚಂದಾಹಣ ರೂಪಾಯಿ 5/ ಬಿಡಿ ಸಂಚಿಕೆ 0-6-0.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜುಮ್ಲಾ ವಹಿವಾಟು .... „ 60,50,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4¼% ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ. ಬಿ. ಎಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ. ಏಜಂಟರು, ಸ್ಪೆಶ್ಯಲ್ ಏಜಂಟರು, ಅರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ವಿವರಕ್ಕೆ ಬರೆಯಿರಿ:

ಮೆನೇಜರ್,
ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.



ಮಂಗಳೂರು

ಮಂಗಳೂರು ವಕೀಲ ಸಂಘದ ಸಭೆಯು— ಇದೇ ತಾ 19ರಲ್ಲು ಜರಗಿ ಈ ನಿರ್ಣಯವನ್ನು ಪಾಸು ಮಾಡಿತು; ಕಳೆದ ಹಲವು ವರ್ಷಗಳಿಂದ ಈ ಜಿಲ್ಲೆಯಲ್ಲಿ ಯಥಾ ಪ್ರಕಾರ ಮಳೆ ಬಂದಿರುವುದರಿಂದ ಇತ್ತೀಚೆಗಿನ ಮದ್ರಾಸಿನ ಆರ್ಡಿನೆನ್ಸನ್ನು ಜ್ಯಾರಿ ಮಾಡಲು ಯಾವುದು ಮುಖ್ಯ ಕಾರಣವಾಗಿತ್ತೋ ಆ ಬರಗಾಲವು ಇರಲ್ಲಿಲ್ಲ. ಈ ಜಿಲ್ಲೆಯ ಪರಿಸ್ಥಿತಿಯು ತಮಿಳು ನಾಡಿನ ಪರಿಸ್ಥಿತಿಯಿಂದ ಭಿನ್ನವಾಗಿದೆ. ಅಲ್ಲದೆ ಅಗಾಗ ಖಾಸಗಿ ಸಾಲ ಸಿಕ್ಕುವಲ್ಲಿ ಕಾನೂನು ಹಸ್ತಕ್ಷೇಪ ಮಾಡುವಲ್ಲಿ ಕೃಷಿಕರಿಗೇ ತುಂಬಾ ಹಾನಿಯಾಗುವುದು. ಏಕೆಂದರೆ ಸರಕಾರ ಅಥವಾ ಇತರ ಸಂಸ್ಥೆಗಳಿಂದ ಸಾಲಕೊಡುವ ವ್ಯವಸ್ಥೆ ಆಸದಿದ್ದಲ್ಲಿ ಕೃಷಿಕರಿಗೆ ತಮ್ಮ ಕಾರ್ಯ ನಡೆಸಲು ಕಷ್ಟವಾದೀತು. ಈ ಜಿಲ್ಲೆಯ ಕೃಷಿಕರಿಂದ ಯಾ ಅವರ ಪರವಾಗಿ ಇಂತಹ ಶಾಸನದ ಬೇಡಿಕೆ ಇರಲೇ ಇಲ್ಲ. ಆದುದರಿಂದ 1953ರ ...ನೇ ಮದ್ರಾಸು ಆರ್ಡಿನೆನ್ಸು ಅಥವಾ ಅದರ ಸ್ಥಾನದಲ್ಲಿ ಮಾಡಲಾಗುವ ಇತರ ಶಾಸನದಿಂದ ಈ ಜಿಲ್ಲೆಗೆ ವಿನಾಯತಿ ಕೊಡಬೇಕೆಂದು ಸಂಘದ ಅಭಿಪ್ರಾಯವಾಗಿದೆ.

ಹೈಸ್ಕೂಲು ವಾರ್ಷಿಕೋತ್ಸವ— ಬಾಸೆಲ್ ಮಿಶನ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ 20ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಿಜಾರು ಗೋವಿಂದ ಪೈಗಳು ಶಾಲೆಯ ಸ್ವಸ್ತಿವಾಚನ ಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಜ. ಇ. ಐಮನರು ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗ ಸರಕಾರದವರು ಪ್ರೌಢ ವಿದ್ಯಾಭ್ಯಾಸ ಕ್ರಮದಲ್ಲಿ ನೀತಿ ಮತ್ತು ಸಮಾಜ ಶಿಕ್ಷಣಕ್ಕೊಂದು ಗಣ್ಯ ಸ್ಥಾನವಿತ್ತುದು ಸಂತೋಷಕರವೆಂದರು. ಶ್ರೀ ಕ್ಲೆರ್, ಅವರು ಧನ್ಯವಾದಗಳನ್ನರ್ಪಿಸಿದರು.

ಹಂಪನಕಟ್ಟೆ ಸಿಟಿಜನ್ಸ್ ಲೈಬ್ರೆರಿ ಮತ್ತು ಫ್ರೀರೀಡಿಂಗ್ ರೂಮಿನ ಪ್ರಥಮ ವಾರ್ಷಿಕೋತ್ಸವವು ಇದೇ ತಾ 19ರಲ್ಲು ಬೆಳಿಗ್ಗೆ ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಪಿ. ಎಮ್. ನಾರಾಯಣ ಮೂರ್ತಿಯವರು ಗತ ವರುಷದ ವರದಿಯನ್ನೋದಿದರು. ಶ್ರೀ ಮಂಜಯ್ಯ ಹೆಗ್ಡೆಯವರು ಮಾತನಾಡುತ್ತಾ ಪ್ರತಿ ಹಳ್ಳಿಗೂ ವಾಚನಾಲಯದ ಅವಶ್ಯಕತೆಯನ್ನು ಸೂಚಿಸಿದರು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ರಮಾನಾಥ, ಎ. ಕೃಷ್ಣ ಸೆಟ್ಟಿ ಮೊದಲಾದವರು ಮಾತನಾಡಿದರು. ಶ್ರೀ ಬಿ. ಈಶ್ವರ ಭಟ್ಟರು ವಂದನೆಗಳನ್ನರ್ಪಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No. 594/1953

ದಿ. ಮಹರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್ ಉಡುಪಿ—ಕಡೆಯಿಂದ ಏಜಂಟ್ ಕೆ. ರಾಮಕೃಷ್ಣ ಕಾಮತ್... ....ವಾದಿ.

ಮತ್ತು

N. ವಿಟ್ಠಲದಾಸ ಕೂಡಾ.....ಪ್ರತಿವಾದಿರು.

To—

1st Deft N. Vittaladasa—son of Subbanna alias Ramadas C/of— Navayuga Restaurant Kapileshwar Road, Belguam

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 10-9-52ರಲ್ಲಿ ರೂಪಾಯಿ 300-0-0ಕ್ಕೆ ಬರೆಕೊಟ್ಟ ಪ್ರೋಮಿಸರಿ ನೋಟಿನ ವಗೈರೆ ಅಸಲು ವ ಬಡ್ಡಿ ಕೂಡಾ ರುಪ್ಯಾ394-15-0 ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದರಿ ದಾವೆಯು ತಾರೀಕು 11-1-1954 ಕ್ಕೆ ಇಟ್ಟದೆ—ಆ ದಿನ್ನ ಬೆಳಿಗ್ಗೆ 10 ಘಂಟೆಗೆ ಸದರಿ 1ನೇಪ್ರತಿವಾದಿಯುಸ್ವತಹಾ-ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಇದ್ರೆ 1ನೇ ಪ್ರತಿವಾದಿಯು ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ಸದರಿ 1ನೇ ಪ್ರತಿವಾದಿಗೆ ತಿಳಿಯ ಪಡಿಸೋಣಾಗಿಯದೆ.

M. Damodor Kamath
Advocate for Pltf.

ಉಡುಪಿ ದ. ಕ. ತಾ. 21-12-1953

ನೌಕಾದಿನ— ಭಾರತೀಯ ನೌಕಾದಳದ ಆರನೆ ವಾರ್ಷಿಕೋತ್ಸವದ ಅಂಗವಾಗಿ ನೌಕಾದಿನವು ತಾ 19ರಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. ಶ್ರೀ ಪಿ. ಆರ್. ರಂಗನಾಥ ಪೂಂಜರು ನೌಕಾ ದಿನಾಚರಣೆಯ ಉದ್ದೇಶವನ್ನು ವಿವರಿಸಿದರು. ಬಳಿಕ ರೈಟ್ ರೆವ ರೆಂಡ್ ಡಾ ವಿಕ್ಟರ್. ಆರ್. ಫೆರ್ನಾಂಡೀಸ್, ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ, ಕೃಷ್ಣಸ್ವಾಮಿ, ಕೆ. ಸೂರ್ಯನಾರಾಯಣ ಅಡಿಗ, ಬಿ. ರಾಘವ ಬಾಳಿಗ, ಎ. ಮುಂಡಪ್ಪ, ಕುಮಾರಿ ಸುರೋಜಿನಾ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು. ತಹಶಿಲ್ದಾರ್ ಶ್ರೀ ಎಚ್. ಜಿ. ಕೆದ್ಲಾಯರು ಧನ್ಯವಾದಗಳನ್ನರ್ಪಿಸಿದರು.

ಬುನಾದಿ ಶಿಕ್ಷಣ ತರಬೇತಿ ಶಾಲೆಯ— ವರ್ಧಂತಿ ಸಮಾರಂಭವು ತಾ 19ರಲ್ಲು ಗವರ್ನಮೆಂಟ್ ಕಾಲೇಜು ಪ್ರಿನ್ಸಿಪಾಲ್ ಕುಮಾರಿ ಸಿ. ಸೀತಮ್ಮಾಳ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶ್ರೀನಿವಾಸ ಉಡುಪರು ಸ್ವಸ್ತಿವಾಚನ ಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಎಮ್. ಮಾರ್ಟಿನರು ವರದಿಯನ್ನೋದಿದರು. ಸಭಾಧ್ಯಕ್ಷೆಯವರು, ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗುವುದು ಒಳ್ಳೆಯದೆಂದು ಹೇಳಿದರು. ಶ್ರೀ ಜೆ. ಡಬ್ಲ್ಯು. ಅಮ್ಮಣ್ಣನವರು ವಂದನೆಗಳನ್ನರ್ಪಿಸಿದರು.

ಅಂಚೆ ಮತ್ತು ತಂತಿ ಕೆಲಸಗಾರರ ಜಿಲ್ಲಾ ಸಮ್ಮೇಳನವು— ಇದೇ ತಾ. 20ರಲ್ಲು ಬೆಳಿಗ್ಗೆ ನಗರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಗಂಗಾಧರ ದಾಸರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ. ಯವರು ಸಮ್ಮೇಳನದ ಉದ್ಘಾಟನೆ ಮಾಡುತ್ತಾ, ಅಂಚೆ ತಂತಿ ಕೆಲಸಗಾರರು ಐಕ್ಯದಿಂದಿದ್ದು ಒಂದೇ ಸಂಘಟನೆಗೊಳಪಟ್ಟಿರುವುದು ಉತ್ತಮವೆಂದೂ ಅತಿಮಹತ್ವದ ಮತ್ತು ತತ್ವದ ಪ್ರಶ್ನೆಗಳಿಗೆ ಧಕ್ಕೆ ಬರುವಂತಿದ್ದರೆ ಮಾತ್ರ ಮುಷ್ಕರ ಹೂಡ ಬೇಕಲ್ಲದೆ ಚಿಲ್ಲರೆ ಕಾರಣಗಳಿಗಾಗಿ ಮುಷ್ಕರ ಹೂಡಬಾರದಾಗಿ ಹೇಳಿದರು. ಶ್ರೀ ಕೆ. ಪಿ ಆಚಾರ್ಯರು ಸಮ್ಮೇಳನಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನೋದಿದರು. ದ. ಕ. ಜಿಲ್ಲಾ ಪೋಸ್ಟಾಫೀಸುಗಳ ಸುಪರಿಂಟೆಂಡೆಂಟರಾದ ಶ್ರೀ ಆರ್. ಬಿ. ವಿಶ್ವನಾಥನರು ತಮ್ಮ ಭಾಷಣದಲ್ಲಿ ಜಿಲ್ಲೆಯಲ್ಲಿ ಆಡಳಿತೆ ಅಧಿಕಾರಿಗಳ ಮತ್ತು ನೌಕರರೊಳಗಿನ ಸಂಬಂಧವು ಬಹಳ ಉತ್ತಮ ವಿದೆಯೆಂದು ಹೇಳಿದರು.

ಮಧ್ಯಾಹ್ನ ಯೂನಿಯನ್ನಿನ ಮಹಾಸಭೆಯು ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ವಿಮಾನ ಅಪಘಾತದಲ್ಲಿ ಮೃತ್ಯುವಿಗೀಡಾದ ಶ್ರೀ ಹರಿಹರನಾಥ ಶಾಸ್ತ್ರಿ, ಎಮ್. ಪಿ. ಅವರ ಅಕಾಲ ನಿಧನಕ್ಕೆ ದುಃಖ ಸೂಚಿಸುವ ನಿರ್ಣಯ ವಾಯಿತು. ನಂತರ ಇಲಾಖೆಯ ನೌಕರರಿಗೆ ಸಂಬಂಧ ಪಟ್ಟ ಹಲವು ನಿರ್ಣಯ ಗಳಾದುವು. ಬಳಿಕ ಹೊಸ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು. ಪ್ರಾಂತಿಕ ಕೌನ್ಸಿಲಿಗೆ ಶ್ರೀ ಕೆ. ಪಿ. ಆಚಾರ್ಯರನ್ನೂ, ಲೆಕ್ಕ ಪರಿಶೋಧನೆಗೆ ಶ್ರೀ ಎಸ್. ಕೆ. ಪೊಳ್ಯರನ್ನೂ ಆರಿಸಲಾಯಿತು. ವಂದನಾರ್ಪಣೆ ಯೊಂದಿಗೆ ಸಭಾಂತ್ಯ ವಾಯಿತು.

ಗೀತಾಜಯಂತಿ— ಬೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಕಳೆದ ತಾ 16ರಂದು ಡಾ। ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಗೀತಾ ವಾಚನ, ಗೀತಾ ಸಂಗೀತಗಳಾದ ಬಳಿಕ ಶ್ರೀಗಳಾದ ಶ್ರೀನಿವಾಸ ಉಡುಪ, ಪಿ. ಕೆ. ನಾರಾಯಣ, ಕೆ. ಲೋಕಯ್ಯ ಸೆಟ್ಟಿ ಮೊದಲಾದವರು ಗೀತೆಯ ಮಹತ್ವ ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿದರು. ಸಭಾಧ್ಯಕ್ಷರ ಭಾಷಣವಾದ ಬಳಿಕ ಶ್ರೀ ರಾಜನ್ ಅಯ್ಯರವರ ಗೀತೋಪದೇಶವೆಂಬ ನೃತ್ಯವಾಯಿತು. **ಗೀತಾಮಂದಿರದಲ್ಲಿಯೂ** ಗೀತಾಜಯಂತಿ ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಸಂತರ್ಪಣೆ— ಬಸವನಗುಡಿಯ ಶ್ರೀ ಕೆ. ಆರ್. ಕೆ. ಶೇಟರ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ತಾ 17ರಲ್ಲು ಮುಕ್ಕೋಟಿ ದ್ವಾದಶಿ ನಿಮಿತ್ತ ಕಾಲಂಪ್ರತಿ ಜರಗುವ ಪಾಲಕಿ ಉತ್ಸವ, ಬ್ರಾಹ್ಮಣ ಸಂತರ್ಪಣೆ ಸಾಂಗವಾಗಿ ಜರಗಿತು.

ನಗರ ಸಭೆಯು— ಈಚೆಗೆ ಜರಗಿದಾಗ ಸರ್ ಬಿ. ಎನ್. ರಾಯರ ನಿಧನಕ್ಕೆ ಸಂತಾಪ ಸೂಚಿಸುವ ನಿರ್ಣಯವಾಯಿತು. ನಗರ ಸಭೆಯ ಸದಸ್ಯರಾದ ಶ್ರೀ ಯು. ಅಹಮ್ಮದ್ ಹುಸೇನರು ನಗರ ಸಭೆಯ ಪೊರೊಂಬೋಕು ಸ್ಥಳದಲ್ಲಿ ಕಟ್ಟಿಸಿದ ಕಟ್ಟಡಕ್ಕೆ ಲೈಸೆನ್ಸು ಕೊಡಬೇಕೆಂದು ಮಾಡಿದ ಅರ್ಜಿಯ ಕುರಿತು ತುಂಬಾ ಚರ್ಚೆ ನಡೆಯಿತು. ಇದೇ ಸ್ಥಳದ ಕುರಿತು ರೆವಿನ್ಯೂ ಡಿವಿಜನಲ್ ಆಫೀಸರರು ತನಿಖೆ ಮಾಡಿ ತಮ್ಮ ವರದಿಯಲ್ಲಿ ಶ್ರೀ ಅಹಮ್ಮದ್ ಹುಸೇನರು ಕಟ್ಟಿಸಿದ ಕಟ್ಟಡವು ರಸ್ತೆ ಪೊರೊಂಬೋಕು ಸ್ಥಳವನ್ನಾಕ್ರಮಿಸಿದ್ದು ನಿಯಮ ಬಾಹಿರವೆಂದೂ, ಈ ಆಕ್ರಮಣವನ್ನು ಮನ್ನಿಸಿ, ಹಾಗೆಯೇ ಬಿಟ್ಟರೆ ಇತರರೂ ಈ ರೀತಿ ವರ್ತಿಸುವಂತಾದೀತೆಂದೂ, ಆದ್ದರಿಂದ ಅದನ್ನು ಅವರಿಗೆ ಗೇಣಿಗೆ ಕೊಡಬಾರದೆಂದೂ ಹೇಳಿದ್ದರು. ಕೊನೆಗೆ ಶ್ರೀ ಅಹಮ್ಮದ್ ಹುಸೇನರು ಆಕ್ರಮಿಸಿದ ಸ್ಥಳವನ್ನು ಅವರಿಗೆ ಗೇಣಿಗೆ ಕೊಡುವಂತೆ ಲೋಕಲ್ ಬೋರ್ಡು ಇನ್ಸ್ಪೆಕ್ಟರಿಗೆ ಶಿಫಾರಸು ಮಾಡಬೇಕೆನ್ನುವ ಶ್ರೀ ಮಿಜಾರು ಗೋವಿಂದ ಪೈಗಳ ನಿರ್ಣಯವು ಬಹುಮತದಿಂದ ಪಾಸಾಯಿತು. ತದನಂತರ ಡಾ ಕೆ. ನಾಗಪ್ಪ ಆಳ್ವರು ತಂದ ಸೂಚನೆಯಂತೆ ಶ್ರೀ ಅಹಮ್ಮದ್ ಹುಸೇನರು ಆಕ್ರಮಿಸಿ ಕಟ್ಟಿದ ಕಟ್ಟಡ ಭಾಗದ ಸ್ಥಳಕ್ಕೆ ಗೇಣಿ ನಿಶ್ಚಯಿಸಲು ಒಂದು ಕಮಿಟಿಯ ರಚನೆಯಾಯಿತು.

ವಿವಾಹ ಸಮಾರಂಭ:— ಶ್ರೀ ಬಿ. ಆರ್. ಬಾಳಿಗರ ಪುತ್ರ ಶ್ರೀಮತಿ ಪದ್ಮಾ ಅವರು ಶ್ರೀ ಯು. ಆರ್. ಶೆಣೈಯವರ ಪುತ್ರ ಶ್ರೀ ಮೋಹನ ಆರ್. ಶೆಣೈ, ಮುನ್ಸಿಪಲ್ ಸದಸ್ಯ, ಅವರನ್ನು ಇದೇ ತಾ 20ರಲ್ಲು ಬೆಳಿಗ್ಗೆ ಭುವನೇಂದ್ರ ಹೋಲಿನಲ್ಲಿ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 415/53. S. C. 92/48

ಕಾಶ್ಮೀರ ಕುಂಞ. .... .ಅರ್ಜಿದಾರ.

ಬಾಬುರಾಯ ಕಮ್ತಿ. ಅನಂತ ಕಮ್ತಿ ಮಗ. ಬೆಳ್ತಂಗಡಿ ಕಸಬಾ ....ಎದ್ರಿ.

ಎದ್ರಿಗೆ ತಿಳಿಸುವುದೇನೆಂದರೆ:—

ಕ್ರಯಚೀಟಿನಲ್ಲಿ ಅವಾಸತಿಟ್ಟ ಪ್ರಕಾರ ಅರ್ಜಿದಾರನಿಂದ ಎದ್ರಿಗೆ ಸಲ್ಲಬೇಕಾದ ಹಣವನ್ನು ಪಡೆಯುವರೆ ಎದ್ರಿ ಗಿರುವ ಹಕ್ಕನ್ನು ಜಪ್ತಿ ಮಾಡಬೇಕೆಂತ ಅರ್ಜಿದಾರ ದಾಖಲು ಮಾಡಿದ ಈ ಅಮಲ್ದಾರಿಯು ತಾ 8-1-54ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಹಾಜ್ರಾಗಿ ಉದರ್ ಸಿಕೊಳ್ಳತಕ್ಕದ್ದು. ತಪ್ಪಿದರೆ ನಿ[illegible]. ಈ ಅಮಲ್ದಾರಿ[illegible] ತೀರ್ಮಾನಿಸಲ್ಪಡುವದು.

B. Chidananda Rao.
Vakil for petitioner.

ಪುತ್ತೂರು ತಾ 13-12-53

॥ ಕರಿಷ್ಯೆ ಮಹೀಮಯಂ ನಿರ್ಜರಾಮರಣಾಂ ॥

—ಆಯುರ್ವೈದ್ಯಾಶ್ರಮ—

[ಸ್ಥಾಪನೆ: 1933]

ಅಬಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಹ್ಯ ರೋಗಗಳು, [illegible], ಬಂಜೆತನ, ಚರ್ಮವ್ಯಾಧಿಗಳು, ಮುಂತಾದವುಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ. ಪ್ರಬಲವಾದ ವಾತರೋಗಗಳನ್ನು [illegible]

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—೦ ಶುಶ್ರೂಷಾಲಯದಲ್ಲಿ ೦—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು. ಅತ್ಯಂತ ಅನೋಘ ಪ್ರಯೋಗಗಳನ್ನು ಪಾದರಸ ಲಿಂಗಗಳ ಮೂಲಕ ಕೈಕೊಳ್ಳುವೆವು. ಪತ್ರ ವ್ಯವಹಾರ ಮಾಡಿ ವಿವರ ತಿಳಿಯಬಹುದು.

ಕದ್ರಿ, ಮಂಗಳೂರು. } ಪ್ರಧಾನ ವೈದ್ಯರು: ಎಂ. ಎಸ್. ಭಿಡೆ, ಆಯುರ್ವೇದ ಭಿಷಕ್.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್ಮೆಂಟ್ ಪೋಲಿಸಿಗಳ ಮೇಲೆ ರೂ. 16- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-0 } ರೂ. 1000ಕ್ಕೆ

[illegible]

ಜೀವ ವಿಮೆಗಾಗಲೀ, ಪ್ರಾತಿನಿಧ್ಯ ಏಜೆನ್ಸಿಗಾಗಲೀ

ಸಮೀಪದ [illegible] ಅಪೇಕ್ಷಿತ [illegible]

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

1954ನೇ ಇಸವಿಯ

ಡೈರಿಗಳು

ದೊರೆಯುತ್ತವೆ.

ದೊಡ್ಡ ಸೈಜು	1	8	0
ಮಧ್ಯ ಸೈಜು	1	4	0
ಸಣ್ಣ ಸೈಜು	0	12	0
ಪುಟವಲ್ಲಿ 2 ತಾರೀಕಿದ್ದು	0	6	0

ಅತ್ಯಂತ ವ್ಯಾಪಾರಿಗಳಿಗೆ ಉಪಯುಕ್ತವಾದ ವರ್ಗ ಶಾಲೆಗ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಇನ್ನಂಜೆ— ಇಲ್ಲಿಯ ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ವರ್ಧಂತ್ಯುತ್ಸವವು ಇದೇ ತಾ 19ರಲ್ಲಿ ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಶ್ರೀನಿವಾಸ ಮಿತ್ತಂತಾಯರು ಸ್ವಾಗತ ಮಾತುಗಳನ್ನಾಡಿದರು. ಮುಖ್ಯೋಪಾಧ್ಯಾಯ ಶ್ರೀ ಎ. ಶ್ಯಾಮರಾಯರು ವರದಿಯನ್ನೋದಿದರು. ಬಳಿಕ ಅಧ್ಯಕ್ಷ ಭಾಷಣ, ವಿನೋದಾವಳಿಗಳಾಗಿ ಸಮಾರಂಭ ಮುಕ್ತಾಯವಾಯಿತು

ಕಾಪು— ಕಾಪು ಸರ್ಕಲಿನ ಪಂಚಾಯತ ಬೋರ್ಡು ಪ್ರೆಸಿಡೆಂಟರುಗಳ ಪರಿಷತ್ತು ಇದೇ ತಾ 20ರಲ್ಲಿ ಕಾಪು ದಂಡತೀರ್ಥ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಸ್. ಎ. ಹೆಗ್ಡೆ, ಪ್ರೆಸಿಡೆಂಟ್, ಶಿರ್ವ ಪಂಚಾಯತ ಬೋರ್ಡ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಪು ಸರ್ಕಲ್ ಪಂಚಾಯತ ಬೋರ್ಡು ಯೂನಿಯನ್ ಒಂದನ್ನು ಸ್ಥಾಪಿಸುವುದಾಗಿಯೂ ಆ ಬಗ್ಗೆ ಕ್ರಮ ನಿಬಂಧನೆಗಳನ್ನು ತಯಾರಿಸುವರೆ ಆರು ಜನರ ಸಬ್ ಕಮಿಟಿಯೊಂದು ರಚಿಸಲ್ಪಟ್ಟಿತು.

ಮೂಲ್ಕಿ—ಸ್ಥಳೀಯ ಸರಕಾರಿ ಹೈಸ್ಕೂಲಿನ ವಾರ್ಷಿಕೋತ್ಸವವು ಮುಂದಿನ ಜನವರಿ ತಿಂಗಳ ಕೊನೆಯಲ್ಲಿ ಜರಗಲಿದ್ದು ಆ ಬಗ್ಗೆ ಸಿದ್ಧತೆಗಳನ್ನು ಮಾಡಲು ವಾರ್ಷಿಕೋತ್ಸವ ಸಮಿತಿ ರಚನೆಯಾಗಿದೆ ಈ ಶಾಲೆಯ ಹಳೆ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತನುಮನ ಧನಗಳಿಂದ ವಾರ್ಷಿಕೋತ್ಸವಕ್ಕೆ ನೆರವು ನೀಡಬೇಕಾಗಿ ಮುಖ್ಯೋಪಾಧ್ಯಾಯರ ಕೋರಿಕೆಯಿದೆ. ಸಹಾಯ ಧನವನ್ನು "ಕಾರ್ಯದರ್ಶಿ, ಶಾಲಾ ವಾರ್ಷಿಕೋತ್ಸವ ಸಮಿತಿ, ಗವರ್ನಮೆಂಟ್ ಹೈಸ್ಕೂಲ್, ಮೂಲ್ಕಿ ದ. ಕನ್ನಡ. ಈ ವಿಳಾಸಕ್ಕೆ ಕಳುಹಿಸ ಬಹುದು.

ಕಟಪಾಡಿ.—ಸ್ಥಳೀಯ ಎಸ್. ವಿ ಎಸ್. ಶಾಲೆಯಲ್ಲಿ ತಾ 16 ರಂದು ಗೀತಾ ಜಯಂತಿಯಾಚರಣೆಯು ಶ್ರೀ ಕಾಪು ಕೃಷ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಗಳಾದ ನಾರಾಯಣಾಚಾರ್ಯ, ಕೃಷ್ಣಾನಂದ ಹೆಗ್ಡೆ, ಅನಂತ ಪುರಾಣಿಕ ಮೊದಲಾದವರ ಭಾಷಣ ಗಳಾದ ಬಳಿಕ ಶ್ರೀ ಬಾಬು ಮತ್ತು ಪಾರ್ಟಿಯವರ ಸಂಗೀತ ಕಚೇರಿ ನಡೆಯಿತು.

ಸಾಂತೂರು—ಸಾಂತೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಹೋಗುವ ಸಾರ್ವಜನಿಕರ ಉಪಯೋಗಾರ್ಥವಾಗಿ ಸಾಂತೂರು ಪಂಚಾಯತ ಬೋರ್ಡಿನಿಂದಲೂ ಗ್ರಾಮಸ್ಥರ ಸಹಾಯ ದಿಂದಲೂ ಮಾಡಿಸಿದ ಹೊಸ ರಸ್ತೆಯ ಉದ್ಘಾಟನೆಯನ್ನು ಇದೇ ತಾ 12ರಲ್ಲಿ ಅಧಮಾರು ಮಠದ ಶ್ರೀ ವಿಭುದೇಶ ತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಸಾಂತೂರು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಎಸ್. ಸಂಜೀವ ಸೆಟ್ಟಿ, ಉಪಾಧ್ಯಕ್ಷ ಶ್ರೀ ಎಲ್ಲಪ್ಪ ಸೆಟ್ಟಿ, ಪಟೇಲ್ ಶ್ರೀ ಚಂದು ಸೆಟ್ಟಿ, ಶ್ಯಾನುಭಾಗ್ ಶ್ರೀ ಲಕ್ಷ್ಮೀ ನಾರಾಯಣ ರಾವ್, ಕಂಬಳ ಗುತ್ತು ಶ್ರೀ ಸುಂದರ ರಾವ್ ಮೊದಲಾದ ಅನೇಕರು ವಿಶೇಷತ ಹಾಜರಿದ್ದರು.

ಬಜ್ಪೆ—ಮಂಗಳೂರಿನ ಸರಕಾರಿ ತರಬೇತು ಕಾಲೇಜಿನ ಸೆಕೆಂಡರಿ ವಿಭಾಗದ ಪೌರ ಶಿಕ್ಷಣ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವನ್ನು ಇದೇ ತಾ 12ರಲ್ಲಿ ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ನೆರವೇರಿಸಿದರು. ಪ್ರಿನ್ಸಿಪಾಲ್ ಶ್ರೀ ರಾಘವ ಬಾಳಿಗರು ಅಧ್ಯಕ್ಷತೆ ವಹಿಸಿದ್ದರು. ಶಿಬಿರಾಧಿಪತಿ ಶ್ರೀ ಬಿ. ಪಿ. ರಮಣನವರು ಸಮಾಜದ ಹಾಗೂ ರಾಷ್ಟ್ರದ ಪ್ರಗತಿಪರ ಹಿತ ದೃಷ್ಟಿಯಿಂದ ರಚಿಸಲ್ಪಟ್ಟ ಈ ತರಬೇತಿನ ಪ್ರಾಮುಖ್ಯತೆಯನ್ನು ವಿವರಿಸಿದರು. ಶ್ರೀ ಹೆಗ್ಡೆಯವರು ಇಂತಹ ನಾಗರಿಕ ಶಿಕ್ಷಣ ತರಬೇತಿ ಶಿಬಿರಗಳ ಆವಶ್ಯಕತೆಯನ್ನೆತ್ತಿ ಮಾತನಾಡಿದರು. ನಂತರ ವಿವಿಧ ವಿನೋದಾವಳಿ ಕಾರ್ಯಕ್ರಮ ಜರಗಿತು.

ಮಣಿಪಾಲ - ಸ್ಥಳೀಯ ಸಿಂಡಿಕೇಟ್ ಬ್ಯಾಂಕಿಯಲ್ಲಿ ಅಪರಾಹ್ನ, ಜಪಾನಿಗೆ ಪ್ರವಾಸಿಸಿದ ಶ್ರೀ ಟಿ. ರಮೇಶ ಪೈ ಮತ್ತು ಅವರ ಬಳಗದವರನ್ನು ಸತ್ಕರಿಸುವ ಸಮಾರಂಭ ಜರಗಿತು. ಡಾ। ಟಿ. ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದರು. ಮುಖ್ಯೋಪಾಧ್ಯಾಯರ ಪ್ರಾಸ್ತಾವಿಕ ಭಾಷಣಾಂತರ ಶ್ರೀ ಟಿ. ರಮೇಶ ಪೈಗಳು ತಮ್ಮ ಪ್ರವಾಸದ ಅನುಭವಗಳನ್ನು ಜಪಾನಿನ ಜನಜೀವನ, ವಿದ್ಯಾಭ್ಯಾಸ, ಆರ್ಥಿಕ ಮತ್ತು ಕೈಗಾರಿಕೆಯ ಕ್ಷೇತ್ರದಲ್ಲಿ ಅವರ ಪ್ರಗತಿ, ಪ್ರಾಮಾಣಿಕತೆಗಳ ಕುರಿತು ಭಾಷಣವಿತ್ತರು. ಡಾ॥ ಟಿ. ಮಾಧವ ಪೈಗಳವರು ತಮ್ಮ ಕುಟುಂಬವರ ಸುಖಪ್ರವಾಸದ ಸಂತೋಷಕ್ಕಾಗಿ ಸಭಿಕರಿಗೆ ಹಾಲಿನ ಹಿತರಣೆ ಮಾಡಿಸಿದರು.

ಕುಂಬಳೆ—ಕಾಸರಗೋಡು ನೇಕಾರ ಸಹಕಾರ ನಿರ್ಮಾಣ ಸಂಘದ ಶಾಖೆಯೊಂದನ್ನು ಇದೇ ತಾ 16ರಂದು ಇಲ್ಲಿಯ ಬಸ್ ನಿಲ್ದಾಣದ ಬಳಿಯಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲಾಗಿದೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ

ಇದೇ ತಾ 13ರಲ್ಲಿ ಶ್ರೀ ಎಸ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಕಾರ್ಯದರ್ಶಿ ಶ್ರೀ ಬಿ ಆರ್. ಕರ್ಕೆರರು ಒಪ್ಪಿಸಿದ ಕಾಂಗ್ರೆಸ್ ಕಮಿಟಿ ಕಾರ್ಯಕಲಾಪಗಳ ವರದಿ ಮಂಜೂರಾಯಿತು. ಶ್ರೀಗಳಾದ ಬೆನಗಲ್ ನರಸಿಂಗ ರಾವ್, ಹರಿಹರನಾಥ ಶಾಸ್ತ್ರಿ, ರಘುನಂದನಶರಣರ ನಿಧನಕ್ಕಾಗಿ ಸಂತಾಪ ಸೂಚಿಸುವ ಗೊತ್ತುವಳಿಯಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಡೆಯಿಂದ ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಚಾರ ಮುಂದೊತ್ತುವರೆ ಇಬ್ಬರು ಪ್ರಚಾರಕರನ್ನು ಕೂಡಲೇ ನೇಮಿಸಬೇಕೆಂದಾಯಿತು. ಪ್ರಾಥಮಿಕ ಸದಸ್ಯರನ್ನೂ ಕ್ರಿಯಾಶೀಲ ಸದಸ್ಯರನ್ನೂ ಸೇರಿಸಲು ಮತ್ತು ಕಾಂಗ್ರೆಸ್ ಪ್ರಚಾರ ನಡೆಸಲು ಪ್ರತಿ ಸರ್ಕಲಿನಲ್ಲೂ ಒಬ್ಬೊಬ್ಬ ಪ್ರಚಾರಕರನ್ನು ನೇಮಿಸುವುದು ಅಗತ್ಯವೆಂದು ಸಭೆಯ ಅಭಿಪ್ರಾಯವಾಯಿತು.

ಈ ತನಕ ತಮ್ಮ ವಂತಿಗೆ ಬಾಕಿಮಾಡಿಕೊಂಡಿರುವ ಶಾಸನ ಸಭಾ ಸದಸ್ಯರೆಲ್ಲರೂ ದಶಂಬರ ತಿಂಗಳ ವರೆಗಿನ ತಮ್ಮ ಬಾಕಿಯನ್ನು ಕೊಡಬೇಕೆಂದೂ, ಹೊಸವರುಷದಿಂದ ಪ್ರಾಂತಿಕ ಶಾಸನ ಸಭಾ ಸದಸ್ಯರು ತಿಂಗಳೊಂದರ ರೂ 15 ರಂತೆಯೂ ಕೇಂದ್ರದ ಸದಸ್ಯರೂ ಪ್ರಾಂತಿಕ ಮಂತ್ರಿಗಳೂ ರೂ 25 -ರಂತೆಯೂ ವಂತಿಗೆ ತೆರಬೇಕೆಂದೂ ಈ ಕುರಿತು ಅಧ್ಯಕ್ಷರು ಅವರಿಗೆ ಪತ್ರ ಬರೆದು ತಿಳಿಸಬೇಕೆಂದೂ ನಿರ್ಣಯವಾಯಿತು. ಮುನಿಸಿಪಾಲಿಟಿಗಳ ಕಾಂಗ್ರೆಸ್ ಸದಸ್ಯರಿಂದ ತಿಂಗಳೊಂದರೆ ರೂ 3 ರಂತೆ ವಂತಿಗೆಯನ್ನು ಕಮಿಟಿಯ ಉಪಾಧ್ಯಕ್ಷ ಡಾ। ಯು. ಪಿ. ಮಲ್ಯರು ವಸೂಲು ಮಾಡಿ ಕೊಡಬೇಕೆಂದಾಯಿತು. ಕೆ. ಪಿ. ಸಿ. ಸಿ. ಯ ಸದಸ್ಯರು ತಿಂಗಳೊಂದರ ರೂ 2/ ರಂತೆಯೂ ಡಿ. ಸಿ. ಸಿ. ಸದಸ್ಯರು ತಿಂಗಳೊಂದರ ರೂ 1 -ರಂತೆಯೂ ವಂತಿಗೆ ಕೊಡತಕ್ಕದೆಂದೂ ನಿರ್ಣಯವಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆಯನ್ನು ತಾ 15—3—54 ರೊಳಗೆ ನಡೆಸುವುದೆಂದಾಯಿತು. ಮಂತ್ರಿಗಳು ಜಿಲ್ಲಾ ಸಂಚಾರವನ್ನು ಕೈಕೊಳ್ಳುವಾಗ ಜಿಲ್ಲಾ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಂಡು ಕಾಂಗ್ರೆಸ್ ಕಾರ್ಯಕ್ರಮವನ್ನು ಏರ್ಪಡಿಸಬೇಕಾಗಿ ವಿನಂತಿಸಲಾಯಿತು. ಅಧ್ಯಕ್ಷ, ಉಪಾಧ್ಯಕ್ಷ, ಡಾ। ಯು ಪಿ. ಮಲ್ಯ ಮತ್ತು ಪ್ರಧಾನ ಕಾರ್ಯದರ್ಶಿಗಳು ಕೂಡಿಕೊಂಡು ಮೂರು ಮಂದಿ ಸದಸ್ಯರುಳ್ಳ ಪರಿಶೀಲನಾ ಸಮಿತಿಯನ್ನು ನೇಮಿಸಬೇಕಾಗಿ ಗೊತ್ತುವಳಿಯಾಯಿತು.

ಕುಂದಾಪುರ—ಸ್ಥಳೀಯ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕಿನ ಸಾಧಾರಣ ಎರಡು ಲಕ್ಷ ರೂಪಾಯಿಗಳ ವಂಚನೆಯ ಕುರಿತು ಆದ ತಕ್ಸೀರು ವಿಚಾರಣೆಯು ಇದೇ ತಾ ೮ರಿಂದ ಕೆಪ್ಟನ್ ಶ್ರೀನಿವಾಸನ್, ಸ್ಪೆಶಲ್ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಪ್ರಾರಂಭವಾಗಿದೆ. ಶ್ರೀ ಎ. ಮಾಧವ ಪೈಗಳ ವಿಚಾರಣೆ ಮುಗಿದು ಎರಡನೆ ಸಾಕ್ಷಿಗಾರರಾದ ಶ್ರೀ ವಿಶ್ವನಾಥ ನಾಯಕರ ವಿಚಾರಣೆ ನಡೆಯುತ್ತಲಿದೆ. ಸರಕಾರಕಡೆಯಿಂದ ಸ್ಪೆಶಲ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಕೆ. ನಾರಾಯಣ ರೈಗಳು ಸಿ. ಐ. ಡಿ. ಶಾಖೆಯ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ಮತ್ತು ಸಬ್ ಇನ್ಸ್‌ಪೆಕ್ಟರ್ ಶ್ರೀ ಎಮ್. ಎಸ್. ಮೂನಪ್ಪಾದಿಯವರ ಕೂಡೆಯೂ ಆ ಪಾದಿತರ ಕಡೆಯಿಂದ ಕುಂದಾಪುರ ಬಾರಿನ ಶ್ರೀಗಳಾದ ಎಮ್. ಅಂತಯ್ಯ ಶೆಟ್ಟಿ, ನರಸಿಂಹ ಕಾಮತ್, ಕೆ. ಎಲ್. ಭಂಡಾರಿ, ಜಿ ಮಂಜುನಾಥ ನಾಯಕರು ವಕಾಲತ್ತು ನಡೆಸುತ್ತಿದ್ದಾರೆ.

ಕನ್ನಡ ಸಾಹಿತ್ಯ ಸಮ್ಮೇಳನ

೩೬ನೇ ಕನ್ನಡ ಸಾಹಿತ್ಯ ಸಮ್ಮೇಳನ ಇದೇ ೧೯೫೩ನೆಯ ಡಿಸೆಂಬರ್ ತಿಂಗಳ ದಿನಾಂಕ ೨೮, ೨೯, ಮತ್ತು ೩೦ ಈ ಮೂರು ದಿನಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ಟೌನ್ ಹೈಸ್ಕೂಲಿನ ಆವರಣದಲ್ಲಿ ನಡೆಯುತ್ತದೆ.

ಪ್ರಖ್ಯಾತ ಕವಿಗಳೂ ನಾಟಕಕಾರರೂ ವಾಗ್ಮಿಗಳೂ ಆದ ಶ್ರೀಮಾನ್ ವಿ. ಸೀತಾರಾಮಯ್ಯ, ಎಂ ಎ., ಅವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸುವರು. ಭಾರತ ಕೇಂದ್ರ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಡಿ. ಪಿ. ಕರಮರಕರ ಅವರು ಸಂಮೇಳನವನ್ನು ಉದ್ಘಾಟಿಸುವರು ಅದರಂತೆ ಸಂಮೇಳನದ ಅಂಗವಾಗಿ ಜರಗಲಿರುವ "ಕಲಾ—ಪ್ರದರ್ಶನ"ವನ್ನು ಮುಂಬೈ ರಾಜ್ಯದ ಉಪ ಆರೋಗ್ಯ ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು ಉದ್ಘಾಟಿಸಲಿರುವರು.

ಶ್ರೀಮಾನ್ ವೆಂಕಟೇಶ ಭೀಮರಾವ ನಾಯಕ, ಎಂ. ಎ , ಎಲ್. ಎಲ್. ಬಿ., ಅವರು ಪತ್ರಿಕಾಗೋಷ್ಠಿಯ ಅಧ್ಯಕ್ಷತೆಯನ್ನೂ, ಶ್ರೀಮಾನ್ ಪಿ. ರಮಾನಂದ, ಎಮ್. ಎಸ್. ಸಿ., ಅವರು ವಿಜ್ಞಾನ ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀಮಾನ್ ಕೆ. ವಿ. ವೆಂಕಪ್ಪ ಶೆಟ್ಟಿ, ಅವರು ಯಕ್ಷ-ನಾಟಕ ಗೋಷ್ಠಿಯ ಅಧ್ಯಕ್ಷತೆಯನ್ನೂ ವಹಿಸುವರು.

(೫ನೇ ಪುಟದಿಂದ)

ಮಟ್ಟವನ್ನು ಕಾಯ್ದುಕೊಳ್ಳುವುದಕ್ಕೋಸ್ಕರ ಮಾತೃಭಾಷೆ ಗಣಿತ, ವಿಜ್ಞಾನ ಇತಿಹಾಸ ಹಾಗೂ ಪೌರ ನೀತಿಯ ಸಾಮಾನ್ಯ ಪರಿಚಯವನ್ನು ನಾಲ್ಕನೇ ತರಗತಿಯ ಒಳಗಿನವರಿಗೆ ಕೊಟ್ಟು, ಅವರ ಶಾಲೇತರ ಚಟುವಟಿಕೆಗಳ ಹೊಣೆಯನ್ನು ಹೆತ್ತವರ ಮೇಲೆ ಬಿಟ್ಟುಕೊಟ್ಟಂತೆನಿಸುತ್ತದೆ. ೫ರಿಂದ ೭ನೇ ವರ್ಗಗಳಲ್ಲಿ ಕೈಗಾರಿಕೆ, ಗೃಹವಿಜ್ಞಾನ, ಕೃಷಿ ಮುಂತಾದುವುಗಳಲ್ಲಿ ಶಿಕ್ಷಣ ಕೊಡಲ್ಪಡುತ್ತದೆ ಈ ದ್ವಿತೀಯ ಅಂಶವನ್ನು ಮದ್ರಾಸು ಸರಕಾರದ ಹೊಸ ಪದ್ಧತಿ ಮುಟ್ಟುವುದಿಲ್ಲ ಅದರೆ ನಾಲ್ಕನೇ ತರಗತಿ ವರೆಗಿನ ಮಕ್ಕಳ ಶಿಕ್ಷಣದ ವಿಷಯದಲ್ಲಿ ಎರಡೂ ಸರಕಾರಗಳು ಸಾಮಾನ್ಯವಾದ ತತ್ವವೊಂದಕ್ಕೆ ಅಂಟಿಕೊಂಡಂತೆ ಕಂಡುಬರುತ್ತದೆ.

'ವೀರಮಾತೆ'

ಸ್ತ್ರೀಯ ಹಾಗೂ ಮಕ್ಕಳ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ

ಸಂಪಾದಕಿ ಎಮ್.-ಕೆ. ಸಮೋಚಿನ ಮಹಿಳ, ಎಂ. ಎ

ಪ್ರಕಾಶಕರು ಬಿ ನಾ ದೈತನಾಳ. ಬಿ. ಎ.

ವೀರಮಾತೆ ಕಾರ್ಯಾಲಯ,

ಧಾರವಾಡ.

ವಾರ್ಷಿಕ ವಂತಿಗೆ ರೂಪಾಯಿ ೩,

ಬಿಡಿ ಸಂಚಿಕೆ ೦ 6-೦.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. 10,87,000

ಜುಮ್ಲಾ ವಹಿವಾಟು .... ,, 60,50,000

ಕಾಯಂ ಠೇವಣಾತಿಗಳು ೩ ತಿಂಗಳಿನಿಂದ 2। ತಿಂಗಳಿನ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು

ಮೂರು ವರ್ಷ ಅವಧಿಯ ವಿಜಯ ಕ್ಯಾಶ್ ಸರ್ಟಿಫಿಕೇಟು ಠೇವಣಾತಿಯಲ್ಲಿ 4½ ಬಡ್ಡಿ ದರ ಗಳಿಸಿಕೊಳ್ಳಬಹುದು.

ಜಿಲ್ಲೆಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಮತ್ತು ಮಡಿಕೇರಿ, ಮುಂಬಾಯಿಗಳಲ್ಲಿ ಬೇಂಕಿನ ಶಾಖೆಗಳಿರುತ್ತವೆ.

ಕೆ ಸುಂದರರಾಮ ಶೆಟ್ಟಿ,
ಬಿ ಎ. ಬಿ. ಯಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

THE VIJAYA BANK, Limited.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ. ಏಜಂಟರು, ಸ್ಪೆಶಲ್ ಏಜಂಟರು, ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ವಿವರಕ್ಕೆ ಬರೆಯಿರಿ:

ಮೆನೇಜರ್,

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.

ಮಂಗಳೂರು

ಮಂಗಳೂರು ವಕೀಲ ಸಂಘದ ಸಭೆಯು—ಇದೇ ತಾ 19ರಲ್ಲಿ ಜರಗಿ ಈ ನಿರ್ಣಯವನ್ನು ಮಾಡಿತು; ಕಳೆದ ಹಲವು ವರ್ಷಗಳಿಂದ ಈ ಜಿಲ್ಲೆಯಲ್ಲಿ ಯಥಾಕಾಲ ಮಳೆ ಬಂದಿರುವುದರಿಂದ ಇತ್ತೀಚೆಗೆ ಮದ್ರಾಸಿನ ಆರ್ಡಿನೆನ್ಸನ್ನು ಜ್ಯಾರಿ ಮಾಡಲು ಯಾವುದು ಮುಖ್ಯ ಕಾರಣವಾಗಿತ್ತೋ ಆ ಬರಗಾಲವು ಇರಲಿಲ್ಲ. ಈ ಜಿಲ್ಲೆಯ ಒಕ್ಕಲಿಗರ ಸ್ಥಿತಿಯು ತಮಿಳು ನಾಡಿನ ಪರಿಸ್ಥಿತಿಯಿಂದ ಭಿನ್ನವಾಗಿದೆ. ಅಲ್ಲದೆ ಆಗಾಗ ಖಾಸಗಿ ಸಾಲ ವಿಷಯದಲ್ಲಿ ಕಾನೂನು ಹಸ್ತಕ್ಷೇಪ ಮಾಡುವುದರಲ್ಲಿ ಕೃಷಿಕರಿಗೇ ತುಂಬಾ ಹಾನಿಯಾಗುವುದು. ಏಕೆಂದರೆ ಸರಕಾರ ಅಥವಾ ಇತರ ಸಂಸ್ಥೆಗಳಿಂದ ಸಾಲಕೊಡುವ ವ್ಯವಸ್ಥೆ ಆಗದಿದ್ದಲ್ಲಿ ಕೃಷಿಕರಿಗೆ ತಮ್ಮ ಕಾರ್ಯ ನಡೆಸಲು ಅಸಾಧ್ಯವಾದೀತು. ಈ ಜಿಲ್ಲೆಯ ಕೃಷಿಕರಿಂದಲೂ ಅವರ ಪರವಾಗಿ ಇಂತಹ ಶಾಸನದ ಕೇಳಿಕೆ ಇರಲೇ ಇಲ್ಲ. ಆದುದರಿಂದ 1953ರ 4ನೇ ಮದ್ರಾಸು ಆರ್ಡಿನೆನ್ಸು ಅಥವಾ ಅದರ ಸ್ಥಾನದಲ್ಲಿ ಮಾಡಲಾಗುವ ಇತರ ಶಾಸನದಿಂದ ಈ ಜಿಲ್ಲೆಗೆ ವಿನಾಯಿತಿ ಕೊಡಬೇಕೆಂದು ಸಂಘದ ಅಭಿಪ್ರಾಯವಾಗಿದೆ.

ಹ್ಯಾಸ್ಕೂಲು ವಾರ್ಷಿಕೋತ್ಸವ—ಬಾಸೆಲ್ ಮಿಶನ್ ಹ್ಯಾಸ್ಕೂಲಿನ ವಾರ್ಷಿಕೋತ್ಸವವು ತಾ 20ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಿಜಾರು ಗೋವಿಂದ ಪೈಗಳು ಸಭೆಯ ಸ್ವಸ್ತಿವಾಚನ ಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಜಿ. ಇ. ಐಮನರು ವರದಿಯನ್ನೋದಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗ ಸರಕಾರದವರು ಪ್ರೌಢ ವಿದ್ಯಾಭ್ಯಾಸ ಕ್ರಮದಲ್ಲಿ ನೀತಿ ಮತ್ತು ಸಮಾಜ ಶಿಕ್ಷಣಕ್ಕೊಂದು ಗಣ್ಯ ಸ್ಥಾನವಿತ್ತುದು ಸಂತೋಷಕರವೆಂದರು. ಶ್ರೀ ಕ್ಲೈರ್, ಆವರು ಧನ್ಯವಾದಗಳನ್ನರ್ಪಿಸಿದರು.

ಹಂಪನಕಟ್ಟೆ ಸಿಟಿಜನ್ಸ್ ಲೈಬ್ರೆರಿ ಮತ್ತು ಫ್ರೀರೀಡಿಂಗ್ ರೂಮಿನ ಪ್ರಥಮ ವಾರ್ಷಿಕೋತ್ಸವವು ಇದೇ ತಾ 19ರಲ್ಲಿ ಬೆಳಿಗ್ಗೆ ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಪಿ. ಎಮ್. ನಾರಾಯಣ ಮೂರ್ತಿಯವರು ಗತ ವರುಷದ ವರದಿಯನ್ನೋದಿದರು. ಶ್ರೀ ಮಂಜಯ್ಯ ಹೆಗ್ಡೆಯವರು ಮಾತನಾಡುತ್ತಾ ಪ್ರತಿ ಹಳ್ಳಿಗೂ ವಾಚನಾಲಯದ ಅವಶ್ಯಕತೆಯನ್ನು ಸೂಚಿಸಿದರು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ರಮಾನಾಥ, ಎ. ಕೃಷ್ಣ ಶೆಟ್ಟಿ ಮೊದಲಾದವರು ಮಾತನಾಡಿದರು. ಶ್ರೀ ಬಿ. ಈಶ್ವರ ಭಟ್ಟರು ವಂದನೆಗಳನ್ನರ್ಪಿಸಿದರು.

ನೌಕಾದಿನ — ಭಾರತೀಯ ನೌಕಾದಳದ ಆರನೆ ವಾರ್ಷಿಕೋತ್ಸವದ ಅಂಗವಾಗಿ ನೌಕಾದಿನವು ತಾ 19ರಲ್ಲಿ ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ಮಹಾಲಿಂಗಂ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಕೆನರಾ ಹ್ಯಾಸ್ಕೂಲಿನಲ್ಲಿ ಜರಗಿತು. ಶ್ರೀ ಪಿ. ಆರ್. ರಂಗನಾಥ ಪೂಂಜರು ನೌಕಾ ದಿನಾಚರಣೆಯ ಉದ್ದೇಶವನ್ನು ವಿವರಿಸಿದರು. ಬಳಿಕ ರ್‍ಯಾಟ್ ರೆವರೆಂಡ್ ಡಾ| ವಿಕ್ಟರ್. ಆರ್. ಫೆರ್ನಾಂಡಿಸ್, ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ, ಕೃಷ್ಣಸ್ವಾಮಿ, ಕೆ. ಸೂರ್ಯನಾರಾಯಣ ಅಡಿಗ, ಬಿ. ರಾಘವ ಬಾಳಿಗ, ಎ. ಮಂದಣ್ಣ, ಕುಮಾರಿ ಸುಲೋಚನಾ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು. ತಹಸಿಲ್ದಾರ್ ಶ್ರೀ ಎಚ್. ಜಿ. ಕೆದ್ಲಾಯರು ಧನ್ಯವಾದಗಳನ್ನರ್ಪಿಸಿದರು.

ಬುನಾದಿ ಶಿಕ್ಷಣ ತರಬೇತಿ ಶಾಲೆಯ—ವರ್ಧಂತಿ ಸಮಾರಂಭವು ತಾ 19ರಲ್ಲಿ ಗವರ್ನ್‌ಮೆಂಟ್ ಕಾಲೇಜು ಪ್ರಿನ್ಸಿಪಾಲ್ ಕುಮಾರಿ ಪಿ. ಸೀತಮ್ಮಾಳ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶ್ರೀನಿವಾಸ ಉಡುಪರು ಸ್ವಸ್ತಿವಾಚನ ಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಎಮ್. ಮಾರ್ಟಿಸರು ವರದಿಯನ್ನೋದಿದರು. ಸಭಾಧ್ಯಕ್ಷೆಯವರು, ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗುವುದು ಒಳ್ಳೆಯದೆಂದು ಹೇಳಿದರು. ಶ್ರೀ ಜೆ. ಡಬ್ಲ್ಯು. ಅಮ್ಮಣ್ಣನವರು ವಂದನೆಗಳನ್ನರ್ಪಿಸಿದರು.

ಅಂಚೆ ಮತ್ತು ತಂತಿ ಕೆಲಸಗಾರರ ಜಿಲ್ಲಾ ಸಮ್ಮೇಳನವು— ಇದೇ ತಾ. 20ರಲ್ಲಿ ಬೆಳಿಗ್ಗೆ ನಗರಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಗಂಗಾಧರ ದಾಸರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಯವರು ಸಮ್ಮೇಳನದ ಉದ್ಘಾಟನೆ ಮಾಡುತ್ತಾ, ಅಂಚೆ ತಂತಿ ಕೆಲಸಗಾರರು ಐಕ್ಯದಿಂದಿದ್ದು ಒಂದೇ ಸಂಘಟನೆಗೊಳಪಟ್ಟಿರುವುದು ಉತ್ತಮವೆಂದೂ ಅತಿಮಹತ್ವದ ಮತ್ತು ತತ್ವದ ಪ್ರಶ್ನೆಗಳಿಗೆ ಧಕ್ಕೆ ಬರುವಂತಿದ್ದರೆ ಮಾತ್ರ ಮುಷ್ಕರ ಹೂಡಬೇಕಲ್ಲದೆ ಚಿಲ್ಲರೆ ಕಾರಣಗಳಿಗಾಗಿ ಮುಷ್ಕರ ಮಾಡಬಾರದಾಗಿ ಹೇಳಿದರು. ಶ್ರೀ ಕೆ. ಪಿ ಆಚಾರ್ಯರು ಸಮ್ಮೇಳನಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನೋದಿದರು. ದ. ಕ. ಜಿಲ್ಲಾ ಪೋಸ್ಟಾಫೀಸುಗಳ ಸುಪರಿಂಟೆಂಡೆಂಟರಾದ ಶ್ರೀ ಆರ್. ಬಿ. ವಿಶ್ವನಾಥನರು ತಮ್ಮ ಭಾಷಣದಲ್ಲಿ ಜಿಲ್ಲೆಯಲ್ಲಿ ಆಡಳಿತೆ ಅಧಿಕಾರಿಗಳ ಮತ್ತು ನೌಕರರೊಳಗಿನ ಸಂಬಂಧವು ಬಹಳ ಉತ್ತಮ ವಿದೆಯೆಂದು ಹೇಳಿದರು.

ಮಧ್ಯಾಹ್ನ ಯೂನಿಯನ್ನಿನ ಮಹಾಸಭೆಯು ಶ್ರೀ ಬಿ. ಗಂಗಾಧರ ದಾಸರ ಅಧ್ಯಕ್ಷತೆಯಲ್ಲಿ ಜರಗಿತು. ವಿಮಾನ ಅಪಘಾತದಲ್ಲಿ ಮೃತ್ಯುವಿಗೀಡಾದ ಶ್ರೀ ಹರಿಹರನಾಥ ಶಾಸ್ತ್ರಿ, ಎಮ್. ಪಿ. ಅವರ ಅಕಾಲ ನಿಧನಕ್ಕೆ ದುಃಖ ಸೂಚಿಸುವ ನಿರ್ಣಯ ವಾಯಿತು. ನಂತರ ಇಲಾಖೆಯ ನೌಕರರಿಗೆ ಸಂಬಂಧ ಪಟ್ಟ ಹಲವು ನಿರ್ಣಯ ಗಳಾದುವು. ಬಳಿಕ ಹೊಸ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು. ಪ್ರಾಂತಿಕ ಕೌನ್ಸಿಲಿಗೆ ಶ್ರೀ ಕೆ. ಪಿ. ಆಚಾರ್ಯರನ್ನೂ, ಲೆಕ್ಕ ಪರಿಶೋಧನೆಗೆ ಶ್ರೀ ಎಸ್. ಕೆ. ಪೊಳ್ಯರನ್ನೂ ಆರಿಸಲಾಯಿತು. ವಂದನಾರ್ಪಣೆ ಯೊಂದಿಗೆ ಸಭಾಂತ್ಯ ವಾಯಿತು.

ಗೀತಾಜಯಂತಿ— ಬೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಕಳೆದ ತಾ 16ರಂದು ಡಾ| ಎಮ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಗೀತಾ ವಾಚನ, ಗೀತಾ ಸಂಗೀತಗಳಾದ ಬಳಿಕ ಶ್ರೀಗಳಾದ ಶ್ರೀನಿವಾಸ ಉಡುಪ, ಪಿ. ಕೆ. ನಾರಾಯಣ, ಕೆ. ಲೋಕಯ್ಯ ಶೆಟ್ಟಿ ಮೊದಲಾದವರು ಗೀತೆಯ ಮಹತ್ವ ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿದರು. ಸಭಾಧ್ಯಕ್ಷರ ಭಾಷಣವಾದ ಬಳಿಕ ಶ್ರೀ ರಾಜನ್ ಅಯ್ಯರವರ ಗೀತೋಪದೇಶವೆಂಬ ನೃತ್ಯವಾಯಿತು. **ಗೀತಾಮಂದಿರದಲ್ಲಿಯೂ** ಗೀತಾಜಯಂತಿ ವಿವಿಧ ಕಾರ್ಯ ಕ್ರಮಗಳಿಂದ ಆಚರಿಸಲ್ಪಟ್ಟಿತು.

ಸಂತರ್ಪಣೆ— ಬಸವನಗುಡಿಯ ಶ್ರೀ ಕೆ. ಆರ್. ಕೆ. ಶೇಟರ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ತಾ 17ರಲ್ಲಿ ಮುಕ್ಕೋಟಿ ದ್ವಾದಶಿ ನಿಮಿತ್ತ ಕಾಲಂಪ್ರತಿ ಜರಗುವ ಪಾಲ್ಕಿ ಉತ್ಸವ, ಬ್ರಾಹ್ಮಣ ಸಂತರ್ಪಣೆ ಸಾಂಗವಾಗಿ ಜರಗಿತು.

ನಗರ ಸಭೆಯು— ಈಚೆಗೆ ಜರಗಿದಾಗ ಸರ್ ಬಿ. ಎನ್. ರಾಯರ ನಿಧನಕ್ಕೆ ಸಂತಾಪ ಸೂಚಿಸುವ ನಿರ್ಣಯವಾಯಿತು. ನಗರ ಸಭೆಯ ಸದಸ್ಯರಾದ ಶ್ರೀ ಯು. ಅಹಮ್ಮದ್ ಹುಸೇನರು ನಗರ ಸಭೆಯ ಪೊರಂಬೋಕು ಸ್ಥಳದಲ್ಲಿ ಕಟ್ಟಿಸಿದ ಕಟ್ಟಡಕ್ಕೆ ಲ್ಯಾಸನ್ಸು ಕೊಡಬೇಕೆಂದು ಮಾಡಿದ ಅರ್ಜಿಯ ಕುರಿತು ತುಂಬಾ ಚರ್ಚೆ ನಡೆಯಿತು. ಇದೇ ಸ್ಥಳದ ಕುರಿತು ರೆವಿನ್ಯೂ ಡಿವಿಜನಲ್ ಆಫೀಸರರು ತನಿಖೆ ಮಾಡಿ ತಮ್ಮ ವರದಿಯಲ್ಲಿ ಶ್ರೀ ಅಹಮ್ಮದ್ ಹುಸೇನರು ಕಟ್ಟಿಸಿದ ಕಟ್ಟಡವು ರಸ್ತೆ ಪೊರಂಬೋಕು ಸ್ಥಳವನ್ನಾಕ್ರಮಿಸಿದ್ದು ನಿಯಮ ಬಾಹಿರವೆಂದೂ, ಈ ಆಕ್ರಮಣವನ್ನು ಮನ್ನಿಸಿ, ಹಾಗೆಯೇ ಬಿಟ್ಟರೆ ಇತರರೂ ಈ ರೀತಿ ವರ್ತಿಸುವಂತಾದೀತೆಂದೂ, ಆದ್ದರಿಂದ ಅದನ್ನು ಅವರಿಗೆ ಗೇಣಿಗೆ ಕೊಡಬಾರದೆಂದೂ ಹೇಳಿದ್ದರು. ಕೊನೆಗೆ ಶ್ರೀ ಅಹಮ್ಮದ್ ಹುಸೇನರು ಆಕ್ರಮಿಸಿದ ಸ್ಥಳವನ್ನು ಅವರಿಗೆ ಗೇಣಿಗೆ ಕೊಡುವಂತೆ ಲೋಕಲ್ ಬೋರ್ಡು ಇನ್ಸ್‌ಪೆಕ್ಟರರಿಗೆ ಶಿಫಾರಸು ಮಾಡಬೇಕೆನ್ನುವ ಶ್ರೀ ಮಿಜಾರು ಗೋವಿಂದ ಪೈಗಳ ನಿರ್ಣಯವು ಬಹುಮತದಿಂದ ಪಾಸಾಯಿತು. ತದನಂತರ ಡಾ| ಕೆ. ನಾಗಪ್ಪ ಆಳ್ವರು ತಂದ ಸೂಚನೆಯಂತೆ ಶ್ರೀ ಅಹಮ್ಮದ್ ಹುಸೇನರು ಆಕ್ರಮಿಸಿ ಕಟ್ಟಿದ ಕಟ್ಟಡ ಭಾಗದ ಸ್ಥಳಕ್ಕೆ ಗೇಣಿ ನಿಶ್ಚಯಿಸಲು ಒಂದು ಕಮಿಟಿಯ ರಚನೆಯಾಯಿತು.

ವಿವಾಹ ಸಮಾರಂಭ:— ಶ್ರೀ ಬಿ. ಆರ್. ಬಾಳಿಗರ ಪುತ್ರಿ ಶ್ರೀಮತಿ ಪದ್ಮಾ ಅವರು ಶ್ರೀ ಯು. ಆರ್. ಶೆಣೈ ಯವರ ಪುತ್ರ ಶ್ರೀ ಮೋಹನ ಆರ್. ಶೆಣೈ, ಮುನ್ಸಿಪಲ್ ಸದಸ್ಯ, ಅವರನ್ನು ಇದೇ ತಾ 20ರಲ್ಲಿ ಬೆಳಿಗ್ಗೆ ಭುವನೇಂದ್ರ ಹೋಲಿನಲ್ಲಿ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No. 594/1953

ದಿ. ಮಹರಾಷ್ಟ್ರ ಎಪೆಕ್ಸ್ ಬೇಂಕ್ ಲಿಮಿಟೆಡ್ ಉಡುಪಿ-ಕಡೆಯಿಂದ ಯೇಜಂಟ್ ಕೆ. ರಾಮಕೃಷ್ಣ ಕಾಮತ್... ....ವಾದಿ.

ಮತ್ತು

ಎನ್. ವಿಟ್ಠಲದಾಸ ಕೂಡಾ.....ಪ್ರತಿವಾದಿರು.

To—

1st Deft N. Vittaladasa—son of Subbanna alias Ramadas C/of— Navayuga Restaurant Kapileshwar Road, Belguam

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 10-3-53ರಲ್ಲಿ ರೂಪಾಯಿ 300-0-0ಕ್ಕೆ ಕೊಟ್ಟ ಪ್ರೊಮಿಸರಿ ನೋಟಿನ ಪಗಯಿರೆ ಬಾಬ್ತ ಬಡ್ಡಿ ಕೂಡಾ ರುಪ್ಯಾ 304-15-0 ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯು ತಾರೀಕು 11-1-1954 ಇಟ್ಟಿದೆ—ಆ ದಿವ್ಸ ಬೆಳಿಗ್ಗೆ 10 ಘಂಟೆಗೆ ನೀವು 1ನೇ ಪ್ರತಿವಾದಿಯು ಸ್ವತಹಾ-ಯಾ ವಕೀಲ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉತ್ತರಿಸದೆ ಇದ್ರೆ 1ನೇ ಪ್ರತಿವಾದಿಯ ಗೈರ್ ಹಾಜರಿಯಿಂದ ಸದರಿ ನ್ಯಾಯವು ತೀರ್ಮಾನಿಸಲ್ಪಡುವದೆಂದು ಈ ಮೂಲಕ ಸದರಿ 1ನೇ ಪ್ರತಿವಾದಿಗೆ ತಿಳಿಯ ಪಡಿಸೋಣಾಗಿಯದೆ.

M. Damoder Kamath

Advocate for Pltf.

ಉಪಿ ದ. ಕ. ತಾ. 21-12-1953

॥ ಕರಿಷ್ಯೆ ಮಹೀಮಹಂ ಸರ್ವರೋಗಹರಣಾಂ ॥

ಆಯುರ್ವೈದ್ಯಾಶ್ರಮ

[ಸ್ಥಾಪನೆ: 1933]

ಆಬಾಲವೃದ್ಧ, ಸ್ತ್ರೀಪುರುಷರ ವಿವಿಧ ರೋಗಗಳಿಗೂ, ವಿಶೇಷವಾಗಿ ಇಂದ್ರಿಯಗಳ ದೌರ್ಬಲ್ಯ, ಮಾನಸಿಕ ವಿಕಾರಗಳು, ಗುಪ್ತ ರೋಗಗಳು, ನಪುಂಸಕತ್ವ, ಬಂಜೆತನ, ಚರ್ಮವ್ಯಾಧಿಗಳು, ಮುಂತಾದವುಗಳಿಗೆ ರಸ ರಸಾಯನಗಳಿಂದ ವಿಶೇಷ ರೀತಿಯ ಚಿಕಿತ್ಸೆ.

ಪ್ರಬಲವಾದ ವಾತರೋಗಗಳನ್ನು ಕದ್ರಿ ಗುಡ್ಡೆಯ ಮೇಲೆ (ವೈದ್ಯಾಶ್ರಮದ ಹತ್ತಿರ)

—ಪ್ರಶಾಂತ ಪ್ರದೇಶದಲ್ಲಿ ತೆರೆದಿರುವ—

—೦ ಶುಶ್ರೂಷಾಲಯದಲ್ಲಿ ೦—

ಪಂಚಕರ್ಮ, ಧಾರೆ ಮುಂತಾದ ವಿಶೇಷ ಚಿಕಿತ್ಸೆಗಳ ಸಹಾಯದಿಂದ ಚಿಕಿತ್ಸೆ ಮಾಡುವೆವು. ಅತ್ಯಂತ ಅಮೋಘ ಪ್ರಯೋಗಗಳನ್ನು ಪಾದರಸ ಲಿಂಗಗಳ ಮೂಲಕ ಕೈಕೊಳ್ಳುವೆವು. ಪತ್ರ ವ್ಯವಹಾರ ಮಾಡಿ ವಿವರ ತಿಳಿಯುವದು.

ಕದ್ರಿ, ಮಂಗಳೂರು. }

ಎಂ. ಎಸ್. ಭಿಡೆ,

ಪ್ರಧಾನ ವೈದ್ಯರು: ಆಯುರ್ವೇದ ಭಿಷಕ್.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1953ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-0 } ರೂ. 1000ಕ್ಕೆ

ಬಹಳ ಕಡಿಮೆ ಪ್ರೀಮಿಯಮ್ ಸ್ಕೀಮಿನಂತೆ ।

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ

ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ, ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು.

The Bombay Life Assurance Co., Ltd., Bombay

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 415/53. S. C. 92/48

ಕಾಶ್ಮೀರ ಕುಂಞ...... ..ಅರ್ಜಿದಾರ,

ಬಾಬುರಾಯ ಕಮ್ತಿ. ಅನಂತ ಕಮ್ತಿ ಮಗ. ಬೆಳ್ತಂಗಡಿ ಕಸಬಾ...... ......ಎದ್ರಿ.

ಎದ್ರಿಗೆ ತಿಳಿಸುವುದೇನೆಂದರೆ:—

ಕ್ರಯಚೀಟಿನಲ್ಲಿ ಅಮಾನತಿಟ್ಟ ಪ್ರಕಾರ ಅರ್ಜಿದಾರನಿಂದ ಎದ್ರಿಗೆ ಸಲ್ಲಬೇಕಾದ ಹಣವನ್ನು ಪಡೆಯುವರೆ ಎದ್ರಿಗಿರುವ ಹಕ್ಕನ್ನು ಜಪ್ತಿ ಮಾಡಬೇಕೆಂತ ಅರ್ಜಿದಾರ ದಾಖಲು ಮಾಡಿದ ಈ ಅಮಲ್ದಾರಿಯು ತಾ 8—1—54ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಹಾಜ್ರಾಗಿ ಋಜುಪಡಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಶಿವಾ ಅಮಲ್ದಾರಿಯನ್ನು ತೀರ್ಮಾನಿಸಲಾದೀತು.

B. Chidananda Rao.

Vakil for petitioner.

ಪುತ್ತೂರು ತಾ 13-12-53

1954ನೇ ಇಸವಿಯ

ಡೈರಿಗಳು

ದೊರೆಯುತ್ತವೆ.

ದೊಡ್ಡ ಸೈಜು	1	8	0
ಮಧ್ಯ ಸೈಜು	1	4	0
ಸಣ್ಣ ಸೈಜು	0	12	0
ಪುಟವೊಂದರಲ್ಲಿ 2 ತಾರೀಕಿನದ್ದು	0	6	0

ಅಕ್ಕಿ ಬತ್ತ ವ್ಯಾಪಾರಿಗಳಿಗೆ ಉಪಯುಕ್ತವಾದ ವರ್ಗ ಹಾಳೆ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ನವಯುಗ ವಾರಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಸಮಾಜ ಸೇವೆಯ ಆದರ್ಶ

(೧ನೇ ಪುಟದಿಂದ)

ಇವು ವ್ಯಕ್ತಪಡಿಸಬಹುದಾದ ಈ ಪರಿಸ್ಥಿತಿಯಲ್ಲಿ ಸಮಷ್ಟಿಯ ಹಿತಕ್ಕೂ ವ್ಯಕ್ತಿಯ ಸುಖಕ್ಕೂ ಕೇಡುಂಟಾಗದ ರೀತಿಯಲ್ಲಿ ಎಲ್ಲ ಪ್ರಶ್ನೆಗಳನ್ನು ಸಮಾಧಾನಕರವಾಗಿ ಬಗೆಹರಿಸುವುದೇ ಇಂದಿನ ಸಮಾಜ ಸೇವೆಯ ಆದರ್ಶ.

ಒಬ್ಬ ಸಾಮಾನ್ಯ ಮನುಷ್ಯ ಇಷ್ಟೆಲ್ಲ ಗಡುಚಾದ ಪ್ರಶ್ನೆಗಳಿಗೆ ಪರಿಹಾರ ಕೊಡುವುದೆಂತು? ಒಬ್ಬ ಡಾಕ್ಟರನು ಮಾಡುವ ಕೆಲಸವನ್ನು ಬರೆಹಗಾರನೊಬ್ಬ ನಿರ್ವಹಿಸಲಾರ—ಮನೋವಿಜ್ಞಾನಿಯು ಕೆಲಸವನ್ನು ವಕೀಲನಿಂದ ನೆರವೇರಿಸುವುದು ತೀರಾ ಅಸಾಧ್ಯ. ಸಮಾಜ ಸೇವೆ ಮಾಡಬೇಕೆನ್ನುವಾತ ಒಬ್ಬ ವಕೀಲನಾಗಿದ್ದರೆ, ಕಲಾವಿದನಾಗಿದ್ದರೆ, ಸಾಹಿತಿಯಾಗಿದ್ದರೆ, ವೈದ್ಯನಾಗಿದ್ದರೆ ಅಥವಾ ಇನ್ನೇನೋ ಆಗಿದ್ದರೆ—ಸಮಸ್ಯೆಯನ್ನು ಚೆನ್ನಾಗಿ ಬಿಡಿಸಲು ಸಾಧ್ಯವಾಗುವುದಿಲ್ಲ. ಆದ ಕಾರಣ, ಸಮಾಜ ಸೇವೆಯಲ್ಲಿ ಆಸಕ್ತಿಯನ್ನು ವಹಿಸಿದ ವ್ಯಕ್ತಿ ಮನುಷ್ಯನನ್ನು ಸಾಮಾನ್ಯವಾಗಿ ಕಾಡುವ ಹತ್ತು ಹಲವು ಬಗೆಯ ಸಮಸ್ಯೆಗಳ ಕುರಿತು ಶಾಸ್ತ್ರೀಯವಾದ ವಿಚಾರಗಳೆಲ್ಲವನ್ನು ತಿಳಿದುಕೊಂಡ ಸರ್ವಜ್ಞನೇ ಆಗ ಬೇಕಾಗುತ್ತದೆ. ಈ ಸರ್ವಜ್ಞತ್ವವು ಪ್ರಾಪ್ತವಾಗದೆ ಇದ್ದರೆ—ಸಮಸ್ಯೆಗಳ ವಿಶ್ಲೇಷಣೆ ಮಾಡಲು ಅಗತ್ಯವೆನಿಸಿದ ಯೋಗ್ಯತೆಯಾಗಲೀ ಮನುಷ್ಯನ ಸ್ವಭಾವವನ್ನೂ ಗುಣದೋಷಗಳನ್ನು ವಿಮರ್ಶಿಸಿ ತಿಳಿದುಕೊಳ್ಳುವ ಸೂಕ್ಷ್ಮ ಬುದ್ಧಿಯು ಮುನ್ನೋಟವಾಗಲೀ ಕರಗತವಾಗದಿದ್ದರೆ ಸಮರ್ಥ ರೀತಿಯಲ್ಲಿ ಸಮಾಜ ಸೇವೆಯನ್ನು ನಿರ್ವಹಿಸುವುದಕ್ಕೆ ವ್ಯಕ್ತಿ ಸಮರ್ಥನಾಗಲಾರ.

ಸಮಾಜ ಸೇವೆ ಮಾಡುವವರಿಗೆ ಆಸ್ಥೆ ಉತ್ಸಾಹಗಳೂ ಚುರುಕು ಬುದ್ಧಿಯೂ ಎಷ್ಟು ಅಗತ್ಯವೋ ಅದಕ್ಕಿಂತಲೂ ಹೆಚ್ಚಾಗಿಯೇ ಅವರಿಗೆ ತರಬೇತಿಕೊಡುವ ಅಗತ್ಯವೂ ಇದರಿಂದ ಕಂಡುಬರುತ್ತದೆ. ವೈದ್ಯಕೀಯ ವಿಜ್ಞಾನವನ್ನು, ವಕಾಲತನ್ನು ವೈಮಾನಿಕ ಶಾಸ್ತ್ರವನ್ನು ಸಂಗೀತವನ್ನು ಪರಿಶ್ರಮದಿಂದ, ಅಧ್ಯಯನ ಹಾಗೂ ಅಭ್ಯಾಸಗಳಿಂದ ಕರಗತಮಾಡಿಕೊಳ್ಳುವಂತೆ, ಸಮಾಜ ಸೇವೆಯನ್ನೂ ಸಶಾಸ್ತ್ರೀಯವಾಗಿ ಕಲಿತು ಅರಗಿಸಿಕೊಳ್ಳಬೇಕು. ಈಗಿನ ದಿವಸದಲ್ಲಿ ಪುಕ್ಕಟೆಯಾಗಿ ಮಾಡಿದ ಉಪಕಾರವೇ ಸೇವೆಯೆಂಬ ಮನ್ನಣೆಯನ್ನು ಪಡೆಯುತ್ತಿರುವುದರಿಂದ ಸಮಾಜ ಸೇವಕರಾಗುವುದಕ್ಕೆ ಕೆಲವು ವಿಶಿಷ್ಟ ಯೋಗ್ಯತೆಗಳು ಬೇಕೆಂಬ, ಅವರಿಗೂ ಉಳಿದ ಕಾರ್ಯಕರ್ತರಂತೆ ತರಬೇತಿ ಕೊಡುವ ಅಗತ್ಯವುಂಟೆಂಬ ಕಡೆಗೆ ಯಾರ ಗಮನವೂ ಹೋಗುವುದಿಲ್ಲ. ಆದರೆ, ದಕ್ಷರಾದ, ಪ್ರಾಜ್ಞರಾದ ಧುರೀಣರು ಈ ಮಾತನ್ನು ಎಂದಿಗೂ ಕಡೆಗಣಿಸುತಿದ್ದಿಲ್ಲ—ಗಾಂಧೀಜಿಯವರು ತಮ್ಮ ಅನುಯಾಯಿಗಳನ್ನು ಆರಿಸುವಾಗ ಯೋಗ್ಯತಾ ಸಂಪನ್ನರನ್ನೆ ದೃಷ್ಟಿಯಲ್ಲಿಟ್ಟುಕೊಂಡಿರುತಿದ್ದರು. ಮತ್ತು ಅವರಿಗೆ ತಕ್ಕುದಾದ ತರಬೇತಿಯನ್ನೂ ಶಿಕ್ಷಣವನ್ನೂ ಮಾರ್ಗದರ್ಶನವನ್ನೂ ಸ್ವತಃ ನೀಡುತಿದ್ದರು

ನಮ್ಮ ಪಂಚವಾರ್ಷಿಕ ಯೋಜನೆ, ಜನಪದ ಅಭಿವೃದ್ಧಿ ಯೋಜನೆ ಮುಂತಾದವುಗಳನ್ನು ಕಾರ್ಯರೂಪಕ್ಕೆ ಇಳಿಸುವಲ್ಲಿ ಜನತೆಯ ಸಹಕಾರವನ್ನು ಸರಕಾರ ಆಪೇಕ್ಷಿಸುತ್ತದೆ. ಆದರೆ ತಾವು ಮಾಡಬೇಕಾದ ಕೆಲಸಗಳಲ್ಲಿ ಏನೇನೂ ತರಬೇತಿ ಹೊಂದಿರದ, ಸಾಕಷ್ಟು ಪರಿಜ್ಞಾನವನ್ನು ಪಡೆಯದ ಜನರು ಯೋಜನಾಬದ್ಧವಾಗಿ ಕಾರ್ಯ ಪೂರೈಸುವುದು ಸಂಶಯ. ಜನಸಾಮಾನ್ಯರಿಗೆ ತಕ್ಕ ತಿಳುವಳಿಕೆಯನ್ನು ನೀಡಿ, ಅವರ ಚಟುವಟಿಕೆಗಳನ್ನು ಸೂತ್ರಬದ್ಧವಾಗಿಸಲು ನುರಿತ ಸಾಮಾಜಿಕ ಕಾರ್ಯಕರ್ತರು ಬೇಕು. ಈ ಕಾರ್ಯಕರ್ತರು ಸ್ವಯಂ ಸೇವಕರ ರೂಪದಲ್ಲಿರಬಹುದು - ಅಥವಾ ಸಂಬಳ ಪಡೆಯುವ ನೌಕರರೂ ಆಗಬಹುದು. ಅಂತೂ ಸಾಮಾಜಿಕ ಸಮಸ್ಯೆಗಳ ಪೂರ್ವಾಪರ ಕಲ್ಪನೆಯನ್ನು ಇವರು ಪಡೆದಿರುವುದು ಪ್ರಾಮುಖ್ಯವಾದ ಮಾತು. ಸ್ವಯಂ ಸೇವಕರಾಗಿ ಕೆಲಸ ಮಾಡುವ ಅನುಕೂಲತೆ ಸಾಕಷ್ಟು ಹೆಚ್ಚಿನ ಜನಕ್ಕೆ ಇರಲಿಕ್ಕಿಲ್ಲ-ತಮ್ಮ ಹಾಗೂ ತಮ್ಮನ್ನವಲಂಬಿಸಿದವರ ಹೊಟ್ಟೆ ಬಟ್ಟೆಯ ಸಮಸ್ಯೆಯಿಂದ ಕಾರ್ಯಕರ್ತರ ಮನಸ್ಸು ಸಮಾಜ ಸೇವೆಯ ಆದರ್ಶದಿಂದ ಪರಾವೃತ್ತವಾಗದಂತೆ ಉಚಿತ ಸಂಬಳವನ್ನು ಕೊಟ್ಟರೂ— ಈ ರಂಗದಲ್ಲಿ ಕಾರ್ಯಕ್ಷಮತೆಯನ್ನೂ ಶಿಸ್ತು ಮತ್ತು ಸಂಘಟನೆಯನ್ನೂ ಕಾಯ್ದುಕೊಳ್ಳಬೇಕು. ಶಾಸ್ತ್ರೀಯ ಪ್ರಯೋಗಗಳನ್ನು ಸುಸಂಬದ್ಧ ರೀತಿಯಲ್ಲಿ ನಡೆಸುವುದಕ್ಕೂ ಸಮಾಜ ಸೇವಕರಿಗೆ ಉಚಿತ ಸೌಕರ್ಯಗಳನ್ನು ಕಲ್ಪಿಸಕೊಡುವುದು ಸರಕಾರದ ಕರ್ತವ್ಯ; ಮತ್ತು ಸಮಾಜದ ಮೇಲೆ ಬಿದ್ದಿರುವ ಹೊಣೆ.

ಪ್ರಕಟನೆ

ಉಡುಪಿ ತಾಲೂಕು ಎರ್ಮಾಳ ತೆಂಕ ಗ್ರಾಮದ ಸುಬ್ಬ ಮರಕಾಲನ ಅಳಿಯ ಶೀನ ಮರಕಾಲನಾದ ನಾನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವದೇನೆಂದರೆ:—

ನಾನು ಈ ವರೆಗಿನ ಯಾವತ್ತೂ ರಿಕಾರ್ಡುಗಳ ಪೈಕಿ ಕೆಲವು ರಿಕಾರ್ಡುಗಳಲ್ಲಿ "ಶೀನ ಎಮ್. ಪುತ್ರನ್" ಎಂತ ಇಂಗ್ಲೀಷಿನಿಂದಲೂ, ಕೆಲವು ರಿಕಾರ್ಡುಗಳಲ್ಲಿ "ಶೀನ ಮರಕಾಲನ ಬೊಜು" ಎಂತ ಕನ್ನಡದಿಂದಲೂ ಸಹಾ ದಸ್ಕತು ಹಾಕಿರುತ್ತೇನೆ. ಈ ರೀತಿ ಈ ಎರಡು ನಮೂನೆಯ ದಸ್ಕತು ಹಾಕುವದು ಸರಿಯಲ್ಲಾ ಎಂತ ನನ್ನ ಮನಸ್ಸಿಗೆ ತೋರುವದರಿಂದಲೂ ಇನ್ನು ಮುಂದೆ ಒಂದೇ ನಮೂನೆಯ ದಸ್ಕತು ಹಾಕುವದು ಉತ್ತಮವೆಂತ ನನ್ನ ಅಭಿಪ್ರಾಯ ಪಡುವದರಿಂದ ಕೂಡಾ ಇನ್ನು ಮುಂದೆ ಯಾವತ್ತೂ ರಿಕಾರ್ಡುಗಳಿಗೆ "ಶೀನ ಎಮ್. ಪುತ್ರನ್" ಎಂತ ಇಂಗ್ಲೀಷಿನಿಂದಲೇ ದಸ್ಕತು ಮಾಡುವದಾಗಿ ಸರ್ವರಿಗೂ ತಿಳಿಸಲು ಇಚ್ಛಿಸುತ್ತೇನೆ.

Sheena M. Puthran

ಮೊಕ್ಕಾಂ:- ಎರ್ಮಾಳ, ತೆಂಕಗ್ರಾಮ

ತಾರೀಕು 15—12—1953

ಸ್ವೀಕಾರ—ವಿಮರ್ಶೆ

Some Experiences of Plant Protection work in the different districts of the Madras State—

By Sri T. K. Thangavelu, B. Sc. (Ag.). Published by the Madras Agricultural Department. Price four annas.

ಮದ್ರಾಸು ರಾಜ್ಯವು ಹಿಂದಿನಿಂದಲೂ ಆಹಾರ ಧಾನ್ಯಗಳ ವಿಷಯದಲ್ಲಿ ಕೊರತೆಯನ್ನು ಅನುಭವಿಸುತ್ತಿರುವ ಪ್ರಾಂತ್ಯ. ಕಳೆದ ಒಂದು ಶತಮಾನದ ಅವಧಿಯಲ್ಲಿ ಇಲ್ಲಿ ಕೈಗೊಂಡ ನೀರಾವರಿ ಯೋಜನೆಗಳ ಪರಿಣಾಮವಾಗಿ ಸುಮಾರು ೩೦ ಲಕ್ಷ ಟನ್ನುಗಳಷ್ಟು ಆಹಾರ ಧಾನ್ಯ ಹೆಚ್ಚು ಬೆಳೆದರೂ ಜನಸಂಖ್ಯೆಯು ಈ ಮಿತಿಯನ್ನು ಮೀರಿಯೇ ಅಧಿಕಗೊಳ್ಳುತ್ತಿರುವುದರಿಂದ, ಸಮಾರು ವರ್ಷಂಪ್ರತಿ ಐವತ್ತು ಲಕ್ಷ ಟನ್ನುಗಳ ಕೊರತೆ ಈಗಲೂ ಕಂಡು ಬರುತ್ತದೆ. ಅನಾವೃಷ್ಟಿ ಅಥವಾ ಅತಿವೃಷ್ಟಿ ಸಂಭವಿಸಿದರೆ, ಈ ಕೊರತೆ ಹತ್ತು ಲಕ್ಷ ಟನ್ನುಗಳನ್ನು ಮುಟ್ಟುತ್ತದೆ. ಈ ಕೊರತೆಯನ್ನು ದೂರೀಕರಿಸಲು ಸರಕಾರದವರು ಈಗಲೂ ದೊಡ್ಡ ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಂಡಿರುವರು. ಅದರ ಜೊತೆಗೆ ಹುಳುಹುಪ್ಪಟೆಗಳಿಂದಲೂ ಸಸ್ಯಗಳಿಗೆ ಬರುವ ರೋಗಗಳಿಂದಲೂ ಹಾಳಾಗುವ ಫಸಲಿನ ರಕ್ಷಣೆಯನ್ನೂ ನಾವು ಮಾಡಿದರೆ—ಆಹಾರದ ವಿಷಯದಲ್ಲಿ ಸ್ವಾವಲಂಬಿಯಾಗಲು ಎರಡೆರಡು ದಿಸೆಯಿಂದ ಪ್ರಯತ್ನ ಮಾಡಿದಂತಾಗುವುದು. ಮದ್ರಾಸು ರಾಜ್ಯದಲ್ಲಿ ಅನೇಕ ಬಗೆಯ ಪೈರು ಬೆಳೆಯುತ್ತದೆ-ಮತ್ತು ಜಿಲ್ಲೆಗಳ ಹವಾಮಾನವೂ ಭಿನ್ನವಾಗಿರುತ್ತದೆ. ಆದುದರಿಂದ ಬೇರೆ ಬೇರೆ ಜಿಲ್ಲೆಗಳ ವಾತಾವರಣಕ್ಕೆ ಹೊಂದಿಕೊಂಡಂತೆ ಪೈರುಗಳ ಜೋಪಾಸನೆಯನ್ನು ಮಾಡುವ ಕ್ರಮ ರೈತರಿಗೆ ತಿಳಿದಿರುವುದು ಯೋಗ್ಯ. ಸರಕಾರದ ಕಡೆಯಿಂದ ಈ ವಿಷಯದಲ್ಲಿ ಸಂಗ್ರಹಿಸಲ್ಪಟ್ಟ ಮಾಹಿತಿಯನ್ನು ಸೇರಿಸಿ ಪುಸ್ತಕ ಒಳಗೊಂಡಿರುತ್ತದೆ. ಪೈರುಗಳನ್ನು ಹಾಳುಮಾಡುವವುಗಳಲ್ಲಿ ಸಸ್ಯರಸವನ್ನು ಹೀರಿ ನಾಶ ಮಾಡುವ ಮತ್ತು ಅವನ್ನು ಕಡಿದು ಹಾಳುಗೆಡವುವ ಎರಡು ಮುಖ್ಯ ವರ್ಗಗಳಿವೆ. ಹಾಗೆಯೇ ಕೀಟ ಭಾದೆ ಹಾಗೂ ಪರಪುಷ್ಟ ಜೀವಿಗಳ ಭಾದೆ ಸಸ್ಯ ಸಂಪತ್ತನ್ನು ನಾಶಮಾಡುತ್ತದೆ. ಇವುಗಳನ್ನು ಪ್ರತಿಬಂಧಿಸಲು ಡಿ. ಡಿ. ಟಿ., ಬಿ. ಎಚ್. ಸಿ., ಮುಂತಾದ ಆಧುನಿಕ ರಸಾಯನ ದ್ರವ್ಯಗಳು ಉಪಯುಕ್ತವಾಗಿವೆ. ಇವುಗಳನ್ನು ಯಾವ ಬೆಳೆಗೆ ಯಾವ ಜಿಲ್ಲೆಯಲ್ಲಿ ಯಾವ ಪ್ರಮಾಣದಲ್ಲಿ ಉಪಯೋಗಿಸಬೇಕೆಂದೂ ರೋಗಗಳು ಕಾಣಿಸಿಕೊಳ್ಳುವಾಗಿನ ಲಕ್ಷಣಗಳೇನೆಂಬುದನ್ನೂ ಅವುಗಳ ಉಪಚಾರದ ರೀತಿಯನ್ನು ಈ ಪುಸ್ತಕ ವಿವರಿಸುತ್ತದೆ. ಹೆಚ್ಚಿನ ಮಾಹಿತಿ ಬೇಕಾದವರು ಕೃಷಿ ಇಲಾಖೆಯ ಸ್ಥಳೀಯ ಅಧಿಕಾರಿಗಳನ್ನು ಕೇಳಬೇಕೆಂದೂ ಪ್ರಸ್ತಾಪನೆಯಲ್ಲಿ ವಿನಂತಿಸಲ್ಪಟ್ಟಿದೆ. ರೈತರು ಇಂಗ್ಲೀಷಿನಲ್ಲಿರುವ ಈ ಪುಸ್ತಕದಿಂದ ಪ್ರಯೋಜನಪಡೆದುಕೊಳ್ಳುವುದು ಕಷ್ಟವೆಂದು ತೋರೀತು. ಈ ಪುಸ್ತಕದ ಪ್ರಾದೇಶಿಕ ಭಾಷಾನುವಾದ ಮಾಡಿ ಪ್ರಕಟಿಸಿದರೆ, ಈ ಅಡಚಣೆಯ ಸಮಸ್ಯೆಯನ್ನು ಪರಿಹರಿಸಿದಂತಾಗುವುದು.

The Trident—

1953 Annual of the Jawahar Free Night High School, Bombay.

ಮುಂಬಯಿ ಕನ್ನಡಿಗರ-ಮುಖ್ಯವಾಗಿ ಕೆಲಸ ಮಾಡುವ ಹುಡುಗರ-ವಿದ್ಯಾಭ್ಯಾಸದ ಘನವಾದ ಉದ್ದೇಶವನ್ನು ಇಟ್ಟುಕೊಂಡು ಪ್ರಗತಿ ಪಥದಲ್ಲಿ ಯಶಸ್ವಿಯಾಗಿ ಸಾಗುತ್ತಿರುವ ಜವಾಹರ ಹೈಸ್ಕೂಲಿನ ಈ ವಾರ್ಷಿಕಾಂಕದ ಇಂಗ್ಲೀಷ್ ಹಾಗೂ ಕನ್ನಡ ವಿಭಾಗಗಳು ಸುಂದರವಾದ ಲಘು ಬರೆಹಗಳಿಂದ ಕೂಡಿವೆ. ಇಂಗ್ಲೀಷ್ ವಿಭಾಗದಲ್ಲಿ ಹಾಸ್ಯ ಪ್ರವೃತ್ತಿಯೇ ಪ್ರಧಾನವಾಗಿರುವ ಬರೆಹಗಳ ಜೊತೆಯಲ್ಲಿ "ಭಾರತದಲ್ಲಿ ಪ್ರಜಾಪ್ರಭುತ್ವ"ವೆಂಬ ವಿಚಾರಪೂರ್ಣ ಲೇಖನವೂ ಹೈಸ್ಕೂಲಿನ ಪಾರ್ಲಿಮೆಂಟಿನ ಚಟುವಟಿಕೆಯ ಸಮೀಕ್ಷೆಯೂ ಆಕರ್ಷಕವಾಗಿದೆ. ಕನ್ನಡದ ವಿಭಾಗದಲ್ಲಿ ನಾಟಕ ವಿಮರ್ಶೆ, "ಅನುರಾಗ ಮತ್ತು ಸಹಾನು ಭೂತಿಯ ಸೃಷ್ಟಿ" ಎಂಬ ಚೊಕ್ಕ ಬರೆಹಗಳೂ, ಕತೆಕವನಗಳೂ ಇವೆ. ಕೆಲವು ಛಾಯಾಚಿತ್ರಗಳೂ ಪುಟಗಳ ನಡುವೆ ಮಿಂಚಿ ಹೈಸ್ಕೂಲಿನ ಪ್ರವೃತ್ತಿಗಳ ಪರಿಚಯ ಮಾಡಿಕೊಡುತ್ತವೆ. ಹೈಸ್ಕೂಲು ಇತ್ತೋತ್ತರ ಅಭಿವೃದ್ಧಿಯಾದ ಶ್ರೇಯಸ್ಸನ್ನು ಪಡೆಯಲೆಂದು ಕನ್ನಡಬಂಧುಗಳ ಪರವಾಗಿ ನಾವು ಹಾರೈಸುತ್ತೇವೆ.

ಚ್ಯವನಪ್ರಾಶ

ಹಿಮಾಲಯದ ಉತ್ಕೃಷ್ಟ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಚ್ಯವನಪ್ರಾಶವು ಕ್ಷಯ, ದುರ್ಬಲತೆ ಇತ್ಯಾದಿ ಕಾಹಿಲೆಗಳಿಗೆ ದಿವ್ಯೌಷಧಿ. ವಯೋವೃದ್ಧರಿಗೆ ವಿಶೇಷ ಪರಿಣಾಮಕಾರಿಯಾದುದು. ಎಳೆ ಮಕ್ಕಳನ್ನೂ ಗಟ್ಟಿಮುಟ್ಟಾಗಿಯೂ ಆರೋಗ್ಯವಂತರಾಗಿಯೂ ಇರಗೊಡಿಸುವುದು. ಚ್ಯವನಪ್ರಾಶವನ್ನು ಸತತ ಉಪಯೋಗಿಸುವುದರಿಂದ ಆಯುಸ್ಸು ವೃದ್ಧಿಯಾಗುವುದು. ಪರೀಕ್ಷಾರ್ಥವಾಗಿ ಕೆಳಗಿನ ವಿಳಾಸಕ್ಕೆ ಬರೆದು ಒಮ್ಮೆ ತರಿಸಿ ನೋಡಿರಿ. ಸೇರಿಗೆ ರೂಪಾಯಿ 10/- ಬೆಲೆ.

ಕಾಲಿಕಮಾಲಿ ಆಯುರ್ವೇದ ಫಾರ್ಮಸಿ, ಋಷಿಕೇಶ (ಡೆಹರಾಡನ್)

Kali Kamali Ayurved Pharmacy, RISHIKESH (Dehradun.)

THE KARNATAKA BANK Ltd., UDIPI·

ದಿ ಕರ್ನಾಟಕ ಬೇಂಕ್, ಲಿಮಿಟೆಡ್, ಉಡುಪಿ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಸಾಲದ ಅಸಲು ಮತ್ತು ಬಡ್ಡಿ ಆವೆಜುಗಳ ವಸೂಲಿ ಬಗ್ಗೆ ಬಿಟ್ಟ ರಿಜಿಸ್ಟ್ರಿ ನೋಟಿಸುಗಳ ಪೈಕಿ (1)ನೆಯವರ ಪತ್ತೆ ಗೊತ್ತಿಲ್ಲವೆಂಬುದಾಗಿಯೂ, (2)ನೇಯವರಿಗೆ ಜ್ಯಾರಿಆಗಿಯೂ, ಆಭರಣಗಳನ್ನು ಬಿಡಿಸದೇ ಇರುವ ಪ್ರಯುಕ್ತವೂ, ಸದ್ರಿ ಸಾಲದ ಭದ್ರತೆಗೆ ಇಟ್ಟ ಚಿನ್ನಾಭರಣಗಳನ್ನು ತಾ. 28-12-1953ನೇ ಸೋಮವಾರ ಅಪರಾಹ್ನ ಗಂಟೆ 2ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಬ್ಯಾಂಕಿಗೆ ಯುಕ್ತ ಕಂಡಲ್ಲಿ ಪುನಃ ನೋಟೀಸುಕೊಡದೇನೆ ಏಲಂ ಮುಂದರಿಸುವ ಹಕ್ಕು ಇರುವುದು. ತಿಳಿದಿರುವುದು.

ಲೋನು ನಂಬ್ರ.	ಹೆಸರು ಮತ್ತು ವಿಳಾಸ	ಅಸ್ಲು ಮೊಬಲಗು.
		Rs. As. Ps.
(1) 143/51	ಕೆ. ಗೋಪಾಲಕೃಷ್ಣಾಚಾರಿ, ರಾಮಸ್ವಾಚಾರಿ ಮಗ, ಕೊರಂಗ್ರಪಾಡಿ, ಉಡಿಯಾವರ ಪೋಸ್ಟು. S·K· ಹಾಲಿ: C/o ಯಮ್. ವಾಸುದೇವಾಚಾರಿ, ಹೊಸಪೇಟೆ ಪೋಸ್ಟ್, ಬಳ್ಳಾರಿ Dt.	45—2—0
(2) 269/51	ಕೆ. ಶ್ಯಾಮರಾಯ ಶೆಟ್ಟಿ, ಕೆ. ವೀರಯ ಶೆಟ್ಟಿಯ ಅಳಿಯ ಕೊಡವೂರು. ಕೊಡವೂರು, ಪೋಸ್ಟು. S. K·	120—0—0

ಬೇಂಕಿನ ಆಫೀಸು, ತೆಂಕಪೇಟೆ, ಉಡುಪಿ, ದ. ಕ. ತಾ. 19-12-1953

P. Madhava Rao. Agent.

ಧರ್ಮಾರ್ಥ—ಪುಕ್ಕಟೆ

ಒಂದು ಸಾವಿರ ಶಾಸ್ತ್ರೀಯ ಹಾಡುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial Chambers (N. U.)
Bhandari Street,
BOMBAY—3

೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ

ಹಿರಿಯಮಣಿಗಳ ಕಿರಿಪರಿಚಯ

ಇನೇ ವಾರಾಂತ್ಯದಲ್ಲಿ ಕುಮಟೆಯು ಕರ್ನಾಟಕದ ಸಾಹಿತ್ಯಕ್ಷೇತ್ರವಾಗಿ ಪರಿವರ್ತಿಸಲಿದೆ. ದಿನಾಂಕ ೨೬, ೨೭, ಮತ್ತು ೨೮ ರಂದು ಮೈಸೂರು, ಬಳ್ಳಾರಿ, ಹೈದರಾಬಾದು ಕೊಡಗು, ದಕ್ಷಿಣಕನ್ನಡ, ಧಾರವಾಡ, ಬೆಳಗಾವಿ, ಮತ್ತು ಬಿಜಾಪುರಗಳಿಂದ ಸಾಹಿತ್ಯೋಪಾಸಕರು, ಸಾಹಿತಿ—ಮಿತ್ರರು ತಂಡತಂಡವಾಗಿ ಈ ಕ್ಷೇತ್ರಕ್ಕೆ ಬರಲಿದ್ದಾರೆ. ಇಲ್ಲಿಯ ಹೈಸ್ಕೂಲಿನ ಆವಾರದಲ್ಲಿ ಭವ್ಯವಾದ ಸಭಾಮಂಟಪವೊಂದು ರಚಿತವಾಗುತ್ತಿದೆ. ಪಂಪನ ಗತವೈಭವವನ್ನು ಪುನಃ ನೆನಪಿಗೆ ತಂದುಕೊಡುವ ಸಾಹಸವನ್ನು ಈ ಮಂಟಪದ ರಚನೆಗೆ ಕೈಯಿಕ್ಕಿದ ಕಲಾವಿದರು ಮಾಡುತ್ತಿದ್ದಾರೆ.

ಸಮ್ಮೇಳನದ ಉದ್ಘಾಟಕರಾಗಲು ಒಪ್ಪಿಕೊಂಡಿರುವ ಮಾನ್ಯರು **ಶ್ರೀ ಡ. ಪ. ಕರಮರಕರರು** ಕನ್ನಡ ಜಿಲ್ಲೆಯನ್ನರಿಯದವರಿಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರಮರಕರರನ್ನು ಮುಂದೆತಂದ ಯಶಸ್ಸು ಈ ಬಡ ಜಿಲ್ಲೆಯದಾಗಿದೆ. ಹಾಗೆಯೇ ಕರ್ನಾಟಕದ ಇತಿಹಾಸ ಪರಂಪರೆಗಳಲ್ಲಿ ತುಂಬಾ ಅಭಿಮಾನವುಳ್ಳ ವ್ಯಕ್ತಿ; ಈಗ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಕರ್ನಾಟಕದ ಕೊಡುಗೆಯಾಗಿ ಇದ್ದಾರೆ. ಕೇಂದ್ರ ಸರಕಾರದ ವಾಣಿಜ್ಯಖಾತೆಯಲ್ಲಿ ಮಂತ್ರಿಗಳಾಗಿ ಈಗಾಗಲೇ ಹೆಸರುಗಳಿಸಿ, ಕರ್ನಾಟಕಕ್ಕೆ ಕೀರ್ತಿತಂದಿದ್ದಾರೆ. ಈ ಸಮ್ಮೇಳನವನ್ನು ಅವರು ಉದ್ಘಾಟಿಸುತ್ತಿರುವದು, ಅವರು ಕನ್ನಡನಾಡು, ನುಡಿಗೆ ಸಲ್ಲಿಸುತ್ತಿರುವ ಸೇವೆಯಾಗಿ, ಈ ಜಿಲ್ಲೆ ಒಂದೊಮ್ಮೆ ಅವರಿಗೊದಗಿಸಿದ ಅನುಕೂಲತೆಗಳಿಗಾಗಿ. ಇಲ್ಲಿಯ ಜನತೆಯಲ್ಲಿ ಅವರಿಟ್ಟ ನಂಬುಗೆಯ ಪ್ರತೀಕವಾಗಿ.

ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಒಪ್ಪಿಕೊಂಡಿದವರು **ಶ್ರೀ ವಿ. ಸೀತಾರಾಮಯ್ಯನವರು.** ಅವರೂ ಈ ಜಿಲ್ಲೆಗೆ ಅಪರಿಚಿತರಲ್ಲ. ಮೊತ್ತ ಮೊದಲನೆಯ ಸಲ ಕಾರವಾರದಲ್ಲಿ ೧೯೩೧ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿದಾಗ ಕವಿಗಳ ಸೃಷ್ಟಿಗೆ ಅಧ್ಯಕ್ಷರಾಗಿ ಆಧುನಿಕ ಕವಿಗಳ ಕಾವ್ಯ ಸೃಷ್ಟಿಯನ್ನು ವಿವರಿಸಿದರು. ನಂತರ ಗೋಕರ್ಣದಲ್ಲಿ ಜರುಗಿದ ವಸಂತ ಸಾಹಿತ್ಯೋತ್ಸವದಲ್ಲಿ ಪ್ರಮುಖ ಪಾತ್ರವಹಿಸಿ, ಈ ಜಿಲ್ಲೆಯ ಸಾಹಿತ್ಯ ಭಕ್ತರನ್ನು ಸಂತೋಷಗೊಳಿಸಿದರು. ಕನ್ನಡ ಕುಲಕ್ಕೆ "ವೀಸಿ" ಎಂಬೆರಡಕ್ಷರಗಳಿಂದ ಪರಿಚಿತರಾದ ಈ ವ್ಯಕ್ತಿ, ಕವಿ, ವಿಮರ್ಶಕ ವಾಗ್ಮಿಗಳೆಂದು ಪ್ರಖ್ಯಾತರಾಗಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ವರ್ಗಕ್ಕೆ ಇವರು ಸೇರಿದವರಾದರೂ, ಕನ್ನಡವನ್ನು ಇಂಗ್ಲೀಷಿನಲ್ಲಿ ಕಲಿಸಬಲ್ಲ ಸಾಮರ್ಥ್ಯವುಳ್ಳವರಾಗಿ, ಸರ್ವಮಾನ್ಯರಾಗಿ, ಸಹೃದಯರಾಗಿರುವ ಸಾಹಿತಿಗಳೆಂದರೆ ಇವರೊಬ್ಬರೇ. ಸಾಹಿತ್ಯಕ್ಷೇತ್ರದಲ್ಲಿ ಅಜಾತ ಶತ್ರುಗಳಾಗಿದ್ದಾರೆ. ಇವರು ಬರೆದಿರುವ ಅಗ್ರಪೂಜೆ ಎಂಬ ನಾಟಕ ಭಾರತದ ಕಥಾವಸ್ತುವೊಂದನ್ನು ರಂಗಯೋಗ್ಯವಾಗಿ ರೂಪಿಸಿ, ಅಶ್ವತ್ಥಾಮನನ್ನು ಕನ್ನಡ ಓದುಗರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿಸಿದೆ. ಗ್ರಂಥ ಬಾಹುಳ್ಯದಿಂದ ಅವರ ಸ್ಥಾನವನ್ನಳೆಯತಕ್ಕದ್ದಲ್ಲ. ಅವರ ಮಾತು, ಅವರಲ್ಲಿ ತುಂಬಿಕೊಂಡಿದ್ದ ಜ್ಞಾನ ಭಂಡಾರ, ವಿದ್ವತ್ತು ಇವೇ ವೀ. ಸಿ. ಎಂಬೆರಡಕ್ಷರಗಳನ್ನು ಮನೆಮಾತಾಗಿಸಿದೆ. ಅವರ ಹಿರಿಯತನದಲ್ಲಿ ಸಮ್ಮೇಳನವು ಹೊಸ ದಾರಿ ತೋರಬಹುದೇಂಬುದರಲ್ಲಿ ಸಂದೇಹವಿಲ್ಲ.

ಗೋಷ್ಠಿಗಳ ಅಧ್ಯಕ್ಷರಲ್ಲಿ ಪತ್ರಿಕಾ ಗೋಷ್ಠಿಗೆ ಆಯ್ಕೆಯಾದ **ಶ್ರೀ ನಾಯಕ ವೆಂಕಟರಾಯರು** ಸಂಯುಕ್ತ ಕರ್ನಾಟಕದ ಸಂಪಾದಕರು. ಅನೇಕ ವರ್ಷಗಳ ಕಾಲ ಬೆಂಗಳೂರು, ಕೊಲ್ಹಾಪುರಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದವರು. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಈಗಾಗಲೇ ಒಂದು ಸ್ಥಾನ ಕಲ್ಪಿಸಿಕೊಂಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ದುಡಿದಿದ್ದಾರೆ. ಕಳೆದ ವರ್ಷ ಅಮೇರಿಕೆಗೆ ಹೋಗಿದ್ದ ಭಾರತದ ಪತ್ರಿಕಾ ಸಂಪಾದಕರ ಶಿಷ್ಟ ಮಂಡಲದಲ್ಲಿ ಶ್ರೀ ನಾಯಕರೂ ಒಬ್ಬರು. ಉತ್ತಮ ಮಾತುಗಾರರು. ಮಾಧ್ಯಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಅನೇಕ ವರ್ಷಗಳಿಂದ ಶಿಕ್ಷಣಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಹೀಗೆ ಪತ್ರಿಕಾ ಪ್ರಪಂಚ, ಶಿಕ್ಷಣ ಮತ್ತು ಸಾಹಿತ್ಯ ಇವು ಮೂರರಲ್ಲಿಯೂ ನಾಯಕರಾಗುವ ಯೋಗ್ಯತೆಯುಳ್ಳ ವ್ಯಕ್ತಿ ಸಮ್ಮೇಳನದ ಪತ್ರಿಕಾ ಗೋಷ್ಠಿಗೆ ಅಧ್ಯಕ್ಷರಾಗಿ ದೊರೆತಿದ್ದಾರೆ.

ವಿಜ್ಞಾನ ಗೋಷ್ಠಿಗೆ ಅಧ್ಯಕ್ಷರಾಗಿ ದೊರೆತವರು **ಶ್ರೀ ಪಡುಕೋಣೆ ರಮಾನಂದರಾಯರು.** ಕನ್ನಡ ಸಾಹಿತ್ಯದಲ್ಲಿ ಇವರ ಅಮರಕೃತಿ ,, ಮುಕ್ಕು ಬೆಳುದಿಂಗಳಿನ ಮಾತುಗಳು."ಅದನ್ನೋದದ ಕನ್ನಡಿಗನಿಲ್ಲ. ಆದರೆ ಇವರು ರಸಾಯನ ಶಾಸ್ತ್ರದ ಅಧ್ಯಾಪಕರಾಗಿ ಮದ್ರಾಸ ವಿಶ್ವವಿದ್ಯಾಲಯದಲ್ಲಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದರೆಂಬುದು ಅನೇಕರಿಗೆ ತಿಳಿದಿರಲಿಕ್ಕಿಲ್ಲ. ಈಗ ಬಳ್ಳಾರಿಯ ವೀರಶೈವ ಕೊಲೇಜಿನ ಪ್ರಿನ್ಸಿಪಾಲರಾಗಿದ್ದಾರೆ. ಕನ್ನಡದಲ್ಲಿ ವಿಜ್ಞಾನದ ಬಗೆಗೆ ಮಾತನಾಡಲು, ಬರೆಯಲು ಸಾಮರ್ಥ್ಯವಿದ್ದ ವ್ಯಕ್ತಿಗಳಲ್ಲೊಬ್ಬರು. ಗಂಡ ಹೆಂಡಿರಿಬ್ಬರೂ ಸಾಹಿತಿಗಳಾಗಿ ಕನ್ನಡಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಕೃತಿಯಲ್ಲಿ ಕಂಡುಬಂದ ಹಾಸ್ಯ ರಸ, ಅವರ ವಾಗ್ಮಿತೆಯಲ್ಲಿಯೂ ಮೂಡಿ ಬರಬಹುದೆಂಬದನ್ನು ಈ ಜಿಲ್ಲೆಯ ಜನ ಹಾರೈಸುತ್ತಿದ್ದಾರೆ.

ಯಕ್ಷಗಾನ ಗೋಷ್ಠಿಗೆ ಅಧ್ಯಕ್ಷರಾಗಿ ಒಪ್ಪಿಕೊಂಡಿದವರು. ದಕ್ಷಿಣ ಕನ್ನಡ ಜಿಲ್ಲೆಯ ಕೋಣಾಜೆ ಎಂಬ ಊರಿನ **ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರು.** ಯಕ್ಷಗಾನ, ಯಕ್ಷ ನಾಟಕಗಳ ಮಹಿಮೆ ಕನ್ನಡ ಜಿಲ್ಲೆಗಳ ಹೊರಗೆ ಅಷ್ಟು ಬೆಳ್ಳಾಗಿ ಕೇಳಬಂದಿಲ್ಲ. ಶ್ರೀ ವೆಂಕಪ್ಪ ಶೆಟ್ಟರು ಯಕ್ಷಗಾನದ ಅಭಿವೃದ್ಧಿಗಾಗಿಯೇ ದುಡಿದ ಹಬ್ಬದ ವ್ಯಕ್ತಿ. ಅನೇಕ ಪ್ರಸಂಗಗಳನ್ನು ರಚಿಸಿದ್ದಾರೆ. ಅದೇ ಅವರ ಜೀವನದ ಆದರ್ಶವಾಗಿಯೂ ಇದೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿಯ ಯಕ್ಷಗಾನದ ಪರಂಪರೆಯ ತುಲನಾತ್ಮಕ ಅಭ್ಯಾಸ ಈ ಸಮ್ಮೇಳನದ ಮೂರು ದಿನಗಳಲ್ಲಿ ದೊರೆಯಲಿದೆ. ಇಂಥ ಅಧ್ಯಕ್ಷರ ಹಿರಿಯತನದಲ್ಲಿ ಅದು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಈ ಗೋಷ್ಠಿಗಳೊಡನೆ ಕಲಾ-ಪ್ರದರ್ಶನವೂ ಇದೆ. ನಮ್ಮ ಜಿಲ್ಲೆಯ ಗುಡಿ, ಕೈಗಾರಿಕೆ ತುಂಬಾ ಹೆಸರುವಾಸಿಯಾದುದು. ಹಿಂದೆ ಅಂತರ್ರಾಷ್ಟ್ರೀಯ ಸಂಮೇಳನದಲ್ಲಿಯೂ ಖ್ಯಾತಿ ಪಡೆದ ಕೀರ್ತಿ ನಮ್ಮ ಜಿಲ್ಲೆಯ ಗುಡಿಗಾರರದಾಗಿತ್ತು. ಈಗ ಆ ಕಲೆ ಉದಾರಾಶ್ರಯವಿಲ್ಲದೆ ಹಿಂದೆ ಬಿದ್ದಿದೆ. ಅದರಂತೆ ಈ ಜಿಲ್ಲೆಯಲ್ಲಿ ದೊರೆಯುವ ಪ್ರಾಚೀನ ಗ್ರಂಥಗಳೂ ಕವಿಮೆಯಿಲ್ಲ ಅರಣ್ಯದ ಮಧ್ಯದಲ್ಲಿ ಮೂಲೆಗುಂಪಾದ ಶಿಲ್ಪಕಲಾ ಸಮೃದ್ಧಿಯ ದೇಗುಲ, ಬಸದಿಗಳಿಗೆ ಲೆಕ್ಕವಿಲ್ಲ. ಇವುಗಳ ವೈಶಿಷ್ಟ್ಯದ ಪ್ರದರ್ಶನವೂ ಆಗಲಿದೆ. ಈ ಪ್ರದರ್ಶನದ ಉದ್ಘಾಟಕರಾಗಿ ದೊರೆತ ಮಾನ್ಯರು ಮುಂಬೈ ಸರಕಾರದ ಉಪ-ಮಂತ್ರಿಗಳಾದ ಶ್ರೀ ಬಿ. ಡಿ. ಜತ್ತಿಯವರು. ಮೂಲತಃ ಜಮಖಂಡಿಯವರಾಗಿದ್ದು ದಕ್ಷಿಣ ಸಂಸ್ಥಾನಗಳ ವಿಲೀನೀಕರಣದ ಮೇಲೆ ಇವರು ಆ ಭಾಗಗಳ ಪ್ರತಿನಿಧಿಗಳಾಗಿ ಮುಂಬೈ ಶಾಸನ ಸಭೆಗೆ ಆರಿಸಿ ಬಂದು ಇಂದು ಆರೋಗ್ಯ ಖಾತೆಯ ಉಪ-ಮಂತ್ರಿಗಳಾಗಿದ್ದಾರೆ. ಸರಳ ವ್ಯಕ್ತಿ. ಎಳ್ಳಷ್ಟು ಆಡಂಬರವಿಲ್ಲ. ಯಾರು ಕರೆದರೂ ಅವರ ನೆರವಿಗೆ ಓಡುವ ಜನಪ್ರಿಯ ವ್ಯಕ್ತಿ. ಅವರೂ. ಸಾಹಿತ್ಯ ಸೇವೆಯೊಂದಿಗೆ ... ... ಅಂತು ಅವರಿಂದ ಉದ್ಘಾಟಿತವಾಗುವ ಪ್ರದರ್ಶನ ಆದರ್ಶವಾಗಲೆಂದು ಹಾರೈಕೆ.

ಮನಸ್ಸಿಗೆ ಶಾಂತಿ ಬೇಕೇ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೂ ಮಿಕ್ಕಿದ 'ಗೀತೆಯ ಕೈಗನ್ನಡಿ' ಎಂಬ ಭಗವದ್ಗೀತೆಯನ್ನು ಓದಿರಿ.

* "ಬೇರೆ ಶಾಸ್ತ್ರಗಳನ್ನೋದುವದರಿಂದೇನು? ಗೀತೆಯನ್ನು ಚೆನ್ನಾಗಿ ಓದಬೇಕು" —ವರಾಹಪುರಾಣ.

* "ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು." —ಲೋಕಮಾನ್ಯ ತಿಲಕ.

* "ನನಗೆ ಸಂದೇಹಗಳು ಬರುವಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು." --ಮಹಾತ್ಮಾ ಗಾಂಧಿ.

* "ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯವಶ್ಯವಾದದ್ದು." —ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೋ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವನ್ನು ಎಲ್ಲರೂ ಕೊಡುವರು.

ಗೀತೆಯ ಕೈಗನ್ನಡಿ ಬೆಲೆ: ೦-೧೨-೦

ವಿಕ್ರಯಾಧಿಕಾರಿಗಳು— ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿ. ಪಿ.—ರೂ. 1 0 0 ಕಳಿಸಿದರೆ ಪ್ರತಿಯೊಂದನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು.

ಋತುಸ್ರಾವ ನಿಂತಿತು

"ಕುಮಾರಿ" ಬಿಲ್ಲೆಗಳನ್ನು ಉಪಯೋಗಿಸಿದರೆ ತಪ್ಪದೆ ಋತುಸ್ರಾವವಾಗುವುದು, ತಕ್ಷಣ ಬರುವುದು. ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು. ಯಾವ ಬಾಧಕವೂ ಯಿಲ್ಲ. ನಾನಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಬೆಲೆ: ರೂ. 3/–; ಸ್ಪೆಶ್ಯಲ್ ರೂ. 5/– ಅಧಿಕಾಧಿಕ ಸ್ಪೆಶ್ಯಲ್ ರೂ. 8–[ವಿ. ಪಿ. ಹಣ್ಣಿರಡಾಣೆ ಪ್ರತ್ಯೇಕ]

Mrs. P. DEVEE, F.I.S.(N.J.)
CALCUTTA. 40

ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.



ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

Our Bombay Stockists:-

1) V. N. Shenoy, Bombay 12.
2) N. R. Kamath, General Merchant, Dahanu Road, W. Rly

'ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ

ನವಜೀವಾತು

ಎಂಬ

ಸೂತಿಕಾರಸಾಯನ

ಬಾಣಂತಿಯರ ನಲುವಾಗಿಯೇ ದೇಹ ಮತ್ತು ಪ್ರಕೃತದ ದೇಹ ಸ್ಥಿತಿಯನ್ನು ನಿರ್ದೋಷಿ ತವಾಗಿಸ ಲ್ಪಟ್ಟ ಸಮೋಘವಾದ ಸುರಕ್ಷಿತ ವರಸಾಯನ.

ಹೆಚ್ಚಿನ ಮಾಹಿತಿಗೆ ಡಾ। ಯಂ ವಿ ಶಾಸ್ತ್ರೀ, ಬಿ ಎಸ್ ಎ. ಎಂ.
ಕೂಡಿಯಾಲಬೈಲು ಪೋಸ್ಟ್. (ಮಂಗಳೂರು)
ಏಜೆಂಟರು– ಡಾ। ಪಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ಧರ್ಮಾರ್ಥ—ಮುಕ್ತಟಿ

ಒಂದು ಸಾವಿರ ಕಾಶ್ಮೀರಿ ಶಾಲುಗಳನ್ನು ಧರ್ಮಾರ್ಥ ಹಂಚುತ್ತಲಿದ್ದೇವೆ. ಬೇಗನೆ ಬರೆಯಿರಿ. ವಿಳಂಬವಾದರೆ ನಿರಾಶರಾಗುವಿರಿ.

Diamond Commercial
Chambers (N. U.)
Bhandari Street,
BOMBAY—3



ವಾರದ ಒಳಿತು ಕೆಡುಕುಗಳು

ತಾ. ೨೪—೧೨—೫೩ರಿಂದ ತಾ. ೩೦—೧೨—೫೩ರ ವರೆಗೆ.

ಮೇಷ— ಸಂದುಹೋದ ದಿನಗಳಿಗಿಂತ ಇಂದಿನ ದಿನಗಳು ಕೊಂಚ ಬಿಕ್ಕಟ್ಟಿನವಾಗಿ ಪರಿಣಮಿಸಲಿವೆ. ನಿಮ್ಮ ನಿರೀಕ್ಷೆಯಂತೆ ಕಾರ್ಯವಾಗಲಿ ಫಲವಾಗಲಿ ಕಾಣಿಸದು. ಗೃಹತಾಪತ್ರಯಗಳು ಹೆಚ್ಚಲಿವೆ. ಪಿತ್ಥ ದೋಷದಿಂದಾಗಿ ಉದರಶೂಲೆ ನೇತ್ರರೋಗಗಳೂ ಕಾಣಿಸುವವು. ಹಣದ ಲೇವಾದೇವಿ ನಿಮಿತ್ತ ಕಲಹವುಂಟಾಗುವದು. ಆದರೆ ಭಾಗ್ಯಪತಿಯಾದ ಗುರುಗ್ರಹವು ಧನ ಸ್ಥಾನದಲ್ಲಿರುವುದರಿಂದ ಎಂತಹ ಬಿಕ್ಕಟ್ಟೇ ಬರಲಿ ಸಕಾಲದಲ್ಲೊದಗುವ ಬಂಧುಗಳಿಂದ ಪರಿಹಾರವಾದೀತು. ವಾರಾಂತ್ಯದ 4 ದಿನಗಳು ಅನುಕೂಲವಾಗಿವೆ.

ವೃಷಭ:— ನಿಮ್ಮ ಅದೃಷ್ಟವಿಂದು ಅತೀವ ಪ್ರಶಸ್ತವಿದೆ. ನಿಮ್ಮ ಪರಿಶ್ರಮದ ಫಲದಿಂದಾಗಿ ನೀವು ಯಾವ ಕಾರ್ಯಕ್ಕೆ ಕೈಹಚ್ಚಿದರೂ ಅದು ನಿರ್ವಿಘ್ನದಿಂದ ಅಚಿರದಲ್ಲೇ ಅನಂತಫಲ ಕೊಡಲಿದೆ. ನಿಮ್ಮ ಕಾರ್ಯ ಕಾರಲಕ್ಕೆ ಬೆರಗಾದ ವಿರೋಧಿ ವರ್ಗದವರೂ ನಿಮ್ಮ ಮೈತ್ರಿಯನ್ನು ಯಾಚಿಸ ಬಯಸುವರು. ಗೃಹತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡುವ ನಿಮಗೆ ಕಫ ದೋಷದಿಂದ ದೇಹಾಲಸ್ಯ ಪ್ರಾಪ್ತವಾದೀತು. ವಾರದ ಆದ್ಯಂತ ದಿನಗಳು ಅತೀವ ಪ್ರಶಸ್ತವಾಗಿವೆ.

ಮಿಥುನ:— "ದೈವೇ ದುರ್ಬಲತಾಂ ಗತೇ ತೃಣಮಪಿ ಪ್ರಾಯೇಣ ವಜ್ರಾಯತೇ" ಎಂಬಂತೆ ಅದೃಷ್ಟಹೀನವಾಗಿದ್ದ ವೇಳೆ ಹುಲ್ಲುಕಡ್ಡಿಯೂ ವಜ್ರಾಯುಧಕ್ಕೆ ಸರಿಯಾಗುವುದು. ಅಂತೆಯೇ ಇಂದು ನಿಮ್ಮ ಪರಿಸ್ಥಿತಿಯಾಗಿದೆ. ಯಾವ ಕಾರ್ಯಕ್ಕೆ ಕೈಹಚ್ಚಿದರೂ ವಿಘ್ನಗಳೇ ಮುಂದಾಗಿ ಬಂದು ನಷ್ಟ ಕಷ್ಟಗಳಿಗೀಡಾಗುವಿರಿ. ಆರ್ಥಿಕ ಬಿಕ್ಕಟ್ಟಿನದೆಸೆಯಿಂದಾಗಿ ಸಿಕ್ಕಸಿಕ್ಕವರ ಕೂಡೆ ಸಾಲ ಕಡ ಮಾಡುವ ಪ್ರಸಂಗ ಬರಲಿದೆ. ಉದ್ಯೋಗ ವ್ಯಾಪಾರಗಳಲ್ಲಿ ದಿನೇ ದಿನೇ ನಿರಾಶೆಯೇ ಹೆಚ್ಚುವದು. ತ್ರಿದೋಷ ಜನಿತವಾದ ಕಾಹಿಲೆಗೆ ಗುರಿಯಾದೀರಿ. ತಾ. 25, 26, ಹೊರತಾಗಿ ಉಳಿದ ದಿನಗಳು ಅನಿಷ್ಟಕರಗಳಾಗಿವೆ.

ಕರ್ಕಾಟಕ: ನಿಮ್ಮ ಪ್ರಯತ್ನಕ್ಕೆ ಹಲವಾರುತರದ ವಿಘ್ನಗಳು ಬಂದರೂ ದೈವಬಲದಿಂದಾಗಿ ಸರಿಯಾದ ಫಲವು ಲಭಿಸುವುದು. ಖರ್ಚು ವೆಚ್ಚಗಳಿಗೆ ಸಮಸಮಾನ ಉತ್ಪತ್ತಿಯಿರುವ ಕಾರಣ ದಿನಯಾಪನೆಯು ಸಲುವಾಗಿ ಹೆರವರನ್ನಾಶ್ರೈಸಬೇಕಾಗಿಲ್ಲವು. ನೌಕರಿ ಜೀವನಿಗೆ ಉದ್ಯೋಗದಲ್ಲಿ ಪ್ರಗತಿಯುಂಟಾಗುವದು. ವ್ಯಾಪಾರಿಗಳಿಗೆ ಆಕಸ್ಮಿಕ ನಷ್ಟದ ಯೋಗವಿದೆ. ಗೃಹತಾಪತ್ರಯಗಳು ಸ್ವಲ್ಪಮಟ್ಟಿಗೆ ಪೀಡಿಸುವುದರಿಂದ ಮನಸ್ಸಿಗೆ ನೆಮ್ಮದಿಯಿರದು. ತಾ. 24, 27, 28, 29 ಈ ದಿನಗಳು ಇದ್ದುದರಲ್ಲಿ ಉತ್ತಮವಾಗಿವೆ.

ಸಿಂಹ:—ಸದುದ್ಯಮ ಪ್ರವೃತ್ತರಾದ ನಿಮಗೆ ನಿರೀಕ್ಷೆಯಂತೆ ಫಲ ಲಭಿಸುವುದು. ನಿಮ್ಮ ಸಾಂಪತ್ತಿಕ ಪರಿಸ್ಥಿತಿಯೂ ಕೂಡ ಉತ್ತಮವಾಗಿರುವುದು. ಪಶುಭೃತ್ಯಾದಿ ಗೃಹಪರಿವಾರಗಳಿಂದ ಕೂಡಿದ ನಿಮಗೆ ಯಾವೊಂದು ತರದ ಸಾಂಸಾರಿಕ ತಾಪತ್ರಯಗಳೂ ಕಾಣಿಸಲಾರವಾದರೂ ಕೆಲವೊಮ್ಮೆ ತಂದೆ ಮಕ್ಕಳೊಳು ಗಂಡ ಹೆಂಡಿರೊಳೂ ತಿಕ್ಕಾಟವುಂಟಾದೀತು. ಉದ್ಯೋಗಹೀನರೂ ಕೂಡ ಇಂದು ಒಳ್ಳೇ ಕಾರ್ಯ ಪ್ರವೃತ್ತರಾಗುವರು. ತಾ. 25, 26, 30 ಈ ದಿನಗಳು ಅತ್ಯುತ್ತಮವಿವೆ.

ಕನ್ಯಾ:—ಕೈಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯಂತೆ ನೀವಿಂದು ಶ್ರಮಿಸಿದರೆ ಅದಕ್ಕೆ ತಕ್ಕ ಫಲ ಲಭಿಸುವುದರಲ್ಲಿ ಸಂದೇಹವಿಲ್ಲವು. ಸನ್ಮಿತ್ರರೂ ಬಂಧುಗಳೂ ಇವರ ನೆರವಿನಿಂದಾಗಿ ನಿಮ್ಮ ಸಕಲ ಕಾರ್ಯಗಳೂ ನಿರ್ವಿಘ್ನದಿಂದ ನೆರವೇರುವವು. ಉದ್ಯೋಗ ವ್ಯಾಪಾರಾದಿಗಳಲ್ಲಿ ನಿರೀಕ್ಷಿಸಿದುದಕ್ಕಿಂತ ಅಧಿಕ ಫಲ ಲಾಭವಿದೆ. ಸಾಮಾಜಿಕ ಕಾರ್ಯಗಳಲ್ಲಿ ಕೀರ್ತಿಶಾಲಿಗಳಾಗುವಿರಿ. ಆದರೆ ರಾಜಕೀಯ ಕ್ಷೇತ್ರದಲ್ಲಿ ವಿಜಯವು ದುರ್ಲಭವಾದೀತು. ತಾ. 24, 27, 28, 29, ಈ ದಿನಗಳಲ್ಲಿ ಹಲವಾರು ತೆರದ ಲಾಭಭೋಗ ಸುಖಗಳನ್ನು ಪಡೆವಿರಿ.

ತುಲಾ—ಜನ್ಮರಾಶಿಯಲ್ಲಿ ಕುಜ ಶನಿಗಳೂ ಅಷ್ಟಮದಲ್ಲಿ ಬೃಹಸ್ಪತಿಯೂ ನಿಂತ ಕಾರಣ ಈ ವಾರದಲ್ಲಿ ಕೊಂಚ ಆರ್ಥಿಕ ಬಿಕ್ಕಟ್ಟು ಪರ್ಯಟನ ದೇಹಾಲಸ್ಯ ಕಂಟಕಾದ್ಯನಿಷ್ಟಗಳೂ ಕಾಣಿಸಬಹುದು. ಶತ್ರು ವರ್ಗದವರು ಪತ್ರಿಕಾರಾಸಕ್ತರಾಗುವರು. ಆಪ್ತ ಬಂಧುಗಳೂ ನಿಮ್ಮಿಂದ ದೂರವಾಗಲಿರುವರು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಕಷ್ಟಗಳೂ ಹೆಚ್ಚುವವು. ಆದರೂ ಸಹಿಷ್ಣುಗಳಾದ ಉದ್ಯಮಿಗಳಿಗೆ ತಾ, 24, 25, 26, 30 ಈ ದಿನಗಳು ಇಷ್ಟ ಸಿದ್ಧಿ ಸುಖ ಸಂತಸದಾಯಿಗಳಾಗಿವೆ.

ವೃಶ್ಚಿಕ:—ಕಳೆದ ವಾರಕ್ಕಿಂತ ಈ ವಾರವು ನಿಮಗೆ ಸ್ವಲ್ಪ ಉತ್ತಮವೆನಿಸುವದು. ದೇಹಾಲಸ್ಯದಿಂದ ಮುಕ್ತರಾದ ನಿಮಗೆ ಉದ್ಯೋಗ ವ್ಯವಹಾರ ವ್ಯಾಪಾರಗಳಲ್ಲಿ ಪರಿಶ್ರಮಕ್ಕೆ ತಕ್ಕ ಫಲ ದೊರೆತೀತು. ರಾಜಕೀಯದಲ್ಲಿ ವಿಶೇಷತಃ ನಿಮ್ಮ ಇಷ್ಟ ಸಿದ್ಧಿಸದಾದರೂ ಸಾಮಾಜಿಕ ಕಾರ್ಯಗಳಲ್ಲಿ ಕೀರ್ತಿ ಭಾಗಿಗಳಾಗುವಿರಿ. ಗೃಹತಾಪತ್ರಯಗಳು ದೂರವಾಗುವವು. ಸ್ವಯಗತ ಶಸ್ತ್ರಂಗಾರಕರು ಅನಿರೀಕ್ಷಿತ ಶೋಕ ಅನರ್ಥಗಳಿಗೆ ನಿಮ್ಮನ್ನೀಡು ಮಾಡಲಿರುವರಾದರೂ ದೈವ ಬಲಯುತರಾದ ನೀವು ತಾ. 25ರಿಂದ 29ರ ವರೆಗಿನ ದಿನಗಳನ್ನು ಸುಖವಾಗಿ ಕಳೆವಿರಿ.

ಧನು:—ದೈವವು ಅಷ್ಟೊಂದು ಅನುಕೂಲವಾಗಿಲ್ಲವಾದರೂ ಆತ್ಮಶಕ್ತಿಯಿಂದ ಕಾರ್ಯಕ್ಷೇತ್ರದಲ್ಲಿ ಮುನ್ನುಗ್ಗಿರಿ. ನೀವು ಮುಂದಿಟ್ಟ ಹೆಜ್ಜೆಯನ್ನು ಎಂದೆಂದೂ ಹಿಂದೆ ಇಡುವ ಪ್ರಸಂಗ ಬರಲಾರದು. ಜನತೆಯಿಂದ ಮಾನ ಮರ್ಯಾದೆಗಳು ಲಭಿಸುವವು. ನಾನಾ ರೀತಿಯಿಂದ ಧನವು ನಿಮ್ಮ ಕೈಸೇರಲಿದೆ. ಬೇಕುಬೇಕಾದ ಸುಖ ಭೋಗಗಳನ್ನು ಭೋಗಿಸುವಿರಿ. ಕೆಲವೊಮ್ಮೆ ವಿನಾ ಕಾರಣ ವಾಕ್ಕಲಹಕ್ಕೆ ಗುರಿಯಾದೀರಿ. ಮನೋರೋಗವು ಸದಾ ಪೀಡಿಸಲಿದೆ. ವಾರಾಂತ್ಯದ 4 ದಿನಗಳು ಸರ್ವಾತ್ಮನಾ ಸುಖ ಸಾಧಕಗಳಾಗಿವೆ.

ಮಕರ:—ಇಂದು ನಿಮ್ಮ ಕರ್ಮಕ್ಕೆ ತಕ್ಕ ಫಲ ಕಾಣಿಸದು. ಆ ಕಾರಣದಿಂದಾಗಿ ನಿತ್ಯ ಹಣದ ತಾಪತ್ರಯ ವುಂಟಾಗುವುದು. ನಿಮ್ಮ ಉದ್ಯಮಕ್ಕೆ ಶತ್ರು ವರ್ಗದವರಿಂದ ವಿಶೇಷತಃ ನೀಚ ಜನತೆಯಿಂದ ವಿಘ್ನಗಳು ಉಪಸ್ಥಿತವಾಗಲಿವೆ. ಆಪ್ತ ಜನರ ವಿರಹ ವುಂಟಾಗಲಿದೆ. ವಿಷಯಾದಿಗಳತ್ತ ನಿಮ್ಮ ಮನಚಲುಮೆಯು ಹೆಚ್ಚುವುದರಿಂದ ಧನ ಹಾನಿ, ಜನ ನಿಂದೆಗಳಿಗೆ ಗುರಿಯಾಗುವ ಸಂಭವನಿದೆ. ಆದರೂ ಬೃಹಸ್ಪತ್ಯಾಚಾರ್ಯರ ಪೂರ್ಣ ದೃಷ್ಟಿಯು ನಿಮ್ಮ ಮೇಲಿರುವುದರಿಂದ ವಾರದ ಆದ್ಯಂತ ದಿನಗಳು ಕೊಂಚ ಸುಖಕರಗಳಾಗುವವು.

ಕುಂಭ:-ನಿಮ್ಮ ಲಾಭಸ್ಥಾನದಲ್ಲಿಂದು ಗ್ರಹತ್ರಯರ ಸಮಾಗಮವಾಗಿರುವುದು. ಆದ ಕಾರಣ ನಿಮ್ಮ ಸಾಂಪತ್ತಿಕ ಸ್ಥಿತಿಯಿಂದು ಉತ್ತಮಗೊಳ್ಳಲಿದೆ. ಬಹ್ವಂಶ ನಿಮ್ಮ ಸಾಲಾದಿಗಳು ನಿವೃತ್ತಿ ಹೊಂದುವವು. ಕೆಲವೊಮ್ಮೆ ಪರಿಶ್ರಮವಿಲ್ಲದೆ ಫಲ ಲಭಿಸುವ ಸಂಭವವಿದೆ. ನೀಚ ಜನರಿಂದ ಧನಾಗಮವಾಗುವದು. ಪಿತ್ಥವಾತ ಪ್ರಕೋಪದಿಂದಾಗಿ ದೇಹಾರೋಗ್ಯ ಕೆಟ್ಟೀತು. ಗುರುಹಿರಿಯರಲ್ಲಿನ ಮನಸ್ತಾಪವು ವೃದ್ಧಿಗೊಂಡೀತು. ವೈದ್ಯರೂ ವ್ಯಾಪಾರಿಗಳೂ ಪರಿಶ್ರಮಕ್ಕಿಂತಲೂ ಅಧಿಕ ಫಲವನ್ನು ಹೊಂದುವರು. ತಾ. 24, 30 ಈ 2 ದಿನಗಳು ಈ ವಾರದಲ್ಲಿ ಉತ್ತಮವಿವೆ.

ಮೀನ:—ವಿರೋಧಿ ವರ್ಗದವರೂ ಕುಜನರೂ ನಿಮ್ಮನ್ನು ನಾನಾ ರೀತಿಯಿಂದ ಪೀಡಿಸುವರು. ವೃಥಾ ಪರಿಶ್ರಮವೇ ಹೊರತಾಗಿ ಫಲಪ್ರಾಪ್ತಿಯೇನೂ ಕಾಣಿಸದು. ಹೆಚ್ಚಿನ ನಿಮ್ಮ ಕಾರ್ಯಕಲಾಪಗಳು ವಿಘ್ನ ವಿದ್ರೋಹಗಳಿಂದಾಗಿ ಮುಂದುವರಿಯಲಾರವು. ನಾಲಗೆಯನ್ನು ಎಷ್ಟೇ ಹಿಡಿತದಲ್ಲಿಟ್ಟುಕೊಂಡಿದ್ದರೂ ಕಲಹ ಬೇರೆ ಅನಿವಾರ್ಯವು. ಸಾಂಸಾರಿಕ ತಾಪತ್ರಯಗಳಿಂದ ಕ್ಲೇಶ ಪಡುವಿರಿ. ವೃಕ್ಷಾದಿಗಳ ಆರೋಹಣ, ವಾಹನಾದಿಗಳಲ್ಲಿನ ಪ್ರಯಾಣ ಅನಿಷ್ಟಕರವಿದೆ. ಪಿತ್ತಾಧಿಕ್ಯದಿಂದಾಗಿ ಆರೋಗ್ಯವು ನೆಟ್ಟಗಿರಲೊಲ್ಲದು. ತಾ. 25ರಿಂದ 29 ವರೆಗಿನ ದಿನಗಳು ಇದ್ದುದರಲ್ಲಿ ಉತ್ತಮವಾಗಿರುವವು.

[3ನೇ ಪುಟದಿಂದ]

ಮಂತ್ರಿ ರಾಜಾಜಿಯವರು ವಿನಂತಿ ಮಾಡಿದರು. ರೈತರಿಂದ ಇದಕ್ಕೆ ದೊರೆತ ಸಹಕಾರವು ಅದ್ಭುತವಾಗಿರುತ್ತದೆ - ಎಕ್ರೆಗೆ ನೂರು ರೂಪಾಯಿಗಳಂತೆ ಈಗಾಗಲೇ ಸರಕಾರಕ್ಕೆ ಹಣವು ಸಂದಿದೆ – ಆದರೆ ಈ ಮೊತ್ತ ಒಟ್ಟಿನಲ್ಲಿ ಆರು ಲಕ್ಷ ರೂಪಾಯಿಗಳಷ್ಟು ಕಡಿಮೆಯಾಗಿರುವುದರಿಂದ ರೈತರು ಉಳಿದ ಎಕ್ರೆಗೆ ಆರು ನೂರು ರೂಪಾಯಿಗಳ ಹಣವನ್ನೂ ಬೇಗನೇ ಸಲ್ಲಿಸಬೇಕೆಂದು ರಾಜಾಜಿ ಮೊನ್ನೆ ಉದ್ಘಾಟನಾ ಕಾಲದಲ್ಲಿ ಮರಳಿ ವಿನಂತಿಸಿದರು. ಸರಕಾರದ ಉತ್ತಮ ಕೆಲಸಗಳಲ್ಲಿ ಜನತಾ ಸಹಕಾರ ದೊರೆತೇ ತೀರುವುದೆಂಬುದಕ್ಕೂ ಜನಸಾಮಾನ್ಯರಲ್ಲೂ ಈಗ "ಯೋಜನಾಭಾವ" ಬಲಿಯುತ್ತಿರುವುದಕ್ಕೂ ಅಮರಾವತಿಯ ಯೋಜನೆಯೊಂದು ಭವ್ಯ ನಿದರ್ಶನ

"ಒಂದು ಗದ್ದೆಯಲ್ಲಿ ಬೆಳೆದ ಅಕ್ಕಿಯನ್ನು ಆ ಗದ್ದೆಯೇ, ಅಥವಾ ಅದನ್ನು ಗೆಯ್ದವನೇ ಉಣ್ಣದೆ— ಊರವರೆಲ್ಲರೂ ಉಣ್ಣಲಾಗುವಂತೆ ಒಂದು ಯೋಜನೆಯ ಲಾಭವನ್ನು ಇಡೀ ರಾಷ್ಟ್ರವು ಒಟ್ಟಿಗೆ ಪಡೆಯುತ್ತದೆ" ಎಂಬ ರಾಜಾಜಿಯ ಸೂತ್ರ ವಾಕ್ಯವನ್ನು ಗಮನದಲ್ಲಿಟ್ಟುಕೊಂಡರೆ ತಮಿಳು ನಾಡು ಬೇರೆ - ಕರ್ನಾಟಕ ಬೇರೆ ಎಂಬ ಪ್ರತ್ಯೇಕತಾಭಾವನೆ ದೂರಗೊಂಡು, ಭಾರತದಲ್ಲಿ ರಾಷ್ಟ್ರ ಪುನರುದ್ಧಾರದ ಕೆಲಸಗಳು ಒಂದೊಂದಾಗಿ ಕೈಗೂಡುತ್ತಿರುವುದೆಂಬ ಸಂತೋಷ ನಮಗಾಗುತ್ತದೆ.

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಲಕ್ಷಾಂತರುಣಹೊಂದಿದಾ ಜನರು ಗ್ದರೆ:

ಸರ್ ಜೀವನ್ ಶಿಲಾಜಿತ್‌ಲೇಹ

ಶಿಲಾಜಿತ್ ಹಿಮಾಲಯದ್ದು ಔಷಧಿಗಳ ರಾಜ; ಮೂಲಿಕೆಗಳೊಡನೆ ಸೇರಿಸಿದ ಲೇಹ್ಯ, ದೇಹಶಕ್ತಿ, ಹೊಟ್ಟೆನೋವು, ಅನ್ನ ಸೇರದಿರುವಿಕೆ, ಕೆಮ್ಮು, ದಮ್ಮು, ಬಹುಮೂತ್ರ ಮತ್ತು ವಾಯುವಿನಿಂದಾಗುವ ಎಲ್ಲಾ ರೋಗನಿವಾರಕ ವಿದ್ಯಾರ್ಥಿಗಳಿಗೆ ಜ್ಞಾಪಕಶಕ್ತಿ, ಹೆಂಗಸರ ಮತ್ತು ಮಕ್ಕಳ ಸರ್ವರೋಗ ನಿವಾರಕ ಅಮೂಲ್ಯ ರತ್ನ ಸಕಲ ಋತುಗಳಲ್ಲಿಯೂ ಸರ್ವರಿಗೂ ಅನುಕೂಲವುಂಟು.

೪೪ ದಿನದ ಲೇಹ್ಯ ರೂ. ೫-೪-೦, ೨೨ ದಿನದ ಲೇಹ್ಯ ರೂ. ೩-೪-೦. (ಪೋಸ್ಟೇಜು ಮಾಫಿ)

ನೀಲಗಿರಿ ಡಿಪೊ, ಅಕ್ಕಿಪೇಟೆ ಚೌಕ, ಬೆಂಗಳೂರು ಸಿಟಿ.

ಶುದ್ಧ ನೀಲಗಿರಿ ಎಣ್ಣೆಗೆ ನೀಲಗಿರಿ ಡಿಪೋವಿನಲ್ಲಿ ಕೇಳಿರಿ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ

ರಥಬೀದಿ ಉಡುಪಿ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — **ರೂ. ೫-೮-೦** .... ಪೋಸ್ಟು ಖರ್ಚು **ರೂ. ೦-೧೪-೦**

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 24 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.

Moolky, S. K.

Edited, Printed & Published By K. H. Shetty at the Navayuga Press, Udipi, S. India